ಮಹಮ್ಮದ ಆದಿಲ್‌ಶಾಹ-ಜೀವನ ಮತ್ತು ಸಾಧನೆಗಳು
(ಕ್ರಿ.ಶ. ೧೬೨೭-೧೬೫೬)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಮುಸ್ತಾಕ ಅಹ್ಮದ

ಮಾರ್ಗದರ್ಶಕರು
ಡಾ।। ವಾಸುದೇವ ಬಡಿಗೇರ, ಸಹಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

೨೦೧೨

498

ಮಹಮ್ಮದ ಆದಿಲ್‌ಶಾಹ-ಜೀವನ ಮತ್ತು ಸಾಧನೆಗಳು.

(ಕ್ರಿ.ಶ. ೧೬೨೭-೧೬೫೬)

ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಮುಸ್ತಾಕ ಅಹ್ಮದ

ಮಾರ್ಗದರ್ಶಕರು

ಡಾ॥ ವಾಸುದೇವ ಬಡಿಗೇರ, ಸಹಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ. ೫೮೩೨೭೬

೨೦೧೨

ದೃಢೀಕರಣ ಪತ್ರ

ಶ್ರೀ ಮುಸ್ತಾಕ ಅಹ್ಮದ ಇವರು **"ಮಹಮ್ಮದ ಆದಿಲ್‌ಶಾಹ-ಜೀವನ ಮತ್ತು ಸಾಧನೆಗಳು (ಕ್ರಿ.ಶ. ೧೬೨೭-೧೬೫೬)"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸುರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸಲಾಗುತ್ತಿದೆ. ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 26-9-2012

ಸ್ಥಳ : ವಿದ್ಯಾರಣ್ಯ

Badiger

ಡಾ|| ವಾಸುದೇವ. ಬಡಿಗೇರ

ಮಾರ್ಗದರ್ಶಕರು ಹಾಗೂ ಸಹಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಮಾಣ ಪತ್ರ

"ಮಹಮ್ಮದ ಆದಿಲ್‌ಶಾಹ-ಜೀವನ ಮತ್ತು ಸಾಧನೆಗಳು (ಕ್ರಿ.ಶ. ೧೬೨೭-೧೬೫೬)" ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಡಾ॥ ವಾಸುದೇವ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್‌.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಈ ಮಹಾಪ್ರಬಂಧದ ವಿಷಯ ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 26-9-2012

ಸ್ಥಳ : ವಿದ್ಯಾರಣ್ಯ

ಸಂಶೋಧಕರು,

ಮುಸ್ತಾಕ ಅಹಮ್ಮದ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ



Sultan Muhammad Adil Shah (1627 - 1656)
courtesy: Salar Jung Museum Hyderabad

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಆಕರಗಳು ಮತ್ತು ಅಧ್ಯಯನದ ವಿಧಾನ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಆಕರಗಳು ಮತ್ತು ಅಧ್ಯಯನದ ವಿಧಾನ

ಪ್ರಸ್ತಾವನೆ:

ಮಹಮ್ಮದ ಆದಿಲ್‌ಶಾಹ ಬಿಜಾಪುರದ ಆದಿಲ್‌ಶಾಹಿ ಮನೆತನದಲ್ಲಿ ಆಗಿ ಹೋಗಿರುವ ಅತ್ಯಂತ ಪ್ರಮುಖ ಮತ್ತು ಪ್ರಭಾವಿ ಪೂರ್ಣ ಸುಲ್ತಾನರಲ್ಲಿ ಒಬ್ಬನಾಗಿದ್ದಾನೆ. ಜಗತ್ಪ್ರಸಿದ್ಧವಾಗಿರುವ ಗೋಲಗುಮ್ಮಟ ನಿರ್ಮಾಣವಾಗಿರುವುದು ಇವನ ಕಾಲದಲ್ಲಿ, ದಕ್ಷ ಆಡಳಿತಗಾರನಾಗಿ ಆದಿಲ್‌ಶಾಹಿ ಸಾಮ್ರಾಜ್ಯದ ಸರ್ವತೋಮುಖ ಅಭಿವೃಧ್ಧಿಗಾಗಿ ಶ್ರಮಿಸಿದ. ಮಹಮ್ಮದ ಆದಿಲ್‌ಶಾಹನನ್ನು ಕುರಿತು ಈವರೆಗೆ ಸಮಗ್ರವಾದ ಅಧ್ಯಯನ ನಡೆಯದೆ ಇರುವುದು ದುರದೃಷ್ಟಕ. ಆದಿಲ್‌ಶಾಹಿ ಮನೆತನವೆಂದರೆ ಎರಡನೆ ಇಬ್ರಾಹಿಮ ಆದಿಲ್‌ಶಾಹನಿಗೆ ಮಾತ್ರ ಮಹತ್ವವನ್ನು ನೀಡಿ ಬರೆದಿರುವುದನ್ನು ಗಮನಿಸಬಹುದು. ಹೀಗಾಗಿ ಎಲೆಯಮರೆಯ ಕಾಯಿಯಾಗಿ ಹೋಗಿರುವಂತಹ ಮಹಮ್ಮದ ಆದಿಲ್‌ಶಾಹನ ಕುರಿತು ಸಮಗ್ರವಾದ ಅಧ್ಯಯನ ಆಗದೆ ಇರುವುದರಿಂದ ಅವನ ಸಂಪೂರ್ಣ ವ್ಯಕ್ತಿತ್ವವನ್ನು ಪರಿಚಯಿಸುವದರ ಸಲುವಾಗಿ ಈ ತಲೆಬರಹವನ್ನು (ವಿಷಯವನ್ನು) ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಬಿಜಾಪುರ ಆದಿಲ್‌ಶಾಹಿಗಳು ದಕ್ಷಿಣ ಭಾರತದ ಇತಿಹಾಸದಲ್ಲಿ ಅತ್ಯಂತ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಭಾರತೀಯ ಕಲಾ ಇತಿಹಾಸಕ್ಕೆ ಅವರು ನೀಡಿದ ಕೊಡುಗೆ ಅಮೋಘವಾದದ್ದು ಅವರು ನಿರ್ಮಿಸಿದ ಕಟ್ಟಡಗಳು, ಅವರ ಕಲಾ ಶ್ರೀಮಂತಿಕೆಯನ್ನು ಇಂದಿಗೂ ಅಜರಾಮರವಾಗಿ ಉಳಿದುಕೊಂಡು ಬಂದಿರುವುದನ್ನು ಬಿಜಾಪುರ ಮತ್ತು ಸುತ್ತಮುತ್ತ ಪ್ರದೇಶಗಳಲ್ಲಿ ಇಂದಿಗೂ ಕಾಣಬಹುದಾಗಿದೆ. ಸೂಫಿ ಸಂತರ ಪ್ರಭಾವಕ್ಕೆ ಒಳಗಾಗಿ ಹಿಂದೂ-ಮುಸ್ಲಿಂರಲ್ಲಿ ಐಕ್ಯತೆಯ ಭಾವ ಮೂಡಿಸುವ ಸಲುವಾಗಿ ಆದಿಲ್‌ಶಾಹಿಗಳು ಶ್ರಮಿಸಿದರು. ಸಮಕಾಲಿನ ವಿಜಯನಗರ ಸಾಮ್ರಾಜ್ಯದೊಂದಿಗೆ ನಿರಂತರವಾಗಿ ಘರ್ಷಣೆಗೆ ಇಳಿದರು ಸಹ ಅಳಿಯ ರಾಮರಾಯ ಒಂದನೆಯ ಅಲಿ ಆದಿಲ್‌ಶಾಹನನ್ನು ತನ್ನ ಮಗನಂತೆ ಕಂಡಿರುವುದನ್ನು ಗಮನಿಸಬಹುದು.

ಈ ಮನೆತನವು ಕ್ರಿ.ಶ.೧೪೮೯ರಲ್ಲಿ ಯೂಸುಫ ಆದಿಲ್‌ಖಾನನಿಂದ ಸ್ಥಾಪಿಸಲ್ಪಟ್ಟು ಕ್ರಿ.ಶ. ೧೬೮೬ರವರೆಗೆ ಒಂಭತ್ತು ಜನ ಸುಲ್ತಾನರು ಸುಮಾರು ಎರಡನೂರು ವರ್ಷಗಳ ಕಾಲ ಆಳಿಕೆ ಮಾಡಿದರು. ಇವರುಗಳೆಂದರೆ, **ಯುಸುಫ ಆದಿಲ್‌ಖಾನ** (ಕ್ರಿ.ಶ. ೧೪೮೯-೧೫೧೦) **ಇಸ್ಮಾಯಿಲ್ ಆದಿಲ್‌ಖಾನ** (ಕ್ರಿ.ಶ. ೧೫೧೦-೧೫೩೪) **ಮಲ್ಲು ಆದಿಲ್‌ಖಾನ** (ಕ್ರಿ.ಶ. ೧೫೩೪-೧೫೩೫) **ಒಂದನೆ ಇಬ್ರಾಹಿಮ ಆದಿಲ್‌ಶಾಹ** (ಕ್ರಿ.ಶ. ೧೫೩೫-೧೫೫೮) **ಒಂದನೆ ಅಲಿ ಆದಿಲ್‌ಶಾಹ** (ಕ್ರಿ.ಶ. ೧೫೫೮-೧೫೮೦) ಎರಡನೆ ಇಬ್ರಾಹಿಮ

ಆದಿಲ್‌ಶಾಹ (ಕ್ರಿ.ಶ. ೧೫೮೦–೧೬೨೭) **ಮಹಮ್ಮದ ಆದಿಲ್‌ಶಾಹ** (ಕ್ರಿ.ಶ. ೧೬೨೭–೧೬೫೬) **ಎರಡನೆ ಅಲಿ ಆದಿಲ್‌ಶಾಹ** (ಕ್ರಿ.ಶ. ೧೬೫೬–೧೬೭೨) ಮತ್ತು **ಸಿಕಂದರ ಆದಿಲ್‌ಶಾಹ** (ಕ್ರಿ.ಶ. ೧೬೭೨–೧೬೮೬) .

ಮಹಮ್ಮದ ಆದಿಲ್‌ಶಾಹನು ಬಿಜಾಪುರ ಆದಿಲ್‌ಶಾಹಿ ಸುಲ್ತಾನರಗಳಲ್ಲಿಯೇ ಅತ್ಯಂತ ಪ್ರಮುಖ ಸುಲ್ತಾನ ಇವನ ಕಾಲದಲ್ಲಿಯೇ ಅತ್ಯಂತ ವಿಸ್ತಾರವಾದ ಮತ್ತು ಸಂಪತ್ಭರಿತವಾದ ಸಾಮ್ರಾಜ್ಯವಾಗಿ ಮಾರ್ಪಟ್ಟಿದ್ದು ಇವನ ಕಾಲದಲ್ಲಿಯೇ. ಮಹಮ್ಮದ ಆದಿಲ್‌ಶಾಹನು ಕ್ರಿ.ಶ. ೧೬೨೭–೧೬೫೬ ರವರೆಗೆ ಸುಮಾರು ಇಪ್ಪತ್ತರೊಂಬತ್ತು ವರ್ಷಗಳ ಕಾಲ ಆಡಳಿತವನ್ನು ಮಾಡಿದನು. ಇಂತಹ ಸುಲ್ತಾನನ್ನು ಕುರಿತು ಈವರೆಗೆ ಯಾವುದೆ ಅಧ್ಯಯನಗಳು ನಡೆದಿಲ್ಲ. ಹೀಗಾಗಿ ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆಯನ್ನು ಕುರಿತು ಅಧ್ಯಯನ ಮಾಡುವುದು ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಪೂರ್ವಾಧ್ಯಯನಗಳ ಸಮೀಕ್ಷೆ:

ಬಿಜಾಪುರ ಆದಿಲ್‌ಶಾಹಿಗಳನ್ನು ಕುರಿತು ಇವರೆಗೆ ಹಲವಾರು ಅಧ್ಯಯನಗಳು ನಡೆದಿವೆಯಾದರು ಮಹಮ್ಮದ ಆದಿಲ್‌ಶಾಹನನ್ನು ಕುರಿತು ವಸ್ತುನಿಷ್ಠವಾದ ಹಾಗೂ ಪ್ರತೇಕವಾಗಿ ಅಧ್ಯಯನ ನಡೆದಿಲ್ಲವೆಂದು ಹೇಳಬಹುದು. ವಾಸ್ತುಶಿಲ್ಪ, ಚಿತ್ರಕಲೆ ಕುರಿತು ಹಲವು ಕೃತಿಗಳಲ್ಲಿ ಮಹಮ್ಮದ ಆದಿಲ್‌ಶಾಹನ ಉಲ್ಲೇಖಗಳುಂಟು ಆ ಕುರಿತು ಲೇಖನಗಳು ಪ್ರಕಟವಾಗಿರುದುಂಟು ಅವುಗಳಲ್ಲಿ ಈ ಕೆಳಗಿನವುಗಳನ್ನು ಹೆಸರಿಸಬಹುದು.

ಆದಿಲ್‌ಶಾಹಿ ಮನೆತನದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಲು ಈ ಕೆಳಗಿನವುಗಳು ಅತ್ಯಂತ ಪ್ರಮುಖವಾದ ಆಧಾರ ಗ್ರಂಥಗಳಾಗಿವೆ. ಪಿ. ಎಂ. ಜೋಶಿಯವರು ತಮ್ಮ *"Kingdom of Bijapur" (1935)* ಪ್ರೌಢ ಪ್ರಬಂಧದಲ್ಲಿ ಮುಖ್ಯವಾಗಿ ಆದಿಲ್‌ಶಾಹಿಗಳ ರಾಜಕೀಯ ಇತಿಹಾಸವನ್ನು ವಿವರಿಸಲಾಗಿದ್ದು, ಅದರೊಂದಿಗೆ ಆ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಭಾಷೆ ಹಾಗೂ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಎಂ ನಜೀಮರವರ *"Bijapur Inscriptions"* (೧೯೩೬) ಗ್ರಂಥದಲ್ಲಿ ಬಿಜಾಪುರದ ಆದಿಲ್‌ಶಾಹಿ ಸುಲ್ತಾನರು ಹೊರಡಿಸಿರುವ ಶಾಸನಗಳನ್ನು ಸಂಗ್ರಹಿಸಿ ಅವುಗಳಿಗೆ ವಿಸ್ತೃತವಾದ ವಿವರಣೆಯನ್ನು ಒಳಗೊಂಡಿರುವಂತಹದಾಗಿದೆ. ಬಿ. ಡಿ. ವರ್ಮಾರವರ *"Adilshahi Epigraphy in Deccan "*(1948) ಅವರ ಕಾಲದ ಶಾಸನಗಳ ಸಂಗ್ರಹವಾಗಿದೆ. ಯೂಸುಫ ಹುಸೇನಿ ಅವರ *"Farmans and Sanads of the Deccan Sultan"* (1963) ಎಂಬ ಕೃತಿಯು ಆದಿಲ್‌ಶಾಹಿಗಳು ಹೊರಡಿಸಿರುವ ಫರಮಾನ ಮತ್ತು ಸನದುಗಳನ್ನು ಒಳಗೊಂಡಿದೆ. ಎಸ್. ಕೆ. ಸಿನ್ಹಾ ಅವರ *" Medieval History of the Deccan" Vol II* (1968) ಗ್ರಂಥದಲ್ಲಿ ಆದಿಲ್‌ಶಾಹಿಗಳನ್ನು ಕುರಿತಿದ್ದಾಗಿದೆ. ಒಂಭತ್ತು ಅಧ್ಯಾಯಗಳನ್ನು ಆರು ಪುರವಣಿಗಳನ್ನು ಒಳಗೊಂಡಿರುವ ಈ ಗ್ರಂಥದಲ್ಲಿ ಆದಿಲ್‌ಶಾಹಿಗಳ ರಾಜಕೀಯ ಚರಿತ್ರೆಯನ್ನು ಹೇಳುವುದರೊಂದಿಗೆ, ಅವರ ಕಾಲದ ಕಲೆ ಮತ್ತು ವಾಸ್ತುಶಿಲ್ಪ, ನೀರಾವರಿ ವ್ಯವಸ್ಥೆ,

ಆಡಳಿತ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹೇಳಿ ಕೊನೆಯಲ್ಲಿ ಅವರ ಕಾಲದ ಫರಮಾನಗಳು, ಸೀಲ್ ಮುಂತಾದವುಗಳನ್ನು ಕೊಟ್ಟಿದ್ದಾರೆ. ಡಿ. ಸಿ. ವರ್ಮಾರವರು ತಮ್ಮ *"Social Economic and Cultural History of Bijapur"* (೧೯೭೩) ಎಂಬ ಗ್ರಂಥದಲ್ಲಿ ಬಿಜಾಪುರ ರಾಜ್ಯದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಕುರಿತು ಚರ್ಚಿಸಿದ್ದಾರೆ. ಹಾಗೂ ತಮ್ಮ *"History of Bijapur"* (೧೯೭೪) ಎಂಬ ಗ್ರಂಥದಲ್ಲಿ ಆದಿಲ್‌ಶಾಹಿಗಳ ರಾಜಕೀಯ ಇತಿಹಾಸ ಮತ್ತು ಬಿಜಾಪುರ ರಾಜ್ಯದ ವಿದೇಶಾಂಗ ನೀತಿಯನ್ನು ವಿವರವಾಗಿ ಚರ್ಚಿಸಿದ್ದಾರೆ. ಎಚ್. ಕೆ. ಶೇರವಾನಿ ಮತ್ತು ಪಿ. ಎಂ. ಜೋಶಿ ಅವರು ಸಂಪಾದಿತ ಕೃತಿ *"ಉಖಾಆಥಿ ಆಜಿ ಒಜಾಜಾಚಿಟ ಆಜ್ಞಿಭಿಚಿಟಿ"* (೧೯೭೩) ಎಂಬ ಗ್ರಂಥವು ಎರಡು ಸಂಪುಟಗಳನ್ನೊಳಗೊಂಡಿದ್ದು ಬಹಮನಿ ಹಾಗೂ ಇನ್ನೂಳಿದ ಐದು ಶಾಹಿ ಸುಲ್ತಾನರ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ.

ಎಂ. ಎ. ನಯೀಮ ರವರ *"External Relations of Bijapur" (A Diplomatic Study) (1974)* ಪ್ರಬಂಧದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ರಾಜಕೀಯ ಇತಿಹಾಸವನ್ನು ಹೇಳುವುದರೊಂದಿಗೆ ಅವರು ವಿದೇಶಿಯರೊಂದಿಗೆ ಹೊಂದಿದ ಸಂಬಂಧಗಳನ್ನು ವಿಸ್ತೃತವಾಗಿ ಪರಿಚಯಿಸಿದ್ದಾರೆ. ಒಂಭತ್ತು ಅಧ್ಯಾಯಗಳನ್ನು ೩೬೬ ಪುಟಗಳನ್ನು ಒಳಗೊಂಡಿರುವ ಈ ಕೃತಿಯಲ್ಲಿ ಮೊದಲನೆಯ ಅಧ್ಯಾಯದಲ್ಲಿ ಆಧಾರಗಳನ್ನು ಕುರಿತು ವಿಸ್ತೃತವಾಗಿ ಮೌಲ್ಯಮಾಪನ ಮಾಡಿದ್ದಾರೆ. ಆದಿಲ್‌ಶಾಹಿ ಬಹಮನಿಯರ ಸಂಬಂಧ, ಆದಿಲ್‌ಶಾಹಿಗಳು ಇತರ ಇಸ್ಲಾಂ ರಾಷ್ಟ್ರಗಳೊಂದಿಗಿನ ಸಂಬಂಧ, ಬಿಜಾಪುರ–ವಿಜಯನಗರ ಸಂಬಂಧ, ಬಿಜಾಪುರ–ಮೊಘಲರ ಸಂಬಂಧ, ಆದಿಲ್‌ಶಾಹಿ–ಮರಾಠರ ಸಂಬಂಧ, ಆದಿಲ್‌ಶಾಹಿ–ಯುರೋಪಿಯನ್ನರೊಂದಿಗೆ ಹೊಂದಿರುವ ಸಂಬಂಧ, ಡಚ್ಚ, ಬ್ರಿಟೀಷ, ಫ್ರೆಂಚ ಮತ್ತು ಪೋರ್ಚುಗೀಸರೊಂದಿಗಿನ ಸಂಬಂಧವನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

ಪಿ. ಎಂ. ಜೋಶಿ ಅವರ *"The Region of Ibrahim Adil Shah of Bijapur"* (1948) ಗ್ರಂಥವು ಎರಡನೆಯ ಇಬ್ರಾಹಿಂ ಆದಿಲ್‌ಶಾಹನ ಜೀವನ ಚಿತ್ರಣವನ್ನು ಸಮಗ್ರವಾಗಿ ತಿಳಿಸುವ ಕೃತಿಯಾಗಿದೆ. ಫುಕೋಜಾವಾ ಹಿರೋಶಿ. ರವರ *" The History of Medieval Deccan"* (1991) ಎಂಬ ಗ್ರಂಥದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಆಡಳಿತ ಪದ್ಧತಿಯನ್ನು ಕುರಿತು ಸಮಗ್ರವಾಗಿ ಚರ್ಚಿಸಿದ್ದಾರೆ. ಕೃಷ್ಣ ಕೋಲ್ಹಾರ ಕುಲಕರ್ಣಿ ಅವರು ೨೦೦೨ ರಲ್ಲಿ ಪ್ರಕಟಿಸಿರುವ *"ಬಿಜಾಪುರದ ಆದಿಲ್‌ಶಾಹಿ"* (ಕ್ರಿ.ಶ.೧೪೮೯–೧೬೮೬) ಕೃತಿಯನ್ನು ಸಿಕ್ಯಾಬ, ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ಬಿಜಾಪುರ ಅವರು ಪ್ರಕಟಿಸಿರುತ್ತಾರೆ. ಈ ಕೃತಿಯು ಹತ್ತು ಅಧ್ಯಾಯಗಳನ್ನು ಮತ್ತು ೩೨೬ ಪುಟಗಳನ್ನು ಹೊಂದಿದೆ. ಇದರಲ್ಲಿ ಆದಿಲ್‌ಶಾಹಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಚಿತ್ರಣವನ್ನು ಚಿತ್ರಿಸಿದ್ದಾರೆ. ಅವರದೇ ಇನ್ನೊಂದು ಕೃತಿ *"ಆದಿಲ್‌ಶಾಹಿ ಆಸ್ಥಾನದ ಸಾಹಿತ್ಯ"* (೧೯೯೮) ಕನ್ನಡ ವಿಶ್ವವಿದ್ಯಾಲು ಹಂಪಿಯಿಂದ ಪ್ರಕಟವಾಗಿದೆ. ಇದರಲ್ಲಿ ಪ್ರಚಲಿತ

ಪ್ರಕಟವಾಗಿದೆ. ಇದರಲ್ಲಿ ಪ್ರಚಲಿತ ಭಾಷೆಗಳು, ಕನ್ನಡೇತರ ಕೃತಿಗಳು, ಚರಿತ್ರೆ ಗ್ರಂಥಗಳು ಕಥನ ಕಾವ್ಯ ಕೃತಿಗಳು ಮತ್ತು ಸೂಫಿ ನಂತರ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯ ಕುರಿತು ವಿವೇಸಿದ್ದಾರೆ.

ಬಿಜಾಪುರದ ಆದಿಲ್‌ಶಾಹಿಗಳ ಕಾಲದ ಸೂಫಿ ಸಂತರು ಹಾಗೂ ಅವರ ತತ್ವಗಳನ್ನು ಕುರಿತು ಕೆಲವು ಗ್ರಂಥಗಳು ಹೊರ ಬಂದಿದ್ದು ಅವುಗಳಲ್ಲಿ ಆರ್. ಎಂ ಈಟನ್. ೧೯೭೮ ರಲ್ಲಿ ಬರೆದಿರುವ *"Sufis of Bijapur"* ಎಂಬ ಗ್ರಂಥದಲ್ಲಿ ಮುಖ್ಯವಾಗಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಸೂಫಿ ಸಂತರು ಹಾಗೂ ಅವರ ಅಧ್ಯಾತ್ಮಿಕ ವಿಚಾರಧಾರೆಯನ್ನು ಕುರಿತು ಆಳವಾಗಿ ಚರ್ಚಿಸಿದ್ದಾರೆ. ಅದರೊಂದಿಗೆ ಸೂಫಿ ಸಂತರು ಸಮಾಜದ ಮೇಲೆ ಬೀರಿರುವ ಗಾಢ ಪ್ರಭಾವವನ್ನು ಹಾಗೂ ದಖ್ಖನಿ ಸಾಹಿತ್ಯದ ಬೆಳವಣಿಗೆಗೆ ಅವರು ನೀಡಿರುವ ಕೊಡುಗೆಗಳನ್ನು ಕುರಿತು ವಿವರಿಸಿದ್ದಾರೆ.

ರಹಮತ ತರೀಕೆರೆ ಅವರು ರಚಿಸಿದ ಗ್ರಂಥ " *ಕರ್ನಾಟಕದ ಸೂಫಿಗಳು*" (೨೦೦೧) ಎಂಬ ಗ್ರಂಥವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿಯವರು ಪ್ರಕಟಿಸಿದ್ದು, ಅದರಲ್ಲಿ ಬಿಜಾಪುರದ ಸೂಫಿಗಳು ಮತ್ತು ಅವರ ಸಾಹಿತ್ಯದ ಕುರಿತು ಚರ್ಚಿಸಿದ್ದಾರೆ. ಎ. ಎಂ ಅಣ್ಣಿಗೇರಿ. ರವರ " *ಬಿಜಾಪುರದ ಶಿಲ್ಪಕಲಾ ವೈಭವ*" ಧಾರವಾಡ (೧೯೮೦) ಆರ್. ಮುನಿಸ್ವಾಮಿ, ಅವರು ಸಂಪಾದಿಸಿರುವ " *ಬಿಜಾಪುರ ಜಿಲ್ಲೆಯ ಗ್ಯಾಝೆಟಿಯರ*" (ಪರಿಷ್ಕೃತ ಆವೃತಿ ೧೯೯೯) ಬಿ. ಷೇಕ ಅಲಿ, ಅವರ ಸಂಪಾದಕತ್ವದಲ್ಲಿ ಹೊರಬಂದಿರುವ " *ಕರ್ನಾಟಕ ಚರಿತ್ರೆ*" ಸಂಪುಟ–೪ (೧೯೯೭) ಕೇಶವ ಭಟ್ಟ ಮತ್ತು ಕೃಷ್ಣಮೂರ್ತಿ ಅವರು ಪ್ರಕಟಿಸಿರುವ " *ಕರ್ನಾಟಕ ಇತಿಹಾಸ ದರ್ಶನ*" ಮುಂತಾದ ಕೃತಿಗಳು ಬಿಜಾಪುರ ಆದಿಲ್‌ಶಾಹಿಗಳ ಇತಿಹಾಸವನ್ನು ತಿಳಿಸುತ್ತವೆ.

ಆದಿಲ್‌ಶಾಹಿಗಳ ಕಲೆ ಮತ್ತು ವಾಸ್ತುಶಿಲ್ಪ ಕುರಿತು ಅನೇಕ ಕೃತಿಗಳು ಹೊರಬಂದಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ,

ಮ್ಯಾಡೋಸ್ ಟೈಲರ್ ಮತ್ತು ಜೇಮ್ಸ ಫರ್ಗ್ಯೂಸನ್‌ರವರು ಬರೆದಿರುವ *"Architecture at Beejapur"* (London 1866) ಗ್ರಂಥದಲ್ಲಿ ಮುಖ್ಯವಾಗಿ ಬಿಜಾಪುರ ಆದಿಲ್‌ಶಾಹಿಗಳ ಕಾಲದಲ್ಲಿ ನಿರ್ಮಿಸಲಾದ ವಾಸ್ತುಶಿಲ್ಪಗಳ ಕುರಿತು ವಿಸ್ತ್ರತ ಅಧ್ಯಯನವನ್ನು ಒಳಗೊಂಡಿದೆ. ಇದರಲ್ಲಿ ಆದಿಲ್‌ಶಾಹಿಗಳ ವಾಸ್ತುಶಿಲ್ಪ ರಚನಾ ಮಾದರಿ ಹಾಗೂ ಆದಿಲ್‌ಶಾಹಿ ವಾಸ್ತುಶಿಲ್ಪ ಶೈಲಿಯನ್ನು ವಿವರಿಸಿದ್ದಾರೆ.

ಹೆನ್ರಿ ಕಜಿನ್ಸರವರು ೧೯೧೬ ರಲ್ಲಿ ಪ್ರಕಟಿಸಿರುವ *"Bijapur and its Architectural Remains"* (With Historical out line of the Adilshahi Dynasty) ಗ್ರಂಥದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಐತಿಹಾಸಿಕ ಹಿನ್ನೆಲೆಯಿಟ್ಟುಕೊಂಡು ಅವರ ಕಾಲದ ವಾಸ್ತುಶಿಲ್ಪಗಳನ್ನು ಕುರಿತು ಸೂಕ್ಷ್ಮವಾಗಿ ಅಧ್ಯಯನ ನಡೆಸಿದ್ದಾರೆ. ಈ ಗ್ರಂಥದಲ್ಲಿ ಮುಖ್ಯವಾಗಿ ವಾಸ್ತುಶಿಲ್ಪಕ್ಕೆ ಹೆಚ್ಚಿನ ಗಮನ ನೀಡಿದಾಗ್ಯೂ

ಸಂದರ್ಭಕ್ಕನುಗುಣವಾಗಿ ಆ ಕಾಲದ ರಾಜಕೀಯ, ಆಡಳಿತ, ಭಾಷೆ, ಧಾರ್ಮಿಕ ಆಚರಣೆ ಹಾಗೂ ಸಾಮಾಜಿಕ ಆರ್ಥಿಕ ಅಂಶಗಳನ್ನು ವಿವೇಚಿಸಿದ್ದಾರೆ.

ಮಾಧವ ಸಿರಫ ರವರು ತಮ್ಮ *"Important Adilshahi Monument of Bijapur"* (1936) ಎಂಬ ಗ್ರಂಥದಲ್ಲಿ ಆದಿಲ್‌ಶಾಹಿಗಳ ಕಾಲದಲ್ಲಿ ಬಿಜಾಪುರ ನಗರದಲ್ಲಿ ನಿರ್ಮಾಣಗೊಂಡ ಆದಿಲ್‌ಶಾಹಿಗಳ ಸ್ಮಾರಕಗಳನ್ನು ಹಾಗೂ ಅವುಗಳ ರಚನಾ ವಿನ್ಯಾಸವನ್ನು ಕುರಿತು ವಿಸ್ತ್ರತವಾಗಿ ಚರ್ಚಿಸಿದ್ದಾರೆ.

ಪರ್ಶಿ ಬ್ರೌನ್ ರವರ *"Indian Architecture"* (Islamic Period) 1968 ಗ್ರಂಥದಲ್ಲಿ ಮುಖ್ಯವಾಗಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತು ಚರ್ಚಿಸಿದ್ದಾರೆ. ಬಿಜಾಪುರ ಆದಿಲ್‌ಶಾಹಿಗಳ ವಾಸ್ತುಶಿಲ್ಪ ಶೈಲಿ, ಅದರ ಮೇಲೆ ವಿವಿಧ ಶೈಲಿಗಳ ಪ್ರಭಾವ ಹಾಗೂ ಆದಿಲ್‌ಶಾಹಿ ವಾಸ್ತುಶಿಲ್ಪದ ಪ್ರಮುಖ ಲಕ್ಷಣಗಳನ್ನು ಗುರುತಿಸಿ ಪ್ರಮುಖ ಸ್ಮಾರಕಗಳ ವಿವರಣೆಯನ್ನು ನೀಡಿದ್ದಾರೆ.

ಮಾರ್ಕಲಿಂಗರ್ ಎಲಿಜಾಬೆತ ಸ್ಟ್ರೇಚನರ್ ತಮ್ಮ *" Indian Islamic Architecture of Deccan"* (1981) ಗ್ರಂಥದಲ್ಲಿ ದಖ್ಖನ ಪ್ರಾಂತದಲ್ಲಿ ಇಸ್ಲಾಮಿಕ ವಾಸ್ತುಶಿಲ್ಪದ ಬೆಳವಣಿಗೆಯಲ್ಲಿ ದಖ್ಖನ ಸುಲ್ತಾನರ ಕೊಡುಗೆಗಳನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

ಝೂಮನ್ ಖೋಡೆ ರವರ ತಮ್ಮ *"Persian Elements in the Culture Art and Architecture of Bijapur"* (1989) ಎಂಬ ಗ್ರಂಥದಲ್ಲಿ ಬಿಜಾಪುರ ಸಂಸ್ಕೃತಿ, ಕಲೆ ಮತ್ತು ವಾಸ್ತುಶಿಲ್ಪದ ಮೇಲೆ ಪರ್ಶಿಯನ್ ಸಂಸ್ಕೃತಿಯ ಪ್ರಭಾವವನ್ನು ಕುರಿತು ವಿವರವಾಗಿ ಚರ್ಚಿಸಿದ್ದಾರೆ.

ಜಾರ್ಜ ಮಿಚ್ಚಲ್ ಮತ್ತು ಮಾರ್ಕ ಝುಬ್ರಾಕ್ಸಿ ಅವರ *" Architecture and Art of the Deccan Sultanates"* (1999) ಎಂಬ ಗ್ರಂಥದಲ್ಲಿ ಬಿಜಾಪುರ ಆದಿಲ್‌ಶಾಹಿ ಸುಲ್ತಾನರ ಕಾಲದ ಕೋಟೆ, ಅರಮನೆಗಳು, ಮಸೀದೆ, ಸಮಾಧಿಗಳು ಮತ್ತು ವಾಸ್ತುಶಿಲ್ಪದ ಶ್ರೀಂಗಾರ ಮತ್ತು ಚಿತ್ರಕಲೆಯ ಹಾಗೂ ಬಟ್ಟೆಯ ಮತ್ತು ಲೋಹಗಳ ಮೇಲಿನ ಕೆತ್ತನೆಯ ಬಗ್ಗೆ ವಿಸ್ತಾರವಾಗಿ ಚರ್ಚಿಸಿದ್ದಾರೆ.

೨೦೦೮ ರಲ್ಲಿ ಪ್ರಕಟವಾಗಿರುವ ಎಂ. ಎ. ನಯೀಮ್ ಅವರ *"The Heritage of the Adilshahis of Bijapur "* ಎಂಬ ಗ್ರಂಥವು ಅತ್ಯಂತ ಸುಂದರವಾದ ಛಾಯಾ ಚಿತ್ರಗಳನ್ನು ಒಳಗೊಂಡಿರುವ ಕೃತಿಯಾಗಿದೆ. ಸುಮಾರು ೪೨೦ ಪುಟಗಳಿದ್ದು ಇಡೀ ಗ್ರಂಥವನ್ನು ಮೂರು ಭಾಗಗಳಲ್ಲಿ ವಿಭಾಗಿಸಿಕೊಂಡು ರಚಿಸಿದ್ದಾರೆ. ಮೊದಲನೆಯ ಭಾಗದಲ್ಲಿ ರಾಜಕೀಯ ಇತಿಹಾಸ ಮತ್ತು ವಿದೇಶಿ ಸಂಬಂಧವನ್ನು ಕುರಿತು ವಿವೇಚಿಸಲಾಗಿದೆ. ಇದರಲ್ಲಿ ಆಡಳಿತ, ಸೈನಿಕ ಸಂಘಟನೆಯನ್ನು ಹೇಳುವುದರೊಂದಿಗೆ ಯುರೋಪಿಯನ್ನರೊಂದಿಗಿನ ಸಂಬಂಧವನ್ನು ವಿವೇಚಿಸಲಾಗಿದೆ.

ಎರಡನೆಯ ಭಾಗವಾದ ಬಿಜಾಪುರ ಮತ್ತು ಅದರ ಪರಿಸರವೆಂದು ಹೇಳಿ ಅದರಲ್ಲಿ ಕಲೆ, ವಾಸ್ತು, ನಾಣ್ಯ ಮುಂತಾದ ಪ್ರಾಚ್ಯ ಅವಶೇಷಗಳನ್ನು ಕುರಿತು ಹೇಳಲಾಗಿದೆ.

ಮೂರನೆಯ ಭಾಗವಾದ ಬಿಜಾಪುರದ ಹೊರಗಡೆ ಇರುವ ಆದಿಲ್‌ಶಾಹಿಗಳ ವಾಸ್ತುಗಳನ್ನು ಕುರಿತು ವಿವೇಚಿಸಿದ್ದಾರೆ.

ಬಿಜಾಪುರ ಆದಿಲ್‌ಶಾಹಿಗಳ ಕಾಲದ ವರ್ಣಚಿತ್ರ ಕಲೆಯನ್ನು ಕುರಿತು ಅನೇಕ ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ ಅತ್ಯಂತ ಪ್ರಮುಖವಾದ ಗ್ರಂಥಗಳು ಈ ಕೆಳಗೆ ವಿವೇಚಿಸಲಾಗಿದೆ.

ಡಿ. ಬ್ಯಾರೇಟ್. ಅವರ *"Painting at Bijapur" Paintings from Islamic Lands* (1969) ಮತ್ತು *"Deccani Painting from the Muslim Courts of India* (1969) ಕೃತಿಯು ಬಿಜಾಪುರ ಆದಿಲ್‌ಶಾಹಿಗಳ ವರ್ಣಚಿತ್ರ ಕಲೆಯನ್ನು ತಿಳಿಯಲು ಉಪಯುಕ್ತವಾದ ಕೃತಿಗಳಾಗಿವೆ.

ಮಾರ್ಕ ಝುಬ್ರಾಕ್ಸಿ ಅವರ *"Deccani Painting"* (1983) ಎಂಬ ಕೃತಿಯು ಬಿಜಾಪುರ ಆದಿಲ್‌ಶಾಹಿ ಸುಲ್ತಾನರ ಕಾಲದ ವರ್ಣಚಿತ್ರ ಕಲೆಯನ್ನು ಸಮಗ್ರವಾಗಿ ತಿಳಿಸುವ ಪ್ರಮುಖ ಕೃತಿಯಾಗಿದೆ. ಮತ್ತು ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಬಿಜಾಪುರದ ಚಿತ್ರಕಲೆಯಲ್ಲಿ ಉತ್ತರದ ಮೊಗಲರ ಪ್ರಭಾವವನ್ನು ತೋರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಎಸ್.ಕೆ. ಅರುಣಿ ಅವರು ಬರೆದಿರುವ *"ದಖನಿ ಚಿತ್ರ ಕಲೆ"* (೨೦೦೧) ಕೃತಿಯು ವರ್ಣಚಿತ್ರಕಲೆಯನ್ನು ತಿಳಿಸುವಲ್ಲಿ ಅತ್ಯಂತ ಉಪಯುಕ್ತವಾದ ಮಾಹಿತಿಯನ್ನು ಒಳಗೊಂಡಿರುವಂತಹದ್ದಾಗಿದೆ. ಎರಡನೆ ಇಬ್ರಾಹಿಂ ಆದಿಲ್‌ಶಾಹನ ಆಳ್ವಿಕೆಯ ಪ್ರಾರಂಭದೊಂದಿಗೆ ಬಿಜಾಪುರ ಚಿತ್ರಕಲೆ ಒಂದು ಹೊಸ ಹಂತವನ್ನು ಪ್ರವೇಶಿಸಿತು. ಈ ಕಾಲದಲ್ಲಿ ಬೆಳೆದು ಬಂದ ಬಿಜಾಪುರದ ಚಿತ್ರ ಕಲೆಯು ದಖನಿ ಚಿತ್ರಕಲೆಯಲ್ಲಿ ತನ್ನ ವಿಶಿಷ್ಟ ಲಕ್ಷಣಗಳಿಂದಾಗಿ ಬಿಜಾಪುರ ಶೈಲಿ ಎಂದು ಗುರುತಿಸಿಕೊಂಡಿತು.

ಡಬ್ರಹ ಹಾಟನ್ ಬರೆದಿರುವ *" Art of the court of Bijapur "* (2006) ಎಂಬ ಗ್ರಂಥದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಚಿತ್ರಕಲೆ ಕುರಿತು ವಿವರವಾಗಿ ಮಾಹಿತಿಯನ್ನು ನೀಡಲಾಗಿದೆ.

ಮೇಲಿನ ಗ್ರಂಥಗಳಲ್ಲದೇ ಆದಿಲ್‌ಶಾಹಿಗಳನ್ನು ಕುರಿತು ಹಲವಾರು ಲೇಖನಗಳು ಪ್ರಕಟವಾಗಿದ್ದು ಅವುಗಳಲ್ಲಿ ಪ್ರಮುಖವಾದವುವೆಂದರೆ. P. M. Joshi, *" Adilshahi Administration"* (Indian History Congress Lahore 1940) ಎಂಬ ಲೇಖನದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಕೇಂದ್ರ ಮತ್ತು ಪ್ರಾಂತಿಯ ಆಡಳಿತ ವ್ಯವಸ್ಥಯನ್ನು ನೋಡಬಹುದು. K.K. Basu, *"The Court Poets of Bijapur and their Philosophy"* (Indian Historical records Commission Calcutta 1946)

ಲೇಖನದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಕವಿ ಮತ್ತು ವಿದ್ವಾಂಸರ ಕುರಿತು ಉಲ್ಲೇಖಗಳಿವೆ. ಇವರ ಇನ್ನೊಂದು ಲೇಖನ *"The Dastur-ul-Amal of the Bijapur Court"* (Indian Historical Records Commission Baroda 1940) ಎಂಬ ಲೇಖನದಲ್ಲಿ ಬಿಜಾಪುರ ಆದಿಲ್‌ಶಾಹಿ ಸುಲ್ತಾನರ ದಿನನಿತ್ಯದ ಕಾರ್ಯಗಳ ಬಗ್ಗೆ ವಿಸ್ತಾರವಾಗಿ ಬರೆಯಲಾಗಿದೆ.

G. H. Khare *"An Interesting Adilshahi Farman"* (Islamic Culture-21 1947) ಎಂಬ ಲೇಖನದಲ್ಲಿ ಮಹಮ್ಮದ ಆದಿಲ್‌ಶಾಹ ಮತ್ತು ಪೋರ್ಚುಗಿಸರ ಜೊತೆಗಿನ ಸಂಬಂಧವನ್ನು ವಿಸ್ತಾರವಾಗಿ ಉಲ್ಲೇಖಿಸಲಾಗಿದೆ.

Iftekar Ahmed. Ghouri, *"Central Structure of the kingdom of Bijapur"* (1970) ಎಂಬ ಸಂಶೋಧನಾ ಲೇಖನದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಕೇಂದ್ರಾಡಳಿತ ಮತ್ತು ಪ್ರಾಂತಾಡಳಿತವನ್ನು ವಿಸ್ತ್ರತವಾಗಿ ಉಲ್ಲೇಖಿಸಲಾಗಿದೆ.

ಇವರ ಇನ್ನೊಂದು ಲೇಖನ *"Kingship in the Sultanates of Bijapur and Golconda"* (Islamic Culture Hydrabad 1972) ದಲ್ಲಿ ಬಿಜಾಪುರದ ಆದಿಲ್‌ಶಾಹಿಗಳು ಮತ್ತು ಗೊಲ್ಕೊಂಡ ರಾಜಮನೆತನಕ್ಕೂ ಇರುವ ಸಂಬಂಧವನ್ನು ವಿವೇಚಿಸಲಾಗಿದೆ.

Azamat Ali. Beg, *"Aurangzeb's Second viceroyalty of the Deccan and its Relation with Bijapur"* (Islamic Culture Hydrabad 1974) ಎಂಬ ಲೇಖನದಲ್ಲಿ ಮೊಗಲ ಮತ್ತು ಬಿಜಾಪುರದ ಆದಿಲ್‌ಶಾಹಿಗಳ ನಡುವಿನ ಸಂಬಂಧಗಳನ್ನು ಉಲ್ಲೇಖಿಸಲಾಗಿದೆ.

Muhammad Wali Khan, *"Copper Coins of Adilshahi Dynasty of Bijapur"* (Birla Archaeological and Cultural Research Institute. Hydrabad. 1980) ಎಂಬ ಲೇಖನದಲ್ಲಿ ಆದಿಲ್‌ಶಾಹಿಗಳ ಕಾಲದ ಚಿನ್ನ ಮತ್ತು ಬೆಳ್ಳಿ ನಾಣ್ಯ ವ್ಯವಸ್ಥೆ ಕುರಿತು ವಿಸ್ತೃತವಾದ ಉಲ್ಲೇಖಗಳನ್ನು ನೀಡಿದ್ದಾರೆ.

P. M Joshi,.*"Position of the Hindu in the Adilshahi kingdom of Bijapur"* ಎಂಬ ಸಂಶೋಧನಾ ಲೇಖನದಲ್ಲಿ ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಹಿಂದೂ ಜನರ ಸ್ಥಿತಿಗತಿಗಳನ್ನು, ಮತ್ತು ಆದಿಲ್‌ಶಾಹಿಗಳ ಕಾಲದಲ್ಲಿ ಅವರ ಅಸ್ತಿತ್ವ ಕುರಿತು ಸಮಗ್ರವಾದ ಮಾಹಿತಿಯನ್ನು ನೀಡಿದ್ದಾರೆ.

Epigraphia Indo-Moslemica 1931-32 Edited by M. A. Yazdani, *"Inscriptions of Shahpur, Gogi, and Sagar, Gulbarga District."* ದಲ್ಲಿ ಬಿಜಾಪುರದ ಆರಂಭಿಕ ದೊರೆಗಳಾದ

ಯುಸೂಫ ಆದಿಲ್‌ಖಾನ, ಇಸ್ಮಾಯಿಲ್ ಆದಿಲ್‌ಖಾನ, ಮಲ್ಲು ಆದಿಲ್‌ಖಾನ ಮತ್ತು ಒಂದನೆ ಇಬ್ರಾಹಿಮ್ ಆದಿಲ್‌ಶಾಹರ ಶಾಸನಗಳನ್ನು ಕ್ರೋಡಿಕರಿಸಿದ್ದಾರೆ.

Epigraphia Indica (Arbic and Persian Supplement) 1968 & 1969, A. A. Kadiri, *"Adilshahi Inscriptions from Bankapur "* ಎಂಬ ಲೇಖದಲ್ಲಿ ಮಹಮ್ಮದ ಆದಿಲ್‌ಶಾಹನ ಕಾಲದ ಶಾಸನದ ಉಲ್ಲೇಖವಿದೆ. ಕ್ರಿ. ಶ. ೧೬೪೦-೪೧ ರಲ್ಲಿ ಹವಾಲ್ದಾರ ಮೀರಅಲಿ ರೈದಾನ ಮರಣ ದಿನಾಂಕವನ್ನು ಬರೆಯಲಾಗಿದೆ.

P.M Joshi and M.A. Nyaeem, ಅವರು ಸಂಪಾದಿಸಿದ Studies in the Foreign Relations of India. ಎಂಬ ಗ್ರಂಥದಲ್ಲಿ ಉಜ್ಜಾದ ಅವರ ಸಂಶೋಧನಾ ಲೇಖನವಾದ *"The Ottoman-Turkish Architecture in Bijapur"* ದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ಲಕ್ಷಣಗಳನ್ನು ಕುರಿತು ವಿಸ್ತೃತವಾಗಿ ಮಾಹಿತಿಯನ್ನು ನೀಡಿದ್ದಾರೆ.

ಸಂಶೋಧನಾ ಪ್ರಬಂಧಗಳು : ಆಶಿಯಾ ಬೇಗಂರವರು ತಮ್ಮ *" Society and Culture under the Bijapur Sultans "* (1983). ಎಂಬ ಪ್ರೌಢ ಅಪ್ರಕಟಿತ ಪ್ರಬಂಧದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಕಾಲದ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ವ್ಯವಸ್ಥೆ ಹಾಗೂ ಕಲೆ ಮತ್ತು ವಾಸ್ತುಶಿಲ್ಪ, ಪರ್ಶಿಯನ ಮತ್ತು ದಖ್ಖನಿ ಭಾಷೆಯನ್ನು ಕುರಿತು ಚರ್ಚಿದಿದ್ದಾರೆ.

ಢವಳಗಿ ಸಂಗನಗೌಡ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ *"ಬಿಜಾಪುರದ ಒಂದನೆಯ ಅಲಿ ಆದಿಲ್‌ಶಾಹಿಯ ಜೀವನ ಮತ್ತು ಸಾಧನೆಗಳು"* (೨೦೦೦) ಅಪ್ರಕಟಿತ ಮಹಾಪ್ರಬಂಧವು ಒಂದನೆಯ ಅಲಿ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳನ್ನು ಪರಿಚಯಿಸುವ ಸಮಗ್ರ ಕೃತಿಯಾಗಿದೆ.

ಎ. ಎ. ಇಮಾರತವಾಲೆ, ಅವರು ಛತ್ರಪತಿ ಶಿವಾಜಿ ಮಹಾರಾಜ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ *"History of Bijapur Subah"* (1686-1885) ಎಂಬ ಪ್ರೌಢ ಪ್ರಬಂಧದಲ್ಲಿ ಬಿಜಾಪುರದ ರಾಜಕೀಯ ಇತಿಹಾಸವನ್ನಯ ತಿಳಿಸುವು'ದರ ಜೊತೆಗೆ ಆದಿಲ್‌ಶಾಹಿಗಳ ಅವನತಿ ನಂತರ ಬಿಜಾಪುರ ಪ್ರಾಂತವನ್ನು ಮೊಗಲರು, ಮರಾಠರು ನಂತರ ಬ್ರಿಟಿಷರು ಆಡಳಿತ ಮಾಡಿದ ಬಗ್ಗೆ ಸಮಗ್ರವಾದ ಮಾಹಿತಿಯನ್ನು ನೀಡಿದ್ದಾರೆ.

ಸುಭಾಸ, ಭೀ. ಪ್ರಭಾಕರ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ *"ಎರಡನೆಯ ಇಬ್ರಾಹಿಮ ಆದಿಲ್‌ಶಾಹಿಯ ಜೀವನ ಮತ್ತು ಸಾಧನೆ"* (೨೦೦೨ ಅಪ್ರಕಟಿತ ಎಂ. ಫಿಲ್ ಪ್ರಬಂಧ) ಇದು ಎರಡನೆ ಇಬ್ರಾಹಿಮ ಆದಿಲ್‌ಶಾಹಿಯ ಜೀವನ ಮತ್ತು ಸಾಧನೆಗಳ ಪರಿಚಯವನ್ನು ಮಾಡಿಕೊಡುತ್ತದೆ.

ವಿ. ಎಂ. ಬಾಗಾಯತ, ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ *"ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆಯ ಒಂದು ಅಧ್ಯಯನ"* (೧೪೦೦-೧೮೦೦) (೨೦೦೪) ಅಪ್ರಕಟಿತ ಮಹಾ ಪ್ರಬಂಧವು ಸುಮಾರು ೪೦೦ ವರ್ಷದ ಚಿತ್ರಕಲೆಯನ್ನು ಸಮಗ್ರವಾಗಿ ಪರಿಚಯಿಸಲಾಗಿದೆ. ಇದರಲ್ಲಿ ಬಹಮನಿ, ಆದಿಲ್‌ಶಾಹಿ, ಹೈದರ ಮತ್ತು ಟೀಪ್ಪು ಸುಲ್ತಾನ ಹಾಗೂ ಸವಣೂರ ನವಾಬರ ಕಾಲದ ಚಿತ್ರಕಲೆಯನ್ನು ಕುರಿತು ಹಾಗೂ ಅದರ ಪ್ರಭಾವ ಇನ್ನಿತರ ಕಲೆಯ ಮೇಲೆ ಹೇಗಾಗಿದೆ ಎಂಬುದನ್ನು ವಿಸ್ತೃತವಾಗಿ ಮಾಹಿತಿಯನ್ನು ನೀಡಿದ್ದಾರೆ.

ಸಜ್ಜನ, ಸತೀಶ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ *"ಬಿಜಾಪುರ ಆದಿಲ್‌ಶಾಹಿ ರಾಜ್ಯದ ಆಡಳಿತ ಪದ್ಧತಿ: ಒಂದು ಅಧ್ಯಯನ"* (೨೦೦೫) ಅಪ್ರಕಟಿತ ಪ್ರಬಂಧದಲ್ಲಿ ಬಿಜಾಪುರ ಆದಿಲ್‌ಶಾಹಿಗಳ ಆಡಳಿತ ಪದ್ಧತಿಯನ್ನು ವಿಸ್ತಾರವಾಗಿ ಪರಿಚಯಿಸಿದ್ದಾರೆ.

ಇಬ್ರಾಹಿಮ ಸೌದಾಗರ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಎಂ.ಫಿಲ್. ಪ್ರಬಂಧ *" ಬಿಜಾಪುರ ಆದಿಲ್‌ಶಾಹಿಗಳ ಕಾಲದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ"* ಮತ್ತು ಆಸ್ಮಾ ಹಳ್ಯಾಳಕರ ಅವರು ೨೦೦೯ರಲ್ಲಿ ಸಲ್ಲಿಸಿರುವ *" The Religion under the Adilshahi of Bijapur"* ಪ್ರಬಂಧದಲ್ಲಿ ಆದಿಲ್‌ಶಾಹಿ ರಾಜ್ಯದ ಧಾರ್ಮಿಕ ಪದ್ಧತಿಯ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ನೋಡಬಹುದು.

ಅಧ್ಯಯನದ ಉದ್ದೇಶ : ಈ ಮೇಲೆ ಹೇಳಲಾದ ಕೃತಿಗಳು ಮತ್ತು ಪ್ರಬಂಧಗಳು ಮಹಮ್ಮದ ಆದಿಲ್‌ಶಾಹನನ್ನು ಕುರಿತು ಕೆಲವೊಂದು ತುಂಡು ತುಂಡಾದ ವಿಷಯಗಳನ್ನು ನೀಡುತ್ತವೆಯಾದರು ಅವನ ಸಮಗ್ರವಾದ ವ್ಯಕ್ತಿತ್ವದ ಪರಿಚಯವನ್ನು ನೀಡುವುದಿಲ್ಲ. ಹೆಚ್ಚಿನ ಕೃತಿಗಳು ಅವನ ಕಾಲದಲ್ಲಿ ನಿರ್ಮಾಣವಾಗಿರುವ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗೆ ಸೀಮಿತವಾಗಿದ್ದರೆ, ಇನ್ನೂ ಕೆಲವು ಕೃತಿಗಳು ಮಹಮ್ಮದ ಆದಿಲ್‌ಶಾಹನ ದಂಡಯಾತ್ರೆಗಳನ್ನು ಮಾತ್ರ ಉಲ್ಲೇಖಿಸುತ್ತವೆ. ಹೀಗಾಗಿ ಮಹಮ್ಮದ ಆದಿಲ್‌ಶಾಹನ ಸಮಗ್ರ ವ್ಯಕ್ತಿತ್ವವನ್ನು ಪರಿಚಯಿಸುವ ಕೃತಿ ಇದುವರೆಗೆ ಹೊರ ಬಂದಿಲ್ಲ. ಆದ್ದರಿಂದ ಮಹಮ್ಮದ ಆದಿಲ್‌ಶಾಹನನ್ನು ಕೇಂದ್ರವಾಗಿಟ್ಟುಕೊಂಡು ಬಿಜಾಪುರ ಆದಿಲ್‌ಶಾಹಿಗಳ ಅಧ್ಯಯನ ಮಾಡುವುದು ಅವಶ್ಯವಾಗಿದೆ. ಅವನ ಕಾಲದ ಸಾಹಿತ್ಯ, ವಾಸ್ತುಶಿಲ್ಪ ಮತ್ತು ಆಡಳಿತ ಇತರ ನಿರ್ಮಿತಿಗಳನ್ನು ಮುಖ್ಯ ಆಧಾರವಾಗಿಟ್ಟುಕೊಂಡು ಅವನ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಠವಾಗಿ ಪುನರ ರಚಿಸುವುದೆ, ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

ಆಕರ ಸಾಮಗ್ರಿಗಳು: ಒಂದು ಪ್ರದೇಶದ ಇತಿಹಾಸವನ್ನು ಪುನರ ರಚಿಸುವಾಗ ಆ ಕಾಲದ ಪ್ರಾಚ್ಯವಶೇಷಗಳು ಮತ್ತು ಕೃತಿಗಳು ಮಾಹಿತಿಯನ್ನು ನೀಡುತ್ತವೆ. ಪುರಾತತ್ವ ಅವಶೇಷಗಳಾದ ಸ್ಮಾರಕಗಳು, ಮೂರ್ತಿಶಿಲ್ಪಗಳು, ನಾಣ್ಯಗಳು ಇಲ್ಲಿನ ಸಾಂಸ್ಕೃತಿಕ ಅಧ್ಯಯನಕ್ಕೆ ಆಧಾರಗಳಾಗಿವೆ. ಇದಲ್ಲದೆ ಸಮಕಾಲಿನ ಸಾಹಿತ್ಯ ಕೃತಿಗಳು

ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಳುತ್ತದೆ. ಆದಿಲ್‌ಶಾಹಿಗಳ ಕಾಲದಲ್ಲಿ ಪರ್ಶಿಯನ್ನ, ಅರೇಬಿಕ್, ಉರ್ದು ಮತ್ತು ಮರಾಠಿ ಸಾಹಿತ್ಯ ರಚನೆಯಾಯಿತು.

ಸ್ಮಾರಕಗಳು : ಸ್ಮಾರಕಗಳು ನಾಡಿನ ಅಮೂಲ್ಯ ಸಂಪತ್ತು ಒಂದು ನಾಡಿನ ಸಾಂಸ್ಕೃತಿಕ ಪ್ರತಿನಿಧಿಗಳೆಂದರೆ ಸ್ಮಾರಕಗಳು. ಶಾಸನ ಮತ್ತು ಸಾಹಿತ್ಯಕ ಕೃತಿಗಳಿಂದ ತಿಳಿಯದೇ ಇರುವ ವಿಷಯವನ್ನು ಸ್ಮಾರಕಗಳ ಅಧ್ಯಯನದಿಂದ ತಿಳಿಯಬಹುದು. ಕಳೆದು ಹೋದ ಹಣವನ್ನು ಮತ್ತು ಭೂಮಿಯನ್ನು ಮರಳಿ ಪಡೆಯಬಹುದು, ಆದರೆ ನಮ್ಮ ಸಂಸ್ಕೃತಿ ನಾಶವಾದರೆ ಅದನ್ನು ಪುನ: ಪಡೆಯುವುದು ಕಷ್ಟಸಾಧ್ಯ. ಈ ದೃಷ್ಟಿಯಲ್ಲಿ ಪ್ರಾಚೀನ ಸಂಸ್ಕೃತಿಯನ್ನು ಪರಿಚಯಿಸುವ ಸ್ಮಾರಕಗಳು ಸಂಸ್ಕೃತಿಯ ಜ್ಞಾನ ನಿದಿಯಾಗಿವೆ ಎಂದರೆ ತಪ್ಪಾಗದು. ಮಹಮ್ಮದ ಆದಿಲ್‌ಶಾಹನ ಕಾಲದ ಸಂಸ್ಕೃತಿಯನ್ನು ಪುನರ ನಿರ್ಮಿಸಬೇಕಾದರೆ ಅವನ ಕಾಲದಲ್ಲಿ ನಿರ್ಮಾಣವಾಗಿರುವ ಧಾರ್ಮಿಕ ಸ್ಮಾರಕಗಳು, ಲೌಕಿಕ ಸ್ಮಾರಕಗಳು ಅರಮನೆಗಳು, ಬಾವಿಗಳು, ಗಜಶಾಲೆ, ಕೋಟೆಗಳು. ಹೀಗೆ ಅವನ ಕಾಲದಲ್ಲಿ ಬಿಜಾಪುರ ಮತ್ತು ಬೇರ ಬೇರೆ ಸ್ಥಳಗಳಲ್ಲಿ ನಿರ್ಮಾಣವಾಗಿರುವ ಸ್ಮಾರಕಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಶಾಸನಗಳು : ಶಾಸನಗಳು ಚರಿತ್ರೆಯ ಪುನರ ರಚನೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಭಾರತ ದೇಶದ ಹಲವು ಶತಮಾನಗಳ ಇತಿಹಾಸ ರಚನೆಯ ಸ್ವರೂಪಕ್ಕೆ ಶಾಸನಗಳೇ ಜೀವನಾಡಿ ಎನಿಸಿವೆ. ಅವು ಪ್ರಾಚೀನ, ಮಧ್ಯ ಹಾಗೂ ಆಧುನಿಕ ಕಾಲದ ಜನರ ಬದುಕಿನ ಸಮಸ್ತ ಸಂವೇದನೆ ಹಾಗೂ ಪ್ರಾಮಾಣಿಕ ಧ್ವನಿಗಳಾಗಿವೆ. ಅದಕ್ಕಾಗಿಯೇ ಶಾಸನಗಳು ಐತಿಹಾಸಿಕ ಸಂಶೋಧನೆಯ ಪ್ರತಿಯೊಂದು ಹಂತದಲ್ಲಿ ಅಧಿಕೃತ ಭೂಮಿಕೆಯಾಗಿ ನಿಲ್ಲುತ್ತವೆ.

ಮಹಮ್ಮದ ಆದಿಲ್‌ಶಾಹನ ಶಾಸನಗಳೆಲ್ಲಾ ಇಂದಿನ ಬಿಜಾಪುರ ಮತ್ತು ಸುತ್ತಮುತ್ತಲಿನ ಪ್ರದೇಶದ ತುಂಬೆಲ್ಲಾ ಹರಡಿಕೊಂಡಿದ್ದು, ಅವು ವಿವಿಧ ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಸರಕಾರ ಡಿ. ಸಿ. ಮತ್ತು ಘಾಯ, ಜಿ. ಎಸ್. ಇವರು ಸಂಗ್ರಹಿಸಿ ಪ್ರಕಟಿಸಿದ *"Indian Epigraphy"* ಸಂಪುಟಗಳಲ್ಲಿ ಎಂ. ಎ ನಜೀಮ ರವರ *"Bijapur Inscription"* ಹಾಗೂ ಜಿ. ಯಜಧಾನಿ, ಸಂಪಾದಿಸಿದ *"Bijapur Inscriptions Epigraphy Indo-Moslemica"* ಎಂಬ ಸಂಪುಟಗಳಲ್ಲಿ ಪ್ರಕಟಗೊಂಡಿದ್ದು, ಇವುಗಳೆಲ್ಲವುಗಳ ನೆರವನ್ನು ಇಲ್ಲಿ ಪಡೆಯಲಾಗಿದೆ.

ನಾಣ್ಯಗಳು : ಇತಿಹಾಸ ಪುನರ ರಚನೆಯಲ್ಲಿ ನಾಣ್ಯಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ನಾಣ್ಯಗಳು ಆರ್ಥಿಕ ಇತಿಹಾಸದ ಪುನರ ರಚನೆಯಲ್ಲಿ ಬಹು ಮುಖ್ಯ ಆಕರಗಳಾಗಿವೆ. ಅವು ವಿವಿಧ ಕಾಲಾವಧಿಯಲ್ಲಿ ಪ್ರಚಲಿತದಲ್ಲಿದ್ದ ವಿವಿಧ ಬಗೆಯ ಲೋಹಗಳು, ಸಮಕಾಲೀನ ಆರ್ಥಿಕ, ಧಾರ್ಮಿಕ, ಸಾಮಾಜಿಕ ವ್ಯವಸ್ಥೆ ಮತ್ತು ಸಂಸ್ಕೃತಿಯನ್ನು ಪರಿಚಯಿಸುವುದು ಕೆಲವು ಅರಸು ಮನೆತನಗಳ ಮತ್ತು ಅರಸರ ಆಳ್ವಿಕೆಯ ಕಾಲಮಾನವನ್ನು ಪರಿಚಯಿಸುವುದು, ನಿರ್ದಿಷ್ಟವಾಗಿ ಗುರುತಿಸಲು ತುಂಬಾ ಉಪಯುಕ್ತವಾಗಿವೆ.

ಆದಿಲ್‌ಶಾಹಿಗಳ ಇತಿಹಾಕ್ಕೆ ಸಂಬಂಧಿಸಿದಂತೆ ಅವರ ನಾಣ್ಯಗಳು ಸಾಕಷ್ಟು ದೊರೆತಿದ್ದು ಅವುಗಳಲ್ಲಿ ಬಂಗಾರ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಪ್ರಮೂಖವಾಗಿವೆ. ಎ. ವಿ. ನರಸಿಂಹಮೂರ್ತಿ, ರವರ *"The Coin of Karnataka"* ಅವರದೇ ಇನ್ನೊಂದು *ಕೃತಿಯಾದ " ಕರ್ನಾಟಕ ನಾಣ್ಯ ಪರಂಪರೆ"* ಹಾಗೂ ಎಚ್. ಕೆ ಶೇರವಾನಿ, ಮತ್ತು ಪಿ. ಎಂ ಜೋಶಿ, ಅವರ *"History of Medieval Deccan"* ಗಿಹು ಖಖ ಗಳಲ್ಲಿ ಪ್ರಕಟಗೊಂಡಿದ್ದು, ಇವುಗಳನ್ನು ಅಧ್ಯಯನಕ್ಕೆ ಉಪಯೋಗಿಸಲಾಗಿದೆ.

ಸಾಹಿತ್ಯ : ಸಾಹಿತ್ಯ ಕೃತಿಗಳು ನಿತ್ಯ ಜೀವನದ ಪ್ರತಿಬಿಂಬವಾಗಿದ್ದು, ಅವು ಆಯಾ ಕಾಲದ ಜನರ ಜೀವನದ ಪ್ರತಿಬಿಂಬವಾಗಿವೆ. ಸಾಹಿತ್ಯದಲ್ಲಿ ದೇಶಿಯ ಮತ್ತು ವಿದೇಶಿಯ ಸಾಹಿತ್ಯ ಎಂಬ ಎರಡು ಭಾಗಗಳಿದ್ದು, ದೇಶಿಯ ಸಾಹಿತ್ಯವು ರಾಜರ ಆಸ್ಥಾನದ ಕವಿಗಳು, ಇತಿಹಾಸಕಾರರು ರಚಿಸಿದಂತಹ ಕೃತಿಗಳು ಮತ್ತು ವಿದೇಶಿಯ ಸಾಹಿತ್ಯವು ಪರದೇಶದಿಂದ ಬಂದ ಪ್ರವಾಸಿಗರು, ತಾವು ಕಣ್ಣಾರೆ ಕಂಡು ಕೇಳಿದ ವಿಷಯಗಳನ್ನು ನಮೂದಿಸಿ ರಚಿಸಿದಂತಹ ಬರಹಗಳನ್ನು ಒಳಗೊಂಡಿರುತ್ತದೆ. ಪ್ರಾಕ್ತನ ಶಾಸ್ತ್ರೀಯ ಆಕರಗಳಿಗೆ ಹೋಲಿಸಿದರೆ ಇತಿಹಾಸ ಪುನರ ರಚನೆಯ ಆಕರಗಳಾಗಿ ಸಾಹಿತ್ಯ ಕೃತಿಗಳು ಶತಪ್ರತಿಶತ ವಿಶ್ವಾಸಾರ್ಹವೆನ್ನಲಾಗುವುದಿಲ್ಲ. ಒಮ್ಮೊಮ್ಮೆ ವ್ಯಕ್ತಿನಿಷ್ಠ ಧೋರಣೆಗಳು, ಧಾರ್ಮಿಕ ಮತ್ತಿತರ ಪೂರ್ವಗ್ರಹಗಳು ಅವುಗಳಲ್ಲಿ ಬೆರೆತಿರುವುದರಿಂದ ವಿಮರ್ಶೆಗೊಳಪಡಿಸದೆ ಅವುಗಳ ವಿವರಗಳನ್ನು ಚಾರಿತ್ರಿಕ ಸತ್ಯವೆಂದು ಇಡಿಯಾಗಿ ಒಪ್ಪಲಾಗುವುದಿಲ್ಲ.

ಈ ಅಧ್ಯಯನದಲ್ಲಿ ಸಮಕಾಲಿನ ಹಾಗೂ ಆಧುನಿಕ ಗ್ರಂಥಗಳ ಸಹಾಯ ಪಡೆದಿದೆಯಾದರೂ, ಈ ಮನೆತನಕ್ಕೆ ಸಂಬಂಧಿಸಿದ ವಿದೇಶಿ ಬರವಣಿಗೆಗಳನ್ನು ಸ್ವಲ್ಪ ಹೆಚ್ಚಾಗಿ ಅವಲಂಬಿಸಿದೆ. ಅಂಥವುಗಳಲ್ಲಿ ಪ್ರಮುಖವಾದ ಕೃತಿಗಳನ್ನು ಈ ಕೆಳಗೆ ತಿಳಿಸಲಾಗಿದೆ.

ಸಮಕಾಲೀನ ಪರ್ಶಿಯನ ಕೃತಿಗಳಲ್ಲಿ ಮಹಮ್ಮದ ಕಾಶೀಮ ಫೆರಿಸ್ತಾನ *" ತಾರೀಖ–ಇ–ಫರಿಸ್ತಾ, ಗುಲಶ–ಇ–ಇಬ್ರಾಹಿಮಿ, ನವರಸನಾಮಾ"* ಎಂಬೆಲ್ಲ ಹೆಸರುಗಳಿಂದ ಕರೆಸಿಕೊಳ್ಳುವ ಇತಿಹಾಸ ಗ್ರಂಥವನ್ನು ಬರೆದನು. ಮಹಮ್ಮದ ಕಾಶೀಮ ಹಿಂದುಶಾಹ ಫರಿಸ್ತಾ ಕ್ರಿ. ಶ. ೧೫೮೯ ರಿಂದ ೧೬೧೨ ರವರೆಗಿನ ಇತಿಹಾಸವನ್ನು ಒಳಗೊಂಡಿದೆ.

'ತಾರೀಖ–ಇ–ಫರಿಸ್ತಾ' ಗ್ರಂಥವು ಸಮಾರೋಪಗಳನ್ನಲ್ಲದೆ ಹನ್ನೆರಡು ಅಧ್ಯಾಯಗಳನ್ನು ಒಳಗೊಂಡಿದೆ. ಭಾರತದಲ್ಲಿಯ ಮುಸ್ಲಿಮರ ಪ್ರಾರಂಭದ ವಿವರಗಳೊಂದಿಗೆ ಪ್ರಾರಂಭವಾಗುವ ಚರಿತ್ರೆಗೆ ಸುಮಾರು ಇಪ್ಪತ್ತೈದು ವಿವಿಧ ಇತಿಹಾಸ ಗ್ರಂಥಗಳ ಆಕರಗಳನ್ನು ಬಳಿಸಿಕೊಂಡದ್ದೇನೆಂದು ಫೆರಿಸ್ತಾನೇ ಹೇಳುತ್ತಾನೆ.

ಬಿಜಾಪುರದ ಆದಿಲ್‌ಶಾಹಿಗಳು ಕ್ರಿ.ಶ. ೧೫೯೬ ರವರೆಗೆ ಇತಿಹಾಸವನ್ನು ಅರಿಯಲು ಫೆರಿಸ್ತಾನ ಗ್ರಂಥ ಪ್ರಥಮ ಆಕರ ಗ್ರಂಥವಾಗಿದೆ. ಬಿಜಾಪುರದಲ್ಲಿ ನಡೆದ ಪ್ರತಿಯೊಂದು ಘಟನೆಗಳನ್ನು ಅವನು ದಾಖಲಿಸಿದ್ದಾನೆ. ಯೂಸುಫ ಆದಿಲ್‌ಖಾನ, ಇಸ್ಮಾಯಿಲ್ ಆದಿಲ್‌ಖಾನ, ಮಲ್ಲು ಆದಿಲ್‌ಖಾನ, ಒಂದನೆಯ

ಇಬ್ರಾಹಿಮ ಆದಿಲ್‌ಶಾಹ, ಒಂದನೆಯ ಅಲಿ ಹಾಗೂ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿಯ ವಿವರವಾದ ಮಾಹಿತಿಯನ್ನು ಆತನು ಕೊಟ್ಟಿದ್ದಾನೆ. ಬಿಜಾಪುರದ ಇತಿಹಾಸವನ್ನು ಫೆರಿಸ್ತಾನಷ್ಟು ಖಚಿತವಾಗಿ ಯಾರು ಹೇಳಿಲ್ಲ.

ರಫಿಉದ್ದೀನ್ ಇಬ್ರಾಹಿಮ ಶಿರಾಜಿ ಬರೆದ *"ತದಕೀರತ-ಅಲ್-ಮುಲ್ಕ್"* ಎಂಬ ಇತಿಹಾಸ ಗ್ರಂಥವು ಬಿಜಾಪುರದಲ್ಲಿ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಆಸ್ಥಾನದಲ್ಲಿಯೇ ಕ್ರಿ. ಶ. ೧೬೦೯ ರಿಂದ ೧೬೧೦ ರ ಮಧ್ಯದಲ್ಲಿ ರಚಿತವಾಗಿದೆ. ಇವರ ಗ್ರಂಥದಲ್ಲಿ ಬಿಜಾಪುರದ ಆದಿಲ್‌ಶಾಹಿಗಳ ಪ್ರಾರಂಭದ ಇತಿಹಾಸದಿಂದ ಕ್ರಿ. ಶ. ೧೬೧೦ ರವರೆಗಿನ ವಿವರಗಳ ದಾಖಲೆಗಳೊಂಡಿವೆ. ಒಂಭತ್ತು ಪರಿಚ್ಛೇದನಗಳನ್ನೊಳಗೊಂಡ ಗ್ರಂಥದಲ್ಲಿ ಅನುಬಂಧಗಳನ್ನು ಸೇರಿಸಿದ್ದಾನೆ.

ಮಹಮ್ಮದ ಜುಹೂರ ಬರೆದಿರುವ *"ಮಹಮ್ಮದ ನಾಮಾ"* ಮತ್ತೊಂದು ಇತಿಹಾಸದ ಕೃತಿಯಾಗಿದ್ದು ಇದು ಮಹಮ್ಮದ ಆದಿಲ್‌ಶಾಹನ ೨೯ ವರ್ಷ ಆಡಳಿತದ ವಿವರಗಳಲ್ಲದೆ, ಇವನ ದಂಡಯಾತ್ರೆಗಳು ಹಾಗೂ ಆ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸ್ಥಿತಿಗತಿಗಳನ್ನು ವಿವರವಾಗಿ ಇದರಲ್ಲಿ ನೋಡಬಹುದು.

ಮುಜೂನಿ ಅಸ್ತಾಬಾದಿಯ *"ಫುತುಹತ-ಇ-ಆದಿಲ್‌ಶಾಹಿ"* ಮತ್ತೊಂದು ಇತಿಹಾಸ ಗ್ರಂಥವಾಗಿದೆ. ಇದು ಆರು ಅಧ್ಯಾಯಗಳನ್ನೊಳಗೊಂಡಿದೆ. ಪ್ರತಿಯೊಂದು ಅಧ್ಯಾಯವು ಬಿಜಾಪುರದ ಒಬ್ಬೊಬ್ಬ ಬಾದಶಾಹನಿಗೆ ಮೀಸಲಾಗಿದೆ. ಅದರಲ್ಲಿ ಯೂಸುಫ ಆದಿಲ್‌ಖಾನ, ಇಸ್ಮಾಯಿಲ್, ಒಂದನೆಯ ಇಬ್ರಾಹಿಮ, ಒಂದನೆಯ ಅಲಿ ಆದಿಲ್‌ಶಾಹ, ಎರಡನೆ ಇಬ್ರಾಹಿಮ ಆದಿಲ್‌ಶಾಹ ಹಾಗೂ ಮಹತ್ವದ ಆದಿಲ್‌ಶಾಹರ ಕಾಲದ ಚಿತ್ರಣವಿದೆ. ಫೆರಿಸ್ತಾನ ನಂತರದ ಮೂವತ್ತು ವರ್ಷಗಳ ಇತಿಹಾಸವನ್ನು ಗುರುತಿಸಲು ಇದು ಸಹಾಯ ಮಾಡುತ್ತದೆ.

ನೂರುಲ್ಲಾ ಇಬ್ನಖಾಜಿ ಸಯ್ಯದ ಅಲಿ ಮಹಮ್ಮದ ಹುಸೇನಿ ಬರೆದ *"ತಾರೀಖ-ಇ-ಅಲಿ"* ಮತ್ತೊಂದು ಐತಿಹಾಸಿಕ ಗ್ರಂಥವಾಗಿದೆ. ಎರಡನೆಯ ಅಲಿ ಆದಿಲ್‌ಶಾಹನ ಅನುಮತಿಯ ಮೇರಗೆ ಕ್ರಿ. ಶ. ೧೬೬೭ ರಲ್ಲಿ ರಚಿಸಿದನು. ಇದರಲ್ಲಿ ಎರಡನೆಯ ಅಲಿ ಆದಿಲ್‌ಶಾಹನ ಜನ್ಮ, ಬಾಲ್ಯ, ಮಹಮ್ಮದ ಆದಿಲ್‌ಶಾಹನ ಮರಣ, ಅಲಿಯ ಪಟ್ಟಾಭಿಷೇಕ, ಶಿವಾಜಿ ಅಫಜಲ್‌ಖಾನರ ಘಟನೆ, ಬಡೀ ಸಾಹೇಬಳ ಮಕ್ಕಾಯಾತ್ರೆ, ಸಿದ್ದಿ ಜೋಹಾರನ ಬಂಡಾಯ, ಮಲೆನಾಡು ವಿಜಯ ಹಾಗೂ ಬಿಜಾಪುರ-ಮೊಗಲರ ಯುದ್ಧದ ವಿಷಯಗಳ ವಿವರವಾದ ಚಿತ್ರಣವಿದೆ.

ಬಿಜಾಪುರ ಆದಿಲ್‌ಶಾಹಿಗಳ ಇತಿಹಾಸವನ್ನು ತಿಳಿಸುವ ಮೇರು ಕೃತಿಯೆಂದರೆ ಮಹಮ್ಮದ ಇಬ್ರಾಹಿಮ ಜುಬೇರಿ ರಚಿಸಿದ *"ಬಸಾತಿನ-ಸಲಾತೀನ್"* ಪರ್ಶಿಯನ್ನ ಭಾಷೆಯಲ್ಲಿರುವ ಕೃತಿ ಇದನ್ನು ಎಂಟು ಅಧ್ಯಾಯಗಳಲ್ಲಿ ವಿಂಗಡಿಸಲಾಗಿದ್ದು, ಮಲ್ಲು ಆದಿಲ್‌ಖಾನನ್ನು ಎರಡನೆಯ ಅಧ್ಯಾಯದ ಕೊನೆಯಲ್ಲಿ ಹೇಳಿ ಮುಗಿಸಲಾಗಿದೆ. ಒಟ್ಟು ಎಂಟು ಸುಲ್ತಾನರ ಕುರಿತು ಸಂಪೂರ್ಣ ವಿವರಗಳನ್ನೊಳಗೊಂಡಿದೆ.

ಅಧ್ಯಯನದ ವಿಧಾನ: ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಮತ್ತು ವಿಷಯ ವಿಶ್ಲೇಣೆಯಲ್ಲಿ ಐತಿಹಾಸಿಕ ವಿಧಿ-ವಿಧಾನಗಳನ್ನು ಅನುಸರಿಸಲಾಗಿದೆ. ಮಹಮ್ಮದ ಆದಿಲ್‌ಶಾಹನ ಕುರಿತು ಈವರೆಗೆ ಪ್ರಕಟವಾಗಿರುವ ಗ್ರಂಥಗಳನ್ನು, ಲೇಖನಗಳನ್ನು ಸಂಗ್ರಹಿಸಿ ಅವುಗಳಲ್ಲಿದ್ದ ವಿಷಯಗಳನ್ನು ಕ್ರೋಡಿಕರಿಸಿ ಅವುಗಳಲ್ಲಿ ಆ ಕಾಲಾವಧಿಯ ಆಕರ ಕೃತಿಗಳ ಪಟ್ಟಿಯನ್ನು ತಯಾರಿಸಲಾಗಿದೆ. ಅನಂತರ ಕ್ಷೇತ್ರ ಕಾರ್ಯದ ಮೂಲಕ ಅವನ ಕಾಲದಲ್ಲಿ ನಿರ್ಮಾಣವಾಗಿರುವಂತಹ ಮಸೀದೆ, ಕೋಟೆ, ಬಾವಿ, ಮಹದ್ವಾರ ಮೊದಲಾದ ಪುರಾತತ್ವ ಅವಶೇಷಗಳ ಸಂಪೂರ್ಣ ವಿವರವಾದ ದಾಖಲೆಗಳೊಂದಿಗೆ ಛಾಯಾ ಚಿತ್ರಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಹೀಗೆ ಮಾಹಿತಿಯನ್ನು ಸಂಗ್ರಹಿಸಲು ಈಗ ಅನುಸರಿಸಿಕೊಂಡು ಬಂದಿರುವ ಕಾರ್ಡಮಾದರಿಯಲ್ಲಿ ಗ್ರಂಥದ ಲೇಖಕ, ಪ್ರಕಾಶಕರು, ಪ್ರಕಟನೆಯ ವರ್ಷ ಮುಂತಾದವುಗಳನ್ನು ಬರೆದುಕೊಂಡು ವಿಷಯವನ್ನು ಸ'ಂಗ್ರಹಿಸಲಾಗಿದೆ. ಅವುಗಳನ್ನು ಪ್ರತಿಯೊಂದು ಅಧ್ಯಾಯಕ್ಕೆ ಸರಿಹೊಂದುವಂತೆ ವಿಭಾಗಿಸಿಕೊಂಡು ಅಂತರ್ಶಿಸ್ತೀಯ ಅಧ್ಯಯನದ ಮೂಲಕ ಪ್ರಸ್ತುತ ಪ್ರಬಂಧವನ್ನು ಬರೆಯಲಾಗಿದೆ.

ಅಧ್ಯಯನದ ವ್ಯಾಪ್ತಿ ಮತ್ತು ಸ್ವರೂಪ: ಈ ಅಧ್ಯಯನವು ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳನ್ನು ಒಳಗೊಂಡಿರುವದರಿಂದ ಅದರ ವ್ಯಾಪ್ತಿಯು ಕ್ರಿ. ಶ. ೧೬೨೭ ರಿಂದ ಕ್ರಿ. ಶ. ೧೬೫೬ ರವರೆಗೆ ಇದೆ. ಆದರೂ ಕೆಲವು ಸಂದರ್ಭಗಳಲ್ಲಿ ಅದರಿಂದ ಹೊರಗಡೆಯು ವ್ಯಾಪಿಸುತ್ತದೆ.

ಅಧ್ಯಯನದ ಅನಕೂಲತೆಗಾಗಿ ಪ್ರಬಂಧವನ್ನು ಎಂಟು ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗಿದೆ. ಒಂದನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ಆಕರಗಳು ಮತ್ತು ಅಧ್ಯಯನದ ವಿಧಾನ ಮತ್ತು ಆಧಾರಗಳನ್ನು ಕುರಿತು ವಿವೇಚಿಸಲಾಗುವುದು. ಇದರ ಜೊತೆಗೆ ಆದಿಲ್‌ಶಾಹಿ ಸುಲ್ತಾನರ ಸಂಕ್ಷಿಪ್ತ ಇತಿಹಾಸವನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಮಹಮ್ಮದ ಆದಿಲ್‌ಶಾಹನ ಪ್ರಾರಂಭಿಕ ಜೀವನ ಮತ್ತು ಸಾಧನೆಗಳ ಕುರಿತು ವಿವೇಚಿಸಲಾಗುವುದು. ಇದರಲ್ಲಿ ಮಹಮ್ಮದ ಆದಿಲ್‌ಶಾಹನ ಹುಟ್ಟು ಮತ್ತು ಬೆಳವಣಿಗೆ ಅವನ ಶಿಕ್ಷಣ, ಪಟ್ಟಕ್ಕೆ ಬರುವರೆಗಿನ ವಿಷಯಗಳನ್ನು ಮೊದಲ ಭಾಗದಲ್ಲಿ ವಿವೇಚಿಸಿದರೆ, ಎರಡನೆಯ ಭಾಗದಲ್ಲಿ ಅವನ ದಂಡಯಾತ್ರೆಗಳನ್ನು ವಿವೇಚಿಲಾಗಿದೆ

ಮೂರನೆ ಅಧ್ಯಾಯದಲ್ಲಿ ಮಹಮ್ಮದ ಆದಿಲ್‌ಶಾಹನ ಆಡಳಿತದ ಬಗ್ಗೆ ವಿವರಿಸಲಾಗಿದೆ. ಅವರ ಆಡಳಿತ ಕಾಲದಲ್ಲಿ ೨೮೧ ಪರಗಣಗಳನ್ನಾಗಿ ವಿಭಾಗಿಸಿಕೊಂಡು ಒಳ್ಳೆಯ ಒಂದು ಸುಭದ್ರವಾದ ಆಡಳಿ ನೀಡಿದ್ದನ್ನು ವಿವೇಚಿಸಲಾಗಿದೆ.

ನಾಲ್ಕನೇಯ ಅಧ್ಯಾದಲ್ಲಿ ಮಹಮ್ಮದ ಆದಿಲ್‌ಶಾಹನ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಷಯಗಳನ್ನು ವಿವೇಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಮಹಮ್ಮದ ಆದಿಲ್‌ಶಾಹನ ಕಾಲದ ಶಿಕ್ಷಣ, ಸಾಹಿತ್ಯ, ಭಾಷೆಗಳಿಗೆ ನೀಡಿರುವ ಪ್ರಾಮುಖ್ಯತೆಯನ್ನು ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಸೂಫಿ–ಸಂತರ ಜೀವನ ಅವರು ಸಮಾಜ ಮತ್ತು ಸಾಹಿತ್ಯಕ್ಕೆ ನೀಡಿರುವ ಕೊಡುಗೆಗಳ ಬಗ್ಗೆ ತಿಳಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಚಿತ್ರಕಲೆ ಮತ್ತು ವಾಸ್ತುಶಿಲ್ಪ ಮತ್ತು ನಿರ್ಮಾಣವಾಗಿರುವ ಕಟ್ಟಡಗಳ ವಾಸ್ತು ವಿನ್ಯಾಸದ ಬಗ್ಗೆ ಕುರಿತು ಮಾಹಿತಿಯನ್ನು ನೀಡಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ನಮ್ಮ ಕ್ಷೇತ್ರ ಕಾರ್ಯ ಮತ್ತು ಸಂಶೋಧನೆಯಲ್ಲಿ ಉಂಟಾದ ಫಲಿತಗಳನ್ನು ವಿವೇಚಿಸಲಾಗಿದೆ.

ಕೊನೆಯ ಅನುಬಂಧದಲ್ಲಿ ಮಹಮ್ಮದ ಆದಿಲ್‌ಶಾಹನ ಕಾಲದ ನಕ್ಷೆಗಳು ಹಾಗೂ ಸ್ಮಾರಕಗಳ ತಳನಕ್ಷೆ ಮತ್ತು ಇನ್ನೊಂದರಲ್ಲಿ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ನಿರ್ಮಾಣವಾಗಿರುವ ಸ್ಮಾರಕಗಳಾದ ಗೋಳಗುಮ್ಮಟ, ಆಸಾರ ಮಹಲ, ರಾಣಿ ಮಹಲ, ಬೇಗಂ ತಲಾಬ ಮುಂತಾದವುಗಳ ಛಾಯಾ ಚಿತ್ರಗಳನ್ನು ಮತ್ತು ನಕ್ಷೆಗಳನ್ನು ನೀಡುವುದರೊಂದಿಗೆ ಅಧ್ಯಯನದ ಮಹತ್ವವನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಬಿಜಾಪುರ ಆದಿಲ್‌ಶಾಹಿಗಳ ರಾಜಕೀಯ ಚರಿತ್ರೆ :

ಬಹಮನಿಯ ನಿಷ್ಠಾವಂತ ಪ್ರಧಾನಿ ಖ್ವಾಜಾ ಮಹಮೂದ ಗವಾನನ ಕೊಲೆ (೧೪೮೧) ಯು ಬಹಮನಿಗೆ ಶಾಪವಾಗಿ ಪರಿಣಮಿಸಿತು. ಆ ಫಲವಾಗಿಯೇ ಹಂತಹಂತವಾಗಿ ಬಹಮನಿ ಒಡೆದು ಐದು ಶಾಹಿಮನೆತನಗಳಾಗಿ ವಿಭಾಗಗೊಂಡಿತು. ಅವರಲ್ಲಿ ಪ್ರಬಲ ಮತ್ತು ಪ್ರಭಾವೀ ಶಾಹಿ ಮನೆತನವೆಂದರೆ ಬಿಜಾಪುರದ ಆದಿಲ್‌ಶಾಹಿಗಳದು. ಬೀದರಿನ ಬರೀದಶಾಹಿ, ಬೇರಾರಿನ ಇಮಾದಶಾಹಿ, ಗೋಲ್ಕೊಂಡದ ಕುತುಬಶಾಹಿ ಹಾಗೂ ಅಹ್ಮದ ನಗರದ ನಿಜಾಮ ಶಾಹಿಗಳೇ ಉಳಿದ ಆ ನಾಲ್ಕು ಮನೆತನಗಳು.

ಫೆರಿಸ್ತಾ ತಿಳಿಸುವಂತೆ ಯೂಸುಫ ಟರ್ಕಿಯ ಸುಲ್ತಾನ ಎರಡನೆಯ ಮುರಾದನ ಮಗನೆಂದು ತಿಳಿದುಬರುತ್ತದೆ. ಮುರಾದನ ಮರಣದ ನಂತರ ಆತನ ಹಿರಿಯ ಮಗನಾದ ಎರಡನೆಯ ಮಹಮ್ಮದನು ಪಟ್ಟಕ್ಕೆ ಬಂದನು. ಆದರೆ ವಂಶಕ್ಕೆ ಒಬ್ಬನೆ ಉತ್ತರಾಧಿಕಾರಿಯಾಗಿ ಇರಬೇಕೆಂದು ನಂಬಿಕೆಯನ್ನು ಹೊಂದಿದ್ದ ರಾಜಮನೆತನವಾದ್ದರಿಂದ, ಯೂಸುಫನು ಎರಡನೆಯ ಮಗನಾಗಿದ್ದರಿಂದ ಈತನ ಕೊಲೆಗೆ ಆದೇಶ ನೀಡಲಾಯಿತು. ಯೂಸುಫನ ತಾಯಿಯು ಈತನನ್ನು ಗುಪ್ತವಾಗಿ ಇರಾನಿನ ಒಬ್ಬ ಸೇವಕನ ಜೊತೆಯಲ್ಲಿ ಕಳುಹಿಸಿಕೊಟ್ಟಳು. ಇರಾನಿನ ಸಾಬಾ ಪಟ್ಟಣದಲ್ಲಿ ಖ್ವಾಜಾ ಇಮಾಮ ಉದ್ದೀನನ ಆಶ್ರಯದಲ್ಲಿ ಪ್ರಾರಂಭಿಕ ಜೀವನವನ್ನು ಕಳೆದನು. ತನ್ನ ಆರಂಭದ ಜೀವನದಲ್ಲಿ ಸಾಕಷ್ಟು ತೊಂದರೆಗಳನ್ನು ಅನುಭವಿಸಿದನು.

ಹಿಂದುಸ್ತಾನಕ್ಕೆ ಬಂದ ನಂತರ ಮೂರನೆಯ ಮಹಮ್ಮದ ಶಾಹನ ಮಂತ್ರಿಯಾದ ಖ್ವಾಜಾ ಮಹಮೂದ ಗವಾನನ ಸೇವಕನಾಗಿ ಸೇವೆಯನ್ನು ಸಲ್ಲಿಸತೊಡಗಿದನು.[೧] ನಂತರ ಯೂಸುಫನು ಐದನೂರು ಕುದರೆಗಳ ಅಧಿಕಾರಿಯಾಗಿ ನೇಮಕಗೊಳ್ಳುವುದರ ಜೊತೆಗೆ *"ಆದಿಲ್‌ಖಾನ"* ಎಂಬ ಬಿರುದನ್ನು ಪಡೆದನು. ಇದಾದ ನಂತರ ಅತೀ ಶೀಘ್ರವಾಗಿ ಕ್ರಿ.ಶ. ೧೪೮೭ ರಲ್ಲಿ ಇವನು ಬಿಜಾಪುರದ ಗವರ್ನರನಾಗಿ ನೇಮಕಗೊಂಡನು.[೨]

ಮನೆತನದ ಮೂಲ ಪುರುಷ:

ಟರ್ಕಿಯ ಮೂಲದವನಾಗಿದ್ದ ಯೂಸುಫನು ಇರಾನನಿಂದ ಭಾರತಕ್ಕೆ ಬಂದು ಬೀದರನ್ನು ಸೇರಿದಾಗ ಅವನಿಗೆ ಹುದ್ದೆಯೊಂದನ್ನು ಕೊಡಲಾಯಿತು. ನಿಧಾನವಾಗಿ ಈತ ತನ್ನ ಸ್ವಪ್ರಯತ್ನದಿಂದ ಮೇಲೇರಿ ಮಹಮೂದ ಗವಾನನ ಆಪ್ತನಾಗಿ ತರಫದಾರನಾದ. ಇದೇ ಸಮಯಕ್ಕೆ ಮೂರನೆಯ ಮೂರನೆಯ ಮಹಮ್ಮದ ಶಾಹನ ಸಮರ್ಥ ಮಂತ್ರಿ ಗವಾನನ ಕೃಪೆಯಿಂದ ಘನತೆಗೇರಿದ ಬಹಮನಿ ರಾಜ್ಯವು, ಅವನ ಕೊಲೆಯಿಂದ ದುರ್ದಸೆಗೀಡಾಯಿತು. ಮಹಮ್ಮದ ಶಾಹನ ನಂತರ ಬಂದ ಅವನ ಮಗ ದುರ್ಬಲ ದೊರೆಯಾಗಿದ್ದರಿಂದ ಪ್ರಧಾನಿಯಾದ ಕಾಶೀಂ ಬರೀದನು ಸರ್ವಾಧಿಕಾರಿಯಾದನು. ಈ ಸಮಯದಲ್ಲಿ ಬಿಜಾಪುರದ ಪ್ರಾಂತಾಧಿಕಾರಿಯಾದ ಯೂಸುಫನು ಕ್ರಿ.ಶ. ೧೪೮೯ ರಲ್ಲಿ ತನ್ನ ಸ್ವಾತಂತ್ರ್ಯ ಘೋಷಿಸಿ ಬಿಜಾಪುರದಲ್ಲಿ ಆಡಳಿತ ನಡೆಸಿದನು.[೩] ಅವನು ಸ್ಥಾಪಿಸಿದ ಹೊಸ ರಾಜ್ಯವು ಆದಿಲ್‌ಶಾಹಿಯೆಂದು ಪ್ರಸಿದ್ಧವಾಯಿತು. ವಿಜಯನಗರ ನೆರೆ ರಾಜ್ಯವಾದ ಬಿಜಾಪುರದ ಆದಿಲ್‌ಶಾಹಿಗಳು, ವಿಜಯ ನಗರದ ಪತನದ ನಂತರ ಕರ್ನಾಟಕದ ವಿಶಾಲ ಪ್ರದೇಶವನ್ನು ಆಳಿದರು.

ಯೂಸುಫ ಆದಿಲ್‌ಖಾನ್ (ಕ್ರಿ.ಶ. ೧೪೮೯–೧೫೧೦) :

ಯೂಸುಫನು ಬಿಜಾಪುರದ ಸಿಂಹಾಸನದ ಮೇಲೆ ಸುಸ್ಥಾಪಿತನಾಗಲು ಇತನಿಗೆ ಹದಿನೈದು ವರ್ಷಗಳವರೆಗೆ ಹೋರಾಟ ಮಾಡಬೇಕಾಗಿ ಬಂದಿತು.[೪] ಯೂಸುಫನು ದಿಢೀರನೆ ತನ್ನನ್ನು ಸುಲ್ತಾನನೆಂದು ಘೋಷಿಸಿಕೊಳ್ಳಲ್ಲಿಲ್ಲ, ವಾಸ್ತವಾಗಿ ೧೫೫೫ ರಲ್ಲಿ ಪಟ್ಟಕ್ಕೆ ಬಂದ ನಾಲ್ಕನೆ ಸುಲ್ತಾನ ಒಂದನೆಯ ಇಬ್ರಾಹಿಮ ಆದಿಲ್‌ಶಾಹನವರೆಗೂ ಯಾರು ಔಪಚಾರಿಕವಾದ ಶಾಹ ಅಥವಾ ಸುಲ್ತಾನನೆಂಬ ಬಿರುದು ಇಟ್ಟುಕೊಂಡಿರಲ್ಲಿಲ್ಲ.[೫] ಮಹಮ್ಮದ ಗವಾನನ ಮರಣದ ನಂತರ ಬಹಮನಿ ಸಾಮ್ರಾಜ್ಯವು ಅವಸಾನದ ಹಾದಿಗೆ ಹೋಯಿತು. ಕಾಶೀಂ ಬರೀದ ಮತ್ತು ಅವನ ಮಗ ಅಮೀರ ಬರೀದ ಇವರ ಉದ್ದಟನದ, ನೀತಿಯಿಂದಾಗಿ ಬಹಮನಿ ರಾಜ್ಯದ ಕೊನೆಯುಸಿರೆಳೆಯಲು ಕಾರಣವಾಯಿತು.

ಯೂಸುಫ ಆಸ್ಥಾನದಲ್ಲಿ ಸಂಭವಿಸಿದ ಘಟನೆಗಳಿಂದ ತತ್ತರಿಸಿಹೋಗಿದ್ದ ಆಫಕಿ ಪಕ್ಷದ ಪ್ರತಿನಿಧಿಯಾಗಿದ್ದನು. ಹೊಸದಾಗಿ ಬಂದಂತಹ ಐದುನೂರು ಜನರಿದ್ದು ಅವರೆಲ್ಲ ತಮ್ಮ ಅಸ್ಥಿತ್ವಕ್ಕಾಗಿ ಯೂಸುಫನ ಬೆನ್ನು ಹತ್ತಿದರು. ಅವರೆಲ್ಲರು ಸಂಪೂರ್ಣವಾಗಿ ಯೂಸುಫನಿಗೆ ನಿಷ್ಠೆಯಿಂದಿದ್ದರು. ಅವನನ್ನು ತಮ್ಮ ರಾಜನೆಂದು ಅಂಗೀಕರಿಸಲು ಅವರು ಸಿದ್ಧರಾಗಿದ್ದರು. ಕ್ರಿ.ಶ.೧೪೮೯ ರಲ್ಲಿ ಬಿಜಾಪುರದ ಮೇಲೆ ತನ್ನ

ಸಾರ್ವಭೌಮತ್ವವನ್ನು ಘೋಷಿಸಿ, ತನ್ನ ಹೆಸರಿನಲ್ಲಿ ಖುತ್ಬಾವನ್ನು ಓದಿಸಿದನು. ೧೪೮೧ ರಲ್ಲಿ ಗವಾನನ ಕೊಲೆಯಾದಾಗಿನಿಂದ ೧೪೮೯ ರಲ್ಲಿ ಅರಸನೆಂದು ಹೇಳಿಕೊಳ್ಳುವವರೆಗೆ ಏಂಟು ವರ್ಷ ನೂತನ ರಾಜ್ಯ ಸ್ಥಾಪನೆಗೆ ಸಿದ್ಧತೆಯ ಅವಧಿಯಾಗಿತ್ತು.[೬]

ಕ್ರಿ. ಶ. ೧೪೮೯ ರಿಂದ ೧೫೧೦ ರವರೆಗೆ ತನ್ನ ಸ್ಥಾನವನ್ನು ಸ್ಥಿರಗೊಳಿಸಿಕೊಳ್ಳಲು ಯೂಸುಫ ಆದಿಲ್‌ಖಾನ ಬಹಳ ಹೋರಾಡಬೇಕಾಯಿತು. ಅದು ಬಹಮನಿ ರಾಜ್ಯವು ಶಿಥಿಲವಾಗುತ್ತಿದ್ದ ಕಾಲ ಅಫಕಿಗಳು ಮತ್ತು ದಖ್ಖನಿಗಳ ನಡುವಣ ದ್ವೇಷ, ಕಲಹ ಪೂರ್ಣ ಪ್ರಮಾಣದಲ್ಲಿ ಮುಂದುವರೆದಿದ್ದವು. ವಿಜಯ ನಗರ, ಓರಿಸ್ಸಾ, ಮಾಳ್ವ ಮೊದಲಾದ ಬಹಮನಿ ರಾಜ್ಯದ ವೈರಿಗಳು ಬೆಂದ ಮನೆಯಲ್ಲಿ ಲಾಭ ಹಿರಿಕೊಳ್ಳುವ ಪ್ರಯತ್ನ ನಡೆಸಿದರು.[೭] ಇದರ ಜೊತೆಗೆ ಕಾಶೀಂ ಬರೀದನ ವಿರುದ್ಧ ಹೋರಾಡುವುದು ತನ್ನ ರಾಜ್ಯ ರಕ್ಷಣೆ ಮತ್ತು ವಿಸ್ತಾರಣಾಕಾರ್ಯವನ್ನು ಮುನ್ನಡೆಸುವುದು ಕಷ್ಟದ ಕಾರ್ಯವಾಗಿತ್ತು.

ಬಹಮನಿ ರಾಜ್ಯವು ತನ್ನ ಅಧಿಕಾರದ ಶಿಖರಾವೆವಸ್ಥೆಯಲ್ಲಿ ಹನ್ನೆರಡು ವಿಭಾಗಗಳು ಹೊಂದಿತು. ಒಂದು ಕಾಲದಲ್ಲಿ ಕಾಂಚಿವರೆಗೂ ದಕ್ಷಿಣದಲ್ಲಿ ಹರಡಿಕೊಂಡಿತ್ತು. ಯೂಸುಫನ ರಾಜ್ಯದ ಹತ್ತಿರವಿರುವ ಮೀರಜ, ಗೋವಾ ಪ್ರದೇಶಗಳು ಬಹದ್ದೂರ ಗಿಲಾನಿಯ ಅಧಿನದಲ್ಲಿದ್ದವು. ಪೆರೆಂಡಾ ಮತ್ತು ಸೋಲ್ಲಾಪುರ ಖ್ವಾಜಾ ಜಹಾನ ದಖ್ಖನಿಯ ವಶದಲ್ಲಿದ್ದವು. ಗುಲ್ಬರ್ಗಾ, ಆಳಂದ ಮತ್ತು ಗಾಜೊಂಟ ಇವು ದಸ್ತುರ ದಿವಾನರ ಜಾಗೀರಗಳಾಗಿದ್ದವು. ಬೀದರ ಕಾಶೀಂ ಬರೀದನ ಕೈಯಲ್ಲಿತ್ತು. ಅಹಮ್ಮದ ನಗರವನ್ನು ನಿಜಾಮುಲ್-ಮುಲ್ಕನು ನಿಯಂತ್ರಿಸುತ್ತಿದ್ದನ್ನು. ಯೂಸುಫನು ಇವರೆಲ್ಲರೊಂದಿಗೆ ವ್ಯವಹರಿಸಬೇಕಾಗಿತ್ತು.[೮] ಯೂಸುಫನ ಮೊದಲ ವೈರಿ ಕಾಶೀಂ ಬರೀದನಾಗಿದ್ದನು. ಕಾರಣ ಕಾಶೀಂನು ಯೂಸುಫನ ಬಿಜಾಪುರದ ಮೇಲಿನ ಏಳಿಗೆಯನ್ನು ಸಹಿಸಲ್ಲಿಲ್ಲ. ಆಗ ಕಾಶೀಂನು ಬಿಜಾಪುರ ಪ್ರದೇಶವಾದ "ದೋ-ಆಬ" ಪ್ರದೇಶದ ಮೇಲೆ ದಾಳಿ ಮಾಡಲು ವಿಜಯ ನಗರದೊಡನೆ ಸ್ನೆಹ ಹಸ್ತವನ್ನು ಚಾಚಿದನು. ಇದರ ಜೊತೆ-ಜೊತೆಗೆ ಪಶ್ಚಿಮದ ಕಡೆಯಿಂದ ಸುಲ್ತಾನನಾಗಿದ್ದ ಬಹದ್ದೂರ ಗಿಲಾನಿಗೆ ಪತ್ರದ ಮೂಲಕ ತಿಳಿಸಿದನು.[೯]

ಕ್ರಿ. ಶ. ೧೪೯೨ ರಲ್ಲಿ ವಿಜಯ ನಗರ ಸೈನ್ಯವು ತುಂಗಭದ್ರೆಯನ್ನು ದಾಟಿ ರಾಯಚೂರ ಮತ್ತು ಮುದಗಲ್ಲ ಕೋಟೆಗಳನು, ಅದೇ ಸಮಯಕ್ಕೆ ಬಹದ್ದೂರ ಗಿಲಾನಿಯು ಜಮಖಂಡಿಯನ್ನು ವಶಪಡಿಸಿಕೊಂಡನು. ಇದರಿಂದ ಯೂಸುಫನಿಗೆ ಎರಡು ದಾಳಿಗಳನು ಎದುರಿಸುವುದು ಕಷ್ಟದ ಕೆಲಸವಾಗಿತ್ತು. ಆದ್ದರಿಂದ ಯೂಸುಫನು ವಿಜಯ ನಗರ ಮತ್ತು ಬಹದ್ದೂರ ಗಿಲಾನಿಯೊಡನೆ ಶಾಂತಿ ಒಪ್ಪಂದವನ್ನು ಮಾಡಿಕೊಂಡನು. ಇದರಿಂದಾಗಿ ದೋ-ಆಬ ಪ್ರದೇಶವು ವಿಜಯ ನಗರಕ್ಕೆ ಸೇರಿತು. ೧೪೯೩ ರಲ್ಲಿ ವಿಜಯ ನಗರದಲ್ಲಿ ದಂಗೆ ಎದ್ದಿತು. ಆಗ ಯೂಸುಫನು ದಿಡೀರನೆ ದೋ-ಆಬ ಪ್ರದೇಶವನ್ನು ಆಕ್ರಮಿಸಿದನು. ವಿಜಯ ನಗರವು ರಕ್ಷಿಸಿಕೊಳ್ಳಲಾರದೆ ಅದನ್ನು ಬಿಟ್ಟುಕೊಟ್ಟಿತು. ದೋ-ಆಬ ಪ್ರದೇಶ ಯೂಸುಫನ ಆಡಳಿತಕ್ಕೆ ಸೇರಿತು.[೧೦]

ಯೂಸುಫ ಆದಿಲ್‌ಖಾನನ ಆಡಳಿತ ಅವಧಿಯಲ್ಲಿ ದಖ್ಖನ್ನಿನ ಪಶ್ಚಿಮ ಕರಾವಳಿಯಲ್ಲಿ ಮಹತ್ವದ ಸ್ಥಳವಾದ ಗೋವಾವನ್ನು ಪೋರ್ಚುಗೀಸರು ಆಕ್ರಮಿಸಿದರು. ಕ್ರಿ. ಶ. ೧೫೧೦ ರಲ್ಲಿ ಯೂಸುಫ ಆದಿಲ್‌ಖಾನನು ಗೋವೆಯ ಪೋರ್ಚುಗೀಸರೊಂದಿಗೆ ಕಾಳಕ್ಕಿಳಿದು ವಶಪಡಿಸಿಕೊಂಡನು.[೧೧] ತನ್ನ ಇಪ್ಪತ್ತೊಂದು ವರ್ಷಗಳ ಆಳ್ವಿಕೆಯ ನಂತರ ಕ್ರಿ.ಶ. ೧೫೧೦ ರಲ್ಲಿ ಯೂಸುಫ ಆದಿಲ್‌ಖಾನನು ಮರಣ ಹೊಂದಿದನು. ಅವನ ಆಶೆಯಂತೆ ಬೀದರಿನ ಸುಲ್ತಾನನಿಂದ ಬಹುಮಾನವಾಗಿ ಪಡೆದ ಗೋಗಿ ಎಂಬ ಹಳ್ಳಿಯಲ್ಲಿ ಚಂದಾಹುಸೇನಿ ಎಂಬ ಸಂತನೊಬ್ಬನ ಗೋರಿಯ ಹತ್ತಿರ ಸಮಾಧಿ ಮಾಡಲಾಯಿತು.

ಅವನ ಮರಣದ ಕಾಲದಲ್ಲಿ ಬಿಜಾಪುರವು ದಕ್ಷಿಣದಲ್ಲಿ ದೋ–ಆಬದವರೆಗೆ, ವಾಯುವ್ಯದಲ್ಲಿ ಗೋವೆಯವರೆಗೆ ಭೀಮಾ ಮತ್ತು ಕೃಷ್ಣಾ ನದಿಗಳು ಉತ್ತರ ಮತ್ತು ದಕ್ಷಿಣ ಗಡಿಗಳಾಗಿದ್ದವು. ಅಲ್ಲದೆ ಪೂರ್ವದಲ್ಲಿ ರಾಯಚೂರಿನ ಹತ್ತಿರ ಎರಡು ನದಿಗಳ ಸಂಗಮದ ಪ್ರದೇಶಗಳವರೆಗೆ ಹಬ್ಬಿತ್ತು.[೧೨]

ಬಿ. ಶೇಕ ಅಲಿಯವರು ಹೇಳುವಂತೆ ಯೂಸುಫನನ್ನು ನೂತನ ರಾಜ್ಯ ನಿರ್ಮಾಪಕರ ಪಂಕ್ತಿಯಲ್ಲಿ ಒಬ್ಬನೆಂದು ಪರಿಗಣಿಸಬಹುದು. ಬೀದರಿನಲ್ಲಿ ಮಾರಾಟವಾದ ಒಬ್ಬ ಗುಲಾಮನು ಒಂದು ರಾಜ್ಯವನ್ನು ಕಟ್ಟುವುದನ್ನು ಯಾರು ಊಹಿಸಿದರು? ಪ್ರತಿಭಾವಂತನಾದ ಯೂಸುಫನಿಗೆ ರಾಜಕೀಯ ಸೂಕ್ಷ್ಮತೆ, ಯುದ್ಧ ಪರಿಣಿತಿಯು ಇದ್ದವು. ಈ ಎರಡು ವಲಯಗಳಲ್ಲಿ ಇವನು ಸೋತ್ತಿದ್ದು ಅಪರೂಪ. ನಿಜಾಮ–ಉಲ್–ಮುಲ್ಕನಾಗಲಿ, ಕಾಶೀಂ ಬರೀದನಾಗಲಿ, ದಸ್ತೂರ–ದಿನಾರ ಅಥವಾ ಬಹದ್ದೂರ ಗಿಲಾನಿಯಾಗಲಿ ಅವನಿಗೆ ಎಂದು ಸರಿಸಮಾನನಾಗಿರಲ್ಲಿಲ್ಲ.[೧೩]

ಇಸ್ಮಾಯಿಲ್ ಆದಿಲ್‌ಖಾನ (ಕ್ರಿ.ಶ. ೧೫೧೦–೧೫೩೪)

ಯೂಸೂಫ ಆದಿಲ್‌ಖಾನನ ನಂತರ ಅವನ ಮಗ ಇಸ್ಮಾಯಿಲ್‌ನು ಅಧಿಕಾರಕ್ಕೆ ಬಂದನು. ಆಗ ಅವನು ಹದಿಮೂರು ವರ್ಷದವನಾಗಿದ್ದರಿಂದ ರಾಜ್ಯ ಪ್ರತಿನಿಧಿಯ ವ್ಯವಸ್ಥೆ ಅಗತ್ಯವಾಗಿತ್ತು. ಕಾಮಿಲ್‌ಖಾನನು ಇಸ್ಮಾಯಿಲ್‌ನ ಪ್ರತಿನಿಧಿಯಾಗಿ ಆಡಳಿತ ನೋಡಿಕೊಂಡನು. ಹೀಗಾಗಿ ಆಡಳಿತದ ಎಲ್ಲಾ ಅಧಿಕಾರಗಳು ಕಾಮಿಲ್‌ಖಾನನ ಕೈ ಸೇರಿತು. ಇವನು ಶಿಯಾ ಪಂಥವನ್ನು ಕಿತ್ತೊಗೆದು ಸುನ್ನಿ ಪಂಥವನ್ನು ಸ್ಥಾಪಿಸಿದನು. ಕಾಮಿಲ್‌ಖಾನನ ದುರಾಸೆ ಹೆಚ್ಚಿದಂತೆ ಇಸ್ಮಾಯಿಲ್‌ನಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದನು.[೧೪]

ರಾಜಮಾತೆ ದಿಲ್‌ಶಾದ ಆಗಾ ಉಪಾಯವೊಂದನ್ನು ಹೂಡಿ ಕಾಮಿಲ್‌ಖಾನನ ದ್ವೇಶಿಯಾದ ಯೂಸುಫ ಟರ್ಕನೆಂಬುವನನ್ನು ಅವನ ವಿರುದ್ಧ ಎತ್ತಿಕಟ್ಟದಳು. ಈ ಸಂಚಿನಲ್ಲಿ ಇಬ್ಬರೂ ಸಾವಿಗೀಡಾದರು, ರಾಜಮಾತೆಯ ಉದ್ದೇಶ ಇಡೇರಿತು.[೧೫] ಕಾಮಿಲ್‌ಖಾನನ ಮರಣವು ರಾಜ್ಯದಲ್ಲಿ ಆಂತರಿಕ ಕಲಹದ ಸೂಚನೆಯಾಗಿತ್ತು. ಇದಕ್ಕೆ ಉತ್ತರವಾಗಿ ಒಳಜಗಳಗಳು ಪ್ರಾರಂಭವಾದವು. ರಾಜಮಾತೆಯು ಇದನ್ನು ಎದುರಿಸುವಲ್ಲಿ ಅಸಮರ್ಥಳಾಗಿದ್ದರಿಂದ, ಈ ಸಮಯದಲ್ಲಿ ಆಫಕಿಗಳ ನಾಯಕನಾದ 'ಅಸದಖಾನ'ನೆಂಬ ಬಿರುದನ್ನು ಹೊಂದಿರುವ ಮಹಮ್ಮದ ಲಾರಿಯು ಶಾಂತಿ ಸ್ಥಾಪಕನಾಗಿ ಬಂದು ಯಶಸ್ವಿಯಾಗಿ ದಂಗೆಯನ್ನು

ನಿರ್ನಾಮಗೊಳಿಸಿದನು.[೧೬] ಇಸ್ಮಾಯಿಲ್ ಆದಿಲ್‌ಖಾನನು ಅಧಿಕಾರವನ್ನು ಪಡೆದುಕೊಂಡು ಮತ್ತೆ ಶಿಯಾ ಪಂಥವನ್ನು ಸ್ಥಾಪಿಸಿದನು.[೧೭] ಪರ್ಶಿಯಾದ ಸುಲ್ತಾನನು ಇಸ್ಮಾಯಿಲ್‌ನನ್ನು ಸ್ವತಂತ್ರ ಸುಲ್ತಾನನೆಂದು ಮಾನ್ಯತೆಯನ್ನು ನೀಡಿದನು.

ಕ್ರಿ.ಶ. ೧೫೧೨ ರಲ್ಲಿ ವಿಜಯನಗರದ ರಾಜನಾದ ಕೃಷ್ಣದೇವರಾಯನು ದಂಡೆತ್ತಿ ಹೋಗಿ ರಾಯಚೂರ ದೋ-ಆಬ್‌ವನ್ನು ವಶಪಡಿಸಿಕೊಂಡನು. ಅಮೀರ ಬರೀದನು ಗುಲ್ಬರ್ಗಾವನ್ನು ಹಿಡಿದುಕೊಂಡನು. ಆದರೆ ಇಸ್ಮಾಯಿಲ್‌ನ ಸೈನ್ಯವು ಬರೀದನನ್ನು ಸೋಲಿಸಿ ಹಿಮ್ಮೆಟ್ಟಿಸಿತು. ಕ್ರಿ.ಶ.೧೫೧೪ ರಲ್ಲಿ ಬೀದರ, ಅಹಮ್ಮದ ನಗರ ಹಾಗೂ ಗೋಲ್ಕೊಂಡಗಳ ಸಂಯುಕ್ತ ಸೈನ್ಯವು ಬಿಜಾಪುರದ ಮೇಲೆ ಆಕ್ರಮಣ ಮಾಡಿತು. ಅಸದಖಾನ ಒಕ್ಕೂಟ ಸೈನ್ಯವನ್ನು ಎದುರಿಸಿದನು. ಅಮೀರ ಬರೀದನು ಹಿಮ್ಮೆಟ್ಟಬೇಕಾಯಿತು. ಮಹಮ್ಮದ ಶಾಹ ಮತ್ತು ಅವನ ಮಗ ಸೆರೆಸಿಕ್ಕರು, ನಂತರ ಅವರನ್ನು ಬೀದರಿಗೆ ಕಳಸಿಕೊಡಲಾಯಿತು.[೧೮]

ಕ್ರಿ.ಶ.೧೫೨೯ ರಲ್ಲಿ ಇಸ್ಮಾಯಿಲ್‌ನು ರಾಯಚೂರ ದೋ-ಆಬ್ ಪ್ರದೇಶವನ್ನು ಗೆಲ್ಲಲ್ಲು ಏಳುಸಾವಿರ ಅಶ್ವದಳದೊಂದಿಗೆ ಹೋದನು. ಸರಿಯಾಗಿ ಯುದ್ಧ ತಯಾರಿ ಮಾಡೊಕೊಳ್ಳದೇ ಇಸ್ಮಾಯಿಲ್ ನದಿಯನ್ನು ದಾಟಿದನು. ಆದರೆ ಕೃಷ್ಣದೇವರಾಯನ ಸೈನ್ಯವನ್ನು ಎದುರಿಸಲಾಗದೇ ಹಿಮ್ಮೆಟ್ಟಬೇಕಾಯಿತು.[೧೯]

ಪೋರ್ಚುಗೀಸರು ತಮ್ಮ ರಾಜ್ಯ ವಿಸ್ತಾರದಲ್ಲಿ ತೊಡಗಿದ್ದರು. ಇಸ್ಮಾಯಿಲ್‌ನು ಸೈನ್ಯವನ್ನು ಕಳುಹಿಸಿ ಪೊಂಡಾ ಕಡೆಗೆ ಮುಂದುವರೆಯದಂತೆ ಮಾಡಿದನು. ತನಗೆ ತೊಂದರೆಯನ್ನು ನೀಡಿದ ಅಮೀರ ಬರೀದನ್ನು ಶಿಕ್ಷಿಸಲು ನಿರ್ಧರಿಸಿದನು. ಹತ್ತುಸಾವಿರ ಸವಾರರನ್ನು ತೆಗೆದುಕೊಂಡು ಬೀದರನತ್ತ ದಾಳಿ ಮಾಡಿದನು. ಈ ಸುದ್ಧಿಯನ್ನು ತಿಳಿದ ಅಮೀರ ಬರೀದನು ಯುದ್ಧ ಸಿದ್ದತೆಯಲ್ಲಿ ತೊಡಗಿದನು. ಯುದ್ದ ಸಮಯಕ್ಕೆ ಕುತುಬ ಶಾಹನು ಬಂದು ಬರೀದನ ಕೈಜೋಡಿಸಿದನು. ಅಸದಖಾನನ ನೇತೃತ್ವದಲ್ಲಿ ಕುತುಬಶಾಹನನ್ನು ಎದುರಿಸಿ, ಸೋಲಿಸಿ ತಿರುಗಿ ಬಂದು ಇಸ್ಮಾಯಿಲ್ ಸೈನ್ಯವನ್ನು ಸೇರಿದನು. ಕೋಟೆಯನ್ನು ಮುತ್ತಿದ ಬಿಜಾಪುರ ಸೈನ್ಯವು ಬರೀದನನ್ನು ಬಂಧಿಸಿತು. ಬೀದರಿನ ಕೋಟೆಯನ್ನು ಅಸದಖಾನನ ಸಲಹೆಯಂತೆ ಮುಸ್ತಾಫಾಖಾನ ಶಿರಾಜಿಗೆ ಹಿಂದಿರುಗಿಸಲಾಯಿತು.[೨೦]

ಅಮೀರ ಬರೀದನನ್ನು ಸದೆಬಡಿದ ಮೇಲೆ ಇಸ್ಮಾಯಿಲ್‌ನು ದೋ-ಆಬ್ ಕಡೆಗೆ ಗಮನ ಹರಿಸಿದನು. ಆದಿನಗಳಲ್ಲಿ ತಿಮ್ಮರಾಜನು ತೀರಿಕೊಂಡಿದ್ದನು. ಈ ಸಮಯಕ್ಕೆ ವಿಜಯ ನಗರದ ಜನರಲ್ಲಿ ವಿರೋಧ ಉಂಟಾಗಿತ್ತು. ಇಂತಹ ಸಂದರ್ಭದ ಸದಾವಕಾಶವನ್ನು ಸಾಧಿಸಿ, ರಾಚೂರ ಮತ್ತು ಮುದಗಲ್ಲ ಕೋಟೆಗಳನ್ನು ವಶಪಡಿಸಿಕೊಳ್ಳಲು, ಇಮಾದ-ಉಲ್-ಮುಲ್ಕನ ಸಮೇತನಾಗಿ ಹೊರಟನು. ಕೃಷ್ಣಾ ನದಿಯನ್ನು ದಾಟ ಮುದಗಲ್ಲ ಕೋಟೆಯ ಮೇಲೆ ದಾಳಿ ಮಾಡಿದನು. ಯಾವ ಪ್ರತಿರೋಧವು ಇಲ್ಲದೆ ಮುದಗಲ್ಲ ಮತ್ತು ರಾಯಚೂರ ಕೋಟಾಳ್ ವಶವಾದವು. ಕ್ರಿ.ಶ.೧೫೩೦ ರಲ್ಲಿ ರಾಯಚೂರ ಮತ್ತು ಮುದಗಲ್ಲಗಳನ್ನು ಯಾವ

ಕಷ್ಟವಿಲ್ಲದೆ ವಶಪಡಿಸಿಕೊಂಡನು.[೨೧] ತನ್ನ ಇಪತ್ತೈದು ವರ್ಷಗಳ ಆಳ್ವಿಕೆಯ ನಂತರ ಇಸ್ಮಾಯಿಲ್‌ನು ಕ್ರಿ.ಶ. ೧೫೩೪ ಅಗಸ್ಟ ೨೭ ರಂದು ಮರಣ ಹೊಂದಿದನು.[೨೨]

ಇಸ್ಮಾಯಿಲ್‌ನ ಆಳ್ವಿಕೆಯು ಆದಿಲ್‌ಶಾಹಿ ಮನೆತನದ ತಳಹದಿಗೆ ಸಾಕ್ಷಿಯಾಗಿತ್ತು. ತಂದೆಯಂತೆ ಧೈರ್ಯಶಾಲಿಯು, ಬುದ್ಧಿವಂತನು, ಶಕ್ತಿಶಾಲಿಯು ಆಗಿದ್ದನು. ಇಸ್ಮಾಯಿಲ್‌ನು ತನ್ನ ಆಳ್ವಿಕೆಯ ಉದ್ದಕ್ಕೂ ಯುದ್ಧಗಳನ್ನು ಮಾಡಬೇಕಾಯಿತು.

ಮಲ್ಲು ಆದಿಲ್ ಖಾನ (ಕ್ರಿ.ಶ. ೧೫೩೪-೩೫) :

ಕ್ರಿ.ಶ. ೧೫೩೪ ರಲ್ಲಿ ಇಸ್ಮಾಯಿಲ್‌ನ ಹಿರಿಯ ಮಗನಾದ ಮಲ್ಲು ಆದಿಲ್‌ಖಾನನು, ಅವನ ಉತ್ತರಾಧಿಕಾರಿಯಾಗಿ ಬಂದನು. ಆದರೆ ತನ್ನ ಕ್ರೂರ ಕೃತ್ಯಗಳಿಂದ ಹಾಗೂ ಕೆಟ್ಟ ಅಭ್ಯಾಸಗಳು ಮತ್ತು ದುರ್ಗುಣಗಳಿಂದ ಎಲ್ಲರಿಗೂ ಬೇಡವಾಗಿ ಏಳು ತಿಂಗಳಗಳ ನಂತರ ಸಿಂಹಾಸನದಿಂದ ಕಿತ್ತು ಎಸೆಯಲ್ಪಟ್ಟನು. ಅವನ ಸಹೋದರನಾದ ಇಬ್ರಾಹಿಂನನ್ನು ಅವನ ಸ್ಥಾನಕ್ಕೆ ತರಲಾಯಿತು.[೨೩]

ಒಂದನೆಯ ಇಬ್ರಾಹಿಂ ಆದಿಲ್‌ಶಾಹ (ಕ್ರಿ.ಶ. ೧೫೩೫-೧೫೫೭) :

ಇಸ್ಮಾಯಿಲ್‌ನ ಕಿರಿಯ ಮಗನಾದ ಇಬ್ರಾಹಿಂ ಸಿಂಹಾನಕ್ಕೆ ಬಂದಾಗ ಕೇವಲ ಹದಿನೈದು ವರ್ಷದವನಾಗಿದ್ದನು. ಮುಂದಿನ ಐದು ವರ್ಷಗಳವರೆಗೆ ರಾಜನ ಮುಖ್ಯ ಸಲಹೆಗಾರನಾಗಿ ಅಸದಖಾನನನ್ನು ನೇಮಿಸಲಾಯಿತು. ಇವನು *'ಶಾಹ'* ಎಂಬ ಬಿರುದನ್ನು ಹೊಂದಿದ ಪ್ರಪ್ರಥಮ ಆದಿಲ್‌ಶಾಹಿ ಸುಲ್ತಾನನಾಗಿದ್ದಾನೆ.[೨೪]

ಇಬ್ರಾಹಿಂ ಆದಿಲ್‌ಶಾಹನು ಅಹಮ್ಮದ ನಗರ, ವಿಜಯನಗರ ಮತ್ತು ಇನ್ನಿತರ ರಾಜ್ಯಗಳೊಂದಿಗೆ ಯುದ್ಧದಲ್ಲಿ ನಿರತನಾಗಿದ್ದರಿಂದ ಅವನು ಸಾಲಸೆಟ್ ಮತ್ತು ಬಾರ್ಡೆಜ್‌ಗಳನ್ನು ಪೋರ್ಚುಗಿಸರಿಗೆ ಬಿಟ್ಟು ಕೊಡಲಾಯಿತು.[೨೫] ಆದರೆ ಮುಂದಿನ ಕೆಲವು ವರ್ಷಗಳ ಆಳ್ವಿಕೆಯಲ್ಲಿ ರಾಮರಾಯನ ವಿದೇಶಿ ನೀತಿಯಿಂದಾಗಿ ತಮ್ಮ ತಮ್ಮೊಳಗೆ ಕಾದಾಡುತ್ತಿರುವ ಸುಲ್ತಾನರಿಂದ ಲಾಭವನ್ನು ಪಡೆದನು. ಆದರೆ ವಿಜಯನಗರದ ಆದೋನಿಯನ್ನು ಪಡೆದುಕೊಳ್ಳುವ ಇವನ ಪ್ರಯತ್ನ ವಿಫಲವಾಯಿತು.

ಇಸ್ಮಾಯಿಲ್ ಆದಿಲ್‌ಖಾನನ ತಮ್ಮನಾದ ಅಬ್ದುಲ್ಲಾನು ನಿಜಾಮಶಾಹನ ಬೆಂಬಲದಿಂದ ಅಧಿಕಾರವನ್ನು ಪಡೆಯಲು ಪ್ರಯತ್ನಿಸಿ ವಿಫಲನಾದನು. ಇಬ್ರಾಹಿಂನ ಕೊನೆಯ ದಿನಗಳು ಶಾಂತಿಯಿಂದ ಕೂಡಿರಲಿಲ್ಲ. ಒಂದಾದ ಮೇಲೊಂದರಂತೆ ಸಮಸ್ಯಗಳ ಸರಮಾಲೆಯನ್ನೆ ಎದುರಿಸ ಹತ್ತಿದನು. ಅಹ್ಮದನಗರದ ದಾಳಿಗಳು ಬಿಜಾಪುರವನ್ನು ಅಶಾಂತಿಗೆ ಈಡುಮಾಡಿತು. ಈ ಹಿಂದೆ ರಾಮರಾಯ ಅಹ್ಮದನಗರಕ್ಕೆ ನೆರವು ನೀಡುತ್ತಿದ್ದನು. ಆದರೆ ಈಗ ಬಿಜಾಪುರಕ್ಕೆ ನೆರವು ನೀಡಿ ಅಹ್ಮದನಗರವನ್ನು ಸೋಲಿಸುವ ವಿಚಾರ ಹೊಂದಿದನು. ಐನ್-ಉಲ್-ಮುಲ್ಕ್ ಎನ್ನುವ ಗೆರಿಲ್ಲಾ ಯೋಧನು ಬಿಜಾಪುರದ ಹಲವು ಗ್ರಾಮಗಳನ್ನು

ಕೊಳ್ಳೆಹೊಡೆದು ಇಬ್ರಾಹಿಂನಿಗೆ ಅಪಾಯ ತಂದೊಡ್ಡಿದ್ದನು. ರಾಮರಾಯನ ನೆರವಿನೊಂದಿಗೆ ಆತನ ತೊಂದರೆಯನ್ನು ಶಮನಗೊಳಿಸಿದನಾದರೂ, ಆತನ ಸೋದರ ಅಬ್ದುಲ್ಲಾನ ಕಾಟ ಮತ್ತೆ ಆರಂಭವಾಗಿ ಸಿಂಹಾಸನವನ್ನೇ ಅಪಹರಿಸುವ ಯತ್ನ ಮಾಡಿದನು. ಆದರೆ ವಿಜಯನಗರದ ನೆರವಿನೊಂದಿಗೆ ಆ ತೊಂದರೆಯನ್ನು ನಿವಾರಿಸಿಕೊಂಡನಾದರೂ ಪೋರ್ತುಗೀಸರ ಕಾಟ ಮತ್ತೊಂದು ಕಡೆ ಆರಂಭಗೊಂಡಿತು. ಆಗ ರಾಮರಾಯನು ಇಬ್ರಾಹಿಂನ ಸ್ನೇಹಿತನಾದಕಾರಣದಿಂದ ಪೋರ್ತುಗೀಸರು ಬಿಜಾಪುರದೊಂದಿಗೆ ಶಾಂತಿಯನ್ನೇರ್ಪಡಿಸಿಕೊಂಡರು.[೨೬]

ಹೀಗೆ ಅವಿಶ್ರಾಂತವಾಗಿ ತೊಂದರೆಗಳಲ್ಲಿಯೇ ಸಿಲುಕಿಕೊಂಡ ಇಬ್ರಾಹಿಂನ ಕೊನೆಯ ದಿನಗಳು ಅಶಾಂತಿಯಿಂದಲೇ ಕೂಡಿದ್ದವೆಂದು ಹೇಳಬಹುದು. ಕೆಲವು ಸಮಯದಲ್ಲಿ ದೂರದೃಷ್ಟಿ ಪ್ರದರ್ಶಿಸಿದರೂ ಇನ್ನೂ ಕೆಲವು ವಿಷಯಗಳಲ್ಲಿ ಅದರ ಕೊರತೆ ಎದ್ದು ಕಾಣುತ್ತಿತ್ತು. ನಿರಂತರ ಯುದ್ಧಗಳಿಂದ ಬಳಲಿದ, ವಿಶ್ರಾಂತಿ ಇಲ್ಲದ ಇಬ್ರಾಹಿಂನು ಕ್ರಿ.ಶ. ೧೫೫೭ ರಲ್ಲಿ ಮರಣ ಹೊಂದಿದನು.[೨೭]

ಒಂದನೆಯ ಅಲಿ ಆದಿಲ್‌ಶಾಹ (ಕ್ರಿ.ಶ. ೧೫೫೭–೧೫೮೦):

ಒಂದನೆಯ ಇಬ್ರಾಹಿಂನು ತನ್ನ ನಾಲ್ಕು ಜನ ಮಕ್ಕಳಲ್ಲಿ ಹಿರಿಯನಾದ ಇಸ್ಮಾಯಿಲ್‌ನು ತಾನು ಉತ್ತರಾಧಿಕಾರಿಯಾಗಬೇಕೆಂಬ ಇಚ್ಛೆಯಿಂದ ಸರ್ವಗುಣ ಸಂಪನ್ನನಾದ ಅಲಿಯನ್ನು ಬಂಧಿಸಿ ಮೀರಜ ಕೋಟೆಯಲ್ಲಿಟ್ಟನು. ಅಲಿಯು ತನ್ನ ಮಗಳ ಮಗನಾದ ಕಾರಣ ಅಸದಖಾನನು ಅವನಿಗೆ ಯಾವ ತೊಂದರೆಗಳಾಗದಂತೆ ನೋಡಿಕೊಂಡನು.[೨೮] ಇಬ್ರಾಹಿಂನ ಮರಣಾನಂತರ ಮೀರಜನಿಂದ ಅಲಿಯನ್ನು ಕರೆತಂದು ಸಿಂಹಾಸನದ ಮೇಲೆ ಕೂಡಿಸಲಾಯಿತು. ಆಗ ಅವನು ಕೇವಲ ೧೬ ವರ್ಷದ ಬಾಲಕನಾಗಿದ್ದನು.[೨೯]

ಅಧಿಕಾರಕ್ಕೆ ಬಂದ ಅಲಿಯು ವಿಜಯನಗರದೊಂದಿಗೆ ಒಪ್ಪಂದ ಮಾಡಿಕೊಳ್ಳಬಯಸಿದನು. ಆವೇಳೆಗೆ ದಖ್ಖನ್ನಿನ ಸುಲ್ತಾನರು ಒಂದು ರೀತಿಯಲ್ಲಿ ಬಿಜಾಪುರದ ವಿರೋಧಿಗಳಾಗಿದ್ದರು. ಆದ್ದರಿಂದ ಈತನು ರಾಮರಾಯನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದಾದನು.[೩೦] ಆ ದಿಸೆಯಲ್ಲಿ ಅಲಿಯು ವಿಜಯ ನಗರಕ್ಕೆ ತನ್ನ ರಾಯಭಾರಿಗಳನ್ನು ಕಳುಹಿಸಿದನು. ಆದರೆ ಅಲಿಯು ಖುದ್ದಾಗಿ ಬಂದರೆ ಮಾತ್ರ ಸಹಾಯ ಮಾಡುವುದಾಗಿ ರಾಮರಾಯ ಹೇಳಿದನು. ಇದು ಅಲಿಗೆ ಅಪಮಾನವಾದರೂ ಕಾಲ ಕೂಡಿ ಬಂತು. ಇದೆ ವೇಳೆಗೆ ರಾಮರಾಯನ ಮಗನು ಮರಣ ಹೊಂದಿದನು. ಸಾಂತ್ವಾನ ಹೇಳಲು ವಿಜಯ ನಗರಕ್ಕೆ ಹೋದ ಅಲಿಗೆ ಭವ್ಯ ಸ್ವಾಗತ ದೊರೆಯಿತು. ರಾಮರಾಯನ ಹೆಂಡತಿ ಅಲಿಯನ್ನು ತನ್ನ ಮಗನೆಂದು ಪ್ರಸ್ತಾಪಿಸಿದಳು. ಹೀಗೆ ವಿಜಯನಗರ ಮತ್ತು ಬಿಜಾಪುರಗಳ ನಡುವೆ ಒಪ್ಪಂದಗಳು ಏರ್ಪಟ್ಟವು.[೩೧]

ಕ್ರಿ.ಶ. ೧೫೫೮ ರಲ್ಲಿ ಅಲಿಯು ವಿಜಯನಗರದಲ್ಲಿದ್ದಾಗ ಹುಸೇನ ನಿಜಾಮಶಾಹನು ಕುತುಬಶಾನೊಂದಿಗೆ ಕೂಡಿಕೊಂಡು ಗುಲ್ಬರ್ಗಾದ ಮೇಲೆ ದಾಳಿ ಮಾಡಿದನು. ರಾಮರಾಯನು

ಕುತುಬಶಾಹನಿಗೆ ಯುದ್ಧಕ್ಕೆ ಬರಬಾರದೆಂದು ಹೇಳಿದಾಗ, ಒಂಟಿಯಾದ ನಿಜಾಮಶಾಹನು ಅನಿವಾರ್ಯವಾಗಿ ಹಿಂದಿರುಗಿದನು.[೩೨] ಈದಾದ ಕೆಲವು ದಿನಗಳಲ್ಲಿ ಅಲಿ ಆದಿಲ್‌ಶಾಹನು ರಾಮರಾಯನ ನೆರವಿನೊಂದಿಗೆ ಅಹ್ಮದನಗರದ ಹುಸೇನ್ ನಿಜಾಮನ ಮೇಲೆ ಯುದ್ಧ ಘೋಷಿಸಿದನು. ೧೫೫೯ ರಿಂದ ೧೫೬೧ರ ವರೆಗೆ, ಸುಮಾರು ಮೂರು ವರ್ಷಗಳ ಕಾಲ ಭೀಕರ ಯುದ್ಧ ನಡೆಯಿತು. ಅದರಿಂದ ಯಾರಿಗೂ ಲಾಭವಾಗಲ್ಲಿಲ್ಲ.[೩೩]

ಕ್ರಿ.ಶ. ೧೫೬೨ ರಲ್ಲಿ ಹುಸೇನ ನಿಜಾಮಶಾಹ ಗೋಲ್ಕೊಂಡ ಮತ್ತು ಬೀದರಿನೊಂದಿಗೆ ಕೂಡಿಕೊಂಡು ಕಲ್ಯಾಣದ ಮೇಲೆ ದಾಳಿ ಮಾಡಿದನು. ಈ ಸಂದರ್ಭದಲ್ಲಿ ರಾಮರಾಯನ ಸಹಾಯ ದೊರೆಯದೇ ಅಲಿಯು ಒಂಟಿಯಾಗಿ ಯುದ್ಧ ಸಾರಿದನು. ನಿಜಾಮನು ಹೆದರಿ ಓಡಿ ಹೋದನು. ಕಲ್ಯಾಣ ಅಲಿಯ ಬಳಿಗೆ ಉಳಿಯಿತು. ಮರಳಿ ಬರುವಾಗ ಪೂರ್ವದ ನಳದುರ್ಗಕ್ಕೆ ‘ಶಾಹದುರ್ಗ’ ಎಂದು ನಾಮಕರಣ ಮಾಡಿ ಪುನುರುಜ್ಜಿವಗೊಳಿಸಿ ನಂತರ ಬಿಜಾಪುರಕ್ಕೆ ಬಂದನು.[೩೪]

ಕ್ರಿ.ಶ. ೧೫೫೮ ರ ವೇಳೆಗೆ ಬಿಜಾಪುರಕ್ಕೆ ಸಂಬಂಧಿಸಿದ ಅನೇಕ ಕೋಟೆಗಳು ರಾಮರಾಯನ ಹತೋಟಿಯಲ್ಲಿದ್ದವು. ಮತ್ತು ಇತರ ಸುಲ್ತಾನರಿಂದ ಯುದ್ಧ ವೆಚ್ಚವಾಗಿ ಇನ್ನೂ ಅನೇಕ ಕೋಟೆಗಳನ್ನು ಪಡೆದುಕೊಳ್ಳುತ್ತಿದ್ದನು. ರಾಮರಾಯನ ಒಡೆದು ಆಳುವ ನೀತಿಯನ್ನು ಅರಿತ ಶಾಹಿ ಸುಲ್ತಾನರು ರಾಮರಾಯನನ್ನು ನಿಗ್ರಹಿಸಲು ಎಲ್ಲರೂ ಸೇರಿ ಒಕ್ಕೂಟ ರಚಿಸಿದರು.[೩೫]

ಒಕ್ಕೂಟ ರಚನೆಯಾಗಲು ಆದಿಲ್‌ಶಾಹಿ ಮತ್ತು ನಿಜಾಮಶಾಹಿ ಮನೆತನಗಳ ಮಧ್ಯ ವೈವಾಹಿಕ ಸಂಬಂಧಗಳನ್ನು ಬೆಳೆಸಿದರು[೩೬]. ಕೊನೆಯಲ್ಲಿ ಬೀದರ ಬಂದು ಸೇರುವುದರೊಂದಿಗೆ ಒಕ್ಕೂಟ ಪೂರ್ಣವಾಯಿತು.[೩೭] ಕ್ರಿ.ಶ. ೧೫೬೪ ಡಿಸೆಂಬರ ೨೪ ರಂದು ಸೋಲಾಪುರದಿಂದ ಹೊರಟ ಒಕ್ಕೂಟ ಸೈನ್ಯ ತಾಳಿಕೋಟೆ ಹತ್ತಿರ ಡೇರೆ ಹೂಡಿತು. ವಿಜಯನಗರದಿಂದ ರಾಮರಾಯನು ತನ್ನ ಸಹೋದರರಾದ ತಿರುಮಲ ಮತ್ತು ವೆಂಕಟಾದ್ರಿರೊಂದಿಗೆ ಬಂದನು. ಕ್ರಿ.ಶ. ೧೫೬೫ ಜನವರಿ ೨೩ ರಂದು ನಡೆದ ಭೀಕರ ಯುದ್ಧದಲ್ಲಿ ಒಕ್ಕೂಟ ಸೈನ್ಯಕ್ಕೆ ವಿಜಯವಾಯಿತು.[೩೮]

ತಾಳಿಕೋಟೆ ಯುದ್ಧದಲ್ಲಿ ರಚನೆಯಾದ ಮುಸ್ಲಿಂ ಒಕ್ಕೂಟ ಬಹಳ ದಿನ ಉಳಿಯಲ್ಲಿಲ್ಲ. ಕ್ರಿ.ಶ. ೧೫೭೦ ರಲ್ಲಿ ಅಲಿಯು ಪೋರ್ಚುಗೀಸರನ್ನು ರಾಜ್ಯದಿಂದ ಹೊರಹಾಕಲು ಪ್ರಯತ್ನಿಸಿ ವಿಫಲನಾದನು. ನಂತರ ಕ್ರಿ.ಶ. ೧೫೭೧ ಮತ್ತು ೧೫೭೬ ರಲ್ಲಿ ಅವರೊಂದಿಗೆ ಒಪ್ಪಂದ ಮಾಡಿಕೊಂಡನು. ಇದರಿಂದಾಗಿ ಪೋರ್ಚುಗೀಸರಿಂದ ಕುದರೆ ಖರೀದಿಸಲು ಸ್ವತಂತ್ರನಾದನು. ಪ್ರತಿ ಕುದರೆಗೆ ೪೦ ಟಂಕಗಳನ್ನು ಸುಂಕವಾಗಿ ಅವರಿಗೆ ಕೊಡುವಂತಾಯಿತು.[೩೯] ಕ್ರಿ.ಶ. ೧೫೭೫ ರಲ್ಲಿ ವಿಜಯನಗರದ ರಾಜಧಾನಿ ಪೇನುಗೊಂಡದ ಮೇಲೆ ದಾಳಿ ಮಾಡಿ ಬರಿಗೈಯಲ್ಲಿ ಹಿಂದುರಿಗಿದನು.[೪೦]

ಕ್ರಿ.ಶ. ೧೫೭೬ ರಲ್ಲಿ ಅಕ್ಬರನ ರಾಯಭಾರಿ ಐನ್–ಉಲ್–ಮುಲ್ಕ್ ಶಿರಾಜಿ ಬಿಜಾಪುರಕ್ಕೆ ಬಂದಾಗ ಅವನಿಗೆ ಭವ್ಯ ಸ್ವಾಗತ ದೊರೆಯಿತು. ಅವನು ವಾಪಸ್ಸಾಗುವಾಗ ಅಲಿಯು ‘ರಕ್ಷಿದ–ಉಲ್–ಮುಲ್ಕ್’

ಎಂಬುವನನ್ನು ತನ್ನ ಪ್ರತಿನಿಧಿಯಾಗಿ ಕಳುಹಿಸಿದನು. ನಂತರ ಖ್ವಾಜಾ ಅಬ್ದುಲ್ಲಾ ಎಂಬುವನು ಅಕ್ಬರನ ಆಸ್ಥಾನದಲ್ಲಿ ಬಿಜಾಪುರದ ರಾಯಭಾರಿಯಾಗಿದ್ದನು. ಆತನು ಬಿಜಾಪುರಕ್ಕೆ ಮರುಳುವಾಗ ಆತನೊಂದಿಗೆ ವೈದ್ಯನೂ ಮತ್ತು ಇಂಜಿನೀಯರನೂ ಆದ ಅಲಿ ಗಿಲಾನಿ ಬಂದನು. ಅವನು ಅಲಿಗೆ ಅಕ್ಬರನೊಂದಿಗೆ ಸ್ನೇಹದೊಂದಿಗೆ ಇರುವುದು ಒಳ್ಳೆಯದೆಂದು ತಿಳಿಸಿದನು.[೪೧]

ಈ ನಡುವೆ ಅಹಮ್ಮದ ನಗರ ಬೀದರ ಮೇಲೆ ದಾಳಿ ಮಾಡಿದಾಗ ಅಲಿ ಬೀದರಿನ ಸಹಾಯಕ್ಕೆ ಹೋದನು. ಈ ಸಹಾಯದ ಪ್ರತಿಯಾಗಿ ಬರೀದನು ತನ್ನ ಆಸ್ಥಾನದ ಇಬ್ಬರು ಶಿಖಂಡಿಗಳನ್ನು ಬಿಜಾಪುರಕ್ಕೆ ಕಳಿಸಿದನು. ಅವರಲ್ಲಿ ಒಬ್ಬನು ಕ್ರಿ.ಶ. ೧೫೮೦ ರಲ್ಲಿ ಅಲಿಯನ್ನು ಇರಿದು ಕೊಂದಿದ್ದರಿಂದ ಅಲಿ ಆದಿಲ್‌ಶಾಹನ ಅಂತ್ಯವಾಯಿತು. ಅವನ ಶವವನ್ನು ಬಿಜಾಪುರದಲ್ಲಿಯೇ ಸಮಾಧಿ ಮಾಡಲಾಯಿತು.[೪೨] ಅಲಿಯು ಸರಳ ಜೀವನ ನಡೆಸಿ, ಸನ್ಯಾಸಿಯಂತೆ ಉಡುಗೆ ತೊಟ್ಟು, ಹಿಂದೂ ಮುಸ್ಲಿಂ ಸಂತರ ಮಧ್ಯ ಫಕೀರನಂತಿರುತ್ತಿದ್ದನೆಂದು ಫೆರಿಸ್ತಾ ಹೇಳುತ್ತಾನೆ. ಅಲಿಗೆ ಮಕ್ಕಳಿಲ್ಲದ ಕಾರಣ ಅವನ ಸಹೋದರನ ಮಗ ಒಂಬತ್ತು ವರ್ಷದ ಬಾಲಕ ಎರಡನೆಯ ಇಬ್ರಾಹಿಂ ಆದಿಲ್‌ಶಾಹ ಅಧಿಕಾರಕ್ಕೆ ಬಂದನು.[೪೩]

ಎರಡನೆಯ ಇಬ್ರಾಹಿಂ ಆದಿಲ್‌ಶಾಹ (ಕ್ರಿ.ಶ. ೧೫೮೦-೧೬೨೭) :

ಇಬ್ರಾಹಿಂ ಆದಿಲ್‌ಶಾಹನು ಅಧಿಕಾರಕ್ಕೆ ಬಂದಾಗ ಅಪ್ರಾಪ್ತನಾಗಿದ್ದ ಕಾರಣ ಚಾಂದಬೀಬಿ ಬಾಲಕನ ಆರೈಕೆ ಮತ್ತು ಶಿಕ್ಷಣದ ಜವಾಬ್ದಾರಿಯನ್ನು ವಹಿಸಿಕೊಂಡಳು. ಅಲ್ಲದೇ ರಾಜ್ಯಾಡಳಿತವನ್ನು ನೋಡಿಕೋಳ್ಳಲು ರಾಜಪ್ರತಿನಿಧಿಯನ್ನು ನೇಮಿಸಿದಳು. ಇಬ್ರಾಹಿಂ ಆದಿಲ್‌ಶಾಹನ ಮೊದಲು ಹತ್ತು ವರ್ಷಗಳನ್ನು ರಾಜ ಪ್ರತಿನಿಧಿಗಳೇ ನೋಡಿಕೊಂಡರು. ಕಮಾಲಖಾನ, ಕಿಶ್ವರಖಾನ, ಇಕ್ಲಾಸಖಾನ, ಅಬುಲ್ ಹಸನ ಮತ್ತು ದಿಲಾವರಖಾನ ಹೀಗೆ ಒಟ್ಟು ಐದು ಜನ ರಾಜಪ್ರತಿನಿಧಿಗಳು ಆಡಳಿತ ನಡೆಸಿದರು. ಹತ್ತು ವರ್ಷಗಳ ರಾಜಪ್ರತಿನಿಧಿಗಳ ಆಳ್ವಿಕೆ ಮುಗಿದ ನಂತರ ಇಬ್ರಾಹಿಂ ಆದಿಲ್‌ಶಾಹನು ಸ್ವತಂತ್ರ ಆಳ್ವಿಕೆ ಪ್ರಾರಂಭಿಸಿದನು.

ಬಿಜಾಪುರದಲ್ಲಿ ನಡೆದ ಅಂತ: ಕಲಹಗಳಿಂದಾಗಿ ಸಾಮಂತ ರಾಜರು ಸ್ವತಂತ್ರರಂತೆ ವರ್ತಿಸಿದಾಗ ಇಬ್ರಾಹಿಂ ಆದಿಲ್‌ಶಾಹನು ಮಂಜುಖಾನನ ಸಹಾಯದಿಂದ ಅವರನ್ನು ನಿಯಂತ್ರಿಸಿ ಮೈಸೂರನ್ನು ವಶಪಡಿಸಿಕೊಂಡನಾದರು ಮಂಜುಖಾನನು ಅಲ್ಲಿಂದ ಮರಳಿದ ನಂತರ ಮೈಸೂರಿನ ರಾಜನು ತನ್ನ ಪ್ರದೇಶಗಳನ್ನು ಮತ್ತೆ ವಶಪಡಿಸಿಕೊಂಡನು.[೪೪] ಈ ಹಿಂದೆ ಇಬ್ರಾಹಿಂ ಆದಿಲ್‌ಶಾಹನಿಂದ ಪರಾಭವಗೊಂಡಿದ್ದ ಬುರ್ಹಾನ ನಿಜಾಮಶಾಹನು ಸೇಡು ತಿರಿಸಿಕೊಳ್ಳಲು ಗೋಲ್ಕೊಂಡದ ಕುಲಿ ಕುತುಬಶಾಹನೊಂದಿಗೆ ಒಪ್ಪಂದ ಮಾಡಿಕೊಂಡು ಆದಿಲ್‌ಶಾಹನ ಮೇಲೆ ದಾಳಿ ಮಾಡಲು ನಿರ್ಧರಿಸಿದನು.[೪೫] ಇದನೆಲ್ಲ ಎದುರಿಸಲು ಸಿದ್ಧನಾಗಿದ್ದ ಇಬ್ರಾಹಿಂ ಆದಿಲ್‌ಶಾಹನು ತನ್ನ ಯುಕ್ತಿಯಿಂದ ಕಾರ್ಯ ನಿರ್ವಹಿಸಿದನು. ಕ್ರಿ.ಶ. ೧೫೯೫ ರಲ್ಲಿ ಬುರ್ಹಾನ ನಿಜಾಮಶಾಹ ಮರಣ ಹೊಂದಿದ್ದರಿಂದ ಇಬ್ರಾಹಿಂ ನಿಜಾಮಶಾಹ ಅಧಿಕಾರಕ್ಕೆ ಬಂದನು. ಅವನ ಮೇಲೆ ದಾಳಿ ಮಾಡಿದ ಆದಿಲ್‌ಶಾಹ ವಿಜಯಿಯಾಗಿ ಅಹಮ್ಮದ ನಗರವನ್ನು ಪ್ರವೇಶಿಸಿದನು.[೪೬]

ಕ್ರಿ.ಶ. ೧೫೯೦ ರ ನಂತರ ಅಕ್ಬರನು ದಕ್ಷಿಣದಲ್ಲಿ ಪ್ರಾಬಲ್ಯ ಮೆರೆಯುವಸಲುವಾಗಿ ತನ್ನ ಮಗ ದಿಯಾಲ ಹಾಗೂ ಮುರಾದರನ್ನು ಭಾರಿ ಸೈನ್ಯದೊಂದಿಗೆ ಕಳುಹಿಸಿದನು.[೪೭] ಕ್ರಿ.ಶ. ೧೫೯೫ರ ಡಿಸೆಂಬರನಲ್ಲಿ ದನಿಯಾಲ ಅಹಮ್ಮದ ನಗರಕ್ಕೆ ಮುತ್ತಿಗೆ ಹಾಕಿದನು. ಕ್ರಿ.ಶ. ೧೫೯೬ ಫೆಬ್ರುವರಿ ೨೦ ರಂದು ಮುರಾದನು ಬಲವಾದ ಆಕ್ರಮಣ ಮಾಡಲು ಚಾಂದಬೀಬಿ ಅವನನ್ನು ಸೋಲಿಸಿ ಹಿಮ್ಮೆಟ್ಟಿಸಿದಳು. ಕ್ರಿ.ಶ. ೧೫೯೭ ರಲ್ಲಿ ದನಿಯಾಲನು ಮತ್ತೆ ಅಹಮ್ಮದನಗರವನ್ನು ಮುತ್ತಿಗೆ ಹಾಕಲು, ಮೊಗಲ ದಾಳಿಯಿಂದ ಬೇಸತ್ತು ಹೋಗಿದ್ದ ಚಾಂದಬೀಬಿ ಕೋಟೆಯನ್ನು ಒಪ್ಪಿಸಲು ನಿರ್ಧರಿಸಿ, ಕೊನೆಗೆ ಕೊಲೆಯಾದಳು. ಕ್ರಿ.ಶ. ೧೬೦೦ ರಲ್ಲಿ ನಿಜಾಮಶಾಹಿ ರಾಜ್ಯ ಪತನಗೊಂಡಿತು. ಮುಂದೆ ಇಥಿಯೋಪಿಯನ ಮೂಲದ ಮಲ್ಲಿಕ ಅಂಬರನು ಮಾತ್ರ ಮೊಗಲರೊಂದಿಗೆ ಪ್ರತಿಭಟನೆ ಮಾಡಿದನು.[೪೮]

ಸೋನೆಪೇಟೆಯಲ್ಲಿ ಸೋತ ನಂತರ ಬಿಜಾಪುರಕ್ಕೆ ಬಂದ ಇಬ್ರಾಹಿಂ ಆದಿಲ್‌ಶಾಹನು ಬಿಜಾಪುರದ ಹೊರವಲಯದಲ್ಲಿ ನವರಸಪುರ ಎಂಬ ಹೊಸ ನಗರದ ನಿರ್ಮಾಣ ಕಾರ್ಯದಲ್ಲಿ ನಿರತನಾದನು. ಈ ವೇಳೆಗೆ ಅಕ್ಬರನ ದಾಳಿಗಳಿಂದ ಕಣ್ಣು ತೆರೆದ ದಕ್ಷಿಣದ ಸುಲ್ತಾನರಲ್ಲಿ ಇಬ್ರಾಹಿಂ ಆದಿಲ್‌ಶಾಹನು ಮೊಗಲರೊಂದಿಗೆ ವೈವಾಹಿಕ ಸಂಬಂಧ ಏರ್ಪಡಿಸುವ ನೆಪದಲ್ಲಿ ದಿನಗಳನ್ನು ಕಳೆದನು. ನಂತರ ದನಿಯಾಲನಿಗರ ತನ್ನ ಮಗಳನ್ನು ಕೊಟ್ಟು ಮದುವೆ ಮಾಡಿದನು. ಕ್ರಿ.ಶ. ೧೬೦೫ ರಲ್ಲಿ ಅಕ್ಬರನು ನಿಧನ ಹೊಂದಿದ ನಂತರ ದಕ್ಷಿಣದ ರಾಜ್ಯಗಳು ನಿಟ್ಟುಸಿರು ಬಿಟ್ಟವು.[೪೯]

ಚಾಂದಬೀಬಿಯ ಮರಣದ ನಂತರ, ಗುಲಾಮನಾಗಿದ್ದ ಹಬಸಿ ಮಲ್ಲಿಕ ಅಂಬರನು ಕರ್ಖಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸತೊಡಗಿದನು. ಹಾಗೂ ಮೊಗಲರ ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡನು. ಹಾಗಾಗಿ ಜಹಾಂಗೀರನು ಮಲ್ಲಿಕ ಅಂಬರನ ಮೇಲೆ ಸೈನ್ಯ ಕಳುಹಿಸಿ ಇಬ್ರಾಹಿಂ ಆದಿಲ್‌ಶಾಹನಿಗೆ ತಟಸ್ಥನಾಗಿರಲು ತಿಳಿಸಿದನು. ಮಲ್ಲಕ ಅಂಬರನು ಆದಿಲ್‌ಶಾಹಿ ಸೈನ್ಯದ ಸಹಾಯ ಪಡೆದುಕೊಂಡು ಮೊಗಲರ ಸೈನ್ಯವನ್ನು ಹಿಮ್ಮೆಟ್ಟಿಸಿ ಅಹಮ್ಮದ ನಗರವನ್ನು ವಶಪಡಿಸಿಕೊಂಡನು.[೫೦] ಅಂಬರನ ಏಳಿಗೆಯನ್ನು ಸಹಿಸದ ಇಬ್ರಾಹಿಂ ಆದಿಲ್‌ಶಾಹನು ಕ್ರಿ.ಶ. ೧೬೧೩ ರಲ್ಲಿ ಜಹಾಂಗೀರನ ಆಸ್ಥಾನಕ್ಕೆ ತನ್ನ ಪ್ರತಿನಿಧಿಯನ್ನು ಕಳಿಸಿ ಹಿಂದೆ ಕಳೆದುಕೊಂಡ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ತಿಳಿಸಿದನು.[೫೧] ಈ ಮಧ್ಯ ಖುರ್‍ರಂ ಮತ್ತು ಖಾನ-ಎ-ಖಾನರು ಅಂಬರನನ್ನು ಸೋಲಿಸಿ ಅವನ ಅಧಿಕಾರಗಳನ್ನು ದೌಲತಬಾದ ಮತ್ತು ಸುತ್ತಮುತ್ತಲಿನ ಕೋಟೆಗಳಿಗೆ ಸೀಮಿತಗೊಳಿಸಿದನು. ಆಗ ಕ್ರಿ.ಶ. ೧೬೧೫ ರಲ್ಲಿ ಇಬ್ರಾಹಿಂ ಆದಿಲ್‌ಶಾಹನು ಜಹಾಂಗೀರನಿಗೆ ಉಡುಗೊರೆಗಳನ್ನು ಕಳಿಸಿ ಸ್ನೇಹ ಬೆಳೆಸಿದನು.[೫೨] ಇದರಿಂದಾಗಿ ಮೊಗಲ ದೊರೆ ಜಹಾಂಗೀರನು ಇಬ್ರಾಹಿಂ ಆದಿಲ್‌ಶಾಹನನ್ನು ' ಫರಝುಂದ್ ' (ಪುತ್ರ) ಎಂಬ ಬಿರುದಿನಿಂದ ಗೌರವಿಸಿದರನು. ಜೊತೆಗೆ ಇವನನ್ನು ದಕ್ಷಿಣದ ನಾಯಕನೆಂದು ನೇಮಿಸಿದನು. ಇದರಿಂದ ಪ್ರೇರಿತನಾದ ಇಬ್ರಾಹಿಂನು ೧೬೧೯ ರಲ್ಲಿ ಬೀದರನ್ನು ವಶಪಡಿಸಿಕೊಂಡನು.[೫೩]

ಉತ್ತರದಲ್ಲಿ ಷಹಾಜಹಾನು ತನ್ನ ತಂದೆ ವಿರುದ್ಧ ದಂಗೆಯದ್ದು ಸುಲ್ತಾನನಾಗಲು ಮಲ್ಲಿಕ ಅಂಬರ ಮತ್ತು ಇಬ್ರಾಹಿಂನ ಸಹಾಯ ಕೋರಿದನು. ಆದರೆ ಅವರು ಈ ಆಂತರೀಕ ವಿಷಯದಲ್ಲಿ ತಲೆ ಹಾಕಲಿಲ್ಲ. ಇದರಿಂದ ಷಾಹಾಜಹಾನನಿಗೆ ನಿರಾಸೆಯಾಯಿತು.[೫೪]

ಈ ನಡುವೆ ಇಬ್ರಾಹಿಂ ಆದಿಲ್‌ಶಾಹ ಮತ್ತು ಮಲ್ಲಿಕ ಅಂಬರನ ಮಧ್ಯೆ ಪ್ರಬಲರಾಗಲು ಸ್ಪರ್ಧೆ ಏರ್ಪಟ್ಟಿತು. ಇಬ್ರಾಹಿಂನು ಮೊಗಲರ ಸಹಾಯ ಪಡೆದುಕೊಳ್ಳುವಲ್ಲಿ ಸಫಲನಾದರೆ[೫೫] ಅಂಬರನು ಗೊಲ್ಕೊಂಡ ಮೈತ್ರಿ ಬುಸಿದನಾದರೂ ಅವನಿಗೆ ಸಹಾಯ ದೊರೆಯಲ್ಲಿಲ್ಲ.[೫೬] ನಂತರ ಅಂಬರ ಬೀದರ ಲೂಟಿ ಮಾಡಿ ಬಿಜಾಪುರಕ್ಕೆ ಮುತ್ತಿಗೆ ಹಾಕಿದನು. ಬಿಜಾಪುರದ ಸಹಾಯಕ್ಕೆ ಬಂದ ಮೊಗಲ ಸೈನ್ಯಗಳನ್ನು ಸೋಲಿಸಿದನು. ಅಲ್ಲದೆ ನವರಸಪುರವನ್ನು ಹಾಳು ಮಾಡಿದನು. ಆಗ ಇಬ್ರಾಹಿಂನು ಅಸಹಾಯಕನಾಗಿ ಬಿಜಾಪುರದ ಕೋಟೆಯಲ್ಲಿ ಅವಿತು ಕುಳಿತನು.[೫೭] ಈ ವೇಳೆಗೆ ಷಹಾಜಿಯು ಅಂಬರನಿಂದ ಸರಿಯಾದ ಮನ್ನಣೆ ಸಿಗಲಿಲ್ಲವೆಂದು ಬಿಜಾಪುರಕ್ಕೆ ಬಂದಾಗ ಅವನಿಗೆ ಭವ್ಯ ಸ್ವಾಗತ ದೊರೆಯಿತು.[೫೮] ಇಬ್ರಾಹಿಂ ಆದಿಲ್‌ಶಾಹನು ಅಂಬರನ ಮೇಲೆ ಸೇಡು ತೀರಿಸಿಕೊಳ್ಳಬೇಕು ಎನ್ನುವಷ್ಟರಲ್ಲಿಯೇ ಕ್ರಿ.ಶ. ೧೬೨೬ರ ಮೇ ತಿಂಗಳಲ್ಲಿ ಅಂಬರನು ಮರಣ ಹೊಂದಿದನು. ಸ್ವಲ್ಪ ದಿನಗಳ ನಂತರ ಇಬ್ರಾಹಿಂನು ಕೂಡ ಕ್ರಿ.ಶ. ೧೬೨೭ ರಲ್ಲಿ ಅಸುನೀಗಿದನು. ಅವನೇ ನಿರ್ಮಿಸಿದ ಇಬ್ರಾಹಿಂ ರೋಜಾದಲ್ಲಿ ಅವನನ್ನು ದಫನ (ಸಮಾದಿ) ಮಾಡಲಾಯಿತು.[೫೯]

ಆದಿಲ್‌ಶಾಹಿ ಮನೆತನದಲ್ಲಿಯೇ ಶ್ರೇಷ್ಠನಾದ ಇಬ್ರಾಹಿಂನು ಸಾಹಿತ್ಯ, ಸಂಗೀತಗಳ ಕಲಾಕಾರನು, ಸರ್ವಧರ್ಮಸಹಿಷ್ಣು ಆಗಿದ್ದರಿಂದ ಪ್ರಜೆಗಳು ಅವನನ್ನು 'ಜಗದ್ಗುರು' ಎಂದು ಕರೆದರು. "ಕಿತಾಬ-ಎ-ನೌರಸ" ಪ್ರಪಂಚಕ್ಕೆ ನೀಡಿದ ಅಪೂರ್ವ ಕಾಣಿಕೆಯಾಗಿದೆ. ಅಲ್ಲದೆ ನವರಸಪುರದಲ್ಲಿ ಸಂಗೀತ ಮಹಲ ಕಟ್ಟಿಸಿದನು. ತನ್ನ ಹೆಂಡತಿಗಾಗಿ ಇಬ್ರಾಹಿಂ ರೋಜಾ ಕಟ್ಟಿಸಿದನು. ಈತನ ಕಾಲದಲ್ಲಿ ನಿರ್ಮಾಣಗೊಂಡ ಆನಂದ ಮಹಲ, ಜಲಮಹಲ, ಸಾತ ಮಂಜಿಲ್, ತಾಜಬಾವಡಿ ಮಲಿಕಾ-ಎ-ಜಹಾನ ಮಸೀದೆ ಮುಂತಾದವುಗಳು ಇವನ ಕಲಾ ಪ್ರೇಮಕ್ಕೆ ಸಾಕ್ಷಿಯಾಗಿವೆ.[೬೦]

ಅಡಿಟಿಪ್ಪಣಿಗಳು:

1) Briggs, Johan, 1966,*History of the Rise of the Mohammedan Power in India,* Vol,III, Munshiram Manoharlal Publisher, Pvt Ltd, Delhi P-1-7 ಮೈ.ಸ್ಟೈ.ಗೆ (ಬಿ) ೧೯೬೬, ಪು-೧
2) Ibid,p-1-7
3) Briggs, Johan, 1966, *History of the Rise of the Mohammedan Power in India,* Vol,III, Munshiram Manoharlal Publisher, Pvt Ltd, Delhi P-4
4) Sherwani, H.K. and Joshi,1974, *History of Medieval Deccan,* Vol-I, Government of Amdhra Pradesh, Hyderabad, p-21
5) Ibid, p-21
6) ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೪ ಪು-೬೬-೬೭
7) ಅದೇ ಪು-೬೭
8) ಅದೇ ಪು-೬೭
9) Briggs, P-5 Nayeem, M.A' 2000, *External Relations of Bijapur kingdom',* Bright Publisher, Hyderabad, P-20-21
10) ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ- ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೬೮
11) Nayeem, M.A op.cit, P-21
12) Ibid
13) ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ, ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೭೨-೭೩
14) Briggs, Johan,1966.*History of the Rise of the Mohammedan Power in India,* Vol III, Delhi, pp-19-20
15) Sherwani and Joshi'op.cit, I P-306
16) Ibid, P-306-7
17) Nayeem, M.A op.cit, P-23

18)ಕ.ಸ್ಟೆಗೆ ೧ ಪು-೩೧೦, ಷೇಕ ಅಲಿ ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ, ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೭೪-೭೬

19)ಷೇಕ ಅಲಿ. ಬಿ. ೧೯೯೭,*ಕರ್ನಾಟಕ ಚರಿತ್ರೆ',* ಸಂ ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೭೬

20) Joshi,P.M. *The Raichur Doab In Deccan History,* J.I.H.1958 P-383

ಕುಲಕರ್ಣಿ, ಕೆ. ಕೆ. ೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾ’ಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು -೩೪-೩೯

21)ಷೇಕ ಅಲಿ. ಬಿ.೧೯೯೭ *ಕರ್ನಾಟಕ ಚರಿತ್ರೆ.* ಸಂ ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೭೮

22) Sherwani and Joshi op.cit, P-314

23)Ibid, Nayeem, M.A op.cit, P-22

24)Ibid, 316, Nayeem, M.A op.cit, P-22

25)ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೮೪

26)ಶಿವುಡನವರ ಜಗದೀಶ. ೨೦೦೩, *ದಖನ ಸುಲ್ತಾನರು*, ವಿದ್ಯಾನಿಧಿ ಪ್ರಕಾಶನ ಗದಗ, ಪು-೭೩

27)ಷೇಕ ಅಲಿ. ಬಿ. ೧೯೯೭ *ಕರ್ನಾಟಕ ಚರಿತ್ರೆ* ಸಂ ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೮೬

28)ಕುಲಕರ್ಣಿ ಕೆ.ಕೆ, ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು*, ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ವಿಜಾಪುರ ಪು-೭೭-೭೮

29)ಅದೇ ಪು-೭೮

30)ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೮೬-೮೭

31)Briggs, Johan, *History of Rise of Mohammedan Power in India,* Vol-III, Munshiram Manoharlal Publisher, Pvt Ltd, Delhi P-71

32)ಕುಲಕರ್ಣಿ,ಕೆ.ಕೆ, ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು*, ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ವಿಜಾಪುರ ಪು-೭೯

33)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೩೬-೧೩೭

34)ಕುಲಕರ್ಣಿ.ಕೆ. ಕೆ, ೧೯೯೯, *ಬುಸಾತಿನ ಸಲಾತೀನ*(ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೭೪-೭೫

35)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೩೭

36)ಕುಲಕರ್ಣಿ.ಕೆ.ಕೆ. ೧೯೯೯. *ಬುಸಾತಿನ ಸಲಾತಿನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೭೯

37)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೩೭

38)ಅದೇ, ಪು-೧೩೮-೧೩೯

39)ಅದೇ, ಪು-೧೩೯

40)ಅದೇ, ಪು-೧೩೯-೧೪೦

41)ಕುಲಕರ್ಣಿ, ಕೆ.ಕೆ, ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು*, ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ವಿಜಾಪುರ ಪು-೯೫

42)ಅದೇ, ಪು-೯೫

43)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೪೦

44)ಷೇಕ ಅಲಿ. ಬಿ.೧೯೯೭, *ಕರ್ನಾಟಕ ಚರಿತ್ರೆ* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೧೦೧

45)ಅದೇ, ಪು-೧೦೧-೧೦೨

46)ಅದೇ, ಪು-೧೦೩

47)ಕುಲಕರ್ಣಿ, ಕೆ.ಕೆ, ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು*, ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ವಿಜಾಪುರ ಪು-೧೦೮

48)ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ. ಸಂ* ೪. ಪ್ರಸಾರಾ'ಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೧೦೩-೧೦೪

49)ಕುಲಕರ್ಣಿ, ಕೆ.ಕೆ, ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು*, ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ವಿಜಾಪುರ ಪು-೧೦೯-೧೧೦

50)ಅದೇ, ಪು-೧೧೧

51)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೪೩

52)ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ.* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೧೦೬

53)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೪೩

54)ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ.* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೧೦೭

55)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೪೪

56)ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ.* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೧೦೭

57)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೪೪

58)ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ.* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು-೧೦೭

59)ಕಲಕರ್ಣಿ,ಕೆ.ಕೆ, ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು,* ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ವಿಜಾಪುರ ಪು-೧೧೫

60)ಬಿಜಾಪುರ ಜಿಲ್ಲಾ ಗ್ಯಾಸೆಟಿಯರ(ಪರಿಷ್ಕೃತ) ಪು-೧೪೪

ಅಧ್ಯಾಯ ೨
ಪ್ರಾರಂಭಿಕ ಜೀವನ ಮತ್ತು ಸಾಧನೆಗಳು

ಅಧ್ಯಾಯ ೨

ಪ್ರಾರಂಭಿಕ ಜೀವನ ಮತ್ತು ಸಾಧನೆಗಳು

ಆದಿಲ್‌ಶಾಹಿಗಳ ಮನೆತದಲ್ಲಿಯೇ ಅತ್ಯಂತ ಪ್ರಖ್ಯಾತನಾದ ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ಉದಾರ ಮತ್ತು ಸಭ್ಯನಾದ ಸುಲ್ತಾನನಾಗಿದ್ದನು. ಈತನ ಆಳ್ವಿಕೆಯ ಕಾಲ ಪ್ರಗತಿಪರ ವಿಚಾರಗಳ ಕಾಲವಾಗಿತ್ತು. ಹಾಗಾಗಿ ರಾಜ್ಯದ ಉನ್ನತಿಗೆ ಈತನು ನೀಡಿದ ಕೊಡುಗೆ ಅಪಾರವಾದದ್ದು, ಜಾತಿ, ಮತ ಬೇದವನ್ನದೇ ಎಲ್ಲ ಧರ್ಮಗಳನ್ನು ಸಮಾನ ದೃಷ್ಟಿಯಿಂದ ಕಂಡನು. ಈತನು ಸುನ್ನಿ ಪಂಥದವನಾಗಿದ್ದರೂ ಕೂಡ ಶಿಯಾಗಳೊಂದಿಗೆ ಹಾಗೂ ಮುಸ್ಲೀಮೇತರರೊಂದಿಗೆ ಸಹಿಷ್ಣುತಾ ಭಾವ ತಳೆದಿದ್ದನು. ಬಹಳಷ್ಟು ಹಿಂದೂಗಳು ಅದರಲ್ಲೂ ಬ್ರಾಹ್ಮಣ ಮತ್ತು ಮರಾಠರು ಆಡಳಿತಾತ್ಮಕ ಮತ್ತು ಸೈನ್ಯದ ಉನ್ನತ ಹುದ್ದೆಗಳನ್ನಲಂಕರಿಸಿದ್ದರು.[೧] ಈತನ ಆಸ್ಥಾನದಲ್ಲಿದ್ದ ಇತಿಹಾಸಕಾರ ಫೆರಿಸ್ತಾನು ಹೇಳುವಂತೆ ಇಬ್ರಾಹಿಮನು 'ಜಗದ್ಗುರು' ಎಂದೇ ಜನಪ್ರಿತಿಯನಾಗಿದ್ದನು.[೨]

ಈ ರೀತಿಯಾಗಿ ಪ್ರಖ್ಯಾತಿಯನ್ನು ಹೊಂದಿದ್ದ ಇಬ್ರಾಹಿಮನಿಗೆ ಮಲ್ಲಿಕಾ–ಇ–ಜಹಾನ ಬೇಗಂ, ಬೇಗಂ ಕಮಾಲ ಖಾತುನ, ತಾಜಸುಲ್ತಾನಾ ಬೇಗಂ ಹಾಗೂ ಸುಂದರ ಮಹಲ ಬೇಗಂ ಎಂಬ ನಾಲ್ಕು ಜನ ರಾಣಿಯರಿದ್ದು[೩], ಅವರಿಗೆ ದರವೇಶ, ಸುಲೇಮಾನ, ಮಹಮ್ಮದ, ಖಿಜರ ಶಾಹ, ಬುರ್ಹಾನ್ ಎಂಬ ಐದು ಜನ ಗಂಡುಮಕ್ಕಳು ಹಾಗೂ ಜಹುರಾ ಸುಲ್ತಾನಾ, ಸಾಬಿಯಾ ಸುಲ್ತಾನಾ ಬೇಗಂ, ಫಾತೀಮಾ ಸುಲ್ತಾನಾ ಎಂಬ ಮೂರು ಜನ ಹೆಣ್ಣು ಮಕ್ಕಳಿದ್ದರು.[೪]

ಇಬ್ರಾಹಿಮನು ತನ್ನ ಕೊನೆಗಾಲದಲ್ಲಿ ಅತಿಯಾದ ಅನಾರೋಗ್ಯಕ್ಕೆ ಪೀಡಿತನಾದ ಫರ್ಮಲೋಬೆ(Farmalobe) ಎಂಬ ಯುರೋಪಿನ ವೈದ್ಯನಿಂದ ಚಿಕಿತ್ಸೆ ಪಡೆದನೆಂದು ಬಸಾತಿನೆ–ಎ–ಸಲಾತಿನ್ ತಿಳಿಸುತ್ತದೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ೧೬೨೭ ಸೆಪ್ಟಂಬರ ೧೨ನೆ ಬುಧವಾರದ'ಂದು ಇಬ್ರಾಹಿಮ ಮರಣ ಹೊಂದಿದನು. ಆತನ ಶವವನ್ನು ಝೋಹ್ರಾಪುರದಲ್ಲಿ ಸಮಾಧಿ ಮಾಡಲಾಯಿತು.[೫]

ಮಹಮ್ಮದ ಆದಿಲ್‌ಶಾಹನ ಜನನ ಆರಂಭಿಕ ಜೀವನ ಮತ್ತು ಸಿಂಹಾಸನಾರೋಹಣ:

ಜನನ : ಬಿಜಾಪುರ ಆದಿಲ್‌ಶಾಹಿಗಳಲ್ಲಿಯೇ ಅತ್ಯಂತ ಪ್ರಖ್ಯಾತಿಯನ್ನುಗಳಿಸಿದ ಮಹಮ್ಮದ ಆದಿಲ್‌ಶಾಹನು ಕ್ರಿ.ಶ. ೧೬೧೩ರ ಡಿಸೆಂಬರ ತಿಂಗಳಲ್ಲಿ ನವರಸಪುರದಲ್ಲಿ[೬] ಇಬ್ರಾಹಿಮನ ಹಿರಿಯ ರಾಣಿ ಮಲ್ಲಿಕಾ–ಇ–ಜಹಾನ ಬೇಗಂಳ ಮೂರನೆಯ ಮಗನಾಗಿ ಜನಿಸಿದನು.[೭] ಈತನ ಆರೈಕೆಗಾಗಿ 'ಜಿಜಿ ಮಾನ್' ಎಂಬ ಶುಶ್ರೂಷಕಿಯನ್ನು ನೆಮಿಸಲಾಯಿತೆಂದು ಕಿಶ್ವರ್ ಜಾನ್ ಎಂಬ ಮಹಿಳೆ ತಿಳಿಸುತ್ತಾಳೆ. ಈ ಸಂದರ್ಭದಲ್ಲಿ ೨ನೆ ಇಬ್ರಾಹಿಮ ಆದಿಲ್‌ಶಾಹನ ತಾಯಿ 'ಬಡೀ ಸಾಹೆಬಳು' ಇನ್ನೂ ಜೀವಂತವಾಗಿದ್ದಳು.[೮]

ಸಿಂಹಾಸನಾರೋಹಣ:

ಎರಡನೆಯ ಇಬ್ರಾಹಿಮನಿಗೆ ಮಹಮ್ಮದನು ಅತ್ಯಂತ ಪ್ರೀತಿಯ ಮಗನಾಗಿದ್ದನು. ಇಬ್ರಾಹಿಮನು ಅನಾರೋಗ್ಯಕ್ಕೆ ತುತ್ತಾದಾಗ, ತನ್ನ ನಂತರ ಮಹಮ್ಮದನನ್ನೇ ಸಿಂಹಾಸನದ ಮೇಲೆ ಕೂಡಿಸಬೇಕೆಂದು ಖವಾಸಖಾನ ಮತ್ತು ಮಿರ್ಜಾ ಮಹಮ್ಮದ ಅಮೀನನಿಗೆ ತಿಳಿಸಿದನು.[೯] ಇಬ್ರಾಹಿಮನ ಮರಣದ ನಂತರ ಮಿರ್ಜಾ ಮಹಮ್ಮದ, ಅಮೀನ ಮತ್ತು ದೌಲತಖಾನರು ಸುಲ್ತಾನನ ಮರಣದ ವಿಷಯವನ್ನು ಗುಪ್ತವಾಗಿಟ್ಟು ಬಹಮನಿ ಮಂಡಳಿ ಮತ್ತು ರಾಜ್ಯದ ಮುತ್ಸದ್ಧಿ ಮಂಡಳಿಯನ್ನು ಕರೆಸಿ ದಿವಾನ ಖಾನೆಯಲ್ಲಿ ಸಭೆ ಸೇರಿಸಿ ಬಾದಶಾಹನ ಮರಣದ ವಿಷಯವನ್ನು ಮತ್ತು ಆತನ ಕೊನೆಯ ಆಸೆಯನ್ನು ಎಲ್ಲರ ಮುಂದೆ ಪ್ರಸ್ತುತ ಪಡಿಸಲಾಯಿತು. ಆಗ ದಿಯಾನಾತ-ಉಲ್-ಮುಲ್ಕನು "ಇದು ಕಠಿಣವಾದ ಕೆಲಸ, ಹಿರಿಯ ಮಗನು ಇರುವಾಗಲೇ ಕಿರಿಯ ಮಗನನ್ನು ಮುಂದೆ ಮಾಡುತ್ತಿದ್ದಾರೆ. ಹೀಗೆ ಮಾಡುವುದು ದಕ್ಷಿಣ ಜನರ ಹಾಗೆ ಆಗುತ್ತದೆ. ಏಕೆಂದರೆ ತಲೆಯನ್ನು ಬಿಟ್ಟು ಮುಂಡಕ್ಕೆ ಮುಂಡಾಸನ್ನು ಹಾಕಿದ್ದಂತೆ ಕಾಣಿಸುತ್ತದೆ. ಹೀಗೆ ಮಾಡುವುದು ವಿಪರ್ಯಾಸವೆನಿಸುತ್ತದೆ" ಎಂದು ವಿರೋಧ ವ್ಯಕ್ತಪಡಿಸಿದನು.[೧೦]

ಈ ರೀತಿಯಾಗಿ ಸಭೆಯಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿದ್ದರಿಂದ ದೌಲತಖಾನನು ಇಖ್ಲಾಸಖಾನನ ಅಭಿಪ್ರಾಯವನ್ನು ಕೇಳಿದಾಗ ಇಖ್ಲಾಸಖಾನನು " ಈ ವಿಷಯದಲ್ಲಿ 'ಬಡೀ ಸಾಹೇಬಾಳ'' ಸಲಹೆಯನ್ನು ಕೇಳಬೇಕು ಬಾದಷಹರು ಸತ್ತನಂತರ ನಾನು ಕಾರಭಾರ ಮಾಡುವುದಿಲ್ಲ. ರಾಜ್ಯದ ಜಮಾ-ಖರ್ಚಿನ ಕೆಲಸವನ್ನು ನೋಡುವುದಿಲ್ಲ. ದರವೇಶ ಶಾಹ ಮತ್ತು ಮಹಮ್ಮದ ಇವರಿಬ್ಬರೂ ನನ್ನ ಒಡೆಯನ ಮಕ್ಕಳು. ತಮ್ಮಗೂ ಮತ್ತು ಬಡೀ ಸಾಹೇಬಳರ ವಿಚಾರಗಳಿಗೆ ಸರಿ ಕಂಡವರನ್ನು ಸಿಂಹಾಸನದ ಮೇಲೆ ಕೂಡಿಸಿರಿ" ಎಂದು ಹೇಳಿದನು.[೧೧] ಈ ಮಾತನ್ನು ಕೇಳಿದ ದೌಲತಖಾನ ಬಡೀಸಾಹಿಬರ ಬಳಿ ಹೋಗಿ ಪ್ರಸ್ತುತ ವಿಷಯಗಳನ್ನು ತಿಳಿಸಿ ಅವರ ಅಭಿಪ್ರಾಯಕ್ಕೆ ಮನವಿ ಮಾಡಿಕೊಂಡನು. ಆಗ ಬಡೀಸಾಹೆಬಳು ' ಇಬ್ರಾಹಿಮ ಆದಿಲ್‌ಶಾಹನು ಯಾವ ಮಗನನ್ನು ಸಿಂಹಾಸನದ ಮೇಲೆ ಕೂಡಿಸಲು ಆಜ್ಞೆ ಮಾಡಿರುವನೋ ಅವನನ್ನೇ ಸಿಂಹಾಸನದ ಮೇಲೆ ಕೂಡ್ರಿಸಿರಿ'[೧೨] ಎಂದು ಹೇಳಿದರು. ಅನಂತರ ಮಿರ್ಜಾ ಮಹಮ್ಮದ, ಅಮೀನ ಮತ್ತು ದೌಲತಖಾನರು ೧೫ ವರ್ಷದ ಬಾಲಕನಾದ ಮಹಮ್ಮದನನ್ನು ಕ್ರಿ.ಶ. ೧೬೨೭ರ ಸೆಪ್ಟಂಬರ ೧೨ ರಂದು ಸಿಂಹಾಸನದ ಮೇಲೆ ಕೂಡ್ರಿಸಿದರು. ನಂತರ ದರವೇಶ ಶಾಹನ ಕಣ್ಣುಗಳನ್ನು ಕೀಳಿಸಲಾಯಿತು. ಸುಲೇಮಾನ ಮತ್ತು ಸಣ್ಣ ಮಗುವಿನ ಬೆರಳನ್ನು ಕತ್ತರಿಸಲಾಯಿತು. ಮಹಮ್ಮದನಿಗೆ ಸಿಂಹಾಸನ ಏರಲು ಸಹಾಯ ಮಾಡಿದ ಮಿರ್ಜಾ ಮಹಮ್ಮದ ಅಮೀನನಿಗೆ 'ಮುಸ್ತಾಫಾಖಾನ' ಎಂಬ ಪದವಿಯ ಹೆಸರನ್ನು ಕೊಡಲಾಯಿತು. ದೌಲತಖಾನನಿಗೆ 'ಖವಾಸಖಾನ' ಎಂಬ ಬಿರುದು ಪ್ರಾಪ್ತವಾಯಿತು.[೧೩]

ಮಹಮ್ಮದ ಆದಿಲ್‌ಶಾಹನು ಕ್ರಿ.ಶ. ೧೬೩೨-೩೩ ರಲ್ಲಿ ಹಜರತ ಅಬ್ದುರ್ ರಹಮಾನ ಖಾದ್ರಿಯವರ ಮಗಳಾದ ತಾಜ ಜಹಾನ ಬೇಗಂಳನ್ನು[೧೪] ವಿವಾಹವಾದನು. ಅಲ್ಲದೇ ಈತನಿಗೆ ಗೋಲ್ಕೊಂಡದ ಅಬ್ದುಲ್

ಕುತುಬಶಾಹನ ಸಹೋದರಿಯಾದ 'ಖದೀಜಾ ಸುಲ್ತಾನಾ ಮತ್ತು ಉರುಸ್ ಬೇಗಂ ಎಂಬ ಇನ್ನಿಬ್ಬರು ರಾಣಿಯರಿದ್ದರು. ಈತನಿಗೆ ಅಲಿ ಆದಿಲ್‌ಶಾಹ ಎಂಬ ಮಗನಿದ್ದನು.

ಸೈನಿಕ ಸಾಧನೆಗಳು:

೧) ನಿಜಾಂ ಶಾಹನೊಂದಿಗೆ ಹೋರಾಟಃ

ಬಿಜಾಪುರದ ಮೇಲೆ ಬುರ್ಹಾನ್ ನಿಜಾಂ ಶಾಹನ ದಾಳಿ:

ಮಹಮ್ಮದ ಆದಿಲ್‌ಶಾಹನು ಪಟ್ಟಕ್ಕೆ ಬಂದ ವರ್ಷವೇ ಅಂದರೆ ಕ್ರಿ.ಶ. ೧೬೨೭ ರಲ್ಲಿ ಸ್ವತ: ನಿಜಾಂ ಶಾಹನು ಈ ಹಿಂದೆ ತನ್ನ ರಾಜ್ಯದಿಂದ ಕೈಬಿಟ್ಟು ಹೋಗಿದ್ದ ಪ್ರದೇಶಗಳನ್ನು ಮರಳಿ ಪಡೆದುಕೊಳ್ಳುವ ಉದ್ದೇಶದ್ದಿಂದ ಬಿಜಾಪುರ ರಾಜ್ಯದ ಮೇಲೆ ದಾಳಿ ಮಾಡಿದನು.[೧೫] ಮೊದಲು ' ಧಾರೂರದ' ಕೋಟೆಯನ್ನು ವಶಪಡಿಸಿಕೊಳ್ಳುವ ಇಚ್ಚೇಯಿಂದ ಆ ಕೋಟೆಯ ಮೇಲೆ ಆಕ್ರಮಣ ಮಾಡಿದನು. ಇದನ್ನರಿತ ಸುಲ್ತಾನ ಮಹಮ್ಮದ ಆದಿಲ್‌ಶಾಹನು ಬೃಹತ ಗಾತ್ರದ ಸೈನ್ಯವನ್ನು ತನ್ನ ಅಮೀರರೊಂದಿಗೆ ಕಳುಹಿಸಿದನು.[೧೬] ಎರಡು ಸೈನ್ಯಗಳ ಮಧ್ಯೆ ಕಬಸ ದರೂರ[೧೭] ಎಂಬಲ್ಲಿ ದಿನವಿಡಿ ಯುದ್ಧ ನಡೆಯಿತು. ಕೊನೆಯಲ್ಲಿ ಸುಲ್ತಾನನೂ ಜಯಶಾಲಿಯಾದನು. ವೈರಿ ಸೈನ್ಯ ರಣರಂಗದಿಂದ ಓಡಿಹೊಯಿತು. ಆದರೆ ಕೆಲವು ದಿನಗಳ ನಂತರ ನಿಜಾಂ ಶಾಹಿಗಳು ಮತ್ತೆ ಸೈನ್ಯ ಸಂಘಟನೆ ಮಾಡಿಕೊಂಡು, ಆದಿಲ್‌ಶಾಹಿಗಳ ಮೇಲೆ ದಾಳಿ ಮಾಡಿದರು. ಇದರ ಅರಿವು ಬಿಜಾಪುರದ ಸೈನ್ಯಕ್ಕೆ ಇರಲಿಲ್ಲ, ಹಾಗಾಗಿ ಬಿಜಾಪುರದ ಸಾದತಖಾನ ಮತ್ತು ಅಸದಖಾನರನ್ನು ಬಂಧಿಸಿಕೊಂಡು ಹೋದರು. ಆದರೆ ನಿಜಾಂನು ಅವರನ್ನು ಹಿಂಸಿಸದೆ ಅವರೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಿ ಹಿಂದಿರುಗಿ ಹೋಗಲು ಅನುಮತಿ ನೀಡಿದನು.[೧೮]

ಈ ರೀತಿಯಾಗಿ ಕಳೆದುಕೊಂಡ ಪ್ರದೇಶಗಳನ್ನು ಮರಳಿ ಪಡೆಯುವಲ್ಲಿ ಮುಖ್ಯ ಸೇನಾಧಿಕಾರಿಯಾದ ಫತೇಖಾನನು(ಮಲ್ಲಿಕ ಅಂಬರನ ಮಗ) ವಿಫಲನಾಗಿದ್ದರಿಂದ[೧೯] ನಿಜಾಂ ಶಾಹಿಯು ಕೆಲವು ದಿನಗಳ ನಂತರ, ಈ ಹಿಂದೆ ಬಿಜಾಪುರ ಸೈನ್ಯದಲ್ಲಿ ಸೇವೆ ಸಲ್ಲಿಸಿದ ಹಮೀದಖಾನನನ್ನು ತನ್ನ ಸೈನ್ಯದ ಮುಖ್ಯ ಸೇನಾಧಿಕಾರಿಯನ್ನಾಗಿ ನೇಮಿಸಿದರು.[೨೦] ಆಗ ಹಮೀದಖಾನ ತನ್ನ ಸೈನ್ಯದೊಂದಿಗೆ ಆದಿಲ್‌ಶಾಹಿ ರಾಜ್ಯದ ಹೃದಯ ಭಾಗಕ್ಕೆ ಬಂದನು. ಅಲ್ಲಿ ಸ್ವತ: ಮಹಮ್ಮದ ಆದಿಲ್‌ಶಾಹನ ನೇತೃತ್ವದಲ್ಲಿ ಬಂದಿದ್ದ ಸೈನ್ಯವನ್ನು ಕದ್ರಿ ಕನ್ನೂರು ಎಂಬಲ್ಲಿ ಎದುರಿಸಿದನು. ಕ್ರಿ.ಶ. ೧೬೨೮ ಏಪ್ರಿಲ್ ೩ ರಂದು ನಿಜಾಂ ಶಾಹಿ ಸೈನ್ಯ ಸೋಲಲ್ಪಟ್ಟಿತು. ಆದರೆ ಹಮೀದಖಾನ, ರಾತ್ರಿಯ ವೇಳೆಯಲ್ಲಿ ಆದಿಲ್‌ಶಾಹಿ ಪಾಳಯದ ಮೇಲೆ ಹಠಾತ್ ದಾಳಿಮಾಡಿ ಆದಿಲ್‌ಶಾಹಿ ಜನರಲ್ ಆದ ಇಖ್ಲಾಸಖಾನನ್ನು ಅಪಹರಿಸಿ ತಮ್ಮೊಂದಿಗೆ ಕರೆದುಕೊಂಡು ಹೋದರು. ವೈರಿ ಸೈನ್ಯ ರಾಜ್ಯದ ಗಡಿಭಾಗದ ವರೆಗೂ ಮುಸ್ತಾಫಾಖಾನನಿಂದ ಹಿಂಬಾಲಿಸಲ್ಪಟ್ಟಿತು.[೨೧]

ಕದಂರಾವನ ದಂಗೆಯ ದಮನ:

ಬಿಜಾಪುರದ ಸೈನ್ಯ ನಿಜಾಂಶಾಹನೊಂದಿಗೆ ಹೋರಾಡುತ್ತಿರುವ ಸಂದರ್ಭದಲ್ಲಿಯೇ ಬಂಕಾಪುರದ ಕೋಟೆಯಲ್ಲಿ ಕದಮ್‌ರಾವ ನಾಯಕವಾರಿಯು ದಂಗೆಯದ್ದನು. ಅಲ್ಲದೇ ಮೀರ ಅಲಿ ರೆಝಾನನ ಅನುಪಸ್ಥಿತಿಯಲ್ಲಿ ಹವಾಲ್ದಾರನಾಗಿ ಕಾರ್ಯ ನಿರ್ವಹಿಸುತ್ತಿದ್ದ ಮೀರ ಆತನ ಮಗನನ್ನು ಬಂಧನದಲ್ಲಿಟ್ಟನು.[೨೨] ಮಹಮ್ಮದ ಆದಿಲ್‌ಶಾಹನು ಕದಮ್‌ರಾವನನ್ನು ಶಿಕ್ಷಿಸಲು ಮೀರ ಅಂಜುನನ್ನು ಕಳುಹಿಸಿದನು.[೨೩] ಅಲ್ಲದೇ ಮಲ್ನಾಡಿನ ದಂಡಯಾತ್ರೆಯಲ್ಲಿದ್ದ ಮೀರ ಅಲಿ ರೆಝಾನನ್ನು ಹಿಂದೆ ಕರೆಸಿ ಕದಮ್‌ರಾವನ ವಿರುದ್ಧ ಕಳುಸಿದನು. ಬಂಕಾಪುರದ ಮುತ್ತಿಗೆ ಹನ್ನೆರಡು ತಿಂಗಳುಗಳವರೆಗೆ ಮುಂದುವರೆಯಿತು. ೧೬೨೮ರ ಅಕ್ಟೋಬರ್ ೨೮ ರಂದು ಕದಮ್‌ರಾವ ಕೊಲ್ಲಲ್ಪಟ್ಟನು.[೨೪]

ಪರೆಂಡಾ ಕೋಟೆಯ ವಶ:

೧೮ ಜುಲೈ ೧೬೩೨ ರಲ್ಲಿ ಪರೆಂಡಾ ಕೋಟೆಯ ಹವಾಲ್ದಾರನಾದ ಆಕಾ ರೆಝುವಾನ್ (ಈತನಿಗೆ ಹಯ್ಬತ್ ಖಾನ ಎಂಬ ಬಿರುದು ಇತ್ತು) ತನ್ನ ದೊರೆಯಾದ ನಿಜಾಂಶಾಹನ ವಿರುದ್ಧ ದಂಗೆಯದ್ದನು. ಅಲ್ಲದೇ ಬಿಜಾಪುರಕ್ಕೆ ಒಂದು ಪತ್ರವನ್ನು ಬರೆದು. ಅದರಲ್ಲಿ " ಈ ಕೋಟೆಯನ್ನು ನಾನು ನಿಮ್ಮ ಪ್ರಭುತ್ವಕ್ಕೆ ಒಪ್ಪಿಸುತ್ತೆನೆ. ನಿಮ್ಮ ವಶಕ್ಕೆ ತಗೆದುಕೊಳ್ಳಲು ಯಾರಾದರೊಬ್ಬರನ್ನು ದಯಮಾಡಿ ಕಳುಹಿಸಿಕೊಡಿ" ಎಂದು ವಿನಂತಿಸಿಕೊಂಡಿದ್ದನು. ಅದರಂತೆ ಹತ್ತು ಸಾವಿರ ಹೂನ್‌ಗಳ ಕಾಣಿಕೆಯೊಂದಿಗೆ ಮುರಾರಿ ಪಂಡಿತನನ್ನು ಪರೆಂಡಾಗೆ ಕಳುಹಿಸಲಾಯಿತು. ಮುರಾರಿ ಪಂಡಿತನು ಪರೆಂಡಾ ಕೋಟೆಯನ್ನು ತಲುಪಿದಾಗ ಆಕಾ ರೆಝುವಾನನು ಕೋಟೆಯ ಬೀಗವನ್ನು ಹಸ್ತಾಂತರಿಸಿದನು.[೨೫]

ಅದೇ ವರ್ಷ ಅಂದರೆ ೧೬೩೨ ರಲ್ಲಿ ಪರೆಂಡಾ ಕೋಟೆಯಲ್ಲಿದ್ದ ಬೃಹತ್ ಗಾತ್ರದ ' ಮಲಿಕ್-ಎ-ಮೈದಾನ' ತೋಪನ್ನು ಬಿಜಾಪುರಕ್ಕೆ ಕಳುಹಿಸಲು ಮುರಾರಿ ಪಂಡಿತನಿಗೆ ಮಹಮ್ಮದ ಆದಿಲ್‌ಶಾಹನು ಆಜ್ಞೆ ಮಾಡಿದನು.[೨೬] ಆಪ್ರಕಾರವಾಗಿ ಮುರಾರಿ ಪಂಡಿತನು ಆ ಬೃಹತ ಗಾತ್ರದ ತೋಪನ್ನು ಮಳೆಗಾಲದಲ್ಲಿ ಬಿಜಾಪುರಕ್ಕೆ ತಂದನು. ತರುವ ಸಂದರ್ಭದಲ್ಲಿ ಭೀಮಾ ನದಿಯ ಅಲೆಗಳೊಂದಿಗೆ ಸೆಣೆಸಾಡುತ್ತ ಒಂದು ದೊಡ್ಡ ನೌಕೆಯಲ್ಲಿ ಇಡಲಾಯಿತು. ಆದರೆ ಆ ತೋಪಿನ ಬಾರವನ್ನು ತಾಳಲಾರದ ನೌಕೆ ನದಿಯಲ್ಲಿ ಮುಳುಗಿ ಹೋಯಿತು. ನಂತರ ಅತ್ಯಂತ ಪ್ರಯಾಸದ ಮೂಲಕ ತೋಪನ್ನು ನೀರಿನಿಂದ ಮೇಲೆತ್ತಿ ೮ ಸಪ್ಟಂಬರ್ ೧೬೩೨ ರಂದು ಪರೆಂಡಾದಿಂದ ೧೦೦ ಮೈಲು ದೂರದ ಬಿಜಾಪುರಕ್ಕೆ ತರಲಾಯಿತು. ನಂತರ ಎತ್ತರವಾದ ಗೋಪುರದ ಮೇಲೆ ಇಡಲಾಯಿತು. ಈ ತೋಪು ೧೭ನೆ ಶತಮಾನದಲ್ಲಿದ್ದ ತಾಂತ್ರಿಕ ಕೌಶಲ್ಯಗಳನ್ನು ವಿವರಿಸುತ್ತದೆ.[೨೭]

ಮೊಗಲರೊಂದಿಗಿನ ಹೋರಾಟಗಳು:

ಮೊಗಲ ಬಾದಶಹನಾದ ಶಹಾಜಹಾನನು ಬಿಜಾಪುರ ಮತ್ತು ಅಹ್ಮದನಗರಗಳ ಮಧ್ಯ ಸಂಧಾನ ಏರ್ಪಡಿಸಲು ಷೇಕ್ ಮೊಯಿನುದ್ದೀನನನ್ನು ತನ್ನ ರಾಯಭಾರಿಯನ್ನಾಗಿ ದಕ್ಷಿಣಕ್ಕೆ ಕಳುಹಿಸಿದನು.[೨೮] ವಾಸ್ತವದಲ್ಲಿ ಶಹಾಜಹಾನನಿಗೆ ಅದು ಇಷ್ಟವಿರಲಿಲ್ಲ. ಅದರಂತೆಯೇ ರಾಯಭಾರಿಯ ಪ್ರಯತ್ನ ವಿಫಲವಾದಾಗ, ಶಹಾಜಹಾನನು ಬಿಜಾಪುರದ ಸುಲ್ತಾನ ಮಹಮ್ಮದ ಆದಿಲ್‌ಶಾಹನೊಂದಿಗೆ ಸ್ನೇಹ ಬೆಳೆಸಲು ಮುಂದಾದನು. ಆ ಪ್ರಕಾರವಾಗಿ ಮೊಗಲ ರಾಯಭಾರಿಗೆ ಬಿಜಾಪುರದ ಸುಲ್ತಾನನಿಂದ ಸ್ವಾಗತ ದೊರೆಯಿತು.[೨೯]

ಈ ಹಿಂದೆ ಮಲಿಕ್ ಅಂಬರನೊಂದಿಗೆ ಯುದ್ಧ ನಡೆದಾಗ ೨ನೆ ಇಬ್ರಾಹಿಮ ಆದಿಲ್‌ಶಾಹ ಮತ್ತು ಮೊಗಲ್ ಸಾಮ್ರಾಟರ ಮಧ್ಯ ಒಂದು ರಹಸ್ಯವಾದ ಒಪ್ಪಂದ ಏರ್ಪಟ್ಟಿತ್ತು. ಆ ಒಪ್ಪಂದದ ಪ್ರಕಾರ ಆದಿಲ್‌ಶಾಹಿಗಳು ನಿಜಾಮಶಾಹಿಯನ್ನು ಪತನಗೊಳಿಸುವಲ್ಲಿ ಮೊಗಲರಿಗೆ ಸಹಾಯ ಮಾಡಿದರೆ ಕೊಂಕಣ ಪ್ರದೇಶ ಹಾಗೂ ಆದಿಲ್‌ಶಾಹಿಗಳ ಗಡಿಗಳಲ್ಲಿದ್ದ ಕೆಲವು ಕೋಟೆಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಆದರೆ ಮಹಮ್ಮದ ಆದಿಲ್‌ಶಾಹನು ಇದನ್ನು ಮನಸಾರೆ ಒಪ್ಪಿರಲಿಲ್ಲ. ಮುಸ್ತಫಾಖಾನನು ಈ ಸಂಧಾನದ ಪರವಾಗಿದ್ದನು. ನಿಜಾಮಶಾಹಿ ರಾಜ್ಯ ಪತನವಾಗಿ ಅದರ ಪ್ರದೇಶಗಳು ಇಬ್ಭಾಗವಾಗಬೇಕೆಂಬುದೇ ಅವನ ಉದ್ದೇಶವಾಗಿತ್ತು. ಅವನಿಗೆ, ಮಲಿಕ್ ಅಂಬರನ ಕೈಯಲ್ಲಿ ಸತ್ರ ತನ್ನ ಮಾವ ಮಹಮ್ಮದ ಲ್ಯಾರಿಯ ಸೇಡು ತೀರಿಸಿಕೊಳ್ಳಬೇಕಾಗಿತ್ತು. ಆದರೆ ಖವಾಸಖಾನ ಮತ್ತು ಮುರಾರಿ ಪಂಡಿತರು ಮುಸ್ತಫಾಖಾನನ ಅಭಿಪ್ರಾಯಗಳಿಗೆ ವಿರುದ್ಧವಾಗಿದ್ದರು. ಅವರು ಮಹಮ್ಮದ ಆದಿಲ್‌ಶಾಹನು ಮೊಗಲರ ಕರಾರುಗಳಿಗೆ ಒಪ್ಪಬಾರದೆಂದು ಹೇಳುತ್ತಿದ್ದರು. ಏಕೆಂದರೆ ಒಂದು ವೇಳೆ ಮೊಗಲರ ಕರಾರುಗಳಿಗೆ ಒಪ್ಪಿ, ನಿಜಾಮಶಾಹಿಯ ಪ್ರದೇಶಗಳನ್ನು ಮೊಗಲರು ಮತ್ತು ಬಿಜಾಪುರದವರು ಹಂಚಿಕೊಂಡರೆ, ನಾವಾಗಿಯೇ ಅಪಾಯವನ್ನು ಸ್ವಾಗತಿಸಿದಂತಾಗುತ್ತದೆ ಎಂದು ಹೇಳುತ್ತಿದ್ದರು.[೩೦] ಆದರೆ ಮುಸ್ತಫಾಖಾನನ ಪ್ರಯತ್ನ ಯಶಸ್ವಿಯಾಯಿತು. ನಿಜಾಮಶಾಹಿ ರಾಜ್ಯವನ್ನು ತಮ್ಮತಮ್ಮಲ್ಲೇ ಹಂಚಿಕೊಳ್ಳುವ ಒಪ್ಪಂದಕ್ಕೆ ಮೊಗಲ ಬಾದಶಹ ಮತ್ತು ಬಿಜಾಪುರದ ಸುಲ್ತಾನರು ಸಹಿ ಮಾಡಿದರು.[೩೧] ಒಪ್ಪಂದದಂತೆ ನಿಜಾಮಶಾಹಿ ರಾಜ್ಯವನ್ನು ಭಾಗ ಮಾಡಲು ಮೊಗಲ ರಾಯಭಾರಿ ಷೇಕ್ ಮೈನುದ್ದಿನನು ದಕ್ಷಿಣಕ್ಕೆ ಬಂದನು.[೩೨] ನಿಜಾಮಶಾಹಿ ರಾಜ್ಯವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ, ಭೀಮಾ ನದಿಯ ಉತ್ತರ ಭಾಗವನ್ನು ಮೊಗಲರಿಗೂ ಹಾಗೂ ದಕ್ಷಿಣ ಭಾಗವನ್ನು ಆದಿಲ್‌ಶಾಹಿಗಳಿಗೂ ವಹಿಸಿ ಕೊಡಲಾಯಿತು.[೩೩] ನಂತರ ಮೊಗಲ ರಾಯಭಾರಿಯನ್ನು ಸಕಲ ಗೌರವಾದರಗಳು ಹಾಗೂ ಅಪಾರ ಕಾಣಿಕೆಗಳೊಂದಿಗೆ ಬೀಳ್ಕೊಡಲಾಯಿತು. ಈ ಒಪ್ಪಂದದಿಂದಾಗಿ ಬಿಜಾಪುರಿಗಳು ಹಾಗೂ ಮೊಗಲರಿಗೆ ತಮ್ಮ ಮಧ್ಯ ಒಂದು ಆತ್ಮೀಯವಾದ ಸಂಬಂಧ ಉಂಟಾಗಿದೆ ಎಂಬ ಭಾವನೆ ಮೂಡಿತು.[೩೪]

ಧರೂರ ಕದನ :

ಮೊಗಲರು ಮತ್ತು ಆದಿಲ್‌ಶಾಹಿಗಳ ಸಂಧಾನ ಏರ್ಪಡಿಸಿದ ಮೊಗಲ ರಾಯಭಾರಿ ಷೇಕ್ ಮೈನುದ್ದೀನನು ತನ್ನ ರಾಜ್ಯಕ್ಕೆ ಮರಳಿದ ಮೇಲೆ, ಶಹಾಜಹಾನನು ಒಪ್ಪಂದವನ್ನು ಮುರಿದು ಭೀಮಾ ನದಿಯ ದಕ್ಷಿಣಕ್ಕಿರುವ ಧರೂರ ಕೋಟೆಗೆ ತನ್ನ ಸೈನ್ಯವನ್ನು ಕಳುಹಿಸಿದನು.[೩೫] ಒಪ್ಪಂದದ ಪ್ರಕಾರ ಆ ಕೋಟೆಯು ಆದಿಲ್‌ಶಾಹಿಗಳಿಗೆ ಸೇರಬೇಕಾಗಿತ್ತು. ಹಾಗಾಗಿ ಬಿಜಾಪುರದ ಸೇನಾಪತಿ ರಣದುಲ್ಲಾಖಾನನು ಧರೂರ ಕೋಟೆಯನ್ನು ಆದಿಲ್‌ಶಾಹಿಗಳಿಗೆ ಬಿಡಬೇಕೆಂದು ಹೇಳಿದನು. ಆದರೆ ಮೊಗಲರು ಅದಕ್ಕೆ ಒಪ್ಪಲಿಲ್ಲ.[೩೬] ಆಗ ಮಹಮ್ಮದ ಆದಿಲ್‌ಶಾಹನು ಖವಾಸ್‌ಖಾನನ ಸಲಹೆಯಂತೆ ಮೊಗಲ ರಾಯಭಾರಿ ಷೇಕ್ ಮೈನುದ್ದೀನನನ್ನು ಬಿಜಾಪುರದಲ್ಲೇ ಬಂಧಿಸಲು ಆದೇಶಿಸಿದನು. ಅಷ್ಟೊತ್ತಿಗೆ ಷೇಕ್ ಮೈನುದ್ದೀನನು ಬೀದರ ತಲುಪಿದನು.[೩೭] ಹಾಗಾಗಿ ಮಹಮ್ಮದನು ಬೀದರಿನ ಹವಾಲ್ದಾರನಾದ 'ಮಲ್ಲಿಕ್ ಅಂಬರ್ ಜಾನ'ಗೆ ಮೊಗಲ ರಾಯಭಾರಿಯನ್ನು ಬಂಧಿಸಿ ಆತನೊಂದಿಗೆ ಕಳುಹಿಸಿದ ಎಲ್ಲಾ ಕಾಣಿಕೆಗಳನ್ನು ಮರಳಿ ಪಡೆಯಲು ಆದೇಶಿಸಿದನು.[೩೮] ಆ ಪ್ರಕಾರವಾಗಿ ಷೇಕ್ ಮೈನುದ್ದೀನನು ಬಂಧಿಸಲ್ಪಟ್ಟನು. ವಿಷಯ ತಿಳಿದ ಶಹಜಹಾನ ಅನೇಕ ಪತ್ರಗಳನ್ನು ಕಳುಹಿಸಿದರೂ ಎಲ್ಲವೂ ನಿಷ್ಪ್ರಯೋಜಕವಾದವು. ಅದರಿಂದ ಮನನೊಂದ ಶಹಜಹಾನ ತನ್ನ ಸೋದರ ಮಾವನಾದ ಅಸಫ್‌ಖಾನನ (ನೂರ ಜಹಾನ್ ಬೇಗಂಳ ಅಣ್ಣ) ನೇತೃತ್ವದಲ್ಲಿ ತನ್ನ ಸರದಾರರಾದ ಅಬ್ದುಲ್ಲಾಖಾನ, ಖಾನಾಜಾದಾಖಾನ, ಬಹದ್ದೂರ್‌ಖಾನ, ಅಮೀದತ್‌ಖಾನ, ರಾಜಾಕಪಸಿಂಗ, ರಾಜಾರಾಮ ರೊಂದಿಗೆ[೩೯] ದೊಡ್ಡ ಸೈನ್ಯವನ್ನು ಕಳುಹಿಸಿದನು. ಮೊಗಲ ಸೈನ್ಯ ಹಸನಾಬಾದ (ಗುಲ್ಬರ್ಗಾ) ಬಳಿಗೆ ಬಂದೊಡನೆಯೇ ಸುತ್ತ-ಮುತ್ತಲಿನ ಪ್ರದೇಶಗಳನ್ನು ಸುಲಿಗೆ ಮಾಡಲು ಪ್ರಾರಂಭಿಸಿದರು. ಮತ್ತು ಸಯ್ಯದ ಮೊಹಮ್ಮದ ಹುಸೇನಿ ಗೇಸುದರಾಜ್ ದರ್ಗಾದ ಮುಜಾವರಗಳನ್ನು ಪೀಡಿಸಲು ಪ್ರಾರಂಭಿಸಿದರು, ದಾರಿಯುದ್ದಕ್ಕೂ ಲೂಟಿ ಮಾಡುತ್ತ, ಪ್ರದೇಶಗಳನ್ನು ಹಾಳು ಮಾಡುತ್ತ ಬಿಜಾಪುರದ ಹತ್ತಿರದ ಶಾಹಪುರದಿಂದ ಒಂದು ಹರದಾರಿ ದೂರವಿರುವ ರಂಗಾರಿಯ-ಹೌಜಿನ ವರೆಗೆ ಬಂದು ಬೀಡುಬಿಟ್ಟರು, ಎಲ್ಲಾ ಜನರು ಭಯಭಿತರಾದರು ಆದರೆ ಮಹಮ್ಮದ ಆದಿಲ್‌ಶಾಹ ಮೊಗಲರನ್ನು ಸಮರ್ಥವಾಗಿ ಎದುರಿಸಿ ಸೋಲಿಸಿದನು.[೪೦]

ಅನಿಯಮಿತ ಹೋರಾಟಗಳು :

ಕ್ರಿ.ಶ. ೧೬೩೨ ಫೆಬ್ರವರಿ ೧೩ ರಂದು ಮೊಗಲರು ಮತ್ತೆ ಮುತ್ತಿಗೆ ಹಾಕಿದರು. ಅವರ ಐದು ಜನ ಸರದಾರ (ವಜೀರ) ರು ಕೊಲ್ಲಲ್ಪಟ್ಟರು. ಬಿಜಾಪುರ ಸೈನ್ಯವು ಷೇಕ್ ಜಂಗ್‌ಖಾನನ ಮಗ ಸಿಕಂದರ ಅಲಿಯನ್ನು ಕಳೆದುಕೊಂಡಿತು. ಅಂದಿನಿಂದ ಮೊಗಲ ಸೈನ್ಯ ವಿವಿಧ ದ್ವಾರಗಳ ಮೇಲೆ ದಾಳಿ ಮಾಡಿತು. ಆದರೆ ಪ್ರತಿದಿನ ಹಿಂದೂಡಲ್ಪಡುತ್ತಿತ್ತು.[೪೧] ಕೊನೆಗೆ ೨೦ ಫೆಬ್ರವರಿ ೧೬೩೨ ರಂದು ಮೊಗಲರು ರೋಷಾವೇಶದಿಂದ ದಾಳಿ ಮಾಡಿದರು. ಒಂದು ಘೋರ ಯುದ್ಧ ಸಂಭವಿಸಿದರೂ ಕೊನೆಗೆ ಮೊಗಲರು ಸೋಲಬೇಕಾಯಿತು.[೪೨] ಹಾಗಾಗಿ ಅಸಫ್‌ಖಾನ ಸಂಧಾನಕ್ಕಾಗಿ ವಿಶ್ವಾಸಿ ಆಸ್ಥಾನಿಕನನ್ನು ಕಳುಹಿಸಿದನು, ಆದರೆ

[illegible]

[illegible]

ಇದು ದಂಡನೆಯಿಂದ ರಕ್ಷಿಸಿಕೊಳ್ಳುವ ಒಂದು ತಂತ್ರವಾಗಿತ್ತು.[೪೩] ಖವಾಸ್‌ಖಾನನು ಷೇಕ್ ದಾಬೀರನನ್ನು ಅಸಫಖಾನನ ಡೇರೆಗೆ ಕಳಿಸಿದನು. ಆದರೆ ಆತನ ಪ್ರಸ್ತಾವನೆಗಳು ಮೊಗಲರಿಗೆ ಒಪ್ಪಿಗೆಯಾಗಲಿಲ್ಲ. ಅಸಫಖಾನನ ರಾಜಿಯಾಗದ ಈ ವರ್ತನೆಗೆ ಬಹುಶ: ಮುಸ್ತಫಾಖಾನನೇ ಕಾರಣನಾಗಿರಬಹುದು. ಏಕೆಂದರೆ ಮುಸ್ತಫಾಖಾನನು ಅಸಫಖಾನನೊಂದಿಗೆ ರಹಸ್ಯ ಪತ್ರ ವ್ಯವಹಾರವನ್ನಿಟ್ಟಕೊಂಡಿದ್ದನಲ್ಲದೇ, ಸಮಯ ಬಂದಾಗ ಬಿಜಾಪುರ ಕೋಟೆಯ ಬಾಗಿಲು ತೆರೆಯುವುದಾಗಿ ಎಂದೂ ಹೇಳಿದ್ದನಂತೆ.[೪೪]

ಮೊಗಲರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಮಹತ್ವದ ಕೆಲಸವನ್ನು ಮುಸ್ತಫಾಖಾನನು ಮಾಡಬೇಕೆಂದುಕೊಂಡಿದ್ದ ಎಂಬ ಸುದ್ದಿ ಏಳು ದಿನಗಳ ನಂತರ ಬಂದಿತು.[೪೫] ಆದ್ದರಿಂದ ಖವಾಸಖಾನನು ತನ್ನ ಅಧಿಕಾರಿಗಳ ಮೂಲಕ ಮುಸ್ತಫಾಖಾನನನ್ನು ಸಂಪರ್ಕಿಸಿ ಸಂಧಾನದ ಮಧ್ಯಸ್ತಿಕೆಯನ್ನು ವಹಿಸಿಕೊಳ್ಳಲು ವಿನಂತಿಸಿದಾಗ, ಮುಸ್ತಫಾಖಾನ ಸಂಧಾನದ ಕರಾರುಗಳೊಂದಿಗೆ ಅಸಫಖಾನನ ಬಿಡಾರಕ್ಕೆ ಹೋದನು. ಆದರೆ ಶರತ್ತುಗಳು ಬಿಜಾಪುರಕ್ಕೆ ತುಂಬಾ ದುಬಾರಿಯಾಗಿದ್ದವು. ಏಕೆಂದರೆ ನಲವತ್ತು ಲಕ್ಷ್ಯ ಮೌಲ್ಯದ ಮುತ್ತುರತ್ನಗಳು, ಬೆಳೆಬಾಳುವ ಆನೆಗಳನ್ನು ಅಲ್ಲದೇ ಅಪಾರ ಪ್ರಮಾಣ ಹಣವನ್ನು ಕಪ್ಪು ಕಾಣಿಕೆಯ ರೂಪದಲ್ಲಿ ಮಹಮ್ಮದ ಆದಿಲ್‌ಶಾಹನು ಶಹಾಜಹಾನಿಗೆ ಕೊಡಬೇಕೆಂದು ವಿಧಿಸಲಾಗಿತ್ತು.[೪೬] ಈ ಕೊಡಬೇಕಾದ ಕಪ್ಪು ಕಾಣಿಕೆಯ ಕುರಿತು ನಿರ್ಧಿಷ್ಟವಾಗಿ ಹೇಳಲಾಗದು, ಏಕೆಂದರೆ ಮಹಮ್ಮದ ನಾಮಾ ದಲ್ಲಿ ಏಳು ಲಕ್ಷ ಹೂಣಗಳೆಂದು[೪೭] ಬರೆಯಲಾಗಿದೆ. ಒಟ್ಟಾರೆ ಮೊಗಲರ ಕರಾರುಗಳು ಬಿಜಾಪುರದ ಸುಲ್ತಾನನಿಗೆ ತುಂಬಾ ದುಬಾರಿಯಾಗಿದ್ದವು. ಈ ಕರಾರಿಗೆ ಮಹಮ್ಮದ ಆದಿಲ್‌ಶಾಹನು "ನನ್ನ ಕತ್ತಿಯ ಅಂಚಿನಿಂದ ನಾನು ಸಲ್ಲಿಸುವೆನು" "I will pay at the point of my Sword "[೪೮] ಎಂದು ಉತ್ತರಿಸಿದನು.

ಈ ಕರಾರುಗಳ ಚರ್ಚೆ ನಡೆಯುತ್ತಿರುವಂತೆಯೇ ಮೊಗಲ ಸೈನ್ಯವು ಆಹಾರ ಧಾನ್ಯ ಹಾಗೂ ಮೇವುಗಳ ಕೊರತೆಯನ್ನು ಅನುಭವಿಸುತ್ತಿತ್ತು. ಇದನ್ನರಿತ ಖವಾಸ್‌ಖಾನ ಮುಸ್ತಫಾಖಾನನಿಂದ ಪತ್ರ ಬರೆಯಿಸಿ ತಮಗೆ ಶಾಂತಿ ಸಂಧಾನದ ಅವಶ್ಯಕತೆಯಿಲ್ಲ, ಎಂದು ತಿಳಿಸಿದನು. ಅದನ್ನು ಕೇಳಿದ ಅಸಫಖಾನನು ದೆಹಲಿಗೆ ಹಿಂದಿರುಗಲು ನಿರ್ಧರಿಸಿದನು.[೪೯] ಮರಳಿ ಹೋಗುವಾಗ ಮಾರ್ಗ ಮಧ್ಯದಲ್ಲಿ ಆದಿಲ್‌ಶಾಹಿ ಪ್ರದೇಶಗಳನ್ನು ಲೂಟಿ ಮಾಡಿದನು, ಬಿಜಾಪುರದಿಂದ ಕಾಲ್ತೆಗೆದ ದೆಹಲಿ ಸೈನ್ಯವನ್ನು ಬೆನ್ನಟ್ಟಿದ, ಮುರಾರಿ ಜಗದೇವನ ನಾಯಕತ್ವದ ಬಿಜಾಪುರದ ಸೈನ್ಯ, ಆದಿಲ್‌ಶಾಹಿ ರಾಜ್ಯದ ಗಡಿಯಾಚೆಗೆ ದಬ್ಬಿ ಪರೆಂಡಾವನ್ನು ೧೮-೦೭-೧೬೩೨ ರಂದು ವಶಪಡಿಸಿಕೊಂಡು ಅಲ್ಲಿಯೇ ಬೀಡುಬಿಟ್ಟಿತು. ಅಲ್ಲಿಂದ ಮರಳುವಾಗ ಮುರಾರಿ ಜಗದೇವ ಪಂಡಿತನು ಪ್ರಸಿದ್ಧ ಮಲಿಕ್-ಇ-ಮೈದಾನ್ ಎಂಬ ಬೃಹತ ಗಾತ್ರದ ಫಿರಂಗಿಯನ್ನು ಬಿಜಾಪುರಕ್ಕೆ ತಂದನು.[೫೦]

ದಕ್ಷಿಣದ ದಂಡಯಾತ್ರೆಗೆ ಮಹಬತಖಾನನ ನೇಮಕ :

ಈ ಹಿಂದಿನ ಯುದ್ಧಗಳಲ್ಲಾದ ಮೊಗಲರ ಹಿನ್ನಡೆಗೆ ಅಸಫಖಾನನ ಅಸಮರ್ಥತೆಯೇ ಕಾರಣವೆಂದು ತಿಳಿದ ಶಹಾಜಹಾನ ಬಹಳ ಕೊಪಗೊಂಡುನು. ಅಲ್ಲದೇ ಆದಿಲ್‌ಶಾಹಿಗಳ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸತೊಡಗಿದನು.[೫೧] ಸೋತು ಕುಗ್ಗಿ ಹೋಗಿದ್ದ ಅಸಫಖಾನನನ್ನು ಬಂಧನದಲ್ಲಿಟ್ಟು, ಲಾಹೋರಿನ ಗವ್ಹರ್ನರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಮಹಬತಖಾನನನ್ನು ಕರೆಯಿಸಿ, ಬುರ್ಹಾನಪುರದ ಗವ್ಹರ್ನರ್ ಆಗಿ ನೇಮಕ ಮಾಡಿದನು,[೫೨] ಅಲ್ಲದೇ ನಿಜಾಮರು ಮತ್ತು ಆದಿಲ್‌ಶಾಹಿಗಳ ಮೇಲೆ ಯುದ್ಧ ಮಾಡಲೆಂದೇ ದಕ್ಷಿಣಕ್ಕೆ ಕಳುಹಿಸಿದನು.[೫೩] ಈ ಸಂದರ್ಭದಲ್ಲಿ ದೌಲತಾಬಾದಿನಲ್ಲಿದ್ದ ಮಲಿಕ್ ಅಂಬರನ ಮಗನಾದ ಫತ್ತೆಖಾನ, ಬುರ್ಹಾನ್ ನಿಜಾಮಶಾಹನನ್ನು ಕೊಂದು ಆತನ ಏಳು ವರ್ಷದ ಮಗನಾದ ಹುಸೇನ ನಿಜಾಮಶಾಹ (ಜಾದುನಾಥ ಸರ್ಕಾರರು ಇವನನ್ನು ಬಹದೂರ್ ನಿಜಾಮಶಾಹ ಎಂದು ಕರೆದಿದ್ದಾರೆ) ನನ್ನು ಸಿಂಹಾಸನದ ಮೇಲೆ ಕೂಡ್ರಿಸಿದನು. ಈ ವಿಷಯ ತಿಳಿದ ಮಹಬತಖಾನ, ದೌಲತಾಬಾದನ್ನು ವಶಪಡಿಸಿಕೊಳ್ಳಲು ಇದು ಒಳ್ಳೆಯ ಅವಕಾಶ ಎಂದು ಯೋಚಿಸಿ ಆ ಕಡೆಗೆ ಹೊರಟನು.[೫೪] ಇದನ್ನರಿತ ಫತೇಖಾನ ಮಹಬತಖಾನನಿಗೆ ಪತ್ರಬರೆದು, ಮೊಗಲ ಸಾಮ್ರಾಜ್ಯದ ಬಗೆಗೆ ಮಿತ್ರತ್ವವನ್ನು ಘೋಷಿಸಿ ದೌಲತಾಬಾದ ಮೇಲೆ ದಾಳಿ ಮಾಡಬಾರದೆಂದು ವಿನಂತಿಸಿದನು. ತಾನೇ ಸ್ವತ: ಮೊಗಲ ಸೇವೆಯಲ್ಲಿ ಸೇರುವುದಾಗಿಯೂ, ಕೋಟೆಯನ್ನು ಮೊಗಲರ ವಶಕ್ಕೆ ಕೊಡುವುದಾಗಿಯೂ ಹೇಳಿದ್ದನು. ಈ ಮಧ್ಯ ಶಹಾಜಿಯು ಆದಿಲ್‌ಶಾಹಿ ಸರಕಾರವನ್ನು ಸಂಪರ್ಕಿಸಿ ಫತೇಖಾನನ ಯೋಜನೆಗಳನ್ನು ಮುರಾರಿ ಪಂಡಿತನಿಗೆ ತಿಳಿಸಿದನು. ಆಗ ಖವಾಸಖಾನನು ಫತೇಖಾನನೊಂದಿಗೆ ಚರ್ಚಿಸಲು ಪ್ರಾರಂಭಿಸಿದನು. ದೌಲತಾಬಾದ ಕೋಟೆಯನ್ನು ಬಿಟ್ಟು ಕೊಡಬೇಕು ಅದಕ್ಕೆ ಮೂರು ಲಕ್ಷ ಹೊನ್ನುಗಳನ್ನು ಮತ್ತು ಆಹಾರ ಧಾನ್ಯವನ್ನು ಕಳಿಸುವುದಾಗಿ ತಿಳಿಸಿದನು. ಅದಕ್ಕೆ ಫತೇಖಾನನು ಒಪ್ಪಿಗೆ ಸೂಚಿಸಿದನು. ಈ ವಿಷಯ ಮಹಬತಖಾನನಿಗೆ ತಿಳಿದಾಗ, ತನ್ನ ಸೈನ್ಯದೊಂದಿಗೆ ದೌಲತಾಬಾದ ಕೋಟೆಯ ಹತ್ತಿರ ಬಂದನು. ಆದರೆ ಅಲ್ಲಿ ಬಿಜಾಪುರದ ಸೈನ್ಯ ಇರುವುದನ್ನು ಕಂಡನು. ಈಗ ಮಹಬತಖಾನನು ಬಿಜಾಪುರ ಸೈನ್ಯದೊಂದಿಗೆ ಹೋರಾಡಿ ದೌಲತಾಬಾದಿಗೆ ಬಿಜಾಪುರದಿಂದ ಮುರಾರಿ ಪಂಡಿತನ ನೇತೃತ್ವದಲ್ಲಿ ಬಂದ ಆಹಾರ ಧಾನ್ಯವನ್ನು ಒಳಗಡೆ ಹೋಗದಂತೆ ನೋಡಿಕೊಳ್ಳುವುದಾಗಿತ್ತು. ಮುರಾರಿ ಪಂಡಿತನು ದೌಲತಾಬಾದ ಕೋಟೆಯನ್ನು ಫತೇಖಾನನು ತನ್ನ ವಶಕ್ಕೆ ಕೊಡದ ಹೊರತು ಆಹಾರ ಧಾನ್ಯವನ್ನು ಕೋಟೆಯ ಒಳಗೆ ಕಳುಹಿಸಲು ಸಿದ್ಧನಾಗಲಿಲ್ಲ.[೫೫] ಮುರಾರಿಯ ಈ ಉದ್ಧಟತನದ ಪ್ರವೃತಿಯಿಂದ ಇಡೀ ಸನ್ನಿವೇಶವೇ ಬದಲಾಯಿತು. ಆಹಾರ ಧಾನ್ಯ ಬರದ ಹೊರತು ಫತೇಖಾನನು ಮೊಗಲರ ಸೈನ್ಯವನ್ನು ಎದುರಿಸಲು ಸಾಧ್ಯವಿರಲಿಲ್ಲ.[೫೬] ಹಾಗಾಗಿ ಮಹಬತಖಾನನನೊಂದಿಗೆ ಒಪ್ಪಂದ ಮಾಡಿಕೊಳ್ಳಲು ಮುಂದಾಗಿ, ತನಗೆ ಎಲ್ಲಾ ರೀತಿಯಿಂದ ಸಹಾಯ ಮಾಡುವ ಮಾತು ಕೊಟ್ಟರೆ ದೌಲತಾಬಾ ಕೋಟೆಯನ್ನು ಶಹಾಜಹಾನನಿಗೆ ಒಪ್ಪಿಸುವುದಾಗಿ ತಿಳಿಸಿದನು. ಈ ಸುದ್ದಿ ಕೇಳಿ ಅತೀ ಸಂತೋಷಗೊಂಡ ಮಹಬತಖಾನ, ಅವಶ್ಯಕವಾದ ಎಲ್ಲಾ ಸವಲತ್ತುಗಳೊಂದಿಗೆ ಮತ್ತು ಬಂಗಾರದೊಂದಿಗೆ ತನ್ನ ಮಗನಾದ ಇರಾದತಖಾನನನ್ನು ಕೋಟೆಗೆ ಕಳುಹಿಸಿದನು.[೫೭] ಕ್ರಿ.ಶ. ೧೬೩೩ ರ

[illegible]

ಜೂನ ೧೭ ರಂದು ಫತೇಖಾನ ಕೋಟೆಯ ಹೊರಗೆ ಬಂದು ದೌಲತಾಬಾದ ಕೋಟೆಯನ್ನು ಮೊಗಲರಿಗೆ ಒಪ್ಪಿಸಿದನು.[೫೮]

ಫತೇಖಾನ ಕೋಟೆಯನ್ನು ಮಹಬತಖಾನನಿಗೆ ಒಪ್ಪಿಸಿದ ನಂತರ ಮಹಬತಖಾನನು ತನ್ನ ಮಗನನ್ನು ದೌಲತಾಬಾದನಲ್ಲಿಯೇ ಬಿಟ್ಟು ಫತೇಖಾನನೊಂದಿಗೆ ಬುರ್ಹಾಣಪುರಕ್ಕೆ ಹೋರಟರು. ಏಕೆಂದರು ತಮ್ಮ ಕುದರೆ ಒಂಟೆಗಳನ್ನು ಕೊಂದು ತಿನ್ನುವುದರ ಹೊರತು ಮೊಗಲರಿಗೆ ಬೇರೆ ಮಾರ್ಗವೇ ಇರಲಿಲ್ಲ. ಮೊಗಲರನ್ನು ಹಿಮ್ಮೆಟ್ಟಿಸುವಲ್ಲಿ ಯುದ್ಧ ಮಾಡದ ಬಿಜಾಪುರದ ಅಧಿಕಾರಿಗಳು ಮುರಾರಿಯ ನಾಯಕತ್ವದಿಂದ ಅತೃಪ್ತರಾಗಿದ್ದರು ದೌಲತಾಬಾದ ಕೋಟೆಯನ್ನು ವಶಪಡಿಸಿಕೊಂಡಿದ್ದಕ್ಕೆ ಮಹಬತಖಾನನ ಕೀರ್ತಿ ಹೆಚ್ಚುತ್ತಾ ಹೋಯಿತು. ಅಲ್ಲದೇ ಶಹಜಹಾನನಿಂದ ಹೆಚ್ಚಿನ ಗೌರವಗಳನ್ನು ಪಡೆದುಕೊಂಡನು. ಆದರೆ ದೌಲತಾಬಾದ ಕೋಟೆಯನ್ನು ವಶಪಡಿಸಿಕೊಳ್ಳುವಲ್ಲಿ ವಿಫಲನಾದ ಮುರಾರಿಯು ಬಿಜಾಪುರಕ್ಕೆ ಮರಳಿದಾಗ ಅವಮಾನಿಸಲಾಯಿತು. ಅಲ್ಲದೇ ಅವನ ಅವೇಕದಿಂದಾಗಿ ದೌಲತಾಬಾದ ಕೋಟೆಯನ್ನು ಕಳೆದುಕೊಳ್ಳಬೇಕಾಯಿತೆಂಬ ದೋಷವನ್ನು ಹೊರಿಸಲಾಯಿತು.[೫೯]

ಈಗ ಮೊಗಲರು ನಿಜಾಮಶಾಹಿಯಿಂದ ಗೆದ್ದ ಪ್ರದೇಶಗಳಿಗೆಲ್ಲ ದೌಲತಾಬಾದ ಕೋಟೆಯೇ ರಾಜಧಾನಿಯಾಯಿತು. ಇದು ಆಯಕಟ್ಟಿನ ಪ್ರದೇಶವಾಗಿದ್ದರಿಂದ ಮೊಗಲರ ಮುಂದಿನ ದಕ್ಷಿಣ ದಂಡಯಾತ್ರೆಗಳಿಗೆ ಅತ್ಯಂತ ಅನುಕೂಲವಾಯಿತು. ದಕ್ಷಿಣದ ರಾಜ್ಯಗಳು ದೌಲತಾಬಾದನ್ನು ಕಳೆದುಕೊಂಡಿದ್ದರಿಂದ ಬಿಜಾಪುರ ಮತ್ತು ಗೊಲ್ಕೊಂಡ ರಾಜ್ಯಗಳಿಗೆ ಶತೃವನ್ನು (ವೈರಿಯನ್ನು) ನೆರೆಯಲ್ಲಿಯೇ ಇಟ್ಟುಕೊಂಡ ಹಾಗಾಯಿತು. ಕ್ರಿ.ಶ. ೧೬೩೬ ರ ವೇಳೆಗೆ ಅಹಮ್ಮದನಗರದ ನಿಜಾಮಶಾಹಿ ರಾಜ್ಯವು ಸಂಪೂರ್ಣವಾಗಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದರಿಂದ ಮೊಗಲರ ಸಾಮ್ರಾಜ್ಯವು ಬಿಜಾಪುರ ಮತ್ತು ಗೋಲ್ಕೊಂಡ ರಾಜ್ಯಗಳ ಗಡಿಯವರೆಗೆ ವಿಸ್ತರಿಸಿತು.[೬೦]

ತನ್ನ ಅದ್ವಿತೀಯ ಯಶಸ್ಸಿನಿಂದಾಗಿ ಸ್ಫೂರ್ತಿಗೊಂಡ ಮಹಬತಖಾನನು, ಮುಂದೆ ಆದಿಲ್‌ಶಾಹಿ ಪ್ರದೇಶಗಳ ಮೇಲೆ ದಾಳಿ ಮಾಡಲು ಶ'ಹಾಜಹಾನನಿಂದ ಅನುಮತಿ ಕೇಳಿದನು ಮತ್ತು ಈ ಉದ್ದೇಶಕ್ಕಾಗಿ ಇನ್ನಷ್ಟು ಸೈನ್ಯವನ್ನು ಕಳುಹಿಸಿಕೊಡಲು ವಿನಂತಿಸಿಕೊಂಡನು.[೬೧] ಈ ಮನವಿಯನ್ನು ಪುರಸ್ಕರಿಸಿದ ಶಹಾಜಹಾನ ತನ್ನ ಪುತ್ರ ಷೂಜಾನ ನೇತೃತ್ವದಲ್ಲಿ ಹೊಸ ಸೈನ್ಯವನ್ನು ಕಳುಹಿಸಿದನು. ಈ ಹೊಸ ಸೈನ್ಯದೊಂದಿಗೆ ಮಹಬತಖಾನ ಬಿಜಾಪುದ ಹಿಡಿತದಲ್ಲಿದ ಪೆರೆಂಡಾ ಕೋಟೆಯ ಕಡೆಗೆ ಧಾವಿಸಿದನು. ಆದರೆ ಬಿಜಾಪುರ ಸೈನ್ಯ ಅತ್ಯಂತ ಧೈರ್ಯ ಸಾಹಸಗಳಿಂದ ಹೋರಾಡಿ ಕೋಟೆಯನ್ನು ರಕ್ಷಿಸಿಕೊಂಡಿತು. ಮಹಬತಖಾನನ ಈ ವಿಫಲತೆಗೆ ಅವರಲ್ಲಿಯ ಭಿನ್ನಾಭಿಪ್ರಾಯಗಳೂ ಕಾರಣವಾಗಿದ್ದವು. ಅಲ್ಲದೇ ಶಹಾಜಿಯೂ ಕೂಡ ಸಾಕಷ್ಟು ಅಡ್ಡಿಪಡಿಸಿದನು.[೬೨]

ದೌಲತಾಬಾದ ಮೊಗಲರ ಕೈವಶವಾದ ನಂತರ ಶಹಾಜಿಯು ನಿಜಾಮಶಾಹಿ ಮನೆತನದ ಹನ್ನೊಂದು ವರ್ಷದ ಬಾಲಕನಿಗೆ ಮುರ್ತುಜಾ ನಿಜಾಮಶಾಹ ಎಂಬ ಬಿರುದು ನೀಡಿ, ಸಿಂಹಾಸನದ ಮೇಲೆ ಕುಳ್ಳಿರಿಸಿ, ಹೊಸ ರಾಜ್ಯಧಾನಿ ಪೆಮಗಿರಿ (ಪೆಮಗಡ)ಯಲ್ಲಿ ರಾಜ್ಯ ಪ್ರಾರಂಭಿಸಿದನು. ಇದಕ್ಕೆ ಶಾಹಗಡ ಎಂದು ಕರೆಯುತ್ತಿದ್ದರು.[೬೩] ಮಹಬತಖಾನನು ಪೆರೆಂಡಾ ಕೋಟೆಯನ್ನು ಪಡೆಯಲು ಯತ್ನಿಸುತ್ತಿದ್ದರೆ, ಶಹಾಜಿಯು ಮೊಗಲರು ಗೆದ್ದುಕೊಂಡ ಪ್ರದೇಶಗಳಲ್ಲಿ ವಿಧ್ವಂಸಕ ಕೃತ್ಯಗಳನ್ನು ಎಸಗುತ್ತಿದ್ದನು. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ದಿಕ್ಕು ತೋಚದ ಮಹಬತಖಾನನು ಪೆರೆಂಡಾ ಕೋಟೆಯನ್ನು ವಶಪಡಿಸಿಕೊಳ್ಳುವ ಪ್ರಯತ್ನವನ್ನು ನಿಲ್ಲಿಸಿ, ಕ್ರಿ.ಶ. ೧೬೩೪ ರ ಮೇ ನಲ್ಲಿ ಬುರ್ಹಾಣಪುರಕ್ಕೆ ಮರಳಿದನು.[೬೪]

ಆದಿಲ್‌ಶಾಹಿ ರಾಜ್ಯದ ಮಂತ್ರಿಯಾದ ಖವಾಸಖಾನನ ಬೆಂಬಲದೊಂದಿಗೆ ಪ್ರಬಲನಾಗುತ್ತಿದ್ದ ಶಹಾಜಿಯ ವಿಧ್ವಂಸಕ ಕೃತ್ಯಗಳನ್ನು ಹೇಗಾದರೂ ಮಾಡಿ ನಿಲ್ಲಿಸಬೇಕೆಂದು ಶಹಾಜಹಾನ ಯೋಚಿಸುತ್ತಿದ್ದನು. ಹಾಗಾಗಿ ಮಹಮ್ಮದ ಆದಿಲ್‌ಶಾಹನಿಗೆ ಪತ್ರ (ಫರ್ಮಾನ್) ಬರೆದು, ವಶಪಡಿಸಿಕೊಂಡ ನಿಜಾಮಶಾಹಿ ಕೋಟೆಗಳನ್ನು ಸಾಮ್ರಾಟನ ಅಧಿಕಾರಿಗಳಿಗೆ ಹಿಂದಿರುಗಿಸಬೇಕು. ಶಹಾಜಿ ಮತ್ತು ಬಿಜಾಪುರ ರಾಜ್ಯದಲ್ಲಿದ್ದ ಇತರ ಕೆಲವು ನಿಜಾಮಶಾಹಿ ಅಧಿಕಾರಿಗಳನ್ನು ಹೊರಗೆ ಹಾಕಬೇಕೆಂದು ಆದೇಶಿಸಿದನು. ಈ ಆದೇಶಕ್ಕೆ ತಲೆ ಬಾಗದ ಮಹಮ್ಮದ ಆದಿಲ್‌ಶಾಹ ತನ್ನ ಮಂತ್ರಿ ಖವಾಸಖಾನನ ಸಲಹೆಯಂತೆ ನಿಜಾಮಶಾಹಿ ಅಮೀರರಿಗೆ ಪ್ರೋತ್ಸಾಹ ನೀಡಿ ನಿಜಾಮಶಾಹಿ ರಾಜ್ಯವನ್ನು ಮರುಸ್ಥಾಪಿಸಲು ಮುಂದಾದನು. ಮತ್ತು ಶಹಾಜಿಯ ಸಹಾಯಕ್ಕಾಗಿ ರಣದುಲ್ಲಾಖಾನ ಹಾಗೂ ಮುರಾರಿ ಪಂಡಿರರ ನೇತೃತ್ವದಲ್ಲಿ ಅಪಾರ ಸಂಖ್ಯೆಯ ಸೈನ್ಯವನ್ನು ಕಳುಹಿಸಿದನು.[೬೫]

ಮಹಮ್ಮದ ಆದಿಲ್‌ಶಾಹನ ಈ ತೀರ್ಮಾನದಿಂದ ರೊಚ್ಚಿಗೆದ್ದ ಶಹಾಜಹಾನ ಕ್ರಿ.ಶ. ೧೬೩೫ ರಲ್ಲಿ ಖಾನ–ಇ–ಜಹಾನನ ನೇತೃತ್ವದಲ್ಲಿ ಹತ್ತು ಸಾವಿರ ಸೈನಿಕರನ್ನು ಬಿಜಾಪುರದ ಮೇಲೆ ಯುದ್ಧಕ್ಕೆ ಕಳುಹಿಸಿದನು.[೬೬] ಬಿಜಾಪುರದ ಮಂತ್ರಿ ಖವಾಸಖಾನನು ಸಂಧಾನಕ್ಕೆ ಮುಂದಾಗಿ ಕಪ್ಪು ಕಾಣಿಕೆಗಳೊಂದಿಗೆ ತನ್ನ ಇಬ್ಬರು ರಾಯಭಾರಿಗಳನ್ನು ಕಳುಹಿಸಿದನು. ಅದಕ್ಕೆ ಪ್ರತಿಯಾಗಿ ಶಹಾಜಹಾನನು ಮಕ್ರಮತ್‌ಖಾನನನ್ನು ತನ್ನ ರಾಯಭಾರಿಯನ್ನಾಗಿ ಬಿಜಾಪುರಕ್ಕೆ ಕಳುಹಿಸಿದನು. ಆಗ ಮಹಮ್ಮದ ಆದಿಲ್‌ಶಾಹನು ಸ್ವತ: ಹೋಗಿ ಮೊಗಲ ರಾಯಭಾರಿಯನ್ನು ಗೌರವಪೂರ್ವಕವಾಗಿ ಬರಮಾಡಿಕೊಂಡನು. ರಾಯಭಾರಿಯು ಹೊರ ನೋಟದ ಈ ಗೌರವದಲ್ಲಿ ಸಂಶಯ ಕಂಡು, ಅದರಂತೆ ಸಾಮ್ರಾಟನಿಗೆ ವರದಿಸಲ್ಲಿಸಿದನು. ಇದನ್ನು ಕೇಳಿದ ಶಹಾಜಹಾನನು ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುವಂತೆ ತನ್ನ ಸೈನ್ಯಕ್ಕೆ ಆದೇಶ ಕಳುಹಿಸಿದನು.[೬೭] ಬಿಜಾಪುರದತ್ತ ಮುನ್ನುಗ್ಗುತ್ತಿದ್ದ ಮೊಗಲ ಸೈನ್ಯವನ್ನು ಕಂಡ ಬಿಜಾಪುರದ ಜನ ಶಹಪುರ ಕೆರೆಯನ್ನು ಒಡೆದು ಪಟ್ಟಣವನ್ನು ನಾಶಮಾಡಿ ಮುನ್ನುಗ್ಗಿ ಬರುತ್ತಿದ್ದ ವೈರಿ ಸೈನ್ಯಕ್ಕೆ ತಡೆಯುಂಟು ಮಾಡಿ ಬಿಜಾಪುರದ ಕೋಟೆಯೊಳಗೆ ಸೇರಿದರು.[೬೮]

ಬಿಜಾಪುರ ರಾಜ್ಯ ಇಂತಹ ಸಂದಿಗ್ಧ ಸ್ಥಿತಿಯಲ್ಲಿರುವಾಗ ಬಿಜಾಪುರ ಆಸ್ಥಾನದಲ್ಲಿನ ಅಧಿಕಾರಿಗಳಲ್ಲಿ ಅನೇಕ ಬಣಗಳಾಗಿದ್ದವು. ಬಹಿರಂಗವಾಗಿಯೇ ಮೊಗಲ ಪರವಾಗಿದ್ದ ಮುಸ್ತಫಾಖಾನ ಖವಾಸಖಾನನ ವಿರೋಧಿಯಾಗಿದ್ದನು. ಖವಾಸಖಾನನು ಮುಸ್ತಫಾಖಾನನ ವಿರುದ್ಧ ಮಹಮ್ಮದನಿಗೆ ಕಿವಿ ತುಂಬುತ್ತಿದ್ದನು. ಅಲ್ಲದೇ ಮುಸ್ತಫಾಖಾನನನ್ನು ಬಂಧಿಸಿ ಬೆಳಗಾವಿ ಜೈಲಿನಲ್ಲಿಟ್ಟನು.[೧೯] ಇದರಿಂದ ಖವಾಸಖಾನನನ್ನು ಎಂದೂ ಸೇರದ ಮಹಮ್ಮದ ಆದಿಲ್‌ಶಾಹನಿಗೆ ಕೋಪ ಕೆರಳಿತು. ಹೇಗಾದರೂ ಮಾಡಿ ಖವಾಸಖಾನನನ್ನು ನಿಯಂತ್ರಿಸಲು ಮಲ್ಲಿಕ ರೆಹಾನ (ಮಹಮ್ಮದ ಆದಿಲ್‌ಶಾಹನ ಬಾಲ್ಯ ಸ್ನೇಹಿತ) ನಿಗೆ ಆಜ್ಞೆ ಮಾಡಿದನು. ಆಗ ಮಲ್ಲಿಕ ರೆಹಾನನು ಜನಪ್ರೀಯತೆಯನ್ನು ಕಳೆದುಕೊಂಡ ರಾಜ್ಯಕ್ಕೆ ಭಾರವಾಗಿರುವ ಮುರಾರಿ ಜಗದೇವನನ್ನು ಕೆಲಸದಿಂದ ತೆಗೆದು ಹಾಕಲು ಖವಾಸಖಾನನಿಗೆ ತಿಳಿಸಿದನು.[೨೦] ಆದರೆ ಆತ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ರಾಜ್ಯಕ್ಕೆ ಮೋಸಮಾಡಿ ಇಲ್ಲಿಯ ಎಲ್ಲಾ ವಿಷಯಗಳನ್ನು ಶಹಾಜಹಾನನಿಗೆ ತಲುಪಿಸಿದನು. ರಾಜ್ಯದಲ್ಲಿ ವಿವಿಧ ಬಣಗಳು ಪರಸ್ಪರ ಕಚ್ಚಾಟದಲ್ಲಿರುವುದರಿಂದ ಇದೇ ವೇಳೆಯಲ್ಲಿ ನೀವು ದಾಳಿ ಮಾಡಿದರೆ ಕೋಟೆಯ ಒಳಗೆ ಬರುವಂತೆ ನಾನು ವ್ಯವಸ್ಥೆ ಮಾಡುವುದಾಗಿ ಹೇಳಿದ್ದನು. ಈ ವಂಚನೆಯ ವಿಷಯ ರಾಜ್ಯಕ್ಕೆ ಗೊತ್ತಾದಾಗಾ ರಾಜನ ಆಜ್ಞೆಯಂತೆ ಆತನನ್ನು ಕೊಲ್ಲಲಾಯಿತು. ಒಂದು ತಿಂಗಳ ನಂತರ ಮುರಾರಿ ಜಗದೇವನನ್ನು ಕೊಂದು ಮುಸ್ತಫಾಖಾನನನ್ನು ಬಂಧನದಿಂದ ಮುಕ್ತಗೊಳಿಸಲಾಯಿತು.[೨೧] ನಂತರ ಮುಸ್ತಫಾಖಾನ ಅಧಿಕಾರ ವಹಿಸಿಕೊಂಡನು, ಅಲ್ಲದೇ ಆತನನ್ನು ಕೊಲೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಮಲ್ಲಿಕ ರೆಹಾನ ಹಬಶಿಗೆ ' *ಇಖಲಾಸ ಖಾನ* ' ಎಂಬ ಬಿರುದು ನೀಡಲಾಯಿತು.[೨೨]

ಈ ವೇಳೆಗೆ ಬಿಜಾಪುರದ ಕಡೆಗೆ ಧಾವಿಸುತ್ತಿದ್ದ ಮೊಗಲ ಸೈನ್ಯ ಆಗಲೇ ಕಲ್ಯಾಣ ಮತ್ತು ಬೀದರದ ಸುತ್ತ ಮುತ್ತಲಿನ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು. ಬೀದರಿನ ಹತ್ತಿರ ಬಿಜಾಪುರ ಸೈನ್ಯವನ್ನು ಸೋಲಿಸಿದ್ದರು. ಆದರೆ ಬಿಜಾಪುರದಲ್ಲಿ ಮೊಗಲರ ಪರವಾಗಿದ್ದ ಮುಸ್ತಫಾಖಾನನು ಅಧಿಕಾರಕ್ಕೆ ಬಂದಾಗಿನಿಂದ ಘಟನೆಗಳು ಬದಲಾಗಹತ್ತಿದವು. ಬಿಜಾಪುರ ಸರಕಾರ ಮೊಗಲರ ಪರವಾಗಿ ಇರುತ್ತ, ಅವರು ಕೇಳಿದ ನಿಜಾಮಶಾಹಿ ಕೋಟೆಗಳಾದ ಉದಗೀರ ಮತ್ತು ಔಸಾಗಳನ್ನು ಬಿಟ್ಟುಕೊಟ್ಟರು. ಆದರೆ ಶಹಜಾಹಾನ ಇಷ್ಟಕ್ಕೇ ತೃಪ್ತನಾಗದೇ ಇನ್ನಷ್ಟು ಕೋಟೆಗಳನ್ನು ಬಿಟ್ಟು ಕೊಡಲು ಒತ್ತಾಯಿಸಿದನು. ಅಲ್ಲದೇ ಶಹಾಜಿಯ ವಿರುದ್ಧ ಕದನದಲ್ಲಿ ನಿರತನಾಗಿದ್ದ ಖಾನ-ಇ-ಜಮಾನ್‌ನನ್ನು ಬಿಜಾಪುರದತ್ತ ಹೊರಡಲು ಆದೇಶವಿತ್ತನು. ಆ ಪ್ರಕಾರವಾಗಿ ಖಾನ-ಇ-ಜಮಾನ್ ಬರುವಾಗ ದಾರಿಯಲ್ಲಿ ಮಿರಜನ್ನು ಕೊಳ್ಳೆಹೊಡೆದನು, ಅಲ್ಲಿಂದ ಮುಂದುವರೆದು ಆದಿಲ್‌ಶಾಹಿ ರಾಜ್ಯದ ಅತ್ಯಂತ ಶ್ರೀಮಂತ ವ್ಯಾಪಾರಿ ಕೇಂದ್ರವಾದ ರಾಯಬಾಗ ಪಟ್ಟಣವನ್ನು ಸುಲಿಗೆ ಮಾಡಿದನು. ಆಗ ಬಿಜಾಪುರ ರಾಜ್ಯ ಇಕ್ಕಟ್ಟಿನಲ್ಲಿ ಸಿಲುಕಿತು. ಇವರಿಗೆ ಸಂಧಾನದ ಹೊರತು ಬೇರೆ ಮಾರ್ಗವೇ ಉಳಿಯಲಿಲ್ಲ. ಬಿಜಾಪುರದವರು ಶಾಂತಿಗೆ ಮುಂದಾದಾಗ ಖಾನ-ಇ-ಜಮಾನನಿಗೆ ದಾಳಿಯನ್ನು ನಿಲ್ಲಿಸಲು ಆಜ್ಞೆಯಾಯಿತು.[೨೩]

[illegible]

ಈ ರೀತಿ ದಕ್ಷಿಣ ಭಾರತದ ರಾಜ್ಯಗಳ ಮೇಲೆ ಶಹಾಜಹಾನನ ಸೈನ್ಯ ದಾಳಿಮಾಡಿ ಅವೆಲ್ಲವುಗಳನ್ನು ವಶಪಡಿಸಿಕೊಳ್ಳುವ ಅವಕಾಶ ಇದ್ದರೂ ಕೂಡ ಒಪ್ಪಂದಕ್ಕೆ ಮುಂದಾಗುತ್ತಾನೆ. ಏಕೆಂದರೆ ಬಹುಶ: ಶಹಾಜಹಾನನಿಗೆ ಆದಿಲ್‌ಶಾಹಿಗಳ ಧೈರ್ಯ ಮತ್ತು ಶಕ್ತಿಯ ಅರಿವಾಗಿರಬಹುದು. ಮಹಮ್ಮದ ಆದಿಲ್‌ಶಾಹನು ಶಹಾಜಹಾನನಿಗೆ ಹೆದರುತ್ತಿರಲಿಲ್ಲ ಎಂಬುದಕ್ಕೆ ಅವರೀರ್ವರ ಮಧ್ಯ ನಡೆದ ಪತ್ರ ವ್ಯವಹಾರಗಳೇ ಸಾಕ್ಷಿಯಾಗಿವೆ. ಅಂತಹ ಒಂದು ಪತ್ರ ವ್ಯವಹಾರದ ಕುರಿತು ನೋಡೋಣ.

ಶಹಾಜಹಾನನ ಪತ್ರದ ನಕಲು:

"ದೇವರ ಸ್ತುತಿ ಸದಾಕಾಲ ಇರಲಿ, ಏಕೆಂದರೆ ದೇವರು ತನ್ನ ಪೂರ್ಣ ಸಾಮರ್ಥ್ಯದಿಂದ ನೀರಿನ ಒಂದು ಹನಿಯಿಂದ ತಾಯಿಯ ಸ್ವರೂಪದಿಂದ ಆಕಾರಕ್ಕೆ ತಂದು, ನಮ್ಮನ್ನು ಪೃಥ್ವಿಯ ಬಾದಶಾಹನನ್ನಾಗಿ ಮಾಡಿದ್ದಾನೆ. ಆದ್ದರಿಂದ ಹೀಗೆ ಮಾಡಬೇಕಾಗಿದೆ. ಈ ಪೃಥ್ವಿಯಲ್ಲಿ ನಾಲ್ಕೂ ಕಡೆಗೂ, ಬಿಜಾಪುರ ರಾಜ್ಯ, ಗೋಲ್ಕೊಂಡ, ಭಾಗಾನಗರಗಳಲ್ಲೂ, ಲಂಕಾ, ಪಡಲಂಕಾಗಳಲ್ಲೂ, ಶಹಾಜಹಾನನ ಈ ಹೆಸರಿನಲ್ಲಿ ಖುತುಬಾ ಓದುವುದನ್ನು ಮತ್ತು ಮೊಹರನ್ನು(ಸಿಕ್ಕಾ) ನಾವು ನಡೆಸಬೇಕಾಗಿದೆ. ನೀವು ಎಲ್ಲರೂ ಆಯಾ ನಗರಗಳಲ್ಲಿ ಅಸಂತೋಷ(ಖುದ ಖುದ) ಪಕ್ಷಿಯಂತೆ ಪ್ರತಿಯೊಬ್ಬ ಬಾದಶಹನ ಹೆಸರುಗಳನ್ನು ಓದುತ್ತಿದ್ದಿರಿ. ಆದರಿಂದ ನೀವು ಈಗ ನಮ್ಮ ಸೇವೆಯ ದಾರವನ್ನು ನಿಮ್ಮ ಜೀವನದ ಕೊರಳಿನಲ್ಲಿ ಹಾಕಿಕೊಂಡು ಅತ್ತ ಕಡೆಯ ನಗರಗಳಲ್ಲಿ ಖುತಬಾ, ಸಿಕ್ಕಾ ಮತ್ತು ಹೆಸರುಗಳನ್ನು ಶಹಾಜಹಾನ ಬಾದಶಹಾನ ಹೆಸರಿನಲ್ಲಿಯೇ ನಡೆಯುವುದು ನಿಮಗೆ ಯೋಗ್ಯವೆನಿಸುತ್ತದೆ. ಇಲ್ಲವಾದಲ್ಲಿ ಗಿಡುಗ ಪಕ್ಷಿಯ ಕೈಯಲ್ಲಿ ನಿಮ್ಮ ದೇಹದಲ್ಲಿಯ ಕರುಳುಗಳನ್ನು ಬಗೆದು, ಅದರಲ್ಲಿಯ ಮಾಂಸವನ್ನು ಹೊರತಗೆದು, ಆ ಮಾಂಸವನ್ನು ಪೃಥ್ವಿಯ ಎಲ್ಲ ಧಾರೆಗಳಲ್ಲೂ ಹಾಕಿ ಲೂಟಿ ಮಾಡಬೇಕಾಗುತ್ತದೆ. ಈ ವಿಷಯವನ್ನು ಚನ್ನಾಗಿ ಜೀವದ ಕಿವಿಯಿಂದ ಕೇಳಿರಿ. ಮೊಲದ ಹುಸಿ ನಿದ್ರೆ ನಟಿಸಬೇಡಿರಿ. ಮೊಲದ ಹಿಂದೆ ಒಂದು ಕ್ರೂರ ಪಶು ಬೆನ್ನು ಹತ್ತಿದ ಸಮಯದಲ್ಲಿ ಮೊಲವು ಓಡುತ್ತ-ಓಡುತ್ತ ಒಮ್ಮಿಂದೊಮ್ಮಲೆ ದಾರಿಯಲ್ಲಿ ಬಿದ್ದು, ಆ ಭಯದಿಂದ ನಿದ್ರೆ ನಟಿಸಿ, ತನ್ನ ಎರಡು ಕಿವಿಗಳನ್ನು ತನ್ನ ಎರಡು ಕಣ್ಣುಗಳ ಮೇಲೆ ಮುಚ್ಚಿಕೊಂಡು ಗಾಢ ನಿದ್ರೆ ಹತ್ತಿದಂತೆ ನಟಿಸುತ್ತದೆ. ತನ್ನ ಬೆನ್ನಹಿಂದೆ ಬರುತ್ತಿರುವ ಪ್ರಾಣಿಯು ಆ ಮೊಲವನ್ನು ತತ್ಕಾಲದಲ್ಲಿಯೇ ತಿಂದುಬಿಡುತ್ತದೆ. ಆದ್ದರಿಂದ ಆ ಮೊಲದಂತೆ ನಿದ್ರೆಯ ನಟನೆ ಮಾಡಬೇಡ. ಯಾಕೆಂದರೆ ನಾನು ಗರುಡ ಪಕ್ಷಿಯಂತೆ ಶೋಧ ಮಾಡುತ್ತ ಬೆನ್ನು ಹತ್ತಿರುವೆ. ಆದ ಕಾರಣ ಎಲ್ಲ ಅಮೀರ ಜನರಲ್ಲಿಯ ಮುಖ್ಯ ಅಮೀರ, ಇಮಾನ್‌ದಾರ ಮತ್ತು ದೊಡ್ಡ ಮನೆತನದ ವಿಚಾರವಂತರಾದ ಮಕರಮತಖಾನ ನನ್ನು ನಿಮ್ಮ ಹತ್ತಿರ ಕಳಿಸಲಾಗಿದೆ, ಅವರೊಂದಿಗೆ ನಿಮ್ಮ ಕಲ್ಯಾಣ ಹೇಗೆ ಕಾಣುತ್ತದೆಯೋ ಹಾಗೆ ಮಾಡಿರಿ."

ಶಹಾಜಹಾನನ ಪತ್ರಕ್ಕೆ ಸುಲ್ತಾನ ಮಹಮ್ಮದ ಆದಿಲ್‌ಶಾಹನು ಉತ್ತರ ಬರೆದ ಪತ್ರದ ನಕಲು :

"ಸತ್ಯ ಸ್ವರೂಪನಾದ ದೇವರ ಉಪಕಾರವಿದೆ. ಏಕೆಂದರೆ, ಅವನು ಈ ಪೃಥ್ವಿಯಲ್ಲಿ ಯಾರಿಗೂ ಗರ್ವದಿಂದ ಮತ್ತು ಅಭಿಮಾದಿಂದ ಇರಲು ಬಿಟ್ಟಿಲ್ಲ. ಗರ್ವ ಮತ್ತು ಅಭಿಮಾನದಿಂದ ಮೇರೆಯುವವನನ್ನು ನೆಲಸಮ ಮಾಡಿದ್ದಾನೆ. ಫಾರಸಿಯಲ್ಲಿಯ ಒಂದು ದ್ವಿಪದಿಯ ಅರ್ಥ ಹೀಗಿದೆ, " ನಾನೇ ಒಬ್ಬ ಶ್ರೇಷ್ಠನಿದ್ದೇನೆ ಎಂಬ ಅಭಿಮಾನದಿಂದ ಬೀಗುವುದು ದೇವರಿಗೊಬ್ಬನಿಗೇ ಶೋಭಿಸುತ್ತದೆ." ಯಾಕೆಂದರೆ ಆ ದೇವರ ರಾಜ್ಯ ಶಾಶ್ವತವಾಗಿದೆ. ಆತನ ಶರೀರ ಮಾತ್ರ ಯಾವುದನ್ನು ಲೆಕ್ಕಿಸುವುದಿಲ್ಲ. ಅರ್ಥಾತ ಯಾರಿಗೂ ಯಾಚನೆಯನ್ನು ಮಾಡುವುದಿಲ್ಲ. ಈ ದ್ವಿಪದಿಯ ಭಾವ ಹೀಗಿದೆ, " ಹೀಗೆ ಮಾಡುವುದು ದೇವರಿಗೆ ಶೋಭಿಸುತ್ತದೆ. ಯಾಕೆಂದರೆ, ಅವನು ಶಾಶ್ವತನಾಗಿದ್ದಾನೆ." ಗರ್ವ ತೋರುವುದು ನಿಮಗೆ ಶೋಭಿಸುವುದಿಲ್ಲ. ಯಾಕೆಂದರೆ ನೀವು ಅಶಾಶ್ವತರು ನಾಶವಂತರೂ ಆಗಿದ್ದೀರಿ. ಮೂರ್ಖ ಕಾರಭಾರಿಯ ಕೈಯಿಂದ ಬರೆಯಿಸಿ ಇತ್ತ ಕಳಿಸಿದ ಪತ್ರವನ್ನು ನೋಡಿದೆ. ವಿಷಯ ತಿಳಿಯಿತು. ಆ ಪತ್ರದಲ್ಲಿಯ ವಿಷಯವುಯ ಸೂರ್ಯನ ತೇಜದಷ್ಟು ಸ್ಪಷ್ಟವಾಗಿದೆ. ತಾವು ನನಗೆ ಖುದ ಖುದ ಪಕ್ಷಿಯ ಉಪಮೆಯನ್ನು ಕೊಟ್ಟಿದ್ದೀರಿ, ಈ ಖುದ ಖುದ ಪಕ್ಷಿಗೆ ರಾಜ್ಯಾಧಿಕಾರದ ಮುಕುಟವನ್ನು ಬಾದಶಾಹಿ ತಾಜವನ್ನು ದೇವರೆ ಕೊಟ್ಟಿದ್ದಾನೆ. ಇದರಲ್ಲಿ ಆಶ್ಚರ್ಯವೇನಿದೆ? ಸುಲೇಮಾನ ಅಲೇಹು ಸಲ್ಲಂ ಇವರು ಅನೇಕ ದಿನಗಳವರೆಗೆ ಗಿಡುಗ ಪಕ್ಷಿಯ ಯೋಗ್ಯತೆಯನ್ನು ಬಳಿಸಿಕೊಂಡಿದ್ದರು. ಆದರೆ ತನ್ನ ಪಂಜರದಿಂದ ಹೊಡೆದು ಹಳೆಯದನ್ನು ಉರುಳಿಸಿ ಹೊಸದನ್ನು ಸೃಷ್ಟಿಸುವ ಸಾಮರ್ಥ್ಯ ಗಿಡುಗನಿಗೆಲ್ಲಿದೆ? ಅಂಥ ಯಾವ ವಿಶೇಷವಿದೆ? ಇದರಲ್ಲಿಯ ಭಾವವೆಂದರೆ, ಸುಲೇಮಾನ ಪೈಗಂಬರರ ಪುರಾತನವಾದ ಪ್ರಮುಖವಾದ ಖುದ ಖುದ ಪಕ್ಷಿ ಮತ್ತು ಆ ಪಕ್ಷಿಗೆ ರಾಜ್ಯಾಧಿಕಾರವನ್ನು ದೇವರು ಕೊಟ್ಟಿದ್ದಾನೆ. ಎಂದಿದ್ದರೂ ಸುಲೇಮಾನ ಪೈಗಂಬರರು ಕೆಲವು ದಿನ ಗಿಡುಗ ಪಕ್ಷಿಯ ಹೊಸ ಯೋಗ್ಯತೆಯನ್ನು ಬೆಳೆಸಿಕೊಂಡಿದ್ದರು. ಆದರೆ ಆ ಗಿಡುಗ ಪಕ್ಷಿಗೆ ಖುದ ಖುದ ಪಕ್ಷಿಯ ಯೋಗ್ಯತೆ ಎಲ್ಲಿಂದ ಬರಬೇಕು? ಇದರಲ್ಲಿಯ ಭಾವವೆಂದರೆ, ನಾವು ಪುರಾತನರು, ನಮಗೆ ರಾಜ್ಯಾಧಿಕಾರ ಬಂದದ್ದು ದೇವರ ದೇಣಿಗೆಯಾಗಿದೆ. ನೀವು ಎಷ್ಟೇ ದೊಡ್ಡವರಾದರೂ ಹೊಸಬರಿದ್ದೀರಿ. ನಮ್ಮ ಅಕಲ್ಯಾಣ ಮಾಡುವುದು ನಿಮ್ಮ ಕೈಯಿಂದ ಹೇಗೆ ಆದೀತು? ಪತ್ರದಲ್ಲಿ ಮೊದಲ ಭ್ರಾಂತಿರೂಪದ ನಿದ್ರೆಯನ್ನು ನಟಿಸಬಾರದೆಂದು ಬರೆಯಲಾಗಿದೆ. ಮೊಲ ನಿದ್ದೆ ಮಾಡಬಹುದು, ಆದರೆ ಪ್ರಸಂಗ ಬಂದಾಗ ಇಷ್ಟು ಜೋರಾಗಿ ಓಡುತ್ತದೆಂದರೆ ತನ್ನ ಬೆನ್ನಹತ್ತಿದ ಪಶುವಿನ ಪ್ರಾಣವನ್ನು ತೆಗೆದುಕೊಳ್ಳುತ್ತದೆ. ಗರುಡ ಪಕ್ಷಿ ಎಷ್ಟೇ ಬೆನ್ನು ಹತ್ತಬಹುದು, ಆದರೆ ತನ್ನ ಮೂರ್ಖತನದಿಂದ ಮೊಲದ ಮಾಂಸವನ್ನು ತಿನ್ನುವ ಆಸೆಯಲ್ಲಿ ಬಂದು ಬಂಧನದಲ್ಲಿ ಬೀಳುತ್ತದೆ. ಇದರಲ್ಲಿಯ ಭಾವವೆಂದರೆ, ಇನ್ನೊಬ್ಬರ ಅಕಲ್ಯಾಣವನ್ನು ಇಚ್ಚಿಸುವುದರಲ್ಲಿ ತಮಗೆ ಅಪಾಯವಿದೆ. ಖಂಡಣಿಯ ಬದಲಾಗಿ ಇಂದಿನವರೆಗೆ ಎಷ್ಟೂ ಕೊಟ್ಟಿದೆಯೋ ಆ ಪ್ರಮಾಣದಲ್ಲಿ ಕೊಡೋಣ ಅದರಲ್ಲಿ ಸಂಶಯವಿಲ್ಲ. " ನೀವು ದೇವರ ಆಜ್ಞೆಯಿಂದ ಮುಖ ತಿರುವಬೇಡಿರು" ಹೀಗೆ ಮಾಡಿದರೆ ನಿಮ್ಮ ಆಜ್ಞೆಯನ್ನು ಯಾರೂ ಮುರಿಯುವುದಿಲ್ಲ".[೭೪]

ಆದಿಲ್‌ಶಾಹಿಗಳು ಮತ್ತು ಮೊಗಲರ ನಡುವಿನ ಒಪ್ಪಂದ (೧೬೩೬) :

ಒಪ್ಪಂದದ ಕರಾರುಗಳು : ಈ ಕೆಳಗಿನ ಕರಾರುಗಳಂತೆ ಶಹಜಹಾನನು ಬಿಜಾಪುರದ ಸುಲ್ತಾನ ಮಹಮ್ಮದ ಆದಿಲ್‌ಶಾಹನೊಂದಿಗೆ ಒಪ್ಪಂದ ಮಾಡಿಕೊಂಡನು.

೧) ಬಿಜಾಪುರದ ಸುಲ್ತಾನನು ಬಾದಶಾಹನ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಬೇಕು. ಮತ್ತು ಭವಿಷ್ಯದಲ್ಲಿ ಆತನ ಆಜ್ಞೆಗಳನ್ನು ಪಾಲಿಸುವ ಮಾತು ಕೊಡಬೇಕು.

೨) ನಿಜಾಮಶಾಹಿ ರಾಜ್ಯದ ಅಧಿಕಾರವು ಕೊನೆಗೊಳ್ಳಬೇಕು ಮತ್ತು ಅದರ ಎಲ್ಲ ಪ್ರದೇಶಗಳನ್ನು ಬಾದಶಾಹನಿಗೂ ಹಾಗೂ ಬಿಜಾಪುರ ರಾಜನಿಗೂ ಹಂಚಬೇಕು. ಆದಿಲ್‌ಶಾಹಿಯು ಹೊಸ ಸಾಮ್ರಾಜ್ಯದ ಸರಹದ್ದನ್ನು ಉಲ್ಲಂಘಿಸಬಾರದು ಇಲ್ಲವೇ ಹೊಸದಾಗಿ ಸ್ವಾಧೀನ ಪಡಿದಿಕೊಂಡ, ಸ್ವಾಧೀನನಕ್ಕೆ ತೆಗೆದುಕೊಳ್ಳುತ್ತಿರುವ ಪ್ರದೇಶಗಳಲ್ಲಿ ನೆಲೆಗೊಳ್ಳುತ್ತಿರುವ ಮೊಗಲ ಅಧಿಕಾರಿಗಳಿಗೆ, ತನ್ನ ಸೇವಕರನ್ನು ಕಳುಹಿಸಿ ಅಡಚಣೆಯನ್ನುಂಟುಮಾಡಬಾರದು.

೩) ಬಿಜಾಪುರದ ಸುಲ್ತಾನನು ತನ್ನ ಪೂರ್ವಜರ ಎಲ್ಲಾ ಪ್ರದೇಶಗಳೊಂದಿಗೆ ಈ ಕೆಳಗಿನ ಅಹಮ್ಮದನಗರದ ಪ್ರದೇಶಗಳ ಸೇರ್ಪಡೆಯೊಂದಿಗೆ ಇಟ್ಟುಕೊಳ್ಳುವುದು. ಪಶ್ಚಿಮದಲ್ಲಿ ಸೋಲ್ಲಾಪುರ ಮತ್ತು ಪೆರೆಂಡಾ ಕೋಟೆಗಳ ಜೊತೆಗೆ ಭೀಮಾ ಮತ್ತು ಸಿನಾ ನದಿಗಳ ಮಧ್ಯದ ಸೋಲ್ಲಾಪುರ ಮತ್ತು ವೆಂಗಿ ಮಹಲ್, ಈಶಾನ್ಯದಲ್ಲಿ ಭಾಲ್ಕಿ ಮತ್ತು ಚಿಡಗುಪಾ ಪರಗಣಗಳು ಮತ್ತು ಚಕನ್ ಮತ್ತು ಪೂನಾ ಪ್ರದೇಶಗನ್ನೊಳಗೊಂಡತೆ ಕೊಂಕಣದ ಈಶಾನ್ಯ ಭಾಗವು ಹಿಂದೊಮ್ಮೆ ನಿಜಾಮಶಾಹಿಗಳಿಗೆ ಸಂಬಂಧಿಸಿತ್ತು. ಈ ಸೇರ್ಪಡೆಗಳು ೫೦ ಪರಗಣಗಳನ್ನೊಳಗೊಂಡಿದ್ದವು ಮತ್ತು ೨೦ ಲಕ್ಷ ಹೊನ್ನ (ಎಂಟು ಲಕ್ಷ ರೂಪಾಯಿ) ಉತ್ಪನ್ನ ತರುತ್ತಿದ್ದವು. ನಿಜಾಮಶಾಹಿಗೆ ಸಂಬಂಧಿಸಿದ ಇನ್ನುಳಿದದ್ದೆಲ್ಲವೂ ಮೊಗಲ ಸಾಮ್ರಾಜ್ಯಕ್ಕೆ ಸೇರಿಕೊಂಡದ್ದೆಂದು ನಿಸ್ಸಂಶಯವಾಗಿ ತಿಳಿಯಬೇಕು.

೪) ಆದಿಲ್‌ಶಾಹಿಯು ಶಾಂತಿಗೆ ಮುಂದಾಗಿದ್ದಕ್ಕಾಗಿ ಮೊಗಲ್ ಸಾಮ್ರಾಟನಿಗೆ ೨೦ ಲಕ್ಷ ರೂಪಾಯಿ ಹಣವನ್ನು ಕೊಡಬೇಕು. ಆದರೆ ವಾರ್ಷಿಕ ನೀಡುವ ಕಪ್ಪವನ್ನು ಹೊರಿಸಲಿಲ್ಲ.

೫) ಗೋಲ್ಕೊಂಡವು ಈಗ ಮೊಗಲ ಚಕ್ರಾಧಿಪತ್ಯದ ಆಧೀನದಲ್ಲಿದೆ, ಆದಿಲ್‌ಶಾಹಿಗಳು ಭವಿಷ್ಯದಲ್ಲಿ ಅದರೊಂದಿಗೆ ಸ್ನೇಹದಿಂದಿರಬೇಕು, ಅದರ ಗಡಿಗಳನ್ನು ಗೌರವಿಸಬೇಕು.(ಮಾಂಜ್ರ ನದಿಯವರೆಗಿನ ನಿರ್ಧಿಷ್ಟ ಪಡಿಸಿದ್ದು.) ಆ ಸುಲ್ತಾನನಿಂದ ಬೆಲೆಬಾಳುವ ಕಾಣಿಕೆಗಳನ್ನು ಕೇಳಬಾರದು, ಅವನೊಂದಿಗೆ ಹಿರಿಯಣ್ಣನ ಹಾಗೆ ವರ್ತಿಸಬೇಕು.

೬) ಪ್ರತಿಯೊಂದು ಪಕ್ಷದವರು ಇನ್ನೊಂದು ಪಕ್ಷದಲ್ಲಿಯ ಅಧಿಕಾರಿಗಳನ್ನು ಮತ್ತು ಸೈನಿಕರನ್ನು ಒಡೆದುಕೊಳ್ಳಲು ಪ್ರಯತ್ನಿಸಬಾರದು ಮತ್ತು ತಾವಾಗಿಯೇ ಬಿಟ್ಟು ಬಂದವರಿಗೆ ತಮ್ಮಲ್ಲಿ ಆಶ್ರಯ ನೀಡಿ ಸೇವೆಯಲ್ಲಿ ಸೇರಿಸಕೊಳ್ಳಬಾರದು.

೨) ನಿಜಾಮಶಾಹಿಗಳ ರಾಜ್ಯದಲ್ಲಿ ವೈಭವಯುತವಾಗಿ ಅಧಿಕಾರದಲ್ಲಿದ್ದ ಶಹಾಜಿ ಭೋಸ್ಲೆಯು ತನ್ನ ಹಿಡಿತದಲ್ಲಿರುವ ಜುನ್ನಾರ, ತ್ರಿಂಬಕ್ ಮತ್ತು ಇತರ ಕೆಲವು ಕೋಟೆಗಳನ್ನು ಶಹಜಾಹಾನನಿಗೆ ಒಪ್ಪಿಸುವವರೆಗೆ, ಬಿಜಾಪುರದ ಸೇವೆಯಲ್ಲಿ ಸೇರಿಸಿಕೊಳ್ಳಬಾರದು. ಒಂದು ವೇಳೆ ಅವನು ಒಪ್ಪಿಸಲು ನಿರಾಕರಿಸಿದರೆ, ಆತನಿಗೆ ಬಿಜಾಪುರ ರಾಜ್ಯದಲ್ಲಿ ಆಶ್ರಯ ನೀಡಬಾರದು ಅಥವಾ ರಾಜ್ಯವನ್ನು ಪ್ರವೇಶಿಸಲು ಸಹ ಅವಕಾಶ ನೀಡಬಾರದು.

ಈ ಮೇಲಿನ ಕರಾರುಗಳ ಕುರಿತು ದೇವರಲ್ಲಿ ಅರಿಕೆ (ಪ್ರಾರ್ಥನೆ) ಮಾಡುತ್ತ ಹಾಗೂ ಪ್ರವಾದಿಯನ್ನು ಸಾಕ್ಷಿಯಾಗಿಸಿ ಭರವಸೆ ನೀಡಿದ ಶಹಜಾಹಾನ, ಅಚ್ಚ ಕೆಂಪು ಬಣ್ಣ (Vermilion) ದಲ್ಲಿ ಅದ್ದಿದ ತನ್ನ ಹಸ್ತದ ಗುರುತು ಇರುವ ಅಚ್ಚೊತ್ತಿದ ವಿಧಿಯುಕ್ತ ಅಥವಾ ಶಾಸ್ತ್ರೋಕ ಪತ್ರವನ್ನು ದಿನಾಂಕ ೬ ಮೇ ೧೬೩೬ ರಂದು ಆದಿಲ್‌ಶಾಹನಿಗೆ ಕಳುಹಿಸಿದನು. ಆ ಪತ್ರದ ಜೊತೆಗೆ ಮುತ್ತುಗಳು ಮತ್ತು ಗಾಢ ಹಸಿರು ಬಣ್ಣದ ಹರಳುಗಳಿಂದ ತಯಾರಿಸಿದ ಚೌಕಟ್ಟಿನಿಂದ ಕೂಡಿದ, ಹಾಗೂ ಮುತ್ತುಗಳ ಹಾರವನ್ನಾಕಿದ ಸಾಮ್ರಾಟನ ಭಾವಚಿತ್ರವನ್ನು ಕಳುಹಿಸಿದನು. ಅವೆಲ್ಲವುಗಳನ್ನು ಬಿಜಾಪುರದ ಸುಲ್ತಾನ ೩೦ನೇ ತಾರೀಖಿನಂದು ಸ್ವೀಕರಿಸಿದನು. ಔಪಚಾರಿಕವಾಗಿ ಸಂಧಾನವನ್ನು ಒಪ್ಪಿಕೊಳ್ಳುತ್ತ, ಪ್ರತಿಯಾಗಿ ಸಹಿ ಹಾಕಿ, ತನ್ನ ಸ್ವಂತ ಮುದ್ರೆಯಿಂದ ಮುದ್ರೆಹಾಕಿದ ಪತ್ರವನ್ನು ಮೊಗಲ ರಾಯಭಾರಿಯೊಂದಿಗೆ ಕಳುಹಿಸಿದನು. ಕುರಾನ್ ಮೇಲೆ ಶಪಥ ಮಾಡುತ್ತ ಅದರಲ್ಲಿಯ ಎಲ್ಲ ಕರಾರುಗಳನ್ನು ಗಮನಿಸುವುದಾಗಿ ಹೇಳಿದನು.[೨೫]

ಒಪ್ಪಂದದ ರಾಜಕೀಯ ಪರಿಣಾಮಗಳು :

ಈ ಒಪ್ಪಂದವನ್ನು ಶಹಜಾಹಾನನು, ಆದಿಲ್‌ಶಾಹನ ಕೋರಿಕೆಯ ಮೇರೆಗೆ ಮಾಡಿಕೊಂಡನು. ಅದರಲ್ಲಿ ಬಿಜಾಪುರದ ರಾಜನಾದ ಮಹಮ್ಮದ ಆದಿಲ್‌ಶಾಹನು ಮೊಘಲರ ರಾಜನ ಅಧೀನ ಎಂದು ಹೇಳಿಲ್ಲ. ಮೊಘಲರು ತಮ್ಮ ಮೇಲಿನ ರಾಜರು ಎಂದು ಎಲ್ಲೂ ಹೇಳಿಲ್ಲ. ನಾಣ್ಯಗಳನ್ನು ಹೊರಡಿಸುವುದು ಮುಂತಾದವುಗಳ ಬಗ್ಗೆ ಏನು ಹೇಳಿಲ್ಲ.[೨೬]

ಮಹಮ್ಮದ ಆದಿಲ್‌ಶಾಹನು ಮೊಘಲರ ಸಾಮಂತ ರಾಜ ಎಂಬುದನ್ನು ಅವನು ಒಪ್ಪಿರಲಿಲ್ಲ ಮತ್ತು ಇದರ ಬಗ್ಗೆ ಅವರಿಬ್ಬರ ನಡುವಿನ ಒಪ್ಪಂದದಲ್ಲಿ ಪ್ರಸ್ತಾಪ ಇಲ್ಲ. ಅದೇ ಗೋಲ್ಕೊಂಡದವರು ಅದನ್ನು ಒಪ್ಪಿದ್ದು. ಮಹಮ್ಮದ ಆದಿಲ್‌ಶಾಹನು ಅವರಿಗೆ, ವಿಧೇಯನಾಗಿಯೂ ಮತ್ತು ನಿಷ್ಠೆಯಿಂದಲು ಇರುವುದಾಗಿ ಒಪ್ಪಿದನು. ಇದರಿಂದ ಅವನು ಸಾಮಂತ ರಾಜನೇನೂ ಆಗುವುದಿಲ್ಲ. ಕಪ್ಪವನ್ನು ಕೊಡುವುದು ಆ ಕಾಲದಲ್ಲಿನ ಒಂದು ಸಂಪ್ರದಾಯ ಅಷ್ಟೇ. ಅದಕ್ಕೆ ವಿಶೇಷ ಅರ್ಥವನ್ನು ಹಚ್ಚ ಬೇಕಾಗಿಲ್ಲ.

ಆದರೆ ಇದರ ಆಧಾರದ ಮೇಲೆ ೧೬೫೭ ರಲ್ಲಿ ೨ನೆಯ ಅಲಿ ಆದಿಲ್‌ಶಾಹನಿಂದ, ತಾನು (ಆದಿಲ್‌ಶಾಹ) ಸಾಮಂತ ರಾಜ ಎಂಬುದನ್ನು ಒಪ್ಪಬೇಕೆಂದು ಮೊಘಲರು ಪಟ್ಟು ಹಿಡಿದರು. ೧೬೩೬ ರಿಂದಲೇ ಈ ನಿಯಮವನ್ನು ಒಪ್ಪಿದ್ದರೆ, ೧೬೫೭ ರಲ್ಲಿ ಸಾಮಂತ ಎಂದು ಒಪ್ಪು ಎಂಬ ಪ್ರಶ್ನೆಯು ಎಲ್ಲಿ

ಬರುತ್ತಿತ್ತು? ಮಹಮ್ಮದ ಆದಿಲ್‌ಶಾಹನು ಮೊಘಲ ದೊರೆಗಳ ಹೆಸರಿನಲ್ಲಿ ಯಾವ ನಾಣ್ಯವನ್ನು ಹೊರಡಿಸಿರಲಿಲ್ಲ. ಹಾಗೆ ಮಾಡದೇ ಬಿಜಾಪುರದವರ ನಾಣ್ಯದ ಮೇಲೆ ಆದಿಲ್‌ಶಾಹನ ಹೆಸರು ಇದ್ದದ್ದನ್ನು ನೋಡುತ್ತೇವೆ.[೨೨]

ಆ ಒಪ್ಪಂದದಲ್ಲಿ ನಿಜಾಮಶಾಹಿ ರಾಜ್ಯವನ್ನು ಪೂರ್ತಿ ಮುಗಿಸಿ ಅದನ್ನು ಮೊಘಲ ಚಕ್ರವರ್ತಿ ಮತ್ತು ಬಿಜಾಪುರದ ರಾಜ ಹಂಚಿಕೊಳ್ಳಬೇಕೆಂದು ಎಲ್ಲೂ ಹೇಳಿಲ್ಲ. ನಿಜಾಮನ ಕೊಂಕಣ ಪ್ರದೇಶವನ್ನು ಶಹಜಾಹಾನ ಆದಿಲ್‌ಶಾಹಿಗೆ ಕೊಟ್ಟನು. ಹಾಗೆ ಕೊಟ್ಟಿದ್ದು ಆದಿಲ್‌ಶಾಹನ ಕೋರಿಕೆಯ ಮೇರೆಗೆ, ಅದಕ್ಕೆ ಪ್ರತಿಯಾಗಿ ದೌಲತಾಬಾದಿನ ಪ್ರದೇಶವನ್ನು ಆದಿಲ್‌ಶಾಹನಿಂದ ಪಡೆದುಕೊಂಡ ನಂತರ ಕೊಟ್ಟದ್ದು.[೨೮]

೧೬೩೬ ರ ಒಪ್ಪಂದವು ಬಿಜಾಪುರ ಮತ್ತು ಮೊಘಲರ ಸಂಬಂಧದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿತು. ಮೊಘಲರ ದಕ್ಷಿಣ ನೀತಿಯನ್ನು ಒಂದು ರೀತಿಯಲ್ಲಿ ಬದಲಾಯಿಸಿತು ಎನ್ನಬಹುದು.

೧೫೨೭ ರಿಂದ ೧೬೩೬ ರ ಅವಧಿಯಲ್ಲಿ ಮೊಘಲರು ಬಿಜಾಪುರದೊಂದಿಗೆ ಒಂದು ರೀತಿಯ ಅನನ್ಯಯದ ಧೋರಣೆಯನ್ನು ಇಟ್ಟುಕೊಂಡಿದ್ದರು. ಅದರ ಮುಖ್ಯ ಉದ್ದೇಶ, ಬಿಜಾಪುರದವರು ದಕ್ಷಿಣದ ಇತರ ರಾಜ್ಯಗಳೊಂದಿಗೆ ಸೇರಿಕೊಂಡು, ತಮ್ಮ ವಿರುದ್ಧ ಏನೂ ಕಾರಾಸ್ಥಾನ ಮಾಡಬಾರದು ಎಂಬುದೇ ಆಗಿತ್ತು. ಹೀಗೆ ಮಾಡಿಕೊಂಡೇ ಅವರು ದಕ್ಷಿಣದ ಒಂದೊಂದೇ ರಾಜ್ಯವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುವ ಹಂಚಿಕೆಯನ್ನು ಹಾಕಿದರು. ದಕ್ಷಿಣದ ಅವರ ಆಸೆಗೆ ಬಿಜಾಪುರದಿಂದ ಅಡ್ಡಿ ಇರಲಿಲ್ಲ. ಹೀಗಾಗಿ ಬಿಜಾಪುರದವರೊಂದಿಗೆ ಮೊಘಲರು ಸ್ನೇಹದಿಂದಲೇ ಇದ್ದರು. ಆದರೆ ಅಹಮ್ಮದನಗರ ರಾಜ್ಯವನ್ನು ಹಿಡಿದುಕೊಂಡಿದ್ದು ಮತ್ತು ೧೬೩೬ ರ ಒಡಂಬಡಿಕೆ ಮೊಘಲರ ದಕ್ಷಿಣ ಭಾರತದ ಧೋರಣೆಗಳಲ್ಲೂ ಮತ್ತು ಮೊಘಲರ ಹಾಗೂ ಬಿಜಾಪುರದವರ ಸಂಬಂಧಗಳಲ್ಲೂ ಒಂದು ರೀತಿಯ ಹೊಸ ಆಯಾಮವನ್ನೇ ಸೃಷ್ಟಿಸಿತು.

೧೬೩೬ ರ ವರೆಗೆ ಮೊಘಲ ರಾಜ್ಯ ಮತ್ತು ಬಿಜಾಪುರ ರಾಜ್ಯ ಒಂದಕ್ಕೊಂದು ಕೂಡಿರಲಿಲ್ಲ. ಅವೆರಡರ ನಡುವೆ ಅಹಮ್ಮದನಗರ ರಾಜ್ಯ ಇತ್ತು. ಅಹಮ್ಮದನಗರ ರಾಜ್ಯವನ್ನು ಮೊಘಲರು ಕಬಳಿಸಿದ ನಂತರ ಮೊಘಲ ಮತ್ತು ಬಿಜಾಪುರ ರಾಜ್ಯಗಳು ಅಕ್ಕ-ಪಕ್ಕದ ರಾಜ್ಯಗಳಾದವು. ಆಗಲೇ ಅವೆರಡರ ನಡುವಿನ ಗಡಿಯನ್ನು ೧೬೩೬ ರ ಒಪ್ಪಂದದ ಮೂಲಕ ನಿರ್ಧರಿಸಲಾಯಿತು. ಈಗ ಮನಸ್ಸು ಮಾಡಿದರೆ ಮೊಘಲರು ಬಿಜಾಪುರವನ್ನು ಆಕ್ರಮಿಸುವುದು ಸುಲಭವಾಯಿತು. ಈ ಕಾರಣದಿಂದಾಗಿಯೇ ೧೬೩೬ ರ ಒಡಂಬಡಿಕೆ ಅಸ್ತಿತ್ವಕ್ಕೆ ಬಂತು. ಅದೇ ವರ್ಷದಲ್ಲೇ ಮೊಘಲರು ಸೋಲ್ಲಾಪುರ, ಇಂದಾಪುರ ಮತ್ತು ಬೀದರ ಹೀಗೆ ಮೂರು ಕಡೆಗಳಿಂದ ಬಿಜಾಪುರ ರಾಜ್ಯದ ಮೇಲೆ ಆಕ್ರಮಣವನ್ನು ನಡೆಸಿದರು.[೨೯]

ಸ್ನೇಹ ಸಹಕಾರದ ಒಪ್ಪಂದವು ಬಿಜಾಪುರ ಮತ್ತು ಮೊಘಲರ ನಡುವೆ ಇದ್ದಾಗ್ಯೂ ಸಹ ಬಿಜಾಪುರ ಮತ್ತು ಗೋಲ್ಕೊಂಡದವರು ಒಂದಾಗಬಹುದು ಎಂದು ಹೆದರಿದ ಮೊಘಲರು, ಬಿಜಾಪುರದ ಹಿತ

ಸಂಬಂಧಗಳಿಗೆ ವಿರುದ್ಧವಾಗಿ ಗೋಲ್ಕೊಂಡದವರ ಜೊತೆ ಸೇರಲು ಪ್ರಯತ್ನಿಸಿದರು. ಹೀಗಾಗಿ ಬಿಜಾಪುರದವರು ಮತ್ತು ಗೋಲ್ಕೊಂಡದವರು ಒಂದಾಗದಂತೆ ಮೊಘಲರು ಸರ್ವ ಪ್ರಯತ್ನ ಮಾಡಿದರು.

ಈ ಹಿಂದೆ ಆದ ಒಪ್ಪಂದದ ಪ್ರಕಾರ ಶಹಾಜಿಯನ್ನು ನಿಯಂತ್ರಿಸಲು ಶಹಜಾಹಾನ ಖಾನಜಮಾನನನ್ನು ಕಳಿಸಿದನು. ಅವನಿಗೆ ಸಹಾಯಕನಾಗಿ ಬಿಜಾಪುರದಿಂದ ರಣದುಲ್ಲಾಖಾನ ಬಂದನು. ಇಬ್ಬರೂ ಸೇರಿ ಮಾಹುಲ ಕೋಟೆಯ ಮೇಲೆ ಮುತ್ತಿಗೆ ಹಾಕಿದರು. ಶಹಾಜಿ ಎಷ್ಟೇ ಪ್ರಯತನ್ನಪಟ್ಟರೂ ಕೋಟೆಯನ್ನು ರಕ್ಷಿಸಿಕೊಳ್ಳಲಾಗಲಿಲ್ಲ. ಹಾಗಾಗಿ ಮಾಹುಲ ಕೋಟೆಯನ್ನು ಆದಿಲ್‌ಶಾಹನಿಗೆ ಒಪ್ಪಿಸಿದ. ಶಹಾಜಿ ಭೊಸ್ಲೆಯು ೨೦ ಏಪ್ರೀಲ್ ೧೬೩೭ ರಂದು ಸುಲ್ತಾನ ಮಹಮ್ಮದ ಆದಿಲ್‌ಶಾಹನ ನೌಕರಿಗೆ ಸೇರಿಕೊಂಡನು.[೮೦]

ಮಹಮ್ಮದ ಆದಿಲ್‌ಶಾಹನ ದಕ್ಷಿಣ ದಂಡಯಾತ್ರೆಗಳು :

ಆದಿಲ್‌ಶಾಹಿಗಳು ಮತ್ತು ಮೊಘಲರ ಮದ್ಯೆ ನಡೆದ ಒಪ್ಪಂದದ ಕರಾರುಗಳಿಂದಾಗಿ ಬಿಜಾಪುರವು ಮೊಘಲರ ವಿಷಯದಲ್ಲಿ ನಿಶ್ಚಿಂತೆಯಿಂದ ಇರುವಂತಾಯಿತು. ಉತ್ತರದ ಗಡಿಗಳನ್ನು ಉಲ್ಲಂಘಿಸಲು ತೊಂದರೆಯಾಯಿತಾದರೂ ದಕ್ಷಿಣಕ್ಕೆ ಸಾಗಲು ಯಾವ ನಿರ್ಬಂಧವೂ ಇರಲಿಲ್ಲ. ವಿಜಯನಗರದ ಪತನಾ (೧೫೬೫) ನಂತರ ದಕ್ಷಿಣದ ಪಾಳೆಗಾರರು ತಮ್ಮ ತಮ್ಮಲ್ಲಿ ಹೊಡೆದಾಡುತ್ತ ತಮ್ಮ ಸ್ವಾತಂತ್ರ್ಯವನ್ನು ಸಾರಿಕೊಂಡಿದ್ದರು. ರಾಜ್ಯ ವಿಸ್ತರಣೆಗಾಗಿ ತಮ್ಮ ತಮ್ಮಲ್ಲಿಯೇ ಕಚ್ಚಾಡುತ್ತಿದ್ದರು. ಆದಿಲ್‌ಶಾಹಿ ಮತ್ತು ಗೋಲ್ಕೊಂಡ ರಾಜ್ಯಗಳೊಂದಿಗೆ ಹೋರಾಡುವಾಗ ಸ್ವಲ್ಪ ಪ್ರಮಾಣದ ಪ್ರತಿರೋಧವನ್ನು ತೋರಿಸುತ್ತಿದ್ದರು. ಮಹಮ್ಮದ ಆದಿಲ್‌ಶಾಹನು ಮೊಘಲರೊಂದಿಗೆ ಹೋರಾಡುತ್ತಿದುದ್ದರಿಂದ ದಕ್ಷಿಣ ರಾಜ್ಯಗಳ ಕಡೆಗೆ ಗಮನಹರಿಸಲಾಗಲಿಲ್ಲ. ೧೬೩೬ ರಲ್ಲಿ ಮೊಘಲರೊಡನೆ ಆದ ಒಪ್ಪಂದದ ನಂತರ ಉಭಯ ಸುಲ್ತಾನರು ದಕ್ಷಿಣದ ಕಡೆಗೆ ಗಮನ ಹರಿಸುವಂತಾಯಿತು.[೮೧]

ರಣದುಲ್ಲಾಖಾನ (ರುಸ್ತುಮ್–ಎ–ಝುಮನ್) ನ ಪ್ರಥಮ ದಂಡಯಾತ್ರೆ :

ದಂಡಯಾತ್ರೆಯ ಸ್ವರೂಪ :

ಈ ಮೊದಲು ಕರ್ನಾಟಕ ಮತ್ತು ಮಲೇನಾಡಿನ ರಾಜ್ಯಗಳು ಯಾವುದೇ ದಕ್ಷಿಣದ ಮೊಹಮ್ಮದೀಯ ದೊರೆಗಳಿಂದ ಗೆಲ್ಲಲ್ಪಟ್ಟಿರದೇ ಇದ್ದುರಿಂದ ಆದಿಲ್‌ಶಾಹನು ಹಿಂದೂ ರಾಜ್ಯಗಳಲ್ಲಿ ಇಸ್ಲಾಂ ಧರ್ಮದ ಶಕ್ತಿ ಮತ್ತು ಪ್ರತಿಷ್ಠೆಯನ್ನು ಹೆಚ್ಚಿಸುವ ದೃಷ್ಟಿಯಿಂದ[೮೨] ಮತ್ತು ತನ್ನಷ್ಟಕ್ಕೆ ತಾನು 'ಮುಜಾಹಿದ' ಮತ್ತು 'ಘಾಜಿ' ಎಂಬ ಬಿರುದುಗಳನ್ನು ಪಡೆದುಕೊಳ್ಳಬೇಕೆಂದು[೮೩], ದಕ್ಷಿಣದ ರಾಜ್ಯಗಳನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳಲು ಇಚ್ಛಿಸಿದನು.

ಕ್ರಿ.ಶ. ೧೬೩೫–೩೬ ರಲ್ಲಿ ಫರ್ಹಾದಖಾನನ ಮಗನಾದ ರಣದುಲ್ಲಾಖಾನನನ್ನು "ರುಸ್ತುಮ್-ಎ-ಝುಮನ್" ಎಂಬ ಬಿರುದಿನೊಂದಿಗೆ ಗೌರವಿಸಲ್ಪಟ್ಟನು, ಮತ್ತು ಸೈನ್ಯದ ಮುಖ್ಯ ದಂಡನಾಯಕನಾದನು. ಅಲ್ಲದೇ ಅವನನ್ನು ಇಕ್ಕೇರಿಯ ಬಲಿಷ್ಟ ಕೋಟೆಯ ಒಡೆಯನಾದ ವಿರಭದ್ರನನ್ನು ಶಿಕ್ಷಿಸಲು ಕಳುಹಿಸಲಾಯಿತು. ಮಲ್ಲಿಕ ರೆಹಾನನ್ನು ರುಸ್ತುಮ್-ಎ-ಝುಮನಿಗೆ ಜಂಟಿ ದಂಡನಾಯಕನಾಗಿದ್ದನು. ರುಸ್ತುಮ್-ಎ-ಝುಮನ್‌ನು ಮಲೆನಾಡಿನ ಗಡಿ ಭಾಗವನ್ನು ತಲುಪಿದಾಗ ಅಲ್ಲಿನ ಜನರು ಭೀತಿಗೆ ಒಳಗಾದರು.[೮೪]

ರಾಜದ್ರೋಹಿ ಕೆಂಗನಾಯಕ :

ಇದೇ ಸಮಯಕ್ಕೆ ಇಕ್ಕೇರಿಯ ವೀರಭದ್ರ ನಾಯಕನ ಪಾಳೇಗಾರನಾದ ಬಸವಪಟ್ಟಣದ ಕೆಂಗನಾಯಕನು ತನ್ನ ಒಡೆಯನ ವಿರುದ್ಧ, ಬಂಡೆದ್ದು ತನ್ನ ಜಹಗೀರನ್ನು ಕಳೆದುಕೊಂಡನು.[೮೫] ಹಾಗಾಗಿ ಅವನ ಮೇಲೆ ಸೇಡು ತೀರಿಸಿಕೊಳ್ಳಲು ಯೋಚಿಸುತ್ತಿದ್ದನು. ಅದಕ್ಕಾಗಿ ಕೆಂಗನಾಯಕನು ರುಸ್ತು-ಎ-ಝುಮನ್‌ನಿಗೆ "ಮಲೆನಾಡು ರಾಜ್ಯವನ್ನು ಗೆಲ್ಲಲು ನಾನು ನಿನಗೆ ಸಂಪೂರ್ಣ ಸಹಾಯ ಮಾಡುತ್ತೇನೆ. ಆದರೆ ಅದಕ್ಕಿಂತ ಮೊದಲು ಇಕ್ಕೇರಿ ಕೋಟೆಯನ್ನು ಆಕ್ರಮಣ ಮಾಡಬೇಕು. ನಿನ್ನ ಸೈನ್ಯದ ನುಸುಳುವಿಕೆಯ ವಾಸನೆಯನ್ನು ಸಹ ವೀರಭದ್ರನಿಗೆ ಗೊತ್ತಾಗದ ಹಾಗೆ ಇಕ್ಕೇರಿಯನ್ನು ಶೀಘ್ರವಾಗಿ ಆಕ್ರಮಿಸಲು ಸರಳವಾದ ದಾರಿಯನ್ನು ನಾನು ತೋರಿಸುತ್ತೇನೆ. ಅದರಿಂದಾಗಿ ವೀರಭದ್ರನ ಮೇಲೆ ಸುಲಭವಾದ ವಿಜಯ ಸಾಧಿಸಬಹುದೆಂದೂ ಮತ್ತು ಇದಕ್ಕೆ ಪ್ರತಿಯಾಗಿ ತನಗೆ ಒಂದು ಲಕ್ಷ ಹೊನ್ನಗಳನ್ನು ನೀಡಬೇಕು" ಎಂದು ವಿವರಿಸಿದನು.[೮೬] ದಕ್ಷಿಣದಲ್ಲಿ ರಾಜ್ಯ ವಿಸ್ತರಣೆಯ ಆಕಾಂಕ್ಷಿಯಾಗಿದ್ದ ಸುಲ್ತಾನ ಮಹಮ್ಮದ ಆದಿಲ್‌ಶಾಹನು ಈ ರೀತಿಯ ಸದವಕಾಶದ ಕಲ್ಪನೆಯನ್ನು ಮಾಡಿರಲಿಲ್ಲ. ತಕ್ಷಣ ಒಪ್ಪಿದ ಸುಲ್ತಾನ ರಣದುಲ್ಲಾಖಾನನ ನೇತೃತ್ವದಲ್ಲಿ ಸೈನ್ಯ ಕಳಿಸಿದನು. ಆದರೆ ಅವನ ದೃಷ್ಟಿ ದಕ್ಷಿಣದಲ್ಲಿ ರಾಜ್ಯ ವಿಸ್ತರಣೆ ಮಾಡುವುದಾಗಿತ್ತೇ ಹೊರತಾಗಿ ಕೆಂಗನಾಯಕನಿಗೆ ಸಹಾಯ ಮಾಡುವ ಕಡೆಗಿರಲಿಲ್ಲ.[೮೭]

ಇಕ್ಕೇರಿಯ ವಶ (೧೬೩೬) :

ಕೆಂಗನಾಯಕನೊಂದಿಗೆ ರುಸ್ತಮ-ಎ-ಝುಮನ್‌ನು ಇಕ್ಕೇರಿಯನ್ನು ತಲುಪಿದನು. ಈ ಆಶ್ಚರ್ಯಕರವಾದ ಆಕ್ರಮಣವನ್ನು ಎದುರಿಸಲಾಗದೇ ವೀರಭದ್ರನು ಕಸನೌಲದುರ್ಗ ಕೋಟೆಗೆ ಪಲಾಯನಗೈದನು. ಇಕ್ಕೇರಿಯು ರುಸ್ತುಮ್-ಎ-ಝುಮನನ ವಶವಾಯಿತು. ರುಸ್ತುಮ್-ಎ-ಝುಮನನು ಒಂದು ತಿಂಗಳ ಕಾಲ ಅಲ್ಲಿಯೇ ನೆಲೆಸಿದನು. ಮತ್ತು ಕೆಂಗನಾಯಕನಿಗೆ ನೀಡಿದ್ದ ಭರವಸೆಯಂತೆ ಒಂದು ಲಕ್ಷ ಹೊನ್ನಗಳನ್ನು ನೀಡಿದನು. ತದನಂತರ ವೀರಭದ್ರನು ಆಶ್ರಯ ಪಡೆದುಕೊಂಡಿದ್ದ ಕಸನೌಲದುರ್ಗಕ್ಕೆ ಮುತ್ತಿಗೆ ಹಾಕಿದನು. ಸುಸಜ್ಜಿತವಾದ ಸೈನ್ಯವನ್ನು ಎದುರಿಸಲು ಅಸಮರ್ಥನಾಗಿದ್ದ ವೀರಭದ್ರನು ಶರಣಾಗತನಾದನು.[೮೮] ಆದಿಲ್‌ಶಾಹಿ ಅಧಿಪತ್ಯವನ್ನು ಒಪ್ಪಿಕೊಂಡು ಬಿಜಾಪುರಕ್ಕೆ ಮೂವತ್ತು (೩೦) ಲಕ್ಷ

ಹೊನ್ನುಗಳನ್ನು ಕೊಡಲು ಒಪ್ಪಿ, ತಕ್ಷಣ ೧೮ ಲಕ್ಷ ಹೊನ್ನಗಳನ್ನು ನೀಡಿದನು. ಉಳಿದದ್ದನ್ನು ಮೂರು ಕಂತುಗಳಲ್ಲಿ ಕೊಡುವುದಾಗಿ ಹೇಳಿದನು.[೮೯]

ಇಕ್ಕೇರಿಯ ಪತನದ ನಂತರ ವೀರಭದ್ರನು ತನ್ನ ರಾಜಧಾನಿಯನ್ನು ಬಿದನೂರಿಗೆ ಸ್ಥಳಾಂತರಿಸಿದನು. ಬಿಜಾಪುರಕ್ಕೆ ಕಂತುಗಳಲ್ಲಿ ಕೊಡಬೇಕಾಗಿದ್ದ ಹೊನ್ನಗಳನ್ನು ವೀರಭದ್ರನು ಕೊಡದಿದ್ದಾಗ ರಣದುಲ್ಲಾಖಾನನು ಮತ್ತೆ ಬಂಕಾಪುರ, ಹರಿಹರ, ಬಸವಾಪಟ್ಟಣಗಳ ಮಾರ್ಗವಾಗಿ ದಾಳಿಮಾಡುತ್ತ ಬಿದನೂರಿಗೆ ಬಂದನು. ಕ್ರಿ.ಶ. ೧೬೩೭-೩೮ ರ ಸುಮಾರಿಗೆ ಈ ಎಲ್ಲ ಪ್ರದೇಶಗಳನ್ನು ಆದಿಲ್‌ಶಾಹಿ ರಾಜ್ಯದಲ್ಲಿ ವಿಲೀನಗೊಳಿಸಿದನು.[೯೦]

ರುಸ್ತುಮ್-ಎ-ಝುಮನ್‌ನ ದ್ವಿತೀಯ ದಂಡಯಾತ್ರೆ :

ಇಕ್ಕೇರಿ ವಶಪಡಿಸಿಕೊಂಡ ಕೆಲವು ವರ್ಷಗಳ ತರುವಾಯ ರುಸ್ತುಮ್-ಎ-ಝುಮನ್‌ನು ಮತ್ತೆ ದಕ್ಷಿಣದ ದಿಗ್ವಿಜಯಗಳನ್ನು ಪ್ರಾರಂಭಿಸಿದನು. ತುಂಗಭದ್ರ ನದಿಯನ್ನು ದಾಟಿ ತಾಡಪತ್ರಿಯನ್ನು ಮುತ್ತಿಗೆ ಹಾಕಲು ಇಚ್ಛಿಸಿದನು. ಆದರೆ ತಾಡಪತ್ರಿಯ ಮಾನ್ಯವರನು ಕೆಂಗನಾಯಕನ ಸ್ನೇಹಿತನಾಗಿದ್ದನು. ಆತ ತನ್ನ ಸಂರಕ್ಷಣೆಗಾಗಿ ಸ್ನೇಹಿತ ಕೆಂಗನಾಯಕನನ್ನು ಕೋರಿದನು. ನೆರೆ ಹೊರೆಯ ರಾಜರೆಲ್ಲ ಕೆಂಗನಾಯಕನಿಗೆ ರಹಸ್ಯ ಸಂದೇಶವನ್ನು ಕಳುಹಿಸಿ, ಒಂದು ವೇಳೆ ತಾಡಪತ್ರಿಯು ಮುಸ್ಲಿಂರ ವಶವಾದರೆ ಇಡೀ (ದಕ್ಷಿಣ) ದೇಶವೆಲ್ಲ ಅವರ ಆಳಿಕೆಗೆ ಒಳಪಟ್ಟಂತಾಗುತ್ತದೆ, ಆದ್ದರಿಂದ ಅದನ್ನು ತಡೆಗಟ್ಟುವ ಪ್ರಯತ್ನ ಮಾಡಲು ತಿಳಿಸಿದರು.[೯೧]

ಆ ಪ್ರಕಾರ ಕೆಂಗನಾಯಕನು ರುಸ್ತುಮ್-ಎ-ಝುಮನ್‌ನಿಗೆ ತಾಡಪತ್ತಿಗೆ ಹೋಗುವ ಮಾರ್ಗ ಸಂಪೂರ್ಣವಾಗಿ ದಟ್ಟವಾದ ಕಾಡುಗಳಿಂದ ಮತ್ತು ಅಪಾಯಕಾರಿ ಬೆಟ್ಟಗಳಿಂದಲೂ ಕೂಡಿದೆಯೆಂದು ಮತ್ತು ಬದಲಾಗಿ ಕೆಂಪೇಗೌಡನ ಆಧೀನದಲ್ಲಿರುವ ಬೆಂಗಳೂರಿನ ಮೇಲೆ ಮುತ್ತಿಗೆ ಹಾಕುವಂತೆ ಸಲಹೆ ನೀಡಿದನು. ಅದಕ್ಕೆ ಪ್ರತಿಯಾಗೆ ತಾನು ಸಹಾಯ ಮಾಡುವುದಾಗಿಯೂ ಮತ್ತು ಸಹಾಯದ ಪ್ರತಿಯಾಗಿ ತನಗೆ ಸಿರಾ ಪ್ರದೇಶವನ್ನು ನೀಡಬೇಕೆಂದು ತಿಳಿಸಿದ'ನು. ಅದಕ್ಕೆ ಸಮ್ಮತಿಸಿದ ರುಸ್ತುಮ್-ಎ-ಝುಮನ್ ಬೆಂಗಳೂರು ಕಡೆಗೆ ನಡೆದನು.[೯೨] ಹೀಗೆ ತಾಡಪತ್ರಿಯತ್ತ ಆದಿಲ್‌ಶಾಹಿ ಸೈನ್ಯ ಹೋಗದಂತೆ ನೋಡಿಕೊಂಡನು.

ಸಿರಾ ಕೋಟೆವಶ :

ಬೆಂಗಳೂರಿಗೆ ಹೋಗುವ ಮುಂಚೆ ಮಾರ್ಗದಲ್ಲಿದ್ದ ಶಿರಾ ಕೋಟೆಯನ್ನು ವಶಪಡಿಸಿಕೊಳ್ಳಲು ಅಫ್ಜಲಖಾನನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿದನು. ಶಿರಾ ಕೋಟೆಯ ಒಡೆಯನಾದ 'ಕಸ್ತೂರಿರಂಗ ನಾಯಕ'ನು ಹೊರ ಬಂದು ಅಫ್ಜಲಖಾನನೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೆಂದನು. ಆದರೆ ಅಫ್ಜಲಖಾನನು ಕಸ್ತೂರಿರಂಗ ನಾಯಕನನ್ನು ವಂಚಿಸಿ ಆತನನ್ನು ಕೊಂದುಬಿಟ್ಟನು. ಆನಂತರ ಶಿರಾ ಕೋಟೆಗೆ ಮುತ್ತಿಗೆ ಹಾಕಿದನು. ಕೋಟೆಯ ಒಳಗಿನ ನಾಯಕರು ತಮ್ಮ ಒಡೆಯನ ಸಾವಿನ ಸೇಡನ್ನು ತೀರಿಸಿಕೊಳ್ಳಲು ಸಿದ್ಧವಾಗುತ್ತಿದ್ದಂತೆ, ಬಿಜಾಪುರದ ಸೈನ್ಯವು ಕೋಟೆಯನ್ನು ವಶಪಡಿಸಿಕೊಳ್ಳಲು ದೃಢ ನಿಶ್ಚಯ ಮಾಡಿತು.

ಅಫ್ಜಲಖಾನನ ಸೈನ್ಯವು ಹೋರಾಡುತ್ತಿದ್ದಂತೆ, ರಣದುಲ್ಲಾಖಾನನ ಮುಖ್ಯ ಸೇನೆಯೂ ಬಂದು ಕೂಡಿಕೊಂಡಿತು. ನಾಯಕರು ತಮ್ಮ ಜೀವನದ ಹಂಗು ತೊರೆದು ಹೋರಾಡಿದರು. ಆದರೂ ಕೂಡ ಕೊನೆಗೆ ಶಿರಾ ಕೋಟೆ ಬಿಜಾಪುರದ ವಶವಾಯಿತು.[೬೩] ರುಸ್ತುಮ-ಎ-ಝುಮನ್‌ನು ಶಿರಾ ಕೋಟೆಯನ್ನು ಬಹರವಸೆ ನೀಡಿದ್ದಂತೆ ಕೆಂಗನಾಯಕನಿಗೆ ನೀಡಿದನು. ಈ ಪ್ರಯತ್ನದಲ್ಲಿ ಪಡೆದುಕೊಂಡಿದ್ದ ಎಲ್ಲಾ ಸಂಪತ್ತನ್ನು ರುಸ್ತುಮ-ಎ-ಝುಮನ್‌ನು ಬಿಜಾಪುರಕ್ಕೆ ಕಳುಹಿಸಿಕೊಟ್ಟನು.[೬೪]

ಬೆಂಗಳೂರಿನ ಆಕ್ರಮಣ:

೧) ಅಂದಿನ ರಾಜಕೀಯ ಸ್ಥಿತಿ:

ಬಿಜಾಪುರದಲ್ಲಿ ಮಹಮ್ಮದ ಆದಿಲ್‌ಶಾಹನು ಆಳ್ವಿಕೆ ಮಾಡುತ್ತಿದ್ದ ಸಮಯದಲ್ಲಿ ಇಮ್ಮಡಿ ಕೆಂಪೇಗೌಡನು ಬೆಂಗಳೂರಿನಲ್ಲಿ ಆಡಳಿತ ನಡೆಸುತ್ತಿದ್ದನು. ಬಸವಾಪಟ್ಟಣ, ಇಕ್ಕೇರಿ, ನಾಗಮಂಗಲ, ಸುಮಕಿ, ಬೇಗೂರು, ಚನ್ನಪಟ್ಟಣ, ಸೋಲೂರು ಮೊದಲಾದ ಸ್ಥಳಗಳಲ್ಲಿ ಪಾಳೆಗಾರರು ಚನ್ನಾಗಿ ಬೇರೂರಿಕೊಂಡಿದ್ದರು. ಆದರೆ ಈ ಪಾಳೆಯಗಾರರು ಪರಸ್ಪರ ಪ್ರೀತಿ ವಿಶ್ವಾಸಗಳ ಕೊರತೆ ಹಾಗೂ ಅಸೂಯೆಯಿಂದಾಗಿ ಆಗಾಗ ಕಾದಾಡುತ್ತಿದ್ದರು. ಮೈಸೂರು ಒಡೆಯರು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದರು. ಆಗ ಬೆಟ್ಟದ ಚಾಮರಾಜರು ಮತ್ತು ರಾಜಒಡೆಯರು ದೊರೆಗಳಾಗಿದ್ದರು. ಈ ರಾಜ್ಯಗಳಲ್ಲಿ ಐಕಮತ್ಯವಿಲ್ಲದೆ, ತಮ್ಮತಮ್ಮ ರಾಜ್ಯಗಳನ್ನು ತಾವೇ ಕಳೆದುಕೊಳ್ಳುವ ಪರಿಸ್ಥಿತಿ ಬಂದಿತು.

ಈತನ್ಮಧ್ಯೆ ಇಕ್ಕೇರಿಯ ವೀರಭದ್ರ ನಾಯಕನ ಮೇಲೆ ಸೇಡುತೀರಿಸಿಕೊಳ್ಳಲು ಬಸವಾಪಟ್ಟಣದ ಕೆಂಗ ಹನುಮಪ್ಪ ನಾಯಕನು ಹೊಂಚುಹಾಕುತ್ತಿದ್ದನು. ಈ ತನ್ನ ಇಂಗಿತವನ್ನು ಬಿಜಾಪುರದ ಸುಲ್ತಾನಿಗೂ ಅರುಹಿದನು. ಇತ್ತ ಮೈಸೂರಿನ ಒಡೆಯರ ಕೋಪಕ್ಕೆ ತುತ್ತಾಗಿಸದ್ದ ನಾಗಮಂಗಲದ ಮಾಜಿ ಪಾಳೆಗಾರ ಚೆನ್ನಯ್ಯನೂ ಬಿಜಾಪುರದ ಸುಲ್ತಾನನ ಮೊರೆಹೊಕ್ಕನು. ಈ ಇಬ್ಬರು ಸಾಲದೆಂಬಂತೆ ಬೆಂಗಳೂರು ಕೆಂಪೇಗೌಡನ ಮೇಲೆ ಕಿಡಿ ಕಾರುತ್ತಿದ್ದ ಸುಮಕಿ ಬೇಗೂರಿನ ಪಾಳೆಯಗಾರನು ಹೇಗಾದರೂ ಮಾಡಿ ಕೆಂಪೇಗೌಡನನ್ನು ಮಟ್ಟ ಹಾಕಬೇಕೆಂದು ನಿರ್ಧರಿಸಿ, ಬಿಜಾಪುರದ ಸುಲ್ತಾನನ ಬಳಿಗೆ ಹೋಗಿ ಎಲ್ಲ ವಿಧವಾದ ಆಸೆಗಳನ್ನು ತೋರಿಸಿ, ಈ ದಿಶೆಯಲ್ಲಿ ನೆರವಾಗಬೇಕೆಂದು ಬೇಡಿಕೊಂಡನು.

ಈ ರೀತಿಯ ಬೇಡಿಕೆಗಳು ಬಂದಿದ್ದರಿಂದ ಮಹಮ್ಮದ ಆದಿಲ್‌ಶಾಹನು ಕೂಡಲೇ ತನ್ನ ಸೇನಾಧಿಕಾರಿಗಳಾದ ರಣದುಲ್ಲಾಖಾನ ಮತ್ತು ಷಾಹಜಿ ಅವರುಗಳನ್ನು ಕರೆಯಿಸಿ ಹೀಗೆ ಹೇಳಿದನು. "ಸೇನಾಪತಿಗಳೇ, ದಕ್ಷಿಣದಲ್ಲಿ ತುಂಬಾ ಗದ್ದಲ ನಡೆದು ಅಶಾಂತಿ ನೆಲೆಸಿದೆ. ಬೆಂಗಳೂರಿನ ಕೆಂಪೇಗೌಡ, ಶ್ರೀರಂಗಪಟ್ಟಣದ ರಾಜಒಡೆಯರು, ಇಕ್ಕೇರಿಯ ನಾಯಕ, ಇವರೆಲ್ಲಾ ಅಧೀನ ಪಾಳೆಯಗಾರರಿಗೆ ಕಿರುಕುಳ ಕೊಡುತ್ತಿದ್ದಾರಂತೆ. ನಾವೀಗ ದಂಡೆತ್ತಿ ಹೋಗಿ, ಅವರ ರಾಜ್ಯದ ಮೇಲೆ ಬಿದ್ದು, ನಮ್ಮೀ ಇಸ್ಲಾಂ ರಾಜ್ಯ ಅಲ್ಲಿ

ನೆಲೆಸುವಂತೆ ವ್ಯವಸ್ಥೆ ಮಾಡಬೇಕಾಗಿದೆ. ಅಲ್ಲಿಯ ಪಾಳೆಗಾರರಲ್ಲಿ ಪರಸ್ಪರ ಐಕಮತ್ಯವಿಲ್ಲ. ಆದ್ದರಿಂದ ನೀವು ಅಲ್ಲಿಗೆ ಹೋಗಿ ಒಬ್ಬರ ಮೇಲೊಬ್ಬರನ್ನು ಎತ್ತಿಕಟ್ಟಿ ಹೋರಾಟಕ್ಕೆ ಅಣಿ ಮಾಡಬೇಕು." ಎಂದೂ ಹೇಳಿದನು.

ಅಂದಿನ ಪದ್ಧತಿಯಂತೆ ಸುಲ್ತಾನನು ಒಬ್ಬ ಮುಸ್ಲಿಂ ಸೇನಾಧಿಪತಿಯೊಂದಿಗೆ ಒಬ್ಬ ಹಿಂದೂ ಸೇನಾಧಿಪತಿಯನ್ನು ಕಳುಹಿಸಬೇಕಾಗಿತ್ತು. ಅದರಂತೆ ರಣದುಲ್ಲಾಖಾನ ಮತ್ತು ಷಾಹಜಿ ಇವರಿಬ್ಬರನ್ನು ಕೆಲಸಕ್ಕೆ ನೇಮಿಸಿದನು. ಸುಲ್ತಾನನ ಆಜ್ಞೆಯಂತೆ ಇಬ್ಬರು ಸೇನಾಧಿಪತಿಗಳ ಮುಂದಾಳತ್ವದಲ್ಲಿ ಬಿಜಾಪುರದ ಸೈನ್ಯ ದಕ್ಷಿಣದತ್ತ ಹೊರಟಿತು.[೯೫]

೨) ಬಿಜಾಪುರದ ಸೈನ್ಯಕ್ಕೆ ಪಾಳೆಗಾರರ ಸಹಾಯ :

ಈ ರೀತಿ ಸುಲ್ತಾನನ ಆಜ್ಞೆಯ ಮೇರೆಗೆ ದಕ್ಷಿಣದೆಡೆಗೆ ಹೊರಟ ರಣದುಲ್ಲಾಖಾನ ಮತ್ತು ಷಹಾಜಿ ನೇತೃತ್ವದ ಬಿಜಾಪುರದ ಸೈನ್ಯದೊಂದಿಗೆ ಹರಪನಹಳ್ಳಿ, ಕನಕಗಿರಿ, ಸೊಂಡೂರು, ಉಜ್ಜಿನಿ, ರಾಯದುರ್ಗಗಳ ಪಾಳೆಗಾರರಲ್ಲದೇ, ಹಟ್ಟಿಯ ವೀರಪ್ಪ ನಾಯಕ, ದೊಡ್ಡೇರಿಯರಸ, ಕುಂದರಪೆಯ ಸೈನಿಕರು, ಹಿರಿಯೂರು ತಮ್ಮಣ ನಾಯಕ, ಚಿಕ್ಕನಾಯಕನಹಳ್ಳಿಯ ಬೈರನಾಯಕ, ತುರುಗೆರೆ ಹನುಮಪ್ಪ ನಾಯಕ, ಬೇಲೂರ ನರಸಿಂಹಪುರ ಪಾಲು ಪತಿಗಳ ಅರಸರು ಇವರೆಲ್ಲರೂ ಕೂಡಿಕೊಂಡಿದ್ದರು.[೯೬]

೩) ರಣದುಲ್ಲಾಖಾನನ ಸೈನ್ಯದ ವೈಖರಿ :

ದಕ್ಷಿಣದ ಮೇಲೆ ದಂಡಯಾತ್ರೆ ಕೈಗೊಂಡ ಮಹಮ್ಮದೀಯ ಸೈನ್ಯವು ಹೇಗಿತ್ತು ಎಂಬುದನ್ನು ಚಾರಣ ಕವಿ 'ಗೋವಿಂದ ವೈದ್ಯ'ನು ಕಣ್ಣಾರೆ ಕಂಡವನಾಗಿದ್ದು ತನ್ನ 'ಕಂಠೀರವ ನರಸರಾಜ ವಿಜಯ'ದಲ್ಲಿ ಈ ರೀತಿಯಾಗಿ ಸೊಗಸಾಗಿ ವರ್ಣಿಸಿದ್ದಾನೆ.

ಆನೆಯ ಮೇಲೆ ತೊಟ್ಟಿಲ ಚಪ್ಪರದಲಿ ಸಂ
ಮ್ಮಾನದ ಬಿಬ್ಬಿಯರೊಡನೆ !
ಆನಂದವಾಡುತ ಬರುವ ಖಾನರುಗಳ
ಸೇನ ಬಣ್ಣಿಸುವೆ ನಚ್ಚರಿಯ ॥

ಪಲ್ಲಕ್ಕಿ ದಂಡಿಗೆಗಳ ಮೇಲೆ ತಮ್ಮಯ
ವಲ್ಲಭೆಯರು ಬರುತಿರಲು
ನಿಲ್ಲದೆ ಕುದುರೆಯ ಮೋಹರದೊಳಗಾಗ
ಬಲ್ಲಿದ ಖಾನರೈದಿದರು.

ಬಿಗಿದ ಡಮಾಣದಲೊಂಟೆಗಳಗಣಿತ
ಝುಗಝುಗಿಸುವ ಕಾಂತಿಯಿಂದ

ಸೊಗಸುವ ಕೊಲ್ಲಾರ ಬಂಡಿಯ ಲೆಕ್ಕವ
ಬಗೆವ ನಾರಾದಂದಿನೊಳಗೆ
ಕೂಳ ಪಾಳೆಯದ ಸಂಗಡ ಕುದರೆಯ ಮೇಲೆ
ಕಾಲ ಕುಪ್ಪಸ ಪಾಪೋಸು
ಜೋಲುವ ರವಿಕೆಯ ಮೋಲೆಕಟ್ಟುಗಳ ಚೆಲ್ವ
ಸೂಳೆಯರೈದಿದರಾಗ
ಹೂಡಿದ ಬಂಡಿಗಳೊಳಗೆ ಪಿರಂಗಿಗ
ಳೀಡಿರಿದಗಣಿತವಾಗಿ
ಕೂಡೆ ಖಾನನ ದಂಡಿನೊಳಗೈದಿ ಬರುವ ನಿ
ರೂಢಿಯನೇನ ಬಣ್ಣಿಸುವೆ
ಸರಳು ತುಂಬಿದ ತರಕಸ ಸಿಂಗಾಡಿಗ
ಳಿರದೆ ಸಾಸಿರಬಂಡಿಗಳಲಿ
ಪರಿಪೂರ್ಣದಲಿ ಬರುತಿರ್ದುವಾ ದಂಡಿನ
ಬರವನದೇನ ಬಣ್ಣಿಸುವೆ
ಕರಿಯ ಮದ್ದಿನ ತಿತ್ತಿ ಬಾಣದ ಹೇರುಗ
ಳಿರದಪಿನಿಯ ಸಾಲ ಮೊಟ್ಟೆ
ಬರುತಿರ್ದುವು ಲಕ್ಕ ಸಂಖೆಯೊಳಾ ಬಲ
ದಿರುವ ಬಣ್ಣಿಪೊಡಾರಳವು.
ಹೇಸರಗತ್ತೆಯ ಮೇಲೆ ಬಂಗಿಯ ಹೇರು
ಸಾಸಿರ ಗಂಗಸಾರಗಳ
ಸೂಸುವ ಸಾರಾಯದ ಪೀಪಗಳ ಲೆಕ್ಕ
ವೀಸೆಂದು ಪೇಳ್ವರಾರದನು.
ಎತ್ತಿನ ಮೇಲೆ ದಂಡಿನ ಸಂಜೋಗವ
ಮತ್ತಾಗಲುಕಿ ಹೇರಿಕೊಂಡು
ಬಿತ್ತರದೊಳಗೈತಹ ವಾಣಿಜಿಕರ
ಮೊತ್ತವ ಬಣ್ಣಿಪರಾರು
ಕೊಡಲಿ ಕೈ ಮಚ್ಚು ಗುದ್ದಲಿ ಮೊನೆಹಾರೆಗಳ್

ಪಿಡಿದ ಕರದ ಕುಡುಗೋಲು

ತಡಿಕೆ ಮಕ್ಕರಿ ಸಹ ಬಹ ಕಾಮಾಟದ

ಬಿಡು ಮಂದಿಗೆ ಲೆಕ್ಕವಿಲ್ಲ

ಕೊಟ್ಟಾಣಿಗರು ಕಮ್ಮಾರರು ಬಹು ಬಗೆ

ರೊಟ್ಟಿ ಸಕ್ಕರೆ ತುಪ್ಪಗಳ

ಮೊಟ್ಟೆಗಳನು ಮಾರುವ ಬೇಹಾರಿಗ

ಇಟ್ಟಣಿಸುಲೈದಿದರು.[೬೭]

ಇದೇ ವಿಷಯವನ್ನು ಬೆಟಗೇರಿ ಕೃಷ್ಣಶರ್ಮರು ತಮ್ಮ 'ಕರ್ನಾಟಕ ಜನಜೀವನ' ಎಂಬ ಗ್ರಂಥದಲ್ಲಿ ಈ ರೀತಿಯಾಗಿ ವಿವರಿಸಿದ್ದಾರೆ.

"ಸೈನ್ಯದ ಮುಂದೆ ನಾಲ್ಕೆಂಟು ಸಾವಿರದಷ್ಟು 'ಧಾಳಿಯ' ಕುದರೆಗಳಿದ್ದವು. ಎಲ್ಲೆಲ್ಲೂ ಆಗಾಗ 'ತೂಳುವ ಬಲು ಬೊಬ್ಬೆಯಿಂದ' ಆಕಾಶ ಮಂಡಲವೇ ಘೀಳಿಟ್ಟದ್ದಿತು. ಆನೆಗಳ ಮೇಲಿನ ತೊಟ್ಟಿಲು, ಚೆಪ್ಪರ (ಅಂಬಾರಿ) ಸುಮ್ಮಾನದ 'ಬಿಬ್ಬಿಯರೊಡನೆ ಕೂಳಿತು ಹಲವು ಜನ ಖಾನರು ಆನಂದವಾಡುತ್ತ ಬರುತ್ತಿರುವರು. ಕುದರೆಯ ಸೈನ್ಯದ ಮೇಲಾಧಿಕಾರಿಗಳಾದ ಖಾನರ ವಲ್ಲಭೆಯರು ಪಲ್ಲಕ್ಕಿ-ದಂಡಿಗೆಗಳ ಮೇಲೆ ಬರುತ್ತಿರುವರು. 'ಡಮಾಣ' ಬಿಗಿದ ಅಗಣಿತ ಒಂಟೆಗಳು, ಝುಗಝುಗಿಸುವ ಕಾಂತಿಯಿಂದ ಸೂಗಸುವ 'ಕೊಲ್ಲಾರ'ಗಳು ದಂಡಿನೊಂದಿಗೆ ಇರಬೇಕಲ್ಲವೇ? ಆ ಕೂಳೆಪಾಳೆಯದ ಸಂಗಡ ಕುದರೆಯ ಮೇಲೆ-ಕಾಲಪುಪ್ಪಸ (ಚೆಲ್ಲಣ) ಪಾಪೋಸು, ಜೋಲುವ ರವಿಕೆಯ ಮೊಲೆಕಟ್ಟು ಇವುಗಳಿಂದ ಕೂಡಿದ ಚಲುವೆಯರಾದ ಸೂಳೆಯರು ಬರುತ್ತಿದ್ದರು. ಹೂಡಿದ ಬಂಡಿಗಳೊಳಗೆ ಈಡಿರದ (ತುಂಬಿದ) ಫಿರಂಗಿ (ತೋಪು)ಗಳು ಅಗಣಿತವಾಗಿ ನಡೆದಿದ್ದುವು. ಸರಳು (ಬಾಣ)ಗಳು ತುಂಬಿದ ತರಕಸ (ಬತ್ತಳಿಕೆ)ಗಳು, ಸಾವಿರಾರು ಬಂಡಿಗಳಲ್ಲಿ ತುಂಬಿ ತುಂಬಿ ಸಾಗಿದ್ದುವು. ಅದರಂತೆಯ ಕರಿಯಮದ್ದಿನ ತಿತ್ತಿ, ಬಾಣದ ಹೇರುಗಳೂ, ಅಪಿನಿಯ(ಅಫೀಮು) ಸಾಲು ಮೂಟೆಗಳೂ, ಲಕ್ಷ ಸಂಖ್ಯೆಯಲ್ಲಿ ಬರುತ್ತಿದ್ದವು. ಬಂಗಿಯ ಹೇರುಗಳು, ಸಾಸಿರಗಟ್ಟಲೆ ಗಂಗಸಾರ(ಒಂದು ಬಗೆಯ ಹೆಂಡ) ಸಾರಾಯಗಳೂ, ತುಂಬಿ ಸೂಸುವ ಪೀಪಗಳೂ ಲೆಕ್ಕವೀಸೆಂದು ಹೇಳಲಿಕ್ಕೆ ಬಾರದಷ್ಟು ದಂಡಿನೊಂದಿಗಿದ್ದವು. ದಂಡಿನ ಸಂಜೋಗ(ಸಮವಸ್ತ್ರ)ಗಳನ್ನು ಎತ್ತಿನ ಮೇಲೆ ಹೇರಿಕೊಂಡು ವಾಣಿಜಿಕರ ಮೊತ್ತವೇ ಹೊರಟಿದ್ದಿತು. ಸೈನ್ಯದ ಪಾಳೆಯ ಬಿಟ್ಟಲ್ಲೆಲ್ಲ ಕೆಲಸ ಮಾಡಲು ಕಾಮಾಟರು ಬೇಕಲ್ಲವೇ? ಅಂತಹ ಕಾಮಾಟದ ಬಿಡುಮಂದಿ ಕೊಡಲಿ, ಕೈಮಚ್ಚು, ಗುದ್ದಲಿ, ಮೊನೆಹಾರ, ಕುಡುಗೋಲು, ತಡಿಕೆ, ಮಕ್ಕರಿ(ದೊಡ್ಡ ಬುಟ್ಟಿ), ಇವುಗಳನ್ನೆಲ್ಲ ತುಂಬಿಕೊಂಡು ಹೊರಟಿದ್ದರು. ಇವರಲ್ಲದೇ ಕೊಟ್ಟಾಣಿಕರು (ಕುಟ್ಟು-ಬೀಸುವವರು), ಬಗೆಬಗೆಯ ರೊಟ್ಟಿ-ಸಕ್ಕರೆ-ತುಪ್ಪ-ಮೊಟ್ಟೆಗಳನ್ನೆಲ್ಲ ಮಾರುವ ಬೇಹಾರಿಗರು ಮೊದಲಾದವರು ಇಟ್ಟಣಿಸುತಲಿ ಐದಿದರು.[೬೮]

೪) ಮುಸ್ತಫಾಖಾನನ ಆತ್ಮ ಪ್ರಶಂಸೆ :

ಬಾದಶಾಹ ಮಹಮ್ಮದನು ಮುಸ್ತಫಾಖಾನನೆಂಬ ಇನ್ನೊಬ್ಬ ಸರದಾರನನ್ನು ಕರ್ನಾಟಕದ ಮೇಲೆ ದಾಳಿ ಮಾಡಲು ಕಳುಹಿಸಿಕೊಟ್ಟನು. ಈ ಖಾನನು ತನ್ನ ಒಡೆಯ ನೆದುರು

ಹಲವು ಮಾತೇಕಲೆ ಜೀಯ, ವೀಳ್ಯವ ಕೊಟ್ಟು
ಕಳುಹೆನ್ನ ! ಕರ್ನಾಟಕವ ।
ಸೆಳೆದು ನಿಮ್ಮಯ ವಶಮಾಡದೊಡಾಸ್ಥಾನ
ದೊಳಗೆನ್ನನಿರಿಸಬೇಡ ॥

ಎಂದು ಪ್ರತಿಜ್ಞೆ ಮಾಡಿ ಹೋರಟನು. ಇವನು 'ತುರುಗೆರೆಗ ಅರೆಗಾವುದದೆ' ಬೀಡು ಬಿಟ್ಟನು. ಅವನ ಬೀಡಿನಲ್ಲಿ ಗುಡಿ, ಗೂಡಾರ, ನೀಟಿನ ಸರವತಿಗೆ(?) ಇವು ಪ್ರತಿಯೊಬ್ಬ ಖಾನನಿಗೂ ಇದ್ದವು. 'ಕರಿಗಳ ಶಾಲೆ'ಯಿದ್ದಿತು. ತುರಗಗಳಲಾಯವಿದ್ದಿತು. 'ಬಹುವಸ್ತು ಪರಿಶೋಭಿಪ' ಅಂಗಡಿಗೇರಿ ಇದ್ದಿತು. ಭಂಗಿಯ ಹೇರು, ಅಪಿನಿಯ ಮೊಟ್ಟೆ, ಸಾರಾಯದ ಅಂಗಡಿ, ಸುರೆಯ ತಿತ್ತಿಗಳ ಜಂಗುಳಿ ಇವುಗಳ ಸಾಲಪಸರವು ಇದ್ದಿತು. ಡೋಳಿನ ಕುದರೆಗಳೂ, ಡಮಾನದ(ದೊಡ್ಡ ನಗಾರಿಗಳು) ಮದಕರಿಗಳೂ, ಟುಮುಕು (ಚಿಕ್ಕ ನಾಗಾರಿ)ಗಳ ಒಂಟೆಗಳೂ, ಪಾಳೆಯದ ಅಂಗರಕ್ಷಣೆಯ ರಾವುತರ ಕೂಡ ಸಪ್ಪಳ ಮಾಡುತ್ತ ತಿರುಗುತ್ತಿದ್ದವು. ದಂಡಿನ ಎಚ್ಚರಿಕೆಯ ಕಾವಲಿಗೆಂದು 'ಹೊಸ ಮನುಷ್ಯರ ವಗಲಿಗೆ'(ವಾಸನೆಗೆ) ಗಳ್ಳಿಕ್ಕುತ ಮುಸುಕಿ ಮುಂಬರುವ ನಾಯಿಗಳೂ ಶೋಭಿಸುತ್ತಿದ್ದವು.[೮೮]

ಈ ರೀತಿಯಾಗಿ ರಣದುಲ್ಲಾಖಾನ ಮತ್ತು ಮುಸ್ತಫಾಖಾನರಿಬ್ಬರ ನೇತೃತ್ವದ ಸೈನ್ಯದ ಬಣ್ಣೆಯನ್ನು ನೋಡಿದರೆ ಅಂದಿನ ಕಾಲದ ಮಹಮ್ಮದೀಯರ ಯುದ್ಧ ಸೇನೆಯ ಚಿತ್ರ ಕಣ್ಣೆದುರು ಕಟ್ಟುತ್ತದೆ. ಇನ್ನು ಮಹಮ್ಮದೀಯರ ಸೈನ್ಯ ನಾಡಿನಲ್ಲಿ ಅಂದು ಹೇಗೆ ಹೇಗೆ ಹಾವಳಿ ನಡೆಸುತ್ತಿತ್ತೆಂಬುದನ್ನು ನೋಡಬೇಕಾದರೆ ನಾವು ರಣದುಲ್ಲಾಖಾನನ ಸೈನ್ಯದ ಮುಂದುವರಿಕೆಯನ್ನು ನೋಡಬೇಕು.

೫) ದಾಳಿಯಿಂದಾಗಿ ಜನರಲ್ಲಿ ಉಂಟಾದ ಭೀತಿ ಮತ್ತು ಹಾಹಾಕಾರ :

ಹೆಂಡಿರುಗಳನ್ನು ಬಪ್ಪಿಟ್ಟು ಓಡಿದವರ ಶಿಶುತಂಡವನು ಈಜಾಡಿದವರ, ಗಂಡನ ಬಿಟ್ಟು ಬಾಯ್ಬಿಡುತ್ತೈದಿದ ಹೆಂಗಳ ಅಂಡಲೆ(ದುಃಖ)ಗಳನ್ನು ಬಣ್ಣಿಸಿ ಹೇಳಲಿಕ್ಕಾಗದು, ಗೊಳೆಯೆದ್ದ ಜನರಲ್ಲಿಯ ಅನೇಕ ಬಸಿರಿಯರು ಗಿಡಗಳ ಬುಡದಲ್ಲಿಯೇ ಹೆತ್ತು ಬಿಟ್ಟರು. ಆ ಬಾಣಂತಿಯರನ್ನು, ತುಂಬಿದ ಬಸಿರಿಯರನ್ನೂ ಒಡನೆ ಸಾಗಿಸಲಾರದವರು 'ಕಡುಗಲಿ ರಣಧೂಳಿಖಾನನ' ಅಬ್ಬರಕ್ಕೆ ಅಂಜಿ ಅಡವಿಗಳನ್ನು ಸೇರಿದರು. ಆಗ ಎಲ್ಲೆಲ್ಲಿಯೂ ಜನರ ಮನದಲ್ಲಿ ಹುಟ್ಟಿದ ಹಾಹಾಕಾರ ಹೇಗಿತ್ತೆಂಬುದನ್ನು ಈ ಪದ್ಯದಲ್ಲಿ ಕಾಣಬಹುದು.

ಕಣ್ಣಿನೊಳಗೆ ಖಾನ ಕನಸಿನೊಳಗೆ ಖಾನ

ಬಣ್ಣಿಸೆ ಮನದೊಳು ಖಾನ ।

ತಿಣ್ಣ ವಡೆದ ಖಾನನ ಸುದ್ದಿ ಜಪವಾಗಿ

ಬಣ್ಣಗೆಟ್ಟದು ಲೋಕವೆಲ್ಲ ॥[೧೦೦]

ಬೆಂಗಳೂರಿನ ಮುತ್ತಿಗೆ :

ಬೆಂಗಳೂರಿನ ಮುತ್ತಿಗೆ ಮೂರು ದಿನಗಳ ಕಾಲ ನಡೆಯಿತು. ಇಮ್ಮಡಿ ಕೆಂಪೇಗೌಡನ ಸೈನ್ಯದಲ್ಲಿ ಫಿರಂಗಿಗಳಿರಲಿಲ್ಲ. ಸೈನಿಕ ಸಿಬ್ಬಂದಿಯೂ ಸಾಲದಾಗಿತ್ತು. ಬಿಜಾಪುರದ ಸೈನ್ಯದಲ್ಲಾದರೋ ಅಸಂಖ್ಯಾತ ಮಂದಿ ಕುದರೆ ಸವಾರರು, ಅನೇಕ ಮುಖ್ಯ ಸರದಾರರಾದ ಪರಾತಖಾನ್, ಕೈರಿತಿಖಾನ್, ಬಲವಂತಖಾನ್, ಮುಸ್ತಫಾಖಾನ, ಅಬುದುಲ್ಲಾಖಾನ್, ಅಂಕುಶಖಾನ್, ಸೋಲ್ಲಾಪುರದ ಸಿದ್ದೀಮಲ್ಲಿಕಖಾನ್, ಅದ್ದಮಖಾನ್, ಜಿಲಹರಖಾನ್, ಮಹಮೂದಖಾನ, ಗಲೀಖಾನ್, ಫತೇಖಾನ್ ಮೊದಲಾದವರು ಇದ್ದರು. ಅಲ್ಲದೇ ಕಾಲಾಳುಗಳು ಇದ್ದವು. ಬೆಂಗಳೂರಿನ ಗಡಿ ಪ್ರದೇಶಗಳಲ್ಲಿ ಸಾಕಷ್ಟು ಸೈನ್ಯವಿದ್ದಿತಾದರೂ, ಅಗಾಧ ಸಂಖ್ಯೆಯಲ್ಲಿದ್ದ ಶತ್ರು ಸೈನ್ಯವನ್ನು ಎದುರಿಸಿ ಹೋರಾಡಲಾರದೆ ಒಳಗೆ ಬಿಟ್ಟರು. ಬೆಂಗಳೂರಿನ ಕೋಟೆ ಬಾಗಿಲುಗಳಲ್ಲಂತೂ ಪ್ರತಿಭಟನೆಯೇ ಇಲ್ಲವಾಗಿತ್ತು. ಹೀಗಾಗಿ ಶತ್ರು ಸೈನ್ಯ ಸಲೀಸಾಗಿ ಬೆಂಗಳೂರು ನಗರದೊಳಕ್ಕೆ ನುಗ್ಗಿತು. ಕೆಂಪೇಗೌಡನು ಮಹಾಪರಾಕ್ರಮಿಯಾದರೂ ನೆರೆಹೊರೆಯ ಚಾಡಿಕೋರರ ಹಾಗೂ ಅಸೂಯಾಪರ ಪಾಳೆಯಗಾರರ ದೆಸೆಯಿಂದಾಗಿ ಈ ಮುತ್ತಿಗೆಯಲ್ಲಿ ಸೋಲನ್ನನುಭಿಸಬೇಕಾಯಿತು. ಗೌಡನ ಪರಾಕ್ರಮ ಇಲ್ಲಿ ಗೌಣವಾಗಿತ್ತು. ಅವನ ಪರಾಕ್ರಮವೆಷ್ಟಿದ್ದರೇನು? ಕಿಡಿಗೇಡಿ ಪಾಳೆಯಗಾರರನೇಕರು ಬೇಟೆಯನ್ನು ತಮ್ಮ ಮನೆಯೊಳೆಗೇ ಕಟ್ಟಿ ಹುಲಿಗೆ ಆಮಂತ್ರಣ ಕೊಟ್ಟಿದ್ದರು. ಹುಲಿ ಬೇಟೆಯನ್ನು ಕಬಳಿಸಿತಲ್ಲದೆ ಆಮಂತ್ರಣ ಕೊಟ್ಟವರನ್ನೂ ನಾಶಮಾಡಿತು.

ಸೋಲುವ ಚಿಹ್ನೆಗಳು ತೋರಿದ ಕೂಡಲೇ ಕೆಂಪೇಗೌಡನು ಒಪ್ಪಂದಕ್ಕಾಗಿ ಹೇಳಿಕಳುಹಿಸಿದನು. ಇದಕ್ಕೆ ರಣದುಲ್ಲಾಖಾನ ಮತ್ತು ಷಹಜಿಯೂ ಸಮ್ಮತಿಸಿದರು. ಈ ಒಪ್ಪಂದದ ಪ್ರಕಾರ ಇಮ್ಮಡಿ ಕೆಂಪೇಗೌಡನಿಗೆ ಬೆಂಗಳೂರಿಗೆ ಬದಲಾಗಿ ಮಾಗಡಿ ದೊರಕಿತು. ಬೆಂಗಳೂರ ಬಿಜಾಪುರದವರಿಗೆ ಉಳಯಿತು. ಹೊಸಕೋಟೆ ಬಿಜಾಪುರಕ್ಕೆ ಸೇರಿತು. ಬದಲಾಗಿ ಆನೇಕಲ್ ಅದರ ಪಾಳೆಯಗಾರನಿಗೆ ಸೇರಿತು. ಹಾಗೆಯೇ ಕೋಲಾರ ಬಿಜಾಪುರದವರಿಗೆ ಸೇರಿ, ಪುಂಗನೂರು ಅದರ ಪಾಳೆಯಗಾರನಿಗೆ ಲಭಿಸಿತು.[೧೦೧]

ಹೀಗೆ ಬೆಂಗಳೂರು ಬಿಜಾಪುರದವರಿಗೆ ಸೇರಿತು. ನಂತರ ಮಹಮ್ಮದ ಆದಿಲ್‌ಶಾಹನು ಷಾಹಜಿಗೆ ಬೆಂಳಗೂರಿನ ಜಹಗೀರನ್ನು ದಯಪಾಲಿಸಲಾಯಿತು.

ಸೋತ ಪಾಳೆಯಗಾರರು :

ಇಮ್ಮಡಿ ಕೆಂಪೇಗೌಡನು ಸೋತು ಹಿಮ್ಮೆಟ್ಟಿದ ಬಳಿಕ ಇವನ ಅಧೀನದಲ್ಲಿದ್ದ ಬಲ್ಲಾಳಪುರ, ಕೋಳಾಲ, ಚಿಕ್ಕಬಲ್ಲಾಳಪುರ, ಹೊಳವನಹಳ್ಳಿ, ಹೊಸಕೋಟೆ, ಬಾವಲೂರ, ಹೊಸವೂರು, ಕಗ್ಗೊಂದಿ, ಮಾಸ್ತಿ, ದೇವಂಡಪುರಿ, ಸೂಲಿಬೆಲೆ, ಸಿಡಿಲುಘಟ್ಟ ಈ ಪಾಳೆಯಗಾರರೆಲ್ಲರೂ ಹೆದರಿ ರಣದುಲ್ಲಾಖಾನನಿಗೆ ಕಾಣಿಕೆಯನ್ನಿತ್ತು ಅವನ ಅಧೀನರಾದರು. ಈ ಬಗ್ಗೆ 'ಕಂಠೀರವ ನರಸರಾಜ ವಿಜಯ' ಕಾವ್ಯದ ಪದಗಳನ್ನೇ ಇಲ್ಲಿ ಉದಾಹರಿಸಲು ಸೂಕ್ತವೆನಿಸುತ್ತದೆ.

ಬಲ್ಲಾಳಪುರದ ಕೋಳಾಲ ಬಿಜ್ಜಾವರ
ದಲ್ಲಿಯ ಪ್ರಭು ಮನ್ನೆಯರು ।
ತಲ್ಲಣಗೊಂಡು ಖಾನನಿಗೆ ಬೇಡಿದುದಿತ್ತು
ನಿಲ್ಲದೆ ಕೂಟಕೈದಿದರು ।

ಚಿಕಬಳಲಾಪುರ ನೆರೆ ಹೊಳವನಹಳ್ಳಿ
ಯಕಳಂಕ ಹೊಸ ಕೋಟೆಯವರು ।
ಮುಖಬಂಗಿತರಾಗಿ ಖಾನನ ಸಂಗಡ
ಸಕಲ ಬಲದೆ ತೆರಳಿದರು ॥

ಬಾವಲೂರುತಿ ಹೊಸಊರು ಕಗ್ಗೊಂದಿಯ
ತೀವಿದ ಮಾಸ್ತಿಯ ನೃಪರು ।
ದೇವಂಡಪುರಿ ಸೂರೆಬಲೆ ಸಿಡಿಲ್‌ಗಟ್ಟದ
ಬೂವರರೊಡನೈದಿದರು ॥.[೧೦೨]

ಶ್ರೀರಂಗಪಟ್ಟಣದ ಮೇಲೆ ದಾಳಿ :

ಬೆಂಗಳೂರದ ವಿಜಯದ ನಂತರ ರುಸ್ತುಮ್-ಎ-ಝುಮನ್‌ನು ಶ್ರೀರಂಗಪಟ್ಟಣದ ರಾಜನಾದ ಕಾಂತಿರಾಯನನ್ನು ಶಿಕ್ಷಿಸಲು ಹೊರಟನು. ಶ್ರೀರಂಗಪಟ್ಟಣ ಕೋಟೆಯ ಒಂದು ಭಾಗವನ್ನು ವಶಪಡಿಸಿಕೊಳ್ಳಲಾಯಿತು. ಕಾಂತಿರಾಯನು ತನ್ನ ರಾಯಭಾರಿಯನ್ನು ಕಳಿಸಿ ಕೋಟೆಯನ್ನು ಮರಳಿ ಬಿಟ್ಟುಕೊಟ್ಟರೆ ಐದು ಲಕ್ಷ ಹೊನ್ನಗಳನ್ನು ಯುದ್ಧ ನಷ್ಟಭರ್ತಿ ರೂಪದಲ್ಲಿ ಕೊಡುವುದಾಗಿ ರುಸ್ರುಮ್-ಎ-ಝುಮನ್‌ನಿಗೆ ತಿಳಿಸಲಾಯಿತು. ರುಸ್ತುಮ್-ಎ-ಝುಮನ್‌ನು ಇದಕ್ಕೆ ಒಪ್ಪಿಕೊಂಡನು. ಈ ಸಂದರ್ಭದಲ್ಲಿ ಮಳೆ ಪ್ರಾರಂಭವಾಗುವ ಲಕ್ಷಣವಾದ್ದುದರಿಂದ ರುಸ್ತುಮ್-ಎ-ಝುಮನ್‌ನು ಒಪ್ಪಂದದ ಹಣ ಮತ್ತು ಕಾಣಿಕೆಗಳನ್ನು ಪಡೆದುಕೊಂಡು ಬರಲು ತನ್ನ ಅಧಿಕಾರಿಯಾದ ಖಾಜಿ ಸೈಯದ್‌ನನ್ನು ಮತ್ತು ಕೆಂಗನಾಯಕನನ್ನು ಅಲ್ಲಿಯೇ ಬಿಟ್ಟು ತಾನು ತನ್ನ ಸೈನ್ಯದೊಂದಿಗೆ ಬಿಜಾಪುರಕ್ಕೆ ಹೊರಟನು.[೧೦೩]

ಸಂಪತ್ತು ಮತ್ತು ಕಾಣಿಕೆಗಳೆಲ್ಲ ತನ್ನ ಕೈಯಲ್ಲಿ ಬಂದ ಕೂಡಲೇ ಖಾಜಿ ಸೈಯದ್‌ನು ಬಿಜಾಪುರಕ್ಕೆ ಹೊರಟನು. ಮತ್ತು ಕೆಂಗನಾಯಕನು " ಇನ್ನು ಮೇಲಿಂದ ದೀರ್ಘಕಾಲ ರುಸ್ತುಮ್-ಎ-ಝುಮನ್‌ನಿಗೆ ನಿಷ್ಠನಾಗಿ ಇರಲು ಆಗುವದಿಲ್ಲವೆಂದು" ಹೇಳುವ ಮೂಲಕ ತನ್ನ ರಾಜ್ಯ ಬಸವಾಪಟ್ಟಣದ ಕಡೆಗೆ ಹೊರಟು, ಅಲ್ಲಿ ಕೋಟೆಗಳನ್ನು ಕಟ್ಟಿಕೊಳ್ಳುವುದು, ಸೈನ್ಯದ ಸಂಘಟನೆ ಮಾಡಿಕೊಳ್ಳುವುದು ಅಲ್ಲದೇ ಸುತ್ತಲಿನ ರಾಜರೊಡನೆ ಮಿತ್ರತ್ವವನ್ನು ಬೆಳೆಸಿಕೊಳ್ಳುವ ಮೂಲಕ ಬಿಜಾಪುರದ ಅಧಿಕಾರ ಕಿತ್ತೊಗೆಯುವ ಕಾರ್ಯದಲ್ಲಿ ಜಾಗೃತನಾದನು.

ಕೆಂಗನಾಯಕನ ದಂಗೆ :

ಕೆಂಗನಾಯಕನ ಪ್ರತಿಭಟನಾತ್ಮಕ ಚಟುವಟಿಕೆಗಳನ್ನು ಕೂಡಲೇ ಗಮನಿಸಿದ ಮಹಮ್ಮದ ಆದಿಲ್‌ಶಾಹನು, ಅವನನ್ನು ಶಿಕ್ಷಿಸಲು ರುಸ್ತುಮ್-ಎ-ಝುಮನ್ನಿಗೆ ನಿರ್ದೇಶಿಸಿದನು. ಇವನು ಬಸವಾಪಟ್ಟಣದ ಕಡೆಗೆ ನಡೆದು ಒಡೆದು ಆಳುವ ನೀತಿಯನ್ನು ಅನುಸರಿಸಿ ವೀರಭದ್ರನಿಗೆ ಪತ್ರವೊಂದನ್ನು ಬರೆದು, ಕೆಂಗನಾಯಕನನ್ನು ಸೋಲಿಸುವಲ್ಲಿ ತನಗೆ ಸಹಾಯ ನೀಡಿದರೆ ಅವನ ಪ್ರದೇಶವನ್ನು ಒದಗಿಸಿಕೊಡುವುದಾಗಿ ತಿಳಿಸಿದನು. ವೀರಭದ್ರನು ಈ ವಿಚಾರಕ್ಕೆ ಸ್ಪಂದಿಸಿ ಒಪ್ಪಿಗೆಯನ್ನು ಸೂಚಿಸಿದನು. ಆ ಪ್ರಕಾರ ರುಸ್ತುಮ್-ಎ-ಝುಮನ್‌ನು ಕೆಂಗನಾಯಕನಿಗೆ ಬಸವಾಪಟ್ಟಣ ಕೋಟೆಯನ್ನು ಒಪ್ಪಿಸಲು ಸಂದೇಶವನ್ನು ಕಳುಹಿಸಿದನು. ಆದರೆ ಕೆಂಗನಾಯಕನು ದುರಹಂಕಾರವನ್ನು ತೋರಿದನು ಮತ್ತು ತನ್ನ ಕೊಟೆಯ ಸುತ್ತಲೂ ಸೈನ್ಯವನ್ನು (ರಕ್ಷಣಾ ಪಡೆಯನ್ನು) ನೆಯೋಜಿಸಿದನು.

ರುಸ್ತುಮ್-ಎ-ಝುಮನ್‌ನು ಕ್ರಿ.ಶ. ೧೬೩೯ ರಲ್ಲಿ ತನ್ನ ಸೈನ್ಯದೊಂದಿಗೆ ಅತ್ಯಂತ ಯೋಜನಾತ್ಮಕವಾಗಿ ಕೋಟೆಯನ್ನು ಸುತ್ತುವರಿದಾಗ ಭಯ ಭೀತನಾದ ಕೆಂಗನಾಯಕನು ಕೋಟೆಯಿಂದ ಕೂಡಲೇ ಹೊರಬಂದು ೪೦ ಲಕ್ಷ ಹೊನ್ನಗಳೊಂದಿಗೆ ಕೋಟೆಯನ್ನು ಒಪ್ಪಿಸಲು ಒಪ್ಪಿಕೊಂಡನು. ಅವನನ್ನು ಕೆಲವು ದಿನಗಳ ಕಾಲ ಬಂಧಿಸಿಡಲಾಯಿತು. ಈ ಘಟನೆಯಿಂದ ಸುತ್ತಮುತ್ತಲಿನ ಉಳಿದ ರಾಜರು ಕೂಡಾ ರುಸ್ತುಮ್-ಎ-ಝುಮನ್‌ನಿಗೆ ಶರಣಾಗತರಾದರು.[೧೦೪]

ಚಿಕ್ಕನಾಯಕನ ಹಳ್ಳಿಯ ರಾಜನ ಬಂಡಾಯ :

ಬಸವಾಪಟ್ಟಣವನ್ನು ಗೆದ್ದುಕೊಂಡ ರುಸ್ತುಮ್-ಎ-ಝುಮನ್‌ನು ಕೆಲವು ದಿನ ಅಲ್ಲಿಯೇ ಇದ್ದನು. ಈ ವೇಳೆಯಲ್ಲಿಯೇ ಚಿಕ್ಕನಾಯಕನ ಹಳ್ಳಿಯ ರಾಜನ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ರುಸ್ತುಮ್-ಎ-ಝುಮನ್‌ನು ತನ್ನ ದಂಡನಾಯಕ ಅಫಜಲ್‌ಖಾನನನ್ನು ಕಳುಹಿಸಿ ಈ ಬಂಡಾಯವನ್ನು ಶಮನಗೊಳಿಸಿ ಅಲ್ಲಿನ ರಾಜನಿಂದ ೨೦,೦೦೦ ಹೊನ್ನುಗಳೊಂದಿಗೆ ಆ ಕೋಟೆಯನ್ನು ವಶಪಡಿಸಿಕೊಂಡನು.[೧೦೫]

ಬೇಲೂರು ಮತ್ತು ತಮಕೂರನ್ನು ವಶಪಡಿಸಿಕೊಂಡದ್ದು :

ಚಿಕ್ಕನಾಯಕನಹಳ್ಳಿಯಿಂದ ಮುಂದುವರೆದ ಅಫಜಲ್‌ಖಾನನು ಬೇಲೂರನ್ನು ವಶಪಡೆಸಿಕೊಳ್ಳಲು ಮುನ್ನಡೆದನು. ಬಸವಾಪಟ್ಟಣದಿಂದ ಚಿಕ್ಕನಾಯಕನಹಳ್ಳಿ ತಲುಪಿದ ರುಸ್ತುಮ್-ಎ-ಝಮನ್‌ನು ಅಲ್ಲಿಂದ ಅಫಜಲ್‌ಖಾನನ ಸಹಾಯಕ್ಕಾಗಿ ವಜೀರರ ನೇತೃತ್ವದಲ್ಲಿ ಒಂದು ಸೈನ್ಯ ಪಡೆಯನ್ನು ಕಳಿಸಿದನು. ಬಿಜಾಪುರ ಸೈನ್ಯವು ಬೇಲೂರು ಕೋಟೆಗೆ ಮುತ್ತಿಗೆ ಹಾಕಿತು. ನಾಲ್ಕು ತಿಂಗಳ ಕಾಲ ಮುತ್ತಿಗೆ ಕಾರ್ಯಾಚರಣೆಯ ನಂತರ ಕೋಟೆಯಿಂದ ಹೊರ ಬಂದ ಅಲ್ಲಿನ ರಾಜನಾದ ವೆಂಕಟಪತಿಯು ರುಸ್ತುಮ್-ಎ-ಝಮನ್‌ನೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡು ತನ್ನ ಪ್ರದೇಶದ ಒಂದು ಭಾಗ ಮತ್ತು ಅಪಾರ ಸಂಪತ್ತನ್ನು ಕೊಡಲು ಒಪ್ಪಿಕೊಂಡನು. ಆ ಸಂಪತ್ತನ್ನೆಲ್ಲ ಬಿಜಾಪುರಕ್ಕೆ ಕಳಿಸಿ ಕೊಡಲಾಯಿತು. ಹಾಗೆಯೇ ತಮಕೂರಿನ ರಾಜನಿಂದಲೂ ಸಂಪತ್ತನ್ನು ಪಡೆದುಕೊಳ್ಳಲಾಯಿತು.[೧೦೬]

ಜಿಂಜಿ, ತಂಜಾವೂರ್ ಮತ್ತು ಮಧುರಾದ ಮೇಲೆ ದಾಳಿ :

ಕರ್ನಾಟಕವನ್ನು ಆಕ್ರಮಿಸಿದ ಮೇಲೆ, ಅದರಿಂದ ಮಹಮ್ಮದ ಆದಿಲ್‌ಶಾಹನು ಬಹಳಷ್ಟು ಉತ್ತೇಜಿತನಾದನು. ಹಾಗೆಯೇ ವಿಜಯದುಂಬಿಯನ್ನು ಮೊಳಗಿಸುತ್ತಾ ಮುಂದುವರಿಯಬಹುದು ಎಂದುಕೊಂಡು, ಅವನು ಕೋರಮಂಡಲ ತೀರದ ಕಡೆಗೆ ಲಕ್ಷ್ಯ ಹರಿಸಿದನು. ಈ ಪ್ರದೇಶವು ಮದ್ರಾಸು ಮತ್ತು ಕರ್ನಾಟಕಗಳಲ್ಲದೇ, ಜಿಂಜಿ, ತಂಜಾವೂರ ಮತ್ತು ಮಧುರೆಯ ನಾಯಕರುಗಳ ನಡುವೆ ಹಂಚಿ ಹೋಗಿತ್ತು. ೧೬೪೪ ರವರೆಗೆ ಈ ನಾಯಕರುಗಳು ಅರವೀಡು ರಾಜವಂಶದ ಮೂರನೆಯ ಶ್ರೀರಂಗನ ಸಾಮಂತರಾಗಿದ್ದರು.[೧೦೭]

ಈ ಮೂರು ಜನ ನಾಯಕರು, ೧೬೪೫ ರಲ್ಲಿ ಶ್ರೀರಂಗನ ವಿರುದ್ಧ ತಿರುಗಿ ಬಿದ್ದರು. ಆಗ ಶ್ರೀರಂಗನು ಮಹಮ್ಮದ ಆದಿಲ್‌ಶಾಹನ ಸಹಾಯವನ್ನು ಯಾಚಿಸಿದನು. ರಾಜ್ಯವನ್ನು ವಿಸ್ತರಿಸಬೇಕೆಂದು ತೀವ್ರ ಹಂಬಲವನ್ನು ಹೊಂದಿದ್ದ, ಆದಿಲ್‌ಶಾಹನಿಗೆ ಇದು ಒಂದು ಒಳ್ಳೆಯ ವರದಾನದ ಪರಿಸ್ಥಿತಿಯಾಯಿತು. ಅದಕ್ಕೆ ಒಪ್ಪಿದ ಆದಿಲ್‌ಶಾಹನು, ಕೂಡಲೇಮುಸ್ತಫಾಖಾನನ ನಾಯಕತ್ವದ ಸೈನ್ಯವನ್ನು ಕಳಿಸಿದನು. ಆ ಸೈನ್ಯವು ಆ ಸೈನ್ಯ ಬೆಂಗಳೂರಿಗೆ ಬಂದ ಕೂಡಲೇ, ಆ ಮೂರು ಜನ ನಾಯಕರು ಅವನಿಗೆ ಶರಣಾಗತರಾದರು. ಈ ರಾಜ ತಂತ್ರವು ರಣತಂತ್ರದ ದಿಕ್ಕನ್ನೇ ಬದಲಿಸಿತು. ಜಿಂಜಿಯ ನಾಯಕನು ಶ್ರೀರಂಗನ ವಿರುದ್ಧವಾಗಿ ತಮಗೆ ಸಹಾಯ ಮಾಡಬೇಕೆಂದು ಕೇಳಲು ಒಬ್ಬ ಅಧಿಕಾರಿಯನ್ನು ಕಳಿಸಿದ. ಮತ್ತು ಜಿಂಜಿಯನ್ನು ಆಕ್ರಮಿಸುವುದಕ್ಕಿಂತಾ ಮೊದಲು 'ವೆಲ್ಲೂರ'ನ್ನು ಆಕ್ರಮಿಸಬೇಕೆಂದೂ, ಏಕೆಂದರೆ ಅಲ್ಲಿ ಬಹಳಷ್ಟು ಸಂಪತ್ತು ಇದೆ ಎಂದೂ ಮುಸ್ತಫಾಖಾನನ್ನು ಒಪ್ಪಿಸಿದನು. ಆ ಪ್ರಕಾರ ಮುಸ್ತಫಾಖಾನನು ವೆಲ್ಲೂರಿನ ಮೇಲೆ ಆಕ್ರಮಣ ನಡೆಸಿ, ಅದನ್ನು ವಶಪಡಿಸಿಕೊಂಡನು. ಇದಾದ ಮೇಲೆ ಮತ್ತಷ್ಟು ಆಕ್ರಮಣ ಮಾಡಬೇಕೆಂದು ಮುಸ್ತಫಾಖಾನನ್ನು ಒಪ್ಪಿಸಿದ. ಪೆನುಗೊಂಡಕ್ಕೆ ಮುತ್ತಿಗೆ ಹಾಕಿದರೆ ಅದರ ಖರ್ಚಿನ ಬಾಬ್ತು ೨೦ ಲಕ್ಷ

ಪಗೋಡಗಳನ್ನು ಕೊಡುವುದಾಗಿ ಜಿಂಜಿಯ ನಾಯಕನು ಹೇಳಿದನು. ಇದಕ್ಕೆ ಮುಸ್ತಫಾಖಾನನು ಒಪ್ಪಿ ಕೋಕಂತಿವಾರವನ್ನು ತೆಗೆದುಕೊಳ್ಳುವಸಲುವಾಗಿ, ಕೋಲಾರದ ಕಡೆಗೆ ಹೊರಟನು.[೧೦೮] ಮುಸ್ತಫಾಖಾನನು ಜಿಂಜಿ, ತಂಜಾವೂರ, ಮಧುರಾ, ಹರಪನಹಳ್ಳಿ ಮತ್ತು ಇಕ್ಕೇರಿಯವರುಗಳನ್ನು ಒಂದು ಒಕ್ಕೂಟದಂತೆ ಮಾಡಿ, ಅದನ್ನು ಶ್ರೀರಂಗನ ವಿರುದ್ಧ ಎತ್ತಿ ಕಟ್ಟಿದನು.[೧೦೯]

ಗೋಲ್ಕೊಂಡದ ಮೀರ ಜಮ್ಲಾನು, ಜಿಂಜಿಯ ಮೇಲೆ ಎರಗಿದಾಗ (೧೬೪೮) ಮಧುರೆಯ ತಿರುಮಲ ನಾಯಕನು ಮಹಮ್ಮದ ಆದಿಲ್‌ಶಾಹನ ಸಹಾಯವನ್ನು ಕೇಳಿದನು. ಆಗ ಮುಸ್ತಫಾಖಾನ ಮತ್ತು ಮೀರ ಜುಮ್ಲಾರು ಒಟ್ಟುಗೂಡಿದರು. ಮೀರ ಜಮ್ಲಾನು, ಮುಸ್ತಫಾಖಾನನನ್ನು ಜಿಂಜಿಯನ್ನು ತೆಗೆದುಕೊಳ್ಳಲು ಬಿಟ್ಟನು. ಹೀಗೆ ಬಿಜಾಪುರ ಮತ್ತು ಗೋಲ್ಕೊಂಡದವರು ಒಂದಾದದ್ದು ಜಿಂಜಿಯ ನಾಯಕನಿಗೆ ತಿಳಿಯಲಿಲ್ಲ. ಅವನು ಬಿಜಾಪುರದವರ ವಿರುದ್ಧ, ಗೋಲ್ಕೊಂಡದವರ ಸಹಾಯವನ್ನು ಕೇಳಿದನು.[೧೧೦] ಅದರ ಜೊತೆಗೆ ಬಿಜಾಪುರದವರಿಗೆ ತನ್ನ ಶರಣಾಗತಿಯನ್ನೂ ಸೂಚಿಸಿದನು.

ಮುಂದೆ ೧೬೪೮ ರಲ್ಲಿ ಮುಸ್ತಫಾಖಾನನ ಮರಣದ ಹೊಂದಿದನು. ಆಗ ಸೈನ್ಯಾಧಿಕಾರಿಗಳಲ್ಲಿ ಒಗ್ಗಟ್ಟಿಲ್ಲದ್ದರಿಂದ, ಜಿಂಜಿಯ ಮೇಲಿನ ಕಾರ್ಯಚರಣೆಯು ಒಂದು ವರ್ಷದ ತನಕ ಮುಂದೂಡಲ್ಪಟ್ಟಿತು. ೨೮ ಡಿಸೆಂಬರ ೧೬೪೯ ರಂದು ಜಿಂಜಿಯ ರೂಪ ನಾಯಕನು, ತನ್ನ ಕೋಟೆಯನ್ನು ಬಿಜಾಪುರದ ಖಾನ ಮಹಮ್ಮದನಿಗೆ ವಹಿಸಿಕೊಡಲೇ ಬೇಕಾದಂಥ ಪರಿಸ್ಥಿಯನ್ನು ತಂದೊಡ್ಡಿದರು. ಜಿಂಜಿಯು ಬಿಜಾಪುರಕ್ಕೆ ನಾಲ್ಕು ಕೋಟಿ ಹೂನ್ನಗಳಷ್ಟು ಸಂಪತ್ತನ್ನ ತಂದುಕೊಟ್ಟಿತು.[೧೧೧]

ಬಿಜಾಪುರದವರು ಜಿಂಜಿಯನ್ನು ವಶಪಡಿಸಿಕೊಂಡಿದ್ದಲ್ಲದೇ, ಕಡಲೂರಿನ ಹತ್ತಿರದಲ್ಲಿದ್ದ ತೇಗಿನಪಟ್ಟಣವನ್ನು ವಶಪಡಿಸಿಕೊಂಡರು. ಇದಾದ ನಂತರ ಶಹಾಜಿಯು ಪೋರ್ಟನೋವೋಕ್ಕೂ ಕಾಲಿಟ್ಟನು. ಜಿಂಜಿಯನ್ನು ಗೆದ್ದ ಹುರುಪಿನಲ್ಲಿದ್ದ ಖಾನ ಮಹಮ್ಮದನು ಮಧುರಾ ಮತ್ತು ತಂಜಾವೂರ ರಾಜ್ಯಗಳಲ್ಲಿ ತನ್ನ ಆಕ್ರಮಣವನ್ನು ಮುಂದುವರೆಸಿದನು. ದುರ್ಬಲರಾದ ಆ ಪ್ರದೇಶದ ನಾಯಕರು ತಮ್ಮ ಸುರಕ್ಷತೆಗಾಗಿ ಅರಣ್ಯವನ್ನು ಹೊಕ್ಕರು ಇದರಿಂದಾಗಿ, ಬಿಜಾಪುರದವರು ಆ ಪ್ರದೇಶವನ್ನು ಚನ್ನಾಗಿ ಲೂಟಿ ಹೊಡೆದರು. ಅವರು ಕೊನೆಗೆ ಆದಿಲ್‌ಶಾಹನ ಅಧೀನರಾಗಿರಲು ಒಪ್ಪಿಕೊಂಡರು. ಖಾನ ಮಹಮ್ಮದನು ನಾಯಕರಿಂದ ಅಪಾರ ಸಂಪತ್ತನ್ನು ಹೊಡೆದುಕೊಂಡನು.[೧೧೨]

ಮಹಮ್ಮದ ಆದಿಲ್‌ಶಾಹನ ಕಾಲದ ವಿದೇಶಿ ಸಂಬಂಧಗಳು :

ಬಿಜಾಪುರವು ದೇವಪ್ರಭುತ್ವದ (ಪುರೋಹಿತಶಾಹಿಯ) ವಿವಿಧ ಜನಾಂಗಗಳನ್ನುಳ್ಳ ಮತ್ತು ವಂಶಪಾರಂಪರ್ಯ ಆಡಳಿತವನ್ನು ಹೊಂದಿದ್ದ ಒಂದು ರಾಜ್ಯವಾಗಿತ್ತು.[೧೧೩] ಅದು ಮುಖ್ಯವಾಗಿ ಒಂದು 'ಅಫಾಕಿ' ರಾಜ್ಯವಾಗಿತ್ತು. ಆಡಳಿತ ನಡೆಸುತ್ತಿದ್ದವರು ಪರ್ಶಿಯ ಮತ್ತು ಟರ್ಕಿಯ ಮೂಲದವರಾಗಿದ್ದರು. ಅದಲ್ಲದೇ ಆಡಳಿತದ ಪ್ರಮುಖ ಸ್ಥಾನದಲ್ಲಿದ್ದವರು ಮಧ್ಯ ಏಷ್ಯಾ ಮತ್ತು ಅರಬಸ್ಥಾನದವರು.[೧೧೪] ಹೀಗಾಗಿ

ಆಸ್ಥಾನದಲ್ಲಿ ನಾನಾ ನಮೂನೆಯ ಜನಗಳ ಗುಂಪುಗಳು ಇದ್ದವು. ಆಫಾಕಿಗಳಲ್ಲಿ, ಸಮಾಜದ ಮೇಲ್ವರ್ಗದವರೇ ಹೆಚ್ಚಾಗಿದ್ದರು. ಕೇಂದ್ರ ಸರಕಾರದ ಮಟ್ಟದಲ್ಲೂ ಮತ್ತು ಪ್ರಾಂತೀಯ ಮಟ್ಟದಲ್ಲೂ ಬಿರೀ ಅವರೇ ಇರುತ್ತಿದ್ದರು.

'ಆದಿಲ್‌ಶಾಹಿ'ಗಳು ಮುಖ್ಯವಾಗಿ ಶಿಯಾ ಪಂಗಡದವರು, ಕೆಲವೊಮ್ಮೆ, ನಡ ನಡುವೆ, ಸುನ್ನಿಯವರೂ ಪ್ರಮುಖವಾಗಿ ಇದ್ದರೂ. ಆದಿಲ್‌ಶಾಹಿ ರಾಜವಂಶದವರಲ್ಲಿ, ಐದು ಜನಗಳು ಷಿಯಾ ಪಂಗಡದವರು ಮತ್ತು ಉಳಿದವರು ಸುನ್ನಿ ಪಂಗಡಕ್ಕೆ ಸೇರಿದವರು[೧೧೫]. ಷಿಯಾ ಆಡಳಿತಗಾರರು, ಎಲ್ಲದಕ್ಕೂ ಇರಾನಿನ ಷಾನನ್ನು ಮಾರ್ಗದರ್ಶನಕ್ಕಾಗಿ ಮಾಡಿಕೊಂಡಿದ್ದರು.[೧೧೬] ಆತನ ಅಧ್ಯಾತ್ಮ ಮಾರ್ಗದರ್ಶನವನ್ನು ಸಹಾ ಅವರು ಒಂದು ರೀತಿಯಲ್ಲಿ ಒಪ್ಪಿದ್ದರು.

ಬಿಜಾಪುರ ರಾಜ್ಯದ ಪ್ರದೇಶವು ಸ್ವಲ್ಪ ತುಂಡು ತುಂಡಾಗಿ ಕೂಡಿಸಿ ಇಟ್ಟಂತೆ ಇತ್ತು. ಅದು ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಕಡೆಗಳಲ್ಲೂ ಅಸಂಬದ್ಧವಾಗಿ ಹರಡಿತ್ತು.[೧೧೭] ಇದರಿಂದಾಗಿ, ಅವರೇಲ್ಲರಿಗೂ ತಾವು ಒಂದೇ ದೇಶದವರು ಎಂಬ ಭಾವನೆ ಅಷ್ಟೊಂದು ಪ್ರಬಲವಾಗಿ ಇರಲಿಲ್ಲ. ಒಗ್ಗಟ್ಟಿಗೆ ಬೇಕಾದಂಥ ಒಂದೇ ಒಂದು ಅಂಶ ಎಂದರೇ ಅವರೇಲ್ಲರೂ, ವಂಶಪಾರಂಪರ್ಯವಾಗಿ ಆಳಲ್ಪಡುತ್ತಿದ್ದಂಥ ಒಂದು ಅರಸೊತ್ತಿಗೆಯಿಂದ ಆಳಲ್ಪಡುತ್ತಿದ್ದರು ಎಂಬುದು ಅದು ಸಹಾ ಅನೇಕ ಸಾರಿ, ಅಧಿಕಾರದ ಆಧಾರದ ಮೇಲೆ ಇರುತ್ತಿತ್ತು.[೧೧೮]

ಮಹಮ್ಮದ ಆದಿಲ್‌ಶಾಹನು ಅನೇಕ ರಾಜ್ಯಗಳ ಜೊತೆಗೆ ಸಂಬಂಧಗಳನಿಟ್ಟುಕೊಂಡಿದ್ದನು ಅವುಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಮಹಮ್ಮದ ಆದಿಲ್‌ಶಾಹ ಮತ್ತು ಷಾ ಸಫಿ :

ಒಂದನೆಯ ಅಬ್ಬಾಸ ರವರ ಮರಣದ ನಂತರ ೧೬೨೯ ರ ಜನೆವರಿಯಲ್ಲಿ ಷಾ ಸಫಿ ಯವರು ಪಟ್ಟಕ್ಕೆ ಬಂದರು. ಆ ಅವಧಿಯಲ್ಲಿನ ಕೆಲವು ವರ್ಷಗಳು ಇರಾನ್ ಮತ್ತು ಬಿಜಾಪುರಗಳ ನಡುವೆ ಹೆಚ್ಚು ರಾಜ ತಾಂತ್ರಿಕ ವಹಿವಾಟಗಳು ಇರಲಿಲ್ಲ, ಷಾ ಸಫಿಯವರು ಮತ್ತೆ ಅದನ್ನು ಪ್ರಾರಂಬಿಸಲು ಪ್ರಯತ್ನಿಸಿದರು. ೧೬೩೭ ರ ಸುಮಾರಿಗೆ, ಷಾ ಸಫಿಯವರು ಅಹಮ್ಮದ ಬೇಗ್ ಖರ್ಚಿಯವರನ್ನು ನೇಮಿಸಿ ಮಹಮ್ಮದ ಆದಿಲ್‌ಶಾಹನ ಆಸ್ಥಾನಕ್ಕೆ ಕಳಿಸಿದರು. ಆತನ ಕೈಯಲ್ಲಿ ಒಂದು ಪತ್ರವನ್ನು ಮಹಮ್ಮದ ಆದಿಲ್‌ಶಾಹನಿಗೆ ಕಳುಹಿಸಿದರು. ಅದರಲ್ಲಿ ಸ್ವಾಭಾವಿಕವಾಗಿ ತಮ್ಮ ತಮ್ಮ ನಡುವಿನ ಮಧುರ ಬಾಂಧವ್ಯದ ಬಗ್ಗೆ ಪ್ರಸ್ತಾಪಿಸಿದ ನಂತರ, ಮಧ್ಯ ಮತ್ತು ಪಶ್ಚಿಮ ಏಷ್ಯಾಗಳಲ್ಲಿನ ರಾಜಕೀಯ ಬೆಳವಣಿಗೆಯನ್ನು ಪ್ರಸ್ತಾಪಿಸುತ್ತಾ, ಆಗಾಗ್ಗೆ ಸಂಪರ್ಕದಲ್ಲಿರಬೇಕೆಂದು ಹೇಳಿ, ತಮ್ಮಿಂದ ಏನಾದರೂ ಸಹಾಯ ಅಥವಾ ಕೆಲಸ ಆಗಬೇಕಾಗಿದ್ದರೆ, ತಪ್ಪದೇ ತಿಳಿಸಬೇಕೆಂದು ಬರೆಯಲಾಗಿತ್ತು.[೧೧೯]

[illegible]

ಇದಕ್ಕೆ ಉತ್ತರ ರೂಪವಾಗಿ ಮಹಮ್ಮದ ಆದಿಲ್‌ಶಾಹನು ಅದೇ ವರ್ಷ ಷಾ ಸಫಿಯವರ ಆಸ್ಥಾನಕ್ಕೆ ರಹೀಮ ಅಹಮ್ಮದ ಎಂಬಾತನನ್ನು ರಾಯಭಾರಿಯಾಗಿ ಕಳಿಸಿದನು. ಆದಿಲ್‌ಶಾಹನು ತನ್ನ ಪೂರ್ವಜರಂತೆ ಷಾ ಸಫಿಯವರಿಂದ ಸಹಾಯ ನಿರೀಕ್ಷಣೆಯಲ್ಲಿದ್ದನು.

ಮೊಘಲರು ಇರಾನ್ ಮತ್ತು ದಕ್ಷಿಣ ರಾಜ್ಯಗಳು ಪರಸ್ಪರ ಸಂಪರ್ಕದಲ್ಲಿರುವುದನ್ನು ಅಷ್ಟಾಗಿ ಇಷ್ಟಪಡುತ್ತಿರಲಿಲ್ಲ. ಆದ್ದರಿಂದ ದಕ್ಷಿಣದ ಸುಲ್ತಾನರು ಇರಾನ್‌ಗೆ ತಮ್ಮ ರಾಯಭಾರಿಯನ್ನು ಕಳಿಸುವುದನ್ನು ಅವರು (ಮೊಘಲರು) ವಿರೋಧಿಸುತ್ತಿದ್ದರು.

ಷಾ ಎರಡನೆ ಅಬ್ಬಾಸನು ಔರಂಗಜೇಬನ ವಿರುದ್ಧ ಮುರಾದನ ಜೊತೆ ಸೇರಿದನು. ಔರಂಗಜೇಬನು ದಕ್ಷಿಣದ ರಾಜ್ಯಗಳನ್ನು ನಾಶಮಾಡಬಹುದು ಎಂಬ ಭೀತಿಯಿಂದ ಷಾನು ಹಾಗೆ ಮಾಡಿದನು.[೧೨೦] ಮುಂದೆ ವಾರಸುದಾರರಿಗೆ ಸಂಬಂಧಿಸಿದ ಯುದ್ಧದಲ್ಲಿ, ಎರಡನೆ ಆದಿಲ್‌ಶಾಹನನ್ನು ಮೊಘಲರ ವಿರುದ್ಧ ಎತ್ತಿಕಟ್ಟಿದ.

ಷಾನು ತನ್ನ ರಾಯಭಾರಿಯಾದ ಮಿರ್ಜಾ ಮುಕಿಂ ಕಿತಾಬದಾರ ಎಂಬಾತನನ್ನು ಒಂದು ಪತ್ರ ಸಹಿತ ಮಹಮ್ಮದ ಆದಿಲ್‌ಶಾಹನ ಹತ್ತಿರ ಕಳಿಸಿದನು. ಅದರಲ್ಲಿ ಷಾನು ತಮ್ಮ ಹಳೆಯ ಸ್ನೇಹವನ್ನು ಜ್ಞಾಪಿಸಿದ್ದನು. ಹಾಗೇ ಒಗ್ಗಟ್ಟು ಇಲ್ಲದೇ ಇದ್ದಲ್ಲಿ, ದೊಡ್ಡ ಹಾನಿಯಾಗುವ ಸಂಭವಗಳಿವೆ ಎಂದು ಎಚ್ಚರಿಸಿದ್ದನು. ತಿದ್ದಿಕೊಳ್ಳಲು ಇನ್ನೂ ಸಮಯ ಮೀರಿಲ್ಲ ಎಂಬುದನ್ನು ತಿಳಿಸಿ, ಕುತುಬಷಾನೊಂದಿಗಿನ ವೈಷಮ್ಯವನ್ನು ಮರೆತು ಸ್ನೇಹದಿಂದ ಮತ್ತು ಒಗ್ಗಟ್ಟಿನಿಂದ ಇರಬೇಕೆಂದು ಹೇಳಿದನು ಆಗ ಮಾತ್ರ ಮೊಘಲರ ನಡುವಿನ ಕಾದಾಟಗಳಿಂದ ತಾವು ಲಾಭವನ್ನು ಹೊಂದಬಹುದೆಂದು, ಪ್ರತಿಪಾದಿಸಿದನು. ಮಿರ್ಜಾ ಮುಕಿಂ ಇನ್ನುಳಿದ ವಿಷಯವನ್ನು ವಿವರವಾಗಿ ತಿಳಿಸುವನೆಂದು ಹೇಳಿದ್ದನು.[೧೨೧]

ಮಹಮ್ಮದ ಆದಿಲ್‌ಶಾಹ ಮತು ಅಹಮ್ಮದ ನಗರ:

ಮಹಮ್ಮದ ಆದಿಲ್‌ಶಾಹ, ೨ನೆ ಮುರ್ತುಜಾ ನಿಜಾಮಶಾಹ ಮತ್ತು ೩ನೆ ಹುಸೇನ್ ನಿಜಾಮಶಾಹ :

೧೬೨೬ ರ ಮೇ ತಿಂಗಳನಲ್ಲಿ ಮಲ್ಲಿಕ್ ಅಂಬರ್ ತೀರಿಕೊಂಡ ನಂತರ ಅಹಮ್ಮದ ನಗರ ರಾಜ್ಯವು ಸಂಪೂರ್ಣ ಗೊಂದಲದಲ್ಲಿ ಬಿದ್ದು, ಒಂದು ಬಗೆಯ ಅರಾಜಕತೆ ತಾಂಡವವಾಡಲು ಪ್ರಾರಂಭವಾಯಿತು. ನಿಜಾಮಶಾಹಿಯ ಕೆಲವು ಅಧಿಕಾರಿಗಳನ್ನು ಕರೆತಂದು, ಆ ರಾಜ್ಯದಲ್ಲಿ ಬಿಟ್ಟು ಅವರ ಮೂಲಕ ತಾನು ಕೆಲವು ಪ್ರದೇಶಗಳನ್ನು ಪಡೆದುಕೊಳ್ಳಲು ಮಹಮ್ಮದ ಆದಿಲ್‌ಶಾಹನು ಪ್ರಯತ್ನ ಮಾಡಿದನು. ನಂತರ ತನಗೆ ಸಹಾಯ ಮಾಡಿದ ಅಧಿಕಾರಿಗಳನ್ನು, ಒಳ್ಳೆಯ ಕೆಲಸ ಕೊಟ್ಟು ತನ್ನ ರಾಜ್ಯದಲ್ಲೇ ಇಟ್ಟುಕೊಂಡನು.[೧೨೨]

೧೬೨೮ ರಿಂದ ಆಚೆಗೆ ಮೊಘಲರು ಆಗಾಗ್ಗೆ ಅಹಮ್ಮದ ನಗರದ ಮೇಲೆ ಆಗಾಗ ದಾಳಿ ಮಾಡುತ್ತಲೇ ಇದ್ದರು ಬಿಜಾಪುರದ ಆದಿಲ್‌ಶಾಹನು ಬುದ್ಧಿವಂತಿಕೆಯಿಂದ ಇಬ್ಬರಿಗೂ ಬೇಕಾದವನಂತೆ ವರ್ತಿಸುತ್ತಾ ಹೋದನು. ಅವರಿಬ್ಬರೊಂದಿಗೂ ಆದಿಲ್‌ಶಾಹನು ಕೆಲವು ಕರಾರುಗಳನ್ನು ಮಾಡಿ ಕೊಂಡಿದ್ದನು.

ಷಹಜಹಾನನು ಆದಿಲ್‌ಶಾಹನನ್ನು ಹೆದರಿಸಿದ ಮೇಲೆ, ಆದಿಲ್‌ಶಾಹನು ಸ್ವಲ್ಪ ಸೈನ್ಯದ ಸಹಾಯವನ್ನು ಮಾಡಿದನು. ಅದೇ ವೇಳೆಗೆ ನಿಜಾಮಶಾಹನಿಗೆ ಸ್ವಲ್ಪ ಹಣದ ಸಹಾಯವನ್ನು ಮಾಡಿದನು. ನಿಜಾಮಶಾಹಿಗೆ ಹೀಗೆ ಸ್ವಲ್ಪ ಧನ ಸಹಾಯ ಮಾಡಿ ಅದು ಮುಳುಗಿ ಹೋಗುವುದನ್ನು ತಪ್ಪಿಸಲು ಪ್ರಯತ್ನಿಸುತ್ತಿದ್ದನು. ಅದೇ ವೇಳೆಗೆ ಅದರ ಪಶ್ಚಿಮದ ಕೆಲ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನವನ್ನೂ ಮಾಡುತ್ತಿದ್ದನು. ಬಿಜಾಪುರದವರು ಮಹದ, ಛೋಡೆಗಾವ, ನಿಜಾಂಪುರ ಮತ್ತು ಚೌಲ್‌ಗಳನ್ನು ವಶಪಡಿಸಿಕೊಂಡರೆ, ನಂತರ ಮುಂದೆ ಸ್ವಲ್ಪ ಸಮಯದ ನಂತರ ಚೌಲ್ ಪ್ರದೇಶವನ್ನು ನಿಜಾಮಶಾಹಿಯವರು ಪುನ: ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡರು.[೧೨೩]

ನಿಜಾಮಶಾಹಿಯ ಮಂತ್ರಿಯಾಗಿದ್ದ ಮುಕರಾಬ್‌ಖಾನನು, ನಿಜಾಮಶಾಹಿಯ ಮನೆತನವನ್ನು ಉಳಿಸಲು ಸಹಾಯ ಮಾಡಬೇಕೆಂದು ಆದಿಲ್‌ಶಾಹಿಯನ್ನು ಕೇಳಿದಾಗ, ಅವರು ಸಹಾಯ ಮಾಡಿದರು. ಹಾಗೆ ಸಹಾಯ ಮಾಡಿದರೆ ಅದಕ್ಕೇ ಪ್ರತಿಯಾಗಿ ಸೋಲ್ಲಾಪುರದ ಕೋಟೆಯನ್ನು ತಮಗೆ ಕೊಡುವುದಾಗಿಯೂ ಹೇಳಿದ್ದರು.

ಆದಿಲ್‌ಶಾಹ ಮತ್ತು ಆತನ ಅಧಿಕಾರಿಗಳಾದ ರಣದುಲ್ಲಾಖಾನ ಮತ್ತು ಮುರಾರಿ ಪಂಡಿತರವರು ಬಹಳ ಸಹಾಯ ಮಾಡುವುದರ ಮೂಲಕ ನಿಜಾಮನನ್ನು ಉಳಿಸಿದರು. ರಣದುಲ್ಲಾಖಾನ್ ಮತ್ತು ಆದಿಲ್‌ಶಾಹರವರು ನಿಜಾಮನಿಗೆ ಬೆನ್ನೆಲುಬಾಗಿ ನಿಂತರು.[೧೨೪]

ಮಹಮ್ಮದ ಆದಿಲ್‌ಶಾಹನ ಈ ಕಾರ್ಯವು ಷಹಜಹಾನನಿನಿಗೆ ಬಹಳ ಸಿಟ್ಟನ್ನು ತರಿಸಿತು. ಅದರಿಂದಾಗಿ ಅವನು ಬಿಜಾಪುರದ ಮೇಲೆ ಮೂರು ಕಡೆಗಳಿಂದ ಆಕ್ರಮಣವನ್ನು ಪ್ರಾರಂಭಿಸಿದರು. ಇದರಿಂದ ಸ್ವಲ್ಪ ಹೆದರಿದ ಆದಿಲ್‌ಶಾಹನು ತಾನು ಅಹಮ್ಮದ ನಗರಕ್ಕೆ ಕೊಟ್ಟಿದ್ದ ಬೆಂಬಲದಿಂದ ಸ್ವಲ್ಪ ಹಿಂದೆ ಸರಿದನು. ಇದರ ಜೊತೆಗೆ, ತನ್ನ ಸಾಹಸದ ಬಗ್ಗೆ ಷಹಜಹಾನಿಗೂ ಸ್ವಲ್ಪ ಅನುಮಾನವಿತ್ತು. ಅದರಿಂದ ತನ್ನ ರಾಯಭಾರಿಯನ್ನು ಬಿಜಾಪುರಕ್ಕೆ ಕಳಿಸಿ, ಅಹಮ್ಮದನಗರವನ್ನು ಭಾಗ ಮಾಡಿ, ಇಬ್ಬರೂ ಹಂಚಿಕೊಳ್ಳುವ ಬಗ್ಗೆ ಉಪಾಯವನ್ನು ಮಾಡುತ್ತಿದ್ದನು.[೧೨೫] ೧೬೩೬ ರಲ್ಲಿ ಷಹಜಹಾನನು ಅಹಮ್ಮದನಗರ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಹೀಗೆ ಆದಿಲ್‌ಶಾಹನು ಸಹಾ ನಿಜಾಮಶಾಹಿ ವಂಶವು ಅಳಿದು ಹೋಗುವಂತೆ ಮಾಡುವುದರಲ್ಲಿ, ಆದಿಲ್‌ಶಾಹನ ಪಾತ್ರ ಸಾಕಷ್ಟು ಇತ್ತು ಎಂಬುದನ್ನು ಮರೆಯಲಾಗದು.

ಮಹಮ್ಮದ ಆದಿಲ್‌ಶಾಹ ಮತ್ತು ಕುತುಬಶಾಹಿಗಳು :

ಮಹಮ್ಮದ ಆದಿಲ್‌ಶಾಹ ಮತ್ತು ಅಬ್ದುಲ್ಲಾ ಕುತುಬ್‌ಶಾಹ:

ಬಿಜಾಪುರ ಮತ್ತು ಗೋಲ್ಕೊಂಡ ಈ ಎರಡು ರಾಜ್ಯಗಳ ನಡುವೆ ಸುಮಾರು ನಲವತ್ತು(೪೦)ವರ್ಷಗಳ ಬಹಳ ಹಾರ್ದಿಕವದ ಬಾಂಧವ್ಯ ಇತ್ತು.

ಮಹಮ್ಮದ ಆದಿಲ್‌ಶಾಹನು ಫಬ್ರವರಿ ೧೬೩೩ ರಲ್ಲಿ ಅಬ್ದುಲ್ಲಾ ಕುತುಬಶಾಹನ ತಂಗಿಯಾದ ಖದೀಜಾ ಸುಲ್ತಾನಾಳನ್ನು ಮದುವೆಯಾದನು. ಈ ಮದುವೆಯು ಅವರ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿತು.

ಅಹಮ್ಮದನಗರ ನಾಶವಾದದ್ದು ಮತ್ತು ಮೊಘಲರು ಆಕ್ರಮಣ ಮಾಡಬಹುದು ಎಂಬ ಭೀತಿಯು ಬಿಜಾಪುರ ಮತ್ತು ಗೋಲ್ಕೊಂಡ ರಾಜ್ಯಗಳನ್ನು ಹತ್ತಿರಕ್ಕೆ ತಂದಿತು. ಕೆಲವು ಪ್ರಸಂಗಗಳಲ್ಲಿ ತಮ್ಮಿಬ್ಬರ ಶತ್ರುವಿನ ವಿರುದ್ಧ ಒಂದಾಗಿದ್ದರು. ಮೊಘಲರು ಅವರನ್ನು ದೂರ ಇಡಲು ಪ್ರಯತ್ನ ಪಡುತ್ತಿದ್ದರು. ಷಹಜಹಾನನು ಅವರಿಬ್ಬರ ನಡುವೆ ದ್ವೇಷವನ್ನು ಮೂಡಿಸಲು ಅದಷ್ಟೂ ಪ್ರಯತ್ನ ಪಡುತ್ತಲೇ ಇದ್ದನು.

ಕರ್ನಾಟಕವನ್ನು ಪಾಲು ಮಾಡಿಕೊಳ್ಳುವ ಬಗೆಗಿನ ಕರಾರು:

ಮಹಮ್ಮದ ಆದಿಲ್‌ಶಾಹ ಮತ್ತು ಅಬ್ದುಲ್ಲಾ ಕುತುಬಶಾಹ ಇಬ್ಬರು, ತಾವು ಒಬ್ಬೊಬ್ಬರೇ ಕರ್ನಾಟಕವನ್ನು ಆಕ್ರಮಿಸಿಕೊಳ್ಳುವುದು ವ್ಯರ್ಥಪ್ರಯತ್ನ ಎಂಬುದನ್ನು ಮನಗಂಡಿದ್ದರು. ಅದನ್ನು ಸಾಧಿಸಬೇಕಾದರೆ, ತಾವಿಬ್ಬರೂ ಕೂಡಿ ಪ್ರಯತ್ನ ಪಡಬೇಕು ಎಂಬುದನ್ನು ಮನಗಂಡಿದ್ದರು.[೧೨೬]

ಇಬ್ಬರೂ ಸೇರಿ ಕರ್ನಾಟಕವನ್ನು ವಶಪಡಿಸಿಕೊಂಡ ನಂತರ, ಅದರಲ್ಲಿ ೨/೩ ಭಾಗವನ್ನು ಆದಿಲ್‌ಶಾಹಿಗಳು ತೆಗೆದುಕೊಳ್ಳಬೇಕೆಂದೂ ಮತ್ತು ಉಳಿದ ೧/೩ ಭಾಗವನ್ನು ಕುತುಬಶಾಹ ಪಡೆದುಕೊಳ್ಳಬೇಕೆಂದು ೧೬೪೬ ರ ಮಾರ್ಚ-ಏಪ್ರಿಲ್‌ನಲ್ಲಿ ಅವರಿಬ್ಬರೂ ಒಪ್ಪಂದ ಮಾಡಿಕೊಂಡರು. ಮೊದಮೊದಲು ಈ ಒಪ್ಪಂದವು ಸೂಕ್ತವಾಗಿಯೇ ಕಂಡಿತು ಮತ್ತು ಸರಿಯಾಗಿ ಜಾರಿಯಲ್ಲಿತ್ತು. ಇಬ್ಬರೂ ತೃಪ್ತಿಯಿಂದಲೇ ಇದ್ದರು. ಆದರೆ ಸ್ವಲ್ಪ ಸಮಯದ ನಂತರ ಇಬ್ಬರಲ್ಲೂ ಭಿನ್ನಾಭಿಪ್ರಾಯ ಮೂಡತೊಡಗಿತು. ೧೬೪೬ರ ಜೂನ ವೇಳೆಗೆ ಬಿಜಾಪುರ ಮತ್ತು ಗೋಲ್ಕೊಂಡ ರಾಜ್ಯಗಳು ತಮ್ಮ ತಮ್ಮ ಸೇನೆಗಳನ್ನು ವಾಪಸ್ಸು ಕರೆಸಿಕೊಂಡವು ಬಿಜಾಪುರದಿಂದ ಮುಸ್ತಫಾಖಾನ ಮತ್ತು ಗೋಲ್ಕೊಂಡದಿಂದ ಮೀರ್ ಜುಮ್ಲಾ ಕರ್ನಾಟಕದ ಕಡೆಗೆ ಹೊರಟರು.[೧೨೭]

ಜಿಂಜಿ, ಮಧುರಾ, ತಂಜಾವೂರ ಕಡೆಗೆ ಹೋಗುವಾಗ ದಾರಿಯಲ್ಲಿನ ಕೆಲವು ಕೋಟೆಗಳನ್ನು ಮುಸ್ತಫಾಖಾನ ಹಿಡಿದುಕೊಂಡನು.[೧೨೮] ಮೀರ ಜುಮ್ಲಾ ಕೋರಮಂಡಲ್ ಕಡೆಗೆ ಹೊರಟು, ಮದ್ರಾಸಿನ ಹತ್ತಿರ ಸೇಂಟಜಾರ್ಜ ಕೋಟೆಯನ್ನು ಹಿಡಿದುಕೊಂಡನು. ಅವನು ಪುಲಿಕಟ್ ಮತ್ತು ಸೇಂಟ್‌ಥೋಮಗಳನ್ನು ವಶಪಡಿಸಿಕೊಂಡನು. ನಂತರ ಬಿಜಾಪುರ ಮತ್ತು ಗೋಲ್ಕೊಂಡದ ಸೈನ್ಯಗಳು ಒಟ್ಟುಗೂಡಿ, ವೆಲ್ಲೂರಿಗೆ ಮುತ್ತಿಗೆ ಹಾಕಿದವು ಅಲ್ಲಿನ ರಾಜನು ಸೋತು ಶರಣಾಗಿ, ಐವತ್ತು(೫೦) ಲಕ್ಷ ಹೂನ್ನಗಳನ್ನು ಮತ್ತು ೧೫೦ ಆನೆಗಳ ರೂಪದಲ್ಲಿ ಯುದ್ಧದ ಖರ್ಚಿನ ಬಾಬ್ತು ಕೊಡುವುದಾಗಿ ಒಪ್ಪಿದನು. ಆದರೆ ಎಲ್ಲಾ ಹಣವನ್ನು ಬಿಜಾಪುರದವರೇ ತೆಗೆದುಕೊಂಡಿದ್ದುದು ಕುತುಬಶಾಹನ ಅಸಮಾಧಾನಕ್ಕೆ ಕಾರಣವಾಯಿತು.[೧೨೯]

ಜಿಂಜಿಯನ್ನು ಹಿಡಿಯುವಾಗ ಇಬ್ಬರ ಹಿತ ಸಂಬಂಧಗಳು ಇದ್ದುದರಿಂದ ಆಗ ಸ್ವಲ್ಪ ತಂಟೆಯಾಯಿತು. ಇಬ್ಬರು ಅದನ್ನು ಹಿಡಿದುಕೊಳ್ಳಬೇಕೆಂದು ಅಪೇಕ್ಷಿಸಿದರು. ಬಿಜಾಪುರದ ಸೈನ್ಯವು ಜಿಂಜಿಯ

ಕಡೆ ನುಗ್ಗಿತು. ಆಗ ಜಿಂಜಿಯ ನಾಯಕನು ಗೋಲ್ಕೊಂಡದವರ ರಕ್ಷಣೆಯನ್ನು ಕೇಳಿದನು. ಜಿಂಜಿಯ ನಾಯಕರು ತನ್ನ ರಕ್ಷಣೆಯಲ್ಲಿ ಬಂದಿರುವರೆಂದು, ಅದರಿಂದಾಗಿ ಆದಿಲ್‌ಶಾಹನಿಗೆ ಮುಂದುವರೆಯುವುದು ಬೇಡವೆಂದು ತಾಕೀತುಮಾಡಬೇಕೆಂದು ಷಹಜಹಾನನನ್ನು ಕೇಳಿಕೊಂಡನು. ಆದಿಲ್‌ಶಾಹಗೆ ಗೋಲ್ಕೊಂಡದವರು ಮತ್ತು ನಾಯಕರು ಒಂದಾಗುವುದು ಬೇಡವಾಗಿತ್ತು. ಅವನು ಇದರಿಂದಾಗಿ ಕುತುಬಶಾಹನ ಮೇಲೆ ವಿಪರೀತವಾಗಿ ಸಿಟ್ಟುಗೊಂಡನು. ತನ್ನ ಸೈನ್ಯ ಅಧಿಕಾರಿಯಾದ ಮುಝಫರ-ಉದ್ದೀನಖಾನನನ್ನು ಕರೆದು ಗೋಲ್ಕೊಂಡವನ್ನು ಲೂಟಿ ಮಾಡಬೇಕೆಂದು ಮತ್ತು ಅಲ್ಲಿನ ಎಲ್ಲಾ ಕೋಟೆಗಳನ್ನು ನಾಶಮಾಡಬೇಕೆಂದು ಹೇಳಿದನು. ಆಗ ಮೊಘಲ ರಾಯಭಾರಿಯಾಗಿದ್ದ ಮಹಮ್ಮದ ಹುಸೇನ ಎಂಬುವನು ಆದಿಲ್‌ಶಾಹನನ್ನು ತಡೆದನು. ಅವರಿಂದ ಸೂಕ್ತ ಪರಿಹಾರವನ್ನು ಕೊಡಿಸುವುದಾಗಿ ಹೇಳಿ ಆದಿಲ್‌ಶಾಹನನ್ನು ಸಮಾಧಾನ ಪಡಿಸಿದನು. ಮಹಮ್ಮದ ಹುಸೇನನ ಮಾತಿಗೆ ಮಣಿದ ಕುತುಬಶಾಹನು ಅತ್ಯುತ್ತಮ ಉಡುಗೊರೆಗಳನ್ನು ಆದಿಲ್‌ಶಾಹನಿಗೆ ಕೊಟ್ಟನು ಅಲ್ಲದೇ, ಈ ತಂಟೆಯನ್ನು ಬಗೆಹರಿಸಲು ಷಹಜಹಾನನನ್ನು ಕೇಳಿಕೊಂಡನು.

ಕುತುಬಶಾಹನಿಗೆ ಜಿಂಜಿ ಮತ್ತು ತಂಜಾವೂರಿನ ನಾಯಕುರು ಸಹಾಯವನ್ನು ಕೇಳಿದ್ದರು, ತನಗೆ ಬಗೆಹರಿಯದ್ದರಿಂದ, ತಾನು ಷಹಜಹಾನನ ಸಹಾಯವನ್ನು ಕೇಳುತ್ತಿರುವುದಾಗಿ ಅವರ ರಾಜ್ಯಗಳನ್ನು ೨/೩, ೧/೩ ಪ್ರಮಾಣದಲ್ಲಿ ಭಾಗಮಾಡಿಕೊಡಬೇಕೆಂದು ಷಹಜಹಾನನನ್ನು ಕೇಳಿದನು. ಅದೇ ಸಮಯದಲ್ಲಿ ಆದಿಲ್‌ಶಾಹನ ಸತ್ಯ ಸಂಧತೆಯ ಬಗ್ಗೆ ತನಗೆ ಸ್ವಲ್ಪ ಅನುಮಾನವಿರುವುದಾಗಿ ಹೇಳಿದನು. ಮತ್ತು ಕೆಲ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳಲು ಒಬ್ಬ ಅಮೀನನನ್ನು ನೇಮಿಸಬೇಕೆಂದು ಬೇಡಿಕೊಂಡನು.[೧೩೦] ಕುತುಬಶಾಹನು ಕರಾರು ಪತ್ರವನ್ನು ಮಾರ್ಪಡಿಸಬೇಕೆಂದು ಬೇಡಿಕೊಂಡನು. ಆದಿಲ್‌ಶಾಹನು ವಸ್ತುಗಳು, ನಗದು ಹಣ, ಆಭರಣಗಳು, ಆನೆಗಳು ಮುಂತಾದ ಲೂಟಿಯಿಂದ ಬಂದ ವಸುಗಳನ್ನು ಇಟ್ಟುಕೊಳ್ಳಬಹುದು. ಹಾಗೇ ಗೋಲ್ಕೊಂಡದವರು ಪಡೆದುಕೊಂಡಿದ್ದ ಪ್ರದೇಶವನ್ನು, ಇಬ್ಬರು ಸುಲ್ತಾನರ ನಡುವೆ ಸಮವಾಗಿ ಹಂಚಬೇಕು.[೧೩೧]

ಕುತುಬಶಾಹನು ಷಹಜಹಾನನ ಆಜ್ಞೆಯ ಪ್ರಕಾರ ನಡೆಯಲು ಸಿದ್ಧನಾಗಿದ್ದನು, ಇದರಲ್ಲಿ ಷಹಜಹಾನನ ವಿಶ್ವಾಸವನ್ನು ಸಂಪಾದಿಸುವುದು ಅವನ ಮೂಲ ಉದ್ದೇಶವಾಗಿತ್ತು.

ಜಿಂಜಿಗಾಗಿ ಪೈಪೋಟಿ ಮತ್ತು ಮೀರ್ ಜುಮ್ಲಾನ ರಾಜತಂತ್ರ :

ಮಹಮ್ಮದ ಆದಿಲ್‌ಶಾಹ ಮತ್ತು ಅಬ್ದುಲ್ಲಾ ಕುತುಬಶಾಹ ಇಬ್ಬರೂ, ಜಿಂಜಿಯನ್ನು ವಶಪಡಿಸಿಕೊಳ್ಳಲು ಬಹಳ ಕಾತುರರಾಗಿದ್ದರು. ಆದಿಲ್‌ಶಾಹನು ಜನವರಿ ೧೬೪೮ ರಲ್ಲಿ ಜಿಂಜಿಯನ್ನು ವಶಪಡಿಸಿಕೊಳ್ಳುವ ಕೆಲಸವನ್ನು, ಮುಸ್ತಫಾಖಾನನಿಗೆ ವಹಿಸಿಕೊಟ್ಟನು. ಈ ಕಾರ್ಯವನ್ನು ಮಾಡಬೇಕಾದರೆ ಅವನು ಮೀರ ಜುಮ್ಲಾ ಎಂಬುವವನ ಪ್ರದೇಶದಲ್ಲಿ ಹಾದು ಹೋಗಬೇಕಾಗಿತ್ತು. ಅದಕ್ಕಾಗಿ ಅವನು ಮೀರ

ಜುಮ್ಲಾನ ಅಪ್ಪಣೆಯನ್ನು ಕೇಳಿದನು. ಆದರೆ ಇವನು ಜಿಂಜಿಗೆ ಹೋಗುವದಕ್ಕೆ ಮೊದಲೆ ಮೀರ ಜುಮ್ಲಾನು ಅಲ್ಲಿದ್ದನು ಆಗ ಜಿಂಜಿಯ ನಾಯಕನು ಕೋಟೆಯಿಂದ ಹೊರಬಂದು ಮೀರ ಜುಮ್ಲಾನ ಜೊತೆ ಸೇರಿದನು. ಆದರೆ ಮಧುರೆಯ ನಾಯಕನು ಮುಸ್ತಫಾಖಾನನ ಜೊತೆಗೆ ಸೇರಿದನು. ಬಿಜಾಪುರ ಮತ್ತು ಮಧುರೆಯ ಸೈನ್ಯ ಜಿಂಜಿಯ ಮೇಲೆ ಎರಗಿದವು. ಮುಸ್ತಫಾಖಾನ ಮತ್ತು ಮೀರ ಜುಮ್ಲಾ ಒಂದು ಒಪ್ಪಂದವನ್ನು ಮಾಡಿಕೊಂಡು ಹೊರಬಂದರು.[೧೩೨]

ಆದರೆ ಮುಸ್ತಫಾಖಾನನು ನವೆಂಬರ ೯ ೧೬೪೮ ರಂದು ಹಟಾತ್ತನೆ ತೀರಿಕೊಂಡಿದ್ದರಿಂದ, ಅವರ ಕರಾರುಗಳನ್ನು ಕಾರ್ಯರೂಪಕ್ಕೆ ತರಲು ಆಗಲಿಲ್ಲ. ಕೋಪಗೊಂಡ ಮೀರ ಜುಮ್ಲಾ ಬಿಜಾಪುರದವರ ಸಹವಾಸವನ್ನು ಬಿಟ್ಟು, ಜಿಂಜಿಯನ್ನು ತಾನೇ ಆಕ್ರಮಿಸಿಕೊಳ್ಳಬೇಕು ಎಂದುಕೊಂಡನು.

ಮುಸ್ತಫಾಖಾನನು ತೀರಿಕೊಂಡ ನಂತರ ಮಲ್ಲಿಕ್ ರೈಹಾನ್ ಎಂಬುವನನ್ನು ಅಧಿಕಾರಕ್ಕೆ ಬಂದನು. ಇವನು ಮೊದಲಿನ ತಮ್ಮ ಕರಾರಿನ ಪ್ರಕಾರ ನಡೆಯಬೇಕು ಎಂದನು. ಆಗ ಮೀರ ಜುಮ್ಲಾನು ಆಗ ಮೀರ ಜುಮ್ಲಾನು ಹೆದರಿಕೆಯಿಂದ ಹಿಂದೆ ಸರಿದನು. ಆಗ ಅವರಿಬ್ಬರೂ ಆ ಕರಾರಿನಂತೆ ನಡೆಯಲು ಒಪ್ಪಿದರು. ಕೊನೆಗೆ ೧೬೪೮ ರ ಡಿಸೆಂಬರ ಕೊನೆಯ ವೇಳೆಗೆ, ಬಿಜಾಪುರದವರು ಜಿಂಜಿಯನ್ನು ಆಕ್ರಮಿಸಿಕೊಂಡರು.[೧೩೩]

ಬಿಜಾಪುರದವರು ಜಿಂಜಿಯನ್ನು ಹಿಡಿದುಕೊಂಡ ಮೇಲೆ, ಕುತುಬಶಾಹನು, ಹೊಟ್ಟೆ ಕಿಚ್ಚು, ದ್ವೇಷ ಮುಂತಾದವುಗಳನ್ನು ಬಿಟ್ಟು ಆದಿಲ್‌ಶಾಹನಿಗೆ ಒಂದು ಪತ್ರದ ಮೂಲಕ ಶುಭ ಹಾರೈಸಿದನು, ಅಷ್ಟೇ ಅಲ್ಲದೇ ಒಬ್ಬ ವ್ಯಕ್ತಿಯ ಮೂಲಕ ನಾಲ್ಕು ಲಕ್ಷ ಹೂನ್ನಗಳನ್ನು ಮತ್ತು ನಾಲ್ಕು ಅಮೂಲ್ಯ ವಜ್ರಗಳನ್ನು ಕಳಿಸಿದನು. ಅಲ್ಲದೇ ಆದಿಲ್‌ಶಾಹನಿಗೆ ಬರೆದ ಮತ್ತೊಂದು ಪತ್ರದಲ್ಲಿ "ಮಲೆನಾಡು ಮತ್ತು ಕರ್ನಾಟಕದ ಕೋಟೆಗಳನ್ನು ಯಾರು ಸ್ವಾಧೀನಪಡಿಸಿಕೊಂಡಿಲ್ಲವಾದ್ದರಿಂದ, ನಾವು ವಶಪಡಿಸಿಕೊಳ್ಳೋಣ. ಆಗ ಇನ್ನೂ ದಕ್ಷಿಣಕ್ಕೆ ವಿಜಯ ಯಾತ್ರೆಯನ್ನು ಕೈಗೊಳ್ಳಲು ಅನುಕೂಲವಾಗುತ್ತದೆ." ಎಂದು ಬರೆದನು. ಮಹಮ್ಮದಆದಿಲ್‌ಶಾಹನು ಅದಕ್ಕೆ ಒಪ್ಪಿ, ಗಂಡಿಕೋಟಾ ಮತ್ತು ಕೊಕ್ಕನೂರು ಕೋಟೆಗಳನ್ನು ಗೋಲ್ಕೊಂಡದ ಸೈನ್ಯಕ್ಕೆ ಒಪ್ಪಿಸಲಾಯಿತು.[೧೩೪]

ಈ ರೀತಿ ಮೇಲೇ ಹೇಳಿದ ಕರಾರಿನಿಂದ ಕುತುಬಶಾಹನಿಗೆ ಹೆಚ್ಚು ಅನುಕೂಲವಾಯಿತು. ನಾನಾ ಕಾರಣಗಳಿಂದ ಆ ಕರಾರು ಹೆಚ್ಚು ದಿನಗಳು ಉಳಯಲಿಲ್ಲ.[೧೩೫]

ಆದರೆ ಗೋಲ್ಕೊಂಡದ ಬಗೆಗಿನ ಗೊಂದಲವನ್ನು ತಪ್ಪಿಸಲು ಆಗಲಿಲ್ಲ. ಅದು ಇಬ್ಬರು ಸುಲ್ತಾನರಿಗೂ ಬಹಳ ಮಹತ್ವದಾಗಿತ್ತು. ಬಿಜಾಪುರ ಮಂತ್ರಿಯಾಗಿದ್ದ ಖಾನ್ ಮಹಮ್ಮದನು ಗೋಲ್ಕೊಂಡದ ಮೇಲೆ ಅಪಾದನೆಗಳನ್ನು ಮಾಡಿದನು. ಆದಿಲ್‌ಶಾಹನು ಕುತುಬಶಾಹನ ಸೈನ್ಯವು ತಮ್ಮ ಅನುಮತಿಯಿಲ್ಲದೆ ಗಂಡಿಕೋಟೆಯನ್ನು ಸ್ವಾಧೀನ ಪಡಿಸಿಕೊಂಡಿರುವುದಾಗಿ ಷಹಜಹಾನನಿಗೆ ದುರುಕೊಟ್ಟನು. ಆಗ ಕುತುಬಶಾಹನು ಗಂಡಿಕೋಟೆ ತನ್ನ ರಾಜ್ಯದ ಪ್ರದೇಶವಾಗಿದೆ, ಆದ್ದರಿಂದ ಆದಿಲ್‌ಶಾಹನ ತಕರಾರು

ಮಾಡುವುದು ಸರಿ ಅಲ್ಲವೆಂದು ತನ್ನ ರಾಯಭಾರಿಯ ಮೂಲಕ ಷಹಜಹಾನನಿಗೆ ತಳಿಸಿದನು. ಈ ವಿಷಯವನ್ನು ಅವನು ಆದಿಲ್‌ಶಾಹಗೂ ಸ್ಪಷ್ಟಪಡಿಸಿದನು.[೧೩೬]

ಬಿಜಾಪುರ ಮತ್ತು ಗೋಲ್ಕೊಂಡದ ಸೈನ್ಯಗಳು ಯುದ್ಧ ಸನ್ನದ್ಧತೆಯಲ್ಲೆ ಇದ್ದವು. ಅವುಗಳ ನಡುವೆ ಯುದ್ಧವು ಯಾವಾಗ ಬೇಕಾದರೂ ಆಗಬಹುದಾಗಿತ್ತು. ಖಾನ್ ಮಹಮ್ಮದನು ಗುತ್ತಿಯನ್ನು ಹಿಡಿದುಕೊಂಡ ಸ್ವಲ್ಪ ಸಮಯದ ನಂತರ ಮತ್ತೆ ಬಿಟ್ಟುಕೊಟ್ಟನು. ಮೀರ ಜುಮ್ಲಾನು ಗಂಡಿಕೋಟೆಯಲ್ಲಿದ್ದನು. ಮುಂದೆ ಅದು ಬಿಜಾಪುರದ ಘೋರ್ಪಡೆ ಎಂಬ ಅಧಿಕಾರಿಯ ವಶವಾಯಿತು. ಅವನು ಮೀರ ಜಮ್ಲಾನನ್ನು ಶಾಂತಿ ಒಪ್ಪಂದ ಮಾಡಿಕೊಳ್ಳುವಂತೆ ಒತ್ತಾಯಿಸಿದನು. ನಂತರ ಮೀರ ಜಮ್ಲಾನು ೨,೫೦,೦೦೦ ಹೊನ್ನಗಳನ್ನು ಕೊಡಬೇಕೆಂದು ಅದಕ್ಕೆ ಪ್ರತಿಯಾಗಿ ಗಂಡಿಕೊಟೆ ಮತ್ತು ಕೊಕ್ಕನೂರನ್ನು ಅವನಿಗೆ ವಾಪಸ್ಸು ಕೊಡಬೇಕೆಂದು ಒಪ್ಪಂದವಾಯಿತು. ಈ ಕರಾರುಗಳನ್ನು ಮಹಮ್ಮದ ಆದಿಲ್‌ಶಾಹನು ಜನೆವರಿ–ಫೆಬ್ರವರಿ ೧೬೫೨ ರಲ್ಲಿ ಒಪ್ಪಿದನು. ಮೀರ ಜಮ್ಲಾನಿಂದ ಖಾನ ಮಹಮ್ಮದನು ೫.೫೦.೦೦೦ ಹೊನ್ನಗಳನ್ನು ತೆಗೆದುಕೊಂಡು ಅದನ್ನು ಮಹಮ್ಮದ ಆದಿಲ್‌ಶಾಹನಿಗೆ ಕಳಿಸಿಕೊಟ್ಟನು.[೧೩೭]

ಮರಳಿ ಬರುವಾಗ ಖಾನ ಮಹಮ್ಮದನು ಜಿಂಜಿಗೆ ಬಂದನು ನಂತರ ಕರ್ನಾಟಕದ ಮೂಲಕ ಹಾಯ್ದು ಹೋಗಲು ಅಪ್ಪಣೆ ಕೇಳಿದನು. ಆದರೆ ಊಹೆಗೆ ವಿರುದ್ಧವಾಗಿ ಜುಮ್ಲಾನು ಅವನ ಕೋರಿಕೆಯನ್ನು ಮಾನ್ಯ ಮಾಡಲಿಲ್ಲ. ಮೀರ ಜುಮ್ಲಾನು ಇತ್ತಕಡೆ ಮೈಸೂರ ರಾಜರಿಗೆ ಗುಪ್ರ ಸುದ್ದಯನ್ನು ಮುಟಿಸುತ್ತಿದ್ದನು. ಇವನ ದ್ವಿನೀತಿಯಿಂದ ಕೊನೆಗೆ ಬಿಜಾಪುರದವರು ಮೈಸೂರನ್ನು ಬಿಡುವಂತೆ ಜುಮ್ಲಾ ಮಾಡಿದನು.

ಇದಕ್ಕೆ ಪ್ರತಿಯಾಗಿ ರಾಯನ ಮೇಲೆ ಯುದ್ಧಕ್ಕೆ ಹೋಗಲು ಆದಿಲ್‌ಶಾಹನು ಖಾನ ಮಹಮ್ಮದನನ್ನು ಆಜ್ಞಾಪಿಸಿದನು. ರಾಯನು ಗೋಲ್ಕೊಂಡ ಸೈನ್ಯದ ಸಹಾಯದಿಂದ ವೆಲ್ಲೂರನ್ನು ಆಕ್ರಮಿಸಲು ಪ್ರಯತ್ನಿಸುತ್ತಿದ್ದನು. ಬಹಳ ಪ್ರಯಾಸದಿಂದ ಕೊನೆಗೆ ಬಿಜಾಪುರದವರು ವೆಲ್ಲೂರನ್ನು ಹಿಡಿದುಕೊಂಡರು.[೧೩೮]

ಮೊಘಲರನ್ನು ವಿರೋಧಿಸಲು ಹಾರ್ಧಿಕ ಸಂಬಂಧಗಳು :

ಸಾಕಷ್ಟು ಭಿನ್ನಾಭಿಪ್ರಾಯಗಳು ಮತ್ತು ತಿಕ್ಕಾಟಗೂ ಬಿಜಾಪುರ ಮತ್ತು ಗೋಲ್ಕೊಂಡಗಳ ನಡುವೆ ಇದ್ದರೂ, ಆದಿಲ್‌ಶಾಹಿ ಮತ್ತು ಕುತುಬಶಾಹಿಗಳು ಒಬ್ಬರನ್ನೊಬ್ಬರು ಸಿಕ್ಕಾಪಟ್ಟೆ ದೂಷಿಸುತ್ತಿದ್ದರೂ, ಒಟ್ಟಾಗಿ ಹೇಳುವುದಾದರೆ ಅವರು ತಕ್ಕ ಮಟ್ಟಿಗೆ ಚನ್ನಾಗಿಯೇ ಇದ್ದರು. ವಂಶಪಾರಂಪರ್ಯವಾದ ಸಂಬಂಧಗಳಿಂದ, ತಾವು ಹಾರ್ದಿಕವಾಗಿಯೇ ಇರುವೆವೆಂದು ಹೇಳುತ್ತಿದ್ದರು. ಅವರುಗಳು ತಮ್ಮ ಪ್ರತಿನಿಧಿಗಳ ಸಹಾಯದಿಂದ ಕ್ರಮಬದ್ಧವಾದ ಪತ್ರ ವ್ಯವಹಾರಗಳನ್ನು ಇಟ್ಟುಕೊಂಡಿದ್ದರು.[೧೩೯]

ಮಹಮ್ಮದ ಆದಿಲ್‌ಶಾಹ ಮತ್ತು ೩ನೆ ಶ್ರೀರಂಗ :

೧೬೩೬ ರಲ್ಲಿ ಆದಿಲ್‌ಶಾಹನು ಪೆನುಗೊಂಡದ ಮೇಲೆ ಕಣ್ಣು ಹಾಕಿ, ಅದನ್ನು ಗೆಲ್ಲಲು ರಣದುಲ್ಲಾಖಾನನನ್ನು ಕಳಿಸಿದನು. ಮುಂದೆ ರಣದುಲ್ಲಾಖಾನನು ಶ್ರೀರಂಗನ ಜೊತೆ ಸೇರಿ, ಕರ್ನಾಟಕದ ಸಣ್ಣ ಪುಟ್ಟ ರಾಜರುಗಳ ಮೇಲೆ ಆಕ್ರಮಣ ಮಾಡಲು ಪ್ರಾರಂಭಿಸಿದರು. ಇದು ನಡೆದದ್ದು ೧೬೩೭ ರಲ್ಲಿ.[೧೪೦] ಮುಂದೆ ೧೬೩೯ ರಲ್ಲಿ ಬಿಜಾಪುರದವರು ಬೆಂಗಳೂರಿನವರೆಗೂ ಹೋದರು. ಆಗ ವೆಂಕಟನು ಬಹು ಪ್ರಯಾಸದಿಂದ ಸಂಧಾನ ಮಾಡಿಕೊಂಡನು.[೧೪೧]

ಮತ್ತೆ ೧೬೪೧ ರ ಮೇ ತಿಂಗಳಿನಲ್ಲಿ, ಶ್ರೀರಂಗನು ರಣದುಲ್ಲಾಖಾನನ ಜೊತೆಗೂಡಿ ವೆಂಕಟಪ್ಪನ ಎರಡು ಕೋಟೆಗಳನ್ನು ಗೆದ್ದುಕೊಂಡನು. ಈಗ ಬಿಜಾಪುರದವರಿಗೆ ವಿಜಯನಗರ ಸಾಮ್ರಾಜ್ಯದ ಹಾದಿಯು ಸುಗಮವಾಯಿತು. ಶ್ರೀರಂಗನ ಜೊತೆಗೆ ಸೇರಿಕೊಂಡು ಅವರು ವೆಲ್ಲೂರಿನ ಮೇಲೆ ದಾಳಿ ಮಾಡಲು ಹೊರಟರು. ಆಗ ವೆಂಕಟನ ಸಹಾಯಕ್ಕೆ ಬಂದವರು ಮಧುರೆ, ತಂಜಾವೂರ ಮತ್ತು ಜಿಂಜಿಯ ನಾಯಕರುಗಳು. ಅವರೆಲ್ಲರೂ ಸೇರಿ ಬಿಜಾಪುರದವರನ್ನು ತಡೆದರು. ಇದು ವೆಂಕಟನಿಗೆ ಸ್ವಲ್ಪ ತಾತ್ಕಾಲಿಕವಾಗಿಯಾದರೂ ಸ್ವಲ್ಪ ನೆಮ್ಮದಿಯನ್ನುಂಟುಮಾಡಿತು. ನಂತರ ಆ ಕೋಟೆಗಳನ್ನು ಲೂಟಿ ಮಾಡಿದಾಗ ಸಿಕ್ಕ ಅನೇಕ ವಸ್ತುಗಳು ಹಾಗೂ ಸಂಪತ್ತನ್ನು ರಣದುಲ್ಲಾಖಾನನು ತೆಗೆದುಕೊಂಡು ಕೆಲವು ಕೋಟೆಗಳನ್ನು ಶ್ರೀರಂಗನಿಗೆ ಕೊಟ್ಟನು.[೧೪೨]

ಆದರೆ ಶ್ರೀರಂಗನು ಬಿಜಾಪುರದವರೊಂದಿಗಿನ ಸ್ನೇಹವನ್ನು ಬಹಳ ದಿನಗಳವರೆಗೆ ಇಟ್ಟುಕೊಳ್ಳಲಿಲ್ಲ. ತನ್ನ ಸ್ವಾರ್ಥ ಸಾಧನೆಯ ಕಡೆಗೆ ಹೆಚ್ಚು ಗಮನವನ್ನು ಕೊಟ್ಟನು. ೩ನೆ ವೆಂಕಟನು ಅವನ ದೊಡ್ಡಪ್ಪನಾಗಿದ್ದನು. ಅವನಿಗೆ ಮಕ್ಕಳಿರಲಿಲ್ಲ, ಅವನು ನಾರಾಯಣವರಂನಲ್ಲಿ ಸಾಯುತ್ತಿದ್ದಾನೆಂಬ ಸುದ್ದಿಯನ್ನು ಕೇಳಿದ ಕೂಡಲೇ, ಆ ಸಿಂಹಾಸನವನ್ನೇರಲು ಮನಸ್ಸು ಮಾಡಿದ. ಆದ್ದರಿಂದ ಬಿಜಾಪುರದವರನ್ನು ಬಿಟ್ಟು ತನ್ನ ವಂಶಸ್ಥಕರ ರಾಜ್ಯವನ್ನು ರಕ್ಷಿಸಲು ಮುಂದಾದನು. ೨೯ ಅಕ್ಟೋಬರ ೧೬೪೨ ರಂದು ತಾನೆ ತನ್ನನ್ನು ೩ನೆ ಶ್ರೀರಂಗ ಎಂದು ಘೋಷಿಸಿಕೊಂಡು ರಾಜನಾದನು.[೧೪೩]

ಕರ್ನಾಟಕವನ್ನು ಆಕ್ರಮಿಸಿಕೊಳ್ಳುವ ಸಂಬಂಧದಲ್ಲಿ ಬಿಜಾಪುರ ಮತ್ತು ಗೋಲ್ಕೊಂಡದವರ ನಡುವೆ ಸಾಕಷ್ಟು ವಿರಸಗಳಿದ್ದವು. ಇವನು ಅದರ ಲಾಭವನ್ನು ಪಡೆಯಲೆತ್ನಿಸಿದನು, ಅವನು ಆದಿಲ್‌ಶಾಹನಿಗೆ ಕೆಲವು ಆನೆಗಳನ್ನು ಬಹುಮಾನವಾಗಿ ಕೊಟ್ಟು ಗೋಲ್ಕೊಂಡದವರ ವಿರುದ್ಧ ತನಗೆ ಸಹಾಯ ಮಾಡಿದರೆ, ೧೫ ಲಕ್ಷ ಪಗೋಡಾಗಳನ್ನು ಕೊಡುವುದಾಗಿ ಹೇಳಿದನು. ೧೬೪೩ರ ಜೂನ ತಿಂಗಳಲ್ಲಿ ಆದಿಲ್‌ಶಾಹನು ೬೦೦೦ ಕುದರೆಗಳನ್ನು ಮತ್ತು ೨೦,೦೦೦ ಸೈನಿಕರನ್ನು ಅವನ ಸಹಾಯಕ್ಕೆ ಕಳಿಸಿದನು. ಈ ಸಹಾಯದಿಂದ ಶ್ರೀರಂಗನು ಉದಯಗಿರಿಗೆ ದಂಡೆತ್ತಿ ಹೋಗಿ ಗೋಲ್ಕೊಂಡದ ಸೈನ್ಯವನ್ನು ಅಲ್ಲಿನ ಕೋಟೆಯಿಂದ ಓಡಿಸಿದನು. ಇದು ಆದದ್ದು ೧೬೪೪ ರಲ್ಲಿ ಅವರು ಮುನ್ನುಗಿ ಬರುವುದನ್ನು ತಡೆಹಿಡಿದನು. ಅವನಿಗೆ 'ನಾಯಕ'ಗಳು

ಬಹಳ ತೊಂದರೆ ಕೊಡುತ್ತಿದ್ದರು. ಅದನ್ನು ನಿವಾರಿಸಿಕೊಳ್ಳುವ ಸಲುವಾಗಿ ಬಿಜಾಪುರದವರ ಸಹಾಯವನ್ನು ಕೇಳಿದನು. ಆಗ ಅವರಿಬ್ಬರೂ ಸೇರಿ ಯುದ್ಧ ಮಾಡುವುದೆಂದೂ ಯಾವುದಾದರೂ ಕೋಟೆಯನ್ನು ವಶಪಡಿಸಿಕೊಂಡರೆ, ಅದರಲ್ಲಿನ ಜನ ಆಸ್ತಿಗಳನ್ನು ಬಿಜಾಪುರದವರು ತೆಗೆದುಕೊಳ್ಳಬೇಕೆಂದು, ಕೋಟೆ ಮುಂತಾದ ಸ್ಥಿರ ಆಸ್ಥಿಗಳನ್ನು ಶ್ರೀರಂಗನು ತೆಗೆದುಕೊಳ್ಳಬೇಕೆಂದು ತಮ್ಮ ತಮ್ಮಲ್ಲೇ ಕರಾರು ಮಾಡಿಕೊಂಡರು. ಇಂತಹ ಕರಾರುಗಳಿಂದ ಶ್ರೀರಂಗನು ತನ್ನ ರಾಜ್ಯವು ಪರರ ಪಾಲಾಗದಂತೆ ಉಳಿಸಿಕೊಂಡನು. ಇದು ನಾಯಕ ಅವರನ್ನು ಬಗ್ಗು ಬಡಿಯುವ ತಂತ್ರವಾಗಿತ್ತು ಮತ್ತು ಅದರಲ್ಲಿ ಯಶಸ್ವಿಯೂ ಆದನು. ಶ್ರೀರಂಗನು, ನಾಯಕರು, ತಂಜಾವೂರು ಮತ್ತು ಮಧುರೆಯಿಂದ ವಶಪಡಿಸಿಕೊಂಡಿದ್ದ ಹಣ ಮುಂತಾದವುಗಳ ದೊಡ್ಡ ಪಾಲನ್ನು ತನಗೆ ಸಹಾಯ ಮಾಡಿದ್ದಕ್ಕೆ ಪ್ರತಿಯಾಗಿ ಬಿಜಾಪುರದವರಿಗೆ ಕೊಟ್ಟನು.[೧೪೪]

ಆದರೆ ಶ್ರೀರಂಗನು ಬಿಜಾಪುರದೊಂದಿಗೆ ಮಾಡಿಕೊಂಡಿದ್ದ ಕರಾರುಗಳಂತೆ ನಡೆದುಕೊಳ್ಳಲಿಲ್ಲ. ಅವನು ಸ್ಥಳೀಯ ರಾಜರುಗಳೊಡನೆ ಸೇರಿ, ಬಿಜಾಪುರದವರ ವಿರುದ್ಧ ಯೋಚಿಸಲು ಪ್ರಯತ್ನಿಸುತ್ತಿದ್ದನು. ಬಿಜಾಪುರ ಮತ್ತು ಗೋಲ್ಕೊಂಡದವರು ಒಟ್ಟುಗೂಡಿ ಕರ್ನಾಟಕವನ್ನು ಗೆದ್ದು ಹಂಚಿಕೊಳ್ಳಬೇಕೆಂದು ಉಪಾಯಗಳನ್ನು ಮಾಡುತ್ತಿದ್ದರು. ಅವರಿಬ್ಬರ ಸೈನ್ಯಗಳು ಕೂಡಿಕೊಂಡು ೧೬೪೪ ರಲ್ಲಿ ಶ್ರೀರಂಗನ ರಾಜ್ಯ ಕಡೆಗೆ ಧಾವಿಸಿದವು. ಶ್ರೀರಂಗನಿಗೆ ಎರಡು ಸೈನ್ಯದ ಜೊತೆಗೆ ಯುದ್ಧ ಮಾಡುವುದು ಕಷ್ಟವಾಗಿತ್ತು. ಮತ್ತೊಮ್ಮೆ ಬಿಜಾಪುರದ ರಾಜನನ್ನು ಬೇಡಿಕೊಂಡು, ೫೦ ಲಕ್ಷ ಹೂನ್ನಗಳನ್ನು ಕೊಡುವುದಾಗಿ ಹೇಳಿದನು. ಆದರೆ ರಣದುಲ್ಲಾಖಾನ ಅದಕ್ಕೆ ಬೆಲೆ ಕೊಡಲಿಲ್ಲ.[೧೪೫]

ರುಸ್ತಂ–ಇ–ಜಮನ್(ರಣದುಲ್ಲಾಖಾನ) ಮುಂದುವರೆಯುತ್ತಿದ್ದಾಗ, ೧೬೪೬ ರ ಜೂನನಲ್ಲಿ ಆದಿಲ್‌ಶಾಹನು ಮುಸ್ತಫಾಖಾನನ ತುಕ್ಕಡಿಯನ್ನು ಅಲ್ಲಿಂದ ತೆಗೆದು ಶ್ರೀರಂಗನ ಕೆನರಾ ಪ್ರದೇಶದ ಮೇಲೆ ತೆಗೆದುಕೊಂಡು ಹೋಗಲು ಹೇಳಿದನು. ಮುಸ್ತಫಾಖಾನನು ಮಲಪ್ರಭದ ದಡದ ಮೇಲಿದ್ದ ಗುತ್ತಿಗೆ ಬಂದನು. ಆಗ ದಾರಿಯಲ್ಲಿ ಸಿಕ್ಕ ಬಕರಗುಂಡಾವನ್ನು ಸ್ವಾಧೀನಕ್ಕೆ ತೆಗೆದುಕೊಂಡನು. ನಂತರ ಅವು ಗದಗ–ಲಕ್ಷ್ಮೇಶ್ವರದ ಮೂಲಕ ಹೊನ್ನಾಳಿಗೆ ಬಂದನು.[೧೪೬] ಅಲ್ಲಿ ಅವನು ಅಸದಖಾನ ಮತ್ತು ಷಾಹಜಿಯನ್ನು ೩೦ನೆ ಅಕ್ಟೋಬರ ರಂದು ಭೇಟ್ಟಿಯಾದನು. ಸಕ್ರಪಟ್ಟಣನದಲ್ಲಿ ಬಿಜಾಪುರ ಸೈನ್ಯದೊಂದಿಗೆ ಈ ಕೆಳಗಿನ ಸೈನ್ಯಗಳು ಸೇರಿಕೊಂಡವು. ಶಿವಪ್ಪ ನಾಯಕನ ಸೈನ್ಯ, ದೊಡ್ಡನಾಯಕನ ಸೈನ್ಯ, ಅಬಾಜಿ ಘಾಟ್ಗೆ ಮುಂತಾದವರು, ಅವರ ಜೊತೆಗೆ ಲಕ್ಷ್ಮೇಶರ, ಕೊಪ್ಪಳ ಮತ್ತು ಬಾಲಾಜಿ ಹನುಮಂತರಾಯ ಮುಂತಾದ ದೇಸಾಯಿಗಳ ಸೈನ್ಯ ಕೂಡಿಕೊಂಡವು[೧೪೭]

ಹಾಗೇ ಮುಂದುವರಿಯುತ್ತಾ ಹೋಗಿ, ಮುಸ್ತಫಾಖಾನನು ಶಿವಗಣವನ್ನು ತಲುಪಿದನು. ಶ್ರೀರಂಗನ ರಾಯಭಾರಿಯಾಗಿದ್ದ ವೆಂಕಯ್ಯ ಮತ್ತು ಸೋಮಾಜಿ ಎನ್ನುವರು ಮುಸ್ತಫಾಖಾನನ ಬರುವಿಕೆಗಾಗಿ ಕಾದಿದ್ದರು. ಅವನು ಬಂದ ನಂತರ ಅವನ ಮುಂದೆ, ರಾಜೀಗೆ ಸಂಬಂಧಸಿದಂತೆ ಮಾತುಕತೆಗಳ ಪ್ರಸ್ತಾಪವನ್ನು ಎತ್ತಿದರು ಆದರೆ ಅವರ ಮಾತುಗಳಿಗೆ ಬೆಲೆ ಕೊಡದ ಮುಸ್ತಫಾಖಾನ ವೆಲ್ಲೂರಿನ ಕಡೆಗೆ

ಮುನ್ನುಗ್ಗಲು ಪ್ರಯತ್ನಿಸಿದನು. ಶ್ರೀರಂಗನು ಯುದ್ಧದಿಂದ ಹಿಂದೆ ಸರಿದರೆ ಮಾತ್ರ ತಾನು ಸರಿಯುವುದಾಗಿ ಸೋಮಾಜಿಗೆ ಹೇಳಿದಾಗ ಸೋಮಾಜಿಯು ಶ್ರೀರಂಗನನ್ನು ವೆಲ್ಲೂರಿಗೆ ಹೋಗುವಂತೆ ಮಾಡುವುದಾಗಿ ಹೇಳಿದನು.

ವೆಲ್ಲೂರಿಗೆ ಬಂದ ಕೂಡಲೇ ಯುದ್ಧಕ್ಕೆ ತಯಾರಾಗಬೇಕೆಂದು ರಾಯನಿಗೆ ಸೋಮಾಜಿಯು ಹೇಳಿದನು. ಅಷ್ಟೇ ಅಲ್ಲ ಕಣಿವೆಯ ಮಾರ್ಗವನ್ನು ಮುಚ್ಚಬೇಕೆಂದೂ ಹೇಳಿದನು. ಈ ವಿಶ್ವಾಸ ದ್ರೋಹದಿಂದ ಮುಸ್ತಫಾಖಾನನು, ಬೇರೆ ಮಾರ್ಗದ ಮೂಲಕ ಜಗದೇವರಾವನ ರಾಜ್ಯವನ್ನು ಪ್ರವೇಶಿಸಿದನು.[೧೪೮]

ರಾಯನು ಕಣಿವೆಯ ಮಾರ್ಗವನ್ನು ರಕ್ಷಿಸಿಕೊಳ್ಳಲು ಮುಂದಾದನು. ಮುಸ್ತಫಾಖಾನನು ಈಗ ಬೆಂಗಳೂರು ಹತ್ತಿರ ಇದ್ದ. ೧೬೪೬ರ ಡಿಸೆಂಬರ ೨೧ ರಂದು ಅಸದಖಾನನೊಡನೆ ಒಂದು ದೊಡ್ಡ ಸೈನ್ಯವನ್ನು ತನಗಿಂತ ಮುಂಚೆ ಕಳಿಸಿದನು. ಆ ಸೈನ್ಯವು ಜಗದೇವನ ರಾಜ್ಯದಲ್ಲಿ ನುಗ್ಗಿತು ಮತ್ತು ಆ ರಾಜ್ಯದ ಒಳಗೆ ಒಂದು ಕೆರೆಯ ಬಳಿ ಮಾಸ್ತಿಯ ಹತ್ತಿರ, ಇಪ್ಪತ್ತು ದಿನಗಳ ಕಾಲ ಬೀಡು ಬಿಟ್ಟಿತು. ಆಗ ರಾಯನು ಒಂದು ದೊಡ್ಡ ಸೈನ್ಯದೊಂದಿಗೆ ಗುರಿತಾತನ್ ಮತ್ತು ಕೃಷ್ಣಗಿರಿಯ ಮಾರ್ಗವಾಗಿ ಬಂದು ಈ ಅಸದಖಾನ ಮತ್ತು ಷಾಹಜಿಯ ಸೈನ್ಯವನ್ನು ಎದುರಿಸಿದನು.[೧೪೯]

ಬಿಜಾಪುರದವರ ಮೇಲೆ ಭೀಕರವಾದ ಯುದ್ಧವನ್ನು ರಾಯನು ತನ್ನ ಸೈನ್ಯದೊಂದಿಗೆ ಮಾಡಿದನು. ಆದರೆ ಕೊನೆಗೆ ಆ ಯುದ್ಧದಲ್ಲಿ ಬಿಜಾಪುರದವರು ಗೆದ್ದರು. ಮುಸ್ತಫಾಖಾನು, ಇನ್ನೂ ಮುಂದೆ ಹೋಗಿ, ಕೃಷ್ಣಗಿರಿಯನ್ನು ೩೦ ಜನವರಿ ೧೬೪೭ ರಂದು ತಲುಪಿದನು. ಸ್ವಲ್ಪ ಕಾಲ ಅದನ್ನು ಮುತ್ತಿಗೆ ಹಾಕಿ, ನಂತರ ಅದನ್ನು ತನ್ನ ವಶಕ್ಕೆ ತೆಗೆದುಕೊಂಡನು. ನಂತರ ಬಿಜಾಪುರದವರು ಜಗದೇವನ ರಾಜಧಾನಿಯ ಕಡೆಗೆ ಹೊರಟರು ಭೀಕರ ಕಾಳಗದ ನಂತರ, ರಾಜಧಾನಿಯನ್ನು ವಶಪಡಿಸಿಕೊಳ್ಳಲಾಯಿತು. ನಂತರ ಬಿಜಾಪುರ ಸೈನ್ಯ ದೇವದುರ್ಗದ ಕಡೆಗೆ ಸಾಗಿ ೭ ಫೆಬ್ರವರಿ ೧೬೪೬ ರಂದು ಅದನ್ನು ವಶಪಡಿಸಿಕೊಂಡಿತು. ನಂತರ ಅವರು ಆನಂದಬಾರ, ಅಮರಾವತಿ ಮತ್ತು ಗೋರಿಯತಮ್ ಮಾರ್ಗವಾಗಿ ಹೋಗಿ ಉರಂಜಪುರವನ್ನು ಹಿಡಿದುಕೊಂಡರು. ಮುಂದೆ ಅವರು ವೆಲ್ಲೂರಿಗೆ ಹೋದರು. ಇಲ್ಲೂ ಒಂದು ದೊಡ್ಡ ಯುದ್ಧವೇ ಆಯಿತು, ಇದರಲ್ಲೂ ಬಿಜಾಪುರದವರೇ ಗೆದ್ದರು. ಕೊನೆಗೆ ರಾಯನು ಶರಣಾಗತನಾಗಿ ೫೦ ಲಕ್ಷ ಹೊನ್ನಗಳನ್ನು ಮತ್ತು ೧೫೦ ಆನೆಗಳನ್ನು ಯುದ್ದದ ಖರ್ಚಿನ ಬಾಬತ್ತು ಎಂದು ಕೊಟ್ಟನು. ವೆಲ್ಲೂರಿನಲ್ಲಿ ಒಂದು ತಿಂಗಳು ಇದ್ದ ನಂತರ, ತನ್ನ ವಿಜಯ ಯಾತ್ರೆಯನ್ನು ಮುಂದುವರೆಸಿತು. ವೆಲ್ಲೂರಿನಿಂದ ಅದು ವಾಪಸ್ಸು ಹೊರಟಿತು. ಆಗ ಅದು ಗಂಜಾತಂ ಮಾರ್ಗವಾಗಿ ಮುಸ್ತಫಾಖಾನನ ನೇತೃತ್ವದಲ್ಲಿ ಸಾಗುತ್ತಿತ್ತು. ನಂತರ ಮಾರ್ಚ ೧೬೪೭ ರಲ್ಲಿ ಶ್ರೀರಂಗನ ರಾಜ್ಯದ ಈ ಕೆಳಗೆ ಕಾಣಿಸಿದ ಪ್ರದೇಶಗಳನ್ನು ಹಿಡಿದುಕೊಂಡಿತು. ಅವುಗಳೆಂದರೆ ಅಂಬೋರ, ಕನ್ನಕುಟ್ಟಿ, ತಿರುಪತ್ತೂರ, ಕಾವೇರಿಪಟ್ಟಣ, ಹಸನ ರಾಯದುರ್ಗ, ರಾಯದುರ್ಗ, ಕಾಯಕಪಿರಿ, ರತ್ನಪ್ರಿ, ಮೇಲಪ್ರಿ, ಅರ್ಜುನಕೋಟ ಮತ್ತು ಧಲಿಂಕೋಟ ಮುಂತಾದ ಪ್ರದೇಶಗಳನ್ನು ಹಿಡಿದುಕೊಂಡನು.

೧೬೪೮ ರಲ್ಲಿ ಮೈಸೂರಿನ ರಾಜ, ಮಧುರೆಯ ನಾಯಕ, ಒಂದಾದರು ಅವರ ಜೊತೆಗೆ ಮುಸ್ತಫಾಖಾನನು ಸೇರಿಕೊಂಡನು(ಈ ವೇಳೆಗೆ ಅವನು ಬಿಜಾಪುರದವರ ಸೇವೆಯನ್ನು ತೊರೆದಿದ್ದ) ಆಗ ಗೋಲ್ಕೊಂಡದವರು, ದಕ್ಷಿಣದಲ್ಲಿ ಮುನ್ನುಗ್ಗುತ್ತಿದ್ದರು. ಇವರುಗಳೆಲ್ಲರೂ ಸೇರಿಕೊಂಡು ಗೋಲ್ಕೊಂಡದವರನ್ನು ಎದುರಿಸಿದರು. ಆಗ ಆದ ಭೀಕರ ಕದನದಲ್ಲಿ, ಗೋಲ್ಕೊಂಡದವರು ವಿಜಯಿಯಾದರು ಕೊನೆಗೆ ಶ್ರೀರಂಗನು ಪ್ರತಿರೋಧವನ್ನು ಬಿಟ್ಟು, ತಂಜಾವೂರಿನಲ್ಲಿ ಆಶ್ರಯ ಪಡೆದನು. ಆದರೆ ಮುಂದೆ ಬಿಜಾಪುರದವರು ಜಿಂಜಿ ಮತ್ತು ತಂಜಾವೂರನ್ನು ವಶಪಡಿಸಿಕೊಂಡರು.(ಇದು ಆದದ್ದು ೧೬೪೯ ರಲ್ಲಿ) ನಂತರ ಶ್ರೀರಂಗನು ಮೈಸೂರಿಗೆ ಬಂದು ಕೆಳದಿಯವರ ಸಹಕಾರದಿಂದ ಮತ್ತೆ ವೆಲ್ಲೂರನ್ನು ವಶಪಡಿಸಿಕೊಳ್ಳುವ ಕನಸನ್ನು ಕಾಣುತ್ತಿದ್ದನು.[೧೫೦]

ಮುಂದೆ ೧೬೫೨ ರಲ್ಲಿ ಕರ್ನಾಟಕವನ್ನು ಭಾಗ ಮಾಡಿಕೊಳ್ಳುವ ವಿಷಯದಲ್ಲಿ ತಕರಾರು ಆಗಿ, ಬಿಜಾಪುರ ಮತ್ತು ಗೋಲ್ಕೊಂಡದವರು ಯುದ್ಧಕ್ಕೆ ಇಳಿದರು. ಆ ಸಮಯದಲ್ಲಿ ಶ್ರೀರಂಗನು ಬಿಜಾಪುರದವರಿಂದ ತನ್ನ ಕೇಲವು ಪ್ರದೇಶಗಳನ್ನು ಪಡೆದುಕೊಂಡನು.

ಇದರಿಂದ ಸ್ವಲ್ಪ ಪ್ರೋತ್ಸಾಹಿತನಾಗಿದ್ದ ಶ್ರೀರಂಗನು ೧೬೫೪ ರಲ್ಲಿ ಒಂದು ದೊಡ್ಡ ಸೈನ್ಯವನ್ನು ಸಂಘಟಿಸಿ ಬಿಜಾಪುರದವರನ್ನು ಹೊರಗೆ ಓಡಿಸಲು ಸಿದ್ಧನಾದನು. ಆಗ ಖಾನ ಮಹಮ್ಮದನು ಶ್ರೀರಂಗನನ್ನು ಹತ್ತಿಕ್ಕಿ ಬಿಜಾಪುರದ ಅಧಿಕಾರವನ್ನು ಪುನಃ ಸ್ಥಾಪಿಸುವುದಕ್ಕಾಗಿ ವೆಲ್ಲೂರಿಗೆ ಹೋದನು. ಖಾನ ಮಹಮ್ಮದ ಬರುತ್ತಿರುವ ಸುದ್ದಿಯನ್ನು ಕೇಳಿದ ಶ್ರೀರಂಗನು ಸುರಕ್ಷಿತ ಸ್ಥಳಕ್ಕೆ ಓಡಿಹೋದನು. ವೆಲ್ಲೂರ ಪತನವಾಯಿತು. ಖಾನ ಮಹಮ್ಮದನು ಚಂದ್ರಗಿರಿ ಕೋಟೆಯನ್ನು ಬಿಟ್ಟು ಕೊಡಬೇಕಾಯಿತು, ಅದರ ಜೊತೆಗೆ ಇನ್ನೂ ಕೆಲವು ಪ್ರದೇಶಗಳನ್ನು ಶ್ರೀರಂಗನಿಗೆ ಕೊಡಬೇಕಾಯಿತು.[೧೫೧]

೧೬೫೬ ರಲ್ಲಿ ಶ್ರೀರಂಗನು ಮೀರ ಜುಮ್ಲಾನ ಮೂಲಕ ಬಿಜಾಪುರದವರನ್ನು ಸದೆಬಡಿಯಲು ಔರಂಗಜೇಬನ ಸಹಾಯವನ್ನು ಬೇಡಿದನು. ಔರಂಗಜೇಬನೊಡನೆ ಯುದ್ಧವನ್ನು ಮಾಡಬಹುದಾದ ಸ್ಥಿತಿಯನ್ನು ಉಂಟುಮಾಡುತ್ತಿರುವುದಕ್ಕೆ, ಶ್ರೀರಂಗನಿಗೆ ಬುದ್ಧಿ ಕಲಿಸಬೇಕೆಂದು ಎಂದು ಆದಿಲ್‌ಶಾಹನು ತನ್ನ ಗೌವರ್ನರಗೆ ಆಜ್ಞಾಪಿಸಿದನು. ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಯಿತು ಎಂಬುದು ಅಷ್ಟು ಸ್ಪಷ್ಟವಾಗಿಲ್ಲ.

ಆದಿಲ್‌ಶಾಜನು ಶ್ರೀರಂಗನ ಬಗ್ಗೆ ಅಷ್ಟು ದ್ವೇಷಭಾವವನ್ನು ಹೊಂದಿದ್ದರೂ, ಬಿಜಾಪುರದ ಕೆಲವು ಅಧಿಕಾರಿಗಳು (ಉದಾಃ ಷಾಜಿ) ಶ್ರೀರಂಗನಿಗೆ ಸಹಾಯ ಮಾಡುತ್ತಲೇ ಇದ್ದರು.[೧೫೨] ಶ್ರೀರಂಗನ ಮರಣಾನಂತರ (೧೬೭೨) ಬಿಜಾಪುರ–ವಿಜಯನಗರದ ಸಂಬಂಧಗಳು ಮುಚ್ಚಿ ಹೋದವು.

ಮಹಮ್ಮದ ಆದಿಲ್‌ಶಾಹ ಮತ್ತು ಮೈಸೂರು :

ಮೈಸೂರಿನ ರಾಜನಾಗಿದ್ದ ಕಠೀರವ ನರಸರಾಜ ಒಡೆಯರ ರವರ ಕಾಲದಲ್ಲಿ, ಅಂದರೆ ೧೬೩೮ ರಲ್ಲಿ ಪ್ರಥಮ ಬಾರಿಗೆ ಬಿಜಾಪುರದ ಆದಿಲ್‌ಶಾಹನು ಮೈಸೂರಿನ ಸಂಪರ್ಕಕ್ಕೆ ಪ್ರಥಮ ಬಾರಿಗೆ ಬಂದನು.[೧೫೩]

ಬಿಜಾಪುರದವರು ಬೆಂಗಳೂರ ಮತ್ತು ಮೈಸೂರುಗಳನ್ನು ತಲುಪಬೇಕಾಗಿದ್ದಲ್ಲಿ, ಉತ್ತರ ಕರ್ನಾಟಕ ಪ್ರದೇಶದಲ್ಲಿ ಬಹಳಷ್ಟು ದೂರ ಕ್ರಮಿಸಬೇಕಾಗಿತ್ತು. ಬಿಜಾಪುರದ ಸೈನ್ಯವು ರಣದುಲ್ಲಾಖಾನ ಮತ್ತು ಶಹಾಜಿಯ ನೇತೃತ್ವದಲ್ಲಿ ೧೬೩೮ ರ ಅವಧಿಯಲ್ಲಿ ಬೆಂಗಳೂರಿನ ಮೇಲೆ ಆಕ್ರಮಣ ಮಾಡಿ, ಅದನ್ನು ವಶಪಡಿಸಿಕೊಂಡಿತು. ಆ ಸಮಯದಲ್ಲಿ ಬೆಂಗಳೂರು ಇಮ್ಮಡಿ ಕೆಂಪೇಗೌಡನ ಅಧಿನದಲ್ಲಿತ್ತು. ಬಿಜಾಪುರದವರು ಹಾಗೇ ಮುಂದುವರೆದು, ಶೀರಂಗಪಟ್ಟಣ ಮತ್ತು ಮೈಸೂರಿಗೆ ಮುತ್ತಿಗೆ ಹಾಕಿದರು. ಆಗ ಅವರಿಗೆ ಅಲ್ಲಿಯ ಸೈನ್ಯದಿಂದ ಪ್ರಬಲ ವಿರೋಧ ಬಂತು. ಆಗ ಮೈಸೂರಿನವರೊಂದಿಗೆ ಒಂದು ಕರಾರನ್ನು ಮಾಡಿಕೊಂಡು ಆಕ್ರಮಣವನ್ನು ಕೊನೆಗೊಳಿಸಲಾಯಿತು. ಆ ಕರಾರಿನ ಪ್ರಕಾರ ಯುದ್ಧದ ಖರ್ಚು ಎಂದು ಆರು ಲಕ್ಷ ಹೂನ್ನಗಳನ್ನು ಬಿಜಾಪುರದವರಿಗೆ ಕೊಡಲಾಯಿತು. ಮತ್ತು ಕಾವೇರಿ ನದಿಯಿಂದ ಉತ್ತರಕ್ಕಿರುವ ಭಾಗಗಳನ್ನು (ಇದರಲ್ಲಿ ಬೆಂಗಳೂರು ಮತ್ತು ಸಿರಾ ಸೇರಿದ್ದವು) ಬಿಜಾಪುರದವರಿಗೆ ಕೊಡಲಾಯಿತು. ಇದಾದ ನಂತರ ರಣದುಲ್ಲಾಖಾನ'ನ್ನು ಈ ಪ್ರದೇಶಗಳನ್ನು ನೋಡಿಕೊಳ್ಳಲು ಕೆಂಗ ಹನುಮನನ್ನು ನೇಮಿಸಿದನು. ಶಹಾಜಿಯನ್ನು ಆದಿಲ್'ಶಾಹನ ಅನುಮತಿಯನ್ನು ಪಡೆದು ಬೆಂಗಳೂರಿನಲ್ಲೇ ಇಟ್ಟನು. ಶಹಾಜಿಯು, ಬಿಜಾಪುರದ ದಕ್ಷಿಣ ಭಾಗದ ಆಡಳಿತವನ್ನು ನೋಡಿಕೊಳ್ಳುವ ಸಲುವಾಗಿ ಶಹಾಜಿಯು ಬೆಂಗಳೂರನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಂಡನು.

ರಣದುಲ್ಲಾಖಾನನು ಶ್ರೀರಂಗಪಟ್ಟಣ ಮತ್ತು ಮೈಸೂರಿನ ಕಡೆಗೆ ಆಕ್ರಮಣ ಮಾಡಿದ್ದರ ಮುಖ್ಯ ಉದ್ದೇಶವೇ ಮೈಸೂರಿನವರು ತಮ್ಮ ಅಧಿಕಾರವನ್ನು ಒಪ್ಪಬೇಕು ಎಂಬುದೇ ಆಗಿತ್ತು. ಇದಕ್ಕೆ ನಾಗಮಂಗಲದ ಪಾಳೇಗಾರನಾಗಿದ್ದ ಚನ್ನಯ್ಯ ಎಂಬುವವನ ಬೆಂಬಲ ಮತ್ತು ಸಹಕಾರಗಳು ಇದ್ದವು. ಯುದ್ಧವನ್ನು ಜೋರು ಮಾಡುವುದಕ್ಕೆ ಮುಂಚೆ ರಣದುಲ್ಲಾಖಾನನು ಮೈಸೂರಿನ ಅರಸರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರ ರವರಿಗೆ, ಅವರು ಬಿಜಾಪುರದ ಅಧಿಪತ್ಯವನ್ನು ಒಪ್ಪಬೇಕು ಎಂಬುದಾಗಿ ನಿರೂಪವನ್ನು ಕಳಿಹಿಸಿದನು. ಆದರೆ ಕಂಠೀರವ ಒಡೆಯರರವರು ಇದಕ್ಕೆ ಒಪ್ಪಲಿಲ್ಲ. ಖಾನನು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ಅದನ್ನು ಒಂದು ತಿಂಗಳವರೆಗೂ ಹಿಡಿದುಕೊಂಡಿದ್ದನು. ನಂತರ ಒಡೆಯರರವರು ಐದು ಲಕ್ಷ ಹೂನ್ನಗಳನ್ನು ಕೊಟ್ಟಾಗ ಮುತ್ತಿಗೆಯನ್ನು ಹಿಂಪಡೆಯಲಾಯಿತು. ಅಲ್ಲದೇ ಸೈನ್ಯ ಬಿಜಾಪುರಕ್ಕೆ ಮರಳಿತು.

ಅವರು ಹೋದ ನಂತರ, ಕಂಠೀರವ ನರಸಿಂಹರಾಜ ಒಡೆಯರರವರಿಗೆ ಕರಾರುಗಳನ್ನು ಮನ್ನಿಸುವ ಇಷ್ಟ ಇರಲಿಲ್ಲವಾದ್ದರಿಂದ, ಅವರು ಬಿಜಾಪುರದವರಿಗೆ ತೊಂದರೆಗಳನ್ನು ಕೊಡಲು ಪ್ರಾರಂಭಿಸಿದರು.[೧೫೪] ಆದಾಗ್ಯೂ ಬಿಜಾಪುರದವರು ಮೈಸೂರಿನ ಉತ್ಪನ್ನಗಳ ವಹಿವಾಟನ್ನು ಮಾಡುತ್ತಿದ್ದರು. ಅದರ ಉತ್ಪನ್ನ ಸರಿಯಾಗಿ ಬರದೇ ಇದ್ದಾಗ, ವಸೂಲಿಗಾಗಿ ನಾಲ್ಕು ಜನ ಅಧಿಕಾರಿಗಳನ್ನು ಸುಲ್ತಾನನು ಕಳುಹಿಸಿದನು. ಒಡೆಯರ ರವರು ಅದಕ್ಕೆ ಒಪ್ಪಲಿಲ್ಲ. ಆಗ ಮತ್ತೆ ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಳ್ಳಬೇಕೆಂದು ಆದಿಲ್'ಶಾಹನು ರಣದುಲ್ಲಾಖಾನನಿಗೆ ಆಜ್ಞಾಪಿಸಿದನು. ಕರಾರಿನಂತೆ ನಡೆಯುವಂತೆ ಮಾಡಲು ಆ ಕೆಲಸವನ್ನು ನಾಗಮಂಗಲದ ಚನ್ನಯ್ಯನಿಗೆ ವಹಿಸಲಾಯಿತು.

ಖಾನನ ಬೇಡಿಕೆಯನ್ನು ತಿರಸ್ಕರಿಸಿದ ಒಡೆಯರ ರವರು ೧೬೪೦ ರಲ್ಲಿ ತುರುವೇ ಕೆರೆ ಮತ್ತು ನೊಣವಿನ ಕೆರೆ ಪ್ರದೇಶಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇದರಿಂದಾಗಿ ಆ ಪ್ರದೇಶದಲ್ಲಿ ಕಾಯಂ ನೆಲೆಯನ್ನು ಹೊಂದದಂತೆ ಆಯಿತು. ಇವರಿಬ್ಬರ ನಡುವಿನ ವಿವಾದಗ್ರಸ್ತ ಪ್ರದೇಶದ ಹೊರಗಿನ ಪ್ರದೇಶವು, ಬಿಜಾಪುರದ ಪ್ರಭಾವಲಯಕ್ಕೆ ಸೇರಿದಂತಾಗಿತ್ತು. ಈ ಪ್ರದೇಶಗಳೆಂದರೆ, ಬೆಂಗಳೂರು, ದೊಡ್ಡಬಳ್ಳಾಪುರ, ತಮಕೂರು, ಕಣಿಗಲ್ಲು, ಚಿಕ್ಕನಾಯಕನಹಳ್ಳಿ ಮುಂತಾದವುಗಳು ನೇರವಾಗಿ ಬಿಜಾಪುರ ಸಾಮ್ರಾಜ್ಯದಲ್ಲಿದ್ದು, ಇವುಗಳನ್ನು ಶಹಾಜಿಯು ನೋಡಿಕೊಳ್ಳುತ್ತಿದ್ದನು. ಮುಸ್ತಫಾಖಾನನು ೧೬೩೯ ರ ಕರಾರಿನಂತೆ ತಮಗೆ ಸಲ್ಲಬೇಕಾದ ಕಪ್ಪವನ್ನು ಕೊಡಬೇಕು, ಇಲ್ಲದಿದ್ದರೆ ಇದ್ದಲ್ಲಿ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳುವುದಾಗಿ ಹೇಳಿದನು. ಆದರೆ ಕಂಠೀರವರು ಅದಕ್ಕೆ ಬೆಲೆಯನ್ನೇ ಕೊಡಲಿಲ್ಲ. ಬಿಜಾಪುರದವರೊಡನೆ ಅದೇ ಕಾರಣಕ್ಕಾಗಿ ಯುದ್ಧ ಮಾಡಿದರು. ಆ ಯುದ್ಧದಲ್ಲಿ ಬಿಜಾಪುರದವರು ಸೋತರು. ಮುಸ್ತಫಾಖಾನನು ಯಾವ ಲಾಭವೂ ಹೊಂದದೆ ಬಿಜಾಪುರಕ್ಕೆ ಹಿಂದಿರುಗಿದನು.[೧೫೫]

ಶ್ರೀರಂಗಪಟ್ಟಣವನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಬಿಜಾಪುರದವರಿಗೆ ಒಂದು ಸಮಸ್ಯೆಯೇ ಆಯಿತು. ವೇದೋಜಿಪಂತ ಎಂಬುವವನನ್ನು ಅಫದಲ್‌ಖಾನ ಎಂಬ ಸೇನಾಪತಿಯ ಕೆಳಗೆ ಶ್ರೀರಂಗಪಟ್ಟಣದ ಪ್ರದೇಶಕ್ಕೆ ಕಳಿಸಲಾಯಿತು. ವೇದೋಜಿಪಂತನು ೧೬೪೧ ರ ಸುಮಾರಿಗೆ ಬಂದು ಸುತ್ತ ಮುತ್ತಲಿನ ಪ್ರದೇಶಗಳನ್ನು ಕಬಳಿಸಲು ಪ್ರಯತ್ನಿಸಿದನು. ಕೊನೆಗೆ ಅವನಿಂದ ಏನೂ ಸಾಧಿಸಲಿಕ್ಕಾಗದೇ, ಬರೀಗೈಯಲ್ಲಿ ಬಿಜಾಪುರಕ್ಕೆ ಮರಳಿದನು. ಈ ಅವರ ಹಿನ್ನಡೆಯಿಂದ ಪ್ರೋತ್ಸಾಹಿತನಾದ ಮೈಸೂರಿನ ದಳವಾಯಿ ನಂಜರಾಜಯ್ಯನು ಮೇ ೧೬೪೨ ರಲ್ಲಿ ತುರುವ ಕೆರೆಯನ್ನು ಅಫ್ದಲ್‌ಖಾನನಿಂದ ವಶಪಡಿಸಿಕೊಂಡನು.[೧೫೬]

೧೬೪೪ ರಲ್ಲಿ ನರಸಿಂಹ ನಾಯಕ ಎಂಬುವವನು(ಅವನು ಹೊಳೇ ನರಸೀಪುರದವನು) ಒಡೆಯರರವರಿಗೆ ಕೊಡುತ್ತಿದ್ದ ಕಪ್ಪವನ್ನು ಕೊಡದಂತೆ ಬಿಜಾಪುರದವರು, ಪ್ರಚೋದಿಸಿದರು. ಇದರಿಂದ ಕುಪಿತರಾದ ಒಡೆಯರ ರವರು ಸೈನ್ಯವನ್ನು ಕಳಿಸಿದರು. ಆಗ ಬಿಜಾಪುರದವರೂ ನರಸಿಂಹ ನಾಯಕನ ಬೆಂಬಲಕ್ಕೆ, ಸೈನ್ಯವನ್ನು ಕಳಿಸಿದರು. ಆದರೆ ಒಡೆಯರ ರವರು ಅವರನ್ನು ಹಿಮ್ಮೆಟ್ಟಿಸಿದರು. ಆಗ ಬಿಜಾಪುರದವರು ಪಿರಿಯಾಪಟ್ಟಣದ ಮುಖಸ್ಥನ ಜೊತೆ ಸೇರಿದರು. ಆಗ ಪಿರಿಯಾಪಟ್ಟಣವು ಮೈಸೂರು ರಾಜರ ಅಧೀನದಲ್ಲಿತ್ತು. ಇದರಿಂದ ಕುಪಿತರಾತ ಒಡೆಯರ ರವರು ಪಿರಿಯಾಪಟ್ಟಣದ ಮೇಲೆ ಮುತ್ತಿಗೆ ಹಾಕಿದರು. ಆಗ ಬಿಜಾಪುರದವರು ಪಿರಿಯಾಪಟ್ಟಣದ ಮುಖ್ಯಸ್ಥನಾದ ನಂಜುಂಡ ರಾಜನ ಸಹಾಯಕ್ಕೆ ಧಾವಿಸಿದರು. (ಇವನು ಮೈಸೂರಿನ ಅಧೀನ ರಾಜನಾಗಿದ್ದನು) ಜನವರಿ ೧೬೪೫ ರಲ್ಲಿ ಮೈಸೂರಿನ ಸೈನ್ಯವು ಪಿರಿಯಾಪಟ್ಟಣಕ್ಕೆ ಮುತ್ತಿಗೆ ಹಾಕಿದಾಗ ಬಿಜಾಪುರದವರು ೮೦೦೦ ಕುದರೆಗಳು ಮತ್ತು ೧೫೦೦೦ ಸೈನಿಕರನ್ನು ತೆಗೆದುಕೊಂಡು ಬಂದು, ನಂಜುಂಡನ ನೆರವಿಗೆ ನಿಂತರು. ಆಗ ನಡೆದ ದೊಡ್ಡ ಯುದ್ಧದಲಿ ಬಿಜಾಪುರದವರು ಸೋತು ಹಿಮ್ಮೆಟ್ಟಿದರು. ಮೈಸೂರಿನವರು ಪಿರಿಯಾಪಟ್ಟಣವನ್ನು ಹಿಡಿದುಕೊಂಡರು.[೧೫೭]

ಕರ್ನಾಟಕದಲ್ಲಿ ಹೀಗೆ ಬದಲಾಗುತ್ತಿದ್ದ ರಾಜಕೀಯ ವಿದ್ಯಮಾನಗಳನ್ನು ಬಿಜಾಪುರದ ಮಹಮ್ಮದ ಆದಿಲ್‌ಶಾಹನು ಸೂಕ್ಷ್ಮವಾಗಿ ಗಮನಿಸುತ್ತಿದ್ದನು. ಪಿರಿಯಾಪಟ್ಟಣ ಹೋದದ್ದು ಆದಿಲ್‌ಶಾಹನಿಗೆ ಬಹಳ ಸಿಟ್ಟು ತರಿಸಿತು. ಹೇಗಾದರೂ ಮಾಡಿ ಮೈಸೂರಿನವರನ್ನು ಮಣಿಸಬೇಕೆಂದು ಮನಸ್ಸು ಮಾಡಿದನು. ಜೂನ ೧೬೪೬ ರಲ್ಲಿ ಮುಸ್ತಫಾಖಾನನ ನೇತೃತ್ವದಲ್ಲಿ ಒಂದು ದೊಡ್ಡ ಸೈನ್ಯವನ್ನೇ ಕಳಿಸಿದನು. ಆ ಸೈನ್ಯದ ಜೊತೆಗೆ ಇಕ್ಕೇರಿಯ ಶಿವಪ್ಪನಾಯಕನ ಸೈನ್ಯ, ಹರಪನ ಹಳ್ಳಿಯ ದೊಡ್ಡ ನಾಯಕನ ಸೈನ್ಯ ಮತ್ತು ಇನ್ನೂ ಕೆಲವು ಚಿಕ್ಕ ಪುಟ್ಟ ಪಾಳೇಗಾರರ ಸೈನ್ಯಗಳು ಕೂಡಿಕೊಂಡವು. ಅವರೆಲ್ಲರೂ ಸೇರಿ ಮೈಸೂರಿನ ಕಡೆಗೆ ಹೋರಟರು. ದಾರಿಯಲ್ಲಿ ಮುಸ್ತಫಾಖಾನನು ಗುಂಟಿಯನ್ನು ಗೆದ್ದುಕೊಂಡು, ೧೬೪೨ ರ ಯುದ್ಧದಲ್ಲಿ ಕಳೆದುಕೊಂಡಿದ್ದ ತುರುವೆ ಕೆರೆಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದನು. ತುರುವಕೆರೆಯನ್ನು ಬಿಜಾಪುರದರು ತುರುವಕೆರೆಯು ಮೈಸೂರಿನ ಉತ್ತರ ಭಾಗದಲ್ಲಿದ್ದಿತು. ಆಗ ಮೈಸೂರಿನ ಒಡೆಯರರವರು, ಶತ್ರು ಸೈನ್ಯವನ್ನು ಎದುರಿಸಲು ನಂಜರಾಜನನ್ನು ಕಳುಹಿಸಿದರು. ಮೈಸೂರಿನವರು ನಾನಾ ಕಡೆಗಳಿಂದ ಬಿಜಾಪುರ ಸೈನ್ಯವನ್ನು ಮುತ್ತಿದರು. ಆಗ ಬಿಜಾಪುರದವರು ಆ ಸೈನ್ಯವನ್ನು ಎದುರಿಸಲಾಗದೇ ಹಿಮ್ಮೆಟ್ಟಿದರು. ಹೀಗೆ ಮೈಸೂರಿನ ಉತ್ತರ ಭಾಗದಲ್ಲಿ ನೆಲಯೂರಲು ಬಿಜಾಪುರದವರು ಮಾಡಿದ ಪ್ರಯತ್ನಗಳೆಲವೂ ವಿಫಲವಾದವು. ಮೈಸೂರಿನ ಭಾಗದಲ್ಲಿ ಬಿಜಾಪುರದವರ ಪ್ರಭಾವವು ಬೆಂಗೂರು, ತುಮಕೂರು, ಶಿರಾ ಮುಂತಾದ ಪ್ರದೇಶಗಳಗೆ ಮಾತ್ರ ಸೀಮಿತವಾಗಿದ್ದವು.

೧೬೪೭ ರಲ್ಲಿ ಮುಸ್ತಫಾಖಾನನು ವಾಪಸ್ಸು ಬರುವಾಗ ಶ್ರೀರಂಗಪಟ್ಟಣದ ಉತ್ತರಕ್ಕಿರುವ ಜಗದೇವರಾಯನ ರಾಜ್ಯವನ್ನು ವಶಪಡಿಸಿಕೊಂಡನು. ಅದು ತಿರುಪತ್ತೂರು, ಕಾವೇರಿ ಪಟ್ಟಂ, ಹಾಸನ, ರಾಯದುರ್ಗ, ಕನಕಗಿರಿ, ರತ್ನಾಗೀರ್, ಮೇಲ್‌ಗೀರ್, ಅರ್ಜುನಕೋಟ್, ಥಲಿನ್‌ಕೋಟ್ ಮುಂತಾದ ಪ್ರದೇಶಗಳನ್ನು ಒಳಗೊಂಡಿತ್ತು. ಅಸದಖಾನ ಮತ್ತು ಶಹಾಜಿಯವರುಗಳಿಗೆ ಈ ಪ್ರದೇಶಗಳ ಆಡಳಿತವನ್ನು ನಡೆಸಲು ಬಿಡಲಾಗಿತ್ತು.[೧೫೮]

ಬಿಜಾಪುರ ಮತ್ತು ಮೈಸೂರು ರಾಜ್ಯಗಳ ನಡುವಿನ ವೈಮನಸ್ಸು ಹಾಗೂ ದ್ವೇಷ ನಡದೇ ಇತ್ತು. ೧೬೫೩ ರಲ್ಲಿ ಖಾನ ಮಹಮ್ಮದನು ವೆಲ್ಲೂರಿನಲ್ಲಿ, ಬಿಡುವಿಲ್ಲದ ತನ್ನ ಕಾರ್ಯಗಳಲ್ಲಿ ನಿರತನಾಗಿದ್ದನು. ಆಗ ಮೈಸೂರಿನವರು ಸಿದ್ಧಿ ರೈಹಾನ ಜೊತೆಗೆ ಕೂಡಿದರು. ಅಷ್ಟಲ್ಲದೇ ಆದಿಲ್‌ಶಾಹನ ಮೇಲಿದ್ದ ದ್ವೇಷದಿಂದ, ಕೆಲವು ಬಿಜಾಪುರದ ಅಧಿಕಾರಿಗಳು ಸಹಾ ಅವರೊಂದಿಗೆ ಸೇರಿದರು. ಅವರೆಲ್ಲರೂ ಒಟ್ಟುಗೂಡಿ, ಹಿಂದೆ ಮುಸ್ತಫಾಖಾನನು, ಆದಿಲ್‌ಶಾಹಗೆ ಗೆದ್ದು ಕೊಟ್ಟಿದ್ದ ಎಲ್ಲಾ ಪ್ರದೇಶಗಳನ್ನು ವಶಪಡಿಸಿಕೊಂಡರು. ಈ ಸುದ್ದಿಯು ಬಿಜಾಪುರಕ್ಕೆ ಹಿಂತಿರುಗುತ್ತಿದ್ದ, ಮತ್ತು ಆಗ ಬಡಕೋಟೆನಲ್ಲಿದ್ದ ಮುಸ್ತಫಾಖಾನನಿಗೆ ತಿಳಿಯಿತು. ಅವನು ಕೂಡಲೇ ದಿಕ್ಕು ಬದಲಿಸಿ ಮೈಸೂರಿನ ಕಡೆಗೆ ಹೊರಟನು. ಅಷ್ಟು ಹೊತ್ತಿಗೆ ಮೈಸೂರಿನ ರಾಜನು ಜಯದೇವನ ರಾಜ್ಯವನ್ನು ಗೆದ್ದಿದನ್ನು. ಬಿಜಾಪುರದವರು ಪ್ರಬಲವಾದ ಕೃಷ್ಣಗಿರಿ ಕೋಟೆಯ ಮೇಲೆ ದಾಳಿ ಮಾಡಿದರು. ಖಾನ ಮಹಮ್ಮದನು ಅಲ್ಲಿಗೆ ಬಂದು ಮೈಸೂರಿನ ರಾಜನನ್ನು ಅಲ್ಲಿಂದ ಓಡಿಸಿ, ಅಲ್ಲಿಯೇ ಇದ್ದ

ಇತರ ನಾಲ್ಕು ಕೋಟೆಗಳನ್ನು ಹಿಡಿದುಕೊಂಡರು. ಈ ನಾಲ್ಕು ಕೋಟೆಗಳನ್ನು ಈಚೇಗಷ್ಟೇ ಮೈಸೂರಿನವರು ಬಿಜಾಪುರದವರಿಂದ ಗೆದ್ದಿದ್ದರು.[೧೫೯] ಈಗ ಮೈಸೂರಿನ ರಾಜನು ಹೆದರಿ ತಪ್ಪೊಪ್ಪಿಕೊಂಡು ತನ್ನನ್ನು ಕ್ಷಮಿಸಬೇಕೆಂದು ತನ್ನ ರಾಯಭಾರಿಯ ಮೂಲಕ ಹೇಳಿಕಳಿಸಿದನು. ಮತ್ತು ತನ್ನನ್ನು ಸುರಕ್ಷಿತವಾಗಿ ಪಾರು ಮಾಡಬೇಕೆಂದು ಬೇಡಿಕೊಂಡನು. ಅಲ್ಲದೇ ಬಹಳಷ್ಟು ಹಣ ಕೊಡುವುದಾಗಿಯೂ, ಹೇಳಿದನು. ಇದಕ್ಕೆ ಒಪ್ಪಿದ ಆದಿಲ್‌ಶಾಹನ ಆಜ್ಞೆಯ ಮೇರೆಗೆ ಖಾನ ಮಹಮ್ಮದನು ಮೈಸೂರನ್ನು ಬಿಟ್ಟು ಬಿಜಾಪುರಕ್ಕೆ ಬಂದನು.[೧೬೦]

ಮುಂದೆ ಕ್ರಮೇಣ ಬಿಜಾಪುರದವರ ಅಧಿಕಾರ ಈ ಪ್ರದೇಶಗಳಲ್ಲಿ ಕಡಿಮೆಯಾಗುತ್ತಾ ಅಲ್ಲಿ ಮೈಸೂರು ಮತ್ತೆ ತನ್ನ ಅಧಿಕಾರವನ್ನು ಸ್ಥಾಪಿಸುತ್ತಾ ಹೋಯಿತು.

ಮಹಮ್ಮದ ಆದಿಲ್‌ಶಾಹ ಮತ್ತು ಶಿವಾಜಿ (೧೬೪೨-೫೭) :

ಕ್ರಿ.ಶ. ೧೬೪೨ ರಿಂದ ೧೬೫೭ ರ ಅವಧಿಯಲ್ಲಿ ಶಿವಾಜಿಯ ಸ್ಥಿತಿ ಮತ್ತು ಸ್ಥಾನ ಮಾನಗಳು ಬದಲಾಗುತ್ತಿದ್ದವು. ಶಿವಾಜಿ ಮತ್ತು ಆದಿಲ್‌ಶಾಹಿರವರ ಸಂಬಂಧಗಳ ಮೇಲೆ ಬಹಳಷ್ಟು ಅವಲಂಬಿತವಾಗಿದ್ದವು. ಮರಾಠಿಗರ ಶಕ್ತಿಯ ವೃದ್ಧಿಯ, ಆದಿಲ್‌ಶಾಹನ ಅವನತಿಯ ಚರಿತ್ರೆಗೆ ಸಂಬಂಧಿಸಿದ್ದಾಗಿದೆ. ಶಿವಾಜಿಯು ಮಹಾರಾಷ್ಟ್ರದ ಪ್ರದೇಶಗಳನ್ನು ಮಾಡಿಕೊಂಡದ್ದೇ, ಆದಿಲ್‌ಶಾಹಿ ಸಾಮ್ರಾಜ್ಯದಿಂದ ಕಿತ್ತುಕೊಂಡಂಥ ಪ್ರದೇಶ. ಶಿವಾಜಿ ಮತ್ತು ಆದಿಲ್‌ಶಾಹಿಗಳ ನಡುವಿನ ಸಂಬಂಧಗಳನ್ನು ಈ ಕೆಳಗೆ ವಿವರಿಸಲಾಗಿದೆ.

ಶಿವಾಜಿಯು ಬಿಜಾಪುರದ ಮೊಕಸದ್ದಾರ್ ಮತ್ತು ಜಾಹಗೀರದಾರನಾಗಿದ್ದುದ್ದು :

ಶಿವಾಜಿಯು ೧೬೩೭ ರ ಸಮಯದಲ್ಲಿ ಕರ್ನಾಟಕದ ದಂಡಯಾತ್ರೆ ನಡೆದಂತಹ ಕಾಲದಲ್ಲಿ ಶಿವಾಜಿಯು ಅವರ ತಂದೆಯವರ ಜಮೀನುಗಳ ಜಮೀನ್ದಾರನಾಗಿದ್ದನು.[೧೬೧] ಆಗ ಶಿವಾಜಿಯು ಅಲ್ಪವಯಿ ಆಗಿದ್ದರಿಂದ, ಅವನ ಜಾಹಗೀರನ್ನು ನೋಡಿಕೊಳ್ಳಲು ದಾದೋಜಿ ಕೊಂಡದೇವ ಎಂಬುವವನನ್ನು ನೇಮಿಸಲಾಯಿತು.[೧೬೨] ಶಿವಾಜಿಯು ಹನ್ನೆರಡು(೧೨) ವರ್ಷದವನಾಗಿದ್ದಾಗ ಅವನನ್ನು ಮೊಕಸದ್ದಾರನನ್ನಾಗಿ ಮಾಡಿ, ಶಹಾಜಿಯು ಶಿವಾಜಿಯನ್ನು ದಾದೋಜಿಯ ಜೊತೆಗೆ ಪೂನಾಕ್ಕೆ ಕಳುಹಿಸಲಾಯಿತು.[೧೬೩] ಶಿವಾಜಿಯು ಬಹಳ ಚಿಕ್ಕ ವಯಸ್ಸಿನಿಂದಲೇ ಜಾಹಗೀರ ಆಡಳಿತವನ್ನು ನಿರ್ವಹಿಸುತ್ತ ಹೋದನು.[೧೬೪]

ಶಿವಾಜಿಯು ಪೂನಾ, ಸೂಪ, ಇಂದಪುರ ಮುಂತಾದವುಗಳ ಜಾಹಗೀರದಾರನಾಗಿದ್ದಾಗ್ಯೂ ಪೂನಾ ಜಿಲ್ಲೆಯಲ್ಲಿದ್ದ ಕೊಂದಣ ಮತ್ತು ಪುರಂದರದ ಕೋಟೆಗಳು ಬಿಜಾಪುರದ ಸರ್ಕಾರದವರು ನೇಮಿಸಿದ್ದ ಅಧಿಕಾರಿಗಳ ವಶದಲ್ಲಿ ಇದ್ದವು. ಶಿವಾಜಿಯ ಜಹಗೀರದಲ್ಲಿಯ ಮುಖ್ಯ ಕೋಟೆಗಳು ಬಿಜಾಪುರದವ ಅಧೀನದಲ್ಲಿದ್ದವು. ಮತ್ತು ಅವುಗಳ ಆಡಳಿತ ವಿಷಯದಲ್ಲಿ ಶಿವಾಜಿಯು ಕೈಹಾಕುವಂತಿರಲಿಲ್ಲ. ಉದಾಹರಣೆಗೆ, ಮುಖ್ಯ ಕೋಟೆಗಳಾದ ಕೊಂದಣ ಮತ್ತು ಪುರಂದರದ ಕೋಟೆಗಳು ಶಿವಾಜಿಯ ಜಹಗೀರನಲ್ಲಿದ್ದವೇನೋ

ನಿಜ ಆದರೆ, ಅವುಗಳ ಮೇಲೆ ಅವನ ಅಧಿಕಾರವಿರಲಿಲ್ಲ. ದಾದೋಜಿಯು ೧೬೪೭ ರಲ್ಲಿ ಕಾಲವಾದ ನಂತರ ಶಿವಾಜಿಯು ಆ ಕೋಟೆಗಳನ್ನು ಹಿಡಿದುಕೊಂಡು ತನ್ನ ವಶಕ್ಕೆ ತೆಗೆದುಕೊಂಡನು.

ಶಿವಾಜಿಯು ಚಿಕ್ಕಂದಿನಿಂದಲೂ ಬೆಳೆದು ಬಂದ ರೀತಿಯನ್ನು ಗಮನಿಸಿದರೆ, ಅವನು ಬಹಳ ಸ್ವತಂತ್ರ ಮನೋವೃತ್ತಿಯವನಾಗಿದ್ದನು. ಎಂಬುದು ತಿಳಿದು ಬರುತ್ತದೆ. ೧೬೪೫ ರಲ್ಲಿ ಶಿವಾಜಿಯು ಒಂದು ಸ್ವತಂತ್ರ ರಾಜ್ಯವನ್ನು ಕಟ್ಟಬೇಕೆಂಬ ಕನಸು ಕಾಣುತ್ತಿದ್ದನು.[೧೬೫] ಆದರೆ ತನ್ನ ಆ ಕನಸನ್ನು ನನಸು ಮಾಡಿಕೊಳ್ಳವುದರಲ್ಲಿ ಇದ್ದಂಥಾ ಮುಖ್ಯ ಅಡಚಣೆ ಎಂದರೆ ಬಿಜಾಪುರದವರೇ. ಪೂನಾದಲ್ಲಿ ಮತ್ತು ಪೂನಾದ ಸುತ್ತ ಮುತ್ತಲೂ ಅನೇಕ ಬಿಜಾಪುರದ ಅಧಿಕಾರಿಗಳು ಇರುತ್ತಿದ್ದರು. ಸ್ವತಃ ದಾದೋಜಿಯೇ ಕೊಂದಣ ಮತ್ತು ಇತರ ಮಹಲುಗಳ ಸುಬೇದಾರನಾಗಿದ್ದನು. ಅಬ್ದುಲ್ಲಾನು ಖಾಜಿ ಆಗಿದ್ದನು. ಗೋಮಾಜಿ ಮತ್ತು ನಂತರ ಸಿದ್ದಿ ಅಂಬರರವರು, ೧೬೪೭ ರ ವರೆಗೆ ಪೂನಾದ ಹವಾಲ್ದಾರರುಗಳಾಗಿದ್ದರು. ನಾರೋ ಪಂತರವರು ಮುಜುಮದಾರರಾಗಿ ಮತ್ತು ವಿಠೋಜಿ ಶಿತೋಲೆ ರವರು ದೇಶಮುಖರಾಗಿದ್ದರು. ಅಷ್ಟು ಜನ ಬಿಜಾಪುರದ ಅಧಿಕಾರಿಗಳು ತನ್ನ ಸುಬೇದಾರಿ ಪ್ರದೇಶದಲ್ಲಿ ಇದ್ದಾಗ, ಶಿವಾಜಿಯು ತನ್ನ ಮನಸ್ಸಿನ ಪ್ರಕಾರ ಆಡಳಿತವನ್ನು ನಡೆಸಲು ಆಗುತ್ತಿರಲಿಲ್ಲ. ಅವರು ಆದಿಲ್‌ಶಾಹನ ಅಧಿಕಾರಿಗಳಾದ್ದರಿಂದ ಅವರು ಸ್ವಾಭಾವಿಕವಾಗಿಯೇ ಅವನ ಹಿತವನ್ನು ಯಾವಾಗಲೂ ಬಯಸುತ್ತಿದ್ದರು.

ಒಂದು ಸ್ವತಂತ್ರ್ಯ ರಾಜ್ಯವನ್ನು ಸ್ಥಾಪಿಸುವುದು ಶಿವಾಜಿಯ ಪ್ರಬಲವಾದ ಅಪೇಕ್ಷೆಯಾಗಿತ್ತು.[೧೬೬] ೧೬೪೬ ರಿಂದ ಬಿಜಾಪುರದ ಆಡಳಿತದಲ್ಲಿ ಶಿತಿಲತೆಯಂಟಾಗಿ ರಾಜ್ಯವು ನಿಧಾನವಾಗಿ ಅವನತಿಯತ್ತ ಸಾಗುತ್ತಿತ್ತು. ೧೬೫೬ ರಲ್ಲಿ ಮಹಮ್ಮದ ಆದಿಲ್‌ಶಾಹನು ತೀರಿಕೊಂಡನು. ಆಗ ತನ್ನ ತಂದೆಯಿಂದ ಪಡೆ'ದ ಜಹಗೀರನ್ನು ನಿಧಾನವಾಗಿ ಸ್ವತಂತ್ರವಾಗಿ ಆಳುತ್ತಾ ಹೋದನು. ಆದರೆ ಸ್ವಲ್ಪ ಮಟ್ಟಿಗೆ, ಬಿಜಾಪುರದ ಅಧೀನದಲ್ಲಿದ್ದದ್ದೂ ನಿಜ. ಅವರನ್ನೂ ತನ್ನ ಮೇಲಿನ ರಾಜರೆಂದು ಒಪ್ಪಿಕೊಂಡಿದ್ದ. ಬಿಜಾಪುರದವರು ದಕ್ಷಿಣದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಬೇಕೆಂಬ ಹಂಬಲವನ್ನು ಹೊಂದಿಯೇ ಇದ್ದರು. ಇದು ಶಿವಾಜಿಗೆ ಉತ್ತಮ ಅವಕಾಶಗಳನ್ನು ಒದಗಿಸುತ್ತಿತ್ತು. ಬಿಜಾಪುರ ಸರ್ಕಾರಕ್ಕೆ ಎಲ್ಲಾ ಕೋಟೆಗಳನ್ನು ಸುವ್ಯವಸ್ಥಿತವಾಗಿ ಮತ್ತು ಉತ್ತಮವಾಗಿ ನೋಡಿಕೊಂಡು ಹೋಗಲು ಆಗುತ್ತಿರಲಿಲ್ಲ. ಹೀಗಾಗಿ ಅವರು ಕೋಟೆಗಳನ್ನು ಸ್ಥಳೀಯ ನಾಯಕರುಗಳ ಕೈಯಲ್ಲೇ ಬಿಟ್ಟು ಕೊಟ್ಟರು. ಈ ಸಂದರ್ಭದವನ್ನು ಚನ್ನಾಗಿ ಉಪಯೋಗಿಕೊಂಡ ಚನ್ನಾಗಿ ತೆಗೆದುಕೊಂಡ ಶಿವಾಜಿ ಸ್ವತಂತ್ರವಾಗಿ ವರ್ತಿಸಲು ಪ್ರಾರಂಭಿಸಿದ.

೧೬೪೪ ರಲ್ಲಿ ಬೆಂಗಳೂರಿಗೆ ಭೇಟ್ಟಿಕೊಟ್ಟು ಬಂದ ನಂತರ ಶಿವಾಜಿಯು ತನ್ನ ಮನದಾಸೆಯಾಗಿದ್ದ ಹನ್ನೆರಡು ಮಹಲಗಳು ಮತ್ತು ಸಿಂಹಘಡ ಕೋಟೆಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುವ ತನ್ನ ಪ್ರಯತ್ನವನ್ನು ಪ್ರಾರಂಭಿಸಿದ.

ಶಿವಾಜಿಯ ಈ ಕಾರ್ಯಚಟುವಟಿಕೆಗಳ ಬಗ್ಗೆ ಬಿಜಾಪುರದವರು ಅಷ್ಟು ಗಮನ ಕೊಡಲಿಲ್ಲ. ಇದಕ್ಕೆಲ್ಲಾ ದಾದೋಜಿ ಕೊಂಡದೇವನನ್ನು ದೂಷಿಸಲಾಯಿತು. ಅವನು ಆ ಜಹಗೀರನಲ್ಲಿ ಶಿವಾಜಿಯ ಸಹಾಯಕ (ಏಜೆಂಟ)ನೂ ಆದಿದ್ದುದಲ್ಲದೇ, ಪೂನಾದಲ್ಲಿ ಆದಿಲ್‌ಶಾಹನ ಸುಬೇದಾರನೂ ಆಗಿದ್ದ. ೧ ಅಗಷ್ಟ ೧೬೪೪ ರಲ್ಲಿ ಹೊರಡಿಸಿದ ಆದಿಲ್‌ಶಾಹನ ಒಂದು ಫರ್ಮಾನಿನಲ್ಲಿ (ಅದು ಖಾನೋಜಿ ಜೆದಹೆಗೆ ಸಂಬಂಧಿಸಿದ್ದು) ಶಹಾಜಿಯ ಸಹಾಯಕನಾದ ದಾದೋಜಿ ಕೊಂಡದೇವ ಎಂಬುವವನು ವಿರುದ್ಧವಾದ ಕಾರ್ಯಗಳನ್ನು ಮಾಡುತ್ತಿರುವ ಬಗ್ಗೆ ಹೇಳಲಾಗಿದೆ. ಅದನ್ನು ಅಡಗಿಸುವ ಸಲುವಾಗಿ ಖಂಡೋಜಿ ಮತ್ತು ಭಾಜಿ ಘೋರ್ಪಡೆಯವರನ್ನು ಜೊತೆ ಮಾಡಿ ತಮ್ಮ ಸೈನ್ಯದೊಂದಿಗೆ ಪೂನಾಕ್ಕೆ ಹೋಗಲು ಸುಲ್ತಾನನು ತಿಳಿಸಿದ್ದ.[೧೬೭] ಈ ಫರ್ಮಾನು ಬಿಜಾಪುರದವರು, ಒಬ್ಬ ಪಾಳೇಗಾರನನ್ನು ಮಣಿಸಲು ಬೇರೆ ಪಾಳೇಗಾರನ್ನು ಅವರ ಮೇಲೆ ಒಡುತ್ತಿದ್ದ ಧೋರಣೆಯನ್ನು ತೋರಿಸುತ್ತದೆ. ಈ ಧೋರಣೆಯನ್ನು ಆದಿಲ್‌ಶಾಹನು ಬೇರೆ ಸಣ್ಣ ಸಣ್ಣ ಪಾಳೇಗಾರರು ಶಿವಾಜಿಯ ಜೊತೆಗೆ ಸೇರಿಕೊಳ್ಳುವುದನ್ನು ತಪ್ಪಿಸುವ ಸಲುವಾಗಿ ಅನುಸರಿಸುತ್ತಿದ್ದ. ಹೀಗೆ ಅವರವರಲ್ಲೇ ಜಗಳಗಳನ್ನು ಹಚ್ಚುವ ಮೂಲಕ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳತ್ತಿದ್ದನು. ಆ ಫರ್ಮಾನಿನಲ್ಲಿ ಹೀಗೆ ಹೇಳಲಾಗಿತ್ತು.[೧೬೮] "ಶಿವಾಜಿಯು ನಮ್ಮ ಆಜ್ಞೆಯನ್ನು ಮೀರಿದ್ದಾನೆ. ಅವನು ಮತ್ತ ದಾದೋಜಿ ಕೊಂಡದೇವ ಅವರು ಕೊಂಡನಾಡ ಕಡೆಗೆ ಆ ಪ್ರದೇಶವನ್ನು ಹಿಡಿದುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಖಂಡೋಜಿ ಮತ್ತಿ ಭಾಜಿ ಘೋರ್ಪಡೆಯವರನ್ನು ಇತರ ಬಿಜಾಪುರದ ಸೈನ್ಯಾಧಿಕಾರಿಗಳ ಜೊತೆ ಸೇರಿ ನಮ್ಮ ವಿರುದ್ಧದ ಶಕ್ತಿಗಳನ್ನು ನಿಯಂತ್ರಿಸಲು ನಿಯಮಿಸಲಾಗಿದೆ. ನೀವೂ ನಿಮ್ಮ ಸಮಸ್ತ ಸೈನ್ಯದೊಂದಿಗೆ ಹೋಗಿ ದಾದೋಜಿ ಕೊಂಡದೇವನನ್ನು ಹಿಡಿಯಬೇಕು ಮತ್ತು ನಮ್ಮ ಕೈ ಬಿಟ್ಟು ಹೋಗಿರುವ ಪ್ರದೇಶಗಳನ್ನು ವಶಪಡಿಸಿಕೊಳ್ಳಬೇಕು."

ಇದರಲ್ಲಿ ಶಿವಾಜಿಯ ಹೆಸರನ್ನು ಪ್ರಸ್ತಾಪಿಸಿಲ್ಲ ಆತನ ನಿಷ್ಠೆಯ ಬಗ್ಗೆ ಅನುಮಾನವಿದ್ದರೂ ಸಹ, ಅವನು ಬಹಳ ಚಿಕ್ಕವನಿದ್ದದರಿಂದ, ಅವನನ್ನು ಅಷ್ಟಾಗಿ ಗಣನೆಗೆ ತೆಗೆದುಕೊಂಡಿಲ್ಲ.

೩೦ ಮಾರ್ಚ ೧೬೪೫ ರ ಆದಿಲ್‌ಶಾಹನ ಫರ್ಮಾನಿನಲ್ಲಿ ಮೊದಲ ಬಾರಿಗೆ ಶಿವಾಜಿಯ ಹೆಸರಿನ ಪ್ರಸ್ತಾಪ ಇದೆ. ಅದು ಕನ್ಹೋಜಿ ಜಡೆ ಮತ್ತು ದಾದೋಜಿ ನರಸ ಪ್ರಭು ಅವರಿಗೆ ಕಳಿಸಿದ್ದು. ಅದರಲ್ಲಿ ಶಿವಾಜಿಗೆ ಸಹಕಾರ ನೀಡಿದರೆ, ಅಥವಾ ಉತ್ಪನ್ನವನ್ನು ಕೊಟ್ಟರೆ ಪ್ರಭುನನ್ನು ಕೊಲ್ಲಿಸುವುದಾಗಿ ಹೆದರಿಸಲಾಗಿತ್ತು.[೧೬೯]

ಕೊಂದಣವನ್ನು ಆಕ್ರಮಿಸಿ ಹಿಡಿದುಕೊಂಡ ನಂತರ ಶಿವಾಜಿಯು ಪುರಂದರ, ತೋರಣ ಮುಂತಾದವುಗಳನ್ನು ಹಿಡಿದುಕೊಂಡನು. ನಂತರ ಕೊಂಕಣದಲ್ಲಿ ಕಲ್ಯಾಣ ಮತ್ತು ಭೀವಂಡಿಗಳನ್ನು ಆಕ್ರಮಿಸಿಕೊಂಡನು. ಮುಂದೆ ಮಹುಲಿಯನ್ನು ಹಿಡಿದುಕೊಂಡನು. ರಾಜಘರ ಅನ್ನು ಕಟ್ಟಿಸಿದನು.[೧೭೦] ಮೊದ ಮೊದಲು ಗುಟ್ಟಾಗಿ ನಡೆದದ್ದು ಈಗ ಒಂದು ರೀತಿಯಲ್ಲಿ ಎದುರೆದುರಿಗೆ ಮತ್ತು ಒಂದು ರೀತಿ ಎಲ್ಲರಿಗೂ ಕಾಣುವಂತೆಯೇ ನಡೆಯತೊಡಗಿತು. ಹೀಗೆ ಬಿಜಾಪುರದ ವಿರುದ್ಧವಾದ ಚಟುವಟಿಕೆಗಳನ್ನು ಶಿವಾಜಿಯು

ಮಾಡುತ್ತಿದ್ದರೂ, ಬಾಹ್ಯದಲ್ಲಿ ಬಿಜಾಪುರದವರಿಗೆ ವಿಧೇಯವಾಗಿರುವಂತೆಯೂ ಮತು ನಿಷ್ಠೆಯಿಂದಲೂ ಇರುವಂತೆ ವರ್ತಿಸುತ್ತಿದ್ದನು. ಮೇ ೧೬೪೫ ರಲ್ಲಿ ಶಿವಾಜಿಯು ದಾರೋಜಿ ನರಸ ಪ್ರಭು ಅವರಿಗೆ ಬರೆದ ಒಂದು ಪತ್ರದಲ್ಲಿ " ಆದಿಲ್‌ಶಾಹರವರು ತಪ್ಪು ತಿಳಿದುಕೊಂಡಿದ್ದಾರೆ, ಹಾಗೆ ನೋಡಿದರೆ ನಾನಾಗಲೀ, ನಿವಾಗಲಿ, ಅವರ ವಿರುದ್ಧ ಇಲ್ಲ. ಅವರಿಗೆ ನಮ್ಮ ನಿಷ್ಠೆ ಇದ್ದೇ ಇದೆ" ಎಂದು ಬರೆದನು.[೧೭೧] ಆದಿಲ್‌ಶಾಹನು ಶಿವಾಜಿಯ ಬಗ್ಗೆ ಶಹಾಜಿಯಿಂದ ಇನ್ನಷ್ಟು ವಿವರಗಳನ್ನು ಕೇಳಿದಾಗ, ಶಿವಾಜಿಗೆ ಸ್ವಲ್ಪ ತೊಂದರೆ ಇದ್ದುದರಿಂದ ಆ ಬಗ್ಗೆ ಒಂದಿಷ್ಟು ಬಂದೋಬಸ್ತು ಮಾಡಿದ್ದಾನೇ ಹೊರತೂ ಅದು ನಿಮ್ಮ ಮೇಲೆ ಏನೂ ಅಲ್ಲವೆಂದು ವಿವರಣೆಯನ್ನು ಕೊಟ್ಟನು. ಇದರಿಂದ ಸುಲ್ತಾನನು ತೃಪ್ತನಾದಂತೆ ಕಂಡನು. ಶಹಾಜಿಯು ಶಿವಾಜಿ ಮತ್ತು ದಾದೋಜಿಯವರುಗಳಿಗೆ ಸರಿಯಾಗಿ ವರ್ತನೆಯನ್ನು ಮಾಡಬೇಕು ಎಂಬ ಬಗ್ಗೆ ಪತ್ರಗಳನ್ನು ಬರೆದನು. ಆದರೆ ಶಿವಾಜಿಯು ಆ ಪತ್ರಗಳಿಗೆ ಬೆಲೆ ಕೊಡಲಿಲ್ಲ.[೧೭೨]

ಶಿವಾಜಿಯ ಚಟುವಟಿಕೆಗಳು ಮತ್ತೆ ಮಹಮ್ಮದ ಆದಿಲ್‌ಶಾಹನ ಗಮನ ಸೆಳೆದವು ಮತ್ತು ಅವುಗಳಿಂದ ಸ್ವಾಭಾವಿಕವಾಗಿಯೇ ಅವನು ಬಹಳ ಕೋಪಗೊಂಡು, ಶಿವಾಜಿಗೆ ಹದ್ದು ಬಸ್ತಿನಲ್ಲಿಡುವಂತೆ ಶಾಹಜಿಗೆ ಪತ್ರವನ್ನು ಬರೆದನು. ಶಹಾಜಿಯು ಎಷ್ಟೇ ಹೇಳಿದರೂ ಅವನ ಮಗನಾದ ಶಿವಾಜಿಯು ಕೇಳಲಿಲ್ಲ. ಸುಲ್ತಾನನ ಆಜ್ಞೆಯ ಮೇರೆಗೆ ಶಹಾಜಿಯನ್ನು ೨೫ ಜುಲೈ ೧೬೪೮ ರಂದು ಬಂಧಿಸಿ ಬಿಜಾಪುರಕ್ಕೆ ಕರೆ ತರಲಾಯಿತು. ಶಿವಾಜಿಯು ತನ್ನ ಜಹಗೀರಿನ ಪ್ರದೇಶವನ್ನು ಬಿಟ್ಟು ಹೊರಗಡೆ ಇರುವ ಪ್ರದೇಶಗಳನ್ನು ಕಬಳಿಸಲು ಪ್ರಯತ್ನಿಸುತ್ತಿದ್ದ. ಹಾಗೆ ಮಾಡದಂತೆ ನಿಯಂತ್ರಿಸಲು ಅವನ ತಂದೆಯನ್ನು ಬಂಧಿಸಲಾಯಿತು. ಇದು ಶಿವಾಜಿಗೆ ತಿಳಿದು ತನ್ನ ಕಾರ್ಯ ಚಟುವಟಿಕೆಯನ್ನು ಕಡಿಮೆ ಮಾಡಿದನು. ಪೂನಾ ಮತ್ತು ಬೆಂಗಳೂರುಗಳಲ್ಲಿದ್ದ ಅವನ ಜಹಗೀರಗಳನ್ನು ವಶಪಡಿಸಿಕೊಳ್ಳಲು ಆಜ್ಞೆ ಮಾಡಲಾಯಿತು.

ಶಿವಾಜಿಯು ಈಗ ಬಹಳ ಗೊಂದಲದಲ್ಲಿ ಬಿದ್ದನು. ಮಾತುಕತೆಗಳಿಂದ ಅವನ ತಂದೆಯನ್ನು ಬಿಡಿಸುವುದು ಸಾಧ್ಯವಿರಲಿಲ್ಲ. ಮೊಘಲ ಚಕ್ರವರ್ತಿಗಳು ಯಾವಾಗಲೂ ಬಿಜಾಪುವನ್ನು ದ್ವೇಷಿಸುತ್ತಿದ್ದರು. ಆದ್ದರಿಂದ ಬಿಜಾಪುರದವರಿಗೆ ಮಾಡುವ ಯಾವುದೆ ತೊಂದರೆಯೂ ಮೊಘಲ ಚಕ್ರವರ್ತಿಗಳ ಪ್ರೀತಿಯನ್ನು ಗಳಿಸುತ್ತದೆ ಎಂದು ತರ್ಕಮಾಡಿದ. ಆದ್ದರಿಂದ ಅವರಿಗೆ ಸಂತೋಷವಾಗುವಂತಹ ಕಾರ್ಯವನ್ನು ಮಾಡಲು ಉದ್ಯುಕ್ತನಾದ. ದಕ್ಷಿಣದ ವೈಸರಾಯ್ ಆಗಿದ್ದ ರಾಜಕುಮಾರ ಮುರಾದ್ ಭಕ್ಷನಿಗೆ ಪತ್ರ ಬರೆದು, ಅದರಲ್ಲಿ ತನ್ನ ತಂದೆಗೆ ಕ್ಷಮೆ ಕೋರಿ ಅವನನ್ನು ಬಿಡಿಸಬೇಕೆಂದು ಹಾಗೆ ಮಾಡುವುದಾದರೆ, ಮೊಘಲ ಸೇವೆಯಲ್ಲಿ ಸೇರುವುದಾಗಿಯೂ ತಿಳಿಸಿದನು. ಮುರಾದನು ಇದಕ್ಕೆ ಅನುಕುಲಕರವಾದಂಥ ಉತ್ತರವನ್ನು ಬರೆದನು. ಜೊತೆಗೆ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಶಹಾಜಿಯನ್ನು ಬಿಡುವಂತೆ ಶಹಜಾಹನನು ಬಿಜಾಪುರದ ಸುಲ್ತಾನನ ಮೇಲೆ ಒತ್ತಡವನ್ನು ತಂದನೋ ಇಲ್ಲವೋ ಎಂಬುದು ಚರಿತ್ರೆಯಿಂದ ಸರಿಯಾಗಿ ತಿಳಿಯುವುದಿಲ್ಲ. ಆದರೂ ಶಾರ್ಜಾಖಾನ ಮತ್ತು ರಣದುಲ್ಲಾಖಾನರ ಪ್ರಯತ್ನದಿಂದ ೧೬ ಮೇ ೧೬೪೯ ರಂದು ಶಹಾಜಿಯು ಬಿಡುಗಡೆಯಾದನು.[೧೭೩]

[illegible]

[illegible]

[illegible]

[illegible]

ಶಹಾಜಿಯನ್ನು ಬಿಡುಗಡೆ ಮಾಡುವಾಗ ಸಿಂಹಘಡ ಮತ್ತು ಬೆಂಗಳೂರಿನ ಕೋಟೆಗಳನ್ನು ಬಿಟ್ಟುಕೊಡಬೇಕೆಂದು ಆದಿಲ್‌ಶಾಹನು ಷರತ್ತು ಹಾಕಿದನು. ಶಿವಾಜಿಯು ಹಿಡಿದುಕೊಂಡಿದ್ದ ಎಲ್ಲಾ ಕೋಟೆಗಳನ್ನು ಬಿಟ್ಟು ಕೊಡಬೇಕೆಂದು ಆದಿಲ್‌ಶಾಹನು ಕೇಳಲಿಲ್ಲ. ಎರಡು ಕೋಟೆಗಳಿಗೆ ತೃಪ್ತಿಪಟ್ಟುಕೊಂಡನು. ಅಂದರೆ ಚಕ್ಕನ ಮತ್ತು ನೀರಾದ ನಡುವಿನ ಕೆಲವು ಕೋಟೆಗಳನ್ನು ಶಿವಾಜಿಯು ವಶಪಡಿಸಿಕೊಂಡಿದ್ದ. ಈಗ ಅವುಗಳನ್ನು ಕೇಳದೇ ಇದ್ದದ್ದು, ಅವು ಶಿವಾಜಿಯವು ಎಂಬುದು ಸ್ವಲ್ಪ ಹೆಚ್ಚು ಕಮ್ಮೀ ಆದಿಲ್‌ಶಾಹನು ಒಪ್ಪಿಕೊಂಡಂತೆಯೇ ಆಗಿತ್ತು. ಹೀಗೆ ಸ್ವಲ್ಪ ಕೊಟ್ಟಾದರೂ ಅಡ್ಡಿ ಇಲ್ಲ ಶಹಾಜಿ ಮತ್ತು ಶಿವಾಜಿಯವರುಗಳ ತರ್ಕಕ್ಕೆ ಆದಿಲ್‌ಶಾಹನು ಬಂದಿದ್ದನು. ಅಷ್ಟೇ ಅಲ್ಲ ಶಹಾಜಿಯನ್ನು ಆದಿಲ್‌ಶಾಹನು ಮತ್ತೆ ತನ್ನ ಸೇವೆಯಲ್ಲಿ ತೆಗೆದುಕೊಂಡನು. ಶಹಾಜಿಗೆ ಬೆಂಗಳೂರಿನ ಜಹಗೀರನ್ನು ಕೊಟ್ಟನು. ಮತ್ತು ಮುಂದಿನ ಎಲ್ಲಾ ಸ್ಥಾನಮಾನಗಳನ್ನು ಅವನಿಗೆ ಮರಳಿ ಕೊಟ್ಟನು. ಅವನನ್ನು ಈಗ ಮಹಾರಾಜ ಮತ್ತು 'ಫರಜಂದ್' ಎಂದೂ ಕರೆಯಲಾಗುತ್ತಿತ್ತು. ಈ ಬಗ್ಗೆ ೫ ಸೆಪ್ಟೆಂಬರ ೧೬೪೯ ರ ಬಿಜಾಪುರದ ಸನ್ನದ್ದಿನಲ್ಲಿ ಪ್ರಸ್ತಾಪವಿದೆ.[೧೭೪]

ಮುಂದಿನ ಆರು ವರ್ಷಗಳ ಕಾಲ(೧೬೫೦–೧೬೫೫) ಶಿವಾಜಿಯು ಬಿಜಾಪುರದವರೊಂದಿಗೆ ಯಾವ ಘರ್ಷಣೆಯ ಕಾರ್ಯಗಳನ್ನು ಮಾಡದೇ ಸುಮ್ಮನೇ ಇದ್ದನು. ಆ ಅವಧಿಯಲ್ಲಿ ತನ್ನ ಸಣ್ಣ ಪ್ರದೇಶವನ್ನು ಸುವ್ಯವಸ್ಥಿತವಾಗಿ ಕಟ್ಟುವ ಮತ್ತು ಇಟ್ಟುಕೊಳ್ಳುವ ಕೆಲಸವನ್ನು ಮಾಡಿದನು. ಈ ವೇಳೆಯಲ್ಲಿ ಅವನು, ಜವಳಿಯ ರಾಜಾನನ್ನು ತನ್ನ ಜೊತೆ ಸೇರುವಂತೆ ಮತ್ತು ತಾವಿಬ್ಬರೂ ಬಿಜಾಪುರದವರ ವಿರುದ್ಧ ಇರುವಂತೆ ಮಾಡಲು ಸಾಕಷ್ಟು ಪ್ರಯತ್ನಪಟ್ಟನು.[೧೭೫] ಜಿಂದಲ್‌ರಾವಗೆ ಶಿವಾಜಿಗೆ ದ್ವೇಷವೇನೂ ಇರಲಿಲ್ಲ, ಆದರೂ ಅವನ ಮಾತಿನಂತೆ ಆದಿಲ್‌ಶಾಹನ ವಿರುದ್ಧ ಅವನ ಜೊತೆ ಸೇರಲು ಇಷ್ಟವಿರಲಿಲ್ಲ. ಶಿವಾಜಿಯ ಆಹ್ವಾನವನ್ನು ನಯವಾಗೀಯೇ ಒಂದು ಬದಿಗೆ ಇಟ್ಟದ್ದನು.[೧೭೬] ಶಿವಾಜಿಗೆ ಜವಳಿಯನ್ನು ಗೆದ್ದುಕೊಳ್ಳುವುದು ಬಹಳ ಮುಖ್ಯವಾಗಿತ್ತು. ಆ ಕೆಲಸವಾಗದೇ ಸ್ವರಾಜ್ಯವನ್ನು ಸ್ಥಾಪಿಸುವುದು ಆಗುವುದಿಲ್ಲ ಎಂದು ಅವನು ಭಾವಿಸಿದ್ದನು.[೧೭೭] ಆದ್ದರಿಂದ ಬಹಳ ಕಷ್ಟಪಟ್ಟು ೧೬೫೬ ರಲ್ಲಿ ಮೋರೆಸ್ಸ ಎಂಬುವವನನ್ನು ಕೊಂದು ಜವಳಿ, ಶ್ರೀರಂಗಪುರ ಮತ್ತು ಅದರ ಸುತ್ತ ಮುತ್ತಲಿನ ಕೋಟೆಗಳನ್ನು ಆಕ್ರಮಿಸಿಕೊಂಡನು.[೧೭೮]

ಜವಳಿಯನ್ನು ಹಿಡಿದುಕೊಳ್ಳುವುದು ಭದ್ರತೆಯ ದೃಷ್ಟಿಯಿಂದ ಬಹಳ ಮಹತ್ವದಾಗಿತ್ತು. ಶಿವಾಜಿಯು ತನ್ನ ರಾಜ್ಯ ವಿಸ್ತರಣೆಯ ಕಾರ್ಯದಲ್ಲಿ ಮಾಡಿದ ಮೊದಲನೆಯ ಮಜಲೇ ಅದಾಗಿತ್ತು. ಅದು ಕೊಂಕಣ ಪ್ರದೇಶದಲ್ಲಿ ಅವನು ತನ್ನ ರಾಜ್ಯ ವಿಸ್ತರಣೆಯನ್ನು ಮಾಡುವ ನಿಟ್ಟಿನಲ್ಲಿ ಒಂದು ಉತ್ತಮ ಕೊಂಡಿಯಾಗಿತ್ತು. ಪ್ರತಾಪಘಡ ಮತ್ತು ರಾಯಘಡ ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದನು. ಜವಳಿಯನ್ನು ಸೇರಿಸಿಕೊಂಡಿದ್ದು, ಅವನ ಶಕ್ತಿಯನ್ನು ಹೆಚ್ಚಿಸಿತ್ತು.[೧೭೯] ೧೬೫೬ ರಲ್ಲಿ ಮಹಮ್ಮದ ಆದಿಲ್‌ಶಾಹನು ಮರಣ ಹೊಂದಿದ ನಂತರ ಶಿವಾಜಿಯು ಇನ್ನೂ ಪ್ರಬಲನಾಗಿ ಬಿಜಾಪುರದ ಅನೇಕ ಪ್ರದೇಶಗಳನ್ನು ಹಿಡಿದುಕೊಂಡನು.

[illegible]

[illegible]

[illegible]

[illegible]

ಮಹಮ್ಮದ ಆದಿಲ್‌ಶಾಹ ಮತ್ತು ಹಾಗಲವಾಡಿ ನಾಯಕರು :

ಇಮ್ಮಡಿ ಬೈರಪ್ಪನಾಯಕನ ಆಳ್ವಿಕೆಯು ಕ್ರಿ.ಶ. ೧೬೨೭ ರಲ್ಲಿ ಚಿಕ್ಕನಾಯ್ಕನಹಳ್ಳಿಯಲ್ಲಿ ಆರಂಭವಾಯಿತು. ಇವನ ಆಳ್ವಿಕೆಯ ಕಾಲದಲ್ಲಿ ನಿರಂತರ ಶತ್ರುಗಳ ನಿರಂತರ ದಾಳಿಯಿಂದ ಸಂಸ್ಥಾನ ಅಪಾರ ಸಂಕಷ್ಟಕ್ಕೆ ಈಡಾಯಿತು. ವಿಜಯ ನಗರದ ದೋ-ಅಬ್ ಪ್ರದೇಶದಂತೆ ಫಲವತ್ತಾದ ಭೂಮಿಯನ್ನೊಳಗೊಂಡ ಈ ಸಂಸ್ಥಾನದ ಮೇಲೆ, ಮೈಸೂರು ಒಡೆಯರು ದೃಷ್ಟಿ ಹಾಯಿಸಿದರು. ಇದೇ ಸಮಯಕ್ಕೆ ಉತ್ತರ ಕರ್ನಾಟಕದಲ್ಲಿ ಹಲವಾರು ಹೊಸ ರಾಜಕೀಯ ಬೆಳವಣಿಗೆಗಳು ಉಂಟಾಗಿದ್ದವು. ವಿಜಯನಗರ ಸಾಮ್ರಾಜ್ಯ ಅವನತಿ ಹೊಂದಿದ ನಂತರ ಬಿಜಾಪುರದ ಆದಿಲ್‌ಶಾಹಿಗಳು ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆದಿದ್ದರು. ೧೬೨೭-೧೬೫೬ ರ ಅವಧಿಯಲ್ಲಿ ಆಳಿದ ಮಹಮ್ಮದ ಆದಿಲ್‌ಶಾಹ ಅತ್ಯಂತ ಬಲಿಷ್ಠ ಹಾಗೂ ದಕ್ಷ ಶಾಹಿ ಸುಲ್ತಾನರುಗಳಲ್ಲಿ ಒಬ್ಬನಾಗಿದ್ದನು. ಈತನು ಮೊಗಲರ ವಿಸ್ತರಣೆಯನ್ನು ೧೬೩೬ ರವರೆಗೆ ಯಶಸ್ವಿಯಾಗಿ ತಡೆದ. ಆದರೂ ಅನಿವಾರ್ಯವಾಗಿ ಮೊಗಲರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಉತ್ತರದಲ್ಲಿ ತನಗಾದ ನಷ್ಟವನ್ನು ಭರಿಸಲು ದಕ್ಷಿಣದ ಕಡೆಗೆ ತಿರುಗಿ ಕರ್ನಾಟಕದ ಬಹು ಭಾಗದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದ. ಇವನ ದಂಡನಾಯಕರುಗಳಾದ ರಣದುಲ್ಲಾಖಾನ ಮತ್ತು ಷಹಾಜಿಬೋಸ್ಲೆ ಅಪಾರ ಐಶ್ವರ್ಯವನ್ನು ಮತ್ತು ಹೆಚ್ಚು ಪ್ರದೇಶಗಳನ್ನು ಗೆದ್ದುಕೊಟ್ಟರು. ಇವನ ಕಾಲದಲ್ಲಿ ಬಿಜಾಪುರವು ವೈಭವದ ಶಿಖರಕ್ಕೇರಿತು. ದಂಡನಾಯಕ ರಣದುಲ್ಲಾಖಾನನ ಕಣ್ಣು ದಕ್ಷಿಣದ ಕರ್ನಾಟಕದಲ್ಲಿ ಶ್ರೀಮಂತ ರಾಜ್ಯವಾಗಿ ಬೆಳೆಯುತ್ತಿದ್ದ ಮೈಸೂರ ಒಡೆಯರ್ ರಾಜ್ಯದ ಮೇಲೆ ಬಿದ್ದಿತು. ಈ ಸಂದರ್ಭದಲ್ಲೇ ಬಿಜಾಪುರದ ರಣದುಲ್ಲಾಖಾನನಿಗೂ ಮತ್ತು ಹಾಗಲವಾಡಿಯ ನಾಯಕರಿಗೂ ಅಹಿತಕರ ರಾಜಕೀಯ ಸಂಬಂಧ ಬೆಳೆಯುವ ಸನ್ನಿವೇಶ ಉಂಟಾಯಿತು.

ಆಗ ಇಮ್ಮಡಿ ಬೈರಪ್ಪ ನಾಯಕನು ಆಳ್ವಿಕೆಯನ್ನು ನಡೆಸುತ್ತಿದ್ದನು. ಬಿಜಾಪುರದ ಸೇನಾಧಿಪತಿ ರಣದುಲ್ಲಾಖಾನನು ತನ್ನ ಸೈನ್ಯದೊಡನೆ ಶ್ರೀರಂಗಪಟ್ಟಣವನ್ನು ಮುತ್ತಿದನು. ಮೈಸೂರಿನ ದಳವಾಯಿ ಕೊಮಾರಯ್ಯನವರು ತಮ್ಮ ಅತುಳ ಪರಾಕ್ರಮದಿಂದ ಅವನನ್ನು ಸೋಲಿಸಿ ಓಡಿಸಿದರು. ರಣದುಲ್ಲಾಖಾನನು ಕಳೆದುಳಿದ ಅಲ್ಪಸ್ವಲ್ಪ ಸೈನಿಕರೊಡನೆ ಆಕ್ರಮಣಕಾರನ ಹೆದ್ದಾರಿಯಲ್ಲೇ ಇದ್ದ ಚಿಕ್ಕನಾಯಕನಹಳ್ಳಿ ಸಂಸ್ಥಾನಕ್ಕೆ ಬಂದು, ಒಂದು ಪಲ್ಲಕ್ಕಿಯನ್ನು ಅದನ್ನು ಹೊರುವುದಕ್ಕೆ ಬೆಸ್ತರನ್ನು ಕಳುಹಿಸಿಕೊಡಬೇಕೆಂದು ಇಮ್ಮಡಿ ಬೈರಪ್ಪನಾಯಕನಿಗೆ ಹೇಳಿಕಳುಹಿಸಿದನು. ಆದರೆ ಬೈರಪ್ಪನಾಯಕನು ಇದಕ್ಕೆ ಒಪ್ಪಲಿಲ್ಲ. ಅವನು ಕೊಟ್ಟ ಉತ್ತರ ಹೀಗಿತ್ತು, " ಮೈಸೂರು ಸಂಸ್ಥಾನದ ದೊರೆಗಳಿಗೂ ನಮಗೂ ಮಿತ್ರತ್ವವಿದೆ. ಅವರ ಶತ್ರಗಳು ನಮ್ಮ ಶತ್ರಗಳು. ನಮ್ಮ ಶತ್ರುಗಳು ಅವರ ಶತ್ರಗಳು ಎಂಬ ಭಾವನೆಯಿದೆ. ನೀವು ನಮ್ಮ ಮಿತ್ರರಾದ ಮೈಸೂರು ರಾಜ್ಯದ ಮೇಲೆ ದಂಡೆತ್ತಿ ಬಂದಿರಾದ ಕಾರಣ ನೀವು ಅವರಿಗೆ ಹಗೆಗಳಾದಿರಿ. ಆದ್ದರಿಂದ ನಿಮಗೆ ನಾವು ಯಾವ ಸಹಾಯವನ್ನು ಮಾಡಲಿಕ್ಕೆ ಆಗಲಾರದು.[೧೮೦] ಈ ಉತ್ತರದಿಂದ ಸೇನಾಪತಿ ರಣದುಲ್ಲಾಖಾನನು ಕೋಪಗೊಂಡನು. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ

ಹಾಗಲವಾಡಿ ರಾಜಕೀಯ ಧೋರಣೆ ದೂರದ ಬಿಜಾಪುಕ್ಕಿಂತ ಹತ್ತಿರದ ಮೈಸೂರು ರಾಜ್ಯ ಮಿತ್ರನೆಂದು ಪರಿಗಣಿಸಿದ್ದು, ಹಾಗಲವಾಡಿ ನಾಯಕರ ಮುತ್ಸದ್ದಿತನವನ್ನು ಮತ್ತು ಸ್ನೇಹ ನಿಷ್ಠೆಯನ್ನು ತೋರಿಸುತ್ತದೆ. ಅಪಾಯದ ಪರಿಸ್ಥಿಯಲ್ಲೂ ಸ್ನೇಹವನ್ನು ಕೈಬಿಡದ ಇಮ್ಮಡಿ ಬೈರಪ್ಪ ನಾಯಕನ ಮೈಸೂರಿನ ಮಿತ್ರತ್ವ ರಾಜಕೀಯ ಸಂಬಂಧಗಳಲ್ಲಿ ಅಪರೂಪವೆಂದೇ ಹೇಳಬಹುದು. ಆದರೆ ಆಗಿನ ಸ್ಥಿತಿಯಲ್ಲಿ ರಣದುಲ್ಲಾಖಾನನು ಹಾಗಲವಾಡಿಯ ಮೇಲೆ ತನ್ನ ಕೋಪವನ್ನು ತೀರಿಸಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ತನ್ನ ಕೋಪವನ್ನು ತಾನೇ ಸಹಿಸಿಕೊಂಡು ಬಿಜಾಪುರಕ್ಕೆ ಹಿಂತಿರುಗಿದನು. ರಣದುಲ್ಲಾಖಾನನು ಬೈರಪ್ಪನಾಯಕನ ಮೇಲೆ ಛಲ ಕಟ್ಟಿಕೊಂಡು ಬಿಜಾಪುರದಿಂದ ಭಾರೀ ದಂಡಿನೊಡನೆ ಪುನಃ ಬಂದು ಹಾಗಲವಾಡಿ ಸಂಸ್ಥಾನದ ಮೇಲೆ ಯುದ್ಧಸಾರಿದನು. ಚಿಕ್ಕನಾಯಕನ ಬಳಿ ಬಹಳ ದಿವಸಗಳವರೆಗೆ ಯುದ್ಧ ಮುಂದುವರಿಯಿತು. ಹೀಗೆ ಒಂದು ಪಲ್ಲಕ್ಕಿ ಮತ್ತು ಅದನ್ನು ಹೊರಲು ಬೇಕಾದ ಜನರನ್ನು ರಣದುಲ್ಲಾಖಾನನಿಗೆ ಕಳುಹಿಸಿ ಕೊಡಲು ನಿರಾಕರಿಸಿದ ಸಣ್ಣ ಕಾರಣಕ್ಕಾಗಿ ಬೈರಪ್ಪನಾಯಕನು ಬಿಜಾಪುರದವರ ದ್ವೇಷ ಕಟ್ಟಿಕೊಂಡು ಯುದ್ಧದಲ್ಲಿ ಭಾಗವಹಿಸಬೇಕಾಗಿ ಬಂತು. ರಣದುಲ್ಲಾಖಾನನು ಈ ಸಂಸ್ಥಾನವನ್ನು ತಾನು ಎಂದಿಗೂ ಬಿಡುವುದಿಲ್ಲ. ಬೈರಪ್ಪನಾಯಕನು ತನ್ನ ಸೀಮೆಯನ್ನು ತಾನು ಉಳಿಸಿಕೊಳ್ಳಬೇಕಾದರೆ ಅದನ್ನು ಮೂರು ಭಾಗ ಮಾಡಿ ಚಿಕ್ಕನಾಗನಹಳ್ಳಿ ಸಮೇತ ಎರಡು ಭಾಗವನ್ನು ತನಗೆ ಬಿಟ್ಟು ಕೊಡುವಂತೆ ಹೇಳಿಕಳುಹಿಸಿದನು. ರಾಜಕೀಯ ಮುತ್ಸದ್ದಿಯಾದ ಬೈರಪ್ಪನಾಯಕನು ಕೈತಪ್ಪಿಹೋದ ಸೀಮೆಯನ್ನು ಮುಂದೆ ಗೆದ್ದುಕೊಳ್ಳಬಹುದೆಂಬ ಯೋಚನೆಯಿಂದ ಆಗಿನಮಟ್ಟಿಗೆ ಆ ಕರಾಗಿಗೆ ಒಪ್ಪಿ ರಾಜ್ಯದ ೨/೩ ಭಾವನ್ನು ರಣದುಲ್ಲಾಖಾನನಿಗೆ ಬಿಟ್ಟುಕೊಟ್ಟನು.[೧೮೧] ತನ್ನ ಸಂಸ್ಥಾನದ ಬಹುಪಾಲು ಭಾಗವನ್ನು ಕಳೆದುಕೊಂಡ ಬೈರಪ್ಪನಾಯಕನು ಕ್ರಿ.ಶ. ೧೬೩೯ ರಲ್ಲಿ ಸಮಸ್ತವನ್ನು ತೆಗೆದುಕೊಂಡು ಹಾಗಲವಾಡಿಗೆ ಬಂದು ಆಳ್ವಿಕೆ ಮಾಡಲಾರಂಭಿಸಿದನು.[೧೮೨] ಚಿಕ್ಕನಾಯಕನಹಳ್ಳಿಯು ಬಿಜಾಪುರದ ಅಧೀನಕೊಳ್ಳಪಟ್ಟಿತು.[೧೮೩] ಚಿಕ್ಕನಾಯ್ಕನ ಹಳ್ಳಿಯನ್ನು ಗೆದ್ದುಕೊಂಡ ರಣದುಲ್ಲಾಖಾನನು ತುರುಗೆರೆಯ ಹನುಮಪ್ಪ ನಾಯಕ, ಚಿಕ್ಕನಾಯ್ಕನಹಳ್ಳಿ ಬೈರಪ್ಪನಾಯಕನನ್ನು ತನ್ನ ಜೊತೆಯಲ್ಲಿ ಕರೆದುಕೊಂಡುದು[೧೮೪] ಅಲ್ಲದೆ ಅನೇಕ ಚಿಕ್ಕಪುಟ್ಟ ಸಂಸ್ಥಾನಿಕರನ್ನು ಜೊತೆಗೂಡಿಸಿ ಶ್ರೀರಂಗಪಟ್ಟಣ ಲಗ್ಗೆಯ ಸನ್ನಾಹದಲ್ಲಿ ತೊಡಗಿದನು.[೧೮೫] ಹೀಗೆ ಸೋತು ಶರಣಾಗತನಾಗಿದ್ದ ಹಾಗಲವಾಡಿಯ ಬೈರಪ್ಪನಾಯಕನು ಮನಸ್ಸಿಲ್ಲದ ಮನಸ್ಸಿನಿಂದ ರಣದುಲ್ಲಾಖಾನನಿಗೆ ಮೈಸೂರು ಒಡೆಯರ್‌ರವರ ವಿರುದ್ಧ ಸೈನಿಕ ಸಹಾಯವನ್ನು ಮಾಡಬೇಕಾಗಿ ಬಂತು. ಇದರಿಂದ ಅವನು ಮೈಸೂರು ದೊರೆಗಳ ಕೋಪಕ್ಕೆ ತುತ್ತಾಗಬೇಕಾಗಿ ಬಂದಿತು. ಆಗ ಶ್ರೀರಂಗಪಟ್ಟಣದಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರ್ ರಾಜ್ಯಭಾರವನ್ನು ಮಾಡುತ್ತಿದ್ದರು. ಇವರು ಕ್ರಿ.ಶ. ೧೬೪೨ ರಲ್ಲಿ ನಂಜರಾಜೈಯ್ಯನನ್ನು ಹಾಗಲವಾಡಿ ಸೀಮೆಯ ಮೇಲೆ ದಾಳಿ ಮಾಡಲು ಕಳುಹಿಸಿದರು. ಸೋತ ಬೈರಪರಪನಾಯಕನು ಒಡೆಯರ್ ಸೇನೆಯ ಜೊತೆಗೂಡಿ ತುರುವೇಕೆರೆ ಕೋಟೆಗೆ ಮುತ್ತಿಗೆ ಹಾಕಿ ಅವರಿಗೆ ಅದನ್ನು ಗೆದ್ದುಕೊಟ್ಟನು.[೧೮೬] ಒಟ್ಟಿನಲ್ಲಿ ಇವನ ಆಳ್ವಿಕೆಯ ಅವಧಿಯಲ್ಲಿ ಸಂಸ್ಥಾನ ಬಹು ಭಾಗವನ್ನು ಶತ್ರುಗಳಿಗೆ ಒಪ್ಪಿಸಿತು. ತಾನಿರುವವರೆಗೆ ಮೈಸೂರು ಅರಸರಿಗೆ ನಿಷ್ಠನಾಗಿ ನಡೆದುಕೊಳ್ಳುತ್ತಾ ಕ್ರಿ.ಶ.೧೬೫೪ರಲ್ಲಿ ಮರಣ ಹೊಂದಿದನು.

ಮಹಮ್ಮದ ಆದಿಲ್‌ಶಾಹ ಮತ್ತು ಪೋರ್ಚುಗೀಸರು :

ಮೊಗಲರ ವಿರುದ್ದ, ಆದಿಲ್‌ಶಾಹಗೆ ಪೋರ್ಚುಗೀಸರ ಸಹಾಯ :

೧೬೩೧ ರಲ್ಲಿ ಮೊಗಲರ ಸೈನ್ಯಾಧಿಕಾರಿಯಾಗಿದ್ದ ಅಸಫಖಾನನು ಬಿಜಾಪುರಕ್ಕೆ ಮುತ್ತಿಗೆ ಹಾಕಿದ್ದ ಸಂದರ್ಭದಲ್ಲಿ, ಗೋವಾದ ಪೋರ್ಚುಗೀಸರ ವೈಸಯಾಯನು ಆದಿಲ್‌ಶಾಹನಿಗೆ ಗುಟ್ಟಾಗಿ ಕೆಲವು ಶಸ್ತ್ರಾಸ್ತ್ರಗಳನ್ನು ಕೊಟ್ಟು ಸಹಾಯ ಮಾಡಿದನು. ಪೋರ್ಚುಗೀಸರ ವೈಸರಾಯನ ಹೆಸರು ಕೊಂಡೆ-ಡಿ-ಲಿನ್‌ಹೇರ್ಸ ಎಂದು ಅವನು ಬಹಳ ಆಸೆಬರುಕನಾಗಿದ್ದರಿಂದ, ಮೊಗಲರ ಆಸೆಗೆ ಮರುಳಾಗಿ ಮೊದಲು ಆದಿಲ್‌ಶಾಹನ ಕಡೆ ಇದ್ದವನು ನಂತರ ಮೊಗಲರ ಕಡೆಗೆ ಹೋದನು. ೧೬ ನವ್ಹಬಂರ ೧೬೩೨ ರಂದು ಪೋರ್ಚುಗೀಸನ ರಾಜನಿಗೆ ಹೀಗೆ ಪತ್ರ ಬರೆದ " ಮೊಗಲರು ಆದಿಲ್‌ಶಾಹನ ಕೊಂಕಣ ಭೂ ಪ್ರದೇಶವನ್ನು ನನಗೇ ಕೊಡುವುದಾಗಿ ಹೇಳಿರುವುದರಿಂದ, ನಾನು ಅನಿವಾರ್ಯವಾಗಿ ಅವರ ಕಡೆಗೆ ಹೋಗಬೇಕಾಯಿತು".[೧೮೭]

ಪೋರ್ಚುಗೀಸರು ತಮಗೆ ಅನುಕೂಲವಾಗುವಂತೆ ತಮ್ಮ ಧೋರಣೆಗಳನ್ನು ಬದಲಾಯಿಸುತ್ತಿದ್ದರು. ಬಿಜಾಪುರದವರೊಂದಿಗೆ, ಅವರು ಮಾಡಿಕೊಂಡಿದ್ದ ಕರಾರುಗಳಂತೆ ಅವರು ನಡೆಯಲಿಲ್ಲ. ತಾವೇ ಹೇಳಿದ ಮಾತುಗಳಿಂದಲೂ ದೂರ ಸರಿದರು. ಮೊಗಲರು ಬಿಜಾಪುರದ ಮೇಲೆ ದಂಡೆತ್ತಿ ಬಂದರೆ, ಅವರು ಆದಿಲ್‌ಶಾಹನ ರಾಜ್ಯವನ್ನು ಕಬಳಿಸದಂತೆ, ಆದಿಲ್‌ಶಾಹಗೆ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದರು.[೧೮೮] ಸ್ಪೇನ್‌ನಿನ ರಾಜನಿಗೂ ಈ ವಿಷಯವನ್ನು ತಿಳಿಸಿದ್ದನು, ಆದಿಲ್‌ಶಾಹನು ಮೊಗಲರ ಕೈಯಲ್ಲಿ ಸೋತು ತನ್ನ ರಾಜ್ಯವನ್ನು ಕಳೆದುಕೊಂಡರೆ, ಬಲಿಷ್ಟ ಮೊಗಲರು ಪೋರ್ಚುಗೀಸರ ಪ್ರದೇಶಗಳ ಮೇಲೂ ಕಣ್ಣು ಹಾಕಬಹುದು ಎಂದು ಹೇಳಿದ್ದನು.[೧೮೯]

ಸಮುದ್ರದಲ್ಲಿನ ಸಂಘರ್ಷಗಳು :

೧೬೩೬ ರ ಪ್ರಾರಂಭದಲ್ಲಿ ಬಿಜಾಪುರಕ್ಕೆ ಸೇರಿದ ಬಂದರಾದ ಧಾಬೋಲ್‌ನಿಂದ ಹೊರಟ ಒಂದು ಹಡಗಿನ ಮೇಲೆ ಪೋರ್ಚುಗೀಸರು ಆಕ್ರಮಣ ನಡೆಸಿ, ಅದರಲ್ಲಿನ ಮೂರು ಜನು'ನ್ನು ಕೊಂದರು. ಆ ಹಡುಗು ಪರ್ಷಿಯಾ ಮತ್ತು ಮಕ್ಕಾಗಳಿಗೆ ಹೊರಟಿತ್ತು. ಈ ಅನಾಹುತದ ಬಗ್ಗೆ ಪಶ್ಚಾತ್ತಾಪ ವ್ಯಕ್ತ ಪಡಿಸುವ ರೀತಿಯಲ್ಲಿ, ವೈಸರಾಯನು ಆದಿಲ್‌ಶಾಹಗೆ ಒಂದಿಷ್ಟು ಉಡುಗೊರೆಗಳನ್ನು ಒಬ್ಬ ರಾಯಭಾರಿಯ ಮೂಲಕ ಕೊಟ್ಟು ಕಳಿಸಿದ್ದನು. ಅವರ ಕಾರ್ಯಗಳಿಗೆ ಪ್ರತೀಕಾರಾರ್ಥವಾಗಿ, ಬಿಜಾಪುರದವರು ಮಸ್ಕಟನಿಂದ ರಾಜಪುರಕ್ಕೆ ಬರುತ್ತಿದ್ದ ಒಂದು ಪೋರ್ಚುಗೀಸರ ಹಡುಗಿನ ಮೇಲೆ ಆಕ್ರಮಣವನ್ನು ನಡೆಸಿದರು. ಅದರಲ್ಲಿದ ೬೦೦೦ ಡುಕೆಟಗಳಷ್ಟು ಬೆಲೆ ಬಾಳುವ ಪದಾರ್ಥಗಳನ್ನು ವಶಪಡಿಸಿಕೊಂಡು ಅದರಲ್ಲಿದ್ದ ಪೋರ್ಚುಗೀಸರನ್ನು ಬಂಧಿಸಿ ಸೆರೆಮನೆಯಲ್ಲಿಡಲಾಯಿತು. ಬಿಜಾಪುರದವರೊಂದಿಗಿನ ಕರಾರುಗಳನ್ನು ಅವರು ಉಲ್ಲಂಘಿಸಿದ್ದರಿಂದ, ಬಿಜಾಪುರದವರು ಹೀಗೆ ಮಾಡಬೇಕಾಯಿತು.

[illegible]

[illegible]

[illegible]

[illegible]

ಪೋರ್ಚುಗೀಸರೊಡನೆ ಮಹಮ್ಮದ ಆದಿಲ್‌ಶಾಹನ ಸ್ನೇಹ ಪೂರ್ಣ ವರ್ತನೆ :

ಬಾರ್‌ಡಜ್ ಮತ್ತು ಸಾಲ್ಸೆಟ ಪ್ರದೇಶಗಳಲ್ಲಿ ಮೊದಲಿನಿಂಲೂ ಸ್ವಲ್ಪ ವಿವಾದಗಳು ಇದ್ದವು. ಅವುಗಳನ್ನು ಬಗೆಹರಿಸಲು ಆದಿಲ್‌ಶಾಹನು ಮಲ್ಲಿಕ್ ಯಾಕೂತ ಎಂಬ ರಾಯಭಾರಿಯನ್ನು ೧೬೫೪ ರಲ್ಲಿ ಕಳಿಸಿದನು. ಮಲ್ಲಕ್ ಯಾಕುತನು, ಆದಿಲ್‌ಶಾಹನು ಪೋರ್ಚುಗೀಸರ ವೈಸರಾಯಗೆ ಬರೆದಿದ್ದ ಒಂದು ಫರ್ಮಾನ ತನ್ನ ಸಂಗಡ ಒಯ್ದಿದ್ದ. ಪೋರ್ಚುಗೀಸರು ಬಿಜಾಪುರದವರೊಂದಿಗೆ ಹಾರ್ದಿಕ ಸಂಬಂಧವನ್ನು ಹೊಂದಿದ್ದರು. ಅವರ ಕ್ರಿಶ್ಚಿಯನ್ ಪಾದ್ರಿಯು ಆದಿಲ್‌ಶಾಹಗೆ ಉತ್ತಮ ಕಾಣಿಕೆಗಳನ್ನು ಕೊಟ್ಟಿದ್ದ. ಕ್ಯಾಸ್ಟ್ರೋನು ಬಿಜಾಪುರದವರ ಜೊತೆಗೆ ಒಳ್ಳೇಯ ಭಾವನೆಯನ್ನು ಹೊಂದಿದ್ದಾನೆಂದು ತಿಳಿಸಿಲಾಯಿತು. ಜ್ಯೂಸೆಟ್ ಪಾದ್ರಿಯು, ಕ್ಯಾಸ್ಟ್ರೋನ ಒಂದು ಪತ್ರವನ್ನು ಆದಿಲ್‌ಶಾಹಗೆ ತಂದಿದ್ದ. ಯಾಕುತನು, ಪೋರ್ಚುಗೀಸರಿಗೆ ಅನುಕೂಲಮಾಡಿ ಕೊಡಲು ಆದಿಲ್‌ಶಾಹನನ್ನು ಪ್ರೇರೇಪಿಸಿದ್ದ ಮತ್ತು ಅವನು ಅದಕ್ಕೆ ಒಪ್ಪಿಯೂ ಇದ್ದ. ಪೋರ್ಚುಗೀಸರಿಗೆ ಅನುಕೂಲವಾಗುವಂತಹ ಎರಡು ಫರ್ಮಾನಗಳನ್ನು ಹೊರಡಿಸಲಾಯಿತು. ಮೊದಲನೆಯದು ಇಕ್ಕೇರಿಯ ಶಿವಪ್ಪನಾಕನಿಗೆ ಹೊನ್ನವಾರದ ಮೇಲಿನ ಮುತ್ತಿಗೆಯನ್ನು ಕೂಡಲೇ ತೆಗೆದು ತನ್ನ ಸೈನ್ಯವನ್ನು ಇಕ್ಕೇರಿಗೆ ತೆಗೆದುಕೊಂಡು ಹೋಗಬೇಕೆಂದು ಆಜ್ಞಾಪಿಸಿದ. ಆಗ ಎಲ್ಲ ಭಾಗಗಳ ಮೇಲೆ ಆದಿಲ್‌ಶಾಹನ ಸಾರ್ವಭೌಮತ್ವ ಇತ್ತು. ಆದರೆ ನಾಯಕನು ಆ ಫರ್ಮಾನಿಗೆ ಬೆಲೆ ಕೊಡದೇ, ತನ್ನ ಮುತ್ತಿಗೆ ಮತ್ತು ಆಕ್ರಮಣವನ್ನು ಮುಂದುವರಿಸಿದ್ದ, ಮಹಮ್ಮದ ಆದಿಲ್‌ಶಾಹನು ಇನ್ನೊಂದು ಫರ್ಮಾನು ಗೋವಾದ ಗೌರ್ನರನ ಮೇಲೆ ಹೊರಡಿಸಲಾದದ್ದು.[೧೯೦]

ಆದಿಲ್‌ಶಾಹನಿಂದ ಫರ್ಮಾನ ಬಂದ ನಂತರ ಕ್ಯಾಸ್ಟ್ರೋ ತನ್ನ ರಾಜ್ಯದ ಮುಖ್ಯಸ್ಥರನ್ನು ಕರೆದು ವಿಷಯವನ್ನು ತಿಳಿಸಿದನು. ಆ ಎರಡು ಫರ್ಮಾನಗಳನ್ನು ಕಳಿಸಿದ್ದಕ್ಕಾಗಿ ಆದಿಲ್‌ಶಾಹನಿಗೆ ತಮ್ಮ ಕೃತಜ್ಞತೆಯ ರೂಪವಾಗಿ ಆತನಿಗೆ ಒಳ್ಳೆಯ ಕಾಣಿಕೆಗಳನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು. ೧೬೫೪ ರಲ್ಲಿ ಅಮೂಲ್ಯವಾದ ಕಾಣಿಕೆಗಳು ಮತ್ತು ಕೃತಜ್ಞತಾ ಪತ್ರ ರಾಯಭಾರಿಯ ಮೂಲಕ ಕಳುಹಿಸಿಕೊಡಲಾಯಿತು.

ಯುದ್ಧ ಮತ್ತು ಶಾಂತಿ (೧೬೫೪-೫೫):

ಕ್ಯಾಸ್ಟ್ರೋನು ತನ್ನ ಅಧಿಕಾರಿಯಾದ ಮಾರ್ಟಿನನ್ನಿಗೆ ಕಟ್ಟು ನಿಟ್ಟಾಗಿ ಹೇಳಿಕಳುಹಿಸಿದ್ದೆಂದರೆ ಬಿಜಾಪುರ ಮತ್ತು ಪೋರ್ಚುಗೀಸರ ನಡುವೆ ಅದರಲ್ಲೂ ಗಡಿ ಪ್ರದೇಶಗಳಲ್ಲಿ (ಬಾರ್ಡೆಜ್ ಮತ್ತು ಸಾಲ್ಸೆಟ) ಘರ್ಷಣೆಯಾಗುವುದನ್ನು ತಪ್ಪಿಸಬೇಕೆಂದು ತಿಳಿಸಿದನು. ಆದರೆ ಮಾರ್ಟಿನನು ಬಿಜಾಪುರವನ್ನು ಮುಟ್ಟುವ ಮೊದಲೇ ಅಲ್ಲಿ ಯುದ್ಧವು ಪ್ರಾರಂಭವಾಗಿತ್ತು. ಆದಿಲ್‌ಶಾಹನು ಆಗಸ್ಟ ೧೬೫೪ ರಲ್ಲಿ ಯುದ್ಧವನ್ನು ಘೋಷಿಸಿ ಬಾರ್ಡೆಜ್ ಮತ್ತು ಗೋವಾದ ಮೇಲೆ ದೊಡ್ಡ ಸೈನ್ಯದೊಂದಿಗೆ ಆಕ್ರಮಣಕ್ಕೆ ಹೋದನು. ಆಗ ಬಾರ್ಡೆಜ್‌ನಲ್ಲಿದ್ದ ಪೋರ್ಚುಗೀಸರು ಶರಣಾಗತರಾದರು. ೧೬೫೪ ಅಕ್ಟೋಬರನಲ್ಲಿ ಆಕ್ರಣ ನಡೆಸಿ ಸಲ್ಸೆಟ್ ಸರಜೋರಾ ಮತ್ತು ಕ್ಯೂಟಲಿಗಳನ್ನು ವಶಪಡಿಸಿಕೊಂಡನು.[೧೯೧]

ಇದೇ ವೇಳೆಗೆ ಮಾರ್ಟಿನನು ಬಿಜಾಪುರಕ್ಕೆ ಬಂದನು. ಅವನು ಮಹಮ್ಮದ ಆದಿಲ್‌ಶಾಹನ ಮನವೊಲಿಸುವಲ್ಲಿ ಯಶಸ್ವಿಯಾಗಿ ಯುದ್ಧವನ್ನು ನಿಲ್ಲಿಸಿದನು. ಆದಿಲ್‌ಶಾಹನು ಪೋರ್ಚುಗೀಸರ ಪ್ರದೇಶದಿಂದ ತನ್ನ ಸೈನ್ಯವು ಹಿಂದೆ ಸರಿಯುವಂತೆ ಆಜ್ಞೆ ಮಾಡಿದನು. ಆಗ ಅವನು ಕೊಟ್ಟ ಉತ್ತರವು ಆ ಎರಡು ರಾಜ್ಯಗಳ ನಡುವೆ ಇದ್ದ ಸ್ನೇಹದ ನಿಕರತೆಯನ್ನು ತೋರಿಸುತ್ತದೆ. ಪೋರ್ಚುಗೀಸರೊಡನೆ, ತನಗೆ ಯಾವ ಯುದ್ಧವೂ ಬೇಕಿಲ್ಲವೆಂದು ಯುದ್ಧವನ್ನು ನಿಲ್ಲಿಸಿದನು.[೧೯೨]

೧೬೫೪ ರ ಡಿಸೆಂಬರನಲ್ಲಿ ಗೋವಾ ಮತ್ತು ಬಿಜಾಪುರಗಳಲ್ಲಿ ರಾಯಭಾರಿ ಕಛೇರಿಗಳನ್ನು ಸ್ಥಾಪಿಸಲಾಯಿತು. ಸ್ನೇಹವನ್ನು ಮತ್ತಷ್ಟು ಬಲಪಡಿಸಲು, ಕ್ಯಾಸ್ಟ್ರೋ ಮತ್ತು ಆದಿಲ್‌ಶಾಹನು ಮತ್ತೊಂದು ಹೊಸ ಒಪ್ಪಂದವನ್ನು ಮಾಡಿಕೊಂಡರು. ೧೬೫೫ ರ ಮಾರ್ಚ ೭ ರಂದು ಆ ಒಪ್ಪಂದಕ್ಕೆ ಎರಡೂ ರಾಯಭಾರಿಗಳು ಗವರ್ನರ ಮತ್ತು ಇತರ ಅಧಿಕಾರಿಗಳು ಸಹಿ ಹಾಕಿದರು. ಆ ಒಪ್ಪಂದಗಳನ್ನು ಕೌನ್ಸಿಲ್ ಆಫ್ ಸ್ಟೇಟ್ ಒಪ್ಪಿತು. ಆ ಒಪ್ಪಂದಗಳೆಂದರೆ ೧೬೩೩ ರ ಏಪ್ರಿಲ್ ಒಪ್ಪಂದ, ೧೫೭೬ ರ ಒಪ್ಪಂದ, ೧೫೮೨ ರ ಜನೆವರಿ ೨೯ ರ ಒಪ್ಪಂದ ಮತ್ತು ಮಲ್ಲಿಕ್ ಯಾಕುತ್ ಮತ್ತು ಮಾರ್ಟಿನ ರವರು ಕೌನ್ಸಿಲ್ ತೀರ್ಮಾನವನ್ನು ಒಪ್ಪಿಕೊಂಡರು.[೧೯೩]

ಈ ಕರಾರುಗಳ ನಂತರ, ರಾಯಭಾರಿಗಳು ಬಿಜಾಪುರಕ್ಕೆ ಹೋರಟರು ಮತ್ತು ಮಹಮ್ಮದ ಆದಿಲ್‌ಶಾಹನು ಮೇ ೧೬೫೫ ರಲ್ಲಿ ತನ್ನ ಒಪ್ಪಿಗೆಯನ್ನು ಸೂಚಿಸಿ, ಖಾಯಂ ಮಾಡಿದನು. ಈ ಸುದ್ದಿಯು ಗೋವಾವನ್ನು ಮುಟ್ಟಿದ ಕೂಡಲೇ, ಸಂತೋಷಗೊಂಡ ಕ್ಯಾಸ್ಟ್ರೋನು ಸೂಕ್ತ ಕಾಣಿಕೆಗಳನ್ನು ಕಳಿಸಿದನು. ಅದು ಒಂದು ಅತ್ಯುತ್ತಮವಾದ ವಜ್ರದ ಉಂಗುರವಾಗಿತ್ತು.[೧೯೪]

ಆ ಸಮಯದಲ್ಲಿ ಆದಿಲ್‌ಶಾಹನು ಒಂದು ಪತ್ರ ಬರೆದು, ನಿಮ್ಮ ವಿರುದ್ಧದವರನ್ನು ಬಗ್ಗು ಬಡಿಯ ಬೇಕಾದರೆ, ತಾನು ಸಹಾಯ ಮಾಡುವುದಾಗಿಯೂ ತಿಳಿಸಿದನು. ಈ ವಿಷಯದಲ್ಲಿ ಬಿಜಾಪುರದ ರಾಯಭಾರಿಯನ್ನು ಕೇಳಬೇಕೆಂದು ಅದರಲ್ಲಿ ತಿಳಿಸಲಾಗಿತ್ತು. ಹೊಸ ವೈಸರಾಯಗೆ ಇದು ಬಹಳ ಕೋಪವನ್ನು ತರಿಸಿತು. ಆದಿಲ್‌ಶಾಹನು ಪೋರ್ಚುಗೀಸರ ಪ್ರದೇಶವನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಯತ್ನಿಸುತ್ತಿದ್ದಾನೆ ಎಂದು ಭಾವಿಸಿದನು. ಆ ಪತ್ರದಲ್ಲಿ ಆದಿಲ್‌ಶಾಹನು ಪೋರ್ಚುಗೀಸರ ಪ್ರದೇಶವು ತನ್ನ ಅಧೀನ ಪ್ರದೇಶವೆಂದು ತಿಳಿದ್ದಾನೆ ಎಂಬಂತಿತ್ತು.

ಡೆ ಸರಜೆಡೆಸ್‌ನು ಆ ಪತ್ರವನ್ನು ಪೂರ್ತಿ ತಪ್ಪಾಗಿ ತಿಳಿದುಕೊಂಡು, ತಪ್ಪಾದ ಆತುರದ ನಿಧಾರಕ್ಕೆ ಬಂದನು. ಹಾಗೆ ನೋಡಿದರೆ, ಆದಿಲ್‌ಶಾಹನು ಆ ಪತ್ರವನ್ನು ಸ್ನೇಹ ಮತ್ತು ಪ್ರೀತಿಯ ಒಡಂಬಡಿಕೆಯ ಆಧಾರದ ಮೇಲೆ ಬರೆ'ದಿದ್ದನು. ಆದಿಲ್‌ಶಾಹನು ದೊಡ್ಡ ಸಾಮ್ರಾಜ್ಯದ ರಾಜನಾಗಿದ್ದರಿಂದ ಆ ಪತ್ರದಲ್ಲಿ ಸ್ವಲ್ಪ ಅಧಿಕಾರಯುತ ರೀತಿ ಇದ್ದಿರಬಹುದು ಅಷ್ಟೆ. ಇನ್ನೂ ಒಂದು ಮುಖ್ಯ ಅಂಶ ಎಂದರೆ, ವೈಸರಾಯು ಸಾಮ್ರಾಟನಿಗೆ ಸಮ ಅಲ್ಲ ಎಷ್ಟೇ ಆದರೂ, ವೈಸರಾಯ ಒಂದು ದೇಶದ ಮುಖಸ್ಥನಲ್ಲ.

ಡೆ ಸರಜೆಡೆಸ್‌ನು ಮಲ್ಲಿಕ್ ಯಾಕುತನ ಜೊತೆ ಅಷ್ಟು ಒಳ್ಳೆಯ ಸಂಬಂಧಗಳನ್ನು ಹೊಂದಿರಲಿಲ್ಲ. ಅವನನ್ನು ಕಳಿಸುವುದುಬೇಕಾಗಿತ್ತು. ಹೀಗೆ ಬಿಜಾಪುರ ಮತ್ತು ಪೋರ್ಚುಗೀಸರ ನಡುವೆ ಅಲ್ಪ ಸ್ವಲ್ಪ ಸಂಘರ್ಷ ಮತ್ತು ಸಂಧಾನಗಳು ನಡೆಯುತ್ತಲೇ ಇದ್ದವು.

ಬಿಜಾಪುರ ಮತ್ತು ಪೋರ್ಚುಗೀಸರ ನಡುವೆ ಇದ್ದ ಮುಖ್ಯ ಸಂಬಂಧಗಳು ವಾಣಿಜ್ಯಕ್ಕೆ ಸಂಬಂಧಿಸಿದ ವಿಷಯಗಳಾಗಿದ್ದವು. ಪೋರ್ಚುಗೀಸರು ನೌಕಾಪಡೆ, ನೌಕಾಯುದ್ಧ ಮುಂತಾದವುಗಳಲ್ಲಿ ಬಿಜಾಪುರದವರಿಗಿಂತಾ ಬಲಿಷ್ಟರಾಗಿದ್ದರು. ಇದರಿಂದಾಗಿ ಬಿಜಾಪುರದವರು ತಮ್ಮ ಭೂ ಪ್ರದೇಶ ಸ್ವಲ್ಪ ಹೋದರು ಅಡ್ಡಿಯಿಲ್ಲ ಅವರೊಂದಿಗೆ ಜಗಳ ಕಟ್ಟಿಕೊಳ್ಳಲು ತಯಾರಾಗಿರಲಿಲ್ಲ. ಏಕೆಂದರೆ ಅವರಿಂದ ಬಿಜಾಪುರದವರು ಉತ್ತಮ ಕುದರೆಗಳನ್ನು ತರಿಸಿಕೊಳ್ಳುತ್ತಿದ್ದರು. ಈ ಕಾರಣಕ್ಕಾಗಿಯೇ ಅವರೊಂದಿಗೆ ಮೃದು ಧೋರಣೆಯನ್ನು ಹೊಂದಿದ್ದರು.

ಮಹಮ್ಮದ ಆದಿಲ್‌ಶಾಹ ಮತ್ತು ಬ್ರಿಟಿಷರು :

೧೬೩೫ ರ ವೇಳೆಗೆ ದಾಬೋಲನಲ್ಲಿ ಬ್ರಿಟಿಷರ ವ್ಯಾಪಾರ ಸಾಕಷ್ಟು ಹೆಚ್ಚಾಗಿತ್ತು. ಇದರಿಂದಾಗಿ ದಾಬೋಲನಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸುವ ಅವಶ್ಯಕತೆಯುಂಟಾಯಿತು. ಆದ್ದರಿಂದ ಇಂಗ್ಲೀಷ ಕಂಪನಿಯು, ಆದಿಲ್‌ಶಾಹನಲ್ಲಿ ತಾವು ಒಂದು ಫ್ಯಾಕ್ಟರಿಯನ್ನು ಸ್ಥಾಪಿಸುವ ಬಗ್ಗೆ ಅನುಮತಿಯನ್ನು ಕೇಳಿತು. ಅನುಮತಿ ಕೇಳುವ ಸಂದರ್ಭದಲ್ಲಿ ಅಲ್ಲಿಯ ಗೌರ್ನರಗೆ ಮತ್ತು ಆದಿಲ್‌ಶಾಹನಿಗೂ ಸೂಕ್ತ ಕಾಣಿಕೆಗಳನ್ನು ತೆಗೆದುಕೊಂಡು ಹೋಗಿದ್ದರು. ಅವುಗಳನ್ನು ಸುಲ್ತಾನನಿಗೆ ತಲುಪಿಸಿ ಫ್ಯಾಕ್ಟರಿಗೆ ಅನುಮತಿಯನ್ನು ಕೊಡಿಸಬೇಕೆಂದು ಕೇಳಿದರು. ೧೬೩೬ ರಲ್ಲಿ ಇದಕ್ಕೆ ಸಂಬಂಧಿಸಿದ ಫರ್ಮಾನನ್ನು ಆದಿಲ್‌ಶಾಹನು ಕೊಟ್ಟನು. ಅದು ವಿಲಿಯಮ್ ಪಿಟ್‌ಗೆ ಸಂಪೂರ್ಣ ತೃಪ್ತಿಯನ್ನು ತರಲಿಲ್ಲ. ಆ ಬಗ್ಗೆ ಅವನು ತನ್ನ ಅತೃಪ್ತಿಯನ್ನು ಹೇಳಿಕೊಂಡನು.[೧೯೫]

೧೬೩೭ ರ ಜನೆವರಿ ೨೭ ರಂದು ಕ್ಯಾಪ್ಟನ್ ವೆಡೆಲ್ಸನ ನೌಕಾ ಪಡೆಯು ಬಿಜಾಪುರಕ್ಕೆ ಸೇರಿದ ಭಟ್ಕಳದಲ್ಲಿ ಬಂದಿಳಿದವು. ಸೀಸ ಮತ್ತು ಮೆಣಸುಗಳಿಗೆ ಸಂಬಂಧಿಸಿದ ಸೂಕ್ತ ವಿನಿಮಯದ ನಿಯಮಗಳನ್ನು ಮಾಡಿಕೊಂಡರು. ಅವರು ಆದಿಲ್‌ಶಾಹಗೆ ಕೆಲವು ಕಾಣಿಕೆಗಳನ್ನು ಮತ್ತು ಒಂದು ಪತ್ರವನ್ನು ಕೊಟ್ಟರು. ಆದಿಲ್‌ಶಾಹನು ಅವರಿಗೆ ಸಾಧ್ಯವಾದಷ್ಟು ರಿಯಾಯಿತಿಗಳನ್ನು ಕೊಡುವುದಾಗಿ ಭರವಸೆ ಕೊಟ್ಟನು. ಇವುಗಳಲ್ಲದೇ ಒಂದು ಕಾರ್ಖಾನೆಯನ್ನು ಹಾಕಲು ಮತ್ತು ಒಂದು ಸಣ್ಣ ವಸತಿ ಸಮುಚ್ಚಯವನ್ನು ಮಾಡಿಕೊಳ್ಳಲು ಅನುಮತಿಯನ್ನು ಕೇಳಿದರು.[೧೯೬]

೧೬೩೭ ರ ಫೆಬ್ರವರಿಯಲ್ಲಿ ರಾಜಪುರದಲ್ಲಿದ್ದ ಬಿಜಾಪುರದ ಗೌರ್ನರನು ಇಂಗ್ಲೀಷರ ಜೊತೆ ವ್ಯಾಪಾರಕ್ಕೆ ಸಂಬಂಧಿಸಿದ ಒಪ್ಪಂದಗಳನ್ನು ಮಾಡಿಕೊಳ್ಳಲು ತಯಾರಾದನು. ೩೦೦೦ ಕ್ಯಾಂಡಿಗಳಷ್ಟು (ಮಣಗಳು) ಮೆಣಸನ್ನು ಪ್ರತಿ ವರ್ಷವೂ ಕೊಡುವುದಾಗಿಯೂ, ಮತ್ತು ಅದಕ್ಕೆ ಪ್ರತಿಯಾಗಿ ಇಂಗ್ಲೀಷರ

ಕೆಲವು ವಸ್ತುಗಳನ್ನು ತೆಗೆದುಕೊಳ್ಳುವುದಾಗಿಯೂ ಹೇಳಿದನು. ಇಂಗ್ಲೀಷರು ದಾಭೋಲ್ ಮತ್ತು ರಾಜಪುರಗಳನ್ನು ತಮ್ಮ ಮುಖ್ಯ ವ್ಯಾಪಾರಿ ಕೇಂದ್ರಗಳನ್ನಾಗಿ ಮಾಡಿಕೊಂಡಿದ್ದರೂ, ಸಮುದ್ರ ತೀರದಿಂದ ಒಳ ನಾಡುಗಳಲ್ಲಿ ಪ್ರವೇಶಿಸಿ, ಅಲ್ಲೆಲ್ಲಾ ತಮ್ಮ ವ್ಯಾಪಾರಗಳನ್ನು ಮಾಡಲು ಪ್ರಾರಂಭಿಸಿದರು.[೧೯೭]

ಪೋರ್ಚುಗೀಸರ ವಿರುದ್ಧ ಬಿಜಾಪುರ ಮತ್ತು ಬ್ರಿಟಿಷರ ಒಡಂಬಡಿಕೆಗಳು :

೧೬೩೮ ರಲ್ಲಿ ಇಂಗ್ಲೀಷರು ಮತ್ತು ಬಿಜಾಪುರದವರೊಡನೆ ಸೇರಿ ಪೋರ್ಚುಗೀಸರ ವಿರುದ್ದ ಸೈನಿಕ ಕಾರ್ಯಾಚಾರಣೆಯನ್ನು ಮಾಡಲು ಉದ್ಯುಕ್ತರಾದರು. ಅಕ್ಟೋಬರನಲ್ಲಿ ವಿಲಿಯಮ್ ಜಕೋಬ್‌ಸೂನ್ ಎಂಬಾತನು ಹನ್ನೊಂದು ಹಡುಗಗಳನ್ನು ಗೋವಾ ರೋಡನಲ್ಲಿಟ್ಟನು. ಅದರ ಉದ್ದೇಶ ಗೋವಾಕ್ಕೆ ಪೋರ್ಚುಗೀಸರ ಹಡಗುಗಳು ಬರುವದನ್ನು ತಡೆಯುವುದು, ಮತ್ತು ಸಾಧ್ಯವಾದರೆ, ಆದಿಲ್‌ಶಾಹನ ಸೈನ್ಯ ಸಹಾಯವನ್ನು ಪಡೆದುಕೊಂಡು ಗೋವಾದ ಮೇಲೆ ಆಕ್ರಮಣ ಮಾಡುವುದು. ಇದಕ್ಕೆ ಮುಂಚೆ ಅವರುಗಳ ನಡುವೆ ಕೆಲವು ವ್ಯವಹಾರಗಳು ಆಗಿರಬೇಕಾಗಿದ್ದರ ಅವಶ್ಯತೆಗಳು ಇದ್ದವು.

ಇಂಗ್ಲೀಷರ ನೌಕೆಗಳು ಆದಿಲ್‌ಶಾಹನ ಸೈನ್ಯದೊಂದಿಗೆ ಪೋರ್ಚುಗೀಸರ ಮೇಲೆ ಆಕ್ರಮಣ ಮಾಡಲು ಸಿದ್ಧರಾಗಿದ್ದರು, ಆದಿಲ್‌ಶಾಹನ ಸಂಪೂರ್ಣ ಸೈನಿಕ ಸಹಕಾರದ ಬಗ್ಗೆ ಅವರಿಗೆ ಅನುಮಾನಗಳು ಇದ್ದವು. ಇದಕ್ಕೆ ಮುಖ್ಯ ಕಾರಣ ಎಂದರೆ, ಮೊಘಲರ ಆಕ್ರಮಣದ ಭೀತಿಯಿಂದ ಬಿಜಾಪುರದ ಅರಸನು ಬಿಜಾಪುರದಲ್ಲೇ ಇರಬೇಕಾಗಿದ್ದಂಥ ಪ್ರಸಂಗ ಇತ್ತು.[೧೯೮]

ಬಿಜಾಪುರದ ಬಂದರುಗಳಲ್ಲಿ ಬ್ರಿಟಿಷರ ಕಾರ್ಖಾನೆಗಳು :

೧೬೩೯ ರಲ್ಲಿ ಇಂಗ್ಲೀಷರು ಮಹಮ್ಮದ ಆದಿಲ್‌ಶಾಹನಿಗೆ ಬೆಲೆ ಬಾಳುವ ಕೆಲವು ವಸ್ತುಗಳನ್ನು ಕಾಣಿಕೆಯಾಗಿ ಕೊಟ್ಟರು. ಅವುಗಳ ಮೌಲ್ಯ ಸುಮಾರು ೨೪೦೦ ಪಗೋಡಾಗಳು. ಅದಕ್ಕೆ ಪ್ರತಿಯಾಗಿ ಇಂಗ್ಲೀಷರು ಬಿಜಾಪುರದ ರಾಜ್ಯದಲ್ಲಿ ವ್ಯಾಪಾರವನ್ನು ನಿರಾತಂಕವಾಗಿ ಮಾಡಲು ಅನುಮತಿಯನ್ನು ಕೇಳಿದರು.[೧೯೯] ಇಂಗ್ಲೀಷರಿಗೆ ಕಾರವಾರ ಮತ್ತು ರಾಜಪುರದಲ್ಲಿ ವ್ಯಾಪಾರ ಮಾಡಲು ಅನುಮತಿಯನ್ನು ಕೊಡಲಾಯಿತು.

ಇಂಗ್ಲೀಷರು ಕಾರವಾರದಲ್ಲಿ ಒಂದು ಕಟ್ಟಡವನ್ನು ಕಟ್ಟಿದರು. ಅದನ್ನು ಕಾರ್ಖಾನೆಯನ್ನಾಗಿ ಮಾಡಬೇಕು ಎಂದುಕೊಂಡಿದ್ದರು, ಆದರೆ ನಾನಾ ಕಾರಣಗಳಿಂದಾಗಿ ಅವರಿಗೆ ವ್ಯಾಪಾರವನ್ನು ಮಾಡಲಾಗಲಿಲ್ಲ. ನಂತರ ಮುಂದೆ ಅವರು ರಾಜಪುರ ಮತ್ತು ರಾಯಬಾಗ್‌ಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಲು ಉದ್ದೇಶಿಸಿದರು.[೨೦೦]

೧೬೪೮ ರ ಅಕ್ಟೋಬರನಲ್ಲಿ ರಾಯಪುರದ ಗೌರ್ನರ ಆಗಿದ್ದ ಮಹಮ್ಮದ ಕಾಶಿಂನು ಇಂಗ್ಲೀಷ ಕಂಪನಿಯ ಉಗ್ರಾಣದ ಬಾಗಿಲುಗಳನ್ನು ಮುರಿದು ಅದರಲ್ಲಿನ ಬಟ್ಟೆಗಳನ್ನು ತೆಗೆದುಕೊಂಡು ಹೋದನು.

ಇದಕ್ಕೆ ಅವನು ಕೊಟ್ಟ ಕಾರಣ ಇದು. ಅವುಗಳು ಕೋರ್ಟಿನ್ ಎಂಬ ಒಬ್ಬ ಇಂಗ್ಲೆಂಡಿನ ಪ್ರಜೆಗೆ ಸೇರಿದ್ದು ಅವನು ಬಿಜಾಪುರದಲ್ಲಿ ವ್ಯಾಪಾರ ಮತ್ತು ವಹಿವಾಟಗಳನ್ನು ನಡೆಸುತ್ತಿದ್ದನು. ಅವನು ಸರ್ಕಾರಕ್ಕೆ ಸುಂಕ ಕೊಡಬೇಕಾಗಿತ್ತು ಅದರ ಬಾಬತ್ತಿಗೆ ಆ ವಸ್ತುಗಳನ್ನು ಜಪ್ತುಮಾಡಲಾಗಿದೆ.[೨೦೧] ಗೌರ್ನರನು ಗೌಟನ್, ಆಕ್ಸಿಡಿಯಾನ್ ಮತ್ತು ಕ್ಯಾಪ್ಟನ್ ಬ್ಲ್ಯಾಕ್‌ಮನ್ ಅವರುಗಳನ್ನು ರಾಜಾಪುರಕ್ಕೆ ಬಂದ ಕೂಡಲೇ ಬಂಧಿಸಿದನು. ಅವರು ಆ ವಿಷಯವನ್ನು ಇತ್ಯರ್ಥ ಮಾಡಿ ಅವರುಗಳನ್ನು ಬಿಡಿಸಲು ಪ್ರಯತ್ನಿಸಿದರು ಆದರೆ ಅವರು ಸಫಲರಾಗಲಿಲ್ಲ.[೨೦೨] ನಂತರ ಬ್ಲ್ಯಾಕ್‌ಮನ್ನನ್ನು ಬಿಜಾಪುರದ ಇನ್ನೊಂದು ಬಂದರಾದ ಕರಪಟನ್‌ಗೆ ಹೋದನು. ಅಲ್ಲಿ ಅವನನ್ನು ಹಾರ್ದಿಕವಾಗಿ ಸ್ವಾಗತಿಸಲಾಯಿತು. ಖರೇ ಪಟ್ಟಣದ ಗೌರ್ನರನು ಆ ಬಂದರಿನಲ್ಲಿ ವ್ಯಾಪಾರ ಮಾಡಲು ಅಧಿಕಾರ ಕೊಟ್ಟನು.[೨೦೩]

ಖರೇಪಟನಂದಲ್ಲಿ ಬ್ಲಾಕ್‌ಮನ್ನನ್ನು ಇಂಗ್ಲೀಷರು ಅವರ ಮೇಲೆ ಸೇಡು ತೀರಿಸಿಕೊಳ್ಳುವುದಾಗಿ ಹೇಳಿದನು. ಆಗ ಗೌರ್ನರನು ಇಂಗ್ಲೀಷರ ಸಾಮಾನುಗಳನ್ನು ಅವರಿಗೆ ಕೊಡಿಸಿದನು. ಅವು ಕೋರ್ಟಿನ್ನನ ಸಾಮಾನುಗಳೆಂದು ತಾವು ಸುಳ್ಳು ಹೇಳಿದ್ದಾಗಿ ವರ್ತಕರು ಒಪ್ಪಿಕೊಂಡರು. ಹಾಗೆ ಸುಳ್ಳು ಹೇಳಲು ಅವರನ್ನು ಬೆದರಿಸಲಾಯಿತೆಂದಯ ಹೇಳಿದರು.[೨೦೪] ಇಂಗ್ಲೀಷನವರು ಪ್ರತೀಕಾರ ಮಾಡುವುದಾಗಿ ಬರೀ ಹೆದರಿಸಿದರೇ ವಿನಹ, ನಿಜವಾಗಿಯೂ ಯಾವ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಏಕೆಂದರೆ ಹಾಗೆ ಮಾಡಿದರೆ ಬಿಜಾಪುರದವರೂ ಪ್ರತೀಕಾರ ತೆಗೆದುಕೊಂಡು, ತಮ್ಮ ಹಿತ ಸಂಬಂಧಗಳಿಗೆ ಧಕ್ಕೆಯನ್ನುಂಟು ಮಾಡಬಹುದು ಎಂದು ಹೆದರಿದರು.

ಕಂಪನಿಯ ಏಜೆಂಟನಾಗಿದ್ದ ಬೇಣಿದಾಸ್ ಎಂಬುವನನ್ನು ಬಿಜಾಪುರಕ್ಕೆ ಕಳಿಸಿ, ಇಂಗ್ಲೀಷರ ಹಿಡಿದಿಟ್ಟುಕೊಂಡಿದ್ದ ಬಟ್ಟೆಗಳನ್ನು ಅವನ ಮೂಲಕ ಹೇಳಿಸಿದರು. ಬಿಜಾಪುರಕ್ಕೆ ಬಂದ ನಂತರ ಬೇಣಿದಾಸನು, ಆದಿಲ್‌ಶಾಹನ ತಾಯಿಯನ್ನು ಭೆಟ್ಟಿಯಾಗಿ, ಆ ಸಂಬಂಧದಲ್ಲಿ ತಮಗೆ ಸಹಾಯ ಮಾಡಬೇಕೆಂದು ಕೇಳಿಕೊಂಡನು.[೨೦೫]

ಸೆಪ್ಟೆಂಬರ ೧೬೪೯ ರ ವೇಳೆಗೆ ಇಂಗ್ಲೀಷರ ಮತ್ತು ಬಿಜಾಪುರದವರ ನಡುವೆ ಇದ್ದ ವೈಮನಸ್ಸು ಮತ್ತು ವಿರೋಧಗಳು ಕರಗಿದವು. ರಾಜಪುರದ ಹೊಸ ಗೌರ್ನರನು ಆ ಬಂದರಿನಿಂದ ತಮ್ಮ ವ್ಯಾಪಾರವನ್ನು ಮುಂದುವರೆಸಿಕೊಂಡು ಹೋಗಲು ಇಂಗ್ಲೀಷರಿಗೆ ಹೇಳಿದನು. ಆದಿಲ್‌ಶಾಹನು ಆ ಬಟ್ಟೆಗಳ ಅರ್ಧ ಹಣವನ್ನು ನಗದು ರೂಪದಲ್ಲಿಯೂ ಇನ್ನರ್ಧವನ್ನು ಸುಂಕದಲ್ಲಿ ರಿಯಾಯಿತಿ ಕೊಡುವ ಮೂಲಕವೂ ಅವರಿಗೆ ವಾಪಸ್ಸುಕೊಟ್ಟು ಮುಟ್ಟಿಸುವುದಾಗಿ ಹೇಳಿದನು. ಇಂಗ್ಲೀಷರು ಯಾವ ತೊಂದರೆಯು ಇಲ್ಲದಂತೆ ವ್ಯಾಪಾರ ಮಾಡಿಕೊಂಡು ಹೋಗಲು ಅವರಿಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಡಬೇಕೆಂದು ಆದಿಲ್‌ಶಾನು ಸಂಬಂಧಿಸಿದ ಗೌರ್ನರಗೆ ಆಜ್ಞಾಪಿಸಿದನು.

ಈ ಎಲ್ಲ ಸೈನಿಕ ಸಾಧನೆಗಳಿಂದ ಮತ್ತು ವಿದೇಶಿ ಸಂಬಂಧಗಳಿಂದ ಆದಿಲ್‌ಶಾಹಿ ಕಾಲದಲ್ಲಿ ಹಿಂದೆಂದು ಕಾಣದಂತಹ ಸಾಮ್ರಾಜ್ಯ ವಿಸ್ತಾರ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಾಯಿತು. ಈ ವೇಳೆಗೆ ಬಿಜಾಪುರ ಸಾಮ್ರಾಜ್ಯದ ವಿಸ್ತಾರ ಅರಬ್ಬೀ ಸಮುದ್ರದಿಂದ ಹಿಡಿದು ಬಂಗಾಳದ ಕೊಲ್ಲಿಯ ವರೆಗೆ ವಿಶಾಲವಾದ ಪ್ರದೇಶಗಳನ್ನು ಹೊಂದಿತ್ತು.[೨೦೬] ಶಹಜಾಹಾನನು ೧೬೪೮ ರಲ್ಲಿ ಮಹಮ್ಮದ ಆದಿಲ್‌ಶಾಹನನ್ನು "ಶಾಹ" ಎಂಬ ಬಿರುದನ್ನು ನೀಡಿ ಗೌರವಿಸಿದನು. ಬಿಜಾಪುರದ ಸುಲ್ತಾನರಲ್ಲಿ ಇತಂಹ ಬಿರುದನ್ನು ಪಡೆದಂತಹ ಮೊದಲನೆಯ ಸುಲ್ತಾನನಾಗಿದ್ದಾನೆ.[೨೦೭]

ಸುಲ್ತಾನ ಮಹಮ್ಮದ ಆದಿಲ್‌ಶಾಹನ ಕೊನೆಯ ದಿನಗಳು:

ಮಹಮ್ಮದ ಆದಿಲ್‌ಶಾಹನು ೧೬೫೬ ರಲ್ಲಿ ಪಾರ್ಶ್ವವಾಯುವಿಗೆ ಒಳಗಾಗಿ ಅನಾರೋಗ್ಯ ಪೀಡಿತನಾದನು.[೨೦೮] ಈ ಸಂದರ್ಭದಲ್ಲಿ ಹಜರತ ಶಾಹ ನಯೀಮುಲ್ಲಾ ಎಂಬುವರು ಬಿಜಾಪುರದ ಕೊನೆಯ ಸುಲ್ತಾನನಾದ ಸಿಕಂದರ ಆದಿಲ್‌ಶಾಹನ ಗುರುವಾಗಿದ್ದರು. ಇವರು " ಗಂಜುಲ್ ಅಸ್ರಾರ್ " ಎಂಬ ಗ್ರಂಥವನ್ನು ಬರೆದರು. ಅದರಲ್ಲಿ ಹೀಗೆ ಹೇಳಿದೆ, ಹಜರತ ಶಾಹ ಹಾಷಿಮ ಹುಸೇನಿ ಆಲವೀ ಅವರು ಜುಮ್ಮಾ ಮಸೀದೆಯಲ್ಲಿ ಉಪದೇಶ ಮಾಡುತ್ತಿದ್ದರು. ಆ ಸಮಯದಲ್ಲಿ ಸುಲ್ತಾನನ ಸೇವಕ ಅಲ್ಲಿಗೆ ಬಂದು ಹೀಗೆ ವಿನಂತಿ ಮಾಡಿಕೊಂಡ ' ಸುಲ್ತಾನ ಮಹಮ್ಮದ ಆದಿಲ್‌ಶಾಹರಿಗೆ ದೊಡ್ಡ ರೋಗವಾಗಿದೆ. ವೈದ್ಯಶಾಸ್ತ್ರವನ್ನು ಬಲ್ಲ ವೈದ್ಯರು ರೋಗ ಪರೀಕ್ಷೆ ಮಾಡಿ ಗುಣ ಮಾಡುವಲ್ಲಿ ದಣಿದು ಹೋಗಿದ್ದಾರೆ. ವೈದ್ಯರ ಉಪಾಯ ನಡೆಯದಂತಾಗಿದೆ. ಆದ್ದರಿಂದ ಬಾದಶಹರು ನಿಮ್ಮ ಹತ್ತಿರ ಕಳಿಸಿದ್ದಾರೆ. ತಾವು ಪೂರ್ತಿ ಮನಸ್ಸಿನಿಂದ ಉಪಾಯ ಮಾಡಿದರೆ, ಅವರ ರೋಗ ಪರಿಹಾರವಾದೀತೆಂದು ತಮ್ಮಲ್ಲಿ ಬೇಡಿಕೊಂಡಿದ್ದಾರೆ. ಆಗ ಹಜರತ ಶಾಹ ಹಾಷಿಮ ಅವರು ಸೇವಕನನ್ನು ಕೆರದು ರುಮಾಲ ತರಲು ಹೇಳಿದರು, ಹಜರತರವರು ಮಂತ್ರವನ್ನು ಪಠಿಸಿ ಆ ರುಮಾಲ ಮೇಲೆ ಮಂತ್ರವನ್ನು ಹಾಕಿ ಬಾದಶಹನ ಸೇವಕನಿಗೆ ಕೊಟ್ಟರು. ಬಾದಶಹರಿಗೆ ಎಲ್ಲಿ ಬೇನೆಯಾಗಿದೆಯೋ ಅಲ್ಲಿ ಸುತ್ತಿ ಕಟ್ಟಿರಿ ಗುಣವಾಗುತ್ತದೆ ಎಂದು ಹೇಳಿದರು. ಆದರೆ ಈ ಉಪಾಯದಿಂದ ಆರೋಗ್ಯ ಸುಧಾರಿಸಲಿಲ್ಲ. ಸುಲ್ತಾನನು ಮರುದಿನ ಮತ್ತೆ ಬಹಳ ಬೇಡಿಕೊಂಡು ಹೇಳಿ ಕಳಿಸಿದ 'ತಮ್ಮ ಹೊರತು ನನಗೆ ಗುಣವಾಗುವ ಬೇರೆ ಉಪಾಯವನ್ನು ಕಾಣಲಾರೆ. ತಾವಲ್ಲದೆ ಬೇರೆ ಯಾರೂ ಈ ಮಾರಣಾಂತಿಕ ಬೇನೆಯಿಂದ ಮುಕ್ತ ಮಾಡುವವರನ್ನು ಕಂಡಿಲ್ಲ. ಆದ್ದರಿಂದ ಕೃಪೆ ಮಾಡಿ ಪ್ರಯತ್ನಿಸಬೇಕು. ಹೇಗೆ ಮೊದಲು ನನ್ನ ತಂದೆಯ ಮೇಲೆ ಅನುಗ್ರಹ ಮಾಡುತ್ತಿದ್ದಿರೋ ಹಾಗೆ ನನ್ನ ಮೇಲೂ ಕೃಪೆ ಮಾಡಿದರೆ, ಈ ರೋಗದಿಂದ ನಾನು ಉಳಿಯಬಹುದು ಇಲ್ಲವಾದರೆ ನಾನು ಬದುಕಲಾರೆ' ಎಂದು ಹೇಳಿಸಿದನು. ಹಿಂದೆ ಇಬ್ರಾಹಿಮ ಆದಿಲ್‌ಶಾಹನು ಮಾಡಿದ ಉಪಕಾರವನ್ನು ತೀರಿಸುವ ಸಮಯ ಬಂದಿದೆ. ಆದರೆ ಈ ವೇಳೆಯಲ್ಲಿ ಆ ಉಪಕಾರವನ್ನು ತೀರಿಸಲು ಜೀವಕ್ಕೆ ಜೀವ ಕೊಡದ ಹೊರತು ಕೆಲಸ ಆಗುವುದಿಲ್ಲ. ಆದ್ದರಿಂದ ಈ ಸುಲ್ತಾನನ ಆಯುಷ್ಯ ಪೂರ್ತಿಯಾಗಿದೆ ಆತನ ಹತ್ತಿರ ಮೃತ್ಯು ಬಂದು ಮುಟ್ಟಿದೆ. ಈ ಸಮಯದಲ್ಲಿ ಬೇರೆಯವರು ಜೀವ ಕೊಡದ ಹೊರತು ಸುಲ್ತಾನ ಬದುಕುವುದೇ ಸಾಧ್ಯವಿಲ್ಲ.

ನನ್ನ ಆಯುಷ್ಯ ಇನ್ನು ಹತ್ತು ವರ್ಷ ಉಳಿದ ನಾನು, ನನ್ನ ಆಯುಷ್ಯವನ್ನು ಈ ಬಾದಶಾಹನಿಗೆ ಬಕ್ಷೀಸಾಗಿ ಕೊಟ್ಟು ಅವನ ರೋಗವನ್ನು ತೆಗೆದುಕೊಂಡೆ' ಎಂದು ಹೇಳಿದರು. ನಂತರ ಬಾದಶಾಹನು ಆರೋಗ್ಯ ಗುಣವಾಗಿ ಸರಿಯಾಗಿ ಅವನು ಗುಣಮುಖನಾದನು. ಮರುದಿನ ಬಾದಶಾಹನು ಹಜರತರನ್ನು ನೋಡಲು ಬಂದನು, ಅಲ್ಲಿ ನೋಡಿದರೆ ಬಾದಶಾಹನ ರೋಗದಿಂದಲೇ ಬಳುತ್ತಿದ್ದರು. ತನ್ನ ಪ್ರತಿಬಿಂಬವನ್ನು ಹಜರತರಲ್ಲಿ ಕಂಡನು. ಮೂರನೆಯ ದಿನ ಹಜರತ ಶಾಹ ಹಾಷಿಮ ಮರಣ ಹೊಂದಿದರು.[೨೦೯] ಹೀಗೆ ಹಜರತ ಅವರು ಸುಲ್ತಾನ ಮಹಮ್ಮದ ಆದಿಲ್‌ಶಾಹನಿಗೆ ತಮ್ಮ ಜೀವನದ ಹತ್ತು ವರ್ಷಗಳನ್ನು ದಯಪಾಲಿಸಿದರು.

ಸುಲ್ತಾನ ಸುಲ್ತಾನ ಮಹಮ್ಮದ ಆದಿಲ್‌ಶಾಹನು ೪ ನವಂಬರ ೧೬೫೬ ರಲ್ಲಿ ಮರಣ ಹೊಂದಿದನು[೨೧೦]. ಇವನು ಇರಾನಿನ ಕರಬಲಾದಿಂದ ತಂದಿದ ಮಣ್ಣಿನಿಂದ ಸುಲ್ತಾನ ಜೀವಂತ ಇರುವಾಗಲೇ ಕಟ್ಟಿಸಿದ್ದ ಗೋಳಗುಮ್ಮಟದಲ್ಲಿ ಅಂತ್ಯಕ್ರಿಯೆ ಮಾಡಲಾಯಿತು.[೨೧೧]

ಮಹಮ್ಮದ ಆದಿಲ್‌ಶಾಹನ ವ್ಯಕ್ತಿತ್ವ :

ಸುಲ್ತಾನ ಮಹಮ್ಮದ ಆದಿಲ್‌ಶಾಹ ಸುಲ್ತಾನನು ರೂಪದಿಂದ ಬಹಳ ಲಾವಣ್ಯವಂತನು, ಸುಲಕ್ಷಣಿಕನು, ಉತ್ತಮ ಸ್ವಭಾವದವನು, ಕ್ಷಮಾಶೀಲನು ಶ್ರೇಷ್ಠ ಐಶ್ವರ್ಯವಂತನು, ಮತ್ತು ಪ್ರಬಲ ದೈವವಾನನೂ ಆಗಿದ್ದನು. ಇವನ ಯಶಸ್ವೀ ಸೈನ್ಯವು ಎತ್ತ ಹೋಗುತ್ತಿತ್ತೋ, ಆ ಕಡೆಗಳಲ್ಲಿ ವಿಜಯಸಾಧಿಸಿ ಬರುತ್ತಿತ್ತು. ಪ್ರಪಥಮ ಹಿಂದೆಂದು ಹೊಂದಿದ ಮೇರೆಗಳನ್ನು ಹೊಂದಿತ್ತು. ಮಹಮ್ಮದ ಆದಿಲ್‌ಶಾಹನ ರಾಜ್ಯವು ಮೊಗಲರ ರಾಜ್ಯದ ಸರಹದ್ದಿನಿಂದ ರಾಮೇಶ್ವರದವರೆಗೆ ಮತ್ತು ಅದರ ಅಗಲವು ಕುತುಬಶಾಹನ ಸರಹದ್ದಿನಿಂದ ಮುಸ್ತಫಾಬಾದ ದಾಭೋಳದ ಬಂದರವರೆಗೂ ವ್ಯಾಪಿಸಿತ್ತು. ಆತನ ಕಾಲದಲ್ಲಿ ಗೂಬೆ ಮತ್ತು ರಣಹದ್ದುಗಳಿಗೆ ಕಾಲಿಡಲು ಸ್ಥಳವಿಲ್ಲದಂತಾಗಿತ್ತು. ಇವನ ಕಾಲದಲ್ಲಿ ಪ್ರತಿಯೊಂದು ಗ್ರಾಮ ಮತ್ತು ನಗರಗಳಲ್ಲಿ ನೃತ್ಯಗಾಯನಗಳು. ರಾಗರಂಗಗಳು. ವಾದ್ಯಗಳು, ಸಂಗೀತ ನಡೆಯುತ್ತಿತ್ತು. ಎಲ್ಲ ಜನರು ಸಂತೋಷದಿಂದ ಇದ್ದರು.

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಅವನ ಪ್ರಜೆಗಳು ಅತ್ಯಂತ ಸುಖ ಮತ್ತು ಸಂಪತ್ತನ್ನು ಹೊಂದಿದ್ದರು, ಉದಾಹರಣೆಗಾಗಿ ಪ್ರತಿದಿನ ರಾತ್ರಿ ರೂಢಿಯಂತೆ ಒಂದು ದೊಡ್ಡ ತಟ್ಟೆಯ ತುಂಬ ಹೊನ್ನುಗಳನ್ನು, ಆಭರಣಗಳನ್ನು ಮತ್ತು ಬೆಳ್ಳಿಗಳಿಂದ ತುಂಬಿ ಸುಲ್ತಾನನು ಮಲಗುವ ಸ್ಥಳದಲ್ಲಿ ತಲೆದಿಂಬಿನ ಹತ್ತಿರ ಇಡುವ ರೀತಿ ಇತ್ತು. ಆ ತಟ್ಟೆಯನ್ನು ನಸುಕಿನಲ್ಲಿಯೇ ಎತ್ತಿ ಬಡಬಗ್ಗರಿಗೆ ಮತ್ತು ಫಕೀರರು ಇತ್ಯಾಧಿಯಾಗಿ ಜನರಿಗೆ ತಟ್ಟೆಯಲ್ಲಿನ ದ್ರವ್ಯವನ್ನು ಕೊಡಬೇಕು. ಆದರೆ ಸುಲ್ತಾನನ ತಲೆದಿಂಬಿನ ಹತ್ತಿರದ ಆ ದ್ರವ್ಯವನ್ನು ಯಾರೂ ತೆಗೆದುಕೊಳ್ಳಲು ಒಪ್ಪುತ್ತಿರಲಿಲ್ಲ. ಯಾರಿಗಾದರೂ ದ್ರವ್ಯವನ್ನು ಕೊಡಲು ಹೋದರೆ ನಿವಾಳಿಸಿ ಕೊಡುವ ಜನರಿಗೆ ಕೊಡಿರಿ ನಾವು ನಿವಾಳಿಸದ್ದನ್ನು ತೆಗೆದುಕೊಳ್ಳುವವರಲ್ಲ ಎಂದು ಹೇಳುತ್ತಿದ್ದರು. ಆಗ ಸೇವಕರು ಚಪ್ಪರಗಳಲ್ಲಿ ವಾಸಿಸುವ ಫಕೀರ ಜನರಿಗೆ ಹಂಚುತ್ತಿದ್ದರು. ಫಕೀರರು ಸಹ ಅರಮನೆಗೆ

ಹೋಗಿ ಹಣವನ್ನು ತೆಗೆದುಕೊಳ್ಳುತ್ತಿರಲಿಲ್ಲ. ಹೀಗೆ ಎಲ್ಲ ವರ್ಗದ ಜನರು ಶ್ರೀಮಂತರಾಗಿದ್ದರು. ರಾಜಧಾನಿಯಾದ ಬಿಜಾಪುರದಲ್ಲಿ ಆ ಕಾಲದಲ್ಲಿ ಕಟ್ಟಡ ಕಟ್ಟಲು ಭೂಮಿಯನ್ನು ಖರಿದಿಸಬೇಕಾದರೆ, ಒಂದು ಗಜ ಭೂಮಿಗೆ ಒಂದು ಹೊನ್ನ ಕೊಟ್ಟರೆ, ಅದೂ ತುಂಬ ಕಷ್ಟದಿಂದ ದೊರಲುತಿತ್ತು. ಹೀಗೆ ತನ್ನ ಸ್ವಸಾಮರ್ಥ್ಯದಿಂದ ಮಹಮ್ಮದ ಆದಿಲ್‌ಶಾಹನು ವಿಶಾಲವಾದ ಸಾಮ್ರಾಜ್ಯವನ್ನು ಕಟ್ಟಿ ಒಳ್ಳೆಯ ಆಡಳಿತವನ್ನು ಕೊಟ್ಟಿದ್ದನು ಗಮನಿಸಿದರೆ, ಆದಿಲ್‌ಶಾಹಿ ಮನೆತನದಲ್ಲಿಯೇ ಅತ್ಯಂತ ಶ್ರೇಷ್ಠ ದೊರೆ ಎಂದರೆ, ಅತಿಶೊಕ್ತಿಯಾಗಲಾರದು.

ಅಡಿ ಟಿಪ್ಪಣಿಗಳು

1. Nayeem, M.A. 2008, *The Heritage of the Adilshahis of Bijapur*. Bright Publication, Hyderabad P-418
2. Sheik Ali. B, 2001, *History of Bahmani and Adil Shahi Rulers*, Mysore Books House, Mysore, p-135
3. Imartwale, Abdul Gani,2007, *History of Bijapur Subah* (1686-1885), Islamic Wonders Bureau, New Delhi, P-23
4. Nayeem, M.A. 2008, *The Heritage of the Adilshahis of Bijapur,* Bright Publication, Hyderabad, P-418
5. Verma, B.D.1930*, Shivaji Nibhandhavalli,* BISM, Poona, P-79
6. Ibid -78
7. Imartwale, Abdul Gani, 2007, *History of Bijapur Subah* (1686-1885), Islamic Wonders Bureau, New Delhi, P.23
8. Verma, B.D. 1930, *Shivaji Nibhandhavalli,* BISM, Poona, P-79
9. Ibid, p-79
10. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ (*ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು –೨೪೭
11. ಅದೇ, ಪು–೧೪೭
12. ಅದೇ ಪು--೨೪೮
13. Sherwani, H.K. and.Joshi P.M, 1973, *History of Medieval Deccan* Vol,–I ,Government of Andhra Pradesh, Hyderabad, P-351
14. Verma, B.D. 1930, *Shivaji Nibhandhavall,* BISM, Poona, P-96
15. Ibid P-79-80
16. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೪೮
17. Verma, B.D. 1930*, Shivaji Nibhandhavalli,* BISM, Poona, P-80
18. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೪೯

19. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-351

20. Verma, B.D. 1930, *Shivaji Nibhandhavalli,* BISM, Poona, P-80

21. Sherwani, H.K. and Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-351

22. Verma, B.D. 1930, *Shivaji Nibhandhavalli,* BISM, Poona, P-80

23. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೪೯

24. Verma, B.D.1930, *Shivaji Nibhandhavalli,* BISM, Poona, P-80

25. Ibid –P-81

26. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೫೮

27. Verma, B.D. 1930, *Shivaji Nibhandhavalli,* BISM, Poona, P-81-82

28. Astrabadi Fuzuni, *Futuhat-i-Adilshahi,* P-321

29. Lahori, Abdul Hamid. *Badsha Nama,* P-356

30. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-352

31. ಬಿಜಾಪುರ ಜಿಲ್ಲಾ ಗೆಜಿಟಿಯರ್. (ಪರಿಷ್ಕೃತ ೧೯೯೯) ಪು–೧೪೭

32. Verma, B.D. 1930, *Shivaji Nibhandhavalli,* BISM, Poona, P-82

33. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-352

34. Sinha, S.k. 1968, *Medieval History of the Deccan* Vol-II, Memoirs of Archaeological Survey of India, Delhi, P-93

35. Verma, B.D.1930, *Shivaji Nibhandhavalli,* BISM, Poona, P-82

36. Lahori, Abdul Hamid. *Badsha Nama,* PP-339-46

37. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-352

38. Verma, B.D.1930, *Shivaji Nibhandhavalli,* BISM, Poona, pp-82-83

39. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೫೭

40. Verma, B.D.1930, *Shivaji Nibhandhavalli* , BISM, Poona, P-83

41. Ibid, p-83

42. Zuhur Muhammad, *Muhammad Nama*, P-11

43. Verma, B.D. 1930, *Shivaji Nibhandhavalli,* BISM, Poona, P-83

44. Lahori, Abdul Hamid. *Badsha Nama* I,P-414

45. Verma, B.D. 1930, *Shivaji Nibhandhavalli* , BISM, Poona, P-83

46. Astrabadi Fuzuni, *Futuhat-i-Adilshahi* P-323

47. Zuhur Muhammad, *Muhammad Nama,* P-11

48. Verma, B.D. 1930, *Shivaji Nibhandhavalli* , BISM, Poona, P-84

49. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-354

50. Zuhur Muhammad, *Muhammad Nama,* pp-09-10

51. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾ'ಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೫೯

52. Verma, B.D. 1930, *Shivaji Nibhandhavalli* , BISM, Poona, P-84

53. ಬಿಜಾಪುರ ಜಿಲ್ಲಾ ಗೆಜಿಟಿಯರ್. (ಪರಿಷ್ಕೃತ ೧೯೯೯) ಪು–೧೪೮

54. Verma, B.D. 1930, *Shivaji Nibhandhavalli* , BISM, Poona ,P-85

55. Zuhur Muhammad, *Muhammad Nama*, P-13

56. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-355

57. Verma, B.D. 1930, *Shivaji Nibhandhavalli,* BISM, Poona, pp-85-86

58. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-355

59. Verma, B.D. 1930, *Shivaji Nibhandhavalli,* BISM, Poona, P-86

60. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-356

61. Lahori, Abdul Hamid. *Badsha Nama*- I ,P-537

62. Sherwani, H.K. and.Joshi P.M, 1973, *History of Medieval Deccan* Vol –I , Government of Andhra Pradesh, Hyderabad, P-356

63. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾ’ಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೬೪

64. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-356

65. Ibid, p-356

66. ಬಿಜಾಪುರ ಜಿಲ್ಲಾ ಗೆಜಿಟಿಯರ್. (ಪರಿಷ್ಕೃತ ೧೯೯೯) ಪು–೧೪೮

67. Sherwani, H.K. and.Joshi P.M, 1973, *History of Medieval Deccan* Vol –I , Government of Andhra Pradesh, Hyderabad, P-357

68. ಬಿಜಾಪುರ ಜಿಲ್ಲಾ ಗೆಜಿಟಿಯರ್. (ಪರಿಷ್ಕೃತ ೧೯೯೯) ಪು–೧೪೮

69. Zuhur Muhammad, *Muhammad Nama*, pp-15-16

70. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೭೨

71. Zuhur Muhammad, *Muhammad Nama,* pp-16-17

72. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-357

73. Ibid Pp-357-58

74. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೬೬–೬೭

75. Sakar Jadunath, *History of Aurangzib* ,Vol-I , Oriental Longman Ltd, Bombay ,pp-20-21

76. Nayeem .M.A, 1975, *Exteranal Relations of the Bijapur Kingdom*, Bright Publication, Hyderabad, P-164.

77. Ibid, p-164

78. Ibid,164

79. Lahori, I (2),151

80. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೭೯

81. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-359

82. Verma, B.D. 1930, *Shivaji Nibhandhavalli,* BISM, Poona, p -96

83. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ) , ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೮೦

84. Verma, B.D. 1930, *Shivaji Nibhandhavalli,* BISM, Poona, pp-96-97

85. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-359

86. Verma, B.D. 1930, *Shivaji Nibhandhavalli* , BISM, Poona, P-97

87. Sherwani, H.K. and.Joshi P.M, 1973, *History of Medieval Deccan* Vol –I , Government of Andhra Pradesh, Hyderabad, pp-359-60

88. Verma, B.D. 1930, *Shivaji Nibhandhavalli* , BISM, Poona, P-97

89. Zuhur Muhammad, *Muhammad Nama*, P-25

90. Sherwani, H.K. and.Joshi P.M, 1973, *History of Medieval Deccan* Vol –I, Government of Andhra Pradesh, Hyderabad, P-360

91. Verma, B.D.1930, *Shivaji Nibhandhavalli,* BISM, Poona, P-98

92. Ibid, p-98

93. Zuhur Muhammad, *Muhammad Nama*, P-26

94. Verma, B.D. 1930, *Shivaji Nibhandhavalli*, BISM, Poona, P-99

95. ಸುಂದರರಾವ. ಬ.ನ, ೧೯೮೫, *ಬೆಂಗಳೂರಿನ ಇತಿಹಾಸ*, ವಸಂತ ಸಾಹಿತ್ಯ ಗ್ರಂಥಮಾಲಾ, ಬೆಂಗಳೂರು, ಪು–೪೧–೪೩

96. ಅದೇ ಪು–೪೭

97. ಗೋವಿಂದ ವೈದ್ಯ, ೧೯೭೧, *ಕಂಠೀರವ ನರಸರಾಜ ವಿಜಯ*, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು–೨೦೬–೨೦೮.

98. ಕೃಷ್ಣಶರ್ಮ ಬೇಟಗೇರಿ, *ಕರ್ನಾಟಕ ಜನಜೀವನ*, ಪು–೧೩೧–೩೩

99.ಸುಂದರರಾವ. ಬ.ನ, ೧೯೮೫, *ಬೆಂಗಳೂರಿನ ಇತಿಹಾಸ,* ವಸಂತ ಸಾಹಿತ್ಯ ಗ್ರಂಥಮಾಲಾ, ಬೆಂಗಳೂರು, ಪು–೫೦–೫೧

100. ಅದೇ ಪು–೫೧–೫೨

101. ಅದೇ ಪು–೫೭–೫೮

102. ಅದೇ ಪು–೪೮

103. Verma, B.D. 1930, *Shivaji Nibhandhavalli,* BISM, Poona, pp-99-100

104. Ibid Pp-100-01

105. Ibid Pp-101-02

106. Ibid P-102

107. Nayeem, M.A. 1975, *External Relations of the Bijapur Kingdom*, Bright Publication,Hyderabad, P-142

108. Ibid

109. Srinivasachari, C.S. *A History of Ginjee and its rulers,* P-171

110. Ibid P-169

111. Ibid P-184

112. Ibid P-165

113. Nayeem, M.A. 1975, *External Relations of the Bijapur Kingdom*, Bright Publication, Hyderabad, P-29

114. Nayeem, M.A. 1975, *External Relations of the Bijapur Kingdom*, Bright Publication, Hyderabad, P-29

115. Ibid, P-29

116. Ibid P-29

117. Ibid, P-29

118. Ibid, P-30

119. Makatib, P-128

120. Abdur Rahim, op.cit..Is.Cl., Jan 1935, P-123

121. Basu,K.K, *The Golkonda Court Letters,* J.B.O.R.S. XXVI (4) P-272

122. Sarkar, Jadunath, *History of Aurangzib* Vol-I, Oriental Longman Ltd, Bombay, P-29

123. Zubairi, Ibrahim, *Basatin-us-Salatin,* P-288

124. Zuhu Muhammad , *Muhammad Nama,* P- 63

125. Ibid, P-71

126. Nayeem, M.A. 1975, *External Relations of the Bijapur Kingdom,* Bright Publication, Hyderabad, P-103

127. Ibid, p-103

128. Ibid,p-103

129. Zuhu Muhammad , *Muhammad Nama,* M.R. July 1929, P-11

130. Zuhu Muhammad , *Muhammad Nama*, P-225

131. I.H.R.C. 1942, P-204

132. Ibdi, P-201

133. Zuhu Muhammad *, Muhammad Nama*, P-367

134. Ibid, P-374

135. Sarkar, Jagdish Narayan, 1951, *The Life of Mirjumla,* P-26

136. Sharwani, H.K. *A History of the Qutbshahi Dynasity* P-454

137. Ibid

138. Sarkar, Jagdish Narayan, *The Life of Mirjumla,* 1951, P-31

139. Nayeem, M.A. 1975,*External Relations of the Bijapur Kingdom,* , Bright Publication, Hyderabad, P-107

140. Ibid, p-128

141. Ibid, p-128

142. Ibid, p-128

143. Ibid, p-128

144. Nilkanta Sastri and Vinkataramanayya. N, 1946, *Further Sources of Vijayanagara History,* p-350

145. Ibid ,p-350

146. Nayeem, M.A. 1975,*External Relations of the Bijapur Kingdom,* , Bright Publication, Hyderabad, P-129

147. Muhammad Nama, p-10

148. Nayeem, M.A. 1975,*External Relations of the Bijapur Kingdom,* , Bright Publication, Hyderabad, P-130

149. ibid, p-130

150. Nilkanta Sastri and Vinkataramanayya. N, 1946, *Further Sources of Vijayanagara History,* p-361

151. Ibid, p-365

152. Ibid, p-367

153. Nayeem, M.A. 1975,*External Relations of the Bijapur Kingdom,* , Bright Publication, Hyderabad, P-138

154. Ibid, p-139

155. Ibid, p-140

156. Ibid, p-140

157. Ibid, p-140

158. Muhammad Nama, p-11

159. Nilkanta Sastri and Vinkataramanayya. N, 1946, *Further Sources of Vijayanagara History,* p-365

160. Nayeem, M.A. 1975,*External Relations of the Bijapur Kingdom,* , Bright Publication, Hyderabad, P-141

161. Zuberi, Ibrahim, *Basatin-us-Salatin*, p-368

162. Nayeem, M.A. 1975,*External Relations of the Bijapur Kingdom,*, Bright Publication, Hyderabad, P-187

163. Rajwade; *Marathyanch Itihasachi, Sadhane* (M.I.S.) XVIII,44, Sabhasad (Siva Chhatrapati) I,3.

164. Sabhasad (Siva Chhatrapati) I, 4

165. Kulkarni, A.R. *Maharashtra in the Age of Shivaji,* p-20

166. Nayeem, M.A. 1975,*External Relations of the Bijapur Kingdom,*, Bright Publication, Hyderabad, P-189

167. Ibid, p-189

168. Khare,G.H. ,*Selected Articles*, BISM, Poona, p-162

169. Nayeem, M.A. 1975,*External Relations of the Bijapur Kingdom*, Bright Publication, Hyderabad, P-189

170. Ibid, p-190

171. Ibid, p-190

172. Ibid, p-190

173. Shivaji, 36 ff. *Murad to Shivaji dated* 14th March 1649, 14th August 1649, 31st Oct 1649 and 30th November 1649.

174. Jedhe Chronology (S.H.M.,28); Shiva Kalin, BISM, Poona, p-566

175. The Raja of the twelve Mavals of Javli was a vassal of Bijapur and paid tribute (Horse-Shoemoney) to the AdilShah,

176. Nayeem, M.A. 1975,*External Relations of the Bijapur Kingdom,* Bright Publication, Hyderabad, P-191

177. Ibid, p-191

178. Ibid, p-191

179. Ibid, p-191

180. ಯೋಗೀಶ್ವರಪ್ಪ, ಡಿ.ಎನ್.,೧೯೯೯, *ಹಾಗಲವಾಡಿ ನಾಯಕರು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು–೩೮

181. ಅದೇ, ಪು–೩೯

182. ಅದೇ, ಪು–೩೯

183. ಗೋವಿಂದ ವೈದ್ಯ, *ಕಂಠೀರವ ನರಸರಾಜ ವಿಜಯ, ಸಂಧಿ,* ೧೬, ಪು–೫೩

184. ಅದೇ, ಸಂಧಿ, ೧೧ ಪು, ೧೨

185. ಅದೇ, ಸಂಧಿ, ೧೪, ಪು,೩೬

186. ಮೈಸೂರು ದೊರೆಗಳ ವಂಶಾವಳಿ (ಕಾಗದ ಹಸ್ತಪ್ರತಿ) ಕೆ.ಬಿ. ೩೩೬, ಹಾಳೆ ೩೮, ಕ.ಅ.ಸಂ. ಮೈಸೂರು

187. Nayeem, M.A. 1975,*External Relations of the Bijapur Kingdom*, Bright Publication, Hyderabad, P-230

188. Ibid, p-230

189. Ibid, p-230

190. H.Heras, 1925, *Some unknown dealings between Bijapur and Goa.* I.H.R.C., VIII November, 131 ff.

191. I.H.R.C., VIII,op.cit., 137

192. Nayeem, M.A. 1975,*External Relations of the Bijapur Kingdom*, Bright Publication, Hyderabad, P-231

193. Ibid, p-231

194. ibid, p-232

195. Ibid, p-240

196. Ibid, p-240

197. English Factories in India by Sir W. Foster, I, XIX

198. Ibid, VI, 41

199. Nayeem, M.A. 1975,*External Relations of the Bijapur Kingdom,* Bright Publication, Hyderabad, P-241

200. English Factories in India by Sir W. Foster, VIII, p-196

201. Nayeem, M.A. 1975,*External Relations of the Bijapur Kingdom*, Bright Publication, Hyderabad, P-241

202. English Factories in India by Sir W. Foster, VIII, pp-226,251

203. Nayeem, M.A. 1975,*External Relations of the Bijapur Kingdom*, Bright Publication, Hyderabad, P-241

204. Ibid, p-241

205. English Factories in India by Sir W. Foster, VIII, p-252

206. Nayeem, M.A. 1975,*External Relations of the Bijapur Kingdom*, Bright Publication, Hyderabad, P-25

207. Ibid, p-25

208. Sinha, S.K. 1968, *Medieval History of the Deccan*, Governament of Andhra Pradesh, Hyderabad, p-105

209. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೯೩

210. ಅದೇ, ಪು-೩೦೯

211. Naqvi, Sadiq, 2003, *The Iranian Afaquies Contribution to the Qutub Shahi and Adil Shahis Kingdoms*, University Grant Commission, New Delhi, p-207

ಅಧ್ಯಾಯ ೩
ಆಡಳಿತ ವ್ಯವಸ್ಥೆ

ಅಧ್ಯಾಯ – ೩

ಆಡಳಿತ ವ್ಯವಸ್ಥೆ

ಭಾರತೀಯ ರಾಜಕೀಯ ಚಿಂತಕರು ವಿವರಿಸಿರುವ ರಾಜ್ಯಧರ್ಮವು ರಾಜ್ಯಾಡಳಿತದ ಆಧಾರವಾಗಿತ್ತು. ಸರಕಾರದ ನಿರ್ಧಿಷ್ಟ ಸ್ವರೂಪದ ಚಕ್ರಾಧಿಪತ್ಯವಾಗಿತ್ತು. ಒಂದು ಚಕ್ರಾಧಿಪತ್ಯಕ್ಕೆ ಆಧಾರ ಸ್ಥಂಭಗಳು ಎರಡು– ರಾಜಧರ್ಮ ಮತ್ತು ರಾಜನ ವ್ಯಕ್ತಿತ್ವ, ಆಳುವವನ ಮತ್ತು ಆಳಲ್ಪಡುವವರ ಹಿತಾಸಕ್ತಿಗಳು ಸಮಾನವೇ ಆದವು ಎಂದು ಪರಿಗಣಿಸಲಾಗಿತ್ತು. ಆಡಳಿತದಲ್ಲಿ ರಾಜನು ಪರಮೋನ್ನತನು. ಅವನು ಪರಮಾಧಿಕಾರವನ್ನು ಚಲಾಯಿಸಬಲ್ಲನು, ಆದರೂ ಅವನು ಒಬ್ಬ ಜ್ಞಾನಿಯೂ, ಅನುಗ್ರಹಶೀಲನೂ, ಸಮಾಜಿಕ ಜೀವನದ ಕಟ್ಟುಕಟ್ಟಳೆಗಳಿಂದ ಹದಗೊಂಡವನು ಆದ ನಿರಂಕುಶಾಧಿಕಾರಿಯಾಗಿದ್ದನು.

ಕ್ರಿ.ಶ ೧೪೮೯ ರಲ್ಲಿ ಬಿಜಾಪುರದಲ್ಲಿ ಸ್ಥಾಪಿಸಲ್ಪಟ್ಟ ಆದಿಲ್‌ಶಾಹಿಗಳ ರಾಜ್ಯವು ಇನ್ನಿತರ ಶಾಹಿ ರಾಜ್ಯಗಳಿಗಿಂತ ಪ್ರಬಲ ರಾಜ್ಯವಾಗಿತ್ತು. ಯುಸೂಫನು ಹೊಸ ರಾಜ್ಯಕ್ಕೆ ತಳಹದಿ ಹಾಕಿದಾಗ ಬಿಜಾಪುರವು ಕೇವಲ ಒಂದು ಜಹಗೀರ ಆಗಿತ್ತು. ಅದರ ವ್ಯಾಪ್ತಿಗೆ ರಾಯಚೂರ ದೋ–ಆಬ್ ಮತ್ತು ಮುದುಗಲ್ ಕೋಟೆಗಳು ಮಾತ್ರ ಒಳಪಟ್ಟಿದ್ದವು. ರಾಜ್ಯವು ಉತ್ತರದಲ್ಲಿ ಭೀಮಾನದಿಯವರೆಗೆ ಹರಡಿತ್ತು. ದಕ್ಷಿಣದಲ್ಲಿ ವಿಜಯನಗರವಿತ್ತು. ಗೋವಾ ಬಹದ್ದೂರ ಗಿಲಾನಿಯ ಹಿಡಿತದಲ್ಲಿತ್ತು. ವಾಯುವ್ಯಕ್ಕೆ ಅಹಮ್ಮದನಗರ ಮತ್ತು ಈಶಾನ್ಯಕ್ಕೆ ಬೀದರಗಳಿದ್ದವು. ಯೂಸುಫನಿಂದ ಎರಡನೆಯ ಅಲಿ ಆದಿಲ್‌ಶಾಹನವರೆಗಿನ ಸುಲ್ತಾನರು ರಾಜ್ಯ ವಿಸ್ತಾರೆಕ್ಕೆ ಹೆಚ್ಚಿನ ಮಹತ್ವ ನೀಡಿದರು. ಇದರ ಪರಿಣಾಮವಾಗಿ ಆದಿಲ್‌ಶಾಹಿಗಳ ವೈಭವದ ಪರಾಕಾಷ್ಠೆಯ ಸಮಯಕ್ಕೆ ಅಂದರೆ ಮಹಮ್ಮದ ಆದಿಲ್‌ಶಾಹನ ಕಾಲಕ್ಕೆ ರಾಜ್ಯವು ಅರಬ್ಬಿ ಸಮುದ್ರದಿಂದ ಬಂಗಾಳ ಕೊಲ್ಲಿಯವರೆಗೆ ಮತ್ತು ಉತ್ತರದ ಅಹಮ್ಮದನಗರದಿಂದ ದಕ್ಷಿಣದ ಮಧುರೆಯವರೆಗೆ ಹರಡಿತ್ತು. ಇಷ್ಟು ವಿಶಾಲ ಪಡೆದ ಆದಿಲ್‌ಶಾಹಿಗಳು ಅತ್ಯಂತ ವ್ಯವಸ್ಥಿತ ಆಡಳಿತ ನಡೆಸಿಕೊಂಡು ಬಂದಿದ್ದನ್ನು ಗಮನಿಸಬಹುದು.

ಅ) ಕೇಂದಾಡಳಿತ

೧) ಸುಲ್ತಾನ ಮತ್ತು ರಾಜತ್ವ :

ಆದಿಲ್‌ಶಾಹಿ ಸುಲ್ತಾನರು ಟರ್ಕ ಮೂಲದ ಜನಾಂಗಕ್ಕೆ ಸೇರಿದವರಾಗಿದ್ದರು. ಸುಲ್ತಾನನು ಸರ್ವಶ್ರೇಷ್ಟ ಅಧಿಕಾರಗಳನ್ನು ಹೊಂದಿರುತ್ತಿದ್ದನು. ಸುಲ್ತಾನನು ಆಡಳಿತಗಾರನೂ, ಮುಖ್ಯಸೇನಾಧಿಕಾರಿಯೂ, ಕೆಲವು ವೇಳೆ ಧರ್ಮ ಬೋಧಕನೂ ಮತ್ತು ಸಾರ್ವಜನಿಕ ಆರಾಧ್ಯ ದೈವನಾಗಿರುತ್ತಿದ್ದನು. ಸುಲ್ತಾನನು ಶೌರ್ಯ ಮತ್ತು

ಪರಾಕ್ರಮಗಳಿಗೆ ಪ್ರಮುಖ ಸಂಕೇತವಾಗಿದ್ದನು. ಆನೋಪಕಾರಿ, ಜನರಕ್ಷಕನಾಗಿದ್ದು, ಯುದ್ಧ ಮತ್ತು ಶಾಂತಿಯ ಕಲೆಗಳಲ್ಲಿ ಪ್ರವೀಣನಾಗಿದ್ದನು. ಅಲ್ಲದೇ ಕಲೆ ಕಸಬುಗಳ ಶ್ರೇಷ್ಠ ನಿರ್ಮಾತೃ ಮತ್ತು ಪೋಷಕನಾಗಿದ್ದನು.

ಇಸ್ಲಾಂ 'ಉಲುಲ್ ಅಮ್ರ' ಅಥವಾ ಪ್ರತಿನಿಧಿಯ ಕಲ್ಪನೆಯ ಕುರಿತು ಇಸ್ಲಾಮಿನ ಪ್ರಮುಖ ಗ್ರಂಥವಾದ ಖುರಾನಿನ ಪದ್ಯದಲ್ಲಿ ಮತ್ತು ರಾಜತ್ವದ ದೈವತ್ವದ ಕುರಿತು ಧರ್ಮೋಪದೇಶಕರ (ಪ್ರವಾದಿ)ಖಚಿತವಾದ ವಿವರಣೆಗಳು ಹೀಗಿವೆ.

ಅ) ಅಲ್ ಮಲೆಕುಲ್ ಅದೆಲ್ ಝಿಲುಲ್ಲಾಹ – ರಾಜನು ಕೇವಲ ದೇವರ ಪ್ರತಿಬಿಂಬವಾಗಿದ್ದಾನೆ.

ಬ) ಅಸ್ಸುಲ್ತಾನ್ ಝಿಲುಲ್ಲಾಹ ಫೆಲ್ ಅರ್ಜ್ – ರಾಜನು ಭೂಮಿಯ ಮೇಲೆ ದೇವರ ಪ್ರತಿಬಿಂಬವಾಗಿದ್ದಾನೆ.

ಕ) ಅಸ್ಸುಲ್ತಾನ್ ಖಲಿಫುತುಲ್ಲಾಹ್ ಫೆಲ್ ಅರ್ಜ್ – ರಾಜನು ಭೂಮಿಯ ಮೇಲೆ ದೇವರ ಪ್ರತಿನಿಧಿಯಾಗಿದ್ದಾನೆ.[೧]

ಸುಲ್ತಾನನು ರಾಜ್ಯದ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದನು. ಕಟ್ಟುನಿಟ್ಟಾದ ಇಸ್ಲಾಮಿನ ಸಿದ್ಧಾಂತದ ಪ್ರಕಾರ ರಾಜ್ಯದ ನಿಜವಾದ ಚಕ್ರವರ್ತಿ ಭಗವಂತನಾಗಿದ್ದನು. ಅವನು ಶರಿಯತ್(ದೈವಶಾಸನ)ವನ್ನು ಖುರಾನಿನಲ್ಲಿ ವಿಧಿಸಿರುವಂತೆ ಜಾರಿಗೆ ತರಲು ಬಂದಿರುವ ಪ್ರತಿನಿಧಿಯಾಗಿದ್ದನು.[೨] ಅವನು ಮುಖ್ಯ ನ್ಯಾಯವಿತರಕನೂ, ಮುಖ್ಯ ನಿರ್ವಾಹಕನೂ, ಸೇನೆಯ ದಂಡನಾಯಕನೂ ಆಗಿದ್ದನು. ತಪ್ಪು ಮಾಡಿದ ಸುಲ್ತಾನನ್ನು ಕೆಳಗಿಳಿಸಲು ಯಾವುದೇ ಕಾನೂನುಗಳಿರಲಿಲ್ಲ, ಹಾಗಾಗಿ ಒಳಸಂಚುಗಳೂ, ಪಿತೂರಿ ಮತ್ತು ಕೊಲೆಗಳೆ ಉಪಾಯಗಳಾಗಿದ್ದವು. ಉದಾಹರಣೆಗಾಗಿ ಇಸ್ಮಾಯಿಲ ಆದಿಲ್‌ಶಾಹನ ಮರಣದ ನಂತರ ಎಲ್ಲ ಸರದಾರರು ಸಭೆ ಸೇರಿ ಉತ್ತರಾಧಿಕಾರಿಯ ಬಗ್ಗೆ ಚರ್ಚಿಸಿದರು. ಇಸ್ಮಾಯಿಲನು ಸಾಯುವ ಮುನ್ನ ತನ್ನ ಹಿರಿಯ ಮಗನಾದ ಮಲ್ಲು ಆದಿಲ್‌ಖಾನ ತನ್ನ ಉತ್ತರಾಧಿಕಾರಿಯನ್ನಾಗಿ ಮಾಡಬೇಕೆಂದು ಹೇಳಿದ್ದನು. ಆದರೆ ಅಸದಖಾನ ಇಬ್ರಾಹಿಂನ ಪರವಾಗಿದ್ದನು. ಸರದಾರರು ಮತ್ತು ಇಸ್ಮಾಯಿಲನ ತಾಯಿ ಸುಲ್ತಾನನ ಅಪ್ಪಣೆಯಂತೆ ಮಲ್ಲುನ ಪರವಾಗಿದ್ದರು. ಅದರಿಂದಾಗಿ ಮಲ್ಲು ಆದಿಲ್‌ಖಾನನನ್ನೇ ಸಿಂಹಾಸನದ ಮೇಲೆ ಕೂಡಿಸುವುದೆಂದು ಮತ್ತು ಅದಕ್ಕೆ ಇಬ್ರಾಹಿಂನು ತಕರಾರು ತೆಗೆಯದಂತೆ ಆತನನ್ನು ಮಿರಜದ ಕೋಟೆಯಲ್ಲಿ ಅಸದಖಾನನು ಬಂಧನದಲ್ಲಿಡಬೇಕೆಂದು ನಿರ್ಧರಿಸಿ ಮಲ್ಲುನನ್ನು ಸಿಂಹಾಸನದ ಮೇಲೆ ಕೂಡಿಸಿದರು. ಹೀಗೆ ಅನೇಕ ಸಂಘರ್ಷಗಳನ್ನು ಗಮನಿಸಬಹುದಾಗಿದೆ.

೨) ಸುಲ್ತಾನನ ಪಟ್ಟಾಭಿಷೇಕ :

ಪ್ರಾಚೀನ ಕಾಲದಿಂದಲೂ ಅರಸರ ಸಿಂಹಾಸನಾರೋಹಣ ನಡೆಯುತ್ತಾ ಬಂದಿವೆ. ಇದು ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿಯೂ ಮುಂದುವರೆದುಕೊಂಡು ಬಂದಿದೆ. ಈ ಸಮಾರಂಭದಲ್ಲಿ,

ಸೇನಾನಿ, ಪುರೋಹಿತ, ರಾಣಿ, ಸರದಾರರು, ಸಾಮಂತ ರಾಜರು ಮತ್ತು ಜನ ಪ್ರತಿನಿಧಿಗಳ ಸಮುಖದಲ್ಲಿ ಜರುಗತ್ತಿತ್ತು.

ಪಟ್ಟಾಭಿಷೇಕ ಎಂಬ ಪದಕ್ಕೆ ಪರ್ಶಿಯನ್ನ ಭಾಷೆಯಲ್ಲಿ *'ತಾಜ್‌ಗುಜರಿ'* ಎನ್ನುತ್ತಿದ್ದರು. ತಾಜ ಎಂದರೆ ಕೀರಿಟ, ಗುಜರಿ ಎಂದರೆ ಮೇಲಿಡು ಒಟ್ಟಾರೆಯಾಗಿ ಕೀರಿಟ ಮೇಲಿಡು ಎಂಬರ್ಥ ಬರುತ್ತದೆ. ಅಂದರೆ ಪಟ್ಟಕಟ್ಟು ಎಂದು ಸಾಮಾನ್ಯವಾಗಿ ಅರ್ಥೈಸಲಾಗುತ್ತದೆ. ಸಹಜವಾಗಿ ಆಡಳಿತರೂಢ ಸುಲ್ತಾನನು ತಾನು ಸಾಯುವುದಕ್ಕೂ ಪೂರ್ವದಲ್ಲಿ ಅಥವಾ ಸಿಂಹಾಸನ ತ್ಯಾಗ ಮಾಡುವ ಮುನ್ನ ತನ್ನ ಉತ್ತರಾಧಿಕಾರಿಯನ್ನು ನೇಮಿಸುತ್ತಿದ್ದನು. ಉದಾಹರಣೆಗಾಗಿ ಎರಡನೆಯ ಇಬ್ರಾಹಿಂ ಆದಿಲ್‌ಶಾಹನು ತಾನು ಸಾಯುವ ಪೂರ್ವದಲ್ಲಯೇ ಮಹಮ್ಮದ ಆದಿಲ್‌ಶಾಹನನ್ನು ತನ್ನ ಉತ್ತರಾಧಿಕಾರಿಯೆಂದು ಸಾರಿದನ್ನು ನೋಡಬಹುದು. ಕೆಲವು ವೇಳೆ ಹೊಸ ಸುಲ್ತಾನನು ರಾಜ್ಯವನ್ನು ಮತ್ತು ಪ್ರಜೆಗಳನ್ನು ಅಲಕ್ಷಿಸಿದಾಗ ಆಸ್ಥಾನದ ಗಣ್ಯರು, ರಾಜಮಾತೆಯ ಅಪ್ಪಣೆಯ ಮೇರೆಗೆ ಆತನನ್ನು ಬದಲಿಸಿ ಅವನ ಸಹೋದರನನ್ನು ಸಿಂಹಾಸನದ ಮೇಲೆ ಕೂಡ್ರಿಸುತ್ತಿದ್ದರು.[೩] ಅಂತಹ ಒಂದು ಸನ್ನಿವೇಶ ಗಮನಿಸಬಹುದು ಮಲ್ಲೂ ಆದಿಲ್‌ಖಾನನ ಕೆಟ್ಟ ನಡುವಳಿಕೆಯಿಂದ ಬೇಸತ್ತ ಮಲ್ಲೂನ ಅಜ್ಜಿ ಆತನನ್ನು ಕೆಳಗಿಳಿಸಲು ನಿರ್ಧರಿಸಿದಳು. ಅವಳು ಅಸದಖಾನ ಸರದಾರನ ಜೊತೆ ಚರ್ಚಿಸಿ ಆತನ ಸಲಹೆಯಂತೆ ಮಲ್ಲೂ ಆದಿಲ್‌ಖಾನನ ಕಣ್ಣುಗಳನ್ನು ಕೀಳಿಸಿ, ಆತನ ಸಹೋದರನಾದ ಒಂದನೆಯ ಇಬ್ರಾಹಿಂ ಆದಿಲ್‌ಶಾಹನನ್ನು ಪಟ್ಟಕ್ಕೆ ಕುಳಿಸಲಾಯಿತು.[೪] ಪಟ್ಟಾಭಿಷೇಕ ಸಮಾರಂಭದಲ್ಲಿ ಅನೇಕ ಜನ ಸಾಮಂತ ರಾಜರು, ಜನಪ್ರತಿನಿಧಿಗಳು, ಸರದಾರರು ಭಾಗವಹಿಸಿ ತಮ್ಮ ಯೋಗ್ಯತೆಗೆ ತಕ್ಕಂತೆ ಕಾಣಿಕೆಗಳನ್ನು ಕೊಟ್ಟು ಶುಭಾಷಯಗಳನ್ನು ಸಲ್ಲಿಸುತ್ತಿದ್ದರು. ಮಹಮ್ಮದ ಆದಿಲ್‌ಶಾಹನ ಪಟ್ಟಾಭಿಷೇಕ ಸಮಾರಂಭದಲ್ಲಿ ಗೋಲ್ಕೊಂಡದ ಅಬ್ದುಲ್ಲಾ ಕುತುಬಶಾಹ ಮತ್ತು ಮೊಗಲ ಸಾಮ್ರಾಟನ ರಾಯಭಾರಿಗಳು ಕಾಣಿಕೆ ಮತ್ತು ಶುಭ ಸಂದೇಶಗಳು ತಂದದ್ದನು, ಗಮನಿಸಬಹುದು.

೩) ರಾಜತ್ವದ ಸಂಕೇತಗಳು :

೧) ತಾಜ್ : ತಾಜ್ ಎಂದರೆ ಕಿರೀಟ ಸಾಮಾನ್ಯವಾಗಿ ಸುಲ್ತಾನನು ಸಿಂಹಾಸನದ ಮೇಲೆ ಕುಳಿತುಕೊಳ್ಳುವಾಗ ಧರಿಸುತ್ತಿದ್ದನು. ಕೆಲವು ಧಾರ್ಮಿಕ ಮತ್ತು ಧಾರ್ಮಿಕೇತರ ಕಾರ್ಯಕ್ರಮಗಳಲ್ಲಿ ಬಳಸುತ್ತಿದ್ದನು. ಅಲ್ಲದೆ ಬೇರೆ ರಾಜ್ಯದ ಸುಲ್ತಾನ ಅಥವಾ ರಾಯಭಾರಿಯು ಬಂದರೆ ಅಂತಹ ವಿಶೇಷ ಸಂದರ್ಭಗಳಲ್ಲಿ ತಾಜ್ ಧರಿಸುತ್ತಿದ್ದನು. ಬಿಜಾಪುರದ ಆದಿಲ್‌ಶಾಹಿಗಳ ಕಿರೀಟವು ನೇರಳೆ ಮತ್ತು ಬಂಗಾರ ಬಣ್ಣದಾಗಿರುತ್ತಿದ್ದವು.[೫] ಮಹಮ್ಮದ ಆದಿಲ್‌ಶಾಹ ಮತ್ತು ಆತನ ಮಂತ್ರಿಯಾದ ಇಖ್ಲಾಸ್‌ಖಾನನನು ನಿಂತಿರುವ ಒಂದು ಭಿತ್ತಿ ಚಿತ್ರದಲ್ಲಿ ಮಹಮ್ಮದ ಆದಿಲ್‌ಶಾಹನು ನೇರಳೆ ಬಣ್ಣದ ಕಿರೀಟವನ್ನು ಧರಿಸಿದ್ದನ್ನು ನೋಡಬಹುದಾಗಿದೆ.

೨) ಥಕ್ತ : ಪರ್ಶಿಯನ ಭಾಷೆಯ ಥಕ್ತ ಎಂದರೆ ಸಿಂಹಾಸನ ಎಂದರ್ಥ. ಸಾಮಾನ್ಯವಾಗಿ ದರ್ಬಾರ್ ನಡೆಯುವ ಸಂದರ್ಭದಲ್ಲಿ ಸುಲ್ತಾನನು ಈ ಥಕ್ತ ಮೇಲೆ ಕುಳಿತುಕೊಂಡೆ ಕಾರ್ಯಕಲಾಪಗಳನ್ನು

ಆಲಿಸುತ್ತಿದ್ದನು. ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಅನೇಕ ಸುಲ್ತಾನರು ವೈಭವಿತವಾಗಿ ಸಿಂಹಾಸನವನ್ನು ನಿರ್ಮಿಸಿಕೊಂಡಿದ್ದನ್ನು ನೋಡಬಹುದಾಗಿದೆ. ಉದಾಹರಣೆಗಾಗಿ ಮೊಗಲ ಬಾದಶಾಹ ಶಹಜಾಹಾನನು ತನ್ನ ಆಡಳಿತ ಕಾಲದಲ್ಲಿ ಪ್ರಖ್ಯಾತ ಮಯೂರ ಸಿಂಹಾಸನವನ್ನು ಒಂದು ಕೋಟಿ ವೆಚ್ಚಮಾಡಿ ಅನೇಕ ಬೆಲೆಬಾಳುವ ಅಮೂಲ್ಯ ಮುತ್ತು ರತ್ನ ಬೆಳ್ಳಿ ಬಂಗಾರಗಳಿಂದ ತಯಾರಿಸಿದ್ದನ್ನು ಗಮನಿಸಬಹುದು. ಅಲ್ಲದೇ ಮೈಸೂರಿನ ಒಡೆಯರ ಕಾಲದಲ್ಲಿಯು ಇಂತಹ ವೈಭವಿತವಾದ ಬಂಗಾರದ ಸಿಂಹಾಸನವನ್ನು ನೋಡಬಹುದು. ಆ ರೀತಿಯಾಗಿ ಬಿಜಾಪುರದ ಆದಿಲ್‌ಶಾಹಿಗಳೂ ಕೂಡ ಬಂಗಾರ, ಬೆಳ್ಳಿ ಹಾಗೂ ಇನ್ನಿತರ ಬೆಲೆಬಾಳುವ ಮುತ್ತು ರತ್ನಗಳಿಂದ ತಮ್ಮ ಸಿಂಹಾಸನವನ್ನು ರಚಿಸಿಕೊಂಡಿರಬಹುದು. ಸುಲ್ತಾನನು ಇದರ ಮೇಲೆ ಕುಳಿತು ದರ್ಬಾರ (ಸಭೆ) ನಡೆಸುತ್ತಿದ್ದನು.

೩) **ಕಮರಬಂದ್ :** ಕಮರಬಂದ ಎಂದರೆ ಸೊಂಟಕ್ಕೆ ಕಟ್ಟಿಕೊಳ್ಳುವ ರಾಜಪಟ್ಟಿ. ಈ ಸೊಂಟ ಪಟ್ಟಿಯು ಒಳ್ಳೆಯ ಜರತಾರಿ ಬಟ್ಟೆಯಿಂದ ಮತ್ತು ಬೆಲೆಬಾಳುವ ಮುತ್ತು, ರತ್ನ ಮತ್ತು ಹರಳುಗಳಿಂದ ತಯಾರಿಸಲಾಗುತ್ತಿತ್ತು. ಬಿಜಾಪುರದ ಅನೇಕ ಭಿತ್ತಿ ಚಿತ್ರಗಳಲ್ಲಿ ಸುಲ್ತಾನರು ಕಮರಬಂದವನ್ನು ಕಟ್ಟಿಕೊಂಡಿದ್ದನ್ನು ನೋಡಬಹುದು. ಇದರ ಇನ್ನೊಂದು ಉಪಯೋಗವೆಂದರೆ ಈ ಕಮರಬಂದಿನಲ್ಲಿಯೇ ಸುಲ್ತಾನರು ಖಡ್ಗವನ್ನು ಇಟ್ಟಿರುತ್ತಿದ್ದರು (ಸೇರಿಸುತ್ತಿದ್ದರು).

೪) **ಶಮಶೇರ್ ಮತ್ತು ಖಂಜರ್ :** ಶಮಶೇರ್ ಎಂದರೆ ಖಡ್ಗ (sword) ಮತ್ತು ಖಂಜರ ಎಂದರೆ ಕಠಾರಿ (ಆಚಿಥಾಜಾ) ಇವು ಸುಲ್ತಾನನು ತಮ್ಮ ಆತ್ಮರಕ್ಷಣೆಗಾಗಿ ಇಟ್ಟುಕೊಳ್ಳುತ್ತಿದ್ದರು. ಇವುಗಳ ಹಿಡಿಕಿಗಳಿಗೆ ಅನೇಕ ಬೆಲೆಬಾಳುವ ಹರಳುಗಳಿಂದ ಅಲಂಕರಿಸಲ್ಪಡುತ್ತಿದ್ದವು. ಅಲ್ಲದೇ ಖಡ್ಗಗಳ ಮೇಲೆ ಪರ್ಶಿಯನ್ನ ಭಾಷೆಯ ಅಲೇಖ್ಯಗಳು (ಬರವಣಿಗೆ) ಇದದ್ದನ್ನು ನೋಡಬಹುದಾಗಿದೆ. ಉದಾಹರಣೆಗೆ ಟೀಪ್ಪುವಿನ ಖಡ್ಗದ ಮೇಲೆ ಬರವಣಿಗೆಯನ್ನು ಗಮನಿಸಬಹುದಾಗಿದೆ.

೫) **ಸಿಕ್ಕೆ :** ಸಿಕ್ಕೆ ಎಂದರೆ ನಾಣ್ಯ. ಸಾಮಾನ್ಯವಾಗಿ ಸುಲ್ತಾನನು ಸಿಂಹಾಸನವನ್ನೇರುವ ಸಂದರ್ಭದಲ್ಲಿ ಟಂಕಿಸಲ್ಪಡುತ್ತಿದ್ದವು.[೬] ಮಹಮ್ಮದ ಆದಿಲ್‌ಶಾಹನು ಮೊಟ್ಟ ಮೊದಲ ಬಾರಿಗೆ ಬಂಗಾರದ ನಾಣ್ಯವನ್ನು ಟಂಕಿಸಿದನು.[೭]

ಬಿಜಾಪುರದಲ್ಲಿ ಕೇವಲ ಒಂದು ಸರಕಾರಿ ಟಂಕಸಾಲೆ ಇತ್ತು. ಅದು ನಾಣ್ಯ ಮುದ್ರಿಸುವ ಒಬ್ಬನ ಕೈಯಲ್ಲಿತ್ತು. ಇತರ ಖಾಸಗಿ ವ್ಯಕ್ತಿಗಳೂ ಸಹ ನಾಣ್ಯ ಮುದ್ರಿಸುವ ಪರವಾನಿಗೆ ಶುಲ್ಕವನ್ನು ಸಲ್ಲಿಸಿ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಮುದ್ರಿಸುವ ಅಥವಾ ಟಂಕಿಸುವ ಪರವಾನಿಗೆ ಪಡೆದುಕೊಳ್ಳಬಹುದಾಗಿತ್ತು.[೮]

ಮಹಮ್ಮದ ಆದಿಲ್‌ಶಾಹನು ತನ್ನ ನಾಣ್ಯದ ಮೇಲೆ ದ್ವಿಪದಿಯನ್ನು ಕೆತ್ತಿಸಿದನ್ನು ಗಮನಿಸಬಹುದು. ಅದು ಈ ರೀತಿಯಾಗಿದೆ.

" ಜಹಾನ್ ಝಿನ್ ದೋ ಮಹಮ್ಮದ ಗೀರಿಫತ್ ಝಿನತ್-ಓ ಜ್‌ಹ

ಏಕ್ ಮಹಮ್ಮದ-ಯಿ ಮುರ್ಸ್‌ಲ್ ದುವಂ ಮಹಮ್ಮದ-ಶಾಹ"

ಇದರ ಅರ್ಥ ಈ ರೀತಿಯಾಗಿದೆ. "ಈ ಜಗವು ಇಬ್ಬರು ಮಹಮ್ಮದರಿಂದಾಗಿ ಸೌಂದರ್ಯವನ್ನು, ವರ್ಚಸ್ಸನ್ನು ಪಡೆದಿದೆ. ಒಬ್ಬರು ಮಹಮ್ಮದರು ಪವಿತ್ರ ಪೈಗಂಬರರು. ಇನ್ನೊಬ್ಬ ಮಹಮ್ಮದ ಶಾಹ". ಎಂದು ಬರೆಯಲಾಗಿದೆ. ಇಲ್ಲಿ ಮಹಮ್ಮದ ಆದಿಲ್‌ಶಾಹನು ತನ್ನ ಅಜ್ಜನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದನು. ಏಕೆಂದರೆ ಮೊದಲನೆಯ ಅಲಿ ಆದಿಲ್‌ಶಾಹನು ಖಲೀಫರೊಂದಿಗೆ ಹೋಲಿಸಿಕೊಂಡಿದ್ದರೆ, ಮೊಮ್ಮಗ ಮಹಮ್ಮದ ಆದಿಲ್‌ಶಾಹನು ಪೈಗಂಬರರೊಂದಿಗೆ ತನ್ನ ಹತ್ತಿರದ ಸಂಬಂಧವನ್ನು ಬೆಳಿಸಿದ್ದನು.[೯]

ಮಹಮ್ಮದ ಆದಿಲ್‌ಶಾಹನು ನಾಣ್ಯಗಳು ಹೇಗಿರಬೇಕೆಂದು ತನ್ನ ದಸ್ತುರ-ಇ-ಅಮಲ್ (ಶಾಸನ)ದಲ್ಲಿ ಈ ರೀತಿಯಾಗಿ ಹೇಳಿದ್ದಾನೆ. ರೂಪಾಯಿ ಹಾಗೂ ನಾಣ್ಯಗಳನ್ನು ವರ್ತುಳದ ಆಕಾರದಲ್ಲಿ ಮತ್ತು ಭಾರದಲ್ಲಿ ಪರೀಕ್ಷೆ ಮಾಡಿದರೆ, ರಾಜಧಾನಿಯಾದ ಬಿಜಾಪುರದಲ್ಲಿಯ ನಾಣ್ಯಗಳಂತೆ ಮತ್ತು ರೂಪಾಯಿಗಳಂತೆಯೇ ಇರಬೇಕು. ಅದರಲ್ಲಿ ಒಂದು ಗುಂಜಿ ತೂಕಕೂಡ ಅಂತರವಿರಬಾರದು. ಹೀಗೆ ಇವನು ನಾಣ್ಯಗಳಲ್ಲಿ ಅಂತರವನ್ನು ಸಹಿಸುತ್ತಿರಲ್ಲಿಲ್ಲ.

೬) ಛತ್ರ : ರಾಜಮನೆತನದ ಛತ್ತಿಗೆ 'ಛತ್ರ' ಎಂದು ಕರೆಯುತ್ತಿದ್ದರು. ಈ ಛತ್ರವನ್ನು ಸೂರ್ಯನ ಕಿರಣಗಳು ರಾಜನ ಮುಖದ ಮೇಲೆ ಬೀಳುವುದರಿಂದ ತಡೆಯಲು ಬಳುಸುತ್ತಿದ್ದರು. ಪರ್ಶಿಯನ ಪೌರಾಣಿಕ ಕಥೆಯ ಪ್ರಕಾರ ಸೂರ್ಯನರಷ್ಮಿಯು ಎರಡು ವಸ್ತುಗಳ ಮೇಲೆ ಬೀಳಬಾರದು. ಒಂದು ಅಗ್ನಿ ದೇವಾಲಯದ ಅಗ್ನಿ, ಇನ್ನೊಂದು ರಾಜನ ಮುಖ. ಈ ತೆರೆದ ಛತ್ತವನ್ನು ಸುಲ್ತಾನನು ದರಬಾರಿನಲ್ಲಿದ್ದರೂ ಕೂಡ ಅವನ ತಲೆಯ ಮೇಲೆ ಹಿಡಿದಿರಲಾಗುತ್ತಿತ್ತು.[೧೦] ಪ್ರಸ್ತುತ ಪ್ರಮುಖ ಗಣ್ಯ ವ್ಯಕ್ತಿಗಳಾದ ಪ್ರಧಾನ ಮಂತ್ರಿ, ಮುಖ್ಯ ಮಂತ್ರಿ, ಅಲ್ಲದೇ ಪ್ರಮುಖ ಮಠಗಳ ಮಠಾಧೀಶರನ್ನು ಮೆರವಣಿಗೆ ಮೂಲಕ ಕರೆತರುವಾಗ ಈ ಛತ್ರಿಯನ್ನು ಹೇಗೆ ಉಪಯೋಗಿಸಲಾಗುತ್ತದೆ. ಹಾಗೆಯೇ ಸುಲ್ತಾನರಿಗೂ ಸಹ ಈ ಪದ್ಧತಿಯನ್ನು ಅನುಸರಿಸುತ್ತಿದ್ದರು.

೭) ನೆಗಿನ್ : ಪರ್ಶಿಯನ ಭಾಷೆಯಲ್ಲಿ 'ನೆಗಿನ್' ಎಂದರೆ ಮೊಹರು (ಮುದ್ರೆ) ಎಂದು ಅರ್ಥವಾಗುತ್ತದೆ. ಸುಲ್ತಾನನ ಎಲ್ಲಾ ಫರ್ಮಾನಗಳು, ಸನದುಗಳು ಮತ್ತು ರಾಜ್ಯದ ಇತರ ದಾಖಲೆಗಳ ಮೇಲೆ ರಾಜ ಮುದ್ರೆ ಹಾಕುವುದು ಅವಶ್ಯವಾಗಿತ್ತು. ಮೊಹರುಗಳು ಬೇರೆ ಬೇರೆಯಾಗಿದ್ದು, ವಿವಿಧ ಉದ್ದೇಶಗಳಿಗೆ ಬಳಸಲಾಗುತ್ತಿತ್ತು. ಮುದ್ರೆಗಳನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಬಹುದು.

೧) ಫರ್ಮಾನಿನ ಮೇಲ್ಭಾಗದಲ್ಲಿ ಹಾಕುವ ಮುದ್ರೆ

೨) ಮುಖ್ಯ ಮಂತ್ರಿಯ(ವಕೀಲ್-ಅಲ್-ಸಲತ್ತನತ್ತ) ಮುದ್ರೆ

೩) ಫರ್ಮಾನಿನ ಕೆಳಭಾಗದಲ್ಲಿ ಉಪಯೋಗಿಸುವ ಮುದ್ರೆ

೪) ಫರ್ಮಾನಿನ ಹಿಂಭಾಗದಲ್ಲಿ ಉಪಯೋಗಿಸುವ ಮುದ್ರೆ.

ಫರ್ಮಾನಿನ ಮೇಲ್ಭಾಗದಲ್ಲಿ ಉಪಯೋಗಿಸುವ ಮುದ್ರೆ ಸಾಮಾನ್ಯವಾಗಿ ಸುಲ್ತಾನದಾಗಿರುತ್ತಿತ್ತು. ನಂತರ ಮುಖ್ಯ ಮಂತ್ರಿಯ ಮುದ್ರೆ ಮತ್ತು ಕೆಳಗಿನ ಎರಡು ಮುದ್ರೆಗಳನ್ನು ಗುರುತಿಸುವುದು ಕಷ್ಟಕರವಾಗಿದೆ. ಕೆಲವು ಮುಖ್ಯ ಮಂತ್ರಿಯ ಮುದ್ರೆಗಳು ಗುರತಿಸಲಾಗಿದೆ ಅದರಲ್ಲಿರುವ ಹೆಸರುಗಳೆಂದರೆ, ಇಖ್ಲಾಸಖಾನ, ಮುಸ್ತಫಾಖಾನ ಮತ್ತು ಶೇರಜಾಖಾನ.[೧೧]

ಮಹಮ್ಮದ ಆದಿಲ್‌ಶಾಹನ ಫರ್ಮಾನಿನ ಮೇಲೆ ಇರುವ ಮುದ್ರೆ ಈ ಕೆಳಗಿನಂತಿದೆ.

" ಯಾ ಅಲಿ ಮದದ ಮೊಹರಶಾಹಿ

ಝೂದ್ ಮುರ್ತುಜಾ ಬರ್ ಮೊಹರ-ವ-ಮಾಹ ಖುಸರು

ಆದಿಲ್ ಅಲಿ ಬಾದ ಆಜ್ ಮಹಮ್ಮದ

ಬಾದಶಾಹ. ಎಂದು ಬರೆಯಲಾಗಿದೆ.[೧೨]

೮) **ಕುಲಾಹ್ :** ಕುಲಾಹ್ ಎಂದರೆ ಪೇಠಾ ಎಂದರ್ಥ ಇದನ್ನು ಸಾಮಾನ್ಯವಾಗಿ ಬೇಸಿಗೆಯ ದಿನಗಳಲ್ಲಿ ಕಿರೀಟಿನ ಬದಲಾಗಿ ಇದನ್ನು ಬಳಸಲಾಗುತ್ತಿತ್ತು. ಈ ಪೇಠಾವು ಒಳ್ಳೆಯ ಬೆಲೆಬಾಳುವ ಬಟ್ಟೆಯಿಂದ ತಯಾರಿಸಲಾಗುತ್ತಿತ್ತು. ಅಲ್ಲದೇ ಮುತ್ತು ರತ್ನಗಳಿಂದ ಇದನ್ನು ಅಲಂಕರಿಸಲಾಗುತ್ತಿತ್ತು. ಆದಿಲ್‌ಶಾಹಿಗಳ ಕಾಲದ ಚಿತ್ರಗಳಲ್ಲಿ ಇಂತಹ ಪೇಠಾಗಳನ್ನು ಧರಿಸಿದ್ದನ್ನು ನೋಡಬಹುದು.

೯) **ಯಹೇರ್ :** ಕೂದಲು ಕಟ್ಟುವ ಸಾಧನಕ್ಕೆ ಯಹೇರ್(Hair Band) ಎನ್ನತ್ತಿದ್ದರು. ಈ ಸಾಧನವನ್ನು ಬಹುಶಃ ಬೇಟೆಯಾಡುವ ಸಮಯದಲ್ಲಿ ಬಳಸುತ್ತಿದ್ದಿರಬಹುದು.

೧೦) **ಪರ್ಗರ್ :** ಪರ್ಗರ್ ಎಂದರೆ ಕಂಠಹಾರ(Neeklace). ಸುಲ್ತಾನನು ಈ ಕಂಠಹಾರವನ್ನು ಅನೇಕ ಬೆಲೆಬಾಳುವ ಲೋಹಗಳಿಂದ ಮತ್ತು ಮುತ್ತು, ರತ್ನಗಳಿಂದ ತಯಾರಿಸಲಾಗುತ್ತಿತ್ತು. ಮಹಮ್ಮದ ಆದಿಲ್‌ಶಾಹನ ಅನೇಕ ವರ್ಣ ಚಿತ್ರಗಳಲ್ಲಿ ಇಂತಹ ಕಂಠಹಾರಗಳನ್ನು ಹಾಕಿಕೊಂಡದ್ದನ್ನು ಗಮನಿಸಬಹುದು.

೪) **ದರ್ಬಾರ್ :**

ಪರ್ಶಿಯನ್ ಭಾಷೆಯಲ್ಲಿ 'ದರ್ಬಾರ್' ಎಂದರೆ 'ರಾಜನ ಆಸ್ಥಾನ' ಅದೊಂದು ಪವಿತ್ರ ಸ್ಥಳ. ಈ ದರ್ಬಾರ್‌ವು ಋತುಮಾನಗಳಿಗುಣವಾಗಿ ಮತ್ತು ರಾಜ್ಯದಲ್ಲಿ ಘಟಿಸುವ ಘಟನೆಗಳ ಆಧಾರದ ಮೇಲೆ ದಿನಕ್ಕೆ ಒಂದು ಅಥವಾ ಎರಡು ಬಾರಿ ನಡೆಯುತ್ತಿತ್ತು.[೧೩] ಸುಲ್ತಾನರು ತಮ್ಮ ಬೆಳಗಿನ ಸಮಯವನ್ನು ವಿದ್ವಾಂಸರೊಂದಿಗೆ ಚರ್ಚಿಸುತ್ತಿದ್ದರು. ಈ ಸಮಯದಲ್ಲಿಯೂ ಕೂಡ ರಾಜ್ಯದ ಇತರ ಭಾಗಗಳಿಂದ ದೂತರು ಕಳುಹಿಸಿದ ವರದಿಗಳನ್ನು ಸ್ವೀಕರಿಸುತ್ತಿದ್ದರು. ವರದಿಗಾರರು ಕಳುಹಿಸಿದ ಸುದ್ಧಿಗಳನ್ನು ಓದಿದ ನಂತರ

ಅವುಗಳನ್ನು ಮುಂದಿನ ಮೂರು ಗಂಟೆಗಳ ಕಾಲ ಮಧ್ಯಾಹ್ನದ ಪ್ರಾರ್ಥನೆಯವರೆಗೆ ಮುಕ್ತ ದರ್ಬಾರಿನಲ್ಲಿ ಚರ್ಚಿಸಲಾಗುತ್ತಿತು.[೧೪]

ಶುಕ್ರವಾರವನ್ನು ಹೊರತು ಪಡಿಸಿ ವಾರದ ಉಳಿದ ದಿನಗಳಲ್ಲಿ ಪ್ರತಿ ದಿನ ಆಸ್ಥಾನದ ಮಂತ್ರಿಗಳೊಡನೆ ರಾಜನು ದರ್ಬಾರ್ ನಡೆಸುತ್ತಿದ್ದನು. ದರ್ಬಾರದಲ್ಲಿ ಯಾರು ಕುಳಿತುಕೊಳ್ಳುತ್ತಿರಲಿಲ್ಲ. ನೋಬಲ್ಲ (ಸರದಾರ)ರು ತಮ್ಮ ದರ್ಜೆಯ ಪ್ರಕಾರ ಸಿಂಹಾಸನದ ಎಡಗಡೆ ಮತ್ತು ಬಲಗಡೆ ನಿಂತುಕೊಳ್ಳುತ್ತಿದ್ದರು.[೧೫] ಮಹಮ್ಮದ ಆದಿಲ್‌ಶಾಹನ ಒಂದು ವರ್ಣ ಚಿತ್ರದಲ್ಲಿ ಮಹಮ್ಮದ ಆದಿಲ್‌ಶಾಹನು ಕುಳಿತು ದರ್ಬಾರ್ ನಡೆಸುತ್ತಿರುವ ಸಮಯದಲ್ಲಿ ಇವನ ಮಂತ್ರಿ ಇಖ್ಲಾಸ್‌ಖಾನ ಮತ್ತು ಇತರ ಸರದಾರರು ನಿಂತುಕೊಂಡೆ ಸಲಹೆಗಳನ್ನು ಕೊಡುತ್ತಿದದ್ದನ್ನು ನೋಡಬಹುದು. ಈ ದರ್ಬಾರ್ ಎಲ್ಲರಿಗೂ ಮುಕ್ತವಾಗಿದ್ದ ಕಾರಣ ಮುಖ್ಯವಾದ ವಿಷಯಗಳ ಕುರಿತು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಬಹುದಾಗಿತ್ತು. ಯಾರು ಬೇಕಾದರು ಸುಲ್ತಾನನ ಎದುರಿಗೆ ಯಾವುದೇ ಅಧಿಕಾರಿಯ ವಿರುದ್ಧ ದೂರು ಸಲ್ಲಿಸಬಹುದಾಗಿತ್ತು. ಇಂತಹದೊಂದು ದರಬಾರಿನಲ್ಲಿಯೇ ಮಹಮೂದ ಗವಾನನನ್ನು ರಾಜ ದ್ರೋಹದ ಆಪಾದನೆಯ ಮೇಲೆ ಮರಣದಂಡನೆಗೆ ಗುರಿಪಡಿಸಲಾಯಿತು.[೧೬] ರಾಜ್ಯಕ್ಕೆ ಸಂಬಂಧಿಸಿದ ಮಹತ್ವದ ವಿಷಯಗಳನ್ನು ಬೇರೆ ಸಮಯದಲ್ಲಿ ಗೌಪ್ಯವಾಗಿ ಆಯ್ದ ಸಲಹೆಗಾರರೊಂದಿಗೆ ಚರ್ಚಿಸಲಾಗುತ್ತಿತ್ತು. ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ಮರಣ ಹೊಂದಿದಾಗ ಆತನ ಮಕ್ಕಳಲ್ಲಿ ಯಾರಿಗೆ ಸಿಂಹಾಸನಕ್ಕೆ ತರಬೇಕೆಂದು ಮಹಮ್ಮದ ಅಮೀನ, ದೌಲತಖಾನ ಮತ್ತು ಬಡೀ ಸಾಹೇಬಳು ಗೌಪ್ಯವಾಗಿ ಚರ್ಚಿಸಿ ನಂತರ ಮಹಮ್ಮದ ಆದಿಲ್‌ಶಾಹನನ್ನು ಅಧಿಕಾರಕ್ಕೆ ತರಲಾಯಿತು.

೫ ಮಜ್ಲಿಸ್–ಇ–ಖಲವತ್ :

ಮಜ್ಲಿಸ್–ಇ–ಖಲವತ್ ಎಂದರೆ ಆಪ್ತಾಲೋಚನ ಮಂಡಳಿ ಇದು ರಾಜನಿಗೆ ಯಾವುದೇ ಸಂದರ್ಭಗಳಲ್ಲಿ ಸಲಹೆ ಸೂಚನೆಗಳನ್ನು ನೀಡುತ್ತಿತ್ತು. ಈ ಮಂಡಳಿಯಲ್ಲಿ ಹಿರಿಯ ನೋಬಲ್ಲ (ಸರದಾರ)ರು ಇರುತ್ತಿದ್ದರು. ಅಲ್ಲದೇ ಸುಲ್ತಾನನ ಆಪ್ತ ಮಿತ್ರರು, ಬಂಧುಗಳು, ವಿಶ್ವಾಸಯೋಗ್ಯ ಅಧಿಕಾರಿಗಳು, ಉಲೇಮರನ್ನು ಹೊಂದಿರುತ್ತಿತ್ತು. ಮಹಮ್ಮದ ಆದಿಲ್‌ಶಾಹನ ಆಪ್ತಾಲೋಚನೆ ಮಂಡಳಿಯಲ್ಲಿ ಮುಸ್ತಫಾಖಾನ, ಖವಾಸಖಾನ ಮತ್ತು ಬಾಲ್ಯ ಸ್ನೇಹಿತನಾದ ಸಿದ್ದಿರೇಹಾನ ಮುಂತಾದವರಿದ್ದರು. ಈ ಮಂಡಳಿಯ ಸದಸ್ಯರು ರಾಜ್ಯದ ಪ್ರಮುಖ ವಿಷಯಗಳ ಕುರಿತು ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು. ಮಹಮ್ಮದ ಆದಿಲ್‌ಶಾಹನ ಮಂತ್ರಿಯಾದ ಖವಾಸಖಾನನು ದ್ರೋಹ ಮಾಡುತ್ತಿದ್ದನೆಂದು ತಿಳಿದಾಗ ಸುಲ್ತಾನನು ತನ್ನ ಆಪ್ತ ಮಿತ್ರನಾದ ಸಿದ್ಧಿರೇಹಾನನನ್ನು ಏಕಾಂತದಲ್ಲಿ ಕರೆದು ಅವನೊಂದಿಗೆ ಸಮಾಲೋಚನೆ ಮಾಡಿ ಖವಾಸಖಾನನನ್ನು ಕೊಲ್ಲುವ ಆದೇಶವನ್ನು ಕೊಟ್ಟನು.[೧೭] ಹೀಗೆ ಸೂಕ್ಷ್ಮ ವಿಚಾರಗಳ ಮೇಲೆ ಸುಲ್ತಾನನಿಗೆ ಸಲಹೆಗಳನ್ನು ಕೊಡುತ್ತಿದ್ದರು. ಸುಲ್ತಾನನು ಅವರ ಸಲಹೆಗಳಿಗೆ ಬದ್ಧನಾಗಿರಬೇಕೆಂದು ಯಾವುದೇ ಕಾನೂನು ಇರಲಿಲ್ಲ.

೬) ಮಂತ್ರಿ ಮಂಡಲ :

ಕೌಟಿಲ್ಯನು ಹೇಳುವ ಹಾಗೆ ರಾಜ್ಯದ ಸಪ್ತಾಂಗಗಳಲ್ಲಿ ಮಂತ್ರಿ ಪರಿಷತ್ತು ಒಂದಾಗಿದೆ. ಈ ರಾಷ್ಟ್ರವೆಂಬ ರಥವನ್ನು ನಡೆಸಿಕೊಂಡು ಹೋಗಬೇಕಾದರೆ ಮಂತ್ರಿಗಳು ಬಹು ಮುಖ್ಯವಾದ ಹಾಗೂ ಅನಿವಾರ್ಯವಾದ ಅಂಗ. ರಾಜನೊಬ್ಬನಿಗೆ ತನ್ನ ಎಲ್ಲ ಕಾರ್ಯಗಳನ್ನು ನೋಡಿಕೊಳ್ಳಲು ಅಸಾಧ್ಯವಾದುದರಿಂದ ಅವನು ತನ್ನ ಕರ್ತವ್ಯಗಳನ್ನು ತನ್ನ ಮಂತ್ರಿ ಮಂಡಳದ ಜೊತೆ ಹಂಚಿಕೊಳ್ಳುವುದು ಅನಿವಾರ್ಯವಾಗಿತ್ತು. ಮಹಾಭಾರತದಲ್ಲಿ ಹೇಳಿರುವಂತೆ ಪ್ರಾಣಿಗಳು ಮೋಡಗಳನ್ನು, ಬ್ರಾಹ್ಮಣರು ವೇದಗಳನ್ನು, ಹೆಣ್ಣು ಮಗಳು ತನ್ನ ಗಂಡನನ್ನು ಅವಲಂಬಿಸಿರುವಂತೆ ರಾಜನು ತನ್ನ ಮಂತ್ರಿಗಳನ್ನು ಅವಲಂಬಿಸಬೇಕೆಂದು ಹೇಳಿದೆ. ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ಮಂತ್ರಿಮಂಡಳವಿತ್ತು. ಈ ಮಂತ್ರಿಗಳು ಸುಲ್ತಾನನಿಗೆ ಆಡಳಿತದಲ್ಲಿ ಸಹಾಯವನ್ನು ಮಾಡುತ್ತಿದ್ದರು. ಈ ಮಂತ್ರಿಗಳ ಸಂಖ್ಯೆ ನಿರ್ಧಿಷ್ಟವಾಗಿರದೆ ಕಾಲಕಾಲಕ್ಕೆ ಬದಲಾಗುತ್ತಿತು. ಮಂತ್ರಿಗಳು ಸುಲ್ತಾನನಿಂದ ನೇಮಿಸಲ್ಪಡುತ್ತಿದ್ದರು. ಆದ್ದರಿಂದ ಅವರು ಸುಲ್ತಾನನನಿಗೆ ವಿಧೇಯಕರಾಗಿರುತ್ತಿದ್ದರು. ಪ್ರತಿಯೊಬ್ಬ ಮಂತ್ರಿಯೂ ಸ್ಥಿರವಾದ ನಿರ್ಧಿಷ್ಟ ಸಂಖ್ಯೆಯ ಸೈನ್ಯವನ್ನು ಹೊಂದಿರುತ್ತಿದ್ದರು. ಅವರ ಸ್ಥಾನಮಾನಗಳು ಅವರು ರಾಜನ ಸೇವೆಗೆ ಒದಗಿಸಿದ ಸೇನಾ ತುಕಡಿಯ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು.[೧೮]

೧) ವಕೀಲ್-ಅಲ್-ಸಲ್ತನತ್ :

ಸುಲ್ತಾನನ ನಂತರದ ಸ್ಥಾನವನ್ನು ಹೊಂದಿರುವಂತಹ ಪ್ರಧಾನ ಮಂತ್ರಿಯನ್ನು 'ವಜೀರ್' ಅಥವಾ ವಕೀಲ್-ಅಲ್-ಸಲ್ತನತ್' ಎಂದು ಕರೆಯುತ್ತಿದ್ದರು. ಆಸ್ಥಾನದ ಪ್ರಮುಖ ವ್ಯಕ್ತಿಯಾಗಿದ್ದ ವಜೀರನು ತನ್ನ ಕೈಕೆಳಗಿನ ಅಧಿಕಾರಿಗಳ ಸಹಾಯದಿಂದ ರಾಜ್ಯಾಡಳಿತವನ್ನು ಮುನ್ನಡೆಸುತ್ತಿದ್ದನು. ಬಿಜಾಪುರ ರಾಜ್ಯದಲ್ಲಿ ಈ ವಜೀರನನ್ನು ವಕೀಲ್-ಅಲ್-ಸಲ್ತನತ್, ವಜೀರ್ ಅಜಮ್ ಮತ್ತು ಮೀರ ಜಮ್ಲಾ ಹೀಗೆ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದರು. ಈತನು ರಾಜ್ಯದ ಇತರ ಭಾಗಗಳಿಂದ ನೆರೆಯ ರಾಜ್ಯಗಳಿಂದ ಗೂಢಚಾರರು ಮತ್ತು ಇತರ ಅಧಿಕಾರಿಗಳು ರವಾನಿಸಿದ ವರದಿಗಳನ್ನು ದಿನಾಲು ಬೆಳಿಗ್ಗೆ ದರ್ಬಾರಿನ ತನ್ನ ಪ್ರತ್ಯೇಕ ಕೋಣೆಯಲ್ಲಿ ಮಂತ್ರಿಗಳೊಂದಿಗೆ ಚರ್ಚಿಸುತ್ತಿದ್ದನು.[೧೯]

ವಜೀರನು ಸುಲ್ತಾನನು ಹೊರಡಿಸಿದ ಎಲ್ಲಾ ಫರ್ಮಾನುಗಳಿಗೆ ಅದರ ಕೆಳಗಿನ ಎಡಗಡೆಯ ಮೂಲೆಯಲ್ಲಿ ತನ್ನ ಮುದ್ರೆಯನ್ನು ಹಾಕುತ್ತಿದ್ದನು. ಅಲ್ಲದೆ ಸುಲ್ತಾನನಿಗೆ ಆಂತರಿಕ ಮತ್ತು ಬಾಹ್ಯ ವಿಷಯಗಳಿಗೆ ಸಂಬಂಧಿಸಿದಂತೆ ಸಲಹೆ ನೀಡುತ್ತಿದ್ದನು. ಇಸ್ಮಾಯಿಲ್ ಆದಿಲ್‌ಖಾನ ಮತ್ತು ಒಂದನೆಯ ಇಬ್ರಾಹಿಮ ಆದಿಲ್‌ಶಾಹರು ಕ್ರಮವಾಗಿ ಅಸದಖಾನನ ಸಲಹೆಗಳನ್ನು ಕೇಳುತ್ತಿದ್ದರು. ಸುಲ್ತಾನನು ಅನಾರೋಗ್ಯದಿಂದ ಬಳಲುತ್ತಿದ್ದರೆ ಇಲ್ಲವೇ ಅಪ್ರಾಪ್ತನಾಗಿದ್ದರೆ, ವಜೀರನ ಪಾತ್ರ ಮುಖ್ಯವಾಗಿರುತ್ತಿತ್ತು. ಉದಾಹರಣೆಗಾಗಿ ಬಿಜಾಪುರವನ್ನಾಳಿದ ಒಂಬತ್ತು ಜನ ಸುಲ್ತಾನರಲ್ಲಿ ಹೆಚ್ಚು ಜನರು ಅಪ್ರಾಪ್ತ ವಯಸ್ಸಿನಲ್ಲಿ ಸಿಂಹಾಸನವನ್ನೇರಿದ

[illegible]

[illegible]

[illegible]

[illegible]

ಕಾರಣ ವಜೀರಗಳೇ ಅವರ ರಾಜಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸಿದರು. ಯೂಸುಫ ನಂತರ ಇಸ್ಮಾಯಿಲನು ಅಧಿಕಾರಕ್ಕೆ ಬಂದಾಗ ಕಮಾಲಖಾನ ಅವನ ರಾಜಪ್ರತಿನಿಧಿಯಾಗಿದ್ದನು.[೨೦] ಒಂದನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿ ಅಸದಖಾನನು ಅವನ ರಾಜಪ್ರತಿನಿಧಿಯಾಗಿ ಐದು ವರ್ಷ ಕೆಲಸ ಮಾಡಿದನು.[೨೧] ಎರಡನೆ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿ ಕಮಲ್‌ಖಾನ[೨೨], ಕಿಶ್ವರಖಾನ[೨೩], ಇಕ್ಲಾಸಖಾನ[೨೪] ಶಹಾ ಅಬುಲ ಹಸನ[೨೫] ಮತ್ತು ದಿಲಾವರಖಾನ[೨೬]ರು ಅವನ ಪ್ರತಿನಿಧಿಗಳಾಗಿದ್ದರು. ಇವರೆಲ್ಲರೂ ಅಧಿಕಾರದಾಹಿಗಳಾಗಿದ್ದು, ಎಲ್ಲರೂ ಸ್ವತಃ ಸುಲ್ತಾನರಾಗಲು ಪ್ರಯತ್ನಿಸಿದರು.

ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ರಾಜಪ್ರತಿನಿಧಿಯಾದ ದಿಲಾವರಖಾನ ಹಬಶಿಯು ಆಗಾಗ 'ವಕೀಲ್' ಎಂದು ಕರೆದುಕೊಂಡಿದ್ದಾನೆ. ಇನ್ನು ಕೆಲವು ವೇಳೆ ತನನ್ನು 'ವಜೀರ' ಎಂದು ಕರೆದುಕೊಂಡಿದ್ದಾನೆ.[೨೭] ಎರಡನೆಯ ಇಬ್ರಾಹಿಮ ಆದಿಲ್‌ಶಾಹನು 'ರೂಮಿಖಾನನನ್ನು ವಜೀರ ಎಂದು ಕರೆಯದೇ 'ಪೇಶ್ವೆ' ಎಂದು ಕರೆದನು. ನಂತರದಲ್ಲಿ ಇದೇ ಅಧಿಕಾರ ಸ್ಥಾನವನ್ನು ಹೊಂದಿದ ಇಖ್ಲಾಸ್‌ಖಾನ ಹಬಶಿಯನ್ನು 'ವಜೀರ' ಎಂದು ಸಂಬೊಧಿಸಿದನು.[೨೮] ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಈ ಉನ್ನತ ಹುದ್ದೆಯನ್ನು ಹೊಂದಿದವನನ್ನು 'ವಜೀರ' ಎಂದು ಹೆಸರಿಸಲಾಯಿತು. ಇವನ ಕಾಲದಲ್ಲಿ ಖವಾಸಖಾನನು ವಕೀಲನಾಗಿ ಸುಮಾರು ಎಂಟು ವರ್ಷಗಳ ಕಾಲ ಕಾಲನಿರ್ವಹಿಸಿದನು.[೨೯]

ವಕೀಲನು ಬಿಜಾಪುರದ ಸೈನ್ಯದ ಮಹಾ ದಂಡನಾಯಕನಾಗಿದ್ದರಿಂದ ಸೇನೆಯ ದಕ್ಷತೆ, ಪಾಲನೆ, ಶಿಸ್ತುಗಳಿಗೆ ಅವನೇ ಜವಾಬ್ದಾರನಾಗಿದ್ದನು. ಈತನ ಕೈಕೆಳಗಿನ ಅಧಿಕಾರಿಗಳು ಎಲ್ಲ ದಾಖಲೆಗಳನ್ನು ಇಡುತ್ತಿದ್ದರು. ಅಲ್ಲದೇ ಸೇನಾಧಿಕಾರಿಗಳಿಗೆ ಮತ್ತು ಸೈನಿಕರಿಗೆ ಅವರ ವೇತನವನ್ನು ವಿತರಿಸುತ್ತಿದ್ದನು. ವಕೀಲನು ವಿದೇಶಾಂಗ ಮಂತ್ರಿಯೂ ಆಗಿದ್ದರಿಂದ ಆತನು ಬದಲಾವಣೆಯಾದರೆ, ವಿದೇಶಾಂಗ ನೀತಿಯಲ್ಲಿ ಬದಲಾವಣೆಗಳಾಗುತ್ತಿದ್ದವು.

೨) ಅಮೀರ್–ಇ–ಜುಮ್ಲಾ :

ವಜೀರನ ನಂತರ ಅತ್ಯಂತ ಮಹತ್ವವಾದ ಸ್ಥಾನವನ್ನು ಹಣಕಾಸಿನ ಮಂತ್ರಿಯು ಹೊಂದಿರುತ್ತಿದ್ದನು. ಮೊಗಲರು ತಮ್ಮ ಹಣಕಾಸಿನ ಮಂತ್ರಿಯನ್ನು ದಿವಾನ–ಇ–ಆಲಾ ಎಂದು ಕರೆದರೆ, ಆದಿಲ್‌ಶಾಹಿಗಳು ತಮ್ಮ ಹಣಕಾಸಿನ ಮಂತ್ರಿಯನ್ನು 'ಅಮೀರ್–ಇ–ಜಮ್ಲಾ ಎಂದು ಕರೆದರು. ಈ ಹಣಕಾಸಿನ ಮಂತ್ರಿಯ ಪ್ರಮುಖ ಕಾರ್ಯವೆಂದರೆ ರಾಜ್ಯದ ಹಣಕಾಸಿನ ವ್ಯವಹಾರಗಳನ್ನು ನೋಡುಕೊಳ್ಳುವುದಾಗಿತ್ತು. ನಿಜವಾಗಿ ಹಣಕಾಸಿನ ನಿಯಂತ್ರಣವು ಪ್ರಧಾನ ಮಂತ್ರಿ (ವಜೀರ)ಯ ಕೈಯಲ್ಲಿದ್ದರೂ ಕೂಡ ಅಮೀರ–ಇ–ಜುಮ್ಲಾ ಎಲ್ಲ ವಿವರಗಳಲ್ಲಿ ಸಹಾಯ ಮಾಡುತ್ತಿದ್ದನು.[೩೦] ಆತನು ವಿವಿಧ ಮೂಲದ ವರಮಾನಗಳಾದ ಸಾಮಂತರಾಜರ ವಾರ್ಷಿಕ ಪೊಗದಿ, ರಾಜನಿಗೆ ಸೇರಿದ ಭೂಮಿಯ ವರಮಾನ, ಹಾಗೂ ಇನ್ನಿತರ ಸಾಮಾನ್ಯ ತೆರಿಗೆಗಳನ್ನು

ಸಂಗ್ರಹಿಸುವ ಮತ್ತು ಆದಾಯ ವೆಚ್ಚಗಳ ಸೂಕ್ತವಾದ ಲೆಕ್ಕ ಪತ್ರಗಳನ್ನು ಇಡುವುದು ಇವನ ಪ್ರಮುಖ ಕರ್ತವ್ಯವಾಗಿತ್ತು.

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಹಿಂದೂ ರಾಜರಿಂದ ಮೂವತ್ತು ದಶಲಕ್ಷ ರೂಪಾಯಿಗಳನ್ನು ಕಪ್ಪು ಕಾಣಿಕೆಯ ರೂಪದಲ್ಲಿ ಸಂಗ್ರಹವಾಗುತ್ತಿತು. ಆದರೆ ಈ ವರಮಾನವು ಸ್ಥಿರವಾಗಿರಲಿಲ್ಲ. ಇವನ ಕಾಲದಲ್ಲಿ ಕರ್ನಾಟಕದ ಇತರ ಭಾಗಗಳಿಂದ ಬರುತ್ತಿದ ೫,೨೫,೬೧,೬೪೯ ರೂಪಾಯಿಗಳು ವಾರ್ಷಿಕ ಪೊಗದಿ ಬರುತ್ತಿತ್ತು.[೩೧] ಈ ವಾರ್ಷಿಕ ಪೊಗದಿಯನ್ನು ಅಮೀರ–ಇ–ಜಮ್ಲಾನು ಸಂಗ್ರಹಿಸುತ್ತಿದ್ದನು.

ಹಣಕಾಸಿನ ಅಮೀರ–ಇ–ಜಮ್ಲಾ ಎಂಬ ಅಧಿಕಾರಿಯು ಅಧಿಕಾರಕ್ಕೆ ಬಂದ ಮೇಲೆ ವಕೀಲನ ಕೈಯಲ್ಲಿದ್ದ ಕೋಶಾಧಿಕಾರಕ್ಕೆ ಸಂಬಂಧಿಸಿದ ಅಧಿಕಾರಗಳ ಕಡಿಮೆಯಾದವು. ಆದರೆ ಸಂಪೂರ್ಣ ಬಿಜಾಪುರದ ಇತಿಹಾಸದಲ್ಲಿ ಈ ಹುದ್ದೆಗೆ ಸಂಬಂಧಿಸಿದಂತೆ ಎಲ್ಲ ಅಧಿಕಾರಗಳು ವಕೀಲನ ಕೈಯಲ್ಲಿದ್ದವು.[೩೨] ಕೆಲವೊಂದು ಬಾರಿ ಎರಡು ಹುದ್ದೆಗಳಿಗೆ ಸಂಬಂಧಿಸಿದ ಅಧಿಕಾರಗಳನ್ನು ಒಬ್ಬನೇ ಅಧಿಕಾರಿಯು ಹೊಂದಿರುತ್ತಿದ್ದನು. ಒಂದನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲಕ್ಕೆ ವಕೀಲ(ಪ್ರಧಾನಿ) ಅಸದಖಾನನು ವಕೀಲ ಮತ್ತು ಅಮೀರ–ಇ–ಜುಮ್ಲಾ ಎಂಬ ಎರಡು ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಒಂದನೆಯ ಅಲಿ ಆದಿಲ್‌ಶಾಹನ ಮಂತ್ರಗಳಾದ ಮುಸ್ತಫಾಖಾನ ಅರ್ಧಿಸ್ಥಾನಿ ಹಾಗೂ ಅಫಝುಲ್‌ಖಾನ ಶಿರಾಜಿ ಮತ್ತು ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಇಬ್ಬರು ಮಂತ್ರಿಗಳಾದ ಇಖ್ಲಾಸಖಾನ ಮತ್ತು ದಿಲಾವರಖಾನ ಈ ಎರಡು ಹುದ್ದೆಗಳ ಕರ್ತವ್ಯದ ಹೊರೆ ಹೊತ್ತಿದ್ದರು.[೩೩]

೩) ಮುಸ್ತಾಫಿ–ಅಲ್–ಮುಲ್ಕ :

ಹಣಕಾಸಿನ ವ್ಯವಹಾರಗಳಲ್ಲಿ ಅಮೀರ್–ಇ–ಜುಮ್ಲಾನಿಗೆ ಸಹಾಯ ಮಾಡಲು ಒಬ್ಬ ಸಹಾಯಕ ಅಧಿಕಾರಿ ಇರುತ್ತಿದ್ದು, ಅವನನ್ನು 'ಮುಸ್ತಾಫಿ–ಅಲ್–ಮುಲ್ಕ' ಎಂದು ಕರೆಯುತ್ತಿದ್ದರು. ಒಂದು ರೀತಿಯಲ್ಲಿ ಇವನು ಹಣಕಾಸಿನ ನಿಯಂತ್ರಣಾಧಿಕಾರಿಯಾಗಿದ್ದನು. ಅವನ ಮುಖ್ಯ ಕೆಲಸವೆಂದರೆ ರಾಜ್ಯದ ಖರ್ಚು ವೆಚ್ಚಗಳ ದಾಖಲೆಗಳನ್ನು ಇಡುವುದು. ಮತ್ತು ಹಣಕಾಸಿನ ವಿಭಾಗಗಳನ್ನು ಆದಿಲ್‌ಶಾಹಿಗಳು ಹಿಂದೂಗಳ ಕೈಗೆ ಒಪ್ಪಿಸಿದರು. ಇದರಲ್ಲಿ ಯಾವುದೇ ಮುಸ್ಲೀಮರು ತೆಲೆ ಹಾಕುತ್ತಿರಲಿಲ್ಲ. ಏಕೆಂದರೆ ಈ ವಿಭಾಗಕ್ಕೆ ಒಂದು ವಿಶಿಷ್ಟ ಪ್ರಕಾರದ ಜ್ಞಾನ ಬೇಕಾಗುತ್ತಿತ್ತು. ಇದನ್ನು ರೂಪಿಸುವ ಕೆಲಸ ಮತ್ತು ಬೇಸರ ತರುವಂತಹ ಸಂಗತಿಗಳನ್ನು ವಿವರಿಸುವಂತಹ ಗೊಂದಲವಾದ ಜಮಾ ಖರ್ಚುಗಳನ್ನು ವಂಶಪಾರಂಪರ್ಯವಾಗಿ ಮಾಡುತ್ತ ಬಂದಂತಹ ಜನರಿಗೆ ಬಿಟ್ಟು ಬಿಡಲಾಗಿತ್ತು. ಪ್ರಾಚೀನ ಕಾಲದಿಂದಲೂ ಈ ಹಣಕಾಸಿನ ವ್ಯವಹಾರಗಳನ್ನು ಹಿಂದೂ ಜನರು ಮಾಡುತ್ತಿದ್ದರಿಂದ ಬಹುಶಃ ಆದಿಲ್‌ಶಾಹಿಗಳು ಕೂಡ ಖರ್ಚು, ವ್ಯಚ್ಚಗಳ ದಾಖಲೆಗಳನ್ನು ಬರೆದಿಡುವುದು ಇವರಿಗೆ ಕೊಟ್ಟಿದ್ದರು.[೩೪]

೪) ಪೇಶ್ವೆ :

ಬಹಮನಿ ಆಸ್ಥಾನದಲ್ಲಿ ಪೇಶ್ವೆಯು ವಕೀಲ–ಅಲ್–ಸಲ್ತನತ್ ಅಥವಾ ಪ್ರಧಾನ ಮಂತ್ರಿಯ ಆಪ್ತ ಕಾರ್ಯಾಲದಲ್ಲಿ ಕಾರ್ಯನಿರ್ವಹಿಸುತ್ತಿದ್ದನು. ಆದಿಲ್‌ಶಾಹಿಗಳ ಆಸ್ಥಾನದಲ್ಲಿ ಪೇಶ್ವೆ ಎಂಬ ಅಧಿಕಾರಿಯ ಸ್ಥಾನ ಮಾನವು ಖಾಯಂ ಹುದ್ದೆಯಾಗಿರುವುದು ಕಂಡುಬರುವುದಲ್ಲಿ. ಬಹಮನಿ ಸಾಮ್ರಾಜ್ಯ ಅಸ್ತಿತ್ವದಲ್ಲಿದ್ದಾಗ 'ಪೇಶ್ವೆ' ಎಂಬುದು ಒಂದು ಮಂತ್ರಿಯ ಪಧವಿಯಾಗಿತ್ತು.[೩೫] ಅಹಮ್ಮದನಗರ ನಿಜಾಮಶಾಹನ ಆಸ್ಥಾನದಲ್ಲಿ ಪೇಶ್ವೆ ಪ್ರಧಾನ ಮಂತ್ರಿಯಾಗಿ ಕಾಣಿಸಿಕೊಂಡನು. ಅವನು ಬಿಜಾಪುರ ದರ್ಬಾರನಲ್ಲಿ ವಕೀಲ–ಅಲ್–ಸಲ್ತನತ ಅಥವಾ ವಜೀರನು ಹೊಂದಿರುವ ಸ್ಥಾನ–ಮಾನಗಳನ್ನೆಲ್ಲಾ ಹೊಂದಿದ್ದನು. ಅಹಮ್ಮದನಗರದ ರಾಜಕುಮಾರಿ ಚಾಂದಬೀಬಿಯು ಮೊದಲ ಬಾರಿಗೆ ಬಿಜಾಪುರದ ಆಸ್ಥಾನದಲ್ಲಿ ಅಫದಲ್‌ಖಾನನನ್ನು ಪೇಶ್ವೆ ಎಂಬ ಮಂತ್ರಿಯನ್ನು ನೇಮಕ ಮಾಡಿದಳು.[೩೬] ಅಲ್ಲದೆ ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ರೂಮಿಖಾನನನ್ನು ವಜೀರ ಎಂದು ಕರೆಯದೇ 'ಪೇಶ್ವೆ' ಎಂದು ಕರೆದಿದ್ದನ್ನು ಗಮನಿಸಬಹುದು. ಒಟ್ಟಾರೆಯಾಗಿ ಹೇಳಬೇಕಾದರೆ ಈ ಹುದ್ದೆ ಶಾಶ್ವತವಾಗಿ ಇರಲ್ಲಿಲವೆಂದು ತಿಳಿದುಬರುತ್ತದೆ.

೫) ಅರಮನೆಯ ಉಸ್ತುವಾರಿ ಅಧಿಕಾರಿ (Controller of Royal Household) :

ಅರಮನೆಯ ಉಸ್ತುವಾರಿ ಅಧಿಕಾರಿಯು ಜೌದ್ಯೋಗಿಕ ಅಥವಾ ಪಾರಿಭಾಷಿಕವಾಗಿ ಸುಲ್ತಾನನ ಖಾಸಗಿ ಕೆಲಸ–ಕಾರ್ಯಗಳ ಅಧಿಕಾರಿಯಾಗಿದ್ದರೂ, ಆಡಳಿತದಲ್ಲಿ ಅತೀ ಗಣನೀಯವಾದ ಪ್ರಭಾವಶಾಲಿ ವ್ಯಕ್ತಿಯಾಗಿದ್ದರು. ಸುಲ್ತಾನನ ಅಂಗರಕ್ಷಕರು ಮತ್ತು ಸೇವಕರು ಈತನ ಕೈಕೆಳಗೆ ಕಾರ್ಯನಿರ್ವಹಿಸುತ್ತಿದ್ದರು. ಅಂಗರಕ್ಷಕರು ಮತ್ತು ಸೇವಕರು ಕೆಲವು ವೇಳೆ ವಿಶ್ವಾಸಘಾತಕ ರಾಜಪ್ರತಿನಿಧಿಗಳು ಹಾಗೂ ಪ್ರಧಾನ ಮಂತ್ರಿಗಳು ಸುಲ್ತಾನನ ಸ್ಥಾನಮಾನಗಳನ್ನು ಮತ್ತ ಅಧಿಕಾರಗಳನ್ನು ಕಸಿದುಕೊಂಡು ಸರ್ವಾಧಿಕಾರಿಗಳಾಗುವುದಕ್ಕಾಗಿ ಸುಲ್ತಾನನಿಗೆ ಪ್ರಾಣಾಪಾಯ ಉಂಟು ಮಾಡಿದಾಗ ರಕ್ಷಣೆ ಒದಗಿಸುತ್ತಿದ್ದರು.[೩೭]

ಈ ಸೇವಕರು ಕಾರ್ಖಾನೆಗಳಲ್ಲಿ ಕೆಲಸಗಳನ್ನು ಮಾಡುತ್ತಿದ್ದರಲ್ಲದೆ ಯುದ್ಧ ಸಮಯದಲ್ಲಿ ಕುದರೆ, ಆನೆ ಮತ್ತು ಒಂಟೆಗಳನ್ನು ಬೇರೆ ಕಡೆಗೆ ಸಾಗಿಸುತ್ತಿದ್ದರು. ಅಂಗರಕ್ಷಕರು ಮತ್ತು ಸೇವಕರು ಅರಮನೆ ಉಸ್ತುವಾರಿ ಅಧಿಕಾರಿಯ ಆದೇಶದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದರು.

೬) ಗೂಢಚಾರರು (Intelligence department) :

ಈ ಅಧಿಕಾರಿಗಳು ರಾಜಧಾನಿ ಹಾಗೂ ರಾಜ್ಯದ ಇತರ ಭಾಗಗಳಲ್ಲಿ ಸಂಭವಿಸುವ ರಹಸ್ಯ ಘಟನೆಗಳ ವಿಷಯಗಳನ್ನು ತಿಳಿದುಕೊಳ್ಳಲು ಸುಲ್ತಾನರು ಗೂಢಚಾರರನ್ನು ಹೊಂದಿರುತ್ತಿದ್ದರು. ಈ ಗೂಢಚಾರರು ಹೆಚ್ಚಿನ ಪ್ರಮಾಣದಲ್ಲಿ ಬ್ರಾಹ್ಮಣರಾಗಿದ್ದರು. ಅವರು ವಜೀರನ ಅಧಿಕಾರ ವ್ಯಾಪ್ತಿಗೆ ಒಳಪಡುತ್ತಿದ್ದರು. ಆದರೆ ಅವರು ಯಾವುದೇ ಅಡೆತಡೆಗಳಿಲ್ಲದೆ ಸುಲ್ತಾನನನ್ನು ಬೇಟಿಯಾಗುವ ಸ್ವಾತಂತ್ರ್ಯವನ್ನು ಹೊಂದಿದ್ದರು.

ರಾಜಧಾನಿಯಲ್ಲಿ ಮತ್ತು ರಾಜ್ಯದ ಭಾಗಗಳಲ್ಲಿ ಘಟಿಸುವ ಪ್ರಚಲಿತ ಘಟನೆಗಳ ವಿವರಣೆಯನ್ನು ಒದಗಿಸುತ್ತಿದ್ದರು. ಅಲ್ಲದೇ ಯುದ್ಧದ ಸಮಯದಲ್ಲಿ ಅವರ ಸೇವೆಯು ವಿಶೇಷ ಮೌಲ್ಯಗಳನ್ನು ಹೊಂದಿರುತ್ತಿದ್ದವು. ವೈರಿಗಳ ಚಲನವಲನಗಳನ್ನು ಮತ್ತು ಅವರ ಮುಂದಿನ ಯೋಜನೆಗಳನ್ನು ವರದಿ ಮಾಡುತ್ತಿದ್ದರು. ಇದರಿಂದ ಸುಲ್ತಾನನಿಗೆ ವೈರಿಗಳನ್ನು ಸೋಲಿಸಲು ಸುಲಭವಾಗಿತ್ತಿತ್ತು.[೩೮]

ಪ್ರಾಂತೀಯ ಆಡಳಿತ :

ಫ್ಯೂಡಲ್ ರಾಜ್ಯವನ್ನು ಆಧುನಿಕ ರಾಜಕೀಯ ಸಂಸ್ಥೆಗಳ ಮಾಪಕದಿಂದ ಅಳೆಯಲಾಗುದು. ಇಂದು ನಾವು ನೋಡುವಂತೆ ಅಧಿಕಾರಿಗಳ ಹಂಚಿಕೆ ಆಗ ಇರಲಿಲ್ಲ, ಆದರೆ ಹೊರವಲಯದ ಜಿಲ್ಲೆಗಳನ್ನೂ ರಾಜ್ಯಭಾಗಗಳನ್ನು ಕೇಂದ್ರದಿಂದ ನಿಯಂತ್ರಿಸಿ ಆಳಬೇಕಾಗಿದ್ದರಿಂದ ಆ ಅರ್ಥದಲ್ಲಿ ಇವುಗಳು ಪ್ರಾಂತಗಳಿದ್ದವು. ಅಂತೆಯೇ ಅವು ರಾಜ್ಯಕ್ಕೆ ಜೀವ ಚೈತನ್ಯವನ್ನು ತುಂಬುವ ಘಟಕಗಳಾಗಿದ್ದವು. ಕಂದಾಯವೆಲ್ಲವೂ ಅಲ್ಲಿಂದ ಬರಬೇಕಾಗುತ್ತಿತ್ತು. ಸೈನ್ಯ ಭರ್ತಿ ಮಾಡುವುದು, ಆಹಾರಧಾನ್ಯಗಳನ್ನು ಇತರ ಎಲ್ಲಾ ಜೀವನಾಗತ್ಯಗಳನ್ನೂ ಒದಗಿಸುವುದು, ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಗ್ರಾಹಕರಿಗೆ ಅಗತ್ಯವಾಗಿರುವ ವಸ್ತುಗಳನ್ನು ಉತ್ಪಾದಿಸುವುದು, ಜನರ ಜೀವನೋಪಾಯಕ್ಕಾಗಿ ವ್ಯಾಪಾರ–ವಾಣಿಜ್ಯಗಳನ್ನು ಬೆಳೆಸುವುದು, ರಾಜಧಾನಿಯ ಅದ್ದೂರಿಯ ಜೀವನಕ್ಕೆ ಸಾಂಸ್ಕೃತಿಕ ಕೇಂದ್ರವಾಗಿ ಅದು ಬೆಳಗುವುದಕ್ಕೆ ಅಗತ್ಯವಾದ ಅನೇಕ ಅಗತ್ಯಗಳನ್ನು ಪೊರೈಸುವುದು ವಿಶಾಲ ರಾಜ್ಯದ ಪ್ರತಿಯೊಂದು ಭಾಗವೂ ನಿರ್ವಹಿಸಬೇಕಾಗಿದ್ದ ಕರ್ತವ್ಯಗಳಾಗಿದ್ದಲ್ಲದೇ ಕಾನೂನು–ಸುವ್ಯವಸ್ಥೆಯನ್ನೂ ನೋಡಿಕೊಳ್ಳಬೇಕಾಗಿತ್ತು. ಸದಾಕಾಲವು ಕಬಳಿಸಲು ಹೊಂಚು ಹಾಕುತ್ತಿದ್ದ ನೆರೆಯ ವೈರಿಗಳಿಂದ ರಕ್ಷಣೆ ಮಾಡಿಕೊಳ್ಳಬೇಕಾಗಿತ್ತು. ರಾಜ್ಯಾದ್ಯಂತ ಕೋಟೆಗಳು ಮತ್ತು ದುರ್ಗಗಳು ಇದ್ದುವು. ಅವುಗಳಿಗೆ ಸರಿಯಾದ ಕಾವಲು ಪಡೆಯನ್ನು ಕೊಟ್ಟು ಪೂರೈಸಬೇಕಾಗಿತ್ತು. ಆದ್ದರಿಂದ ಹಿಂದಿನಿಂದಲೂ ಪ್ರಾಂತೀಯ ವ್ಯವಸ್ಥೆಯೊಂದನ್ನು ವಿಕಾಸಪಡಿಸಲಾಗಿತ್ತು.

ಆದಿಲ್‌ಶಾಹಿಗಳು ವಿಸ್ತಾರವಾದ ಸಮ್ರಾಜ್ಯದ ಅಧಿಪತಿಗಳಾಗಿದ್ದರು. ಇವರ ಫರ್ಮಾನಗಳು ಗಮನಿಸಿದಾಗ ಅವರ ಸಾಮ್ರಾಜ್ಯ ಅರಬ್ಬೀ ಸಮುದ್ರದಿಂದ ಬಂಗಾಳದ ಕೊಲ್ಲಿವರೆಗೂ ವಿಸ್ತಾರಗೊಂಡಿತ್ತು. ಎಂದು ತಿಳಿಯಬಹುದು. ಮಹಮ್ಮದ ಆದಿಲ್‌ಶಾಹನು ಕರ್ನಾಟಕದ ದಂಡಯಾತ್ರೆಯನ್ನು ಕೈಗೊಂಡು ತನ್ನ ಸಾಮ್ರಾಜ್ಯವನ್ನು ಜಿಂಜಿಯವರೆಗೆ ವಿಸ್ತರಿಸಿದನು. ಇದರಿಂದ ಅವರ ಸಾಮ್ರಾಜ್ಯದ ವಿಸ್ತಾರದ ಅರಿವು ಉಂಟಾಗುತ್ತದೆ. ವಿಸ್ತಾರವಾದ ಸಾಮ್ರಾಜ್ಯದ ಮೇಲೆ ಒಂದೇ ವ್ಯಕ್ತಿ ಆಡಳಿತ ನಡೆಸುವುದು ಕಷ್ಟದ ಕೆಲಸ. ಇಂದು ಕೂಡ ಆಡಳಿತದ ಅನುಕೂಲಕ್ಕಾಗಿ ರಾಷ್ಟ್ರವನ್ನು ರಾಜ್ಯ–ವಿಭಾಗ–ಜಿಲ್ಲೆ–ತಾಲೂಕ–ಹೋಬಳಿ–ಗ್ರಾಮ ಎಂದು ವಿಂಗಡಿಸಿ ಅವುಗಳ ಮೇಲೆ ರಾಷ್ಟ್ರಪತಿ–ರಾಜ್ಯಪಾಲ–ವಿಭಾಗಾಧಿಕಾರಿ–ಜಿಲ್ಲಾಧಿಕಾರಿ–ತಹಸೀಲ್ದಾರ–ಗ್ರಾಮ ಲೆಕ್ಕಾಧಿಕಾರಿಗಳನ್ನು ನಿಯಮಿಸಲಾಗಿರುತ್ತದೆ. ಇದರಲ್ಲಿ ರಾಷ್ಟ್ರಪತಿಯೇ ಪರಮೋಚ್ಚ ಅಧಿಕಾರಿಯಾಗಿರುವಂತೆ ಹಿಂದೆ ಸುಲ್ತಾನನೇ ಸರ್ವಶ್ರೇಷ್ಠ ಅಧಿಕಾರಿಯಾಗಿದ್ದನು.

ಬಹಮನಿಗಳ ಕಾಲದ ಈ ಪ್ರಾಂತೀಯ ಆಡಳಿತದ ಮಾದರಿಯ ಮೇಲೆ ಬಿಜಾಪುರದ ಆದಿಲ್‌ಶಾಹಿಗಳು ಕೆಲವು ಮಾರ್ಪಾಡುಗಳೊಂದಿಗೆ ತಮ್ಮ ಪ್ರಾಂತೀಯ ಆಡಳಿತದ ರಚನೆ ಮಾಡಿಕೊಂಡರು. ಬಹಮನಿಗಳು 'ತರಫ' ಮತ್ತು ತರಫದಾರ್ ಎಂಬ ಪದಗಳ ಬದಲಾಗಿ 'ಜಹಗೀರ್' ಮತ್ತು ಜಾಹಗೀರದಾರ್ ಎಂಬ ಪದಗಳನ್ನು ಬಳಸಿದರು.[೩೯] ಬಹಮನಿಗಳ ಕಾಲದಲ್ಲಿ ಒಂದು ತರಫ(ಪ್ರಾಂತ)ವಾಗಿದ್ದ ಬಿಜಾಪುರ ಯೂಸುಫನಿಂದ ಸ್ವತಂತ್ರ ರಾಜ್ಯವಾಗಿ ಸ್ಥಾಪಿಸಲ್ಪಟ್ಟಾಗ ಅದು ತುಂಬಾ ಚಿಕ್ಕದಾಗಿತ್ತು. ಆದ್ದರಿಂದ ಅದನ್ನು ಪ್ರಾಂತಗಳಾಗಿ ವಿಂಗಡಿಸುವ ಅವಶ್ಯಕತೆ ಬೀಳಲಿಲ್ಲ. ಯೂಸುಫನು ಗೋವೆಯನ್ನು ಗೆದ್ದುಕೊಂಡ ಮೇಲೆ ಅದಕ್ಕೆ ಮಾತ್ರ 'ಐನ್-ಉಲ್-ಮುಲ್ಕ' ಎಂಬ ಗವರ್ನರನನ್ನು ನೇಮಿಸಿದನು.[೪೦] ರಾಜ್ಯದ ಉಳಿದ ಭಾಗಗಳೆಲ್ಲ ಸುಲ್ತಾನನ ನೇರ ಆಡಳಿತಕ್ಕೆ ಸೇರಿದ ಭಾಗಗಳಾಗಿ ಉಳಿದುಕೊಂಡವು. ಮುಂದೆ ಮಹಮ್ಮದ ಆದಿಲ್‌ಶಾಹನ ಕಾಲಕ್ಕೆ ಬಿಜಾಪುರವು ದಕ್ಷಿಣದಲ್ಲಿ ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದ ವೆಲ್ಲೂರು ಮತ್ತು ಜಿಂಜಿಯವರೆಗಿನ ಪ್ರದೇಶಗಳನ್ನು ಗೆದ್ದಾಗ ರಾಜ್ಯವನ್ನು ವಿಭಾಗ ಮಾಡುವ ಅವಶ್ಯಕತೆಯುಂಟಾಗಿ ಕರ್ನಾಟಕದಲ್ಲಿ ಗೆದ್ದುಕೊಂಡ ಭಾಗಗಳನ್ನು ಹಾಗೂ ಗುಡ್ಡಗಾಡು ಪ್ರದೇಶದ ಜನರು ವಿರೋಧಿ ಭಾವನೆಗಳನ್ನು ಹೊಂದಿದ್ದ ಕಾರಣ ಬಿಜಾಪುರದ ಕೇಂದ್ರ ಸರಕಾರವು ಅಂತಹ ವಿಭಾಗಗಳನ್ನು ಅವುಗಳ ಆಡಳಿತವನ್ನು ಸ್ಥಳೀಯ ನಾಯಕರಿಗೆ ವಹಿಸಿಕೊಡಲು ನಿರ್ಧರಿಸಿ, ಅವುಗಳು ಆದಿಲ್‌ಶಾಹಿ ಸಾರ್ವಭೌಮತ್ವವನ್ನು ಒಪ್ಪಿಕೊಂಡು ವಾರ್ಷಿಕ ಪೊಗದಿ ಕೊಡುವಂತೆ ಷರತ್ತು ವಿಧಿಸಲಾಯಿತು.[೪೧] ಉದಾಹರಣೆಗಾಗಿ ಚಿಕ್ಕನಾಯಕನಹಳ್ಳಿಯ ರಾಜನು ಬಿಜಾಪುರದ ದಂಡನಾಯಕನಾದ ರಣದುಲ್ಲಾಖಾನನಿಗೆ ಇಪ್ಪತ್ತು ಸಾವಿರ ಹೊನ್ನಗಳನ್ನು ಕೊಟ್ಟನು. ರಣದುಲ್ಲಾಖಾನನು ಇದಕ್ಕೆ ಸಮ್ಮತಿಸಿ ಚಿಕ್ಕನಾಯಕನಹಳ್ಳಿಯ ರಾಜನನ್ನು ಆತನ ಸ್ಥಳದಲ್ಲಿಯೇ ಮುಂದುವರೆಸಿ ಆತನನ್ನು ಬಿಜಾಪುರದ ಸಾಮಂತನನ್ನಾಗಿ ಸಾರಿದನು. ಅಲ್ಲದೇ ತುಮಕೂರಿನ ನಾಯಕನು ಕೂಡ ಬಿಜಾಪುರದ ಆದಿಪತ್ಯವನ್ನು ಒಪ್ಪಿಕೊಂಡನು. ಇದೇ ತರಹ ಶ್ರೀರಂಗರಾಯನೂ ಸಹ ತನ್ನ ಶಸ್ತ್ರಗಳನ್ನು ಕೆಳಗೆ ಇಟ್ಟು ೧೫೦ ಆನೆಗಳನ್ನು ಐವತ್ತು ಸಾವಿರ ಹೊನ್ನುಗಳನ್ನು ಕೊಡಲು ಒಪ್ಪಿಕೊಂಡು ಸಾಮಂತನಾದನು. ಹೀಗೆ ಮಹಮ್ಮದ ಆದಿಲ್‌ಶಾಹನು ಕರ್ನಾಟಕದ ಮೇಲೆ ದಾಳಿ ಮಾಡಿ ಅವರನ್ನು ಸೋಲಿಸಿ ಕಪ್ಪು ಕಾಣಿಕೆಗಳನ್ನು ಪಡೆದುಕೊಂಡು ಅವರಿಗೆ ಅಲ್ಲಿಯ ಆಡಳಿತವನ್ನು ಬಿಟ್ಟುಕೊಟ್ಟನು. ಈ ನೀತಿಯನ್ನು ಹಿಂದೆ ದಕ್ಷಿಣ ಭಾರತವನ್ನು ಗೆದ್ದ ಅಲ್ಲಾವುದ್ದೀನನು ಜಾಣತನವನ್ನು ತೋರಿದ್ದನ್ನು. ಆದರೆ ಮುಂದೆ ಮಹಮ್ಮದ-ಬಿನ್-ತಘಲಕನು ದಕ್ಷಿಣದ ಎಲ್ಲಾ ಪ್ರದೇಶಗಳನ್ನು ನೇರವಾಗಿ ತನ್ನ ಆಡಳಿತಕ್ಕೆ ಸೇರಿಸಿ, ತೊಂದರೆಗೆ ಒಳಗಾಗಿದ್ದನ್ನು ಗಮನಿಸಿದರೆ, ಮಹಮ್ಮದ ಆದಿಲ್‌ಶಾಹನು ದೂರದೃಷ್ಟಿಯಿಂದ ಆಂತರಿಕ ಆಡಳಿತದಲ್ಲಿ ಕೈಹಾಕದೆ ಅವರ ಆಡಳಿತವನ್ನು ಅವರಿಗೆ ಬಿಟ್ಟುಕೊಟ್ಟಿದ್ದು ಇವನ ಜಾಣತನವಾಗಿತ್ತು.

ಬಿಜಾಪುರ ರಾಜ್ಯ ವಿಸ್ತಾರವಾದಂತೆ ಸುಲ್ತಾನನಿಗೆ ಸಂಬಂಧಿಸಿದ ಭೂಮಿ ಮತ್ತು ಜಹಗೀರಗಳು ಎಂದು ಎರಡು ವಿಭಾಗಗಳಾಗಿ ವಿಂಗಡಿಸಲಾಯಿತು. ಕ್ರಿ.ಶ.೧೫೬೫ ರ ನಂತರ ಆದಿಲ್‌ಶಾಹಿಗಳ ರಾಜ್ಯ ಮೂರು ಬಗೆಯ ಪ್ರಾಂತಗಳನ್ನು ಒಳಗೊಂಡಿತ್ತು[೪೨]. ಅವುಗಳೆಂದರೆ,

೧) ಜಹಗೀರಗಳು (Jahgirs)

೨) ರಾಜನಿಗೆ ಸಂಬಂಧಿಸಿದ ಭೂಮಿ (Crown lands)

೩) ಸಾಮಂತ ರಾಜ್ಯಗಳು (Tributary states)

೧) ಜಹಗೀರಗಳು :

ಸಮಾನ್ಯವಾಗಿ ಆಡಳಿತದಲ್ಲಿರುವ ಉನ್ನತ ಹುದ್ದೆ ಹೊಂದಿರುವಂತಹ ಸರದಾರರಿಗೆ, ವರಿಷ್ಠ ಅಧಿಕಾರಿಗಳಿಗೆ ಜಹಗೀರನ್ನು ಕೊಡಲಾಗುತ್ತಿತ್ತು. ಬಿಜಾಪುರದ ಸರದಾರರಿಗೆ ಸಾಮ್ರಾಜ್ಯದ ಬಹುಭಾಗವನ್ನು ಜಹಗೀರುಗಳಾಗಿ ಕೊಡಲಾಗಿತ್ತು. ಕೆಲವು ವೇಳೆ ಸರದಾರರಿಗೆ ಒಂದಕ್ಕಿಂತ ಹೆಚ್ಚು ಪರಗಣಗಳನ್ನು ಜಹಗೀರುಗಳನ್ನಾಗಿ, ರಾಜ್ಯದ ವಿವಿಧ ಕಡೆಗಳಲ್ಲಿ ಕೊಡಲಾಗುತ್ತಿತ್ತು. ಉದಾಹರಣೆಗಾಗಿ ಇಸ್ಮಾಯಿಲ್ ಆದಿಲ್‌ಖಾನನ ಕಾಲದಲ್ಲಿ ಮಹಮ್ಮದ ಖುಸ್ರೊ ಲ್ಯಾರಿ ಎಂಬುವವನಿಗೆ 'ಅಸದಖಾನ' ಎಂಬ ಬಿರುದು ನೀಡಿ ಬೆಳಗಾವಿಯನ್ನು ಜಹಗೀರಾಗಿ ಕೊಲಾಗಿತ್ತು.[೪೩] ಮಹಮ್ಮದ ಆದಿಲ್‌ಶಾಹನು ಮಾಗಡಿಯ ಕೆಂಪೇಗೌಡನನ್ನು ಸೋಲಿಸಿದ ಪೂನಾದ ಜಹಗೀರದಾರನಾದ ಶಹಜಿಗೆ ಬೆಂಗಳೂರನ್ನು ಜಹಗೀರನ್ನಾಗಿ ನೀಡಿದನು.[೪೪]

ಈ ಜಹಗೀರುಗಳ ಅಧಿಕಾರಿಗಳಿಗೆ ಜಹಗೀರದಾರರರು ಎಂದು ಕರೆಯುತ್ತಿದ್ದರು. ಒಬ್ಬ ಜಹಗೀರದಾರನು ಸರಕಾರದ(ಜಿಲ್ಲೆ) ಜವಾಬ್ದಾರಿಯನ್ನು ಹೊತ್ತಿರುತ್ತಿದ್ದನು. ಇವರು ಸಹಜವಾಗಿ ರಾಜನ ಆಸ್ಥಾನದಲ್ಲಿಯಾಗಲಿ, ರಾಜ್ಯ ವಿಸ್ತರಣಾ ಕಾರ್ಯದಲ್ಲಾಗಲಿ ಅಥವಾ ಇನ್ನಿತರ ರಾಜ್ಯದಲ್ಲಿನ ಕಾರ್ಯಗಳಲ್ಲಿ ನಿರತರಾಗಿರುತ್ತಿದ್ದ ಕಾರಣ ಅವರು ತಮ್ಮ ಜಹಗೀರಿನಿಂದ ಹೆಚ್ಚಾಗಿ ಹೊರಗೆ ಇರುತ್ತಿದ್ದರು. ಅಸದಖಾನ ಲ್ಯಾರಿಯು ಕೆಲವು ವೇಳೆ ಬಿಜಾಪುರದಲ್ಲಿರುತ್ತಿದ್ದನು, ಇನ್ನೂ ಕೆಲವು ವೇಳೆ ತನ್ನ ಜಹಗೀರಾದ ಬೆಳಗಾವಿಯಲ್ಲಿರುತ್ತಿದ್ದನು.[೪೫] ಜಹಗೀರದಾರರು ತಮ್ಮ ಜಹಗೀರುಗಳಲ್ಲಿಲ್ಲದಿರುವಾಗ ಅವನಿಂದಲೇ ನೇಮಿಸಲ್ಪಟ್ಟ ಪ್ರತಿನಿಧಿಗಳು ಅದರ ಹೊಣೆ ಹೊತ್ತುಕೊಳ್ಳುತ್ತಿದ್ದರು. ಉದಾಹರಣೆಗಾಗಿ ಷಹಜಿಯು ಬೇರೆ ಕಾರ್ಯಕ್ಕಾಗಿ ಹೊರಗೆ ಹೋದಾಗ ಅವನ ಪ್ರತಿನಿಧಿ ದಾದಾಜಿ ಕೊಂಡದೇವನು ಜಹಗೀರಿನ ಆಡಳಿತವನ್ನು ನೋಡಿಕೊಂಡು ಹೋಗುತ್ತಿದ್ದನು.

ಜಹಗೀರದಾರನು ತನ್ನ ಜಹಗೀರಿನಲ್ಲಿ ಸಾರ್ವಭೌಮನಾಗಿಮ ಹೆಚ್ಚು ಕಡಿಮೆ ನಿರಂಕುಶಾಧಿಕಾರವನ್ನು ಅನುಭವಿಸುತ್ತಿದ್ದರು. ಅವನು ಕಂದಾಯ ವಸೂಲಿ ಮಾಡುತ್ತಿದ್ದನು. ಅತ್ಯುನ್ನತ ಸೈನ್ಯಾಧಿಕಾರಿಯಾಗಿ ತನ್ನ ಪ್ರದೇಶಗಳಲ್ಲಿ ಸರ್ವೋತಮ ದಂಡನಾಯಕನಾಗಿ ವರ್ತಿಸುತ್ತಿದ್ದನು. ಅಲ್ಲದೇ ತನ್ನ ಜಹಗೀರನಲ್ಲಿ ನಾಗರಿಕ ಹಾಗೂ ಸೈನ್ಯಕ್ಕೆ ಸಂಬಂಧಿಸಿದ ನೇಮಕಾತಿಗಳನ್ನು ಮಾಡಿಕೊಳ್ಳುತ್ತಿದ್ದನು. ಅಲ್ಲದೇ ಮುಖ್ಯ ನ್ಯಾಯಾಧೀಶನು ಆಗಿದ್ದನು.

ಜಹಗೀದಾರನ ಮುಖ್ಯ ಮೂರು ಕಾರ್ಯಗಳು ಈ ರೀತಿಯಾಗಿವೆ. ಮೊದಲನೆಯದಾಗಿ ಸುಲ್ತಾನನ ಸೇವೆಗಾಗಿ ನಿರ್ಧಿಷ್ಟಪಡಿಸಿದ ಅಶ್ವದಳ ಮತ್ತು ಕಾಲ್ಬಳವನ್ನು ಹೊಂದಿರಬೇಕಾಗುತ್ತಿತ್ತು. ಉದಾಹರಣೆಗಾಗಿ

ಬಹಮನಿಗಳ ಕಾಲದಲ್ಲಿ ತರಫದಾರನು ೨೦೦೦, ಅಮಿರ್-ಉಲ್-ಉಮ್ರಾ ೧೫೦೦ ಮತ್ತು ವಕೀಲ್-ಉಸ್-ಸಲ್ತನತ್ ೧೨೦೦, ಹಾಗೂ ಸರದಾರರು ೧೦೦೦ ರಿಂದ ೧೦೦ ರ ಅಶ್ವಪಡೆಯನ್ನು ಪಡೆದಿರುತ್ತಿದ್ದರು.[೪೬] ಅಲ್ಲದೇ ಆದಿಲ್‌ಶಾಹಿಗಳು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಈ ವ್ಯವಸ್ಥೆಯನ್ನು ಮುಂದುವರೆಸಿದರು. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಶಹಜಿ ಬೋಸ್ಲೆಯು ೫೦೦೦ ಅಶ್ವ ಪಡೆಯನ್ನು ಹೊಂದಿದ್ದನ್ನು ಗಮನಿಸಬಹುದು. ಎರಡನೆಯದಾಗಿ ತನ್ನ ಭಾಗದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗುವುದಾಗಿತ್ತು. ಕೊನೆಯದಾಗಿ ಸಾಮಂತ ರಾಜನಂತೆ ನಿರ್ಧಿಷ್ಟಪಡಿಸಿದ ವಾರ್ಷಿಕ ಪೊಗದಿಯನ್ನು ಸುಲ್ತಾನನಿಗೆ ಸಲ್ಲಿಸುವುದಾಗಿತ್ತು. ಈ ಎಲ್ಲ ಕರ್ತವ್ಯಗಳನ್ನು ಜಹಗೀರದಾರನು ಪಾಲಿಸುವವರೆಗೆ ಆತನ ಹುದ್ದೆ ಮತ್ತು ಸ್ಥಾನಮಾನಗಳು ಸುರಕ್ಷಿತವಾಗಿರುತ್ತಿದ್ದವು.

ರಾಜನಿಗೆ ಸಂಬಂಧಿಸಿದ ಭೂಮಿ :

ಈ ಭೂಮಿಯನ್ನು ರಾಜನಿಂದ ನೇಮಿಸಲ್ಪಟ್ಟ ಅಧಿಕಾರಿಯು ನೋಡಿಕೊಳ್ಳುತ್ತಿದ್ದನು. ಈ ಅಧಿಕಾರಿಯು ಆಗಾಗ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸಲ್ಪಡುತ್ತಿದ್ದನು. ಸಾಮಾನ್ಯವಾಗಿ ಈ ಅಧಿಕಾರಿಯು ಪ್ರಧಾನ ಮಂತ್ರಿ ಇಲ್ಲವೇ ರಾಜಪ್ರತಿನಿಧಿ(ರೀಜಂಟ್)ಗೆ ಸಂಬಂಧಿಸಿದವರಾಗಿರುತ್ತಿದ್ದನು. ಇವನು ಕೇವಲ ಅರ್ಹತೆಯಷ್ಟೇ ಅಲ್ಲದೆ, ವಿದೇಶಿ, ದಖನಿ, ಶಿಯಾ, ಸುನ್ನಿ ಎಂಬ ಮುಂತಾದ ಅಂಶಗಳ ಆಧಾರದ ಮೇಲೆ ಆಯ್ಕೆಯಾಗುತ್ತಿದ್ದನು. ಹಾಗಾಗಿ ಇವರ ಅಧಿಕಾರವಧಿಯು ಶಾಶ್ವತವಾಗಿರದೆ, ಸುಲ್ತಾನ ಮತ್ತು ಪ್ರಧಾನ ಮಂತ್ರಿಯ ಇಚ್ಛೆಗನುಸಾರವಾಗಿರುತ್ತಿತ್ತು.[೪೭]

ಈ ಪ್ರಾಂತೀಯ ಗವ್ಹರ್ನರ್‌ಗಳು ತಮ್ಮ ಪ್ರಾಂತಗಳಲ್ಲಿ ನಾಗರಿಕ ಮತ್ತು ನ್ಯಾಯಾಂಗೀಯ ಹಾಗೂ ಸೈನಿಕ ಅಧಿಕಾರಗಳನ್ನು ಚಲಾಯಿಸುತ್ತಿದ್ದನು. ಕೇಂದ್ರ ಸರಕಾರಕ್ಕೆ ಪ್ರಾಂತದ ಆದಾಯ ಮತ್ತು ಖರ್ಚುಗಳ ಲೆಕ್ಕಾಚಾರಗಳನ್ನು ಒದಗಿಸಬೇಕಾಗುತ್ತಿತ್ತು. ಈ ಗವ್ಹರ್ನರ್‌ಗಳು ಪ್ರಧಾನಿ ಮತ್ತು ಸುಲ್ತಾನನಿಂದ ನಿಯಂತ್ರಿಸಲ್ಪಡುತ್ತಿದ್ದರು. ಕಂದಾಯಕ್ಕೆ ಸಂಬಂಧಿಸಿದಂತೆ ಅಮೀರ-ಇ-ಜುಮ್ಮಾ ನಿಗೆ ಎಲ್ಲಾ ಮಾಹಿತಿ ಕೊಡುತ್ತಿದ್ದನು.[೪೮]

೩) ಸಾಮಾಂತ ರಾಜ್ಯಗಳು :

ಯುದ್ದದಲ್ಲಿ ಪರಾಭವ ಹೊಂದಿ ವಿಜಯಿಯಾದ ಸುಲ್ತಾನನೊಂದಿಗೆ ಒಪ್ಪಂದ ಮಾಡಿಕೊಂಡು ತಮ್ಮ ರಾಜ್ಯಗಳನ್ನು ಮರಳಿ ಪಡಿದರು. ನಿಗದಿಪಡಿಸಿದ ವಾರ್ಷಿಕ ಪೊಗದಿಯನ್ನು ಕೊಡಲು ಒಪ್ಪಿ ಸಾರ್ವಭೌಮನಿಗೆ ನಿಷ್ಠರಾಗಿರುವ ರಾಜ್ಯಗಳನ್ನು ಸಾಮಂತ ರಾಜ್ಯಗಳೆನ್ನುತ್ತಿದ್ದರು.

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಕುತುಬಶಾಹ ಹಾಗೂ ದಕ್ಷಿಣ ದೇಶದ ಎಲ್ಲ ಸರದಾರ ಜನರು ಮತ್ತು ಫಿರಂಗಿ ಸರದಾರರ ಮಂಡಳಿ, ಮಲೇನಾಡು, ಕರ್ನಾಟಕಗಳಲ್ಲಿಯ ಎಲ್ಲ ರಾಜರುರಳು ಮತ್ತು ನಾಲ್ಕು ಕಡೆಯ ಮಹಾನ ಗರ್ವಿಷ್ಟ ಸರದಾರರೂ ಕೂಡ ಸೇವಕತನವನ್ನು ಹೊಂದಿ ವರುಷ, ವರುಷಕ್ಕೆ ಕೊಡುವ

ಖಂಡಣಿಯನ್ನು ಸುಲ್ತಾನ ಮಹಮ್ಮದ ಆದಿಲ್‌ಶಾಹನಿಗೆ ಕಳುಹಿಸಿ, ಮಿತ್ರತೆ, ಸ್ನೇಹ ಹಾಗೂ ಸೇವಕತನವನ್ನಾಧಾರಿಸಿ ಆಜ್ಞಾ ಪಾಲನೆ ಮಾಡುವ ಧರ್ಮವನ್ನು ಸ್ವೀಕರಿಸಿದರು.[೪೯]

ಆದಿಲ್‌ಶಾಹಿಗಳಿಗೆ ವಿಧೇಯರಾಗಿದ್ದ ಹಿಂದೂ ಸಾಮಂತ ರಾಜರು ಸಲ್ಲಿಸುತ್ತಿದ್ದ ವಾರ್ಷಿಕ ಪೊಗದಿಯು ರಾಜ್ಯದ ಭಂಡಾರಕ್ಕೆ ನೇರವಾಗಿ ಸೇರುತ್ತಿತ್ತು. ಮಹಮ್ಮದ ಆದಿಲ್‌ಶಾಹನು ಹಿಂದೂ ರಾಜರಿಂದ ಮೂವತ್ತು ದಶಲಕ್ಷ ರೂಪಾಯಿಗಳನ್ನು ಸಂಗ್ರಹಿಸುತ್ತಿದ್ದನು. ಆದರೆ ಈ ವರಮಾನ ಸ್ಥಿರವಾಗಿರಲ್ಲಿಲ್ಲ. ನಾಯಕರು ಆಗಾಗ ಪೊಗದಿ ಕೊಡುತ್ತಿರಲ್ಲಿಲ್ಲ. ಅದು ಕೇಂದ್ರದಲ್ಲಿನ ರಾಜಕೀಯ ಸ್ಥಿರತೆಯನ್ನು ಅವಲಂಬಿಸಿರುತ್ತಿತ್ತು. ಉದಾಹರಣೆಗಾಗಿ ನಾಯಕವಾಡಿಯ ಕಡೆಯಿಂದ ಬರಬೇಕಾಗಿದ್ದ ಕಪ್ಪ ಬರದಿದ್ದಾಗ ಮಹಮ್ಮದ ಆದಿಲ್‌ಶಾಹನು ೧೬೪೦ ಸೆಪ್ಟಂಬರ ೩ ರಂದು ಸಂದಲಾಪುರ ಮಾಮಲೆಯ ಹವಾಲ್ದಾರ ಮತು ಕಾರಕೂನನಿಗೆ ಒಂದು ಫರ್ಮಾನ ಕಳಿಸಿದನು. ಅದು ಈ ಕೆಳಗಿನಂತಿದೆ.

“ ದರಬಾರಕ್ಕೆ ಅರ್ಜಿ ಬಂದಿದೆ. ಏನೆಂದರೆ ನಾಯಕವಾಡಿ ಕಡೆಯಿಂದ ಬರಬೇಕಾಗಿದ್ದ ಕಪ್ಪದ ಸಂಬಂಧದಲ್ಲಿ ನವಾಬಖಾನ್ ಭಾಯಿಯ ಜನ ಬಂದಾಗ ಅವರ ಹಣ ವಸೂಲ ಮಾಡಲು ನೀವು ಮತ್ತು ನಾಯಕವಾಡಿಯು ಅಡ್ಡ ಪಡಿಸಿದ್ದೀರಿ. ಅದೇಷ್ಟು ಧೈರ್ಯ? ನಾಯಕವಾಡಿಯು ಕಪ್ಪ ಒಪ್ಪಿಕೊಂಡಾಗಲೆ ಅವನಿಗೆ ನಾಯಕನೆಂದು ಒಪ್ಪಿದ್ದೇವೆ. ಈಗ ಕಪ್ಪು ಕೊಡಲು ಹಿಂಜರಿಯುತ್ತಿದ್ದಾರೆ. ಅವರ ಕಡೆಯಿಂದ ನಾಯಕ ಪಟ್ಟವನ್ನು ತೆಗೆದುಕೊಳ್ಳಲಾಗುವುದೆಂದು ತಿಳಿಯಿರಿ. ಯಾರು ಕಪ್ಪ ಕೊಡಲು ಒಪ್ಪುತ್ತಾರೋ ಅವರಿಗೆ ನಾಯಕ ಪಟ್ಟ ಕೊಡಲಾಗುವುದು. ಈಗ ಈ ಫರ್ಮಾನ ಮುಟ್ಟಿದೊಡನೆ ಉಳಿದೆಲ್ಲವನ್ನು ವಸೂಲಿ ಮಾಡಿ ನವಾಬನ ಕಾರಕೂನನಿಗೆ ಕೊಡಬೇಕು. ಇದಕ್ಕೆ ತಡವಾದರೆ ಪರಿಣಾಮ ನೆಟ್ಟಗೆ ಆಗೋದಿಲ್ಲ. ಯಾರು ಇದಕ್ಕೆ ಅಡಿಪಡಿಸಿದರೂ ಅವನಿಗೆ ಶಿಕ್ಷೆ ಆಗುವುದು ಕಪ್ಪ ಒಟ್ಟುಗೂಡಿಸಿ ಆದೇಶದಂತೆ ಕೊಡಬೇಕು.[೫೦] ಹೀಗೆ ಕಪ್ಪವನ್ನು ಕೊಡದೇ ಇದ್ದಾಗ ಅಂತಹ ರಾಜರನ್ನು ತೆಗೆದು ಹಾಕುವಂತಹ ಪದ್ಧತಿಯು ಇದದ್ದನ್ನು ಗಮನಿಸಬಹುದು.

ಮಹಮ್ಮದ ಆದಿಲ್‌ಶಾಹನು ಕರ್ನಾಟಕದ ವಿಜಯದಲ್ಲಿ ಬಹು ಬುದ್ಧಿವಂತಿಕೆಯ ನೀತಿಯನ್ನು ಅನುಸರಿಸಿದನು. ಸೋತರಾಜರಿಂದ ಅವರ ರಾಜ್ಯಗಳನ್ನು ತೆಗೆದುಕೊಂಡು, ಅದರ ಬದಲಾಗಿ ಬೇರೆ ಸ್ಥಳಗಳನ್ನು ನೀಡಿದನು. ಕೆಂಪೇಗೌಡ ಬೆಂಗಳೂರನ್ನು ಸೋತು, ಅದರ ಬದಲಾಗಿ ಮಾಗಡಿ ಪಡೆದುಕೊಂಡರೆ, ಕೆಂಗನಾಯಕನು ಬಸವಪಟ್ಟಣದ ಬದಲಾಗಿ ತರೀಕೆರೆಯನ್ನು ಪಡೆದುಕೊಂಡನು. ಈ ಸಾಮಂತರಾಜರು ಸುಲ್ತಾನನಿಗೆ ನಿಷ್ಠರಾಗಿರಬೇಕಾಗಿತ್ತು. ಈ ರಾಜರು ಸಮಯ ಬಂದಾಗ ಸುಲ್ತಾನನಿಗೆ ಸೈನಿಕ ನೆರವನ್ನು ಒದಗಿಸಿಬೇಕಾಗುತ್ತಿತ್ತು. ಮಹಮ್ಮದ ಆದಿಲ್‌ಶಾಹನ ದಂಡನಾಯಕ ಮುಸ್ತಫಾಖಾನನು ಮಧುರೆಯ ಪಾಳೆಗಾರನ ಮೇಲೆ ದಂಡಯಾತ್ರೆಗೆ ಹೊರಟಾಗ ಈ ಹಿಂದೆ ವೈರಿಯಾಗಿದ್ದ ಇಕ್ಕೇರಿಯ ಶಿವಪ್ಪ ನಾಯಕನು ಒಂದು ಸಾವಿರ ಅಶ್ವದಳ ಮತ್ತು ಎರಡು ಸಾವಿರ ಕಾಲ್ದಳದೊಂದಿಗೆ ಆದಿಲ್‌ಶಾಹಿ ಸೈನ್ಯವನ್ನು ಸೇರಿಕೊಂಡನು.[೫೧] ಅಲ್ಲದೆ ವಿಜಯನಗರದ ಶ್ರೀರಂಗರಾಯನ ಮೇಲೆ ಮುಸ್ತಫಾಖಾನನು ದಾಳಿಮಾಡುವ

ಸಮಯದಲ್ಲಿ ಬಿದನೂರಿನ ಶಿವಪ್ಪನಾಕನು ಒಂದು ಸಾವಿರ ಕುದರೆ ಮತ್ತು ಎರಡು ಸಾವಿರ ಕಾಲಾಳುಗಳನ್ನು ಕೊಟ್ಟು ತಾನು ಶ್ರೀರಂಗಪಟ್ಟಣದ ಗಡಿಯಲ್ಲಿ ನಿಂತನು. ಅಲ್ಲದೇ ಹರಪನಹಳ್ಳಿ ದೊಡ್ಡನಾಯಕ, ಕೆಂಗನಾಯಕನು ಮತ್ತು ಲಕ್ಷ್ಮೇಶ್ವರ ಹಾಗೂ ಕೊಪ್ಪಳದ ದೇಸಾಯರೂ ಸೇರಿದರು. ಇವರೆಲ್ಲರೂ ತಮ್ಮಂದಿಗೆ ಮೂನ್ನೂರು ಕುದರೆ ಹಾಗೂ ಇಪ್ಪತ್ತು ಸಾವಿರ ಕಾಲಾಳುಗಳುಗಳನ್ನು ತಂದಿದ್ದರು.[೫೨]

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಕರ್ನಾಟಕದ ಅನೇಕ ರಾಜರು ಕಪ್ಪನ್ನು ಕೊಟ್ಟು ಸಾಮಂತರಾದರು. ಅವರಲ್ಲಿ ಪ್ರಮುಖರೆಂದರೆ, ಇಕ್ಕೇರಿಯ ವೀರಭದ್ರ ನಾಯಕನು ಆದಿಲ್‌ಶಾಹಿಯ ಅಧಿಪತ್ಯವನ್ನು ಒಪ್ಪಿ ಬಿಜಾಪುರಕ್ಕೆ ೩೦ ಲಕ್ಷ ಹೊನ್ನುಗಳನ್ನು ಕೊಡಲು ಒಪ್ಪಿ ತಕ್ಷಣ ೧೮ ಲಕ್ಷ ಹೊನ್ನಗಳನ್ನು ಕೊಟ್ಟನು. ಮತ್ತು ಉಳಿದದ್ದನ್ನು ಮೂರು ಕಂತುಗಳಲ್ಲಿ ಕೊಡುವುದಾಗಿ ಒಪ್ಪಿಕೊಂಡನು. ಅದರಂತೆಯೇ ಚಿಕ್ಕನಾಯಕನಹಳ್ಳಿಯ ರಾಜನು ಬಿಜಾಪುರದ ಆಧಿಪತ್ಯವನ್ನು ಒಪ್ಪಿಕೊಂಡು ಇಪ್ಪತ್ತು ಸಾವಿರ ಹೊನ್ನುಗಳನ್ನು ಕೊಟ್ಟನು. ರಣದುಲ್ಲಾಖಾನನು ಅದಕ್ಕೆ ಸಮ್ಮತಿಸಿ ಚಿಕ್ಕನಾಯಕನಹಳ್ಳಿಯ ರಾಜನನ್ನು ಆತನ ಸ್ಥಳದಲ್ಲಿಯೇ ಮುಂದುವರೆಸಿ ಆತನನ್ನು ಬಿಜಾಪುರದ ಸಾಮಂತನರ್ನ್ನಾಗಿ ಸಾರಿದನು. ಅಲ್ಲದೇ ಬೇಲೂರಿನ ರಾಜನಾದ ವೆಂಕಟಪತಿಯು ರಣದುಲ್ಲಾಖಾನನೊಂದಿಗೆ ಒಪ್ಪಂದ ಮಾಡಿಕೊಂಡು ಬೇಲೂರಿನ ದಕ್ಷಿಣಕ್ಕೆ ಇಪತ್ತು ಮೈಲಿಗಳ ಅಂತರದಲ್ಲಿ ಸಕ್ಕರೆ ಪಟ್ಟಣ ಜಿಲ್ಲೆಯನ್ನು ಕೊಟ್ಟನು. ಹೀಗೆ ಬೇಲೂರಿನ ರಾಜನು ಆದಿಲ್‌ಶಾಹಿಯ ಅಧಿನಕ್ಕೆ ಒಳಪ್ಪಟ್ಟನು. ಆನಂತರ ತುಮಕೂರಿನ ನಾಯಕನೂ ಬಿಜಾಪುರದ ಅಧಿಪತ್ಯವನ್ನು ಒಪ್ಪಿಕೊಂಡನು. ಮತ್ತು ವಿಜಯ ನಗರದ ಶ್ರೀರಂಗರಾಯನು ತನ್ನ ಶಸ್ತ್ರಗಳನ್ನು ಕೆಳಗಿಟ್ಟು ೧೫೦ ಆನೆಗಳನ್ನು ೫೦ ಸಾವಿರ ಹೊನ್ನು ಕೊಡಲು ಒಪ್ಪಿಕೊಂಡು ಸಾಮಂತನಾದನು.[೫೩]

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಕರ್ನಾಟಕದ ಸಾಮಂತ ಮತ್ತು ಇತರ ಭಾಗಗಳಿಂದ ಬರುತ್ತಿದ್ದ ೫,೨೫,೬೧,೬೪೯ ರೂಪಾಯಿಗಳ ವಾರ್ಷಿಕ ಪುಗದಿಯ ವಿವರಗಳು ಈ ಕೆಳಗಿನಂತಿವೆ.

ಜಮೇದಾರ ಶ್ರೀರಂಗಪಟ್ಟಣ-೩,೫೮,೫೧,೩೬೧, ಬೇರಿಜ್ ಜಮೇದಾರ-೧,೦೨,೬೩,೬೩೫, ಜಮೇದಾರ ಸಂಧ್ಯಾ-೭,೨೦,೮೭೧, ಜಮೇದಾರ ದುರ್ಗ(ಚಿತ್ರದುರ್ಗ) ೧೧,೨೫,೦೦೦, ಜಮೇದಾರ ಜರಿಮುಲ್ಲಾ ಜರಮಲ್ಲೈ-೯೩,೭೫೦, ಜಮೇದಾರ ತೇರಿಖಂಡಾ-೧,೭೨,೫೦೦, ಜಮೇದಾರ ರತ್ನಾಗಿರಿ-೯೩,೭೫೧, ಜಮೇದಾರ ಸರಹಾರಿ-೭೫,೦೦೦, ಜಮೇದಾರ ಪಾವಗಡ-೧,೨೩,೭೫೦, ಜಮೇದಾರ ಮಂಗಪಾಲ-೧೫,೦೦೦, ಜಮೇದಾರ ಮನೋರಿ-೫,೬೪೦, ಜಮೇದಾರ ಜಗಪಾಲ-೧,೯೨,೫೦೦, ಜಮೇದಾರ ಕೋಟೆಖಡಾ-೭೫,೦೦೦, ಜಮೇದಾರ ಕಲವಾಡೀ-೩೭,೫೦೦, ಖೇಜರಿ ಜಮೇದಾರ-೯೩,೦೦೦, ಜಮೇದಾರ ಹಾನಹಾಲಿ-೧೦,೨೯,೦೬೦, ಜಮೇದಾರ ಆನೆಗೊಂದಿ-೧,೭೩,೫೫೦, ಜಮೇದಾರ ಲೋಕೋರಿ-೨,೨೫,೦೦೦, ಜಮೇದಾರ ಗಂಗಾಗಿರಿ-೧,೯೧,೧೬೫, ಜಮೇದಾರ ಬಳ್ಳಾರಿ-೮೬,೨೫೦, ಜಮೇದಾರ ಕೋರಿಕೋಡಾ-೧,೮೭,೫೦೦, ಜಮೇದಾರ ಸಬರಗಡ-೩೭,೫೦೦[೫೪]. ಈ ಎಲ್ಲ ಜನರು

ಸುಲ್ತಾನನಿಗೆ ಕಪ್ಪವನ್ನು ಸಲ್ಲಿಸುತ್ತಿದ್ದರು. ಹೀಗೆ ಪೊಗದಿಯನ್ನು ಸಲ್ಲಿಸುವರಿಗೆ ಅವರ ಹುದ್ದೆ ಮತ್ತು ಸ್ಥಾನ-ಮಾನಗಳು ಸುರಕ್ಷಿತವಾಗಿರುತ್ತಿದ್ದವು.

೪) ಸರ್ಕಾರ್‌ಗಳ ಆಡಳಿತ :

ಬಿಜಾಪುರದ ರಾಜ್ಯಕ್ಕೆ ಸಂಬಂಧಿಸಿದಂತೆ ಜಹಗೀರದಾರ ಮತ್ತು ಸಾಮಂತ ಅರಸರ ಅಧಿನದಲ್ಲಿರದ ಭೂಮಿಯನ್ನು ಆಡಳಿತ ಅನುಕೂಲಕ್ಕಾಗಿ ಮತ್ತು ಕಂದಾಯ ಸಂಗ್ರಹಣೆಯ ಉದ್ದೇಶಕ್ಕಾಗಿ ಅದನ್ನು 'ಸರ್ಕಾರ್' (ಜಿಲ್ಲೆ)ಗಳಾಗಿ ವಿಭಾಗಿಸಲಾಗಿತ್ತು. ೧) ಬಿಜಾಪುರ (ಪಟ್ಟಣ) ೨) ದೇವಗಿ (ಪಟ್ಟಣ) ೩) ಓಸ್ಸಾ (ಜಿಲ್ಲೆ) ೪) ಶೋಲಾಪುರ (ದಂಡು) ೫) ಧರ (ದಂಡು) ೬) ಶಿಖರ (ದಂಡು) ೭) ಲಕ್ಷ್ಮೀರ್ (ಪಾಳಯಪಟ್ಟು) ೮) ಗಡರ್ (ಜಿಲ್ಲೆ) ೯) ಬಲ್ಸಾರ್ (ಜಿಲ್ಲೆ) ೧೦) ಬದಾಮಿ (ಜಿಲ್ಲೆ) ೧೧) ಕೊಂಕಣ (ಜಿಲ್ಲೆ). ಈ ರೀತಿಯಾಗಿ ವಿಂಗಡಿಸಲಾಗಿತ್ತು. ಕೊಂಕಣವನ್ನು ಮತ್ತೆ ಎಂಟು ಪರಗಣಗಳಾಗಿ ಅಥವಾ ತಹಸೀಲ್ (ತಾಲುಕ)ಗಳನ್ನಾಗಿ ವಿಭಾಗಿಸಲಾಗಿತ್ತು.[೫೫] ಬೀದರ, ಕಲ್ಯಾಣ, ರಾಮನಗರ ಮತ್ತು ಮಂದಿರ್ ಎಂಬ ನಾಲ್ಕು ಸರ್ಕಾರಗಳನ್ನು ಹೊಂದಿರುವಂತಹ ಬೀದರ ಒಂದು ಪ್ರತೇಕ ಘಟಕವಾಗಿತ್ತು. ಬೀದರ ಸೇರಿಕೊಂಡ ನಂತರ ರಾಜ್ಯದಲ್ಲಿನ ಸರ್ಕಾರಗಳ ಸಂಖ್ಯೆ ೧೫ಕ್ಕೆ ಏರಿತು.[೫೬]

ಪ್ರತಿ ಸರಕಾರವು ನಾಲ್ಕು ಜನ ಮುಖ್ಯ ಅಧಿಕಾರಿಗಳನ್ನು ಹೊಂದಿತ್ತು. ಆಡಳಿತದ ಮುಖ್ಯಸ್ಥನನ್ನು 'ಸುಬೇದಾರ್' ಎಂದು ಕರೆಯುತ್ತಿದ್ದರು. ಕೆಲವು ಸಲ 'ಸರಹವಾಲ್ದಾರ' ಎಂದು ಕರೆಯುತ್ತಿದ್ದರು. ಆದಿಲ್‌ಶಾಹಿ ಆಡಳಿತದಲ್ಲಿ ಇಂತಹ ಅನೇಕ ಹವಾಲ್ದಾರರನ್ನು ನೋಡಬಹುದು. ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿ ರಫಿಯುದ್ದೀನನು ಭಂಡಾರದ ಹವಾಲ್ದಾರನಾಗಿದ್ದನು. ಮಹಮ್ಮದ ಆದಿಲ್‌ಶಾಹನ ಕೆಲವು ಫರ್ಮಾನಗಳು ಹವಾಲ್ದಾರನಿಗೆ ಬರೆದಿದನ್ನು ಗಮನಿಸಬಹುದಾಗಿದೆ. ಅವರಲ್ಲಿ ಪ್ರಮುಖರೆಂದರೆ, ಸಂದಲಾಪುರದ ಹವಾಲ್ದಾರ ಮಲ್ಲಿಕ ಸಂದಲ್, ಸಂದಲಾಪುರದ ಹವಾಲ್ದಾರ ಮಲ್ಲಿಕ ಸರವರ, ಮಹಮ್ಮದ ಹಸನಖಾನ, ಹವಾಲ್ದಾರ ಸಿದ್ಧಿ ಬಿಲಾಲ್, ಹವಾಲ್ದಾರ ಶಹಬಾಜ ಮತ್ತು ಹವಾಲ್ದಾರ ಅಹಮ್ಮದ ಹಸನರನ್ನು ನೋಡಬಹುದಾಗಿದೆ. ಇವರ ಪ್ರಮುಖ ಕಾರ್ಯವೆಂದರೆ ವಿವಿಧ ಕಾರಣಗಳಿಂದ ಹಳ್ಳಿಯನ್ನು ತೊರೆದ ರೈತರ ಮನವೊಲಿಸಿ ಕರೆತರುವುದು. ಸ್ಥಳೀಯ ಅಧಿಕಾರಿಗಳ ದಬ್ಬಾಳಿಕೆಯಿಂದ ಓಡಿ ಹೋದವರ ಮರಳಿ ಕರೆದಂದು ತಮ್ಮ ಕೆಲಸ ಕಾರ್ಯಗಳಲ್ಲಿ ತೊಡುಗುವಂತೆ ಪ್ರೇರೇಪಿಸುವುದಾಗಿತ್ತು. ಮಹಮ್ಮದ ಆದಿಲ್‌ಶಾಹನು ಜುಲೈ ೨೩, ೧೬೫೦ ರಲ್ಲಿ ಒಂದು ಫರ್ಮಾನದ ಮೂಲಕ ಮಾಣ ಕೋಜಿ ನರಸಿಂಗರಾವ ಹವಾಲ್ದಾರ ಮತ್ತು ಕಾರಕೂನ ಸಾತಾರ ಕೋಟೆ ಇವರಿಗೆ ಈ ರೀತಿ ಆಜ್ಞೆ ಮಾಡಿದನು. " ನಮಗೆ ತಿಳಿದು ಬಂದಿದ್ದೇನೆಂದರೆ, ಸಾಯಗಾಂವ ತಪೆ ವಾಸೋಟ ಕೋಟೆಯಲ್ಲಿಯ ರೈತರು ಕೊಡಬೇಕಾದ ಹಣವನ್ನು ಕೊಡದೆ ನಿಮ್ಮ ಕೋಟೆಯ ಸೀಮೆಯಲ್ಲಿ ಬಂದು ವಾಸವಾಗಿದ್ದಾರೆ. ಆಗ ಸಾಯಗಾಂವದ ಅಧಿಕಾರಿಯು ಅಲ್ಲಿ ಬಂದು ಹಣ ಕೇಳಿದಾಗ ಅವರು ಕೊಟ್ಟಿಲ್ಲ, ಅವರ ಮೇಲೆ ಸೇಡು ತೀರಿಸಿಕೊಂಡರು. ಆಗ ನೀವು ಈ ವೇಳೆಯಲ್ಲಿ ಅಧಿಕಾರಿಯ ಜೊತೆ ಸೈನಿಕರನ್ನು ಸಾಯಗಾಂವಗೆ ಕಳಿಸಿದಿರಿ ಮತ್ತು ಅರ ದನಕರಗಳನ್ನು ದೋಚಿಕೊಂಡು

ಬಂದಿರಿ. ಆ ರೈತರು ನಿಮ್ಮ ಹದ್ದಿನಲ್ಲಿ ಬಂದಾಗ ನೀವು ಅವರಿಗೆ ತಿಳಿಹೇಳಿ ಅವರ ಬಾಕಿ ಹಣವನ್ನು ಸಾಯಗಾಂವದ ಅಧಿಕಾರಿಗೆ ಕೊಡಿಸುವುದು ಯೋಗ್ಯವಿತ್ತು. ಅದು ಮಾಡದೇ ನೀವು ಸದರಿ ವರ್ತನೆ ಮಾಡಿ ಊರುಗಳು ಹಾಳು ಮಾಡಿದಿರಿ ಎಷ್ಟು ಧೈರ್ಯ ನಿಮಗೆ? ಈ ಆಜ್ಞಾಪತ್ರ ಮುಟ್ಟಿದ ಕೂಡಲೇ ಸಾಯಗಾಂವಕ್ಕೆ ಹೋಗಿ ಏನು ದೋಚಿಕೊಂಡು ಬಂದಿದ್ದಿರಿ ಅವುಗಳನ್ನು ಹಿಂತಿರುಗಿಸಿ ಸಾಯಗಾಂವದ ರೈತರಿಗೆ ಆ ಊರಿನ ಅಧಿಕಾರಿಗೆ ಒಪ್ಪಿಸಿ, ಯಾವುದೇ ತೊಂದರೆ ಕೊಡಬೇಡಿ. ಈ ಬಾಬತ್ತಿನಲ್ಲಿ ಯಾವುದೇ ತಕರಾರು ಬಂದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ. ತಿಳಿಯಿರಿ". ಹೀಗೆ ರೈತರ ಸಮಸ್ಯೆಯನ್ನು ಬಗೆಹರಿಸಿದನ್ನು ನೋಡಬಹುದು. ಈತನಿಗೆ ಅಫರಾಧಿಗಳನ್ನು ಶಿಕ್ಷಿಸುವ ಅಧಿಕಾರವಿರಲಿಲ್ಲ. ನ್ಯಾಯಲಯದಿಂದ ನಿರ್ಧಿಷ್ಟ ಆದೇಶಗಳನ್ನು ಪಡೆದ ನಂತರವೇ ಕಾರ್ಯಪ್ರವೃತನಾಗುತ್ತಿದ್ದನು. ನ್ಯಾಯಕ್ಕೆ ಸಂಬಂಧಿಸಿದಂತೆ ಈತನ ಕಾರ್ಯಗಳೆಂದರೆ, ದಾವೇದಾರರಿಂದ ಮನವಿಗಳನ್ನು ಸ್ವೀಕರಿಸುವುದು, ನ್ಯಾಯಾಂಗದ ಸಭೆಗೆ ಎಲ್ಲರನ್ನು ಬರುವಂತೆ ಆದೇಶಿಸಿವುದು, ಇನ್ನೂ ಕೆಲವು ಸಂದರ್ಭಗಳಲ್ಲಿ ಸ್ವತಃ ಸಭೆಯಲ್ಲಿ ಭಾಗವಹಿಸಿ ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ದೃಡಪಡಿಸುವುದು.[೫೭]

ಸುಬೇದಾರನಿಗೆ ಕಂದಾಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಇಬ್ಬರು ಹಿಂದೂ ಅಧಿಕಾರಿಗಳು ಸಹಾಯ ಮಾಡುತ್ತಿದ್ದರು. ಅವರಲ್ಲಿ ಒಬ್ಬ ಕಂದಾಯ ಸಂಗ್ರಹಣೆ ಮಾಡುವ ಹೊಣೆ ಹೊತ್ತು ಕೊಂಡಿದ್ದರೆ, ಇನ್ನೊಬ್ಬನು ಅಲ್ಲಿನ ಜಮಾಖರ್ಚಿನ ದಾಖಲೆಗಳನ್ನು ನೋಡಿ ಕೊಳ್ಳುತ್ತಿದ್ದನು.[೫೮] ಹಳ್ಳಿಗಳ ಕಂದಾಯ ಸಂಗ್ರಹಣೆಗೆ ಸಂಬಂಧಿಸಿದಂತೆ ತನ್ನ ತಹಸೀಲ್ದಾರರ ಮೂಲಕ ಹವಾಲ್ದಾರನು ನೇರವಾಗಿ ಸುಲ್ತಾನನಿಗೆ ಹೊಣೆಯಾಗಿದ್ದನು. ತನ್ನ ಜಿಲ್ಲೆಯ ಅನುವಂಶಿಕ ಅಧಿಕಾರಿಗಳು ಮತ್ತು ದೇಸಾಯಿಗಳು ಸುಲ್ತಾನನಿಗೆ ವಾರ್ಷಿಕವಾಗಿ ಸಲ್ಲಿಸುವ ಪೊಗದಿಯನ್ನು ಸಂಗ್ರಹಿಸುವುದು ಮತ್ತು ರಾಜನ ಭಂಡಾರಕ್ಕೆ ಕಳಿಸುವುದು ಇವನ ಪ್ರಮುಖ ಕಾರ್ಯವಾಗಿತ್ತು. ಅಲ್ಲದೇ ರಾಜನ ಆಸ್ಥಾನಕ್ಕೆ ಬೇಕಾದಾಗ ಸೇವಕರನ್ನು ಒದಗಿಸುವುದು ಕೂಡ ಇವನ ಪ್ರಮುಖ ಕಾರ್ಯವಾಗಿತ್ತು.[೫೯]

ಇನ್ನೂ ಸರ್ಕಾರದಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸುವ ನಾಲ್ಕನೆಯ ಅಧಿಕಾರಿಯಂದರೆ, ಖಾಜಿ ಅವನು ಸುಲ್ತಾನನಿಂದ ನೇಮಕವಾಗಿರುತ್ತಿದ್ದನು. ಆ ವಿಭಾಗದ ನ್ಯಾಯಾಂಗೀಯ ಅಧಿಕಾರಿಯಾಗಿದ್ದನು.

ಪರಗಣದ ಆಡಳಿತ :

ಬಿಜಾಪುರದ ಆದಿಲ್‌ಶಾಹಿಗಳು ತಮ್ಮ ಆಡಳಿತವನ್ನು ಸುಗಮ ಮತ್ತು ಸುವ್ಯವಸ್ಥಿತವಾಗಿ ಸಾಗಿಸಲು ಸರ್ಕಾರ್(ಜಿಲ್ಲೆ)ಗಳನ್ನು ಪರಗಣ (ತಾಲೂಕ)ಗಳನ್ನಾಗಿ ವಿಂಗಡಿಸಿದರು. ಈ ಪರಗಣಗಳನ್ನು ತಹಸೀಲುಗಳು, ಮೌದಗಳು, ತಾಲೂಕುಗಳೆಂದು ಕರೆಯುತ್ತಿದ್ದರು. ಬಿಜಾಪುರದ ರಾಜ್ಯದಲ್ಲಿ ಒಟ್ಟು ಎಷ್ಟು ಪರಗಣಗಳಿದ್ದವು ಎಂಬುದು ಖಚಿತವಾಗಿಲ್ಲ. ಆದರೆ ಕೆಲವೊಂದು ಪರಗಣಗಳನ್ನು ಗುರುತಿಸಬಹುದು. ಅವುಗಳೆಂದರೆ, ಕನಕಗಿರಿ, ಗಂಗಾವತಿ, ಗದಗ, ಹುಬ್ಬಳ್ಳಿ, ಲಕ್ಷ್ಮೇಶ್ವರ. ಫಲ್ಟನ, ಮೇಧ, ಉತ್ರೌಳಿ, ಬೋರ್, ಬಿರ್ವಾಡಿ, ಕುಡಲ,

ನಿರ್ವಾರ್, ವಾಯಿ, ಪೂನಾ, ಸುಪ, ಇಂದಾಪುರ, ಸಾಲ್ಸೆಟ್, ಆಲ್ಮೇಲ್,(ಸಿಂದಗಿ) ಗಂಜೂಟಿ, ಆಳಂದ, ಮಹಿದಾರಿ,(ಅಕ್ಕಲಕೋಟ) ಡೊಂಕಿ(ಉಸ್ಮನಾಬಾದ) ಪಾಂಗ್ರಿ(ಬಲ್ಸಿ), ಮುಧೋಳ, ಕಾಗಲ, ಕೋಲ್ಹಾಪುರ, ರಂಜಾ, ಕರ್ಹಾಡ, ಖತವಮಾನ.[೬೦] ಅಲ್ಲದೇ ಕೊಂಕಣ ಸರ್ಕಾರದಲ್ಲಿ ಎಂಟು ಪರಗಣಗಳಿದ್ದವು. ಒಂದೊಂದು ಪರಗಣ ೫೦ ರಿಂದ ೨೦೦ ಹಳ್ಳಿಗಳಿಂದ ಕೂಡಿರುತ್ತಿತ್ತು.[೬೧]

ಪರಗಣಗಳ ಆಡಳಿತದಲ್ಲಿ ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ಪ್ರತಿ ಪರಗಣಗಳಲ್ಲಿ ಕೋತ್ವಾಲ್, ದೇಶಮುಖ ಮತ್ತು ದೇಸಾಯಿ ಎಂಬ ಮೂರು ಜನ ಅಧಿಕಾರಿಗಳಿರುತ್ತಿದ್ದರು.

೧) ಕೋತ್ವಾಲ್ :

ಈತನು ಪರಗಣಗಳ ಪೋಲಿಸ ಅಧಿಕಾರಿಯಾಗಿದ್ದನು. ಅಲ್ಲಿನ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿ ಅವನದೇ ಆಗಿತ್ತು. ಪ್ರಜೆಗಳು ಜೀವನಕ್ಕೆ ಹಾಗೂ ಅವರ ಆಸ್ತಿ-ಪಾಸ್ತಿಗಳಿಗೆ ಯಾವುದೇ ತೊಂದರೆಯಾಗದಂತೆ ರಕ್ಷಣೆ ಒದಗಿಸುವುದು, ತಮ್ಮ ತಮ್ಮ ಪರಗಣಗಳಲ್ಲಿ ಶಾಂತಿ ನೆಲೆಸುವಂತೆ ಮುನ್ನಚ್ಚರಿಕೆ ವಹಿಸುವುದು, ಇವನ ಪ್ರಮುಖ ಕಾರ್ಯವಾಗಿತ್ತು. ತಮ್ಮ ಪ್ರದೇಶದಲ್ಲಿ ಯಾವುದಾದರೂ ಕಳ್ಳತನ ದರೋಡೆಗಳು ನಡೆದರೆ, ಅವುಗಳ ಸುಳಿವುಗಳ ಮೇಲೆ ತನಿಖೆ ನಡೆಸಿ ಅಪರಾಧಿಗಳನ್ನು ಗುರುತಿಸಿ ಅವರಿಗೆ ಶಿಕ್ಷೆ ಕೊಡುವುದು ಕೂಡ ಆತನ ಪ್ರಮುಖ ಕರ್ತವ್ಯವಾಗಿತ್ತು.[೬೨]

ಮಹಮ್ಮದ ಆದಿಲ್‌ಶಾಹನ ದಸ್ತುರ್-ಇ-ಅಮಲ್(ಶಾಸನ)ದಲ್ಲಿ ಈ ರೀತಿ ಹೇಳಲಾಗಿದೆ. 'ಕೋತ್ವಾಲನು ಜನರು, ಕಿಸೆಗಳ್ಳರ ಮೇಲೆ ಎಚ್ಚರಿಕೆಯಿಂದ ಇದ್ದು ಹಿಡಿಯುವ ವ್ಯವಸ್ಥೆ ಮಾಡಬೇಕು. ಎಲ್ಲಾದರೂ ಒಂದು ವೇಳೆ ಸಣ್ಣ ಅಥವಾ ದೊಡ್ಡ ಕಳತನವಾದರೆ, ತಕ್ಷಣ ಶೋಧಿಸಿ ಕಳ್ಳರನ್ನು ಹಿಡಿದು ಕುರಾನ ಶರೀಫನಲ್ಲಿ ಹೇಳಿದಂತೆ ರಾಜನು ತೀರ್ಪು ನೀಡಬೇಕು. ಹೀಗೆ ಕೊತ್ವಾಲನ ಕಾರ್ಯವನ್ನು ಮಹಮ್ಮದ ಆದಿಲ್‌ಶಾಹನು ತನ್ನ ಶಾಸನದಲ್ಲಿ ನಮೂದಿಸಿದ್ದಾನೆ.

೨) ದೇಶಮುಖ :

ಈತನು ಪರಗಣೆಯ ಎರಡನೆಯ ಪ್ರಮುಖ ಅಧಿಕಾರಿಯಾಗಿದ್ದು, ಕಂದಾಯ ಸಂಗ್ರಹ ಅಧಿಕಾರಿಯಾಗಿದ್ದನು. ತೆರೆಗೆ ಸಂಗ್ರಹಣೆ ಮತ್ತು ಅದರ ಮೇಲ್ವಿಚಾರಣೆಗಾಗಿ ತನ್ನನ್ನೇ ಅರ್ಪಿಸಿಕೊಂಡಿದ್ದನು. ತನಗೆ ಸಂಬಂಧಿಸಿದ ಪರಗಣೆಯಲ್ಲಿ ಎಲ್ಲ ತೆರಿಗೆಯು ಸಂಗ್ರಹಣೆಯಾಗಿದೆಯೇ ಎಂಬುದನ್ನು ವಿಚಾರಿಸುವುದು ಮತ್ತು ಯಾವುದೆ ರೀತಿಯಲ್ಲಿ ಹಿಂಬಾಕಿ ಇರದಂತೆ ನೋಡಿಕೊಳ್ಳುವುದು ಈತನ ಅತ್ಯಂತ ಪ್ರಮುಖ ಕರ್ತವ್ಯವಾಗಿತ್ತು.[೬೩] ಇವರು ಸುಲ್ತಾನನಿಂದ ಜಹಗೀರ ಪಡೆದುಕೊಂಡು ತಮ್ಮ ಪ್ರದೇಶದಲ್ಲಿ ಕೃಷಿ ಕಾರ್ಯ ಅಬಾಧಿತವಾಗಿ ನಡೆಯುವಂತೆ ನೋಡಿಕೊಳ್ಳುವುದು ಮತ್ತು ವಾರ್ಷಿಕ ಕಂದಾಯವನ್ನು ಸಂಗ್ರಹಿಸಿ ಕೇಂದ್ರ ಸರಕಾರದ ಬೊಕ್ಕಸಕ್ಕೆ ಕಳಿಸುವುದೇ ಆಗಿತ್ತು. ಈ ದೇಶಮುಖರನ್ನು ವಂಶಪರಂಪರೆಯಾಗಿ

ನೇಮಿಸಲಾಗುತ್ತಿತ್ತು. ಇನ್ನೂ ಕೆಲವೊಮ್ಮೆ ಅವರ ಜಹಗೀರನ್ನು ಬೆರೆಯವರಿಗೆ ನೀಡಲಾಗುತ್ತಿತ್ತು. ಮಹಮ್ಮದ ಆದಿಲ್‌ಶಾಹನ ಒಂದು ಫರ್ಮಾನನ್ನು ಇಲ್ಲಿ ಗಮನಿಸಬಹುದು.

೧೦ ನವ್ಹೆಂಬರ ೧೬೪೧ ರ ಫರ್ಮಾನದಲ್ಲಿ ಪಲಟಣ ಪರಗಣೆಯ ದೇಶಮುಖಿಯ ಸನದನ್ನು ಸಾಬಾಜಿ ಮುಧೋಜಿ ಕಡೆಯಿಂದ ತೆಗೆದು ಮೊದಲಿನಂತೆ ಬಜಾಜಿ ಮುಧೋಜಿಗೆ ಕೊಟ್ಟಿರುತ್ತದೆ. ಆ ಬಾಬತ್ತಿನ ಕಪ್ಪದ ಹಣವನ್ನು ಸರಕಾರಿ ಖಜಾನೆಯ ಅಕ್ಕಸಾಲಿಗ ಮತ್ತು ಪಿಠೋಪಕರಣ ಖಾತೆಯ ಸೇವಕರ ಸಂಬಳಕ್ಕಾಗಿ ಕೊಡಲಾಯಿತು.

‘ ಈಗ ದರ್ಬಾರಕ್ಕೆ ತಳಿದಿದ್ದೆನೆಂದರೆ, ಈವರೆಗೆ ದೇಶಮುಖಿಯ ಸನದನ್ನು ಬಜಾಜಿಗೆ ಕೊಟ್ಟಿರುವುದಿಲ್ಲ ಹುಜುರರಿಂದ ಅದನ್ನು ಬಜಾಜಿಗೆ ಕೊಟ್ಟಿದ್ದರು. ಆ ಬಾಬತ್ತಿನ ಕಪ್ಪವನ್ನು ಅಕ್ಕಸಾಲಿಗ ಮತು ಇತರರ ಸಂಬಳಕ್ಕಾಗಿ ಬಳಿಸಿದರೂ ನೀವು ಈವರೆಗೂ ಅವನಿಗೆ ಕೊಟ್ಟಿಲ್ಲ ಇದರ ಅರ್ಥವೇನು? ಈ ಫರ್ಮಾನ ಮುಟ್ಟಿದ ಕೂಡಲೇ ಆ ಪರಗಣೆಯ ದೇಶಮುಖಿಯನ್ನು ಯಾವುದೇ ತಕರಾರಿಲ್ಲದೇ ಬಜಾಜಿಯ ಕೈಗೆ ಒಪ್ಪಿಸಿ ಕಾನೂನಿನಂತೆ ಅವನಿಂದ ಕೆಲಸವನ್ನು ಮಾಡಿಸಿರಿ. ಅವನ ಹಕ್ಕಿನ ಬಹುಮಾನ ಸೈನಿಕರು ಇತರೆಗಳನ್ನು ಕೊಡಿ. ಅವನ ನಂತರ ಅವನ ವಂಶಸ್ಥರಿಗೆ ಮುಂದುವರೆಸಬೇಕು.

ವಡಗಾವದ ಕಾನ್ಹೋಜಿ ಪಾಟೀಲನು ಬಂಡಾಯಗಾರನಾಗಿದ್ದು ಅವನು ಸಾಬಾಜಿಯ ಕೆಲಸದಲ್ಲಿ ತೊಂದರೆ ಮಾಡುತ್ತಿದ್ದಾನೆ. ಅವನ ಧೈರ್ಯ ಎಷ್ಟಿದೆ? ಇತರರಿಗೆ ಪಾಠಸಿಗುವಂತಹ ಶಿಕ್ಷೆಯನ್ನು ಕೊಡಿ.

ಮೊದಲಿನ ಫರ್ಮಾನ ನೀವು ನಿಮ್ಮ ಹತ್ತಿರ ಇಟ್ಟುಕೊಂಡಿರುವಿರಿ? ಅದರ ನಕಲನ್ನು ಈ ಫಳಿಗೆಯಲ್ಲಿ ಮಾಡಿ ಮೂಲ ಫರ್ಮಾನನ್ನು ತಿರುಗಿಕೊಡಬೇಕು. ಈ ಆದೇಶದಂತೆ ಕೆಲಸ ಮಾಡಿರಿ ಇಲ್ಲವಾದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ.[೬೪]

ಹುಜುರ ಅಪ್ಪಣೆಯಂತೆ ವಜೀರ ಇಖ್ಲಾಸ್‌ಖಾನನ ತಿಳುವಳಿಕೆಯಂತೆ.’

ಹೀಗೆ ಈ ಫರ್ಮಾನ ಕರಾಡ ಪರಗಣೆಯ ಅಧೀನದಲ್ಲಿಯ ಪಲಟಣ ಅಮಲದಾರ ಮತ್ತು ದೇಶಮುಖನಿಗೆ ಕೊಡಲಾಗಿತ್ತು. ಇದರಲ್ಲಿ ಗಮನಿಸಬೇಕಾದ ಅಂಶವೆನೆಂದರೆ ದೇಶಮುಖಿ ಸನದನ್ನು ಒಬ್ಬನಿಂದ ತೆಗೆದುಕೊಂಡು ಮತ್ತೊಬ್ಬನಿಗೆ ವಂಶಪರಂಪರವಾಗಿ ಕೊಟಿದ್ದನ್ನು ನೋಡಬಹುದು.

೩) ದೇಸಾಯಿ :

ಈತನು ಪರಗಣದ ಮೂರನೆ ಅಧಿಕಾರಿಯಾಗಿದ್ದು, ತೆರಿಗೆ ಸಂಗ್ರಹಣೆ ಸಂಬಂಧಿಸಿದ ಅಧಿಕಾರಿಯಾಗಿದ್ದನು. ದೇಶಮುಖನು ತೆರಿಗೆ ಸಂಗ್ರಹಣೆ ಮತ್ತು ಅದರ ಮೇಲ್ವಿಚಾರಣೆಯ ಅಧಿಕಾರಿಯಾಗಿದ್ದರೆ, ದೇಸಾಯಿಯು ತೆರಿಗೆ ಸಂಗ್ರಹಣೆಯ ಸಂಬಂಧಿಸಿದ ದಾಖಲೆಗಳನ್ನು ಬರೆದಿಡುವ ಹಾಗೂ ಪರಗಣೆಯಲ್ಲಿ ಖರ್ಚು ವೆಚ್ಚಗಳ ದಾಖಲೆಗಳನ್ನು ಹೊಂದಿರುತ್ತಿದ್ದನು. ಈ ಎಲ್ಲ ವಿಷಯಗಳನ್ನು

ಒಳಗೊಂಡ ವಿವರವಾದ ದಾಖಲೆಗಳನ್ನು ನಿಯಕಾಲಿಕವಾಗಿ ರಾಜಧಾನಿಗೆ ಹೋಗಿ ಹಣಕಾಸಿನ ಮುಖ್ಯ ಅಧಿಕಾರಿಯಾದ ಅಮೀರ್-ಇ-ಜುಮ್ಲಾನಿಗೆ ಒಪ್ಪಿಸುವುದು ಪ್ರಮುಖ ಕರ್ತವ್ಯವಾಗಿತ್ತು.[೬೫]

ಮಹಮ್ಮದ ಆದಿಲ್‌ಶಾಹನ ಫರ್ಮಾನಗಳಲ್ಲಿ ಅನೇಕ ದೇಸಾಯಿಗಳ ಹೆಸರುಗಳನ್ನು ನೋಡಬಹುದು, ವಾಯಿ ಪರಗಣೆಯ ದೇಸಾಯಿ ಕಕಾಜಿ(ಗಂಗಾಜಿ), ರೊಹಿಡಾ ಕೋಟೆಯ ದೇಸಾಯಿ ಕೇದಾರಜಿ, ಹುಕ್ಕೇರಿ ಪರಗಣೆಯ ಲಕ್ಷ್ಮಣಗೊಂಡ ದೇಸಾಯಿ ಮತ್ತು ಆಲಮೇಲ ಪರಗಣೆಯ ಗುರುಸಿದ್ದಪ್ಪ. ಹೀಗೆ ಮುಂತಾದ ದೇಸಾಯಿಗಳ ಹೆಸರಗಳನ್ನು ನೋಡಬಹುದು.

ಜಿ.ಎಚ್. ಖರೇಯವರು ಸಂಪಾದಿಸಿದ "ಐತಿಹಾಸಿಕ ಫಾರ್ಸಿ ಸಾಹಿತ್ಯ ಖಂಡ-೫ ಭಾಗ-೧ ರಲ್ಲಿನ ಒಂದು ಪತ್ರದಲ್ಲಿ ಬಿಜಾಪುರ ಜಿಲ್ಲೆಯ ಆಲಮೇಲದ ದೇಶಗತಿಯವರನ್ನು ಕ್ರಿ.ಶ. ೧೫೫೦ ರಲ್ಲಿನ ಆದಿಲ್‌ಶಾಹಿ ಪತ್ರದಲ್ಲಿ 'ದೇಸಾಯಿ' ಎಂದು ಕರೆಯಲಾಗಿದೆ. ನಂತರ ಕ್ರಿ.ಶ. ೧೬೮೫ ರ ಮೇ ೩೦ ರ ಪತ್ರದಲ್ಲಿ ದೇಶಮುಖ ಎಂದು ಕರೆಯಲಾಗಿದೆ.

೧೬೨೯ ರ ಅಗಸ್ಟ ೭ ರಲ್ಲಿ ಮಹಮ್ಮದ ಆದಿಲ್‌ಶಾಹನು ಆಲಮೇಲ ಪರಗಣೆಯ ದೇಸಾಯಿ ಗುರುಸಿದ್ದಪ್ಪನಿ ಈ ರೀತಿಯಾಗಿ ಬರೆಯಲಾಗಿದೆ.

" ಉಪಯುಕ್ತ ಪರಗಣೆಯಲ್ಲಿರುವ ದೇವಣಗಾಂವ ಮತ್ತು ಬಳಗಾನೂರ ಗ್ರಾಮಗಳ ಮುಕಾಶ ಇವರ ಕೈಯಲ್ಲಿದ್ದ ಖವ್ವಾಸರ್ ಸಮುದಾಯದವರು ಅರ್ಜಿ ಮಾಡಿದ್ದು ಏನೆಂದರೆ, ಉಪಯುಕ್ತ ಸುಹರ್‌ಸನ್ (ಒಂದು ಸಾವಿರದ ಇಪ್ಪತ್ತು) ಸಂಘದಲ್ಲಿ ನಮ್ಮ ಹಕ್ಕು ಪೈಕಿ ದೇವಣಗಾಂವದಲ್ಲಿನ ಮೂರನೂರು ಎಪ್ಪತ್ತೆರಡುವರಿ ಬಂಗಾರದ ನಾಣ್ಯಗಳನ್ನು ತೆಗೆದು ಕೊಂಡಿದ್ದಾರೆ. ಮತ್ತು ಬಳಗಾನೂರದ ಪ್ರಮಾಣ ಪತ್ರ ಬರೆದು ಕೊಂಡಿದ್ದಾರೆ. ಹೊರತಾಗಿ ಗಲಾ, ಗಚ್ಚಿ ಎಣ್ಣೆ ಮತ್ತು ಇತರೆ ತೆಗೆದು ಕೊಂಡು ಹೋಗಿದ್ದಾರೆ. ಜೊತೆಗೆ ಬೇರೆ ಬೇರೆ ತರಹದ ತ್ರಾಸ ಕೊಡುತ್ತಿದ್ದಾರೆ. ಇದರ ಅರ್ಥವೇನು? ಈಗ ಇದು ಮಟ್ಟಿದ ಕೂಡಲೇ ಎರಡು ಊರಿನಲ್ಲಿನ ಪಡೆದುಕೊಂಡ ಆಸ್ತಿಯನ್ನು ತಿರುಗಿಸಬೇಕು, ತೊಂದರೆ ಕೊಡಬಾರದು, ಆಶ್ವಾಸನೆ ಮತ್ತು ಉತ್ತೇಜನ ಕೊಡಬೇಕು. ಗ್ರಾಮಕ್ಕೆ ಯಶ್ವಸಿ ಯಾಗುವುದನ್ನು ಮಾಡಬೇಕು, ತಕರಾರು ತಂಟೆಗೆ ಬರಕೂಡದು.[೬೬]

ಈ ಮೇಲಿನ ಸುದೀರ್ಘ ಫರ್ಮಾನಿನಿಂದ ತಿಳಿದು ಬರುವ ವಿಷಯವೇನೆಂದರೆ ದೇಸಾಯಿಗಳ ಪರಗಣೆದಲ್ಲಿರುವ ಗ್ರಾಮಗಳಲ್ಲಿನ ಅನ್ಯ ವ್ಯಕ್ತಿಗಳು ಹಸ್ತಕ್ಷೇಪ ಗೈದು ಸಂಪತ್ತು ಸಾಮಗ್ರಿಗಳನ್ನು ದೋಚಿಕೊಂಡು ಹೋದ ಬಗ್ಗೆ ಸುಲ್ತಾನ ಮಹಮ್ಮದ ಆದಿಲ್‌ಶಾಹನಿಗೆ ದೂರು ಬಂದಾಗ, ಆ ಅಫರಾಧಿಗಳ ಬಗ್ಗೆ ಕ್ರಮ ಕೈಕೊಳ್ಳಲು ಆಲಮೇಲದ ಗುರುಸಿದ್ದಪ್ಪ ದೇಸಾಯಿಗೆ ಆದೇಶಿಸಿದ ವಿಷಯ ತಿಳಿದುಬರುತ್ತದೆ.

ಬಿಜಾಪುರ ಜಿಲ್ಲೆಯ ದೇಸಗತಿಗಳ ಪಂಕ್ತಿಯಲ್ಲಿ ಗಣಿದೇಸಾಯರು ಪ್ರಮುಖರು. ಪ್ರಾಚೀನ ಚಿಮ್ಮಲಗಿ ಪರಗಣದಲ್ಲಿ ಬರುವ ಗಣಿ ಗ್ರಾಮವು ಕೃಷ್ಣಾ ನದಿಯ ಎಡದಂಡೆಯ ಮೇಲೆ ಇರುವುದು.

ಐತಿಹ್ಯಗಳು : ಜಿಲ್ಲೆಯ ಇತರ ದೇಸಗತಿಗಳಲ್ಲಿ ಗಣಿ ಗ್ರಾಮವು ದೇಸಾಯರ ಕೇಂದ್ರ ನೆಲೆಯಾಗಿತ್ತು. ಇವರ ಮೂಲದ ಕುರಿತು ಐತಿಹ್ಯವು ಪ್ರಚಲಿತದಲ್ಲಿದೆ. ಇವರ ಪೂರ್ವಜರೆಂದು ಹೇಳಲಾದ ಚಾಮರಾಜ ಮತ್ತು ಚಿತ್ರಸೇನ ಎಂಬ ಸಹೋದರರು ಗೋವುಗಳನ್ನು ಕಾಯುವವರಾಗಿದ್ದರು. ಬಿಜಾಪುರದ ಆದಿಲ್‌ಶಾಹಿ ರಾಜ್ಯದ ಮೇಲೆ ವೈರಿಗಳು ದಂಡೆತ್ತಿ ಬಂದು ರಾಜ್ಯದ ಗಡಿಯಲ್ಲಿ ಬೀಡು ಬಿಟ್ಟಿದ್ದರೆಂದು ಹೇಳಲಾಗುತ್ತದೆ. ಆಗ ಚಿಂತಾಕ್ರಾಂತನಾದ ಆದಿಲ್‌ಶಾಹನಿಗೆ ಬೃಹತ ಸಂಖ್ಯೆಯ ಆಕಳುಗಳನ್ನು ಹೊಂದಿದ ಚಾಮರಾಜ ಮತ್ತು ಚಿತ್ರಸೇನ ಸಹೋದರರು ಈ ಜಟಿಲ ಸನ್ನಿವೇಶವನ್ನು ಸುಲಭವಾಗಿ ಪರಿಹರಿಸಿದರಂತೆ. ಅದು ಹೇಗೆಂದರೆ, ಸುಲ್ತಾನನಿಂದ ತುಂಡು ಬಟ್ಟೆಗಳನ್ನು ಸೀಮೆ ಎಣ್ಣೆಯನ್ನು ಪಡೆದುಕೊಂಡ ಸಹೋದರರು ತಮ್ಮ ಎಲ್ಲ ಆಕಳುಗಳ ಕೊಂಬಿನ ತುದಿಗೆ ಬಟ್ಟೆಯನ್ನು ಕಟ್ಟಿ ಬೆಂಕಿಯಿಟ್ಟರಂತೆ, ಕತ್ತಲೆಯ ರಾತ್ರಿಯಲ್ಲಿ ಈ ಆಕಳುಗಳೆಲ್ಲಾ ಗಾಬರಿಗೊಂಡು ಓಡಾಡಲಾರಂಭಿಸಿದಾಗ, ಇನ್ನೊಂದು ಬದಿಯಲ್ಲಿ ಬೀಡುಬಿಟ್ಟಿದ್ದ ವೈರಿಗಳ ಪಡೆ ಈ ಸನ್ನಿವೇಶವನ್ನು ಪಂಜುಗಳನ್ನು ಹಿಡಿದ ಸೈನಿಕರೆಂದು ಭಾವಿಸಿ, ಯುದ್ಧ ಮಾಡದೇ ಮರಳಿ ಹೊದರಂತೆ. ಆಗ ಸಂತೋಷಗೊಂಡ ಸುಲ್ತಾನನು ಈ ಸಹೋದರರಿಗೆ ಐದು ಗ್ರಾಮಗಳಲ್ಲಿಯ ವಿಶಾಲ ಪ್ರದೇಶದ ಭೂಮಿಗಳನ್ನು ಇನಾಂ ಹಾಕಿ ಕೊಟ್ಟರೆಂದು ತಿಳಿದುಬರುತ್ತದೆ. ತನ್ನ ಕೊಂಬಿಗೆ ಅಗ್ನಿಸ್ಪರ್ಷವಾದದ್ದರಿಂದ ಒಂದು ಆಕಳು ಓಡುತ್ತಾ ಹೋಗಿ ಗಣಿಯ ಹತ್ತಿರ ತುಂಬಿ ಹರಿಯುತ್ತಿದ್ದ, ಕೃಷ್ಣಾ ನದಿಯಲ್ಲಿ ಧುಮುಕಿತೆಂದು ಹೇಳುತ್ತಾರೆ. ಆಗ ಕೃಷ್ಣಾ ನದಿಯು ಗಣಿ ದೇಸಾಯರ ಗಡಿರೇಖೆಯಾಗಿ ಮಾರ್ಪಟ್ಟಿತ್ತು. ಗಣಿ ದೇಸಾಯರಿಗೆ ಆದಿಲ್‌ಶಾಹನು ೫೬ ಸಾವಿರ ಎಕರೆ ಭೂಪ್ರದೇಶವನ್ನು ಇನಾಂ ಹಾಕಿಕೊಟ್ಟನೆಂದು ಆ ಮನೆತನದ ಹಿರಿಯರಲ್ಲೊಬ್ಬರಾದ ಶ್ರೀ. ಎ.ಆರ್.ದೇಸಾಯಿಯವರು ಹೇಳುತ್ತಾರೆ. ಆದರೆ ಇಂದು ಅಷ್ಟು ಭೂಮಿಯು ಅವರ ಅಧಿನದಲ್ಲಿಲ್ಲ.[೬೭] ಆದರೆ ಈ ಗಣಿ ದೇಸಾಯರಿಗೆ ಯಾವ ಸುಲ್ತಾನ ಇನಾಂ ಕೊಟ್ಟಿದ್ದ ಅಥವಾ ದಿನಾಂಕ ಸಹ ಉಲ್ಲೇಖವಿಲ್ಲ.

ಇದೇ ತರಹದ ಇನ್ನೊಂದು ದೇಶಗತಿಯು ಹಾವೇರಿ ಜಿಲ್ಲೆಯ ಹಂದಿಗನೂರಿನ ಮಾಮಲೇದೇಸಾಯಿ ಮನೆತನವು ನೋಡಬಹುದಾಗಿದೆ. ಹಂದಿಗನೂರು ಮನೆತನದ ಮೂಲ ಪುರುಷ ವಿಠ್ಠಲನಾಥ ಬುಳ್ಳಸರಶೆಟ್ಟಿ ಅವರು ಕ್ರಿ.ಶ. ೧೫೭೫ ರಲ್ಲಿ ಅವರು ದೇಸಗತಿ ಸ್ಥಾಪಿಸಿದರು. ಅವರು ಬಿಜಾಪುರ ಜಿಲ್ಲೆಯ ಗಣಕಿಬೇವಿನಹಳ್ಳಿಯವರು. ಬಿಜಾಪುರದ ಸುಲ್ತಾನ ಮಹಮ್ಮದ ಆದಿಲ್‌ಶಾಹ ಆನೆಗುಂದಿ ರಾಜರ ಮೇಲೆ ಯುದ್ಧ ಸಾರಿದರು. ಯುದ್ಧದಲ್ಲಿ ಪಾಲ್ಗೊಳ್ಳುವ ಸೈನ್ಯಕ್ಕೆ ಆಹಾರ ಪೂರೈಸುವಂತೆ ಆದಿಲ್‌ಶಾಹಿ ಶ್ರೀಮಂತ ವ್ಯಾಪಾರಿ ವಿಠಲನಾಥರನ್ನು ಕೇಳಿಕೊಳ್ಳುತ್ತಾರೆ. ಆಗ ವಿಠಲನಾಥರು ಸೈನ್ಯಕ್ಕೆ ಆಹಾರ ಪೂರೈಸುತ್ತಾರೆ. ಯುದ್ಧದಲ್ಲಿ ಬಿಜಾಪುರದ ಸೇನೆಗೆ ಗೆಲುವಾಗುತ್ತದೆ. ವಿಠಲನಾಥರ ಸಹಾಯವನ್ನು ಮೆಚ್ಚಿಕೊಂಡ ಮಹಮ್ಮದ ಆದಿಲ್‌ಶಾಹನು ಅವರಿಗೆ ೧೩೪ ಹಳ್ಳಿಗಳ 'ವತನ'ವನ್ನು ಕೊಡುತ್ತಾರೆ. ವಿಠಲನಾಥರು ಪ್ರಾರಂಭದಲ್ಲಿ ಬಂಕಾಪುರವನ್ನು ತಮ್ಮ ಸಂಸ್ಥಾನದ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಆ ನಂತರ ಕೆಲವು ಕಾರಣಗಳಿಂದ ಹಂದಿಗನೂರು ಗ್ರಾಮಕ್ಕೆ ಸ್ಥಳಾಂತರವಾಯಿತು.

ಅಂದಿನಿಂದ ಹಂದಿಗನೂರ ದೇಸಗತಿ ಸಂಸ್ಥಾನ ಮಾಮಲೇದೇಸಾಯಿ ಎಂಬ ಹೆಸರಿನಿಂದ ೧೩೪ ಹಳ್ಳಿಗಳ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಬೆಳವಣಿಗೆಗೆ ಶ್ರಮಿಸಿತು. ಈ ಹಳ್ಳಿಗಳ ಸಾಮಾನ್ಯ ಆಡಳಿತ, ಕಂದಾಯ ವಸೂಲಿಯನ್ನು ಸಂಸ್ಥಾನ ನಿರ್ವಹಣೆ ಮಾಡುತ್ತಿತ್ತು.

ಮಾಮಲೇದೇಸಾಯಿ ಮನೆತನದ ಮುಖ್ಯಸ್ಥರನ್ನು 'ಗಾದಿ ಮಾಲೀಕರು' ಎಂದು ಗೌರವದಿಂದ ಕರೆಯುವ ಪರಿಪಾಠ ಆರಂಭವಾಯಿತು. ದೇಸಗತಿಯ ಮುಖ್ಯಸ್ಥರು ಮಹಾರಾಜರಂತೆ ಮನೆತನದ ಪದ್ಧತಿಯಲ್ಲಿ ಪಟ್ಟಾಭಿಷೇಕದ ನಂತರವೇ ನೂತನ ಗಾದಿ ಮಾಲೀಕರಾಗಿ ಅಧಿಕಾರ ವಹಿಸಿಕೊಳ್ಳುತ್ತಿದ್ದರು. ಆ ಸಂಪ್ರದಾಯ ಇಂದಿಗೂ ಪಾಲನೆ ಆಗುತ್ತಿದೆ.[೧೮]

ಸ್ಥಳೀಯ ಆಡಳಿತ :

ಬಿಜಾಪುರ ರಾಜ್ಯದ ಪ್ರತಿ ಹಳ್ಳಿಯೂ ಒಂದು ಚಿಕ್ಕ ಪ್ರಜಾಪ್ರಭುತ್ವವಾಗಿತ್ತು. ಅಲ್ಲಿಯ ಜನರು ಗ್ರಾಮದ ವ್ಯವಹಾರಗಳನ್ನು ಗಮನಿಸಲು ಒಂದು ಮಂಡಳಿ ಅಥವಾ ಪಂಚಾಯತಿಯನ್ನು ರಚಿಸಿಕೊಂಡಿರುತ್ತಿದ್ದರು. ಈ ಮಂಡಳಿಯು ಗ್ರಾಮದ ರಕ್ಷಣೆ, ಕಾವಲು ಕೆಲಸ, ಪ್ರಾಥಮಿಕ ಶಿಕ್ಷಣ ಮತ್ತು ಹಳ್ಳಿಗಳನ್ನು ಸ್ವಚ್ಛವಾಗಿ ಇರುವಂತೆ ನೋಡಿಕೊಳ್ಳುತ್ತಿದ್ದಿತು. ಸಾಮಾನ್ಯವಾಗಿ ಕೇಂದ್ರ, ಪ್ರಾಂತ, ಪರಗಂಗಳು ಪಂಚಾಯತಿಯ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸುತ್ತಿರಲಿಲ್ಲ. ಈ ರೀತಿಯಾಗಿ ಸಂಪೂರ್ಣ ಸ್ವಾವಲಂಬಿಗಳಾಗಿ ಪ್ರಜಾಪ್ರಭುತ್ವವನ್ನು ಅನುಸರಿಸುತ್ತಿತ್ತು. ಗ್ರಾಮಗಳ ಆಡಳಿತ ಸೂತ್ರವನ್ನು ಪಾಟೀಲ, ಕುಲಕರ್ಣಿ ಮತ್ತು ಕಾವಲುಗಾ(ಚೌಕಿದಾರ) ಎಂಬ ಮೂರು ಜನ ಅಧಿಕಾರಿಗಳು ನಿಯಂತ್ರಿಸುತ್ತಿದ್ದರು. ಇವರೆಲ್ಲರೂ ಅಧಿಕಾರಗಳನ್ನು ಅನುವಂಶಿಕವಾಗಿ ಪಡೆದುಕೊಂಡಿದ್ದರು.[೧೯]

೧)ಪಾಟೀಲ : ಈತನು ಹಳ್ಳಿಯ ಮುಖ್ಯಸ್ಥನಾಗಿದ್ದನು. ಇವನೇ ಮುಖ್ಯ ತೆರಿಗೆ ಅಧಿಕಾರಿ ಹಾಗೂ ಮುಖ್ಯ ನಾಯಾಧೀಶನಾಗಿದ್ದನು. ಗ್ರಾಮದ ಜನ ಸಾಮಾನ್ಯರು, ರಾಜ್ಯದ ಅಧಿಕಾರಿಗಳು ಮತ್ತು ಸುಲ್ತಾನ ಇವರ ನಡುವೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಈತನಿಗೆ ಅಧಿಕಾರಗಳು ಅನುವಂಶಿಕವಾಗಿ ಬರುತ್ತಿದ್ದವು. ಅಲ್ಲದೇ ಪಾಟೀಲನು ತನ್ನ ಅಧಿಕಾರಗಳನ್ನು ಮಾರಬಹುದಾಗಿತ್ತು. ಮತ್ತು ಖರೀದಿಸಬಹುದಾಗಿತ್ತು. ಪಾಟೀಲನು ಬ್ರಾಹ್ಮಣನಾಗಿರುವುದು ಅಪರೂಪವಾಗಿತ್ತು. ಮುಸಲ್ಮಾನ ಪಾಟೀಲರಾಗಿದ್ದುದು ಇನ್ನೂ ಅಪರೂಪ.[೨೦]

ಪಾಟೀಲನು ಗ್ರಾಮದಲ್ಲಿ ತೆರಿಗೆಯನ್ನು ಸಂಗ್ರಹಿಸಿ ಕೇಂದ್ರ ಖಜಾನೆಗೆ ಕಳುಹಿಸುತ್ತಿದ್ದನು. ಇದರ ಜೊತೆಗೆ ಗ್ರಾಮದ ಪೋಲಿಸ ಅಧಿಕಾರಿಯಾಗಿ ಹಾಗೂ ಮುಖ್ಯ ನ್ಯಾಯಾಧೀಶನಾಗಿ ಕೆಲಸ ಮಾಡುತ್ತಿದ್ದನು. ಗ್ರಾಮದಲ್ಲಿ ಸುಲ್ತಾನನ ಹಕ್ಕು ಮತ್ತು ಅಧಿಕಾರಗಳನ್ನು ಪ್ರತಿಪಾದಿಸುತ್ತಿದ್ದನು. ಅಲ್ಲದೇ ಮಂತ್ರಿಗಳ ಎದುರಿಗೆ ಗ್ರಾಮದ ಅಧಿಕೃತ ಪ್ರತಿನಿಧಿಯಾಗಿ ವರ್ತಿಸುತ್ತಿದ್ದನು.[೨೧]

೨) ಕುಲಕರ್ಣಿ : ನಿಶ್ಚಿತವಾಗಿ ಬ್ರಾಹ್ಮಣ ವರ್ಗಕ್ಕೆ ಸೇರಿದ ಕುಲಕರ್ಣಿಯು ಗ್ರಾಮಾಡಳಿತದಲ್ಲಿ ಪಾಟೀಲನ ಸ್ಥಾನ ಹೊಂದಿರುತ್ತಿದ್ದನು. ಈತನು ಪಾಟೀಲನಿಗೆ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದನು. ಈತನು ಕಂದಾಯವನ್ನು ಸಂದಾಯ ಮಾಡಿದ ಹಾಗೂ ಪಾವತಿ ಮಾಡಿದ ಎಲ್ಲ ವಿವರಗಳನ್ನು ಹಾಗೂ ಇನ್ನಿತರ ಆಸ್ತಿಪಾಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಸುರಕ್ಷಿತವಾಗಿ ಇಟ್ಟಿರುತ್ತಿದ್ದನು.[೨೨] ಇವನು ಈ ಅಧಿಕಾರ ಮತ್ತು ಸ್ಥಾನಮಾನಗಳನ್ನು ತನ್ನ ಪೂರ್ವಜರಿಂದ ಪಡೆದುಕೊಂಡಿದ್ದನು. ಆದ್ದರಿಂದ ಕುಲಕರ್ಣಿಯೂ ಸಹ ತನ್ನ ಅಧಿಕಾರದ ಕಛೇರಿಯನ್ನು ಮಾರಾಟ ಮಾಡಬಹುದಾಗಿತ್ತು. ಹಾಗೂ ಕೊಂಡುಕೊಳ್ಳಬಹುದಾಗಿತ್ತು.

ಮಹಮ್ಮದ ಆದಿಲ್‌ಶಾಹನು ೧೬೪೧ ಅಗಸ್ಟ ೯ ರ ಒಂದು ಫರ್ಮಾನದ ಮೂಲಕ ಕರಾಡ ಪರಗಣೆಯ ಕಿರೋಲಿ ಊರಿನ ಕುಲಕರ್ಣಿಗೆ ವಂಶಪರಾಂಪರ್ಯವಾಗಿ ಕುಲಕರ್ಣಿಯ ಹುದ್ದೆಯನ್ನು ಕೊಡಬೇಕೆಂದು ಕರಾಡ ಪರಗಣೆಯ ದೇಸಾಯಿಗೆ ಆಜ್ಞೆ ಮಾಡಿದನ್ನು ಈ ಕೆಳಗಿನಂತೆ ನೋಡಬಹುದು.

" ಕರಾಡ ಪರಗಣೆಯ ಕಿರೋಲಿ ಊರಿನ ಕುಲಕರ್ಣಿ ಮತ್ತು ಜೋಶಿ ನಾರೋ ವಿಶ್ವನಾಥ ದರ್ಬಾರಕ್ಕೆ ವಿನಂತಿಸಿದೆನೆಂದರೆ, ಕಿರೋಲಿ ಊರಿನ ಕುಲಕರ್ಣಿ ಮತ್ತು ಜೋಶಿಯ ಹುದ್ದೆಯನ್ನು ಅವರ ಅಜ್ಜ ಮುತ್ತಜ್ಜರಿಂದ ಅವರ ಕಡೆ ಇದೆ. ಅದನ್ನು ಈಗ ಅವನು ಮುಂದುವರಿಸಿದ್ದಾನೆ. ಅದರಂತೆ ಕುಲಕರ್ಣಿ ಮತ್ತು ಜೋಶಿಯ ಬಹುಮಾನ, ಹಕ್ಕುಗಳನ್ನು ಪಡೆಯುತ್ತಿದ್ದೇನೆ. ಅದರಂತೆ ಫರ್ಮಾನ ಕಳಿಸಬೇಕಾಗಿ ವಿನಂತಿ.

ಆದ್ದರಿಂದ ನಾರೋ ವಿಶ್ವನಾಥನ ವಿನಂತಿಯನ್ನು ಮನ್ನಿಸಿ ಕಿರೋಲಿ ಊರಿನ ಕುಲಕರ್ಣಿ ಮತ್ತು ಜೋಶಿತನದ ಬಹುಮಾನ ಮತ್ತು ಹಕ್ಕು ಬಾಧ್ಯತೆಗಳನ್ನು ಪರಂಪರೆಯಂತೆ ಹೇಗೆ ನಡೆದಿದೆಯೊ ಅದರಂತೆ ನಿರ್ಧರಿಸಿಸಲಾಗಿದೆ. ಅದನ್ನು ಮುಂದುವರಿಸಬೇಕು. ಆನಂತರ ಅವರ ವಂಶಸ್ಥರಿಗೆ ಮುಂದುವರಿಸಬೇಕು.

ಇದರ ನಕಲನ್ನು ಮಾಡಿ ಮೂಲ ಫರ್ಮಾನ ತಿರುಗಿ ಕಳಿಸಬೇಕು.[೨೩]

ಹೀಗೆ ಮಹಮ್ಮದ ಆದಿಲ್‌ಶಾಹನು ಕುಲಕರ್ಣಿಯ ಹುದ್ದೆಯನ್ನು ವಂಶಪರಾಂಪರವಾಗಿ ಕೊಟ್ಟಿದ್ದನ್ನು ನೋಡಬಹುದು.

ಮಹಮ್ಮದ ಆದಿಲ್‌ಶಾಹನ ೧೬೪೨ ಅಗಸ್ಟ ೪ ರ ಇನ್ನೊಂದು ಫರ್ಮಾನದಲ್ಲಿ ಕುಲಕರ್ಣಿಯ ಉಲ್ಲೇಖವಿದದ್ದನ್ನು ಗಮನಿಸಬಹುದು.

" ವಾಯಿ ಪರಗಣೆಯು ಟಕಲೆ ಮತ್ತು ಬೊರಗಾವ ಈ ಊರಿನ ಕುಲಕುರ್ಣಿ ಮತ್ತು ಜೋಶಿ ನಾರೋ ವಿಶ್ವನಾಥ ಇವರು ದರ್ಬಾರಕ್ಕೆ ವಿನಂತಿಸಿದೆನೆಂದರೆ, ರಣದುಲ್ಲಾಖಾನನ ದಾಖಲೆಯಂತೆ ಬೊರಗಾವದ ಒಂದು ಚವರ ಮತ್ತು ಟಕಲೆಯಲ್ಲಿ ಅರ್ಧ ಚವರ ಉತ್ತಮ ಪ್ರತಿಯ ಭೂಮಿಯನ್ನು ಬಹುಮಾನವಾಗಿ ಕೊಡಲಾಗಿದೆ. ಕಾರಣ ತಾವುಗಳು ಕೃಪಾಳುವಾಗಿ ಫರ್ಮಾನ ಕಳುಹಿಸಿ. ಇವರ ವಿನಂತಿಯ

ಮೇರೆಗೆ ಬೊರಗಾವದಲ್ಲಿಯ ಒಂದು ಚಾವರ ಮತ್ತು ಟಕಲೆ ಊರಿನ ಅರ್ಧ ಚಾವರ ಒಟ್ಟು ಒಂದುವರೆ ಚಾವರ ಉತ್ತಮ ಪ್ರತಿ ಭೂಮಿಯನ್ನು ಅವನಿಗೆ ಬಹುಮಾನವಾಗಿ ಕೊಟ್ಟಿರುತ್ತದೆ. ಆ ತೆರಿಗೆ ನಗದಿಯಲ್ಲಿ ಯುದ್ಧ ತೆರಿಗೆ, ಹಬ್ಬದ ತೆರಿಗೆ ಇತರ ಕಾನೂನಿನ ತರಿಗೆಯೊಂದಿಗೆ ಅವನಿಗೆ ಕೊಡಿ, ಆ ಭೂಮಿಯ ಗುರುತನ್ನು ಹಾಕಿ ಸದರಿ ಊರಿನ ತೆರಿಗೆ ಪಟ್ಟಿಯಿಂದ ಈ ಭೂಮಿಯನ್ನು ತೆಗೆದುಬಿಡಬೇಕು.

ತದನಂತರ ಈ ಭೂಮಿಯನ್ನು ಅವರ ವಂಶಸ್ಥರಿಗೆ ಮುಂದುವರಿಸಬೇಕು. ರಣದುಲ್ಲಾಖಾನರ ದಾಖಲೆಯಂತೆ ಮುಂದುವರೆಸಬೇಕು. ಈ ಬಹುಮಾನಕ್ಕೆ ಯಾರಾದರು ಅಡ್ಡಿಯಾದರೇ ಅವರ ಮೇಲೆ ಮಹಮ್ಮದರವರ ಶಾಪ ತಟ್ಟುವುದು.

ಪ್ರತಿವರ್ಷ ಫರ್ಮಾನಿನ ಅಪೇಕ್ಷೆ ಇಡಬೇಡಿ ಇದೇ ಫರ್ಮಾನಿನ ಮೇಲೆ ವರ್ಷಾನುವರ್ಷ ನಡೆಸಬೇಕು".[೨೪] ಹೀಗೆ ಮಹಮ್ಮದ ಆದಿಲ್‌ಶಾಹನು ವಾಯಿ ಪರಗಣೆಯ ದೇಸಾಯಿ ಮತ್ತು ಅಮಲದಾರನಿಗೆ ಆಜ್ಞೆ ಮಾಡಿದನು.

೩) ಕಾವಲುಗಾರ (ಚೌಕಿದಾರ) : ಗ್ರಾಮಾಡಳಿತದ ಕೊನೆಯ ಪ್ರಮುಖ ವ್ಯಕ್ತಿ ಕಾವಲುಗಾರನಾಗಿದ್ದನು. **'ಚೌಕಿದಾರ'** ಎಂದು ಕರೆಯುತ್ತಿದ್ದರು. ಸಹಜವಾಗಿ ಇತನು ಅತ್ಯಂತ ಕೆಳ ಹುದ್ದೆಯ ಅಧಿಕಾರಿಯಾಗಿದ್ದನು. ಈತನಿಗೆ ಹಳ್ಳಿಯನ್ನು ಕಾವಲು ಕಾವಯುವುದು ಮತ್ತು ಅದಕ್ಕೆ ರಕ್ಷಣೆ ಒದಗಿಸುವಂತಹ ಪ್ರಮುಖ ಕಾರ್ಯವನ್ನು ಒದಗಿಸಲಾಗಿತ್ತು.[೨೫] ಗ್ರಾಮದ ಮುಖ್ಯಸ್ಥ ಪಾಟೀಲನು ಗ್ರಾಮದಲ್ಲಿ ಸಂಭವಿಸಿದ ಕಳ್ಳತನ ಮತ್ತು ದರೋಡೆಗಳಂತಹ ಪ್ರಕರಣಗಳ ವಿಚಾರಣೆ ನಡೆಸುತ್ತಿರುವಾಗ ಚೌಕಿದಾರನು ಆತನಿಗೆ ಸಹಾಯ ಮಾಡುತ್ತಿದ್ದನು.

ಮಾಮಲಾ ಮತ್ತು ಕಿಲ್ಲಾಗಳು :

ಮಾಮಲಾ ಮತ್ತು ಕಿಲ್ಲಾ ಎಂಬ ಶಬ್ದಗಳು ಅರೇಬಿಕ್ ಭಾಷೆಯಿಂದ ಬಂದವುಗಳಾಗಿವೆ. ಮಾಮಲಾ ಎಂದರೆ ನಿರ್ಧರಿತವಾದದ್ದು, ಅಥವಾ ಒಪ್ಪಂದವಾಗಿದ್ದು ಎಂದಾಗುತ್ತದೆ. ಕಿಲ್ಲಾ ಎಂದರೆ ಕೋಟೆ ಎಂದರ್ಥ. ರಾಜ್ಯದಲ್ಲಿನ ಪ್ರಮುಖ ಪಟ್ಟಣಗಳು, ಕೋಟೆಗಳು ಅವುಗಳ ಸುತ್ತಲಿನ ಹತ್ತೆಂಟು ಹಳ್ಳಿಗಳನ್ನು ಒಳಗೊಂಡ ಪ್ರದೇಶವೇ ಮಾಮಲಾ ಅಥವಾ ಕಿಲ್ಲಾ ಎಂದೆನಿಸಿಕೊಳ್ಳತ್ತಿತ್ತು. ಇವುಗಳಿಗೆ ಸುಲ್ತಾನನಿಂದ ನೇಮಿಸಲ್ಪಟ್ಟ ಹವಾಲ್ದಾರನು ಮುಖ್ಯಸ್ಥನಾಗಿರುತ್ತಿದ್ದನು. ಹವಾಲ್ದಾರ ಎಂದರೆ ವ್ಯವಸ್ಥಾಪಕ. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ೧೩ ಮಾಮಲಾಗಳನ್ನು ಹಾಗೂ ೧೨ ಕಿಲ್ಲೆಗಳನ್ನು ಗುರುತಿಸಲಾಗಿದೆ. ಅವುಗಳನ್ನು ನಗರದ ಹೆಸರಿನೊಂದಿಗೆ ಕರೆಯಲಾಗಿದೆ.[೨೬]

ಈ ಕಾಲದಲ್ಲಿ ಅಸ್ತಿತ್ವದಲ್ಲಿದ ೧೩ ಮಾಮಲಾಗಳೆಂದರೆ, ಮಾಮಲಾ, ಬಿಜಾಪುರ, ಮಾಮಲಾ ಮಹಮ್ಮದಪುರ, ಮಾಮಲಾ ರಾಯಚೂರ, ಮುದಗಲ್, ತೊರಗಲ್, ಬಂಕಾಪುರ, ಗೋವಾ, ಮಿರಜ (ಮುರ್ತುಜಾಬಾದ), ಸಂದಲಾಪುರ (ಸೋಲ್ಲಾಪುರ), ಬೀದರ, ಚೌಲ್ (ಪಾದಶಹಾಬಾದ), ಕಲ್ಯಾಣ

(ಮುರಂಜನನ), ಘೀವಂಡ (ಇಸ್ಲಾಮಾಬಾದ). ಇನ್ನೂ ೧೨ ಕಿಲ್ಲಾ/ಕೋಟೆಗಳೆಂದರೆ ಕೊಪ್ಪಳ, ಬಾದಾಮಿ, ಪನಾಲಾ, ವಾಸೋಟ, ಪರಾರಿ, ಸತಾರಾ, ಮಂದನ, ಚಂದನ, ರೋಹಿರಾ, ರಾಜಗಡ, ಕೊಂದಣ, ಶಹದುರ್ಗ (ಅಲ್‌ದುರ್ಗ).[೭೭]

ಈ ಮಾಮಲಾ ಮತ್ತು ಕಿಲ್ಲಾಗಳ ಮುಖ್ಯಸ್ಥರು ಹವಾಲ್ದಾರಗಳಾಗಿದ್ದರು. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಸೋಲ್ಲಾಪುರದಲ್ಲಿ ಸಿದ್ಧಿ ಬಿಲಾಲ್[೭೮], ಮಲ್ಲಿ ಸಂದಲ್, ಮಲ್ಲಿಕ್ ಸರವರ್, ಮಿಯಾ ಮಹಮ್ಮದ ಹಸನಖಾನ ಮತ್ತು ಕಲ್ಯಾಣದಲ್ಲಿ ಸಿದ್ಧಿ ದಿಲಾವರ[೭೯]. ಗೋವಾದಲ್ಲಿ ಮಿರ್ಜಾ ಮಹಮ್ಮದ ರಿಥಾ[೮೦], ಪರೆಂಡಾದಲ್ಲಿ ಆಕ ರಿಜ್ವಾನ್[೮೧] ಮಹಮ್ಮದಪುರದಲ್ಲಿ ನಿಯಾವತಖಾನ ಮುಂತಾದವರು ಪ್ರಮುಖ ಹವಾಲ್ದಾರರಾಗಿದ್ದರು. ಇವರು ಪ್ರದೇಶ ವಿಭಾಗ, ಉಪ ವಿಭಾಗ ಮಾಮಲಾ ಕಿಲ್ಲಾಗಳ ಮುಖ್ಯಸ್ಥರಾಗಿದ್ದರೂ ಕೂಡ ಇವರಿಗೆ ಶಿಕ್ಷೆ ವಿಧಿಸುವ ಕಂದಾಯ ಸಂಗ್ರಹದ ಧೋರಣೆಗಳನ್ನು ಬದಲಿಸುವ ಸ್ವಾತಂತ್ರ್ಯವಿರಲಿಲ್ಲ. ಅಂತಿಮವಾಗಿ ಅದನ್ನು ಸುಲ್ತಾನನೇ ನಿರ್ಧರಿಸುತ್ತಿದ್ದನು. ಆದರೆ ವಿಚಾರಣೆಯ ಸಂದರ್ಭದಲ್ಲಿ ಹಳ್ಳಿಯ ಪಂಚರು ವಿಚಾರಿಸುತ್ತಿದ್ದರು. ಸಭೆಯ ಅಧ್ಯಕ್ಷತೆಯನ್ನು ದೇಸಾಯಿ, ಹವಾಲ್ದಾರರು ವಹಿಸುತ್ತಿದ್ದರು. ವಿಚಾರಣೆಯ ವಿವರಗಳನ್ನು ಸುಲ್ತಾನನಿಗೆ ಕಳುಹಿಸಿ ಅಂತಿಮ ಆದೇಶಕ್ಕಾಗಿ ಕಾಯುತ್ತಿದ್ದರು.

ಮಹಮ್ಮದ ಆದಿಲ್‌ಶಾಹನು ಕಿಲ್ಲಾ ಮತ್ತು ಮಾಮಲಾಗಳಲ್ಲಿ ಯಾರನ್ನು ನೇಮಿಸಬೇಕು ಮತ್ತು ಅವರ ಕಾರ್ಯ ಹೇಗಿರಬೇಕೆಂದು ತನ್ನ ದಸ್ತುರ-ಇ-ಅಮಲ್ (ಆಡಳಿತ ಶಾಸನ) ದಲ್ಲಿ ಈ ರೀತಿಯಾಗಿ ಹೇಳಲಾಗಿದೆ.

ಕಿಲ್ಲೆ ಮತ್ತು ಕೋಟೆಗಳಲ್ಲಿ ಹಳೆಯ ಒಳ್ಳೆಯ ನಡತೆಯ ನೌಕರರನ್ನು ನೇಮಿಸಬೇಕು. ಪ್ರತಿಯೊಂದು ಕಿಲ್ಲೆಯಲ್ಲಿ ಮೂರು-ಮೂರು ಕೆಲಸಗಾರರಗಿಂತ ಅಧಿಕವಾಗಿ ನೇಮಿಸಬಾರದು ಒಬ್ಬ ಕಿಲ್ಲೆದಾರ ಎರಡನೆಯವನು ವಿಶೇಷ ಸೇನೆಯ ಮೇಲಿನ ಅಧಿಕಾರಿ, ಮೂರನೆಯವನು ಅಮೀನ ರಹಸ್ಯ ಸುದ್ಧಿಗಳನ್ನು ಬರೆಯುವವನು. ಹೀಗೆ ಮೂರಕಿಂತ ಅಧಿಕ ಪ್ರಧಾನ ಅಧಿಕಾರಿಗಳನ್ನು ಇಡಬಾರದು. ಕೆಲವು ದಿನಗಳಾದ ಮೇಲೆ ಆ ಅಧಿಕಾರಿಗಳನ್ನು ಬೇರೆ ಸ್ಥಳಗಳಿಗೆ, ಮತ್ತು ಬೇರೆ ಸ್ಥಳದಲ್ಲಿಯ ಅಧಿಕಾರಿಗಳನ್ನು ಇತ್ತ ಕಡೆ ವರ್ಗಾಯಿಸುತ್ತಿರಬೇಕು. ಯಾವ ಕಿಲ್ಲೆಯ ವಶದಲ್ಲಿ ಬಹಳಷ್ಟು ಪ್ರದೇಶಗಳು ಕಾನೂನು ಸುವ್ಯವಸ್ಥೆಗಳನ್ನೊಳಪಟ್ಟು ಇರುವವೋ ಅಂಥ ಕೋಟೆಗೆ ಒಬ್ಬ ಮಾಮಲೇದಾರನನ್ನು ನೇಮಿಸಿ, ಆತನ ಮುಖಾಂತರ ಪ್ರದೇಶದ ಎಲ್ಲ ಕೆಲಸಗಳನ್ನು ವಹಿವಾಟಿನಲ್ಲಿ ಇಡಬೇಕು.

ಬ) ಸೈನ್ಯಾಡಳಿತ :

ಬಿಜಾಪುರದ ಆದಿಲ್‌ಶಾಹಿಗಳು ಮತ್ತು ಅವರ ಸಮಕಾಲೀನ ರಾಜ ಮನೆತನಗಳಾದ ವಿಜಯನಗರ ಮತ್ತು ಬಹಮನಿಗಳ ಇತಿಹಾಸವನ್ನು ಅವಲೋಕಿಸಿದಾಗ ಹೆಚ್ಚಿನ ಪ್ರಮಾಣದ ಯುದ್ಧಗಳು, ದಂಡಯಾತ್ರೆಗಳು, ಕಲಹಗಳು ಮತ್ತು ಒಪ್ಪಂದಗಳಿಂದ ಕೂಡಿದ ಕಾಲಾವಧಿಯಾಗಿತ್ತು. ಈ ರಾಜ್ಯಗಳ ಅಸ್ತಿತ್ವವೇ ಅವರ ಸೈನ್ಯ

ಬಲದ ಮೇಲೆ ನಿಂತಿತ್ತು. ದುರ್ಬಲರಾದರೆ ಅವರ ವಿನಾಶಕ್ಕೆ ದಾರಿಯಾಗುತ್ತಿತ್ತು. ಒಂದು ವೇಳೆ ಪ್ರಬಲರಾದರೆ ಯಶಸ್ವಿ ಯುದ್ಧಗಳಿಂದ ರಾಜ್ಯ ವಿಸ್ತಾರವಾಗುತ್ತಿತ್ತು. ಅಲ್ಲದೇ ಸಂಪನ್ಮೂಲಗಳು ಹೆಚ್ಚುತ್ತಿದ್ದವು.

ಸಾಂಪ್ರದಾಯಿಕವಾಗಿ ಇರಾನಿ ವ್ಯವಸ್ಥೆಯಂತೆ ಬಿಜಾಪುರದ ಸುಲ್ತಾನರು ತಮ್ಮ ಸೈನ್ಯವನ್ನು ಮುಂಭಾಗ, ಮಧ್ಯಭಾಗ, ಹಿಂಭಾಗ ಹಾಗೂ ಪಾರ್ಶ್ವ(ಪಕ್ಕದ) ಭಾಗಗಳಲ್ಲಿ ವ್ಯವಸ್ಥೆಗೊಳಿಸುವುದನ್ನು ರೂಢಿಸಿಕೊಂಡಿದ್ದರು. ಇದನ್ನು 'ಪಂಜೆ' (ಪಂಚಾ) ಎಂದು ಕರೆಯುತ್ತಿದ್ದರು. ಮುಂದಿನ ಭಾಗವು ಸಮರ್ಥ ಕಾಲ್ದಳವನ್ನು ಹೊಂದಿದ್ದು, ವೈರಿಗಳ ಮೇಲೆ ದಾಳಿ ಮಾಡಿ, ವೈರಿಗಳು ಪ್ರತಿದಾಳಿ ಮಾಡುವಂತೆ ಪ್ರೇರೇಪಿಸುತ್ತಿತ್ತು. ವೈರಿಗಳು ದಾಳಿ ಮಾಡಿದ ಕೂಡಲೇ, ಮಧ್ಯದ ಮತ್ತು ಪಕ್ಕದ ವಿಭಾಗಗಳಿಗೆ ಬಂದು ಸೇರುತ್ತಿತ್ತು. ನಂತರ ಸೈನ್ಯ ಮುಂದುವರೆದು, ವೈರಿ ಸೈನ್ಯವನ್ನು ತನ್ನ ಹತೋಟಿಗೆ ತೆಗೆದುಕೊಳ್ಳುತ್ತಿತ್ತು. ಈ ಒಂದು ತಂತ್ರವನ್ನು ಕ್ರಿ.ಶ. ೧೫೬೫ ರ ತಾಳಿಕೋಟೆ ಕದನದಲ್ಲಿ ರಾಮರಾಜನ ವಿರುದ್ಧ ಯಶಸ್ವಿಯಾಗಿ ಪ್ರಯೋಗಿಸಲಾಯಿತು.

ಆದಿಲ್‌ಶಾಹಿಗಳ ಸೈನ್ಯವು ನಾಲ್ಕು ವರ್ಗಗಳನ್ನು ಒಳಗೊಂಡಿತ್ತು. ಅವುಗಳೆಂದರೆ,

ಅ) ರಾಜ್ಯದ ಸೇವೆಗೆ ಖಾಯಂ ಆಗಿ ನೇಮಿಸಿಕೊಂಡ ಯೋಧರು

ಬ) ಪ್ರಾಂತೀಯ ಗವ್ವರ್ನರ್ ಮತ್ತು ನೋಬಲ್ಲರು ಖಾಯಂ ಆಗಿ ಪಾಲಿಸಿಕೊಂಡಿದ್ದ ಸೈನ್ಯ

ಕ) ಯುದ್ಧದ ಸಮಯದಲ್ಲಿ ವಿಶೇಷವಾಗಿ ನೇಮಿಸಿಕೊಳ್ಳುತ್ತಿದ್ದ ಸೈನ್ಯ

ಡ) ಧರ್ಮಯುದ್ಧವನ್ನು ಕಾದಲು ನೇಮಿಸಿಕೊಳ್ಳುತ್ತಿದ್ದ ಸೈನ್ಯ.[೮೨]

ಅ) ರಾಜ್ಯದ ಸೇವೆಗೆ ಖಾಯಂ ಆಗಿ ನೇಮಿಸಿಕೊಂಡ ಯೋಧರು :

ಖಾಯಂ ಆಗಿ ರಾಜ್ಯದ ಸೇವೆಗೆ ಕೇಂದ್ರದಲ್ಲಿ ವ್ಯವಸ್ಥೆಗೊಳಿಸಿದ ಸೈನ್ಯವನ್ನು ಎರಡು ವಿಭಾಗಗಳಾಗಿತ್ತು. ಮೊದಲ ವಿಭಾಗವು ಸುಲ್ತಾನನ ಕೈಕೆಳಗಿರುತ್ತಿತ್ತು. ಎರಡನೆಯ ವಿಭಾಗವು ಬಿಜಾಪುರದ ಸರದಾರರ ಅಧೀನದಲ್ಲಿರುತ್ತಿತ್ತು.

೧) ಸುಲ್ತಾನನ ಕೈಕೆಳಗಿರುವ ಸೈನ್ಯ : ಸುಲ್ತಾನನ ಅಧಿನದಲ್ಲಿರುವ ಸೈನ್ಯವು ಸುಲ್ತಾನನ ನೇರ ಆಡಳಿತಕ್ಕೆ ಒಳಪಟ್ಟಿದ್ದಿತು. ಈ ಸೈನ್ಯವು ಸುಲ್ತಾನನ ವಿದೇಶಿ ಅಂಗರಕ್ಷಕರನ್ನು ಒಳಗೊಂಡಿರುತ್ತಿತ್ತು. ರಾಜನ ಮೇಲ್ವಿಚಾರಣೆಯಲ್ಲಿನ ಈ ಸೈನ್ಯದ ದಂಡು ರಾಜ ಸೇವಕರು ಕಾವಲುಗಾರರು ಮತ್ತು ಕೋಟೆಯ ಒಳಗಿನ ಕಾವಲುಗಾರರನ್ನು ಒಳಗೊಂಡಿರುತ್ತಿತ್ತು. ಅವರು ಸಂಖ್ಯೆಯಲ್ಲಿ ಕಡಿಮೆ ಇದ್ದರೂ ಅವರ ರಾಜನಿಷ್ಠೆ ಮತ್ತು ಕಾರ್ಯಕ್ಷಮತೆಯನ್ನು ಯಾರು ಪ್ರಶ್ನಿಸುವಂತಿರಲಿಲ್ಲ. ಬಹುಶಃ ವಿದೇಶಿಯರು ಹೆಚ್ಚಿನ ಸಂಬಳ ಪಡೆಯುತ್ತಿದ್ದು, ತೃಪ್ತಿಕರವಾಗಿ ವಿತರಿಸಲ್ಪಡುತ್ತಿದ್ದರು. ವಿದೇಶಿಯರು ಇತರರಿಗಿಂತ ಹೆಚ್ಚು ಧೈರ್ಯಶಾಲಿಗಳೂ,

ಮುನ್ನುಗ್ಗುವವರೂ ಎಂದು ಭಾವಿಸಿಲಾಗಿತ್ತು. ಅವರ ನಡುವಳಿಕೆಯ ಮೇಲೆ ಹೊರಗಿನಿಂದ ಇನ್ನಷ್ಟು ಜನರು ಬಂದು ಸೇರುವುದು ನಿಲ್ಲುತ್ತಿತ್ತು. ರಾಜನ ಅಂಗರಕ್ಷಕರು ಹೊಸದಾಗಿ ಬಂದಂಥಹ ಇರಾನಿ ಸೈನ್ಯಿಕರಾಗಿರುತ್ತಿದ್ದರು. ಅವರು ಸುಲ್ತಾನನ ಕೋಣೆಗಳನ್ನು ಕಾಯುತ್ತಿದ್ದರು. ಮತ್ತು ಸುಲ್ತಾನನು ರಾಜ್ಯ ವಿಸ್ತಾರಕ್ಕೆ ಮತ್ತು ಬೇಟೆಯಾಡಲು ಹೋದಾಗ ಕೂಡ ಅವನ ಜೊತೆಯಲ್ಲಿ ಇರುತ್ತಿದ್ದರು. ಈ ಅಂಗರಕ್ಷಕರು ಸದಾ ಸಶ್ತ್ರಸಜ್ಜಿತರಾಗಿದ್ದು, ಯಾವುದೇ ಸಂದರ್ಭದಲ್ಲಿ ಸುಲ್ತಾನನ ಜೀವ ರಕ್ಷಿಸಲು ತಮ್ಮ ಪ್ರಾಣ ತ್ಯಾಗ ಮಾಡಲು ಸಿದ್ಧರಾಗಿರುತ್ತಿದ್ದರು.[೮೩]

೨) ಸರದಾರರ ಆಧೀನ ಸೈನ್ಯ : ಬಿಜಾಪುರ ಆದಿಲ್‌ಶಾಹಿಗಳ ಆಸ್ಥಾನದ ನೋಬಲ್ಲರು ನೋಡಿಕೊಳ್ಳುತ್ತಿದ್ದ ಸೈನ್ಯದ ಭಾಗವು ಕೆಲವು ನಿಯಮಗಳಿಗೆ ಒಳಪಟ್ಟಿರುತ್ತಿತ್ತು. ಈ ರೀತಿ ಸೈನ್ಯವನ್ನು ಇಟ್ಟುಕೊಳ್ಳುವ ಸೌಕರ್ಯಕ್ಕೆ ಬಹಮನಿಗಳ ಕಾಲದಲ್ಲಿ 'ಮನ್‌ಸಬ್' ಎಂದು ಕರೆಯುತ್ತಿದ್ದರು. ಒಬ್ಬ ತರಫದಾರನು ಎರಡು ಸಾವಿರ ಅಶ್ವಸೈನ್ಯದ ಮನಸಬ ಹೊಂದಿರುತ್ತಿದ್ದನು. ಅಮೀರ್-ಅಲ್-ಉಮ್ರಾನು ೧೫೦೦, ವಕೀಲ್-ಅಲ್-ಸಲ್ತನತ್ ೧೨೦೦ ಮತ್ತು ಇನ್ನುಳಿದ ಸರದಾರರು ೧೦೦೦ ದಿಂದ ೧೦೦ ರವರೆಗಿನ ಬೇರೆ ಬೇರೆ ಪ್ರಮಾಣದ ಸೈನ್ಯವನ್ನು ಹೊಂದಿರುತ್ತಿದ್ದರು. ಈ ವ್ಯವಸ್ಥೆಯನ್ನೇ ಆದಿಲ್‌ಶಾಹಿಗಳು ಕೆಲವು ಮಾರ್ಪಾಡುಗಳೊಂದಿಗೆ ಮುಂದುವರಿಸಿಕೊಂಡು ಹೋದರು.

ಹದಿನೇಳನೆಯ ಶತಮಾನದಲ್ಲಿ (ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ) ಉನ್ನತಾಧಿಕಾರ ಹೊಂದಿರುವ ಸರದಾರರಲ್ಲಿ ೫೦೦೦ ಸೈನ್ಯ ಹೊಂದಿರುವ ಉನ್ನತ ದರ್ಜೆ ಇರುವುದು ಸಹಜವಾಗಿರಲಿಲ್ಲ. ಷಹಜಿ ಮತ್ತು ಅಫಜಲ್‌ಖಾನರು, ಇತರ ಸರದಾರರೊಂದಿಗೆ ೫೦೦೦ ಸೈನ್ಯದ ಮನ್‌ಸಬ್ ಹೊಂದಿದ್ದರು. ಈ ಸಂಖ್ಯೆಯು ಕೇವಲ ಅಶ್ವ ಸೈನ್ಯವನ್ನು ಮಾತ್ರ ಸೂಚಿಸುತ್ತದೆ. ಈ ಅಧಿಕಾರಿಗಳು ಅದೇ ಸಂಖ್ಯೆಯ ಸಮಪ್ರಮಾಣದ ಕಾಲ್ದಳವನ್ನು ಹೊಂದುವುದು ಅವಶ್ಯವಾಗಿತ್ತೋ ಅಥವಾ ಇಲ್ಲವೋ ಎಂಬುವುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ.[೮೪] ಈ ದೊಡ್ಡ ಗಾತ್ರದ ಸೈನ್ಯವನ್ನು ಪೋಷಿಸುವುದಕ್ಕಾಗಿ ಅವರಿಗೆ ಸಾಕಷ್ಟು ಆದಾಯವಿರುವ ಜಾಹಗೀರಗಳನ್ನು ನೀಡಲಾಗಿತ್ತು.

ಬ) ಪ್ರಾಂತೀಯ ಗವ್ಹರ್ನರ್‌ಗಳು ಮತ್ತು ನೋಬಲ್ಲರು ಖಾಯಂ ಆಗಿ ಪಾಲಿಸಿಕೊಂಡ ಸೈನ್ಯ :

ಬಿಜಾಪುರ ರಾಜ್ಯದಲ್ಲಿ ಪ್ರಾಂತೀಯ ಗವ್ಹರ್ನರ್‌ಗಳು ಮತ್ತು ಜಾಹಗೀರದಾರರು ಸುಲ್ತಾನನ ಸೇವೆಗಾಗಿ ನಿರ್ಧಿಷ್ಟಪಡಿಸಿದ ಸಂಖ್ಯೆಯ ಸೈನ್ಯವನ್ನು ಸಂರಕ್ಷಣೆ ಮಾಡುವುದು ತುಂಬಾ ಅವಶ್ಯಕವಾಗಿರುತ್ತಿತ್ತು. ಸುಲ್ತಾನನು ತನಗಿಷ್ಟಬಂದಾಗ ಈ ಸೈನ್ಯವನ್ನು ಕರೆಸಿಕೊಳ್ಳಬಹುದಾಗಿತ್ತು. ಈ ಅಧಿಕಾರಿಗಳನ್ನೂ ಕೂಡ ಮನಸಬ್‌ದಾರರೆಂದು ಕರೆಯುತ್ತಿದ್ದರು. ಸೈನ್ಯದ ತುಕಡಿಗಳನ್ನು ಸಂರಕ್ಷಣೆ ಮಾಡುವುದಕ್ಕೋಸ್ಕರವೇ ಜಾಹಗೀರಗಳನ್ನು ಹಂಚಲಾಗುತ್ತಿತ್ತು. ಹೀಗೆ ಜಾಹಗೀರುಗಳನ್ನು ಪಡೆದುಕೊಂಡ ಒಬ್ಬ ಮನಸಬ್‌ದಾರನು

ಸಹಜವಾಗಿ ಜಾಗೀರುದಾರನಾದನು. ಸೈನ್ಯ ತುಕಡಿಯ ಸಂಘಟನೆ, ಶಿಸ್ತು ಮತ್ತು ವೇತನವು ಆಯಾ ಜಾಗೀರುದಾರನಿಗೆ ಸಂಬಂಧಿಸಿತ್ತು.[೮೫]

ಪ್ರಾಂತೀಯ ಗವ್ವರ್ನರ್‌ಗಳು ಮತ್ತು ನೋಬಲ್ಲರು ಖಾಯಂ ಆಗಿ ಪಾಲಿಸಿಕೊಂಡ ಸೈನ್ಯವು ಯುದ್ಧದ ವೇಳೆಯಲ್ಲಿ ಬಂದು ಬಿಜಾಪುರ ಸೈನ್ಯದಲ್ಲಿ ಸೇರಿಕೊಳ್ಳುತ್ತಿತ್ತು. ಈ ಪದ್ಧತಿಗೆ ಸಮಕಾಲೀನ ಇರಾನಿನಲ್ಲಿ ಪ್ರಚಲಿತದಲ್ಲಿದ್ದ ಪದ್ಧತಿಯೇ ತಳಹದಿಯಾಗಿತ್ತು.

ಕ) ಯುದ್ಧದ ಸಮಯದಲ್ಲಿ ವಿಶೇಷವಾಗಿ ನೇಮಿಸಿಕೊಳ್ಳುತ್ತಿದ್ದ ಸೈನ್ಯ :

ಆದಿಲ್‌ಶಾಹಿಗಳು ಯುದ್ಧದ ಸಮಯದಲ್ಲಿ ವಿಶೇಷವಾಗಿ ಸೈನ್ಯ ನೇಮಿಸಿಕೊಳ್ಳುತ್ತಿದ್ದರು. ಈ ಸೈನಿಕರು ಕೇವಲ ಯುದ್ಧದ ಸಮುದಲ್ಲಿ ಮಾತ್ರ ಕೆಲಸದಲ್ಲಿರುತ್ತಿದ್ದರು. ಯಾರನ್ನು ರಾಜ್ಯದ ನಿಯತಕಾಲಿಕ ಸೇವಕರನ್ನಾಗಿ ನೇಮಿಸಿಕೊಂಡಿರುತ್ತಾರೋ ಅವರಿಗೆ ಕುದರೆಗಳನ್ನು ಹಾಗೂ ಇತರ ಯುದ್ಧ ಸಲಕರಣೆಗಳನ್ನು ಪೂರೈಸುತ್ತಿದ್ದರು. ಹಾಗಾಗಿ ಅವರಿಗೆ 'ಬಾರಗೀರ್' ಎಂದು ಕರೆಯುತ್ತಿದ್ದರು. ಇನ್ನೂ ತಮ್ಮದೇ ಆದ ಕುದರೆ ಮತ್ತು ಇತರ ಯುದ್ಧ ಸಲಕರಣೆಗಳೊಂದಿಗೆ ಬಂದು ಸಂಬಳದ ಆಧಾರದ ಮೇಲೆ ಸುಲ್ತಾನನ ಸೈನ್ಯವನ್ನು ತಾತ್ಕಾಲಿಕವಾಗಿ ಸೇರಿಕೊಳ್ಳುತ್ತಿದ್ದವರಿಗೆ 'ಸಿಲೇದಾರ' ಎಂದು ಕರೆಯುತ್ತಿದ್ದರು. ಒಬ್ಬ ಶ್ರೀಮಂತ ಸಿಲೇದಾರನು ಅನೇಕ ಜನ ಬೆಂಬಲಿಗರ ನಾಯಕನಾಗಿದ್ದನು.[೮೬] ಈ ಸಿಲೇದಾರರು ತಾವು ಸಲ್ಲಿಸಿದ ಸೇವೆಯ ಪ್ರತಿಯಾಗಿ ಜಾಹಗೀರಗಳನ್ನು ಪಡೆದುಕೊಳ್ಳುತ್ತಿದ್ದರು. ಮರಾಠರು ಸೈನ್ಯಾನುಭವವನ್ನು ಪಡೆದುಕೊಳ್ಳಲು ಈ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡರು. ತಾವು ಇಷ್ಟಪಟ್ಟು ಸೈನ್ಯಕ್ಕೆ ಸೇರಿಕೊಂಡು, ತಾವು ಸಲ್ಲಿಸಿದ ಸೇವೆಯ ಪ್ರತಿಫಲದ ಕುರಿತು ವಿಚಾರಿಸಬಹುದಾಗಿತ್ತು. 'ಮೊರೆ' ಮತ್ತು 'ಜಾವಳಿ' ಮನೆತನದವರು ಬಿಜಾಪುರ ಆದಿಲ್‌ಶಾಹಿಗಳಿಗೆ ಈ ರೀತಿಯ ಸೇವೆ ಸಲ್ಲಿಸಿಯೇ ಪ್ರಸಿದ್ಧಿಗೆ ಬಂದರು.

ಡ) ಧರ್ಮಯುದ್ಧ ಕಾದಲು ನೇಮಿಸಿಕೊಂಡ ಸ್ವಯಂ ಸೇವಕರು :

ಅನೇಕ ಜನ ಸ್ವಯಂ ಸೇವಕ ಸೈನಿಕರು ಬಿಜಾಪುರ ಆದಿಲ್‌ಶಾಹಿಗಳ ಸೈನ್ಯವನ್ನು ಸೇರಿಕೊಂಡರು. ಅವರಲ್ಲಿ ಕೆಲವರು ಕುದುರೆಗಳನ್ನು ಇತರ ಶಸ್ತ್ರಾಸ್ತ್ರಗಳನ್ನು ಅಥವಾ ಲೂಟಿ ಮಾಡುದುದರಲ್ಲಿ ಲಾಭ ಪಡೆದುಕೊಳ್ಳುವ ಉದ್ದೇಶದಿಂದ ಸೈನ್ಯವನು ಸೇರಿಕೊಂಡರು. ಸುಲ್ತಾನು ಅಶ್ವಪಡೆಯ ಜೊತೆಯಲ್ಲಿಯೇ ಒಂಟಿಗಳನ್ನು, ಆನೆಗಳನ್ನು ಹಾಗೂ ಇತರ ಮಿಶ್ರಜಾತಿಯ ಹೊಂದಿರುತ್ತಿದ್ದನು. ಸೈನ್ಯದಲ್ಲಿ ಅವುಗಳೂ ಕೂಡ ಮಹತ್ವವುಳ್ಳದ್ದಾಗಿರುತ್ತಿದ್ದವು.[೮೭] ಬಾರ್ಬೋಸಾ ಆನೆಗಳ ಚಲನವಲನಗಳ ಕುರಿತಾದ ಒಂದು ವಾಸ್ತವಿಕವಾದ ಚಿತ್ರಣವನ್ನು ಕೊಡುತ್ತಾನೆ. " ಆನೆಗಳ ಬೆನ್ನಿನ ಮೇಲೆ ಕಟ್ಟಿಗೆಯ ಕೋಟೆ (ಅಚಿಣಟಜ)ಯನ್ನು ಕಟ್ಟಿ ಅದರಲ್ಲಿ ಮೂರು ಅಥವಾ ನಾಲ್ಕು ಜನರು ಬಿಲ್ಲುಬಾಣಗಳು ಹಾಗೂ ಇತರೆ ಆಯುಧಗಳೊಂದಿಗೆ ಸಜ್ಜಾಗಿ, ಆ ಕಟ್ಟಿಗೆಯ ಕೋಟೆಯಿಂದಲೇ ವೈರಿಗಳ ವಿರುದ್ಧ ಹೋರಾಡುತ್ತಿದ್ದರು"[೮೮] ಎಂದು ಹೇಳಿದ್ದಾನೆ.

ಮಹಮ್ಮದ ಆದಿಲ್‌ಶಾಹನು ದಕ್ಷಿಣ ಭಾರತದ ದಂಡಯಾತ್ರೆಯನ್ನು ಕೈಗೊಂಡು ಅದಕ್ಕೆ ಧರ್ಮಯುದ್ಧ (ಜಿಹಾದ್)ದ ರಂಗು ಕೊಟ್ಟನು. ಇದು ಮುಸ್ಲಿಂ ಸ್ವಯಂ ಸೇವಕರು ಸುಲ್ತಾನನ ಸೈನ್ಯವನ್ನು ಸೇರಿಕೊಳ್ಳುವಂತೆ ಆಕರ್ಷಿಸುವ ತಂತ್ರವಾಗಿತ್ತು. ಆ ಸ್ವಯಂ ಸೇವಕರಿಗೆ ರಾಜ್ಯದ ಖಜಾನೆಯಿಂದ ಸಂಬಳವನ್ನು ಕೊಡಲಾಗುತ್ತಿರಲಿಲ್ಲ. ಆದರೆ ಧರ್ಮ ಯುದ್ಧದಲ್ಲಿ ಅವರು ಸಲ್ಲಿಸಿದ ಸೇವೆಗಾಗಿ ಯುದ್ಧದಲ್ಲಿ ಸುಲಿಗೆ ಅಥವಾ ಲೂಟಿ ಮಾಡಿದ ಸಂಪತ್ತಿನಲ್ಲಿ ಭಾಗವನ್ನು ಕೊಡಲಾಗುತ್ತಿತ್ತು.

ಸೈನ್ಯದ ವಿಭಾಗಗಳು :

ಉತ್ತಮ ದರ್ಜೆಯ ಸೈನ್ಯವನ್ನು ಹೊಂದಿದ್ದ ಆದಿಲ್‌ಶಾಹಿಗಳು ತಮ್ಮ ಸೈನ್ಯವನ್ನು ಸಂಪ್ರದಾಯದಂತೆ ಅಶ್ವದಳ, ಕಾಲ್ದಳ, ಗಜದಳ ಮತ್ತು ಗೋಲಂದಾಜುಗಳು ಎಂಬ ನಾಲ್ಕು ವರ್ಗಗಳಾಗಿ ವಿಂಗಡಿಸಿದ್ದರು.

೧) ಅಶ್ವ ಪಡೆ (ಅಶ್ವದಳ) :

ಇದು ಆದಿಲ್‌ಶಾಹಿಗಳ ಸೈನ್ಯದ ಪ್ರಮುಖ ಭಾಗವಾಗಿತ್ತು. ಇದು ಸೈನ್ಯದಲ್ಲಿ ಬಲು ಪರಿಣಾಮಕಾರಿಯೂ, ಗುಣಕಾರಿಯೂ, ಚಲನಶೀಲವೂ ಮತ್ತು ದಕ್ಷವು ಆದ ವಿಭಾಗವಾಗಿತ್ತು. ಈ ದಳದ ನಿರ್ವಹಣೆಗಾಗಿ ಕುದರೆ ಮತ್ತು ಸೈನಿಕರನ್ನು ನೇರವಾಗಿ ಅರೇಬಿಯಾದ ಮತ್ತು ಇತರ ಮುಸ್ಲಿಂ ರಾಷ್ಟ್ರಗಳಿಂದ ಸಾಗರ ಮಾರ್ಗವಾಗಿ ಆಮದು ಮಾಡಿಕೊಳ್ಳಲಾಗುತ್ತಿತ್ತು. ಮುಸ್ಲಿಂ ದೇಶಗಳಿಂದ ಕುದುರೆಗಳನ್ನು ಮತ್ತು ಹೊಸ ಸಿಪಾಯಿಗಳನ್ನು ತರಿಸಿಕೊಳ್ಳವ ಪ್ರಮುಖ ಉದ್ದೇಶದಿಂದಲೇ ಬಿಜಾಪುರದ ಸರಕಾರವು ಪೋರ್ತುಗೀಸರೊಂದಿಗೆ ಸ್ನೇಹಮಯ ಸಂಬಂಧಗಳನ್ನು ಹೊಂದಲು ಹಾತೊರೆಯುತ್ತಿತ್ತು. ಈ ಹೊಸ ಸಿಪಾಯಿಗಳು ತಮ್ಮ ಸೇವೆಯ ಪ್ರತಿಯಾಗಿ ಹೆಚ್ಚಿನ ಪ್ರಮಾಣದ ಹಣವನ್ನು ಪಡೆದುಕೊಳ್ಳುತ್ತಿದ್ದರು.

ಈ ಅಶ್ವದಳವನ್ನು ಮತ್ತೆ ಮೂರು ಭಾಗಗಳಾಗಿ ವಿಂಗಡಿಸಲಾಗಿತ್ತು. ಮೊದಲನೆಯದು ವಿದೇಶಿ ಅಶ್ವಪಡೆ, ಎರಡನೆಯದಾಗಿ ಭಾರತೀಯ ಮುಸ್ಲಿಂರ ಅಶ್ವಪಡೆ ಹಾಗು ಮೂರನೆಯದಾಗಿ ಸಿಲೇದಾರರು. ಸುಲ್ತಾನನು ಸರ್ವೋತ್ತಮ ದಂಡನಾಯಕನಾಗಿದ್ದನು. ಪ್ರಧಾನ ಮಂತ್ರಿ ಅಥವಾ ವಕೀಲ–ಇ–ಸಲ್ತನತನು ಭದ್ರತಾ ಪಡೆಯ ಹಾಗೂ ಮಿಲ್ಟ್ರಿ ವಿಭಾಗದ ಉಸ್ತುವಾರಿಯ ಮುಖ್ಯ ದಂಡನಾಯಕನಾಗಿದ್ದನು. ಆತನ ಕೈಕೆಳಗೆ ೫೦೦೦ ದರ್ಜೆಯಿಂದ ೧೦೦ ರ ದರ್ಜೆಯವರೆಗಿನ ಮನಸಬ್‌ದಾರರು ಬೇರೆಬೇರೆಯಾಗಿ ವರ್ಗಾಯಿಸಲ್ಪಟ್ಟಿದ್ದರು. ಅಲಿ ಆದಿಲ್‌ಶಾಹನು ಸ್ಯನ್ಯದ ನೇಮಕಾತಿಯನ್ನು ಖುದ್ದಾಗಿ ಪರಿಶೀಲಿಸುತ್ತಿದ್ದನು. ತದನಂತರದಲ್ಲಿ ಈ ಕಾರ್ಯವನ್ನು ಪ್ರಧಾನ ಮಂತ್ರಿಗೆ ವಹಿಸಿಕೊಡಲಾಯಿತು. ಮನಸಬ್‌ದಾರರು ಅಶ್ವ ಸೈನ್ಯದ ತುಕಡಿಯನ್ನು ಸ್ವತಂತ್ರ್ಯವಾಗಿ ನೇಮಿಸಿಕೊಳ್ಳುತ್ತಿದ್ದರು. ಹಾಗೂ ನಿರ್ವಹಣೆ ಮಾಡುತ್ತಿದ್ದರು. ಬಹುಶಃ ಕೇಂದ್ರ ಸರಕಾರದಿಂದ ಯಾವುದೆ ತರಹದ ತೀಕ್ಷಣ ಪರಶೀಲನೆಗಳು ಆಗುತ್ತಿರಲಿಲ್ಲ.

ಮಹಮ್ಮದ ಆದಿಲ್‌ಶಾಹನು ಮನಸಬ್‌ದಾರರು ಮತ್ತು ಜಹಗೀರದಾರರು ಹೊಂದಿರುವ ಸೈನ್ಯದ ತುಕಡಿಗಳನ್ನು ತೀಕ್ಷ್ಣವಾಗಿ ಪರಿಶೀಲಿಸುವ ಪ್ರಯತ್ನ ಮಾಡಿದನು. ಅವರು ಸುಲ್ತಾನನ ಸೇವೆಗಾಗಿ ಕಾಪಾಡಿಕೊಂಡು ಬಂದಿರುವಂತಹ ಸೈನ್ಯದ ತುಕಡಿಯನ್ನು ಆಗಾಗ ಪರೀಕ್ಷಿಸುವ ಪದ್ಧತಿಯನ್ನು ಜಾರಿಗೆ ತಂದನು. ಸುಲ್ತಾನನ ಕರ್ತವ್ಯಕ್ಕಾಗಿ ನೇಮಕ ಹೊಂದಿರುವಂತಹ ಮೇಲ್ವಿಚಾರಕರು ಮೇಲಿಂದ ಮೇಲೆ ತಪಾಸಣೆ ಮಾಡಲು ಅನುಕುಲವಾಗಲು ಅವರು ಸೈನಿಕರ ಹಾಜರಾತಿ ಪಟ್ಟಿಯನ್ನು, ದಾಖಲೆ ಹೊಂದಿರಬೇಕಾಗುತ್ತಿತ್ತು. ಮಹಮ್ಮದನು ಕುದರೆಗಳಿಗೆ 'ದಾಗ' (ಮುದ್ರೆ) ಹಾಕುವ ಪದ್ಧತಿಯನ್ನು ಜಾರಿಗೆ ತಂದನು.[೮೯] ಈ ಅಶ್ವಪಡೆಯ ಮುಖ್ಯಸ್ಥನನ್ನು ಹವಾಲ್ದಾರ–ಇ–ಅಫ್ರಾದ್ ಎಂದು ಕರೆಯುತ್ತಿದ್ದರು. ಮಹಮ್ಮದ ಇಬ್ರಾಹಿಮ ಜುಬೇರಿ ಕೊಡುವ ಮಾಹಿತಿ ಪ್ರಕಾರ ಮಹಮ್ಮದ ಆದಿಲ್‌ಶಾಹನು ೮೦,೦೦೦(ಎಂಭತ್ತು ಸಾವಿರ) ಅಶ್ವಪಡೆಯನ್ನು ಹೊಂದಿದ್ದನು.

೨) ಕಾಲ್ದಳ :

ಇವರ ಕಾಲದ ಕಾಲ್ದಳವು ಭಾರತೀಯ ಮುಸ್ಲೀಮರು, ಹಿಂದೂಗಳು ಮತ್ತು ಗುಲಾಮರಿಂದ ಕೂಡಿತ್ತು. ಅವರು ಖಡ್ಗ, ಭರ್ಚಿ, ಬಿಲ್ಲುಬಾಣಗಳಿಂದ ಶಸ್ತ್ರಸಜ್ಜಿತರಾಗಿರುತ್ತಿದ್ದರು. ಕಾಲ್ದಳ ಸೈನಿಕರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿರುತ್ತಿದ್ದು, ಬಹುಶಃ ಅವರು ಸೇನಾಧಿಕಾರಿಯಿಂದ ನೇಮಕ ಹೊಂದಿದವರಾಗಿರುತ್ತಿದ್ದು, ಆದರೂ ಕೂಡ ಅವರು ಪ್ರಧಾನ ಮಂತ್ರಿಯ ಕೈಕೆಳಗೆ ಕೆಲಸ ಮಾಡುತ್ತಿದ್ದರು. ಜಾಹಗೀರುದಾರರು ಅಶ್ವಪಡೆಯ ಜೊತೆಗೆ ನಿರ್ಧಿಷ್ಟ ಸಂಖ್ಯೆಯ ಕಾಲ್ದಳವನ್ನು ಹೊಂದಿರಬೇಕಾಗುತ್ತಿತ್ತು. ಆದರೆ ಆ ಸಂಖ್ಯೆಯು ಅಶ್ವ ಸೈನ್ಯದ ಸಮನಾಗಿರಬೇಕಿತ್ತೋ ಅಥವಾ ಅದಕ್ಕಿಂತ ಹೆಚ್ಚಾಗಿರಬೇಕಿತ್ತೋ ಎಂಬುದು ಸ್ಪಷ್ಟವಾಗಿಲ್ಲ.

ಆದಿಲ್‌ಶಾಹಿಗಳು ತಮ್ಮ ಪದಾತಿ ದಳವನ್ನು ರೆಜಿಮಂಟುಗಳು, ಬ್ರಿಗೇಡುಗಳು ಮತ್ತು ಡಿವಿಜನ್‌ಗಳೆಂದು ವಿಭಾಗಿಸಿದ್ದರು. ಹತ್ತು ಜನರಿಂದ ಕೂಡಿದ ಅತಿ ಚಿಕ್ಕ ಘಟಕವು 'ನಾಯಕ' ಎಂಬುವವನ ವಶದಲ್ಲಿತ್ತು. ಅಂತಹ ಘಟಕಗಳು ಒಬ್ಬ ಜಮಾಲ್‌ದಾರನ ಕೈಕೆಳಗೆ ಇರುತ್ತಿತ್ತು. ಇಬ್ಬರು ಅಥವಾ ಮೂವರು ಜಮಾಲ್‌ದಾರರು ಸೇರಿ ಒಂದು 'ಹಾಜಾರಿ' ಅಥವಾ 'ಡಿವಿಜನ್' ಆಗುತ್ತಿತ್ತು. ಈ ಪದಾತಿ ದಳಗಳ ಮುಖ್ಯಸ್ಥನನ್ನು 'ಸರ್‌ನೌಬತ' ಎಂದು ಕರೆಯುತ್ತಿದ್ದರು.

ಒಂದನೆಯ ಇಬ್ರಾಹಿಮ ಆದಿಲ್‌ಶಾಹನವರೆಗೆ ಸಿಲೇದಾರ ಮತ್ತು ಬಾರ್ಗೀರ ಪದ್ಧತಿಗಳು ಜಾರಿಯಲ್ಲಿದ್ದವು. ನಂತರದಲ್ಲಿ ಬಿಜಾಪುರ ಸೈನ್ಯವು 'ಫೆಜಲ್‌ಬಶ್' ಎಂದು ಕರೆಯಲ್ಪಡುವ, ಕೆಂಪು ಶಿರಸ್ತ್ರಾಣಗಳನ್ನು ಧರಿಸುವ ಕೆಂಪು ತಲೆಯ ಇರಾನಿ ಸೈನ್ಯದ ವಿನ್ಯಾಸವನ್ನು ಅನುಸರಿಸಿತ್ತು.[೯೦] ಮಹಮ್ಮದ ಇಬ್ರಾಹಿಮ ಜುಬೇರಿ ತಿಳಿಸುವಂತೆ ಮಹಮ್ಮದ ಆದಿಲ್‌ಶಾಹನು ೨,೫೦,೦೦೦ ಕಾಲ್ದಳವನ್ನು ಹೊಂದಿದ್ದನು.

೩) ಗಜದಳ :

ಆದಿಲ್‌ಶಾಹಿಗಳ ಕಾಲದಲ್ಲಿಯೂ ಕೂಡ ಯುದ್ದಗಳಲ್ಲಿ ಆನೆಗಳನ್ನು ಬಳಸುತ್ತಿದ್ದರು. ಸುಲ್ತಾನರು ಆನೆಗಳಿಗೆ ಹೆಚ್ಚಿನ ಬೆಲೆ ಮತ್ತು ಮಹತ್ವ ಕೊಡುತ್ತಿದ್ದರು. ಯುದ್ಧದ ಸಮಯದಲ್ಲಿ ಆನೆಗಳ ಸೊಂಡಿಲಿಗೆ ಮತ್ತು ದಂತಗಳಿಗೆ ಖಡ್ಗಗಳನ್ನು ಕಟ್ಟಲಾಗುತ್ತಿತ್ತು. ಅಲ್ಲದೆ ಸೊಂಡಿಲಿಗೆ ಉಕ್ಕಿನ ಕವಚವನ್ನು ತೊಡಿಸಿರಲಾಗುತ್ತಿತ್ತು. ಆನೆಗಳ ಮೇಲೆ ನಾಲ್ಕು ಜನ ಶಸ್ತ್ರ ಸಜ್ಜಿತರಾದ ಸಿಪಾಯಿಗಳಿರುತ್ತಿದ್ದರು. ಯುದ್ಧಕ್ಕಾಗಿಯೇ ಆನೆಗಳನ್ನು ವಿಶೇಷವಾಗಿ ತರಬೇತಿಗೊಳಿಸುತ್ತಿದ್ದರು. ಯುದ್ಧ ಭೂಮಿಯನ್ನು ಪ್ರವೇಶಿಸಿದ ನಂತರ ಆನೆಗಳು ತಮ್ಮ ದಂತಗಳಿಂದ ಕುದುರೆಗಳನ್ನು ಮತ್ತು ಹೋರಾಡುತ್ತಿರುವ ಯೋಧರನನ್ನು ಬಲವಾಗಿ ಹೊಡೆಯುತ್ತಿದ್ದವು. ಇದರಿಂದ ಯುದ್ಧವನ್ನು ಅತಿ ಕಡಿಮೆ ಅವಧಿಯಲ್ಲಿ ಜಯಗಳಿಸಲು ಸಹಾಯವಾಗುತ್ತಿತ್ತು. ಒಂದು ವೇಳೆ ಆನೆಗಳು ಗಾಯಗೊಂಡರೆ ಅವುಗಳ ಬದಲಾಗಿ ಇತರ ಆನೆಗಳು ರಣರಂಗವನ್ನು ಪ್ರವೇಶಿಸುತ್ತಿದ್ದವು.[೯೧] ಹಲವು ಬಾರಿ ಯುದ್ಧದ ಸಂದರ್ಭದಲ್ಲಿ ತೋಪುಗಳ ಶಬ್ದದಿಂದ ಮತ್ತು ಇತರ ಕಾರಣಗಳಿಂದ ಓಡಲಾರಂಬಿಸುತ್ತಿದ್ದವು. ಇದರಿಂದ ಅವರ ಸ್ವಂತ ಸೈನ್ಯಕ್ಕೆ ಅಪಾರ ಹಾನಿಯುಂಟಾಗುತ್ತಿತ್ತು. ಈ ಗಜದಳದ ಮುಖ್ಯಸ್ಥನನ್ನು 'ದರೋಗಾ–ಇ–ಫಿಲ್‌ಖಾನಾ' ಎಂದು ಕರೆಯುತ್ತಿದ್ದರು. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ೫೩೦ ಆನೆಗಳು ಇದ್ದವೆಂದು ಜುಬೇರಿ ತಿಳಿಸಿದ್ದಾನೆ.

೪) ಗೋಲಂದಾಜುಗಳು :

ಆದಿಲ್‌ಶಾಹಿಗಳು ಫಿರಂಗಿ ಪಡೆಗೆ ಗೋಲಂದಾಜುಗಳೆಂದು ಕರೆಯುತ್ತಿದ್ದರು. ಇಂದಿನ ಹೊಸ ಮಾದರಿಯ ತೋಪುಗಳಿರದಿದ್ದರೂ ಕೂಡ ಗೋಲಂದಾಜು ವಿಭಾಗದಲ್ಲಿ ಸಿಡಿಮದ್ದಿನ ಬಾಣಗಳು, ಬರ್ಚಿಗಳು, ಕೈಬಾಂಬಗಳು, ಸುಡುಮದ್ದುಗಳು ಚಾಲ್ತಿಯಲ್ಲಿದ್ದವು. ಕೈಬಾಂಬಗಳು ಪಟ್ಟಾಕೆಗಳು ಸಮಾನ್ಯವಾಗಿದ್ದವು.

ಬಿಜಾಪುರದ ಫಿರಂಗಿ ಪಡೆಯು ದೊಡ್ಡ ಪ್ರಮಾಣದ ತೋಪನ್ನು ಹೊಂದಿತ್ತು. ಮಲ್ಲಿಕ–ಇ–ಮೈದಾನ ಎಂಬ ದೊಡ್ಡ ತೋಪನ್ನು ಕ್ರಿ.ಶ. ೧೬೩೨ ರಲ್ಲಿ ಮುರಾರಿ ಪಂಡಿತನು ಪೆರೆಂಡಾದಿಂದ ಬಿಜಾಪುರಕ್ಕೆ ತಂದನು. ಅದು ಸುಮಾರು ೫೫ ಟನ್ ತೂಕವಿದೆ. ಇತರ ಭಾರತೀಯ ಅರಸರಂತೆ ಬಿಜಾಪುರದ ಸುಲ್ತಾನರು ಕೂಡ ಸಿಡಿಮದ್ದಿನ ಪುಡಿಯನ್ನು ಯುರೋಪಿಯನ್ನರಿಂದ ಕೊಂಡುಕೊಳ್ಳುತ್ತಿದ್ದರು. ಭಾರತದಲ್ಲಿ ತಯಾರಾಗುತ್ತಿದ್ದ ಪುಡಿಯು ಗುಣಮಟ್ಟದಾಗಿರಲ್ಲಿಲ್ಲ. ಉದ್ದನೆಯ ಮತ್ತು ವಿಶಾಲವಾದ ಕಬ್ಬಿಣದ ಸರಳುಗಳಿಂದ ಕೂಡಿದ ಹಾಗೂ ಕಬ್ಬಿಣದ ಬಳೆಗಳಿಂದ ಎರಡನ್ನು ಒಟ್ಟಿಗೆ ಕೂಡಿಸಿರುವ ಒಂದು ರೀತಿಯ ತೋಪನ್ನು ಉಪಯೋಗಿಸುವುದು ದಕ್ಷಿಣ ಭಾರತದಲ್ಲಿ ಸಾಮಾನ್ಯವಾಗಿತ್ತು. ಯುರೋಪಿನ ತೋಪು ಚಲಾಯಿಸುವ ಜನರು ದಕ್ಷತೆ ಮತ್ತು ಕೌಶಲ್ಯಕ್ಕೆ ಹೆಸರುವಾಸಿಯಾಗಿದ್ದರು. ಹಿಂದೂಗಳು ಕೂಡ ಈ ಕಲೆಯನ್ನು ಕಲಿತುಕೊಂಡರು.

[illegible]

[illegible]

[illegible]

ಮಹಮ್ಮದ ಆದಿಲ್‌ಶಾಹನ ಕಾಲದ ಪ್ರಮುಖ ಸೇನಾಧಿಕಾರಿಗಗಳೆಂದರೆ, ರುಸ್ತುಮ-ಇ-ಜಮನ್ (ರಣದುಲ್ಲಾಖಾನ) ಪೇಶಜಂಗಖಾನ, ಫರ್ಹದಖಾನ, ಅಂಕುಶಖಾನ, ಖೈರಾತಖಾನ, ಅಲೀ ಖುದಾವಂದಖಾನ, ಮಹಮ್ಮದ ಯಾಕುತಖಾನ, ರಘು ಪಂಡಿತ, ಯಾಕುತಖಾನಿ, ಖೇಲೋಜಿ ಭೋಸಲೆ, ಮತ್ತು ಸರ್ಜೇರಾವ ಘಾಟಗೆ[31] ಮುಂತಾದವರಿದ್ದರು.

ಕ) ಕಂದಾಯ ಆಡಳಿತ :

ಯಾವುದೆ ಸಾಮ್ರಾಜ್ಯದ ಅಭಿವೃದ್ಧಿ ಮತ್ತು ಸುಭದ್ರತೆಯ ಅದರ ಹಣಕಾಸಿನ ವ್ಯವಸ್ಥೆಯನ್ನು ಅವಲಂಬಿಸುರುತ್ತದೆ. ಅಂದರೆ ರಾಜಭಂಡಾರವನ್ನು ಸದಾ ತುಂಬಿರಬೇಕಾಗಿರುತ್ತಿತ್ತು. ಆದ್ದರಿಂದಲೇ ರಾಜ್ಯದ ಸಪ್ತಾಂಗಗಳಲ್ಲಿ ಕೋಶ (ಖಜಾನೆ ಅಥವಾ ಭಂಡಾರ)ವನ್ನು ಸೇರಿಸಿದ್ದಾರೆ. ಇಂತಹ ಕೋಶ ಅಥವಾ ರಾಜಭಂಡಾರವನ್ನು ತುಂಬುವ ಇಲ್ಲವೆ ಭರ್ತಿ ಮಾಡುವ ಅನೇಕಾನೇಕ ಉಪಾಯಗಳನ್ನು ಕೌಟಿಲ್ಯನು ವಿಶಾಲವಾದ ಗುಂಪುಗಳಲ್ಲಿ ಕ್ರೋಢಿಕರಿಸಿದ್ದಾನೆ. ಆದರೂ ಕೂಡ ವಿಶಾಲವಾದ ತಳಹದಿಯ ಮೇಲೆ ರಾಜ್ಯಾದಾಯವನು ಸ್ಥೂಲವಾಗಿ ತೆರಿಗೆಗಳು, ದಂಡಗಳು ಮತ್ತು ಕಾಣಿಕೆಗಳು ಹಾಗೂ ಇತರ ಮೂಲಗಳಿಂದ ಬರುವ ಆದಾಯಗಳೆಂದು ವಿಂಗಡಿಸಬಹುದಾಗಿದೆ. ಈ ರೀತಿಯ ವಿವಿಧ ಮೂಲಗಳಿಂದ ಬರುವಂತಹ ಆದಾಯದಿಂದ ರಾಜ್ಯವನ್ನು ಶ್ರೀಮಂತಗೊಳಿಬಹುದಾಗಿತಲ್ಲದೆ, ಸುಭದ್ರವಾಗಿಟ್ಟುಕೊಳ್ಳಬಹುದಾಗಿತ್ತು.

ಡ) ನ್ಯಾಯಾಡಳಿತ :

ಬಿಜಾಪುರದ ಆದಿಲ್‌ಶಾಹಿಗಳು ತಮ್ಮನ್ನು ತಾವು ನಿಷ್ಠಾವಂತ, ನಿಷಕ್ಷಪಾತ ನ್ಯಾಯ ವಿತರಕರು ಎಂದು ಕರೆದುಕೊಂಡಿದ್ದಾರೆ. ಸುಲ್ತಾನನು ನ್ಯಾಯಾಂಗದ ಮೂಲ ವ್ಯಕ್ತಿಯಾಗಿದ್ದು, ಬಿಜಾಪುರ ಸರಕಾರವು ಮಾನ್ಯ ಮಾಡಿದ ಖುರಾನ್‌ದಲ್ಲಿ ಕಾನೂನಿನ ತತ್ವಗಳನ್ನು ಎತ್ತಿ ಹಿಡಿಯುವುದು ಮತ್ತು ಅವುಗಳನ್ನು ಕಾಪಾಡಿಕೊಂಡು ಬರುವುದು ಅವನ ಜವಾಬ್ದಾರಿಯಾಗಿದ್ದಿತ್ತು.

ಮಹಮ್ಮದ ಆದಿಲ್‌ಶಾಹನು ಹೊರಡಿಸಿದ ಶಾಸನವೊಂದರಲ್ಲಿ ಬಾದಶಹನಿಗೆ ಇರಬೇಕಾದ ಲಕ್ಷಣಗಳನ್ನು ತಿಳಿಸುತ್ತ, " ಬಾದಶಹನಿಗೆ ನ್ಯಾಯ ನಿರ್ಣಯ ಮಾಡುವುದೇ ಅಲಂಕಾರ ಹಾಗೂ ಭೂಷಣಗಳೆಂದು ತಿಳಿದು ತನ್ನೆಲ್ಲ ಬುದ್ಧಿ ದೈರ್ಯಗಳನ್ನು ನ್ಯಾಯ ನಿರ್ಣಹಿಸುವುದರಲ್ಲಿ ಖರ್ಚು ಮಾಡಬೇಕು. ಯಾಕೆಂದರೆ ಪಾರ್ಶಿಯಲ್ಲಿ ಹೀಗೆ ಹೇಳಲಾಗಿದೆ. " ಸಂಪೂರ್ಣ ಆಯುಷ್ಯದಲ್ಲಿ ಒಂದು ಘಟಿಕಾ ನ್ಯಾಯ ನೀಡಿದರೆ ನೂರು ವರ್ಷ ವೈರಾಗ್ಯ ಧಾರಣ ಮಾಡಿ ಅಲ್ಲಾನ ಸೇವೆ ಮಾಡಿದ್ದಕ್ಕಿಂತ ಅಧಿಕ ಫಲವಿದೆ." ಇದರಲ್ಲಿಯ ಭಾವಾರ್ಥವೆಂದರೆ, ಒಂದು ಘಟಿಕಾ ನ್ಯಾಯ ನಿರ್ಣಯಿಸುವುದರಿಂದ ನೂರು ವರ್ಷಗಳ ತಪಶ್ಚರ್ಯಕ್ಕೆ ಅಧಿಕವಾಗಿದೆ. ಬಾದಶಹನು ಸ್ವತಃ ರಾಜ್ಯದ ಆಡಳಿತ ಮತ್ತು ರೈತಾಪಿ ಜನರನ್ನು ಲಕ್ಷ್ಯದಲ್ಲಿಟ್ಟುಕೊಂಡು ನ್ಯಾಯ ನೀಡುವಲ್ಲಿ ಕಿಂಚಿತ್ತೂ ಅಂತರ ಬೀಳದಂತೆ ನಡೆಯಬೇಕು. ಯಾಕೆಂದರೆ ರಾಜ್ಯದ ಸುಖ ಸೌಖ್ಯದಲ್ಲೇ ರಾಜ್ಯದ ವ್ಯವಸ್ಥೆ ಹಾಗೂ ಖಜಾನೆಯ ಸೌಖ್ಯ ಅಡಗಿದೆ."[32] ಎಂದು ತಿಳಿಸಿದ್ದಾನೆ.

ನ್ಯಾಯಾಡಳಿತವನ್ನು ಪ್ರಮುಖವಾಗಿ ಮೂರು ವಿಧವಾಗಿ ವಿಂಗಡಿಸಬಹುದು, ಅವುಗಳೆಂದರೆ, ೧) ಕವಾನಿನ್–ಇ–ಶರೀಯ, ೨) ಫರಮಿನ್–ಇ–ಶಾಹಿ ಮತ್ತು ೩) ಕವಾನಿನ್–ಇ–ಉರ್ಫ.

೧) ಕವಾನೆ ಶರೀಯ : ಕವಾನೆ ಶರೀಯವು ಪವಿತ್ರ ಕುರಾನ ಷರೀಫ ಮತ್ತು ಹದೀಸಗಳ ತತ್ವಗಳ ಮೇಲೆ ಅವಲಂಬಿಸಿದೆ. ಹದೀಸ ಎಂದರೆ ಪ್ರವಾದಿ ಮಹಮ್ಮದ ಪೈಗಂಬರರ ಸಹವರ್ತಿಗಳ ಅಭಿಪ್ರಾಯಗಳು. ಅದನ್ನೂ ಪರಿಗಣಿಸಲಾಗುತ್ತಿತ್ತು. ಸಾರ್ವಜನಿಕ ಕಲ್ಯಾಣದ ತತ್ವದ ಮೇಲೆ ಆಧಾರಿತ ಮತ್ತು ಆ ಮೊದಲಿನ ಖಾಜಿಗಳ ನ್ಯಾಯವಿತರಣೆಗಳಲ್ಲಿಯ ತೀರ್ಪುಗಳನ್ನು ಪರಿಗಣಿಸಲಾಗುತ್ತಿತ್ತು. ಧಾರ್ಮಿಕ ವಿಷಯಗಳಲ್ಲಿ ವಿಶೇಷವಾಗಿ ವಚನ ಭ್ರಷ್ಟ ದೈವ ವಿರೋಧ ಮತ್ತು ಮದುವೆಗಳು ಮುಂತಾದವುಗಳಲ್ಲಿ ಶರೀಯದ ಕಾನೂನುಗಳನ್ನು ನಿರ್ದಾಕ್ಷಿಣ್ಯವಾಗಿ ಪರಿಪಾಲಿಸಲಾಗುತ್ತಿತ್ತು. ಈ ವಿಷಯಗಳಲ್ಲಿ ಮುಸ್ಲಿಮೇತರರನ್ನು ಶರೀಯ ಕಾನೂನಿನಿಂದ ಹೊರತು ಪಡಿಸಲಾಗಿತ್ತು.

ಶರೀಯದ ಪ್ರಚಾರಕ್ಕಾಗಿ 'ಮುಹತಶೀಬ' ಎಂಬ ವಿಶೇಷ ಅಧಿಕಾರಿಯು ಇರುತ್ತಿದ್ದನು. ಆತ ಮತ್ತು ಆತನ ಕಾರ್ಯಾಲಯದ ಸಿಬ್ಬಂದಿಯ ಕೆಲಸವೆಂದರೆ, ಸ್ಥಳೀಯರಿಗೆ ಗ್ರಾಹಕರಿಗೆ ಮತ್ತು ಮಾರಾಟಗಾರರಿಗೆ ಇಸ್ಲಾಮ ರೂಢಿಗಳನ್ನು ಸಂಪ್ರದಾಯಗಳನ್ನು ಮತ್ತು ಶರೀಯದ ಕಾನೂನುಗಳನ್ನು ತಿಳಿಸಿ ಹೇಳುವುದೇ ಆಗಿತ್ತು. ಶರೀಯ ವಿರೋಧಿಸುವ ಯಾವ ಕಾರ್ಯಗಳನ್ನೂ ಮಾಡಬಾರದೆಂದು ತಾಕೀತು ಮಾಡುವುದಾಗಿತ್ತು.

ಸಾಮಾನ್ಯವಾಗಿ ಕಾನೂನುಗಳು ಎಲ್ಲರಿಗೂ ಒಂದೇ ರೀತಿಯಾಗಿ ಅನ್ವಯವಾಗುತ್ತಿದ್ದುವು. ಅಲ್ಲಿ ಮೇಲು ಕೀಳುವರ್ಗ ಎಂಬ ಭೇದ ಭಾವ ಇರುತ್ತಿರಲಿಲ್ಲ. ಶರೀಯದ ವಿರುದ್ಧವಾಗಿ ಸ್ವತಃ ಸುಲ್ತಾನನೂ ನಡೆಯದಿದ್ದರೆ ಅವನಿಗೂ ಶಿಕ್ಷೆ ಇರುತ್ತಿತ್ತು. ಪ್ರಧಾನ ಮಂತ್ರಿ ಇತರ ಅಧಿಕಾರಿಗಳೂ ಇದಕ್ಕೆ ಹೊರತಾಗಿರಲಿಲ್ಲ. ಅದರಂತೆ ಭ್ರಷ್ಟ ಅಧಿಕಾರಿಗಳನ್ನೂ ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಲಾಗುತ್ತಿತ್ತು. ತಮ್ಮ ಸೇವೆಯನ್ನು ನಿರ್ಲಕ್ಷಿಸುವ ಅಧಿಕಾರಿಗಳು, ತಮ್ಮ ಸ್ಥಾನವನ್ನು ದುರುಪಯೊಗ ಮಾಡಿಕೊಳ್ಳುವ ಅಧಿಕಾರಿಗಳು ಇವರಿಗೆಲ್ಲ ಶರೀರದ ಕಾನೂನಿನನ್ವಯ ಉಗ್ರ ಶಿಕ್ಷೆ ಕಾದಿರುತ್ತಿತ್ತು. ಸ್ಥಾನ ದುರುಪಯೋಗ ಪಡಿಸಿಕೊಂಡ ಅಧಿಕಾರಿಗಳಲ್ಲಿ ಕೆಲವರು ಮರಣ ಶಿಕ್ಷೆಗೆ ಗುರಿಯಾದ ಉದಾಹರಣೆಗಳೂ ಇವೆ. ಅರವನೆಯ ಸಂಬಂಧಿಕರು, ಮಕ್ಕಳು, ಹೆಂಡಂದಿರು, ಅಕ್ಕ, ತಂಗಿಯರು ಅಣ್ಣ ತಮ್ಮಂದಿರು ಅಷ್ಟೇಕೆ ಗುರುವರ್ಗದವರೂ ಕಾನೂನಿಗೆ ಹೊರತಾಗಿರಲಿಲ್ಲ. ಗುಲ್ಬರ್ಗಾದ ಪ್ರಖ್ಯಾತ ಸಂತರಾದ ಹಜರತ ಗೇಸೂ ದರಾಜ ಬಂದೇ ನವಾಜರ ಮೊಮ್ಮಗ ಬೀದಿಯ ಮಾರುಕಟ್ಟೆಯಲ್ಲಿ ಸೆರೆಯನ್ನು ಕುಡಿದ ತಪ್ಪಿಗೆ ಇನ್ನೂರು ಛಡಿ ಏಟುಗಳ ಉಗ್ರ ಶಿಕ್ಷೆಯನ್ನು ಅನುಭವಿಸಬೇಕಾಯಿತು.[೧೪]

೨) ಫರ್ಮಾನೆ ಶಾಹಿ : ಫರ್ಮಾನುಗಳೆಂದರೆ ರಾಜ್ಯದ ಪರಿಪತ್ರಗಳು, ಆದೇಶಗಳು. ಸುಲ್ತಾನನು ಕಾಲಕಾಲಕ್ಕೆ ಹೊರಡಿಸಿದ ಇಂಥ ಫರ್ಮಾನಗಳು ರಾಜ್ಯದ ಆಡಳಿತವನ್ನು ಸುವ್ಯವಸ್ಥೆಯಲ್ಲಿ ಇಡಲು

ಸಹಾಯವಾಗುತ್ತಿದ್ದುವು. ಫರ್ಮಾನಗಳು ಕ್ರಿಮಿನಲ್ ಅಪರಾಧ ಹಾಗೂ ನಾಗರಿಕ ಸೇವೆ ಎರಡರ ಬಗ್ಗೆಯೂ ಇರುತ್ತಿದ್ದವು.

ಧಾರ್ಮಿಕದ ಹೊರತಾಗಿ ಇನ್ನಿತರ ವಿಷಯಗಳಲ್ಲಿ, ಸ್ಥಳೀಯ ಅಧಿಕಾರಿಗಳು, ನ್ಯಾಯಾಧೀಶರು ಮತ್ತು ರಾಜರುಗಳು ತೆಗೆದುಕೊಂಡ ನಿರ್ಣಯಗಳು, ಫರ್ಮಾನುಗಳ ಮೂಲಕ ಹೊರಡಿಸಿದ ಆದೇಶಗಳು, ಇತ್ಯಾದಿ ಫರ್ಮಾನೆ ಶಾಹಿ ಅಡಿಯಲ್ಲಿ ಬರುತ್ತಿದ್ದುವು. ಮಹತ್ವದ ನಿಯುಕ್ತಿಗಳು, ಕೆಲಸದಿಂದ ತೆಗೆದು ಹಾಕುವಿಕೆ, ಜಹಗೀರಗಳನ್ನು ಹಾಕಿ ಕೊಡುವುದು, ರದ್ದು ಮಾಡುವುದು, ಮುಂತಾದ ವಿಷಯಗಳೂ ಬರುತ್ತಿದ್ದುವು. ಅವುಗಳ ವಿಚಾರಣೆಯಾಗಿ ತೀರ್ಪುಗಳನ್ನು ಫರ್ಮಾನುಗಳ ಮೂಲಕ ಕೊಡಲಾಗುತ್ತಿತ್ತು. ಕೆಲವೊಂದು ಸಂದರ್ಭಗಳಲ್ಲಿ ಈ ಫರ್ಮಾನುಗಳನ್ನು ಕೆಂಪು ಮಸಿಯಿಂದಲೂ ಬರೆಯಲಾಗುತ್ತಿತ್ತು. ಅವುಗಳಿಗೆ ಸುಲ್ತಾನನ ಮೊಹರು ಒತ್ತಲಾಗುತ್ತಿತ್ತು. ವಿವಿಧ ರಾಜ್ಯಗಳ ಮಧ್ಯದ ಗಡಿ ಸಮಸ್ಯೆಗಳಲ್ಲೂ ಇಂಥ ಫರ್ಮಾನುಗಳ ವಿನಿಮಯ ನಡೆದಿದೆ. ಉಚ್ಚ ಅಧಿಕಾರಿಗಳು, ನ್ಯಾಯಾಧೀಶರು(ಖಾಜಿ) ಮುಂತಾದವರ ಮೊಹರಿನೊಂದಿಗೆ ಸುಲ್ತಾನನ ಮೊಹರೂ ಅವುಗಳೊಂದಿಗೆ ಇರುತ್ತಿತ್ತು.

ಫರ್ಮಾನೆ ಶಾಹಿಗಾಗಿ ಒಂದು ಪ್ರತ್ಯೇಕ ಕಾರ್ಯಾಲಯವಿತ್ತು. ಅಲ್ಲಿ ಫರ್ಮಾನುಗಳನ್ನು ಬರೆಯಲು ಸಹಾಯಕರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಅದರಲ್ಲಿ ಎರಡು ಪ್ರಧಾನ ವಿಭಾಗಗಳಿರುತ್ತಿದ್ದುವು. ಒಂದು 'ಮುನಶೀ–ಇ–ದರಗಾ' ಎನಿಸಿದರೆ, ಇನ್ನೊಂದು 'ತುಘ್ರಾ ನವಿಸನ್–ಇ–ಬರ್ಗಾ' ಎನಿಸುತ್ತಿತ್ತು. 'ಮುನಶೀ–ಇ–ದರಗಾ' ಮುಕ್ತ ನ್ಯಾಯಾಲಯವಾದರೆ, 'ತುಘ್ರಾ ನವಿಸನ್–ಇ–ಬರ್ಗಾ' ರಹಸ್ಯ ನ್ಯಾಯಾಲಯವಾಗಿತ್ತು.

ಫರ್ಮಾನುಗಳನ್ನು ವಿಶೇಷ ಸಂದೇಶ ವಾಹಕರೊಂದಿಗೆ ತರಫದಾರರಿಗೆ ಮತ್ತು ಇತರ ವಿಶೇಷ ಅಧಿಕಾರಿಗಳಿಗೆ ಕಳಿಸಲಾಗುತ್ತಿತ್ತು. ಅವುಗಳು ಪ್ರತ್ಯೇಕ ಅಧಿಕಾರಿಗಳ ಹೆಸರುಗಳನ್ನು ಒಳಗೊಂಡಿರುತ್ತಿದ್ದುವು. ಮತ್ತು ಅದರಲ್ಲಿ ಕಾರ್ಯ ಪ್ರವೃತ್ತರಾಗುವ ಆದೇಶವೂ ಇರುತ್ತಿತ್ತು. ಆದೇಶಗಳನ್ನು ಪಾಲಿಸದಿದ್ದವರಿಗೆ ಶಿಕ್ಷೆಯನ್ನು ಕೊಡಲಾಗುತ್ತಿತ್ತು.[೬೫]

೩) ಕವಾನೆ ಉರ್ಫ : ಮೂರನೆಯದಾಗಿ ಕವಾನೆ ಉರ್ಫ ಎಂಬ ನ್ಯಾಯ ವ್ಯವಸ್ಥೆ ಇತ್ತು. ಇದಕ್ಕೆ ಪವಿತ್ರ ಕುರಾನ ಷರೀಫ, ಹದೀಸಗಳು ಅಥವಾ ಫರ್ಮಾನುಗಳ ಆದೇಶಗಳ ಅವಶ್ಯಕತೆ ಇರಲಿಲ್ಲ. ಸ್ಥಳೀಯ ರೂಢಿ, ಸಂಪ್ರದಾಯಗಳು ಈ ವ್ಯವಸ್ಥೆಗೆ ಆಧಾರವಾಗಿದ್ದುವು. ಉರ್ಫ ಎಂದರೆ ಸಮಾಜ ಸ್ವೀಕರಿಸಿದ್ದು, ರೂಢಿಯಲ್ಲಿದ್ದ ಸಂಪ್ರದಾಯಗಳನ್ನು ಅನುಸರಿಸಿ ಬಂದ ನಿರ್ಣಯಗಳಿಗೂ ಸುಲ್ತಾನನ ಮನ್ನಣೆ ಇತ್ತು ಎಂಬುದೇ ಇಲ್ಲಿಯ ವಿಶೇಷ. ಉದಾಹರಣೆಗೆ 'ಕೌಲನಾಮೆ' ಎಂಬುದು ಒಂದು ವ್ಯವಸ್ಥೆ. ಅದು ಇಬ್ಬರು ಅಥವಾ ಅಧಿಕ ಜನರು ಅಥವಾ ಸಮಾಜಗಳು ಒಪ್ಪಿ ಮಾಡಿಕೊಂಡ ಒಪ್ಪಂದ ಪತ್ರಗಳು. ಅದು ರಾಜ ಮತ್ತು ಆತನ ಅಧೀನ ಯಾವುದೇ ಅಧಿಕಾರಿ ಅಥವಾ ಇನ್ನೊಬ್ಬ ಬೇರೆ ರಾಜ್ಯದ ರಾಜ್ಯದ ರಾಜ ಮತ್ತು ರಾಜ್ಯದ ಜನರ ಮಧ್ಯೆ ಅಥವಾ ಇಬ್ಬರು ಪ್ರತ್ಯೇಕ ವ್ಯಕ್ತಿಗಳ, ಸಮಾಜಗಳ ಮಧ್ಯದ ಕೌಲನಾಮೆಯೂ ಆದೀತು.[೬೬]

ಸುಲ್ತಾನನ ಇತರ ಕಾನೂನುಗಳಂತೆ ಸಾಮಾನ್ಯವಾಗಿ ಇವುಗಳನ್ನೂ ಜನರು ಒಪ್ಪುತ್ತಿದ್ದರು. ದಕ್ಷಿಣ ಭಾರತದ ಇತಿಹಾಸದಲ್ಲಿ 'ಕೌಲನಾಮೆ' ಒಂದು ವಿಶಿಷ್ಟ ಪದ್ಧತಿ ಎಂದೇ ಇತಿಹಾಸಕಾರರು ಗುರುತಿಸಿದ್ದಾರೆ. ಉತ್ತರ ಭಾರತದಲ್ಲಿ 'ಅಮನ ನಾಮಾ' ಗೆ ಸಮಾನಾಂತರವಾದದ್ದು ಈ ದಖನಿ ಶಬ್ದ 'ಕೌಲನಾಮ' ಅದೊಂದು ರೀತಿಯ ಕ್ಷಮೆ, ಸುರಕ್ಷಿತೆ ಇತ್ಯಾದಿಗಳಿಗೆ ಇಬ್ಬರ ಮಧ್ಯದ ಒಪ್ಪಂದವೆಂದರೂ ಸರಿ. ಸರಕಾರೀ ಕೆಲಸ ಕಾರ್ಯಗಳಲ್ಲಿ ಕೂಡ ತಪ್ಪು ಆಗುವ ಸಂಭವ ಇದ್ದರೆ, ತಪ್ಪು ಆದರೆ, ಆ ಕುರಿತು ಮೇಲ್ಧಿಕಾರಿಗಳಿಂದ ಈ ರೀತಿಯ ಕೌಲನಾಮೆ ಮೂಲಕ ಸುರಕ್ಷಿತೆಯನ್ನು ಪಡೆಯಬಹುದಾಗಿತ್ತು. ಸುಲ್ತಾನನಿಂದ ಕೂಡ ಇಂಥ ಒಪ್ಪಂದವನ್ನು ಪಡೆಯಬಹುದಾಗಿತ್ತು. ಹಾಗೆ ಅದಕ್ಕೆ ಶಾಸನದ ಗೌರವವನ್ನು ಕೊಡಲಾಗಿತ್ತು.

ಮುಸ್ಲಿಮೇತರರ ಹಕ್ಕುಗಳು : ಧಾರ್ಮಿಕೇತರ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಗಳ ವಿಷಯದಲ್ಲಿ ಹಿಂದು-ಮುಸ್ಲಿಮೆಂಬ ಭೇದ ಭಾವ ಇರುತ್ತಿರಲಿಲ್ಲ. ಎಲ್ಲರಿಗೂ ಒಂದೇಬಗೆಯ ವಿಚಾರಣೆ, ಶಿಕ್ಷೆ ಇತ್ತು. ಆದರೆ ಹಿಂದು-ಹಿಂದುಗಳ ಮಧ್ಯದಲ್ಲಿ ಉಂಟಾಗುವ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಉಂಟಾಗುವ ವ್ಯಾಜ್ಯಗಳಲ್ಲಿ ಬಹುತೇಕ ಕೈ ಹಾಕುತ್ತಿರಲಿಲ್ಲ. ಮುಸ್ಲಿಮ ನ್ಯಾಯಧೀಶರಿಗೆ ಹಿಂದುಗಳ ಶಾಸ್ತ್ರಗಳ ಅಭ್ಯಾಸ ಇರುತ್ತಿರುಲಿಲ್ಲ. ಅಂಥ ವ್ಯಾಜ್ಯಗಳನ್ನು ವಿಚಾರಿಸುವುದು ಅವರಿಗೆ ತೊಂದರೆಯಾಗುತ್ತಿತ್ತು. ಆದ್ದರಿಂದ ಅಂಥ ವ್ಯಾಜ್ಯಗಳನ್ನು ಹಿಂದೂ ಧರ್ಮ ಪೀಠಗಳಿಗೆ ಕಳಿಸುತ್ತಿದ್ದರು.

ಉದಾಹರಣೆಗೆ, ಕೊಂಕಣದಲ್ಲಿ ಬ್ರಾಹ್ಮಣರು ಮತ್ತು ಕಾಯಸ್ಥ ಪ್ರಭುಗಳ ಮಧ್ಯ ಗಾಯತ್ರಿ ಮಂತ್ರದ ಉಪಾಸನೆಯ ಬಗ್ಗೆ ಜಗಳ ಉಂಟಾಯಿತು. ಕಾಯಸ್ಥ ಪ್ರಭು ಜನರಿಗೆ ಗಾಯತ್ರಿ ಮಂತ್ರವನ್ನು ಉಪಾಸನೆ ಮಾಡುವ ಅಧಿಕಾರ ಇಲ್ಲ ಎಂಬುದು ಜಗಳದ ವಿಷಯವಾಗಿತ್ತು. ಸ್ಥಳೀಯವಾಗಿ ಜಗಳವನ್ನು ಬಗೆ ಹರಿಸುವುದು ಸಾಧ್ಯವಾಗಲಿಲ್ಲ. ವ್ಯಾಜ್ಯವು ರಾಜಧಾನಿ ಬಿಜಾಪುರಕ್ಕೆ ಬಂದಿತು. ಸುಲ್ತಾನನಾಗಲೀ, ಮುಸ್ಲಿಮ ನ್ಯಾಯ ಪೀಠವಾಗಲಿ ಈ ಜಗಳ ಬಗೆ ಹರಿಸುವುದು ಸಾಧ್ಯವಿರಲಿಲ್ಲ. ಯಾಕೆಂದರೆ ಅವರಿಗೆ ಈ ವಿಷಯದ ಕುರಿತು ಮಾಹಿತಿ ಇರಲಿಲ್ಲ. ಆದ್ದರಿಂದ ಉಭಯ ಧರ್ಮಗಳ ಮುಖಂಡರನ್ನು ಬನಾರಸಕ್ಕೆ ಕಳಿಸಿ ಅಲ್ಲಿಯ ಧರ್ಮ ಪಂಡಿತರಿಂದ ನಿರ್ಣಯವನ್ನು ತರಲು ಹೇಳಿದರು. ಉಭಯ ಧರ್ಮದವರು ಬನಾರಸಕ್ಕೆ ಹೋದರು. ಅಲ್ಲಿ ಹಿಂದೂ ಧರ್ಮದ ಪಂಡಿತರ ಸಭೆಯಲ್ಲಿ ಬಹು ದೊಡ್ಡ ಚರ್ಚೆಯಾಯಿತು. ಚರ್ಚೆಯ ನಂತರ, ಕಾಯಸ್ಥ ಪ್ರಭುಗಳು ನಿಜವಾದ ಕ್ಷತ್ರಿಯರಿದ್ದು, ಕ್ಷತ್ರಿಯರಿಗೆ ವೇದಗಳಲ್ಲಿ ಹೇಳಿದ ಕರ್ಮಗಳಿಗೆ ಬಾಧ್ಯತೆ ಇದೆ. ಮತ್ತು ಗಾಯತ್ರಿ ಮಂತ್ರದ ಉಪಾಸನೆಯ ಅರ್ಹತೆ ಇದೆ. ಎಂದು ನಿರ್ಣಯಿಸಲಾಯಿತು. ಅದರಂತೆ ಬ್ರಾಹ್ಮಣರು ಅವರಿಗೆ ಗಾಯತ್ರಿ ಮಂತ್ರವನ್ನು ಉಪದೇಶಿಸಬೇಕು ಎಂದು ನಿರ್ಣಯವನ್ನು ಕೊಟ್ಟರು. ಆ ನಿರ್ಣಯಗಳನ್ನು ಬಿಜಾಪುರಕ್ಕೆ ತಂದು ಸುಲ್ತಾನನಿಗೆ ತೋರಿಸಿ ಅವನಿಂದ ಅಂತಿಮ ಆದೇಶವನ್ನು ಪಡೆದರು.[೯೭]

ಇದೇ ತರಹದ ಇನ್ನೊಂದು ವ್ಯಾಜ್ಯವನ್ನು ಗಮನಿಸಬಹುದು, ಬಿಜಾಪುರ ಪರಗಣೆಯ ಅಥಣಿ ನಗರದ ಜೈನರು ಮತ್ತು ಲಿಂಗಾಯತರಲ್ಲಿ ಪರಸ್ಪರ ಶ್ರೇಷ್ಠತೆಗಾಗಿ ನ್ಯಾಯ ನಡೆಯಿತು. ಸ್ಥಳಿಯ ಅಧಿಕಾರಿಗಳು

ಕ್ರಿ.ಶ. ೧೬೫೬-೧೬೭೨ ರ ಮಧ್ಯ ವರುಷಗಟ್ಟಲೆ ವಿಚಾರಣೆ ನಡೆಸಿದರು ನಿರ್ಣಯವಾಗಲಿಲ್ಲ. ಕೊನೆಗೆ ಉಭಯ ಪಕ್ಷಗಳು ಸುಲ್ತಾನನ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದರು. ಸುಲ್ತಾನನ ಪರವಾಗಿ ಮೇಲ್ಮನವಿಯನ್ನು ವಿಚಾರಿಸಿದ ಸುಲ್ತಾನನ ತಾಯಿ, ಮಹಾರಾಣಿ ಬಡೀ ಸಹೆಬಾಳು ನ್ಯಾಯ ಪಡೆಯಲು ಉಭಯ ಪಕ್ಷಗಳನ್ನು ವಾರಣಾಸಿಗೆ ಕಳಿಸಿದಳು. ಅಲ್ಲಿ ಪಂಡಿತರ ಸಭೆಯಲ್ಲಿ ಸುದೀರ್ಘ ಚರ್ಚೆಯಾಗಿ ಉಭಯ ಮತಗಳೂ ಶ್ರೇಷ್ಠವಾಗಿವೆ ಎಂದು ನಿರ್ಣಯವನ್ನು ಕೊಟ್ಟರು. ಅದನ್ನು ತಂದು ತೋರಿಸಿದಾಗ ಮಹಾರಾಣಿಯು ವಾರಣಾಸಿಯ ನಿರ್ಣಯವನ್ನು ಎತ್ತಿ ಹಿಡಿದಳು. ಮತ್ತು ಸ್ಥಳೀಯವಾಗಿ ನಡೆದ ವಿಚಾರಣೆಯಲ್ಲಿ ನ್ಯಾಯ ನೀಡುವಲ್ಲಿ ತಪ್ಪಿದ ಅಧಿಕಾರಿಗಳನ್ನು ಶಿಕ್ಷಿಸಿದಳು.[೯೮]

ಹೀಗೆ ಹಿಂದೂ-ಹಿಂದೂಗಳ ಮಧ್ಯ ಉಂಟಾದ ವ್ಯಾಜ್ಯಗಳನ್ನು ಹಿಂದೂ ಧರ್ಮ ಪೀಠಗಳಿಗೆ ಕಳಿಸುತ್ತಿದ್ದರೆ, ಹಿಂದೂ-ಹಿಂದೂಗಳ ಮಧ್ಯ ಮತ್ತು ಹಿಂದೂ ಮುಸ್ಲಿಮರ ಮಧ್ಯದ ಸಿವಿಲ್ ಮೊಕದ್ದಮೆಗಳನ್ನು ಸುಲ್ತಾನನು ತಾನೆಯೇ ಅಥವಾ ಮುಸ್ಲಿಮ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿ ತೀರ್ಪು ನೀಡಿದ ಉದಾಹರಣೆಗಳೂ ಇವೆ.

ಹಾಗೆಯೇ ಹಿಂದೂ-ಮುಸ್ಲಿಮರ ಮಧ್ಯ ನಡೆದ ವ್ಯಾಜ್ಯ ಒಂದರಲ್ಲಿ, ನ್ಯಾಯ ನೀಡುವಲ್ಲಿ ಹಿಂದೂ ಮುಸ್ಲಿಮರ ಮಧ್ಯ ತಾರತಮ್ಯವಿರಲಿಲ್ಲ ಎಂಬುದನ್ನು ದಿನಾಂಕ ೩೦-೭-೧೬೪೫ರ ಮಹಮ್ಮದ ಆದಿಲ್‌ಶಾಹನ ಒಂದು ಫರ್ಮಾನು ನಿದರ್ಶನವಾಗಿದೆ.

ಮಹಮ್ಮದ ಆದಿಲ್‌ಶಾಹನು ಬಂಕಾಪುರದ ಗುತ್ತಲ ಹಣಮಂತಗೌಡನಿಗೆ ಕಳಿಸಿದ ಆದೇಶದಲ್ಲಿ " ಈ ಮೊದಲಿನ ಫರ್ಮಾನಿನ ಪ್ರಕಾರ ಹಡಗಲಿ ಗ್ರಾಮವು ಕೆಂಗ ನಾಯಕನಿಗೆ ಸಂಬಂಧಿಸಿದ್ದು ಇದೆ. ರಾಜಕುಮಾರ ಅಲಿ ಮಿಯಾ ಈತನು ಅಡ್ಡ ಬಂದು ಅದನ್ನು ಕೆಂಗ ನಾಯಕನ ತಾಬೆಗೆ ಕೊಡುತ್ತಿಲ್ಲ. ಸನದು ಕೆಂಗ ನಾಯಕನಿಗೆ ಆಗಿದ್ದು ರಾಜಕುಮಾರನ ಅಧಿಕಾರಿಗಳು ಅಡ್ಡ ಬರುತ್ತಾರೆ ಅಂದರೆ ಏನು ಅರ್ಥ? ಆದ್ದರಿಂದ ಈ ಆದೇಶ ಮುಟ್ಟಿದ ತಕ್ಷಣ ಸದರೀ ಸನದು (ಹಳಲಗಡಿಯನ್ನು ಬಿಟ್ಟು) ಸದರೀ ಕೆಂಗ ನಾಯಕನಿಗೆ ಆದೇಶದಂತೆ ಕೊಟ್ಟಿದೆ ಎಂದು ತಿಳಿದು ತಾಬೆಗೆ ಕೊಡಿಸಬೇಕು. ರಾಜಕುಮಾರನ ಅಧಿಕಾರಿಗಳು ತೊಂದರೆ ಕೊಡದಂತೆ ನೋಡಿಕೊಳ್ಳಬೇಕು. ಈ ವಿಷಯದಲ್ಲಿ ಸಕ್ತ ಎಚ್ಚರಿಕೆ ಎಂದು ತಳಿದು ಫಿಯಾದಿ ಬರದಂತೆ ನೋಡಿಕೊಳ್ಳಬೇಕು." ಎಂದು ಹೇಳಲಾಗಿದೆ.[೯೯]

ಈ ಆದೇಶದ ಫರ್ಮಾನು ಹೊರಟ ಒಂದು ವರುಷ ಮೊದಲು ಅಂದರೆ ೧೬೪೩-೪೪ ರಲ್ಲಿ ಇಂಥದೇ ಒಂದು ಸಂದರ್ಭವು ಗುತ್ತಲದ ಹಣಮಂತ ಗೌಡನಿಗೂ ಎದುರಾಗಿದೆ. ಬಂಕಾಪುರದ ಹವಾಲ್ದಾರ ಸಿದ್ಧಿ ದಿಲಾವರ ಹಾಗೂ ಉಳಿದ ಅಧಿಕಾರಿಗಳಿಗೆ ಕಳಿಸಿದ ಆದೇಶದಲ್ಲಿ " ಗುತ್ತಲದ ಹಣಮಂತಗೌಡ ದೇಸಾಯಿ ವಿನಂತಿ ಅರ್ಜಿ ಏನೆಂದರೆ, ಪೂರ್ವಿ ಕಾಲದಿಂದ ಅವರ ತಾಬೆದಲ್ಲಿದ್ದ ಗುತ್ತಲ್ಲ, ಹಡಗಲಿ, ಹೊರಳಿಪೋಳ, ಕೆರೂರ ಖುರ್ದ, ಮತ್ತು ತಿಳವಳ್ಳಿ ಭಾಗದ ನಾಡಗೌಡಕಿಯನ್ನು ಕರೀಮ ಶಾರ್ಜಾನು ಸುಳ್ಳು

ಹೇಳಿ ಸನದನ್ನು ಪಡೆದಿದ್ದಾನೆ. ಹಣಮಂತಗೌಡನ ಹತ್ತಿರ ಇದ್ದ ಹಳೇ ಫರ್ಮಾನುಗಳಿಂದ ಅದು ಅವನ ನಾಡಗೌಡಕಿ ಎಂದು ಸಿದ್ಧವಾಗಿದೆ. ಆದ್ದರಿಂದ ಸದರೀ ನಾಡಗೌಡಕಿಯನ್ನು ಕರೀಮ ಶಾರ್ಜಾನಿಂದ ದೂರ ಮಾಡಿ ಹನುಮಂತಗೌಡನಿಗೆ ಖಾಯಂ ಮಾಡಲಾಗಿದೆ."

ಹಿಂದೂ-ಮುಸ್ಲಿಮರ ನಡುವೆ ತಕರಾರುವುಂಟಾದರೆ ಅದನ್ನು ತಾತ್ಕಾಲಿಕವಾಗಿ ಶವಮಗೊಳಿಸಲು ಮಹಮ್ಮದ ಆದಿಲ್‌ಶಾಹನು ತನ್ನ ಶಾಸನದಲ್ಲಿ ಹೀಗೆ ಹೇಳಿದ್ದಾನೆ. " ಒಂದುವೇಳೆ ಮುಸಲ್ಮಾನನು ತಪ್ಪು ತಿಳುವಳಿಕೆಯಿಂದ ಹಿಂದೂನನ್ನು ನಾಶಮಾಡಬೇಕೆಂಬ, ಹಿಂದೂವಿನನ್ನು ಕೆಡವಬೇಕೆಂದು ಇರಾದೆಯನ್ನು ಮಾಡಿದ್ದರೆ, ಅಥವಾ ಹಿಂದು ಬೇಡ ಎಂದು ಮುಸಲ್ಮಾನನು ಬಯಸಿದರೆ, ಆ ಮುಸಲ್ಮಾನನನ್ನು ಯಕ್ತಿಯಿಂದ ತಾಕೀತು ಮಾಡಬೇಕು. ಸದ್ಯ ಈ ವೇಳೆಯಲ್ಲಿಯೇ ಹೀಗೆ ಮಾಡಬೇಕು ಮುಂದೆ ನೋಡಲು ಬಂದೀತು. ಸದ್ಯ ಸಮಯ ತಪ್ಪಿಸು ಎಂದು ಆತನಿಗೆ ಬೋಧನೆ ಮಾಡಬೇಕು. ಆದರೆ ಹಿಂದೂವಿನ ಸರಂಕ್ಷಣೆ ಮಾಡುವ ವಿಷಯದಲ್ಲಿ ಹಿಂದೂವಿನ ಪಕ್ಷ ಹಿಡಿದು ಮುಸಲ್ಮಾನನಿಗೆ ಉಪದ್ರವಕೊಡಬಾರದು. ಹೀಗೆ ಹಿಂದೂ ಮುಸ್ಲಿಮರನ್ನು ಒಂದೇ ತರಹ ನೋಡುತ್ತಿದ್ದನು.

ಸುಲ್ತಾನನನು ಸರ್ವೋಚ್ಚ ನಾಯಾಧೀಶ : ನ್ಯಾಯಾಂಗ ವ್ಯವಸ್ಥೆಯಲ್ಲಿ ಸುಲ್ತಾನನು ಮುಖ್ಯಸ್ಥನಾಗಿದ್ದನು. ಅವನ ತೀರ್ಪೇ ಅಂತಿಮ ತೀರ್ಪಾಗಿತ್ತು. ಯಾವುದೆ ಜನಸಾಮಾನ್ಯನು ನೇರವಾಗಿ ಸುಲ್ತಾನನಿಗೆ ಮನವಿ ಸಲ್ಲಿಸಬಹುದಾಗಿತ್ತು. ಆದರೆ ವಿಶೇಷ ಪ್ರಯೋಜನವನ್ನು ಯಾವಾಗಲೊಮ್ಮೆ ಬಳಸಲಾಗುತ್ತಿತ್ತು. ಸುಲ್ತಾನನ ಆಸ್ಥಾನದಲ್ಲಿ ಮೊಕದ್ದಮೆಗಳನ್ನು ವಿಚಾರಿಸುವಂತಹ ಒಂದು ವ್ಯವಸ್ಥೆ ಇದ್ದು, ನಂತರ ತೀರ್ಮಾನಗಳಿಗೆ ಸುಲ್ತಾನನ ಮುದ್ರೆಗಳನ್ನು ಸಂಬಂಧಿಸಿದ ಸ್ಥಳೀಯ ಅಧಿಕಾರಿಗಳಿಗೆ ಕಳಿಸಲಾಗುತ್ತಿತ್ತು. ಯುರೋಪಿಯನ್ನರಿಗೆ ಸಂಬಂಧಿಸಿದಂತೆ ಸುಲ್ತಾನನೇ ಅಂತಿಮ ನ್ಯಾಯಧೀಶನಾಗಿದ್ದನು. ಮಹಮ್ಮದ ಆದಿಲ್‌ಶಾಹನು ಅನಾರೋಗ್ಯದಿಂದ ಬಳಲುತ್ತಿರುವಾಗ ಇಂಗ್ಲೀಷರು ತಮ್ಮ ವಿಷಯಗಳಿಗೆ ಸಂಬಂಧಿಸಿದ ಮೊಕದ್ದಮೆಗಳಿಗೆ ಪರಿಹಾರಗಳನ್ನು ಪಡೆದುಕೊಳ್ಳಲಿಲ್ಲ.[೧೦೦]

ಹಳ್ಳಿಗಳಲ್ಲಿ ಸಣ್ಣಪುಟ್ಟ ವ್ಯಾಜ್ಯಗಳನ್ನು ಪಂಚಾಯತಿಗಳು ತೀರ್ಮಾನಿಸುತ್ತಿದ್ದವು. ಹಳ್ಳಿಯ ಮುಖ್ಯ ಅಧಿಕಾರಿ ಪಾಟೀಲನಾಗಿದ್ದನು. ಅವಮ ಮೊದಲನೆಯ ಕರ್ತವ್ಯವೆಂದರೆ ಕಲಹಕ್ಕೆ ಸಂಬಂಧಿಸಿದ ಎರಡು ಪಕ್ಷಗಳ ನಡುವಿನ ವ್ಯಾಜ್ಯವನ್ನು ಪರಿಹರಿಸುವುದಾಗಿತ್ತು. ಪಾಟೀಲನು ಸಮಸ್ಯೆ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲನಾದಾಗ ಆ ವ್ಯಾಜ್ಯದ ವಿಚಾರಣೆ ಮತ್ತು ತೀರ್ಪಿಗಾಗಿ ಅದನ್ನು ಪಂಚಾಯತಿಗೆ ಕಳಿಸುತ್ತಿದ್ದನು. ಗ್ರಾಮ ಮಂಡಳಿಯಲ್ಲಿ ಪಾಟೀಲ, ಕುಲಕರ್ಣಿ ಹಾಗೂ ಬಲೂತೆದಾರ (ಹಳ್ಳಿಯ ಸೇವಕ)ರೆಂಬ ಸಿಬ್ಬಂದಿಯು ಇರುತ್ತಿತ್ತು. ಪಂಚಾಯತಿಯೂ ಕೊಡುವ ತೀರ್ಮಾನಕ್ಕೆ ಎರಡೂ ಪಕ್ಷಗಳು ಬದ್ಧರಾಗಿರಬೇಕಾಗಿತ್ತು.

ಗ್ರಾಮ ಪಂಚಾಯತಿಯು ನ್ಯಾಯ ಮಾಡುವ ನಿಯಮವು ದಾಖಲೆಗಳು ಮತ್ತು ಮೌಖಿಕ ಸಾಕ್ಷಿಗಳ ಸಹಾಯದಿಂದ ನಿರ್ಧರಿಸಲ್ಪಡುತ್ತಿದ್ದವು. ಆದರೆ ಆಗಾಗ ಒರಟಾದ ಮತ್ತು ಪ್ರಾಚೀನ ಸಾಂಪ್ರದಾಯಿಕ ಕಠಿಣ

ಪರೀಕ್ಷೆಗಳನ್ನು ಅವಲಂಬಿಸಿ ಎರಡು ಪಕ್ಷದವರಿಗೆ ತೃಪ್ತಿದಾಯಕವಾದ ತೀರ್ಪುಗಳನ್ನು ಕೊಡಲಾಗುತ್ತಿತ್ತು. ಈ ಪದ್ಧತಿಗಳನ್ನು ದೊಡ್ಡ ಮೊಕದ್ದಮೆಗಳಿಗೆ ಬಳಸುತ್ತಿದ್ದರು ಎಂಬುದು ಅನಿಶ್ಚಿತವಾಗಿದೆ. ಕಠಿಣ ಪರೀಕ್ಷೆಗಳಾದ ಅಗ್ನಿ ಮತ್ತು ಜಲ ಪರೀಕ್ಷೆಗಳ ಮೂಲಕ ನ್ಯಾಯ ವಿಚಾರಣೆ ನಡೆಯುತ್ತಿತ್ತು. ಈ ವಿಪರಿತವಾದ ಸ್ವರೂಪದ ಪ್ರಾಚೀನ ಪದ್ಧತಿಗಳು ಅಸ್ತಿತ್ವದಲ್ಲಿದ್ದವು ಎಂಬುದಕ್ಕೆ ಯಾವುದೇ ಆಧಾರಗಳಿಲ್ಲ. ಸ್ಥಳೀಯ ದೈವತ್ವಕ್ಕೆ ಸಂಬಂಧಿಸಿದ ಇದೇ ಸ್ವರೂಪದ ಮಾರ್ಪಾಡುಗೊಂಡ ಒಂದು ಉದಾಹರಣೆ ಕಾಣಸಿಗುತ್ತದೆ. ಎರಡು ಚಿಕ್ಕದಾದ ಚೀಟಿಗಳನ್ನು ತಂಟೆದಾರರ ಹೆಸರುಗಳನ್ನು ನಮೂದಿಸಿ ಅವುಗಳನ್ನು ದೇವತೆಯ ಎದುರು ಒಗೆಯುವುದು. ನಂತರ ಒಂದು ಮಗುವಿನ ಮುಖಾಂತರ ಅವುಗಳಲ್ಲಿನ ಒಂದು ಚೀಟಿ ಎತ್ತಲು ಹೇಳಿ ಅದರಲ್ಲಿ ಯಾರ ಹೆಸರು ಬರುವುದೋ ಅವನು ಅಪರಾಧಿ ಎಂದು ಪರಿಗಣಿಸಲಾಗುತ್ತಿತ್ತು. ಅಥವಾ ಕೆಲವು ವೇಳೆ ಈ ಪದ್ಧತಿಯಲ್ಲಿ ಕೆಲವು ಚಿಕ್ಕಪುಟ್ಟ ವ್ಯತ್ಯಾಸಗಳೊಂದಿಗೆ ಅಡಿಕೆಗಳನ್ನು ಬಳಸಲಾಗುತ್ತಿತ್ತು.[೧೦೧] ಈ ಪದ್ಧತಿಗಳು ಮುಸಲ್ಮಾನರ ವಿರುದ್ಧವಾಗಿದ್ದವು. ಕೇವಲ ಹಿಂದೂಗಳನ್ನು ಹದ್ದುಬಸ್ತಿನಲ್ಲಿಡುವುದಕ್ಕಾಗಿತ್ತು. ಮತ್ತು ತಂಟೆದಾರರಲ್ಲಿ ಒಬ್ಬನು ಮುಸಲ್ಮಾನನಿದ್ದರೆ ಅವನು ಈ ಪದ್ಧತಿಯ ಮೂಲಕ ನ್ಯಾಯ ಪರೀಕ್ಷೆಗೆ ಒಪ್ಪಿಕೊಂಡರೆ ಅವರು ಹಿಂದಿನ ತೀರ್ಪನ್ನು ಮರುವರೀಶಿಲನೆಗಾಗಿ ಮನವಿ ಸಲ್ಲಿಸಬೇಕಾಗಿರುತ್ತಿತ್ತು. ಆದರೆ ಪಂಚಾಯತಿಗಳು ಲಿಖಿತ ಆಧಾರಗಳ ಮೇಲೆಯೇ ತೀರ್ಪುಗಳನ್ನು ನೀಡುತ್ತಿದ್ದವು.[೧೦೨] ಪಂಚಾಯತಿಯ ತೀರ್ಪಿನ ವಿರುದ್ಧದ ಮನವಿಗಳನ್ನು ಪರಗಣಗಳ ಖಾಜಿಗಳಿಗೆ ಸಲ್ಲಿಸಬೇಕಾಗಿತ್ತು. ಕೊನೆಯಲ್ಲಿ ಸಹಾಯಕೋರಿ ಸುಲ್ತಾನನಲ್ಲಿ ಹೋಗಬೇಕಾಗಿತ್ತು.

ಮಹಮ್ಮದ ಆದಿಲ್‌ಶಾಹನು ನ್ಯಾಯಕ್ಕಾಗಿಯೇ 'ದಾದ್ ಮಹಲ' ಎಂಬ ವಿಶಾಲವಾದ ಕಟ್ಟಡವನ್ನು ೧೬೪೫ ರಲಿ ಕಟ್ಟಿಸಿ, ಅದಕ್ಕೆ ಒಂದು ದೊಡ್ಡ ಗಂಟೆಯನ್ನು ಅಳವಡಿಸಿದ್ದನು. ಅನ್ಯಾಯಕೊಳ್ಳಗಾದ ಯಾವುದೇ ವ್ಯಕ್ತಿ ಅದನ್ನು ಬಾರಿಸುಬಹುದಾಗಿತ್ತು. ಅದರ ಶಬ್ದ ಸುಲ್ತಾನನ ಅರಮನೆಯ ಅತ್ಯಂತ ಒಳಗಿನ ಸ್ಥಳಕ್ಕೆ ತಲುಪುತ್ತಿತ್ತು. ಈ ರೀತಿಯಾಗಿ ಅನ್ಯಾಯಕ್ಕೊಳಗಾದ ವ್ಯಕ್ತಿಯ ಕುಂದುಕೊರತೆಗಳನ್ನು ಅಥವಾ ದೂರುಗಳನ್ನು ಆಲಿಸಿ ಪರಿಹಾರ ಕೊಡಲಾಗುತ್ತಿತ್ತು. ಹೀಗಾಗಿ ಸ್ಥಳೀಯ ಅಧಿಕಾರಿಗಳು ನ್ಯಾಯ ನಿರ್ಣಯಿಸುವಲ್ಲಿ ವಿಫಲರಾದಾಗ ಕೊನೆಗೆ ಸಹಾಯ ಕೋರಿ ಜನರು ದಾದ್-ಮಹಲಗೆ ಹೋಗುತ್ತಿದ್ದರು. ಆ ದಾದ್-ಮಹಲಿನಲ್ಲಿ ಸ್ಥಳೀಯ ಅಧಿಕಾರಿಗಳ ನಿರಂಕುಶವಾದ ನಿರ್ಣಯಗಳನ್ನು ಎಷ್ಟರ ಮಟ್ಟಿಗೆ ಪರೀಕ್ಷಿಸುತ್ತಿದ್ದರು ಎಂಬುದು ತಿಳಿದಿಲ್ಲ. ಆದರೆ ಖಚಿತವಾಗಿ ಅವರನ್ನು ಪರೀಕ್ಷಿಸುವ ಒಂದು ಬಗೆಯಾಗಿತ್ತು. ಒಟ್ಟಾರೆಯಾಗಿ ಬಿಜಾಪುರದ ಆದಿಲ್‌ಶಾಹಿಗಳು ನ್ಯಾಯಾಡಳಿತವನ್ನು ವ್ಯವಸ್ಥಿತವಾಗಿ ನಡೆಸಿಕೊಂಡುಬಂದರೆಂದು ಹೇಳಬಹುದು.

ಅಡಿಟಿಪ್ಪಣಿಗಳು.

1. Khodaey Zaman, 1989-*Persian Elements in the Culture, Art and Architecture Of Bijapur.*Unpublished thesis , Osmania Universty Hyderabad, P-103
2. ಷೇಕ್ ಅಲಿ. ಬಿ. ೧೯೯೭ *ಕರ್ನಾಟಕ ಚರಿತ್ರೆ* ಸಂ–೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪು–೧೯೦
3. Khodaey Zaman, 1989-*Persian Elements in the Culture, Art and Architecture Of Bijapur.*Unpublished thesis, Osmania Universty Hyderabad, P-105
4. Tarik-i-Ferishta,(Eng. Tr. Brigss),1996-*History of the Rise of the Mohomedan Power in India*, Vol.III, pp-44-45
5. Verma, D.C. 1973, *Social Economic and Cultural history of Bijapur.* Idarah-I Adbiyat, New Delhi, P-15
6. Khodaey Zaman, 1989-*Persian Elements in the Culture, Art and Architecture Of Bijapur.*Unpublished thesis , Osmania University Hyderabad, P-105
7. Joshi, P.M. 1940, PHIC IV Session Lahore, *Adilshahi Administrtion*. P-235
8. Verma, D. C, 1974, *History of Bijapur*,Praksh Bhavan, Fathepur, P-235
9. Sherwani,H.K. Joshi, P.M.1974, *History Of Medieval Deccan* Vol-II, Government of Andhra Pradesh, Hyderabad, P-442
10. Khodaey Zaman, 1989-*Persian Elements in the Culture, Art and Architecture Of Bijapur.*Unpublished, thesis P-106
11. Sinha, S.K. 1968, *Medieval History of the Deccan* Vol-II, Government of Andhra Pradesh, Hyderabad, Appendix-III
12. Ahmed Bshiruddin, '*Farameen-i-Salateen* 'Appendix DI-4 P-13
13. Khodaey Zaman, 1989-*Persian Elements in the Culture, Art and Architecture Of Bijapur.*Unpublished thesis, Osmania University Hyderabad, P-108
14. Tarik-i-Ferishta,(Eng. Tr. Brigss),1996-*History of the Rise of the Mohomedan Power in India,* Vol.I, Munshiram Manoharlal Publication, Pvt, Ltd, Delhi, P-536
15. Verma, D. C, 1974 *History of Bijapur,* Praksh Bhavn, Fathepur, P-218

16. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ, ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೪ ಪು-೧೯೧
17. ಕುಲಕರ್ಣಿ, ಕೆ. ಕೆ. ೧೯೯೯, *ಬುಸಾತಿ ಸಲಾತೀನ* (ಕನ್ನಡ) ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೭೪-೭೫
18. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೧೯೨
19. Khodaey Zaman, 1989-*Persian Elements in the Culture, Art and Architecture Of Bijapur.*Unpublished thesis, Osmania University Hyderabad, pp-108-09
20. Tarik-i-Ferishta,(Eng. Tr. Brigss),1996-*History of the Rise of the Mohomedan Power in India,* Vol.III, Munshiram Manoharlal Publication, Pvt, Ltd, P-19
21. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ.೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು-೮೦
22. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು -೧೩೫
23. ಅದೇ ಪು-೧೩೮
24. ಅದೇ ಪು-೧೪೭
25. ಅದೇ ಪು-೧೫೩
26. ಅದೇ ಪು-೧೬೩
27. Ghauri Iftikar Ahmed, 1970-Islamic Culture, Vol-44 *Central Structure of the Kingom of Bijapur.* P-22
28. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು -೨೪೩
29. ಅದೇ ಪು-೨೭೬
30. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ. ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು-೧೯೩
31. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು -೩೧೨

32. Tarik-i-Ferishta,(Eng. Tr. Brigss),1996-*History of the Rise of the Mohomedan Power in India*, Vol.II, Munshiram Manoharlal Publication, Pvt, Ltd, P-51

33. Ibid P-52

34. Verma, D. C, 1974 *History of Bijapur,* Praksh Bhavn, Fathepur, P-222

35. Tarik-i-Ferishta,(Eng. Tr. Brigss),1996-*History of the Rise of the Mohomedan Power in India*, Vol.I, Munshiram Manoharlal Publication, Pvt, Ltd, pp-576, 581

36. Joshi, P.M. 1940, PHIC IV Session Lahore, *Adilshahi Administrtion.* P-237

37. Verma, D. C, 1974 *History of Bijapur,* Praksh Bhavn, Fathepur, P-223

38. Ibid, Pp-223-24

39. Ibid , P-226

40. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ. ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು-೬೯

41. Tarik-i-Ferishta,(Eng. Tr. Brigss),1996-*History of the Rise of the Mohomedan Power in India,* Vol.I, Munshiram Manoharlal Publication, Pvt, Ltd, pp-43-45

42. Joshi, P.M. 1940, PHIC IV Session Lahore, *Adilshahi Administrtion*. P-240

43. Tarik-i-Ferishta,(Eng. Tr. Brigss),1996-*History of the Rise of the Mohomedan Power in India,* Vol.I, Munshiram Manoharlal Publication, Pvt, Ltd, P-30

44. ಬಿಜಾಪುರ ಜಿಲ್ಲಾ ಗೆಜಿಟಿಯರ್. ೧೯೯೯ (ಪರಿಷ್ಕೃತ) ಪು-೧೪೯

45. Sinha, S.K. 1968, *Medieval History of the Deccan* Vol-II, Government of Andhra Pradesdh, Hyderabad, P-162

46. Joshi, P.M. 1940, PHIC IV Session Lahore, *Adilshahi Administrtion.* P-241

47. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ. ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು-೧೯೭

48. Verma, D. C, 1974 *History of Bijapur,* Praksh Bhavn, Fathepur, P-229

49. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು -೩೧೨

50. Khare G. H. 1969, Persain Sources of Indian History, Vol-V, Part-II, BISM, Poona, p-84

51. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ. ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು-೧೧೫

52. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು -೧೩೫ ೫೩) ಅದೇ ಪು-೧೩೨-೩೭

53. ಅದೇ ಪು-೩೧೨

54. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ. ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು-೧೯೬

55. Verma, D. C, 1974 *History of Bijapur,* Praksh Bhavn, Fathepur, P-228

56. Hiroshi Fukazawa, 1991- *The Medieval Deccan*, Oxford University Press, New Delhi, P-29

57. Verma, D. C, 1974 *History of Bijapur,* Praksh Bhavn, Fathepur, P-229

58. Hiroshi Fukazawa, 1991- *The Medieval Deccan,* Oxford University Press, New Delhi, P-30

59. Ibid, P-9

60. Ibid, P-6

61. Verma, D. C, 1974 *History of Bijapur,* Praksh Bhavn, Fathepur, P-230

62. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ. ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು-೧೯೮

63. Mehadale Gajanan, Lonakar Ravindra, Bendekar Ninad, 2007, Adilshahi Farmane, Diamond Publications, Poona, p-142

64. Verma, D. C, 1974 *History of Bijapur,* Praksh Bhavn, Fathepur, P-230

65. Khare, G.H, 1969, *Persian Sources of Indian History*, BISM, Poona, P-105

66. ಶೇಖದಾರ, ವಿ.ಎಸ್, *ವಿಜಾಪುರ ಜಿಲ್ಲೆಯ ದೇಸಗತಿಗಳು* (ಅಪ್ರಕಟಿತ ಪ್ರಬಂಧ) ಪು-೨೭೭

67. ಪ್ರಜಾವಾಣಿ ದಿನಪತ್ರಿಕೆ, ದಿನಾಂಕ ೨೮-೭-೨೦೧೧ (ಕರ್ನಾಟಕ ದರ್ಶನ) ಪು-೧

68. Joshi, P.M. 1940, PHIC IV Session Lahore, *Adilshahi Administrtion*. P-243

69. ಷೇಕ ಅಲಿ. ಬಿ. ೧೯೯೭, *ಕರ್ನಾಟಕ ಚರಿತ್ರೆ* ಸಂ. ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು-೧೯೯

70. Verma, D. C, 1974 *History of Bijapur,* Praksh Bhavn, Fathepur, P-230-31

71. Ibid, Pp-230-31
72. Mehadale Gajanan, Lonakar Ravindra, Bendekar Ninad, 2007, Adilshahi Farmane, Diamond Publications, Poona, p-141
73. Ibid, p-143
74. Joshi, P.M. 1940, PHIC IV Session Lahore, *Adilshahi Administrtion*. P-243
75. ಕೆ.ಕೆ.ಕುಲಕರ್ಣಿ, ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು–೧೮೨
76. Hiroshi Fukazawa, 1991- *The Medieval Deccan,* Oxford University Press, New Delhi, P-9
77. Journal of Epigraphicial Society of India. P-160
78. Archaeological Survey of India.1970-71. Annual Report in Indian Epigrapyh , P-33
79. For the legend etc of the seal wide Persian sources of Indian History Vol-III , P-131
80. Verma, B.D, *Shivaji Nibhandhavali,* BISM, Poona, P-80
81. Verma, D. C, 1974 *History of Bijapur,* Praksh Bhavn, Fathepur, P-236-37
82. Khodaey Zaman, 1989-*Persian Elements in the Culture, Art and Architecture Of Bijapur*.Unpublished thesis, Osmania University Hyderabad, P-122
83. Verma, D. C, 1974 *History of Bijapur,* Praksh Bhavn, Fathepur, P-237
84. Ibid, P- 237-38
85. Tarik-i-Ferishta,(Eng. Tr. Brigss),1996-*History of the Rise of the Mohomedan Power in India,* Vol.I, Munshiram Manoharlal Publication, Pvt, Ltd, P-77-80
86. Khodaey Zaman, 1989-*Persian Elements in the Culture, Art and Architecture Of Bijapur.*Unpublished thesis Osmania University Hyderabad, P-124
87. Barbosa, Duarte, *The book Of Duarta Barbosa* Vol-I P-118
88. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು –೩೨೪
89. Nayeem, M.A. 2000 *External Relations of th Bijapur Kingdom* ,Bright Publications, Hyderabad, P-68

90. Barbosa, Duarte, The book Of Duarta Barbosa Vol-I P-118

91. Verma, B.D, *Shivaji Nibhandhavali* ,BISM, Poona, P-87, ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿನ ಸಲಾತೀನ* (ಕನ್ನಡ). ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು –೨೭೨

92. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಪು –೩೧೩

93. Sherwani,H.K. Joshi, P.M.1974, *History Of Medieval Deccan* Vol-II Government of Andhra, Pradesh, Hyderabad, P-491

94. ಕುಲಕರ್ಣಿ, ಕೆ. ಕೆ. ೨೦೦೯, *ಆದಿಲ್‌ಶಾಹಿ ಆಡಳಿತ–ಕಾನೂನು* ವ್ಯವಸ್ಥೆ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು, ಪು–೫೩

95. Sherwani,H.K. Joshi, P.M.1974, *History Of Medieval Deccan* Vol-II, Government of Andhra Pradesh, Hyderabad, P-486

96. Rande, M.G. 1900, *Rise Of the Marataha Power*, pp-278-79

97. Shiva charitra Sahitya, 1930 Vol-2 BISM, Poona, pp-354-400

98. BISM,Poona, 1938, Taraimasik-71

99. English Factories in India 1651-54 P-104

100. Verma, D. C, 1974 *History of Bijapur,* Praksh Bhavn, Fathepur, P-225

101. Joshi, P.M. 1940, PHIC IV Session Lahore, *Adilshahi Administrtion*. P-245

102. Ghauri Iftikar Ahmed, 1970-Islamic Culture, Vol-44 *Central Structure of the Kingom of Bijapur*. P-25

ಅಧ್ಯಾಯ ೪
ಸಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವ್ಯವಸ್ಥೆ

ಅಧ್ಯಾಯ-೪

ಸಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವ್ಯವಸ್ಥೆ

ಅ) ಸಮಾಜಿಕ ವ್ಯವಸ್ಥೆ :

ಭಾರತೀಯ ಸಮಾಜದಲ್ಲಿ ವರ್ಗ-ವರ್ಣ-ಜಾತಿಗಳು ಬಹು ಪ್ರಾಚೀನ ಕಾಲದಿಂದಲೂ ಮಹತ್ತರ ಪಾತ್ರ ನಿರ್ವಹಿಸುತ್ತ ಬಂದಿದೆ. ಸಮಾಜವನ್ನು ಚತುರ್ವರ್ಣಗಳಲ್ಲಿ ವಿಭಜಿಸುದುದನ್ನು ಉಲ್ಲೇಖಿಸುವ ಪ್ರಾಚೀನ ದಾಖಲೆ ಋಗ್ವೇದದ ಪುರುಷ ಸೂಕ್ತ. ಇದನ್ನು ಪ್ರಕ್ಷಿಪ್ತವೆಂದು ಹೇಳಲಾಗುತ್ತದೆ. ವೇದಗಳ ಕಾಲದಲ್ಲಿ ವರ್ಣ ವ್ಯವಸ್ಥೆಯು ಬಿಗಿಯಾದದ್ದಾಗಿರಲಿಲ್ಲ. ಶೂದ್ರರನ್ನುಳಿದ ಯಾರು ಯಾವ ವರ್ಗವನ್ನಾದರೂ ಸೇರುವ ಸೌಲಭ್ಯವಿತ್ತು. ಈ ವರ್ಗ ವಿಭಜನೆಯು ವೃತ್ತಿಯನ್ನು ಅವಲಂಬಿಸಿ ಮಾಡಲಾಗಿತ್ತು. ಮುಂದೆ ಬ್ರಾಹ್ಮಣಗಳ ಕಾಲದಲ್ಲಿ ವರ್ಗ ವ್ಯವಸ್ಥೆಯನ್ನು ವರ್ಣವ್ಯವಸ್ಥೆಯಂದು ಕರೆದು, ಅದನ್ನು ಬಿಗಿಗೊಳಿಸಲಾಯಿತು. ವ್ಯಕ್ತಿಯ ವರ್ಣವು ವ್ಯಕ್ತಿಗತವಾಗಿರದೆ ಅವನ ಹುಟ್ಟು ನಿರ್ಣಯಿಸತೊಡಗಿತು.

ವರ್ಣಸಾಂಕರ್ಯದಿಂದ ಬೇರೆ ಬೇರೆ ಜಾತಿಗಳು ಹುಟ್ಟಿದವೆಂದು ಮನು ಅಭಿಪ್ರಾಯ ಪಡುತ್ತಾನೆ. ಆದರೆ ಈ ಜಾತಿ ಪದ್ಧತಿಯು ಹೇಗೆ ಬಳಕೆಗೆ ಬಂದಿತೆಂಬುದರ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ. ಬಿಜಾಪುರದ ಆದಿಲ್‌ಶಾಹಿಗಳ ಕಾಲಕ್ಕಾಗಲೇ ಜಾತಿಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡು ಸಮಾಜದಲ್ಲಿ ಆಳವಾದ ಬೇರನ್ನು ಬಿಟ್ಟಿದ್ದವು.

ಪರಸ್ಪರ ಸಂಬಂಧವುಳ್ಳ ಜನತೆಯ ಸುವ್ಯವಸ್ಥಿತ ಸಮೂಹವನ್ನು ಸಮಾಜವೆನ್ನಬಹುದು. ಸಮಾಜದಲ್ಲಿ ವರ್ಣ, ವರ್ಗ, ಕುಟುಂಬ, ಸಂಘ ಸಂಸ್ಥೆ ಮತ್ತು ಅವುಗಳ ಆಲೋಚನಾ ಕ್ರಮ ಇತ್ಯಾಧಿ ಅಂಶಗಳಿದ್ದು ಅವು ಆಯಾ ಸಾಮಾಜಿಕ ಒಪ್ಪಿತ ಮೌಲ್ಯಕ್ಕೆ ಬದ್ಧವಾಗಿರುತ್ತವೆ. ಅಂದರೆ ಅನೂಕುಲ ಮತ್ತು ಭದ್ರತೆಗೆ ಒಂದು ಬಗೆಯ ಒಪ್ಪಂದವೇರ್ಪಟ್ಟಿರುತ್ತವೆ. ಸಮಾಜ ಅಮೂಲಾಗ್ರ ಚಿಂತನೆ ಮಾಡಬೇಕಾದರೆ ಧರ್ಮದ ತಿಳುವಳಿಕೆಯು ಕೂಡ ಅಗತ್ಯವಾಗಿ ಬೇಕೆ ಬೇಕು. ಏಕೆಂದರೆ ಧರ್ಮ ಮತ್ತು ಸಮಾಜ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವುಗಳನ್ನು ಒಂದನ್ನೊಂದು ಪ್ರತ್ಯೇಕಿಸಲು ಅಥವಾ ವಿಭಜಿಸಲು ಸಾಧ್ಯವಿಲ್ಲ. ಸಮಾಜದಲ್ಲಿ ಇರಬೇಕಾದಂತಹ ಕುಟುಂಬ ರಚನೆ, ಜಾತಿ ವ್ಯವಸ್ಥೆ ಸ್ತ್ರೀಯರ ಸ್ಥಾನಮಾನ, ವಿದ್ಯಾವ್ಯಾಸಂಗ ಇವೆಲ್ಲವುಗಳ ಜೊತೆಗೆ ನ್ಯಾಯ ಅನ್ಯಾಯಗಳ ತೀರ್ಪುಗಳು ಸಮಾಜದಲ್ಲಿರುವ ಪ್ರಚಲಿತ ಮೌಲ್ಯಗಳಾಗಿರುತ್ತವೆ.

ಆದಿಲ್‌ಶಾಹಿಯ ಸುಮಾರು ಇನ್ನೂರು ವರ್ಷದ ಆಳ್ವಿಕೆಯಲ್ಲಿ ಸಾಮಾಜಿಕ ಬಾಂಧವ್ಯ ಮತ್ತು ಸಂಸ್ಕೃತಿಕ ಒಕ್ಕಟ್ಟಿತ್ತು. ಧಾರ್ಮಿಕ ವಿವಿಧ ಪಂಥದ ಗುಂಪಿನಲ್ಲಿ ಒಳ್ಳೆಯ ಸಂಬಂಧ ಬೆಸೆದಿತ್ತು. ಅರಬರು, ತುರ್ಕರು, ಮೊಗಲರು, ಮೂಲ ಹಿಂದೂಗಳಲ್ಲಿ ಒಡನಾಟವಿತ್ತು. ಈ ಬೆಳವಣಿಗೆಗೆ ಅನೇಕ ಕಾರಣಗಳಿದ್ದವು.

ಮೊದಲನೆಯದಾಗಿ ಬಿಜಾಪುರದ ಸುಲ್ತಾನರು ಧಾರ್ಮಿಕ ಸಹಿಷ್ಣುಗಳಾಗಿದ್ದರು. ಅವರು ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿರಲ್ಲಿಲ್ಲ. ಪ್ರಜೆಗಳು ಧಾರ್ಮಿಕ ಸ್ವತಂತ್ರ ಪಡೆದಿದ್ದರು. ಎರಡನೆಯದಾಗಿ ಸೂಫಿ ಸಂತರ ಪ್ರಭಾವ ಮತ್ತು ಅವರ ಸಾಮಾಜಿಕ ಸಂಘಟನೆ ಹಾಗೂ ಧಾರ್ಮಿಕ ಏಕತೆಯಲ್ಲಿ ಅವರ ಪಾತ್ರ ಮಹತ್ವದಾಗಿದೆ. ಮೂರನೆಯದಾಗಿ ಸುಲ್ತಾನರು ಉದಾರ ಮತವಾದಿಗಳಾಗಿದ್ದರು. ಸರಕಾರಿ ನೇಮಕಾತಿಯಲ್ಲಿ ಹಿಂದೂ–ಮುಸ್ಲಿಂ ಎಂಬ ಭೇದಗಳನ್ನು ಮಾಡುತ್ತಿರಲಿಲ್ಲ, ಮುಂಬಡ್ತಿಯು ಅವರ ಯೋಗ್ಯತೆಗೆ ಅನುಸಾರವಾಗಿ ಕೊಡಲಾಗುತ್ತಿತ್ತು. ಉದಾಹರಣೆಗಾಗಿ ಮರಾಠರು ಅನೇಕ ಮಹತ್ವದ ಸ್ಥಾನದಲ್ಲಿದ್ದರು. ಭೋಸ್ಲೆ, ನಿಂಬಾಳಕರ, ಘೋರ್ಪಡೆ, ಮೊಹಿತೆ, ಮಾನೆ, ಶೀರ್ಕೆ, ಘಾಟಗೆ, ಮಹಡಿಕ ಮುಂತಾದವರು ರಾಜ್ಯದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದರು. ಕೊನೆಯದಾಗಿ ಮರಾಠಿ ಭಾಷೆಯನ್ನು ಸರಕಾರಿ ಭಾಷೆಯನ್ನಾಗಿ ಬಳಸಲಾಗಿತ್ತು.

ಆದಿಲ್ ಶಾಹಿಗಳ ಕಾಲದ ಸಮಾಜ :

ಆದಿಲ್‌ಶಾಹಿಗಳ ಕಾಲದ ಸಮಾಜದಲ್ಲಿ ಪ್ರಮುಖವಾಗಿ ಎರಡು ವರ್ಗದ ಜನರನ್ನು ಕಾಣುತ್ತೆವೆ. ಮೊದಲನೆಯ ವರ್ಗದಲ್ಲಿ ಮುಸ್ಲಿಂ ಜನಾಂಗವಿದ್ದರೆ, ಎರಡನೆಯ ವರ್ಗದಲ್ಲಿ ಹಿಂದೂ ಸಮಾಜ ಇದ್ದಿತ್ತು.

ಅ) ಮುಸ್ಲಿಂ ವರ್ಗ :

ಆದಿಲ್‌ಶಾಹಿಗಳ ರಾಜ್ಯವು ಬೇರೆ ಬೇರೆ ಜಾತಿ, ಧರ್ಮದವರನ್ನು ಒಳಗೊಂಡಿತ್ತು. ತುರ್ಕರು, ಅರಬರು, ಆಫಘನ್ನರು, ಇರಾನಿಯನ್ನರು, ಆರ್ಯರು, ದ್ರಾವಿಡರು ಇತ್ಯಾಧಿಗಳು ವಾಸಿಸುತ್ತಿದ್ದರು. ಆದಿಲ್‌ಶಾಹಿ ರಾಜ್ಯದಲ್ಲಿ ಮುಸಲ್ಮಾನರು ಎರಡು ಭಾಗಗಳಲ್ಲಿ ವಿಂಡಿಸಲ್ಪಟ್ಟಿತು. ಅದು ಯಾವುದೆಂದರೆ, ದಖನಿ ಮತ್ತು ಆಫಕಿ (ವಿದೇಶಿಯರು) ದಖನಿ ಎಂದರೇ ಸುಮಾರು ವರ್ಷಗಳಿಂದ ಇಲ್ಲಿ ನೆಲಸಿದವರು. ಅಲ್ಲದೇ ಅರಬರು ವ್ಯಾಪಾರಕ್ಕಾಗಿ ಬಂದು ಇಲ್ಲೇ ನೆಲಸಿದವರು, ಖಿಲ್ಜಿ, ತುಘಲಕ ಜೊತೆಗೆ ಹೊರಾಡಲು ಬಂದವರು ಹಾಗೂ ಆಫ್ರಿಕಾದಿಂದ ಬಂದವರು (ಹಬಸಿ) ಮತ್ತು ಮತಾಂತರಗೊಂಡ ಹಿಂದೂಗಳು ಇವರೆಲ್ಲರೂ ದಖನಿಗಳು.

ಆಫಕಿಗಳು ವಿದೇಶಿಯರಾಗಿದ್ದರು. ಇವರು ಬಹಮನಿ ಕಾಲದಲ್ಲಿ ಭಾರತಕ್ಕೆ ಬರಲಾರಂಭಿಸಿದರು. ಪ್ರತಿವರ್ಷ ಹಡುಗುಗಳನ್ನು ಕಳಿಸಿ ಸೈನಿಕರು, ಕುಶಲಕರ್ಮಿಗಳು. ಆಡಳಿತಗಾರರನ್ನು ಕರೆತರಲಾಗುತ್ತಿತ್ತು. ಇರಾನಿಯರು ಸರಕಾರದಲ್ಲಿ ಮಹತ್ವದ ಹುದ್ದೆಗಳನ್ನು ಪಡೆದರು. ಇವರು ಆದಿಲ್‌ಶಾಹಿ ಸಮಾಜದಲ್ಲಿ ಉಚ್ಚ ಶ್ರೇಣಿಯನ್ನು ಪಡೆದಿದ್ದರು. ಮತ್ತು ಇವರು ದಖನಿಗಳನ್ನು ಕೀಳಾಗಿ ನೋಡುತ್ತಿದ್ದರು. ಅವರೆಂದು ದೇಶಿಯರೊಂದಿಗೆ ಕೂಡುತ್ತಿರಲಿಲ್ಲ. ಅವರು ಈ ದೇಶವನ್ನು ತಮ್ಮ ಮನೆಯಾಗಿ ನೋಡಲಿಲ್ಲ. ಇಲ್ಲಿಯ ಭಾಷೆಗಳನ್ನು ಕನಿಷ್ಠವೆಂದು ಪರ್ಶಿಯನ್ನ ಭಾಷೆ ಶ್ರೇಷ್ಠವೆಂದು ತಿಳಿದಿದ್ದರು. ಆದಿಲ್‌ಶಾಹಿ ಆಸ್ಥಾನದಲ್ಲಿ ಪರ್ಶಿಯನ ಸಂಸ್ಕೃತಿಯ ಲಾಭವನ್ನು ಇವರು ಚನ್ನಾಗಿ ಪಡೆದರು. ಅವರು ಶಿಯಾ

[illegible]

[illegible]

[illegible]

[illegible]

[illegible]

[illegible]

ಅನುಯಾಯಿಗಳಾಗಿದ್ದರು, ಶಿಯಾ ಪಂಥದೊಳಗೂ ಅನೇಕ ಪಂಗಡಗಳಿದ್ದವು. ಈಸ್ನಾ, ಆಶರಿಯಾ ಶಿಯಾ ಪಂಥದ ಪಂಗಡವು ಬಿಜಾಪುರದಲ್ಲಿ ಪ್ರಮುಖವಾಗಿತ್ತು.

ದಖನಿಗಳು ಸುನ್ನಿಗಳಾಗಿದ್ದರು ಅವರನ್ನು ನಾಲ್ಕು ಭಾಗದಲ್ಲಿ ವಿಭಾಗಿಸಲ್ಪಟ್ಟಿದ್ದರು. ಸೈಯದ, ಶೇಖ, ಮೊಗಲ ಮತ್ತು ಪಠಾಣ. ಸೈಯದರು ಸಂತರು ಧರ್ಮೋಪದೇಶಕರು ಆಗಿದ್ದರು. ಅವರು ಸಮಾಜದಲ್ಲಿ ಉನ್ನತ ಸ್ಥಾನ ಪಡೆದಿದ್ದರು ಅಲ್ಲದೆ ಸುಲ್ತಾನರಿಂದ ಜಹಗೀರನ್ನು ಪಡೆದಿದ್ದರು. ಶೇಖರು ಸರಕಾರಿ ಸೇವೆಯಲ್ಲಿದ್ದರು. ಇವರು ಸೈನಿಕರು ಹವಾಲ್ದಾರಾಗಿ ಕೆಲಸ ನಿರ್ವಹಿಸುತ್ತಿದ್ದರು. ಪಠಾಣರು ಆದಿಲ್‌ಶಾಹಿ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅಲ್ಲದೆ ಇವರು ವಿಶ್ವಾಸಿಗರಾಗಿ ಕೆಲಸ ನಿರ್ವಹಿಸುತ್ತಿದ್ದರು.

ಆಡಳಿತದಲ್ಲಿ ಮುಸ್ಲಿಂಮರ ಪ್ರಭಾವ ಹೆಚ್ಚಾಗಿತ್ತು. ಅವರು ಈ ರೀತಿಯಾಗಿ ವಿಂಗಡಿಸಲ್ಪಟ್ಟಿದ್ದರು.

೧) ಅಧಿಕಾರಿಗಳು–ಸೈನ್ಯಾಧಿಕಾರಿಗಳು, ಆಡಳಿತಾಧಿಕಾರಿಗಳು, ಇವರಲ್ಲಿ ದಖನಿ ಮತ್ತು ಅಫಕಿಗಳಿದ್ದರು.

೨) ವ್ಯಾಪಾರಿಗಳು

೩) ಗುಲಾಮರು

೪) ಉಲೇಮಾಗಳು.

ಅಧಿಕಾರಿಗಳು ಮತ್ತು ವ್ಯಾಪಾರಿಗಳು ಶ್ರೀಮಂತರಾಗಿದ್ದು ಉತ್ತಮ ಜೀವನ ನಡೆಸುತ್ತಿದ್ದರು, ಗಲಾಮಗಿರಿಯು ಸಾಮಾನ್ಯವಾಗಿತ್ತು. ಗುಲಾಮರಿಗೆ ಸುಲ್ತಾನರು ಮತ್ತು ಅಮೀರರು ಹೆಚ್ಚಿನ ವೇತನವನ್ನು ಕೊಡುತ್ತಿದ್ದರು. ಅವರು ಮಧ್ಯಮ ವರ್ಗಕ್ಕೆ ಸೇರಿದ್ದರು. ನಂತರದಲ್ಲಿ ಈ ಗುಲಾಮರು ಸ್ವಪ್ರಯತ್ನ ಮತ್ತು ನಿಷ್ಠೆಯಿಂದ ಕಾರ್ಯಮಾಡಿ ಮಂತ್ರಿಗಳಾಗಿ ಸ್ವತಂತ್ರರಾದ ಉದಾಹರಣೆಗಳಿವೆ. ದಿಲಾವರಖಾನ, ಇಖ್ಲಾಸಖಾನ ಹಬಸಿ ಗುಲಾಮರಿಂದ ಸರದಾರರಾದರು. ವಿದ್ವಾಂಸರು ರಾಜ್ಯದ ಬೆನ್ನೆಲುಬಾಗಿದ್ದರು. ಅವರು ಆಡಳಿತದಲ್ಲಿ ವಿಶೇಷ ಜಾಣತನವನ್ನು ತೋರಿದ್ದರು. ತಮ್ಮ ದೂರದೃಷ್ಟಿಯಿಂದ ಅನೇಕ ಜಟಿಲವಾದ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದರು. ಈ ವಿದ್ವಾನರಿಗೆ 'ಆಲಿಮ್' ಎನ್ನಲಾಗುತ್ತಿತ್ತು. ಭಾರತದಲ್ಲಿ ಮುಸ್ಲಿಂ ಧರ್ಮ ಜಾರಿ ಆದಗಿನಿಂದ ಉಲೇಮಾಗಳು ಮಹತ್ವದ ಪ್ರಭಾವ ಬೀರಿದ್ದಾರೆ. ಆದರೆ ಖಿಲ್ಜಿ ಮತ್ತು ತುಘಲಕರರು ಇವರ ಪ್ರಭಾವಕ್ಕೆ ಕಡಿವಾಣ ಹಾಕಿದರು. ಮುಂದೆ ಬಹಮನಿ ಸುಲ್ತಾನರು ಅದೇ ಪದ್ಧತಿ ಮುಂದುವರೆಸಿದರು. ನಂತರದಲ್ಲಿ ಆದಿಲ್‌ಶಾಹಿಗಳು ಅವರಿಗೆ ಎಲ್ಲ ಗೌರವಗಳನ್ನು ಮತ್ತು ಹಣಕಾಸಿನ ಸಹಾಯ ಮಾಡಿದರು, ಆದರೆ ಅವರ ತಿರಸ್ಕಾರಿ ನಡತೆಗೆ ಬೆಂಬಲ ಕೊಡಲಿಲ್ಲ.

ಬ) ಹಿಂದೂ ವರ್ಗ :

ಆದಿಲ್‌ಶಾಹ ರಾಜ್ಯದಲ್ಲಿಯು ಹಿಂದೂ ಸಮಾಜಿಕ ಜೀವನವು ಸಾಂಪ್ರದಾಯಿಕ ನೆಲೆಗಟ್ಟಿನ ಮೇಲೆಯೇ ನಿಂತಿದ್ದಿತು. ಹಿಂದೂ ಧರ್ಮಶಾಸ್ತ್ರಗಳಲ್ಲಿನ ಕುಟುಂಬ, ಜಾತಿ, ವಿವಾಹ, ಧರ್ಮ ಹೀಗೆ ಅನೇಕ ಅಂಶಗಳು ಮನುವಿನಂತಹ ಸ್ಮೃತಿಕಾರರ ಧರ್ಮಶಾಸ್ತ್ರಗಳ ಮೇಲೆ ಬೆಳೆದು ಬಂದವುಗಳಾಗಿದ್ದವು.

ಮಧ್ಯಕಾಲದಲ್ಲಿಯೂ ಅವುಗಳಲ್ಲಿ ಅಷ್ಟೊಂದು ಬದಲಾವಣೆಗಳೇನೂ ಆಗಲಿಲ್ಲ, ಅದು ಅವಿಭಕ್ತ ಕುಟುಂಬದ ಲಕ್ಷಣಗಳನ್ನೇ ಹೊಂದಿತ್ತು. ಹಿಂದೂ ಸಮಾಜಿಕ ಜೀವನದ ಇನ್ನೊಂದು ಪ್ರಮುಖ ಲಕ್ಷಣವೆಂದರೆ ಜಾತಿ ವ್ಯವಸ್ಥೆ. ಪ್ರಾಚೀನ ಭಾರತದ ಜಾತಿವ್ಯವಸ್ಥೆಯಲ್ಲಿ ಮುಖ್ಯವಾಗಿ ನಾಲ್ಕು ವರ್ಗಗಳಿದ್ದವು. ಬ್ರಾಹ್ಮಣರು ಈ ವ್ಯವಸ್ಥೆಯಲ್ಲಿ ಮೇಲ್ತುದಿಯಲ್ಲಿಯೂ ಶೂದ್ರರು ಅತ್ಯಂತ ಕೆಳದರ್ಜೆಯ ನಡೆಸುವಂತಾಗಿತ್ತು. ೧೫ನೇ ಶತಮಾನದ ದಕ್ಷಿಣದಲ್ಲಿ ಬ್ರಾಹ್ಮಣರು ಪುರೋಹಿತಶಾಹಿ ವರ್ಗವಾಗಿದ್ದೂ, ಶೂದ್ರರ ಶೋಷಣೆಯಿಂದ ಸಾಮಾಜಿಕ ಒಡನಾಟ ಅತ್ಯಂತ ಜಟಿಲವಾಗಿಯೇ ಇದ್ದಿತು. ಈ ವ್ಯವಸ್ಥೆ ವಿಜಯನಗರಕ್ಕೂ ಹೊರತಾಗಿರಲಿಲ್ಲ.[೨]

ಆದಿಲ್‌ಶಾಹಿ ಸಾಮ್ರಾಜ್ಯದಲ್ಲಿ ಮೂಲ ನಿವಾಸಿಗಳಾದ ಹಿಂದೂಗಳು ಅಧಿಕ ಸಂಖ್ಯೆಯಲ್ಲಿದ್ದರು. ಅವರಲ್ಲಿ ಪ್ರಮುಖರೆಂದರೆ ಮರಾಠರು. ಹೇಗೆ ಮೊಗಲರು ರಜಪುತರ ಸಹಾಯದೊಂದಿಗೆ ಆಡಳಿತ ನಡೆಸಿದರು, ಹಾಗೆ ಬಿಜಾಪುರದ ಆದಿಲ್‌ಶಾಹಿಗಳು ಮರಾಠರ ಒಳ್ಳೇಯ ಸಂಬಂಧ ಬೆಳೆಸಿ ಆಡಳಿತವನ್ನು ನಡೆಸಿದ್ದನ್ನು ನೋಡಬಹುದಾಗಿದೆ. ಪ್ರೋ. ಜೋಶಿಯವರು ಹೇಳುವಂತೆ ತಮ್ಮ ಸಾಮ್ರಾಜ್ಯದ ಉಳಿವಿಗೆ ಮರಾಠರ ಬೆಂಬಲ ಅವಶ್ಯಕ ಎಂದು ಶಾಹಿಗಳು ಮನಗೊಂಡಿದ್ದರು. ಮರಾಠರು ಯೂಸುಫ ಆದಿಲ್‌ಖಾನ ಮತ್ತು ಉತ್ತರಾಧಿಕಾರಿಗಳಿಗೆ ಉತ್ತಮ ಸಹಕಾರ ಕೊಡುತ್ತಾ ಬಂದರು. ಸ್ವತಃ ಯೂಸುಫನು ಮರಾಠ ಸರದಾರ ಮುಕುಂದರಾಯನ ತಂಗಿಯನ್ನು ಮದುವೆಯಾಗಿದ್ದನು. ಶಾಹಿಗಳು ಸಹ ಇವರಿಗೆ ಉನ್ನತ ಸ್ಥಾನಮಾನ ಮತ್ತು ಗೌರವಗಳನ್ನು ದಯಪಾಲಿಸಿದರು. ಉದಾಹರಣೆಗಾಗಿ ಫಲ್ಟನದ ನಿಂಬಾಳಕರ, ಮುಧೋಳದ ಘೋರಪಡೆ, ಮೋರೆ, ಮಾನೆ, ಘಾಟಗೆ, ರಾಸ್ತೆ, ದಫ್ತರಿ ಮತ್ತು ಶಹಾಜಿ ಭೋಸಲೆ, ಶಿವಾಜಿಯ ತಂದೆ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಸೇವೆಯಲ್ಲಿ ಸೇರಿ ಒಳ್ಳೆ ಸೇನಾಪತಿಯಾಗಿ ದಕ್ಷ ರಾಜ್ಯಪಾಲನಾಗಿ ಕರ್ನಾಟಕ ಪ್ರಾಂತವನ್ನು ನೋಡಿಕೊಂಡನು. ಹೀಗೆ ಆದಿಲ್‌ಶಾಹಿಗಳ ಆಡಳಿತದಲ್ಲಿ ಉನ್ನತ ಅಧಿಕಾರಗಳನ್ನು ಪಡೆದಿದ್ದರು.[೩]

ಮರಾಠರೊಂದಿಗೆ ಬ್ರಾಹ್ಮಣರು ಲಿಂಗಾಯತರು, ಶೈವರು, ವೈಷ್ಣವರು ಸಹ ಆದಿಲ್‌ಶಾಹಿ ರಾಜ್ಯದಲ್ಲಿ ವಾಸಿಸುತ್ತಿದ್ದರು. ಇವರಲ್ಲಿ ಅನೇಕ ಉಪಜಾತಿಗಳಿದ್ದವು, ದೇಶಸ್ಥ, ಕನೋಜಿ, ಕಾಣ್ವ, ಕರಾಡಾ, ಕೊಂಕಣಸ್ಥ, ಶೆಣ್ವಿ, ತಿರಗುಲ ಇವರ ಕುಲಬಾರಗಳು ಒಂದೇ ತರಹದ್ದಾಗಿದ್ದವು ಕೆಲವು ವ್ಯತ್ಯಾಸಗಳನ್ನು ಒಳಗೊಂಡಿದ್ದವು ಇವರ ಮನೆ ದೇವರು ಖಂಡೋಬಾ. ಮಹಾಬಲೇಶ್ವರ ಮತ್ತು ತುಳಜಾಪುರದ ಭವಾನಿ ಮುಂತಾದ ದೇವರಿಲ್ಲಿ ಅಪಾರವಾದ ನಂಬಿಕೆಯನ್ನು ಬೆಳೆಸಿಕೊಂಡಿದ್ದರು.

ಭಾರತಿಯ ಸಾಮಾಜಿಕ ವ್ಯವಸ್ಥೆಯನ್ನು ಜಡವಾಗಿಸಿದವರೇ ಬ್ರಾಹ್ಮಣರು ಅದು ಮಧ್ಯ ಕಾಲದಲ್ಲಿಯೂ ಕೂಡ ಯಾವ ಅಡೆತಡೆಯಿಲ್ಲದೇ ನಡೆದುಕೊಂಡು ಬಂದಿತು. ಬೀದರ ಮತ್ತು ಬಿಜಾಪುರಗಳಲ್ಲಿ ಬ್ರಾಹ್ಮಣರು ಅಧಿಲಾರದ ಉನ್ನತ ಹುದ್ದೆಯನ್ನು ಅನುಭವಿಸುತ್ತಿದ್ದರು. ರಾಜ್ಯದ ಮುಖ್ಯ

[illegible]

ಇಲಾಖೆಗಳೆನಿಸಿದ್ದ ಹಣಕಾಸು ಮತ್ತು ಲೆಕ್ಕ ಪತ್ರಗಳನ್ನು ನಿರ್ವಹಿಸುವುದು. ಇನ್ನು ಧಾರ್ಮಿಕ ವಿಧಿ-ವಿಧಾನಗಳಲ್ಲಿಯೂ ಹಾಗೂ ಅಗ್ರಹಾರಗಳ ಮೇಲ್ವಿಚಾರಣೆಯೂ ಬ್ರಾಹ್ಮಣರಿಗೆ ಸೇರಿದ್ದವು.

ಮಹಮ್ಮದ ಆದಿಲ್‌ಶಾಹನ ಕಾಲಕ್ಕೆ ಬ್ರಾಹ್ಮಣರಿಗೆ ಉನ್ನತ ಸ್ಥಾನ-ಮಾನ ಸಿಕ್ಕಿದವು. ಉದಾಹರಣೆಗೆ ಹೇಳಬೇಕಾದರೆ, ಒಂದು ದಿನ ಬ್ರಾಹ್ಮಣನು ಅನೇಕ ರೈತರೊಂದಿಗೆ ಯಾವುದೋ ಕೆಲಸಕ್ಕಾಗಿ ಇಲಾಹಾಪುರ ಬಾಗಿಲದ ಹೊರಗೆ ಹೋದನು. ಹೊರಗೆ ಹೋಗುವ ಸಮಯದಲ್ಲಿ ಬಾಗಿಲಲ್ಲಿ ನಾಯಿಕ ಮತ್ತು ಮೆಹತರ ನಾಯಿಕವಾಡಿ ಕುಳಿತಿದ್ದರು. ಅವರಿಗೆ ಬ್ರಾಹ್ಮಣನು ಸಲಾಮು ಮಾಡಿದ. ಬ್ರಾಹ್ಮಣನ ಸಲಾಮನ್ನು ಆ ನಾಯಿಕ ಮತ್ತು ಮೆಹತರ ನಾಯಿಕವಾಡಿಗಳು ಕುಳಿತಲ್ಲಿಂದಲೇ ಸ್ವೀಕರಿಸಿದರು. ಅವರು ಎದ್ದು ನಿಂತು ಪ್ರಮಾಣಿಕತನದಿಂದ ಸಲಾಮುಗಳನ್ನು ಸ್ವೀಕರಿಸಲಿಲ್ಲವೆಂದು ಬ್ರಾಹ್ಮಣನ ಮನಸ್ಸು ನೊಂದಿತು. ಹಾಗೆಯೇ ಬಾಗಿಲಿನಿಂದ ಹೊರ ಹೋದ ಅನಂತರ ಬ್ರಾಹ್ಮಣನು " ಆ ನಾಯಿಕ ಮತ್ತು ನಾಯಿಕವಾಡಿಗಳು ನನ್ನನ್ನು ಕ್ಷುಲ್ಲಕನನ್ನಾಗಿ ಕಂಡರು. ನನ್ನಲ್ಲಿ ಯೋಗ್ಯತೆಯೇ ಇಲ್ಲವೆಂದು ತಿಳಿದರು. ಪ್ರತಿನಿತ್ಯ ನನ್ನನ್ನು ಕಂಡಾಗ ಅವರು ಎದ್ದುನಿಲ್ಲುತ್ತಿದ್ದರು. ಅದರಂತೆ ಇಂದು ನಿಲ್ಲಲಿಲ್ಲ ನಾವು ಕೂಡ ಬಾದಶಹರ ಪ್ರಜೆಗಳೇ ಆಗಿದ್ದೇವೆ. ಬಾದಶಹರು ನಮ್ಮನ್ನು ಸಮಾಧಾನದಿಂದ ಇಟ್ಟು, ನಮ್ಮ ಸುಖಸಂತೋಷಕ್ಕಾಗಿ ಬಹಳ ಪ್ರಯತ್ನ ಪಡುತ್ತಾರೆ. ಹೀಗಿದ್ದರೂ ಇವರ ದೃಷ್ಟಿಯಲ್ಲಿ ನಾವು ಕೇವಲ ಕ್ಷುಲ್ಲಕರಾಗಿ ಕಾಣುತ್ತೇವೆ. ಹೀಗಾದಲ್ಲಿ ಇನ್ನು ಮುಂದೆ ನಾವು ಎಲ್ಲರ ದೃಷ್ಟಿಯಲ್ಲೂ ಅಯೋಗ್ಯರಾಗಿ ಕೊನೆಗೆ ಬಾದಶಹನ ದೃಷ್ಟಿಯಿಂದಲೂ ಕೆಳಗೆ ಬೀಳುತ್ತೇವೆ. ಅಂದಮೇಲೆ ಇನ್ನು ಈ ನಗರದಲ್ಲಿ ಇರುವುದು ಸರಿಯಲ್ಲ ಎಂದು ಕಾಣುತ್ತದೆ. ಬೇರೆ ಕಡೆಗೆ ಹೊರಟು ಹೋಗುವುದೇ ಸರಿ, ಯಾಕೆಂದರೆ ನಶ್ವರವಾದ ದೇಹವು ಈ ಮೃತ್ಯು ಲೋಕದಲ್ಲಿ ನಾಲ್ಕುದಿನ ಇರುವುದು. ಅಲ್ಪ ಆಯುಷ್ಯದಲ್ಲೇ ಗೌರವದಿಂದ ಬಾಳುವುದು ಸರಿ. ಅವಮರ್ಯಾದೆಯಿಂದ ಬದುಕುವುದಕ್ಕಿಂತ ಮರಣವೇ ಒಳ್ಳೆಯದು" ಎಂದು ಕೊಂಡನು. ಅದರಂತೆ ಬ್ರಾಹ್ಮಣ ಹಾಗೂ ಆತನ ವಶದಲ್ಲಿದ್ದ ಜನರು ತಮ್ಮ ಜಹಗೀರಿಯನ್ನು ಬಿಟ್ಟು ಬೇರೆ ಕಡೆಗೆ ಹೋಗುವುದು ನಿರ್ಧರಿಸಿ, ಅದೇ ರಾತ್ರಿ ನಗರದ ಹೊರಗೆ ಹೊರಟು ಹೋದರು. ಮರುದಿನ ಬೆಳ್ಳಿಗೆ ಮತ್ತೆಲ್ಲಾದರೂ ಹೋಗಿ ಇರುವುದೆಂದು ನಿರ್ಧರಿಸಿದರು. ತಿರುಗಿ ಮನೆಗೆ ಬರಲಿಲ್ಲ. ರಾತ್ರಿ ಗುಪ್ತಚಾರರು ಈ ವಿಷಯವನ್ನು ಬಾದಶಹನ ಕಿವಿಯ ಮೇಲೆ ಹಾಕಿದರು. ಈ ಸುದ್ದಿಯನ್ನು ಕೇಳಿದ ಬಾದಶಹನಿಗೆ ತುಂಬ ಕೆಟ್ಟೆನಿಸಿತು. ಸೊಕ್ಕಿನಿಂದ ಮೆರೆದ ನಾಯಿಕ ಮತ್ತು ನಾಯಿಕವಾಡಿಗೆ ಯೋಗ್ಯ ಶಿಕ್ಷೆ ಕೊಟ್ಟನಲ್ಲದೆ, ಮಹಾಜನ ಹಾಗೂ ಆತನ ರೈತ ಜನರಿಗೆ ತಿಳಿ ಹೇಳಲು, ದರಬಾರದಿಂದ ಅಧಿಕಾರಿಗಳನ್ನು ಕಳಿಸಿ ಅವರ ಚಿತ್ತ ಸಮಾಧಾನ ಪಡಿಸಿದನು. ಅವರೆಲ್ಲರೂ ತಂತಮ್ಮ ಮನೆಗಳಿಗೆ ಹಿಂತಿರುಗಿ ಬಂದರು. ಆದರೆ 'ಮೊದಲು ನಾವು ಇಲ್ಲಿಯೇ ನಗರದ ಹೊರಗೆಯೇ ಇರುತ್ತೇವೆ. ನಗರದೊಳಗೆ ಬರಲು ನಮ್ಮ ಮನ ಒಪ್ಪುತ್ತಿಲ್ಲ. ಯಾವ ಬಾಗಿಲಿನಿಂದ ನಾವು ಬರುವಾಗ ನಮ್ಮನ್ನು ಕ್ಷುಲ್ಲಕತನದಿಂದ ಕಾಣಲಾಯಿತೋ ಆ ಬಾಗಿಲಲ್ಲಿ ನಾವು ತಿರುಗಿ ಕಾಲಿಡುವುದಿಲ್ಲ' ಎಂದರು. ಈ ವಿಷಯ ಮಹಮ್ಮದ ಆದಿಲ್‌ಶಾಹನಿಗೆ ತಿಳಿಯುತ್ತಲೇ ಬಾದಶಹನು, ನಗರದ ಗೌಂಡಿಗಳ ನಾಯಕನನ್ನು ಕರೆದು, ಕೋಟೆಯನ್ನು ಒಡೆದು ಬೇರೆಡೆ ಬಾಗಿಲು ಕಟ್ಟಲು ಆಜ್ಞೆ ಮಾಡಿದನು. ಅವರು ಇಡೀ ರಾತ್ರಿ ಹಗಲು ಕೋಟೆ ಗೋಡೆಯನ್ನು ಒಡೆದು ಬೇರೆ

ಬಾಗಿಲನ್ನು ಹಚ್ಚಿದರು. ಅದೇ ಇಂದಿನ ಬಾದಶಾಪುರ ಬಾಗಿಲು ಅದರ ಮುಖಾಂತರ ಬ್ರಾಹ್ಮಣ ಮತ್ತು ರೈತರನ್ನು ಬಹು ಆದರದಿಂದ ನಗರಕ್ಕೆ ಬರಮಾಡಿಕೊಂಡರು. ಹೀಗೆ ಸುಲ್ತಾನ ಮಹಮ್ಮದ ಬಾದಶಹನ ಪ್ರಜಾ ಪಾಲನೆ ಮತ್ತು ದಯಾಳುತನ ಹೀಗಿತ್ತು.[೪]

ಕುಟುಂಬ :

ಕುಟುಂಬವು ಸುಖ ಸಂತೋಷಗಳ ಮೂಲವಾಗಿತ್ತು. ಅದು ಕ್ಷೇಮ, ಸ್ಥಿರತೆ, ಆಸಕ್ತಿಯನ್ನು ಗುರುತಿಸುವುದರ ಜೊತೆಗೆ ಸಕಾಲಿಕ ನೆರವೂ, ಸೇವೆ, ತ್ಯಾಗ, ಮನೋಧರ್ಮ ಮುಂತಾದವು ಕುಟುಂಬ ವ್ಯವಸ್ಥೆಯ ಸ್ಥಿರ ಅಂಶಗಾಗಿದ್ದವು. ಜೊತೆಜೊತೆಗೆ ಹಿಂದೂಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆ ಕಂಡುರುತ್ತದೆ. ಸಂಘಟಿತ ಸಾಮಾಜಿಕ ವ್ಯವಸ್ಥೆಯಲ್ಲಿ ಪಿತೃ ಪ್ರಧಾನವಾದ ಕುಟುಂಬ ವ್ಯವಸ್ಥೆಯನ್ನು ಹೊಂದಿತ್ತು. ತಂದೆ ಅಥವಾ ಯಜಮಾನನು ಕುಟುಂಬದ ಇತರೇ ಸದಸ್ಯರ ಮೇಲೆ ನಿಯಂತ್ರಣ ಹೊಂದಿದ್ದನು. ತಂದೆ ಮತ್ತು ಮಕ್ಕಳ ನಡುವಿನ ಸಂಬಂಧವು ಪ್ರೀತಿ-ವಿಶ್ವಾಸದಿಂದ ಕೂಡಿತ್ತು. ಪತಿ-ಪತ್ನಿಯರಿಬ್ಬರೂ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಿದ್ದರು. ಕುಟುಂಬದ ಹಿರಿಯನು ಇತರೇ ಸದಸ್ಯರನ್ನು ಮತ್ತು ಮಕ್ಕಳ ಯೋಗಕ್ಷೇಮವನ್ನು ನೋಡುವ ಜವಾಬ್ದಾರಿ ಹೊಂದಿದ್ದನು. ದೇವ-ದೇವತೆಗಳ ಆರಾಧನೆ, ಅತಿಥಿಗಳ ಸತ್ಕಾರ, ಹಿರಿಯರನ್ನು ಪೂಜ್ಯಭಾವನೆಯಿಂದ ಕಾಣಲಾಗುತ್ತಿತ್ತು. ಯಜಮಾನನಾದವನನು ಶಿಸ್ತು ಕಾಪಾಡಲು ಯಾವುದೇ ರೀತಿಯ ಕ್ರೂರ ಮಾರ್ಗವನ್ನು ಅನುಸರಿಸುತ್ತಿಲಿಲ್ಲ.

ಮುಸ್ಲಿಮರಲ್ಲಿ ಉತ್ತಮ ಜೀವನ ನಡೆಸಬೇಕೆಂದು ಇಸ್ಲಾಂ ತನ್ನ ಅನುಯಾಯಿಗಳಿಗೆ ಬೋಧಿಸಿತ್ತು. ಬ್ರಹ್ಮಚರ್ಯವನ್ನು ತಿರಸ್ಕರಿಸಿ ಅದು ವಿವಾಹವನ್ನು ಪ್ರೋತ್ಸಾಹಿಸಿತು. ಸಾಮಾನ್ಯವಾಗಿ ಹಿಂದೂ ಸಮಾಜದಲ್ಲಿದ್ದರಿಂದ ಹಿಂದೂಗಳಂತೆ ಕೌಟುಂಬಿಕ ವ್ಯವಸ್ಥೆಯನ್ನು ರೂಪಿಸಿಕೊಂಡರು. ಇಸ್ಲಾಂ ಧರ್ಮದ ಪ್ರಕಾರ ಅವರು ಪಿತೃಪ್ರಧಾನ ಕುಟುಂಬ ವ್ಯವಸ್ಥೆಯನ್ನೇ ಅನುಸರಿಸಿದರು. ದಾನ, ಧರ್ಮ, ಸಮಾನತೆ, ಭಾತೃತ್ವ, ಸಹಕಾರ ಇವು ಇಸ್ಲಾಂ ಧರ್ಮದ ಮೂಲ ತತ್ವಗಳಾಗಿದ್ದವು. ಈ ತತ್ವಗಳನ್ನು ಅವರು ಅಳವಡಿಸಿಕೊಂಡು ಒಂದು ಒಳೇಯ ಸಮಾಜ ನಿರ್ಮಾಣ ಮಾಡಲು ಪ್ರಯತ್ನಿಸಿದರು. ಅವರು ತಮ್ಮ ಕೌಟುಂಬಿಕ ಜೀವನದಲ್ಲಿ ಹಿಂದೂ ಸ್ತ್ರೀಯರನ್ನು ಸೇರಿಸಿಕೊಂಡರು. ಉದಾಹರಣೆಗಾಗಿ ಆದಿಲ್‌ಶಾಹಿ ವಂಶದ ಸ್ಥಾಪಕನಾದ ಯೂಸುಫ ಆದಿಲ್‌ಖಾನನು ತನ್ನ ಆಡಳಿತದಲ್ಲಿ ಹಿಂದೂ ಅಧಿಕಾರಿಯಾದ ಮುಕುಂದರಾಯನ ಸಹೋದರಿಯನ್ನು ಮದುವೆಯಾದನು.[೫] ಇದು ಅಂದಿನ ಸಹಬಾಳ್ವೆಯ ಪ್ರತೀಕವಾಗಿತ್ತು. ಜನಜೀವನದ ಮೇಲೆ ಪ್ರಭಾವವನ್ನು ಬೀರುವಂತ ದಾರ್ಶನಿಕ ಕ್ರಿಯೆಯು ಆಗಿತ್ತು. ಸಾಮಾನ್ಯವಾಗಿ ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಹಿಂದೂಗಳಂತೆ ಕೌಟುಂಬಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು.

ಸ್ತ್ರೀಯರ ಸ್ಥಾನಮಾನಗಳು :

ಆದಿಲ್‌ಶಾಹಿ ಕಾಲದಲ್ಲಿ ಮಹಿಳೆಯರ ಸ್ಥಾನವು ಸಮಾಧಾನಕರವಾಗಿತ್ತು. ಅವರು ಸಮಾಜದಲ್ಲಿ ಮನ್ನಣೆ ಪಡೆದಿದ್ದರು. ಮುಸ್ಲಿಂ ಸಮಾಜದಲ್ಲಿ ಪರ್ದಾ ಪದ್ಧತಿಯೂ ಜಾರಿಯಲ್ಲಿತ್ತು. ದುಷ್ಟರ ಮತ್ತು ಕಾಮುಕರ ಕಣ್ಣಿನಿಂದ ಮಹಿಳೆಯನ್ನು ರಕ್ಷಿಸುವ ಉದ್ದೇಶವೇ ಪರ್ದಾ ವ್ಯವಸ್ಥೆಯಾಗಿ ಕಟ್ಟುನಿಟ್ಟುಗೊಳಿಸಿದರು. ಇದು ಹೆಚ್ಚಾಗಿ ಮೇಲಿನವರ್ಗದಲ್ಲಿ ಪ್ರಚಲಿತದಲ್ಲಿತ್ತು. ಮಧ್ಯಮ ವರ್ಗದವರಿಗೆ ಅವರ ಆರ್ಥಿಕ ಪರಿಸ್ಥಿತಿಯಿಂದ ಅದನ್ನು ಪಾಲಿಸುವುದು ಕಷ್ಟವಾಗಿತ್ತು. ಮಹಿಳೆಯರ ಶಿಕ್ಷಣ ಮೇಲವರ್ಗದ ಮಹಿಳೆಯರಿಗೆ ಮಿಸಲಾಗಿತ್ತು. ಇವರಿಗೆ ಮನೆ ಪಾಠಗಳು ನಡೆಯುತ್ತಿದ್ದವು. ಮಸೀದೆ ಬದಿಗೆ 'ಮಕತಾಬ' ಮತ್ತು ಮದರಸಾಗಳಿದ್ದವು ಅಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೆಣ್ಣು ಮತ್ತು ಗಂಡುಮಕ್ಕಳಿಗೆ ಕೊಡುತ್ತಿದ್ದರೆಂಬ ಉಲ್ಲೇಖಗಳಿವೆ.[6] ಆದರೆ ಹೆಣ್ಣು ಮಕ್ಕಳಿಗೆ ಪ್ರತೇಕ ಶಾಲೆಗಳಿದ್ದವು ಎನ್ನುವದಕ್ಕೆ ಯಾವ ದಾಖಲೆಗಳಿಲ್ಲ.

ಆದಿಲ್‌ಶಾಹಿಗಳ ಕಾಲದಲ್ಲಿ ಬಹುಪತ್ನಿತ್ವ ಜಾರಿಯಲ್ಲಿತ್ತು. ಸಚ್ಚಾರಿತ್ರ್ಯ ಮತ್ತು ಕುಟುಂಬ ಜೀವನ ಶುದ್ದೀಕರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿತ್ತು. ವ್ಯಭಿಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತಲ್ಲದೇ ಅಂತಹ ಕೆಲಸಕ್ಕೆ ಉಗ್ರವಾದ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಬಹುಪತ್ನಿತ್ವ ವ್ಯವಸ್ಥೆಯನ್ನು ಕೇವಲ ನಾಲ್ಕು ಹೆಂಡರಿಗೆ ಸೀಮಿತಗೊಳಿಸಲಾಯಿತು. ಆದರೆ ಕುರಾನಿನ ಪ್ರಕಾರ ಅವರೆಲ್ಲರಿಗೂ ಪ್ರೀತಿ, ಗೌರವ ಮತ್ತು ಸಮಾನತೆಯನ್ನು ಕಲ್ಪಿಸಿಕೊಡಬೇಕಿದ್ದಿತು. ವಿವಾಹ ವಿಚ್ಛೇದನಕ್ಕೂ ಅವಕಾಶಗಳಿದ್ದು ಸ್ತ್ರೀ-ಪುರುಷರು ವಿವಾಹ ವಿಚ್ಛೇದನ ಪಡೆಯಬಹುದಾಗಿತ್ತು.

ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀಗೆ ಗೌರವವಿದ್ದರೂ ಕೂಡ ಅವಳಿಗೆ ಪೂರ್ಣ ಸ್ವತಂತ್ರವನ್ನು ಕೊಡಲಿಲ್ಲ. ಮುಸ್ಲಿಂ ಮಹಿಳೆಗೆ ಆಸ್ತಿಯಲ್ಲಿ ಅಗ್ರವಾದ ಪಾಲಿತ್ತು. ಅಂದರೆ ಅವಳು ಮಗಳಾಗಿ, ಹೆಂಡತಿಯಾಗಿ ಮತ್ತು ತಾಯಿಯಾಗಿ ಆಸ್ತಿಪಾಲು ಪಡೆಯುತ್ತಿದ್ದಳು. ರಾಜ್ಯಪರಿವಾರದ ಮತ್ತು ಶ್ರೀಮಂತರ ಸ್ತ್ರೀಯರು ಕೇವಲ ಮಹಲನಲ್ಲಿಯ ಕೆಲಸ ಕಾರ್ಯಗಳಿಗೆ ಸೀಮಿತವಾಗಿರದೆ, ಮಹಲಿನಿಂದ ಹೊರಬಂದು ರಾಜ್ಯವನ್ನು ರಕ್ಷಿಸಿದ ಉದಾಹರಣೆಗಳಿವೆ. ಅವರಲ್ಲಿ ಪ್ರಮುಖರೆಂದರೆ, ಪುಂಜಿಖಾತುನ ಅಥವಾ ಬುಬುಜೀ ಖಾನಂ, ದಿಲಶಾದ ಆಗಾ, ಚಾಂದಬೀಬಿ ಬಡೀಸಾಹಿಬಾ ಇವರು ಮಹತ್ವದ ಪಾತ್ರವನ್ನು ನಿರ್ವಹಿಸಿದ್ದಾರೆ.

ಇಸ್ಮಾಯಿಲ ಆದಿಲ್‌ಖಾನನ ತಾಯಿ ಪುಂಜಿಖಾತುನ ಇವಳು ರಾಜ್ಯವನ್ನು ಕಮಾಲಖಾನ ದಖನಿಯ ಕೈಯಲ್ಲಿ ಹೋಗುವುದನ್ನು ತಪ್ಪಿಸಿದಳು ಅವಳು ಯೋಜನೆಯನ್ನು ರೂಪಿಸಿ ಕಮಾಲಖಾನನ ಕೊಲೆ ಮಾಡಿಸಿದಳು. ದಿಲ್‌ಶಾದ ಆಗಾ ಇವಳು ಇಸ್ಮಾಯಿಲನ ಸಾಕುತಾಯಿಯಾಗಿದ್ದಳು. ಇವಳು ಫಿರಂಗಿ ನಡೆಸುವ ಕಲೆಯಲ್ಲಿ ಪ್ರವೀಣಳಾಗಿದ್ದಳು. ಆಕೆಯು ಕಮಾಲಖಾನನ ಮಗ ಸಫದರಖಾನ ದಂಡೆತ್ತಿ ಅರಮನೆಗೆ ಬಂದಾಗ ಅರಮನೆಯ ಮೇಲ್ಛಾವಣೆ ಮೇಲೆ ನಿಂತು, ಬಾಣಗಳ ಮಳೆಗರೆದು ಅನೇಕ ಸೈನಿಕರನ್ನು ಕೊಂದಳು. ಅವಳು

ಬಿಟ್ಟ ಬಾಣ ನೇರವಾಗಿ ಸಫದರಖಾನನ ಬಲಗಣ್ಣಿಗೆ ನೆಟ್ಟು ಮುಂದೆ ಇಸ್ಮಾಯಿಲ ಉರುಳಿಸಿದ ಬಂಡೆ ಕೆಳಗೆ ಸಿಕ್ಕು ಸತ್ತು ಹೋದನು.[೭]

ಆದಿಲ್‌ಶಾಹಿ ರಾಜ್ಯವನ್ನು ಉಳಿಸಿದ ಮತ್ತೊಂಬ್ಬ ವೀರ ಮಹಿಳೆ ಎಂದರೇ ಚಾಂದಬೀಬಿ. ಮೊದಲನೆಯ ಅಲಿ ಆದಿಲ್‌ಶಾಹನ ರಾಣಿ. ಎರಡನೆ ಇಬ್ರಾಹಿಮ ಆದಿಲ್‌ಶಾಹನು ಒಂಬತ್ತನೆ ವಯಸ್ಸಿನಲ್ಲಿ ಸುಲ್ತಾನಾದನು. ಅವನ ಶಿಕ್ಷಣ ಹೊಣೆ ಚಾಂದಬೀಬಿ ಮೇಲಿತ್ತು.[೮] ಇದರ ಜೊತೆಗೆ ಆಡಳಿತವನ್ನು ನೋಡುವ ಮತ್ತು ಬಿಜಾಪುರದ ಸಿಂಹಾಸನವನ್ನು ರಕ್ಷಿಸುವ ಜವಾಬ್ದಾರಿ ಆಕೆಯದಾಗಿತ್ತು. ಈ ಕಾಲದಲ್ಲಿ ನಾಲ್ಕು ಬಂಡುಕೋರ ಸರದಾರರು ಸಿಂಹಾಸನವನ್ನು ಪಡೆಯಲು ಯತ್ನಿಸಿದರು. ಈ ಸಂದರ್ಭದಲ್ಲಿ ಕಿಶ್ವರಖಾನ ದಂಗೆಯದ್ದು ಇವಳಿಗೆ ಜೈಲಿಗೆ ಕಳಿಸಿದನು. ಆದರೆ ಇನ್ನೊಬ್ಬ ಬಂಡುಕೋರ ಇಖ್ಲಾಸಖಾನನ ಸಹಾಯದಿಂದ ಬಿಡುಗಡೆಯಾದಳು. ನಂತರ ಮತ್ತೆ ಆಕೆಗೆ ಇಬ್ರಾಹಿಮನ ಜವಾಬ್ದಾರಿಯನ್ನು ಕೊಡಲಾಯಿತು[೯] ಚಾಂದಬೀಬಿ ರಾಜ್ಯಭಾರವನ್ನು ನಡೆಸುತ್ತಿದ್ದಾಗ ಅಹಮ್ಮದನಗರ, ಬೇರಾರ ಮತ್ತು ಗೋಲ್ಕೊಂಡ ಸೈನ್ಯಗಳು ಬಿಜಾಪುರಕ್ಕೆ ಮುತ್ತಿಗೆ ಹಾಕಿದವು. ಅನೇಕ ವಿದ್ವಂಸರು ಶತ್ರುಗಳ ಕಡೆಗೆ ಹೋದರು.[೧೦] ಇದೆ ಸಮಯದಲ್ಲಿ ಆಡಳಿತದಲ್ಲಿದ ಅಧಿಕಾರಿಗಳು ಚಾಂದಬೀಬಿಗೆ ಮನವಿ ಸಲ್ಲಿಸಿ ತಮ್ಮ ಅಧಿಕಾರವನ್ನು ತ್ಯಜಿಸಲು ಸಿದ್ದರಾಗಿ ಆಕೆಗೆ ತನ್ನ ಮನಸೋ ಇಚ್ಛೆಯಂತೆ ನೇಮಕ ಮಾಡಲು ಅನುವು ಮಾಡಿಕೊಟ್ಟರು. ಅದರಂತೆ ಶಾಹ ಅಬುಲ್ ಹಸನ ಅರ್ಥ ಮಂತ್ರಿಯನ್ನಾಗಿ ಅಫಜಲ್‌ಖಾನ ಶಿರಾಜಿಗೆ ಪೇಶವೆಯ ಹುದ್ದೆಗೆ ನೇಮಕ ಮಾಡಿದಳು, ಇದರಿಂದ ಶತ್ರುಗಳ ಕಡೆಗೆ ಹೋದ ವಿದ್ವಾನರು ಮರುಳಿ ಬರುವಂತಾಯಿತು. ಇನ್ನೂ ಕೆಲ ಮಹಿಳೆಯರು ಆಡಳಿತ ನಡೆಸುವಲ್ಲಿ ಭಾಗವಹಿದ್ದರು, ಅವರುಗಳಲ್ಲಿ ಬಡಿಸಾಹೀಬಾ ಮತ್ತು ಶಹರಬಾನು ಬೇಗಂ ಪ್ರಮುಖರು.

ಬಡಿಸಾಹೀಬಾ ಅಥವಾ ಖದಿಜಾ ಸುಲ್ತಾನಾ ಇವಳು ಮಹಮ್ಮದ ಕೂಲಿ ಕುತುಬಶಾಹನ ಮಗಳು. ಕೂಲಿ ಕುತುಬಶಾಹ ಒಬ್ಬ ಉತ್ತಮ ಲೇಖಕನಾಗಿದ್ದನು. ಅವನ "ದಿವಾನ" ಎಂಬ ಕೃತಿ ದಖನಿ ಸಾಹಿತ್ಯದಲ್ಲಿ ಮಹತ್ವದಾಗಿದೆ. ತಂದೆಯಂತೆ ಮಗಳು ದಖನಿ ಮತ್ತು ಪರ್ಶಿಯನ ಭಾಷೆಯನ್ನು ಬಲ್ಲವಳಾಗಿದ್ದಳು. ಆಕೆ ಶಿಕ್ಷಣ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹಿಸಿದಳು. ಇವಳ ಪತಿ ಮಹಮ್ಮದ ಆದಿಲ್‌ಶಾಹನು ಅನಾರೋಗ್ಯ ಪೀಡಿತನಾಗಿದ್ದಾಗ (೧೬೪೬) ರಾಜ್ಯದ ಸಂಪೂರ್ಣ ಜವಾಬ್ದಾರಿ ಇಕೆಯ ಮೇಲೆ ಬಿತ್ತು. ಆತನ ಮರಣದ ನಂತರ ಎರಡನೆ ಅಲಿ ಸುಲ್ತಾನಾದನು. ಆತನ ಶಿಕ್ಷಣವು ಬಡಿಸಾಹೇಬಳ ನೇತೃತ್ವದಲ್ಲಿಯೇ ನಡೆಯಿತು. ಅಲಿಯು ಚಿಕ್ಕವಯಸ್ಸಿನವನಾಗಿದ್ದರಿಂದ ರಾಜ್ಯದಲ್ಲಿ ಅರಾಜಕತೆ, ಗೊಂದಲಗಳು ಪ್ರಾರಂಭವಾದವು ಆದರೆ ಬಡಿಸಾಹೇಬಳ ದಿಟ್ಟ ಕ್ರಮದಿಂದಾಗಿ ಆಡಳಿತ ವ್ಯವಸ್ಥೆ ಸುಗಮವಾಗುವಂತಾಯಿತು.[೧೧]

ಸಿಕಂದರ ಆದಿಲ್‌ಶಾಹನ ಸಹೋದರಿ ಶಹರಬಾನು ಆಡಳಿತ ನಿರ್ವಹಣೆಯಲ್ಲಿ ತುಂಬಾ ಬುದ್ಧಿವಂತಳಾಗಿದ್ದಳು.[೧೨] ಆಕೆಗೆ ಅರಮನೆಯಲ್ಲಿ ಎಲ್ಲ ಮಹಿಳೆಯರು ಗೌರವಿಸುತ್ತಿದ್ದರು. ಆಕೆಯ ಸಲಹೆ ಸೂಚನೆಗಳು ಆಡಳಿತದಲ್ಲಿ ಮಹತ್ವದೆಂದು ಪರಿಗಣಿಸಲಾಗುತ್ತಿತ್ತು. ಆಕೆ ತನ್ನ ತಮ್ಮ ಸಿಕಂದರನಿಗೆ ಆಡಳಿತ ನಡೆಸಲು ಸಹಾಯ ಮಾಡುತ್ತಿದ್ದಳು. ಮೊಗಲರ ಆಕ್ರಮಣದಿಂದ ಆದಿಲ್‌ಶಾಹಿ ಸಾಮ್ರಾಜ್ಯವನ್ನು ರಕ್ಷಿಸಲು

ಆಕೆಯು ಮೊಗಲರ ರಾಜಕುಮಾರನಾದ ಮಹಮ್ಮದ ಆಜಂನನ್ನು ಮದುವೆ ಮಾಡಿಕೊಂಡಳು. ಅದು ಅವಳ ರಾಜ್ಯಕ್ಕಾಗಿ ಮಾಡಿದ ತ್ಯಾಗವೆಂದು ಹೇಳಲಾಗಿದೆ.

ಆದಿಲ್‌ಶಾಹಿ ರಾಜ್ಯದಲ್ಲಿ ಮಹಿಳೆಯರು ಉನ್ನತ ಹುದ್ದೆಯನ್ನು ಅಲಂಕರಿಸಿದ್ದರು, ಸಮಾಜದಲ್ಲಿ ಗೌರವಾದ ಸ್ಥಾನ-ಮಾನಗಳನ್ನು ಹೊಂದಿದ್ದರು. ಅಲ್ಲದೆ ಆಡಳಿತದಲ್ಲಿ ತಮ್ಮದೆಯಾದ ಪ್ರಭಾವವನ್ನು ಬೀರಿದ್ದರು. ಅಷ್ಟೆ ಅಲ್ಲದೆ ಅವರು ರಾಜ್ಯದ ರಕ್ಷಣೆಯನ್ನು ಮಾಡುವ ಮಟ್ಟಕ್ಕೇರಿದರು.

ಆ ಕಾಲದಲ್ಲಿ ಹಿಂದೂಗಳಲ್ಲಿ ಸತಿ ಪದ್ಧತಿ ರೂಢಿಯಲ್ಲಿತ್ತು. ಈ ಪದ್ಧತಿಯು ಮೇಲವರ್ಗದ ಹಿಂದೂಗಳಲ್ಲಿ ಸಾಮಾನ್ಯವಾಗಿತ್ತು. ವಿದೇಶಿ ಪ್ರವಾಸಿಗಳಾದ ನಿಕಿಟಿನ, ನಿಕೋಲೂ ಕೌಂಟಿ, ಬಾರಬೋಸಾ ಮುಂತಾದವರು ಹದಿನೈದನೆ ಶತಮಾನದಲ್ಲಿ ದಕ್ಷಿಣ ಭಾರತಕ್ಕೆ ಬಂದವರು, ಇವರು ಸತಿ ಪದ್ಧತಿಯ ವಿಶೇಷ ಉಲ್ಲೇಖಗಳನ್ನು ಮಾಡಿದ್ದಾರೆ.[೧೩]

ಮದುವೆ ಸಮಾರಂಭಗಳು :

ಮದುವೆಯು ಹಿಂದೂಗಳಲ್ಲಿ ಅಥವಾ ಮುಸ್ಲಿಮರಲ್ಲಿ ನೆರವೇರಲಿ ಅದು ಜೀವನವನ್ನು ಮುಂದುವರೆಸಲು ಗಂಡು ಮತ್ತು ಹೆಣ್ಣು ಒಂದುಗೂಡುವುದಕ್ಕೆ ಅನುಮತಿಯ ಮುದ್ರೆಯ ಶಾಸನಬದ್ಧತೆಯನ್ನು ಅದು ಒದಗಿಸುತ್ತಿದ್ದಿತು. ಅದು ಎಲ್ಲಾ ಧರ್ಮಗಳ ಮೂಲ ಸಾಮಾಜಿಕ ಅಗತ್ಯವಾಗಿತ್ತು. ಹಿಂದೂಗಳಲ್ಲಿ ವಿವಾಹವು ಅತ್ಯಂತ ಪವಿತ್ರವಾದ ಸಂಸ್ಕಾರ, ಸಚ್ಚಾರಿತ್ರ್ಯವನ್ನು ಉಳಿಸಿಕೊಳ್ಳುವ ವ್ಯವಸ್ಥೆ ಎಂದು ಪರಿಗಣಿಸಲಾಗಿದೆ. ವಿವಾಹವು ಒಂದು ಸಾಮಾಜಿಕ ಒಪ್ಪಂದವಾಗಿರದೆ ಧಾರ್ಮಿಕ ಕರ್ತವ್ಯವುವಾಗಿತ್ತು. ಪ್ರತಿಯೊಬ್ಬನು ಇದಕ್ಕೆ ಬದ್ಧನಾಗಿರಬೇಕಿತ್ತು. ವಿವಾಹ ಪುರುಷ ಮತ್ತು ಸ್ತ್ರೀಯರ ನಡುವೆ ಶಾಶ್ವತವಾದ ಸಂಬಂಧವನ್ನು ಕಲ್ಪಿಸಿತು. ವಿವಾಹವು ಪುರುಷಾರ್ಥಗಳ ಸಾಧನೆಗಾಗಿ ವ್ಯಕ್ತಿಯು ಗೃಹಸ್ಥಾಶ್ರಮಕ್ಕೆ ಹೋಗುವ ಮೇಟ್ಟಿಲಾಗಿದ್ದು ಪವಿತ್ರವಾದ ನೈತಿಕ ಆಧ್ಯಾತ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನೊಳಗೊಂಡ ಕನ್ಯಾದಾನದ ಅಂಶವನ್ನು ಹೊಂದಿತ್ತು. ವಿವಾಹಗಳು ಅತಿ ವಿಜೃಂಭಣೆಯಿಂದ ಹಬ್ಬಗಳಂತೆ ನೆರವೇರುತ್ತಿದ್ದವು. ರಾಜಮನೆತನಗಳಲ್ಲಿ ವಿವಾಹಗಳು ಅತಿ ವಿಜೃಂಭಣೆಯಿಂದ ನೆರವೇರುತ್ತಿದ್ದವು. ಅವು ಅವರವರ ಶಕ್ತಿಗನುಸಾರವಾಗಿ ನಡೆಯುತ್ತಿದ್ದವು. ಅಂತಹ ಕೆಲವು ಆದಿಲ್‌ಶಾಹಿ ಸುಲ್ತಾನರ ಮದುವೆ ಸಮಾರಂಭಗಳನ್ನು ನೋಡಬಹುದು.

ಅಲಿ ಆದಿಲ್‌ಶಾಹ ಮತ್ತು ಅಹಮ್ಮದನಗರದ ರಾಜಕುವಾರಿ ಚಾಂದಬೀಬಿಯ ವಿವಾಹವು ಜುಬೇರಿ ತನ್ನ ಬಸಾತೀ-ಉಸ್-ಸಲಾತೀನ್‌ದಲ್ಲಿ ಈ ರೀತಿಯಾಗಿ ಉಲ್ಲೇಖಿಸಿದ್ದಾನೆ. " ಉಭಯ ಕಡೆಗಳಲ್ಲೂ ಸಂತೋಷದಿಂದ ಆನಂದದಿಂದ ಮದುವೆಯ ಸಿದ್ಧತೆಯನ್ನು ನಿರಂತರವಾಗಿ ಮಾಡತೊಡಗಿದರು. ಒಂದೇ ದಿನದಂದು ಬಿಜಾಪುರ ಮತ್ತು ಅಹಮ್ಮದನಗರ ರಾಜಧಾನಿ ನಗರಗಳನ್ನು ಶೃಂಗರಿಸಿ ಸಿದ್ಧಮಾಡಿದರು. ಎರಡೂ ನಗರಗಳ ಬಾಗಿಲು, ಗೋಡೆಗಳು, ರಸ್ತೆಗಳು, ಬಾಜಾರಗಳು ಇಂದರಭುವನದ ಹಾಗೆ ಮಾರ್ಪಟ್ಟುವು.

ಪ್ರತಿಯೊಬ್ಬ ಸಣ್ಣ, ದೊಡ್ಡ ವ್ಯಕ್ತಿಯು, ತರುಣರು ವೃದ್ಧರು, ಸಂತೋಷ ಪಟ್ಟು ಮದುವೆ ಸಮಾರಂಭವಾದ್ದರಿಂದ ತಂತಮ್ಮ ಭಾಂಡಾರದ ಮತ್ತು ಬಟ್ಟೆಬರೆಗಳ ಉಗ್ರಾಣದ ಬೀಗವನ್ನು ತೆರೆದರು. ಆಭರಣಗಳನ್ನು, ಪೋಷಾಖುಗಳನ್ನು ಎಲ್ಲರಲ್ಲೂ ಎದ್ದುಕಾಣುವಂತೆ ಮೈಮೇಲಿ ಹಾಕಿಕೊಂಡರು. ಪ್ರತಿಯೊಂದು ಗಲ್ಲಿಯಲ್ಲೂ, ರಸ್ತೆಯಲ್ಲೂ ಮದುವೆಯ ಗಲಿಬಿಲಿ ಮತ್ತು ಸಂತೋಷದ ಧ್ವನಿಯು ಆಕಾಶವನ್ನು ಮುಟ್ಟಿತು. ನೃತ್ಯಾಂಗನೆಯರು, ಕಲಾವಂತಿಣಿಯರು, ಸುಸ್ವರ ವಾದ್ಯದವರು ಅಲ್ಲಲ್ಲಿ ಮತ್ತು ಮನೆಗಳಲ್ಲಿ ನಿಂತು ನೃತ್ಯ ಮಾಡಿದರು. ಸುಸ್ವರ ಹಾಡುಗಳನ್ನು ಹಾಡುವವರು, ಗಾಯಕರು ಪ್ರತಿಯೊಂದು ವಾಡೆಗಳಲ್ಲಿ ಮಹಡಿಯ ಮೇಲೆ ಕುಳಿತು ಗಾಯನ ಮಾಡುತ್ತ ಮನೋರಂಜನೆ ಮಾಡಿದರು. ಅವರ ಗಾಯನ ಎಷ್ಟೊಂದು ಪರಿಣಾಮಕಾರಿಯಾಗಿತ್ತೆಂದರೆ, ಅವರು ಹಾಡುವ ಸಮಯದಲ್ಲಿ ಹರುಯುವ ನೀರು, ಹಾರುವ ಹಕ್ಕಿಗಳ ಗತಿ ಸ್ತಬ್ಧವಾಗಿರುತ್ತಿತ್ತು. ಖಾಸಾ ಸಮಾರಂಭಗಳಲ್ಲಿ ಮತ್ತು ಶ್ರೇಷ್ಠ ಸಭೆಗಳಲ್ಲಿ ಹಾಸಿಗೆಯ ಮೇಲೆ ಮುತ್ತು ರತ್ನಗಳನ್ನು ಚೆಲ್ಲುತ್ತಿದ್ದರು. ಅದರ ವಿವರಣೆ ಎಷ್ಟೆಂದು ಬರೆಯಬೇಕು? ಯಾಕೆಂದರೆ ಸಭೆಯ ಅಲಂಕಾರದ ಶೋಭೆಯ ಸವಿಸ್ತಾರವನ್ನು ವರ್ಣಿಸಲು ಲೇಖನಿಗೆ ದಣಿವಾಗುತ್ತಿದೆ. ಅದು ನಿಲ್ಲುತ್ತಿದೆ. ಅತ್ಯಂತ ವೈಭವದ ಭಾರೀ ಮದುವೆ ಸಮಾರಂಭ ನಡೆಯಿತು.

ಮದುವೆಯ ಸಮಾರಂಭಗಳು, ಸಭೆ-ಸಂತೋಷ ಕೂಟಗಳು ಮೂರು ತಿಂಗಳು ಪರ್ಯಂತ ನಿರಂತರವಾಗಿ ವೈಭವೋಪೇತವಾಗಿ ನಡೆದವು. ಮದುವೆಯ ಸಮಾರಂಭವಾದ ಅನಂತರ ಉಭಯ ವಧುವರರನ್ನು ಅಲ್ಲಿಂದಿಲ್ಲಿಗೆ-ಇಲ್ಲಿಂದಲ್ಲಿಗೆ ಕಳಿಸಿಕೊಟ್ಟರು. ಚಾಂದಬೀಬಿ ಸುಲ್ತಾನ ವಧುವು ಸುದೈವಿಯಾಗಿ ಬಾದಶಹನ ಹೆಂಡತಿಯಾಗಿ ರಾಣಿಯಾಗಿ ಬಿಜಾಪುರ ನಗರದ ಅಧಿಕಾರಿಣಿಯಾದಳು.[೧೪]

ಅದರಂತೆ ಮಹಮ್ಮದ ಆದಿಲ್‌ಶಾಹನ ಮತ್ತು ಗೋಳ್ಕೊಂಡಾದ ರಾಜಕುಮಾರಿಯಾದ ಖದಿಜಾಬೇಗಂಳ ವಿವಾಹ ಕೂಡ ವಿಜೃಂಭಣೆಯಿಂದ ನಡೆಯಿತು. ಈ ಮದುವೆ ಸಮಾರಂಭವು ಈ ಹಿಂದೆ ಯಾವ ಮದುವೆಗೆ ಮಾಡಲಾದಷ್ಟು ವೆಚ್ಚ ಈ ವಿವಾಹಕ್ಕೆ ಮಾಡಲಾಗಿತ್ತು. ಮುಸ್ಲಿಮರಲ್ಲಿಯ ಸಂಪ್ರದಾಯದಂತೆ ಮೊದಲು ವರನ ಕಡೆಯವರು ವಧುವಿನ ಮನೆಗೆ ಹೋಗಿ ಮಧುವೆಯ ಪ್ರಸ್ತಾಪವನ್ನು ಮಾಡುತ್ತಾರೆ. ನಂತರ ಉಭಯರು ಮದುವೆ ನಿಶ್ಚಯ ಮಾಡುತ್ತಾರೆ. ನಿಶ್ಚಿತಾರ್ಥಮಾಡುಲು ವರನ ತಂದೆ-ತಾಯಿ ಹಾಗೂ ಸರದಾರು ಸಮಾನ್ಯವಾಗಿ ಹೋಗುತ್ತಾರೆ. ಈ ಮದುವೆ ಸಮಾರಂಭಕ್ಕೆ ವಿಶೇಷವಾಗಿ ಮುರಾರಿ ಪಂಡಿತ ಮತ್ತು ಇತರ ಸರದಾರ ನೇತೃತ್ವದಲ್ಲಿ ಮಾತುಕತೆಗಳು ನಡೆದವು. ಈ ಮಾತುಕತೆಗೆ ಬಂದ ಮುರಾರಿ ಪಂಡಿತ ಮತ್ತು ಇತರ ಸರದಾರರಿಗೆ ವಧುವಿನ ಕಡೆಯವರು ಅವರಿಗೆ ಅನೇಕ ಕಾಣಿಕೆಗಳನ್ನು ಕೊಟ್ಟರು, ಅದರಲ್ಲಿ ಕುದರೆಗಳು, ಆನೆಗಳು, ಬೆಲೆಬಾಳುವ ಮುತ್ತು-ರತ್ನಗಳೂ ಕೂಡಿದ್ದವು. ಈ ಅಪಾರ ಕಾಣಿಕೆಯೊಂದಿಗೆ ಮದುವೆ ನಿಶ್ಚಿತಾರ್ಥ ಮಾಡಿ ಬಿಜಾಪುರಕ್ಕೆ ಬಂದರು.

ಈ ಮದುವೆಗಾಗಿ ಮಹಮ್ಮದ ಆದಿಲ್‌ಶಾಹನ ಸಹೋದರಿ ತಂದಂತಹ ಉಡುಗೊರೆಗಳ ಪ್ರದರ್ಶನಕ್ಕಾಗಿ ೨೦೦೦ ಪರಾತ ಅಥವಾ ತಬಕ (ಟ್ರೇ)ಗಳು ಬೇಕಾದವು. ಅಷ್ಟು ಬೆಲೆಬಾಳುವ ವಸ್ತ್ರಗಳು,

ಆಭರಣಗಳು ಉಡುಗೊರೆಯಾಗಿ ಕೊಡಲಾಯಿತು. ಗುರು–ಹಿರಿಯರ ಸಮಕ್ಷಮ ಆ ಊರಿನ ಖಾಜಿ ರಾಜಕುಮಾರಿಯನ್ನು ಸುಲ್ತಾನನೊಂದಿಗೆ ಮದುವೆಯನ್ನು ನೇರವೇರಿಸಿದನು. ೩೦ ಲಕ್ಷ ಹೊನ್ನಗಳನ್ನು 'ಮೆಹರ'(ವರನು ವಧುವಿಗೆ ಕೊಡಬೇಕಾದ ಹಣ)ನಲ್ಲಿ ಕೊಡಲಾಯಿತು.[೧೫] ಒಂದು ವಾರದ ವರೆಗೆ, ಅರಮನೆಯಲ್ಲಿ ಉತ್ಸವವನ್ನು ಆಚರಿಸಲಾಯಿತು. ಮಹಮ್ಮದ ಆದಿಲ್‌ಶಾಹನ ಸಹೋದರಿಯನ್ನು ಅಮೂಲ್ಯವಾದ ಬಟ್ಟೆಗಳಿಂದ ಮತ್ತು ಉಡುಗೊರೆಗಳಿಂದ ಸತ್ಕರಿಸಲಾಯಿತು. ಇದಾದ ಮೇಲೆ ರಾಜದರ್ಬಾರಿನ ಸರದಾರರು ಮತ್ತು ಗಣ್ಯ ವ್ಯಕ್ತಿಗಳನ್ನು ಮತ್ತು ರಾಜಕುಮಾರಿಯನ್ನು ಪಲ್ಲಕಿಯಲ್ಲಿ ಕೂಡ್ರಿಸಿ, ಜೊತೆಯಲ್ಲಿ ೨೫ ವಿಶೇಷ ಪಲ್ಲಕಿಗಳು ಮತ್ತು ೫೦ ಇತರ ಪಲ್ಲಕಿಗಳಲ್ಲಿ, ಅನೇಕ ಆಳುಗಳನ್ನು ಸಹ ಕಳಿಸಿಲಾಯಿತು. ಇದರ ಜೊತೆಯಲ್ಲಿ ಬೆಟ್ಟದಂತಹ ಆನೆಗಳು, ತುರ್ಕಿ ಮತ್ತು ಅರಬ ಕುದರೆಗಳು, ಒಂಟೆಗಳನ್ನು, ಚಕಡಿಗಳು ಲೆಕ್ಕವಿಲ್ಲದಷ್ಟು ಸೇವಕರನ್ನು ಜೊತೆಯಲ್ಲಿ ಕಳಿಸಲಾಯಿತು.[೧೬] ಈ ಮದುವೆಯಲ್ಲಿ ಭಾಗವಹಿಸಿದ ಸರದಾರರು ಕೂಡ ಅತ್ಯಮೂಲ್ಯವಾದ ಉಡುಗೊರೆಯನ್ನು ಪಡೆದರು. ಅಲ್ಲದೆ ಬಿಜಾಪುರದ ಸಂಗೀತಗಾರರಿಗೆ ೫೦೦೦ ಹೊನ್ನ ಮತ್ತು ೧೦,೦೦೦ ರೂಪಾಯಿಗಳು ಬಹುಮಾನವಾಗಿ ನೀಡಲಾಯಿತು. ಎಣಿಸಲಾಗದಷ್ಟು ರತ್ನಗಳು ಮತ್ತು ಲೆಕ್ಕವಿಲ್ಲದಷ್ಟು ಉಡುಗೊರೆಗಳನ್ನು ಮಹಮ್ಮದ ಆದಿಲ್‌ಶಾಹನ ಸಹೋದರಿಗೆ ಮತ್ತು ಅವಳ ಜೊತೆ ಬಂದಂತಹ ಮಹಿಳೆಯರಿಗೆ ಕೊಡಲಾಯಿತು. ೫ ಲಕ್ಷ ಹೊನ್ನಗಳನ್ನು ಮಹಮ್ಮದ ಆದಿಲ್‌ಶಾಹಗೆ ವರದಕ್ಷಣೆ ರೂಪದಲ್ಲಿ ಕೊಟ್ಟಿದ್ದು ದಾಖಲೆಯಾಗಿದೆ. ಅದರಂತೆ ೫೦,೦೦೦ ಹೊನ್ನಗಳು ಊಟ ಮತ್ತು ಉಡುಗೊರೆಗಳಿಗಾಗಿ ವ್ಯಯಿಸಲಾಯಿತು. ಈ ಮದುವೆಯ ಸಮಾರಂಭವು ಒಂದುವರೆ ತಿಂಗಳವರೆಗೆ ನೆರವೇರಿತು.[೧೭]

ಸಂಪ್ರದಾಯದ ಪ್ರಕಾರ ವೀಳ್ಯದ ಎಲೆ ಕೊಡುವ ಪದ್ಧತಿ ಮುಸ್ಲಿಮ ಮತ್ತು ಹಿಂದೂಗಳಲ್ಲಿ ಕಂಡುಬರುತ್ತದೆ. ವಧುವನ್ನು ಬೀಳ್ಕೊಡುವ ಸಮಯದಲ್ಲಿ ಈ ಮದುವೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಮುರಾರಿ ಪಂಡಿತನನ್ನು ಅಮೂಲ್ಯವಾದ ಬಟ್ಟೆ ಮತ್ತು ಉಡುಗೊರೆ ಹಾಗೂ ವೀಳ್ಯದ ಎಲೆ ಕೊಟ್ಟು ಸತ್ಕರಿಸಿ, ವಧುವನ್ನು ಕಳಿಸಲಾಯಿತು. ರಾಣಿಯನ್ನು ಸ್ವಾಗತಿಸಲು ಬಿಜಾಪುರದಿಂದ ಬಂದಂತಹ ಇತರ ಆದಿಲ್‌ಶಾಹಿ ರಾಜದರ್ಬಾರಿನ ಗಣ್ಯ ವ್ಯಕ್ತಿಗಳನ್ನು ವಿಶೇಷ ಬೆಲೆಬಾಳುವ ಉಡುಗೊರೆಗಳಿಂದ ಸತ್ಕರಿಸಲಾಯಿತು. ಸ್ವತಃ ಮಹಮ್ಮದ ಆದಿಲ್‌ಶಾಹ ಕೂಡ ರಾಣಿಯನ್ನು ಹೇರಳ ಬೆಲೆಬಾಳುವ ರತ್ನ ವಜ್ರ ವೈಡೂರ್ಯಗಳೊಂದಿಗೆ ಸ್ವಾಗತಿಸಲು ಬಂದನು. ಅದೇ ಪ್ರಕಾರ ದಕ್ಷಿಣದಲ್ಲಿ ಪ್ರಚಲಿತವಿದ್ದ ' ಜುಲವಾ[೧೮] '(ಪ್ರಥಮಸಲ ವಧುವಿನ ಮುಖ ನೋಡುವುದು)ವನ್ನು ನೇರವೇರಿಸಿದ. ವಧುವಿನೊಂದಿಗೆ ಬಂದಂತಹ ಕುತುಬಶಾಹಿ ರಾಜದರ್ಬಾರಿನ ಎಲ್ಲ ಸರದಾರ ಮತ್ತು ಅಧಿಕಾರಿಗಳು ಬಿಜಾಪುರದಲ್ಲಿ ಒಂದು ತಿಂಗಳವರೆಗೆ ಇದ್ದರು. ಗೋಲ್ಕೊಂಡ ರಾಜ್ಯಕ್ಕೆ ತೆರಳುವಾಗ ಅವರನ್ನೆಲ್ಲಾ ಅಮೂಲ್ಯವಾದ ಬಟ್ಟೆ ಮತ್ತು ಬೆಲೆಬಾಳುವ ಉಡುಗೊರೆಗಳಿಂದ ಸತ್ಕರಿಸಿ ಬಿಳ್ಕೊಟ್ಟರು. ಈ ವೈಭದ ಮದುವೆ ಎರಡೂವರೆ ತಿಂಗಳವರೆಗೆ ನಡೆಯಿತು. ಅಂದರೆ ಒಂದುವರೆ ತಿಂಗಳು ವಧುವಿನ ಅರಮನೆಯಲ್ಲಿ ಮತ್ತು ಒಂದು ತಿಂಗಳು ಬಿಜಾಪುರದಲ್ಲಿ.

[illegible]

ಈ ಕಾಲದಲ್ಲಿಯೂ ಬಾಲ್ಯವಿವಾಹಗಳು ಸಾಮಾನ್ಯವಾಗಿದ್ದವು. ವಿವಾಹದ ಪ್ರಸಕ್ತಿ ಮೊದಲು ವಧುವಿನ ಕಡಯವರಿಂದ ಬರಬೇಕೋ ವರನ ಕಡೆಯಿಂದ ಬರಬೇಕೋ ಎನ್ನುವುದು ಜಾತಿಯಿಂದ ಜಾತಿಗೆ ಭಿನ್ನವಾಗಿತ್ತು. ವೈವಾಹಿಕ ಸಂಬಂಧಕ್ಕೆ ಮುಖ್ಯವಾಗಿದ್ದ ಪರಿಗಣನೆ ಜಾತಿ, ಉಪಜಾತಿ, ಅಂತರ್ಜಾತಿ ವಿವಾಹಗಳು ಅತಿ ವಿರಳವಾಗಿದ್ದವು. ಎಲ್ಲಾ ವರ್ಗಗಳಲ್ಲಿ ಉಡುಗರೆ ಕೊಡುವ ಪದ್ಧತಿ ರೂಢಿಯಲ್ಲಿತ್ತು. ಸಾಮಾನ್ಯ ಜನರು ನಗದು ಅಥವಾ ಚಿನ್ನ ಅಥವಾ ಆಭರಣಗಳು ಅಥವಾ ಮನೆಯನ್ನು ಕೂಡ ಉಡುಗರೆಯಾಗಿ ನೀಡುತ್ತಿದ್ದರು. ಸುಲ್ತಾನನಾದ ಅಲಿ ಆದಿಲ್‌ಶಾಹನು ತನ್ನ ವಿವಾಹದ ಸಂದರ್ಭದಲ್ಲಿ ಶೋಲ್ಲಾಪುರ ಪಟ್ಟಣವನ್ನು ಉಡುಗರೆಯಾಗಿ ಪಡೆದನು.[೧೯] ಮಹಮ್ಮದ ಆದಿಲ್‌ಶಾಹನು ತನ್ನ ಮದುವೆಯ ಕಾಲದಲ್ಲಿ ಐದು ಲಕ್ಷ ಹೊನ್ನ ವದಕ್ಷಿಣೆಯಾಗಿ ಸ್ವೀಕರಿಸಿದನು.[೨೦] ಹೀಗೆ ವರ್ಗಗಳ ವ್ಯತ್ಯಾಸದ ಮೇರೆಗೆ ಕೊಡು-ತೆಗೆದುಕೊಳ್ಳುವ ಪದ್ಧತಿ ಜಾರಿಯಲ್ಲಿತ್ತು.

ಷರತುಗಳಿಂದ ಕೂಡಿದ ವಿವಾಹವನ್ನು, ತಾತ್ಕಾಲಿಕ ವಿವಾಹವನ್ನು ಇಸ್ಲಾಂ ನಿಷೇಧಿಸಿದೆ. ಬಹುಪತ್ನಿತ್ವಕ್ಕೆ ಅವಕಾಶ ಕೊಟ್ಟಿತು. ಆದರೆ ಸಂಖ್ಯೆಯನ್ನು ನಾಲ್ಕಕ್ಕೆ ಮಿತಿಗೊಳಿಸಿದೆ. ಈ ಅನುಮತಿಯು ಪ್ರತಿಯೊಬ್ಬ ಮಡದಿಗೂ ನ್ಯಾಯವನ್ನು ದೊರಕಿಸತಕ್ಕದ್ದು ಎಂಬ ಷರತ್ತಿಗೆ ಒಳಪಟ್ಟಿತ್ತು. ಕುರಾನಿನಲ್ಲಿ ನಾಲ್ವರು ಪತ್ನಿಯರಿಗೆ ಅವಕಾಶ ಕೊಡುವ ಕಲವಿನ ಹಿಂದೆಯೇ ಸಮಾನತೆ ಮತ್ತು ನ್ಯಾಯಪರತೆಗಳ ಕಟ್ಟು ನಿಟ್ಟಾದ ಆದೇಶವು ಬರುವುದರಿಂದ ವಾಸ್ತವವಾಗಿ ಒಂದು ಕೈಯಲ್ಲಿ ಕೊಟ್ಟಿದ್ದನ್ನು ಇನ್ನೊಂದು ಕೈಯಲ್ಲಿ ಹಿಂದಕ್ಕೆ ಪಡೆದಂತಾಗಿದೆ. ನೀನು ಇಬ್ಬರನ್ನು, ಮೂವರನ್ನು, ನಾಲ್ವರನ್ನು ಮದುವೆಯಾಗಬಹುದು, ಆದರೆ ಅದಕ್ಕಿಂತ ಹೆಚ್ಚಲ್ಲ. ಆದರೆ ಆ ಎಲ್ಲರೊಂದಿಗೂ ಸಮತ್ವದಿಂದ, ನ್ಯಾಯವಾಗಿ ನೀನು ನಡೆದುಕೊಳ್ಳದ ಪಕ್ಷದಲ್ಲಿ ಒಬ್ಬಳನ್ನು ಮಾತ್ರ ಮದುವೆಯಾಗತಕ್ಕದ್ದು ಎಂದು ಕುರಾನ ಹೇಳುತ್ತದೆ. ಇಲ್ಲಿ ಸಮತ್ವ ಎಂದರೆ ನಡವಳಿಕೆ, ಉಡುಗೆ, ತೊಡುಗೆ, ವಸತಿ ಮುಂತಾದವುಗಳಲ್ಲಿ ಸಮಾನತೆ ಮಾತ್ರವಲ್ಲ, ಪ್ರೇಮ, ವಾತ್ಸಲ್ಯ, ಗೌರವ ಮರ್ಯಾದೆಗಳಲ್ಲಿ ಸಂಪೂರ್ಣ ಸಮಾನತೆ ಎಲ್ಲಾ ಪತ್ನಿಯರ ಬಗೆಗೆ ಏಕರೂಪದ ಮಾರ್ದವತೆ ಮತ್ತು ಪ್ರೇಮವನ್ನು ಹೊಂದಿರುವುದು ಪ್ರಸ್ತುತಃ ಸಾಧ್ಯವಿಲ್ಲವಾದ್ದರಿಂದ ಕುರಾನ, ಪತ್ನಿಯರ ಸಂಖ್ಯೆಯನ್ನು ವಾಸ್ತವವಾಗಿ ಒಂದಕ್ಕೂ ಇಳಿಸಿದಂತೆಯೇ ಆಗಿದೆ. ಕೆಲವು ಧರ್ಮಶಾಸ್ತ್ರಜ್ಞರು ಕುರಾನ ವಿಧಿಸಿರುವುದು ಏಕಪತ್ನಿತ್ವವನ್ನೇ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಏಕೆಂದರೆ ಅಲ್ಲೇ ಇನ್ನೊಂದು ಕಡೆ ಈ ಮಾತು ಬರುತ್ತದೆ. 'ನೀನು ಎಷ್ಟೇ ಅಪೇಕ್ಷೆಪಟ್ಟರೂ ಎಲ್ಲರಿಗೂ ಸಮಾನವಾಗಿ ನ್ಯಾಯವನ್ನು ಸಮಾನವಾಗಿ ಒದಗಿಸಲಾರೆ'[೨೧] ವಿವಾಹವು ಹೀಗೆ ಚಾರಿತ್ರ್ಯ ಶುದ್ಧಿಯನ್ನು ಕಾಪಾಡಿಕೊಳ್ಳುವ ವಿಧಾನವನ್ನಾಗಿ ಹೇಳಲಾಯಿತು. ವ್ಯಭಿಚಾರಕ್ಕೆ ಉಗ್ರವಾದ ಶಿಕ್ಷೆಯನ್ನು ವಿಧಿಸಿತು. ಇಸ್ಲಾಂ ಪಿತೃ ಪ್ರಧಾನ ಕುಟುಂಬವನ್ನು ಸಮರ್ಥಿಸುತ್ತದೆ. ಅದರಲ್ಲಿ ಮಹಿಳೆಯರ ಸ್ಥಾನಮಾನವು ಇಸ್ಲಾಮಿನ ಉದಯಕ್ಕೆ ಮುಂಚಿತವಾಗಿ ಇದ್ದುದಕ್ಕೆ ಹೋಲಿಸಿದರೆ, ಬಹಳ ಮೇಲಕ್ಕೇರಿದೆ. ಇತ್ತೀಚಿನ ಕಾಲದವರೆಗೆ ಬೇರೆ ಯಾವುದೇ ಸಮಾಜದಲ್ಲಿ ಇದ್ದುದಕ್ಕಿಂತಲೂ ಬಹಳ ಉನ್ನತವಾದ ಸ್ಥಾನಮಾನ ಅವರಿಗೆ ನೀಡಲಾಗಿದೆ.

ಸ್ಥಾನಿಕ ಪರಂಪರೆಗಳಂತೆ ನಡೆದು ಬಂದ ಕೆಲವೇ ವ್ಯತ್ಯಾಸಗಳನ್ನು ಬಿಟ್ಟರೆ, ಎಲ್ಲ ಮದುವೆಗಳು ಮುಸ್ಲಿಂ ಕಾಯ್ದೆಯಂತೆ ವಿಧಿವತ್ತಾಗಿ ನಡೆಸಲ್ಪಡುತ್ತದೆ. ಮದುವೆ ದಿನ ಮದುಮಗನಿಗೆ ವಿವಾಹದ ಬಟ್ಟೆಗಳನ್ನು ತೊಡಿಸಿ, ರೂಮಾಲಿನಿಂದ ಇಳಿಬಿಟ್ಟ ' ಸೆಹರಾ ' ಅಥವಾ ಹೂಮಾಲೆಗಳಿಂದ ಮುಖವನ್ನು ಮುಂಚುವಂತೆ ಮಾಡುವರು, ಅವನು ಕುದರೆಯನ್ನೇರಿ ಸವಾರಿ ಮಾಡುತ್ತ ಮಿತ್ರ, ಆಪ್ತರೊಂದಿಗೆ ಮೆರವಣಿಗೆಯಲ್ಲಿ ಮದುವೆಯ ಮಂಟಪದತ್ತ ಸಾಗುವನು. ಮದುವೆ ಮಂಟಪದಲ್ಲಿ ಎರಡೂ ಪಕ್ಷದವರು ಕುಳಿತಕೊಂಡ ಮೇಲೆ ವಿವಾಹ ವಿಧಿಗಳು ಪ್ರಾರಂಭವಾಗುವವು. ವಧುವರರ ಮದುವೆ ಮಾಡಲು ಖಾಜಿ ಅನುಮತಿ ಪಡೆಯುವನು. ಸಾಕ್ಷಿಗಳ ಸಮ್ಮುಖದಲ್ಲಿ ನಡೆದ ಕಾರ್ಯಕ್ರಮಗಳು ಬರೆಯಲ್ಪಡುತ್ತವೆ. ವರನು ವಧುವಿಗೆ ವಿಶಿಷ್ಟ ಉಡುಗೊರೆ ಮತ್ತು 'ಮಹರ' ಕೊಡುವನು. ಆಗ ಖಾಜಿ ' ನಿಕಾ ' ಓದುತ್ತಾರೆ. ಹಿಂದೂಗಳ ಪರಂಪರೆಯಂತೆ ' ಲಚ್ಛಾ '(ಮಂಗಳಸೂತ್ರ) ವನ್ನು ಕೆಲವರು ಉಪಯೋಗಿಸುತ್ತಾರೆ. ಆದರೆ ವರನ ಬದಲು ವಿವಾಹಿತ ಮಹಿಳೆಯೊಬ್ಬಳು ಇದನ್ನು ವಧುವಿನ ಕಂಠಕ್ಕೆ ತೊಡಿಸುವಳು.[೨೨]

ಸಮಾಜದಲ್ಲಿ ಬಾಳಿ ಬದುಕಿದ್ದ ದಿವಸಗಳಲ್ಲಿ ಪಡೆಯುತ್ತಿದ್ದು ಮರ್ಯಾದೆ ಅವರ ಸಾವಿನ ನಂತರವೂ ಅವರವರ ಸ್ಥಾನಮಾನಗಳಿಗನುಗುಣವಾಗಿ ದೊರಕುತ್ತಿತ್ತು. ಸುಲ್ತಾನರು ತಮ್ಮ ಪ್ರತಿಷ್ಠೆಗೆ ಅನುಗುಣವಾಗಿ ಬೃಹತ ಕಟ್ಟಡ(ಗೋರಿ) ಕಟ್ಟಿಸುತ್ತದ್ದರು.

ಆಹಾರ, ಉಡುಗೆ ಮತ್ತು ಆಭರಣಗಳು :

ಸಾಮಾನ್ಯವಾಗಿ ಆಹಾರದ ವಿಷಯದಲ್ಲಿ ಸಾಮ್ಯತೆಯಿತ್ತು. ಹಿಂದುಗಳು, ಬ್ರಾಹ್ಮಣರು ಮತ್ತು ವೈಶ್ಯರು ಶಾಕಾಹಾರಿಗಳಾಗಿದ್ದರು. ಅಕ್ಕಿ, ಜೋಳ, ಗೋದಿ ಮತ್ತು ದ್ವಿದಳ ಧಾನ್ಯಗಳು ತುಪ್ಪ, ತರಕಾರಿ ಅವರ ಮುಖ್ಯವಾದ ಆಹಾರವಾಗಿತ್ತು. ಹಿಂದೂಗಳಲ್ಲಿಯ ಉಳಿದ ಜಾತಿಯ ಜನರು ಮಾಂಸಹಾರಿಗಳಾಗಿದ್ದರು. ಕೊಂಕಣ ಮತ್ತು ಕರಾವಳಿಯಲ್ಲಿ ಹೇರಳವಾಗಿ ಮೀನು ದೊರೆಯುತ್ತಿತ್ತು. ಅದನ್ನು ಬೇಯಿಸಿ ಇಲ್ಲವೆ ಹುರಿದು ಉಪ್ಪು ಹಚ್ಚಿ ತಿನ್ನುತ್ತಿದ್ದರು. ಒಣಗಿದ ಮೀನನ್ನು ಅನ್ನದೊಂದಿಗೆ ಉಣ್ಣುತ್ತಿದ್ದರು. ಸಾಮಾನ್ಯ ಜನರು ಅನ್ನ ಮತ್ತು ಧಾನ್ಯಗಳನ್ನು ಆಹಾರವಾಗಿ ಬಳಸಿತ್ತಿದ್ದರೆಂದು ಪ್ರೈಯರ ಹೇಳಿದ್ದಾನೆ. ಮುಸ್ಲಿಮರು ಮಾಂಸ ಮತ್ತು ಗೋಧಿಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು.[೨೩] ಬಿಜಾಪುರದ ಪರಿಸರದಲ್ಲಿ ಜೋಳ-ಸಜ್ಜೆಗಳನ್ನು ಬಹುತೇಕವಾಗಿ ಬೆಳೆಯುತ್ತಿದ್ದರಿಂದ, ಅವುಗಳ ಹಿಟ್ಟನಿಂದ ರೊಟ್ಟಿಗಳನ್ನು ಮಾಡಿ ಊಟಮಾಡುತ್ತಿದ್ದರು. ಜೊತೆಗೆ ತಪ್ಪಲು ಪಲ್ಲೆ ಇಲ್ಲವೆ ಬೇರೆ ಕಾಯಿಪಲ್ಯ ಬಹುಜನರ ಆಹಾರವಾಗಿತ್ತು. ಬಿಜಾಪುರದ ಆಸ್ಥಾನದ ಕವಿ ಹಾಶ್ಮಿ ಎಂಬುವನು ಸೈನಿಕನೊಬ್ಬನ ಬಾಯಿಲ್ಲಿ 'ಒಂದು ಜೋಳದ ರೊಟ್ಟಿ-ಬೊಗಸೆ ತುಂಬ ಬೇಯಿಸಿದ ಕಾಳುಗಳು ಸಾಕು' ಎಂದು ಹೇಳಿದ್ದಾನೆ. ಸುತ್ತೆಲ್ಲ ಬೆಳೆಯುತ್ತಿದ್ದ ಬಗೆ-ಬಗೆಯ ಹಣ್ಣುಗಳನ್ನು ಜನಸಾಮಾನ್ಯರು ಉಪಯೋಸುತ್ತಿದ್ದರು. ಮುಸ್ಲಿಮರು ಕಡ್ಡಾಯವಾಗಿ ಮಾಂಸಾಹಾರಿಗಳಾಗಿದ್ದರಿಂದ ಮಾಂಸ ಜೊತೆಗೆ ಗೋಧಿಯ ರೊಟ್ಟಿ ಅವರ ದಿನದ ಆಹಾರವಾಗಿತ್ತು. ಮುಸ್ಲಿಮರ ಊಟ ಹಿಂದೂಗಳ ಊಟಕ್ಕಿಂತ ಶ್ರೀಮಂತವೂ ವೈವಿಧ್ಯಮಯವೂ ಆಗಿರುತ್ತಿತ್ತು.

ಊಟಕ್ಕೆ ಮತ್ತು ಅಡಿಗೆಗೆ ಬಹುತೇಕ ಬಡ ಜನರು ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಹಿಂದೂಗಳು ಊಟಕ್ಕೆ ಬಾಳೆಯ ಎಲೆ ಇಲ್ಲವೆ ಅಗಲವಾದ ಇತರ ಗಿಡದ ಎಲೆಗಳನ್ನು ಉಪಯೋಗಿಸುತ್ತಿದ್ದರು. ಮೇಲು ವರ್ಗದ ಹಿಂದೂಗಳ ಮನೆಯಲ್ಲಿ ಅಡುಗೆಗೆ ಹಿತ್ತಾಳೆ-ತಾಮ್ರದ ಪಾತ್ರೆಗಳನ್ನು ಉಪಯೋಗಿಸಿದರೆ, ಮುಸ್ಲಿಮರು ತಮ್ಮ ಊಟಕ್ಕೆ ವಿವಿಧ ಬಗೆಯ ಧಾತುಗಳ ತಟ್ಟೆಗಳನ್ನು ಬಳಸುತ್ತಿದ್ದರು. ಜೊತೆಗೆ ಚೀನಿಮಣ್ಣಿನ ಪಾತ್ರೆಗಳ ಬಳಕೆಯು ಸಾಕಷ್ಟಿತು. ರಾಜಮನೆತನಗಳಲ್ಲಿ ಬಣ್ಣ-ಬಣ್ಣದ ನಕ್ಷೆಗಳ ಚೀನಿ ಮಣ್ಣಿನ ಪಾತ್ರೆಗಳು ಇರುತ್ತಿದ್ದವು. ಅಂಥ ವಿವಿಧ ಬಗೆಯ ಪಾತ್ರೆಗಳು ಬಿಜಾಪುರದ ವಸ್ತು ಸಂಗ್ರಹಾಲಯದಲ್ಲಿ ಇಂದಿಗೂ ಕಾಣಬಹುದು. ಊಟದ ನಂತರ ಎಲೆ-ಅಡಿಕೆಗಳನ್ನು ತಿನ್ನುವುದು ಬಹತೇಕ ಜನರ ರೂಢಿಯಾಗಿತ್ತು. ಎಲೆ-ಅಡಿಕೆ ತಿನ್ನುವ ಚಟ ಜನಪ್ರಿಯವಾಗಿತಲ್ಲದೆ ಎಲ್ಲ ಪ್ರದೇಶಗಳಲ್ಲೂ ಹರಡಿತ್ತು. ಇವರನ್ನು ಕಂಡ ಪೋರ್ತುಗೀಜರು ಎಲೆ-ಅಡಿಕೆ ತಿನ್ನುವ ಚಟಕ್ಕೆ ಬಿದ್ದರು. ಅರಮನೆಯಿಂದ ಸಾಮಾನ್ಯ ಜನರವರೆಗೂ ಎಲೆ-ಅಡಿಕೆ ಚಟವಿತ್ತು. ಮತ್ತು ಅದೊಂದು ಸಾಮಾಜಿಕ ಅಂತಸ್ತಿನ ಕುರುಹೂ ಆಗಿತ್ತು. ಅತಿಥಿಯನ್ನು ಬೀಳ್ಕೊಡುವಾಗ ಎಲೆ-ಅಡಿಕೆ ಕೊಡುವ ಸಂಪ್ರದಾಯವಿತ್ತು. ಬಾದಶಹನು ಕೂಡ ತನ್ನ ರಾಯಭಾರಿಯನ್ನು ಇನ್ನೊಂದೆಡೆ ಕಳಿಸುವಾಗ ವೀಳ್ಯವನ್ನು ಕೊಟ್ಟು ಶುಭ ಹಾರೈಸುತ್ತಿದ್ದನು.[೨೪]

ಕೆಳವರ್ಗದ ಹಿಂದೂಗಳ ಉಡುಗೆ ಸೊಂಟದ ಸುತ್ತ ಒಂದು ತುಂಡು ವಸ್ತ್ರ ಇರುತ್ತಿತ್ತು. ಮೇಲು ವರ್ಗದ ಜನರು ಒಂದಿಷ್ಟು ಅಧಿಕವಾಗಿರುತ್ತಿತ್ತು. ಬ್ರಾಹ್ಮಣರಿಗೆ ಅಂಗ ವಸ್ತ್ರ ತಲೆಗೊಂದು ರುಮಾಲು ಉದ್ದನ್ನ ವಸ್ತ್ರವನ್ನು ತಲೆಗೆ ಸುತ್ತುತ್ತಿದ್ದರು. ಮರಾಠರ ಉಡುಗೆ ಅಂದಿನ ಮುಸ್ಲಿಮರ ಉಡುಗೆಯನ್ನು ಹೋಲುತ್ತಿತ್ತು. ಕಾಲುಗಳನ್ನು ಗಟ್ಟಿಯಾಗಿ ಸುತ್ತಿಕೊಂಡ ಪೈಜಾಮಾ ಮೇಲೊಂದು ಶರ್ಟು ಅದರ ಮೇಲೆ ಸಿಲ್ಕಿನ ಇಲ್ಲವೆ ಹತ್ತಿಯ ಕೋಟು ಇರುತ್ತಿತ್ತು. ತಲೆಗೆ ಮೊನಚಾದರುಮಾಲು, ಜೊತೆಗೆ ಎರಡು ತುಂಡು ವಸ್ತ್ರಗಳಲ್ಲಿ ಒಂದನ್ನು ಟೊಂಕದ ಸುತ್ತ ಕಟ್ಟಿಕೊಂಡರೆ ಇನ್ನೊಂದು ಹೆಗಲಮೇಲೆ ಇರುತ್ತಿತ್ತು. ಮೂಲತಃ ಚಳಿ ಪ್ರದೇಶದಿಂದ ಬಂದವರಾದ ಮುಸ್ಲಿಮರು ದೇಹದ ತುಂಬ ಹೊದ್ದುಕೊಂಡ ವಸ್ತ್ರಗಳನ್ನು ಉಪಯೋಗಿಸುತ್ತಿದ್ದರು. ಅವರ ವಸ್ತ್ರಗಳು ಹಿಂದೂಗಳ ವಸ್ತ್ರಕಿಂತ ದುಬಾರಿಯಾಗಿದ್ದವು.[೨೫]

ಮುಸ್ಲಿಮ ಮಹಿಳೆಯರ ಉಡುಗೆ ಹಿಂದೂ ಮಹಿಳೆಯರಂತೆಯೇ ಇದ್ದಿತು. ಅವರೂ ಸೀರೆಯನ್ನು ತೋಳಗಳಿರುವ ಚೋಲಿಯನ್ನು ಧರಿಸುತ್ತಿದ್ದರು. ಮುಖತೆರೆ ಅಥವಾ ಪರ್ದಾ ಬಳಕೆ ಸಾಮಾನ್ಯವಾಗಿತ್ತು. ರಾಜಮನೆತನದವರು ಬಹಳ ಬೆಲೆಬಾಳುವ ಉಡುಗೆಗಳನ್ನು ಧರಿಸುತ್ತಿದ್ದರು. ನೃರ್ತಿಸುವವರು, ವೇಶ್ಯಯರೂ ಮೇಲ್ವರ್ಗದ ಮಹಿಳೆಯರಂತೆ ತುಂಬಾ ದುಬಾರಿಯಾದ ಬಟ್ಟೆಯನ್ನು ಧರಿಸುತ್ತಿದ್ದರು. ಬ್ರೊಕೇಡಗಳು ಮುದ್ರಿತ ರೇಷ್ಮೆ ಮತ್ತ ಮಸ್ಲಿನ ಇವು ನೋಬಲರು ಸಾಮಾನ್ಯವಾಗಿ ಧರಿಸುತ್ತಿದ್ದರು. ಉಡುಪು ಅದು ಚೀನಾ, ಈಜಿಪ್ಟಗಳ ಮಿಶ್ರ ಸಮುದಾಯದ ಪರಿಣಾಮವಾಗಿದ್ದಿತು. ಇವೆಲ್ಲ ಭಾರತಕ್ಕೆ ಬಂದು ಇಲ್ಲಿ ಹಿಂದೂ ಮತ್ತು ಮುಸ್ಲಿಂ ಶ್ರೀಮಂತ ವರ್ಗಗಳಲ್ಲಿ ಜನಪ್ರಿಯವಾದವು.[೨೬]

ಶ್ರೀಮಂತ ಹಿಂದೂ ಮಹಿಳೆಯರು ಆಭರಣಗಳನ್ನು ಹೆಚ್ಚಾಗಿ ಧರಿಸುತ್ತಿದ್ದರು. ಅಡಿಯಿಂದ ಮುಡಿಯವರೆಗೆ ಚೆಬಗೆಯಯಾದ ಆಭರಣಗಳಿಂದ ಅಲಂಕರಿಸಿಕೊಳ್ಳುತ್ತಿದ್ದರು. ಧರಿಸುವ ವ್ಯಕ್ತಿಯ ಸ್ಥಾನಮಾನವನ್ನನುಸರಿಸಿ ಆಭರಣದ ಲೋಹವು ಯಾವುದೆಂದು ನಿರ್ಧಾರವಾಗುತ್ತಿತ್ತು. ಮೇಲು ವರ್ಗದವರು ಚಿನ್ನ, ವಜ್ರ, ಮುತ್ತುಗಳು, ಕೆಂಪುಕಲ್ಲು ಮತ್ತು ಇತರ ಅಮೂಲ್ಯ ಹರಳುಗಳನ್ನು ಉಪಯೋಗಿಸುತ್ತಿದ್ದರು. ಕೆಳವರ್ಗದ ಹೆಂಗಸರು ಹಿತ್ತಾಳೆ, ಮಣಿಗಳು ಮತ್ತು ಹಸ್ತಿದಂತದಿಂದ ತಯಾರಿಸಿದ ಆಭರಣಗಳನ್ನು ತೊಡುತ್ತಿದ್ದರು. ಕಿವಿಓಲೆ ಬಳೆ, ತೋಳಬಂದಿ, ಕಾಪು, ಸರಗಳು, ಉಂಗುರ, ಡಾಬು, ಚೈನು, ಸೊಂಟಪಟ್ಟಿ, ಕಾಲ್ಗಡ್ಗ, ಮೂಗುತ್ತಿ, ತಲೆಗೆ ಧರಿಸುವ ಆಭರಣಗಳು, ಪದಕಗಳು ಇವು ಮಹಿಳೆಯರು ಧರಿಸುತ್ತಿದ್ದ ಕೆಲವು ಆಭರಣಗಳು. ಮಹಿಳೆಯರು ಸುಗಂಧ ದ್ರವ್ಯಗಳು ಮತ್ತು ಹೂವು ಅಗತ್ಯವಾದ ಭಾಗವಾಗಿದ್ದವು. ಅವರು ಕೇಸರಿ ಅಥವಾ ಕಸ್ತೂರಿಯನ್ನು ಮೈಗೆ ಲೇಪಿಸಿಕೊಳ್ಳುತ್ತಿದ್ದರು. ಶ್ರೀಗಂದ, ಕರ್ಪೂರ, ಸುವಾಸನೆಯುಳ್ಳ ಹೂಗಳನ್ನು ಬಳಸುತ್ತಿದ್ದರು. ಪುರುಷರು ಕೆಲವು ಆಭರಣಗಳನ್ನು ಧರಿಸುತ್ತಿದ್ದರು. ತಲೆಗೂದಲನ್ನು ಮೇಲಕ್ಕೆ ಎತ್ತಿ ಮೇಲೆ ಬಂದು ಗುಂಡಾಗಿ ಕಟ್ಟಿರುತ್ತಿದ್ದರು. ಸಾಮಾನ್ಯ ಮನುಷ್ಯನಿಗೂ ಕಿವಿಓಲೆ, ಸರ ಮತ್ತು ಉಂಗುರಗಳನ್ನು ಧರಿಸುತ್ತಿದ್ದರು.[೨೭]

ಜಾತ್ರೆಗಳು ಮತ್ತು ಹಬ್ಬಗಳು :

ಜಾತ್ರೆಗಳು ಮತ್ತು ಹಬ್ಬಗಳು ವ್ಯಾಪಾರ ವ್ಯವಹಾರಗಳೊಂದಿಗೆ ಜನಪದರಿಗೆ ಮನರಂಜನೆಯನ್ನು ಒದಗಿಸುವ, ಸಾಮಾಜಿಕ ಚಟುವಟಿಕೆಗಳಾಗಿದ್ದವು. ಧಾರ್ಮಿಕ ಆಚರಣೆಗಳು ತುಂಬಿದ ಈ ದೇಶದಲ್ಲಿ ಇಂತಹ ಚಟುವಟಿಕೆಗಳು ಬಹಳ ಹಿತವಾದವು. ಕೃಷಿ ದೇಶವಾಗಿ ಭಾರತದಲ್ಲಿ ಜಾತ್ರೆಗಳನ್ನು ನಡೆಸುವುದು ಒಂದು ಗೊತ್ತಾದ ವಾರ್ಷಿಕ ಕಾರ್ಯಕ್ರಮ. ಸಾಮಾನ್ಯವಾಗಿ ಸುಗ್ಗಿಯ ಕಾಲವಾದ ಮೇಲೆ, ರೈತರ ಕೈಯಲ್ಲಿ ನಾಲ್ಕು ಕಾಸು ಓಡಾಡುತ್ತಿರುವಾಗ ಈ ಜಾತ್ರೆಗಳು ಏರ್ಪಾಟಾಗುತ್ತದೆ. ಕಸಬುದಾರರು ಕುಶಲಕರ್ಮಿಗಳಿಗೂ ತಮ್ಮ ಸರಕುಗಳ ಮಾರಾಟಕ್ಕೆ ಅಲ್ಲಿ ಮುಕ್ತ ಅವಕಾಶ ದೊರಕುತ್ತದೆ. ಗಾಯಕರು, ನೃತಕರು, ಯಕ್ಷಿಣಿಗಾರರು, ಹಾವಾಡಿಗರು ಮೊದಲಾದವರು ಅಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಹಣವನ್ನು ಸಂಪಾದಿಸುವರು. ಜಾತ್ರೆಯ ಅವಧಿ ಒಂದೋ ಎರಡೋ ದಿನಗಳಿಂದ, ಒಂದೋ ಎರಡೋ ವಾರಗಳವರೆಗೆ ಸ್ಥಳದಿಂದ ಸ್ಥಳಕ್ಕೆ ಬೇರೆಯಾಗುತ್ತದೆ. ರಾಜ್ಯದ ಬೊಕ್ಕಸಕ್ಕೆ ವರಮಾನವಿರುತ್ತಿದ್ದರಿಂದ ಸರಕಾರವೂ ಇಂತಹ ಜಾತ್ರೆಗಳನ್ನು ಪ್ರೋತ್ಸಾಹಿಸುತ್ತಿದ್ದಿತು. ಇವು ಬಡಜನರಿಗೆ ನಿತ್ಯ ದುಡಿತದಿಂದ ಬಿಡುವನ್ನು ಒದಗಿಸುತ್ತಿದ್ದವು. ಬೇರೆ ಬೇರೆಯಡೆಯಲ್ಲಿದ್ದ ಸ್ನೇಹಿತರು ಅಲ್ಲಿ ಒಂದುಗೂಡಲು ಅವಕಾಶವಿರುತ್ತದೆ. ಈಗಲೂ ಪ್ರಸ್ತುತ ವಾಡಿಕೆಯಾಗಿ ಬಂದಂತೆ ಜಾತ್ರೆಗಳು ನಡೆದುಕೊಂಡು ಬಂದಿದೆ.

ಈ ಹಿನ್ನಲೆಯಲ್ಲಿ ಬಿಜಾಪುರ ರಾಜ್ಯದಲ್ಲಿಯೂ ಸಹ ಅನೇಕ ಸಂಪ್ರದಾಯಗಳಿವೆ ಮತ್ತು ಅನೇಕ ಜಾತಿ–ಮತಗಳಿಗೆ ಸೇರಿದ ಜನರು ವಾಸಿಸುವುದು ಕಾಣುತ್ತೇವೆ. ಇಲ್ಲಿ ವರ್ಷದ ಹನ್ನೆರಡು ತಿಂಗಳು

ಒಂದಿಲ್ಲೊಂದು ಬುಡುಕಟ್ಟಿಗೆ ಸಂಬಂಧಿಸಿದ ಹಬ್ಬ-ಹರಿದಿನಗಳು ದೈವಿಭಕ್ತಿ ಧರ್ಮಶ್ರದ್ಧೆ, ಮನರಂಜನೆಗಳ ಆಚರಣೆ ಆಯಾ ಬುಡಕಟ್ಟಿನ ಸಂಪ್ರದಾಯಕ್ಕೆ ಅನುಗುಣವಾಗಿ ಆಚರಿಸುವದು ಒಂದು ವೈಶಿಷ್ಟ್ಯ.

ಹಿಂದೂ ಹಬ್ಬಗಳು :

ಹಬ್ಬಗಳೆಂದರೆ, ಕೇವಲ ಆಡಂಬರಕ್ಕಾಗಿ ಉಂಡು, ಉಟ್ಟು, ತೇಗಿ ನಲಿದಾಡುವುದಲ್ಲ. ಹಬ್ಬಗಳ ನಿಯಮಿತ ದಿನಗಳಲ್ಲಾದರೂ ಕಡ್ಡಾಯವಾಗಿ ದೇಹದಂಡನೆ ಮಾಡಿ, ಬಾಹ್ಯ ಶುಚಿಯ ಜೊತೆಗೆ ಆಂತರಿಕ ಶುಚಿಯು ಅಗತ್ಯವಾಗಿ ಪೂರೈಸಿಕೊಳ್ಳುವುದು ಪ್ರಮುಖವಾಗಿದೆ. ಧರ್ಮ-ಕರ್ಮದ ಪ್ರಾಯೋಗಿಕ ರೂಪದಲ್ಲಿ ನೈತಿಕ ನಡತೆ, ಧಾರ್ಮಿಕ ಶುಚಿ, ಪವಿತ್ರ ಕಾರ್ಯದ ನಿಯಮವು ರೂಪಿತವಾಗಿದೆ. ಹಬ್ಬಗಳೆಂದರೆ, ಜೀವನವನ್ನು ಪವಿತ್ರ ದಾರಿಯಲ್ಲಿ ರೂಪಿಸಿಕೊಳ್ಳುವದರ ಸಲುವಾಗಿ ರಚಿತವಾಗಿರುವ ಧಾರ್ಮಿಕ ವಿಧಿ ನಿಯಮಗಳಾಗಿವೆ. ಯಾವುದು ಒಳ್ಳೆಯದೋ, ನ್ಯಾಯವೋ ಅದನ್ನು ಹಬ್ಬಗಳು ಪ್ರತಿನಿಧಿಸುತ್ತದೆ.[೨೮]

ಭಾರತೀಯ ಪ್ರತಿಯೊಂದು ಹಬ್ಬಗಳು ಅವು ಚಂದ್ರಮಾನ ಸಂವತ್ಸರದ ಪದ್ದತಿಯಂತೆ ರೂಪಗೊಂಡ. ಚೈತ್ರದಿಂದ ಪಾಲ್ಗುಣದವರೆಗಿನ ಹನ್ನೆರಡು ತಿಂಗಳ ಕಾಲ ೨೪ ಶುಕ್ಲ, ಕೃಷ್ಣಪಕ್ಷದಲ್ಲಿ ಚೈತ್ರದ ದವನದ ಹುಣ್ಣಿವೆ, ವೈಶಾಖದ ಆಗಿ ಹುಣ್ಣಿವೆ, ಜೇಷ್ಠದ ಕಾರಹುಣ್ಣಿವೆ, ಮಣ್ಣೆತ್ತಿನ ಅಮವಾಸ್ಯೆ ಇಂತಹ ಕೃಷಿ ಪ್ರಧಾನ ಹಬ್ಬಗಳು ಆಚರಣೆಗಳ ಅಬ್ಬರದ ಕಾಲ ಆಶಾಡ-ಶ್ರಾವಣ ಭಾದ್ರಪದ ಮಾಸದಲ್ಲಿ ಕರ್ನಾಟಕದ ಸ್ತ್ರೀ ಸಮುದಾಯಕ್ಕೆ ವಿಶಿಷ್ಟವೆನಿಸುವ ನಾಗರಪಂಚಮಿ, ಮಂಗಳಗೌರಿ, ಶ್ರಾವಣ ಸೋಮವಾರ, ಬೆನಕನ ಹಬ್ಬ, ಇತ್ಯಾದಿ ಕೌಟುಂಬಿಕ ನೆಲೆಯಾಗಿ ಹುಟ್ಟಿ ಹಬ್ಬ ಕಾರ್ತಿಕ ದೀಪೋತ್ಸವ, ಕಾಮನ ಹಬ್ಬ, ಯುಗಾದಿ ಇತ್ಯಾದಿ ಇಲ್ಲಿ ಹೇಳಿರುವ ಹಬ್ಬದ ಸಂಪ್ರದಾಯ ಆಚರಣೆಯಲ್ಲಿ ಅನೇಕ ಜನಪದ ಅಂಶಗಳು ಗುರುತಿಸಬಹುದಾಗಿದೆ. ವಸಂತ ಋತು ಅಂತಹ ಆಚರಣೆಗಳಿಗೆ ಹೇಳಿ ಮಾಡಿಸಿದ ಕಾಲ. ಆಗ ಕೃಷಿ ಚಟುವಟಿಕೆಗಳು ಕಡಿಮೆ. ಜನರಿಗೆ ಆಗ ತಾನೆ ಸುಗ್ಗಿ ಮುಗಿದು ಸ್ವಲ್ಪ ಹಣ ಕೈಯಲ್ಲಿರುತ್ತಿತ್ತು. ಸ್ವಲ್ಪ ಬಿಡುವು ಇರುತ್ತಿತ್ತು. ಅಲ್ಲಲ್ಲಿಗೆ ಹೋಗಿಬರಲು, ಸ್ವಲ್ಪ ಮನರಂಜನೆ, ವಿಶ್ರಾಂತಿ ಪಡೆಯಲು, ಮಕ್ಕಳ ಮದುವೆ ಮೊದಲಾದ ಕಾರ್ಯಗಳನ್ನು ನಡೆಸಲು ಸೂಕ್ತ ಸಂದರ್ಭವಾಗುತ್ತಿತ್ತು. ಭಾರತೀಯ ರೂಢಿಗಳು, ಸಂಪ್ರದಾಯಗಳು ಕೆಲವು ಮಹತ್ವಪೂರ್ಣವಾದ ಉಪಯುಕ್ತತೆಗಳನ್ನು ತಮ್ಮಲ್ಲಿ ಅಡಗಿಸಿಕೊಂಡಿವೆ. ಆಟೋಟಗಳು, ಹೋಳಿ ಹಬ್ಬದ ಆಕರ್ಷಣೆ ನೇಕಾರರು ನೂಲ ಹಬ್ಬದಲ್ಲಿ ತಮ್ಮ ಕಸುಬನ್ನು ಜನಪ್ರಿಯಗೊಳಿಸುತ್ತಿದ್ದರು. ಬೆಳೆಯ ಕೊಯಿಲಾದೊಡನೆ ಸುಗ್ಗಿ ಹಬ್ಬ ಬರುತ್ತಿತ್ತು. ನಾಟ್ಯ, ನಾಟಕ, ಹಾಡು-ಹಸೆ, ಕುಣಿತ, ಮನರಂಜನೆ ಇರುತ್ತಿತ್ತು. ಮನೆಯಲ್ಲಿ ಒಂದು ಮಗುವು ಹುಟ್ಟಿದರೆ ಅದು ಸಂತೋಷದ ಆಚರಣೆಯ ಸಂದರ್ಭವಾಗುತ್ತಿತ್ತು. ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಒಬ್ಬ ವಿದ್ಯಾರ್ಥಿಯು ಮನೆಗೆ ಹಿಂದಿರುಗುವುದು ಹಬ್ಬದ ಸಂದರ್ಭವಾಗುತ್ತಿತ್ತು. ಅನೇಕ ಹಬ್ಬಗಳನ್ನು ಸಾಮಾಜಿಕ ಚಟುವಟಿಕೆಗಳ ಕೇಂದ್ರವಾದ ದೇವಾಲಯಗಳಲ್ಲಿ ಆಚರಿಸಲಾಗುತ್ತಿತ್ತು. ತುಂಬಾ ಉತ್ಸಾಹದಿಂದ ಆಚರಿಸುತ್ತಿದ್ದ ಉತ್ತರಾಯಣ ಪುಣ್ಯಕಾಲ ಮತ್ತು ದಕ್ಷಿಣಾಯನ ಪುಣ್ಯಕಾಲಗಳು ಬಹು ಮಹತ್ವದ ಪರ್ವಗಳಾಗಿದ್ದವು. ಗ್ರಹಣ ಕಾಲಗಳಲ್ಲೂ ಧಾರ್ಮಿಕ ಕ್ರಿಯೆಗಳನ್ನಾಚರಿಸಿ

ದಾನ ಧರ್ಮಗಳನ್ನು ಮಾಡುತ್ತಿದ್ದರು. ಬಹಶಃ ಆಪತ್ತುಗಳ ನಿವಾರಣೆಗಾಗಿ, ಅಮವಾಸ್ಯೆ ಮತ್ತು ಪೂರ್ಣಿಮೆಗಳು ಮುಖ್ಯವಾದ ದಿನಗಳಾಗಿದ್ದವು. ಇತರ ಮುಖ್ಯ ಹಬ್ಬಗಳು ಚತುರ್ಥಿ, ರಾಮನವಮಿ, ನವರಾತ್ರಿ, ಹನುಮಜಯಂತಿ, ಶಿವರಾತ್ರಿ, ಕೃಷ್ಣಜನ್ಮಾಷ್ಠಮಿ, ಸಂಕ್ರಮಣ, ದೀಪಾವಳಿ ಮತ್ತು ಹೋಳಿ ತುಂಬಾ ಉತ್ಸಾಹದಿಂದ ಇವುಗಳನ್ನು ಆಚರಿಸುತ್ತಿದ್ದರು. ಅದಕ್ಕೆ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳಾಗಿದ್ದವು.[೨೯]

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ನೌ'ರೋಜ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚಾರಿಸಲಾಗುತ್ತಿತ್ತು. ಏಕೆಂದರ ಸುಲ್ತಾನನು ತನ್ನ ಆಡಳಿತಾತ್ಮಕ ಶಾಸನ(ದಸ್ತುರು–ಅಮಲ)ದಲ್ಲಿ ಈ ಹಬ್ಬವನ್ನು ಹೇಗೆ ಆಚರಿಸಬೇಕೆಂದು ಈ ರೀತಿಯಾಗಿ ಹೇಳಲಾಗಿದೆ. " ನೌರೋಜ ಹಬ್ಬದಲ್ಲಿಯ ೯ ದಿನಗಳವರೆಗೆ ಬಹಳ ಶ್ರಮವಹಿಸಿ ಅಲಂಕಾರ ಮಾಡಬೇಕು. ಮುಖದಿನದಂದು ಎಲ್ಲ ಅಮೀರ ಜನರು, ಕಾರಭಾರಿ ಮಂಡಳಿ, ಕಾಮದಾರರು, ವಕೀಲರು ಮತ್ತು ಸಣ್ಣ ದೊಡ್ಡ ಬಜಾರು ಜನರು ಮುಂತಾದವರಲ್ಲದೆ ಯಾರೇ ಮುಜರಾ ಸಲ್ಲಿಸಲು ಬಂದರೆ ಅವರಿಗೆಲ್ಲ ಅನುಮತಿ ಇರಬೇಕು. ಪ್ರತಿಯೊಬ್ಬ ಚಾಕರ ಜನರು ಮತ್ತು ಬಾದಶಹರ ಪುತ್ರರು ಅವರಿಗೆಲ್ಲ ಪ್ರತಿಂಗಳು ಸಂಬಳವಿರುತ್ತದೆ. ಅವರು ಕೂಡ ಮುಜರೆ ಸಲ್ಲಿಸಿ ಅವರವರ ಯೋಗ್ಯತಾನುಸಾರ ಕಾಣಿಕೆ ಸಲ್ಲಿಸಬೇಕು.

ಒಂಬತ್ತು ದಿನಗಳ ಹಬ್ಬದ ಎಲ್ಲ ದಿನಗಳಲ್ಲೂ ಬಾದಶಹನ ರಾಣಿಯರು ಬರುವ ತೋಟಗಳನ್ನು ಇಂಧ್ರಭುವನದಂತೆ ಸಿಂಗರಿಸಬೇಕು. ಅಲ್ಲಿಯ ಅಂಗಡಿಗಳಿಗೆ ಪರದೆಯನ್ನು ಬಿಟ್ಟು ಲಾವಣ್ಯ ಸ್ತ್ರೀಯರು ಕುಳಿತುಕೊಳ್ಳಲು ಸ್ಥಳವನ್ನು ಬಹಳ ಅಲಂಕಾರ ಮಾಡಬೇಕು. ಎಲ್ಲಡೆ ಸಿಂಗರಿಸಿದ ನಂತರ ಹಬ್ಬದ ದಿನಗಳಲ್ಲಿ ಬಾದಶಹನು ಒಂದು ಸಲ ಬಂದು ಅಲಂಕರಣೆಯನ್ನು ನೋಡಬೇಕು. ಬಾದಶಹನು ಕೂಡ ಪ್ರತಿಯೊಬ್ಬ ಅಮೀರ ಜನರನ್ನು ಮತ್ತು ರಾಜ್ಯದ ಅಧಿಕಾರಿ ವರ್ಗವನ್ನು 'ನೌರೋಜ' ಹಬ್ಬದಿನಗಳಲ್ಲಿ ಅವರವರ ಯೋಗ್ಯತಾನುಸಾರ ವಸ್ತ್ರಗಳನ್ನು ಕೊಟ್ಟು ಗೌರವಿಸಬೇಕು."[೩೦] ಈ ರೀತಿಯಾಗಿ ತನ್ನ ಹಬ್ಬವನ್ನು ಆಚರಿಸಲು ಸೂಚಿಸಿದನು.

ಮುಸ್ಲಿಂ ಹಬ್ಬಗಳು :

ಪೂರ್ವ ಇಸ್ಲಾಂ ಧರ್ಮದಿಂದ ಹಿಡಿದು ಹಜರತ ಮಹಮ್ಮದ ಪೈಗಂಬರರಿಂದ ಪುನರ್ ಸ್ಥಾಪಿತವಾದ ನಂತರ ಕಾಲಕಾಲಕ್ಕೆ ನಡೆದ ಘಟನೆಗಳ ಆಧಾರದ ಮೇಲೆ ಮುಸ್ಲಿಂ ಹಬ್ಬಗಳು ಆಚರಣೆಯಲ್ಲಿ ಬಂದವು. ಈ ಹಬ್ಬಗಳು ಇಹದ ಬದುಕಿಗೆ ಪರದ ಚಿಂತನೆಗೆ ಸಾಧನಗಳಾಗಿದ್ದು, ಇವುಗಳಿಂದ ಆಧ್ಯಾತ್ಮಿಕ ಭಾವನೆಯು ಸಮೃದ್ಧಗೊಳದಿರದು. ಮುಸ್ಲಿಮರ ಎಲ್ಲ ಹಬ್ಬಗಳು ಮೋಕ್ಷ ಸಾಧನೆಯ ತತ್ವವನ್ನು ಒಳಗೊಂಡಿದೆ. ಶುಚಿಯಾದ ಜೀವನ ಮಾರ್ಗವೇ ಇವುಗಳ ಗುರಿಯಾಗಿದೆ.

ಮುಸ್ಲಿಮರ ಪ್ರಮುಖ ಹಬ್ಬಗಳೆಂದರೆ, ರಂಜಾನ್, ಬಕ್ರೀದ, ಮೊಹರಂ, ಈದ್-ಇ-ಮಿಲಾದ್, ಶಬ್-ಇ-ಮೇರಾಜ, ಶಬ್-ಇ-ಬರಾತ್, ಶಬ್-ಇ-ಕದ್ರ ಪ್ರಮುಖವಾದವು. ಇವರ ಕಾಲಗಣನೆಯು ಚಂದ್ರಮಾನಕ್ಕನುಸರಿಸಿದೆ. ಹಿಜರಿ ಸಂವತ್ಸರದ ಹನ್ನೆರಡು ತಿಂಗಳುಗಳಾದ ಮೊಹರಂ, ಸಫರ್, ರಬೀಉಲ್ ಅವ್ವಲ, ರಬೇಉಸ್ಸಾನಿ, ಜಮಾದಿ ಉಲ್ ಅವಲ್, ಜಮಾದಿ ಉಸ್ಸಾನಿ, ರಜ್ಜಬ, ಶಾಬಾನ, ರಂಜಾನ, ಷವ್ವಾಲ್, ಬೀಕಾದ, ಜಿಲ್ಲಹಜ್ಜ ಇವುಗಳಲ್ಲಿ ಮುಸ್ಲಿಮರಿಗೆ ಅತಿ ಸಂಭ್ರಮದ ಹಬ್ಬವಾದ ರಂಜಾನವನ್ನು ಮೂವತ್ತು ದಿನವಸಗಳವರೆಗೆ ಉಪವಾಸ ವ್ರತವನ್ನು ಆಚರಿಸಿ, ಷವ್ವಾಲ್ ತಿಂಗಳ ಮೊದಲನೆಯ ದಿನಾಂಕದಂದು ಪ್ರಮುಖ ಹಬ್ಬವನ್ನು ಆಚರಿಸುತ್ತಾರೆ.

ಮಹಮ್ಮದ ಆದಿಲ್‌ಶಾಹನು ತನ್ನ ಆಡಳಿತಾತ್ಮಕ ಶಾಸನ(ದಸ್ತುರು-ಅಮಲ)ದಲ್ಲಿ ರಂಜಾನ ಹಬ್ಬದ ಕುರಿತು ಹೀಗೆ ಹೇಳಲಾಗಿದೆ. " ರಂಜಾನ ಶುಭ ತಿಂಗಳಲ್ಲಿ ಎಲ್ಲ ಮಸೀದಿಗಳಲ್ಲಿ ಹಾಸಲು ಜಮಖಾನೆಗಳು, ನೀರಿನ ಕೊಡಗಳು, ಸುಣ್ಣ ಸಾರಿಸುವುದು ಮತ್ತು ಮಸೀದಿಗಳಲ್ಲಿ ಸೇರಬಹುದಾದ ಜನರ ಪ್ರಮಾಣದಲ್ಲಿ ದಿನಖರ್ಚನ್ನು ನೇಮಣೂಕಿ ಮಾಡಬೇಕು. ದೊಡ್ಡ ದೊಡ್ಡ ಮಸೀದಿಗಳಲ್ಲಿ ಮತ್ತು ದೊಡ್ಡ ದೊಡ್ಡ ಹೆಸರಾಂತ ಕುರಾನ ಶರೀಫವನ್ನು ಮುಖೋದ್ಗತ ಪಠಿಸುವ ಹಾಫೀಜರು ಮತ್ತು ಹಾಫೀಜರು ಕುರಾನ ಶರೀಫ ಪಠಿಸುವಾಗ ಆ ಸಮಯದಲ್ಲಿ ಅವರ ತಪ್ಪುತಡೆಗಳ ಮೇಲೆ ದೃಷ್ಟಿ ಇಟ್ಟು, ಕಿಗೊಟ್ಟು ಕೇಳುತ್ತ ಕುಳಿತ ಸಾಮಳಿಗಳನ್ನು ನಿಯಮಿಸಿ, ದಿನಖರ್ಚು ಇತ್ಯಾದಿಗಳನ್ನು ಸರಕಾರದಿಂದ ಮುಟ್ಟಿಸಬೇಕು. ನಮಾಜ ತರಾವಿಹ(ರಂಜಾನ ತಿಂಗಳಲ್ಲಿ ಪ್ರತಿ ರಾತ್ರಿಯ ವಿಶೇಷ ನಮಾಜ) ಓದುವವರು ಅವರಿಂದ ನಮಾಜವನ್ನು ಓದಿಸುತ್ತಾ ಹೋಗಬೇಕು.

ರಂಜಾನ ತಿಂಗಳಲ್ಲಿ ರಾತ್ರಿ ನಮಾಜ ಓದಲು, ತೇಜಸ್ವಿಗಳನ್ನು ಶಾಸ್ತ್ರಾರ್ಥ ಮತ್ತು ರಸುಲಲ್ಲಾಹ ಪೈಗಂಬರ ಅವರ ಸುನ್ನಿ ಧರ್ಮಧ್ವಜ, ಎತ್ತರಿಸಿ, ಖಾಜಿ ಮತ್ತು ಮುಫ್ತಿ ಅಂದರೆ ಕುರಾನ ಶರೀಫದ ಶಾಸ್ತ್ರಾರ್ಥಗಳನ್ನು ಹೇಳುವರು ಮತ್ತು ಆಜ್ಞೆ ಮಾಡುವ ಮಂಡಳಿಯ ಆದೇಶದ ಮೇರೆಗೆ ನಡೆಯಬೇಕು. ಹಾಡುವುದು, ಚೇಷ್ಟೆ ಮಾಡುವುದು, ಹರಟೆ ಹೊಡೆಯುವುದು, ತಮಾಷೆ ಇತ್ಯಾದಿ ಪಾತಕದ ಕೆಲಸಗಳು, ಶಾಸ್ತ್ರದಲ್ಲಿ ವರ್ಜ್ಯವಾದಂಥವುಗಳು ಮುಸಕರಾತ, ಅಂದರೆ ದಾರು, ಅಫಿಮು, ಭಾಂಗ ಇತ್ಯಾದಿ ಮದ ಏರುವ ಅಮಲಿನ ಪದಾರ್ಥಗಳಲ್ಲದೆ ಇನ್ನೂ ಅನೇಕ ಶಾಸ್ತ್ರಗಳಲ್ಲಿ ಸೇವನೆ ಮಾಡಬಾರದು ಎಂದು ಹೇಳಿದ ಅಪವಿತ್ರ ಪದಾರ್ಥಗಳನ್ನು ದೂರಮಾಡಿ, ಅಂಥ ಪದಾರ್ಥಗಳನ್ನು ಸೇವನೆ ಮಾಡಿದವರಿಗೆ ಮತ್ತೆ ಪುನಃ ಅಂಥ ಕಾರ್ಯಗಳಿಗೆ ಕೈ ಹಾಕದಂಥ ಶಿಕ್ಷೆ ಕೊಡಬೇಕು."[೩೧] ಈ ರೀತಿಯಾಗಿ ರಂಜಾನ ಪವಿತ್ರವಾದ ತಿಂಗಳ ಸದುಪಯೋಗವನ್ನು ಪಡೆಯಬೇಕೆಂದು ಹೇಳಲಾಗಿದೆ.

ಮುಸ್ಲಿಮರು ಆಚರಣೆ ಮಾಡುವು ಎರಡನೆ ದೊಡ್ಡ ಹಬ್ಬವೆಂದರೆ ಬಕ್ರೀದ. ಪ್ರವಾದಿ ಹಜರತ ಇಬ್‌ರಾಹೀಮ(ಅ) ಮತ್ತು ಅವರ ಸುಪುತ್ರ ಪ್ರವಾದಿ ಹಜರತ ಇಸ್ಮಾಈಲ್‌ರ ತ್ಯಾಗ ಬಲಿದಾನದ ನೆನಪಿಗಾಗಿ

ಈ ಹಬ್ಬವನ್ನು ಆಚರಿಸಲಾಗುತ್ತದೆ. ಈ ಹಬ್ಬದ ಇನ್ನೊಂದು ಪ್ರಮುಖ ವಿಷಯವೆಂದರೆ ಈ ಹಬ್ಬಕ್ಕೆ ಮುಸ್ಲಿಂ ಜನಾಂಗದರು ಹಜ್ಜ ಯಾತ್ರೆಗೆ ಹೋಗುತ್ತಾರೆ.

ಹಜ್ಜ್ ಇಸ್ಲಾಮಿನ ಪಂಚ ಸ್ಥಂಭಗಳಲ್ಲಿ ಒಂದು ಪ್ರಮುಖ ಸ್ಥಂಭ. ಈಮಾನ್ ಅಥವಾ ಸತ್ಯವಿಶ್ವಾಸವು ಇಸ್ಲಾಮಿೂ ಸೌಧದ ಬುನಾದಿ. ನಮಾಝು. ಝಕಾತ, ಉಪವಾಸ ವ್ರತ ಮತ್ತು ಹಜ್ಜ್ ಅದರ ಆಧಾರ ಸ್ಥಂಭಗಳು. ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಪ್ರವಾದಿ ಹಜರತ ಇಬ್ರಾಹಿಮ ಮತ್ತು ಅವರ ಪುತ್ರರಾದ ಪ್ರವಾದಿ, ಹಜರತ ಇಸ್ಮಾಯಿಲ್‌ರು ಅಲ್ಲಾಹನ ಆದೇಶದಂತೆ ಕಅಬಾ ಭವನವನ್ನು ನಿರ್ಮಿಸಿ, ಅದರ ಹಜ್ಜ್ ಯಾತ್ರೆಗೆ ಸಾರ್ವತ್ರಿಕ ಕರೆ ಕೊಟ್ಟರು. ಆ ಕರೆಗೆ ಓಗೊಟ್ಟು ಜಾಗತಿಕ ಇಸ್ಲಾಮಿೂ ಆಂದೋಲನದ ಆ ಕೇಂದ್ರ ಸ್ಥಾನವನ್ನು ಸಂದರ್ಶಿಸಲು ಹೋಗಬೇಕೆಂದು ಬಯಸದ ಒಬ್ಬ ಮುಸ್ಲಿಮನೂ ಇರಲಾರ. ಅಲ್ಲಾಹನ ಅನುಗ್ರಹದಿಂದ ಈ ಸದವಕಾಶ ಸಿಕ್ಕಿದೊಡನೆ ಆತ ಪತ್ನಿ–ಮಕ್ಕಳು ನೆಂಟರಿಷ್ಟರು ಮತ್ತು ಆಪ್ತ ಸ್ನೇಹಿತರಿಂದ ಬೀಳ್ಕೊಂಡು ವ್ಯಾಪಾರ ವಹಿವಾಟುಗಳನ್ನು ಮನೆಮಾರುಗಳನ್ನು ಬಿಟ್ಟು ತೌಹೀದ್ ಮತ್ತು ಅಲ್ಲಾಹನ ಪ್ರೀತಿಯಿಂದ ಪ್ರಮತ್ತನಾಗಿ ಆ ಪ್ರಾಚೀನ ದೇವ ಭವನಕ್ಕೆ ಪ್ರದಕ್ಷಿಣೆ ಬರಲಿಕ್ಕಾಗಿ ಹೊರಟು ಬಿಡುತ್ತಾನೆ. ವರ್ಣ, ವಸ್ತ್ರ, ಭಾಷೆ, ಜನಾಂಗ, ವರ್ಗ, ಜಾತಿ ಮೊದಲಾದ ಎಲ್ಲ ಬೇದಭಾವಗಳು ಅಳಿದು ಹೋಗಿವೆ. ಅಖಿಲ ಭೂಮಂಡಲವು ಒಂದೇ ಕೇರಿಯಲ್ಲಿ ಒಟ್ಟಾಗಿರುತ್ತಾರೆ. ಹಜರುಲ್ ಅಸ್ವದ್‌ನ ಸಮ್ಮೋಹ, ಮಕಾಮ್ ಇಬ್‌ರಾಹೀಮನ ಬಳಿ ಎರಡು ರಕಅತ್ ನಮಾಝು, ಝಮ್‌ಝಮ್ ನೀರುಸೇವನೆ, ಸಫಾ ಮರ್ವಾಗಳ ನಡುವಣ ಓಡಾಟ, ಪ್ರಾರ್ಥನೆಗಳು ಪರಿತಾಪಗಳು, ಕ್ಷಮಾಯಾಚನೆಗಳು, ದೇವ ಮಾರ್ಗದಲ್ಲಿ ಪ್ರಾಣಿ ಬಲಿ, ದೇವಾದೇಶಗಳ ಅನುಸರಣೆಯ ಸರಣಿಗಳು ಮುಂತಾದ ವಿಧಿವಿಧಾನಗಳ ಮೂಲಕ ಹಜ್ಜ್ ಪೂರ್ಣಗೊಳಿಸಿ ತಮ್ಮ ಪ್ರದೇಶಗಳಿಗೆ ಹಿಂತಿರುಗುತ್ತಾರೆ.[೩೨]

ಆದಿಲ್‌ಶಾಹಿಗಳ ಕಾಲದಲ್ಲಿ ಇನ್ನೊಂದು ಪ್ರಮುಖ ಹಬ್ಬವೆಂದರೆ, ಮೊಹರಂ ಆಚರಣೆ. ಈ ಹಬ್ಬದಲ್ಲಿ ಮುಸ್ಲಿ–ಹಿಂದೂಗಳು ಬೇದಭಾವವಿಲ್ಲದೆ ಆಚರರಿಸುವ ಹಬ್ಬವಾಗಿದೆ. ಮೊಹರಂ ಹಬ್ಬ ಹತ್ತು ದಿನಗಳವರೆಗೆ ಆಚರಿಸಲಾಗುತ್ತದೆ. ಈ ಹತ್ತುದಿನಗಳಲ್ಲಿ ಅನೇಕ ಭಕ್ತಾದಿಗಳು ದೇವರಿಗೆ ನೈವಿದ್ಯವನ್ನು ಕೊಡುತ್ತಾರೆ. ಮಹಮ್ಮದ ಆದಿಲ್‌ಶಾಹನು ಈ ಹಬ್ಬದ ಸಲುವಾಗಿ ಕೋಟೆಗೋಡೆ ಹೋರಗಡೆ 'ಆಶುರ ಖಾನಾ'ವನ್ನು ಕಟ್ಟಿಸಿದನು. ಮೊದಲು ದೇವರು ಊರಿನ ಒಳಗಡೆ ಕುಡಿಸುತ್ತಿದ್ದರು, ಜನಸಂಖ್ಯೆ ಹೆಚ್ಚಳದಿಂದ ಸುಲ್ತಾನನು ಆಶುರ ಖಾನಾವನ್ನು ಹೋರಗಡೆ ನಿರ್ಮಿಸಿ ಒಳ್ಳೇಯ ವ್ಯವಸ್ಥೆ ಮಾಡಿ ಅದಕ್ಕೆ ಬೇಕಾಗುವ ಎಲ್ಲ ಸೌಲಭ್ಯಗಳನ್ನು ನೀಡಿದನು. ಅಲ್ಲದೆ ಸುಲ್ತಾನನು ಸೈಯದ ಶಾಹ ಅಬ್ದುಲ್ ಖಾದಿರ ಬಶೇಅಬನ ಎನ್ನುವನ್ನು ಈ ಆಶುರ ಖಾನಾದ ಮುಖ್ಯಸ್ಥನಾಗಿ ನೇಮಿಸಿ, ಇದರ ಸಂರಕ್ಷಣೆ ಮತ್ತು ಹಬ್ಬವನ್ನು ಆಚರಿಸಲು ಐವತ್ತನಾಲ್ಕು ಸಾವಿರ(೫೪,೦೦೦) ರೂಪಾಯಿಗಳನ್ನು ನೀಡಿದನು.[೩೩]

ಬಸಾತಿನೆ ಸಲಾತಿನಲ್ಲಿ ತಿಳಿಸಿರುವಂತೆ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಹಜರತ ಸುಲ್ತಾನ ಅಲಿ ಅವರ ೧೧ ದಿನಗಳ ಮೊಹರಮದ ತಾಬುತಗಳ ೧೦ ದಿನ ಆಸಾರ ಮಹಲದಲ್ಲಿ ಮೇಜವಾನಿಯಂತೆ

ಒಳ್ಳೆಯ ಅಕ್ಕಿಯ ಅನ್ನ ಮತ್ತು ಹಲವಾ, ಜಕೇರತ ಹಲೀಲ ಎಂಬ ನಾಮಾಜದ ಪ್ರಕಾರದ ನಮಾಜ ಓದಿಸುವುದು, ದಾನಧರ್ಮ ನೀಡಿ ಮುಸಲ್ಮಾನ ಜಾತಿಯ ಫಕೀರರು ಮತ್ತು ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳು, ವಿದ್ವಾಂಸರು, ಖಾಜಿ ಮಂಡಳಿ, ಧರ್ಮ ಶಾಸ್ತ್ರೀಗಳು, ಕಾರಭಾರಿಮಂಡಳಿ, ಕಾಮದಾರರು ಇವರಿಗೆಲ್ಲ ಇಂದೊಂದು ದಿನ ಆಮಂತ್ರಣ ನೀಡಿ ಊಟ ಹಾಕಬೇಕು. ಬಂದವರನ್ನು ಸಂತೋಷ ಪಡಿಸಬೇಕು. ಗುರುವಾರ ಹಾಗೂ ಹನ್ನೊಂದು ಹನ್ನೆರಡನೆಯ ದಿನದಂದು ನಿತ್ಯದಕ್ಕಿಂತ ಅಧಿಕ ಅನ್ನದಾನ ಸಮಾರಂಭವನ್ನು ಏರ್ಪಡಿಸಿ ಬಾದಶಹನು ಸ್ವತಃ ಊಟಕ್ಕಾಗಿ ಅಲ್ಲಿಗೆ ಬಂದು ಪಂಕ್ತಿ ಭೋಜನ ಮಾಡಬೇಕು.[೩೪] ಹೀಗೆ ಮೊಹರಂ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು.

ವರ್ಷಕ್ಕೊಮ್ಮೆ ಬರುವ ಹಬ್ಬಗಳು ಜೀವನದ ರಸ ನಿಮಿಷಗಳು ವ್ಯಕ್ತಿಯ ಬದುಕಿಗೆ ತಪನ್ನೆರೆಯುವ ಅಮೃತ ಬಿಂದುಗಳು. ಪ್ರತಿಯೊಂದು ಹಬ್ಬವು ಸಂಪ್ರದಾಯವೂ ಹೌದು, ಆತ್ಮೋದ್ಧಾರ ಸಾಧನವೂ ಹೌದು. ಅದು ಐಕ್ಯದ ಮಹತ್ವವನ್ನು ತಿಳಿಸುತ್ತದೆ. ವಿಶ್ವಶಕ್ತಿಯ ಪ್ರಕಾಶವನ್ನು ಬಲಪಡಿಸುತ್ತದೆ. ಲೌಕಿಕ ಮತ್ತು ಪರಮಾರ್ಥಗಳ ಸಂಗಮ ಸ್ಥಾನವದು. ಈ ರೀತಿಯಾಗಿ ಮುಸ್ಲಿಮರ ಜೀವನದಲ್ಲಿ ಹಬ್ಬಗಳ ಪಾತ್ರ ಹಿರಿದಾಗಿದೆ. ಹಬ್ಬಗಳು ಲೌಕಿಕ ಮತ್ತು ಆಧ್ಯಾತ್ಮಿಕ ಸಾಧನೆಗೆ ಪ್ರೇರಕ ಶಕ್ತಿಯಾಗಿವೆ.

ಸಂಸ್ಕಾರಗಳು :

ಹಿಂದೂ ಮತ್ತು ಮುಸಲ್ಮಾನ, ಎರಡು ಜನಾಂಗಗಳೂ ಇಂದಿನಂತೆಯೇ ಅಂದೂ ತಮ್ಮ ತಮ್ಮ ಧರ್ಮಾಚರಣೆಗಳನ್ನೂ ಸಂಸ್ಕಾರಸಂಬದ್ಧ ವಿಧಿಗಳನ್ನು ನೆರವೇರಿಸುತ್ತಿದ್ದರು. ಹಿಂದೂಗಳಿಗೆ ವಿಧಿಸಲಾಗಿರುವ ಷೋಡಶ ಸಂಸ್ಕಾರಗಳ ಪೈಕಿ ಜಾತಕರ್ಮ, ನಾಮಕರಣ, ಚೂಡಾಕರಣ, ಉಪನಯನ, ವಿವಾಹ ಮತ್ತು ಅಂತ್ಯೇಷ್ಟಿ ಎಂಬ ಪ್ರಮುಖವಾದ ಆರು ಸಂಸ್ಕಾರಗಳನ್ನು ಹಿಂದೂಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಆಚರಿಸುತ್ತಲಿದ್ದರು.[೩೫] ಇದರ ನಂತರ ಕೊನೆಯ ಸಂಸ್ಕಾರವೆಂದರೆ ಶವ ಸಂಸ್ಕಾರ, ಹಿಂದೂ ಧರ್ಮದ ಅನುಯಾಯಿಗಳಲ್ಲಿ ಆಯಾ ಜಾತಿ ಸಂಪ್ರದಾಯದ ಅನುಗುಣವಾಗಿ ಶವವನ್ನು ದಹನ ಮಾಡುವುದು ಹಾಗೂ ಹೂಳುವವ ಪದ್ಧತಿಗಳೆರಡೂ ರೂಢಿಯಲ್ಲಿದೆ.

ಬ್ರಾಹ್ಮಣರು ಮತ್ತು ವೈದಿಕ ಪದ್ಧತಿಯ ಅನುಯಾಯಿಗಳು ಸಾಯುವ ಮುಂಚೆ ಬಾಯಿಯಲ್ಲಿ ಗಂಗಾ ಜಲವನ್ನು ಬಿಡುವುದು ರೂಢಿಯಲ್ಲಿದೆ. ಸಾವು ಸಂಭವಿಸಿರುವ ಮನೆಯ ಮುಂಭಾಗದಲ್ಲಿ ಬೆಂಕಿ ಹಾಕಿರುವುದು. ವೀರಶೈವರು ಮತ್ತು ಬ್ರಾಹ್ಮಣೇತರರು ನಿಧನವಾದರೆ ಹಲಗಿ ಬಾರಿಸುವುದು ಇಂದು ಕಾಣಬಹುದು. ವೈದಿಕ ಸಂಪ್ರದಾಯದವರು ಶವವನನ್ನು ದರ್ಬೆ ಹುಲ್ಲು ಹಾಸಿಮಲಗಿಸುತ್ತಾರೆ ನಂತರ ಬಿಳಿಯ ಬಟ್ಟೆಯಿಂದ ಸುತ್ತಿ ನೀರಿನಿಂದ ಸ್ನಾನ ಮಾಡಿಸಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಗ್ನಿ ಸಂಸ್ಕಾರ ಮಾಡುತ್ತಾರೆ. ವೈದಿಕ ಸಂಪ್ರದಾಯದವರು ಹತ್ತನೆಯ ದಿನ ಸಪಿಂಡೀಕರಣ ವಿಧಿಯನ್ನು ಮಾಡಿ

[illegible]

[illegible]

[illegible]

[illegible]

ಹದಿಮೂರನೆಯ ದಿನ ವೈಕುಂಠ ಸಮಾರಾಧನೆಯನ್ನು ಮಾಡಿ ಬಂಧು ಮಿತ್ರರಿಗೆ ಭೋಜನ ಏರ್ಪಾಡಿಸುತ್ತಾರೆ. ಅಲ್ಲದೇ ಪ್ರತಿವರ್ಷಶ್ರದ್ಧಕರ್ಮಗಳನ್ನು ಮಾಡುತ್ತಾರೆ.

ವೀರಶೈವವರು ಮತ್ತು ಇತರ ಹಿಂದೂಗಳು ಕೈವಲ್ಲಿ ಇರುವುದರಿಂದ ಅದರಲ್ಲಿಯೇ ಸಿಂಗರಿಸಿ ತೆಗೆದುಕೊಂಡು ಹೋಗುತ್ತಾರೆ. ಶವವನ್ನು ತೆಗೆದುಕೊಂಡು ಹೋದ ನಂತರ ಆ ಜಾಗೆಯಲ್ಲಿ ದೀಪವನ್ನು ಹಚ್ಚಿ ಇಡುತ್ತಾರೆ. ಹೂಳುವ ಪದ್ದತಿಯಲ್ಲಿ ಆಯಾ ಜಾತಿ-ಪಂಥಗಳ ಸಂಪ್ರದಾಯಕ್ಕೆ ಅನುಗುಣವಾಗಿ ಮಾಡುತ್ತಾರೆ, ಶವ ಕಣಿಯಲ್ಲಿ ದಕ್ಷಿಣ ದಿಕ್ಕಿಗೆ ಮುಖ ಮಾಡಿ ಕೂಡಿಸುವುದು ಅಥವಾ ಮಲಗಿಸಿ ಹೂಳುವುದು ರೂಢಿಯಲ್ಲಿದೆ. ಅಲ್ಲದೇ ಪೂರ್ವ ಅಥವಾ ಉತ್ತರಕ್ಕೆ ಮುಖವಾಡಿ ಹೂಳುತ್ತಾರೆ. ಆ ಸಂದರ್ಭದಲ್ಲಿ ಜಂಗಮರು ಈ ಕಾರ್ಯವನ್ನು ನೇರವೇರಿಸುತ್ತಾರೆ. ಮೂರನೆಯ, ಐದನೆಯ, ಏಳನೆಯ ದಿನ, ಹನ್ನೊಂದನೆಯ ದಿನ ಶಿವಗಣ ಸಮಾರಾಧನೆಯನ್ನು ಮಾಡುತ್ತಾರೆ.[೩೬]

ಸಂಸ್ಕಾರಗಳು ಸಾಮಾಜಿಕ ಸ್ಥಾನಗಳಂತೆ ಬದಲಾಗುತ್ತಿದದವು ಆ ಕಾಲದ ಪ್ರಮುಖ ಸಂಸ್ಕಾರಗಳೆಂದರೆ, ಮಗುವಿನ ಜನನ ಕುಟುಂಬದ ಅತೀ ಮಹತ್ವದ ದಿನವಾಗುತ್ತಿತ್ತು. ವಿಶೇಷವಾಗಿ ಗಂಡು ಮಗುವಾದರೆ ಮಾತೇಬೇರೆ. ಇತಿಹಾಸಕಾರರಾದ ನೂರಲ್ಲಾ ಮತ್ತು ಜುಬೇರಿಯವರು, ಮಹಮ್ಮದ ಆದಿಲ್‌ಶಾಹನಿಗೆ ಎರಡನೆ ಅಲಿ ಆದಿಲ್‌ಶಾಹ ಹುಟ್ಟಿದಾಗ ಆಸ್ಥಾನದಲ್ಲಾದ ಸಮಾರಂಭವನ್ನು ವರ್ಣಿಸಿದ್ದಾರೆ. ಮಹಮ್ಮದ ಆದಿಲ್‌ಶಾಹನಿಗೆ ಗಂಡು ಮಗು ಹುಟ್ಟಿದ್ದನ್ನು ಕೇಳಿ ಬಹಳ ಆನಂದವಾಯಿತು. ತಕ್ಷಣ ಮಗುವಿನ ಯೋಗಕ್ಷೇಮಕ್ಕಾಗಿ ಪ್ರಾರ್ಥನೆಯನ್ನು ಸಲ್ಲಿಸಿದನು. ಆಸ್ಥಾನದ ಅಮೀರರಿಗೆ ಬಹುಮಾನಗಳನ್ನು ಮತ್ತು ಬಡವರಿಗೆ ದಾನವನ್ನು ಮಾಡಿದನು.[೩೭] ಮರುವಿನ ಬಲ ಕಿವಿಯಲ್ಲಿ 'ಅಜಾನ್'(ಪ್ರಾಥನೆಯ ಕರೆ) ಮತ್ತು ಕುರಾನಿನ 'ಕಲಮಾ'ಗಳನ್ನು ಅವನ ಎಡ ಕಿವಿಯಲ್ಲಿ ಉದಿದರು. ನಂತರ ಮಗುವಿನ ನಾಮಕರಣ ಜನನದ ಆರನೇ ದಿನ ಆ ದಿನ ಎಲ್ಲ ಜನರಿಗೆ ಊಟವನ್ನು ಕೊಡಲಾಯಿತು. ಮತ್ತು ಇಡೀ ರಾತ್ರಿವರೆಗೆ ಸಮಾರಂಭ ನಡೆದಿತ್ತು. ಸಂಗೀತ, ನೃತ್ಯ, ದೀಪಾಲಂಕಾರ ಹಾಗೂ ಮದ್ದುಗಳ ಸದ್ದು ಇಡೀ ರಾತ್ರಿ ಇತ್ತು.

ಮಗುವಿಗೆ' ವಿದ್ಯಾಬ್ಯಾಸ ಆರಂಬಿಸುವ ದಿವಸ ಅದ್ದೂರಿಯಾಗಿ ಆಚಾರಿಸಲಾಗುತ್ತಿತ್ತು. ಮಹಮ್ಮದ ಆದಿಲ್‌ಶಾಹನು ತನ್ನ ಮಗ ಅಲಿ ಆದಿಲ್‌ಶಾಹನನ್ನು ನಾಲ್ಕು ವರ್ಷ ನಾಲ್ಕು ತಿಂಗಳ ನಾಲ್ಕು ದಿನವಿದ್ದಾಗ ಆತನ ವಿದ್ಯಾಬ್ಯಾಸ ಬಹಳ ಅದ್ದೂರಿಯಾಗಿ ಆಚರಿಸಲಾಯಿತು. ಇನ್ನೊಂದು ಪ್ರಮುಖ ಸಂಸ್ಕಾರವೆಂದರೆ 'ಸುನ್ನತ-ಇ-ಖಲೀಲಿ' ಇದು ಅಲಿ ಆದಿಲ್‌ಶಾಹನಿಗೆ ಏಳನೇ ವಯಸ್ಸಿನಲ್ಲಿ ಮಾಡಲಾಯಿತು.[೩೮]

ಆದಿಲ್‌ಶಾಹಿ ಸುಲ್ತಾನರು ಸಿಂಹಾಸವನ್ನೇರಿದ ದಿನ ಬಹಳ ಅದ್ದೂರಿಯಾಗಿ ಆಚರಿಸುತ್ತಿದ್ದರು, ವಿದ್ವಾಂಸರು, ಸರಕಾರಿ ಅಧಿಕಾರಿಗಳು, ರಾಯಭಾರಿಗಳು ಸುಲ್ತಾನನ ಜೈಕಾರವನ್ನು ಹಾಕಿ ಅವನಿಗೆ ಕಾಣಿಕೆಗಳನ್ನು ಕೊಡುತ್ತಿದ್ದರು. ಈ ದಿನದ ನೆನಪಿಗಾಗಿ ಹೊಸ ನಗರಗಳನ್ನು ಮತ್ತು ನಾಣ್ಯಗಳನ್ನು ಮುದ್ರಿಸುತ್ತಿದ್ದರು. ಫೇರಿಸ್ತಾನು ಒಂದು ವಿಶೇಷ ಪದ್ಧತಿಯ ಬಗ್ಗೆ ಬರೆಯುತ್ತಾನೆ ಅದೇ 'ಪಾನ'ಕೊಡುವದು

ಹೊರಗೆ ಹೋಗುವಾಗ ಪಾನ ಕೊಡುವ ಪದ್ಧತಿ ಇತ್ತು. ಯುರೋಪದಲ್ಲಿ ಕೈಗೆ ಮುತ್ತು ಕೊಡುವ ಪದ್ಧತಿಯಂತೆ ಇಲ್ಲಿ ದಂಡನಾಯಕನು ದಂಡಯಾತ್ರೆಗೆ ಹೋಗುವ ಸಮಯದಲ್ಲಿ ಅವನಿಗೆ ಎಲೆ ಅಡಿಕೆ ಕೊಡುವ ಪದ್ಧತಿ ಇತ್ತು.

ಮುಸಲ್ಮಾನರಲ್ಲಿ ಸಾಯುವಾಗ ಕಲೀಮಾ(ಕುರಾನ ಪಠಣ) ಪಠಿಸಿ ಬಾಯಿಗೆ ನೀರು ಹಾಕುತ್ತಾರೆ. ಸತ್ತ ನಂತರ ಶವವನ್ನು ಸ್ನಾನ ಮಾಡಿಸುತ್ತಾರೆ. ಬಿಳಿ ಬಟ್ಟೆಯನ್ನು ತೊಡಿಸಿ, ಸುಗಂಧವನ್ನು ಬಟ್ಟೆಗೆ ಹಚ್ಚಿ, ಕಣ್ಣಿಗೆ ಸುರಮಾ(ಕಾಡಿಗೆ) ಹಚ್ಚುತ್ತಾರೆ ಮಧುವೆಯ ವಧುವನ್ನು ಅಲಂಕರಿಸಿದಂತೆ ಅಲಂಕರಿಸುತ್ತಾರೆ. ಶವದ ಸುತ್ತಲೂ ಬಂಧು ಮಿತ್ರರು ಕುಳಿತು ಕುರಾನ ಪಠಣ ಮಾಡುತ್ತಾರೆ. ಶವವನ್ನು ತೆಗೆದುಕೊಂಡು ಹೋಗುವಾಗ ಮೊದಲು ಸಂಬಂಧಿಕರು ಅನಂತರ ಇತರರು ಹೆಗಲ ಕೊಡುತ್ತಾರೆ. ಶವಕುಣಿಯಲ್ಲಿ ತಲೆಯನ್ನು ಉತ್ತರ ದಿಕ್ಕಿಗೆ ಮುಖವನ್ನು ಮೆಕ್ಕಾಅ ಕಡೆಗೆ ಮಾಡಿ ಶವವನ್ನು ಹುಳುತ್ತಾರೆ. ಶವ ಸಂಸ್ಕಾರದ ನಂತರ ಅಲ್ಲಿದ್ದವರಿಗೆ ಉತ್ತತ್ತಿಯನ್ನು ಹಂಚುತ್ತಾರೆ. ಗೋರಿಯಿಂದ ೪೦ ಹೆಜ್ಜೆ ಬಂದು ನಂತರ ಗೋರಿಯ ಕಡೆ ಮುಖ ಮಾಡಿಕೊಂಡು ಪ್ರಾರ್ಥನೆಯನ್ನು ಮಾಡುತ್ತಾರೆ. ಮೂರನೆ ದಿನ ಮುಂಜಾನೆ ಬಂಧು ಮಿತ್ರರು ಮಸೀದಿಗೆ ಹೋಗಿ ನಮಾಜ ಮಾಡಿ ಅನಂತರ ಫಾತೆಹಾಖಾನಿಯನ್ನು ಸಲ್ಲಿಸಿ ಅಲ್ಲಿದ್ದವರಿಗೆ ಸಿಹಿ ಹಂಚಿ ಸ್ಮಶಾನಕ್ಕೆ ಹೋಗಿ ಸತ್ತವರ ಆತ್ಮಕ್ಕೆ ಶಾಂತಿ ಕೋರುತ್ತಾರೆ. ಹಾಗೆಯೇ ಹತ್ತನೆಯ, ಇಪ್ಪತ್ತನೆಯ ಮತು ನಲವತ್ತನೆಯ ದಿನ ಪ್ರಾರ್ಥನೆ ಮಾಡುತ್ತಾರೆ. ಸತ್ತ ಮೊದಲ ವರ್ಷದ ದಿನ ಬಂದು-ಮಿತ್ರರಿಗೆ ಮತ್ತು ಬಡಬಗ್ಗರಿಗೆ ಅನ್ನ ಸಂತರ್ಪಣೆ ಮಾಡುತ್ತಾರೆ.[೩೯]

ಕ್ರೀಡೆ ಮತ್ತು ಮನರಂಜನೆಗಳು :

ಕ್ರೀಡೆ ಮತ್ತು ಮನರಂಜನೆಗಳ ಅರಿವು ಇತಿಹಾಸ ಪೂರ್ವ ಕಾಲದಿಂದಲೂ ಇದ್ದಿತು. ಮನರಂಜನೆಯಿಲ್ಲದೆ ಸಾಮಾಜಿಕ ಜೀವನವು ಮಂಕಾಗುತ್ತದೆ, ಬೇಸರ ಹಿಡಿಸುತ್ತದೆ. ಕ್ರೀಡೆ ಮತ್ತು ಮನರಂಜನೆಗಳು ಜೀವನದ ಒಂದು ಭಾಗ. ಇವಗಳು ಕೇವಲ ದೈಹಿಕ ಮತ್ತು ಮಾನಸಿಕ ಸ್ಥೈರ್ಯ ಕೊಡುವುದಲ್ಲದೆ ಸಮಾಜಿಕ ಮೌಲ್ಯಕೂಡ ಇರುತ್ತಿತ್ತು. ಕ್ರೀಡೆ ಮತ್ತು ಮನರಂಜನೆಗಳು ಭಾರತದಲ್ಲಿ ಕಾಲದಿಂದ ಕಾಲಕ್ಕೆ ಬದಲಾಗಿದೆ. ಆದರೆ ಕುಸ್ತಿ ಅಥವಾ ಮಲ್ಲಯುದ್ಧದಂತಹ ಕೆಲವು ಬಹಳ ಕಾಲದಿಂದಲೂ ಜನಪ್ರಿಯವಾಗಿ ಉಳಿದುಕೊಂಡು ಬಂದಿವೆ. ಅದು ರಾಜನಿಗೆ ಮತ್ತು ಪ್ರಜೆಗಳಿಗೂ ಸಮಾನವಾಗಿ ಇಷ್ಟವಾಗುತ್ತಿತ್ತು.

ಆದಿಲ್‌ಶಾಹಿಗಳ ಕಾಲದಲ್ಲಿ ಪೋಲೊ, ಕತ್ತಿವರಸೆ, ಕುಸ್ತಿ, ಕುದರೆ ಸವಾರಿ, ಧನುರ್ಯುದ್ದ, ರಥದ ಸ್ಪರ್ಧೆ ಇಂತಹ ಯುದ್ದ ಕ್ರೀಡೆಗಳನ್ನು ಆಡುತ್ತಿದ್ದರು. ಕತ್ತಿವರಸೆ ಮತ್ತು ಬಿಲ್ಲುಗಾರಿಕೆ ಜನಪ್ರಿಯ ಆಟಗಳಾಗಿದ್ದವು. ರಾಜಕುಮಾರರಿಗೆ ಈ ಆಟಗಳಲ್ಲಿ ವಿಶೇಷ ತರಬೇತಿಯನ್ನು ಕೊಡಲಾಗುತ್ತಿತ್ತು. ಅವರಿಗೆ ಕುಸ್ತಿ, ಕತ್ತಿ, ಬಿಲ್ಲು ವಿದ್ಯೆ, ಕುದರೆ ಸವಾರಿ ಮುಂತಾದವುಗಳಲ್ಲಿ ಪರಣಿತಗೊಳಿಸಲಾಗುತ್ತಿತ್ತು.

ಅದೇ ರೀತಿ ಬರ್ಚಿ ಎಸೆತ, ಗುಂಡು ಎಸೆತ ಜನಪ್ರಿಯವಾಗಿದ್ದವು. ಬೇಟೆ ಸಹ ರಾಜ ಮನೆತನಗಳಲ್ಲಿ ಪ್ರೀಯವಾದ ಆಟವಾಗಿತ್ತು. ಅದಕ್ಕಾಗಿ ವಿಶೇಷ ವಿಭಾಗವಿತ್ತು ಬೇಟೆ ತಂಡದ ನಾಯಕನ್ನು 'ಅಮೀರ-ಇ-ಶಿಕಾರ ಎಂದು ಕರೆಯಲಾಗುತ್ತಿತ್ತು. ಒಂದನೆ ಅಲಿ ಆದಿಲ್‌ಶಾಹನ ರಾಣಿಯಾದ ಚಾಂದಬೀಬಿ ಬೇಟೆಯನ್ನು ಆಶಿಸುತ್ತಿದ್ದಳು ಕುದರೆ ಸವಾರಿ ಅವಳ ಪ್ರಿಯವಾದ ಕ್ರೀಡೆಯಾಗಿತ್ತು.[೬೦] ಆದಿಲ್‌ಶಾಹಿ ಸುಲ್ತಾನರ ಅನೇಕ ಚಿತ್ರಗಳು ಬೇಟೆಯಾಡುವಂತಹುದಾಗಿದೆ. ಆನೆ ಮತ್ತ ಕುದುರೆ ಸವಾರಿಗಳು ವಿಶೇಷವಾಗಿ ಮೇಲುವರ್ಗದ ಜನತೆಗೆ ಪ್ರಿಯವಾಗಿದ್ದ ಬೇಡಿಕೆಗಳಾಗಿದ್ದವು.

ಒಳಾಂಗಣ ಆಟಗಳಲ್ಲಿ ಚದುರಂಗ, ಪಗಡೆ, ಗಂಜಿ ಫಾದಂತಹ ಎಲೆ ಆಟಗಳಿದ್ದವು. ಈ ಆಟಗಳು ಸಮಾರಂಭಗಳಲ್ಲಿ, ಮೋಜಿನ ಕೂಟಗಳಲ್ಲಿ ಆಡುತ್ತಿದ್ದರು. ಇದರ ಜೊತೆಗೆ ಮನರಂಜನೆಗಾಗಿ ಸಂಗೀತ ಕುಡಿತಗಳಿದ್ದವು, ಇವುಗಳೆಲ್ಲ ಶ್ರೀಮಂತರಿಗಾಗಿ ಇದ್ದವು.

ಸಾಮಾನ್ಯರಿಗೆ ಧಾರ್ಮಿಕ ಹಬ್ಬಗಳು, ತೀರ್ಥಯಾತ್ರೆಗಳಲ್ಲಿ, ಡೊಂಬರಾಟಗಳು, ಇಂದ್ರಜಾಲ, ಜಾನಪದ ಸಂಗೀತ, ನೃತ್ಯಗಳು ಅವರ ಮನರಂಜನೆಗಳಾಗಿದ್ದವು. ಹಾವಿನ ಆಟಗಳು, ಪಾರಿವಾಳ ಹಾರಿಸುವುದು, ಕೋಳಿಜಗಳಗಳು ಎಲ್ಲ ಶ್ರೇಣಿಯ ಜನರಲ್ಲಿ ಮೆಚ್ಚುಗೆಗಳಿಸಿದ್ದವು. ಇದಲ್ಲದೇ ಪ್ರಾಣಿಗಳ ಕಾಳಗ, ಹಾವು ಆಡಿಸುವುದು, ಕೋಳಿ ಅಂಕ, ಟಗರ ಕಾಳಗ, ಗೂಳಿಕಾಳಗ, ಟಗರು ಓಟಸ್ಪರ್ಧೆ ಇವು ಪ್ರಚುರವಾಗಿದ್ದುವು.

ಜಾತ್ರೆಗಳು ಮತ್ತು ಹಬ್ಬಗಳ ಸಮಯದಲ್ಲಿ ವಿವಿಧ ವೇಷಸ್ಪರ್ಧೆ, ಗಾಯನ ಮತ್ತು ನೃತನ, ಕೋಲಾಟ ಇವು ಬಹು ಸಾಮಾನ್ಯವಾಗಿದ್ದವು. ಹೆಣ್ಣು ಮಕ್ಕಳು ಗೊಂಬೆಯಾಟಗಳು, ಕವಡೆಗಳು ಅವಿತಿಕೊಳ್ಳುವ ಆಟ ಮೊದಲಾದವಗಳನ್ನು ಆಡುತ್ತಿದ್ದರು. ಭಾರತವು ಹಿಂದಿನಿಂದಲೂ ಹಾವಾಡಿಗರಿಗೆ, ಮಂತ್ರವಾದಿಗಳಿಗೆ, ವಿದೂಷಕರಿಗೆ ಮತ್ತು ಯಕ್ಷಣಿ ಮಾಡುವರಿಗೆ ತವರು. ಜಾತ್ರೆಗಳ ಸಮಯದಲ್ಲಿ ಸರ್ಕಸ್ ಇರುತ್ತಿತ್ತು. ಜೂಜು ಕೂಡ ಒಂದು ಹೊತ್ತು ಕಳೆಯುವ ಸಾಧನವಾಗಿತ್ತು. ಆದಿವಾಸಿಗಳಾದ ಬೇಡರು ಕರಡಿ, ಕೋತಿ ಮತ್ತು ಹೋರಿಗಳಿಗೆ ತರಬೇತಿಕೊಟ್ಟು ಅವುಗಳಿಂದ ಜನರನ್ನು ರಂಜಿಸಿ ತಮ್ಮ ಹೊಟ್ಟೆ ತುಂಬಿಕೊಳ್ಳುತ್ತಿದ್ದರು. ಬಡವರ ಕಠಿಣ ದುಡಿಮೆಯ ಭಾರವು ಸುತ್ತ ಇದ್ದ ಇಂತಹ ಮನರಂಜನೆಗಳಿಂದ ಎಷ್ಟೋ ಹಗುರವಾಗುತ್ತಿತ್ತು.[೬೧]

ವೈವಿಧ್ಯ ಮತ್ತು ಸಂಕೀರ್ಣತೆಗಳು ತುಂಬಿಹೋಗಿದ್ದ ಒಂದು ನಾಡಿಗೆ ಮುಸ್ಲಿಮರು ಇನ್ನಷ್ಟು ಬಣ್ಣವನ್ನೂ ರಮಣೀಯತೆಯನ್ನೂ ಕೂಡಿಸಿದರು. ಎಲ್ಲ ವಸ್ತುಗಳು ಹುಟ್ಟುವುದು ವೈರುಧ್ಯಗಳ ಬೆಸುಗೆಯಿಂದ ಎಂಬುದು ನಿಜ. ಮುಸ್ಲಿಮರು ಮೊದಲು ಹಿಂದೂಗಳಿಗೆ ವಿರೋಧವಾಗಿರುವಂತೆ ತೋರಿತು. ಆದರೆ ಬೇರೆಯವರಿಂದ ಕ್ರಿಯೆ ಪ್ರತಿಕ್ರಿಯೆಗಳಿಂದ, ನೂತನವಾದೊಂದು ಸಂಯೋಜನೆಯು ರೂಪಗೊಂಡಿತು. ಇಲ್ಲಿ ನೆಟ್ಟ ಮುಸ್ಲಿಮ ಜೀವನ ವಿಧಾನವು, ಇಲ್ಲಿ ಶತಮಾನಗಳ ಕಾಲದಿಂದಿದ್ದ ಜೀವನ ವಿಧಾನಕ್ಕಿಂತ

ಬೇರೆಯಾಗಿತ್ತು. ಅವರಲ್ಲಿದ್ದ ಸಾಮಾಜಿಕ ಐಕ್ಯತೆ, ಸೋದರತೆಯ ಭಾವನೆಗಳು, ಭಾರತೀಯ ಸಮಾಜದಲ್ಲಿ ಅಂತರ್ಗತವಾಗಿದ್ದ ಸಂಕುಚಿತ ಭಾವನೆಗಳನ್ನು ಹೋಗಲಾಡಿಸಿತು.

ಬ) ಆರ್ಥಿಕವ್ಯವಸ್ಥೆ:

ಸಮಾಜದ ಮಹತ್ವದ ಭಾಗವಾದ ಅರ್ಥವ್ಯವಸ್ಥೆ ತನ್ನ ವಿಶಾಲ ವ್ಯಾಪ್ತಿ ಮತ್ತು ವೈವಿಧ್ಯತೆಯಿಂದಾಗಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಒಂದು ನಾಡಿನ ಅಥವಾ ನಗರ ಗ್ರಾಮಗಳ ಅಥವಾ ವ್ಯವಸ್ಥೆಯು ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳ ಮೇಲೆ ನಿಂತಿರುತ್ತದೆ. ಅಲ್ಲದೆ ನೈಸರ್ಗಿಕ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ಅಲ್ಲಿನ ಜನರ ದುಡಿಮೆ ಅವರ ಪರಿಶ್ರಮದ ಮೇಲೆ ನಿಂತಿರುತ್ತದೆ. ಇವೆರಡು ಒಂದನ್ನು ಬಿಟ್ಟು ಇನ್ನೊಂದಿಲ್ಲ. ಹೀಗಾಗಿ ಆರ್ಥಿಕಾಭಿವೃದ್ಧಿಯು ನೈಸರ್ಗಿಕ ಸಂಪಲ್ಮೂನಗಳ ಪ್ರಮಾಣ ಅವುಗಳ ಗುಣಮಟ್ಟ ಹಾಗೂ ಅವುಗಳನ್ನು ಬಳಿಸಿಕೊಳ್ಳುವನ ಸಾಮರ್ಥ್ಯಗಳನುಸಾರವಾಗಿ ನಿರ್ಧರಿಸಲಾಗುತ್ತದೆ. ಇಂತಹ ಅರ್ಥವ್ಯವಸ್ಥೆಯನ್ನು ನಾವು ಆದಿಲ್‌ಶಾಹಿಗಳ ಕಾಲದಲ್ಲಿ ನೋಡಬಹುದಾಗಿದೆ.

ಕೃಷಿ :

ಭಾರತದಲ್ಲಿ ಇತಿಹಾಸ ಪೂರ್ವ ಕಾಲದಿಂದಲೂ ಅನುಸರಿಸುತ್ತಾ ಬಂದ ಕೃಷಿಯೆ ಈ ನಾಡಿನ ಅರ್ಥವ್ಯವಸ್ಥೆ ಜೀವನಾಡಿಯಗಿತ್ತು. ಬಹುಜನರ ಮುಖ್ಯ ಜೀವನೋಪಾಯದ ಕಸುಬಾದ ಕೃಷಿ, ವ್ಯಾಪಾರ, ಉದ್ಯೋಗ ಕೈಗಾರಿಕೆಗಳನ್ನೊಳಗೊಂಡ ನಾಡಿನ ಸಮಸ್ತ ಆದಾಯಕ್ಕೆಲ್ಲ ಮೂಲ ಕೇಂದ್ರವಾಗಿದ್ದಿತ್ತು. ಆದುದ್ದರಿಂದಲೇ ಕೃಷಿಯ ಅಭಿವೃದಿಯಂದೆ ಒಂದು ನಾಡಿನ ಅಭಿವೃದಿ ಎಂಬುದನ್ನು ನಮ್ಮ ಪ್ರಾಚೀನರು ಚನ್ನಾಗಿ ಮನಗಂಡಿದ್ದರು.

ಕೃಷಿಗೆ ಮುಖ್ಯ ಆಧಾರ ಭೂಮಿ. ಇದು ಆಹಾರ ಬೆಳೆಯುವ ಪ್ರಮುಖ ಸಾಧನ. ತನ್ನ ಗರ್ಭದಿಂದ ಹೊರಟ ಧಾನ್ಯಗಳಿಂದ ಜನರನ್ನು ಸಾಕುವ ಭೂಮಿಯನ್ನು ತಾಯಿಯೆಂದು ಮತ್ತು ರೈತನನ್ನು ಭೂದೇವಿಯ ಮಕ್ಕಳೆಂದು ಕರೆಯುತ್ತಾರೆ. ಒಂದು ನಾಡಿನ ಜನತೆ ತಮ್ಮ ಜೀವನ ನಿರ್ವಹಣೆಗೆ ಮತ್ತು ಆರ್ಥಿಕ ಭದ್ರತೆಗೆ ಅಲ್ಲಿನ ನಿಸರ್ಗ ಸಂಪತ್ತಿನ ಭೂಮಿಯನ್ನಾಗಿಸುವುದು ಕಂಡು ಬರುತ್ತದೆ. ಹೀಗಾಗಿ ಭೂಮಿ ಅತ್ಯಂತ ಮಹತ್ವದ ನಿಸರ್ಗ ಸಂಪನ್ಮೂಲವೆಂದು ಹೇಳಬಹುದು. ಭೂಮಿಯನ್ನು ಸ್ಥೂಲವಾಗಿ ವ್ಯವಸಾಯ ಯೋಗ್ಯಭೂಮಿ, ಬೀಳುಭೂಮಿ ಎಂದು ವಿಭಾಗಿಸಬಹುದು. ಆದರೆ ಬಹಮನಿಗಳಂತೆ, ಆದಿಲ್‌ಶಾಹಿಗಳು ಕೂಡ ಭೂಮಿಯನ್ನು ಸರಕಾರಿ ಭೂಮಿ, ಜಾಗೀರು ಭೂಮಿ ಮತ್ತು ಹಿಂದೂ ನಾಯಕರ ಭೂಮಿ ಎಂದು ಮೂರು ಭಾಗವಾಗಿ ವಿಂಗಡಿಸಿದರು.[೨೨] ಹೊಸ ಊರುಗಳ ಸೃಷ್ಟಿಯೊಂದಿಗೆ ಅದರ ಸುತ್ತಮೂತ್ತಲ ವ್ಯವಸಾಯ ಯೋಗ್ಯ ಭೂಮಿಯ ನಿರ್ಮಾಣ ಆಗುತ್ತಿತ್ತು. ಬೀಳು ಭೂಮಿಯನ್ನು ಸಾಮಾನ್ಯವಾಗಿ ಪಶುಪಾಲನೆಗೆ ಹುಲ್ಲುಗಾವಲೆಂದು ಉಪಯೋಗಿಸಲಾಗುತ್ತಿತ್ತು.

ಭೂಮಿಯ ವರ್ಗಿಕರಣವು ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಮುಖ್ಯವಾದೊಂದು ಅಂಶವಾಗಿತ್ತಲ್ಲದೆ, ಭೂಮಿಯನ್ನು ನಾಲ್ಕು ವರ್ಗವಾಗಿ ವಿಂಡಿಸಲಾಗಿತ್ತು. ವಾಸಯೋಗ್ಯಭೂಮಿ, ಕೃಷಿಯೋಗ್ಯಭೂಮಿ, ಬಂಜರು ಮತ್ತು ಗೋಮಾಳ ಇದಲ್ಲದೆ ಅರಣ್ಯವಿತ್ತು.[೪೩] ಮಹಮ್ಮದ ಆದಿಲ್‌ಶಾಹನು ಮಾಡಿದಂತಹ ಯುದ್ಧದಿಂದ ಸಾಮ್ರಾಜ್ಯ ವಿಸ್ತಾರವಾಯಿತು, ಅಲ್ಲದೆ ಭೂಮಿಯು ಕೂಡ ವಿಸ್ತಾರವಾಗಿದ್ದರಿಂದ ಆರ್ಥಿಕವಾಗಿ ರಾಜ್ಯವು ಸಂಪದ್ಭರಿತವಾಗಲು ಕಾರಣವಾಯಿತು. ಸರದಾರರಿಗೆ, ಅಧಿಕಾರಿಗಳಿಗೆ ಅವರ ಸೇನೆಯ ಪ್ರತಿಫಲವಾಗಿ ಒಂದಷ್ಟು ಭೂಮಿಯನ್ನು ಕೊಡಲಾಗುತ್ತಿತ್ತು. ಯುದ್ಧದಲ್ಲಿ ಗೆದ್ದ ಭೂಮಿಯನ್ನು ನಂಬಿಗಸ್ತ ವ್ಯಕ್ತಿಯನ್ನು ನೇಮಿಸಿ ಅದನ್ನು ನೋಡಿಕೊಳ್ಳಲು ತಿಳಿಸುತ್ತಿದ್ದನು. ಆದರೆ ಅದು ಅನುವಂಶಿಕವಾಗಿರಲಿಲ್ಲ. ಮತ್ತು ಅದು ಕೇವಲ ಹುದ್ದೆಗೆ ಸೇರಿದ್ದು, ಎರಡನೆಯದಾಗಿ ಧಾರ್ಮಿಕ ಉದ್ದೇಶಕ್ಕಾಗಿ ಭೂಮಿಯನ್ನು ಬಿಟ್ಟುಕೊಡಲಾಗುತ್ತಿತ್ತು. ಅದಕ್ಕೆ ವಕ್ಪ್ ಭೂಮಿ ಎನ್ನುತ್ತಿದ್ದರು. ಅದಕ್ಕೆ ಯಾವ ಬಗೆಯ ತೆರಿಗೆ ಇರಲಿಲ್ಲ, ಹಿಂದೂಗಳಿಗೂ ತೆರಿಗೆಯಿಂದ ಮುಕ್ತವಾದ ದೇವಾಲಯದ ಜಮೀನುಗಳಿರುತ್ತಿದ್ದವು. ಉದಾಹರಣೆಗೆ ಕ್ರಿ.ಶ.೧೬೪೪ ರಲ್ಲಿ ಮಹಮ್ಮದ ಆದಿಲ್‌ಶಾಹನು ಲಕ್ಷ್ಮೇಶ್ವರದ ದೇಸಾಯರಿಗೆ ಕಳಿಸಿದ ಆದೇಶದಲ್ಲಿ ಖಾನಗೌಡ ದೇಸಾಯಿ ಕಟ್ಟಿಸಿದ ಕೆಂಚ ಬಸವೇಶ್ವರ ದೇವಸ್ಥಾನಕ್ಕೆ ಪೂಜಾ ನೈವೇದ್ಯ ಹಾಗೂ ನಂದಾದೀಪಗಳಿಗಾಗಿ ಯಳವತ್ತಿಗ್ರಾಮದ ೨ ಬಿತಾ ಭೂಮಿ, ಸುಲ್ತಾನಪುರದ ೨, ಸಂಕದಹಾಳ ಗ್ರಾಮದ ೧ ಮತ್ತು ಗೋವನಹಾಳದ ೧ ಬಿತಾ, ಹೀಗೆ ಒಟ್ಟು ೬ ಬಿತಾ ಭೂಮಿಯನ್ನು ಕೊಟ್ಟ ಬಗ್ಗೆ ಆದೇಶವಿದೆ.[೪೪]

ಭೂಕಂದಾಯವು ಸ್ಥಳಿಯ ಅಧಿಕಾರಿಗಳಿಂದ ಸಂಗ್ರಹಿಸಲಾಗುತ್ತಿತ್ತು. ಎಸ್.ಕೆ ಸಿನ್ಹಾ ಅವರು ಬರೆದಿರುವ ಹಾಗೆ ದಕ್ಷಿಣದ ಬಹಮನಿ ಸುಲ್ತಾನರ ಕಾಲದಲ್ಲಿ ಉತ್ಪತ್ತಿಯ ೧/೬ ಭಾಗ ಕಂದಾಯ ರೂಪದಲ್ಲಿ ಸಲ್ಲಿಸಬೇಕಾಗಿತ್ತು. ಬಿಜಾಪುರದ ಆದಿಲ್‌ಶಾಹಿಗಳು ಕೂಡ ತಮ್ಮ ಪೂರ್ವಿಕರಂತೆ ಕಂದಾಯ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬಂದರು. ಇಡೀ ದಕ್ಷಿಣ ಭಾರತದಲ್ಲಿಯೇ ಆದಿಲ್‌ಶಾಹಿಗಳು ಅತಿ ಕಡಿಮೆ ಕಂದಾಯವನ್ನು ತಮ್ಮ ಪ್ರಜೆಗಳ ಮೇಲೆ ಹಾಕಿದ್ದರು. ಗುಜರಾತ, ಬೇರಾರ, ಖ್ಞಾನದೇಶ, ದೌಲತಾಬಾದ, ಔರಂಗಾಬಾದ ಮತ್ತು ಮೊಗಲರ ಪ್ರದೇಶಗಳಲ್ಲಿ ಬಿಜಾಪುರಕ್ಕಿಂದ ಅಧಿಕವಾದ ಕಂದಾಯವಿತ್ತು. ಮತ್ತೆ ಇವರ ಪ್ರಕಾರ ಬಿಜಾಪುರ ರಾಜ್ಯದಲ್ಲಿ ಕೆಟ್ಟ ಬರಗಾಲ ಬಿದ್ದಾಗ ಬರಗಾಲ ಪೀಡಿತ ಜನರಿಗೆ ಸಹಾಯ ಮಾಡಲು ಅವರ ಹತ್ತಿರ ಧಾನ್ಯಗಳನ್ನು ಸಂಗ್ರಹಿಡುವ ಉಗ್ರಾಣಗಳು ಇರಲಿಲ್ಲವೆಂದು ಬರದಿದ್ದಾರೆ. ಆದರೆ ಪ್ರಾಚ್ಯವಸ್ತುಗಳ ಆಧಾರಗಳು ನಮ್ಮಗೆ ಸಾಕ್ಷ್ಯಿಯಾಗಿವೆ ಇವರ ಕಾಲದಲ್ಲಿ ಬಿಜಾಪುರ ಮತ್ತು ರಾಯಚೂರ ಕೋಟೆಗಳಲ್ಲಿ ಧಾನ್ಯ ಸಂಗ್ರಹಿಸುವ ಉಗ್ರಾಣಗಳಿದ್ದವು. ಅದೇ ತರಹ ಇತರ ಕೋಟೆ ಮತ್ತು ನಗರಗಳಲ್ಲಿ ಇಂತಹ ವ್ಯವಸ್ಥೆಯಿತ್ತು. ಯುದ್ಧ ಮತ್ತು ಕ್ಷಾಮ ಕಾಲದಲ್ಲಿ ಉಗ್ರಾಣಗಳಲ್ಲಿ ಸಂಗ್ರಹಿಸಿದ ಧಾನ್ಯಗಳನ್ನು ಪೂರೈಸಲಾಗುತ್ತಿತ್ತಿ. ಕ್ಷಾಮದ ಸಮಯದಲ್ಲಿ ಗ್ರಾಮೀಣ ಸಾಮಾನ್ಯ ಜನರಿಗೂ ಯಾವುದೇ ರೀತಿಯ ತೊಂದರೆ ಆಗುತ್ತಿರಲಿಲ್ಲ.[೪೫]

[illegible]

[illegible]

ಬೆಳೆಗಳು :

ಆದಿಲ್‌ಶಾಹಿಗಳ ಕಾಲದ ರೈತರು ವರ್ಷದಲ್ಲಿ ಎರಡು ಬೆಳೆಗಳನ್ನು ಬೆಳೆಯುತ್ತಿದ್ದರು. **'ಖಾರಿಫ'**(ಮುಂಗಾರು) ಮತ್ತು **'ರಬ್ಬೀ'**(ಹಿಂಗಾರು) ಈ ಕಾಲದ ಪ್ರಮುಖ ಬೆಳೆಗಳೆಂದರೆ, ಜೋಳ, ಗೋದಿ, ಸಜ್ಜೆ, ಕಡಲೆ, ಬೇಳೆಕಾಳುಗಳು, ಅಕ್ಕಿ, ಸಾಸವೆ, ಹತ್ತಿ, ಹುರುಳಿ, ಕಬ್ಬು, ತಂಬಾಕು ಮುಂತಾದವುಗಳು. ಕರಾವಳಿ ಪ್ರದೇಶದಲ್ಲಿ ಪ್ರಮುಖವಾಗಿ ಅಕ್ಕಿ, ತೆಂಗು, ಏಲಕ್ಕಿ, ಮೆಣಸು, ಕಾಜು, ಶೇಂಗಾ, ಮಾವಿನಹಣ್ಣು, ಇದಲ್ಲದೆ ತರಕಾರಿಗಳು ಮತ್ತು ಹಣ್ಣುಗಳನ್ನು ಬೆಳೆಯುತ್ತಿದ್ದರು.[೪೬]

ಕರಾವಾಳಿ ಮತ್ತು ಕೊಂಕಣದ ಮುಖ್ಯ ಬೆಳೆ ಅಕ್ಕಿಯಾಗಿತ್ತು. ವಿವಿಧ ತಳಿಯ ಅಕ್ಕಿಯನ್ನು ಬೆಳೆಯುತ್ತಿದ್ದರು. ಅವುಗಳಲ್ಲಿ **'ಜೀರಾಸಾಲ'** ಅಕ್ಕಿಯ ತಳಿ ಪ್ರಸಿದ್ಧವಾಗಿತ್ತು. ವೆಂಗುರ್ಲೆಯ ಅಕ್ಕಿಯ ಬಗ್ಗೆ, ಟಾವರ್ನಿಯರ್ ಪ್ರವಾಸಿ ಬಹಳ ಮೆಚ್ಚುಗೆ ವ್ಯಕ್ತಪಡಿಸಿದ್ದಾನೆ. ಅಕ್ಕಿಯ ಹೊರತಾಗಿ ಕರಾವಳಿಯಲ್ಲಿ ನವಣೆಯನ್ನು ಅಧಿಕವಾಗಿ ಬೆಳೆಯುತ್ತಿದ್ದರು. ಭತ್ತ ಬೆಳೆಯಲು ಯಪಯೋಗವಿಲ್ಲದ ಘಟ್ಟದ ಪ್ರದೇಶದಲ್ಲಿ ನವಣೆಯನ್ನು ಅಧಿಕವಾಗಿ ಬೆಳೆಯುತ್ತಿದ್ದರು. ಭತ್ತ ಬೆಳೆಯಲು ಉಪಯೋಗವಿಲ್ಲದ ಘಟ್ಟದ ಪ್ರದೇಶದಲ್ಲಿ ನವಣೆಯನ್ನು ಅಧಿಕವಾಗಿ ಬೆಳೆಯುತ್ತಿದ್ದರು. ಅದನ್ನು ಬೇಯಿಸಿ ಅಕ್ಕಿಯ ಅನ್ನದಂತೆ, ತಿನ್ನುತ್ತಿದ್ದರು. ಇದು ಬಡವರ ಆಹಾರವಾಗಿತ್ತು.

ಕೊಂಕಣ ಮತ್ತು ಕರ್ನಾಟಕದ ಪ್ರದೇಶಗಳಲ್ಲಿ ಅಧಿಕ ವ್ಯಾಪಾರಿ ಬೆಳೆಯಾಗಿ ಮೆಣಸನ್ನು ಬೆಳೆಯುತ್ತಿದ್ದರು. ೧೬ ಮತ್ತು ೧೭ನೆಯ ಶತಮಾನದ ರಫ್ತು ಬೆಳೆಯಾಗಿ ಅದು ಪ್ರಸಿದ್ಧಿಯಾಗಿತ್ತು. ರಾಜಾಪುರ ಮತ್ತು ವೆಂಗುರ್ಲೆಗಳ ಸುತ್ತ ಮುತ್ತಲೂ ಮೆಣಸನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು. ವೆಂಗುರ್ಲೆಯ ಪರಿಸರವು 'ಏಲಕ್ಕಿ'ಗಾಗಿ ತುಂಬ ಪ್ರಸಿದ್ಧಿಯಾಗಿತ್ತು.[೪೭] ಕರ್ನಾಟಕದ ಭಟ್ಕಳ ಮತ್ತು ಕಾರವಾರ ಪರಿಸರದಲ್ಲೂ ಏಲಕ್ಕಿಯನ್ನು ಬೆಳೆಯುತ್ತಿದ್ದರು.

ಎಲೆ ಬಳ್ಳಿ ಸುತ್ತಲೂ ಬೆಳೆಯುವ ಮೆಣಸು, ಏಲಕ್ಕಿಗಳನ್ನು ಚೌಲದಿಂದ ಭಟ್ಕಳ ಬಂದರದ ವರೆಗಿನ ಪ್ರದೇಶಗಳೆಲ್ಲೆಲ್ಲ ಬೆಳೆಯಲಾಗುತ್ತಿತ್ತು. ಜೊತೆಗೆ ಅಡಿಕೆಯ ಗಿಡಗಳು ಇದ್ದವು. ವೀಳಯದ ಎಲೆ ಮತ್ತು ಅಡಿಕೆಗೆ ರಾಜ್ಯದಲ್ಲಿಯೆ ಅಪಾರ ಬೇಡಿಕೆ ಇತ್ತಾದರು ಮೆಣಸು-ಏಲಕ್ಕಿಗಳು ವಿದೇಶಿ ವಿನಿಮಯಗಳಿಸುವಲ್ಲಿ ಪ್ರಸಿದ್ಧವಾಗಿದ್ದುವು. ಕೊಂಕಣ ಮತ್ತು ಕರಾವಳಿ ಪ್ರದೇಶದಲ್ಲಿ ಬೆಳೆಯುವ ಇನ್ನು ಎರಡು ವ್ಯಾಪಾರಿ ಬೆಳೆಗಳೆಂದರೆ, ತೆಂಗು ಮತ್ತು ಗೋಡಂಬಿಯಾಗಿತ್ತು. ರಾಜ್ಯದ ಪೂರ್ವದ ಪ್ರದೇಶವು ಕಪ್ಪು ಎರೆ ಮಣ್ಣಿಗೆ ಪ್ರಸಿದ್ಧವಾಗಿದ್ದು ಅಲ್ಲಿ ಹತ್ತಿಯನ್ನು ಅಧಿಕವಾಗಿ ಬೆಳೆಯಲಾಗುತ್ತಿತ್ತು. ಆದಿಲ್‌ಶಾಹಿಗಳ ಕಾಲದಲ್ಲಿ ಹತ್ತಿ ಬೆಳೆಗೆ ಅಧಿಕ ಉತ್ತೇಜನ ದೊರೆಯಿತು.

[illegible]

[illegible]

[illegible]

[illegible]

[illegible]

[illegible]

ನೀರಾವರಿ :

ಕರಾವಳಿ ಮತ್ತು ಕರ್ನಾಟಕ ಪ್ರದೇಶದ ರೈತರು ಮಳೆಯ ಮೇಲೆ ಅವಲಂಬಿತರಾಗಿದ್ದಾರೆ. ಮಳೆಗಾಲದ ನಂತರ ರೈತರು, ಕೆರೆ, ಭಾವಿ, ಜಲಾಶಯ, ಕೊಳ್ಳ ಪ್ರಮುಖವಾದ ಆಧಾರವಾಗಿತ್ತು. ಫ್ರೆಂಚ ಪ್ರವಾಸಿ ಟವರ್ನಿಯರ ಪ್ರಕಾರ ಗೋಲ್ಕೊಂಡ ರಾಜ್ಯದಲ್ಲಿ ಅಧಿಕ ಕೆರೆ ಮತ್ತು ಭಾವಿಗಳನ್ನು ನೋಡಬಹುದೆಂದಿದ್ದಾನೆ.[೪೮] ಅದೇ ರೀತಿಯಾಗಿ ಬಿಜಾಪುರ ಆದಿಲ್‌ಶಾಹಿ ರಾಜ್ಯದಲ್ಲಿಯೂ ಕೂಡ ನಿರಾವರಿಗಾಗಿ ಕೆರೆ, ಕಾಲುವೆ, ಭಾವಿ, ಜಲಾಶಯಗಳು ಕಟ್ಟಿಸಿದ್ದನ್ನು ಮುಸ್ಲಿಮರಿಗಿಂತ ಮುಂಚೆ ಮತ್ತು ಮುಸ್ಲಿಮರ ಕಾಲದಲ್ಲಿ ಕಾಣಬಹುದು. ಅವುಗಳಲ್ಲಿ ಪ್ರಮುಖವೆಂದರೆ, ಬಿಜಾಪುರ, ಇಂಡಿ, ಬಾಗಲಕೋಟ, ಮುದ್ದೇಬಿಹಾಳ, ಸಿಂದಗಿ ಮುಂತಾದವುಗಳು. ಆದಿಲ್‌ಶಾಹಿಗಳ ಕಾಲದಲ್ಲಿ ಸರಕಾರವು ಕೆರೆಗಳನ್ನು, ಕಾಲುವೆಗಳನ್ನು ನಿರ್ಮಿಸಲು ಕ್ರಮ ಕೈಕೊಂಡಿದ್ದರಿಂದ ಆರ್ಥಿಕವಾಗಿ ಸಮೃದ್ಧಿಯನ್ನು ಸಾಧಿಸಲು ಸಾಧ್ಯವಾಯಿತು. ವ್ಯವಸಾಯದ ಭವಿತವ್ಯವನ್ನು ಗಮನಿಸಿದ ಒಂದನೆಯ ಅಲಿ ಆದಿಲ್‌ಶಾಹನು ನೀರಿನ ಪೂರೈಕೆ ಕುರಿತು ವ್ಯವಸ್ಥೆಯನ್ನು ಮಾಡಿದ ಮೊದಲ ಆದಿಲ್‌ಶಾಹಿ ಸುಲ್ತಾನನಾಗಿದ್ದಾನೆ. ಬಿಜಾಪುರದಿಂದ ಪಶ್ಚಿಮಕ್ಕೆ ಅರ್ಧ ಮೈಲು ದೂರದಲ್ಲಿರುವ ತೋರವಿಯ ಹತ್ತಿರ ಒಂದು ಸೂಕ್ತವಾದ ಪ್ರದೇಶವನ್ನು ಆಯ್ದುಕೊಂಡು ಆಣೆಕಟ್ಟನ್ನು ಕಟ್ಟಿಸಿದನು. ಅದು ನೀರನ್ನು ಸಂಗ್ರಹಿಸಲು ಸೂಕ್ತವಾದ ಸ್ಥಳವಾಗಿತ್ತು. ಅದನ್ನು ಹಳ್ಳವೊಂದಕ್ಕೆ ಅಡ್ಡಲಾಗಿ ಕಟ್ಟಲಾಗಿತ್ತು. ಅಲ್ಲಿಂದ ಸ್ವಲ್ಪ ದೂರದಲ್ಲಿ ಒಂದು ಕೆರೆಯನ್ನು ಕಟ್ಟಿಸಿ, ಮುಖ್ಯ ಕೆರೆಯಿಂದ ಕಾಲುವೆಗಳ ಮೂಲಕ ನೀರು ಬಂದು ಸೇರುವಂತೆ ಮಾಡಲಾಗಿತ್ತು. ಅಲ್ಲಿಂದ ವಿವಿದೋದ್ದೇಶಗಳಿಗಾಗಿ ನೀರನ್ನು ಬಳಸಿಕೊಳ್ಳಲಾಗುತ್ತಿತ್ತು.[೪೯]

ಆದಿಲ್‌ಶಾಹಿ ಸುಲ್ತಾನರು ನೀರಾವರಿಗೊಸ್ಕರ ಹಲವಾರು ಕೆರೆಗಳನ್ನು ಕಟ್ಟಿದ್ದರು ಅದರಲ್ಲಿ ಪ್ರಮುಖವೆಂದರೆ, ಫತೇಪುರ ಮತ್ತು ಅಲ್ಲಾಪುರ ಕೆರೆ (ಬಿಜಾಪುರದ ಪೂರ್ವದ ಕಡೆ), ರಂಗರೇಜ ಕೆರೆ(ಉತ್ತರದ ಶಹಾಪುರ ಮತ್ತು ಬಮ್ಮನ್ನಹಳ್ಳಿ ಬಾಗಿಲ ಹತ್ತಿರ), ಕಾಸಿಂ ಕೆರೆ(ಉತ್ತರ ಅರ್ಧ ಕಿ.ಮಿ ದೂರು) ಅದಲ್ಲದೇ ಹೋನವಾಡ ಕೆರೆ, ಆಲಮೇಲ ಕೆರೆ ಮುಂತಾದವುಗಳು. ಬೇಸಿಗೆ ತಂಗದಾಣವಾದ ಕುಮಟಗಿಯಲ್ಲಿಯೂ ಸಹ ಕೆರೆಯನ್ನು ಕಟ್ಟಿಸಿದು, ಅಲ್ಲಿ ರಾಜಪರಿವಾದವರು ವಿಹಾರಕ್ಕೆ ಹೋಗಿ ಜಲ ಕ್ರೀಡೆಗಳನ್ನು ಆಡುತ್ತಿದ್ದರು ಅಲ್ಲಿ ನೀರು ಸಹ ನೀರಾವರಿಗಾಗಿ ಬಳಿಸಕೊಳ್ಳಲಾಗುತ್ತಿತ್ತು.[೫೦]

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಬಿಜಾಪುರದಿಂದ ೨೨ ಮೈಲು ದೂರವಿರುವ ಮಹಮ್ಮದಪುರ(ಮಮದಾಪುರ) ಗ್ರಾಮದಲ್ಲಿ ಎರಡು ಕೆರೆಗಳನ್ನು ಕಟ್ಟಿಸಿದನು. ಅಲ್ಲಿಯ ಶಾಸನದ ಪ್ರಕಾರ ಬಡಾ ತಾಲಾಬ(ದೊಡ್ಡ ಕೆರೆ)ಯನ್ನು ೧೬೩೩-೩೪ ರಲ್ಲಿ ಕಟ್ಟಲಾಯಿತು. ಇದು ಮಹಮ್ಮದ ಆದಿಲ್‌ಶಾಹನ ಮುಖ್ಯಮಂತ್ರಿಯಾದ ಖವಾಸಖಾನ ನೇತೃತ್ವದಲ್ಲಿ ನಿರ್ಮಿಸಲಾಯಿತು. ಈ ಕೆರೆಗೆ ಸುಲ್ತಾನಾ ಬೇಗಂ ಕೆರೆ ಎಂದು ಹೆಸರಿಸಲಾಯಿತು. ಈ ಬೃಹತ ಕೆರೆಯನ್ನು ಕಟ್ಟಲು ಸುಮಾರು ೫೦ ಸಾವಿರ ಹೊನ್ನ ವೆಚ್ಚವಾಯಿತು. ಇದೇ ತರಹದ ಇನ್ನೊಂದು ಶಾಸನ ಚೋಟಾ ತಾಲಾಬ(ಸಣ್ಣ ಕೆರೆ)ಯಲ್ಲಿತ್ತು ಈಗ ಮಮದಾಪುರದ

ಜಾಮಿಯಾ ಮಸೀದೆಯಲ್ಲಿದೆ. ಇದನ್ನು ಸಹ ೧೬೩೩–೩೪ ರಲ್ಲಿ ಕಟ್ಟಿಸಲಾಯಿತು. ಈ ಕೆರೆಗಳು ಕಟ್ಟುವ ಮುಖ್ಯ ಉದ್ದೇಶವೆಂದರೆ ಹೊಲ ಮತ್ತು ತೋಟಗಳಿಗಾಗಿ ನೀರಾವರಿ ವ್ಯವಸ್ಥೆ ಮಾಡಲು ಮತ್ತು ದಿನಬಳಕೆಗಾಗಿ ಕಟ್ಟಲಾಗಿದೆ[೫೧]. ಇದು ಮಳೆಗಾಲದಲ್ಲಿ ಸಂಪೂರ್ಣವಾಗಿ ತುಂಬಿಕೊಂಡು ಬಹಳ ದಿನಗಳವರೆಗೂ ಇದರಲ್ಲಿ ನೀರು ಇರುತ್ತಿತ್ತು. ಇಂತಹ ಬೃಹತ ಪ್ರಮಾಣದ ಕೆಲಸ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಾಗಿದ್ದು, ಅವನ ದೊಡ್ಡ ವ್ಯಕ್ತಿತ್ವವನ್ನು ನಿರೂಪಿಸುತ್ತದೆ. ಇವನು ಬಿಜಾಪುರದಲ್ಲಿಯೂ ಸಹ ಬೇಗಂ ತಲಾಬ(ಕೆರೆ)ಯನ್ನು ಕಟ್ಟಿಸಿ, ಮಣ್ಣಿನ ಪೈಪುಗಳನ್ನು ಬಳಿಸಿ ಸುಮಾರು ೨–೩ ಕಿ.ಮಿ. ದೂರದಿಂದ ಊರಿನ ಒಳಗಡೆ ಕೂಡಿಯುವ ನೀರನ್ನು ತಂದಿದ್ದು ಆ ಕಾಲ ತಂತ್ರಜ್ಞಾನವನ್ನು ಮೆಚ್ಚುವಂತದು. ಹೀಗೆ ಆದಿಲ್‌ಶಾಹಿಗಳ ಕಾಲದಲ್ಲಿ ಅನೇಕ ಕೆರೆ, ಭಾವಿಗಳು ನೀರಾವರಿಗಾಗಿ ಕಟ್ಟಲ್ಪಟ್ಟವು.

ಇದಲ್ಲದೇ ನಗರದ ನೀರಿನ ಸೌಕರ್ಯಕ್ಕಾಗಿ, ಒಂದನೆಯ ಅಲಿಯು ತನ್ನ ಹೆಂಡತಿಯಾದ ಚಾಂದಬೀಬಿಯ ನೆನಪಿಗೋಸ್ಕರ ಚಾಂದ ಬಾವಡಿ ಎಂಬ ಭೃಹತ ಭಾವಿಯೊಂದನ್ನು ಕಟ್ಟಿಸಿದನು. ಅದರಂತೆ ಗುಲ್ಬರ್ಗಾ ಜಿಲ್ಲೆಯ ಯಾದಗೀರ ತಾಲೂಕಿನ ದೋರನ ಹಳ್ಳಿ ಗ್ರಾಮದ ಮಸೀದೆಯ ಮುಂದಿನ ಭಾಗದಲ್ಲಿ ಭಾವಿಯೊಂದನ್ನು ಕಟ್ಟಿಸಲಾಯಿತು. ಚಾಂದಬೀಬಿಯು ಗುಲ್ಬರ್ಗಾ ನಗರಕ್ಕೆ ಹತ್ತಿರ ಹೀರಾಪುರದ ಗ್ರಾಮದಲ್ಲಿ ಮಸೀದೆಯ ಮುಂದಿನ ಭಾಗದಲ್ಲಿ ಸಾರ್ವಜನಿಕರಿಗಾಗಿ ಭಾವಿಯೊಂದನ್ನು ಕಟ್ಟಿಸಿದಳು. ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ತನ್ನ ರಾಣಿಯಾದ ತಾಜಸುಲ್ತಾನಾಳ ಹೆಸರಿನಿಂದ 'ತಾಜಬಾವಡಿ'ಯನ್ನು ಕಟ್ಟಿಸಿದನು. ಇದಲ್ಲದೇ ಅನೇಕ ಭಾವಿಗಳನ್ನು ಸುಲ್ತಾನ ಮತ್ತು ಅವರ ಸರದಾರರು ಕಟ್ಟಿಸಿದ್ದರು. ಅವು ಈ ರೀತಿಯಾಗಿವೆ. ಬಡೀಬಾವಡಿ, ಇಲಾಲ ಬಾವಡಿ, ಮುಬಾರಕಖಾನ ಬಾವಡಿ, ನಾಗರ ಬಾವಡಿ, ಇಖ್ಲಾಸಖಾನ ಮಸೀದಿ ಬಾವಡಿ, ಮಾಸಾ(ಮಾ ಸಾಹೀಬಾ) ಬಾವಡಿ, ನೀಮ ಬಾವಡಿ, ರಫೀಯಾ ಬಾವಡಿ, ಖವಾಸಖಾನ ಅರಮನೆ ಬಾವಡಿ ಮತ್ತು ಪಾದಶಾಹ ಬಾವಡಿ, ಪಂಚ ಚಾವರ ಬಾವಡಿ, ಪಾಹಡಖಾನ ಮಸೀದಿ ಬಾವಡಿ, ಅಲ್ಲಾಹಪುರ ಮಸೀದಿ ಬಾವಡಿ, ಜೋಡ ಗುಮ್ಮಡ ಬಾವಡಿ, ನಗೀನಾಬಾಗ ಬಾವಡಿ, ಥಲ್ಲ ಬಾವಡಿ, ಬಸರೀ ಬಾವಡಿ, ಬಾರಾಕಮಾನ ಬಾವಡಿ, ಇಬ್ರಾಹಿಮಪುರ ಬಾವಡಿ, ಹಾಶಿಂಪೀರ ಬಾವಡಿ, ದೌಲತಕೋಟಿ ಬಾವಡಿ, ಜನಸಾಬ ಬಾವಡಿ, ಆಘಾಪುರ ಬಾವಡಿ, ರೋಜಾ ಬಾವಡಿ, ಗ್ಯಾಂಗ ಬಾವಡಿ, ಅಫಝುಲ್ಲ್‌ಖಾನ ಅರಮನೆ ಬಾವಡಿ, ಚಪ್ಪರಬಂದ ಬಾವಡಿ ಮುಂತಾದವುಗಳು. ಇದಲ್ಲದೆ ಬಿಜಾಪುರ ಸುತ್ತಮುತ್ತಲಿನ ಪ್ರದೇಶಗಳಾದ ತೋರವಿ, ತಿಕೋಟಾ, ಕದಿಜಾಪುರ(ಖತೀಜಾಪುರ), ಉತ್ನಾಳ ಮುಂತಾದವುಗಳಲ್ಲಿ ಕೂಡ ಅನೇಕ ಆದಿಲ್‌ಶಾಹಿಗಳ ಕಾಲದ ಭಾವಿಗಳನ್ನು ನೋಡಬಹುದಾಗಿದೆ. ಯುದ್ಧದ ಸಮಯದಲ್ಲಿ ಶತ್ರುಗಳು ಹೊರಗಿನ ಕೆರೆಗಳ ಮೂಲಕ ಬರುವ ನೀರನ್ನು ತಡೆದರೆ ಕೋಟೆಯ ಒಳಗಡೆ ಇರುವ ಈ ಎಲ್ಲಾ ಭಾವಿಗಳಿಂದ ಜನತೆಗೆ ನೀರು ಪೊರೈಕೆಯಾಗುತ್ತಿತ್ತು. ಕ್ಯಾಪ್ಟನ್ ಸೈಕಸು ಅವರ ದಾಖಲೆ ಪ್ರಕಾರ ೭೦೦ ಮೇಟ್ಟಿಲುಗಳ ಭಾವಿ ಮತ್ತು ೩೦೦ ಮೇಟ್ಟಿಲುಗಳಿಲ್ಲದ ಭಾವಿಗಳಿದ್ದವೆಂದು ನಮೂದಿಸಿದ್ವಾನೆ.[೫೨]

ಕೈಗಾರಿಕೆಗಳು :

ಅರ್ಥ ವ್ಯವಸ್ಥೆಯಲ್ಲಿ ಭೂಮಿಗಿರುವಷ್ಟು ಪ್ರಾಮುಖ್ಯತೆ ಕೈಗಾರಿಕೆಗಳಿಗೂ ಇತ್ತು. ನಗರಗಳು ಬೆಳೆದಂತೆಲ್ಲ, ಜನರ ಬೇಡಿಕೆಗಳು ಹೆಚ್ಚಿದಂತೆ ಉದ್ಯೋಗದ ಕಡೆ ಹೆಚ್ಚು ಒಲವನ್ನು ತೋರಿಸಿದ್ದರಿಂದ ಕೈಕಾರಿಕೆಗಳು ದೊಡ್ಡ ಪ್ರಮಾಣದಲ್ಲಿ ಆರಂಭವಾದವು. ನಗರಗಳ ಅಭ್ಯುದಯವು ಸಂಪೂರ್ಣವಾಗಿ ಸುಲ್ತಾನರ ಆಸ್ಥಾನಗಳ ಪೋಷಣೆಯನ್ನುಅವಲಂಬಿಸಿದವು. ಆಸ್ಥಾನಗಳು ಯಾವಗಲೂ ಅಮೂಲ್ಯವಾದ ಸರಕುಗಳಿಗೆ ಗ್ರಾಹಕರಾಗಿದ್ದವು. ಹತ್ತಿ ಬಟ್ಟೆ, ಕಸೂತಿ ಕೆಲಸ, ಚಿನ್ನ, ಬೆಳ್ಳಿ ಕೆಲಸ ಇಂತಹ ಕರಕುಶಲ ಕಲೆಗಳು ಈ ಕೇಂದ್ರದಲ್ಲಿ ಅಭಿವೃಧಿದೊಂಡವಲ್ಲದೆ, ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಕೇಂದ್ರಗಳಾಗಿ ಬೆಳೆದವು.

ಬಿಜಾಪುರದ ರಾಜ್ಯದಲ್ಲಿ ಅರಳೆ ಮತ್ತು ರೇಶ್ಮೆಯ ನೇಯ್ಗೆಯ ಉದ್ಯೋಗವು ಊರ್ಜಿತಾವಸ್ಥೆಯಲ್ಲಿತ್ತು. ಕರ್ನಾಟಕದಲ್ಲಿ ಹತ್ತಿ ಹುಲಸಾಗಿ ಬೆಳೆಯುತ್ತಿತ್ತು. ರೇಶ್ಮೆಯನ್ನು ಚೀನಾದಿಂದ ಆಮದು ಮಾಡಿಕೊಳ್ಳುತ್ತಿದ್ದರು.[೫೩] ನೂಲು ಮತ್ತು ರೇಶ್ಮೆ ಕಾರಖಾನೆಗಳು ಬಹುತೇಕವಾಗಿ ಬಂದುರುಗಳ ಸಮೀಪದಲ್ಲಿರುತ್ತಿದ್ದುವು. ಅವುಗಳಿಗೆ ಬೇಕಾಗುವ ಹತ್ತಿಯು ಹಿನ್ನಾಡಿನಿಂದ ಬರುತ್ತಿತ್ತು. ಕೈಮಗ್ಗದ ನೇಯ್ಗೆಯು ಒಳನಾಡಿನಲ್ಲೂ ಹಳ್ಳಿ-ಪಟ್ಟಣಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿತ್ತು. ಕೊಂಕಣದ ಬಂದರಗಳಾದ ಚೌಲ, ಧಾಬೋಳ, ರಾಜಾಪುರ ಮತ್ತು ವೆಂಗುರ್ಲೆಗಳ ಸುತ್ತ ಮುತ್ತ ಇಂದಿಗೂ ಉಳಿದುಕೊಂಡಿವೆ. ಅದರಂತೆ ರಾಜಧಾನಿ ಬಿಜಾಪುರದ ಸುತ್ತಮುತ್ತ ಮತ್ತು ಹತ್ತಿ ಬೆಳೆಯುವ ರಾಯಚೂರ ಮತ್ತಿತರ ಪ್ರದೇಶಗಳಲ್ಲಿ ನೇಕಾರಿಕೆ ಇಂದಿಗೂ ಊರ್ಜಿತಾವಸ್ಥೆಯಲ್ಲಿದೆ. ಮಹಿಳೆಯರಿಗೆ ಅಗತ್ಯವಾಗಿದ್ದ ಸೀರೆಗಳು ಮತ್ತು ಇತರ ಬಟ್ಟೆಗಳು ಧಾರವಾಡ ಹಾಗೂ ಸುತ್ತಮುತ್ತ ತಯಾರಿಸುತ್ತಿದ್ದರು. ಇಂತಹ ವ್ಯಾಪಾರಭಿವೃದ್ದಿಗೆ ಸರಕಾರ ಹೆಚ್ಚಿನ ಗಮನ ಕೊಡುತ್ತಿತ್ತು. ವಿವಿಧ ಬಣ್ಣದ ಹಾಗೂ ಬಗೆ-ಬಗೆಯ ನೂಲಿನ ಹಾಗೂ ರೇಶ್ಮೆಯ ಬಟ್ಟೆಗಳನ್ನು ತಯಾರಿಸಲು ಈ ಪ್ರದೇಶಗಳು ಪ್ರಸಿದ್ಧವಾಗಿದ್ದುವು. ಈ ಪ್ರದೇಶದಲ್ಲಿ ತಯಾರಾದ ಅರಳೆಯ ಬಟ್ಟೆಗೆ ಪರ್ಶಿಯಾ, ಅರೇಬಿಯಾ ಮತ್ತು ಪೂರ್ವ ಆಫ್ರಿಕದ ದೇಶಗಳಲ್ಲಿ ಬಹು ಬೇಡಿಕೆ ಇತ್ತು. ಸರಕಾರವು ಕೈಮಗ್ಗದ ಉದ್ಯೋಗದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿತ್ತಲ್ಲದೆ, ಕೆಲವು ವಿಷಯಗಳಲ್ಲಿ ಕರ ವಿನಾಯಿತಿಯನ್ನೂ ನೀಡಲಾಗಿತ್ತು. ರಾಜ್ಯದ ದಕ್ಷಿಣ ಭಾಗಗಳಲ್ಲಿ ವಿಶೇಷವಾಗಿ ಹುಬ್ಬಳ್ಳಿ, ಲಕ್ಷ್ಮೇಶ್ವರ ಮತ್ತು ಕಾರವಾರದ ಹಿನ್ನಾಡಿನಲ್ಲಿ ಕೈಮಗ್ಗದ ಉದ್ಯೋಗಗಳು ಇದ್ದವು.[೫೪]

ಬಿಜಾಪುರ ರಾಜ್ಯದಲ್ಲಿ ಕೆಲವು ಕಡೆಗಳಲ್ಲಿ ಅಮೂಲ್ಯ ಇಂದ್ರನೀಲ. ರನ್ನಗಳು, ಹರಳುಗಳು ದೊರೆಯುತ್ತಿದ್ದವು. ಆದರೆ ಎಲ್ಲ ವಿದೇಶಿ ಪ್ರವಾಸಿಗರು ಬಹು ಮುಖ್ಯವಾಗಿ ವಜ್ರದ ಖಣಿಗಳು ಇದ್ದವು ಎಂದು ಉಲ್ಲೇಖಿಸಿದ್ದಾರೆ. ಆದಿಲ್‌ಶಾಹಿಗಳ ರಾಜ್ಯದಲ್ಲಿನ ವಜ್ರಗಳು ಸುಪ್ರಸಿದ್ದವಾಗಿದ್ದವು. ಸುಮಾರು ೧೫ ಗಣಿಗಳಿದ್ದವೆಂದು ಅವುಗಳಲ್ಲಿ ಮುಖ್ಯವಾಗಿ ರಾಮುಲಕೋಟ ಅಥವಾ ರಾವಳಕೊಂಡಾದಲ್ಲಿ ಬಹುದೊಡ್ಡ ಗಣಿಗಳಿದ್ದವು. ಆದರೆ ತುಕದಲ್ಲಿ ಗೋಲ್ಕೊಂಡದ ವಜ್ರಗಳಿಗೆ ಸಮನಾಗಿರುತ್ತಿಲ್ಲವೆಂದು ಹೇಳುತ್ತಾರೆ. ಗಣಿಗಳ ಹತ್ತಿರ ಅಸಂಖ್ಯ ವಜ್ರ ಕತ್ತರಿಸುವ ಕರಕುಶಲಗಾರರು ಇರುತ್ತಿದ್ದರು. ಈ ಉದ್ಯೋಗವು ಹೆಚ್ಚಾಗಿ ಗುಜರಾತಿಗಳ

[illegible]

ಕೈಯಲ್ಲಿ ಇರುತ್ತಿತ್ತು. ಅಲ್ಲಿ ತಯಾರಾದ ವಜ್ರಗಳನ್ನು ಮಾರಾಟಕ್ಕಾಗಿ ಗೋವಾ, ಬಿಜಾ'ಪುರ, ಸುರತ, ಆಗ್ರಾ, ದೆಹಲಿಗಳಿಗೆ ಕಳಿಸಲಾಗುತ್ತಿತ್ತು ಎಂದು ಟ್ರಾವರ್ನಿಯರ ಹೇಳುತ್ತಾನೆ.

ಬಿಜಾಪುರ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಸಾಮಾನ್ಯವಾಗಿ ಕುಂಬಾರಿಕೆ ನಡೆಯುತ್ತಿತ್ತು. ಈ ಕಾಲದಲ್ಲಿ ಇದು ಕೂಡ ಪ್ರಮುಖವಾದ ಕೈಗಾರಿಕೆಯಾಗಿತ್ತು. ಕುಂಬಾರರು ನದಿ ದಂಡೆಯಲ್ಲನ ಮಣ್ಣನ್ನು ತಂದು ನಾಲ್ಕು ದಿನಗಳವರೆಗೆ ನೀರಿನಲ್ಲಿ ನೆನೆಸಿ, ಚಕ್ರದ ಸಹಾಯದಿಂದ ವಿವಿಧ ತರಹದ ಮಡಕೆಗಳನ್ನು ತಯಾರಿಸುತ್ತಿದ್ದರು. ಇದಲ್ಲದೆ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಈ ಕುಂಬಾರರು ಮಣ್ಣಿನ ಪೈಪುಗಳೂ(ಕೊಳವೆ) ಕೂಡ ತಯಾರಿಸಿದರು. ಇವನು ಬಿಜಾಪುರದಿಂದ ೩ಕಿ.ಮಿ. ದೂರದಲ್ಲಿ ನಿರ್ಮಿಸಿದ ಬೇಗಂ ತಲಾಬದಿಂದ ನಗರಕ್ಕೆ ನೀರು ಸರಬರಾಜು ಮಾಡಲು ಮಣ್ಣಿನ ಪೈಪು(ಕೊಳವೆ) ನಿರ್ಮಿಸಲು ಆದೇಶ ಮಾಡಿದನು. ಅಲ್ಲದೆ ಕುಂಬಾರ ಮನೆತನಕ್ಕೆ ಜಹಗೀರನ್ನು ಸಹ ನೀಡಿದನು ಅಂತಹ ಮನೆತವೊಂದು ಬಿಜಾಪುರದಲ್ಲಿದೆ. ಅವರು ಮಾಡಿದ ಸೇವೆಗಾಗಿ ಅವರಿಗೆ ನಾಡಗೌಡಕಿಯನ್ನು ಕೊಟ್ಟಿದ್ದು ವಿಶೇಷವಾಗಿದೆ. ಈ ದಾಖಲೆಯನ್ನು ಈ ಮನೆತನದರಾದ ನಿವೃತ ಪ್ರಾಚಾರ್ಯರಾದ ಪ್ರೋ.ಬಿ.ಬಿ. ನಾಡಗೌಡರು ಈ ಅಪರೂಪದ ದಾಖಲೆಯನ್ನು ಸಂರಕ್ಷಿಸಿ ಇಟ್ಟಿದ್ದಾರೆ, ಇದು ಸುಮಾರು ೪ ಅಂಗುಲ ಅಗಲ ಮತ್ತು ೪೦ ಅಡಿ ಉದ್ದ ಇದೆ. ಇದರಲ್ಲಿ ನಿವಾಡ ಪತ್ರ (ನ್ಯಾಯ ಪತ್ರ), ಮೊಗಲ–ಮರಾಠ ಮತ್ತು ಅಸಫಜಾಹಿ ಯುದ್ಧ ವರ್ಣನೆ, ಖಂಡ ಖರೀದಿ ಪತ್ರ ಮತ್ತು ಖಂಡ ಖರೀದಿ ಪತ್ರ ಹೀಗೆ ನಾಲ್ಕು ವಿಷಯಗಳನ್ನು ತಿಳಿಸುವ ಕಾಗದ ಇದಾಗಿದೆ.

ಪರಂಪರೆಯಿಂದ ಕೇಳಿ ಬಂದಂತೆ ಮನಗೂಳಿಯ ಕುಂಬಾರರಲ್ಲಿಯ ಒಂದು ಮನೆತನವು ಬಸನಿಂಗಪ್ಪ ನಿಂಗಪ್ಪ ಎಂಬ ಮೂಲ ಪುರುಷನಿಂದ ಮುಂದುವರಿದ ಮನೆತನಕ್ಕೆ ಆದಿಲ್‌ಶಾಹಿಯಿಂದ 'ನಾಡಗೌಡಕಿ' ವತನು ದೊರೆತಿತ್ತು. ಅದನ್ನು ಕ್ರಿ.ಶ ೧೬೨೬–೧೬೫೬ರ ಮಧ್ಯದಲ್ಲಿ ಆಳಿದ ಮಹಮ್ಮದ ಆದಿಲ್‌ಶಾಹನು ಕೊಟ್ಟನೆಂದು ಪ್ರತೀತ ಇದೆ.

ವಿಜಯನಗರ ಪತನಾನಂತರ ಬಿಜಾಪುರ ನಗರವು ದಿಢೀರ್ ಎಂದು ಬೆಳೆಯಿತು. ಯುದ್ಧ ನಿರಾಶ್ರಿತರು ವಲಸೆ ಬಂದ ಕಾರಣದಿಂದಾಗಿ ನಗರದ ವಸತಿ, ನೀರು, ರಕ್ಷಣೆಗಾಗಿ ಕೋಟೆ–ಕೊತ್ತಲ ಇವುಗಳ ಕಡೆಗೆ ಸುಲ್ತಾನರು ತೀವ್ರ ಗಮನ ಕೊಡಬೇಕಾಯಿತು. ಮೊದಲನೆ ಅಲಿ ಆದಿಲ್‌ಶಾಹನು ಕೋಟೆ–ಕೊತ್ತಲಗಳಲ್ಲದೆ ಅನೇಕ ಉಪನಗರಗಳನ್ನು ಕಟ್ಟಿ ಅವುಗಳಿಗೆ ನೀರು ಸರಬರಾಜು ಆಗುವಂತೆ ತೊರವೆಯ ಹತ್ತಿರದ ಕೆರೆಯನ್ನು(ರಾಮಲಿಂಗ ಕೆರೆ)ಕಟ್ಟಿದನು. ಆತನ ನಂತರ ಬಂದ ಎರಡನೆ ಇಬ್ರಾಹಿಮ ಆದಿಲ್‌ಶಾಹನು ತಾಜಬಾವಡಿ ಮೊದಲಾದ ದೊಡ್ಡ ಭಾವಿಗಳನ್ನು ತೋಡಿದನು. ಆತನ ಮಗ ಮಹಮ್ಮದ ಆದಿಲ್‌ಶಾಹನ ಕಾಲಕ್ಕೆ ನಗರ ಇನ್ನೂ ಬೆಳೆದು ನಗರದ ಸುತ್ತಮುತ್ತ ಸುಮಾರು ೨೫ ಉಪನಗರಗಳು ಹುಟ್ಟಿಕೊಂಡವು. ಜನ ವಸತಿಯು ಸುಮಾರು ೧೩ ಲಕ್ಷಕಿಂತ ಅಧಿಕವಾಗಿತ್ತು ಎಂದು ಕೆಲವು ದಾಖಲೆಗಳು ಹೇಳುತ್ತವೆ.

ಈಗ ಮಹಮ್ಮದ ಆದಿಲ್‌ಶಾಹನು ಮತ್ತೊಮ್ಮೆ ನೀರಿನ ವ್ಯವಸ್ಥೆಗಾಗಿ ನಗರದ ದಕ್ಷಿಣ ಭಾಗಕ್ಕೆ ಸುಮಾರು ೩ ಕಿ.ಮಿ ಅಂತರದಲ್ಲಿ ಕೆರೆಯನ್ನು ಕಟ್ಟಿ (ಬೇಗಂ ತಾಲಾಬ) ನಗರಕ್ಕೆ ನೀರು ತಂದನು. ರಾಮಲಿಂಗ ಕೆರೆಯಿಂದ ಭೂಗತ ಕಾಲುವೆಗಳ ಮುಖಾಂತರ ನೀರು ಹರಿದಿದ್ದರೆ ಇಲ್ಲಿ ಬೇಗಂ ತಾಲಾಬದಿಂದ ಮಣ್ಣಿನ ಕೊಳವೆಗಳ ಮುಖಾಂತರ ನೀರನ್ನು ನಗರಕ್ಕೆ ತಂದನು. ಆಧುನಿಕ ಕಾಲದಲ್ಲಿ ಕಬ್ಬಿಣ-ಪ್ಲಾಸ್ಟಿಕ ಪೈಪುಗಳ ಮೂಲಕ ನೀರನ್ನು ಮನೆ-ಮನೆಗೆ ತಂದಂತೆ ಈ ಬಾದಶಹನು ಮಣ್ಣಿನ ಪೈಪುಗಳ ಮೂಲಕ ನೀರನ್ನು ತಂದದ್ದು ವಿಶೇಷವಾಗಿದೆ. ಈ ಕೊಳವೆ ಸುಮಾರು ೩ ಅಡಿಯಿಂದ ೫ ಅಡಿ ಉದ್ದವಾಗಿದ್ದು ಒಂದನ್ನು ಇನ್ನೊಂದಕ್ಕೆ ಕೂಡಿಸಲು ಒತ್ತಿ ಬರುವ ಕಂಠಗಳನ್ನು (ಈಟಚಿಟಿಉ) ಮಾಡಿದ್ದಾರೆ. ಕೋಟೆಯ ಒಳಗಡೆಯವರೆಗೂ ಈ ರೀತಿ ನೀರನ್ನು ತಂದರು. ನಗರದಲ್ಲಿ ನೀರು ಪ್ರವೇಶಿಸಿದಾಗ ಅಲ್ಲಿ ಎತ್ತರವಾದ ಚೌಕೋನಾಕಾರದ ನೀರುಗೋಪುರಗಳನ್ನು ಕಟ್ಟಿ ನೀರನ್ನು ಸಂಗ್ರಹಿಸಿ ಮುಂದೆ ಬಿಡುತ್ತಿದ್ದರು. ಮಣ್ಣಿನ ಕೊಳವೆಗಳು ಕೆಸರಿನಿಂದ ತುಂಬಿ ನೀರಿನ ಪ್ರವಾಹ ಕುಂಠಿತಗೊಂಡು ತನ್ನ ಒತ್ತಡವನ್ನು ಕಳೆದುಕೊಳ್ಳಬಾರದೆಂದು ಈ ರೀತಿ ವ್ಯವಸ್ಥೆ ಮಾಡಿದರು. ಈ ಗೋಪುರಗಳಲ್ಲಿ ನೀರಿನ ಪ್ರವೇಶವು ಕೆಳಭಾಗದಲ್ಲಿದ್ದರೆ ಹೊರಗೆ ಹೋಗುವ ವ್ಯವಸ್ಥೆ ಮೇಲ್ಭಾಗದಲ್ಲಿದೆ. ಅದರಿಂದ ಕೊಳವೆಗಳ ಮುಖಾಂತರ ಪ್ರವಾಹದ ರಭಸದಿಂದ ಬಂದು ಕೆಸರುಮಣ್ಣು ತಳದಲ್ಲೆ ಉಳಿದು ಹೊರಗೆ ಹೋಗುವಾಗ ತಿಳಿಯಾದ ನೀರು ಹೋಗಲು ಸಾಧ್ಯವಾಗುತ್ತಿತ್ತು. ಹೀಗೆ ನಗರದಲ್ಲಿ ಅಲ್ಲಲ್ಲಿ ನೀರು ಗೋಪುಗಳನ್ನು ಕಟ್ಟಿ ಅವುಗಳಿಗೆ ಮಣ್ಣಿನ ಕೊಳವೆಗಳ ಮುಖಾಂತರ ಪ್ರತ್ಯೇಕ ನೀರಿನ ವಿತರಣಾ ವ್ಯವಸ್ಥೆಯನ್ನು ಮಾಡಿದರು. ಅರಮನೆ ಆವರಣದಲ್ಲಿ ಮಕ್ಕಾ ಮಸೀದಿಯ ಹತ್ತಿರ ಇದ್ದ ಇಂಥ ಒಂದು ನೀರುಗೋಪುರದಿಂದ ಎಪ್ಪತ್ತು ಕೊಳವೆ ಮಾರ್ಗಗಳು ಅರಮನೆಯ ವಿವಿಧ ಕಟ್ಟಡಗಳಿಗೆ ಹೋದದ್ದನ್ನು ಇಂದಿಗೂ ಕಾಣಬಹುದಾಗಿದೆ. ವಾತಾನುಕೂಲಕ್ಕಾಗಿ ಎರಡು ಗೋಡೆಗಳ ಮಧ್ಯ, ಮಾಳಿಗೆಯ ಮಧ್ಯ ಮಣ್ಣಿನ ಕೊಳವೆಗಳ ಮೂಲಕ ನೀರನ್ನು ಹರಿಸುತ್ತಿದ್ದರು.

ಇಷ್ಟು ವಿವರವಾಗಿ ಹೇಳುವ ಕಾರಣವೆನೆಂದರೆ, ಬೇಗಂ ತಾಲಾಬದಿಂದ ತಂದ ನೀರಿನ ವ್ಯವಸ್ಥೆಯಲ್ಲಿ ಮತ್ತು ವಾತಾನುಕೂಲಕ್ಕಾಗಿ ಮಣ್ಣಿನ ಕೊಳವೆಗಳ ಪಾತ್ರ ಅಧಿಕವಾಗಿದೆ. ಅದಕ್ಕೆ ಬಹುದೊಡ್ಡ ಪ್ರಮಾಣದ ಕೊಳವೆಗಳ ಉತ್ಪಾದನೆಯಾಗಬೇಕು. ಅದನ್ನು ಮನಗೂಳಿಯ ಕುಂಬಾರರು ಉತ್ಪಾದಿಸಿ ಮಣ್ಣಿನ ಕೊಳವೆಗಳನ್ನು ಸರಬರಾಜು ಮಾಡಿದರು. ಅದಕ್ಕಾಗಿ ಅವರು ಮನಗೂಳಿಯಲ್ಲಿ ತನ್ನ ಓಣಿಯ ಹತ್ತಿರ ಬಹು ಉದ್ದವಾದ ಆವಿಗೆ ನಿರ್ಮಿಸಿದರು. ಅದರ ಹತ್ತಿರವೇ ಮಣ್ಣು ಮಸಿ ಇತ್ತು. ಆ ದಿನ್ನಿಯನ್ನು ಮನಗೂಳಿಯಲ್ಲಿ ಇಂದಿಗೂ ಕಾಣಬಹುದು.

ಅಗಾಧ ಪ್ರಮಾಣದ ಮಣ್ಣಿನ ಕೊಳವೆಗಳನ್ನು ತಾವು ನಿರ್ಮಿಸಿವುದಲ್ಲದೆ ಇತರರಿಂದಲೂ ನಿರ್ಮಿಸಿ ಪೂರೈಸುತ್ತಿದ್ದರು. ಅದಕ್ಕಾಗಿ ಅವರಿಗೆ ಬಾದಶಹನು ಅವರ ಸಮಾಜದ ನಾಡಗೌಡಕಿಯ ವತನವನ್ನು ಹಾಕಿಕೊಟ್ಟನು. ಮತ್ತು ಕೆಲವು ಸೌಲಭ್ಯಗಳನ್ನು ಒದಗಿಸಿದನು. ಅವುಗಲ್ಲಿಯ ಕೆಲವು ಇಂತಿವೆ.

೧. ಮನಗೂಳಿ ಕಂದಾಯ ಗ್ರಾಮದಲ್ಲಿ ೧೬ ಎಕರೆಯ ಹೊಲ. ಅದಕ್ಕೆ ಇಂದಿಗೂ 'ಮಾನ್ಯದ ಹೊಲ' ಎನ್ನುತ್ತಾರೆ.

೨. ಒಂದು ನಿರ್ದಿಷ್ಟ ಪ್ರದೇಶದ (ಮನಗೂಳಿಯಿಂದ ಅಕ್ಕಲಕೋಟವರೆಗೆ) ಕುಂಬಾರ ಸಮಾಜದ ಮುಖ್ಯಸ್ಥರು. ಅವರ ನ್ಯಾಯ ನಿಬದ್ಧಗಳ ಅಂತಿಮ ನಿರ್ಣಯ ಮನಗೂಳಿಯ ಕುಂಬಾರದು. ಮದುವೆ ಮೊದಲಾದ ಸಮಾರಂಭಗಳಲ್ಲಿ ಅವರಿಗೆ ಅಗ್ರ ತಾಂಬೂಲ.

೩. ಪ್ರತಿಯಾಗಿ ಕುಂಬಾರರ 'ತಿಗರಿ' ಒಂದಕ್ಕೆ ವಾರ್ಷಿಕ ಮೂರು ರೂಪಾಯಿಗಳನ್ನು ಪ್ರತಿ ಕುಂಬಾರರೂ ಇವರಿಗೆ ಕೊಡಬೇಕು.

೪. ಕುಂಬಾರರ ಕುಲಸ್ವಾಮಿನಿ ಚೌಡೇಶ್ವರಿ (ದ್ಯಾಮವ್ವ) ಜಾತ್ರೆಗೆ ಇವರಿಂದಲೇ ಚಾಲನೆ.

೫. ಒಂದು ಸಾವಿರ ಕತ್ತೆಗಳನ್ನು ಸಾಕಲು ಅನುಮತಿ (ಸಾಗಾಣಿಕೆ)[೫೫]

ಹೀಗೆ ಹಲವು ಹತ್ತು ಸವಲತ್ತುಗಳು, ಗೌರವಗಳು ಮನಗೂಳಿಯ ಕಂಬಾರರಿಗೆ ಇದ್ದವು. ಆದಿಲ್‌ಶಾಹಿಗಳು ಕೇವಲ ಗೌಡ, ಕುಲಕರ್ಣಿ, ಜಮಿನ್ದಾರರಿಗೆ ಅಥವಾ ಉನ್ನತ ವರ್ಣಗಳಿಗೆ ಗೌರವ ಕೊಡದೆ, ಇತರ ಸಾಮನ್ಯ ವರ್ಗದವರಿಗೆ ಕೂಡ ನಾಡಗೌಡಕಿ ವತನ ಕೊಟ್ಟಿದ್ದು ಇವರ ಸಮಾಜಿಕ ಸಮಾನತೆಯನ್ನು ಎತ್ತಿತೋರಿಸುತ್ತದೆ.

ಇನ್ನೊಂದು ಪ್ರಮುಖ ಕೈಗಾರಿಕೆಯಂದರೆ ಪಾದರಕ್ಷೆಗಳನ್ನು ತಯಾರಿಸುವುದು. ಚಪ್ಪಲಗಳನ್ನು ಮೋಚಿ ಅಥವಾ ಚಮ್ಮಾರರು ರಾಜ್ಯ ಎಲ್ಲಾ ಪ್ರದೇಶಗಳಲ್ಲಿ ತಯಾರಿಸುತ್ತಿದ್ದರು. ೬-೫ ಅಡಿ ಉದ್ದ ಮತ್ತು ೩-೪ ಅಡಿ ಅಗಲವಾಗಿರುವ ಚರ್ಮದಿಂದ ಕೂದಲನ್ನು ಬೇರ್ಪಡಿಸಲು ಕೆಂಪು ಮತ್ತು ಕಂದು ಬಣ್ಣದಲ್ಲಿ ಮೂರ-ನಾಲ್ಕು ನೆನೆಯಿಡುತ್ತಿದ್ದರು. ನಂತರ ಚರ್ಮದ ಒಳಗಡೆ ನಿಂಬೇಹಣ್ಣನ್ನು ಉಜ್ಜುತ್ತಿದ್ದರು. ನಾಲ್ಕದಿನಗಳ ನಂತರ ಸುಲಭವಾಗಿ ಚರ್ಮದಿಂದ ಕೂದಲು ಬೇರ್ಪಡುತ್ತಿದ್ದವು. ನಂತರ ಬೇರೆ ಬೇರೆ ತರಹದ ಪಾದರಕ್ಷೆಗಳನ್ನು ತಾಯಾರಿಸಲಾಗುತ್ತಿತ್ತು.

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಒಬ್ಬ ಚಮ್ಮಾರನು ಸುಲ್ತಾನನಿಗೆ ಒಂದು ಜೊಡು ಚಪ್ಪಲಿಯನ್ನು ಹೊಲಿದು ಕೊಟ್ಟದ್ದಕ್ಕಾಗಿ ಒಂದು ತಾಮ್ರಪಟ್ಟದ ಮೇಲೆ ಶಾಸನವನ್ನು ಬರೆಸಿ ಅವನಿಗೆ ಇನಾಮನ್ನು ಹಾಕಿಕೊಟ್ಟಿದನ್ನು ನೋಡಬಹುದಾಗಿದೆ. "ಈ ಸನದು ಒಂದು ಹರಿಜನ ಮನೆತನಕ್ಕೆ ಸಂಬಂಧಪಟ್ಟುದಾಗಿದೆ. ಹರಿಜನರಿಗೆ ಈ ಬಗೆಯ ಸನದು ದೊರಕುವುದು ಅಪರೂಪ. ಬಹುಶಃ ಕರ್ನಾಟಕದ ಹರಿಜನರ ಕುರಿತು ಸಿಗುವ ಈ ಬಗೆಯ ಹಾಗೂ ಹೆಚ್ಚಿನ ವಿವರ ನೀಡುವ ದಾಖಲಾತಿಯ ಸನದು ಇದೇ ಮೊದಲನೆಯದೆಂದು ತೋರುತ್ತದೆ."

ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಗ್ರಾಮವಾದ ತಾಳಿಕೋಟೆಯ ರಜಪೂತ ಗಲ್ಲಿಯ ಮಧ್ಯದಲ್ಲಿ ಹರಿಜನರ ಮಚಗಾರ(ಚಮ್ಮಾರ)ಜಾತಿಯ ಕೆಲವು ಮನೆಗಳಿವೆ. ಅವುಗಳಲ್ಲಿ ಇನಾಮದಾರ ಮನೆತನವು ಒಂದು. ಇವರ ಮನೆಯಲ್ಲಿಯೆ ಸನದು-ನಕಲು ಪ್ರತಿ ದೊರಕಿದೆ. ಈ ಮೂಲ ಸನದು

ಪರ್ಶಿಯನ ಭಾಷೆಯಲ್ಲಿದೆ, ನಂತರ ಇದನ್ನು ಅರೇಬ್ಬಿಯನ್ ಭಾಷೆಗೆ ಭಾಷಾಂತರಿಸಲಾಯಿತಂತೆ. ಇದು ತುಂಡು ತುಂಡಾಗಿ ಹೋಗಿದೆ. ಅನಂತರದಲ್ಲಿ ಕನ್ನಡದಲ್ಲಿಯೂ ಭಾಷಾಂತರಿಸಲಾಗಿದೆ. ರಾಜಕೀಯ ವ್ಯವಸ್ಥೆಗೆ ಸಂಬಂಧಿಸಿದಂತೆ ಬೇರೆ ಭಾಷೆಗೆ ಅನುವಾದವಾಗುತ್ತ ಬಂದಿದೆ.

ಸುಲ್ತಾನನು ಯಾವಗಲೂ ತಾವು ತೊಡುವ ಮಚ್ಚಿ (ಮುಂದೆ ಚೂಪಾಗಿ ಮಣಿದುಕೊಂಡಿರುವ) ಸ್ಥಿತಿವಂತರ ಪಾದರಕ್ಷೆಗಳನ್ನು ಪರನಾಡಿನಿಂದಲೇ ತರಿಸುತ್ತಿದ್ದರಂತೆ. ಒಂದು ದಿನ ದೇಸಾಯಿಯವರು ಬಾದಶಹನಲ್ಲಿಗೆ ಬಂದಾಗ ಸೀಮೆಗೆ ಸಂಬಂಧಿಸಿದ ಮಚಗಾರಮಲ್ಲಪ್ಪ ಎಂಬವನು ಹೊಲಿದಿರುವದಾಗಿ ಹೇಳಿದ. ಮಚ್ಚಿಗೆ ಮನಸೋತ ಬಾದಶಹರು ಖುದ್ದಾಗಿ ಮಲ್ಲಪ್ಪನನ್ನು ಕರೆಯಿಸಿ ನನಗೊಂದು ಜೊತೆ ಮಚ್ಚಿ ಮಾಡಿ ಕೊಡಬೇಕು ಎಂದಾಗ ಮಲ್ಲಪ್ಪ ಒಪ್ಪಿಕೊಂಡ.

ಬಾದಶಹರ ಅಪ್ಪಣೆ ಪಡೆದು ನೆರೆದ ರಾಜ್ಯ ಸಭೆಗೆ ಮಲ್ಲಪ್ಪ ಬಂದನಂತೆ. ಬರಿಗೈಯಲ್ಲಿ ಮಲ್ಲಪ್ಪನನ್ನು ನೋಡಿ ಬಾದಶಹರಿಗೆ ಸಿಟ್ಟು, ಕೈಜೋಡಿಸುತ್ತಲೆ ಬಂದ ಮಲ್ಲಪ್ಪ ಬಾದಶಹರಿಗೆ ಅಡ್ಡಬಿದ್ದು ಶರಣು ಹೇಳಿ, ತನ್ನ ಪಟಗದಲ್ಲಿ ಕಟ್ಟಿಕೊಂಡು ಬಂದ ಲಿಂಬೆ ಹಣ್ಣು ತೆಗೆದು, ತನ್ನೆರಡು ಕಣ್ಣುಗಳಿಗೆ ಹಚ್ಚಿಕೊಂಡು ಮತ್ತೆ ನಮಸ್ಕರಿಸಿ ಬಾದಶಹರ ಪಾದದಡಿಯಲ್ಲಿಯೇ ಇಟ್ಟನಂತೆ. ಅದನ್ನು ಎತ್ತಿಕೊಂಡ ನೋಡಿದ ಬಾದಶಹರು– ನಾವು ನಿನಗೆ ಹೇಳಿದ್ದೇನು? ನೀನು ತಂದದ್ದೇನು? ಎಂದರು. ತಂದಿ ನೀವು ಹೇಳಿದಂಗ ಜೋಡ ಮಾಡಿಕೊಂಡು ಬಂದಿನ್ರಿ–ಎಂದ. ಏನು ! ಮಚ್ಚಿಯೇ ? ಎಲ್ಲಿದೆ ? ಹೂಂ ಮಚ್ಚಿನೇರಿ ಯಪ್ಪಾ ತಂದಿ, ಆ ನಿಂಬೆ ಹಣ್ಣಿನಾಗ ಅದಾವ್ರಿ, ಎಂದು ನಾಚುತ್ತ ಹೇಳಿದ. ಬಾದಶಹರಿಗೆ ಆಶ್ಚರ್ಯವಾಯಿತು.! ಈ ಲಿಂಬಿ ಹಣ್ಣಿನಲ್ಲಿ ಚಪ್ಪಲಿ ಹೇಗಿರಬೇಕು ? ಎನ್ನುತ್ತ ಸುತ್ತೆಲ್ಲ ಹೊರಳಿಸಿ ನೋಡಿದರು. ಯಾವತರದ ಜೋಡನೆ ಕಾಣಲಿಲ್ಲ. ನಸುನಕ್ಕು ಮಂತ್ರಿಗಳ ಕೈಗೆ ಕೊಟ್ಟರು. ಮಂತ್ರಿಗಳು ನೋಡಿ ಸೋಜಿಗ ವ್ಯಕ್ತಪಡಿಸುತ್ತ ವಿಚಿತ್ರವಾಗಿದೆ! ಎಂದಾಗ ಸಭಿಕರೆಲ್ಲ ಆಶ್ಚರ್ಯಚಕಿತರಾದರು. ಬಾದಶಹರು ಅದನ್ನು ಕೊಯ್ಯುವಂತೆ ಆಜ್ಞೆ ಮಾಡಿದಾಗ, ಮಂತ್ರತಿಗಳು ಕತ್ತಿಯಿಂದ ಸಾವಕಾಶವಾಗಿ ಕೊಯ್ದರು. ಒಳಗಿದ್ದ ಜೋಡು ಒಮ್ಮೆಲೇ ಪುಟಿದು ಬಾದಶಹರ ಅದಿಯಲ್ಲಿಯೆ ಬಿದ್ದು ಹೂಗಳು ಅರಳುವಂತೆ ಅರಳಿದವು.

ಹಾ ! ಹಾ ! ಎನ್ನುವ ಸಭೆಗೂ, ವಿಚಿತ್ರ ಆದರೂ ಸತ್ಯ ಎನ್ನುವ ಬಾದಶಹರಿಗೂ ನಮಸ್ಕರಿಸಿದ. ಬಾದಹರು ಮಚ್ಚಿಗಳನ್ನು ಕಾಲಲ್ಲಿ ಮೆಟ್ಟಿದಾಗ ತಾವು ತೊಟ್ಟ ಮೊದಲ ಮೆಟ್ಟಿಗಿಂತಲೂ ಮಿಗಿಲಾಗಿದ್ದವು. ಕೃತಕ ಬಂಗಾರ ಬಣ್ಣದ ಕಡ್ಡಿಗಳು ಥಳ ಥಳಿಸಿ ಹೊಳೆಯುತ್ತಿದ್ದವು. ಸಿಂಹಾಸನದ ಮೇಲಿರುವ ವಸ್ತ್ರಕ್ಕಿಂತಲೂ ಅವು ಮೃದುವಾಗಿದ್ದು ನಡೆವಾಗಲಂತೂ ಕಾಲಲ್ಲಿ ಇವೆಯೊ ಇಲ್ಲವೊ ಎನ್ನುವಂತಿದ್ದವು. ಅಷ್ಟೊಂದು ಹಗುರವಾಗಿರುವದನ್ನು ಕಂಡ ಬಾದಶಹರು ರಾಜರು ಮಚ್ಚಿ ಅಂದ್ರ ಇವು–ಎನ್ನುತ್ತ ಮಲ್ಲಪ್ಪನನ್ನು ನೋಡಿ, ಮೆಚ್ಚಿದೆ ನಿನ್ನ ಬುದ್ಧಿಗೆ ಏನು ಬೇಕು ಕೇಳಿಕೋ ಎಂದರು. ಬಕ್ಷೀಸು ಸಿಗಬಹುದು ಎಂದು ತಿಳಿದ ಮಲ್ಲಪ್ಪನಿಗೆ ಆಕಸ್ಮಿಕವಾಗಿ ಸಿಕ್ಕ ವರವನ್ನು ಕೇಳಿ ಮೊದಲು ಏನು ಕೇಳಬೇಕು ಎಂಬುದು ಗೊತ್ತಾಗಲಿಲ್ಲ. ಭಯಪಡಬೇಡ ನಿನಗೆ ಬೇಕೆನಿಸಿದ್ದನ್ನು ನಿರ್ಭಯದಿಂದ ಕೇಳು ಎಂದಾಗ ಮಲ್ಲಪ್ಪ ಕೆಲ ಸಮಯ ವಿಚಾರಿಸಿ–ಹರಿಲಾರದ

[illegible]

ಹಚ್ಚಡ, ಸವಿಲಾರದ ಗಿಂಡಿ ಕೊಟ್ಟೆ ಸಾಕು ತಂದೆ ಎಂದನಂತೆ. ಬಾದಶಹರಿಗೆ ಈ ಒಗಟು ಒಗಟಾಗಿಯೆ ಉಳಿದಾಗ ಮಂತ್ರಿಗಳ ಕಡೆಗೆ ನೋಡಿದರು. ಸಭೆಯು ಉತ್ತರ ಕಾಣದೆ ಗುಜು ಗುಜು ಎನ್ನುತ್ತಿತ್ತು. ಮಂತ್ರಿಗಳು ನಸುನಕ್ಕು ಪ್ರಭು ಹರಿಯದ ಹಚ್ಚಡ ಎಂದರೆ ಭೂಮಿ, ಸವಿಯದ ಗಿಂಡಿ ಎಂದರೆ ಭಾವಿ–ಎಂದು ಉತ್ತರಿಸಿದಾಗ ಎಲ್ಲಕಡೆಗೆ ಹರ್ಷೋದ್ಗಾರವಾಯಿತು. ಆನಂತರ ಹರ್ಷದಿಂದ ಸುಲ್ತಾನನು ಮಂತ್ರಿಗಳೆ ಯಾವ ಕಡೆಯಲ್ಲಿ ಸೀಮೆ ಖಾಲಿಯಾಗಿದೆಯೋ ಅಲ್ಲಿ ಜಡ್ಡೂಲಿಂದ ಗಿಡಕ್ಕೆ ಕುದುರೆಯನ್ನು ಕಟ್ಟಿ ಹಾಕಿ, ಶಕ್ತಿ ಮೀರಿ ಕುದುರೆಗೆ ಹೊಡೆದಾಗ ಕುದುರೆ ಹಗ್ಗ ಹರಿದುಕೊಂಡು ಎಷ್ಟು ದೂರ ಓಡಿ ಹೋಗಿ ನಿಲ್ಲುವುದೋ ಅಲ್ಲಿಯವರೆಗೆ ಭೂಮಿ ಕೊಡಿರಿ. ಇವನು ಬಯಸಿದಲ್ಲಿ ಒಂದು ಗಚ್ಚಿನ ಭಾವಿಯನ್ನು ಕಟ್ಟಿಸಿ ಕೊಡಿರಿ. ಎಂದು ಆಜ್ಞೆಯಿತ್ತರಂತೆ.

ರಾಜಾಜ್ಞೆಯಂತೆ ಭೂಮಿ, ಬಾವಿ ಇನಾಮಾಗಿ ಪಡೆದುಕೊಂಡ ಮಲ್ಲಪ್ಪ. ಅಲ್ಲದೆ ರಾಜಮರ್ಯಾದೆಯಿಂದ ತಟ್ಟೆ ತುಂಬಾ ವರಹಗಳನ್ನು ಕೊಟ್ಟು ಮೇಲೆ ಶಾಲು ಹೊದಿಸಿ ಕೊಟ್ಟರಂತೆ. ಅದು ಅಲ್ಲದೆ ಬಿಜಾಪುರ ಜಿಲ್ಲೆಯ ಎಲ್ಲ ಮಚಗಾರರ ಮೇಲೆ ಘಟಗಾರಿಕೆಯನ್ನು (ಚೌದರಿತನ) ಪಡೆದು ಕೊಂಡನಂತೆ. ಈ ಎಲ್ಲ ವಿಷಯ ಒಳಗೊಂಡಂತೆ ಒಂದು ತಾಮ್ರ ಪಟವನ್ನು ಕೊಡಲಾಯಿತಂತೆ.

ಸುಲ್ತಾನರಿಂದ ಇನಾಮನ್ನು ಪಡೆದುಕೊಂಡ ಮಚಗಾರ ಮಲ್ಲಪ್ಪ ಇನಾಮದಾರನೆಂದು ಕರೆಸಿಕೊಂಡ. ಮಚಗಾರ ಜಾತಿಯಲ್ಲಿ ಗೌರವ ಸ್ಥಾನ ಪಡೆದ. ಅವರ ಮನೆತನಕ್ಕೆ ಗೌಡರ ಮನೆತನ, ಪಟೇಗಾರ ಮನೆತನ, ಇನಾಮದಾರ ಮನೆತನ ಎಂದು ಕರೆಯಲಾರಂಭಿಸಿದರು. ಕೊನೆಗೆ ಇನಾಮದಾರ ಎನ್ನುವದೇ ಅವರ ಅಡ್ಡ ಹೆಸರಾಯಿತು.

(ಅಸಲು ಸನದಿನ ನಕಲು)

ಸುಲ್ತಾನ ಮಹಮ್ಮದ ಬಾದಶಹ

ತಾರೀಖು: ೭ನೇ ಮೋಹರಂ

ಸನ್: ೧೦೫೭ ಹಿಜರಿ

ಪರಗಣೆ ತಾಳಿಕೋಟೆಯ ದೇಸಾಯಿ ವ ದೇಶಮುಖ ಇವರಿಗೆ...

ಸೂರಸನ್ ಸಭಾ ಅಖಮಸೀನ ವ ಅಲಪ ಅಂದರೆ ಹಿಜರಿ ಸನ್ ೧೦೬೭ ಮಲ್ಲಪ್ಪ ತಂದಿ ಮುದುಕಪ್ಪ ಮಚಗೇರ ಈತನು ಸರಿ ಹುಜೂರ ಜಹಂಪನ ಬಾದಶಹರ ಸಲುವಾಗಿ ಮಚ್ಚಿಜೋಡು ಮಾಡಿದ್ದರಿಂದ ಆ ಕಾಲಕ್ಕೆ ದೊಡ್ಡ ಮರ್ಯಾದೆಯುಳ್ಳ ವಜೀರ ಪ್ರಧಾನರಾದ ಸೈಯ್ಯದನು ಮುಲ್ಲಾಸಾ ಅವರು ಲಿಂಬೆಯ ಹಣ್ಣು ಬಿಚ್ಚಿ ನೋಡಿದರು. ಸದರಿ ಹಣ್ಣಿನೊಳಗೆ ಮಚ್ಚಿ ಜೋಡು ಇತ್ತು. ಅದನ್ನು ನೋಡಿ ಬಾದಶಹ ಯಾವತ್ತೂ ಸಭೆಯ ಮಂಡಳಿ ಸಂತೋಷಪಟ್ಟು ಬಹಳ ಮೆಹರ್ಬಾನಗಿಯಿಂದ ಒಂದು ಚೌರ ಸುಲ್ತಾನ ಭೂಮಿಯನ್ನು

ಇನಾಮು ಕೊಡೋಣವಾಯಿತು. ಸದರಿ ಮಲ್ಲಪ್ಪ ಇವರು ಹುಜೂರಿಗೆ ಬೇಡಿಕೊಂಡದ್ದರಿಂದ ಕೆಳಗೆ ಬರೆದ ಪ್ರಕಾರ ಬಾಬುಗಳ ಹಕ್ಕನ್ನು ಕೊಟ್ಟಿರುತ್ತಾರೆ.

೧. ಬಿಜಾಪುರ ಸಭೆಯೊಳಗಿನ ಯಾವತ್ತೂ ಮಚಗೇರ ಮೇಲೆ ಚೌದರಿತನ.

೨. ಸದರ ಜಾತಿಯ ಜನರು ದರ ಒಂದು ಅಂಗಡಿಗೆ ಎರಡು ಆಣೆಯಂತೆ ಹಕ್ಕು(ಪಟ್ಟಿ) ಕೊಡತಕ್ಕದ್ದು.

೩. ಪ್ರತಿಯೊಂದು ಲಗ್ನ ಮುಹೂರ್ತದ ಕಾಲಕ್ಕೆ ಸದರಿ ಜಾತಿಯವರು ಮೊದಲು ಮರ್ಯಾದೆ ವೀಳ್ಯ ಚೌದರಿ ಬಾಬತ್ತಿನ ಮಾನ-ಪಾನ ಕೊಡತಕ್ಕದ್ದು.

೪. ಈ ಬಾಬುಗಳ ಹಕ್ಕು ದೊರೆತದ್ದಲ್ಲದೇ ಸದರಿ ಬಾದಶಹರು ಒಂದು ತಬಕ ತುಂಬ ಅಶರಫಿ (ಮೋಹರುಗಳು) ವ ಖಾಸಪೋಷಾಕು ವ ಶಾಲ ಜೋಡು ವ ಕಮರಬಂದ ಮುಂತಾದವುಗಳನ್ನು ಕೊಟ್ಟು ಷರಪರಾಜ ಮಾಡೋಣವಾಯಿತು.

ಇದಕ್ಕೆ ಯಾವ ಮುಸಲ್ಮಾನ ವ ಜನಿವಾರದವರು ವ ಹಿಂದೂ ಜನರು ಹರಕತ್ ಮಾಡಿದರೆ ತಮ್ಮ ತಾಯಿಯ ಮೇಲೆ ಲಾಡಿ ಬಿಟ್ಟಂತೆ ಆಗುವುದಲ್ಲದೇ ಮಚ್ಚಿ ಜೋಡು ಅವರ ಮೋರೆಯ ಮೇಲೆ ಇಟ್ಟಂತೆ ಆಗುತ್ತದೆ.

ಮುಸಲ್ಮಾನರು ಹರಕತ್ ಮಾಡಿದರೆ ಹಂದಿ ಆಣೆ ಇರುತ್ತದೆ. ಜನಿವಾರದವರು ಹರಕತ್ ಮಾಡಿದರೆ ಕಾಶಿಯಲ್ಲಿ ಗೋಹತ್ಯೆ ಮಾಡಿದಂತೆ. ಹಿಂದೂ ಜನರು ಹರಕತ್ ಮಾಡಿದರೆ ಈಶ್ವರ ಲಿಂಗದ ಮೇಲೆ ಗೋಹತ್ಯೆ ಮಾಡಿದಂತೆ.

ಬಾದಶಹ ಸಭೆಯಲ್ಲಿ ಎಲ್ಲ ಮಂಡಳಿಯವರು ಬರಕೊಟ್ಟ ಪರಮಾಣದ ಹುಕುಮಿನಂತೆ ಎಲ್ಲಾ ಬಾಬುಗಳನ್ನು ವ ಭೂಮಿಯನ್ನು ಮೇಲೆ ನಮೂದಿಸಿದ್ದ ಪ್ರಕಾರ ಸದರಿ ಮಲ್ಲಪ್ಪನಿಗೂ ಅವನ ವಂಶದವರಿಗೂ ವಂಶಪರಂಪರೆಯಾಗಿ ನಡಿಸತಕ್ಕದ್ದು.[೫೬]

---ಸಮಾಪ್ತಿ----

ಬಂದರುಗಳು :

ಆದಿಲ್‌ಶಾಹಿ ರಾಜ್ಯವು ಪ್ರಮುಖವಾದ ಬಂದರಗಳನ್ನು ಹೊಂದಿತ್ತು. ಅವು ಯಾವುವೆಂದರೆ, ಚೌಲ. ಧಾಬೋಳ, ರಾಜಪುರ, ವೆಂಗುರಲ, ಗೋವೆ ಹಾಗೂ ಇನಿತರ ಬಂದರಗಳಾದ ಖಲಹಾಟಿ, ಸಂಕರ, ಸಾಷ್ಟೀ, ಖಾಕೇ, ಹರಚಿರಿ, ಸಾತೋಲಿ, ಸಿರ್ಧೋನ, ಖೇಡಾ ಮುಂತಾದವುಗಳಿದ್ದವು.[೫೭] ಈ ಬಂದರುಗಳ ಸಹಾಯದಿಂದ ಗುಜರಾತ, ಮಲಬಾರ, ಆಫ್ರಿಕಾ, ಸಿಲೋನ, ಚೀನಾ. ಮಾಲದ್ವಿಪ್ವ, ಯೂರೋಪಿನ ದೇಶಗಳಿಗೆ ಆಮದು ಮತ್ತು ರಪ್ತು ಮಾಡಲಾಗುತ್ತಿತ್ತು.

[illegible]

ಆಮದು ಮತ್ತು ರಫ್ತು :

ಬಿಜಾಪುರ ರಾಜ್ಯವು ಪ್ರಮುಖವಾಗಿ ಆಮದು ಮಾಡಿಕೊಳ್ಳುವ ವಸ್ತುಗಳೆಂದರೆ, ಅಮೂಲ್ಯವಾದ ಹರಳಗಳು, ಮುತ್ತು, ಲೋಹ, ಕಚ್ಚಾ ರೇಶ್ಮೆ, ಹಸ್ತಿದಂತ, ತಾಮ್ರ, ಸೀಸ, ಪಾದರಸ, ಸತವು, ಮಖಮಲ್ಲ, ಕೇಸರಿಬಣ್ಣ, ಕಸ್ತೂರಿ, ಕೇಸರಿ, ಬ್ಲೇಡ, ಆಟದ ಸಮಾನು, ಬಂದೂಕು, ಮದ್ದು, ಔಷದಿಗಳು, ಸರಾಯಿ, ಕುದರೆ, ಕನ್ನಡಿ, ಸೈನಿಕರು, ಸೇವಕರು (ಗುಲಾಮರು) ಮುಂತಾದವುಗಳು. ದಾಭೋಳ ಹಡಗುಗಳನ್ನು ಆಕರ್ಷಿಸುವ ಸಲುವಾಗಿ ಬಿಜಾಪುರ ಸರಕಾರವು, ಗೋವಾದಲ್ಲಿದ್ದ ಶೇ. ೮ಕ್ಕೆ ಬದಲು ಕಸ್ಟಮ್ಸ್ ಸುಂಕವನ್ನು ಶೇ. ೩.೫ಕ್ಕೆ ಇಳಿಸಿತು. ದಖ್ಖನಿಗೆ ಆಮದಾಗಿ ಬರುತ್ತಿದ್ದ ಮುಖ್ಯವಾದ ವಸ್ತು ಕುದುರೆಗಳು. ಅವನ್ನು ಈಜಿಪ್ಟ್, ಅರೇಬಿಯ, ಖೊರಾಸಾನ್, ಟರ್ಕಿಸ್ತಾನ್ ಮತ್ತು ಆರ್ಮುಜ್‌ಗಳಿಂದ ತರಿಸಲಾಗುತ್ತಿತ್ತು. ಕುದುರೆಗಳ ವ್ಯಾಪಾರವು ಪರ್ಶಿಯನ್ ಮತ್ತು ಅರಬ್‌ವರ್ತಕರ ಕೈಯಲ್ಲಿತ್ತು. ಬಿಜಾಪುರವು ಚಿನ್ನವನ್ನು ಪೂರ್ವ ಆಫ್ರಿಕದ ಮೊಜಾಂಬಿಕ್ ಮತ್ತು ಸೊಫಾಲಾಗಳಿಂದಲೂ, ಅಬಿಸೀನಿಯದ ಜೀಲಾದಿಂದಲೂ, ಬೆಳ್ಳಿಯನ್ನು ಮೊಜಾಂಬಿಕ್ ಮತ್ತು ಜಪಾನುಗಳಿಂದಲೂ ತರಿಸಿಕೊಳ್ಳುತ್ತಿತ್ತು. ದಕ್ಷಿಣ ಅಮೇರಿಕದಿಂದ ಚಿನ್ನವನ್ನು ಪೋರ್ಚುಗೀಸರಿ ತಂದು ಬಿಜಾಪುರಕ್ಕು ಒದಗಿಸುತ್ತಿದ್ದರು. ದಾಲ್ಚಿನ್ನಿಯನ್ನು ಸಿಲೋನಿನಿಂದ ತರಿಸಲಾಗುತ್ತಿತ್ತು.[೫೮]

ರಫ್ತು ಮಾಡುವ ಪ್ರಮುಖ ವಸ್ತುಗಳೆಂದರೆ, ಸಾಂಬರ ಪದಾರ್ಥಗಳಾದ ಮೆಣಸು, ಸುಂಟಿ, ಏಲಕ್ಕಿ, ಅರಸಿಣ, ಹತ್ತಿಯ ಮತ್ತು ಮಸ್ಲೀನ ಬಟ್ಟೆ, ಕಡಿಯುಪ್ಪು, ಅಕ್ಕಿ, ಸಕ್ಕರೆ, ಎಣ್ಣೆಯ ಬೀಜಗಳು, ತೆಂಗು, ವಿವಿಧ ಔಷಧಿಗಳು, ಮುತ್ತುಗಳು, ವಜ್ರ ಮುಂತಾದವುಗಳು. ಮೆಣಸು ರಫ್ತಾಗುತ್ತಿದ್ದ ಅತ್ಯಂತ ಮುಖ್ಯವಾದ ವಸ್ತು. ರಾಯಬಾಗ, ಅಥಣಿ ಮೆಣಸು ವ್ಯಾಪಾರದ ಮುಖ್ಯಕೇಂದ್ರಗಳಾಗಿದ್ದುವು. ಅಲ್ಲಿಂದ ಅದು ಪೋರ್ಚುಗಲ್ಲಿಗೆ ರವಾನೆಯಾಗುತ್ತಿತ್ತು. ರಫ್ತಿನಲ್ಲಿ ಮೆಣಸಿನ ನಂತರದ ಸ್ಥಾನ ಹತ್ತಿಬಟ್ಟೆಗಳಿಗೆ. ಇಂಗ್ಲಿಷರು ಹತ್ತಿಬಟ್ಟೆ ಹಾಗೂ ಪೆಟ್ಟುಪುಗಳ ವ್ಯಾಪಾರವನ್ನು ವಿಸ್ತರಿಸಿದರು. ದಾಭೋಲ್, ರಾಜಪುರ ಮತ್ತು ವೆಂಗುರ್ಲಗಳಿಂದ ಅದರ ವ್ಯಾಪಾರದ ಪ್ರಮಾಣ ಅಪಾರವಾಗಿ ಹೆಚ್ಚಿ ನೇಕಾರರಿಗೆ ಉತ್ತಮ ಲಾಭವನ್ನು ಒದಗಿಸಿತು. ಕಾರವಾರ, ಭಟ್ಕಲಗಳಿಂದಲೂ ಈ ವಸ್ತುಗಳು ರಫ್ತಾಗುತ್ತಿದ್ದವು. ರಾಜ್ಯದಲ್ಲಿ ಉತ್ಪನ್ನವಾದ ಹತ್ತಿಬಟ್ಟೆಗಳಿಗೆ ಪರ್ಷಿಯ, ಅರೇಬಿಯಾ, ಮೊಜಾಂಬಿಕ್‌ಗಳಲ್ಲಿ ತುಂಬ ಬೇಡಿಕೆಯಿದ್ದಿತ್ತು. ದಾಭೋಲ ಮತ್ತು ರಾಜಪುರಗಳಿಂದ ಅದು ರಫ್ತಾಗುತ್ತಿತ್ತು. ಗುಜರಾತ ಮತ್ತು ಮಲಬಾರ್ ಬಂದರಗಳಿಂದ ಭಾರತದ ಬೇರೆಬೇರೆ ಭಾಗಗಳಿಗೆ ಹೋಗುತ್ತಿದ್ದ ವಸ್ತುಗಳಲ್ಲಿ ಚರ್ಮ ವಸ್ತುಗಳು, ಜಮಖಾನೆಗಳು, ಕಂಬಳಿಗಳು, ಮರದ ಪೀಠೋಪಕರಣಗಳು ಮತ್ತು ಲೋಹದ ವಸ್ತುಗಳು ಹೋಗುತ್ತಿದ್ದವು. ಮಾಲ್ಡೀವ್ಸ ದ್ವೀಪಗಳಿಗೆ ಅಕ್ಕಿ, ಹತ್ತಿಬಟ್ಟೆ, ಹಗ್ಗ, ಧಾನ್ಯಗಳು, ಬೇಳೆಕಾಳುಗಳು, ತಾಮ್ರ, ಪಾದರಸ, ಅಡಕೆ, ತೆಂಗು ಮತ್ತು ಗೋಧಿ ಇವು ರಫ್ತಾಗುತ್ತಿದ್ದವು.[೫೯]

ಬಜಾರುಗಳು (ಪೇಟೆಗಳು) :

ಮದ್ಯಕಾಲದಲ್ಲಿ ಬಿಜಾಪುರ ದೊಡ್ಡ ವ್ಯಾಪಾರಿ ಕೇಂದ್ರವಾಗಿತ್ತು. ಬಿಜಾಪುರದ ಹಸ್ತ ಪ್ರತಿಯ ನಕ್ಷೆಯನ್ನು ಗಮನಿಸಿದರೆ, ಬಿಜಾಪುರದ ಆದಿಲ್‌ಶಾಹಿಗಳ ಕಾಲದ ಬಜಾರಗಳ ಬಗ್ಗೆ ಮಾಹಿತಿ ಸಿಗುತ್ತದೆ. ಅವು ಈ ಕೆಳಗಿನಂತಿವೆ.

ಮರ್ಕೊವಿ ಬಜಾರ, ಥಾಣಾ ಬಜಾರ, ನಾಗಠಾಣ ಬಜಾರ, ದೌಲತ ಬಜಾರ. ದಹನಖಾನ ಬಜಾರ. ಮರ್ಕುರ ಬಜಾರ, ಮುರಾದಖಾನ ಬಜಾರ. ಪಲ್ಪ ಬಜಾರ, ಮುಬಾರಕ ಬಜಾರ, ಶಹಪೇಟ ಬಜಾರ, ಕಮಾಲಖಾನ ಬಜಾರ, ನಾಕಾ ಬಜಾರ, ಖದಾವಂದ ಬಜಾರ, ಜಗಟೇ ಬಜಾರ, ರಾವ ಬಜಾರ, ಶೇರ ಕಾರ್ಖಾನಾ ಬಜಾರ, ರಂಗೀನ ಮಸಜೀದ ಬಜಾರ, ಫತ್ತೇ ಝುಮನ ಬಜಾರ, ಸಫಾ ಬಜಾರ, ಶೀಕಾರಖಾನ ಬಜಾರ, ಇಖ್ಲಾಸಖಾನ ಬಜಾರ, ಯೂಸುಫ ರೂಮಿಖಾನ ಬಜಾರ, ಶಾಹ ಅಬು ತುರ್ಬ ಬಜಾರ, ಅಬ್ದುಲ್ ರಜಾಕ ಬಜಾರ, ಲಂಗರ ಬಜಾರ, ಮಹಮುದಶಾಹ ಬಜಾರ, ದಾದ ಮಹಲ ಬಜಾರ ಮುಂತಾದವುಗಳು.[೬೦]

ಮಹಮ್ಮದ ಆದಿಲ್‌ಶಾಹನು ವ್ಯಾಪಾರ ಮತ್ತು ವಾಣಿಜ್ಯಕ್ಕಾಗಿ ದಸ್ತುರುಲ ಅಮಲದ ಶಾಸನಗಳಲ್ಲಿ ಈ ರೀತಿಯಾಗಿ ಹೇಳಿದ್ದಾನೆ. " ವ್ಯಾಪಾರಸ್ಥರು ತೂಕ ಮಾಡುವ ಕಲ್ಲುಗಳು, ಧಾನ್ಯ ಅಳೆಯುವ ಮಾಪುಗಳು, ಬಿಜಾಪುರದಲ್ಲಿ ಇದ್ದಂಥ ತೂಕ ಮತ್ತು ಅಳತೆಯ ಪ್ರಮಾಣದಲ್ಲಿಯೇ ಇರಬೇಕು. ಒಂದು ವೇಳೆ ಆ ಪ್ರದೇಶದಲ್ಲಿ ಆಗಲೇ ಅಲ್ಲಿಯ ನಡಾವಳಿಕೆಯಂತೆ ಇದ್ದರೆ ಇರಲಿ. ಇದ್ದ ನಡಾವಳಿಕೆಯನ್ನೆ ನಡೆಸಿರಿ. ಆದರೆ ಒಂದು ಅಧಿಕಾರದಲ್ಲಿ ಒಂದು ಪ್ರಕಾರದ ಹೊಸ ತೂಕ ಮತ್ತು ಅಳತೆಗಳು, ಬೇರೆ ಅಧಿಕಾಥಲ್ಲಿ ಇನ್ನೊಂದು ಪ್ರಕಾರದ ತೂಕ ಮತ್ತು ಅಳತೆಗಳನ್ನು ಎಲ್ಲಿಯೂ ವಹಿವಾಟಿನಲ್ಲಿ ಇಡಬಾರದು."

ಬಾದಶಾಹೀ ಬಾಗಿಲಿನಿಂದ ಬಜಾರದ ರಸ್ತೆ ಪ್ರತಿ ಬಾಗಿಲುಗಳ ವರೆಗೆ ಎರಡೂ ಬದಿಗೆ ರಸ್ತೆಯನ್ನು ಸ್ವಚ್ಛವಾಗಿಡಬೇಕು. ಇಬ್ಬದಿಗೂ ವ್ಯಾಪಾರಸ್ಥರು ಅಂಗಡಿಗಳನ್ನು ಹಾಕಬೇಕು. ಹಾಗೆ ಓಣಿಗಳಲ್ಲೂ ಒಬ್ಬಿಬ್ಬರು ಅಂಗಡಿಗಳನ್ನು ಇಟ್ಟರೆ ಚಿಂತೆ ಇಲ್ಲ. ರಸ್ತೆಯ ಇಬ್ಬದಿಗಳಲ್ಲಿ ಎಲ್ಲ ತರಹದ ಪದಾರ್ಥಗಳ ಅಂಗಡಿಗಳನ್ನು ಹಾಕಿದರೆ ಪ್ರತಿಯೊಂದು ಪದಾರ್ಥ ದೂರ ಹೋಗದಂತೆ ಸಿಗುತ್ತದೆ. ರಸ್ತೆಯ ಮಧ್ಯದಲ್ಲಿ ಚಪ್ಪರ ಇಲ್ಲವೆ ಮಳಿಗೆಗಳನ್ನು ಹಾಕಿ ಅಂಗಡಿ ಇಡಗೊಡಬಾರದು. ರಸ್ತೆಯ ಎರಡು ಬದಿಗಳನ್ನು ಬಿಟ್ಟು ಮಧ್ಯ ಅಂಗಡಿಗಳನ್ನು ಹಾಕಬಾರದು.

ವಣಿಕರು, ಎಣ್ಣೆ ಮಾರುವವರು, ವ್ಯಾಪಾರಸ್ಥರು, ಸಿಬ್ಬಂದಿಗಳು, ಜಿನಗಾರರು, ಸಣ್ಣ ಡೇರೆಗಳನ್ನು ಹೊಲಿಯುವವರು, ತಂಬೂಗಳನ್ನು ಹೊಲಿಯುವವರು, ಹಾಗೂ ಅಡುಗೆಯವರು ಹೀಗೆ ಪ್ರತಿಯೊಬ್ಬರು ಒಂದೇ ಸಾಲಿನಲ್ಲಿ ಅಂಗಡಿಗಳನ್ನಿಡಬೇಕು. ದೊಡ್ಡ ದೊಡ್ಡ ರಸ್ತೆಗಳ ಎರಡು ಬದಿಗೆ ಭರ್ತಿ ವಸಾಹತನ್ನು ನಿರ್ಮಿಸಿದ ನಂತರ ಓಣಿಗಳಲೂ ಸದರೀ ಅಂಗಡಿ ವ್ಯವಸ್ಥೆ ಮಾಡಬೇಕು. ಧಾನ್ಯಗಳನ್ನು ಮಾರುವ ಜನರನ್ನು

ನಾಲ್ಕು ಕಡೆಗಳಿಂದ, ತರಫ–ತರಫಗಳಿಂದ ಕರೆತಂದು ನಗರದಲ್ಲಿ ಇಡಬೇಕು. ಮಾರಾಟ ಅವಸರ ಮಾಡದೆ ಎಲ್ಲ ಕಾಲ–ದಿನಗಳಲ್ಲಿಯೂ ಪ್ರತಿಯೊಂದು ಪದಾರ್ಥಗಳು ದೊರೆಯುವಂತೆ ವ್ಯವಸ್ಥೆ ಮಾಡಬೇಕು. ಧಾನ್ಯ ಸಂಗ್ರಹ ಸಾಕಷ್ಟಿದ್ದರೆ ರಾಜ್ಯದ ಜನರ ಹಾಗೂ ಸೈನಿಕರು ಸಂತೋಷಕ್ಕೆ ಕಾರಣವಾಗುತ್ತದೆ.

ನಗರ ಹಾಗೂ ಬಜಾರದ ಸುರಕ್ಷತೆಯ ವ್ಯವಸ್ಥೆಯನ್ನಿಡಲು ರಾತ್ರಿ ಹಗಲು ಕಾಯುವ ಕೊತವಾಲನನ್ನು ಇಡಬೇಕು. ಕಳ್ಳರು ಒಂದು ವೇಳೆ ಬಲಾತ್ಕಾರದಿಂದ ಲೂಟಿ ಮಾಡಿ ತೆಗೆದುಕೊಂಡು ಹೋಗುವ ಜನರು, ಕಿಸೆಗಳ್ಳರುಗಳ ಮೇಲೆ ಎಚ್ಚರಿಕೆಯಿಂದ ಇದ್ದು ಹಿಡಿಯುವ ವ್ಯವಸ್ಥೆ ಮಾಡಬೇಕು. ಎಲ್ಲಾದರೂ ಒಂದು ಸಣ್ಣ ಅಥವಾ ದೊಡ್ಡ ಕಳ್ಳತನವಾದರೆ, ತಕ್ಷಣ ಶೋಧಿಸಿ ಕಳ್ಳರನ್ನು ಹಿಡಿದು ಕುರಾನ ಶರೀಫದಲ್ಲಿ ಹೇಳಿದಂತೆ ರಾಜನು ತೀರ್ಪು ನೀಡಬೇಕು.[೬೧]

ಆದಿಲ್‌ಶಾಹಿ ಸಾಮ್ರಾಜ್ಯದಲ್ಲಿ ವಾರಕ್ಕೊಂಮ್ಮ ಬಜಾರ(ಸಂತೆ) ನಡೆಯುತ್ತಿತ್ತು. ಐವತ್ತು ಗ್ರಾಮಗಳಲ್ಲಿ ಮತ್ತು ಅನೇಕ ನಗರಗಳಲ್ಲಿ ಬಜಾರ ನಡೆಯುತ್ತಿತ್ತು. ಇಂಡಿ ತಾಲೂಕಿನಲ್ಲಿ ನಾಲ್ಕು ಗ್ರಾಮಗಳಾದ ಇಂಡಿ, ಚಡಚಣ, ತಾಂಬಾ ಮತ್ತು ಹಲಸಂಗಿ, ಸಿಂದಗಿಯ ಎಂಟು ಗ್ರಾಮಗಳಾದ, ಹಿಪ್ಪರಗಿ, ಬಹಟನೂರ, ಮೇರಟಗಿ, ಮಲಘಾಣ, ಆಲಮೇಲ, ಕೊವರ, ಗೋಲಗೇರಿ ಮತ್ತು ಸಿಂದಗಿ. ಬಿಜಾಪುರದ ಐದು ಗ್ರಾಮಗಳಾದ. ಕನ್ನೂರ, ಮಮದಾಪುರ, ಶಿವಣಗಿ, ಬಬಲಾದ ಮತ್ತು ಬಿಜಾಪುರ. ಬಾಗೇವಾಡಿಯ ಎಂಟು ಗ್ರಾಮಗಳಾದ, ಕೋಲಾರ, ಗೋಳಸಂಗಿ, ಉಕ್ಕಲಿ, ವಂದಾಲ, ಮನಗುಳಿ, ನಿಡಗುಂದಿ, ಹೂವಿನ ಹಿಪ್ಪರಗಿ, ಬಾಗೇವಾಡಿ. ಮುದ್ದೇಬಿಹಾಳದಲ್ಲಿ ಆರು ಗ್ರಾಮಗಳಲ್ಲಿ, ಬಾಗಲಕೋಟದಲ್ಲಿ ಮೂರು ಗ್ರಾಮಗಳಲ್ಲಿ, ಬಾದಾಮಿಯಲ್ಲಿ ಒಂಬತ್ತು ಗ್ರಾಮಗಳಲ್ಲಿ ಹಾಗೂ ಹುನುಗಂದದಲ್ಲಿ ಏಳು ಗ್ರಾಮಗಳಲ್ಲಿ ಸಂತೆ ನಡೆಯುತ್ತಿತ್ತು.[೬೨]

ನಾಣ್ಯಗಳು :

ಸಿಕ್ಕೆ ಎಂದರೆ ನಾಣ್ಯ. ಸಾಮಾನ್ಯವಾಗಿ ಸುಲ್ತಾನನು ಸಿಂಹಾಸನವನ್ನೇರುವ ಸಂದರ್ಭದಲ್ಲಿ ಟಂಕಿಸಲ್ಪಡುತ್ತಿದ್ದವು. ಮಹಮ್ಮದ ಆದಿಲ್‌ಶಾಹನು ಮೊಟ್ಟ ಮೊದಲ ಬಾರಿಗೆ ಬಂಗಾರದ ನಾಣ್ಯವನ್ನು ಟಂಕಿಸಿದನು. ಇವನ ಬಂಗಾರದ ನಾಣ್ಯವನ್ನು ಮೊಹರ, ಹೊನ್ನ, ಧಾರುನ (ಅರ್ಧ ಹೊನ್ನ) ಮತ್ತು ಫರತಬ (೧/೪ ಹೊನ್ನ).[೬೩] ಎಂದು ಕರೆಯಲಾಗುತ್ತಿತ್ತು. ಇವನ ಹೊನ್ನ ನಾಣ್ಯವು ೫೨ ಗ್ರೇನ ತೂಕದಾಗಿತ್ತು. ಇದು ದಕ್ಷಿಣದಲ್ಲಿ ಪ್ರಚಲಿತದಲ್ಲಿದ ಪಗೋಡಾ ನಾಣ್ಯಕ್ಕೆ ಸಮನಾಗಿತ್ತು. ವ್ಯಾಪಾರಸ್ಥರು ಈ ಹೊಸ ಹೊನ್ನ ನಾಣ್ಯವನ್ನು ಉಪಯೋಗಿಸುವಲ್ಲಿ ಹಿಂಜರಿಯುತ್ತಾರೆ, ಇದನ್ನು ತಿಳಿದ ಮಹಮ್ಮದ ಆದಿಲ್‌ಶಾಹನು ೨೯ ಮೇ ೧೬೫೪ ರಲ್ಲಿ ಒಂದು ಫರ್ಮಾನ ಹೊರಡಿಸಿ ಹೊಸ ನಾಣ್ಯ ಹೊನ್ನವನ್ನು ಎಲ್ಲರು ಉಪಯೋಗಿಸಬೇಕು ಮತ್ತು ಸ್ವೀಕರಿಸಬೇಕು, ಯಾರು ಈ ನಾಣ್ಯವನ್ನು ಸ್ವೀಕರಿಸುವುದಿಲ್ಲ ಅವರಿಗೆ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಆಜ್ಞೆಮಾಡಿದನು. ಈ ನಾಣ್ಯವು ೮೨.೬೯% ರಷ್ಟು ಚಿನ್ನವನ್ನು ಹೊಂದಿತ್ತು.[೬೪] ಮಹಮ್ಮದ

ಆದಿಲ್‌ಶಾಹನು ತನ್ನ ನಾಣ್ಯದ ಮೇಲೆ ದ್ವಿಪದಿಯನ್ನು ಕೆತ್ತಿಸಿದನ್ನು ಗಮನಿಸಬಹುದು. ಅದು ಈ ರೀತಿಯಾಗಿದೆ.

" ಜಹಾನ್ ಝಿನ್ ದೋ ಮಹಮ್ಮದ ಗೀರಿಫತ್ ಝಿನತ್-ಓ ಜ್ಹ

ಏಕ್ ಮಹಮ್ಮದ-ಯಿ ಮುರ್ಸ್‌ಲ್ ದುವಂ ಮಹಮ್ಮದ-ಶಾಹ "

ಇದರ ಅರ್ಥ ಈ ರೀತಿಯಾಗಿದೆ. "ಈ ಜಗವು ಇಬ್ಬರು ಮಹಮ್ಮದರಿಂದಾಗಿ ಸೌಂದರ್ಯವನ್ನು, ವರ್ಚಸ್ಸನ್ನು ಪಡೆದಿದೆ. ಒಬ್ಬರು ಮಹಮ್ಮದರು ಪವಿತ್ರ ಪೈಗಂಬರರು. ಇನ್ನೊಬ್ಬ ಮಹಮ್ಮದ ಶಾಹ". ಎಂದು ಬರೆಯಲಾಗಿದೆ. ಇಲ್ಲಿ ಮಹಮ್ಮದ ಆದಿಲ್‌ಶಾಹನು ತನ್ನ ಅಜ್ಜನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದನು. ಏಕೆಂದರೆ ಮೊದಲನೆಯ ಅಲಿ ಆದಿಲ್‌ಶಾಹನು ಖಲೀಫರೊಂದಿಗೆ ಹೋಲಿಸಿಕೊಂಡಿದ್ದರೆ, ಮೊಮ್ಮಗ ಮಹಮ್ಮದ ಆದಿಲ್‌ಶಾಹನು ಪೈಗಂಬರರೊಂದಿಗೆ ತನ್ನ ಹತ್ತಿರದ ಸಂಬಂಧವನ್ನು ಬೆಳಿಸಿದ್ದನು.[೬೫]

ಮಹಮ್ಮದ ಆದಿಲ್‌ಶಾಹನು ನಾಣ್ಯಗಳು ಹೇಗಿರಬೇಕೆಂದು ತನ್ನ ದಸ್ತುರ-ಇ-ಅಮಲ್ (ಶಾಸನ)ದಲ್ಲಿ ಈ ರೀತಿಯಾಗಿ ಹೇಳಿದ್ದಾನೆ. ರೂಪಾಯಿ ಹಾಗೂ ನಾಣ್ಯಗಳನ್ನು ವರ್ತುಳದ ಆಕಾರದಲ್ಲಿ ಮತ್ತು ಭಾರದಲ್ಲಿ ಪರೀಕ್ಷೆ ಮಾಡಿದರೆ, ರಾಜಧಾನಿಯಾದ ಬಿಜಾಪುರದಲ್ಲಿಯ ನಾಣ್ಯಗಳಂತೆ ಮತ್ತು ರೂಪಾಯಿಗಳಂತೆಯೇ ಇರಬೇಕು. ಅದರಲ್ಲಿ ಒಂದು ಗುಂಜಿ ತೂಕಕೂಡ ಅಂತರವಿರಬಾರದು. ಹೀಗೆ ಇವನು ನಾಣ್ಯಗಳಲ್ಲಿ ಅಂತರವನ್ನು ಸಹಿಸುತ್ತಿರಲ್ಲಿಲ್ಲ.

ಅದೇ ರೀತಿಯಾಗಿ ಟಂಕಸಾಲಿಯ ಮುಖ್ಯಾಧಿಕಾರಿ ಮತ್ತು ಅಮಲದಾರರನ್ನು ನೇಮಿಸಿ, ಬಂಗಾರ, ಬೆಳ್ಳಿಯ ಹಾಗೂ ತಾಮ್ರದ ಟಂಕಸಾಲೆಯನ್ನು ಪ್ರಾರಭಿಸಬೇಕು. ಪುತ್ಥಳಿ, ಹೊನ್ನು ಇತ್ಯಾದಿಗಳನ್ನು ಬಂಗಾರದಲ್ಲಿ ಮತ್ತು ರೂಪಾಯಿ, ಖುರ್ದಾಗಳನ್ನು ತಯಾರಿಸುವ ಟಂಕಸಾಲೆಗಳನ್ನು ಪ್ರಾರಂಭಿಸಬೇಕು. ಬಂಗಾರದ ಒಂದು ಹೊನ್ನು ಮತ್ತು ಅರ್ಧಹೊನ್ನ ಈ ಪ್ರಮಾಣದಲ್ಲಿ, ಬೆಳ್ಳಿಯ ಒಂದು ರೂಪಾಯಿ, ಅದ್ದೇಲಿ, ಪಾವಲಿ ಈ ಪ್ರಮಾಣದಲ್ಲಿ, ತಾಮ್ರದ ಆರು ಪೈಸೆಗಳ ಒಂದು ಪೈಸೆ, ಮೂರು ಪೈಸೆಗಳ ಒಂದು ಪೈಸೆ, ಎರಡು ಪೈಸೆಗಳ ಒಂದು ಪೈಸೆ ಮತ್ತು ಒಂದು ಪೈಸೆ ಹೀಗೆ ಈ ಪ್ರಮಾಣದಲ್ಲಿ ತಯಾರಿಸಬೇಕು. ಪ್ರತಿಯೊಂದು ವಸ್ತುಗಳು ಸರಿಯಾಗಿ ಮತ್ತು ಒಂದೇ ರೀತಿಯಾಗಿ ಇರುವಂತೆ ತಯಾರಿಸಲು ಆದೇಶ ನೀಡಬೇಕು. ನೋಡಿದವರೆಲ್ಲ ಇದೆಂಥ ಚಮತ್ಕಾರ ! ಒಂದೆ ರೀತಿಯಾಗಿದೆ ಎಂಬಂತೆ ಇರಬೇಕು. ಒಂದು ಸಣ್ಣದು, ಇನ್ನೊಂದು ದೊಡ್ಡದು ಹೀಗೆ ಆಗಿರಬಾರದು ಹೀಗೆ ತಯಾರಿಸಿದ ಮೇಲೆ ಟಂಕಸಾಲೆಯಲ್ಲಿ ಅದರ ಮೇಲೆ ಸಿಕ್ಕಾ ಒತ್ತಬೇಕು. ಪ್ರತಿಯೊಂದು ಧಾತುಗಳು ಕೂಡದಂತೆ ಶುದ್ಧವಾದ ಧಾತುವನ್ನು ಉಪಯೋಗಿಸುವಲ್ಲಿ ಎಚ್ಚರಿಕೆ ವಹಿಸಿ, ಧಾತುಗಳನ್ನು ಮಿಶ್ರಣ ಮಾಡದಂತೆ ಮತ್ತು ಟಂಕಸಾಲೆಯ ಅಧಿಕಾರಿಗಳಲ್ಲಿ ಗಲಿಬಲಿ ಮಾಡುವವರಿಗೆ ಯೋಗ್ಯ ಶಿಕ್ಷೆಯನ್ನು ಕೊಡಬೇಕು.[೬೬]

ರಾಜ್ಯಾದಾಯದ ಮೂಲಗಳು :

೧) **ಭೂಕಂದಾಯ :** ನೈಸರ್ಗಿಕ ಸಂಪನ್ಮೂಲಗಳಲ್ಲಿ ಪ್ರಧಾನವಾಗಿ ಭೂಮಿ, ಅರಣ್ಯ, ಖನಿಜ, ನೀರು ಸೇರ್ಪಡೆಯಾಗುತ್ತದೆ. ಅರ್ಥಶಾಸ್ತ್ರದ ಪ್ರಕಾರ ಭೂಮಿ ಪಾರಿಭಾಷಿಕ ಪದವಾಗಿದೆ. ನಿಸರ್ಗದ ಯಾವುದೆ ಉಚಿತ ಕೊಡುಗೆಯು ಭೂಮಿಯಲ್ಲಿ ಪರಿಣಿತವಾಗುತ್ತದೆ. ಆದ್ದರಿಂದ ಅಲ್ಲಿ ಹೇಳಲಾದ ನೈಸರ್ಗಿಕ ಸಂಪನ್ಮೂಲಗಳೆಲ್ಲವು ಭೂಮಿಯಲ್ಲಿ ಅಂತರ್ಗತವಾಗುತ್ತದೆ. ಪ್ರಾಚೀನ ಕಾಲದಲ್ಲಿ ಭೂಮಿಗೆ ವಿಶಾಲವಾದ ಅರ್ಥವಿರಲಿಲ್ಲ, ಆದರೆ ಪ್ರಾಮುಖ್ಯತೆಯಿತ್ತು. ಬೇಸಾಯವು ಬಹು ಜನರ ಉದ್ಯೋಗವಾಗಿತ್ತು. ಅವರು ದೇವಾಲಯ, ಮಠ ಮುಂತಾದವುಗಳಿಗೆ ಕೊಟ್ಟ ಭೂದಾನವನ್ನು ಅಪಹರಿಸಿದವನು ಪಂಚಮಹಾಪಾತಕಗಳನ್ನು ಮಾಡಿದಷ್ಟು ಕೇಡಾಗುತ್ತದೆ ಎಂದು ಶಾಸನಗಳು ತಿಳಿಸುತ್ತವೆ. ಇದರಿಂದ ಭೂಮಿಯ ಮಹತ್ವವನ್ನು ತಿಳಿಯಬಹುದಾಗಿದೆ.

ದಕ್ಷಿಣದ ಬಹಮನಿ ಸುಲ್ತಾನರ ಕಾಲದಲ್ಲಿ ಉತ್ಪತ್ತಿಯ ೧/೬ ಭಾಗ ಕಂದಾಯ ರೂಪದಲ್ಲಿ ಸಲ್ಲಿಸಬೇಕಾಗಿತ್ತು. ಬಿಜಾಪುರದ ಆದಿಲ್‌ಶಾಹಿಗಳು ಕೂಡ ತಮ್ಮ ಪೂರ್ವಿಕರಂತೆ ಕಂದಾಯ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬಂದರು. ಇಡೀ ದಕ್ಷಿಣ ಭಾರತದಲ್ಲಿಯೇ ಆದಿಲ್‌ಶಾಹಿಗಳು ಅತಿ ಕಡಿಮೆ ಕಂದಾಯವನ್ನು ತಮ್ಮ ಪ್ರಜೆಗಳ ಮೇಲೆ ಹಾಕಿದ್ದರು. ಗುಜರಾತ, ಬೇರಾರ, ಖ್ಡಾನದೇಶ, ದೌಲತಾಬಾದ, ಔರಂಗಾಬಾದ ಮತ್ತು ಮೊಗಲರ ಪ್ರದೇಶಗಳಲ್ಲಿ ಬಿಜಾಪುರಕ್ಕಿಂದ ಅಧಿಕವಾದ ಕಂದಾಯವಿತ್ತು.[೬೭]

೨) ರಾಜ್ಯಾದಾಯದ ಇತರ ಮೂಲಗಳು :

ಭೂಕಂದಾಯವು ಪ್ರಮುಖ ಆದಾಯದ ಮೂಲವಾಗಿದ್ದರೂ, ಕೂಡ ಸುಲ್ತಾನರು ಸಂಗ್ರಹಿಸುತ್ತಿದ್ದ ಇತರ ತೆರಿಗೆಗಳು ರಾಜ್ಯಾದಾಯವನ್ನು ಹೆಚಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದವು.

೧) ಲೂಟಿ ಅಥವಾ ಸುಲಿಗೆ ಮಾಡಿದ ಹಣ :

ಇದು ಭೂ ಕಂದಾಯದ ನಂತರದ ಪ್ರಮುಖ ಆದಾಯದ ಮೂಲವಾಗಿತ್ತು. ಇದನ್ನು ಯುದ್ಧದ ವೇಳೆ ಸಂಗ್ರಹಿಸಲಾಗುತ್ತಿತ್ತು. ಸೋತ ರಾಜನಿಂದ ಪಡೆಯುತ್ತಿದ್ದ ನಷ್ಟ ಭರ್ತಿ ಹಣ, ಲೂಟಿ ಹಾಗೂ ಸುಲಿಗೆಯಿಂದ ಪರ್ಯಾವಸಾನಗೊಂಡ ಯುದ್ಧಗಳು ರಾಜ್ಯಾದಾಯದ ಪ್ರಮುಖ ಮೂಲಗಳಾಗಿದ್ದವು. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಬಿಜಾಪುರದ ಸೈನ್ಯ ಚಂದೀಕೋಟೆಯನ್ನು ಹಾಗೂ ಕರ್ನಾಟಕದ ಇತರ ಭಾಗಗಳನ್ನು ವಶಪಡಿಸಿಕೊಂಡಾಗ ಭಾರೀ ಬೆಲೆಬಾಳುವ ಜಡವಾಹಿರಗಳು ಮತ್ತು ಜಡಾವದಾರ ಹತ್ಯಾರಗಳು, ಅಲ್ಲದೇ ಅನೇಕ ಉತ್ತಮ ಪದಾರ್ಥಗಳು, ಶಸ್ತ್ರಾಸ್ತ್ರಗಳು, ನಗದು ಹಣ ಹೀಗೆ ಒಟ್ಟಾರೆ ನಾಲ್ಕು ಕೋಟಿ ಹೊನ್ನುಗಳಷ್ಟು ಸಂಪತ್ತು ಬಾದಶಹ ಗಾಜಿಯ (ಮಹಮ್ಮದ ಆದಿಲ್‌ಶಾಹನ) ಖಜಾನೆಯನ್ನು ಸೇರಿತು.[೬೮]

ಮಹಮ್ಮದ ಆದಿಲ್‌ಶಾಹನು ಹೊರಡಿಸಿದ ಫರ್ಮಾನ್ ಒಂದರಲ್ಲಿ " ಕೈಗೆ ಸಿಕ್ಕ ಲೂಟಿಯಾದ ಸಂಪತ್ತಿನಲ್ಲಿ ಮತ್ತು ಖಜಾನೆಯಲ್ಲಿ ಜಮೆಯಾದ ಲೂಟಿ ಸಂಪತ್ತಿನಲ್ಲಿ 'ಜಕಾತ' ಎಂದರೆ ಶೇಕಡ ಎರಡೂವರೆ ರೂಪಾಯಿಯಂತೆ ಧರ್ಮಾದಾಯ ಮತ್ತು 'ಖಮ್ಸ' ಎಂದರೆ ಶೇಕಡ ಐದು ರೂಪಾಯಿ ಪೈಗಂಬರರ ಹೆಸರಿನಲ್ಲಿ ಹಿಸ್ಸೆಯನ್ನು ತೆಗೆದಿಟ್ಟು ಆ ದ್ರವ್ಯವನ್ನು ಫಕೀರ ಜನರು, ಔಲೀಯಾ ಇತ್ಯಾದಿ ಜನರಿಗೆ ದಾನ ಮಾಡಬೇಕು. ಇದಲ್ಲದೇ ಮತ್ತೆ ಬೇರ ಬೇರೆ ಏನಾದರೂ ದೊರತರೆ ಅದನ್ನು ಜುಮ್ಮಾ ಮಸೀದಿ ಇಲ್ಲವೇ ಆಸಾರ ಮಹಲಿನಲ್ಲಿ ಬೇರೆ ಬೇರೆಯಾಗಿ ಇಟ್ಟು, ಕುರಾನ್ ಶರೀಫದಲ್ಲಿ ಹೇಳಿದಂತೆ ಅದನ್ನು ಖರ್ಚು ಮಾಡಬೇಕು. ಈ ಕೆಲಸಕ್ಕೂ ಅಲಾಹಿದಾ ಅಧಿಕಾರಿಗಳನ್ನು ನೇಮಿಸಬೇಕು.[೬೯]

೨) ವಾರ್ಷಿಕ ಪೊಗದಿ ಅಥವಾ ಕಪ್ಪು ಕಾಣಿಕೆ :

ಆದಿಲ್‌ಶಾಹಿಗಳಿಗೆ ವಿಧೇಯರಾಗಿದ್ದ ಹಿಂದೂ ಸಾಮಂತ ರಾಜರು ಸಲ್ಲಿಸುತ್ತಿದ್ದ ವಾರ್ಷಿಕ ಪೊಗದಿಯು ರಾಜ್ಯದ ಭಂಡಾರಕ್ಕೆ ನೇರವಾಗಿ ಸೇರುತ್ತಿತ್ತು. ಮಹಮ್ಮದ ಆದಿಲ್‌ಶಾಹನು ಹಿಂದೂ ರಾಜರಿಂದ ಮೂವತ್ತು ದಶಲಕ್ಷ ರೂಪಾಯಿಗಳನ್ನು ಸಂಗ್ರಹಿಸುತ್ತಿದ್ದನು. ಆದರೆ ಈ ವರಮಾನವು ಸ್ಥಿರವಾಗಿರಲಿಲ್ಲ. ನಾಯಕರು ಆಗಾಗ ಪೊಗದಿ ಕೊಸುತ್ತಿರಲಿಲ್ಲ. ಅದು ಕೇಂದ್ರದಲ್ಲಿ ರಾಜಕೀಯ ಸ್ಥಿರತೆಯನ್ನು ಅವಲಂಬಿಸಿರುತ್ತಿತ್ತು.

ನಾಯಕವಾಡಿಯ ಕಡೆಯಿಂದ ಬರಬೇಕಾದ ಕಪ್ಪ ಬರದಿದ್ದಾಗ ಮಹಮ್ಮದ ಆದಿಲ್‌ಶಾಹನು '೧೬೪೦ ಸಪ್ಟಂಬರ ೩ ರಂದು ಸಂದಲಾಪುರದ ಮಾಮಲೆಯ ಹವಾಲ್ದಾರ್ ಮತ್ತು ಕಾರಕೂನನಿಗೆ ಒಂದು ಫರ್ಮಾನ ಕಳಿಸಿದನು. ಅದು ಈ ಕೆಳಗಿನಂತಿದೆ.

" ದರಬಾರಕ್ಕೆ ಅರ್ಜಿ ಬಂದಿದೆ, ಏನೆಂದರೆ ನಾಯಕವಾಡಿ ಕಡೆಯಿಂದ ಬರಬೇಕಾಗಿದ್ದ ಕಪ್ಪದ ಸಂಬಂಧದಲ್ಲಿ ನವಾಬಖಾನ ಭಾಯಿಯ ಜನ ಬಂದಾಗ ಅದರ ಹಣ ವಸೂಲು ಮಾಡಲು ನೀವು ಮತ್ತು ನಾಯಕವಾಡಿಯು ಅಡ್ಡಿ ಪಡಿಸಿದ್ದೀರಿ. ಅದೇಷ್ಟು ಧೈರ್ಯ? ನಾಯಕವಾಡಿಯು ಕಪ್ಪ ಒಪ್ಪಿಕೊಂಡಾಗಲೇ ಅವನಿಗೆ ನಾಯಕನೆಂದು ಒಪ್ಪಿದ್ದೇವೆ. ಈಗ ಕಪ್ಪ ಕೊಡಲು ಹಿಂಜರಿಯುತ್ತಿದ್ದಾರೆ. ಅವನ ಕಡೆಯಿಂದ ನಾಯಕ ಪಟ್ಟವನ್ನು ತಗೆದುಕೊಳ್ಳಲಾಗುವುದೆಂದು ತಿಳಿಯಿರಿ, ಯಾರು ಕಪ್ಪ ಕೊಡಲು ಒಪ್ಪುತ್ತಾರೋ ಅವರಿಗೆ ನಾಯಕ ಪಟ್ಟ ಕೊಡಲಾಗುವುದು. ಈಗ ಈ ಫರ್ಮಾನ ಮುಟ್ಟಿದೊಡನೆ ಉಳಿದೆಲ್ಲವನ್ನು ವಸೂಲಿಮಾಡಿ ನವಾಬನ ಕಾರಕೂನನಿಗೆ ಕೊಡಬೇಕು. ಇದಕ್ಕೆ ತಡವಾದರೆ ಇದರ ಪರಿಣಾಮ ನೆಟ್ಟಗೆ ಆಗೋದಿಲ್ಲ. ಯಾರು ಇದಕ್ಕೆ ಅಡ್ಡಿ ಪಡಿಸಿದರೂ ಅವನಿಗೆ ಶಿಕ್ಷೆ ಆಗುವುದು, ಕಪ್ಪ ಒಟ್ಟುಗೂಡಿಸಿ ಮೊದಲಿನ ಆದೇಶದಂತೆ ಕೊಡಬೇಕು"[೭೦]

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಕರ್ನಾಟಕದ ಇತರ ಭಾಗಗಳಿಂದ ಬರುತ್ತಿದ್ದ ೫,೨೫,೬೧,೬೪೯ ರೂಪಾಯಿಗಳ ವಾರ್ಷಿಕ ಪೊಗದಿಯ ವಿವರಗಳು ಈ ಕೆಳಗಿನಂತಿವೆ.

ಜಮೇದಾರ ಶ್ರೀರಂಗಪಟ್ಟಣ-೩,೫೮,೫೧,೩೬೧, ಬೇರಿಜ್ ಜಮೇದಾರ-೧,೦೨,೬೩,೬೩೫, ಜಮೇದಾರ ಸಂಧ್ಯಾ-೭,೨೦,೮೭೧, ಜಮೇದಾರ ದುರ್ಗ(ಚಿತ್ರದುರ್ಗ) ೧೧,೨೫,೦೦೦, ಜಮೇದಾರ ಜರಿಮುಲ್ಲಾ ಜರಮಲೈ-೯೩,೭೫೦, ಜಮೇದಾರ ತೇರಿಖಂಡಾ-೧,೭೨,೫೦೦, ಜಮೇದಾರ ರತ್ನಾಗಿರಿ-೯೩,೭೫೧, ಜಮೇದಾರ ಸರಹಾರಿ-೭೫,೦೦೦, ಜಮೇದಾರ ಪಾವಗಡ-೧,೨೩,೭೫೦, ಜಮೇದಾರ ಮಂಗಪಾಲ-೧೫,೦೦೦, ಜಮೇದಾರ ಮನೋರಿ-೫,೬೪೦, ಜಮೇದಾರ ಜಗಪಾಲ-೧,೯೨,೫೦೦, ಜಮೇದಾರ ಕೋಟೆಖಡಾ-೭೫,೦೦೦, ಜಮೇದಾರ ಕಲವಾಡೀ-೩೭,೫೦೦, ಖೇಜರಿ ಜಮೇದಾರ-೯೩,೦೦೦, ಜಮೇದಾರ ಹಾನಹಾಲಿ-೧೦,೨೯,೦೬೦, ಜಮೇದಾರ ಆನೆಗೊಂದಿ-೧,೭೩,೫೫೦, ಜಮೇದಾರ ಲೋಕೋರಿ-೨,೨೫,೦೦೦, ಜಮೇದಾರ ಗಂಗಾಗಿರಿ-೧,೯೧,೧೬೫, ಜಮೇದಾರ ಬಳ್ಳಾರಿ-೮೬,೨೫೦, ಜಮೇದಾರ ಕೋರಿಕೋಡಾ-೧,೮೭,೫೦೦, ಜಮೇದಾರ ಸಬರಗಡ-೩೭,೫೦೦[೭೧]

೩) ಭೇಟ್ ಮತ್ತು ಹೊಗೆಸೊಪ್ಪು :

ಭೇಟ್ ಎನ್ನುವುದು ಆಸ್ಥಾನಿಕರು ಪ್ರಜೆಗಳು ಹಾಗೂ ಸಣ್ಣಪುಟ್ಟ ರಾಜರು ಸುಲ್ತಾನನ ಹುಟ್ಟು ಹಬ್ಬ, ಪಟ್ಟಾಭಿಷೇಕ ಮತ್ತು ಬೇಟ್ಟಿಯ ಸಮಯದಲ್ಲಿ ತಮ್ಮ ಸಾರ್ವಭೌಮನಿಗೆ ಬೆಲೆಬಾಳುವ ಕಾಣಿಕೆಗಳನ್ನು ನೀಡುತ್ತಿದ್ದರು. ಸುಲ್ತಾನನಿಂದ ಜಾಹಗೀರು ಪಡೆದವರು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಹೊಗೆಸೊಪ್ಪಿನ ಮೇಲಿನ ತೆರಿಗೆಯೂ ಕೂಡ ರಾಜ್ಯಕ್ಕೆ ಗಣನೀಯ ಆದಾಯ ತರುತ್ತಿತ್ತು.

೪) ಟಂಕಸಾಲೆಗಳ ಮೇಲಿನ ತೆರಿಗೆ :

ಬಿಜಾಪುರದಲ್ಲಿ ಕೇವಲ ಒಂದು ಸರಕಾರಿ ಟಂಕಸಾಲೆ ಇತ್ತು. ಅದು ನಾಣ್ಯ ಮುದ್ರಿಸುವ ಒಬ್ಬ ನಿಪುಣನ ಕೈಯಲ್ಲಿತ್ತು. ಇತರ ಖಾಸಗೀ ವ್ಯಕ್ತಿಗಳು ಸಹ ನಾಣ್ಯ ಮುದ್ರಿಸುವ ಪರವಾನಿಗೆ ಶುಲ್ಕವನ್ನು ಸಲ್ಲಿಸಿ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳನ್ನು ಮುದ್ರಿಸುವ ಅಥವಾ ಟಂಕಿಸುವ ಪರವಾನಿಗೆ ಪಡೆದುಕೊಂಡಿದ್ದರು. ಈ ರೀತಿಯ ಪರವಾನಿಗೆ ಶುಲ್ಕದಿಂದ ಬಿಜಾಪುರದ ಆಡಳಿತವು ಹೆಚ್ಚಿನ ಪ್ರಮಾಣದ ಆದಾಯವನ್ನು ಗಳಿಸುತ್ತಿತ್ತು.[೭೨]

ಟಂಕಸಾಲೆಗಳು ಹೇಗಿರಬೇಕು ಎಂಬುದರ ಬಗ್ಗೆ ಮಹಮ್ಮದ ಆದಿಲ್‌ಶಾಹನು ಹೊರಡಿಸಿದ ಫರ್ಮಾನನೊಂದು ಈ ರೀತಿಯಾಗಿ ತಿಳಿಸುತ್ತದೆ.

" ಟಂಕಸಾಲೆಗೆ ಮುಖ್ಯಾಧಿಕಾರಿ ಮತ್ತು ಅಮಲದಾರರನ್ನು ನೇಮಿಸಿ ಬಂಗಾರ, ಬೆಳ್ಳಿಯ ಹಾಗೂ ತಾಮ್ರದ ನಾಣ್ಯಗಳನ್ನು ಟಂಕಿಸುವ ಟಂಕಸಾಲೆಗಳನ್ನು ಪ್ರಾರಂಭಿಸಬೇಕು. ಬಂಗಾರದ ಒಂದು ಹೊನ್ನು ಮತ್ತು ಅರ್ಧ ಹೊನ್ನು ಈ ಪ್ರಮಾಣದಲ್ಲಿ ಬೆಳ್ಳಿಯ ಒಂದು ರೂಪಾಯಿ, ಅದ್ದೇಲಿ, ಪಾವಲಿ ಈ ಪ್ರಮಾಣದಲ್ಲಿ ತಾಮ್ರದ ಆರು ಪೈಸೆಗಳ ಒಂದು ಪೈಸೆ, ಹೀಗೆ ಈ ಪ್ರಮಾಣದಲ್ಲಿ ನಾಣ್ಯಗಳನ್ನು ತಯಾರಿಸಬೇಕು.

[illegible]

[illegible]

[illegible]

[illegible]

[illegible]

ಪ್ರತಿಯೊಂದು ವಸ್ತುಗಳು ಸರಿಯಾಗಿ ಒಂದೇ ರೀತಿ ಇರುವಂತೆ ತಯಾರಿಸಲು ಆದೇಶ ನೀಡಬೇಕು. ನೋಡಿದವರೆಲ್ಲ "ಇದೆಂಥ ಚಮತ್ಕಾರ! ಒಂದೇ ರೀತಿಯಾಗಿದೆ" ಎಂಬಂತೆ ಇರಬೇಕು. ಒಂದು ಸಣ್ಣದು, ಇನ್ನೊಂದು ದೊಡ್ಡದು ಹೀಗೆ ಆಗಿರಬಾದು. ಹೀಗೆ ತಯಾರಿಸಿದ ಮೇಲೆ ಟಂಕಸಾಲೆಯಲ್ಲಿ ಅದರ ಸಿಕ್ಕಾ ಒತ್ತಬೇಕು. ಪ್ರತಿಯೊಂದು ಧಾತುಗಳು ಕೂಡದಂತೆ ಶುದ್ಧವಾದ ಧಾತುವನ್ನು ಉಪಯೋಗಿಸುವಲ್ಲಿ ಎಚ್ಚರಿಕೆ ವಹಿಸಿ ಧಾತುಗಳು ಮಿಶ್ರಣ ಮಾಡದಂತೆ ಮತ್ತು ಟಂಕಸಾಲೆಯ ಅಧಿಕಾರಿಗಳಲ್ಲಿ ಗಲಿಬಿಲಿ ಮಾಡುವವರುಗೆ ತಕ್ಕ ಶಿಕ್ಷೆಯನ್ನು ಕೊಡಬೇಕು.[೭೩]

ಮಹಮ್ಮದ ಆದಿಲ್‌ಶಾಹನು ಟಂಕಸಾಲೆಯನ್ನು ತೆರೆಯಬೇಕಾದರೆ " ರೂಪಾಯಿ ಹಾಗೂ ನಾಣ್ಯಗಳನ್ನು ವರ್ತುಳದ ಆಕಾರದಲ್ಲಿ ಮತ್ತು ಭಾರ'ದಲ್ಲಿ ಪರೀಕ್ಷೆ ಮಾಡಿದರೆ, ರಾಜಧಾನಿಯಾದ ಬಿಜಾಪುರದಲ್ಲಿಯ ನಾಣ್ಯಗಳಂತೆ ಮತ್ತು ರೂಪಾಯಿಗಳಂತೆ ಇರಬೇಕು. ಅದರಲ್ಲಿ ಒಂದು ಗುಂಜಿ ತೂಕಕೂಡ ಅಂತರವಿರಬಾರದು, ಅಂಥ ಸ್ಥಳವನ್ನು ನೋಡಿಯೇ ಟಂಕಸಾಲೆಯನ್ನು ಮಾಡಬೇಕು.[೭೪] ಎಂದು ಹೇಳಿದ್ದಾನೆ.

೫) ಜಜಿಯಾ :

ಹಿಂದೂಗಳ ಮೇಲೆ ವಿಧಿಸಿದ್ದ 'ಜಜಿಯಾ' ಎಂಬ ತಲೆಗಂದಾಯವನ್ನು ಯೂಸುಫ ಆದಿಲ್‌ಖಾನನು ಕ್ರಿ.ಶ. ೧೫೧೦ರ ರಲ್ಲಿ ರದ್ದುಗೊಳಿಸಿದನು. ಆದರೆ ಮಹಮ್ಮದ ಆದಿಲ್‌ಶಾಹನು ತನ್ನ ಆಡಳಿತಾವಧಿಯಲ್ಲಿ ರಾಜ್ಯದಲ್ಲಿನ ಮುಸ್ಲಿಮೇತರ ಪ್ರಜೆಗಳ ಮೇಲೆ ಜಿಜಿಯಾ ತಲೆಗಂದಾಯವನ್ನು ಹೇರಿದನು. ಬಿಜಾಪುರದ ರಾಜ್ಯದ ಜನಸಂಖ್ಯೆಯಲ್ಲಿ ಹೆಚ್ಚಿನ ಪ್ರಮಾಣದ ಜನರು ಹಿಂದುಗಳೇ ಆಗಿದ್ದರಿಂದ ಈ ತೆರಿಗೆಗಳು ರಾಜ್ಯಾದಾಯದ ಮೂಲಗಳಲ್ಲಿ ಹೆಚ್ಚಿನ ಲಾಭ ತರುವ ಸ್ವರೂಪದ್ದಾಗಿತ್ತು. ಇವುಗಳಷ್ಟೇ ಅಲ್ಲದೇ, ಶುಭಸಂದರ್ಭಗಳಲ್ಲಿ ಸುಲ್ತಾನನಿಗೆ ಸಲ್ಲಿಸುಂತಹ ಕಾಣಿಕೆಗಳು ಮುಂತಾದವುಗಳು ರಾಜ್ಯಾದಾಯದ ಇತರ ಮೂಲಗಳಾಗಿದ್ದವು.[೭೫]

೬) ಹಿಂದೂಗಳ ಮೇಲಿನ ಇತರ ತೆರಿಗೆಗಳು :

ಸುಲ್ತಾನ ಮಹಮ್ಮದ ಆದಿಲ್‌ಶಾಹನು ರಾಜ್ಯದ ಆಡಳಿತಕ್ಕಾಗಿ 'ದಸ್ತುರುಲ್-ಅಮಲ್' ಎಂಬ ಅನೇಕ ಶಾಸನಗಳನ್ನು ಮಾಡಿದ್ದನು. ಆ ಶಾಸನದಲ್ಲಿ ಕೆಲವು ಶಾಸನಗಳು ಹಿಂದುಗಳಿಗೆ ಯಾವ ಯಾವ ಅಂಶಗಳಿಗೆ ಸಂಬಂಧಿಸಿದಂತೆ ತೆರಿಗೆಗಳನ್ನು ವಿಧಿಸಬೇಕು ಮತ್ತು ಯಾವ ಸಂದರ್ಭಗಳಲ್ಲಿ ತೆರಿಗೆ ವಿನಾಯತಿ ನೀಡಬೇಕು ಎಂಬ ವಿಷಯಗಳ ಬಗ್ಗೆ ವಿವರಣೆ ನೀಡುತ್ತದೆ.

ಮಹಮ್ಮದ ಆದಿಲ್‌ಶಾಹನು ಕುರಾನ್ ಶರೀಫದ ಆದೇಶದಂತೆ ಮತ್ತು ದೇವರ ಆಜ್ಞೆಯ ಮೇರೆಗೆ ಒಟ್ಟಾರೆ ಸುಖಿ ಪುರುಷರಿಂದ ಮತ್ತು ದೇವರ ಪೂಜೆ ಮಾಡುವ ಹಿಂದೂ ಜನರಿಂದ, ಕೆಟ್ಟ ಕೆಲಸ ಅಂದರೆ

ನಾಚ್, ತಮಾಷಾ ಮತ್ತು ಮದ್ಯಪಾನ ಇತ್ಯಾದಿಗಳನ್ನು ಮಾಡುವರಿಂದ ಠರಾವಿಸಿದ ಪ್ರಮಾಣದಂತೆ ಖಂಡಣಿ ತೆಗೆದುಕೊಳ್ಳಲು ಮುಸಲ್ಮಾನರ ಸರಹದ್ದಿನಲ್ಲಿರುವ ಒಟ್ಟು ರಾಜ್ಯಗಳಲ್ಲಿಯ ಮುಖ್ಯಾಧಿಕಾರಿಗಳಿಗೆ, ಮಾಮಲೇದಾರರಿಗೆ ಆಜ್ಞೆ ಕಳಿಸಬೇಕು. ರಾಜ್ಯದಲ್ಲಿಯ ಹಿಂದೂ ಜನರಿಂದ ಕುರಾನ್ ಶರೀಫದ ಆದೇಶದಂತೆ ಬಿಜಾಪುರದಲ್ಲಿಯ ಹಿಂದೂ ಜನರಿಂದ ತಪ್ಪು ದಾರಿಯ ನಡತೆಯಾದರೆ ಕೆಳಗೆ ಬರೆದ ಪ್ರಮಾಣದಂತೆ ಖಂಡಣಿಯನ್ನು ತಗೆದುಕೊಳ್ಳುತ್ತ ಹೋಗಬೇಕು ಎಂದು ಹೇಳಿದ್ದಾನೆ. ಅದು ಹೀಗಿದೆ.

ಯಾವ ಹಿಂದೂ ಶ್ರೀಮಂತನಿದ್ದು, ವ್ಯಾಪಾರ ಅಥವಾ ಯಾವ ಕಸಬನ್ನೂ ಮಾಡದೆ, ಒಂದು ವರ್ಷ ಅಥವಾ ಅದಕ್ಕಿಂತ ಅಧಿಕವಾಗಿ ತನ್ನ ಪ್ರಪಂಚವನ್ನು ನಿರ್ವಹಿಸಲು ಶಕ್ತನಿರುವನೋ ಆ ಹಿಂದೂವಿನಿಂದ ಪ್ರತಿ ತಿಂಗಳು ಒಂದು ತೊಲೆ ಮತ್ತು ನಾಲ್ಕು ಮುಕ್ಕಾಲು ಗುಂಜಿ ಬೆಳ್ಳಿಯನ್ನು ತಗೆದುಕೊಳ್ಳಬೇಕು.

ಯಾವ ಹಿಂದೂ ಸರಾಸರಿ ಸಂಪತ್ತಿನವನಿದ್ದು, ಏನಾದರೊಂದು ವ್ಯಾಪಾರ ಮಾಡದೇ, ಪ್ರಪಂಚ ನಿರ್ವಹಣೆ ಮಾಡಲು ಶಕ್ತನಿದ್ದರೆ ಅವನಿಂದ ಅರ್ಧ ತೊಲೆ ಹಾಗೂ ನಾಲ್ಕು ಮುಕ್ಕಾಲರ ಅರ್ಧ ಗುಂಜಿ ತೂಕದ ಬೆಳ್ಳಿಯನ್ನು ಪ್ರತಿ ತಿಂಗಳೂ ತಗೆದುಕೊಳ್ಳತ್ತ ಹೋಗಬೇಕು.

ಯಾವ ಹಿಂದೂವಿನ ಹತ್ತಿರ ಏನೂ ಧನ ಸಂಗ್ರಹವಿಲ್ಲ ಮತ್ತು ಏನಾದರೊಂದು ಕಸಬು ಇಲ್ಲವೇ ವ್ಯಾಪಾರ ಮಾಡಿ ಪ್ರಪಂಚ ನಿರ್ವಹಣೆ ಮಾಡುತ್ತಾನೋ ಮತ್ತು ಆತನ ಊಟದ ಖರ್ಚು ಮತ್ತು ಹೆಂಡಿರು, ಮಕ್ಕಳ ಖರ್ಚನ್ನು ನೋಡಿಕೊಂಡು ಉಳಿಸಿದ ಹಣದಲ್ಲಿ ಖಂಡಣಿ ತಗೆದುಕೊಳ್ಳುವಂತೆ ಕಂಡರೆ ಅವನಿಂದ ಒಂದು ನಾಲ್ಕಾಂಶ ತೊಲೆ ಹಾಗೂ ನಾಲ್ಕು ಮುಕ್ಕಾಲರ ನಾಲ್ಕರಲ್ಲಿಯ ಒಂದು ಭಾಗ ತೂಕದ ಗುಂಜಿಯಂತೆ ಪ್ರತಿ ತಿಂಗಳೂ ತಗೆದುಕೊಳ್ಳಬೇಕು.

ಶ್ರೀಂಂತ ಹಿಂದೂವಿನಿಂದ ಆ ಕಾನೂನಿನಂತೆ ಮತ್ತು ಸದಾ ದರಿದ್ರ ಹಿಂದೂವಿನಿಂದ ಆ ಕಾನೂನಿ ಪ್ರಮಾಣದಲ್ಲಿ ಖಂಡಣಿ ತೆಗೆದುಕೊಳ್ಳಬೇಕು.

ಆರು ತಿಂಗಳು ಶ್ರೀಮಂತ ಇನ್ನಾರು ತಿಂಗಳು ದರಿದ್ರನಂತೆ ದಿನ ಕಳೆಯುವ ಹಿಂದೂವಿನಿಂದ ಮದ್ಯಮ ಪ್ರಕಾರದ ಖಂಡಣಿ ತೆಗೆದುಕೊಳ್ಳಬೇಕು. ಭಟ್ಟ ಮಂಡಳಿ ಮತ್ತು ಜಂಗಮ ಜನರು ಎಲ್ಲರಿಂದಲೂ ಉಪಾಧ್ಯಾಯತನದ ವ್ಯಾಪಾರ ಮಾಡುತ್ತಾರೆ ಮತ್ತು ಖಂಡಣಿ ಕೊಡಲು ಹಕ್ಕುದಾರರಾಗಿದ್ದಾರೆ. ಆದ್ದರಿಂದ ಅವರಿಂದ ಖಂಡಣಿ ತಗೆದುಕೊಳ್ಳಬೇಕು.

ಕುರಾನ್ ಶರೀಫದಂತೆ ಯಾವ ಕಸಬು ಇಲ್ಲವೇ ವ್ಯಾಪಾರ ಮಾಡದೇ ಸಂಪತ್ತನ್ನು ಸಂಗ್ರಹಿಸಿ ಸಮರ್ಥನಾಗಿದ್ದರೆ ಆತನಿಂದ ದ್ರವ್ಯ ಹರಣ ಮಾಡುವಲ್ಲಿ ಎಂಥ ಯುಕ್ತಿ ಬೇಕೋ ಹಾಗೆ ಮಾಡಿ ಆ ಹಿಂದೂ ಎಷ್ಟು ಖಂಡಣಿಯನ್ನು ಕೊಡಲು ಶಕ್ಯವೋ ಅಷ್ಟನ್ನು ತಗೆದುಕೊಳ್ಳಬೇಕು.

ಖಂಡಣಿ ಕೊಡಬೇಕಾದವನು ಸ್ವತಃ ಬಂದು ತನ್ನ ಕೈಯಿಂದ ಕೊಡಬೇಕು. ತನ್ನ ಕಡೆಯ ಯಾವುದೇ ಮುಖ್ತ್ಯಾರಿಯಿಂದ ಕಳಿಸಿಕೊಡಬಾರದು. ಖಂಡಣಿ ತೆಗೆದುಕೊಳ್ಳುವವನು ಕುಳಿತಿರಬೇಕು ಕೊಡುವವನು ಎದ್ದು ನಿಂತು ಕೊಡಬೇಕು.

ಖಂಡಣಿಯಾಗಿ ಬಂದದ್ದನ್ನು ಖಜಾನೆಯಲ್ಲಿ ದಾಖಲಿಸಿ ಕುರಾನ್ ಶರೀಫದಲ್ಲಿ ಬರೆದಂತೆ ಖರ್ಚು ಮಾಡಬೇಕು ಎಂದು ತಿಳಿಸಿದ್ದಾನೆ.

ಮಹಮ್ಮದ ಆದಿಲ್‌ಶಾಹನು ದಿನಾಂಕ ೨೬ ಮೇ ೧೬೪೭ ರಂದು ಹಸನ ರೂಮಿಖಾನ ಮತ್ತು ಕಾರಕೂನನಿಗೆ ಹಿಂದೂಗಳ ಮನೆಗಳ ಮೇಲೆ ಯಾವ ಪ್ರಮಾಣದಲ್ಲಿ ತೆರಿಗೆ ವಸೂಲಿ ಮಾಡಬೇಕೆಂದು ತಳಿಸಿ ಫರ್ಮಾನ ಹೊರಡಿಸಿದನು. ಅದು ಈ ರೀತಿಯಾಗಿದೆ.

“ ಹಿಂದೂಗಳಿಗೆ ಗಣಾಚಾರಿ ಅಧಿಕಾರ ರದ್ದುಗೊಳಿಸಲಾಗಿದ್ದು, ಸದರಿ ಮಾಮಲೆಯ ಹೋಬಳಿ, ಗ್ರಾಮ, ಮಾರುಕಟ್ಟೆ, ಪೇಟೆ ಇಲ್ಲಿಯ ತಡೆಯಾಜ್ಞೆ ಸಿಕ್ಕ ಲಿಂಗದಾರ ಹಿಂದೂಗಳ ಕಡೆಯಿಂದ, ಪ್ರಥಮ ದರ್ಜೆ ಮನೆಗಳಿಗೆ ಪಾವ ಹೊನ್ನ ಚವಲ ವಾರ್ಷಿಕ, ಎರಡನೇ ದರ್ಜೆಯ ಮನೆಗೆ ಪಾನ ಹೊನ್ನ. ಮೂರನೆಯ ದರ್ಜೆಯ ಮನೆಗೆ ಮೂರುದುವಲ ಮತ್ತು ನಾಲ್ಕನೆಯ ದರ್ಜೆಯ ಮನೆಗೆ ಚವಲ, ಇಷ್ಟು ಖಾನಾಖುಷಿ ಈ ತೆರಿಗೆಯನ್ನು ವಿಧಿಸಲಾಗಿದೆ. ಅದನ್ನು ವಸೂಲು ಮಾಡಬೇಕು. ಅದನ್ನು ಹತ್ತಿರದ ಮತ್ತು ದೂರದ, ಹೀಗೆ ಎಲ್ಲ ತಡೆಯಾಜ್ಞೆ ಸಿಕ್ಕ ಎಲ್ಲ ಹಿಂದೂಗಳಿಂದ ವಸೂಲು ಮಾಡಿ ಖಜಾನೆ ಖಾತೆ ಕಡೆಗೆ ರವಾನಿಸಬೇಕು.[೭೬]

ಮಹಮ್ಮದ ಆದಿಲ್‌ಶಾಹನು ಯಾರಿಂದ ಖಂಡಣಿಯನ್ನು ತಗೆದುಕೊಳ್ಳಬಾರದು ಎಂಬುದನ್ನು ಹೀಗೆ ತಿಳಿಸಿದ್ದಾನೆ.

ಹೆಂಡಿರು, ಮಕ್ಕಳು, ಹದಿನೈದು ವರ್ಷದ ಒಳಗಿನವರು, ಮಾರಟದಲ್ಲಿ ತಗೆದುಕೊಂಡ ಚಾಕರರು, ದಾರಿ ಹೋಕರು, ಕುರುಡರು, ಆರು ತಿಂಗಳು ವರ್ಷಕ್ಕಿಂತ ಅಧಿಕವಾಗಿ ಬೇನೆ ಬಿದ್ದ ರೋಗಿಗಳು, ಖಂಡಣಿ ಕೊಡಬೇಕಾದ ಹಿಂದೂ, ಖಂಡಣಿ ಕೊಡುವ ಮೊದಲೇ ಮರಣ ಹೊಂದಿರುವರು, ಅರ್ಧಾಂಗವಾಯು ಪೀಡಿತರು, ಅತಿ ವೃದ್ಧ ಹಿಂದೂಗಳು, ಹಿಂದೂ ಜಾತಿಯ ಫಕೀರರು, ವೈರಾಗಿಳು, ಏನೊಂದು ವ್ಯಾಪಾರ ಮಾಡಿದ ದ್ರವ್ಯ ಸಂಚಯ ಮಾಡದ ಹಿಂದೂಗಳು, ಖಂಡಣಿ ಕೊಡಬೇಕಾದ ಹಿಂದೂ ಆ ಮೊದಲೇ ಮುಸಲ್ಮಾನನಾದರೆ ಮತ್ತು ಮುಸಲ್ಮಾನನು ಕುರಾನ್ ಶರೀಫದ ವಾಕ್ಯಕ್ಕೆ ತಪ್ಪಿ ಏನಾದರೂ ಅಂದರೆ ಆ ತುಸು ಅಪರಾಧದಿಂದಾಗಿ ಅವನಿಂದ, ಹೀಗೆ ಇವರಾರಿಂದಲೂ ಎಂದಿಗೂ ಖಂಡಣಿ ತೆಗೆದುಕೊಳ್ಳವಾರದು.[೭೭]

ದಿನಾಂಕ ೭ ಮೇ ೧೬೪೬ ರಂದು ಮಹಮ್ಮದ ಆದಿಲ್‌ಶಾಹನು ಹಸನ ರೂಮಿಖಾನ ಮತ್ತು ಆತನ ಕಾರಕೂನನಿಗೆ ಕಳುಹಿಸಿದ ಫರ್ಮಾನ ಈ ರೀತಿಯಾಗಿದೆ.

" ಈ ಸಮಯದಲ್ಲಿ ಗೊಂದಾಜಿ ಬಿನ್ ನರಸೋಜಿ ಮತ್ತು ಡೊಂಗರಜಿಯ ಮಕ್ಕಳಾದ ಪದ್ಮೋಜಿ ಮತ್ತು ತಿಮ್ಮಾಜಿ ಖಜಾನೆ ಖಾತೆಯ ಚೊಂಡಗಿರಿ ಮತ್ತು ಸದರಿ ಮಾಮಲದ ಸಂಗದರಿ ಊರಿನ ಮೊಕಾಶಿಯ ಸೇವಕರಿಂದ ದರಬಾರಕ್ಕೆ ಬಂದಿದ್ದೇನೆಂದರೆ, ಬಹಳದಿನಗಳಿಂದ ಸಂಪೂರ್ಣ ಹಾಳಾಗಿ ಹೋಗಿದೆ. ಒಕ್ಕಲುತನ ನಡೆಯುತ್ತಿಲ್ಲ. ಮೊದಲಿನಿಂದಲೂ ದಿವಾಣಿ ಬಾಬತ್ತಿನ ಪಟ್ಟಿ ಈ ಊರಿನ ಮೇಲಿಲ್ಲ, ಆದರೆ ಠಾಣೆಯಿಂದ ಈ ಬಾಬತ್ತಿನ ಬಗ್ಗೆ ಬಹಳ ತೊಂದರೆ ಆಗುತ್ತಿದೆ. ನಮಗೆ ಈ ಊರು ಸಿಕ್ಕ ಮೇಲೆ ಬಹಳ ಪ್ರಯತ್ನ ಮಾಡಿ ರೈತರ ಮನವೊಲಿಸಿ ಊರಿಗೆ ಅಡಿಪಾಯ ಹಾಕಿ ಊರಲ್ಲಿ ಇರುವಂತೆ ಮಾಡಿದೆವು. ಠಾಣೆಯ ಅಂಜಿಕೆಯಿಂದ ಜನರು ಊರಲ್ಲಿರದೇ ಪರಊರಿಗೆ ಹೋಗುತ್ತಿದ್ದಾರೆ. ಇದರ ವಿಚಾರ ಆಗಬೇಕು. ಈ ಊರಿನ ಮೇಲೆ ದಿವಾಣಿ ಬಾಬತ್ತಿನ ಪಟ್ಟಿ ತೆಗೆದುಕೊಳ್ಳಬಾರದೆಂದು ಠರಾವಿದ್ದರೂ ಇದಕ್ಕಾಗಿ ಊರಿಗೆ ತೊಂದರೆ ಕೊಡುವುದರ ಅರ್ಥವೇನು? ಈಗ ಈ ಊರನ್ನು ಮೊಕಾಶಿ ಕಡೆ ಕೊಟ್ಟಿರುತ್ತದೆ ಮತ್ತು ಅದನ್ನು ತಿಳಿದು ಅವನಿಗೆ ಯಾವುದೇ ಕಷ್ಟಗಳನ್ನು ಕೊಡತಕ್ಕದ್ದಲ್ಲ. ಠಾಣೆಯ ಜನರನ್ನು ಊರಿನಿಂದ ಕಳಿಸತಕ್ಕದ್ದಲ್ಲ. ಜನರಿಗೆ ಧೈರ್ಯವನ್ನು ಕೊಡಬೇಕು, ಮತ್ತೆ ತಕರಾರು ಬರಬಾರದು."[೭೮] ಹೀಗೆ ಕೆಲವು ವೇಳೆ ಸುಲ್ತಾನನು ತೊಂದರೆಯಲ್ಲಿದ್ದವರನ್ನು ತೆರಿಗೆ ವಿನಾಯತಿಯನ್ನು ಕೊಟ್ಟಿದ್ದನ್ನು ಗಮನಿಸಬಹುದು.

ಇದೇ ತರಹದ ಇನ್ನೊಂದು ಫರ್ಮಾನವನ್ನು ದಿನಾಂಕ ೪ ಅಗಸ್ಟ ೧೬೪೯ ರಲ್ಲಿ ಮಹಮ್ಮದ ಕಾಸೀಮ ಮತ್ತು ಕಾರಕೂನನಿಗೆ ಬರೆದ ಫರ್ಮಾನ ಈ ರೀತಿಯಾಗಿದೆ.

" ಈ ಸಮಯದಲ್ಲಿ ಖಾಜಿ ಹೈದರ ಬಿನ ಖಾಜಿ ಸೈಯದ್ ಇವರು ದರಬಾರಕ್ಕೆ ವಿನಂತಿಸಿದ್ದೇನೆಂದರೆ, ಈ ಮಾಮಲಾದ ಬೋರಮಣಿ ಊರು ಎಲ್ಲ ಬಾಬತ್ತಿನೊಂದಿಗೆ ಖಾಜಿಯ ನಿರ್ವಹಣೆಗಾಗಿ ಬಹುಮಾನ ನೀಡಲಾಗಿತ್ತು. ಮತ್ತು ಅದು ನಡೆದಿದ್ದಾಗ ಈ ಮಾಮಲಾದ ಠಾಣೆಯ ಸಿಪಾಯಿ ಮತ್ತು ಕುದುರೆ ಸವಾರರನ್ನು ಕಳುಹಿಸಿ ಅವರಿಗೆ ಪ್ರತಿಯೊಂದು ವಿಷಯದಲ್ಲಿ ತಡೆಯೊಡ್ಡಿ, ಊರಿನ ಜನರನ್ನು ಠಾಣೆಗೆ ಕರೆದೊಯ್ದರು. ಅವರ ಕಡೆಯಿಂದ ನೂರು ಹೊನ್ನ ತಗೆದುಕೊಂಡರು. ಇದರ ಬಗ್ಗೆ ವ್ಯವಸ್ಥೆ ಆಗಬೇಕು. ಈ ಊರು ಮೇಲ್ಕಾಣಿಸಿದಂತೆ ಬಹುಮಾನ ಕೊಟ್ಟಿದ್ದರೂ ತೊಂದರೆ ಕೊಡಲು ಎಷ್ಟು ಧೈರ್ಯ? ಈಗ ಈ ಪತ್ರ ಮುಟ್ಟಿದ ಕೂಡಲೆ ಪ್ರಜೆಗಳಿಂದ ಪಡೆದ ಹಣವನ್ನು ಅವರಿಗೆ ಹಿಂದಿರುಗಿಸಿ ಅವರನ್ನು ಬಿಟ್ಟು ಬಿಡಿ. ಇನ್ನು ಮುಂದೆ ಈ ರೀತಿ ಮಾಡಬಾರದು. ಆ ಊರು ವಿಶಿಷ್ಠ ಬಾಬತ್ತಿನೊಡನೆ ಖಾಜಿಯ ತಾಬೆಯಲ್ಲಿ ಕೊಡಿ. ಅವನಿಗೆ ಯಾವುದೇ ತೊಂದರೆ ಕೊಡಬೇಡಿ. ಠಾಣೆಯಿಂದ ಸೈನಿಕರನ್ನು ಕಳಿಸಬೇಡಿ. ಖಾಜಿ ತನವನ್ನು ನಡೆಸಲು ಖಾಜಿಯು ಸೈಯದ ಮಹಮ್ಮದನಿಗೆ ಕಳಿಸಿದ್ದಾನೆ. ಅವನ ಕಡೆಯಿಂದ ಕಾನೂನಿನಂತೆ ಕೆಲಸ ಮಾಡಿಸಿಕೊಳ್ಳಬೇಕು."[೭೯]

೭) ಬಂದರುಗಳು :

ಬಂದರು ಪ್ರದೇಶಗಳಲ್ಲಿ ದಿನನಿತ್ಯ ನಡೆಯುವ ವ್ಯವಹಾರ ವಹಿವಾಟುಗಳೂ ಕೂಡ ರಾಜ್ಯಾದಾಯದ ಮೂಲಗಳಲ್ಲಿ ಒಂದಾಗಿತ್ತು. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಬಂದರುಗಳಿಂದ ಬರುತ್ತಿದ್ದ ಕಂದಾಯವನ್ನು ಈ ರೀತಿಯಾಗಿದೆ.

" ಎಲ್ಲಾ ಬಂದರುಗಳ ಒಟ್ಟು ಕಂದಾಯ ವಸೂಲಿಯ ವಿವರ ಈ ರೀತಿಯಾಗಿದೆ. ಧಾಬೋಳ ಮತ್ತು ವಿಸವಿ(ವಸಯೀ?) ಬಂದರುಗಳ ವಸೂಲಿ ೨೦೦೦ ಕ್ಕೂ ಅಧಿಕ, ಖಲಹಾವಿ ಬಂದರು-೭೦೦, ಚೆವಲೆ(ಚೌಲಿ) ಬಂದರ-೧೫,೦೦೦ ಸಂಕರ ಬಂದರ-೧೦,೦೦೦, ಗೋವೆಯ ಬಂದರವು ಕೆಲವು ದಿನಗಳ ನಂತರ ಬ್ರಿಟೀಷರ ಕೈ ಸೇರಿತು, ಅದರ ವಸೂಲಿ-೩೭,೫೦೦, ಸಾಷ್ಟೀ ಬಂದರ-೧೦,೦೦೦, ಖಾರೆ ಪಟ್ಟಣ ಬಂದರ-೨೪೦೦೦, ಹರಬೇರಿ ಬಂದರ-೫೦೦೦, ಸಾತೋರಿ ಬಂದರ-೩೫೦೦, ಮಹಮ್ಮದಾಬಾದ ಊರ್ಫ ಸಿರ್ಥೋೕ ಬಂದರ-೫೦೦೦, ಖೇಡಾ ಬಂದರ-೫೦೦೦, ಈ ರೀತಿಯಾಗಿ ಈ ಬಂದರಗಳಿಂದ ವಸೂಲಿ ಬರುತ್ತಿತ್ತು.[೮೦]

೮) ವಾರಸುದಾರರಿಲ್ಲದ ಹಿಂದೂಗಳ ಆಸ್ತಿ :

ಯಾವುದೇ ಹಿಂದೂ ವ್ಯಕ್ತಿಯು ಪುತ್ರ ಸಂತಾನವಿಲ್ಲದೇ ಮರಣ ಹೊಂದಿದಾಗ ಅವನ ಆಸ್ತಿಯನ್ನು ಸರಕಾರವು ಮುಟ್ಟುಗೋಲು ಹಾಕಿಕೊಳ್ಳುತ್ತಿತ್ತು. ಅಂದರೆ ವಾರಸುದಾರರಿಲ್ಲದ ಹಿಂದೂಗಳ ಆಸ್ತಿಯು ಸರಕಾರದ ಆಸ್ತಿಯಾಗಿ ಪರಿವರ್ತನಗೊಳ್ಳುತ್ತಿತ್ತು. ಈ ರೂಢಿಯನ್ನು ಕ್ರಿ.ಶ. ೧೬೫೪ ರಲ್ಲಿ ಮಹಮ್ಮದ ಆದಿಲ್‌ಶಾಹನು ನಿಲ್ಲಿಸಿದನು.[೮೧]

೯) ಇತರ ತೆರಿಗೆಗಳು :

ಡಬ್ಲೂ ಇಲ್ಲಿಯಟ್ ರವರು ಬಿಜಾಪುರ ಆದಿಲ್‌ಶಾಹಿಗಳು ವಿವಿಧ ಸಂದರ್ಭಗಳಲ್ಲಿ ಹೊರಡಿಸಿದಂತಹ ನಲವತ್ನಾಲ್ಕು(೪೪) ಫರ್ಮಾನುಗಳನ್ನು ಇದ್ದಕ್ಕಿದ್ದಂತೆಯೇ ನಮಗೆ ತಿಳಿಸಿ ಕೊಟ್ಟಿದ್ದಾರೆ. ಈ ಫರ್ಮಾನಗಳು ವಿವಿಧ ವ್ಯಕ್ತಿಗಳಿಗೆ ಜಹಗೀರಗಳನ್ನು ಕೊಟ್ಟಿದ್ದನ್ನು ಮತ್ತು ಬೇಸಾಯಗಾರರಿಂದ ತೆರಿಗೆ ಸಂಗ್ರಹಣೆ ಮಾಡುವ ಅಧಿಕಾರ ಕೊಡಲ್ಪಟ್ಟಿದ್ದನ್ನು ತಿಳಿಸುತ್ತವೆ. ಈ ಫರ್ಮಾನಗಳು ಜನರಿಗೆ ಹೊರೆಯಾಗುವಂತಹ ಭಾರವಾದ ತೆರಿಗೆಗಳನ್ನು ಹೇರಿರುವುದನ್ನು ನೈಜ್ಯವಾಗಿ ಪ್ರದರ್ಶಿಸುತ್ತವೆ.

ಬಿಟ್-ಓ-ಬಿಗರ್ :

ಬಿಟ್-ಓ-ಬಿಗರ್ ಎಂದರೆ ಒತ್ತೆ ಆಳುಗಳು ಎಂದರ್ಥ. ಅವರಿಗೆ ಹೆಸರಿಗೆ ಮಾತ್ರ ಸಂಬಳ ಕೊಡಲಾಗುತ್ತಿತ್ತು. ಅಥವಾ ಅವರಿಗೆ ಅದನ್ನೂ ಕೊಡಲಾಗುತ್ತಿರಲಿಲ್ಲ. ಕೆರೆಗಳನ್ನು ಆಳಗೊಳಿಸಲು ಕಾಲುವೆಗಳನ್ನು ತೋಡಲು, ರಸ್ತೆಗಳ ನಿರ್ಮಾಣ ಕಾರ್ಯಗಳಲ್ಲಿ ಅವರನ್ನು ಬಳಸಿಕೊಳ್ಳಲಾಗುತ್ತಿತ್ತು.

ಝೂರ್-ಇ-ಪಿಲ್ಲಿ :

ರಾಜ್ಯದ ಆನೆಗಳನ್ನು ಸಲಹಲು ಪ್ರಜೆಗಳಿಂದ ಸಂಗ್ರಹಿಸಲಾಗುತ್ತಿದ್ದ ತೆರಿಗೆಯಾಗಿತ್ತು.

ಪಪೋಷಿ :

ಈ ತೆರಿಗೆಯನ್ನು ಗುರುತಿಸುವುದು ಕಷ್ಟದ ಕೆಲಸವಾಗಿದೆ. ಬಹುಶಃ ಪಾದರಕ್ಷೆ ತಯಾರಿಸುವವರು ಸಲ್ಲಿಸುವಂತಹ ಒಂದು ವಿಧದ ತೆರಿಗೆಯಾಗಿದೆ. ಅವರು ತಮ್ಮ ಬಾಕಿಯನ್ನು ಸಲ್ಲಿಸುವಲ್ಲಿ ವಿನಾಯತಿಯನ್ನು ಪಡೆದುಕೊಂಡಿದ್ದರು.

ಜಂಗ್‌ಟಿನ್ :

ಯುದ್ಧದ ಸಮಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಖರ್ಚು ವೆಚ್ಚಗಳು ಉಂಟಾದಾಗ ಈ ರೀತಿಯ ತೆರಿಗೆಯನ್ನು ಸಂಗ್ರಹಿಸಲಾಗುತ್ತಿತ್ತು.(ಫರ್ಮಾನ ನಿರ್ಧಿಷ್ಠ ಯುದ್ಧವನ್ನು ಹೆಸರಿಸಿಲ್ಲ)

ಮೊಹಿಂ ಪಟ್ಟಿ :

ಇದು ದಂಡಯಾತ್ರೆಗೆ ಹೋಗುವಾಗ ಸಂಗ್ರಹಿಸುವಂತಹ ತೆರಿಗೆಯಾಗಿತ್ತು.

ಝೂರ್-ಇ-ಪಟ್ಟಿ, ಸಿಕ್ಕಾ-ಇ-ಹುಮಾಯುನ್ :

ಖಾಸಿಗಿ ವ್ಯಕ್ತಿಗಳಿಗೆ ಅವರ ಮನೆಯಲ್ಲಿ ನಾಣ್ಯಗಳನ್ನು ಟಂಕಿಸಲು ಅವಕಾಶ ಕೊಟ್ಟಾಗ ಅಥವಾ ಪರವಾನಿಗೆ ನೀಡಿದಾಗ ಸಂಗ್ರಹಿಸುವಂತಹ ತೆರಿಗೆಯಾಗಿತ್ತು.

ಝೂರ್-ಇ-ಇಮಾರತ್ :

ಸುಲ್ತಾನರಿಗೆ ಸಂಬಂಧಿಸಿದ ಕಟ್ಟಡಗಳನ್ನು ದುರಸ್ತಿಗೊಳಿಸಲು ಮತ್ತು ಹೊಸದಾಗಿ ನಿರ್ಮಿಸಲು ಸಂಗ್ರಹಿಸುವಂತಹ ತೆರಿಗೆಯಾಗಿತ್ತು.

ನೌಸಿಲ್ ಬೇಲ್ :

ರಾಜ್ಯಕ್ಕೆ ಸಂಬಂಧಿಸಿದ ಫಿರಂಗಿ ದಳದ ಹೋರಿಗಳನ್ನು ಸಲುಹಲು ಜನರ ಮೇಲೆ ಈ ತೆರಿಗೆಯನ್ನು ವಿಧಿಸಲಾಗಿತ್ತು.

ಥಪ್ಪರ್‌ಬಂದಿ :

ಸರಕಾರಿ ಧಾನ್ಯಗಳನ್ನು ಅಥವಾ ಇತರೆ ಯಾವುದೇ ಸಾರ್ವಜನಿಕ ಆಸ್ತಿಯನ್ನು ರಕ್ಷಿಸಲು ತಾತ್ಕಾಲಿಕ ಹೊದಿಕೆಯನ್ನು ರಚಿಸಲು ಈ ತೆರಿಗೆ ವಿಧಿಸಿದ್ದರು.

ಸಂಗ್–ಇ–ಸಂಗುತಿ :

ದನಕರಗಳ ಮೇಲೆ ಸಂಗ್ರಹಿಸುವಂತಹ ತೆರಿಗೆಯಾಗಿತ್ತು.

ಮಿಝ್ಬಾನಿ :

ಮಿಝ್ಬಾನಿ ಎಂದರೆ ಮನರಂಜನೆ, ಹಾಗಾಗಿ ಮನರಂಜನೆಯ ಮೇಲೆ ಸಖಗ್ರಹಿಸುವಂತಹ ತೆರಿಗೆ ಇದಾಗಿತ್ತು. ಯಾವಾಗಲಾದರೂ ಪ್ರಮುಖ ಪ್ರವಾಸಿಗರು ರಾಜ್ಯಕ್ಕೆ ಭೇಟಿ ನೀಡಿದರೆ ಅವರ ಆತಿಥ್ಯದ ಖರ್ಚು ಮತ್ತು ಸತ್ಕಾರದ ಖರ್ಚುಗಳು ದುಬಾರಿಯಾಗಿರುತ್ತಿದ್ದವು.

ಫರ್ಮಾಯಿಶಿ :

ಆದಿಲ್‌ಶಾಹಿಗಳು ಆಜ್ಞೆ ಮಾಡಿದ ಸ್ಥಳೀಯ ಉತ್ಪನ್ನಗಳನ್ನು ಖರೀದಿಸುವಲ್ಲಿ ಕೊಡುವಂತಹ ತೆರಿಗೆಯಾಗಿತ್ತು.

ಫಸ್ಕಿ :

ತರಕಾರಿ ವ್ಯಾಪಾರಿಗಳ ಮೇಲಿನ ತೆರಿಗೆಯಾಗಿತ್ತು. ಅಂಗಡಿಗಳನ್ನು ಹೊಂದಿರುವಂತವರು ವೃತಿ ತೆರಿಗೆಯನ್ನು ಕೊಡಬೇಕಾಗಿತ್ತು.[೮೨]

ಮಹಮ್ಮದ ಆದಿಲ್‌ಶಾಹನು ತೆರಿಗೆ ಸಂಗ್ರಹಣೆಯ ಕುರಿತು ೧೬೩೮ ರ ಜುಲೈ ೧೯ ರಂದು ಸಂದಲಾಪುರ ಮಾಮಲೆಯ ಹವಾಲ್ದಾರ ಮಲಿಕ್ ಸಂದಲ್‌ಗೆ ಈ ರೀತಿ ಸಂದೇಶ ಕಳುಹಿಸಿದನು. ಆ ಫರ್ಮಾನ ಈ ಕೆಳಗಿನಂತಿದೆ.

“ ಈ ಮಾಮಲೆಯ ಕರವನ್ನು ವಸೂಲು ಮಾಡಲು ಆ ಖಾತೆಯ ಜನರನ್ನು ಕಳುಹಿಸಿದ್ದೇವೆ. ಆದ್ದರಿಂದ ಈ ಭಾಗದ ಎಲ್ಲ ಗ್ರಾಮ, ಹೋಬಳಿ, ಪೇಟೆ ಮತ್ತು ಮಾರುಕಟ್ಟೆಯ ವ್ಯಾಪಾರಿಗಳಿಗೆ ತಾಕೀತು

ಮಾಡಿ ಪ್ರತಿ ಎತ್ತಿನ ಭಾರಕ್ಕೆ ಕಾಲು ಹೊನ್ನ ಮತ್ತು ಆಕಳಿನ ಭಾರಕ್ಕೆ ಕಾಲು ಹೊನ್ನ ಕೊಡುತ್ತಾ ಹೋಗಬೇಕು. ವಸುಲಿ ಸರಿಯಾಗಿ ಆಗುವಂತೆ ನೋಡಿಕೊಳ್ಳಬೇಕು. ಆ ಹಣವನ್ನು ಪಟ್ಟಿ ವಸೂಲು ಮಾಡುವವರ ಕಡೆ ಪಾವತಿಸಬೇಕು ಆ ಖಾತೆಯ ಜನರಿಗೆ ಯಾವ ಸಹಾಯ ಕೇಳುವರೋ ಆ ರೀತಿ ಸಹಾರ ಮಾಡಿ ಅಂದರೆ ಸುಲ್ತಾನನಿಗೆ ನಿಷ್ಠೆತೋರಿದಂತಾಗುತ್ತದೆ.[೮೩]

ಆದಿಲ್‌ಶಾಹಿಗಳ ಯಾವುದೇ ಫರ್ಮಾನಗಳು ತೆರಿಗೆ ದರಗಳ ಬಗ್ಗೆ ತಿಳಿಸುವುದಿಲ್ಲ. ಅಲ್ಲದೇ ಅವುಗಳ ಏರಿಕೆ ಮತ್ತು ಇಳಿಕೆಯ ಬಗ್ಗೆಯೂ ತಿಳಿಸುವುದಿಲ್ಲ. ಈ ತೆರಿಗೆ ಸಂಗ್ರಹಣೆಯ ಕುರಿತು ಯೋಚಿಸಲು ರಾಜ್ಯದಲ್ಲಿ ಪ್ರತ್ಯೇಕ ಇಲಾಖೆಯಿರಲಿಲ್ಲ. ತತ್ವರಹಿತ ಬೇಸಾಯಗಾರರ ಕೈಯಲ್ಲಿ ಸಿಕ್ಕ ಜನರು ಕೆಲವು ಸಂದರ್ಭಗಳಲ್ಲಿ ದಬ್ಬಾಳಿಕೆಗೆ ಒಳಪ್ಪಟ್ಟಿದ್ದರು. ಮಹಮ್ಮದ ಆದಿಲ್‌ಶಾಹನು ತನ್ನ ಆಡಳಿತಾವಧಿಯಲ್ಲಿ ಈ ಪದ್ಧತಿಗಳಲ್ಲಿ ಮಹತ್ವದ ಬದಲಾವಣೆಗಳನ್ನು ತಂದನು.

ಸಮಕಾಲಿನ ಇತಿಹಾಸಕಾರರು ರಾಜ್ಯದ ಒಟ್ಟು ಆದಾಯದ ಕುರಿತು ಯಾರೂ ನಿಖರವಾಗಿ ತಿಳಿಸಿಲ್ಲ. ಮಹಮ್ಮದ ಇಬ್ರಾಹಿಮ ಜುಬೇರಿಯು ಮಹಮ್ಮದ ಆದಿಲ್‌ಶಾಹನ ಕಾಲಕ್ಕೆ ಸಂಬಂಧಿಸಿದಂತೆ ಅಸಫ ಜಾಹಿಯ ದಾಖಲೆಗಳ ಆಧಾರದ ಮೇಲೆ ಈ ರೀತಿಯಾಗಿ ಲೆಕ್ಕಾಚಾರ ಮಾಡಿದ್ದನೆ.

ಸರಕಾರಿ ಭೂಮಿಯಿಂದ ಬರುವ ಆದಾಯ	: ೭,೮೪,೬೧,೮೭೦=೦೦ರೂ
೨೨ ಸಾಮಂತ ರಾಜರಿಂದ ಬರುವ ಆದಾಯ (ಪೇಷ್ಕಷ)	: ೫,೨೫,೬೧,೬೪೯=೦೦ರೂ
೧೧ ಬಂದರುಗಳಿಂದ ಬರುವ ಆದಾಯ	: ೯೬,೫೦೦=೦೦ರೂ

ಒಟ್ಟು	: ೧೩,೧೧,೨೦,೦೧೯=೦೦ ರೂಪಾಯಿಗಳು

ರಾಜ್ಯದ ಆದಾಯ ಹದಿಮೂರು ಕೋಟಿ, ಹನ್ನೊಂದು ಲಕ್ಷ, ಇಪ್ಪತ್ತು ಸಾವಿ, ಹತ್ತೊಂಬತ್ತು ರೂಪಾಯಿಗಳು ಮಾತ್ರವಾಗಿತ್ತು.

ಒಟ್ಟಾರೆಯಾಗಿ ನಾವು ತಿಳಿಯಬಹುದಾದುದೇನೆಂದರೆ ಸರಕಾರಿ ಭೂಮಿಯು ಜಹಗೀರಗಳನ್ನು ಒಳಗೊಂಡಿರುತ್ತಿದ್ದು, ಕೆಲವು ವೇಳೆ ಸುಲ್ತಾನರು, ಸರಕಾರಿ ಭೂಮಿಯನ್ನು ಜಹಗೀರಗಳನ್ನಾಗಿ ಕೊಡುತ್ತಿದ್ದರು. ಮತ್ತೆ ಕೆಲವು ಸಂದರ್ಭಗಳಲ್ಲಿ ಜಹಾಗೀರುಗಳನ್ನು ಸರಕಾರಿ ಭೂಮಿಗಳನ್ನಾಗಿ ಪರಿವರ್ತಿಸುತ್ತಿದ್ದರು. ಸರಕಾರಿ ಭೂಮಿಯ ಉತ್ಪನ್ನವು ಭೂಕಂದಾಯ, ಗಣಿಗಳ ಆದಾಯ ಮತ್ತು ಮೇಲಿನ ಹದಿಮೂರು ತೆರಿಗೆಗಳನ್ನು ಒಳಗೊಂಡಿರುತ್ತಿರುತ್ತಿತ್ತು. ಈ ಆದಾಯವು ಹೆಚ್ಚು ಕಡಿಮೆಯಾಗಿರುತ್ತಿತ್ತು. ಆದರೆ ೨೨ ಸಾಮಂತ ರಾಜ್ಯಗಳಿಂದ ಬರುತ್ತಿದ್ದ ಪೇಷ್ಕಷ ಹೆಚ್ಚು ಕಡಿಮೆಯಾಗದೇ ಸ್ಥಿರವಾಗಿರುತ್ತಿತ್ತು. ಬಂದರುಗಳಿಂದ ಬರುತ್ತಿದ್ದ

ಆದಾಯವು ಕೇವಲ ವ್ಯಾಪಾರ ತೆರಿಗೆಯಿಂದಷ್ಟೇ ಅಲ್ಲದೇ ಮೇಲೆ ನಮೂದಿಸಿದ ಹದಿಮೂರು ತೆರಿಗೆಗಳನ್ನು ಒಳಗೊಂಡಿರುತ್ತಿತ್ತು.[೮೪]

ಕ) ಧಾರ್ಮಿಕ ವ್ಯವಸ್ಥೆ :

ಧರ್ಮ ಎಂದರೇನೆಂದು ತಿಳಿದುಕೊಳ್ಳುವುದು, ವ್ಯಕ್ತಿ ಒಂದು ಕಡೆ, ಭವ್ಯವೂ, ಪರಮೊನ್ನತವೂ ಆದ ತತ್ವವು ಇನ್ನೊಂದು ಕಡೆ– ಈ ಎರಡರ ನಡುವಣ ಸಂಪರ್ಕ ಬಿಂದುವೇ ಧರ್ಮ. ಎಲ್ಲಾ ಹಿರಿಯ ಧರ್ಮಗಳೂ ವಿಶಿಷ್ಟವಾಗಿವೆ. ಶಾಖೋಪಶಾಖೆಗಳಾಗಿ ಸಾರ್ವತ್ರಿಕವಾಗಿವೆ. ಅವುಗಳ ಉದ್ದೇಶ ಮನುಷ್ಯನ ನಿಜವಾದ ಗಂತವ್ಯದ ಕಡೆಗೆ ದಾರಿ ತೋರಿಸುವುದು. ಪ್ರತಿಯೊಂದು ಧರ್ಮವು ಅತ್ಯುನ್ನತ ನಿರಪೇಕ್ಷ ಮೌಲ್ಯಗಳನ್ನು ಹೊಂದಿವೆ.

ಮದ್ಯಯುಗದಲ್ಲಿ ದಕ್ಷಿಣದಲ್ಲಿ ಬಂದು ನೆಲೆಸಿದ ಬಹಮನಿಗಳು, ಆದಿಲ್‌ಶಾಹಿಗಳು ಇಸ್ಲಾಂ ಧರ್ಮವನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲು ನೀರೆರೆದು ಪೋಷಿಸಿದರು. ಇಸ್ಲಾಂ ಬಹು ಶಕ್ತಿಶಾಲಿಯಾದ ದರ್ಶನ. ಭಗವಂತನ ಏಕತೆ, ಮನುಷ್ಯನ ಏಕತೆ–ಎರಡು ಅದರ ಕ್ರಾಂತಿಕಾರಕ ತತ್ವಗಳಾಗಿದ್ದು, ಮಾನವ ಜನಾಂಗದ ಇತಿಹಾಸದ ಮೇಲೆ ಪ್ರಬಲವಾದ ಸಾಮಾಜಿಕ ಪರಿಣಾಮವನ್ನು ಬೀರಿದವು. ಆ ದರ್ಶನದ ಪ್ರಾಯೋಗಿಕ ಅಂಶಗಳು ಸಮಾನತೆ, ಏಕತೆ, ಭ್ರಾತೃತ್ವ ಮತ್ತು ಸ್ವಾತಂತ್ರ್ಯ. ಭಗವಂತನಿಗೆ ವಿಧೇಯಕನಾಗಿರುವದೆಂದರೆ ಒಂದು ರೀತಿಯಲ್ಲಿ ಮನುಷ್ಯನು ತನ್ನದೇ ಆದರ್ಶ ಸ್ವರೂಪಕ್ಕೆ ವಿಧೇಯನಾಗಿರುವುದು. ಮಧ್ಯಯುಗದಲ್ಲಿ ಜನಾಂಗೀಯ ಪಕ್ಷಪಾತ, ಸಾಮಾಜಿಕ ಅಸಮತೆಗಳು. ಆರ್ಥಿಕ ಶೋಷಣೆ, ಪುರೋಹಿತ ಶಾಹಿಯ ಪ್ರಾಬಲ್ಯ, ವ್ಯಕ್ತಿ ಸ್ವಾತಂತ್ರಕ್ಕೆ ಅಗೌರವ ಈ ರೂಪಗಳಲ್ಲಿ ಸಮಾಜವನ್ನು ಹಿಂಡುತ್ತಿದ್ದ ಪಿಡುಗುಗಳನ್ನು ಮಾನವೈಕ್ಯದ ಪರಿಕಲ್ಪನೆ ಹೋಗಲಾಡಿಸಿತು. ಈ ಮಾನವೈಕ್ಯ ತತ್ವವು ಅತ್ಯಂತ ದೀನಾದವನೂ ಅತ್ಯುನ್ನತ ಪದವಿಗೆ ಏರಲು ಅವಕಾಶ ಮಾಡಿಕೊಟ್ಟದನ್ನು ಭಾರತದಲ್ಲಿ ನಾವು ನೋಡುತ್ತೇವೆ. ಅಂದು ಶತಮಾನಕ್ಕೂ ಹೆಚ್ಚು ಕಾಲ ಒಂದು ಗುಲಾಮ ಅಂಶವು ಇಲ್ಲಿ ರಾಜ್ಯವನ್ನು ಆಳಿತು. ಮಧ್ಯಪಾನ ನಿಷೇದ, ಅಕ್ರಮ ದಾಸ್ತಾನು, ಜೂಜು, ದುಬಾರಿ ಬಡ್ಡಿ, ಶಿಶು ಹತ್ಯೆ, ವ್ಯಭಿಚಾರ ಮತ್ತು ಪುರೋಹಿತಶಾಹಿಗಳ ನಿಷೇದವು ಸಾಮಾಜಿಕ ಜೀವನದ ಮೇಲೆ ಪ್ರಭಾವ ಹೊಂದಿದ್ದವು. ಜಾತಿ, ಮತ, ವರ್ಗಗಳ ತಡೆಗಳನ್ನು ತಡೆಗಳನ್ನು ಮುರಿದು ಎಲ್ಲರನ್ನೂ ಸಮಾನವಾಗಿ ಪರಿಗಣಿಸಲು ಇಸ್ಲಾಂ ಪ್ರಯತ್ನಿಸಿತು.

ಆದಿಲ್‌ಶಾಹಿಗಳ ಕಾಲದ ಪ್ರಮುಖ ಧರ್ಮಗಳು :

ನಮ್ಮ ದೇಶದಲ್ಲಿ ಅತ್ಯಂತ ಪ್ರಾಚೀನ ಧರ್ಮವೆಂದರೆ ವೈದಿಕ ಧರ್ಮ. ನಂತರದಲ್ಲಿ ಜೈನಧರ್ಮ, ಬೌದ್ಧ ಧರ್ಮಗಳು, ಕ್ರಿ.ಪೂ. ೫ ಮತ್ತು ೬ನೆಯ ಶತಮಾನಗಳ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದು ಜಗತ್ತಿನ ಉದ್ದಗಲಕ್ಕೂ ಹರಡಿವೆ. ಅದರಂತೆ ದಕ್ಷಿಣ ಭಾರತದಲ್ಲಿಯೂ ಕೂಡಾ ಶೈವ, ವೈಷ್ಣವ, ಬೌದ್ಧ, ಜೈನ್ಯ ಇಸ್ಲಾಂ ಈ ಪ್ರಮುಖ ಧರ್ಮಗಳ ಜೊತೆಗೆ ಅವುಗಳಲ್ಲಿಯ ಪಂಗಡಗಳು ಕೂಡಾ ಉಚ್ಛಾಯ ಮಟ್ಟದಲ್ಲಿ ಬೆಳೆದು

ತಮ್ಮ ವೈಶಿಷ್ಟ್ಯವನ್ನು ಇಂದಿಗೂ ಉಳಿಸಿಕೊಂಡು ಬಂದಿವೆ. ಸ್ವಲ್ಪ ತಡವಾಗಿಯಾದರೂ, ರಾಷ್ಟ್ರಕೂಟರ ಕಾಲದಲ್ಲಿಯೇ ಇಸ್ಲಾಂ ಧರ್ಮ ಭಾರತಕ್ಕೆ ಬಂದಿದ್ದನ್ನು ಶಾಸನವೊಂದರಿಂದ ತಿಳಿಯಬಹುದಾಗಿದೆ.[೮೫] ಅದು ತನ್ನ ಪ್ರಭಾವವನ್ನು ಭಾರತೀಯತೆಯ ಮೇಲೆ ಬೀರುವ ಮೂಲಕ ಉಳಿದ ಧರ್ಮಗಳಂತೆ, ಭಾರತೀಯ ಮಣ್ಣಿನ ಜೊತೆ ಬೆರೆತು, ತನ್ನದೇ ಆದ ಸಾಂಸ್ಕೃತಿಕ ನೆಲೆಗಟ್ಟನ್ನು ರೂಪಿಸಿಕೊಂಡಿದೆ.

ವೈಷ್ಣವ ಧರ್ಮ :

ಕ್ರಿ.ಶ. ಪೂರ್ವದಲ್ಲಿಯೇ ದಕ್ಷಿಣ ಭಾರತವನ್ನು ಪ್ರವೇಶಿಸಿದ ವೈಷ್ಣವ ಧರ್ಮ ಕ್ರಿ.ಶ. ನಾಲ್ಕನೆಯ ಶತಮಾನದ ವೇಳೆಗಾಗಲೇ ಕರ್ನಾಟಕದಲ್ಲಿ ಜನಪ್ರಿಯವಾಗಿದ್ದಿತು. ಬಾದಾಮಿ ಚಾಲುಕ್ಯ ಅರಸು ಮಂಗಳೇಶ ತನ್ನನ್ನು ಮಹಾ ಭಾಗವತ ಎಂದು ಹೇಳಿಕೊಂಡು ಬಾದಾಮಿಯಲ್ಲಿ ವೈಷ್ಣವ ಗುಹಾಲಯವನ್ನು ಕಟ್ಟಿಸಿರುವ ಸಂಗತಿಯು ತುಂಬ ಪ್ರಸಿದ್ಧವಾಗಿದೆ. ಈ ಜಿಲ್ಲೆಯ ಕೆಲವು ಶಾಸನಗಳು ಪ್ರಾರಂಭದಲ್ಲಿ ಶಿವ ಮತ್ತು ವಿಷ್ಣುಪರವಾದ ಸೋತ್ರಗಳಿವೆ. ಈ ಅಂಶ ಎರಡೂ ಧರ್ಮಗಳು ಒಂದನ್ನೊಂದು ಹೊಂದಿಕೊಂಡು ಬೆಳೆಯುತ್ತಿರುವ ಸೂಚನೆಯನ್ನು ನೀಡುತ್ತವೆ.[೮೬]

ಆದಿಲ್‌ಶಾಹಿ ರಾಜ್ಯದಲ್ಲಿಯು ಅನೇಕ ಹಿಂದೂ ದೇವಾಲಯಗಳಿಗೆ ಬಾದಶಹರು ಉದಾರವಾಗಿ ನೀಡಿದ ದಾನ, ಧರ್ಮ, ದತ್ತಿಗಳ ಹೇರಳವಾದ ನಿದರ್ಶನಗಳು ಇಂದಿಗೂ ದೊರೆಯುತ್ತವೆ. ಪಂಡಿತ ಮಾನ್ಯರು, ಪುರೋಹಿತರು, ಜೋಶಿ, ದೀಕ್ಷಿತ, ಜಂಗಮರೇ ಮೊದಲಾದ ಹಿಂದೂ ವರ್ಗದ ಜನರಿಗೆ ತಮ್ಮ ಧಾರ್ಮಿಕ ವಿಧಿಗಳನ್ನು ಮುಂದುವರಿಸಿಕೊಂಡು ಹೋಗಲು ಸಮ್ಮತಿಸುತ್ತಿದ್ದರು. ಬಿಜಾಪುರ ಆರ್ಕಿಲ್ಲೆಯದಲ್ಲಿ ನರಸಿಂಹದತ್ತ ಮಂದಿರವು ನಿಂತಿದ್ದು ಈ ಅವಧಿಯಲ್ಲಿಯೆ. ನಾಥ ಸಂಪ್ರದಾಯದ ಒಂದು ಪ್ರತ್ಯೇಕ ಮಠವು ಸಿಂದಗಿಯಲ್ಲಿ ಭೀಮಾಶಂಕರ ಮಠವು ಪ್ರಾರಂಭವಾದದ್ದು ಕೂಡ ಈ ಕಾಲದಲ್ಲಿಯೆ. ಈ ಮಠಕ್ಕೆ ಹಾಕಿಕೊಟ್ಟ ಸನದು ಮಠದಲ್ಲಿ ಇಂದಿಗೂ ಲಭ್ಯವಿದೆ.[೮೭]

ನರಸಿಂಹದತ್ತ ಮಂದಿರವು ಆದಿಲ್‌ಶಾಹಿಗಳೇ ಕಟ್ಟಿಸಿದ ಕಟ್ಟಡವಾಗಿದೆ. ಇವರ ಕಾಲದಲ್ಲಿಯೆ ಕಟ್ಟಿದ ಜುಮ್ಮಾ ಮಸೀದಿಯ ಹತ್ತಿರ ವಿಜಯ-ವಿಠಲನ ಮಂದಿರವನ್ನು ಕಟ್ಟಿಸಿದರು. ಇವುಗಳಲ್ಲದೆ ವೆಂಕಟ್ಟೇಶ್ವರ ಗುಡಿ, ಇಬ್ರಾಹಿಮಪುರದ ವೆಂಕಟೇಶ್ವರ ಚಾಂದಬಾವಡಿ ಹತ್ತಿರದ ಹಳೆಯ ವಿಠಲ ಮಂದಿರ ವೆಂಟೇಶ್ವರನ ಗುಡಿ, ಮಕ್ಕಾಗೇಟಿನ ಹತ್ತಿರ ತ್ರಿವಿಕ್ರಮ ಗುಡಿಗಳು ಇನ್ನೂ ಸುಸ್ಥಿತಿಯಲ್ಲಿದ್ದು ಜನರು ನಡೆದುಕೊಳ್ಳುತ್ತಾರೆ.[೮೮] ಹೀಗಾಗಿ ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿ ವೈಷ್ಣವ ಧರ್ಮವು ಪೋಷಣೆಯನ್ನು ಹೊಂದಿ ಬೆಳೆದುಕೊಂಡು ಬಂದಿರುವದನ್ನು ಗಮನಿಸಬಹುದಾಗಿದೆ.

ಹೀಗೆ ಆದಿಲ್‌ಶಾಹಿಗಳು ವೈಷ್ಣವ ಧರ್ಮಕ್ಕೆ ಹೆಚ್ಚು ಪ್ರೋತ್ಸಾಹವನ್ನು ನೀಡಿದರು. ಅಲ್ಲದೆ ವೈಷ್ಣವ ಪರವಾದ ಸಾಹಿತ್ಯ ಸೃಷ್ಟಿಯನ್ನು ಮಾಡಿದ ಈ ಜಿಲ್ಲೆಯ ರುಕ್ಮಾಂಗ ಪಂಡಿತರು, ಸಿಂದಗಿಯ ಬೀಮಾಶಂಕರ, ಜಕ್ಕಕಕಕಪ್ಪಯ್ಯ, ಶಿವರಾಮ, ಕಾಖಂಡಕಿಯ ಮಹಿಪತಿದಾಸ, ಕೃಷ್ಣದಾಸ, ಯತಿರಾಯ ಶ್ರೀಪತಿ ಶ್ರೀಪತಿತನುಜ,

ಅಲ್ಲದೆ ಚಿದಾನಂದ ಅವಧೂತ ಗಲಗಲಿಯ ಅವ್ವ ಪ್ರಯೋಗಬಾಯಿ ಇತ್ಯಾದಿ ಸ್ತ್ರೀಪುರುಷರು ಕನ್ನಡದಲ್ಲಿ ಸಾಹಿತ್ಯವನ್ನು ರಚಿಸಿದ್ದಾರೆ.[೪೯]

ವೀರಶೈವ ಧರ್ಮ :

ಬಿಜಾಪುರ ರಾಜ್ಯವು ಶರಣರ ನಾಡೆಂದೇ ಪ್ರಚಲಿತವಾಗಿದೆ. ಬಸವಪೂರ್ವ ಯುಗದ ಶರಣಕೊಂಡಗೂಳಿ ಕೇಶಿರಾಜ, ದೇವೂರ ದಾಸಿಮಯ್ಯ, ವೀರಶೈವ ಚಳುವಳಿಯ ನೇತರರಾದ ಬಸವೇಶ್ವರ, ಮಡಿವಾಳ ಮಾಚಿದೇವ, ಹಾವಿನಾಳ ಕಲ್ಲಯ್ಯ, ಚನ್ನಬಸವಣ್ಣ, ಸೊನ್ನಲಿಗೆಯ ಸಿದ್ಧರಾಮ ಮತ್ತು ನೆಲುವಿಗೆಯ ಸಾತೈಯ್ಯ ಮುಂತಾದ ಶರಣರ ಕಾರ್ಯಕ್ಷೇತ್ರವು ಇದಾಗಿದೆ.

ಷೇಕ ಅಲಿ ತಿಳಿಸಿರುವಂತೆ ಕರ್ನಾಟಕದಲ್ಲಿ ವೀರಶೈವ ಧರ್ಮವು ಅನೇಕ ಅಂಶಗಳಲ್ಲಿ ಇಸ್ಲಾಮಿಕ ಚಿಂತನೆಗೆ ನಿಕಟವಾಗಿರುವುದು ಆಶ್ಚರ್ಯಕರವಾಗಿದೆ. ವೀರಶೈವ ಧರ್ಮದಲ್ಲಿನ ಭಗವಂತನ ಕಲ್ಪನೆ ಇಸ್ಲಾಮಿಕ ಕಲ್ಪನೆಯೇ ಆಗಿದೆ. ದೇವರು ಅನಂತ, ಸ್ವತಂತ್ರ, ಅಗೋಚರ, ಅತ್ಯುನ್ನತವಾದ ಕಾಂತಿ, ಪರಮೋನ್ನತ ಆನಂದ, ಅತ್ಯುತ್ಕ್ರಷ್ಟ ವಸ್ತು, ಸಕಲ ಪರಿವರ್ತನೆಗಳಿಗೆ ಅತೀತ ಸಕಲ ಭೌತಿಕತೆಗಳನ್ನು ಕಳೆದುಕೊಂಡ ಭವ್ಯ ತತ್ವ, ದೀಕ್ಷಾವಿದಿಗಳೂ ಮುಸ್ಲಿಮರಲ್ಲಿರುವವರನ್ನೇ ಹೋಲುತ್ತದೆ. ಯಜ್ಞಯಾಗಗಳಿಲ್ಲ, ಜಾತಿ ವ್ಯತ್ಯಾಸಗಳಾಗಲಿ, ಲಿಂಗಭೇದವಾಗಲಿ, ಅಂತಸ್ತಿನ ಬೇಧವಾಗಲಿ ಇಲ್ಲ. ವಿಧವಾ ವಿವಾಹ ನಿಷೇದವಿಲ್ಲ, ವಿವಾಹ ವಿವಾಹ ವಿಚ್ಛೇದನಕ್ಕೆ ಅವಕಾಶವುಂಟು, ಮೃತರ ದೇಹಗಳನ್ನು ಸುಡುವುದಿಲ್ಲ ಹೂಳುತ್ತಾರೆ, ಸತ್ತಿರುವ ವ್ಯಕ್ತಿಗೆ ಸ್ನಾನ ಮಾಡಿಸಲಾಗುತ್ತದೆ. ಆತ್ಮವು ಬೇರೊಂದು ಕಡೆ ಹುಟ್ಟುವ ಪುನರ್ಜನ್ಮ ತತ್ವವನ್ನು ಒಪ್ಪುವುದಿಲ್ಲ. ಹೀಗೆ ಆಶ್ಚರ್ಯವಾಗುವಷ್ಟು ಮಟ್ಟಿಗೆ ಎರಡೂ ಧರ್ಮಗಳು ನಿಕಟವಾಗಿ ಹೋಲುತ್ತವೆ.[೫೦]

ವೀರಶೈವ ಗುರುಗಳು ವಚನಗಳ ಮುಖಾಂತರ ಉಪದೇಶ ಮಾಡುತ್ತಿದ್ದರು. ಪದ್ಯ ಶೈಲಿಯಲ್ಲಿ ಗದ್ಯದ ಪುಟ್ಟ ರಚನೆಗಳನ್ನು ವಚನಗಳೆಂದು ಕರೆಯಲಾಗುತ್ತದೆ. ವಿಶ್ವ ಸಾಹಿತ್ಯಕ್ಕೆ ಕನ್ನಡದ ವಚನ ಸಾಹಿತ್ಯ ನಿಜವಾಗಿ ಒಂದು ವಿಶಿಷ್ಟವಾದ ಕೊಡುಗೆ ಉದಾತ್ತವಾದ ಮತ್ತು ಕ್ರಾಂತಿಕಾರಕವಾದ ವಿಚಾರದ ಮಂಡನೆಗೆ ಕನ್ನಡ ಜನರ ಆಡುಭಾಷೆಯನ್ನು ಈ ವಚನಕಾರರು ಮೊಟ್ಟ ಮೊದಲು ಉಪಯೋಗಿಸಿದರು. ಶಿವರಾಧಾನೆ ಮತ್ತು ನೀತಿಯುತ ಬಾಳನ್ನು ನಡೆಸಬೇಕೆಂದು ಅವರು ಪ್ರಸಾರ ಮಾಡುತ್ತಿದ್ದರು. ಅಸ್ಪೃಶ್ಯತೆ ಹಾಗೂ ಜಾತಿ ಪದ್ಧತಿಯಲ್ಲಿ ಸಾಮಾಜಿಕ ಅನ್ಯಾಯಗಳನ್ನು ಅಲ್ಲಗಳೆಯುತ್ತಿದ್ದರು. ದುಡಿಮೆಗೆ ಘನತೆಯುಂಟೆಂಬ ತತ್ವವನ್ನು ಬಸವಣ್ಣ 'ಕಾಯಕವೇ ಕೈಲಾಸ' ಎಂಬ ಮಾತಿನ ಮೂಲಕ ಎತ್ತಿ ಹಿಡಿದರು. ಆದಿಲ್‌ಶಾಹಿಗಳ ಕಾಲದಲ್ಲಿ ವೀರಶೈವರಿಗೆ ಪ್ರಮುಖ ಸ್ಥಾನ ಸಿಕ್ಕಿತ್ತು.

ಇಸ್ಲಾಂ ಧರ್ಮ :

ಮಲ್ಲಿಕಾಫರನು ಕ್ರಿ.ಶ. ೧೩೧೨ ರಲ್ಲಿ ಯಾದವರನ್ನು ಸೋಲಿಸಿ ತನ್ನ ಸಾಮ್ರಾಜ್ಯ ವಿಸ್ತರಣೆ ಮಾಡಿದ ದಿನದಿಂದ ಕರ್ನಾಟಕದಲ್ಲಿ ಮುಸ್ಲಿಂರ ಆಳ್ವಿಕೆ ಹಾಗೂ ಮುಸಲ್ಮಾನ ಜನ ಸಮುದಾಯದ ಬೆಳವಣಿಗೆಯನ್ನು

ಕಾಣಬಹುದು. ಈ ಕರಿಮವುದ್ದೀನ ಬಿಜಾಪುರದ ರಾಜ್ಯಪಾಲನಾಗಿ ನೇಮಕಗೊಂಡದಿನಿಂದ ಇಸ್ಲಾಂ ಧರ್ಮವು ಜಿಲ್ಲೆಯಲ್ಲಿ ಸ್ಥಾಯಿಯಾಗಿ ಉಳಿಯಿತು. ಬಿಜಾಪುರದಲ್ಲಿ ೧೪೮೯ ರಲ್ಲಿ ಆದಿಲ್‌ಶಾಹಿ ಸಾಮ್ರಾಜ್ಯ ಸ್ಥಾಪನೆ ಆಗುವವರೆಗೆ ಹಲವಾರು ಮುಸಲ್ಮಾನ ಅಧಿಕಾರಿಗಳು ಬಿಜಾಪುರದ ಆಡಳಿತದಲ್ಲಿ ಪಾಲ್ಗೊಂಡಿದ್ದರು. ನಂತರ ಸುಮಾರು ೨೦೦ ವರ್ಷಗಳ ಕಾಲ ಆದಿಲ್‌ಶಾಹಿ ಮನೆತನದವರು ಆಳಿದ್ದರಿಂದ ಹಾಗೂ ನಂತರದಲ್ಲಿ ದೆಹಲಿಯ ಸುಲ್ತಾನರು ಮತ್ತು ಹೈದರಾಬಾದಿನ ನಿಜಾಮರು ಇದನ್ನು ತಮ್ಮ ಆಳ್ವಿಕೆಗೆ ಪಡೆದುಕೊಂಡಿದ್ದು ಜಿಲ್ಲೆಯಲ್ಲಿ ಮುಸಲ್ಮಾನರ ಜನಸಂಖ್ಯೆಯ ಗಣನೀಯ ಸ್ಥಾನವನ್ನು ಪಡೆಯುವಂತಾಯಿತು.[೬೧]

ಆದಿಲ್‌ಶಾಹಿಗಳು ಅಧಿಕಾರವನ್ನು ಸ್ವೀಕರಿಸಿದ ನಂತರ ಇಸ್ಲಾಂ ಧರ್ಮದ ಉಳಿವು ಮತ್ತು ಅದರ ಪ್ರಕಾರದ ಜವಾಬ್ದಾರಿ ಈ ರಾಜ್ಯದ ಬಾದಶಹರ ಮೇಲೆ ಇರುವುದು ಸಹಜವಾಗಿತ್ತು. ರಾಜಕೀಯ ಶಾಂತಿ ನೆಲಸಿದಾಗ ಜಗತ್ತಿನ ವಿವಿಧ ಮೂಲೆಗಳಿಂದ ಇಸ್ಲಾಂ ಧರ್ಮದ ಪ್ರಸಾರ ಪ್ರಚಾರಕ್ಕಾಗಿ ಮೌಲ್ವಿಗಳು, ಖಾಜಿಗಳು, ಸೂಫಿ ಸಾಧು ಸಂತರು ಇಲ್ಲಿಗೆ ಬಂದು ಧರ್ಮ ಪ್ರಚಾರವನ್ನು ಮಾಡಿದಿರುವುದನ್ನು ಗಮನಿಸಬಹುದು. ಭಕ್ತಿ ಮಾರ್ಗದ ಸೂಫಿ ಸಾಧು ಸಂತರ ಅಧಿಕ ಸಂಖ್ಯೆಯಲ್ಲಿ ಇಲ್ಲಿಗೆ ಬಂದು ನೆಲೆಸಿದ್ದು ತಿಳಿದು ಬರುತ್ತದೆ. ಒಂದು ಅಂದಾಜಿನಂತೆ ಬಿಜಾಪುರದ ಸುತ್ತ-ಮುತ್ತಲಿನ ಹತ್ತು ಕಿಲೋಮೀಟರುಗಳ ಅಂತರದಲ್ಲಿ ಸುಮಾರು ಮೂನ್ನೂರು ನಲವತ್ತು ಸೂಫಿ, ಸಾಧು ಸಂತರ ಸಮಾಧಿಗಳಿವೆ ಎಂದು ಪ್ರತೀತೆ ಇದೆ.

ಇಂತಹ ಸೂಫಿ ಸಂತರಿಗೆ ಧರ್ಮದ ಏಳಿಗೆ ಮತ್ತು ಅವರಪ ಸಂತೃಪ್ತಿಗಾಗಿ ಅನೇಕ ದಾನ ದತ್ತಿಗಳನ್ನು ನೀಡುತ್ತಿದ್ದರು. ಅಲ್ಲದೆ ಧರ್ಮ ಸಂರಕ್ಷಣೆಯ ಸಲುವಾಗಿ ಅನೇಕ ಮಸೀದಿಗಳನ್ನು ನಿರ್ಮಿಸಿದರು. ವಿಶೇಷವಾಗಿ ಪ್ರಾರ್ಥನೆಗೋಸ್ಕರವಾಗಿ ಕಟ್ಟಿದ ಈ ಕಟ್ಟಡಗಳು ಮುಸ್ಲಿಂ ಸಾಮೂಹಿಕವಾಗಿ ಪ್ರಾರ್ಥನೆಯನ್ನು ಮಾಡಲು ನಿರ್ಮಿಸಿದರು. ಅದರಲ್ಲಿ ಪ್ರಮುಖವಾದ ಮಸೀದಿಯೆಂದರೆ ಬಿಜಾಪುರದ ಜುಮ್ಮಾ ಮಸೀದೆ, ಇದು ದಕ್ಷಿಣ ಭಾರತದ ದೊಡ್ಡ ಮಸೀದೆಗಳಲ್ಲಿ ಪ್ರಸಿದ್ದವಾಗಿದೆ. ಈ ಮಸೀದಿಯಲ್ಲಿ ಮಹಮ್ಮದ ಆದಿಲ್‌ಶಾಹನು ಪಶ್ಚಿಮ ಗೋಡೆಯ ಮೇಲೆ ಮತ್ತು ಮೆಹರಾಬ ಮೇಲೆ ಪರ್ಶಿಯನ್ ಶಾಸನವನ್ನು ಚಿನ್ನದ ಬಣ್ಣದಿಂದ ಹೀಗೆ ಬರೆಯಲಾಗಿದೆ.

“ ಜೀವನದಲ್ಲಿ ನಂಬಿಕೆ ಇಡಬೇಡ; ಅದು ಕ್ಷಣಿಕ ಮಾತ್ರವಿದೆ,
ಈ ಅಶಾಶ್ವತ ಜಗತ್ತಿನಲ್ಲಿ ಶಾಂತಿ ಇಲ್ಲ.
ಜಗತ್ತು ಇಂದ್ರಿಯಗಳಿಗೆ ಒಳ್ಳೆಯ ಮೋಹಕವಾಗಿದೆ,
ಎಲ್ಲ ದಾನಗಳಲ್ಲಿ ಜೀವನವು ಅತ್ಯುತ್ತಮವಾದುದು ಆದರೆ ಅದು ಶಾಶ್ವತವಲ್ಲ
ಮಸೀದಿಯ ಸೇವಕನೂ ಮತ್ತು ಸುಲ್ತಾನ ಮಹಮ್ಮದನ ಗುಲಾಮನು ಆದ
ಮಲಿಕ ಯಾಕೂತನು ಮಸೀದಿಯನ್ನು ಪೂರ್ಣಗೊಳಿಸಿದನು.”[೬೨]

[illegible]

[illegible]

[illegible]

[illegible]

ಹೀಗೆ ಆದಿಲ್‌ಶಾಹಿಗಳು ತಮ್ಮ ಆಳ್ವಿಕೆಯ ಕಾಲದಲ್ಲಿ ನೂರಾರು ಮಸೀದಿಗಳನ್ನು ತಮ್ಮ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ಕಟ್ಟಿಸಿದರು. ಅಲ್ಲದೆ ಅದಕ್ಕೆ ಅನೇಕ ದಾನ ದತ್ತಿಗಳನ್ನು ಸಹ ನೀಡಿದ್ದನ್ನು ಗಮನಿಸಬುದು.

ಕ್ರಿಶ್ಚಿಯನ :

ವಿಜಯನಗರದ ಕಾಲದಲ್ಲಿ ಪೋರ್ಚುಗೀಸರ ಆಗಮನದೊಂದಿಗೆ ಕ್ಯಾಥೋಲಿಕ್ ಕ್ರೈಸ್ತರು ಕಾಲಿಟ್ಟರೆನ್ನಬಹುದು. ವಿಜಯನಗರದ ಕಾಲದಲ್ಲಿ ಇವರು ಮಂಗಳೂರು, ಕುಂದಾಪುರ ಮತ್ತು ಹೊನ್ನವರಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಿದರು. ಆದಿಲ್‌ಶಾಹಿಗಳ ಆಳ್ವಿಕೆಯವಧಿಯಲ್ಲಿ ರಾಜಕೀಯ ಸಂಬಂಧಗಳು ಏರ್ಪಟ್ಟವು. ಪೋರ್ಚುಗೀಸರು ಸಮಯಕ್ಕೆ ತಕ್ಕಂತೆ ತಮ್ಮ ನೀತಿಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತ ಆದಿಲ್‌ಶಾಹಿಗಳ ಜೊತೆ ಸಂಬಂಧಗಳನ್ನು ಬೆಳೆಸಿದರು. ಕ್ರಿ.ಶ. ೧೬೩೧ ರಲ್ಲಿ ಮೊಘಲರು ಬಿಜಾಪುರಕ್ಕೆ ಮುತ್ತಿಗೆ ಹಾಕಿದಾಗ ಪೋರ್ಚುಗೀರ ವೈಸರಾಯ ಕೊಂಟ-ಡಿ-ಲಿನಹೇಡ್ಸನು ಗುಪ್ತವಾಗಿ ಆದಿಲ್‌ಶಾಹಿಗಳಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ಸಹಾಯ ಮಾಡಿದನು.

ಕ್ರಿ.ಶ. ೧೬೫೪ ಪ್ರಾರಂಭದಲ್ಲಿ ಮಹಮ್ಮದ ಆದಿಲ್‌ಶಾಹನು, ಗೋವೆಗೆ ಒಬ್ಬ ರಾಯಭಾರಿಯನ್ನು ಕಳಿಸಿ ಇಬ್ಬರು ಜೇಸುಯಿತ ಪಾದ್ರಿಗಳಿಗೆ ಆಮಂತ್ರಣ ನೀಡಿದನು. ಅದರಂತೆ ಪೋರ್ಚುಗೀಸರು ಫಾದರ ಮಾರ್ಟಿನ ಕಾಣಿಕೆಯೊಂದಿಗೆ ಬಿಜಾಪುರಕ್ಕೆ ಕಳಿಸಿದರು. ಬಿಜಾಪುರ ಮತ್ತು ಗೋವೆಯ ಮಧ್ಯ ನಡೆಯಬಹುದಾದ ಕದನವನ್ನು ತಡೆಯಲು ಪ್ರಯತ್ನ ಮಾಡಲು ಅವನಿಗೆ ಕಳಿಸಲಾಗಿತ್ತು.[೩] ಹೀಗೆ ಕೆಲವೊಂಮ್ಮೆ ಸಂಘರ್ಷಣೆ, ಕೇಲವು ವೇಳೆ ಒಳ್ಳೇಯ ಸಂಬಂಧಗಳನ್ನು ನೋಡಬಹುದು. ಇವರು ಗೋವೆ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ತಮ್ಮ ಚರ್ಚುಗಳನ್ನು ಸ್ಥಾಪಿಸಿ ಧರ್ಮ ಪ್ರಚಾರ ಕೂಡ ಮಾಡಿದರು. ಇದೆ ರೀತಿಯಲ್ಲಿ ಬ್ರೀಟಿಷರು, ಡಚ್ಚರು ತಮ್ಮ ವಸಹಾತುಗಳ ಜೊತೆ ಧರ್ಮ ಪ್ರಚಾರ ಕೂಡ ಮಾಡಲಾರಂಬಿಸಿದು. ಇದರಿಂದ ತಿಳಿದು ಬರುವಂತೆ ರಾಜ್ಯದಲ್ಲಿ ಹಿಂದೂ-ಮುಸ್ಲಿಂ ಧರ್ಮಗಳ ಜೊತೆಗೆ ಪರಕೀಯ ಇನೊಂದು ಧರ್ಮವಾದ ಕ್ರಿಶ್ಚಿಯನ್ ಧರ್ಮಕ್ಕೂ ರಾಜಾಶ್ರಯ ದೊರತಿದ್ದನ್ನು ಕಾಣಬಹುದು.

ಹೀಗೆ ಕರ್ನಾಟಕದ ಧಾರ್ಮಿಕ ಜೀವನವು ಭಾರತೀಯ ಇತಿಹಾಸದಲ್ಲೇ ಮೋಹಕವಾದೊಂದು ಅಧ್ಯಾಯವಾಗಿದೆ. ಅದು ಅನೇಕ ದೃಷ್ಟಿಗಳಿಂದ ಮಹತ್ವಯುತವಾಗಿದೆ. ಪೂರ್ಣ ಪ್ರಮಾಣದಲ್ಲಿ ಭಕ್ತಿ ಆಂದೋಲನವು ನಡೆಯಿತು. ಜಾತಿ, ಮತ, ವರ್ಗಗಳ ತಡೆಗೋಡೆಗಳು ಉರುಳಿಬಿದ್ದವು. ಮಾನವತ್ವದ ಸುಭದ್ರ ತಳಹದಿಯ ಮೇಲೆ ಧರ್ಮವು ನಿಂತಿತು. ವೀರಶೈವರು, ಇಸ್ಲಾಮಿನ ಸೂಫಿ ಸಂತರು ಮಾನವ ಜೀವನದ ಧಾರ್ಮಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಅವರು ಕ್ರಾಂತಿಕಾರಕ ಬದಲಾವಣೆಯನ್ನು ತಂದರು.

ಧಾರ್ಮಿಕ ಸಹಿಷ್ಣುತೆ :

ಆದಿಲ್‌ಶಾಹಿ ದೊರೆಗಳು ಪರಧರ್ಮ ಸಹಿಷ್ಣುಗಳಾಗಿದ್ದರು, ರಾಜ್ಯದಲ್ಲಿನ ಅನೇಕ ಹಿಂದೂ ದೇವಾಲಯಗಳಿಗೆ, ಮಠಗಳಿಗೆ ಉದಾರವಾಗಿ ದಾನ, ಧರ್ಮ, ದತ್ತಿಗಳನ್ನು ನೀಡಿದ ಹೇರಳವಾದ

ನಿದರ್ಶನಗಳು ಇಂದಿಗೂ ದೊರೆಯುತ್ತವೆ. ಪಂಡಿತ, ಪುರೋಹಿತರು, ಜೋಶಿ, ದೀಕ್ಷಿತ, ಜಂಗಮರೇ ಮೊದಲಾದ ಹಿಂದೂ ವರ್ಗದ ಜನರಿಗೆ ತಮ್ಮ ಧಾರ್ಮಿಕ ವಿಧಿಗಳನ್ನು ಮುಂದುವರಸಿಕೊಂಡು ಹೋಗಲು ಸಮ್ಮತಿಸುತ್ತಿದ್ದರು.

ಆದರೆ ಮಹಮ್ಮದ ಆದಿಲ್‌ಶಾಹನ ಕಾಲಕ್ಕೆ ಬಂದರೆ ಅನೇಕ ಬರಹಗಾರರು ಅವನನ್ನು ಧರ್ಮಾಂದತೆಯಿಂದ ಕೂಡಿದ ವ್ಯಕ್ತಿಯೆಂದು ಬಣ್ಣಿಸಿದ್ದಾರೆ. ಅದಕ್ಕೆ ಅವರು ಹೇಳುವ ಕಾರಣಗಳೆಂದರೆ, ಇವನ ಕಾಲದಲ್ಲಿ ಜಿಜಿಯಾ ತೆರಿಗೆಯನ್ನು ಹಿಂದೂಗಳ ಮೇಲೆ ಹೇರಿದನೆಂದು ಅಭಿಪ್ರಾಯ ಪಡುತ್ತಾರೆ. ಅವನ ದಸ್ತುರುಲ ಅಮಲ (ಆಡಳಿತ ಶಾಸನಗಳು ಅಥವಾ ನಿಯಮಗಳು) ದಲ್ಲಿ ಯಾರಿಂದ ಜಿಜಿಯಾ ತೆರಿಗೆ ಪಡೆಯಬೇಕು ಮತ್ತು ಯಾರು ಇದರಿಂದ ವಿನಾಯತಿಯನ್ನು ಪಡೆದಿದ್ದರೆಂದು ವಿವರವಾಗಿ ಹೇಳಲಾಗಿದೆ. ಇಲ್ಲಿ ಗಮನಿಸಬಹುದಾದ ಅಂಶವೆನೆಂದರೆ ಯಾರು ತೆರಿಗೆಯನ್ನು ಕೊಡಲು ಯೋಗ್ಯರಿದ್ದಾರೆ ಅವರಿಗೆ ಮಾತ್ರ ತೆರಿಗೆಯನ್ನು ತೆಗೆದುಕೊಳ್ಳಲು ಸೂಚಿಸಲಾಗಿದೆ. ಯಾರು ತೆರಿಗೆಯನ್ನು ಕೊಡಲು ಅಶಕ್ತರೋ ಅಂಥವರಿಗೆ ತೆರಿಗೆಯಿಂದ ವಿನಾಯಿತಿ ಇದೆ. ಕೇವಲ ಈ ನಿಯಮಗಳ ಆಧಾರದ ಮೇಲೆ ಅವನನ್ನು ಧರ್ಮಾಂದ ಎಂದು ಹೇಳಲಿಕ್ಕಾಗದು. ಏಕೆಂದರೆ, ಇಲ್ಲಿಯವರೆ ಸಿಕ್ಕಂತಹ ಯಾವುದೇ ಫರ್ಮಾನ ಮತ್ತು ದಾಖಲೆಗಳಲ್ಲಿ ಅವನು ತೆರಿಗೆಯನ್ನು ಹಾಕಿದ ದಾಖಲೆಗಳಿಲ್ಲ. ಅವನು ಆಡಳಿತವನ್ನು ನಡೆಸಲಿಕ್ಕಾಗಿ ಮಾಡಿದ ನಿಯಮಗಳ ಒಂದು ಸಂಗ್ರವಾಗಿದೆ. ಆ ನಿಯಮಗಳು ಎಲ್ಲಾ ಜಾರಿಯಲ್ಲಿದ್ದವು ಎಂದು ಹೇಳುವುದ ಅಸಮಂಜಸವಾಗಿದೆ. ಅಲ್ಲದೇ ಮಹಮ್ಮದನ ಕಾಲದಲ್ಲಿ ಪಂಡರಪುರದ ವಿಠೋಬ, ತುಳಜಾಪುರದ ತುಳಜಾಭವಾನಿ ದಾಳಿ ಎದುರಿಸಬೇಕಾಯಿತೆಂದು ಬರೆಯಲಾಗಿದೆ. ಅದರೆ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ದೇವಾಲಯಗಳಿಗೆ ಕೊಟ್ಟಂತಹ ದಾನ-ದತ್ತಿಗಳು ಇವೆ. ಒಬ್ಬ ವ್ಯಕ್ತಿ ಧಮಾಂಧನಾಗಿದ್ದರೆ, ಅವನು ಹೇಗೆ ಹಿಂದೂ ದೇವಾಲಯಗಳನ್ನು ಕಟ್ಟಲು, ದುರಸ್ತಿಗೊಳಿಸಲಯ ದಾನಗಳನ್ನು ಕೊಡುತ್ತಾನೆ. ಮಹಮ್ಮದ ಆದಿಲ್‌ಶಾಹನು ದೇವಾಲಯಗಳಿಗೆ ಕೊಟ್ಟಂತಹ ದಾನಗಳು ಮತ್ತು ಹಿಂದೂಗಳ ಜೊತೆ ಒಳ್ಳೆಯ ಸಂಬಂಧ ಇತ್ತು ಎಂಬುದಕ್ಕೆ ಈ ಕೆಳಕಂಡ ಫರ್ಮಾನಗಳು, ಶಾಸನಗಳು ಸಾಕ್ಷಿಯಾಗಿವೆ.

ವಿಠೋಭ ದೇವಸ್ಥಾನಕ್ಕೆ ದಾನ-ದತ್ತಿ ಕೊಟ್ಟದ್ದು :

ಹದಿನೇಳನೆ ಶತಮಾನದ ಒಂದು ತಾಮ್ರಪಟವು ಸಾತವಳಿ ಗ್ರಾಮದಲ್ಲಿ ದೊರಕಿದೆ. ಈ ಸಾತವಳಿ ಗ್ರಾಮವು ರತ್ನಾಗಿರಿ ಜಿಲ್ಲೆಯ ಲಾಂಜೆ ತಾಲೂಕಿನಲ್ಲಿದೆ. ಈ ತಾಮ್ರಪಟದಲ್ಲಿ ಹದಿನೈದು ಸಾಲುಗಳು ದೇವನಾಗರಿಯಲ್ಲಿದೆ.

ಶಕ ೧೫೬೧ ಪುಮಧಿನಾಮ ಸಂವತ್ಸರದ ಕಾರ್ತಿಕ ಶುದ್ಧ ಪಂಚಮಿ, ಗುರುವಾರ ಮೂಳಾ ನಕ್ಷತ್ರದಂದು ವಿಠೋಬ ದೇವರ ದೇವಸ್ಥಾನ ಕಟ್ಟುವ ಕಾರ್ಯ ಆರಂಭವಾಯಿತು. ಈ ಕೆಲಸವು ಸುಲ್ತಾನಿ ಬಂದರದಲ್ಲಿ ಕೈಗೊಳ್ಳಲಾಯಿತು. (೨೧ ಅಕ್ಟೋಬರ ೧೬೩೯) ಮತ್ತು ಶಕೆ ೧೫೬೨ ವಿಕ್ರಮ ಸಂವತ್ಸರದ

[illegible]

ವೈಶಾಖ ಮಾಸದ ಶುದ್ಧ ಏಕಾದಶಿ ಬುಧವಾರ ಉತ್ತರ ಫಾಲ್ಗುಣಿ ನಕ್ಷತ್ರ ಕ್ರಿ.ಶ. ಏಪ್ರಿಲ ೨೨ ೧೬೪೦ ರಂದು ದೇವಸ್ಥಾನಕ್ಕೆ ಕಳಸಾರೋಹಣವನ್ನು ರಾಘೋ ಪಾಧ್ಯೆಯ ಗುಜರ ಮತ್ತು ಮಹಾದೇವಭಟ್ಟ ನವಥೆ ನೇರವೇರಿಸಿದರು. ಈ ಶುಭ ಸಂದರ್ಭದಲ್ಲಿ ಸುಲ್ತಾನ ಮಹಮ್ಮದ ಆದಿಲ್‌ಶಾಹ', ಮೊಕದಾರ ಮುಸ್ತಫಾಖಾನನ ಮಗ ಅಸದಖಾನ, ಠಾಣೆದಾರ ವೆಂಕಟಾದ್ರಿಯು ಈ ಸ್ಮರಣೆಗಾಗಿ ಒಂದು ಅಗರ ಅಂದರೆ ತೆಂಗು ಬೆಳೆಯುವ ತೋಟ, ಆರು ರೂಪಾಯಿ ಮತ್ತು ಲಾವಗಾಣದಲ್ಲಿ ಒಂದು ಭೂಮಿ ಮತ್ತು ಇನ್ನೊಂದು ಭೂಮಿಯನ್ನು ಸಾತವಳಿಯಲ್ಲಿ ಇವುಗಳನ್ನು ದಾನವಾಗಿ ಕೊಟ್ಟು, ನರಸಿಂಹದೇವನಿಗೆ ಈ ಭೂಮಿಯನ್ನು ನೋಡಿಕೊಳುವ ಜವಾಬ್ದಾರಿಯನ್ನು ಕೊಡಲಾಯಿತು. ಈ ದೇಣಿಗೆಗೆ ಸಾಕ್ಷಿಯಾಗಿ ದೇಸಾಯಿ ಹರಿ ಬಾಬಜಿ, ನರಸೋ ಪಿಲದೇವ ಮತ್ತು ಕುಲಕರ್ಣಿಯಾದ ನಾರೋ ತಿಮ್ಮಾಜಿ ಮತ್ತು ಹನುಮಾಜಿ ಮಾಹಾದೇವ ಇದ್ದರು.[೪]

ಹಿಪ್ಪರಗಿಯ ಹನುಮಾನ ದೇವಾಲಯ :

ಕ್ರಿ.ಶ. ೧೬೪೪ರಲ್ಲಿ ಸಿಂದಗಿ ತಾಲೂಕಿನ ಹಿಪ್ಪರಗಿ ಗ್ರಾಮದಲ್ಲಿ ಹನುಮಾನ ದೇವಾಲಗಯ ಕಟ್ಟಿಸಿಲು ಅದಕ್ಕೆ ದತ್ತಿಗಳನ್ನು ಕೊಟ್ಟಿದ್ದನ್ನು ನೋಡಬಹುದು.[೫] ಇದು ಶಾಸನದಲ್ಲಿ ಈ ರೀತಿಯಾಗಿದೆ. ನೃಪ ಶಾಲಿವಾನ ಶಕೆ, ೧೫೬೬ ತರಣ ಮಾಸ ನಾಮ ಸಂವತ್ಸರೆ ಶ್ರಾವಣ ಶುದ್ಧ ಪಾಡವಾ ಶುಕ್ರವಾರದಿಂದ ಕ್ರಿ.ಶ, ಜುಲೈ ೨೪ ೧೬೪೪ರಲ್ಲಿ ಹನುಮಾನ ದೇವಾಲಯ ಕಟ್ಟಲು ಭೂವಿಯನ್ನು ಬಳುವಳಿಯಾಗಿ ಕೊಟ್ಟ ಬಗ್ಗೆ ದೇವನಾಗರಲಿಪಿ, ಮರಾಠಿ ಭಾಷೆಯಲ್ಲಿದೆ. ಈ ಶಾಸನ ಹನುಮಾನ ದೇವಾಲಯದ ಗೋಡೆಯ ಮೇಲೆ ಇತ್ತು,[೬] ಈಗ ಹೊಸ ಕಟ್ಟಡ ಕಟ್ಟುತ್ತಿದ್ದರಿಂದ ಅದು ಈಗ ಇಲ್ಲ.

ಶೃಂಗೇರಿ ಮಠ :

ಶೃಂಗೇರಿ ಮಠದೊಂದಿಗೆ ಬಿಜಾಪುರದ ಆದಿಲ್‌ಶಾಹಿಗಳು ಇರಿಸಿಕೊಂಡ ಸಂಬಂಧವನ್ನು ದೃಢೀಕರಿಸಲು ಕೆಲವು ದೃಷ್ಟಾಂತಗಳನ್ನು ಇಲ್ಲಿ ಕೊಡಲಾಗಿದೆ. ವಿಜಯನಗರ ಸಾಮ್ರಾಜ್ಯದ ಪತನ ನಂತರ ದಕ್ಷಿಣದಲ್ಲಿ ಪ್ರಬಲರಾದ ಹಿಂದೂ ಸಂಸ್ಥಾನಿಕರೊಂದಿಗೆ ಬಿಜಾಪುರ ಮತ್ತು ಗೋಳಕೊಂಡದ ಶಾಹಿ ಅರಸುಗಳು ಯುದ್ಧ ಹೂಡಿದರು.

ಈ ಅರಾಜಕತೆಯ ಅವಧಿಯಲ್ಲಿ ಕೂಡ್ಲಿ ಮಠದ ಸ್ವಾಮಿಜಿಗಳು ಶೃಂಗೇರಿ ಮಠಕ್ಕೆ ಸೇರಿದ ಹರಕೆರಿ ಮತ್ತು ಮಂಡಲಿಗ್ರಾಮಗಳ ಒಡೆತನವನ್ನು ತಮಗೆ ಪಾಲಿಸುವಂತೆ ಬಿಜಾಪುರದ ಅಧಿಕಾರಿಗಳನ್ನು ಪ್ರಚೋದಿಸಿದರು. ಆದರೆ ಕೆಳದಿಯ ವೀಭದ್ರ ನಾಯಕನು (೧೬೨೯-೧೬೪೫) ಪ್ರಥಮ ಶ್ರೀ ಸಚ್ಚಿದಾನಂದ ಭಾರತಿ ಸ್ವಾಮಿಗಳ ಈ ಗ್ರಾಮಗಳ ಮೇಲಿನ ಒಡೆತನಕ್ಕೆ ಧಕ್ಕೆ ಬರಬಾರದೆಂದು ಬಿಜಾಪುರದ ಅಧಿಕಾರಿಗಳಿಗೆ ಬರೆದನು. ಈ ವಿನಂತಿಗೆ ಮನ್ನಣೆಯೂ ದೊರೆಯಿತು.

ಬಿಜಾಪುರದ ಮಹಮ್ಮದ ಆದಿಲ್‌ಶಾಹನಿಂದ ಕಳುಹಲ್ಪಟ್ಟ ಬಿಜಾಪುರದ ಸೇನಾನಿ ರಣದುಲ್ಲಾಖಾನ ಮತ್ತು ಉಪಸೇನಾನಿ ಶಹಾಜಿ ಭೋಸ್ಲೆಯವರು ಕ್ರಿ.ಶ. ೧೬೩೭ ರಲ್ಲಿ ಇಕ್ಕೇರಿ ಸೂರೆ ಮಾಡಿದರು. ವೀರಭದ್ರ ನಾಯಕನು ರಾಜ್ಯದ ಅರ್ಧಭಾಗವನ್ನು ಬಿಟ್ಟುಕೊಟ್ಟು, ಭುವನಗಿರಿ ದುರ್ಗವನ್ನು ಬಿಟ್ಟು ಬಿದನೂರಿಗೆ ಹೋದನು. ಈ ರೀತಿಯಾಗಿ ಕರ್ನಾಟಕದಲ್ಲಿ ರಾಜಕೀಯ ಅಸ್ಥಿರತೆ ಮತ್ತು ಭೀತಿ ತಲೆದೋರಿದಾಗ, ಪ್ರಥಮ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳು ತಮ್ಮ ಮಠದ ದೇವಾಲಯಗಳು ಹಾಗೂ ಹಳ್ಳಿಗಳನ್ನು ರಕ್ಷಿಸುವಂತೆ ರಣದುಲ್ಲಾಖಾನನಿಗೆ ಶ್ರೀಮುಖವನ್ನು ಕಳುಹಿಸಿಕೊಟ್ಟರು. ಖಾನನು ಇದಕ್ಕೆ ಪ್ರತಿಯಾಗಿ, ಪರಮಹಂಸ ಪರಿವ್ರಾಜ ಕಾಚಾರ್ಯ ಸಚ್ಚಿದಾನಂದ ಭಾರತಿಗಳಿಗೆ ತನ್ನ ಸಲಾಮನ್ನು ಸನದಿನ ಮುಖಾಂತರ ತಿಳಿಪಡಿಸಿದನು, ಇದಲ್ಲದೆ, ಮಠವು ಕಳೆದುಕೊಂಡ ಶವಮೊಗ್ಗೆ ಸೀಮೆಯ ಗ್ರಾಮಗಳನೆಲ್ಲ ತಿರುಗಿ ಶ್ರೀಮಠಕ್ಕೆ ಸಲ್ಲಿಸುವಂತೆ ಮತ್ತು ಜಗದ್ಗುರುಗಳಿಗೆ ವಿಧೇಯರಾಗಿರುವಂತೆ ತನ್ನ ಕೆಳಗಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಆಜ್ಞೆ ಹೊರಡಿಸಿದನು. ರಣದುಲ್ಲಾಖಾನನು, ತನ್ನನ್ನು ಆಗಾಗ ಆಶೀರ್ವದೊಸಬೇಕೆಂದು ಗುರುಗಳಲ್ಲಿ ನಮ್ರವಾಗಿ ಪ್ರಾರ್ಥಿಸಿಕೊಂಡು, ತನ್ನಿಂದಾಗುವಂಥ ಎಲ್ಲ ಸಹಾಯ ನೀಡುವದಾಗಿ ಗುರುಗಳಿಗೆ ಭರವಸೆಯಿತ್ತನು.[೬೭] ಈ ಮಠಕ್ಕೆ ಸಂಬಂಧಿಸಿದ ಇನ್ನೊಂದು ದಾಖಲೆಯ ಪ್ರಕಾರ, ಕ್ರಿ.ಶ. ೧೬೫೬ ರಲ್ಲಿ ಆದಿಲ್‌ಶಾಹಿಗಳ ಪೆನ್ನಗೊಂಡದ ಅಧಿಕಾರಿಯಾದ ಅಸದುಲ್ಲಾಖಾನನು ಈ ಮಠಕ್ಕೆ ಜುಲುಕುನಂಟಿ ಗ್ರಾಮ ಮತ್ತು ಇದರ ಕಂದಾಯ ಹಾಗೂ ಆ ಗ್ರಾಮಕ್ಕೆ ಸಂಬಂಧಿಸಿದ ತೆರಿಗೆಗಳನ್ನು ಶೃಂಗೇರಿಯ ಸ್ವಾಮಿಜಿಗೆ ತೆಗೆದು ಕೊಳ್ಳಲು ದತ್ತಿಹಾಕಿ ಕೊಟ್ಟನು. ಇನ್ನೊಂದು ದಾಖಲೆ ಪ್ರಕಾರ ಮಹಮ್ಮದ ಆದಿಲ್‌ಶಾಹನು ಕನಕೇಶ್ವರ ದೇವಾಲಯ ಮತ್ತು ಅಲ್ಲಿಯ ಪುಜಾರಿಗೆ ದೇವಾಲಯದ ನಿರ್ವಹಣೆಗಾಗಿ ದಾನಗಳನ್ನು ನೀಡಿದನು. ಅಲ್ಲದೇ ಚೌಲದಲ್ಲಿರಯವ ರಾಮೇಶ್ವರ ದೇವಾಲಯಕ್ಕೂ ಸಹ ಜಾಹಗೀರನ್ನು ಕೊಟ್ಟನು.[೬೮]

ಸುಲ್ತಾನ ಮಹಮ್ಮದ ಆದಿಲ್‌ಶಾಹನು ತನ್ನ ಪ್ರಜೆಗಳ ಬಗ್ಗೆ ಅಪಾರವಾದ ಅನುಕಂಪವನ್ನು ಹೊಂದಿದ್ದನು. ಉದಾಹರಣೆಗಾಗಿ, ಒಂದು ದಿನ ಪ್ರಜಾಪಾಲನೆ ಮಾಡುವವನೂ ಧರ್ಮನಿಷ್ಠನೂ ಆದ ಸುಲ್ತಾನನು ತನ್ನ ಅರಮನೆಯ ಎತ್ತರದ ಮಹಡಿಯ ಮೇಲೆ ನಿಂತು ನಾಲ್ಕು ಕಡೆಗೆ ನೋಡುತ್ತಿದ್ದನು. ನಾಲ್ಕು ಕಡೆಗಳ ಜನವಸತಿಯಲ್ಲೂ ಹೊಗೆ ಎದ್ದುದನ್ನು ಕಂಡನು, ಆದರೆ ನಗರದ ವಸತಿಗಳಲ್ಲಿ ಬ್ರಾಹ್ಮಣರ ಓಣಿಯಲ್ಲೂ ದೊಡ್ಡ ಜನವಸತಿ ಇತ್ತು. ಆದರೆ ಆ ಓಣಿಯಿಂದ ಹೊಗೆ ಬರುತ್ತಿರಲಿಲ್ಲ. ಸುಲ್ತಾನನಿಗೆ ಬಹಳ ಆಶ್ಚರ್ಯವಾಯಿತು. ತನ್ನ ಅಧಿಕಾರಿಗಳನ್ನು ಸುಲ್ತಾನ ವಿಚಾರಿಸಿದನು. ಆಗ ಆ ಓಣಿಯಲ್ಲಿ ಇರುವರೆಲ್ಲ ಬ್ರಾಹ್ಮಣರು, ಇವರು ಒಂದೇ ಹೊತ್ತು ಅಡುಗೆ ಮಾಡಿ ಊಟ ಮಾಡುತ್ತಾರೆ. ಎಂದರು ಈ ಬ್ರಾಹ್ಮಣರು ಒಂದೇ ಹೊತ್ತು ಅಡುಗೆ ಮಾಡಿ ಒಂದೇ ಹೊತ್ತು ಊಟ ಮಾಡವ ಕಾರಣ ಏನಿರಬಹುದು ಎಂದು ವಿಚಾರಿಸಿದಾಗ, ಬ್ರಾಹ್ಮಣರು ಬಹಳ ಬಡವರಾಗಿದ್ದರಿಂದ ಒಂದೇ ಸಮಯದ ಊಟ ಮಾಡುತ್ತಾರೆಂದು ತಿಳಿದು ಸುಲ್ತಾನನು ಎಲ್ಲ ಬ್ರಾಹ್ಮಣರ ಜನರ ಭೋಜನದ ನಿತ್ಯ ಖರ್ಚನ್ನು ಸರಕಾರಿ ಖಜಾನೆಯಿಂದ ನೇಮಣೂಕ ಮಾಡಬೇಕೆಂದು ಆಜ್ಞೆ ಮಾಡಿದನು. ಈ ಸಂಗತಿಯಲ್ಲಿ ಗಮನಿಸಬೇಕಾದ ಅಂಶವೆಂದರೆ, ಸುಲ್ತಾನನಿಗೆ ಬ್ರಾಹ್ಮಣ ಜಾತಿ ಬೇರೆ ಎಂಬುದು ಲಕ್ಷ್ಯಕ್ಕೆ ಬರಲಿಲ್ಲ. ಅವರಿಂದದೇನು ದೊಡ್ಡ

ಕೆಲಸವಾಗುತ್ತದೆಂದೂ ವಿಚಾರಿಸಲಿಲ್ಲ, ಕೇವಲ ಒಂದೇ ಹೊತ್ತು ಊಟ ಮಾಡುತ್ತಾರೆ ಎಂಬುದು ಒಂದು ಲಕ್ಷ್ಯದಲ್ಲಿತ್ತು.[೯೯] ಹೀಗೆ ಜಾತಿ, ಧರ್ಮ ನೋಡದೆ ತನ್ನ ಪ್ರಜೆಗಳ ಕಷ್ಟಗಳನ್ನು ನೋಡಲು ಆತನಿಂದ ಆಗುತ್ತಿರಲಿಲ್ಲ.

ಯಾವುದೇ ಹಿಂದೂ ವ್ಯಕ್ತಿಯು ಪುತ್ರ ಸಂತಾನವಿಲ್ಲದೇ ಮರಣ ಹೊಂದಿದಾಗ ಅವನ ಆಸ್ತಿಯನ್ನು ಸರಕಾರವು ಮುಟ್ಟುಗೋಲು ಹಾಕಿಕೊಳ್ಳುತ್ತಿತ್ತು. ಅಂದರೆ ವಾರಸುದಾರರಿಲ್ಲದ ಹಿಂದೂಗಳ ಆಸ್ತಿಯು ಸರಕಾರದ ಆಸ್ತಿಯಾಗಿ ಪರಿವರ್ತನಗೊಳ್ಳುತ್ತಿತ್ತು. ಈ ರೂಢಿಯನ್ನು ಕ್ರಿ.ಶ. ೧೬೫೪ ರಲ್ಲಿ ಮಹಮ್ಮದ ಆದಿಲ್‌ಶಾಹನು ನಿಲ್ಲಿಸಿದನು.[೧೦೦] ಹೀಗೆ ಮಹಮ್ಮದ ಆದಿಲ್‌ಶಾಹನು ಹಿಂದೂಗಳ ಆಸ್ತಿಯನ್ನು ಸರಕಾರದಲ್ಲಿ ವಿಲೀನಗೊಳಿಸದೇ ಅವರ ಸಂಬಂಧಿಕರಿಗೆ ಕೊಟ್ಟಿದ್ದನ್ನು ನೋಡಬಹುದು.

ನ್ಯಾಯ ನೀಡುವಲ್ಲಿ ಹಿಂದೂ-ಮುಸ್ಲಿಮರ ಮಧ್ಯ ತಾರತಮ್ಯವಿರಲಿಲ್ಲ ಎಂಬ ಕುರಿತು ದಿನಾಂಕ ೩೦-೭-೧೬೪೫ರ ಮಹಮ್ಮದ ಆದಿಲ್‌ಶಾಹನ ಒಂದು ಫರ್ಮಾನು ನಿದರ್ಶನವಾಗಿದೆ.

ಮಹಮ್ಮದ ಆದಿಲ್‌ಶಾಹನಿಂದ ಬಂಕಾಪುರ ವಿಭಾಗದ ಗುತ್ತಲದ ಹಣುಮಂತಗೌಡ ದೇಸಾಯಿಗೆ ಕಳಿಸಿದ ಆದೇಶದಲ್ಲಿ " ಈ ಮೊದಲಿನ ಫರ್ಮಾನು ಪ್ರಕಾರ ಹಡಗಲಿ ಗ್ರಾಮವು ಕೆಂಗ ನಾಯಕನಿಗೆ ಸಂಬಂಧಿಸಿದೆ. ರಾಜಕುಮಾರ ಅಲಿಮಿಯಾ ಈತನು ಅಡ್ಡ ಬಂದು ಅದನ್ನು ಅವನ ತಾಬೆಗೆ ಕೊಡುತ್ತಿಲ್ಲ. ಸನದು (ಕೆಂಗ) ನಾಯಕನಿಗೆ ಆಗಿದ್ದು ರಾಜಕುಮಾರನ ಅಧಿಕಾರಿಗಳು ಅಡ್ಡ ಬರುತ್ತಾರೆ ಎಂದರೆ ಏನು ಅರ್ಥ? ಆದ್ದರಿಂದ ಈ ಆದೇಶ ಮುಟ್ಟಿದ ತಕ್ಷಣ ಸದರೀ ಸನದು (ಹೊಳಲಗಡಿಯನ್ನು ಬಿಟ್ಟು) ಸದರೀ ನಾಯಕನಿಗೆ ಆದೇಶದಂತೆ ಕೊಟ್ಟಿದೆ ಎಂದು ತಿಳಿದು ತಾಬೆಗೆ ಕೊಡಿಸಬೇಕು, ರಾಜಕುಮಾರನ ಅಧಿಕಾರಿಗಳು ತೊಂದರೆ ಕೊಡದಂತೆ ನೋಡಿಕೊಳ್ಳಬೇಕು. ಈ ವಿಷಯದಲ್ಲಿ ಸಕ್ತ ಎಚ್ಚರಿಕೆ ಎಂದು ತಿಳಿದು ಫಿರ್ಯಾದಿ ಬರದಂತೆ ನೋಡಿಕೊಳ್ಳಬೇಕು" ಎಂದು ಹೇಳಲಾಗಿದೆ.[೧೦೧]

ಹಿಂದು-ಹಿಂದುಗಳ ಮಧ್ಯದಲ್ಲಿ ವ್ಯಾಜ್ಯಗಳು ಉಂಟಾದಾಗ ತಮ್ಮ ತೀರ್ಪು ಯಾರಿಗೂ ಅನ್ಯಾಯ ಆಗಬಾರದೆಂದು ಅಂಥ ವ್ಯಾಜ್ಯಗಳನ್ನು ಹಿಂದೂ ಧರ್ಮ ಪೀಠಗಳಿಗೆ ಕಳಿಸುತ್ತಿದ್ದನು.

ಉದಾಹರಣೆಗೆ, ಕೊಂಕಣದಲ್ಲಿ ಬ್ರಾಹ್ಮಣರು ಮತ್ತು ಕಾಯಸ್ಥ ಪ್ರಭುಗಳ ಮಧ್ಯ ಗಾಯತ್ರಿ ಮಂತ್ರದ ಉಪಾಸನೆಯ ಬಗ್ಗೆ ಜಗಳ ಉಂಟಾಯಿತು. ಕಾಯಸ್ಥ ಪ್ರಭು ಜನರಿಗೆ ಗಾಯತ್ರಿ ಮಂತ್ರವನ್ನು ಉಪಾಸನೆ ಮಾಡುವ ಅಧಿಕಾರ ಇಲ್ಲ ಎಂಬುದು ಜಗಳದ ವಿಷಯವಾಗಿತ್ತು. ಸ್ಥಳೀಯವಾಗಿ ಜಗಳವನ್ನು ಬಗೆ ಹರಿಸುವುದು ಸಾಧ್ಯವಾಗಲಿಲ್ಲ. ವ್ಯಾಜ್ಯವು ರಾಜಧಾನಿ ಬಿಜಾಪುರಕ್ಕೆ ಬಂದಿತು. ಸುಲ್ತಾನನಾಗಲೀ, ಮುಸ್ಲಿಮ ನ್ಯಾಯ ಪೀಠವಾಗಲಿ ಈ ಜಗಳ ಬಗೆ ಹರಿಸುವುದು ಸಾಧ್ಯವಿರಲಿಲ್ಲ. ಯಾಕೆಂದರೆ ಅವರಿಗೆ ಈ ವಿಷಯದ ಕುರಿತು ಮಾಹಿತಿ ಇರಲಿಲ್ಲ. ಆದ್ದರಿಂದ ಉಭಯ ಧರ್ಮಗಳ ಮುಖಂಡರನ್ನು ಬನಾರಸಕ್ಕೆ ಕಳಿಸಿ ಅಲ್ಲಿಯ ಧರ್ಮ ಪಂಡಿತರಿಂದ ನಿರ್ಣಯವನ್ನು ತರಲು ಹೇಳಿದರು. ಉಭಯ ಧರ್ಮದವರು ಬನಾರಸಕ್ಕೆ ಹೋದರು.

ಅಲ್ಲಿ ಹಿಂದೂ ಧರ್ಮದ ಪಂಡಿತರ ಸಭೆಯಲ್ಲಿ ಬಹು ದೊಡ್ಡ ಚರ್ಚೆಯಾಯಿತು. ಚರ್ಚೆಯ ನಂತರ, ಕಾಯಸ್ಥ ಪ್ರಭುಗಳು ನಿಜವಾದ ಕ್ಷತ್ರಿಯರಿದ್ದು, ಕ್ಷತ್ರಿಯರಿಗೆ ವೇದಗಳಲ್ಲಿ ಹೇಳಿದ ಕರ್ಮಗಳಿಗೆ ಬಾಧ್ಯತೆ ಇದೆ. ಮತ್ತು ಗಾಯತ್ರಿ ಮಂತ್ರದ ಉಪಾಸನೆಯ ಅರ್ಹತೆ ಇದೆ. ಎಂದು ನಿರ್ಣಯಿಸಲಾಯಿತು. ಅದರಂತೆ ಬ್ರಾಹ್ಮಣರು ಅವರಿಗೆ ಗಾಯತ್ರಿ ಮಂತ್ರವನ್ನು ಉಪದೇಶಿಸಬೇಕು ಎಂದು ನಿರ್ಣಯವನ್ನು ಕೊಟ್ಟರು. ಆ ನಿರ್ಣಯಗಳನ್ನು ಬಿಜಾಪುರಕ್ಕೆ ತಂದು ಸುಲ್ತಾನನಿಗೆ ತೋರಿಸಿ ಅವನಿಂದ ಅಂತಿಮ ಆದೇಶವನ್ನು ಪಡೆದರು.[೧೦೨]

ಇದೇ ತರಹದ ಇನ್ನೊಂದು ವ್ಯಾಜ್ಯವನ್ನು ಗಮನಿಸಬಹುದು, ಬಿಜಾಪುರ ಪರಗಣೆಯ ಅಥಣಿ ನಗರದ ಜೈನರು ಮತ್ತು ಲಿಂಗಾಯತರಲ್ಲಿ ಪರಸ್ಪರ ಶ್ರೇಷ್ಠತೆಗಾಗಿ ನ್ಯಾಯ ನಡೆಯಿತು. ಸ್ಥಳಿಯ ಅಧಿಕಾರಿಗಳು ಕ್ರಿ.ಶ. ೧೬೫೬–೧೬೭೨ ರ ಮಧ್ಯ ವರುಷಗಟ್ಟಲೆ ವಿಚಾರಣೆ ನಡೆಸಿದರು ನಿರ್ಣಯವಾಗಲಿಲ್ಲ. ಕೊನೆಗೆ ಉಭಯ ಪಕ್ಷಗಳು ಸುಲ್ತಾನನ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿದರು. ಸುಲ್ತಾನನ ಪರವಾಗಿ ಮೇಲ್ಮನವಿಯನ್ನು ವಿಚಾರಿಸಿದ ಸುಲ್ತಾನನ ತಾಯಿ, ಮಹಾರಾಣಿ ಬಡೀ ಸಹೆಬಾಳು ನ್ಯಾಯ ಪಡೆಯಲು ಉಭಯ ಪಕ್ಷಗಳನ್ನು ವಾರಣಾಸಿಗೆ ಕಳಿಸಿದಳು. ಅಲ್ಲಿ ಪಂಡಿತರ ಸಭೆಯಲ್ಲಿ ಸುದೀರ್ಘ ಚರ್ಚೆಯಾಗಿ ಉಭಯ ಮತಗಳೂ ಶ್ರೇಷ್ಠವಾಗಿವೆ ಎಂದು ನಿರ್ಣಯವನ್ನು ಕೊಟ್ಟರು. ಅದನ್ನು ತಂದು ತೋರಿಸಿದಾಗ ಮಹಾರಾಣಿಯು ವಾರಣಾಸಿಯ ನಿರ್ಣಯವನ್ನು ಎತ್ತಿ ಹಿಡಿದಳು. ಮತ್ತು ಸ್ಥಳೀಯವಾಗಿ ನಡೆದ ವಿಚಾರಣೆಯಲ್ಲಿ ನ್ಯಾಯ ನೀಡುವಲ್ಲಿ ತಪ್ಪಿದ ಅಧಿಕಾರಿಗಳನ್ನು ಶಿಕ್ಷಿಸಿದಳು.

ಹೀಗೆ ಕರ್ನಾಟಕದ ಧಾರ್ಮಿಕ ಜೀವನವು ಭಾರತೀಯ ಇತಿಹಾಸದಲ್ಲೇ ಮೋಹಕವಾದೊಂದು ಅಧ್ಯಾಯವಾಗಿದೆ. ಅದು ಅನೇಕ ದೃಷ್ಟಿಗಳಿಂದ ಮಹತ್ವದಾಗಿದೆ. ಪೂರ್ಣ ಪ್ರಮಾಣದಲ್ಲಿ ಭಕ್ತಿ ಆಂದೋಲನವು ನಡೆಯಿತು. ಜಾತಿ, ಮತ, ವರ್ಗಗಳ ತಡೆಗೋಡೆಗಳು ಉರುಳಿಬಿದ್ದವು. ಮಾನವತ್ವದ ಸುಭದ್ರ ತಳಹದಿಯ ಮೇಲೆ ಧರ್ಮವು ನಿಂತಿತು. ವೀರಶೈವರು, ಇಸ್ಲಾಮಿನ ಸೂಫಿ ಸಂತರು ಮಾನವ ಜೀವನದ ಧಾರ್ಮಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ಅವರು ಕ್ರಾಂತಿಕಾರಕ ಬದಲಾವಣೆಗಳನ್ನು ತಂದರು.

[illegible]

[illegible]

[illegible]

[illegible]

ಅಡಿ ಟಿಪ್ಪಣಿಗಳು :

1. Joshi, P.M. *Position of Hindu's in Adilshahi kingdom* P-309
2. ಕಿವುಡನವರ, ಜಗದೀಶ, ೨೦೦೨, *ದಖನ್ ಸುಲ್ತಾನರು*, ವಿದ್ಯಾನಿಧಿ ಪ್ರಕಾಶನ, ಗದಗ, ಪು–೧೦೭–೦೮
3. Parsnis,D.B- *Martha Sadar under Deccan Sultanate.* Pp-39-63 Duff Grand- *History of Martha* Pp-68-71
4. ಕುಲಕರ್ಣಿ, ಕೆ.ಕೆ.–೧೯೯೯, *ಬುಸಾತಿನೆ ಸಲಾತಿನ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೩೦೨–೦೩
5. Verma, D.C-1989-*Social, Economic and cultural History of Bijapur*, Idarah-i-Adbiyat-I Delli, Delhi, P-18
6. Zuberi, Ibrahim- *Bastin-us-Saltin* Pp-337-38
7. ಕುಲಕರ್ಣಿ, ಕೆ.ಕೆ.–೧೯೯೯, *ಬುಸಾತಿನೆ ಸಲಾತಿನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೯–೩೦
8. Tarik-I-Ferista(Eng. Tr), Briggs,*Histoty of Rise of Mohammedan Powe in India*, Vol-III, Munshiram Manoharlal Publisher, Pvt Ltd, Delhi, P-87
9. Ibid-P-91
10. Ibid-P-92
11. Zuberi, Ibrahim- *Bastin-us-Saltin* Pp-362-64
12. Ibid-P- 468
13. ವಿವೇಕ ರೈ ಬಿ. ಎ. ೨೦೧೦, ಪ್ರವಾಸಿ ಕಂಡ ವಿಜಯನಗರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
14. ಕುಲಕರ್ಣಿ, ಕೆ.ಕೆ.–೧೯೯೯, *ಬುಸಾತಿನೆ ಸಲಾತಿನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೭೯–೮೦
15. *Qutubshahi of Golcondah in the seventeenth century*, Edited by Bendre,V.C, 1934, p-51
16. Ibid., p-52
17. Ibid., pp-52-53
18. Ibid., p-54.

19. Qadri, S.A.1939-*Memoris of Chand Bibi,* Osmaniya University Press, Hyderabad, pp-60-61

20. Verma, D.C-1989-*Social, Economic and cultural History of Bijapur*, Idarah-i-Adbiyat-I Delli, Delhi, P-18

21. ಷೇಕ ಅಲಿ, ಬಿ.-೧೯೯೭, *ಕರ್ನಾಟಕ ಚರಿತ್ರೆ,* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೫೭

22. ಕ. ರಾ. ಗ್ಯಾ. ೪ ೧೯೪೮, ಪು-೩೮೪

23. Verma, D.C-1989-*Social, Economic and cultural History of Bijapur*, Idarah-i-Adbiyat-I Delli, Delhi, P-21

24. ಕುಲಕರ್ಣಿ,ಕೆ.ಕೆ, ೨೦೦೨, *ವಿಜಾಪುರದ ಆದಿಲ್‌ಶಾಹಿ,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೦೮-೦೯

25. ಅದೇ, ಪು-೨೦೫

26. Verma, D.C-1989-*Social, Economic and cultural History of Bijapur*, Idarah-i-Adbiyat-I Delli, Delhi, P-22

27. ಷೇಕ ಅಲಿ, ಬಿ.-೧೯೯೭, *ಕರ್ನಾಟಕ ಚರಿತ್ರೆ,* ಸಂ ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೪೯

28. ರಂಗಸ್ವಾಮಿ, ಡಿ.ಡಿ. *ಭಾರತದ ಹಬ್ಬ ಹರಿದಿನಗಳು* ಪು-೧೦-೧೧

29. ಷೇಕ ಅಲಿ, ಬಿ.-೧೯೯೭, *ಕರ್ನಾಟಕ ಚರಿತ್ರೆ,* ಸಂ ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೪೬

30. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು -೩೨೫-೨೬

31. ಅದೇ ಪು-೩೧೮

32. ಸುಳ್ಯ, ಅಬ್ದುಲ್ ಗಫ್ಫಾರ, ೨೦೦೭ *ಹಜ್ಜ್ ಮತ್ತು ಉಮ್ರಾ,* ಶಾಂತಿ ಪ್ರಕಾಶನ, ಮಂಗಳೂರು, ಪು-೧-೨

33. Naqvi, Sadiq, 2003-*The Iranian Afaquies Contribution to the Qutub shahi And Adil Shahi Kingdoms,* University Grant Commission, New Delhi, pp-156-57

34. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ,* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು -೩೨೬

35. ಮುಜುಂದಾರ್. ಆರ್.ಸಿ, ೨೦೦೩, *ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ* ಸಂ.೭, ಪು–೨೧೩–೧೪

36. ಬಿಜಾಪುರ ಜಿಲ್ಲೆ ಗ್ಯಾಸೆಟಿಯರ್, ೧೯೯೯,ಪು–೨೮೨–೮೩

37. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ,* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು –೩೩೦

38. ಅದೇ, ಪು–೩೩೧

39. ಬಿಜಾಪುರ ಜಿಲ್ಲೆ ಗ್ಯಾಸೆಟಿಯರ್, ೧೯೯೯,ಪು–೨೮೨–೮೩

40. Lady Glover, 1989, *Famous Women Rulers of India and West,* P-334

41. ಷೇಕ ಅಲಿ, ಬಿ.–೧೯೯೭, *ಕರ್ನಾಟಕ ಚರಿತ್ರೆ,* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೪೮

42. ಅದೇ, ಪು–೨೦೯.

43. ಅದೇ, ಪು–೨೧೦

44. ಪವಾರ ಹರಿಲಾಲ ಮತ್ತು ರೊಟ್ಟಿಗವಾಡ ಚಂದ್ರಶೇಖರ(ಸಂ)೨೦೦೯, ವಿಜಾಪುರದ ಆದಿಲ್‌ಶಾಹಿಗಳ ಕೊಡುಗೆ. ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು–೬೯

45. Imaratwale,A.2007, *History of Bijapur Subah*, Islamic Wonders Bureau, New Delhi, pp-42-43

46. Verma, D.C-1989-*Social, Economic and cultural History of Bijapur*, Idarah-i-Adbiyat-I Delli, Delhi, pp-75-79

47. Ibid pp-75-76

48. Tavernier,J.B-1925, *Travels in india,*Vol-I, pp-121-22

49. Verma, D.C-1989-*Social, Economic and cultural History of Bijapur.* Idarah-i-Adbiyat-I Delli, Delhi, P-177

50. Imaratwale,A.2007, *History of Bijapur Subah*, Islamic Wonders Bureau, New Delhi, p-43

51. Quddusi. Yaseen M. 2003,*Studies in Indian Epigraphy*, Vol,XXIX,pp-37-38

52. Imaratwale,A.2007, *History of Bijapur Subah*, Islamic Wonders Bureau, New Delhi, pp-56

53. Verma, D.C-1989-*Social, Economic and cultural History of Bijapur*. Idarah-i-Adbiyat-I Delli, Delhi, P-82Ibid p-82

54. ಗುಲಗಂಜಿ ಮಹಾಂತ, ಸುಂಕದ ಸೋಮಶೇಖರ,೨೦೦೯, *ಪುಣ್ಯಕೋಟಿ, ಪುಣ್ಯಕೋಟಿ ಪ್ರಕಾಶನ, ವಿಜಾಪುರ,* ಪು-೩೧೯-೨೩

55. ಮಾಲಗತ್ತಿ, ಅರವಿಂದ, ೨೦೦೪, *ತಾಳಿಕೋಟೆಯ ಐತಿಹಾಸಿಕ ಹಿನ್ನಲೆ, ಖಾಸ್ಗತೇಶ* ಕಲಾ, ವಾಣಿಜ್ಯ ಮಹಾವಿದ್ಯಾಲಯ, ತಾಳಿಕೋಟೆ, ಪು-೧೦-೧೨

56. Sinha, S.K, 1968, *Medieval History of the Deccan* Vol-II, Government of Andhra Prdesh, Hyderabad, pp-189-90

57. ಷೇಕ ಅಲಿ, ಬಿ.-೧೯೯೭, *ಕರ್ನಾಟಕ ಚರಿತ್ರೆ,* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೨೩

58. ಅದೇ, ಪು-೨೨೪

59. Zuberi, Ibrahim- *Bastin-us-Saltin* P-359

60. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ,* (ಕನ್ನಡ),ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,ಪು-೩೨೧-೨೨

61. Sinha, S.K, 1968, *Medieval History of the Deccan* Vol-II, Government of Andhra Prdesh, Hyderabad, p-184

62. Zubairi, Mirza, 1890, *Bosateen-us-Salateen*, p -353

63. Khare, G.H, 1954, *Some information on Hons of Muhammad Adil Shah, Journal of Numismatic Society of India,* Vol-16 pp-130-31

64. Sherwani,H.K. Joshi, P.M.1974, *History Of Medieval Deccan* Vol-II, Government of Andhra Pradesh, Hyderabad, P-442

65. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ,* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು -೩೨೧

66. Imaratwale,A.2007, *History of Bijapur Subah*, Islamic Wonders Bureau, New Delhi, p-42

67. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ,* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು -೨೯೧

68. ಅದೇ ಪು-೩೧೯

69. Khare G. H. 1969, Persian Source of Indian History, Vol-V Part-II. BISM, Poona, p-84

70. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ,* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು -೩೧೨

71. Verma, D. C, 1974, *History of Bijapur,* Prkash Bhavan, Fathepur, P-235

72. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ,* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು -೩೨೧

73. ಅದೇ ಪು-೩೧೬

74. Verma, D. C, 1974, *History of Bijapur,* Prkash Bhavan, Fathepur, P-235

75. Khare G. H. 1969, Persian Source of Indian History, Vol-V Part-II. BISM, Poona, p-92

76. ಕುಲಕರ್ಣಿ, ಕೆ. ಕೆ.೧೯೯೯,*ಬುಸಾತಿ ಸಲಾತೀನ,* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೩೨೨-೨೩

77. Khare G. H. 1969, Persian Source of Indian History, Vol-V Part-II. BISM, Poona, p-91

78. Ibid, p-93

79. ಕುಲಕರ್ಣಿ, ಕೆ. ಕೆ.೧೯೯೯, *ಬುಸಾತಿ ಸಲಾತೀನ,* (ಕನ್ನಡ), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು -೩೧೨

80. Ghauri Iftikar Ahmed, 1970-Islamic Culture, Vol-44 *Central Structure of the Kingom of Bijapur.* P-27

81. Ibid, P-28

82. Khare G. H. 1969, Persian Source of Indian History, Vol-V Part-II. BISM, Poona, p-84

83. Ghauri Iftikar Ahmed, 1970-Islamic Culture, Vol-44 *Central Structure of the Kingom of Bijapur.* P-29

84. ಕ. ರಾ. ಗ್ಯಾ ೪, ೧೯೮೪, ಪು-೩೩೪

85. ಕೊಪ್ಪ, ಎಸ.ಕೆ. *ತರ್ದವಾಡಿನಾಡು ಒಂದು ಅಧ್ಯಯನ,* ಪು-೨೭೬

86. ಕುಲಕರ್ಣಿ, ಕೆ. ಕೆ. ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೧೮೮

87. ಅದೇ, ಪು-೧೯೩

88. ಅದೇ, ಪು-೨೬೬

89. ಷೇಕ ಅಲಿ, ಬಿ.-೧೯೯೭, *ಕರ್ನಾಟಕ ಚರಿತ್ರೆ*, ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೫೯

90. ಭಾರತದ ಗ್ಯಾಸೆಟಿನ ಕರ್ನಾಟಕ ರಾಜ್ಯ ವಿಜಾಪುರ ಜಿಲ್ಲೆ ಪು-೨೫೫

91. Cousen, Henry -1976, *Bijapur and its Architectural Remains*, Bharatiya Publication House, Delhi, p- 59

92. Nayeem, M.A. -2008,*The Heritage of the Adilshahis of Bijapur*,Hyderabad Publisher, Hyderabad, P-231

93. *Bulletion of Deccan College* Vol No. 46 1987, P-59

94. *Bijapur Gazetter*, 2006, p-121

95. S.I.I. p-29

96. ಶಾಸ್ತ್ರಿ, ಎ.ಕೆ, ೧೯೮೨, *ಶೃಂಗೇರಿ ಧರ್ಮಸಂಸ್ಥಾನ*, ಶೃಂಗೇರಿ ಮಠ, ಶೃಂಗೇರಿ, ಪು-೫೯-೬೦

97. Imaratwale,A.2007*, History of Bijapur Subah,* Islamic Wonders Bureau, New Delhi, P-54

98. ಕುಲಕರ್ಣಿ, ಕೆ. ಕೆ. ೨೦೦೨, *ಬಿಜಾಪುರದ ಆದಿಲ್‌ಶಾಹಿಗಳು*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೩೦೩

99. Ghauri Iftikar Ahmed, 1970-Islamic Culture, Vol-44 *Central Structure of the Kingom of Bijapur.* P-27

100. ಭಾ.ಇ.ಸಂ.ಮಂ. ಪುಣೆ- ೧೯೩೮, ತ್ರೈಮಾಸಿಕ ಪು-೭೧

101. Rande, M.G. 1900, *Rise Of the Marataha Power*, pp-278-79

102. *Shiva charitra Sahitya*, 1930 Vol-2 ,BISM, Poona, pp-354-400

ಅಧ್ಯಾಯ ೫
ಶಿಕ್ಷಣ ಮತ್ತು ಸಾಹಿತ್ಯ

ಅಧ್ಯಾಯ-೫

ಶಿಕ್ಷಣ ಮತ್ತು ಸಾಹಿತ್ಯ

"ಅನ್ನದಾನಂ ಪರಂದಾನಂ ವಿದ್ಯಾದಾನ ಅತಪರಂ

ಅನ್ನೋನ ಕ್ಷಣಿಕಾ ಪ್ರಿತಿಃ ಯಾವಜ್ಜೀವಂಚಯಾ ವಿದ್ಯೆಯಾ"

"ಎಲ್ಲಾ ದಾನಗಳಲ್ಲಿ ಅನ್ನದಾನ ಶ್ರೇಷ್ಠ. ಅದಕ್ಕಿಂತಲೂ ಶ್ರೇಷ್ಠವಾದುದು ವಿದ್ಯಾದಾನ, ಅನ್ನವು ಕ್ಷಣಿಕ ಸುಖವನ್ನು ನೀಡಿದರೆ, ವಿದ್ಯೆಯು ಎಂದೆಂದೂ ಶಾಶ್ವತ ಸುಖವನ್ನು ನೀಡುವುದು."

ಪ್ರಾಚೀನ ಕಾಲದಿಂದಲೂ ಶಿಕ್ಷಣದ ಸಾರ್ಥಕತೆಯ ಆದ್ಯಾತ್ಮ ಮತ್ತು ಧಾರ್ಮಿಕತೆಯನ್ನು ಹೊಂದಿದೆ. ಆತ್ಮಜ್ಞಾನದ ಸಾಕ್ಷಾತ್ಕಾರದ ಬದುಕಿನ ಗುರುಯಾಗಿತ್ತಾದರೂ ಅರಿವೆ ಗುರು ಎಂಬುದು ಜನಜತ. ತಂದೆಯಿಂದ ಮಗನಿಗೆ, ಗುರುವಿನಿಂದ ಶಿಷ್ಯನಿಗೆ, ಹಿರಿಯರಿಂದ ಕಿರಿಯರಿಗೆ, ವಿದ್ಯೆಯು ಅನುಭವಗಳಾದರದಿಂದ ಹರಿದು ಬಂದು ಸ್ವಾಸ್ಥ್ಯ ಬದುಕನ್ನು ಕಂಡುಕೊಂಡವರಾಗಿದ್ದರು. ಇದರಿಂದ ಲೌಕಿಕ ಜ್ಞಾನದೊಂದಿಗೆ ಹೃದಯ ವಿಕಾಸ ಮತ್ತು ಮನಸ್ಸಿನ ಪಕ್ವತೆಗಳು ಮಹತ್ವದ ಪಾತ್ರವನ್ನು ವಹಿಸುತ್ತಿದ್ದವು. ಇದನ್ನು ಗುರುತಿಸಿಯೇ ನೃಪತುಂಗ ತನ್ನ ಕವಿರಾಜಮಾರ್ಗದಲ್ಲಿ 'ಕುರಿತೋದದೆಮಂ ಕಾವ್ಯ ಪ್ರಯೋಗ ಪರಿಣಿತ್ ಮತಿಗಳ್' ಎಂದು ಹೇಳಿದ್ದು ಅರ್ಥಪೂರ್ಣವಾಗಿದೆ.

ಪ್ರಾಚೀನ ಮತ್ತು ಮದ್ಯಕಾಲೀನ ಸಂದರ್ಭದಲ್ಲಿ ವಿದ್ಯೆಯೂ ಅಗ್ರಹಾರಗಳಲ್ಲಿ, ಬ್ರಹ್ಮಪುರಿಗಳಲ್ಲಿ, ಘಟಿಕಾಸ್ಥಾನಗಳಲ್ಲಿ ದೇವಾಲಯಗಳಲ್ಲಿ ಅಥವಾ ಅದಕ್ಕೆ ಹೊಂದಿಕೊಂಡಿರುವ ಮಠಗಳಲ್ಲಿ ನಡೆಯುತ್ತಿತ್ತು. ಉದಾಹರಣೆಗೆ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಇಂಡಿ ತಾಲೂಕಿನ ಸಾಲೋಟಗಿ ತ್ರೈಪುರುಷ ದೇವಾಲಯವು ವಿದ್ಯಾಕೇಂದ್ರವಾಗಿದ್ದು, ವಿದ್ಯಾರ್ಥಿಗಳ ಊಟೋಪಚಾರಕ್ಕಾಗಿ ಅನ್ನಛತ್ರಗಳಿದ್ದವೆಂದು ಅಲ್ಲಿಯ ಒಂದು ಶಾಸನದಿಂದ ತಿಳಿದು ಬರುತ್ತದೆ. ಇಂಗಳೇಶ್ವರ, ಯಾಳವಾರ, ಮುತ್ತಗಿ, ಮಲಘಾಣ, ಮನಗೂಳಿಯಲ್ಲಿರುವ ದೇವಾಲಯಗಳಲ್ಲಿ ವಿದ್ಯಾದಾನ ಮಾಡಲಾಗುತ್ತಿತ್ತು. ಇಲ್ಲಿ ಪುರಾಣ, ವೇದಗಳು, ಬಾಲಶಿಕ್ಷೆ, ನ್ಯಾಸದ ವ್ಯಾಖ್ಯಾನ ಬೋಧಿಸಲಾಗುತ್ತಿತ್ತು. ಬಾಲಶಿಕ್ಷೆ-ಪ್ರಾಥಮಿಕ ಹಂತ, ನ್ಯಾಸದಿ ವ್ಯಾಖ್ಯಾನವು ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದ್ದಾಗಿತ್ತು. ಬಾಲಶಿಕ್ಷೆಯಲ್ಲಿ ಅಕ್ಷರಾಬ್ಯಾಸದೊಂದಿಗೆ ವ್ಯಾಕರಣವನ್ನು ಕಲಿಸಲಾಗುತ್ತಿತ್ತು. ಪ್ರೌಢವಿದ್ಯಾಭ್ಯಾಸವು ಮುಂದುವರೆಯಲು ಅವರ ಊಟ ವಸತಿ, ಔಷಧಿ, ಉಪಚಾರಗಳಿಗಾಗಿ ದಾನ ದತ್ತಿಗಳನ್ನು ಬಿಡಲಾಗುತ್ತಿತ್ತು.[1]

ಒಟ್ಟಿನಲ್ಲಿ ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಿಕಾಸ್ತಾನ ಇವುಗಳ ಮೂಲಕ ವೈದಿಕರು ವೇದಾಧ್ಯಯನ, ಜೈನರು ಬಸದಿಗಳ ಸಹಾಯದಿಂದ ಅರ್ಹಂತಿಕ ಮತ್ತು ಸಿದ್ಧರು ತೀರ್ಥಂಕರರಿಗೆ ಸಮಾನವಾಗಿ ಜೈನ ಶಿಕ್ಷಣ,

[illegible]

ಬೌದ್ಧ ವಿಹಾರಗಳ ಮೂಲಕ ಬೌದ್ಧ ಭಿಕ್ಷುಗಳು ಶಿಕ್ಷಣ ಮತ್ತು ಬೌದ್ಧಧರ್ಮ ಪ್ರಸಾರ ಕಾರ್ಯವನ್ನು ಮಾಡುತ್ತಿದ್ದರು. ಹೀಗೆ ಪ್ರಾರಂಭದಿಂದ ಅಂತ್ಯದವರೆಗೂ ಶಿಕ್ಷಣವು ಔಪಚಾರಿಕವಾಗಿ, ಅನೌಪಚಾರಿಕವಾಗಿ ನಡೆಯುತ್ತಿತ್ತು.[೨]

೧. ಮುಸ್ಲಿಂ ಶಿಕ್ಷಣ :

ಕ್ರಿ.ಶ. ೧೪ನೆಯ ಶತಮಾನದ ಮೊದಲ ದಶಕಗಳಲ್ಲಿ ಮುಸ್ಲಿಂ ಶಿಕ್ಷಣ–ಸಂಸ್ಥೆಗಳು ಉತ್ತರ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಅಸ್ತಿತ್ವಕ್ಕೆ ಬಂದವು. ಅವುಗಳೆಲ್ಲ ಬಹುಮಟ್ಟಿಗೆ ಮಸೀದಿಗಳ ಅಂಗವಾಗಿ ಏರ್ಪಟ್ಟವು. ೧೩೪೩ ರಲ್ಲಿ ಪ್ರವಾಸ ಮಾಡಿದ ಇಬ್ನಬತೂತ ವಿವರಿಸುವಂತೆ ಮಸೀದಿಗಳ ನಿಧಿಯಿಂದ ವಿದ್ಯಾರ್ಥಿವೇತನಗಳನ್ನು ಪಡೆದು ಮುಸ್ಲಿಂ ಧರ್ಮಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಿದ್ದರು.[೩] ಹೊನ್ನಾವರ ಪ್ರದೇಶದಲ್ಲಿ ಮುಸ್ಲಿಂ ಹೆಣ್ಣು ಮಕ್ಕಳಿಗಾಗಿಯೆ ಅನೇಕ ಶಾಲೆಗಳು ಪ್ರಾರಂಭವಾಗಿದ್ದವು. ಅಲ್ಲಿ ವಿದ್ಯಾರ್ಥಿನಿಯರು ಬಹು ಆಸಕ್ತಿಯಿಂದ ಕುರಾನನ್ನು ಪಠಣಮಾಡುತ್ತಿದ್ದರು.[೪]

ಬಹಮನಿ ಸುಲ್ತಾನ ಎರಡನೆಯ ಮಹಮ್ಮದ ತನ್ನ ಮುಸ್ಲಿಂ ಪ್ರಜೆಗಳಿಗೆ ಉತ್ತಮ ಶಿಕ್ಷಣ ಸೌಲಭ್ಯವನ್ನು ಒದಗಿಸಿದ್ದ. ಸ್ವತಃ ಆತ ಒಳ್ಳೆಯ ವಿದ್ಯಾವಂತನಾಗಿದ್ದು ೧೩೭೮ ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಮದ್ರಸಾಗಳೆಂಬ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಅಲ್ಲಿ ಅನಾಥ ವಿದ್ಯಾರ್ಥಿಗಳ ಊಟ ವಸತಿಗಳಿಗೂ ಉಚಿತ ಶಿಕ್ಷಣಕ್ಕೂ ವ್ಯವಸ್ಥೆಗೊಳಿಸಿದ್ದನು.[೫] ಗುಲ್ಬರ್ಗಾ, ಬೀದರ, ಬಿಜಾಪುರ ಮುಂತಾದ ಕಡೆಗಳಲ್ಲಿ ಆರಂಭವಾದ ಮದ್ರಸಾಗಳು ಬಹು ಪ್ರಸಿದ್ಧವಾಗಿದ್ದವು. ಅಲ್ಲದೆ ಆತ ಕೆಲವು ಸೈನಿಕ ಶಾಲೆಗಳನ್ನೂ ಸ್ಥಾಪಿಸಿದ್ದ. ಅನಂತರ ಹದಿನೈದನೆಯ ಶತಮಾನದ ಕೊನೆಯಲ್ಲಿ ಅಲ್ಲಿಯ ರಾಜರ ಬಳಿ ಮಂತ್ರಿಯಾಗಿದ್ದ ಮಹಮೂದ ಗವಾನ ಮುಸಲ್ಮಾನರಿಗೆ ಉನ್ನತ ಶಿಕ್ಷಣ ಸೌಲಭ್ಯವನ್ನು ವಿಸ್ತರಿಸಿದ. ೧೪೭೨ ರಲ್ಲಿ ಆತ ತನ್ನ ಸ್ವಂತ ಹಣದಿಂದ ಬೀದರನಲ್ಲಿ ಮಹಾವಿದ್ಯಾಲಯೊಂದುನ್ನು ಕಟ್ಟಿಸಿದ್ದನು.[೬] ಇಸ್ಲಾಂ ದೇಶಗಳಲ್ಲಿ ಆ ಕಾಲದಲಿದ್ದ ವಿದ್ಯಾಮಂದಿರಗಳ ಮಾದರಿಯಲ್ಲೆ ರಚನೆಯಾಗಿದ್ದ ಈ ವಿದ್ಯಾಲಯದಲ್ಲಿ ಆತ ದಕ್ಷರಾದ ವಿಜ್ಞಾನಿಗಳನ್ನು ಇತರ ಪಂಡಿತರನ್ನು ನೇಮಿಸಿದ್ದ. ಜೊತೆಗೆ ಅಲ್ಲಿ ಸ್ವತಃ ಪ್ರಾಧ್ಯಾಪಕನಾಗಿ ಕೆಲಸ ಮಾಡುತ್ತಿದ್ದ. ಅಲ್ಲಿಯ ಗ್ರಂಥಾಲಯದಲ್ಲಿ ಸುಮಾರು ಮೂರು ಸಾವಿರ ಗ್ರಂಥಗಳಿದ್ದವು.[೭]

ಬಹಮನಿ ಸುಲ್ತಾರ ಅನಂತರ ಅಧಿಕಾರಕ್ಕಾಗಿ ಬಂದ ಆದಿಲ್‌ಶಾಹಿ ಸುಲ್ತಾನರು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೂ ವೃತ್ತಿ ಶಿಕ್ಷಣಕ್ಕೂ ಉತೇಜನ ಕೊಟ್ಟರು. ಅವರು ಅರೇಬಿಕ ಮತ್ತು ಪರ್ಶಿಯನ್ನ ಭಾಷೆಗಳ ಪುರೋಭಿವೃದ್ಧಿಗೆ ನೆರವು ನೀಡಿದರು. ಅವರ ಕಾಲದಲ್ಲಿ ವಿಜ್ಞಾನ ಮತ್ತು ವಾಸ್ತುಶಿಲ್ಪ ವಿದ್ಯೆಗಳಲ್ಲಿ ಪರಿಣಿತರಾದವರು ದೇಶದಲ್ಲಿ ಹೇರಳವಾಗಿದ್ದರು. ಇವರು ಇಲ್ಲಿಯ ಮುಸಲ್ಮಾನರ ಕಲ್ಯಾಣಕ್ಕಾಗಿ ಎಲ್ಲ ರೀತಿಯ ಶಿಕ್ಷಣಕ್ಕೂ ಪ್ರೋತ್ಸಾಹ ನೀಡುತ್ತಿದ್ದರು. ಮುಸಲ್ಮಾನ ಪ್ರಜೆಗಳ ಪ್ರಾಥಮಿಕ ಶಿಕ್ಷಣಕ್ಕಾಗಿ 'ಮಕ್ತಾಬ'

ಎಂಬ ಸಂಸ್ಥೆಗಳನ್ನು ಆರಂಭಿಸಿದರು. ಅವು ಆ ಕಾಲದಲ್ಲಿ ಉತ್ತರ ಭಾರತದಲ್ಲಿ ಪ್ರಚಲಿತದಲ್ಲಿದ್ದ ಮಾದರಿಯಲ್ಲೆ ಇದ್ದು ಉರ್ದು ಭಾಷೆಯ ಅಕ್ಷರಾಭ್ಯಾಸ, ಓದುಗಾರಿಕೆ, ಬರವಣಿಗೆ ಇತ್ಯಾಧಿಗಳನ್ನು ಕಲಿಸುತ್ತಿದ್ದರು.[೮]

ಆದಿಲ್‌ಶಾಹಿಗಳ ಕಾಲದಲ್ಲಿ ಬಿಜಾಪುರವು ಪ್ರಮುಖ ವಿದ್ಯಾ ಕೇಂದ್ರವಾಗಿತ್ತು. ಶಿಕ್ಷಣ ಮತ್ತು ಸಾಹಿತ್ಯ ಈ ಕಾಲದಲ್ಲಿ ಪ್ರಸಿದ್ಧಿಪಡೆದಿದ್ದರಿಂದ ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ಬಿಜಾಪುರಕ್ಕೆ "ವಿದ್ಯಾಪುರ"ವೆಂದು ಕರೆದನು.[೯] ಈ ಮನೆತನದ ಎಲ್ಲ ಸುಲ್ತಾನರು ಅಕ್ಷರಜ್ಞಾನ ಹೊಂದಿದವರಾಗಿದ್ದರಿಂದ, ಇವರು ಶಿಕ್ಷಕರಿಗೆ ಮತ್ತು ವಿದ್ವಾಂಸರಿಗೆ ಆಶ್ರಯದಾತರಾಗಿದ್ದರು. ಹೀಗಾಗಿ ಈ ಕಾಲದಲ್ಲಿ ವ್ಯಾಪಕವಾಗಿ ಶಿಕ್ಷಣ ಪ್ರಸಾರವಾಯಿತು. ಖ್ವಾಜಾ ಇನಾಯತುಲ್ಲಾ ಶಿರಾಜಿ ಮತ್ತು ಮೌಲಾನಾ ಫತೇಉಲ್ಲಾ ಶಿರಾಜಿ ಇವರು ಒಂದನೆಯ ಅಲಿ ಆದಿಲ್‌ಶಾಹನ ಶಿಕ್ಷಕರಾಗಿದ್ದರು. ಇವರ ಶಿಕ್ಷಣದಿಂದ ಸುಲ್ತಾನನು ಪುಸ್ತಕ ಪ್ರೀಯನಾಗಿದ್ದನು. ಶಾಹನವಾಜ ಖಾನನು ಎರಡನೆಯ ಇಬ್ರಾಹಿಮನ ಪರ್ಶಿಯನ ಭಾಷೆಯನ್ನು ಕಲಿಸುವ ಗುರುಗಳಾಗಿದ್ದರು. ನಿರಂತರವಾಗಿ ರಾಜಧಾನಿಗೆ ವಿವಿಧ ವಿದ್ವಾಂಸರು ಬೇಟ್ಟಿಕೊಟ್ಟು ಬೇರೆ ಬೇರೆ ವಿಷಯದ ಮೇಲೆ ಚರ್ಚೆ ನಡೆಯುತ್ತಿತ್ತು. ಸುಲ್ತಾನ ಮಹಮ್ಮದ ಆದಿಲ್‌ಶಾಹ ಮತ್ತು ಎರಡನೆಯ ಅಲಿ ಆದಿಲ್‌ಶಾಹರು ಕೂಡ ಈ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋದರು.[೧೦]

ಶಿಕ್ಷಣ ಕ್ಷೇತ್ರಾಭಿವೃದ್ಧಿಗೆ ಹಾಗೂ ಅದರ ಪ್ರಸಾರಕ್ಕೆ ಮಹಮ್ಮದ ಆದಿಲ್‌ಶಾಹನ ಆಳ್ವಿಕೆ ಮಹತ್ವ ಪೂರ್ಣವೆನಿಸುತ್ತದೆ. ವಿದ್ಯಾ ಪ್ರಸಾರಕ್ಕಾಗಿ ಆತ ಮದ್ರಸಾಗಳನ್ನು ಹಾಗೂ ಇತರ ಉಚಿತ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿದನು. ಅರ್ಹ ವಿದ್ಯಾರ್ಥಿಗಳಿಗೆ ಎಲ್ಲ ಸೌಕರ್ಯಗಳನ್ನು ಉಚಿತವಾಗಿ ಒದಗಿಸಿದನು. ಅರಬ್ಬಿ ಮತ್ತು ಪರ್ಶಿಯನ ಭಾಷೆಗಳನ್ನು ಬೋಧಿಸಲು ಸಮರ್ಥ ಶಿಕ್ಷಕರನ್ನು ನೇಮಿಸಿಕೊಂಡನು.[೧೧] ಪ್ರಶಸ್ತಿ ವಿಜೇತ ಶಿಕ್ಷಕರನ್ನು ರಾಜ್ಯಾಡಳಿತದಲ್ಲೂ ನೇಮಿಸಿಕೊಂಡನು. ಬಿಜಾಪುರದಲ್ಲಿ ಒಂದು ಅರೇಬಿಕ್ ಶಾಲೆ ಹಾಗೂ ಜುಮ್ಮಾ ಮಸೀದೆಯಲ್ಲಿ ಒಂದು ಪರ್ಶಿಯನ ಶಾಲೆಗಳು ಈತನಿಂದ ಸ್ಥಾಪಿಸಲ್ಪಟ್ಟವು. ಬಡಮಕ್ಕಳಿಗಾಗಿ ಉಚಿತ ಶಿಕ್ಷಣವೇ ಅಲ್ಲದೆ, ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳೂ ಒಂದು "ಹೊನ್ನ" ನಾಣ್ಯವನ್ನು ಶೈಕ್ಷಣಿಕ ಖರ್ಚಿಗಾಗಿ ನೀಡಲಾಗುತ್ತಿತ್ತು. ವಾರ್ಷಿಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪಾರಿತೋಷಕಗಳನ್ನು ನೀಡಲಾಗುತ್ತಿತ್ತು. ಶಿಕ್ಷಣ ಮುಗಿಸಿದವರಿಗೆ ಅರ್ಹತೆಗೆ ತಕ್ಕಂತೆ ಸರಕಾರಿ ಉದ್ಯೋಗ ಲಭಿಸುತ್ತಿತ್ತು.[೧೨]

ಮಹಮ್ಮದ ಆದಿಲ್‌ಶಾಹನು ತನ್ನ 'ದಸ್ತುರುಲ ಅಮಲ' (ಆಡಳಿತಾತ್ಮಕ ಶಾಸನ)ಗಳಲ್ಲಿ ಶಿಕ್ಷಣ ಕುರಿತು ಈ ಕೆಳಗಿನಂತೆ ವಿವರಿಸಿದ್ದಾನೆ. ಆಸಾರ ಶರೀಫದ ಮಹಲಿನಲಿ ಎರಡು ವಿದ್ಯಾಶಾಲೆಗಳನ್ನು ಪ್ರಾರಂಭಿಸಬೇಕು. ಹದೀಸ ಅಂದರೆ ಪೈಗಂಬರ ಹೇಳಿದ ವಾಕ್ಯಗಳು ಮತ್ತು ಕುರಾನ ಶರೀಫದ ಪಾಠ ಹೇಳುವುದನ್ನು ಪ್ರಾರಂಭಿಸಬೇಕು. ವಿದ್ಯೆಯನ್ನು ಕಲಿಯುವ ಮಕ್ಕಳಿಗೆ ಆಸಾರ ಮಹಲಿನ ವಿದ್ಯಾಶಾಲೆಯಲ್ಲಿ ತಿನ್ನುಣ್ಣುವ ಸವಲತ್ತುಗಳನ್ನು ಒದಗಿಸಬೇಕು.[೧೩]

ಜುಮ್ಮಾ ಮಸೀದಿಯಲ್ಲಿ ಮಕ್ಕಳಿಗೆ ಧೂಳಾಕ್ಷರಗಳನ್ನು ಕಲಿಸುವ ಶಾಲೆಯಲ್ಲಿ ಇಬ್ಬರು ಪಂತೋಜಿಗಳನ್ನು, ಅರಬ್ಬೀ ವಿದ್ಯೆ ಮತ್ತು ಮುಸಲ್ಮಾನ ಧರ್ಮದ ಕುರಾನ ಶರೀಫ ವಿದ್ಯೆಯನ್ನು ಕಲಿಸಲು ಇಬ್ಬರು ವಸ್ತಾದ(ಶಿಕ್ಷಕ)ರನ್ನು, ಹಾಗೂ ಫಾರ್ಸಿ ವಿದ್ಯೆಯನ್ನು ಕಲಿಸಲು ಒಬ್ಬ ವಸ್ತಾದರನನ್ನು ನಿಯಮಿಸಿಕೊಟ್ಟು ವಿದ್ಯಾಭ್ಯಾಸವನ್ನು ಮಾಡಿಸಬೇಕು. ವಿದ್ಯೆ ಕಲಿಯುವ ಹುಡುಗರಲ್ಲಿ ಯಾರಾದರೂ 'ನಾದಾನ' ಎಂದರೆ ಕಡು ಬಡವರಿಗೆ, ಅವರಿಗೆ ಅನ್ನ ನೀರುಗಳ ವ್ಯವಸ್ಥೆ ಮಾಡಿ ಅವುಗಳು ಅವರಿಗೆ ಮುಟ್ಟಿದ ಬಗ್ಗೆ ಖಾತ್ರಿ ಮಾಡಿಕೊಳ್ಳುತ್ತಿರಬೇಕು. ಶಾಲೆಗಳನ್ನು ಮತ್ತು ಅನ್ನಛತ್ರಗಳನ್ನು ನಡೆಸುವ ವಿಷಯದಲ್ಲಿ ಬಹಳ ಪ್ರಯತ್ನ ಮಾಡಬೇಕು ಅವುಗಳು ಎಂದೂ ಮುಚ್ಚಿಕೊಳ್ಳದಂತೆ ನೋಡಿಕೊಳ್ಳಬೇಕು.[೧೪]

ಬಾದಶಾಹಿ ಸರಕಾರದಲ್ಲಿ ಪ್ರತಿಯೊಂದು ಪ್ರಕಾರದ ಮತ್ತು ಗುಣದ ಅಲ್ಲದೆ ವಿದ್ಯಾವಂತರಾದ ನಾಲ್ಕು-ನಾಲ್ಕು ಜ್ಞಾನಿಗಳನ್ನು ನಿಯಮಿಸಿ, ಅವರ ಯೋಗ್ಯತಾನುಸಾರವಾಗಿ ದಿನಖರ್ಚು ಹಾಗೂ ತೈನಾತಿಯನ್ನು ನೇಮಣೂಕಿ ಮಾಡಿ, ಅವರನ್ನು ವಸ್ತಾದರೆಂದು ಇಡಬೇಕು. ಬಾದಶಾಹಿ ಸರಕಾರದಲ್ಲಿ ಎಷ್ಟು ವಿದ್ವಾಂಸರು ಮತ್ತು ಯೋಗ್ಯ ಜನರು ಸೇರುತ್ತಾರೋ ಮತ್ತು ಪ್ರಸಿದ್ದರಾಗುತ್ತಾರೋ ಅಷ್ಟು ಬಾದಶಹನ ಶೋಭೆಗೆ ಮತ್ತು ಯೋಗ್ಯತೆಗೆ ಕಾರಣವಾಗುತ್ತದೆ.[೧೫]

ಈ ವಿದ್ವಾಂಸರನ್ನು ಸರಕಾರೀ ಲೆಕ್ಕದಲ್ಲಿ ಸೇರಿಸಿ ಇಟ್ಟುಕೊಳ್ಳಬೇಕು. ಅವರಿಂದ ನಿಯಮಿತ ಸೇವೆಯನ್ನು ತೆಗೆದುಕೊಳ್ಳಬೇಕು. ಅವರಲ್ಲಿಯ ದೊಡ್ಡ ವಿದ್ವಾಂಸರನ್ನು ಚಾಕರಿಯಿಂದ ಮಾಫ ಕೂಡ ಮಾಡಬೇಕು. ಕೆಲವರ ಚಾಕರಿಯನ್ನು ಯಾವಕಾಲಕ್ಕೂ ಮಾಫ ಮಾಡಬಾರದು.[೧೬]

ವಿದ್ಯಾಭ್ಯಾಸ ಮಾಡುವ ಮಕ್ಕಳು ಸಣ್ಣ ವಯಸ್ಸಿನವರಿರುವವರೆಗೆ ಅವರಿಗೆ ಅನ್ನ ವಸ್ತ್ರಗಳನ್ನು ಬೇಕಿರುವಷ್ಟು ಸರಕಾರದಿಂದಲೇ ಕೊಡಬೇಕು. ಅವರ ವಿದ್ಯಾಭ್ಯಾಸದ ಪ್ರಮಾಣದಂತೆ ಕೆಲವು ನೇಮಣೂಕಗಳನ್ನುಮಾಡಿ ಕೊಡಬೇಕು.[೧೭]

ಸದರೀ ಮಕ್ಕಳು ದೊಡ್ಡವರಾದಾಗ ಅವರ ಮದುವೆ ಮಾಡಿಕೊಟ್ಟು ಅವರಿಗೆ ನಿತ್ಯಖರ್ಚು ಇತ್ಯಾಧಿಗಳನ್ನು ಮಂಜೂರು ಮಾಡಿ ಕುಳಿತುಕೊಳ್ಳಲು ಕುದರೆಯನ್ನು ಕೊಡಬೇಕು. ಅನಂತರ ಯೋಗ್ಯತೆಯ ಪ್ರಕಾರ ಬೇರೆ ಕಡೆಗೆ ನೌಕರಿಯ ಮೇಲೆ ನಿಯಮಿಸಬೇಕು.[೧೮] ಹೀಗೆ ಮಹಮ್ಮದ ಆದಿಲ್‌ಶಾಹನು ಶಿಕ್ಷಣದ ಅಭಿವೃದ್ಧಿಗಾಗಿ ವಿದ್ಯಾರ್ಥಿಗಳಿಗೆ ಅನೇಕ ಸೌಲಭ್ಯಗಳನ್ನು ನೀಡಿದ್ದನು.

ಬಿಜಾಪುರದ ಪಶ್ಚಿಮಕ್ಕೆ ಇದ್ದ ಆಗಿನ ಶಹಾಪುರ (ಈಗಿನ ದರ್ಗಾ ಪ್ರದೇಶ) ಒಂದು ಸೂಫಿ ವಿದ್ಯಾಕೇಂದ್ರವಾಗಿದ್ದು, ಮುಸಲ್ಮಾನೇತರರ ಮೇಲೂ ಸಾಕಷ್ಟು ಪ್ರಭಾವ ಬೀರಿತ್ತು. ಇದನ್ನು ಖ್ವಾಜಾ ಅಮೀನುದ್ದೀನ್ ದರ್ಗಾ ಎಂದು ಕರೆಯಲಾಗುತ್ತಿದ್ದು, ಇಲ್ಲಿ ಸುಮಾರು ೫೫೦೦ ಶಿಷ್ಯರು ಜ್ಞಾನ ದೀಕ್ಷೆ ಪಡೆದಿದ್ದರು.[೧೯] ಸೈಯದ ಅಲಿ ಮಹಮ್ಮದ ಪ್ರಮುಖ ಸೂಫಿ ಶಿಕ್ಷಕನಾಗಿದ್ದು, ಶಹಾಬುದ್ದೀನ ಅಲ್ವಿ, ಮಹಮ್ಮದ ಮುದಾರಿಸ್ ಹಾಗೂ ಖಾಜಿ ಇಬ್ರಾಹಿಮ ಜುನೇದಿ ಮುಂತಾದವರು ಇವರ ಶಿಷ್ಯರಾಗಿದ್ದರು. ಹಜರತ ಶೇಖ

[illegible]

ಇಲಾಮುಲ್ಲಾ ಎರಡನೆಯ ಅಲಿ ಆದಿಲ್‌ಶಾಹಿಯ ಆಮಂತ್ರಣದ ಮೇರೆಗೆ ಬುರಾಣಪುರದಿಂದ ಬಿಜಾಪುರಕ್ಕೆ ಆಗಮಿಸಿ ಜುಮ್ಮಾ ಮಸೀದಿ ಬಳಿಯ ಮೊಹಲ್ಲಾ ಅಬುತರಬದಲ್ಲಿ ಶಾಲೆಯನ್ನು ಪ್ರಾರಂಭಿಸಿ ಜನರಿಗೆ ಧಾರ್ಮಿಕ ಹಾಗೂ ಸಾಮಾನ್ಯ ಶಿಕ್ಷಣ ನೀಡಿದನು. ಮುಂದೆ ಔರಂಗಜೇಬನು ಈತನ ವಿದ್ವತ್ತವನ್ನು ಗುರುತಿಸಿ ತನ್ನ ಆಸ್ಥಾನಕ್ಕೆ ಕರೆಸಿಕೊಂಡನು. ಇದೇ ತರಹ ಬಿಜಾಪುರಕ್ಕೆ ಆಮಂತ್ರಿಸಲ್ಪಟ್ಟ ಮತ್ತೊಂಬ ಖ್ಯಾತ ಶಿಕ್ಷಕನೆಂದರೆ, ಸೈಯದ ಅಸದ ಉಲ್ಲಾ ಗುಜರಾತಿ. ಈತನು ಸಹ ಜುಮ್ಮಾ ಮಸೀದಿಯ ಬಳಿ ಶಾಲೆಯನ್ನು ಪ್ರಾರಂಭಿಸಿದನು. ಈತನ ಮಗ ಸೈಯದ ಅಲಿ ಮಹಮ್ಮದನೂ ಖ್ಯಾತ ಶಿಕ್ಷಕನಾಗಿದ್ದು, "ಉಸ್ತಾದ-ಇ-ಶಾಹರ-ಇ-ಅವುಲಿಯಾ" ಎಂಬ ಬಿರುದನ್ನು ಪಡೆದಿದ್ದನು.[೨೦]

ಆದಿಲ್‌ಶಾಹಿಗಳ ರಾಜ್ಯದಲ್ಲಿನ ಗ್ರಂಥಾಲಯಗಳಲ್ಲಿ ಬಹಳಷ್ಟು ಸಂಖ್ಯೆಯ ಹಸ್ತಪತ್ರಿಯನ್ನು ಚರ್ಮದ ಲಕೋಟೆಯಲ್ಲಿ ಹಾಕಿ ಸುರಕ್ಷಿತವಾಗಿಡುತ್ತಿದ್ದರು. ಜಹುರ-ಬಿನ್-ಜಹುರನ ಹೇಳಿಕೆಯ ಪ್ರಕಾರ ಇವರು ಉತ್ತರ ಭಾರತದಿಂದ ಪ್ರಸಿದ್ಧ ಪುಸ್ತಕಗಳನ್ನು ಅಪಾರ ಹಣ ವ್ಯಯಮಾಡಿ ತರಸಿಕೊಂಡು ತಮ್ಮ ಗ್ರಂಥಾಲಯದಲ್ಲಿಡುತ್ತಿದ್ದರು. ಅವನೇ ಮುಂದುವರೆದು ಹೇಳುವಂತೆ ಮಹಮ್ಮದ ಆದಿಲ್‌ಶಾಹನ ಆಜ್ಞೆಯ ಮೇರೆಗೆ ಅಬುಫಜಲ್ ಬರೆದ 'ಅಕ್ಬರ ನಾಮಾ' ಖರೀದಿಸಿ ತನ್ನ ಗ್ರಂಥಾಲಯದಲ್ಲಿಟ್ಟುಕೊಂಡಿದ್ದನು. ಭಾರತ ನಾಮಾ (ಮಹಾಭಾರತ) ಮತ್ತು ಅಕ್ಬರನಾಮಾ ಎರಡನ್ನು ಮುಂದಿಟ್ಟುಕೊಂಡು ಕೂಲಂಕುಶವಾಗಿ ವಿಮರ್ಶಿಸಿ 'ಮಹಮ್ಮದ ನಾಮ' ಬರೆಯಲು ನನಗೆ ಆಜ್ಞೆ ಮಾಡಿದರು. ಈ ದಾಖಲೆ ಹೇಗಿರಬೇಕೆಂದರೆ ಸುಲ್ತಾನನ ದೇವಾರ್ಪಿತ ನಡತೆ ಮತ್ತು ಅವನು ಘಾಜಿ, ಹಾಗೂ ನಿಜವಾದ ನಂಬಿಕೆಯ ವೀರನಾಯಕನಾಗಿದ್ದಾನೆ.[೨೧] ಈ ತರಹದ ಚರಿತ್ರೆ ಬರೆಯಲು ಆಜ್ಞಾಪಿಸಿದರು.

ರಾಜಧಾನಿಯಲ್ಲಿ ಅನೇಕ ಘನ ವಿದ್ವಾಂಸರಿದ್ದರು, ಅವರಲ್ಲಿ ಪ್ರಮುಖರೆಂದರೆ, ಶಾಹನವಾಜಖಾನ, ಅಬ್ದುಲ್ ರಶೀದ-ಅಲ್-ಬಸತಗೀ ಶಾಹ ಶಿಬಗತುಲ್ಲಾ ಹುಸೇನಿ, ಶೇಖ ಅಲಾಮುಲ್ಲಾ ಮುಹದ್ದಿಸ್ (ಈ ಗುರುಗಳು ಜುಮ್ಮಾ ಮಸೀದಿಯಲ್ಲಿ ಪ್ರವಾದಿ ಮಹಮ್ಮದರ ಪರಂಪರೆ ಮತ್ತು ಪರಮಾರ್ಥವಿದ್ಯೆಗಳನ್ನು ಬೋಧಿಸುತ್ತಿದ್ದರು) ಮೌಲಾನಾ ಹಸನ ಫರಾಗಿಹಿ, ಮೌಲಾನಾ ಹಬೀಬುಲ್ಲಾಹ, ಶಾಹ ಮೊಹಮ್ಮದ ಮುಲ್ಕಿ ಮತ್ತು ಶಾಹ ಹಬೀಬುಲ್ಲಾಹ ಹುಸೇನಿ.[೨೨] ಶಾಹ ಜೈಯನ ಮಕಬುಲಿ ಇವರು ಪುಸ್ತಕ ಪ್ರಿಯರಾಗಿದ್ದು ಇವರ ಸ್ವಂತಃ ಗ್ರಂಥಾಲಯದಲ್ಲಿ ಸುಮಾರು ೮೦೦ ಹಸ್ತಪ್ರತಿಗಳ ಸಂಗ್ರವಿತ್ತು. ಅದರಲ್ಲಿ ಸ್ವತಃ ೩೦೦ ಹಸ್ತಪ್ರತಿಗಳನ್ನು ಬರೆದಿದ್ದರು. ಮೀರಾನ ಮಹಮ್ಮದ ಮುದ್ದರಿಸ್ ಕೂಡ ಆ ಕಾಲದ ಶ್ರೇಷ್ಠ ಶಿಕ್ಷಕರಾಗಿದ್ದರು.[೨೩] ಆಸಾರ ಮಹಲಿನಲ್ಲಿ ಎರಡು ಮದರಸಾ (ಧಾರ್ಮಿಕ ಶಾಲೆ)ಗಳಿದ್ದವು. ಒಂದು ಮದರಸಾದಲ್ಲಿ ಹದೀಸ್ (ಪ್ರವಾದಿಯವರ ಪರಂಪರೆ) ಬೋಧಿಸುತ್ತಿದ್ದರೆ, ಇನ್ನೊಂದು ಮದರಸಾದಲ್ಲಿ ಫಿಕ್ವಾ ಮತ್ತು ಇಮಾನ್ (ಪರಮಾರ್ಥವಿದ್ಯೆ) ಕಲಿಸಲಾಗುತ್ತಿತ್ತು.[೨೪]

೨. ಆದಿಲ್‌ಶಾಹಿ ಕಾಲದ ಆರೋಗ್ಯ (ಶಿಕ್ಷಣ) ವ್ಯವಸ್ಥೆ (ದಾರುಶ-ಶಫಾ) :

ಮಧ್ಯಕಾಲೀನ ಸಮಾಜದಲ್ಲಿ ಕರ್ನಾಟಕವನ್ನಾಳಿದ ಅರಸರು ಸಾರ್ವಜನಿಕ ವೈದ್ಯಕೀಯ ವ್ಯವಸ್ಥೆಯನ್ನು ಮಾಡಿದ್ದರು. ಸುಲ್ತಾನರು, ಸಾಮಂತರು, ಸರದಾರರು ಆರೋಗ್ಯದ ವ್ಯವಸ್ಥೆಗಾಗಿ ಕೆಲವು ವಿಶಿಷ್ಠ ವೈದ್ಯಕೀಯ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದರು. ಬಹಮನಿ ಸುಲ್ತಾನರು ಮತ್ತು ಅವರ ನಂತರ ಬಂದ ಆದಿಲ್‌ಶಾಹಿ ಸುಲ್ತಾನರು ತಮ್ಮದೇ ಆದ ವಿವಿಧ ದಾರುಶ-ಶಫಾ ಅಥವಾ ದವಾಖಾನೆಗಳ ವ್ಯವಸ್ಥೆ ಮಾಡಿದ್ದರೆಂದು ತಿಳಿದುಬರುತ್ತದೆ.

ಆದಿಲ್‌ಶಾಹಿ ಕಾಲದಲ್ಲಿ ಯುನಾನಿ ಚಿಕಿತ್ಸಾ ಪದ್ಧತಿಯೊಂದಿಗೆ, ಆಯುರ್ವೇದ ಹಾಗೂ ಆಲೋಪತಿ ಚಿಕಿತ್ಸಾ ಮಾದರಿಯ ವೈದ್ಯಕೀಯ ಶಿಕ್ಷಣವೂ ಪ್ರಚಲಿತದಲ್ಲಿತ್ತು. ಬಿಜಾಪುರದ ಸಂತಕವಿ ರುಕ್ಮಾಂಗ ಪಂಡಿತರು ಆಯುರ್ವೇದ ವಿದ್ಯೆಯನ್ನು ಕಲಿಸಲು ಒಂದು ವಿದ್ಯಾಲಯವನ್ನು ಕಟ್ಟಿಸಿದ್ದರು.[೨೫] ಉತ್ತರ ಕರ್ನಾರ್ಟಕದಲ್ಲಿ ವಂಶಪಾರಂಪರ್ಯವಾಗಿ ವೈದ್ಯ ವಿದ್ಯೆಯನ್ನು ಉಳಿಸಿಕೊಂಡು ಬಂದ ಹಲವಾರು ಮನೆತನಗಳು ಮೂಲದಲ್ಲಿ ಈ ವಿದ್ಯಾಲಯದಿಂದ ಬಂದವರಾಗಿದ್ದರೆಂದು ಹೇಳಲಾಗುತ್ತದೆ. ಈ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವ ಕುಟುಂಬಗಳು ಈಗಲೂ ಬಿಜಾಪುರದಲ್ಲಿ ವಾಸವಾಗಿದ್ದಾರೆ.

ಮಂದಿರಗಳು-ಮಸೀದಿಗಳಲ್ಲಿ ರೋಗಿಗಳನ್ನು ಉಪಚರಿಸಲು ಆಸ್ಪತ್ರೆಗಳನ್ನು ಪ್ರಾರಂಭಿಸಿದರು. ರೋಗಗಳನ್ನು ಉಪಚರಿಸಲು ವೈದ್ಯರನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಆದಿಲ್‌ಶಾಹಿ ರಾಜ್ಯದಲ್ಲಿ ವಿವಿಧ ಪ್ರಕಾರದ ವೈದ್ಯಕೀಯ ಸಹಾಯ ದೊರೆಯುತ್ತಿತ್ತು. ಬೇರೆ ಬೇರೆ ಪ್ರಕಾರದ ರೋಗಿಗಳನ್ನು ಉಪಚರಿಸಲು ವೈದ್ಯಕೀಯ ಕೇಂದ್ರದಲ್ಲಿ 'ಸುಭಾ' ಎಂಬ ಭಾಗಗಳಿದ್ದವು. ಬೇರೆ ಬೇರೆ ಪ್ರಕಾರದ ಜ್ವರಗಳು, ಕಣ್ಣುಬೇನೆ, ಅಸ್ತಮಾ, ಚರ್ಮರೋಗದಂತಹ ಅನೇಕರೋಗಿಗಳನ್ನು ಉಪಚರಿಸುತ್ತಿದ್ದರು.[೨೬] ಬಿಜಾಪುರದ ಆದಿಲ್‌ಶಾಹಿ ಸುಲ್ತಾನರ ದಾರುಶ-ಶಫಾದಲ್ಲಿ(ಆಸ್ಪತ್ರೆಯಲ್ಲಿ) ಯುರೋಪಿಯನ ವೈದ್ಯನು ಎರಡನೆ ಇಬ್ರಾಹಿಮನ ಆಸ್ಥಾನಕ್ಕೆ ಬಂದಿದ್ದನು.

ಬುಮರಾತ ಮತ್ತು ಫರ್ನಾಪೋಲೆ ಎಂಬ ಯುರೋಪಿನ ವೈದ್ಯರು ಆದಿಲ್‌ಶಾಹಿ ಆಸ್ಥಾನದಲ್ಲಿದ್ದರು. ಫರ್ನಾಪೋಲೆನು ಔಷಧಶಾಸ್ತ್ರ ಹಾಗೂ ಶಸ್ತ್ರ ಚಿಕಿತ್ಸೆಯಲ್ಲಿ ಪ್ರಸಿದ್ಧನಾಗಿದ್ದನು. ಒಮ್ಮೆ ಎರಡನೆಯ ಇಬ್ರಾಹಿಮ ಆದಿಲ್‌ಶಾಹನಿಗೆ ಈತನು ಕೊಟ್ಟ ಚಿಕಿತ್ಸೆಯಿಂದ ರೋಗ ಗುಣವಾಗದೇ ಉಲ್ಬಣವಾಗಿ ಸುಲ್ತಾನನು ಮರಣ ಹೊಂದಿದನು. ನಂತರ ಮಂತ್ರಿಯಾದ ಖವಾಸಖಾನನು ವೈದ್ಯನು ಸುಲ್ತಾನನಿಗೆ ಸರಿಯಾಗಿ ಚಿಕಿತ್ಸೆ ಕೊಡಲಿಲ್ಲವೆಂದು ಅವನ ಮೂಗು ಹಾಗೂ ಮೇಲಿನ ತುಟಿಗಳನ್ನು ಕತ್ತರಿಸಿ ಶಿಕ್ಷೆ ಕೊಟ್ಟಾಗ, ಫರ್ನಾಪೋಲೆನು ತನ್ನ ಮನೆಗೆ ಬಂದನಂತರ ತನ್ನ ಸೇವಕನ ಮೂಗು ಮತ್ತು ತುಟಿಗಳನ್ನು ಕತ್ತರಿಸಿ ತನ್ನ ಮೂಗಿನ ಸ್ಥಳದಲ್ಲಿ ಸೇವಕನ ಮೂಗನ್ನು ಮತ್ತು ತುಟಿಯನ್ನು ಜೋಡಿಸಿ ಹೊಲಿದು ಔಷಧೋಪಚಾರವನ್ನು ಮಾಡಿಕೊಂಡನು. ನಂತರ ಮತ್ತೆ ಮೊದಲಿನಂತೆ ಬಿಜಾಪುರದಲ್ಲಿಯೇ ಇದ್ದು ಎಲ್ಲರಿಗೂ ಔಷಧೋಪಚಾರವನ್ನು

ಮಾಡುತ್ತಿದ್ದನು.[೨೭] ಇವನು ಔಷದ ಹಾಗೂ ಶಸ್ತ್ರ ಚಿಕಿತ್ಸೆಯಲ್ಲಿ ಅದ್ವಿತಿಯನಾಗಿದ್ದನೆಂದು 'ಬುಸಾತಿನೆ ಸಲಾತಿನ' ಗ್ರಂಥದಲ್ಲಿ ಮಹಮ್ಮದ ಜುಬೇರಿ ಹೇಳಿದ್ದಾನೆ.

ಅಯ್ಯತಿಪ್ಪ ಎಂಬುವನು ಆಯುರ್ವೇದಿಕ ವೈದ್ಯನಾಗಿದ್ದನು. ಬಿಜಾಪುರದಲ್ಲಿ ಇವನು ನಿತ್ಯ ತನ್ನ ಆಸ್ಪತ್ರೆಯಲ್ಲಿ ರೋಗಿಗಳನ್ನು ನೋಡಿ ಉಪಚರಿಸುತ್ತಿದ್ದನು. ಇವನ ಮಗನಾದ ಚಂಪಾನು ಔಷಧಗಳಿಗೆ ಸಂಬಂಧಿಸಿದಂತೆ "ತಿಬ್ಬ-ಇ-ಬಹರಿ-ಓ-ಬಾರಿ ಎಂಬ ಗ್ರಂಥವನ್ನು ಬರೆದನು. ಅಲ್ಲದೆ ಇದು ಮನುಷ್ಯನ ದೇಹದ ಭಾಗಕ್ಕೆ ಸಂಬಂಧಿಸಿದ ಶಬ್ದಕೋಶ ಮತ್ತು ಕೆಲವು ಔಷಧಿಗಳನ್ನು ಹೆಸರಿಸಲಾಗಿದೆ. ಇದರಲ್ಲಿ ವಿವಿಧ ರೋಗಗಳ ಲಕ್ಷಣಗಳು ಮತ್ತು ಅದಕ್ಕೆ ಪರಿಹಾರ ಹಾಗೂ ಆ ರೋಗಕ್ಕಾಗಿ ಔಷಧ ಮತ್ತು ಉಪಚಾರಗಳನ್ನು ಬರೆದಿದ್ದಾನೆ. ಇವನು ಬಿಜಾಪುರದಲ್ಲಿ ಬಹಳ ದಿವಸದವರೆಗೆ ಇದ್ದು ಸೇವೆಯನ್ನು ಸಲ್ಲಿಸಿದ್ದನು. ಅಲ್ಲದೇ ಹಕೀಮ ಮಹಮ್ಮದ ಹುಸೇನ ಯುನಾನಿ ಮತ್ತು ಹಕೀಮ ಮಹಮ್ಮದ ಮಾಸುಮ ಇಸ್ವಹಾನಿ ವೈದ್ಯರಿಗೆ ಸಲಹೆ ಸೂಚನೆಗಳನ್ನು ಕೊಡುತ್ತಿದ್ದನು.[೨೮]

ಖ್ಯಾತ ಇತಿಹಾಸಕಾರನಾದ ಫೆರಿಸ್ತಾನು ಆಯುರ್ವೇದಿಕ ವಿದ್ಯೆಯಲ್ಲಿ ಪರಣಿತನಾಗಿದ್ದನು. ಇವನು ಹಕೀಮ-ಇ-ಮೀಸರಿ ಹಾಗೂ ಹಿಂದೂ ವೈದ್ಯರಿಂದ ಈ ವಿದ್ಯೆಯನ್ನು ಕಲಿತನು. ಈತನು ಸಂಪೂರ್ಣ ಆಯುರ್ವೇದ ಶಿಕ್ಷಣ ಪಡೆದ ನಂತರ ಸ್ವತಃ ಒಂದು ಆಸ್ಪತ್ರೆಯನ್ನು ತೆಗೆದು ರೋಗಿಗಳನ್ನು ಉಪಚರಿಸಲು ಪ್ರಾರಂಭಿಸಿದನು. ಅಲ್ಲದೇ ಇವನು ಕೊಟ್ಟ ಔಷಧಿಗಳಿಂದ ರೋಗಿಗಳು ಗುಣಮುಖವಾಗಿದ್ದರಿಂದ ಇವನು ಬಹಳ ಜನಪ್ರಿಯನಾಗಿದ್ದನೆಂದು ತಿಳಿದು ಬರುತ್ತದೆ. ಇವನು ಸಂಸ್ಕೃತದ ಘನ ವಿದ್ವಾಂಸನಾಗಿದ್ದನು. ಇವನು ಸಂಸ್ಕೃತ ಗ್ರಂಥಗಳಾದ ಸಂಹಿತಾ, ಚರಕ ಮತ್ತು ಶೂಶ್ರೂತಗಳನ್ನು ಅಧ್ಯಯನ ಮಾಡಿದನು. ನಂತರ ಫೆರಿಸ್ತಾನು "ದಸ್ತುರ-ಇ-ಅತಿಬ್ಬಾ ಅಥವಾ ಇಬತ್ತಿಯಾರತ್-ಇ-ಖಾಸಮಿ" ಎಂಬ ಗ್ರಂಥವನ್ನು ಬರೆದನು. ಈ ಗ್ರಂಥದಲ್ಲಿ ಇವನು ಖ್ಯಾತ ಆಯುರ್ವೇದ ವೈದ್ಯರಾದ ಜಗದೇವ, ಸಾಗರ ಭಟ್ಟ ಹಾಗೂ ಸವರಾ ಪಂಡಿತರ ಹೆಸರುಗಳನ್ನು ನಮೂದಿಸಿದ್ದಾನೆ. ಇದರಲ್ಲಿ ಇವನು ಅನೇಕ ರೋಗಗಳ ಹೆಸರು ಮತ್ತು ಅದಕ್ಕೆ ಸಂಬಂಧಿಸಿದ ಗಿಡಮೂಲಿಕೆಗಳು ಮತ್ತು ಔಷಧಗಳ ಬಗ್ಗೆ ಚರ್ಚಿಸಿದ್ದಾನೆ. ಈ ಗ್ರಂಥವು ಸೊಗಸಾದ ಮತ್ತು ವಿಸ್ತಾರವಾದ ಅಂಗಶೋಧನ ವಿದ್ಯೆ (ಂಟಿಚಿಣಾಠುಥಿ) ಜೀವಶಾಸ್ತ್ರ (ಕ್ಷಿಥಿಜುಟಠುಥಿ) ಮತ್ತು ಚಿಕಿತ್ಸಾ ತಂತ್ರಗಳ ವಿವರವಾದ ವ್ಯಾಪ್ತಿಯನ್ನು ಹೊಂದಿದೆ. ಫೆರಿಸ್ತಾನು ಸಸ್ಯಶಾಸ್ತ್ರ (ಃಣಾಚಿಟಿಥಿ)ದಲ್ಲಿ ಪರಣತಿಯನ್ನು ಹೊಂದಿದ್ದನು. ಇವನು ತನ್ನ ಗ್ರಂಥದಲ್ಲಿ ಗಿಡಮೂಲಿಕೆ, ಸಸ್ಯಗಳ ಔಷಧಿ ಲಕ್ಷಣಗಳನ್ನು ಮತ್ತು ಭಾರತ ಹಣ್ಣುಗಳ ವಿಸ್ತಾರವಾದ ಮಾಹಿತಿಯನ್ನು ನೀಡಿದ್ದಾನೆ. ಆಯುರ್ವೇದಿಕ ಔಷಧಗಳ ಸಂಬಂಧಿಸಿದಂತೆ ತನ್ನ ಗ್ರಂಥದ ಪೀಠಿಕೆಯಲ್ಲಿ ಈ ರೀತಿಯಾಗಿ ಹೇಳಿದ್ದಾನೆ. "ನಾನು ಬಹಳಷ್ಟು ಯುನಾನಿ ವೈದ್ಯರ ಪುಸ್ತಕಗಳನ್ನು ಓದಿದ್ದೇನೆ. ಪ್ರತಿಸಲ ಈ ಪುಸ್ತಕಗಳ ಬಗ್ಗೆ ಯೋಚಿಸುತ್ತೇನೆ. ನಂತರ ನನಗೆ ಅನಿಸಿದೆನೆಂದರೆ ನಾನು ಭಾರತೀಯ ವೈದ್ಯರು ಬರೆದ ಪುಸ್ತಕಗಳ ಬಗ್ಗೆ ಗಮನ ಹರಿಸಬೇಕೆಂದು ಅನಿಸಿತು. ನಂತರ ಆ ಪುಸ್ತಕಗಳಲ್ಲಿ ನನ್ನ ಆಸಕ್ತಿ ಕೇಂದ್ರಿಕೃತವಾಯಿತು. ಮೊದಲು ಈ ಪುಸ್ತಕಗಳನ್ನು ಓದಲು ಪ್ರಾರಂಭಿಸಿದಾಗ ಆಶ್ಚರ್ಯಕರವಾದ ಸಂಗತಿ

[illegible]

ಏನೆಂದರೇ ಅವರ ಔಷಧಗಳು ಕೂಡ ತುಂಬ ಉಪಯುಕ್ತ ಮತ್ತು ಪ್ರಾಯೋಗಿಕವಾಗಿದ್ದವು. ಇಂತಹ ಅದ್ಭುತ ಜ್ಞಾನದ ಅರಿವಿಲ್ಲದೆ ನನ್ನ ಮುಸ್ಲಿಂ ಸಹಪಾಠಿಗಳು ಇದರ ಲಾಭ ಪಡೆದುಕೊಳ್ಳಲಾಗಲ್ಲಿಲ್ಲ.[೨೯] ಹೀಗೆ ಅವನು ತನ್ನ ಗ್ರಂಥದಲ್ಲಿ ಆರ್ಯುವೇದ ವಿದ್ಯೆಯ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾನೆ.

ಒಂದನೆಯ ಅಲಿ ಆದಿಲ್‌ಶಾಹ ಕಾಲದ ವಿಜಯನಗರದ ಯುದ್ಧದಲ್ಲಿ ಆಶಿಕ್ ಆಬದಾಲ್ ಎಂಬ ಫಕೀರನು ಬಿಜಾಪುರದ ಹತ್ತಿರ ತರೆಯಾ (ತೊರವಿ)ದ ಧನಿ, ದೊಡ್ಡ ಸಾಧು ಪುರಷ ಕೀರ್ತಿವಚಿತ ಪುರುಷನಾಗಿದ್ದನು ಮತ್ತು ಸೂಫಿಸಂತನಾಗಿದ್ದನು. ಒಮ್ಮೆ ಬೆನ್ನು ಹಿಂದೆ ತಲವಾರಿನ ಗಾಯವಾಗಿತ್ತು ಫಕೀರನ ಬೆನ್ನನಲ್ಲಿ ಕೆಳಗಿನಿಂದ ಕುತ್ತಿಗೆಯಲ್ಲಿ ಗಂಟಲಿನವರೆಗೂ ಕತ್ತರಿಸಿತ್ತು. ಆದರೆ ಗಂಟಲಿನ ಮುಖ್ಯ ನರ ಮಾತ್ರ ಕತ್ತರಿಸಲಿಲ್ಲ. ಆದ್ದರಿಂದ ಆತನ ಗಾಯವನ್ನು ಹೊಲಿದು ಮಲಾಮು ಪಟ್ಟಿಯನ್ನು ಹಚ್ಚಲಾಯಿತು. ಆತನ ಕುತ್ತಿಗೆ ಪೂರ್ತಿ ಕತ್ತರಿಸಿದ್ದರೂ ಶಸ್ತ್ರ ಚಿಕಿತ್ಸೆಯಿಚಿದ ಹತ್ತು ವರ್ಷ ಜೀವಂತನಾಗಿದ್ದನೆಂದು 'ಬುಸಾತಿನೆ–ಸಲಾತೀನ' ಗ್ರಂಥದಲ್ಲಿ ಉಲ್ಲೇಖಿಸುತ್ತಾನೆ.[೩೦] ಬುಮರಾತ್ ಎಂಬ ಇನ್ನೊಬ್ಬ ಆಲೊಪತಿ ಪದ್ಧತಿಯ ಯುರೋಪಿಯನ್ ವೈದ್ಯನು ಅನೇಕ ವರ್ಷಗಳ ವರೆಗೆ ಆದಿಲ್‌ಶಾಹಿ ಆಸ್ಥಾನದಲ್ಲಿದ್ದನು.

ಯುನಾನಿ : ರೋಗಿಯ ರೋಗಗಳನ್ನು ಗುಣಪಡಿಸಲು ಪ್ರತಿಯೊಬ್ಬ ವೈದ್ಯನು ತನ್ನದೇ ಆದ ಸ್ವತಂತ್ರ ಮಾದರಿಯ ಉಪಚಾರವನ್ನು ಅನುಸರಿಸುತ್ತಿದ್ದನು. ಅನೇಕ ವೈದ್ಯರು ಇರಾನದಿಂದ ಬಂದು ಬಿಜಾಪುರದ ಆಸ್ಥಾನದಲ್ಲಿ ನೆಲಸಿ ಜನರನ್ನು ಆರೋಗ್ಯ ಸೇವೆಯನ್ನು ಮಾಡಿದ ಬಗ್ಗೆ ಇತಿಹಾಸ ಗ್ರಂಥಗಳಿಂದ ತಿಳಿದುಯುತ್ತದೆ. ಇರಾನಿ ವೈದ್ಯರು ಒಳ್ಳೆಯ ಗೌರವ ಹಾಗೂ ಅಭಿಮಾನದಿಂದ ರೋಗಿಗಳ ಸೇವೆಯನ್ನು ಮಾಡುತ್ತಿದ್ದರು. " ಹಕೀಮ ಅಹಮ್ಮದ ಗಿಲಾನಿ"[೩೧] ಎಂಬ ಇರಾನಿ ವೈದ್ಯನನ್ನು ಒಂದನೆಯ ಅಲಿ ಆದಿಲ್‌ಶಾಹನು ತನ್ನ ಆಸ್ಥಾನಕ್ಕೆ ಸಂಭ್ರಮದಿಂದ ಸ್ವಾಗತಿಸಿದನು.

ಮುಹಮ್ಮದ ಹಕಿಮ ಆತಶಿ : ಈತನು ಒಬ್ಬ ಕವಿ ಗ್ರಂಥಕಾರ ಹಾಗೂ ಯುನಾನಿ ವೈದ್ಯನಾಗಿದ್ದನು. ತಪವೊಹರೆಲ ಎಂಬ ಪಿತ್ತಜ್ವರ ಬಂದರೆ ಉಳಿಯುವುದೇ ಕಷ್ಟವಾಗುತ್ತದೆ. ರೋಗಿಗೆ ತುಂಬಾ ನೀರಡಿಕೆಯಾಗುತ್ತದೆ. ಆ ನೀರಡಿಕೆಯಿಂದಲೇ ಮನುಷ್ಯ ಸತ್ತು ಹೋಗುತ್ತಾನೆ. ಮನುಷ್ಯನ ನೀರಿನ ದಾಹವನ್ನು ಶಾಂತಮಾಡಿ ಆತನನ್ನು ತಿರುಗಿ ಸಜೀವನನ್ನಾಗಿ ಮಾಡುವುದು ಅತೀಸುಲಭದ ಕೆಲಸವೆಂದು ಹೇಳುತ್ತಾನೆ. ಮಹಮ್ಮದ ಆದಿಲ್‌ಶಾಹನ ಆಸ್ಥಾನದ ಕವಿಯಾದ ಹಕೀಮ ಆತಿಶಿಯು ನುರಿತ ವೈದ್ಯನಾಗಿದ್ದನು. ಇವನು ರಾಜಮನೆತನದ ವೈದ್ಯನಾಗಿದ್ದು ಅಲ್ಲದೆ ಮಹಮ್ಮದ ಆದಿಲ್‌ಶಾಹನ ವಯಕ್ತಿಕ ವೈದ್ಯನಾಗಿದ್ದನು. ಸುಲ್ತಾನನ ಅಪ್ಪಣೆಯಿಲ್ಲದೆ ಇತರ ರೋಗಿಗಳನ್ನು ನೊಡುವಂತಿರಲ್ಲಿಲ್ಲ. ಇವನು ನೀಡಿದ ಔಷಧದಿಂದ ಎಂಥದೇ ರೋಗ ಇರಲಿ ಕೇವಲ ಮೂರು ವಾರಗಳಲ್ಲಿ ರೋಗಿಯು ಆರಾಮನಾಗುತ್ತಿದ್ದನು.[೩೨] **ಬಅಲಿ** ಎಂಬುವನು ವೈದ್ಯರ ವೈದ್ಯನಾಗಿದ್ದನು. ಯುನಾನಿ ಪದ್ಧತಿಯ ಚಿಕಿತ್ಸೆಯನ್ನು ನೀಡುತ್ತಿದ್ದನು.

ಮಿರ್ಜಾ ಹಕೀಮ : ಈತನು ಸಹ ಕವಿ ಹಾಗೂ ವೈದ್ಯನಾಗಿದ್ದನು. ಮೊದಲನೆಯ ಅಲಿ ಆದಿಲ್‌ಶಾಹನ ಆಸ್ಥಾನದಲ್ಲಿ ವಿವಿಧ ರೋಗಗಳ ವಿಶೇಷ ವೈದಕೀಯ ತಜ್ಞರ ಹೆಸರನ್ನು ಈ ಕೆಳಗಿನಂತೆ ನೋಡಬಹುದು. "ತಬಿಬ–ಇ–ಶೇರಸ್ಥಾಬಂದ" (ಎಲಬು ಮತ್ತು ಕೀಲು ತಜ್ಞ) ಬಹಾಲ್ (ಕಣ್ಣಿನ ತಜ್ಞ) ಅತ್ತಾರ (ಔಷಧ ತಜ್ಞ) ಎಂಬ ವೈದ್ಯರಿದ್ದರೆಂದು ತಿಳಿದುಬರುತ್ತದೆ. ಈ ಎಲ್ಲ ಹೆಸರುಗಳು ಇರಾನಿ ಭಾಷೆಯ ಪದಗಳೆ ಆಗಿವೆ. ಅದೇ ರೀತಿ ಕೆಲವು ರೋಗಗಳ ಹೆಸರುಗಳು ನಮಗೆ ಸಿಗುತ್ತವೆ. ಅವು ಯಾವುವೆಂದರೆ, ತಬ–ಇ–ನುಬಾ, ತಬ–ಇ–ಮುತರ್ಕಾ, ಸಫರಾ, ಬಲಗಮ, ಸಫೇದದಾಗ, ಸುಜಾತ, ಅತರಕ್, ಝುರ್ಧಿ, ಜಕುಮ್, ಸಸ್ ಬಂದ ಎಂಬ ರೋಗಗಳನ್ನು ಇರಾನಿ ವೈದ್ಯರು ಗುಣಪಡಿಸುತ್ತಿದ್ದರು. ಹೀಗೆ ಇವರ ಕಾಲದಲ್ಲಿ ಇರಾನಿ ವೈದ್ಯಕೀಯ ಪದ್ಧತಿ ವಿಪುಲವಾಗಿ ಬಳಕೆಯಲ್ಲಿತ್ತು. ದಖ್ಖನ್ ರಾಜ್ಯಗಳು ನಾಶವಾದ ಮೇಲೆ ಹಲವು ಶತಮಾನಗಳ ನಂತರವೂ ಸಹ ಪರ್ಶಿಯನ್ ಅಥವಾ ಇರಾನಿ ಮಾದರಿಯ ವೈದ್ಯಕೀಯ ಉಪಚಾರವನ್ನು ಅನೇಕ ಸೂಫಿ–ಸಂತರ ದರ್ಗಾಗಳಲ್ಲಿ, ಈ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದರು. ಈಗಲೂ ಸಹ ಅನೇಕ ಹಕೀಮರು ಯುನಾನಿ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ ಇರಾನಿ ವೈದ್ಯಕೀಯ ಪದ್ಧತಿಯನ್ನು ದಖ್ಖನ ಭಾಗದಲ್ಲಿ ಇರಾನ ಪದದ ಬದಲಾಗಿ ಯುನಾನಿ ಎಂದು ಮತ್ತು ಇರಾನದ ವೈದ್ಯಕೀಯ ಪದ್ಧತಿಯನ್ನು ತಬ–ಇ–ಯುನಾನ ಅಥವಾ ಯುನಾನಿ ವೈದ್ಯಕೀಯ ಪದ್ಧತಿಯೆಂದು ತಪ್ಪಾಗಿ ಉಚ್ಚರಿಸುತ್ತಾರೆ. ಎರಡನೆ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿ ಪ್ಲಾಷ್ಟರ ಶಸ್ತ್ರಚಿಕಿತ್ಸ ಮಾಡುತ್ತಿದ್ದರೆಂಬುದನ್ನು ಈ ಮೊದಲೇ ತಿಳಿದುಕೊಂಡಿದ್ದೇವೆ. "ಅತ್ತಾ" ಎನ್ನುವರು ಔಷಧಿ ವ್ಯಾಪಾರ ಮಾಡುತ್ತಿದ್ದರು.[೩೩] ಇನ್ನೊಬ್ಬ ಪ್ರಮುಖ ವೈದ್ಯನೆಂದರೆ 'ಹಕೀಮ ರುಖಾನ–ಇ–ಮಾಸಿ' ಇವನು ನುರಿತ ವೈದ್ಯನಾಗಿದ್ದು ಎರಡನೆಯ ಇಬ್ರಾಹಿಮನ ಆಸ್ಥಾನದಲ್ಲಿದ್ದನು. ಇದಕ್ಕಿಂತ ಮುಂಚೆ ಇವನು ಮೊಗಲರ ಆಸ್ಥಾನದಲ್ಲಿದ್ದನು.[೩೪] ಇದೇ ವೇಳೆ ಯೂಸುಫ ಬೇಗನು 'ಕಿತಾಬ–ಇ–ತಿಬ್ಬ' ಎಂಬ ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಬರೆದನು. ಆದಿಲ್‌ಶಾಹಿ ಸುಲ್ತಾನರು ಹಾಗೂ ಅಧಿಕಾರಿಗಳು ವೈದ್ಯರಿಗೆ ಆಶ್ರಯ, ಪ್ರೋತ್ಸಾಹ ಹಾಗೂ ಅಧಿಕ ಗೌರವ ಧನ ನೀಡುತ್ತಿದ್ದರು. ಇದರಿಂದಾಗಿ ಈ ವೈದ್ಯರು ಅನೇಕ ವೈದ್ಯಕೀಯಶಾಸ್ತ್ರಕ್ಕೆ ಸಂಬಂಧಿಸಿದಂತಹ ಗ್ರಂಥಗಳನ್ನು ಬರೆದರು.

ಪವಾಡ ಚಿಕಿತ್ಸ : ಈ ಸುಲ್ತಾನರ ಕಾಲದಲ್ಲಿ ಹಿಂದೂ ಹಾಗೂ ಮುಸ್ಲಿಮ ಸಂತರಿಂದ ಅರಸು ಮನೆತನದವರಿಗೆ ಪವಾಡ ಚಿಕಿತ್ಸೆಯಿಚಿದ ಮರುಜೀವ ಪಡೆದ ಒಂದೆರಡು ಘಟನೆಗಳು ಇಲ್ಲಿ ಉದಾಹರಣೆಗಾಗಿ ಹೇಳಬಹುದು.

ಹಜರತ್‌ಶಾಹ ಹಷಮ್ ಆಲಮೀಯ ಇವರು ಮಹಮ್ಮದ ಆದಿಲ್‌ಶಾಹನ ಗುರುವಾಗಿದ್ದರು. "ಗುಂಜಲ್ ಅಸ್ರಾರ್" ಎಂಬ ಪುಸ್ತಕವನ್ನು ಬರೆದಿದ್ದಾರೆ. ಸುಲ್ತಾನ ಮಹಮ್ಮದ ಆದಿಲ್‌ಶಾಹನು ಅನಾರೋಗ್ಯದಿಂದ ಬಳಲುತ್ತಿದ್ದಾಗ ಅನೇಕ ವೈದ್ಯರು ನಾನಾ ಪ್ರಕಾರದ ಚಿಕಿತ್ಸೆಯನ್ನು ನೀಡಿದರೂ ಗುಣವಾದಿದ್ದಾಗ ಸುಲ್ತಾನು ಹಜರತ್ ಶಾಹ ಹಷಮ್ ಅಲಮೀಯ ಹತ್ತಿರ ಹೋದರು. ಮಂತ್ರ ಚಿಕಿತ್ಸೆಯಿಂದ ತಮ್ಮ ಹೊರತು ನನಗೆ ರೋಗ ಗುಣವಾಗುವದಿಲ್ಲ. ತಾವು ಕೃಪೆ ಮಾಡಿ ನನ್ನನ್ನು ಗುಣಮುಖವನನ್ನಾಗಿ

ಮಾಡಬೇಕೆಂದು ಪ್ರಾರ್ಥಿಸಿದಾಗ, ಬಾದಶಾಹನ ವಿನಚಿತಿಯನ್ನು ಮನ್ನಿಸಿ ಬಾದಷಾನ ಆಯುಷ್ಯದ ಕೊಡ ಪೂರ್ತಿಯಾಗಿ ತುಂಬಿದೆ. ಅವನಿಗೆ ಈ ಸಮಯದಲ್ಲಿ ಬೇರೆಯವರು ಜೀವಕೊಡದೆ ಹೊರತು ಬಾದಶಾಹನು ಬುದುಕುವುದೇ ಸಾದ್ಯವಿಲ್ಲ. ನನ್ನ ಆಯುಷ್ಯ ಇನ್ನೂ ಹತ್ತು ವರುಷ ಉಳಿದಿದೆ, ನಾನು ನನ್ನ ಆಯುಷ್ಯವನ್ನು ಈ ಬಾದಶಾಹನಿಗೆ ಬಕ್ಷೀಸಾಗಿ ಕೊಟ್ಟು, ಅವನ ರೋಗವನ್ನು ತೆಗೆದುಕೊಂಡೆ ಎಂದು ಹೇಳಿದರು. ಹೀಗೆ ಅವರು ಹೇಳುತ್ತಿದ್ದಂತೆಯೇ ಬಾದಶಾಹನ ಆರೋಗ್ಯ ಗುಣವಾಗಿ ಅವನು ಗುಣಮುಖನಾದನು. ಮರುದಿನ ಬಾದಶಹ ಹಜರತ ಹಷಮಿರವರ ದರ್ಶನಕ್ಕಾಗಿ ಬಂದಾನು. ಅಲ್ಲಿ ನೋಡಿದರೆ ಬಾದಶಾಹನ ರೋಗದಿಂದಲೇ ಬಳಲುತ್ತ ಬಿದ್ದಿರುವ ತನ್ನ ಪ್ರತಿಬಿಂಬವನ್ನು ಹಜರತರಲ್ಲಿ ಕಂಡನೆಂದು ಹೇಳುತ್ತಾನೆ.[೩೫] ಹೀಗೆ ರಾಜನಿಗೆ ತಮ್ಮ ಆಯುಷ್ಯವನ್ನು ಕೊಟ್ಟು ರಕ್ಷಿಸಿದ್ದು ಇತಿಹಾಸದಲ್ಲಿ ಉಲ್ಲೇಖಿಸಿದ್ದಾರೆ.

ರುಕ್ಮಾಂಗದ ಪಂಡಿತರ ಪವಾಡ : ಎರಡನೆ ಇಬ್ರಾಹಿಮನ ಮಗಳು ರೋಗದಿಂದ ಬಳಲುತ್ತಿದ್ದಾಗ ಯಾವುದೇ ವೈದ್ಯರಿಂದ ರೋಗವನ್ನು ಗುಣಪಡಿಸದ್ದಿದ್ದಾಗ ಇಬ್ರಾಹಿಮನು ರುಕ್ಮಾಂಗದ ಪಂಡಿತರು ಆಶ್ರಯದಲ್ಲಿ ಹೋಗುತ್ತಾನೆ. ಆಗ ಇವರು ಸರಸ್ವತಿ ವಿಗ್ರಹದ ಮುಂದೆ ಇಬ್ರಾಹಿಮನ ಮಗಳನ್ನು ಮಲಗಿಸಿ ಪಂಡಿತರು ಸಂಗೀತ ಪೂಜೆಯನ್ನು ಪ್ರಾರಂಭಿಸುತ್ತಾರೆ. ಸ್ವತಃ ಖ್ಯಾತ ಗಾಯಕರಾದ ಪಂಡಿತರು, ರಾಗದ ಆಲಾಪವನ್ನು ತಾನಾ ಪುರಾದೊಂದಿಗೆ ಪ್ರಾರಂಭಿಸುತ್ತಾರೆ. ಅವರು ರಾಗವಿಸ್ತಾರ ಮಾಡುತ್ತಿದ್ದಾಗ ನಿಶ್ಚೇಷ್ಟಿತಳಾಗಿದ್ದ ಬಾದಶಹನ ಮಗಳು ಅಲುಗಾಡಲು ಆರಂಭಿಸುತ್ತಾಳೆ, ರಾಗ ಸಮಾಪ್ತಿಯ ಹೊತ್ತಿಗೆ ಬೇನೆ ಕಳೆದು ಆರೋಗ್ಯವಂತಳಾಗಿ ಎದ್ದು ಕುಳಿತುಕೊಳ್ಳುತ್ತಾಳೆ. ಇದರಿಂದ ಬಾದಶಾಹನು ಪಂಡಿತರ ಮೋಡಿಯಿಂದ ಆಕರ್ಷಿತನಾಗಿ ಸರಸ್ವತಿಯ ಭಕ್ತನಾಗುತ್ತಾನೆ.[೩೬] ಈ ರೀತಿಯಾಗಿ ಆರ್ಯುವೇದ, ಯುನಾನಿ, ಆಲೋಪತಿ, ಮಂತ್ರ,ತಂತ್ರ ಆಕ್ಯುಪ್ರೆಶರ್, ಸಂಗೀತ ಹಾಗೂ ಪವಾಡ ಚಿಕಿತ್ಸೆಯಿಂದ ಜನರ ಆರೋಗ್ಯವನ್ನು ಪಂಡಿತರು, ವೈದ್ಯರು, ಸೂಫಿ–ಸಂತರು ರಕ್ಷಿಸುತ್ತಿದ್ದರು.

೩, ಅಲಂಕಾರಿಕ ಲಿಪಿ (Calligraphy) B

ಆದಿಲ್‌ಶಾಹಿ ಸುಲ್ತಾನರ ರಾಜ್ಯಾಶ್ರಯದಿಂದ ಇವರ ಕಾಲದಲ್ಲಿ ಅಲಂಕಾರಿಕ ಲಿಪಿ ಅಭಿವೃದ್ಧಿ ಹೊಂದಿತ್ತು. ಈ ತರಹದ ಅಲಂಕಾರಿಕ ಲಿಪಿಯು ನಾವು ಕಲ್ಲಿನ ಮೇಲೆ, ಮರ, ಫಿರಂಗಿ ಮತ್ತು ಹಸ್ತಪ್ರತಿಗಳ ಮೇಲೆ ನೋಡಬಹುದಾಗಿದೆ. ಬಿಜಾಪುರದಲ್ಲಿರು ಪುರಾತತ್ವ ವಸ್ತು ಸಂಗ್ರಹಾಲಯದಲ್ಲಿ ಇಂತಹ ಹಲವಾರು ಶಾಸನ ಮತ್ತು ಫಿರಂಗಿಗಳ ಮೇಲೆ ತುಲುತ್ ಮತ್ತು ನಸ್ತಾಲಿಖ ಶೈಲಿಯ ಬರವಣಿಗೆಯನ್ನು ಗಮನಿಸಬಹುದು. ಬಿಜಾಪುರದ ಜುಮ್ಮಾ ಮಸೀದೆಯ ನಡುವಿನ ಗುಮ್ಮಟ್ಟದ ಮೇಲ್ಭಾಗದ ಪಶ್ಚಿಮ ಕಮಾನಿನಲ್ಲಿ ಮೂರು ಕಟ್ಟಿಗೆಯ ಶಾಸನಗಳ ಮೇಲೆ ಪವಿತ್ರ ಕುರಾನಿನ ಶ್ಲೋಕಗಳನ್ನು ಮತ್ತು ನಾಲ್ಕು ಖಲಿಫರ ಹೆಸರುಗಳನ್ನು ಬಹಳ ಅಲಂಕಾರಿಕವಾಗಿ ಬರೆಯಲಾಗಿದೆ. ಇಬ್ರಾಹಿಮ ರೋಜಾದ ಮೇಲಿನ ಶಾಸನದಲ್ಲಿ ಪವಿತ್ರ ಕುರಾನಿ ಶ್ಲೋಕಗಳು ಮತ್ತು ಕಟ್ಟಡದಲ್ಲಿರುವ ನಾಲ್ಕು ಜಾಲಂಧರ(Ventilators)ದಲ್ಲಿ

ವಿಶಿಷ್ಟವಾದ ಅಲಂಕಾರವನ್ನು ಮಾಡಲಾಗಿದೆ. ಈ ಅಲಂಕಾರದಲ್ಲಿಯೇ ಕುರಾನಿನ ಶ್ಲೋಕಗಳ ಬರವಣಿಗೆಯಿದೆ. ಇವು ಬಿಜಾಪುರದ ಅಲಂಕಾರಿಕ ಲಿಪಿಗೆ ಅತ್ಯಂತ ಶ್ರೇಷ್ಠ ಉದಾಹರಣೆಯಾಗಿದೆ.

ಆದಿಲ್‌ಶಾಹಿ ಸುಲ್ತಾನರು ಕೂಡ ಅಲಂಕಾರಿಕ ಲಿಪಿ ತಜ್ಞರಾಗಿದ್ದರು. ಯೂಸುಫ ಆದಿಲ್‌ಖಾನನು ನಸ್ತಾಲಿಖ ಲಿಪಿಯಲ್ಲಿ ಪರಿಣಿತಿಯನ್ನು ಹೊಂದಿದ್ದನು.[೩೭] ಮೊದಲನೆಯ ಅಲಿ ಆದಿಲ್‌ಶಾಹ[೩೮] ಮತ್ತು ಎರಡನೆಯ ಇಬ್ರಾಹಿಮ ಆದಿಲ್‌ಶಾಹ[೩೯] ಇವರೂ ಕೂಡ ತುಲುತ್, ನಸ್ತಾಲಿಖ, ನಕ್ಷ ಶಿಖಸ್ತಾ ಮತ್ತು ರಿಖಾ ಶೈಲಿಯಲ್ಲಿ ಬರೆಯುತ್ತಿದ್ದರು. ಆದಿಲ್‌ಶಾಹಿ ಸುಲ್ತಾನರು ಈ ಲಿಪಿಕಾರರಿಗೆ ಆಶ್ರಯದಾತರಾಗಿದ್ದರು. ಇದರಿಂದಾಗಿ ಇರಾನ ಮತ್ತು ಇತರ ಹೊರ ದೇಶದಿಂದ ಈ ಲಿಪಿಕಾರರು ಬಂದು ಆಸ್ಥಾನದಲ್ಲಿದ್ದರು. ೨ನೆಯ ಇಬ್ರಾಹಿಮನ ಆಸ್ಥಾನದಲ್ಲಿ, ಶಾಹ ಖಲೀಲ್ಲುಲ್ಲಾ, ಇಸ್ಮತುಲ್ಲಾ, ಮುಸ್ತಫಾ ಅಬ್ದುಲ್ ಲತೀಫ. ಮುಲ್ಲಾ ಜಹುರಿ ಮತ್ತು ಬಖೇರ ಖುರ್ದ ಕಾಶಿ ಇವರು ಆಸ್ಥಾನದ ಲಿಪಿಕಾರಾಗಿದ್ದರು. ಶಾಹ ಖಲೀಲ್ಲುಲ್ಲಾ ಮತ್ತು ಇಸ್ಮತುಲ್ಲಾ ಇವರು "ಕಿತಾಬ-ಇ-ನೌರಸ" ಎಂಬ ಹಸ್ತಪ್ರತಿಯನ್ನು ತಯಾರಿಸಿದರು. ಭಾರತ ಮತ್ತು ಇರಾನಗಳಲ್ಲಿ ಆದಿಲ್‌ಶಾಹಿಗಳ ಕೆಲವು ಅಲಂಕಾರಿಕ ಮಾದರಿಯ ಹಸ್ತಪ್ರತಿಗಳಿಗೆ ಅಡಿಪಾಯ ಹಾಕಿದರು.[೪೦] ಸುಲ್ತಾನ ಮಹಮ್ಮದ ಆದಿಲ್‌ಶಾಹನ ಆಸ್ಥಾನದಲ್ಲಿ ಮಿರ್ಜಾ ಮಹಮ್ಮದ ಮುಖಿಮ ಮತ್ತು ಕಮಾಲಖಾನ ರೂಸ್ತುಮಿ ಲಿಪಿಕಾರರಾಗಿ ಕಾರ್ಯ ಮಾಡುತ್ತಿದ್ದರು. ಮಹಮ್ಮದನು ಕಮಾಲಖಾನ ರುಸ್ತುಮಿಗೆ "ಖತುತ ಖಾನ" (ಅಲಂಕರಣ ಲಿಪಿ ಕಲಾ ಸಾಗರ) ಎಂಬ ಬಿರುದನ್ನು ದಯಪಾಲಿಸಿದ್ದನು. ಎರಡನೆಯ ಅಲಿ ಆದಿಲ್‌ಶಾಹನು ಸ್ವತಃ ಉನ್ನತ ಮಟ್ಟದ ಲಿಪಿಕಾರನಾಗಿದ್ದನು. ಇವನ ಆಸ್ಥಾನದಲ್ಲಿ ಶಾಹ ದಾವಲ ಮತ್ತು ಇವನ ಮಗನಾದ ಫತೇ ಮಹಮ್ಮದ ಎಂಬ ಲಿಪಿಕಾರರಿದ್ದರು. ಖ್ಯಾತ ಕಲೆ ಮತ್ತು ವಾಸ್ತುಶಿಲ್ಪ ತಜ್ಞನಾದ ಮಲ್ಲಿಕ ಸಂದಲನು ಸಹ ಅಲಂಕಾರಿಕ ಲಿಪಿಯನ್ನು ಬರೆಯುತ್ತಿದ್ದನು.[೪೧] ಆದಿಲ್‌ಶಾಹಿ ಸುಲ್ತಾನರ ರಾಜಾಶ್ರಯದಿಂದ ಅನೇಕ ಜನ ಲಿಪಿಕಾರರು ಆಸ್ಥಾನದಲ್ಲಿ ಇದ್ದರಲ್ಲದೇ, ಇವರು ಸಾಹಿತ್ಯದ ಬೆಳವಣಿಗೆಗೆ ಕಾರಣಿಭೂತರಾದರು.

ಅಲಂಕಾರಿಕ ಲಿಪಿ ಶೈಲಿಗಳು :

ಅಲಂಕಾರಿಕ ಲಿಪಿಶೈಲಿಗಳ ಇತಿಹಾಸ ಇಸ್ಲಾಂ ಧರ್ಮದ ಉಗಮ, ಬೆಳವಣಿಗೆ ಹಾಗೂ ಪ್ರಸರಣದೊಂದಿಗೆ ಹಾಸುಹೊಕ್ಕಾಗಿದೆ. ಭಾರತವೂ ಸೇರಿದಂತೆ ಪಶ್ಚಿಮ ಹಾಗೂ ಮಧ್ಯಏಷಿಯ ರಾಷ್ಟ್ರಗಳಲ್ಲಿ ಈ ಧರ್ಮದ ನಿಷ್ಠಾವಂತ ಅನುಯಾಯಿಗಳಿರುವ ಎಲ್ಲೆಡೆ ಇಸ್ಲಾಂನ ಜೊತೆಜೊತೆಗೆ ವೈವಿಧ್ಯಮಯ ಲಿಪಿಶೈಲಿಗಳೂ ಅರಳಿ ಗೌರವದ ಸ್ಥಾನ ಪಡೆದಿವೆ. ಇಂತಹ ಬರಹದ ಉಲ್ಲೇಖ, ವಿವರಗಳಿಲ್ಲದೆ ಈ ಪ್ರದೇಶಗಳ ಸಂಸ್ಕೃತಿ ಹಾಗೂ ಕಲೆಯ ಇತಿಹಾಸದ ಚಿತ್ರ ಪೂರ್ಣವಾಗುವುದಿಲ್ಲ.

ಸ್ವತಃ ಅಲ್ಲಾಹನ ಹೇಳಿಕೆ ಆದೇಶಗಳನ್ನು ನಿಖರವಾಗಿ ದಾಖಲಿಸಬೇಕಾದ ಅವಶ್ಯಕತೆಯಿಂದಾಗಿ ಇಸ್ಲಾಂ ಧರ್ಮದಲ್ಲಿ ಬರವಣಿಗೆಗೆ ಇನಿಲ್ಲದ ಮನ್ನಣೆ ದೊರೆಯಿತು. ಕುರಾನಿನ ಸೂಕ್ತಿಗಳನ್ನು ಅಂದದ

ಬರವಣಿಗೆಯ ಮೂಲಕ ಅಮರವಾಗಿಸಲು ಅನೇಕ ಲಿಪಿಪರಿಣತರು ಅನವರತ ದುಡಿದರು. ಆ ಜನರ ಶ್ರದ್ಧಾವಂತ ಧಾರ್ಮಿಕ ಪ್ರಜ್ಞೆ, ಸೌಂದರ್ಯೋಪಾಸಾನಾ ಪ್ರವೃತ್ತಿ, ಪರಿಪೂರ್ಣತೆಯನ್ನು ಸಾಧಿಸುವ ಮನೋಧರ್ಮ-ಇವು ವಿವಿಧ ಅಲಂಕಾರಿಕ ಲಿಪಿಶೈಲಿಗಳನ್ನು ಕಲ್ಪಿಸಿ ಬೆಳೆಸಿದವು. ಹೀಗೆ ಪ್ರಪಂಚದ ಇನ್ನಾವುದೇ ಪ್ರದೇಶ, ಜನಾಂಗ ಬರಹವನ್ನು ತನ್ನ ಸಂಸ್ಕೃತಿಯ ಒಂದು ಮುಖ್ಯ ಲಕ್ಷಣವಾಗಿಸಿಕೊಂಡು ವೈವಿಧ್ಯಮಯವಾಗಿ ಅರಳಿಸಲಿಲ್ಲ, ಆದರಿಸಿ ಮೆರೆಸಲಿಲ್ಲ. ಆದುದ್ದರಿಂದಲೇ ಇಸ್ಲಾಂ ಪ್ರಪಂಚದಲ್ಲಿ ಕುರಾನಿನ ಪಾಠದಂತೆಯೇ ಪ್ರತಿಲಿಪಿಯೂ ಅತ್ಯಲ್ಪ ಬದಲಾವಣೆಯೂ ಇಲ್ಲದೆ ಏಕ ಪ್ರಕಾರವಾಗಿ ಬಳಕೆಯಾಗುತ್ತಿದೆ.

ಪ್ರತಿ ಅಕ್ಷರ ರೇಖೆಯ ಉದ್ದ, ಅಗಲ, ತುದಿ ಬಾಗುವ ದಿಕ್ಕು, ಬಾಗು, ಬಳುಕು, ತಿರುವು; ಸರಳ ರೇಖೆಗಳು ಉಂಟು ಮಾಡುವ ಕೋನ; ಅಕ್ಷರ, ಪದಗಳ ನಡುವಿನ ಅಂತರ ಇವೆಲ್ಲ ಒಟ್ಟಾಗಿ ಲಿಪಿಶೈಲಿಯನ್ನು ರೂಪಿಸುತ್ತವೆ. ಈ ಅಂಶಗಳ ಬಗೆಗೆ ಸಾಕಷ್ಟು ಪ್ರಯೋಗ ನಡೆಸಿ, ಉದ್ದೇಶಿತ ಪರಿಣಾಮ ಸಮರ್ಥವಾಗಿ ಕಲಾತ್ಮಕವಾಗಿ ಆಗುವಂತೆ ಅನೇಕ ಲಿಪಿಪರಿಣತರು ಶ್ರಮವಹಿಸಿ ನಿರ್ದಿಷ್ಟ ನಿಯಮಗಳನ್ನು ರೂಪಿಸಿದ್ದಾರೆ. ಅರಬ್ಬೀಲಿಪಿಯ ಅಕ್ಷರಗಳ ಗಾತ್ರ, ಪ್ರಮಾಣ, ರೀತಿಗಳನ್ನು ವಿಧವಿಧವಾಗಿ ಸಂಯೋಜಿಸಿ ಅರಬರು, ಪರ್ಶಿಯನ್ನರು ಹಾಗೂ ಅಟ್ಟೋಮನ್ ತುರ್ಕರು ಹದಿನೆಂಟು ಮುಖ್ಯಶೈಲಿ ಮತ್ತು ಕೆಲವು ಉಪ ಶೈಲಿಗಳನ್ನು ಸೃಜಿಸಿ ಬಳಕೆಗೆ ತಂದಿದ್ದಾರೆ. ಇವುಗಳಲ್ಲಿ ಅತ್ಯಂತ ಜನಪ್ರೀಯವಾದ ಕೂಫೀ, ನಸ್ಖ, ಥುಲ್ಥ (ಸುಲುಸ), ತುಘ್ರಾ, ನಸ್ತಾಲೀಖ, ರಿಖಾ (ಕೆಲವರ ಪ್ರಕಾರ ಖತ್-ಇ-ಘಬಾರ್ ಅಥವಾ ಘುಬಾರೀ) ಮತ್ತು ಶಿಕಸ್ತಾಲೀಖ್ (ಶಿಕಸ್ತಾ) ಈ ಏಳು ಸಪ್ತಲೇಖ ಅಥವಾ ಸಪ್ತಲಿಪಿಶೈಲಿ (ಹಫ್ತ್ ಕಲಮ್) ಗಳೆಂದು ಪ್ರಸಿದ್ಧವಾಗಿವೆ.[೪೨] ಅವು ಈ ಕೆಳಗಿನಂತಿವೆ.

೧. **ಕೂಫೀ :** ಲಂಬ ಹಾಗೂ ಇತರ ಕೋನಗಳು ಪ್ರಧಾನವಾಗಿರುವ ದಪ್ಪಗೆರೆಯ ಅಕ್ಷರವುಳ್ಳ ಲಿಪಿ ಪ್ರಾಚೀನ ಮೆಸಪೊಟೇಮಿಯದ ಕೂಫಿಯ ಪ್ರಾಂತದಲ್ಲಿ ಉಗಮಿಸಿದುದರಿಂದ ಈ ಹೆಸರು ಬಂದಿದೆ. ತ್ರಿಭುಜ, ಆಯತ, ಚೌಕಾಕಾರದ ಸಂಕೀರ್ಣ, ಜಟಿಲ ಜ್ಯಾಮಿತೀಯ ಬಂಧಗಳಿಂದ ಕೂಡಿದ ಕಸೂತಿಯನ್ನು ಹೋಲುವ, ಬರವಣಿಗೆ ಪ್ರಾರಂಭ ಕಾಲದ ಈ ಶೈಲಿಯಲ್ಲಿ ಎದ್ದು ಕಾಣುವ ಲಕ್ಷಣ. ಕುರಾನಿನ ಪ್ರತಿಗಳಲ್ಲಿ ಇದನ್ನು ಹೆಚ್ಚಾಗಿ ಉಪಯೋಗಿಸಿದೆ. ಭಾರತದಲ್ಲಿ ಕುತುಬ್ ಮೀನಾರ್, ಖುವ್ವತುಲ್ ಇಸ್ಲಾಂ ಮಸೀದಿಯ ಬರೆಹಗಳಲ್ಲಿ ಈ ಶೈಲಿ ಹೆಚ್ಚಾಗಿ ಕಂಡುಬರುತ್ತದೆ. ಬಹಮನಿ ಕಾಲದಲ್ಲಿ ಕರ್ನಾಟಕದಲ್ಲಿ ಪರಿಚಿತವಾದರೂ ಇದರ ಉದಾಹರಣೆಗಳು ಕಡಿಮೆಯೇ. ಬಿಜಾಪುರದ ನಾಭಿಪ್ರದೇಶವಾದ ಅರಸ ಮಹಲಿನ ಭಾಗವಾಗಿದ್ದ ಪಾನಿ ಮಹಲ್‌ನಲ್ಲಿ ಈ ಶೈಲಿಯ ಒಂದು ವೃತ ಫಲಕ ಶಾಸನವಿದೆ.

೨. **ಮುಹಕ್ಕಕ್ :** ಬಲಿಷ್ಠ ರೇಖೆಗಳ ಸಂಯೋಜನೆಯಿರುವ ದಟ್ಟವಾದ ಹೆಣೆದ ಅಕ್ಷರಗಳಿರುವ ಶೈಲಿ. ಎರಡುತುದಿಯಲ್ಲಿ ಒಂದಕ್ಕೊಂದು ಕೂಡಿರುತ್ತವೆ. ಉದ್ದನೆಯ ಹಾಳೆಯಲ್ಲಿ ತಯಾರಿಸಿದ ಕುರಾನಿನ ಹಸ್ತಪ್ರತಿಗಳಲ್ಲಿ ಇದರ ಬಳಕೆಯಾಗಿದೆ.

೩. ರಿಹಾನ್ : ಲತೆ, ಹೂ ಬಳ್ಳಿಗಳಂತೆ ಬಾಗು ಬಳುಕಗಳಿರುವ ಶೈಲಿ. ವಕ್ರರೇಖಾ ಪ್ರಧಾನವಾದ ಮುಹಕ್ಕಕ್ ಶೈಲಿಯ ಅಕ್ಷರಗಳನ್ನು ನಸ್ಖನ ಗಾತ್ರದಲ್ಲಿ ಬರೆದಾಗ ಈ ಶೈಲಿಯಾಗುತ್ತದೆ.

೪. ಥುಲ್ಥ್ (ಸುಲುಸ್) : ನೇರಗೀಟಿನ ಮುಖ್ಯ ಅಕ್ಷರಗಳ ಒಟ್ಟು ಎತ್ತರದ ಮೂರನೆ ಒಂದು ಭಾಗ ಉಳಿದೆಲ್ಲ ಅಕ್ಷರಗಳನ್ನು ಸಂಯೋಜಿಸಿದ ಶೈಲಿ. ಇಸ್ಲಾಂ ಪ್ರಪಂಚದಾದ್ಯಂತ ಸಾರ್ವಕಾಲಿಕ ಮನ್ನಣೆಗಳಿಸಿರುವ ಅಪೂರ್ವಶೈಲಿ.[೪೩] ಉದಾಹರಣೆಗಾಗಿ ಹೇಳಬೇಕಾದರೆ ಇಬ್ರಾಹಿಮ ರೋಜಾದ ದಕ್ಷಿಣ ಬಾಗಿಲಿನ ಮೇಲೆ ಕಮಾನಿನಲ್ಲಿರುವ ಈ ಶಾಸನ ಎರಡನೆಯ ಇಬ್ರಾಹಿಮ ಆದಿಲ್‌ಶಾಹ ಮೃತನಾದನೆಂದು ದಾಖಲಿಸಿರುವ ಶಾಸನ, ಪರ್ಶಿಯನ್ ಭಾಷೆ, ಸುಲುಸ್ ಆಲಂಕಾರಿಕ ಲಿಪಿಯಲ್ಲಿದೆ.

೫. ನಸ್ಖ್ : ಸ್ಥಳಸಂಕೋಚನ, ಪೋಣಿಸುವಿಕೆ ಅಕ್ಷರದ ತುದಿಗಳನ್ನು ಒಂದಕ್ಕೊಂದು ಜೋಡಿಸಿ ಬರೆಯುವ ಶೈಲಿ. ವಕ್ರರೇಖಾ ಪ್ರಧಾನವಾದ ದುಂಡಾದ ಅಕ್ಷರಗಳಿಂದ ಕೂಡಿರುವುದು. ಶಿಲಾಶಾಸನಗಳಲ್ಲಿ ಕೂಫಿಯ ಜೊತೆಜೊತೆಗೆ ಬಳಕೆಯಾಗುತ್ತಿದ್ದ ಲಿಪಿ. ಕುತುಬ್ ಮೀನಾರನ ಅಲಂಕರಣದಲ್ಲಿ ದಪ್ಪ ಅಕ್ಷರದ ನಸ್ಖ್ ಬಳಿಸಿದರೆ ಸುಲಭ ಬರವಣಿಗೆಯಿಂದಾಗಿ ನಾಣ್ಯ, ಮುದ್ರೆ, ಅಧಿಕಾರ, ಆಡಳಿತ ದಾಖಲೆ ಮುಂತಾದ ಧಾರ್ಮಿಕೇತರ ಬರಹಗಳಿಗೆ ಹೆಚ್ಚು ಉಪಯೋಗವಾಗುತ್ತಿತ್ತು.[೪೪]

೬. ತಾವಕೀ : ಒತ್ತಿ ದುಂಡಾಗಿದಿದ ಅಕ್ಷರಗಳಿರುವ ಶೈಲಿ. ಕೂಫಿಶೈಲಿಯಲ್ಲಿನ ಒಂದು ಉಪಬೇಧವಾಗಿಯೂ ಸುಲುಸನಂತೆ ತ್ರಯಾಂಶದಲ್ಲಿಯೂ ಸಂಯೋಜಿಸಿ ಬರೆದುದು.

೭. ರಿಖಾ : ಸುಲುಸ ಮತ್ತು ತಾವಕೀ ಶೈಲಿಗಳನ್ನು ಇನ್ನಷ್ಟು ಸಂಕ್ಷಿಪ್ತಗೊಳಿಸಿದ ಅವತರಣಿಕೆ. ಸಾಹಿತ್ಯಿಕ ಹಸ್ತಪ್ರತಿಯಲ್ಲಿ, ಪಟ್ಟಿಕೆಗಳ ಪರಿಧಿಯಲ್ಲಿನ ಚೌಕಟ್ಟಿನ ಅಲಂಕರಣದಲ್ಲಿ ಹೆಚ್ಚಿನ ಬಳಕೆ. ಎದ್ದು ಕಾಣುವ ಉದ್ದ ಹಾಗೂ ಅಡ್ಡಗೀಟು ಪ್ರಧಾನವಾಗಿರುತ್ತದೆ. ಉದಾಹರಣೆಗಾಗಿ ಸರಾಫ ಬುರುಜಿನ ಹತ್ತಿರದ ಪಾನೀಮಹಲಿನಲ್ಲಿರುವ ರಿಖಾ ಶೈಲಿಯ ಬರಹ.

೮. ದ್ವಾಲೀ : ಯಾವುದೇ ಶೈಲಿಯ ಅತಿ ದೊಡ್ಡ ಗಾತ್ರದ ಅಕ್ಷರಗಳಿರುವ ಉಪಶೈಲಿ ಸುಲುಸ್ ಶೈಲಿಯಲ್ಲಿ ಹೆಚ್ಚು ಬಳಸಲಾಗುತ್ತದೆ.

೯. ಘುಬಾರ್ (ಘುಬಾರೀ) : ಬರಿಗಣ್ಣಿಗೆ ಓದಲು ಕಷ್ಟವಾಗುವ ಧೂಳಿನ ಕಣಗಳಂತಹ ಅತಿಸಣ್ಣ ಅಕ್ಷರಗಳ ಶೈಲಿ. ಇಸ್ಲಾಂ ಧರ್ಮಾವಲಂಬಿ ಸೈನಿಕರು ಯುದ್ಧಕ್ಕೆ ಹೊರಡುವಾಗ ತಮ್ಮ ಧ್ವಜದ ಅಂಚಿಗೆ ಕಟ್ಟುವುದಕ್ಕಾಗಿ ಅತಿ ಸಣ್ಣಗಾತ್ರದ ಕುರಾನಿನ ಪ್ರತಿ ತಯಾರಿಸುತ್ತಿದ್ದರು. ಅಂತಹ ಕುರಾನಿನಲ್ಲಿ ಈ ಶೈಲಿಯ ಉದಾಹರಣೆಗಳಿವೆ. ರಹಸ್ಯ ಸಂದೇಶ ಸಂವಹನೆಗೂ ಇದು ಉಪಯುಕ್ತವಾದುದ್ದು.

೧೦. ತುಘ್ರಾ : ನಸ್ಖ್ ಅಥವಾ ಸುಲುಸ್ ಲಿಪಿಯ ಅಕ್ಷರಗಳನ್ನು ಹತ್ತಿರ ಹತ್ತಿರವಾಗಿ, ಕೆಲವೊಮ್ಮೆ ಒಂದರ ಮೇಲೊಂದು ಮೂಡಿಸಿ ವಿಶೇಷ ವಿನ್ಯಾಸದಲ್ಲಿ ಬರೆದ ಶೈಲಿ. ಮೊಘಲರಿಗಿಂತ ಮೊದಲು ಬಂಗಾಳದಲ್ಲಿ

ಹೆಚ್ಚಾಗಿ ಪ್ರಚಲಿತವಾಗಿತ್ತು. ಮೇಲ್ತುದಿಯನ್ನು ಬಾಣದಂತೆ ರೂಪಿಸಿದ ನೇರಗೀಟು, ಜಿಲ್ಲಿನಾಕಾರದ ಅಡ್ಡಗೀಟಗಳಿರುವ ಬಿಲ್ಲು-ಬಾಣ, ಧ್ವಜ ಹಿಡಿದು ಮೆರವಣಿಗೆ ಹೊರಟ ಸೇನಾದಳದಂತೆ ವಿನ್ಯಾಸ ಮಾಡಿರುವ ಅಕ್ಷರಗಳಿರುತ್ತವೆ. ಕೆಲವೊಮ್ಮೆ ಸಿಂಹ, ಗಿಳಿ ಮನುಷ್ಯ ಮುಂತಾದ ರೂಪಗಳಲ್ಲಿಯೂ, ಆಕರ್ಷಕ ಜ್ಯಾಮಿತೀಯ ವಿನ್ಯಾಸದ ಬಂಧಗಳಲ್ಲಿಯೂ ಸಂಯೋಜನೆಯಿರುತ್ತದೆ. ಈ ಶೈಲಿಯ ಆಕರ್ಷಣೆ ಹಾಗೂ ಗಾಂಭೀರ್ಯಗಳಿಂದಾಗಿ ಸಾಮ್ರಾಟರ ಹೆಸರಿನ ರಾಜಮುದ್ರೆಗಳಲ್ಲಿ, ಆಭರಣ, ಚಿನ್ನದ ನಾಣ್ಯ, ಹಡಗು, ಫಿರಂಗಿಗಳ ಮೇಲೆ ಅಧಿಕೃತತೆಯನ್ನು ಸಾರುವ ಚಿಹ್ನೆಗಳಾಗಿ ಬಳಸಲಾಗುತ್ತಿತ್ತು.[೪೫]

೧೧. **ಮುಸಲ್ ಸಾಲ್ :** ಪೋಣಿಸಿದ ಹೂಮಾಲೆಯಂತಹ ಶೈಲಿ. ಸುಲುಸ್ ಶೈಲಿಯ ಅಕ್ಷರಗಳನ್ನು ತುದಿಯಲ್ಲಿ ಒಂದಕ್ಕೊಂದು ಜೋಡಿಸಿ ಕಲ್ಪಿಸಿದ ಸಂಯುಕ್ತಾಕ್ಷರ ಶೈಲಿ. ಕಲಾವಿದರ ಕುಶಲತೆಗೆ ಸವಾಲೆಸೆಯುವಂತಹದು, ಶ್ರೇಷ್ಠ ಕಲಾವಿದರು ಮಾತ್ರವೆ ಒಲಿಸಿಕೊಳ್ಳಬಹುದಾದದ್ದು.

೧೨. **ಸಿಯಾಕತ್ :** ಯಾವುದೇ ಶೈಲಿಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಬೇಗ ಬೇಗ ಬರೆದಾಗ ರೂಪಗೊಳ್ಳುವ ಅಲಂಕಾರರಹಿತ ಶೈಲಿ. ಆಡಳಿತ ವ್ಯವಹಾರದ ದಾಖಲೆ, ಕಡತ, ಫರ್ಮಾನ್, ಸನ್ನದುಗಳಲ್ಲಿ ಬಳಸಲಾಗುತ್ತಿತ್ತು.

೧೩. **ತಾಲೀಖ(ಇಳಿಬಿಡು, ಜೋತಬೀಳು, ಜೊತೆಜೊತೆಯಾಗಿ ಇಳಿಬಿಟ್ಟಿದ್ದ) :** ಅಕ್ಷರಗಳನ್ನು ಪರಸ್ಪರ ತುದಿಗಳಲ್ಲಿ ಸೇರಿಸಿರುವ ಸಂಯೋಜಿತಾಕ್ಷರ ಶೈಲಿ. ತಾವಕೀ, ರಿಖಾ, ನಸ್ಖ್ ಶೈಲಿಗಳ ಹದವರಿತ ಮಿಶ್ರಣ. ಶಿಕಸ್ತಾಲೀಖಗಿಂತ ಸುಲಭವಾಗಿ ಬರೆಯ ಬಹುದಾದ್ದು. ಉದಾಹರಣೆಗೆ ಬಿಜಾಪುರದ ಜುಮ್ಮಾ ಮಸೀದಿಯ ಅಲಂಕೃತ ಮಿಹ್ರಾಬ್‌ನಲ್ಲಿ ಸರಪಣಿಯಿಂದ ತೂಗುಬಿಟ್ಟಿರುವ ಪದಕಶಾಸನ, ಕುರಾನಿನ ಕಲೀಮಾ ಹಾಗೂ ದಿನಾಂಕವನ್ನು ಬರೆಯಲಾಗಿದೆ.

೧೪. **ಶಿಕಸ್ತಾಲೀಖ (ಶಿಕಸ್ತಾ) :** ತುಂಡು ತುಂಡಾದ ತಾಲೀಖ ಶೈಲಿಯಲ್ಲಿ ಶೀರ್ಘವಾಗಿ ಬರೆದಾಗ ರೂಪಗೊಳ್ಳುತ್ತದೆ. ಸಾಕಷ್ಟು ಅಭ್ಯಾಸ ಪರಿಣತಿಯಿಲ್ಲದೆ ಇದನ್ನು ಓದಲಾಗದು. ಸಾಹಿತ್ಯ ಕೃತಿ, ಆಡಳಿತ ವ್ಯವಹಾರದ ದಾಖಲೆಗಳಲ್ಲಿ ಇದರ ಬಳಕೆ ಹೆಚ್ಚು. ಕ್ರಮೇಣ ನಸ್ತಾಲೀಖ ಶೈಲಿ ಇದರ ಸ್ಥಾನವನ್ನು ಆಕ್ರಮಿಸಿತು.

೧೫. **ತರಸ್ಸುಲ್ (ವ್ಯವಹಾರಿಕ) :** ದೀವಾನ್-ಇ-ಆಮ್ ಮತ್ತು ದೀವಾನ-ಇ-ಖಾಸಗಳಲ್ಲಿ ನಡೆಯುವ ದೈನಂದಿನ ಕಲಾಪಗಳನ್ನು ದಾಖಲಿಸುವ ಹಾಗೂ ಉಕ್ತಲೇಖನಕ್ಕಾಗಿ ಅಲ್ಲಿನ ಅಧಿಕಾರಿಗಳು ಶಿಕಸ್ತಾ ಮತ್ತು ತಾಲೀಖ ಶೈಲಿಯ ಲಿಪಿಯನ್ನು ಇನ್ನಷ್ಟು ಪರಿಷ್ಕರಿಸಿ, ಸಂಕ್ಷೇಪಿಸಿ ರೂಪಿಸಿದ ಶೈಲಿ. ಒಂದು ರೀತಿ ಶೀಘ್ರಲಿಪಿ.[೪೬]

೧೬. **ನ್ಸ್ಖ್-ಇ-ತಾಲೀಖ್ (ನಸ್ತಾಲಿಖ್) :** ನಸ್ಖ್ ಮತ್ತು ತಾಲೀಖ್ ಎರಡರ ಸಂಯೋಜನೆಯಿಂದ ಕಲ್ಪಿಸಿದ ಹೊಸ ಶೈಲಿ. ಇದರಲ್ಲಿ ಎರಡು ಮುಖ್ಯ ಉಪಶೈಲಿಗಳಿವೆ.

ಅ) ಮಿರ್ಜಾ ಜಾಫರ ತಾಬ್ರಜೀ ಮತ್ತು ಅಝುರ್ ತಾಬ್ರಿಜೀ ಎಂಬ ಲಿಪಿ ತಜ್ಞರು ೧೫ನೆಯ ಶತಮಾನದಲ್ಲಿ ಖುರಾಸಾನ್ ಪ್ರದೇಶದಲ್ಲಿ ರೂಪಿಸಿ ರೂಢಿಗೆ ತಂದ್ದು

ಆ) ಅಬ್ದುಲ್ ರೆಹಮಾನ ಬರ್ಜಾಮೀ ಸುಮಾರು ಅದೇ ಕಾಲದಲ್ಲಿ ಪಶ್ಚಿಮ ಪರ್ಷಿಯ ಪ್ರದೇಶದಲ್ಲಿ ರೂಪಿಸಿದ್ದು. ಮೊದಲನೆಯದು ಪರ್ಷಿಯನ್ನರ ವಿಶೇಷ ಮನ್ನಣೆಗೆ ಪಾತ್ರವಾಗಿ ಖುರಾಸಾನೀ ಶೈಲಿಯೆಂದೇ ಪ್ರಸಿದ್ಧವಾಗಿ ಎಲ್ಲೆಡೆ ಹರಡಿತು. ಭಾರತದಲ್ಲೂ ಬಹುಪ್ರಚಲಿತ ಶೈಲಿ.[೪೭] ಉದಾಹರಣೆ ಹೇಳುವುದಾದರೆ, ಜುಹುರಿ ರಚಿಸಿದ ಎರಡನೆ ಇಬ್ರಾಹಿಮ ಆದಿಲ್‌ಶಾಹನ ವರ್ಣ ಭಾವಚಿತ್ರ. ಇದರ ರುಮಾಲಿನ ಅಂಚಿನಲ್ಲಿ ಉತ್ತಮ ನಸ್ತಾಲೀಖ್ ಲಿಪಿಯಲ್ಲಿರುವ ಪರ್ಷಿಯನ್ ಬರಹ ಕವಿತೆಗಳ ಸಾಲುಗಳಿವೆ. ಇವನು ಟಂಕಿಸಿದ ಫುಲೂಸ್ ತಾಮ್ರದ ನಾಣ್ಯ ಇದರ ಮೇಲೆ ರಿಖಾ ನಸ್ತಾಲೀಖ್ ಶೈಲಿ ಬರಹವಿದೆ. ಮತ್ತು ಮಾಲಿಕ್-ಇ-ಮೈದಾನ ಫಿರಂಗಿಯ ಮೇಲಿನ ನಸ್ತಾಲೀಖ ಲಿಪಿಶಾಸನಗಳಿವೆ. ಕ್ರಿ.ಶ. ೧೬೪೨ರಲ್ಲಿ ಈ ಫಿರಂಗಿಯನ್ನು ಮಹಮ್ಮದ ಆದಿಲ್‌ಶಾಹನು ಪರಿಂಡಾ ಕೋಟೆಯಲ್ಲಿ ವಶಪಡಿಸಿಕೊಂಡನು.

೧೭. ತಾಪ್ರೀರೀ (ಪತ್ರ ಲೇಖನ ಲಿಪಿ) ಃ ಶಿಕಸ್ತಾ-ನಸ್ತಾಲಿಖನ ಇನ್ನಷ್ಟು ಸರಳವಾದ ಅವತರಣಿಕೆ. ಪತ್ರ ವ್ಯವಹಾರ ದಾಖಲೆಗಳಲ್ಲಿ ಹೆಚ್ಚು ಬಳಕೆ. ಓದಲು ಸಾಕಷ್ಟು ಪರಿಣತಿಯ ಅವಶ್ಯಕತೆಯಿದ್ದುದರಿಂದ ರಹಸ್ಯ ಸಂದೇಶಗಳ ರವಾನೆಗೆ ಸೂಕ್ತವಾದುದ್ದು.

೧೮. ಮುಥನ್ನಾ, ಖತ್-ಇ-ಮುಥನ್ನಾ (ಪರಸ್ಪರ ಎದುರಾಗಿರುವ) ಃ ಯಾವುದೇ ಶೈಲಿ ಅಕ್ಷರ, ಪದಪುಂಜಗಳನ್ನು ವಿವಿಧ ಅಕ್ಷರಗಳಲ್ಲಿ, ಪರಸ್ಪರ ಬಿಂಬ ಪ್ರತಿಬಿಂಬದಂತೆ ಸಂಯೋಜಿಸಿ ಆಕರ್ಷಕ ಚಿತ್ರಣಗಳನ್ನು ರೂಪಿಸುವುದು. ವಿಶೇಷವಾಗಿ ಸುಲುಸ್ ಮತ್ತು ಕೂಫಿ ಶೈಲಿಯನ್ನು ಈ ಪ್ರಕಾರದಲ್ಲಿ ಬರೆಯಲಾಗುತ್ತದೆ.

ನಸ್ಖ, ನಸ್ತಾಲೀಖ್, ರಿಖಾ, ಶಿಕಸ್ತಾ, ಸುಲುಸ್ ಮತ್ತು ತುಘ್ರಾ ಶೈಲಿಗಳು ಆದಿಲ್‌ಶಾಹಿಗಳ ಕಾಲದಲ್ಲಿ ಬಳಕೆಯಿದ್ದರೂ, ನಸ್ತಾಲೀಖ ಹಾಗೂ ಶಿಕಸ್ತಾ ಅಂದಿನ ಪ್ರಧಾನ ಶೈಲಿಗಳು. ಆದಿಲ್‌ಶಾಹಿ ರಾಜಮನೆತನದ ಸದಸ್ಯರು ಸ್ವತಃ ತಾವೇ ಈ ಕಲೆಯಲ್ಲಿ ಪರಣಿತರಾಗಿದ್ದರಲ್ಲದೇ, ಇತರರಿಗರೂ ಆಶ್ರಯದಾತರಾಗಿದ್ದರು. ಇವರ ಕಾಲದಲ್ಲಿ ಈ ಕಲೆ ಅಭೂತಪೂರ್ವವಾಗಿ ಬೆಳೆಯಿತು. ಅಪ್ರತಿಮ ಉದಾಹರಣೆಗಳು-ಕಲ್ಲು, ಮರ, ಕೊರೆದ ಗಾರೆ, ಲೋಹದ ಫಿರಂಗಿ, ಅಂಕುಶ ಮುಂತಾದ ಆಯುಧ, ಗೃಹ ಬಳಕೆಯ ಬೀದರಿ ಮತ್ತಿತರ ಪಾತ್ರೆ, ಕಾಗದದ ಫರ್ಮಾನು, ಸನ್ನದು, ಹಸ್ತಪ್ರತಿಗಳು, ಕೆಲವು ವರ್ಣಚಿತ್ರ ಹಾಗೂ ನಾಣ್ಯಗಳ ಮೇಲೆ ಕಂಡುಬರುತ್ತವೆ. ಬಿಜಾಪುರದ ಗೋಳಗುಮ್ಮಟ್ಟ ಸಮುಚ್ಛಯದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ವಿವಿಧ ಶೈಲಿಗಳ ಅಲಂಕೃತ ಬರೆಹವಿರುವ ಆಯುಧ, ಪಾತ್ರೆ, ನಾಣ್ಯ, ವರ್ಣಚಿತ್ರ ಮತ್ತು ರೂಮಿ, ಸಾದಿ, ಉಮರ್ ಖಯ್ಯಾಮ ಮುಂತಾದ ಪರ್ಷಿಯನ್ ಕವಿಗಳ ಸುಪ್ರಸಿದ್ಧ ದ್ವಿಪದಿ, ಚತುಷ್ಪದಿ ಕವಿತೆಯ ಸಾಲುಗಳಿರುವ ಫಲಕ, ನಾಣ್ಯ, ಮುದ್ರೆ, ಶಿಲಾಲೇಖಗಳ ಅಪೂರ್ವ ಸಂಗ್ರಹವಿದೆ.[೪೮]

ವಾಸ್ತುವಿನಲ್ಲಿ ಆಲಂಕಾರಿಕ ಲಿಪಿಗಳು :

ಬಿಜಾಪುರದ ಜುಮ್ಮಾ ಮಸೀದಿಯ ಮುಖ್ಯ ಗುಮ್ಮಟದ ತಳಭಾಗದಲ್ಲಿ ಪಶ್ಚಿಮದ ಕಮಾನಿನ ಮೇಲಿರುವ ಮೂರು ಮರದ ಫಲಕಗಳಲ್ಲಿ ಶ್ರೇಷ್ಠ ಮಟ್ಟದ ನಸ್ತಾಲೀಖ್ ಲಿಪಿಯಲ್ಲಿ ಕುರಾನಿನ ಸೂಕ್ತಿ, ನಾಲ್ವರು ಖಲೀಫರ ಹೆಸರು ಬಂದಿದೆ. ಅಕ್ಷರದ ಪರಿಧಿಯಲ್ಲಿನ ಅನವಶ್ಯಕ ಭಾಗವನ್ನು ಕೆತ್ತಿ ಹಾಕಿ, ಶಾಸನ ಭಾಗವಷ್ಟೇ ಉಬ್ಬು ಚಿತ್ರರೂಪದಲ್ಲಿರುವಂತೆ ಕೊರೆದಿದೆ. ಇಂತಹ ಇನ್ನಿತರ ಗೋಳಗುಮ್ಮಟ, ಇಬ್ರಾಹಿಮ ರೋಜಾ ಮತ್ತಿತರ ಕಟ್ಟಡಗಳ ಮರದ ಬಾಗಲಿನಲ್ಲಿಯೂ ಕಂಡುಬರುತ್ತವೆ. ಇದು ಮರದ ಮೇಲೆ ಬರೆದ ಅಲಂಕೃತ ಲಿಪಿ ಶೈಲಿಯ ಉತ್ತಮ ಉದಾಹರಣೆ.[೪೯]

ಈ ಮಸೀದಿಯ ಮಿಹ್ರಾಬ್ ದಕ್ಷಿಣ ಭಾರತದ ಅತ್ಯಂತ ಕಲಾತ್ಮಕ, ಸೂಕ್ಷ್ಮ ಕೆತ್ತನೆ ವಿವಿಧ ಲಿಪಿ ಶೈಲಿಯ ಪರ್ಷಿಯನ್ ಶಾಸನ ಹಾಗೂ ವರ್ಣ ಚಿತ್ರಗಳಿಂದ ಬಹುಪ್ರಸಿದ್ಧವಾಗಿದೆ. ಹೊಳೆಯುವ ಚಿನ್ನದ ಗಿಲೀಟು ಮಾಡಿದ ಕಮಾನು, ಗೋಪುರ, ಮೀನಾರ್, ಪದಕ ಸಂಹಿತ ಸರಪಳಿ, ಪುಷ್ಪ ಕರಂಡಕ, ಧೂಪಾರತಿ ಮುಂತಾದವುಗಳ ಕೆಂಪು, ಕಡುಗಪ್ಪು, ಹಸಿರು ಮತ್ತು ನೀಲಿಬಣ್ಣಗಳ ವಿವಿಧ ಛಾಯೆಗಳಲ್ಲಿ ರೂಪಿಸಿದ ವರ್ಣಶಾಸನ ಚಿತ್ರಗಳಿವೆ. ಪವಿತ್ರ ಕುರಾನಿನ ಹಾಗೂ ಇನ್ನಿತರ ಸೂಕ್ತಿಗಳನ್ನು ಹಸುರಗಲ್ಲಿನ ವಾಸ್ತುಭಾಗಗಳ ಮೇಲೆ ನಸ್ತಾಲಿಖ್ ಲಿಪಿಯ ಉಬ್ಬು ರೂಪದಲ್ಲಿ ಬಿಡಿಸಿ ಅವು ಎದ್ದು ಕಾಣುವಂತೆ ಸ್ವರ್ಣಲೇಪ ಮಾಡಿದೆ. ಜೀವನದಲ್ಲಿ ಆಸಕ್ತಿ ಬೇಡ, ಅದು ತೀರ ಕ್ಷಣಿಕವಾದದ್ದು, ಅಸ್ಥಿರವಾದ ಜಗತ್ತಿನಲ್ಲಿ ಶಾಂತಿ ಎಂಬುದಿಲ್ಲ. ಇಂದ್ರಿಯಗಳಿಗೆ ಮಾತ್ರವೇ ಈ ಪ್ರಪಂಚ ಬಲು ಸೊಗಸು, ಕಾಣಿಕೆಗಳಲ್ಲೆಲ್ಲ ಅಮೂಲ್ಯವಾದದ್ದು ಈ ಜೀವನ, ಆದರಿದು ನಶ್ವರ ಇಂತಹ ಹಲವಾರು ಸೂಕ್ತಿಗಳಿವೆ. ಈ ಲಿಪಿ ಅಲಂಕರಣಗಳು ಸಹಜವಾಗಿದ್ದು ಪವಿತ್ರ ಕುರಾನಿನ ಸೂಕ್ತಿಗಳ ಸೊಗಬು, ಸಂದೇಶಗಳೆರಡನ್ನೂ ಭಕ್ತರ ಮನಮುಟ್ಟುವಂತೆ ಸಂವಹಿಸುವ ಸಾಮರ್ಥ್ಯವನ್ನು ಹೊಂದಿದೆ. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ದಾಬೂಲನಿಂದ ಬಂದ ಕಲಾವಿದ ಮಲ್ಲಿಕ್ ಯಾಕೂತ್ ಈ ಮೆಹ್ರಾಬಿನ ಅಲಂಕರಣಗಳನ್ನು ಮಾಡಿದ.[೫೦]

ವಾಸ್ತು, ಅಲಂಕರಣ ಮುಂತಾದ ಅಂಶಗಳಂತೆಯೇ ಅಲಂಕರಣ, ಲಿಪಿ ಶೈಲಿಯ ದೃಷ್ಟಿಯಿಂದಲೂ ಇಬ್ರಾಹಿಮ ರೋಜಾ, ಆದಿಲ್‌ಶಾಹಿ ಕಲೆಯ ಸರ್ವೋತ್ಕೃಷ್ಟ ಮಾದರಿ, ಇಡೀ ಗೋಡೆ, ಕಮಾನುಗಳ ಪರಿಧಿಯಲ್ಲಿನ ಆಯತಾಕಾರದ ಚೌಕಟ್ಟು, ಕಮಾನು ಮೂಲೆ, ಬಾಗಿಲುವಾಡ, ಮರದ ಬಾಗಿಲಗಳ ಮೇಲೆ ಉಬ್ಬು ಶಿಲ್ಪದ ರೂಪದಲ್ಲಿರುವ ಶಾಸನಗಳ ಜೊತೆಗೆ ಇಲ್ಲಿನ ಕಮಾನಾಕಾರದ ಕಿಟಕಿಯ ಮೇಲಿನ, ಕಲ್ಲಿನಲ್ಲಿ ಪೂರ್ತಿ ಕೊರೆದ ಜಾಲಂಧ್ರಗಳಲ್ಲಿ[೫೧] ಅಸಂಖ್ಯಾತ ನಸ್ತಾಲಿಖ್ ಶಾಸನಗಳಿವೆ. ವಸ್ತುವಿನ ದೃಷ್ಟಿಯಿಂದ ಸ್ವರ್ಗದ ಬಗೆಗಿನ ಕುರಾನಿನ ಆಯ್ದ ಸೂಕ್ತಿಗಳು ಹೆಚ್ಚು ಸಂಖ್ಯೆಯಲ್ಲಿವೆ. ಕಟ್ಟಡದ ನಿರ್ಮಾಣ, ಅದರ ವೈಭವ ಸೌಂದರ್ಯ ವರ್ಣನೆ, ಅಲ್ಲಿ ಸಮಾಧಿಸ್ಥರಾದವರ ಬೆಗೆಗಿನ ಪರ್ಷಿಯನ್ ದ್ವಿಪದಿ ಮತ್ತು ಕಾಲ ಲೇಖಗಳು ಈ ಕಟ್ಟಡಕ್ಕಾಗಿಯೇ ವಿಶೇಷವಾಗಿ ಬರೆದವು. ಗೋಡೆಯ ಸಮತಲದ ಮೇಲೆ ನವಿರಾದ, ಅಷ್ಟು ಆಳವಿಲ್ಲದಂತೆ ತಿದ್ದಿದ ಸುರುಳಿಗಳ ಹೆಣಿಗೆಯಂತಿರುವ ಶಾಸನಗಳ ಪರಿಧಿಯಲ್ಲಿ ಆಕಾಶ ನೀಲಿ ವರ್ಣವನ್ನು

ತುಂಬಿ ಅದರ ಹಿನ್ನೆಲೆಯಲ್ಲಿ ಮೂಡಿಸಿರುವ ಅಕ್ಷರಗಳಿಗೆ ಬಂಗಾರದ ಲೇಪನ ಕೊಟ್ಟಿದ್ದರು. ಇಂತಹ ವರ್ಣಸಂಯೋಜನೆ ಬಹುಶಃ ಕುರಾನಿನ ಸೂಕ್ತಿಗಳು ಆಕಾಶದಲ್ಲಿ ಮೋಡಗಳ ನಡುವಣ ಮಿಂಚಿನಂತೆ, ಪ್ರವಾದಿ ಮಹಮ್ಮದರ ಒಳಗಣ್ಣುಗಳಿಗೆ ಗೋಚರವಾದ್ದನ್ನು ಸಂಕೇತಿಸುತ್ತದೇನೋ? ಅಂದಿನ ದಿನಗಳಲ್ಲಿ ಇದೊಂದು ನಯನ ಮನೋಹರ ದೃಶ್ಯವಾಗಿರಬೇಕು. ಹಳೆಯದಾದ ಈ ವರ್ಣಲೇಪನ ಈಗ ಬಹಳಷ್ಟು ಮಾಸಿದೆ. ಪೂರ್ತಿ ಕೊರೆದ ಜಾಲಂಧ್ರಗಳ ಸೊಬಗಂತೂ ಅನ್ಯಾದೃಶ. ಈ ಶಾಸನಾಕ್ಷರಗಳೂ ಚಿನ್ನದ ಲೇಪನಪಡೆದಿದ್ದವು. ಅಲ್ಲದೆ ಈ ಜಾಲಂಧ್ರದ ಮೂಲಕ ಒಳಗೆ ಬೀಳುವ ಸೂರ್ಯನ ಬೆಳಕಿನಲ್ಲಿಯೂ ಈ ಅಕ್ಷರಗಳು ಮೂಡಿ, ಶಾಸನಾಕ್ಷರ ಆಡುವ ಬೆಳಕು ನೆರಳಾಟ ಮೋಹಕ ಅನುಭವ ನೀಡುತ್ತದೆ.

ಇಸ್ಲಾಂ ಸಂಸ್ಕೃತಿಯಲ್ಲಿ ಅಲಂಕೃತ ಶೈಲಿಯ ಬರಹವನ್ನು ಎರಡು ಮುಖ್ಯ ಉದ್ದೇಶದಿಂದ ಬಳಿಸಿರುವುದು ಕಂಡುಬರುತ್ತದೆ. ದೈವಿಕ ಅನುಭೂತಿಯ ಸಂದೇಶಗಳ ಪ್ರಸರಣ ಸಂವಹನ ಮತ್ತು ವಾಸ್ತುವಿನ ಅಲಂಕರಣ, ಬಿಜಾಪುರದ ಉಳಿದೆಲ್ಲ ಕಟ್ಟಡಗಳಿಗಿಂತ ಇಬ್ರಾಹಿಮರೋಜಾದಲ್ಲಿ ಈ ಎರಡು ತತ್ತ್ವ ಉದ್ದೇಶಗಳನ್ನು ಅತ್ಯುತ್ತಮವಾಗಿ ಸಾಧಿಸಿದೆ. ಈ ಬರಹಗಳು ಕಟ್ಟಡದ ನಿರ್ಮಾಣ ಸಾಮಾಧಿಯಾಗಿರುವ ವ್ಯಕ್ತಿ ಮುಂತಾದ ವಿವರ ನೀಡುವುದರ ಜೊತೆಗೆ ನಿಷ್ಠಾವಂತರಿಗೆ ಕಾದಿರುವ ಸ್ವರ್ಗದ ಸುಖ ಸಾಂತ್ವನದ ಬಗೆಗೂ ಆಶ್ವಾಸನೆ ನೀಡುತ್ತವೆ. ಬರೆಹಗಳು ಕಟ್ಟಡದ ಪ್ರತಿ ಅಂಗುಲವನ್ನು ಆವರಿಸಿರುವುದರಿಂದ ಇಡೀ ಕಟ್ಟಡದ ಒಟ್ಟಾರೆ ಸೌಂದರ್ಯ ಇಮ್ಮಡಿಗೊಂಡಿದೆ. ಅಲ್ಲದೆ ವಾಸ್ತು, ಅಲಂಕರಣ ವಿನ್ಯಾಸ, ಸಂದೇಶ ಸಂವಹನ ಕ್ರಿಯೆಗಳೆಲ್ಲ ಒಂದಕ್ಕೊಂದು ಪೂರಕವಾಗಿದ್ದು ಉದ್ದೇಶ ಸಾಧನೆಗೆ ಸಹಾಯಕವಾಗಿವೆ. ಇದಕ್ಕಾಗಿ ನಸ್ಕ್, ನಸ್ತಾಲಿಖ್ ಹಾಗೂ ರಿಖಾ ಶೈಲಿಯ ಲಿಪಿಗಳಲ್ಲಿ, ತೆಳು ಉಬ್ಬು, ಪೂರ್ತಿ ದುಂಡಾಗಿ ಕೊರೆಯುವ ವಿಧಾನಗಳನ್ನು ಅವಶ್ಯವಿದ್ದೆಡೆ ಅರ್ಥಪೂರ್ಣವಾಗಿ ಬಳಸಿದೆ. ಜೊತೆಗೆ ಸೂಕ್ತ ವರ್ಣ ಸಂಯೋನೆಯಿಂದ ಎಲ್ಲ ವಿವರಗಳನ್ನು ಎತ್ತಿ ಕಾಣಿಸುವ ಪ್ರಯತ್ನಮಾಡಿದೆ.[೫೧]

ಮಹಮ್ಮದ ಆದಿಲ್‌ಶಾಹನ ಕಾಲಕ್ಕೆ ಸಂಬಂಧಿಸಿದ ರಾಯಚೂರ ಕೋಟೆಯಲ್ಲಿರುವ ಖಾದರಿಯಾ ಬುರುಜ ಮೇಲಿನ ಶಾಸನ ಈಗ ಹೈದ್ರಾಬಾದಿನ ವಸ್ತುಸಂಗ್ರಹಾಲದಲ್ಲಿದೆ. ಈ ಶಾಸನವು ಸೈಯ್ಯದ ಹುಸೇನನ ಮಗನಾದ ಫಜಲ್ಲುಲ್ಲಾನು ಬುರುಜನ್ನು ಕಟ್ಟಿಸಿದ ಬಗ್ಗೆ ವಿವರಿಸುತ್ತದೆ. ಅಲ್ಲದೆ ಇದರ ಮೇಲಿನ ಅಲಂಕಾರಿಕ ಲಿಪಿಯು ತುಲುತ್. ಇದು ಅತ್ಯಂತ ಮನಹೋಹಕವಾಗಿ ಬರೆಯಲಾಗಿದೆ. ರಾಚೂರನಲ್ಲಿಯೇ ಇರುವ ಖುಸರೋ ಬುರುಜಿನ ಮೇಲಿನ ಶಾಸನ ಈಗ ಇದು ಹೈದ್ರಾಬಾದ ವಸ್ತಸಂಗ್ರಹಾಲಯದಲ್ಲಿದೆ. ಇದು ಸಹ ಅಲಂಕಾರಿಕ ಲಿಪಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಇದರ ಮೇಲಿನ ಅಲಂಕಾರಿಕ ಲಿಪಿಯು ತುಲುತ್ ಶೈಲಿಯಲ್ಲಿದೆ. ಆದಿಲ್‌ಶಾಹಿ ಸುಲ್ತಾನರು ತಮ್ಮ ತಾಮ್ರದ ನಾಣ್ಯಗಳ ಮೇಲೆ ತುಲುತ್ ಮತ್ತು ನಸ್ಖ ಅಲಂಕಾರಿಕ ಲಿಪಿ ಬಳಿಸಿದ್ದಾರೆ. ಮಹಮ್ಮದ ಆದಿಲ್‌ಶಾಹನು ತನ್ನ ಬಂಗಾರದ ನಾಣ್ಯದ ಮೇಲೆ ತನ್ನ ಮತ್ತು ಪ್ರವಾದಿ ಮಹಮ್ಮದರ ಹೆಸರನ್ನು ನಸ್ಖ ಶೈಲಿಯ ಅಲಂಕಾರಿಕ ಲಿಪಿಯಲ್ಲಿ ಬರೆಸಿದ್ದಾನೆ.[೫೨]

[illegible]

[illegible]

[illegible]

[illegible]

ವರ್ಣಚಿತ್ರಗಳಲ್ಲಿ ಅಲಂಕಾರಿಕ ಲಿಪಿ : ಬಿಜಾಪುರದ ವರ್ಣಚಿತ್ರಕಲೆಯಲ್ಲಿ ಇದುವರೆಗೆ ಒಟ್ಟು ಆರು ಯೋಗಿನಿಯರ ಚಿತ್ರಗಳು ಬೆಳಕಿಗೆ ಬಂದಿದ್ದು, ಅದರಲ್ಲಿ ಲಂಡನ್ನಿನ ಬ್ರಿಟಿಷ ವಸ್ತುಸಂಗ್ರಹಾಲಯದಲ್ಲಿರುವ, ೧೫೯೪ ಕಾಲಮಾನದ ಯೋಗಿನೀ ವರ್ಣಚಿತ್ರವು ಹಲವು ಕಾರಣಗಳಿಂದಾಗಿ ಬಹು ಪ್ರಸಿದ್ಧವಾದುದು. ಈ ಚಿತ್ರದ ಪರಿಧಿಯಲ್ಲಿನ ಆಯತಾಕಾರದ ಎರಡು ಚೌಕಟ್ಟುಗಳಲ್ಲಿ ಉತ್ತಮ ರೀತಿಯ ನಸ್ತಾಲಿಖ್ ಶೈಲಿಯ ಬರಹಗಳಿವೆ. ಇವು ಸೂಫಿಪಂಥದ ದೈವಿಕ ಅನುಭೂತಿಯ ವಿರಹ, ಮಿಲನಗಳನ್ನು ಕುರಿತ ನಿಗೂಢ ಸಂಕೇತಾರ್ಥದ ಪ್ರತೀಕಗಳಿಂದ ತುಂಬಿದ ಕಾವ್ಯಮಯ ದ್ವಿಪದಿಯ ಸಾಲುಗಳು. ಕ್ಷಣಭಂಗುರತೆಯನ್ನು ಸಂಕೇತಿಸುವ ಮಾಯಾಸ್ವರೂಪದ ಮೋಡಗಳಲ್ಲಿ ಈ ಕವಿತೆಗಳನ್ನು ಬರೆಯಲಾಗಿದೆ.[೨೪]

ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಅನೇಕ ವರ್ಣ ಭಾವಚಿತ್ರಗಳಲ್ಲಿ ಜಹುರಿ ರಚಿಸಿದ ಎದೆಮಟ್ಟದ ಭಾವಚಿತ್ರ ಪ್ರಸಿದ್ಧವಾದುದ್ದು, ಇದರಲ್ಲಿ ಸುಲ್ತಾನನು ಬಿಜಾಪುರ ಶೈಲಿಯ ವಿಶೇಷ ರೀತಿಯ ರುಮಾಲು ಧರಿಸಿದ್ದಾನೆ. ಇದರ ಅಂಚಿನಲ್ಲಿ ಉತ್ತಮ ನಸ್ತಾಲೀಖ್ ಲಿಪಿಯಲ್ಲಿರುವ ಪರ್ಷಿಯನ್ ಬರಹ ಕವಿತೆಯ ಸಾಲುಗಳ ರೂಪದ್ದು. ದೊರೆ ಇಬ್ರಾಹಿಮನನ್ನು ಖುರಾನಿನಲ್ಲಿ ಹೆಸರಿಸಲಾದ ಸಂತ ಇಬ್ರಾಹಿಮರ ಬಿರುದಾದ ಖಲೀಲ್ ಎಂದು ಕರೆದಿದೆ. ಜುಹೂರಿಯೇ ಬರೆದ ಸೇಹ್ರ ನಸ್ರ ಕೃತಿಯಲ್ಲಿರುವ, ಇಬ್ರಾಹಿಮರ ಪ್ರಶಂಸೆಯ ರೂಪದ ಕವಿತೆಯ ಹೆಸರೂ ಖಾನ್–ಇ–ಖಲೀಲ್.

ಸೂಫಿ ಅನುಭೂತಿಯ ಚಿತ್ರಣ–ಮಹಮ್ಮದ, ಅಲ್ಲಾ ಮತ್ತು ಅಲೀ ಎಂಬ ಮೂರು ಹೆಸರುಗಳನ್ನು ಎರಡೆರಡು ಸಲ ಬಳಸಿ ರೂಪಿಸಿದ ಮನುಷ್ಯರೂಪದ ಚಿತ್ರಣ, ನಸ್ತಾಲೀಖ ಶೈಲಿಯ ಬರೆಹ, ಭಯಭೀತಿಗಳನ್ನು ದೂರಮಾಡುವ ಉದ್ದೇಶದಿಂದ ಇಂತಹ ಚಿತ್ರಣವನ್ನು ಸೂಫಿ ಅನುಯಾಯಿಗಳು ತಾಮ್ರದ ತಗಡಿನಲ್ಲಿ ಬರೆಸಿ ತಾಯತದಂತೆ ಉಪಯೋಗಿಸುತ್ತಿದ್ದರು. ಈ ಅಲಂಕಾರಿಕ ಲಿಪಿ ಶೈಲಿಯನ್ನು ಖತ್ತ್–ಇ–ಮುಥನ್ನಾ ಎಂದು ಕರೆಯಲಾಗುತ್ತದೆ. ಇದರ ಇನ್ನೊಂದು ಹೆಸರು ಐನಾಲಿ–ಯಾಜಿ (ಪ್ರತಿಬಿಂಬಿತ ಶೈಲಿ)[೨೫].

ಹಸ್ತಪ್ರತಿಯಲ್ಲಿಯ ಅಲಂಕಾರಿಕ ಲಿಪಿ : ಆದಿಲ್‌ಶಾಹಿ ಸುಲ್ತಾನರು ಸಾಹಿತ್ಯಪ್ರೇಮಿಗಳಾಗಿದ್ದು ಸಾಹಿತ್ಯಿಕ ಚಟುವಟಿಕೆಗಳನ್ನು ಉದಾರವಾಗಿ ಪ್ರೋತ್ಸಾಹಿಸಿದರು.[೨೬] ಎರಡನೆಯ ಇಬ್ರಾಹಿಮ, ಮಹಮ್ಮದ ಆದಿಲ್‌ಶಾಹ ಮೊದಲಾದ ಸುಲ್ತಾನರು ಸ್ವತಃ ಉತ್ತಮ ವಿದ್ವಾಂಸರೆಂದು ಪ್ರಸಿದ್ಧರಾಗಿದ್ದಾರೆ. ಅವರ ಸಾಹಿತ್ಯಾಸಕ್ತಿಯ ಫಲವಾಗಿ ಆ ಕಾಲದ ಶಾಸ್ತ್ರ ಹಾಗೂ ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ರಚಿತವಾದ ಅನೇಕ ಕೃತಿಗಳ ಹಸ್ತಪ್ರತಿಗಳು ದೊರೆತಿವೆ. ಇವು ಸುಲ್ತಾನರ ಆಸ್ಥಾನದಲ್ಲಿದ್ದ ಇತಿಹಾಸಕಾರರು, ಶ್ರೇಷ್ಠಕವಿಗಳು, ಸೂಫಿಸಂತರು ಹಾಗು ವಿವಿಧ ವಿಷಯಗಳ ವಿದ್ವಾಂಸರು ರಚಿಸಿದ ಕೃತಿಗಳು ಪರ್ಷಿಯನ ಮತ್ತು ಅರೇಬಿಕ ಭಾಷೆಗಳಲ್ಲಿ ಕಾಗದದ ಮೇಲೆ ಕೈಯಲ್ಲಿ ಬರೆದವು. ಅತ್ಯಂತ ಅಲಂಕೃತ ನಸ್ತಾಲಿಖ್, ನಸ್ಖ್ ಮತ್ತು ರಿಬಾ ಶೈಲಿಗಳು ಹಸ್ತಪ್ರತಿಗಳಲ್ಲಿ ಹೆಚ್ಚಾಗಿ ಬಳಸಲಾಗಿದೆ. ಕೆಲವು ಶ್ರೇಷ್ಠ ಲಿಪಿಕಾರು ಹಸ್ತಪ್ರತಿಯ ಒಂದೇ ಪುಟದಲ್ಲಿ ಒಂದಕ್ಕಿಂತ ಹೆಚ್ಚು ಶೈಲಿಗಳನ್ನು ಬಳಸಿ ತಮ್ಮ ಪರಿಣತಿ ಪ್ರದರ್ಶಿಸಿದ್ದಾರೆ. ಮುಖ್ಯ ಕೃತಿಗಳ ಮುಖಪುಟ

ಹಾಗೂ ಕೊನೆಯ ಪುಟಗಳಂತೂ ಅತ್ಯಂತ ಕಲಾತ್ಮಕವಾಗಿ ಸಿಂಗರಿಸಲಾಗಿದೆ. ಕುರಾನಿನ ಕೆಲವು ಮುಖ್ಯ ದ್ವಿಲಿಪಿ ಶೈಲಿಯ ಹಸ್ತಪ್ರತಿಯ ಪ್ರತಿ ಪುಟದಲ್ಲಿ ಬರೆಹವಿರುವ ಸ್ಥಳದ ಮೊದಲ, ಕಡೆಯ ಹಾಗೂ ನಟ್ಟನಡುವಣ ಸಾಲುಗಳನ್ನು ಮೋಹಕ ಶ್ರೇಷ್ಠ ಮಾದರಿಯ ನಸ್ತಾಲಿಖ್‌ನಲ್ಲಿ ಮತ್ತು ನಡುವೆ ಐದೈದು ಸಾಲುಗಳನ್ನು ಶಿಕಸ್ತಾದಲ್ಲಿ ಬರೆದು ಆಕರ್ಷಕವಾಗಿಸಿವೆ. ಹೀಗೆ ಈ ಕಾಲದಲ್ಲಿ ವಿಫಲವಾಗಿ ಸಾಹಿತ್ಯ ರಚಿತವಾಗಿದೆ. ಉದಾಹರಣೆಗಾಗಿ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿ ರಚಿತವಾದ ಪ್ರಮುಖ ಗ್ರಂಥವೆಂದರೆ 'ಕಿತಾಬ-ಇ-ನೌರಸ' ಇದು ತುಲುತ್ ಮತ್ತು ನಸ್ಖ ಅಲಂಕಾರಿಕ ಶೈಲಿಯಲ್ಲಿದೆ.[೫೭]

೪. ಸಾಹಿತ್ಯ :

ಆದಿಲ್‌ಶಾಹಿ ಸುಲ್ತಾನರು ಸಾಹಿತ್ಯಕ್ಕೆ ಮತ್ತು ಕವಿಗಳಿಗೆ ಆಶ್ರಯ ಕೊಟ್ಟಿದರಲ್ಲದೆ ಸ್ವತಃ ವಿದ್ವಾಂಸರು ಮತ್ತು ಕವಿಗಳಾಗಿದ್ದರು. ಆದ್ದರಿಂದ ಇವರ ಆಸ್ಥಾನದಲ್ಲಿ ಪರ್ಶಿಯಾ ಮತ್ತು ಭಾರತದ ಇತರ ಮೂಲೆಗಳಿಂದ ಬಂದ ವಿದ್ವಾಂಸರಿದ್ದರು. ಇವರ ಎರಡು ಶತಮಾನದ ಆಳ್ವಿಕೆಯಲ್ಲಿ ದೊಡ್ಡ ಪ್ರಮಾಣದ ಲೌಕಿಕ ಮತ್ತು ಧಾರ್ಮಿಕ ಸಾಹಿತ್ಯ ರಚನೆಯಾಯಿತು.[೫೮] ಇತಿಹಾಸ, ಕಾವ್ಯ, ಗದ್ಯ, ಸಾದು-ಸಂತರ ಜೀವನ ಚರಿತ್ರೆ ಮತ್ತು ವೈದಿಕೀಯ ಶಾಸ್ತ್ರ ಸಾಹಿತ್ಯ ರಚನೆಯಾಯಿತು. ಈ ಕಾಲದಲ್ಲಿ ಭಾಷೆಗಳಿಗೂ ಪ್ರೋತ್ಸಾಹ ದೊರೆಯಿತು. ಈ ಕಾಲದ ಪ್ರಮುಖ ಭಾಷೆಗಳೆಂದರೆ ಪರ್ಶಿಯನ್, ಸಂಸ್ಕೃತ, ದಖನಿ ಉರ್ದು ರಾಜ್ಯದಲ್ಲಿ ಮಹತ್ವದ ಸ್ಥಾನ ಲಭಿಸಿತ್ತು. ಇದಲ್ಲದೇ ಮರಾಠಿ ಭಾಷೆಯಲ್ಲಿ ಲೆಕ್ಕ ಪತ್ರಗಳನ್ನು ಬರೆದಿಡುತ್ತಿದ್ದರು.

ಆದಿಲ್‌ಶಾಹಿ ಸುಲ್ತಾನರ ಕಾಲದಲ್ಲಿ ಲೌಕಿಕ ಸಾಹಿತ್ಯ ಈ ಕೆಳಗಿನಂತಿದೆ.

೧. ಮಹಮ್ಮದ ಕಾಸಿಂ ಹಿಂದೂಶಾಹ ಫೇರಿಸ್ಥಾ – *ತಾರೀಖ-ಇ-ಫೇರಿಸ್ಥಾ* ಅಥವಾ ಗುಲಝಾರ-ಇ-ಇಬ್ರಾಹಿಮಿ ಅಥವಾ ನವರಸನಾಮಾ

೨. ಮೀರ ರಫಿಯುದ್ದೀನ ಶಿರಾಜಿ-ಬಿನ್-ನೂರುದ್ದೀನ್ ತೌಫೀಕ ಹುಸೇನ್ ಶಿರಾಜಿ – *ತಜಕೀರಾತ-ಉಲ್ಲ*-ಮುಲ್ಕ

೩. ಮಹಮ್ಮದ ಹಾಸೀಂ ಫಜುನಿ ಅಸ್ತರಾಬಾದಿ – *ಪುತುಹಾತ –ಇ– ಆದಿಲ್‌ಶಾಹಿ*

೪. ಮಹಮ್ಮದ ಹಸನ – ತಜಕೀರಾತ-ಉಲ್-ಮುಲ್ಕಗೆ ಪುರವಣಿ (Appendix to Tazkirat-ul-Mulk)

೫. ಜಹುರ-ಬಿನ್-ಜಹುರಿ – *ಮಹಮ್ಮದ ನಾಮಾ*

೬. ಅನಾಮಿಕ ಬರೆದ *ಗುಲದಸ್ಥಾ ಗುಲಶನ-ಇ-ರಾಝು, ದರ ತಾರೀಫ-ಇ-ಮಹಮ್ಮದ ಆದಿಲ್‌ಶಾಹ.*

೭. ಖಾಜಿ ನೂರುಲ್ಲಾ – *ತಾರೀಖ-ಇ-ಅಲಿ ಆದಿಲ್‌ಶಾಹಿ*

೮. ಮೀರ ಇಬ್ರಾಹಿಮ *ಲಾರಿ-ಇ-ಅಸದಖಾನ– ತವ್ವಾರೀಖ-ಇ-ಹಫ್ತ ಕುರ್ಶಿ*

೯. ಶೇಖ ಅಬ್ದುಲ್ ಹಸನ ಖಾಜಿ ಅಬ್ದಲ್ ಅಜೀಜ– ಆದಿಲ್‌ಶಾಹಿಗಳ ಸಂಪೂರ್ಣ ಇತಿಹಾಸ.[೫೯]

ಇದಲ್ಲದೇ ಪಂಡಿತ ನರಹರಿಯ – ನವರಸ ಮಂಜರಿಯು ಸಂಸ್ಕೃತ ಭಾಷೆಯಲ್ಲಿ ಬರೆಯಲಾಗಿದೆ. ಜಹುರಿಯ ನವರಸ ಗುಲಜಾರ–ಇ–ಇಬ್ರಾಹಿಮಿ ಮತ್ತು ಖಾವಾನ–ಇ–ಖಲೀಲ ಹಾಗೂ ನುಸರತಿಯ – ಅಲಿನಾಮಾ, ತಾರೀಖ–ಇ–ಸಿಕಂದರಿ ಮುಂತಾದವುಗಳು ಐತಿಹಾಸಿಕ ಮಹತ್ವ ಪಡೆದ ಗ್ರಂಥಗಳಾಗಿವೆ.

ಆದಿಲ್‌ಶಾಹಿ ಸುಲ್ತಾನರ ಆಸ್ಥಾನವು ಕವಿಗಳಿಗೆ ಸ್ವರ್ಗದಂತಿತ್ತು. ಹಾಗಾಗೀ ಇವರ ಆಸ್ಥಾನದಲ್ಲಿ ಅನೇಕ ಪ್ರಸಿದ್ದ ಕವಿಗಳು ಇದ್ದರು. ಅವರ ಹೆಸರು ಮತ್ತು ಗ್ರಂಥಗಳು ಈ ರೀತಿಯಾಗಿವೆ, ಎರಡನೆ ಇಬ್ರಾಹಿಮನ ಆದಿಲ್‌ಶಾಹನ ಆಸ್ಥಾನದ ಕವಿಗಳಾದ ಮಲ್ಲಿಕ ಕುಮಿಯು ಕುಲಿಯಾತ, ಮಸನವಿ, ತಕಿಬ ಬಂದ, ತರಜಿಬಂದ, ಅಸರಾರ–ಇ–ಐಮನ, ಸಾಕಿನಾಮಾ ಮುಂತಾದ ಗ್ರಂಥಗಳನ್ನು ಬರೆದರೆ, ಇವನ ಅಳಿಯನಾದ ಜಹುರಿಯು ಕುಲಿಯಾತ–ಇ–ಜಹುರಿ, ಸಾಕಿನಾಮಾ, ಪಂಜ–ರುಖುತ್, ಮೀನಾ ಬಜಾರ, ಸಾಹ ನಸರ, ಮತಮಹ–ಉಲ್–ಅಂಜರ್ ಇನ್ನೊಬ್ಬ ಅಳಿಯನಾದ ಮಹಮ್ಮದ ಹಾಸೀಂ ಸಂಜರ–ಇ–ಕಾಸೀ ಬರೆದ ದಿವಾನ, ಸಾಕಿನಾಮಾ, ಮೈಖಾನಾ ಮುಂತಾದವುಗಳು. ಮುಲ್ಲಾ ಹೈದರನ ಕವಿತೆಗಳ ಸಂಗ್ರಹ ಇತ್ಯಾದಿ. ಎರಡನೆಯ ಇಬ್ರಾಹಿಮನು ಕವಿಗಳಿಗೆ ದರ್ಬಾನಲ್ಲಿ ಪ್ರತಿ ವಾಕ್ಚತುರ್ಯರ ಪದ ಸಮುಚ್ಚಯ ಪದ್ಯದ ಎರಡು ಸಾಲುಗಳಿಗೆ ನಾಲ್ಕು ಸಾವಿರ ಹೊನ್ನಗಳನ್ನು ಬಹುಮಾನವಾಗಿ ಕೊಡುತ್ತಿದ್ದನು. ಇನ್ನೊಂದು ಸಂದರ್ಭದಲ್ಲಿ ಬಹುಮಾನವಾಗಿ ಒಂದು ಒಂಟೆಯ ತುಂಬಿದ ಚಿನ್ನವನ್ನು ಕೊಡುತ್ತಿದ್ದನು. ಅಬು ತಾಲಿಬ ಕಾಶಹಾನಿಯು ದಿವಾನ ಎಂಬ ಕಾವ್ಯ ಸಂಗ್ರಹ ಬರೆದನು. ಎರಡನೆ ದರ್ಜೆಯ ಅಬ್ದುಲ್ ಖಾದಿರ ನುಸರತಿ, ಹಸನ ಅಸ್ಕರಿ ಕಾಶಾನಿ, ನೌರಸ ಖುಜುನಿ ಮಹಮ್ಮದ ನಮಿ ಬಖೈರ, ಶಹಬಾಜ ಹುಸೇನಿ ಮತ್ತು ಅಬ್ದಲ್.[೬೦] ತಂದೆಯ ಹಾಗೆ ಮಹಮ್ಮದ ಆದಿಲ್‌ಶಾಹನು ಕೂಡ ಇದೇ ಸಂಪ್ರದಾಯವನ್ನು ಮುಂದುವರೆಸಿದನು. ಇವನ ಆಸ್ಥಾನದ ಕವಿಗಳೆಂದರೆ, ಮೀರ್ಜಾ ಕುಂಮಿಯು ಫತೇನಾಮಾ ಬಿಖರಿ, ದಿವಾನ–ಇ–ಖಮ್ಸಾ ಮತ್ತು ಚಂದ್ರ ಬದನ ವಾ ಮಹೀಯಾರ ಬರೆದರೆ, ಶೇಖ ಮಹಮ್ಮದ ಶರೀಫ ಅಜೀಜನು ಯುಸುಫ ಜುಲೇಖಾ ಮತ್ತು ಲೈಲಾ ಮಜನು ಬರೆದನು. ಸೈಯದ ಹಸನ ಶಾಹ ಮೈಹಿಯುದೀನ್ ಸನ್ನತಿ ಬರೆದ ಮಸನವಿ, ಕಿಸಾ ಬೇನಜೀರ ಮತ್ತು ಗುಲದಸ್ಥಾ. ಮಲೀಕ ಖುಷನುದನು ಜನ್ನತ ಸಿಂಗಾರ ಮತ್ತು ಅಮೀರ ಖುಸುರುವಿನ ಮಸನವಿಗಳನ್ನು ಪರ್ಶಿಯನ ಭಾಷೆಯಿಂದ ದಖನಿ ಉರ್ದು ಭಾಷೆಗೆ ಭಾಷಾಂತರಿಸಿದನು. ಇವು ಆ ಕಾಲದಲ್ಲಿ ಬಹಳ ಜನಪ್ರೀಯವಾಗಿ ಇವುಗಳನ್ನು ಯುಸುಫ ಜುಲೇಖಾ, ಹಸ್ತ ಬಹಿಸ್ತ ಮತ್ತು ಬಜಾರ–ಇ–ಹುಸ್ನ ಎಂದು ಕರೆದರು. ಇವನು ಬರೆದ ಗ್ರಂಥ ಕುಲೀಯಾತ–ಇ–ಶಾಹಿ. ಮಹಮ್ಮದ ಆದಿಲ್‌ಶಾಹನ ಆಸ್ಥಾನವು ಪ್ರಸಿದ್ಧ ಕವಿಗಳಾದ ಮುಖಿಮಿ, ಸನ್ನತಿ, ಶೇಖ ಮಹಮ್ಮದ ಶರೀಫ ಅಜೀಜ, ಮಲ್ಲಿಕ ಖುಶುನುದ ಮತ್ತು ಗವ್ವಾಸಿ. ಗವ್ವಾಸಿ ಇವನು ಸೈಫ–ಉಲ್–ಮುಲ್ಕ ವಾ ಬಡಿಯಾ–ಅಲ್–ಜಮಾಲ್ ಗ್ರಂಥಗಳನ್ನು ಅರೇಬಿಕ್ ಭಾಷೆಗೆ ಭಾಷಾಂತರಿಸಿದನು. ಇದೇ ಕಾಲದಲ್ಲಿ ಶಾಹ ದಾವಲ ಬರೆದ ಕಶಫ–ಉಲ್–ವಜುದ, ಕಶಫ–ಉಲ್–ಅನ್ವರ, ಚಾರನತ್ನ ಅಥವಾ ಚಾರ ಶಾಹದತ ಮತ್ತು ನಾರಿನಾಮಾ ಬರೆದನು. ಮಹಮ್ಮದ ಅಮೀನ್ ಅಯ್ಯಗಿಯು ನಜಹತ ನಾಮಾ, ಮಸನವಿ ಫರಾಯಿಜ್ ಮತ್ತು ಮೊಹಿದ್ದೀನ ನಾಮಾ ರಚಿಸಿದನು. ಶಾಹ ಅಲಂ ಶುಗಲಿ ಬಿಜಾಪುರಿಯು ಪಿಂದ ನಾಮಾ ಮತ್ತು ಕಲಾಮ–ಇ–ಶುಗಲಿ ಬರೆದನು. ಶೇಖ

ನುಸರತಿಯು ನುಸರತಿ ಎಂಬ ಕಾವ್ಯನಾಮದಿಂದ ಬರೆದ ಮಲಿಕ್–ಉಸ್–ಶೋಹರಾ ಮತ್ತು ಗುಲಶನ–ಇ–ಇಶ್ಕ, ಅಲಿನಾಮಾ ಪ್ರಮುಖ ಗ್ರಂಥಗಳನ್ನು ಬರೆದನು. ಸೈಯದ ಮೀರಾನ ಹಾಸಿಂನು ಯುಸೂಫ ಜುಲೇಖಾ, ಪಿಂದ ವ ನಶ್ಯಾ–ಇ–ಜಹಾನ, ರಿಸಾಲ್ಹಾ–ಇ–ನಿಜತ್ ನಾಮಾ, ಮೇರಾಜನಾಮಾ, ಮಸನವಿ ಇಶ್ಕಿಯಾ ಮತ್ತು ದಿವಾನ–ಇ–ಹಾಸಿಂ ಗ್ರಂಥಗಳನ್ನು ರಚಿಸಿದನು.[೬೧] ಹೀಗೆ ಇವರ ಕಾಲದಲ್ಲಿ ಅನೇಕ ಸಾಹಿತ್ಯಿಕ ಗ್ರಂಥಗಳು ರಚನೆಯಾದವು.

೧. ಇಂಡೋ–ಪರ್ಶಿಯನ್ನ ಮತ್ತು ದಖನಿ ಸಾಹಿತ್ಯ :

ಆದಿಲ್‌ಶಾಹಿಗಳು ಮತ್ತು ಕುತ್ಬುಶಾಹಿಗಳು ಇರಾನಿ ಮತ್ತು ಆಫಕಿಗಳಿಗೆ ತಮ್ಮ ಆಸ್ಥಾನದಲ್ಲಿ ಆಶ್ರಯ ಕೊಟ್ಟಿದ್ದರು. ಇಮು

ಅಧಿಕ ಸಂಖ್ಯೆಯಲ್ಲಿ ಇರಾನದಿಂದ ಧರ್ಮ ಗುರುಗಳು. ವಿದ್ವಾಂಸರು, ಬರಹಗಾರರು ಮತ್ತು ಕವಿಗಳು ಬಿಜಾಪುರಕ್ಕೆ ಬಂದು ಇಲ್ಲಿಯೇ ನೆಲೆಸಿದರು. ಎರಡನೆ ಇಬ್ರಾಹಿಮನ ಕಾಲದಿಂದ ಸಿಕಂದರ ಸಿಕಂದರ ಆದಿಲ್‌ಶಾಹನ ಅವಧಿಯು ಬಿಜಾಪುರ ಸಾಹಿತ್ಯದ ಉನ್ನತ ಕಾಲವಾಗಿತ್ತು.[೬೨]

ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ಸ್ವತಃ ವಿದ್ವಾಂಸ, ಕವಿ ಹಾಗೂ ಸಂಗೀತಗಾರನಾಗಿದ್ದನು. ಇವನು ಅನೇಕ ಜನ ವಿದ್ವಾಂಸರು, ಧರ್ಮಗುರುಗಳನ್ನು ತನ್ನ ಆಸ್ಥಾನದಲ್ಲಿ ಆಶ್ರಯಕೊಟ್ಟಿದ್ದನು. ಜೋರೆಯವರ ಅಭಿಪ್ರಾಯ ಪ್ರಕಾರ ಮಧ್ಯಕಾಲದಲ್ಲಿ ಮೊಗಲರ ಶ್ರೇಷ್ಠ ಬಾದಶಹನಾದ ಅಕ್ಬರನನ್ನು ಹೊರತುಪಡಿಸಿದರೇ ಬಿಜಾಪುರದ ಇಬ್ರಾಹಿಮ ಆದಿಲ್‌ಶಾಹನು ಮಾತ್ರ ತನ್ನ ಆಸ್ಥಾನದಲ್ಲಿ ಇಂತಹ ಶ್ರೇಷ್ಠ ಮತ್ತು ಘನವಿದ್ವಾಂಸರನ್ನು ಹೊಂದಿದ್ದು ಇವನ ಸಾಹಿತ್ಯಕ್ಕಿರುವ ಅಭಿರುಚಿಯನ್ನು ತೋರಿಸುತ್ತದೆ.[೬೩]

ಬಿಜಾಪುರದ ಸಂಸ್ಕೃತಿಯ ಮೇಲೆ ಸಾಹಿತ್ಯದ ಗಾಢವಾದ ಪ್ರಭಾವ ಬಿರಿದೆ. ಪರ್ಶಿಯನ್ ಮತ್ತು ದಖನಿ ಸಾಹಿತ್ಯಕ್ಕೆ ಆದಿಲ್‌ಶಾಹಿ ಸುಲ್ತಾನರ ಕೊಡುಗೆ ತುಂಬಾ ಶ್ರೇಷ್ಠವಾದುದು. ಉರ್ದು ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗೆ ಬಿಜಾಪುರವು ಬಹಳ ಮೊದಲಿನಿಂದಲೂ ಶ್ರೇಷ್ಠವೆನಿಸಿದೆ. ಆ ಕಾಲದಲ್ಲಿ ದಖನಿ ಭಾಷೆಯಲ್ಲಿ ತುಂಬಾ ಮಹತ್ತರವಾದ ಕೃತಿಗಳು ರಚನೆಯಾದವು. ದಖನನಲ್ಲಿ ದಖನಿ ಭಾಷೆಯೂ ಬಿಜಾಪುರ ಸುಲ್ತಾನರ ಆಳ್ವಿಕೆಯಲ್ಲಿ ತುಂಬಾ ಬೆಳವಣಿಗೆ ಹೊಂದಿತು. ಆದಿಲ್‌ಶಾಹಿ, ಕುತುಬಶಾಹಿ ಮತ್ತು ನಿಜಾಮಶಾಹಿ ಆಳ್ವಿಕೆಯಲ್ಲಿ ಪರ್ಶಿಯನ ಸಾಹಿತ್ಯದ ಬೆಳವಣಿಗೆಯೂ ಪ್ರಮುಖ ಪಾತ್ರವಹಿಸಿದೆ[೬೪]. ಪರ್ಶಿಯನ ಸಾಹಿತ್ಯದ ಮೇಲೆ ಮೊದಲು ಬೆಳಕು ಚಲ್ಲಿದರೆಂದರೆ ಡಾ॥ ಟಿ.ಎನ್. ಡವರೆಯವರು ತಮ್ಮ ಗ್ರಂಥವಾದ "ಎ ಶಾರ್ಟ ಹಿಸ್ಟ್ರೀ ಆಫ್ ಪರ್ಶಿಯನ ಲೀಟರೇಚರ". ಎಂಬ ಪ್ರಬಂಧವು ಶ್ರೇಷ್ಠ ಕೃತಿಯಾಗಿದ್ದು, ಪರ್ಶಿಯನ ಸಾಹಿತ್ಯದ ಬೆಳವಣಿಗೆಯ ಮೇಲೆ ಬೆಳಕನ್ನು ಚೆಲ್ಲುತ್ತದೆ. ಇದಲ್ಲದೆ ಪ್ರೋ. ಸಿ.ಎ. ಸ್ಟೋರೀ ಯವರ " ಪರ್ಶಿಯನ ಲೀಟರೇಚರ್ ಬಿಬಿಲೋಗ್ರಾಫಿಕಲ್ ಸರ್ವೆ ಎಂಬ ಗ್ರಂಥವು ಬಿಜಾಪುರದಲ್ಲಿಯ ಪರ್ಶಿಯನ ಕೃತಿಗಳ ಬಗ್ಗೆ ಸುಳಿವು ನೀಡುತ್ತದೆ. ಇದೇ ತರಹ ಬಿಜಾಪುರದಲ್ಲಿ ದಖನಿ ಸಾಹಿತ್ಯದ ಬಗ್ಗೆ ಅನೇಕ ವಿದ್ವಾಂಸರು ಕೆಲಸ

ಮಾಡಿದ್ದಾರೆ. ಅವರಲ್ಲಿ ಪ್ರಮುಖರಾದವರೆಂದರೆ, ಪ್ರೋ.ಮುಹಿದ್ದೀನ. ಖಾದರಿ. ಫ್ರೋ ಅಕ್ಬರುದ್ದೀನ ಸಿದ್ದಿಕಿ,. ಪ್ರೋ ಮುಜರಿಜುದ್ದೀನ ರಫ್ಪತ್. ಪ್ರೋ. ಹಾಫೀಜ ಕತೀಬ ಮತ್ತು ಪ್ರೋ. ಅಬ್ದುಲ್ ಹಕ್ ಇವರೆಲ್ಲರೂ ಆ ಕಾಲದ ದಖನಿ ಸಾಹಿತ್ಯದ ಹಸ್ತಪ್ರತಿಗಳನ್ನು ಉರ್ದು ಭಾಷೆಯಲ್ಲಿ ಅನುವಾದಿಸಿದ್ದಾರೆ.[೬೫] ಇನ್ನೂ ಹಲವಾರು ಆಧ್ಯಾತ್ಮಿಕ ದಖನಿ ಹಸ್ತಪ್ರತಿಗಳು ಅನುವಾದವಾಗೆ ಉಳಿದಿವೆ. ಇವುಗಳೆಲ್ಲವು ಹೈದ್ರಾಬಾದಿನಲ್ಲಿರುವ ಇದಾರಾ-ಇ-ಅದಬಿಯಾತೆ-ಉರ್ದು, ಸಾಲಾರಜಂಗ ವಸ್ತುಸಂಗ್ರಹಾಲಯ ಮತ್ತು ಅಸಾಫಿಯಾ ಗ್ರಂಥಾಲಯದಲ್ಲಿ ಇವೆ. ಫ್ರೋ. ಮ್ಯಾಕ್ಸವೆಲ್ಲ ಇಟನ್ನರು ಕೆಲವು ದಾಖಲೆಗಳನ್ನು ತನ್ನ ಗ್ರಂಥವಾದ "ಸೂಫಿಜ್ ಆಫ್ ಬಿಜಾಪುರದಲ್ಲಿ ಉಪಯೋಗಿಸಿಕೊಂಡಿದ್ದಾರೆ.

ಆದಿಲ್‌ಶಾಹಿ ಸುಲ್ತಾನರು ಇರಾನ, ತುರಾನ, ಅರೇಬಿಯಾ, ಕಶಾನ, ಇಸ್ಪಹಾನ, ಶಿರಾಜ ಮತ್ತು ಇರಾಕದಿಂದ ವಿದ್ವಾಂಸರು ಮತ್ತು ಕವಿಗಳನ್ನು ತಮ್ಮ ಆಸ್ಥಾನಕ್ಕೆ ಆಹ್ವಾನಿಸಿದರು. ಅವರ ಆಶ್ರಯದ ಈ ಸುದ್ದಿ ಅನೇಕ ದೇಶಗಳಲ್ಲಿ ಹಬ್ಬಿತು. ಇದನ್ನರೀತ ಅನೇಕ ವಿದ್ವಾಂಸರು ಮತ್ತು ಕವಿಗಳು ತಮ್ಮ ದೇಶವನ್ನು ಬಿಟ್ಟು ಬಿಜಾಪುರದ ಸುಲ್ತಾನರ ಬಳಿ ಆಶ್ರಯ ಪಡೆದರು. ಇದರ ಪರಿಣಾಮವಾಗಿ (ಅಫಕಿ ವಿದ್ವಾಂಸರು) ಇಂಡೋ-ಪರ್ಶಿಯನ ಸಾಹಿತ್ಯವು ಬೆಳೆಯಲು ಕಾರಣವಾಯಿತು.

ಈ ಕಾಲದಲ್ಲಿ ಮೂರು ವರ್ಗದ ಜನರ ಸಹಾಯದಿಂದ ಸಾಹಿತ್ಯವು ಬೆಳೆಯಿತು. ಅವರೆಂದರೆ, ಸೂಫಿಗಳು, ಸುಲ್ತಾನರು ಮತ್ತು ಇನ್ನಿತರ ಸಾಹಿತಿಗಳು. ಸೂಫಿಗಳು ಧಾರ್ಮಿಕ ಸಾಹಿತ್ಯವನ್ನು ಪ್ರಸ್ತುತಪಡಿಸಿದರು.

ಅ) ಧಾರ್ಮಿಕ ಸಾಹಿತ್ಯ (ದಖನಿ ಪರ್ಶಿಯನ ಮತ್ತು ಅರೇಬಿಕ) :

ಆಧ್ಯಾತ್ಮಿಕ ಮತ್ತು ಧಾರ್ಮಿಕ ಸಾಹಿತ್ಯವು ಸೂಫಿ ಪಂತದ ಹರಡುವಿಕೆಯಿಂದಾಗಿ ಮಧ್ಯಕಾಲೀನ ದಖನಿನ್ನಲ್ಲಿ ಅದರಲ್ಲೂ ವಿಶೇಶವಾಗಿ ಬಿಜಾಪುರದಲ್ಲಿ ಬೆಳೆಯಿತು. ಬಹಳಷ್ಟು ಸೂಫಿಗಳು ಹೊರದೇಶ ಮತ್ತು ಭಾರತದ ವಿಭಿನ್ನ ಸ್ಥಳಗಳಿಂದ ಬಿಜಾಪುರಕ್ಕೆ ವಲಸೆ ಬಂದು ಇಲ್ಲಿಯೇ ನೆಲೆಸಿ[೬೬] ಪರ್ಶಿಯನ, ಅರೇಬಿಕ್ ಮತ್ತು ದಖನಿ ಭಾಷೆಗಳಲ್ಲಿ ಆಧ್ಯಾತ್ಮಿಕ ಕೃತಿಗಳನ್ನು ಪ್ರಸ್ತುತಪಡಿಸಿದರು.

ಬಿಜಾಪುರದ ಸೂಫಿಗಳು ಕೂಡ ಸಾಹಿತ್ಯದಲ್ಲಿ ಹಿಂದೆಬಿದ್ದಿರಲಿಲ್ಲ. ಇವರು ಕೂಡ ಗದ್ಯ ಪದ್ಯಗಳ ಸಹಾಯಗಳಿಂದಾಗಿ ಸಾಹಿತ್ಯ ಮತಷ್ಟು ಪ್ರಸಾರವಾಯಿತು. ಇವರ ಬರವಣಿಗೆಗಳು ಇಸ್ಲಾಮಿನ ಆಧ್ಯಾತ್ಮಿಕ ಬೋಧನೆಗಳನ್ನು ಒಳಗೊಂಡಿತ್ತು. ಸೂಫಿಗಳು ಸ್ಥಳೀಯ ಭಾಷೆಯಲ್ಲಿ ಜನರಿಗೆ ಭೋಧಿಸುತ್ತಿದ್ದರು. ಇವರು ಸರಳ ಮತ್ತು ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದರು. ಸೂಫಿಗಳು ತಮ್ಮ ಬರವಣಿಗೆಯಲ್ಲಿ ಜಾನಪದ ಗೀತೆಗಳು ರಚಿಸಿದ್ದರು. ಉದಾರಣೆಗಾಗಿ ಸುಹಾಗ ನಾಮಾ(ಮಧುಮಗಳ ಹಾಡು) ಶಾದಿ ಅಥವಾ ಲಗನ ನಾಮಾ (ಮದುವೆ ಹಾಡು) ಚರಕಾ ನಾಮಾ (ನೂಲುವ ಚಕ್ರದ ಹಾಡು) ಪಗಡಿ ಮತ್ತು ಅಂಕ್ ಮಚಾನಿ ಗೀತೆ, ಮುಂತಾದವುಗಳು.[೬೭] ಈ ಜನಪದ ಹಾಡುಗಳಿಂದ ಜನರು ಬಹಳ ವಿಷಯಗಳನ್ನು ತಿಳಿದು

ಕೊಳುತ್ತಿದ್ದರಲ್ಲದೆ, ಅವುಗಳನ್ನು ತಮ್ಮ ದಿನ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಸೂಫಿ ಸಂತರಾದ ಶಾಹ ಮಿರಾಂಜಿ ಶಮ್ಸ-ಉಲ್-ಉಷಾಕ ರವರು ಗಂಜ-ಇ-ಇರಫಾನ, ಶಾಹದತ-ಉಲ್-ಹಕೀಕ್, ಖುಷನಾಮ್ಮ ಖುಷನಾಜ, ಬಶರತ-ಉಲ್-ಜಿಕರ್, ಮಗಜ ಮರಗುಬ ಮುಂತಾದ ಗ್ರಂಥಗಳನ್ನು ರಚಿಸಿದರು. ಇವರ ಮಗನಾದ ಬುರಾನೋದ್ದೀನ್ ಜಾನಂರು ಇರಶಾದ ನಾಮಾ, ಹುಜ್ಜತ ನಾಮಾ, ಕಲಮತ-ಉಲ್-ಹಕೀಕ್, ಮಸನವಿ ಅಜಕರ, ಮನಫತ-ಉಲ್-ಇಮಾನ, ಸುಖ ಸಹೇಲಾ, ತಸೀಮ್-ಉಲ್-ಕಲಾಮ, ಇಬ್ರತ-ಇ-ಆದಂ, ನುಖಾತ್-ಇ-ವಹೀದ, ತೌಹೀದ-ಇ-ಹಕೀಕತ್, ಪಂಚ ಗಂಜ, ರೀಸಾಲಾಹ-ಇ-ತಸವುಪ್ಪ, ಕಲಮಾತ-ಉಲ್-ಇಸರಾರ್, ಮನತ-ಉಲ್-ಖುಲುಬ, ಮಖಸುದ-ಇ-ಇಬತದಾಯಿ, ಹಸ್ತ-ಇ-ಮಾಯಿಲ್, ರಮುಜ-ಉಲ್-ವಸೀಲಿಯನ, ಕುಫರ್ ನಾಮಾ, ಬಶರತ-ಉಲ್-ಜಿಕರ ಮುಂತಾದ ಗ್ರಂಥಗಳನ್ನು ರಚಿಸಿದರು. ಇವರ ಪುತ್ರರಾದ ಖ್ವಾಜಾ ಅಮೀನುದ್ದೀನ ಆಲಾ ಇವರು ಜವಾಹರ-ಉಲ್-ಅಸರಾರ್, ರಮುಜ-ಉಲ್-ಸ್ವಾರಿಹೀನ, ಮಹಬತ ನಾಮಾ, ಮೀಪತ-ಉಲ್-ತೌಹೀದ, ರೀಸಲಾಹ-ಇ-ಕರಬೀಯಾ, ವಜುದಿ ಮತ್ತು ಗಂಜ-ಇ-ಮಕಫಿ. ವಜುದಿಯಾ, ಗಫತರ ಶಾಹ ಅಮೀನ್, ಇರಶಾಹದತ, ಜಹೀರ ವ ಬತೀನ, ಶರಹಾ ಕಲ್ಪಮ-ಇ-ತೈಯ್ಯಬ, ಮೋಹಿಬ ನಾಮಾ, ನರೆಜಹಾ ಇಷ್ಕನಾಮಾ ಮುಂತಾದ ಗ್ರಂಥಗಳನ್ನು ರಚಿಸಿದರು. ಒಂದನೆಯ ಶಾಹ ಅಬುಲ ಹಸನ ಮತ್ತು ಇವರ ಹಿರಿಯ ಪುತ್ರರಾದ ಎರಡನೆಯ ಶಾಹ ಅಬುಲ ಹಸನ ಇವರು ಸುಖ ರಂಜನ್ ಮತ್ತು ಖಾಜನಹ ಸಿಲ್‌ಸಿಲ್ಲಾ-ಇ-ಖಾದರಿಯಾ ಬರೆದರು. ಸೈಯದ ಹಾಸೀಂ ಪೀರರ ಅನುಯಾಯಿಗಳಾದ ಶಾಹ ಮುರಾದ-ಬಿನ್-ಶಾಹ ಜಲಾಲ ಮತ್ತು ಶಾಹ ನಯೀಮುಲ್ಲಾ ಖಾದರಿ ಸೇರಿ ಮಖಸುದ-ಉಲ್-ಮುರಾದ ಮತ್ತು ಗಂಜ-ಇ-ಅಸರಾರ ಬರೆದರು.[೬೮] ಮಹಮೂದ ಬಹರಿಯು ಉಸಕ್-ಇ-ಇರಫಾನ, ಮನಲಗನ ಮತ್ತು ಬಂಗಮಂ ನಾಮಾ ಬರೆದರು.

ಈ ಸೂಫಿಗಳು ತಮ್ಮ ಮಾತೃಭಾಷೆಯಾದ ದಖನಿಯಲೇ ಬರೆದರು. ಅವರ ಉದ್ದೇಶ ಅದನ್ನು ಎಲ್ಲ ಜನರಿಗೆ ತಲುಪಿಸುವುದಿತ್ತು. ಇವರು ತಮ್ಮ ಪವಿತ್ರ ಉದ್ದೇಶವನ್ನು ಸಾಮಾನ್ಯ ಜನರಿಗೆ ಸರಳ ಭಾಷೆಯಲ್ಲಿ ಇಸ್ಲಾಮಿನ ವಿಚಾರಗಳನ್ನು, ಭಗವಂತನ ಸಂದೇಶವನ್ನು ಪ್ರಚಾರ ಮಾಡಲು ಸರಳ ಭಾಷೆಯಾದ ದಖನಿ ಭಾಷೆಯನ್ನು ತಮ್ಮ ಭೊದನೆಗಾಗಿ ಬಳಸಿಕೊಂಡರು. ಇದರಿಂದಾಗಿ ಬಹಳಷ್ಟು ಆಧ್ಯಾತ್ಮಿಕ ಬರಹಗಳು ದಖನಿ ಮತ್ತು ಪರ್ಶಿಯನ ಭಾಷೆಯಲ್ಲಿ ಹುಟ್ಟಿಕೊಂಡವು. ಅವುಗಳೆಂದರೆ, ಚಹರ ಶಹಾದತ್ ಮತ್ತು ಮಗ್ಜ-ಇ-ಮರಗುಬ್ ಇವುಗಳು ಮೀರಾಂಜಿ ಫೀರ ಕಮಾಲುದ್ದೀನ ಬಿಯಾಬನಿ ಮತ್ತು ಮೀರಾಂಜಿ ಶಮಶಲ ಉಶ್ಯಾಕ ಅವರಿಗೆ ಅರ್ಪಿಸಲ್ಪಟ್ಟವು ಖುಶನಾಮಾ ಮತ್ತು ಖುಶನಗ್ಜ ಅವರ ಇತರ ಕವಿತೆಗಳು. ಖುಂದನಿವಿಶ್ತ ವ ನಸ್ಲನಾಮಾ ಇವರ ಆತ್ಮಕಥೆ ಇದು ಪರ್ಶಿಯನ್ ಭಾಷೆಗೆ ಇವರ ಮಹತ್ತರವಾದ ಕೊಡುಗೆಯಾಗಿದೆ. ಈ ಎಲ್ಲ ಕೃತಿಗಳು ಆಧ್ಯಾತ್ಮದ ಅವಶ್ಯಕ ಲಕ್ಷಣಗಳನ್ನು ಸಾರುತ್ತದೆ.[೬೯]

ಆ ಕಾಲದ ಮತ್ತೊರ್ವ ಪ್ರಮುಖ ಚಿಸ್ತಿ ಪಂಥದ ಬರಹಗಾರರೆಂದರೆ ಬುರ್‌ಹಾನೊದ್ದೀನ್ ಜಾನಮ್, ಇವರು ದಖನಿ ಮತ್ತು ಪರ್ಶಿಯನ್ ಭಾಷೆಯಲ್ಲಿ ಸುಮಾರು ೧೨ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಗಮನಾರ್ಹವಾದವುಗಳೆಂದರೆ 'ಕಲಿಮತಲ್ ಹಕಾಯರ್' ಇರ್ಶಾದ ನಾಮಾ[೨೦] ಮತ್ತು ಸುಖ ಸಹೇಲಾ. ಇದಲ್ಲದೆ ಇತರ ಕೃತಿಗಳೆಂದರೆ, 'ಬಶಾರ್‌ತ-ಅಲ್-ಜಿಕ್ರ', ಹುಜ್ಜತ-ಅಲ್-ಬಖಾ, ಇರ್ಶಾದ-ಅಲ್-ತಾಲಿಬಿನ್, ಮಖಜನ್-ಇ-ಸಾಲೀಕಿನ, ಮನ್‌ಫತ್-ಅಲ್-ಇಮಾನ, ನಸೀಮ-ಅಲ್-ಕಲಾಮ, ನುಕ್ತಾ-ಇ-ವಾಹಿದ, ರುಮ್ಮುಜ-ಅಲ್-ವಸ್ಸಿಲೀನ್, ವಸೀಯತ್-ಅಲ್-ಹಾದಿ ಮತ್ತು ವಜುದಿಯಾ. ಈ ಎಲ್ಲ ಕೃತಿಗಳು ದಖನಿ ಮತ್ತು ಪರ್ಶಿಯನ ಭಾಷೆಯಲ್ಲಿವೆ.[೨೧] ಈ ಸೂಫಿಗಳು ದಖನಿ ಭಾಷೆಯಲ್ಲಿ ಬರೆಯಲು ಎರಡು ಕಾರಣಗಳಿವೆ ಮೊದಲನೆಯದಾಗಿ ಮ್ಯಾಕ್ಸವೆಲ್ಲ ಇಟನನ್ನ ಪ್ರಕಾರ ಈ ದಖನಿ ಭಾಷೆಯು ಸ್ಥಳಿಯ ಭಾಷೆಯಾಗಿದ್ದು ಅಧಿಕ ಸಂಖ್ಯೆಯಲ್ಲಿ ಈ ಭಾಷೆ ತಿಳಿದವರಾಗಿದ್ದರು. ಎರಡನೆಯದಾಗಿ ಈ ಭಾಷೆಯು ಸೈನ್ಯ ಮತ್ತು ಬಜಾರಿನ ಭಾಷೆಯಾಗಿತ್ತು. ಮತ್ತು ಪರ್ಶಿಯನ ಭಾಷೆಗಿಂತಲೂ ಮಿಗಿಲಾಗಿತ್ತು. ದಖನಿ ಭಾಷೆಗಿಂತಲೂ ಮರಾಠಿ ಮತ್ತು ಕನ್ನಡ ಭಾಷೆಯು ಬಳಸಬಹುದಿತ್ತು, ಆದರೆ ದಖನಿ ಭಾಷೆಯು ಪರ್ಸೊ-ಅರೇಬಿಕ ಶೈಲಿಯಲ್ಲಿ ಬರೆಯಲು ಸಹಕಾರಿಯಾಗಿತ್ತು. ಯಾಕೆಂದರೆ ಇಸ್ಲಾಮಿನ ಆಧ್ಯಾತ್ಮಿಕ ವಿಚಾರಗಳು ಈ ಭಾಷೆಯಲ್ಲಿ ತುಂಬಾ ಸರಳವಾಗಿ ತಿಳಿಯುವಂತಿತ್ತು.[೨೨]

ಬುರಾನೂದ್ದೀನ್ ಜಾನಮ ಮತ್ತು ಮಹಮೂದ ಖುಶ-ದಹಾನ ಇವರ ದಖನಿ ಸಾಹಿತ್ಯ, ಭಾರತದ ಶಾಸ್ತ್ರೀಯ ಭಾಷೆಯಾದ ಸಂಸ್ಕೃತದಿಂದ ಪ್ರಭಾವಿತಗೊಂಡಿದೆ. ಬುರಾನರ "ಕಲಿಮತ-ಅಲ್-ಹಕಿಯಾ" ಮತ್ತು "ಇರ್ಶಾದನಾಮಾ" ಕೃತಿಗಳು ಚಿಶ್ತಿ ಸೂಫಿ ಪಂಥವನ್ನು ಸಾರುತ್ತವೆ. ೧೫ ಮತ್ತು ೧೬ನೆಯ ಶತಮಾನದಲ್ಲಿ ದಖನಿ ಭಾಷೆಯು ಸಮೃದ್ಧವಾದ ವ್ಯಾಕರಣವುಳ್ಳದ್ದಾಗಿರಲಿಲ್ಲ. ಬುರಾನ್ ಅವರು ತಮ್ಮ ಅನುಯಾಯಿ ಶಿಷ್ಯರಿಗೆ ಅತ್ಯಂತ ಸರಳ ಭಾಷೆಯಲ್ಲಿ ಬರೆಯಲು ವಿನಂತಿಸಿದರು.

ಅಕ್ಬರುದ್ದೀನ್ ಸಿದ್ದಿಕಿ ಯವರ ಪ್ರಕಾರ ಬುರಾನರ ಶಿಷ್ಯರಾದ ಬಹರಿಯವರು 'ಕಲೀಮತ್-ಅಲ್-ಹಕಿಯಾ' ಗ್ರಂಥವನ್ನು ಬರೆದರು. ಇದು ಪರ್ಶಿಯನ ಭಾಷೆಯ ಇರ್ಶಾದನಾಮಾದ ಸಂಕ್ಷಿಪ್ತ ರೂಪವಾಗಿದೆ.[೨೩] ಅದೇ ತರಹ ಚಿಶ್ತಿ ಬರಹಗಾರರಾದ ಮಹಮೂದ ಬಹರಿಯವರು "ಮನಲಗನ್" ಎಂಬ ಕವನ ಸಂಕಲನವನ್ನು ಬರೆದರು. ಇದು ದಖನಿ ಭಾಷೆಯಲ್ಲಿದೆ. ಇದನ್ನು ಅವರು "ಉರುಸೆ-ಇರಫಾನ" ಎಂಬ ಹೆಸರಿನಿಂದ ಪರ್ಶಿಯನ ಭಾಷೆಗೆ ಅನುವಾದಿಸಿದರು. ಇವರ ಇತರ ಕೃತಿಗಳೆಂದರೆ "ಬಂಗಾಬ ನಾಮಾ" ಮತ್ತಿ ಮಸನವಿಗಳು ಎರಡು ದಖನಿ ಭಾಷೆಯಲ್ಲಿದೆ.[೨೪] ಇನ್ನೊಬ್ಬ ಚಿಶ್ತಿ ಬರಹಗಾರರೆಂದರೆ 'ಮಹಮೂದ ಖುಶ ದಹಾನ' ಇವರು ಪರ್ಶಿಯನ ಭಾಷೆಯಲ್ಲಿ ಆಧ್ಯಾತ್ಮಿಕ ಕೃತಿಯಾದ 'ಮಾರಿಫತ್-ಅಲ್-ಸಲೂಕ್' ಬರೆದರು.[೨೫] ಇದು ಬಿಜಾಪುರದ ಎಲ್ಲ ಚಿಶ್ತಿ ಸೂಫಿಗಳ ಭೋದನೆಯ ಸಂಕ್ಷಿಪ್ತ ಸಾರವಾಗಿದೆ.[೨೬] ಇವರ ಇನ್ನಿತರ ಪರ್ಶಿಯನ ಕೃತಿಗಳೆಂದರೆ, ಅಸ್ರಾರ-ಅಲ್-ಹಕ ಮತ್ತು ಸಲಾತ-ಇ-ಆಶಿಖಿನ್ ಅಲ್ಲದೆ

ದಖನಿ ಕೃತಿಗಳೆಂದರೆ ರಿಸಾಲಾ–ಇ–ಮುಖ್ತಸರ್ ದರ–ಬಾಬ–ಇ–ಕಸ್ಬ ಕರದಾನ–ಇ–ವಜುದಿಯಾ. ಇದು ಸಹ ಆಧ್ಯಾತ್ಮಿಕ ಕೃತಿಯಾಗಿದೆ. ಈ ಎಲ್ಲ ಬರಹಗಾರರು ಆಧ್ಯಾತ್ಮಿಕ ಬರವಣಿಗೆಗೆ ಕಾರಣೀಭೂತರಾದರು.

ಈ ಕ್ಷೇತ್ರದಲ್ಲಿ ಇನ್ನೊಬ್ಬ ವಿದ್ವಾಂಸರೆಂದರೆ, “ಶಹಾ ಅಮೀನುದ್ದೀನ್ ಆಲಾ”. ಇವರು ಧಾರ್ಮಿಕ ಗುರುಗಳು ಮತ್ತು ಬರಹಗಾರರು. ಆಧ್ಯಾತ್ಮದ ವಿಷಯವಾಗಿ ಇವರು ೧೨ ಕೃತಿಗಳನ್ನು ರಚಿಸಿದ್ದಾರೆ. ಈ ಕೆಳಗೆ ವಿವರಿಸಿದ ಎಲ್ಲ ಕೃತಿಗಳು ದಖನಿ ಭಾಷೆಯಲ್ಲಿವೆ. ಇರ್ಶಾದಾತ್, ಖಯಾಲ–ಇ–ರಿಖ್ತಾ, ಮುಹಿಬನಾಮಾ, ಘುಲಬನ್, ಖುರ್ಬಿಯಾ, ರಿಸಾಲಾ–ಇ–ತಸ್ಸವುಫ್, ವಜುದಿಯಾ, ರಮಜುಲ್ ಸಾಲಿಕಿನ್, ಜವಾಹೀರ–ಉಲ್–ಅಸ್ರಾರ್, ಗುಪ್ತರ ಶಹಾ ಅಮೀನ, ಗಂಜ–ಇ–ಮಕ್ಫಿ ಮತ್ತು ಕಲೀಮತ–ಉಲ್–ಅಸ್ರಾರ್[೭೭]. ಈ ೧೨ ಕೃತಿಗಳಲ್ಲಿ ಕಲಿಮತ–ಉಲ್–ಅಸ್ರಾರ್, ಜವಾಹಿರ್–ಉಲ್–ಅಸ್ರಾರ್ ಮತ್ತು ಗಂಜ–ಇ–ಮಕ್ಫಿ ಈ ಕೃತಿಗಳಲ್ಲಿ ಲೇಖಕರು ದೇವರ ಏಕತೆ ಮತ್ತು ಅಧ್ಯಾತ್ಮದ ಸಮಸ್ಯೆಗಳನ್ನು ವಿವರಿಸಲು ಪ್ರಯತ್ನಪಟ್ಟಿದ್ದಾರೆ. ಈ ಕೃತಿಗಳೆಲ್ಲಾ ಸಾಹಿತ್ಯಕಿಂತ ಧಾರ್ಮಿಕ ವಿಷಯಗಳನ್ನು ಚರ್ಚಿಸಿಲಾಗಿದೆ.

ಮೇಲೆ ವಿವರಿಸಿದ ಎಲ್ಲ ಚಿಶ್ತಿ ಬರಹಗಾರರನ್ನು ಹೊರತುಪಡಿಸಿ, ಮತ್ತೆ ಜನ ಐದು ವಿದ್ವಾಂಸರು ದಖನಿ ಮತ್ತು ಪರ್ಶಿಯನ ಭಾಷೆಯಲ್ಲಿ ಅಧ್ಯಾತ್ಮಿಕ ಕೃತಿಗಳನ್ನು ರಚಿಸಿದರು. ಮೊದಲನೆಯದಾಗಿ, ‘ಶಹಾ ಅಲಿ ಜಿಯಾ ಗಮ್ದಾನಿ’ ಯವರು “ಜವಾಹಿರ್–ಉಲ್–ಅಸ್ರಾರ್–ಉಲ್–ಲಾಹ” ಎಂಬ ಕವಿತೆಯನ್ನು ಬರೆದರು. ಈ ಕವಿತೆಯು ದೇವರ ಮೇಲೆ ಕವಿಯ ಪ್ರೇಮವನ್ನು ಸರಳ ಭಾಷೆಯಲ್ಲಿ ಹೇಳುತ್ತದೆ.[೭೮] ಎರಡನೆಯದಾಗಿ ‘ಸೈಯದ ಶಹಾ ದಾವಲ’ ಇವರು ಬುರಹಾನೊದ್ದೀನ್ ಜಾನಮ್‌ರ ಶಿಷ್ಯರ ವಂಶಾವಳಿಯಲ್ಲಿ ಬರುತ್ತಾರೆ. ಇವರು ಎರಡು ಕೃತಿಗಳನ್ನು ರಚಿಸಿದ್ದಾರೆ. ‘ಕಶ್ಫಲ್ ಅನವಾರ’ ಮತ್ತು ‘ಕಶ್ಫುಲ್ ವಜುದ್’ ಇವೆರಡು ಕೃತಿಗಳು ದಖನಿ ಭಾಷೆಯಲ್ಲಿವೆ. ಮೂರನೆಯದಾಗಿ ‘ಮೀರಾಂಜಿ ಖುದಾ ನುಮಾ’ ಇವರು ಸಹ ದಖನಿ ಭಾಷೆಯಲ್ಲಿ ಎರಡು ಕೃತಿಗಳನ್ನು ರಚಿಸಿದ್ದಾರೆ. “ ಬಶರತ–ಅಲ್–ಅನವಾರ್ ” ಮತ್ತು “ ಚಾಹರ ವಜುದ್ ”. ನಾಲ್ಕನೆಯದಾಗಿ ‘ಮಹಮ್ಮದ ಕಾಸೀಂ’ ಇವರು ಶಹಾ ಹಬಿಬಲ್ಲಾ ಸಿಗಬತ್ ಅಲ್ಲೈಹಿಯವರ ಶಿಷ್ಯರು. ಇವರು “ ನಫಾಯಿಸ್–ಅಲ್–ಅನಫಾಸ್ ” ಎಂಬ ಕೃತಿಯನ್ನು ಪರ್ಶಿಯನ್ನ ಭಾಷೆಯಲ್ಲಿ ರಚಿಸಿದರು. ಕೊನೆಯ ವಿದ್ವಾಂಸರೆಂದರೆ “ ಶಹಾ ಮುಲ್ಕ ” ಇವರು “ ಅಹಕಾಮುಲ್ ಸಲಾತ ” ಎಂಬ ಗದ್ಯ ರೂಪದ ಕೃತಿಯನ್ನು ರಚಿಸಿದರು. ಇದರ ವಿಷಯವು ಕೂಡ ಅಧ್ಯಾತ್ಮಿಕವಾಗಿದೆ.

ಇವರಲ್ಲದೆ ಅಧ್ಯಾತ್ಮಿಕ ವಿಷಯದ ಮೇಲೆ ದಖನಿ ಸಾಹಿತ್ಯಕ್ಕೆ ಕೊಡುಗೆ ನೀಡಿದ ಇತರ ಬರಹಗಾರರೆಂದರೆ, ‘ಸೇವಾ’, ಅಲಿ, ಮೊಮೀನ್, ಮುರ್ತುಜಾ, ಹುಸೈನಿ ಮತ್ತು ಮುಖ್ತಾರ್. ಇವರೆಲ್ಲರೂ ಅಧ್ಯಾತ್ಮದ ಬಗ್ಗೆ ದೀರ್ಘವಾದ ಮಸನವಿಗಳನ್ನು ರಚಿಸಿದ್ದಾರೆ. ಸೇವಾರವರ “ ರೌಜತುಲ್ ಶುದಾ ” ಕೃತಿಯೂ ವೀರಯೋಧರಾದ ಹಸನ ಮತ್ತು ಹುಸೇನರ ವೀರಗಾಥೆಯಾಗಿದೆ. ಅಲಿ ಯವರ “ ಪಂದ ದಿಲ್ ಪಂದ ” ಮೊಮೀನ್‌ರವರ “ ಅಸ್ರಾರ–ಉಲ್–ಇಶ್ಕ ” ಮತ್ತು ಮುರ್ತುಜಾರವರ “ ವಸ್ಲ ನಾಮಾ ” ಗಮನಾರ್ಹವಾದ ಕೃತಿಗಳು. ಈ ಎಲ್ಲ ಕೃತಿಗಳು “ದೇವನ ಏಕತೆ” (ವಹದತುಲ್–ವಜುದ) ಬಗ್ಗೆ

ಪ್ರತಿಪಾದಿಸುತ್ತವೆ. ಮುಖ್ತಾರರವರು "ಮೆಹರಾಜ ನಾಮಾ"[೭೯] ವನ್ನು ರಚಿಸಿದರು. ಅಧ್ಯಾತ್ಮಿಕ ವಿಷಯದಲ್ಲಿ ಬರೆದ ಇನ್ನೊರ್ವ ಕವಿಯಂದರೆ, 'ಖಾದರ ಶಹಾ ಅಥವಾ ಖಾದರ ಲಂಗಾ' ಈ ಕವಿಯು ಮೂಲತಃ ಹಿಂದೂಗಳಾಗಿದ್ದು, ನಂತರ ಅಂದರೆ ಅಮೀನುದ್ದೀನ್ ಅಲಾರವರ ಪ್ರಭಾವಕ್ಕೊಳಗಾಗಿ ಇಸ್ಲಾಮ ಧರ್ಮವನ್ನು ಸ್ವೀಕರಿಸಿದರು. ಇವರು ಲಿಂಗಾಯತರಾಗಿದ್ದರಿಂದ ಇವರ ಹೆಸರು ಖಾದಿರ ಲಿಂಗಾವಾಯಿತು. ಈವರು ಅಮೀನುದ್ದೀನ ಆಲಾ ರವರ ಅತ್ಯಂತ ಮೆಚ್ಚಿನ ಶಿಷ್ಯರಾಗಿದ್ದರು.[೮೦] ಇವರು ಮಸನವಿ, ಗಝಲ್ ಮತ್ತು ಮರ್ಸಿಯಾಗಳನ್ನು ರಚಿಸಿದ್ದಾರೆ. ಇವರ ಪ್ರಸಿದ್ಧ ಮಸನವಿ "ಮೊಜಿಜಾ-ಇ-ಖಾತುನ-ಇ-ಜನ್ನತ" ಇದು ದಖನಿ ಭಾಷೆಯಲ್ಲಿದ್ದು ಅಧ್ಯಾತ್ಮಿಕ ವಿಷಯವನ್ನೊಳಗೊಂಡಿದೆ. ದಖನಿ ಸಾಹಿತ್ಯಕ್ಕೆ ಕೊಡುಗೆ ನೀಡಿದ ಪ್ರಮುಖ ಕವಿ ಎಂದರೆ 'ಮುಅಜ್ಜಮ್ ಬಿಜಾಪುರಿ' ಇವರ ಕೃತಿಗಳೆಂದರೆ "ಶಜ್ರತ-ಅಲ್-ಅತಖಿಯಾ" "ಗಂಜ-ಇ-ಮಖ್ಫೀ" ಮತ್ತು ಗುಲಜಾ-ಇ-ಚಿಶ್ತಿ. ಈವರ ಕೃತಿಗಳಲ್ಲಿ ಚಿಶ್ತಿ ಸೂಫಿಗಳ ಜೀವನ ಮತ್ತು ಅವರ ಸಿದ್ಧಾಂತವನ್ನೊಳಗೊಂಡಿದೆ. 'ಖುದರತಿ ಮತ್ತು ಶಹಾ ಮನ್‌ರೂಫ್' ರಚಿಸಿದ "ಖಿಸೂಸ-ಅಲ್-ಅಂಬಿಯಾ" ಮತ್ತು "ಶಿರಾತ-ಅಲ್-ಅತಿಕಾ" ದಖನಿ ಭಾಷೆಯಲ್ಲಿವೆ. ದಖನಿ ಸಾಹಿತ್ಯದ ಬೆಳವಣಿಗೆಗೆ ಕಾರಣರಾದ ಕೊನೆಯ ವಿದ್ವಾಂಸರೆಂದರೆ, 'ಪೀರ ಪಾಶಹಾ ಹುಸೈನಿ' ಅವರು ರಚಿಸಿದ "ದಿವಾನ" ಎಂಬ ಕೃತಿಯು ಗಝಲ್ ಮತ್ತು ಮಸನವಿಗಳನ್ನೊಳಗೊಂಡಿದೆ. ಇವರ ಶಿಷ್ಯರಾದ 'ಶಹಾ ತುರಬ' ರವರು "ಗಂಜುಲ್ ಅಸ್ರಾರ್" ಮತ್ತು "ಗುಲಜಾರ-ಇ-ವಹದತ್" ಎಂಬ ಕೃತಿಗಳನ್ನು ರಚಿಸಿದರು. ಇದರಲ್ಲಿ ತಮ್ಮ ಗುರುವಿನ ಬಗ್ಗೆ ವಿವರಿಸಿದ್ದಾರೆ, ಇವರು ಜೋತಿಷ್ಯಶಾಸ್ತ್ರ, ತರ್ಕಶಾಸ್ತ್ರ, ತತ್ವಜ್ಞಾನ ಮತ್ತು ಅಧ್ಯಾತ್ಮಿಕ ವಿಷಯಗಳಲ್ಲಿ ಪಾರಂಗತರಾಗಿದ್ದರು.[೮೧] ಇವರು 'ದಿವಾನ' ಅಲ್ಲದೇ, "ಸಫಿನತ್-ಉಲ್-ಔಲೀಯಾ" ಎಂಬ ಕೃತಿಯನ್ನು ಸಹ ದಖನಿ ಭಾಷೆಯಲ್ಲಿ ರಚಿಸಿದ್ದಾರೆ.

ಈ ಎಲ್ಲ ಕೃತಿಗಳ ಸಾರಾಂಶ ಸ್ವಲ್ಪ ಸಾಹಿತ್ಯವಾಗಿದ್ದು, ಹೆಚ್ಚಿನ ವಿಷಯ ಆಧ್ಯಾತ್ಮಿಕವಾಗಿದೆ. ಸಾಮಾನ್ಯ ಜನರಿಗೆ ಅಧ್ಯಾತ್ಮಿಕತೆಯ ಬಗ್ಗೆ ಸಾರುವುದೇ ಆಗಿದೆ. ಇವು ತತ್ವಜ್ಞಾನದ ದೃಷ್ಟಿಕೋನದಿಂದ ನೋಡಿದಾಗ ಈ ಕೃತಿಗಳು ತುಂಬಾ ಮಹತ್ವ ಪಡೆದಿವೆ. ಬುರಾನೊದ್ದೀನ್ ಜಾನಮ, ಖುಶ ದಹಾನ ಮತ್ತು ಮೀರಾಂಜಿ ಶಮಶುಲ್ ಉಶಾಕ ರವರ ಕೃತಿಗಳಲ್ಲಿ ತತ್ವಜ್ಞಾನದ ಜೊತೆಗೆ ಚಿಶ್ತಿ ಪಂಥದ ಸಿದ್ಧಾಂತಗಳು ಮತ್ತು ಅಧ್ಯಾತ್ಮದ ಬಗ್ಗೆ ಹೇಳಲಾಗಿದೆ. ಈ ಕೃತಿಗಳ ಉದ್ದೇಶ, ಚಿಶ್ತಿ ಪಂಥ ಪಾಲಿಸುವವ ಈ ಕೆಳಗೆ ವಿವರಿಸಿದ ಮಾರ್ಗಗಳನ್ನು ಹಾದು ಹೋಗಬೇಕಾಗುತ್ತದೆ. ಅವುಗಳೆಂದರೆ, ಶರಿಯತ (ಕಾನೂನು) ತರೀಕತ್ (ರಸ್ತೇ ಅಥವಾ ಹಾದಿ) ಮತ್ತು ಮಾರಿಫತ್ (ಜ್ಞಾನ). ಇವುಗಳೊಂದಿಗೆ ನಾಲ್ಕು ಬಗೆಯ ಆಯಾಮಗಳನ್ನು ಪಾಲಿಸಬೇಕಾಗುತ್ತದೆ. ಜಿಕ್ರ ಜಹಾ (ಧ್ವನಿಯಿಂದ), ಜಿಕ್ರ-ಇ-ಕಲ್ಬಿ (ಹೃದಯದಿಂದ), ಜಿಕ್ರ-ಇ-ರೂಹಿ (ಆತ್ಮದಿಂದ), ಜಿಕ್ರ-ಇ-ಸಿರ್ರಿ (ಗುಪ್ತವಾಗಿ) ಈ ಎಲ್ಲ ಮಾರ್ಗಗಳಿಂದ ಹಾಯ್ದು ಒಬ್ಬ ಚಿಶ್ತಿ ಸೂಫಿಯು "ಮಂಜಿಲ್" ಎಂಬ ಹಂತಕ್ಕೆ ತಲುಪುತ್ತಾನೆ. ಅವುಗಳಲ್ಲಿ ನಾಸುತ್ತ (ಮಾನವತೆ), ಮಲಕೂತ್ (ದಿವ್ಯ ಕ್ಷೇತ್ರ), ಜಬರೂತ್ (ಸ್ವರ್ಗ) ಮತ್ತು ಲಾಹೂತ್ (ಮೊಕ್ಷ, ದೇವಾತ್ಮ) ಈ ಎಲ್ಲ ಹಂತಗಳಿರುತ್ತವೆ. ಒಬ್ಬ ಚಿಶ್ತಿ ಪಂಥದ ಅನುಯಾಯಿ ಮರ್ತಬಾ ಎಂಬ ಹಂತದಲ್ಲಿ ನಪ್ಸ (ಆತ್ಮ), ದಿಲ್ (ಹೃದಯ), ರೂಹ (ಆತ್ಮ), ನೂರ (ಪ್ರಕಾಶ) ಇವರಲ್ಲವುಗಳು

ಮನುಷ್ಯನು ನಿಯಂತ್ರದಲ್ಲಿಟ್ಟುಕೊಳ್ಳಬೇಕು. ಈ ಎಲ್ಲ ಹಂತಗಳನ್ನು ವಿವರಿಸಲು ಚಿಶ್ತಿ ಸೂಫಿಗಳು ಹಲವಾರು ಕೃತಿಗಳನ್ನು ರಚಿಸಿದರು. ಇವೆಲ್ಲವುಗಳ ಬಗ್ಗೆ ವಿವರವಾಗಿ ಮಹಮೂದ ಖುಶ ದಹನ ರವರ ಕೃತಿಯಾದ "ಮಾರಿಫತ್-ಅಲ್-ಸೂಲುಕ್"ನಲ್ಲಿ ವಿವರಿಸಲಾಗಿದೆ.[೮೨]

ಬುರಾನೊದ್ದೀನ ಜಾನಮ್ ತಮ್ಮ ಕೃತಿಯಾದ 'ವಸಿಯತ್-ಅಲ್-ಹದಿ'ಯಲ್ಲಿ ಹೇಳುವುದೆನೆಂದರೆ, " ದೇವರ ಹೆಸರನ್ನು ಗಟ್ಟಿಯಾಗಿ ಪಠಿಸುವುದು, ಇದರಿಂದ ಮಂಜಿಲ್-ಇ-ನಾಸೂತ್ ಹಂತಕ್ಕೆ ತಲುಪ ಬಹುದಾಗಿದೆ. ಜಿಕ್ರ-ಇ-ಜಲ್ಲಿ ಪಠಿಸುವುದು ಶರೀರದ ಎಲ್ಲ ಅಂಗಾಗಳಿಂದ[೮೩] ನಾವು ನಮ್ಮ ನಾಲಿಗೆಯನ್ನು ದೇವರ ಹೆಸರನ್ನು ಪಠಿಸುವಂತೆ ಚಲಿಸುವುದು, ಪ್ರತಿ ಶಬ್ದ ಕಿವಿಯ[೮೪] ಮೇಲೆ ಬಿಳುವಂತಿರಬೇಕು." ಮುಂದುವರೆದು ಅವರು ಹೇಳುವುದೇನೆಂದರೆ " ನಮ್ಮ ಧ್ಯಾನ ಹೇಗಿರಬೇಕೆಂದರೆ, ಕಮಲವು ಸೂರ್ಯನನ್ನು ನೋಡುವಂತಿರಬೇಕು. ಬಹಳ ಸಾಧುಗಳು ಇದೇ ಪ್ರಕಾರದ ಧ್ಯಾನ ಮಾಡುತ್ತಾರೆ. ದೇವರು ನಮ್ಮ ನರನಾಡಿಗಿಂತಲೂ ಸಮಿಪವಿದ್ದಾನೆಂದು, ಅದೇ ರೀತಿ ಅವನು ನಮ್ಮ ಹೃದಯದಲ್ಲಿದ್ದಾನೆ. ನಾವು ಧ್ಯಾನದಲ್ಲಿ ಹೃದಯದ ಕಣ್ಣಿನಿಂದ ದೇವರನ್ನು ನೋಡಬಹುದು. ಧ್ಯಾನದಲ್ಲಿ ದೇವರನ್ನು ನೋಡಿದಾಗ ದೇವರು ಅವನ ಅಸು-ಪಾಸಿನಲ್ಲಿಯೇ ಇರುವಂತೆ ಭಾಸವಾಗುತ್ತದೆ.[೮೫]" ಬುರಾನೊದ್ದೀನ ಜಾನಮ ವಿವರಿಸುವಂತೆ ಮುಖಾಮ-ಇ-ಖುರ್ಬ ಕೊನೆಯ ಹಂತವಾಗಿದ್ದು ಇಲ್ಲಿ ಪೂಜೆ ಮಾಡುವವನು ಮತ್ತು ಪೂಜೆ ಮಾಡಲ್ಪಡುವವನು ಒಂದೇ ಆಗಿರುವದು. ಇಲ್ಲಿ ಎರಡನೆಯದಕ್ಕೆ ಸ್ಥಾನವೇ ಇಲ್ಲ.[೮೬] ಹೇಗೆ ಕರ್ಪೂರವನ್ನು ಬೆಂಕಿಯಲ್ಲಿಟ್ಟಾಗ ಅದು ಮಾಯವಾಗುವುದೋ ಅದೇ ತರಹ ನಿಮ್ಮ ಆತ್ಮದ ಸ್ಥಿತಿಯಾಗುವುದು.[೮೭] ಮಾನವನ ದೇವರೊಂದಿಗಿನ ಸಂಬಂಧದ ಬ್ಗಗೆ ಅವರು ವಿವರಿಸುವುದೆನೆಂದರೆ, ನಾವು ಮಾನವನೇ ದೇವರು ಎಂದರೇ ತಪ್ಪು, ಯಾಕೆಂದರೆ ದೇವರು ಅನಾದಿಕಾಲದಿಂದಲೂ ಯಾವುದೇ ಬದಲಾವಣೆ ಇಲ್ಲದೇ ಇರುವನು. ಆದರೆ ಮಾನವ ಬದಲಾವಣೆಯಾಗುತ್ತಾ ಬಂದಿರುವನು. ದೇವರು ಆಕಾರವಿಲ್ಲದವ ಮುಖಹೀನ್ ಆಕಾರ ಹೊಂದಿದವನಾಗಿದ್ದರೆ ಅವನು ಮಾನವನೇ ಮತ್ತೇನಿಲ್ಲ.[೮೮]

ಮಾರಿಫತ್-ಅಲ್-ಸೂಲಕನಲ್ಲಿ ಮಹಮ್ಮದ ಖುಶ ದಹಾನ ವಿವರಿಸುವದೆನೆಂದರೆ, ಮೊಲನೆಯ ಹಂತದಲ್ಲಿ ದೇವರು ಗುರು ಅಥವಾ ನಾಯಕ (ಸಾಹೀಬ), ಎರಡನೆಯ ಹಂತದಲ್ಲಿ ತಂದೆ (ಪಿದರ), ಮೂರನೆಯ ಹಂತದಲ್ಲಿ ನಂಬುಗೆಯ (ಮೆಹಬೂಬ), ನಾಲ್ಕನೆಯ ಹಂತದಲ್ಲಿ ಪ್ರಿಯಕ ಅಥವಾ ಗೆಳೆಯ (ಮುಹಿಬ್).[೮೯] ಮಾಕ್ಸವೆಲ್ಲ ಇಟನ್ನಿನ ಪ್ರಕಾರ ಈ ಕೊನೆಯ ಹಂತದ ದೇವರೊಂದಿಗಿನ ಸಂಬಂಧ ಗೆಳೆಯ ಅಥವಾ ಪ್ರೀಯಕ ಎಂಬುವುದು, ಮೂರ್ತಿ ಪೂಜೆಯಲ್ಲಿಯು ಕಾಣಬಹುದು. ಅಲ್ಲದೆ ಇದು ಲಿಂಗಾಯತ ಮತ್ತು ವಿಟೋಭಾ ಪರಂಪರೆಯಲ್ಲಿ ಕಾಣಬಹುದು.[೯೦] ನಿಜವಾಗಿ ಹೇಳಬೇಕೆಂದರೆ, ಬಿಜಾಪುರದ ಚಿಶ್ತಿ ಸೂಫಿಗಳು ಈ ಭಕ್ತಿ ಪರಂಪರೆಗುಣವಾಗಿಯೇ ತಮ್ಮ ಸಿದ್ಧಾಂತಗಳನ್ನು ಉದಾಹರಿಸಿದ್ದಾರೆ. ಬುರಾನರು ತಮ್ಮ ಸೂಫಿ ಪರಿಕಲ್ಪನೆಗಳನ್ನು ವ್ಯಕ್ತಪಡಿಸುವಾಗ ಮತ್ತೇ ಮತ್ತೇ ಸಂಸ್ಕೃತ ಪಾರಿಭಾಷಿಕತೆಯನ್ನು ಅವಲಂಬಿಸಿದ್ದಾರೆ. ಅವರು ದೇವರನ್ನು "ಶುದ್ಧ ಬ್ರಹ್ಮ" ಅಥವಾ ಪವಿತ್ರವೆನ್ನುತ್ತಾರೆ ಮತ್ತು ಈ ಜಗತ್ತನ್ನು ಮಾಯಾ[೯೧] ಎಂದು

ಕರೆಯುತ್ತಾರೆ. ಅವರ ಬರಹಗಳಲ್ಲಿ ನೆನಪಿಡ ಬೇಕಾದ ಅಂಶವೆಂದರೆ ಅವರ ಸಿದ್ಧಾಂತಗಳು, ತತ್ವಗಳು ಇಸ್ಲಾಮಿನ ಅಧ್ಯಾತ್ಮಿಕ ಪರಂಪರೆಯನ್ನೆ ಕೇಂದ್ರಿಕರಿಸಿವೆ. ಹಿಂದೂಗಳ ತತ್ವ ಸಿದ್ಧಾಂತಗಳನ್ನು ಕೇವಲ ಆಧಾರಕ್ಕಾಗಿ ಪರಿಗಣಿಸಿದ್ದಾರೆ.

ಮ್ಯಾಕ್ಸವೆಲ್ಲ ಇಟನ್ನಿನ ಪ್ರಕಾರ. ದಖನಿ ಭಾಷೆಯಲ್ಲಿರುವ ಕೃತಿಗಳನ್ನು ಬುರಾನೊದ್ದಿನ ಜಾನಮ್ ಪುತ್ರರಾದ ಅಮಿನೊದ್ದೀನ ಆಲಾ ಅವರದ್ದಲ್ಲ, ಇವುಗಳು ಕೃತಿಯಲ್ಲ, ಅವರು ಹೇಳಿದ ಮಾತುಗಳನ್ನೆಲ್ಲ ಅವರ ಶಿಷ್ಯರು ಸಂಯೋಜಿಸಿದ್ದು.[೯೨] ಆದರೆ ಪ್ರಸಿದ್ಧ ಸಂಶೋದಕರಾದ ಹುಸೇನಿ ಶಾಹೀದ ಅವರು ತಮ್ಮ ಸಂಶೋಧನಾ ಗ್ರಂಥವಾದ "ಅಮೀನೊದ್ದೀನ ಆಲಾರ ಜೀವನ ಮತ್ತು ಕೃತಿಗಳು" ಎಂಬುದರಲ್ಲಿ ಅವರು ಪ್ರಸ್ಥಾಪಿಸುವುದೆನೆಂದರೆ, "ಗಂಜ-ಇ-ಮಕ್ಫಿ", "ಗುಪ್ತಾರ ಶಹಾ ಅಮೀನ", "ಕಲಿಮತ-ಉಲ್-ಅಸ್ರಾರ" ಮತ್ತು "ರಿಸಾಲಾ-ಇ-ವಜುದಿಯಾ" ಈ ಎಲ್ಲ ಕೃತಿಗಳನ್ನು ಅಮೀನೊದ್ದೀನ ಆಲಾರವರೇ ರಚಿಸಿದ್ದಾರೆ. ಈ ಬ್ಗಗೆ ಅವರು ದೀರ್ಘವಾಗಿ ಚರ್ಚಿಸಿದ್ದಾರೆ.[೯೩] ಅದಾಗ್ಯೂ ನಾವು ನೋಡಬೇಕಾದ ಅಂಶವೆಂದರೆ, ಹೇಗೆ ಅವರ ಕೃತಿಗಳು ಜನರ ಮೇಲೆ ಪ್ರಭಾವ ಬೀರಿದೆ ಎಂಬುದು. ಅವರ ಭೋಧನೆಗಳು ಸಾಂಪ್ರದಾಯಿಕವಾದವುಗಳಲ್ಲ. ಅವರ ವಿರೋಧ ಕೇವಲ ಈ ವಿಚಾರಕ್ಕೆ ಸಂಬಂಧಪಟ್ಟದ್ದು ಅದೆಂದರೆ, ಮಸೂತಿ(ಮಸೀದೆ)ಯು ದೇವರ ಮನೆಯೇ? ಎಂಬುದು "ರಿಸಾಲಾ-ಇ-ತಸವುಫ್"ನಲ್ಲಿ ಅವರು ಹೇಳುವುದೆನೆಂದರೇ, ಕೆಲವು ಶ್ರೇಷ್ಠ ಜನರು ದೇವರಿಗೆ ಪ್ರಾರ್ಥಿಸುವುದೆನೆಂದರೆ, ಮಸಿದಿ ಕಟ್ಟಿಸಿ ಅದರಲ್ಲಿ ಪ್ರಾರ್ಥಿಸುವುದು ಅವರು ಅಲ್ಲಿ ದಿನ-ರಾತ್ರಿ ದೇವರನ್ನು ಅವನ ಮನೆಯಲ್ಲಿ ಪ್ರಾರ್ಥಿಸುತ್ತಾರೆ. ಆದರೆ ಮೊದಲ ಮಸಿದಿ ಎಂದರೆ-ಸೃಷ್ಟಿ ಶರೀರ ಮಿಹರಾಬ(ಧರ್ಮಗುರು ಪ್ರಾರ್ಥನೆಗೆ ನಿಲ್ಲುವ ಸ್ಥಳ) ಮತ್ತು ಹೃದಯವೆಂದರೆ-ಆತ್ಮದ ಬೆಳಕು. ಅದನ್ನು ಹೊತ್ತಿಸಿದಾಗ ಅದು ಮಾನವನಿಗೆ ಪ್ರಾರ್ಥಿಸಲು ಪ್ರೇರಪಿಸುತ್ತದೆ.[೯೪] ಇವರು ತಮ್ಮನ್ನು ದೇವರೆಂದು ಕರೆದರು. ದಖನಿ ಸಾಹಿತ್ಯದ ಮೂಲಗಳ ಪ್ರಕಾರ ಅಮೀನೊದ್ದೀನ ಆಲಾರ ಶಿಷ್ಯರು ತಮ್ಮ ಫೀರ್‌ನನ್ನು ದೇವರ ಸ್ಥಾನ ನೀಡಿದ್ದರು. ಅವರ ಶಿಷ್ಯರಾದ ಮಹಮ್ಮದ ಮಜ್ಜಮರು ತಮ್ಮ ಕೃತಿಯಾದ "ಶಜರತ-ಅಲ್-ಅತಕಿಯಾ" ದಲ್ಲಿ ತಮ್ಮ ಸೂಫಿಯ ವಿಶೇಷತೆಗಳ ಬಗ್ಗೆ ಪ್ರಶಂಶಿಸಿದ್ದಾರೆ. ಇನ್ನೂ ಹೆಚ್ಚಿಗೆ ಹೇಳಬೇಕಾದರೆ, ಅವರ ತಮ್ಮ ಗುರುವನ್ನು "ಮೆಹದಿ" ಯೊಡನೆ ತುಲನೆ ಮಾಡಿದ್ದಾರೆ. (ಮೆಹದಿ ಎಂದರೆ, ಕೊನೆಯ ದಿನ ಪ್ರತ್ಯಕ್ಷವಾಗಿ ಎಲ್ಲಡೆ ಇಸ್ಲಾಂ ಧರ್ಮವನ್ನು ಸಾರುವವರು). ಅವರು ಹೇಳುವುದೆನೆಂದರೆ ನಾನು ನನ್ನ ಈ ಕಣ್ಣುಗಳಿಂದ ನೋಡಿದ್ದೇನೆ, ಯಾರು ಅಮೀನರನ್ನು ಭೆಟ್ಟಿಯಾಗುವರೊ ಅವರು ಲಾಭ ಪಡೆದುಕೊಳ್ಳುವರು.

ಅಮೀನರ ಘನ ವಕ್ತಿತ್ವ ಮತ್ತು ಭೊಧನೆಗಳಿಂದ ಹಿಂದೂ-ಮುಸಲ್ಮಾನರಲ್ಲದೇ ಇತರ ಜಾತಿಯ ಜನರು ಸಹ ಆಕರ್ಷಿತರಾದರು. ಲಕ್ಷಗಟ್ಟಲೆ ಜಂಗಮರು ಕೂಡಾ ಇವರನ್ನು ಆರಾಧಿಸಿಲಾರಂಭಿಸಿದರು. ಮತ್ತು ತಮ್ಮ ಅಸ್ತಿತ್ವದ ಬಗ್ಗೆ ಕೇಖಲಾರಂಭಿಸಿದರು. ನಾನಾರು? ಈ ಸತ್ಯವನ್ನು ಸಾರು ಅಮೀನರಲ್ಲಿರುವನಾರು? ಈ ಎಲ್ಲ ವಿಷಯದ ಬಗ್ಗೆ ಅಮೀನರು ಅವರನ್ನು ತೃಪ್ತಿಪಡಿಸಿದರು. ಅಮೀನರು ಹೇಳಿದ್ದೆನೆಂದರೆ, ನನಗೆ ಎಷ್ಟು ಭೋಧಿಸಲಾಗಿದೆ ಅದನ್ನು ನಾನು ನಿಮಗೆ ಭೋಧಿಸಿದ್ದೇನೆ. ಈ ಎಲ್ಲ ಭೋಧನೆಗಳಿಂದ ಪ್ರಭಾವಿತರಾದ

ಲಕ್ಷಾನುಗಟ್ಟಲೆ ನಾಸ್ತಿಕರು ಅವರ ಶಿಷ್ಯರಾದರು.[೯೫] ಶಾಹಪುರ ಕ್ಷೇತ್ರದ ಅನೇಕ ಜನ ಲಿಂಗಾಯತರು ಇವರ ಶಿಷ್ಯರಾದರು. ಮೇಲಿ ವಿವರಿಸಿದ ಎಲ್ಲಾ ಸಂಗತಿಗಳು ಕೇವಲ ಸಾಹಿತ್ಯವಾಗದೇ ತತ್ವಜ್ಞಾನದ ಸಾರವಾಗಿದೆ.

ಈ ಎಲ್ಲ ಅಧ್ಯಾತ್ಮಿಕ ಸಾಹಿತ್ಯವಲ್ಲದೇ ಈ ಸೂಫಿಗಳು ಇತರ ಸಾಹಿತ್ಯವನ್ನು ಸಹ ರಚಿಸಿದ್ದಾರೆ. ಅವುಗಳೆಂದರೆ, "ಚಕ್ಕಿನಾಮಾ" (ಬೀಸುವಗೀತೆ), "ಚರಕಾನಾಮ" (ನೂಲುವಗೀತೆ), "ಲೋರಿನಾಮಾ"(ಜೋಗುಳ ಗೀತೆ) "ಶಾದಿನಾಮಾ" (ಮದುವೆ ಸಮಯ ಹಾಡುವ ಗೀತೆ) "ಸುಹಾಗನಾಮಾ"(ಮುತ್ತೈದೆ ಗೀತೆ) ಮತ್ತು ಸುಹೇಲಾ(ಪ್ರಶಂಶೆಯ ಗೀತೆ). ಈ ಸೂಫಿಗಳೇ ಹಿಂದೂ ಮತ್ತು ಮುಸ್ಲಿಮರ ನಡುವೆ ಬಾಂಧವ್ಯದ ಸೇತುವೆಯಾಗಿ ತಮ್ಮ ಜನಪದ ಸಾಹಿತ್ಯದಿಂದ ಎಲ್ಲರನ್ನು ಒಂದುಗೂಡಿಸಿದರು. ಈ ಜಾನಪಡ ಗೀತೆಗಳು ದಕ್ಷಿಣದ ಹಳ್ಳಿ ಹಳ್ಳಿಗಳಲ್ಲಿ ಪ್ರಸಿದ್ಧಿಪಡೆದಿದ್ದವು.

ಬಹಳಷ್ಟು ಸೂಫಿಗಳು ತಮ್ಮ ಕವನಗಳನ್ನು ಹಳ್ಳಿಗಾಡಿನ ಹೆಣ್ಣುಮಕ್ಕಳು ಮನೆಕೆಲಸಮಾಡುವಾಗ ಹಾಡುವ ಹಾಡುಗಳಿಗಾಗಿವೆ. ಉದಾಹರಣೆಗೆ, ಚಕ್ಕಿನಾಮಾವನ್ನು ಕಾಳುಕಡಿಗಳನ್ನು ಬೀಸುವಾಗ ಹಾಡುತ್ತಿದ್ದರು. ಚರಕಾನಾಮಾವನ್ನು ನೂಲನ್ನು ಎಳೆಯುವಾಗ, ದಾರ ತೆಗೆಯುವಾಗ ಹಾಡುತ್ತಿದ್ದರು. ಲೋರಿನಾಮಾವನ್ನು ಮಕ್ಕಳನ್ನು ಮಲಗಿಸಲು ಹಾಡುತ್ತಿದ್ದರೆ, ಶಾದಿನಾಮಾ ಮದುವೆಯ ಸಮಯದಲ್ಲಿ ಹಾಡುತ್ತಿದ್ದರು. ಅದರಂತೆ ಸುಹಾಗನಾಮಾ ಅಥವಾ ಮುತ್ತೈದೆಯ ಹಾಡು ಮತ್ತು ಸುಹೇಲಾ ಅಥವಾ ಪ್ರಶಂಸಿಯಹಾಡು. ಇವೆಲ್ಲವುಗಳು ಬಿಜಾಪುರದ ರಾಜ್ಯದಲ್ಲಿ ತುಂಬಾ ಪ್ರಸಿದ್ಧಿ ಪಡೆದಿದ್ದವು.[೯೬] ಪ್ರಮುಖವಾಗಿ ಎಂಟು ಚಕ್ಕಿನಾಮಾಗಳಲ್ಲಿ ಉಲ್ಲೇಖನಿಯಾವುದೆಂದರೆ, ಅಮೀನೊದ್ದೀನ ಆಲಾ ಖಲೀಫತ ಬಿಜಾಪುರ, ಶಾಹ ಹಾಷಿಮ ಖುದಾವಂದ ಹದಿ, ಮತ್ತೋರ್ವ ಶಿಷ್ಯರಾದ ಫಾರುಕಿ, ಈ ಸಾಹಿತ್ಯಕ್ಕೆ ಕೊಡುಗೆ ನೀಡಿದ ಮತ್ತೊಬ್ಬರೆಂದರೆ ಫಿಲ್-ಅಲ್-ಖಾದರಿ. ಸುಹಾಗನಾಮದ ಹಸ್ತಪ್ರತಿಯು ಶಹಾ ರಾಜು ಅವರ ಹೆಸರಿನಲ್ಲಿದೆ. ಇವರು ಆದಿಲ್‌ಶಾಹಿ ರಾಜ್ಯದ ಕೊನೆಯ ಭಾಗದಲ್ಲಿ ಇದ್ದರು. ಅಮಿನೊದ್ದೀನ ಆಲಾರ ಮೊಮ್ಮಗರಾದ 'ಶಹಾ ಅಲಿ ಫೀರ್ ಹುಸೈನಿ' ಅವರು ರಚಿಸಿದ "ಸುಹೇಲಾನಾಮಾ"ದ ಎರಡು ಹಸ್ತಪ್ರತಿಗಳು ದೊರತಿವೆ. ಇದರಲ್ಲಿ ಹೆಣ್ಣುಮಕ್ಕಳು ಪ್ರವಾದಿ ಮಹಮ್ಮದರ ಹೆಸರಿನಲ್ಲಿ ಭಕ್ತಿ ಗೀತೆಗಳು ಹಾಡಿದ್ದು ಇದೆ.[೯೭]

ಈ ಎಲ್ಲ ಬರಹಗಳ ಉದ್ದೇಶ ದೇವರಿಗೆ ಭಕ್ತಿ ಮತ್ತು ತಮ್ಮ ಪೀರ್ (ಗುರು)ಬಗ್ಗೆ . ಉದಾಹರಣೆಗಾಗಿ ಚಕ್ಕಿನಾಮಾ ನೋಡಬಹುದು. ಇದರಲ್ಲಿ ಪ್ರಥಮವಾಗಿ ದೇವರ ಹೆಸರು ನಂತರ ಅವನ ವಿಶೇಷತೆಗಳು ಮನಸ್ಸಿನಲ್ಲಿ ನಾನು ದೇವರ ಹೆಸರನ್ನು ಪಠಿಸುತ್ತೇನೆ. ನಂತರ ಪ್ರತಿ ಉಸಿರಿನೊಂದಿಗೆ ಹೇಳುವುದ, " ಲಾ ಇಲಾಹ ಇಲ್ಲಲ್ಲಾ " ದೇವರು ಗುಪ್ತವಾದ ಖಜಾನೆಯಿಂದ ಎಲ್ಲವನ್ನು ಕಲಾತ್ಮಕವಾಗಿ ಸೃಷ್ಟಿಸಿದ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ದೇವರು (ಹೇಳುತ್ತಾನೆ) ನಾನೊಂದು ಗುಪ್ತ ಖಜಾನೆ, "ನಾನು ನನ್ನನ್ನು ಪರಿಚಯಸಿಲೆಂದು ಈ ಜಗತ್ತನ್ನು ಸೃಷ್ಟಿಸಿದೆ". ಇದನ್ನು ವಿವರಿಸಬೇಕಾದರೆ ಹೀಗೂ ಹೇಳಬಹುದು, ದೇವರು ಇದೆಲ್ಲವನ್ನು ತನ್ನ ಶಕ್ತಿಯಿಂದ ಸೃಷ್ಟಿಸಿದ. ದೇವರು ಗುಪ್ತ ಖಜಾನೆಯಿಂದ ಹೊರ ಬಂದು ಮಹಮ್ಮದರಲ್ಲಿ ಕಾಣಿಸಿಕೊಂಡ. ದೇವರ ಉಪಸ್ಥಿತಿಯಲ್ಲಿ ಪ್ರವಾದಿಯವರು ಪ್ರಮುಖರು ಇವರ ಭೋದನೆಗಳು ನಮ್ಮನ್ನು

ಎರಡೂ ಲೋಕದಲ್ಲಿ ಸಹಾಯಕವಾಗಿವೆ. ಪ್ರವಾದಿಯವರ ಖಲೀಫರು ಅಲಿಯವರು, ಅಲ್ಲಾಹ್, ಮಹಮ್ಮದ ಮತ್ತು ಅಲಿ ನಮ್ಮ ನಾಯಕರು. ನಾವು ಅವರನ್ನು ಸಂಪೂರ್ಣವಾಗಿ ನಂಬುತ್ತೇವೆ, ಮತ್ತು ಅವರ ಆಜ್ಞೆಗಳನ್ನು ಗುಲಾಮರಂತೆ ಒಪ್ಪಿಕೊಳ್ಳುತ್ತೇವೆ.[೯೮]

ಚಕ್ಕಿನಾಮಾದಲ್ಲಿ ಬಿಸುಕಲ್ಲಿನ ಭಾಗಗಳು ಮತ್ತು ಹೆಣ್ಣುಮಕ್ಕಳ ಕೆಲಸ ಎರಡನ್ನು ಸಾದಾ ರೀತಿಯಲ್ಲಿ ಇಸ್ಲಾಮಿಗನುಗುಣವಾಗಿ ವಿವರಿಸಲಾಗಿದೆ. “ನೋಡಿ ನಮ್ಮ ದೇಹವು ಕೂಡ ಬಿಸುಗಲ್ಲಿನಂತೆ” ಬಿಸುವಾಗ ಎಚ್ಚರವಿರಲಿ, ರಾಕ್ಷಸಿ ಎಂದರೆ ನನ್ನ ಸವತಿ, ಸವತಿಯು ನನ್ನನ್ನು ಕೆಲಸ ಮಾಡುವಾಗ ಅಡ್ಡಪಡಿಸುತ್ತಾಳೆ ಮತ್ತು ನನಗೆ ದಣಿವಾಗುತ್ತದೆ. ಯಾ ಬಿಸ್ಮಿಲ್ಲಾ ಹು ಹು ಅಲ್ಲಾಹ್ ಬಿಸುಗಲ್ಲಿನ ಗೂಟ ಅಲೀಫ್ ನಂತೆ ಇದೆ. ಅದರರ್ಥ ಅಲ್ಲಾಹ್, ಬಿಸುಗಲ್ಲಿನ ಗಾಲಿಗಳು ಮಹಮ್ಮದ. ಈ ರೀತಿಯಾಗಿ ಸತ್ಯಶೋಧಿಸುವ ಸಂಬಂಧವನ್ನು ನೋಡಬಹುದು. ‘ಯಾ ಬಿಸ್ಮಿಲ್ಲಾ ಹು ಹು ಅಲ್ಲಾಹ್’ ನಾವು ಕಾಳುಗಳನ್ನು ಬಿಸುಗಲ್ಲಿನಲ್ಲಿ ಹಾಕುತ್ತೇವೆ. ಇದಕ್ಕೆ ನಮ್ಮ ಕೈಗಳೇ ಸಾಕ್ಷಿ. ಈ ಬಿಸುಗಲ್ಲು ಅಂದರೆ ದೇಹ ಶರಿಯತನ್ನು ಅನುಸರಿಸಿದರೇ ಆರೋಗ್ಯವಾಗಿರುವುದು ‘ಯಾ ಬಿಸ್ಮಿಲ್ಲಾ ಅಲ್ಲಾಹ್ ಹು ಹು ಅಲ್ಲಾಹ್’. ಅಲ್ಲಾಹ್‌ನ ಹೆಸರು ಅಲೀಫ್‌ನಿಂದ ಬಂದಿದೆ, ಇದರ ಅರ್ಥ ಪೀರ್ ನಮ್ಮ ಜೀವನವನ್ನು ನಡೆಸುತ್ತಾರೆ. ಹಿಟ್ಟನ್ನು ಬಿಸಿರಿ ಮತ್ತು ಪರಿಕ್ಷಿಸಿರಿ, ‘ಯಾ ಬಿಸ್ಮಿಲ್ಲಾ ಅಲ್ಲಾಹ್ ಹು ಹು ಅಲ್ಲಾಹ್.’[೯೯]

ಇಂಥಹ ಪ್ರಸಿದ್ಧ ಸಾಹಿತ್ಯವಾದ ಚಕ್ಕಿನಾಮಾ ಮತ್ತು ಚರಕಾನಾಮಾದಿಂದ ಚಿಶ್ತಿ ಸೂಫಿಗಳು ದೇವರ ಸಂದೇಶವನ್ನು ಸರಳವಾದ ಬರಹಗಳಿಂದ ಪ್ರಸ್ತುತ ಪಡಿಸಿದರು. ತಮ್ಮ ಹಿಂದೆ ಅವರು ತಮ್ಮ ಜಾನಪದ ಸಾಹಿತ್ಯವನ್ನು ಮತ್ತು ಗೋರಿಗಳನ್ನು ಬಿಟ್ಟರು. ಅವರ ಗೋರಿಗಳಿಗೆ ಭೇಟಿಕೊಟ್ಟು, ಚಕ್ಕಿನಾಮಾ, ಚರಕಾನಾಮಾ ಮತ್ತು ಲೋರಿನಾಮಾವನ್ನು ಹೆಣ್ಣುಮಕ್ಕಳು ಪಠಿಸುವುದ ಇಸ್ಲಾಮಿನ ಪದ್ಧತಿಯಂತೆ ಬಿಜಾಪುರದ ಸಮಾಜ ಮತ್ತು ಸಂಸ್ಕೃತಿಯಲ್ಲಿ ಕಾಣಬಹುದು.

ಕೆಲವು ಅಧ್ಯಾತ್ಮಿಕ ಬರಹಗಳು ಖಾದ್ರಿ ಸೂಫಿಗಳು ಮಾಡಿದ್ದಾರೆ. ಸೈಯದ್ ಮಹಮ್ಮದ ಖಾದ್ರಿಯವರು “ಮೆರಾಜ-ಉಲ್-ಮಹಖ್ಬಿನ್” ಮತ್ತು ಶಹಾ ಅಬುಲ್ ಹಸನ್ ಖಾದ್ರಿ-ಬಿನ್-ಶಹಾ ಹಬೀಬಲ್ಲಾರವರು “ಸುಖ ಅಂಜಾನ್” ಗ್ರಂಥವನ್ನು ರಚಿಸಿದ್ದಾರೆ. ಇವುಗಳನ್ನು ಸೈಯಿದಾ ಜಾಫರ್ ರವರು “ಅಬುಲ್ ಹಸನ ಖಾದ್ರಿಯವರ ಸುಖ ಅಂಜಾನದ ಒಂದು ಪರಿಚಯ” ಎಂಬ ಕೃತಿಯಲ್ಲಿ ಪ್ರಕಟಿಸಿದ್ದಾರೆ.[೧೦೦] ಅದೇ ಪ್ರಕಾರ “ಗಂಜ-ಉಲ್-ಅಸ್ರಾರ್” ಎಂಬ ಗ್ರಂಥವನ್ನು ರಚಿಸಿದ್ದಾರೆ. ಈ ಎಲ್ಲ ಕೃತಿಗಳು ಅಧ್ಯಾತ್ಮಿಕ ವಿಷಯಗಳನ್ನೊಂಡಿದೆ.

ಈ ಕಾಲದಲ್ಲಿ ದಖನಿ, ಪರ್ಶಿಯನ್ ಭಾಷೆಯಲ್ಲಿ ಅಲ್ಲದೇ ಅರೇಬಿಕ್ ಭಾಷೆಯಲ್ಲೂ ಕೂಡ ಸಾಹಿತ್ಯ ಹೊರಬಂದಿದೆ. ಈ ಕಾಲದಲ್ಲಿ ಐದು ಜನ ವಿದ್ವಾಂಸರು ಈ ಸಾಹಿತ್ಯದ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಅರೇಬಿಕ ಸಾಹಿತ್ಯದ ಬಗ್ಗೆ ಹೇಳಬೇಕಾದರೆ, ಶ್ರೇಷ್ಠ ವಿದ್ವಾಂಸರಾದ ಶಹಾ ಸಿಗಬತ್‌ಅಲ್ಲಾ ರವರ ಕೆಲಸವನ್ನು

ನೆನೆಯಬೇಕು. ಇವರು ನಾಲ್ಕು ಕೃತಿಗಳನ್ನು ರಚಿಸಿದರು. ಅವುಗಳೆಂದರೆ, "ಕಿತಾಬ-ಅಲ್-ವಹದತ್", "ಜವಾಹಿರ-ಇ-ಖಮ್ಸಾ", "ಫತುವಾ-ಇ-ಇಬ್ರಾಹಿಮ ಶಾಹಿಯಾ" ಮತ್ತು ಇರತುದ್-ದಖಿಖ್ ಫಿಶರಾಹ-ಇ-ಮೀರಾತಿಲ್ ಹಕೀಕ್" ಮತ್ತು ಕುರಾನಿನ ವಿವರಣೆ.[೧೦೧] ಶೇಖ ಮಹಮ್ಮದ ಗಹೂತರವರು ಪರ್ಶಿಯನ್ ಭಾಷೆಯಲ್ಲಿ ರಚಿಸಿದ "ಕಿತಾಬ-ಅಲ್-ವಹದತ್" ಕೃತಿಯನ್ನು ಅರೇಬಿಕ್ ಭಾಷೆಯಲ್ಲಿ ಅನುವಾದಿಸಿದರು. ಎರಡನೆಯದನ್ನು ಸುಲ್ತಾನ ೧ನೆಯ ಇಬ್ರಾಹಿಮ ಶಾಹನಿಗೆ[೧೦೨] ಅರ್ಪಿಸಿದರು. ಅರೇಬಿಕ್ ಭಾಷೆಗೆ ಕೊಡುಗೆ ನೀಡಿದ ಮತ್ತೊರ್ವ ವಿದ್ವಾಂಸರೆಂದರೇ, ಹಬೀಬಅಲ್ಲಾ, ಮುಲ್ಲಾ ಖಲೀಲಲ್ಲಾಹರ ಮೊಮ್ಮಗ ಬಿಜಾಪುರದವರು. ಮತ್ತು ಸಿಗಬತಲ್ಲಾರವರ ಶಿಷ್ಯ. ಇವರ ತಂದೆಯಾದ ಮುಲ್ಲಾ ಅಹ್ಮದರು. ಹಿಜ್ಜಾಜಗೆ ವಲಸೆ ಹೋಗಿ ಅಲ್ಲಿ ಐದು ವರ್ಷ ತಂಗಿ ಶ್ರೇಷ್ಠ ಅರೇಬಿಕ್ ವಿದ್ವಾಂಸರಾದ, ಶೇಖ ಇಬ್ನೆ ಹಜರ ಮಕ್ಕಿ ಮತ್ತು ಶೇಖ ಅಲಿ ಮುತ್ತಖಿ ಇವರ ಗರಡಿಯಲ್ಲಿ ಪಳಗಿ ಅಭ್ಯಾಸ ಮಾಡಿದರು. ತಂದೆ ಮತ್ತು ಮಗ ಇಬ್ಬರು ಅಧ್ಯಾತ್ಮದಲ್ಲಿ ಆಸಕ್ತರಿದ್ದರು. ಇವರು ಮುಲ್ಲಾ ಶುಕ್ರುಲ್ಲಾ ಶಿರಾಜಿಯೊಂದಿಗೆ (೧೬೩೮) ಚರ್ಚಿಸಿ ಕವನಗಳನ್ನು ರಚಿಸಿದರು. ಎರಡನೆ ಇಬ್ರಾಹಿಮ ಆದಿಲ್‌ಶಾಹನ ಆಸ್ಥಾನದಲ್ಲಿ ರಾಯಬಾರಿಯಾಗಿದ್ದರು. ಇವರು ಪ್ರಮುಖ ಅರೇಬಿಕ ಗ್ರಂಥ "ಮೇಜೈಬುಲ್ ಮಖಲುಖಾತ-ಇ-ಗರಾಯಿಬ-ಉಲ್-ಮೌಜುದಾತ" ಪರ್ಶಿಯನ್ ಭಾಷೆಯಲ್ಲಿ ಅನುವಾದಗೊಂಡಿತು. ಅರೇಬಿಕ ಸಾಹಿತ್ಯಕ್ಕೆ ಕೊಡುಗೆ ನೀಡಿದ ಐದನೆಯ ವಿದ್ವಾಸಂರೆಂದರೆ, 'ಜೈನ್-ಅಲ್-ದಿನ್ ಬಿನ್ ಅಲಿ-ಅಲ್-ಮಾಬರಿ (೧೫೨೨) ಇವರು ಪ್ರಖ್ಯಾತ ವಿದ್ವಾಂಸರು, ಇವರು ಇಸ್ಲಾಮಿನ ಸರಿಸಮಾರು ಪ್ರತಿಯೊಂದು ವಿಭಾಗಕ್ಕಾಗಿ ಅಂದರೆ ಸಂಪ್ರದಾಯ (ಹದಿಸ), ಕಾನೂನು (ಫೀಖ್ವಾ) ಮತ್ತು ಕವನಗಳು[೧೦೩] ಇವೆಲ್ಲವುಗಳು ಬಿಜಾಪುರದ ರಾಯಲ್ ಲೈಬ್ರರಿಯಲ್ಲಿ ಸಂರಕ್ಷಿಸಿಲಾಗಿತ್ತು. ಅರೇಬಿಕ ಸಾಹಿತ್ಯಕ್ಕೆ ಆದಿಲ್‌ಶಾಹಿ ಸುಲ್ತಾನರ ಮಹತ್ತರ ಕೊಡುಗೆ ಎಂದರೆ ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ರಚಿಸಿದ ಕುರಾನಿನ ಒಂದು ಭಾಗವಾಗಿದೆ. ಇದು ಸುಮಾರು ೪೦ ಪುಟಗಳನ್ನೊಳಗೊಂಡಿದೆ. ಇದರ ಪ್ರತಿಯನ್ನು ಸಾಲಾರ ಜಂಗ ವಸ್ತುಸಂಗ್ರಾಹಾಲಯದ ಗ್ರಂಥಾಲಯದಲ್ಲಿ ಸಂರಕ್ಷಿಸಲಾಗಿದೆ.

ಅಧ್ಯಾತ್ಮಿಕ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದವರೆಂದರೆ, 'ಶಹಾ ಜೈನ ಮುಖಬಿಲ' ಇವರು **ಮಹಮ್ಮದ ಆದಿಲ್‌ಶಾಹನ** ಕಾಲದಲ್ಲಿ ಅರೇಬಿಯಾದಿಂದ ಬಂದವರು. ಇವರು ಕಲಿಯುವಿಕೆಯಲ್ಲಿ ಮತ್ತು ಪುಸ್ತಕ ಪ್ರಿಯರು. ಜುಬೇರಿಯವರ ಪ್ರಕಾರ ಅವರ ಗ್ರಂಥಾಲಯದ ಸುಮಾರು ೮೦೦ ಹಸ್ತಪ್ರತಿಗಳಲ್ಲಿ ೩೦೦ಕ್ಕಿಂತ ಹೆಚ್ಚಿನ ಬರಹಗಳು ಇವರೇ ಬರೆದವುಗಳಾಗಿವೆ[೧೦೪]. ಹಜರತ ಮಿರಾಂ ಮಹಮ್ಮದ ಮುದರಿಸ್, ಸೈಯದ ಅಬ್ದುಲ್ ರಹಮಾನ ಮತ್ತು ಅವರ ಮಗನಾದ ಅಲಿ ಮಹಮ್ಮದರು ಶ್ರೆಷ್ಠ ಮತ್ತು ವಿದ್ವಾಂಸರು ಮತ್ತು ಬರಹಗಾರರು. ಇವರು ಅಧ್ಯಾತ್ಮಿಕ ಒಪ್ಪಂದಗಳ ಬಗ್ಗೆ ಅರೇಬಿಕ ಮತ್ತು ದಖನಿ ಭಾಷೆಯಲ್ಲಿ ಬರೆದಿದ್ದಾರೆ.[೧೦೫]

ಬಿಜಾಪುರ ಸುಲ್ತಾನರ ಕಾಲದಲ್ಲಿ ರಚಿಸಲ್ಪಟ್ಟ ಇನ್ನೊರಡು ಗ್ರಂಥಗಳೆಂದರೆ, "ಫೀಖಾ-ಇ-ಇಬ್ರಾಹಿಮ ಮತ್ತು ಬರಾಹಿ-ಇ-ಖತ್ತ ಮೊದಲನೆಯದು ಕಾನೂನಿಗೆ ಸಂಬಂಧಪಟ್ಟ ಪ್ರಾರ್ಥನೆಗಳು ಮತ್ತು ಇಸ್ಲಾಮಿನ ಸಂಪ್ರದಾಯಗಳು, ಇದು ಅಭಿಪ್ರಾಯಗಳು ಮತ್ತು ತೀರ್ಪುಗಳನ್ನೊಳಗೊಂಡಿದೆ. ಅಹಮ್ಮದ-ಬಿನ್-

ಮಹಮ್ಮದರಿಂದ ಪ್ರತೇಕ ಕಾನೂನಿನ ಕೊಟ್ಟಂತಹ ಪ್ರಕರಣಗಳು, ಇವರು ಅರೇಬಿಯಾದ ಪ್ರಸಿದ್ಧ ವಿದ್ವಾಂಸರಾಗಿದ್ದರು. ಇದನ್ನು ಇವರು ಒಂದನೆಯ ಇಬ್ರಾಹಿಮ ಆದಿಲ್‌ಶಾಹನಿಗೆ ಅರ್ಪಿಸಿದರು. ಇದು ಎರಡು ಭಾಗಗಳಲ್ಲಿ ವಿಭಜನೆಯಾಗಿದೆ ಇದರಲ್ಲಿ ಪ್ರಾರ್ಥನೆಗಳು, ಉಪವಾಸ ವ್ರತಗಳು, ಮದುವೆ, ಮುಂಜವಿ ಮತ್ತು ಇನ್ನಿತರ ನಿಯಮದ ಬಗ್ಗೆ ಪ್ರಸ್ತಾಪಿಸಲಾಗಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸುನ್ನಿ ಪದ್ಧತಿಯಲ್ಲಿರುವ ಧಾರ್ಮಿಕ ಮತ್ತು ಕಾನೂನಿ ವಿಷಯ ವಸ್ತುವನ್ನೊಳಗೊಂಡಿದೆ.

ಎರಡನೆಯ ಗ್ರಂಥವಾದ "ಬರಹಿ-ಇ-ಖತ್ತ" ಕೂಡ ಸುನ್ನಿ ಪದ್ಧತಿಯ ಸಿದ್ಧಾಂತವೇ ಆಗಿದೆ. ಇದನ್ನು ಅರೇಬಿಕ ಭಾಷೆಯಿಂದ ಪರ್ಶಿಯನ್ನ ಭಾಷೆಗೆ ಅನುವಾದಿಸಲಾಗಿದೆ. ಅಹ್ಮದ ಹುಸೇನರ 'ಸವಾಯಿಖುಲ್ ಮಹರಿಖ್ಖಾ'ವನ್ನು ಕಮಾಲೋದ್ದಿನ-ಇ-ಜಹರಾಮಿಯವರು ಪರ್ಶಿಯನ ಭಾಷೆಯಲ್ಲಿ ಅನುವಾದಿಸಿದ್ದಾರೆ. ಇವು ರಮಜಾನ ತಿಂಗಳಲ್ಲಿ ಕ್ರಿ.ಶ೧೫೫೦ರಲ್ಲಿ ಕೊಟ್ಟಂತಹ ಖುತ್ಬಾ. ಇವುಗಳನ್ನು ಪುಸ್ತಕದ ರೂಪದಲ್ಲಿ ಸಂರಕ್ಷಿಸಲಾಗಿದೆ. ಈ ಅನುವಾದವು ಸಹ ಸುನ್ನಿ ಸುಲ್ತಾನಾದ ಎರಡನೆಯ ಇಬ್ರಾಹಿಮ ಆದಿಲ್‌ಶಾಹನಿಗೆ ಸಮರ್ಪಿಸಿಲಾಗಿದೆ. ಇದರಲ್ಲಿ ಸಂಪ್ರದಾಯಿಕ ಖಲೀಫಾಗಳಾದ ಅಬುಬಕ್ರ, ಉಮರ. ಉಸ್ಮಾನ ಮತ್ತು ಅಲಿಯವರ, ಪ್ರವಾದಿಯವರ ಅನೇಕ ಹದಿಸಗಳನ್ನು ಸೈದ್ಧಾಂತಿಕವಾಗಿ ಚರ್ಚಿಸಿದ್ದಾರೆ. ಸುನ್ನಿಯವರ ಬಗ್ಗೆ ಶಿಯಾಗಳು ಮತ್ತು ನಾಸ್ತಿಕರು ಮಾಡಿದ ಆರೋಪಗಳನ್ನು ಅಲ್ಲಗಳೆಯಲಾಗಿದೆ. ಕೊನೆಯಲ್ಲಿ ಸುನ್ನತದ ಪ್ರಮುಖ ತತ್ವ ಮತ್ತು ಸಿದ್ಧಾಂತಗಳನ್ನು ವಿವರವಾಗಿ ವರ್ಣಿಸಲಾಗಿದೆ.[೧೦೬]

ಆದಿಲ್‌ಶಾಹಿ ಸುಲ್ತಾನರು ಕೂಡಾ ಗ್ರಂಥಾಲಯಗಳನ್ನು ಹೊಂದಿದ್ದರು. ಶಿರಾಜಿಯವರ ಪ್ರಕಾರ, ಬಿಜಾಪುರದಲ್ಲಿ ರಾಜಪರಿವಾರದ ಗ್ರಂಥಾಲಯವಿದ್ದು, ಅದರಲ್ಲಿ ಅನೇಕ ವಿಭಾಗಗಳು ಇದ್ದವು, ಅವುಗಳೆಂದರೆ ಕಾನೂನು, ವ್ಯಾಕರಣ, ತರ್ಕಶಾಸ್ತ್ರ, ಭೌತಶಾಸ್ತ್ರ, ಜೋತಿಷ್ಯಶಾಸ್ತ್ರ, ಅಂಕಗಣಿತ, ಕುರಾನಿನ ಅನುವಾದ ಹದಿಸಗಳು (ಪ್ರವಾದಿಯವರ ಹೇಳಿಕೆಗಳು) ಮತ್ತು ಬುದ್ಧಿವಾದದ ವಿಷಯಗಳ ಕುರಿತು ಅಸಂಖ್ಯೆ ಪುಸ್ತಕಗಳು ಅವರ ಗ್ರಂಥಾಲಯದಲ್ಲಿದ್ದವು.[೧೦೭] ಇದಲ್ಲದೇ ಅಸಂಖ್ಯಾತ ಪರ್ಶಿಯನ ಕವಿಗಳು ಅಂದರೆ 'ದಿವಾನ-ಇ-ಜಾಮಿ', 'ದಿವಾನ-ಇ-ಹಾಫೀಜ' 'ವಿಸ್ವ ರಮನಿ'ರವರ ಪರ್ಶಿಯನ ಪುಸ್ತಕಗಳು ಇವರ ಗ್ರಂಥಾಲಯದಲ್ಲಿದ್ದವು. ಬಿಜಾಪುರದಲ್ಲಿ ಅರೇಬಿಕ ಸಾಹಿತ್ಯದ ಬೆಳವಣಿಗೆಗೆ ಎರಡು ಪ್ರಮುಖ ಕಾರಣಗಳೆನ್ನಬಹುದು ಒಂದನೆಯದಾಗಿ ವಿದ್ವಾಂಸರಿಂದ ಮತ್ತೊಂದು ಕಾರಣವೆಂದರೆ ಗ್ರಂಥಾಲಯಗಳು.

ಬ) ಜಾತ್ಯಾತೀತ ಸಾಹಿತ್ಯ (The Secular Literature):

ಆದಿಲ್‌ಶಾಹಿ ಸುಲ್ತಾನರ ಆಳ್ವಿಕೆಯಲ್ಲಿ ಜಾತ್ಯಾತೀತ ಸಾಹಿತ್ಯಕ್ಕೆ ಆಶ್ರಯದಾತರಾಗಿದ್ದರು. ಇವರು ತುಂಬಾ ಉದಾರಿಯಾಗಿದ್ದರಿಂದ ಧಾರ್ಮಿಕ ಸಾಹಿತ್ಯಕ್ಕೆ ಮಹತ್ವ ನೀಡಲಿಲ್ಲ. ಮಧ್ಯ ಏಷಿಯಾದಿಂದ ಅನೇಕ ವಿದ್ವಾಂಸರು ಮತ್ತು ಕವಿಗಳನ್ನು ಇವರು ಬರಮಾಡಿಕೊಂಡರು. ಈ ಕಾಲದಲ್ಲಿ ಪರ್ಶಿಯನ ಮತ್ತು ದಖನಿ ಭಾಷೆಯಲ್ಲಿ ಅಪಾರವಾದ ಸಾಹಿತ್ಯ ನಿರ್ಮಾರ್ಣವಾಯಿತು. ಆದಿಲ್‌ಶಾಹಿ ಸುಲ್ತಾನರು ಕೇವಲ ವಿದ್ವಾಂಸರಿಗೆ

ಆಶ್ರದಾತರಾಗಿದಲ್ಲದೆ, ಸ್ವತಃ ಬರಹಗಾರರಾಗಿದ್ದರು. ಇವರು ಉತ್ಕೃಷ್ಟವಾದ ಸಾಹಿತ್ಯವನ್ನು ಪರ್ಶಿಯನ ಮತ್ತು ದಖನಿ ಭಾಷೆಯಲ್ಲಿ ರಚಿಸಿದರು. ಈ ಒಂಬತ್ತು ಜನ ಸುಲ್ತಾನರಲ್ಲಿ ಯೂಸುಫ ಆದಿಲ್‌ಖಾನ, ಇಸ್ಮಾಯಿಲ್ ಆದಿಲ್‌ಖಾನ, ಎರಡನೆಯ ಇಬ್ರಾಹಿಮ ಆದಿಲ್‌ಶಾಹ ಮತ್ತು ಎರಡನೆಯ ಅಲಿ ಆದಿಲ್‌ಶಾಹ ಶ್ರೇಷ್ಟ ಮಟ್ಟದ ಕವಿಗಳಾಗಿದ್ದರು. ಉಳಿದೆಲ್ಲಾ ಸುಲ್ತಾನರು ವಿದ್ವಾಂಸರನ್ನು ಪೊಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಯೂಸುಫ ಆದಿಲ್‌ಖಾನನು ಪರ್ಶಿಯನ ಭಾಷೆಯಲ್ಲಿ ಕವನಗಳನ್ನು ರಚಿಸಿದನು. ಅವನ ಮಾತ್ರಭಾಷೆಯು ತುರ್ಕಿಯಾಗಿತ್ತು. ಇವನು ಶಿರಾಜಿಯ ಸಂಗತದಲ್ಲಿ 'ಸವಾ'ದಲ್ಲಿ ಶಿಕ್ಷಣ ಪಡೆದಿದ್ದನು. ಶಿಯಾ ಬರಹಗಾರನಾದ 'ಸೈಯದ ಅಹಮ್ಮದ ಹರವಾಯಿ' ಇವನ ಆಸ್ಥಾನದ ಕವಿಗಳಾಗಿದ್ದರು. ಇವರ ಪ್ರಕಾರ ಯೂಸುಫ ಆದಿಲ್‌ಖಾನನು ಸುಂದರ ವ್ಯಕ್ತಿತ್ವ ಮತ್ತು ಒಳ್ಳೆಯ ಭಾಷಣಕಾರ ಕಲಿಯುವಿಕೆಯಲ್ಲಿ ಉತ್ಸಾಹ ತೋರುವವ ಮತ್ತು ತುಂಬಾ ಉದಾರಿಯಾಗಿದ್ದ. ಇತನು ಸುಂದರ ಲಿಪಿಕಾರನು ಹಾಗೂ ಇತರ ಬರಹಗಳನ್ನು ತಿದ್ದುತ್ತಿದ್ದ.[೧೦೮] ಇವನ ಗಝುಲ್ ಮತ್ತು ರುಬಾಯಿಗಳ ಬಗ್ಗೆ ಡಾ॥ ಡವರೆಯವರು ಹೇಳುವುದೆನೆಂದರೆ, ಇವುಗಳು ಪ್ರಾಸ ಮತ್ತು ಲಯಬದ್ಧವಾದ ಯೌವ್ವನದ ಪ್ರೇಮವುಳ್ಳ ಬರಹಗಳು.[೧೦೯] 'ಕಲಾಮಲ್ ಮುಲ್ಕ'ನಲ್ಲಿ ಇವನ ರಚನೆಗಳು ಪ್ರಕಟಣೆಯಾಗಿವೆ.

ಇದೇ ರೀತಿಯಾಗಿ ಇವನ ಮಗನಾದ ಇಸ್ಮಾಯಿಲನು ಸಹ ಕವಿ ಪರ್ಶಿಯನ ಭಾಷೆಯಲ್ಲಿ ಇತನು ಬರೆದನು. ದಖನ್ನಿನಲ್ಲಿ ಹುಟ್ಟಿದ ಆದರೆ. ಇತನು ಬರದದ್ದು ಪರ್ಶಿಯನಲ್ಲಿ ಅದಕ್ಕೆ ಮೂರು ಕಾರಣಗಳಿವೆ. ಮೊದಲನೆಯದಾಗಿ ಯುಸುಫನು ತನ್ನ ಮಗ ಇಸ್ಮಾಯಿಲನನ್ನು ದಖನಿಗಳಿಂದ ದೂರವಿರಿಸಿದ್ದನ್ನು. ಎರಡನೆಯದಾಗಿ ಇವನು ದಿಲಶಾದ ಆಗಾಳ ಲಾಲನೆ ಪೂಷಣೆಯಲ್ಲಿ ಬೆಳೆದ, ಇವಳು ವಿದೇಶಿಯಳಾಗಿದ್ದಳು. ಮೂರನೆಯದಾಗಿ ಇವಳಿಂದ ಇಸ್ಮಾಯಿಲು ಅರೇಬಿಕ, ತುರ್ಕಿ ಮತ್ತು ಪರ್ಶಿಯನ ಭಾಷೆಗಳಲ್ಲಿ ಶಿಕ್ಷಣವನ್ನು ಪಡೆದನು. ಇದಕ್ಕಾಗಿ ಇವಳು ತುರ್ಕಿ ಮತ್ತು ಇರಾನಿನ ಭೋಧರನ್ನು ನೇಮಿಸಿದ್ದಳು. ಹೀಗಾಗಿ ಇಸ್ಮಾಯಿಲನು ತುರ್ಕಿ ಮತ್ತು ಪರ್ಶಿಯನ ಭಾಷೆಯನ್ನು ದಖನಿಗಿಂತಲೂ ಚನ್ನಾಗಿ ಕಲಿತನು.[೧೧೦] ಇತಿಹಾಸಕಾರನಾದ ಫೆರಿಸ್ತಾನ ಪ್ರಕಾರ ಇಸ್ಮಾಯಿಲನು ಪರ್ಶಿಯನ ಸಾಹಿತ್ಯವನ್ನು ತುಂಬಾ ಪ್ರಿತಿಸುತ್ತಿದ್ದ. ಪರ್ಶಿಯನ ವಿದ್ವಾಂಸರೊಂದಿಗೆ ಬಹಳ ಸಲುಗೆಯಿಂದಿದ್ದಾ ಅಲ್ಲದೇ, ಹಾಸ್ಯಪ್ರರ್ವತಿಯುಳ್ಳನಾಗಿದ್ದನು.[೧೧೧] "ವಫಾಯಿ" (ವಿಶ್ವಾಸಿಕ) ಎಂಬ ಕಾವ್ಯನಾಮದಲ್ಲಿ ಬರೆಯುತ್ತಿದ್ದ. ಡಾ॥ ಡವರೆಯವರ ಪ್ರಕಾರ ಅವನ ಬರಹಗಳಲ್ಲಿ ಒಬ್ಬ ವಿರಹ ಪ್ರೇಮಿಯ ನಿರಾಶೆ ಮತ್ತು ಅಸಹಾಯಕತೆ ಕಂಡುಬರುತ್ತದೆ.[೧೧೨] ತಾರೀಕ–ಇ–ಫೇರಿಸ್ಥಾದಲ್ಲಿ ದಾಖಲೆಯ ಪ್ರಕಾರ ಅಮೀರ ಬರೀದನನ್ನು ಸೋಲಿಸಿದ ನಂತರ ಇಸ್ಮಾಯಿಲನಿಗೆ ಅಪಾರ ಸಂಪತ್ತು ದೊರೆಯಿತು. ಈ ಎಲ್ಲ ಸಂಪತ್ತನ್ನು ತನ್ನ ಆಸ್ಥಾನದ ವಿದ್ವಾಂಸ ಮತ್ತು ಕವಿಗಳಿಗೆ ಹಂಚಿದನು. ಇಸ್ಮಾಯಿಲನು ಬಹಮನಿ ಕವಿಯಾದ ಸೈಯದ ಅಲಿ ಅಖೀಲ ೫೦,೦೦ ನಾಣ್ಯಗಳನ್ನು ಮತ್ತು ೫೦,೦೦ ನಾಣ್ಯಗಳನ್ನು ಸೈಯದ ಅಹಮ್ಮದ ಹರವಾನಿಗೆ ಕೊಟ್ಟನು. ಪರ್ಶಿಯಾದ ಮೌಲಾನಾ ಶಾಹಿದ ಖುಮ್ಮಿಗೆ ಅಪಾರ ಹಣ ಮತ್ತು ಎರಡು ಸಲ ಬಂಗಾವನ್ನುತನ್ನ ಖಜಾನೆಯಿಂದ ಕೊಟ್ಟನು.[೧೧೩] ಬಿಜಾಪುರದ ಸುಲ್ತಾನರು ಸಾಹಿತ್ಯಕ್ಕಾಗಿ ವಿದ್ವಾಂಸರನ್ನು ಉದಾರವಾದ ಕೊಡುಗೆ ನೀಡಿದ್ದರಲ್ಲಿ ಸಂದೇಹವಿಲ್ಲ.

ಇದೇ ರೀತಿಯಾಗಿ ಅನ್ಯ ಕವಿಗಳೆಂದರೆ, ಎರಡನೆಯ ಇಬ್ರಾಹಿಮ ಆದಿಲ್‌ಶಾಹ ಮತ್ತು ಎರಡನೆಯ ಅಲಿ ಆದಿಲ್‌ಶಾಹ ಇವರಿಬ್ಬರೂ ತಮ್ಮ ಪೂರ್ವಜರಾದ ಯೂಸುಫ ಮತ್ತು ಇಸ್ಮಾಯಿಲರಂತೆ ಪರ್ಶಿಯನ್ನ ಭಾಷೆಯಲ್ಲಿ ಬರೆಯದೇ ದಖನಿ ಭಾಷೆಯಲ್ಲಿ ಬರೆದರು. ಇವರು ದಖನಿಯಲ್ಲಿ ಬರೆಯಲು ಮೊದಲನೆಯ ಕಾರಣವೆಂದರೆ, ಎರಡನೆಯ ಇಬ್ರಾಹಿ ಆದಿಲ್‌ಶಾಹನು ತನ್ನ ಪ್ರಾರ್ಥಮಿಕ ಶಿಕ್ಷಣವನ್ನು ದಖನಿ ಮತ್ತು ಮರಾಠಿ ಭಾಷೆಯಲ್ಲಿ ಪಡೆದಿದ್ದ. ಎರಡನೆ ಕಾರಣವೆಂದರೆ, ದಖನ್ನಿನ ಪರಿಸರದಲ್ಲಿ ಇವನ ಪೋಷಣೆಯಾಗಿತ್ತು. ಕ್ರಿ.ಶ. ೧೫೯೪ ರವರೆಗೆ ಇವನಿಗೆ ಪರ್ಶಿಯನ ಭಾಷೆಗೊತ್ತಿರಲಿಲ್ಲ. ಇಬ್ರಾಹಿಮನ ಪರ್ಶಿಯನ ಜ್ಞಾನದ ಬಗ್ಗೆ ಫೇರಿಸ್ತಾ ಮತ್ತು ಜುಬೇರಿಯರಲ್ಲಿ ಭಿನ್ನಾಭಿಪ್ರಾಯಗಳಿವೆ. ಫೇರಿಸ್ತಾನ ಪ್ರಕಾರ, ೧೫೯೪ ರಲ್ಲಿ ಶಹನವಾಜಖಾನ ಶಿರಾಜಿಯನ್ನು ವಕೀಲನನ್ನಾಗಿ ನೇಮಿಸಿಕೊಂಡ ನಂತರ ಅವನು ಸುಲ್ತಾನನನ್ನು ಪರ್ಶಿಯನ ಭಾಷೆ ಕಲಿಸಿದ.[೧೧೪] ಬಸಾತೀನ-ಉಸ್-ಸಲಾತಿನದ ಪ್ರಕಾರ ಮಹಮ್ಮದಖಾನ ತಂದೆ ದಿಲಾವರಖಾನನಿಂದ ಇಬ್ರಾಹಿಮನು ಪರ್ಶಿಯನ ಕಲಿಯಲಾರಂಭಿಸಿದ್ದು, ಇದು ಶಹನವಾಜಖಾನನು ಬಿಜಾಪುರಕ್ಕೆ ಬರುವ ಬಹಳ ಪೂರ್ವದ ಸಂಗತಿ.[೧೧೫] ಜುಬೇರಿಯು ಈ ಸತ್ಯವನ್ನು ಸಾದರ ಪಡಿಸುವುದಕ್ಕಾಗಿ ಯಾವುದೇ ಆಧಾರವನ್ನು ಪ್ರಸ್ತುತ ಪಡಿಸಿಲ್ಲ. ಆದರೆ ಫೇರಿಸ್ತಾ ಇಬ್ರಾಹಿಮನ ಆಸ್ಥಾನದ ಇತಿಹಾಸಕಾರನಾಗಿದ್ದರಿಂದ ನಾವು ಇವನ ಹೇಳಿಕೆಯನ್ನು ನಂಬಬೇಕಾಗುತ್ತದೆ. ಏನೇ ಇರಲಿ ಇಬ್ರಾಹಿಮನ ಪಾಂಡಿತ್ಯವನ್ನು ಪ್ರಶ್ನಿಸುವಂತಿಲ್ಲ. ಇವನು ಪರ್ಶಿಯನ ಕಾವ್ಯದ ನೈಜ್ಯ ವಿರ್ಮಶಕ. ಇದು ಅವನ ಆಸ್ಥಾನದ ಕವಿಯಾದ ಜುಬೇರಿಯ ಬರಹಗಳಿಂದ ತಿಳಿದು ಬರುತ್ತದೆ. ಅವನ ಪ್ರಕಾರ ಇಬ್ರಾಹಿಮನ ಬರಹಗಳಲ್ಲಿ ನುರಿತ ಭಾಷೆಯ ಮತ್ತು ಕೌಶಲ್ಯಗಳನ್ನು ಕಾಣಬಹುದು. ಜಹುರಿಯು ದಖನಿ ಭಾಷೆಯ ಗ್ರಂಥವಾದ "ಕಿತಾಬ-ಇ-ನೌರಸ" ಕೃತಿಯ ಪರಿವಿಡಿಯಲ್ಲಿ ಇಬ್ರಾಹಿಮನನ್ನು ಈ ರೀತಿಯಾಗಿ ಪ್ರಶಂಸಿದ್ದಾನೆ. " ಇಬ್ರಾಹಿಮನು ತನ್ನನ್ನು ಕವನಕ್ಕಾಗಿಯೇ ಅರ್ಪಿಸಿಕೊಂಡಿದ್ದಾನೆಂದು, ಅವನ ಸಾಹಿತ್ಯದ ಶಾಲೆಯಲ್ಲಿ ಇತರರು ಅಷ್ಟು ಪ್ರಭಾವಬಿರಿಲ್ಲ ಎನ್ನಬಹುದು.[೧೧೬] ವಿಮರ್ಶಕನಾಗಿ ಇಬ್ರಾಹಿಮನು ತನ್ನ ಕವನದ ಬಗ್ಗೆ ಪದೇ ಪದೇ ಹೇಳುವುದೇನೆಂದರೆ, " ಒಬ್ಬ ಬರಹಗಾರ ತಾನು ಬಳಸುವ ಶಬ್ದಗಳ ಶ್ರೇಷ್ಠತೆಯನ್ನು ಕಾಯ್ದುಕೊಳ್ಳಬೇಕು ಒಂದು ಶಬ್ದ ಬಳಸಿದಾಗ ಅಥವಾ ಕವನದಿಂದ ತೆಗೆದಾಗ ಕವನದಲ್ಲಾಗುವ ಪ್ರಭಾವವನ್ನು ಪರಿಗಣಿಸಬೇಕು. ಆದಾಗ ಮಾತ್ರ ಕವನವು ಬರಹವು ತನ್ನ ತಾಜಾತನವನ್ನು ಕಾಯ್ದುಕೊಳ್ಳುತ್ತದೆ. ಇಬ್ರಾಹಿಮನು ತನ್ನ ಕವನದಲ್ಲಿ ಕಠಿಣ ಶಬ್ದಗಳನ್ನು ಬಳಸಿದ್ದಾನೆ."[೧೧೭]

ಈ ಕೆಳಗಿನ ಉದಾಹರಣೆಯನ್ನು ಗಮನಿಸಿದಾಗ ಬರಹಗಳ ವಿಮರ್ಶೆಯಲ್ಲಿ ಅವನ ಬೆಳವಣಿಗೆಯ ಹಂತವನ್ನು ಕಾಣಬಹುದು. ಅವನ ಬರಹಗಳಲ್ಲಿ ಕಂಡುಬರುವ ಅಂಶವೆಂದರೆ, ಕವನದಲ್ಲಿ ಶಬ್ದಗಳ ರಚನೆ ಹೇಗಿರಬೇಕೆಂದರೆ ಓದುಗ ಅದನ್ನು ಕ್ಷಣದಲ್ಲೆ ಅರ್ಥಮಾಡಿಕೊಳ್ಳಬೇಕು ಮತ್ತು ಅನವಶ್ಯಕವಾದ ಸಾಲುಗಳನ್ನು ಸೇರಿಸಬಾರದು ಮತ್ತು ಮೊದಲನೆ ಸಾಲಿನ ಮತ್ಲಾ(ಕವನದ ಮೊದಲನೆ ಸಾಲು)ವು ಅರ್ಥಕೊಡುವಂತಿರಬೇಕು. ಮಕ್ತಾ(ಕವನದ ಕೊನೆಯಸಾಲು)ದಲ್ಲಿ ಕಾವ್ಯನಾಮವಿರಬೇಕು. ಇದನ್ನು ಬಿಟ್ಟು ಅನವಶ್ಯಕವಾದ ಸಾಲುಗಳಿರಬಾರದು. ಇದನ್ನು (ಕವಿತೆಯನ್ನು) ಹಿಂದೆ-ಮುಂದೆ ಮಾಡಿದಾಗಲೂ

ಅರ್ಥಗರ್ಭಿತವಾಗಿರಬೇಕು. ಇವುಗಳ ವಿಷಯವಸ್ತು ಪ್ರೇಮ ಮತ್ತು ವಿಶ್ವಾಸವಿರಬೇಕು. ಕವನದ ವಿಷಯವಸ್ತು ಏನೇಯಾಗಲಿ ಅಂದರೆ, “ಅಗಲಿಕೆ ಅಥವಾ ಮಿಲನ” ಇವೆರಡನ್ನು ಕೊನೆಯವರೆಗೆ ಉಳಿಸಿಕೊಂಡು ಹೋಗಬೇಕು. ಒಂದು ಸಾಲಿನಲ್ಲಿ ಪ್ರೇಮ ಇನ್ನೊಂದು ಸಾಲಿನಲ್ಲಿ ವಿರಹ ವಿರಬಾರದು.[೧೧೮]

ಎರಡನೆಯ ಇಬ್ರಾಹಿಮನ ಕೃತಿಯಾದ “ಕಿತಾಬ–ಇ–ನೌರಸ”ವು ದಖನಿ ಭಾಷೆಯ ಗೀತೆಗಳ ಸಂಕಲನ. ಇದರಲ್ಲಿ ೫೬ ಗೀತೆಗಳೂ, ೧೭ ದೋಹ್ರಾ (ದ್ವಿಪದಿ)ಗಳೂ ಇವೆ. ಭಾರತೀಯ ಉತ್ತರಾದಿ ಅಥವಾ ಹಿಂದುಸ್ತಾನಿ ಸಂಗೀತ ಕುರಿತಾಗಿ ಬರೆದ ಕವನಗಳ ಸಂಕಲನ ಎಂಬುದು ವಿದ್ವಾಂಸರ ಮತವಾಗಿದೆ. ಆದರೆ ಇದರಲ್ಲಿ ಇಬ್ರಾಹಿಮನು ತನ್ನ ಗೀತೆಗಳಿಗೆ ರಾಗಗಳನ್ನು ಸೂಚಿಸಿದ್ದಾನೆಯೇ ಹೊರತು ಲಕ್ಷಣಗಳನ್ನೇನೂ ಹೇಳಿಲ್ಲ. ಅವನು ಆಗಾಗ ತನ್ನ ಜೀವಿತ ಕಾಲದಲ್ಲಿ ಬರೆದನು. ಆದ್ದರಿಂದ ಇವು ಒಂದು ವಿಷಯ ಅಥವಾ ಕಥಾ ವಿಷಯಗಳನ್ನೊಳಗೊಂಡ ಗೀತೆಗಳೂ ಆಗಲಿಲ್ಲ. ಗೀತೆಗಳಿಗೆ ಒಟ್ಟು ೧೭ ರಾಗಗಳನ್ನು ಸೂಚಿಸಿದ್ದಾನೆ. ಅವುಗಳ ವಿವರ ಹೀಗಿದೆ.

ರಾಗ	ಭೂಪಾಳಿ–೨	ರಾಮಕಲಿ (ರಾಮಕಿರಿ)–೨	ಬೈರವ–೬
	ಮಾರೂ–೨	ಅಸಾವರಿ–೨	ದೇಶೀ–೧
	ಪೂರಬಾ–೧	ತೋಡೀ–೪	ಮಲ್ಹಾರ–೫
	ಗೌರಿ–೨	ಕಲ್ಯಾಣ–೪	ಧನಾಶ್ರೀ–೨
	ಕಾನಡಾ–೧೯	ಕೇದಾರ–೪	ಹಜೀಜ–೧
	ಬರಾಡಿ–೧	ಹಾಗೂ	ನೌರೋಜ–೧[೧೧೯]

ಹೀಗೆ ಸೂಚಿಸಿದ ೧೭ ರಾಗಗಳಲ್ಲಿ ಹಜೀಜ, ಬರಾಡಿ ಮತ್ತು ನೌರೋಜ ರಾಗಗಳು ಇಂದು ಪ್ರಚಲಿತದಲ್ಲಿಲ್ಲ. ಬಹುಶಃ ಇವು ಅವನೇ ರಚಿಸಿದ ಅಥವಾ ಸಮಕಾಲೀನ ಸಂಗೀತಗಾರರು ರಚಿಸಿದ ರಾಗಗಳಾಗಿರಬೇಕು.

ಇಬ್ರಾಹಿಮನು ಇವುಗಳಲ್ಲಿ ಗೀತೆಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಿದ್ದಾನೆ. ಮೊದಲು ನೌರಸ ಅಥವಾ ಇಂದು ಪ್ರಚಲಿತದಲ್ಲಿರುವ ಧ್ರುಪದ; ಅನಂತರ ಬೈನ ಅಥವಾ ಅಂತರಾಃ ಕೊನೆಯದು ಅಭೋಗ– ಹೀಗೆ ವಿಂಗಡಿಸಿದ ಕೆಲವು ಗೀತೆಗಳಲ್ಲಿ ಒಂದಕ್ಕಿಂತ ಅಧಿಕ ಬೈನಗಳೂ ಉಂಟು.

ಇಬ್ರಾಹಿಮನು ಭಾರತದ ಪುರಾಣಗಳನ್ನು ಓದಿರಬಹುದು ಅಥವಾ ಕೇಳಿರಬಹುದು. ಸೌಂದರ್ಯಶಾಸ್ತ್ರ ಹಾಗೂ ನವರಸಗಳನ್ನು ಪರಿಚಯಿಸುವಾಗ ಸಹಜವಾಗಿ ಆತನ ಮನಸ್ಸು ಭಾರತೀಯ ವಿದ್ಯಾದೇವತೆಯಾದ ಸರಸ್ವತಿಯುತ್ತ ಒಲಿದ. ಅಂತೆಯೇ ಮುಸಲ್ಮಾನರ ಸಂಪ್ರದಾಯದಂತೆ ‘ಬಿಸ್ಮಿಲ್ಲಾಹ’ ದಿಂದ ಪ್ರಾರಂಭಿಸಬೇಕಿದ್ದ ‘ಕಿತಾಬ–ಇ–ನೌರಸ’ ಕವನ ಸಂಕಲನವು ಸರಸ್ವತಿ ಆವಾಹನದಿಂದ ಪ್ರಾರಂಭವಾಗಿದೆ. ಸಂಕಲನದ ಮೊದಲ ದ್ವಿಪದಿಯು ಸರಸ್ವತಿಯನ್ನು ಕುರಿತಾಗಿದೆ.

" ನೌರಸ ಸೂರ ಜುಗ ಜಗಜೋತಿ ಆಣು ಸರೋಗುನಿ !

ಯೂ ಸತ್ ಸರಸುತೀ ಮಾತಾ ಇಬ್ರಾಹಿಮ ಪರಸಾದ ಭ ಈ ದೂನೀ' ॥

ಹೇ ತಾಯಿ ಸರಸ್ವತಿ ಇಬ್ರಾಹಿಮನ ಮೇಲೆ ನಿನ್ನ ಕೃಪೆ ಇರಲಿ, ನಿನ್ನ ಕೃಪೆಯಿಂದ ಆತನ ನವರಸ ಕಾವ್ಯವು ಜಗತ್ತಿನಲ್ಲಿ ಬಹುಕಾಲ ಬಾಳುತ್ತದೆ.[೧೨೦]

ಎರಡನೆಯ ಅಲಿ ಆದಿಲ್‌ಶಾಹನು ದಖನಿ ಭಾಷೆಯ ಉತ್ಕೃಷ್ಟ ಬರಹಗಾರ. ಇವನು ತನ್ನ ಪ್ರಾಥಮಿಕ ಶಿಕ್ಷಣವನ್ನು ದಖನಿ ಭಾಷೆಯಲ್ಲಿಯೇ ಪಡೆದ. ದಖನಿ ಸಾಹಿತ್ಯದ ಉತ್ಕೃಷ್ಟ ಕೃತಿಯಾದ "ದಿವಾನ"ನನ್ನು ಬರೆದ ಇತನ ತಾಯಿ ಮತ್ತು ಮಹಮ್ಮದ ಕುಲಿ ಕುತುಬಶಾಹನ ಮಗಳಾದ ಖತಿಜಾ ಸುಲ್ತಾನಾಳನನ್ನು ಇವನ ತಂದೆ ಮಹಮ್ಮದ ಆದಿಲ್‌ಶಾಹ ತುಂಬಾ ಮೆಚ್ಚುತ್ತಿದ್ದನು. ಇವನು ಖತಿಜಾ ಸುಲ್ತಾನಳ ಲಾಲನೆ-ಪೋಷಣೆಯಲ್ಲೇ ಬೆಳೆದ, ಇವಳು ಅಲಿನನ್ನು ದಖನಿ ಕಾವ್ಯದಲ್ಲಿ ಪಳಗಿಸಿದಳು. ಎರಡನೆಯದಾಗಿ ಸುಲ್ತಾನನು ದಖನಿ ಭಾಷೆಯ ಮಸನವಿಯಾದ 'ಖಾವರನಾಮಾ' ದಿಂದ ತುಂಬಾ ಪ್ರಭಾವಿತನಾಗಿದ್ದ ಈ ಕೃತಿಯು ರಾಣಿ ಖತಿಜಾ ಸುಲ್ತಾನಾಳಿಗೆ ಅರ್ಪಿಸಿದ್ದ ಬರಹಗಾರ ರುಸ್ತುಮಿ. ಈ ಎರಡು ಅಂಶಗಳು ಅಲಿ ಆದಿಲ್‌ಶಾಹನನ್ನು ದಖನಿ ಭಾಷೆಯಲ್ಲಿ ಬರೆಯಲು ಪ್ರೇರೇಪಿಸಿದವು. ಅವನ "ಖುಲ್ಲಿಯಾತ" ಎಂಬ ಕೃತಿಯು ದಖನಿ ಸಾಹಿತ್ಯದ ಶ್ರೇಷ್ಟ ಕೃತಿಯಾಗಿದೆ. ಇವನ ಕಾವ್ಯನಾಮ "ಶಾಹಿ" ಇವನ ಕೃತಿಯಾದ "ಖುಲ್ಲಿಯಾತ ಶಾಹಿ" ಕೂಡ ಬಿಜಾಪುರದಲ್ಲಿ ಉದಾರ ವಾತಾವರಣವನ್ನು ನಿರ್ಮಿಸುವಲ್ಲಿ ಕಿತಾಬ-ಇ-ನೌರಸನಂತೆಯೇ ಕೆಲಸ ಮಾಡಿತು. ಇದರಲ್ಲಿ ೬ ಕಸಿದೆಗಳಿವೆ ೩ ಸಣ್ಣ ಮಸನವಿಸಗಳಿವೆ, ೧೯ ಗಝುಲ್‌ಗಳಿವೆ, ೧ ಮುಖಮ್ಮಾ, ೧ ಮೌವುಮ್ಮಾ, ೧ ಮರ್ಸಿಯಾ, ೨೦ ರಾಗಿಣಿಗಳು, ೧ ರುಬಾಯಿ. ೨ ಕ್ರೊನೊಗ್ರಾಮ್ಸ್, ೪ ದೂಹರಾಗಳು ಮತ್ತು ಒಂದು ಒಗಟು. ಇದರಲ್ಲಿ ರಾಗ-ರಾಗಿಣಿಗಳೆಲ್ಲಾ ಎರಡನೆ ಇಬ್ರಾಹಿಮನ ಕಿತಾಬ-ಇ-ನೌರಸನಲ್ಲಿರುವಂತೆಯೇ ಇವೆ.[೧೨೧] ಕೆಲವೊಮ್ಮೆ ಅಲಿಯು ಕಿತಾಬ-ಇ-ನೌರಸ ಕೃತಿಯನ್ನೆ ಅನುಸರಿಸಿ ಇದನ್ನು ಬರೆದಿದ್ದಾನೆಂದು ಭಾವಿಸಬೇಕಾಗುತ್ತದೆ. ಅಲಿಯು ದಖನಿ ಭಾಷೆಯ ಕಾವ್ಯವನ್ನು ಬೆಳೆಸಿದ. ಜುಬೇರಿಯು ಎರಡನೆಯ ಅಲಿ ಆದಿಲ್‌ಶಾಹನ ಈ ಕಾರ್ಯಕ್ಕಾಗಿ ಅವನನ್ನು ಅಭಿನಂದಿಸಿದ್ದಾನೆ.[೧೨೨] ಬಿಜಾಪುರದ ಸುಲ್ತಾನರು ಉತ್ಕೃಷ್ಟ ಮಟ್ಟದ ಕವಿಗಳೆಂದು ಅವರ ಬರಹಗಳಿಂದ ಸಾಬಿತಾಗುತದೆ. ಇವರು ಪರ್ಶಿಯನ ಮತ್ತು ದಖನಿ ಭಾಷೆಯಲ್ಲಿ ಬರೆದರು.

ಪರ್ಶಿಯನ ಸಾಹಿತ್ಯದ ಬಗ್ಗೆ ಗಮನಿಸಿದಾಗ, ಈ ಸುಲ್ತಾನರು ದೇಶ ವಿದೇಶಗಳಿಂದ ವಿದ್ವಾಂಸರನ್ನು ಮತ್ತು ಕವಿಗಳನ್ನು ಇರಾನ, ತುರಾನ, ತುರ್ಕಿ, ಕಾಶನ ಮತ್ತು ಇಸ್ಪಹಾನದಿಂದ ಬರಮಾಡಿಕೊಂಡಿದ್ದರು. ಅದರ ಫಲವಾಗಿ ಪರ್ಶಿಯನ ಸಾಹಿತ್ಯ ಕೃತಿಗಳು ರಚನೆಗೊಂಡವು. ಯುಸೂಫ ಆದಿಲ್‌ಖಾನನು ಪರ್ಶಿಯನ ವಿದ್ವಾಂಸರನ್ನು ಮತ್ತು ಕವಿಗಳನ್ನು ತನ್ನ ಆಸ್ಥಾನದಲ್ಲಿ ಸ್ಥಾನಕೊಟ್ಟು ಹುರಿದುಂಬಿಸಿದ. ಇವನ ಮಗನಾದ ಇಸ್ಮಾಯಿಲ್‌ನು ಕೂಡಾ ತನ್ನ ತಂದೆಯ ಹಾದಿಯನ್ನೇ ಅನುಸರಿಸಿದ. ಇವನು ತುಂಬಾ ಉದಾರಿಯಾಗಿ ತನ್ನ

ಆಸ್ಥಾನದ ವಿದ್ವಾಂಸರಿಗೆ ಮತ್ತು ಕವಿಗಳಿಗೆ ಧಾರಾಳವಾಗಿ ಹಣ ನೀಡುತ್ತಿದ್ದನು. ಮೌಲಾನಾ ಶಾಹಿದ ಖುಮ್ಮಿಯವರಿಗೆ ಬಂಗಾರವನ್ನು ದೇಣಿಗೆ ನೀಡಿದನು.[೧೨೩] ಶಾಹಿದ ಖುಮ್ಮಿ ಪರ್ಶಿಯನ ಭಾಷೆಯ ಬರಹಗಾರ ಇವನ ಕೃತಿಯಾದ "ಖುಲ್ಲಿಯಾತ"ನಲ್ಲಿ ಒಂದು ಸಾಲಿನ, ನಾಲ್ಕು ಸಾಲಿನ ಕವನಗಳು ಮತ್ತು ಮಸಿಯಾಗಳನ್ನೊಳಗೊಂಡಿವೆ. ಇವುಗಳನ್ನೆಲ್ಲಾ ಆಸಫಿಯಾ ಗ್ರಂಥಾಲಯ ಹೈದ್ರಾಬಾದಿನಲ್ಲಿ ಸಂರಕ್ಷಿಸಲಾಗಿದೆ. ಇವನು ಇಸ್ಮಾಯಿಲ ಆದಿಲ್‌ಖಾನನ ಆಳ್ವಿಕೆಯಲ್ಲಿದ್ದನು.

ಒಂದನೆಯ ಇಬ್ರಾಹಿಮನ ಆಳ್ವಿಕೆಯಲ್ಲಿ ಅವನ ರಾಜಕೀಯ ಮತ್ತು ಧಾರ್ಮಿಕ ನೀತಿಯಿಂದಾಗಿ ಪರ್ಶಿಯನ ಸಾಹಿತ್ಯಕ್ಕೆ ತುಂಬಾ ಪೆಟ್ಟು ಬಿತ್ತು. ಈ ಸುಲ್ತಾನನು ಎಲ್ಲ ವಿದೇಶಿಯರನ್ನು ರಾಜಸೇವೆಯಿಂದ ತೆಗೆದುಬಿಟ್ಟಿದ್ದನು. ಇವರ ಸ್ಥಾನಕ್ಕೆ ದಖನಿ ಮತ್ತು ಬ್ರಾಹ್ಮಣರನ್ನು ನೇಮಿಸಿದ. ದಖನಿ ಮತ್ತು ಮರಾಠಿ ಭಾಷೆಗಳನ್ನು ತನ್ನ ರಾಜ್ಯಭಾಷೆಯನ್ನಾಗಿ ಮಾಡಿದ. ಇರಾನಿನೊಂದಿಗೆ ತನ್ನ ಸಂಬಂಧವನ್ನು ಕಳಿಚಿಕೊಂಡ, ಈ ಕಾರಣ ಕೂಡ ಪರ್ಶಿಯನ ಸಾಹಿತ್ಯದ ಬೆಳವಣಿಗೆಗೆ ಮಾರಕವಾಯಿತು. ಅನೇಕ ವಿದೇಶಿ ವಿದ್ವಾಂಸರು ಬಿಜಾಪುರವನ್ನು ಬಿಟ್ಟು ಹೋದರು. ಅದ್ದರಿಂದ ಅವನ ಕಾಲದಲ್ಲಿ ಪರ್ಶಿಯನ ಸಾಹಿತ್ಯದಲ್ಲಿ ಬೆಳವಣಿಗೆಯಾಗಲಿಲ್ಲ.

ಒಂದನೆಯ ಅಲಿ ಆದಿಲ್‌ಶಾಹ ತನ್ನ ಪೂರ್ವಜರ ನೀತಿಯನ್ನು ಬದಿಗೊತ್ತಿ ಇದನ್ನು ಬದಲಿಸಿದ ಯಾಕೆಂದರೆ, ಇವನು ಶಿಯಾ ಅನುಯಾಯಿ. ಪರ್ಶಿಯನ್ನರೆಲ್ಲಾ ಶಿಯಾಗಳೇ, ರಾಜ್ಯದ ಆಡಳಿತದಲ್ಲಿ ಇವನು ಎಲ್ಲಾ ಮುಖ್ಯ ಹುದ್ದೆಗಳಿಗೆ ವಿದೇಶಿಯರನ್ನು ನೇಮಿಸಿದ. ಬಿಜಾಪುರ ಬಿಟ್ಟುಹೋದ ಎಲ್ಲಾ ವಿದೇಶಿಗಳನ್ನು ಬರಮಾಡಿಕೊಂಡ. ಇವರೆಲ್ಲರೂ ಒಂದನೆಯ ಅಲಿ ಆದಿಲ್‌ಶಾಹನ ಆಸ್ಥಾನದಲ್ಲಿ ಆಶ್ರಯ ಪಡೆದುಕೊಂಡರು. ಈಗ ಮತ್ತೊಂಮ್ಮೆ ಪರ್ಶಿಯನ ಭಾಷೆ ಜೀವಂತವಾಯಿತು. ಅದಾಗ್ಯೂ ಇವನು ಬೇರೆ ಭಾಷೆಗಳನ್ನು ಕಡೆಗಣಿಸಿದ ಎಂಬುದಲ್ಲ, ಇವನ ಅಭಿಪ್ರಾಯದಲ್ಲಿ ಎಲ್ಲ ಭಾಷೆಗಳು ಮಹತ್ವವಾದವುಗಳು. ಈ ರೀತಿಯಾಗಿ ಎಲ್ಲ ಭಾಷೆಗಳು ಬಿಜಾಪುರದಲ್ಲಿ ಬೆಳವಣಿಗೆ ಹೊಂದಿದವು. ಶೇರವಾನಿಯವರ ಪ್ರಕಾರ, ಸಾಹಿತ್ಯದ ಬೆಳವಣಿಗೆ ಅಕ್ಬರಿನ ಆಸ್ಥಾನ "ಇಬಾದತಖಾನಾ"ದಂತೆಯೇ ಇದ್ದಿತು[೧೨೪]. ರಫಿಉದ್ದಿನ್ ಶಿರಾಜಿಯ ಪ್ರಕಾರ ಅಲಿ ಆದಿಲ್‌ಶಾಹನು ಮುಸ್ಲಿಮ ಸಂತರ ತತ್ವಜ್ಞಾನದಿಂದ ಸಂತ್ರಪ್ತನಾಗಿದ್ದ. ಅದೇ ಪ್ರಕಾರ ಸುಲ್ತಾನನು ವಿಭನ್ನ ಧರ್ಮದ ತತ್ವಜ್ಞಾನಿಗಳನ್ನು ಹಿಂದೂ ಯೋಗಿಗಳನ್ನು ಮತ್ತು ಕೆಥೋಲಿಕ ಪಾದ್ರಿಗಳನ್ನು ಕರೆಸಿ ಮುಕ್ತವಾದ ಸಂವಾದಗಳನ್ನು ನಡೆಸುತ್ತಿದ್ದ.[೧೨೫] ಇವನು ಪುಸ್ತಕ ಪ್ರೀಯನಾಗಿದ್ದನು. ತಜಕೀರಾತ-ಉಲ್-ಮುಲ್ಕನ ಪ್ರಕಾರ ಈ ಸುಲ್ತಾನನು ವಿಭಿನ್ನ ವಿಷಯಗಳ ಬಗ್ಗೆ ಅನೇಕ ಅಭಿರುಚಿಯುಳ್ಳ ಹಲವಾರು ಪುಸ್ತಕಗಳನ್ನು ಸಂಗ್ರಹಿಸಿದ್ದನು. ಅಲಿಯು ಸೈನಿಕ ಕಾರ್ಯಚಾರಣೆ ಮತ್ತು ಪ್ರವಾಸ ಮಾಡುವಾಗ ನಾಲ್ಕು ದೊಡ್ಡ ಡಬ್ಬಿಗಳಲ್ಲಿ ಈ ಪುಸ್ತಕಗಳನ್ನು ಒಯ್ಯುತ್ತಿದ್ದನು.[೧೨೬] ಇವನು 'ವಾಮನ ಪಂಡಿತ' ಮತ್ತು 'ಅನಂತ ಪಂಡಿತ' ಇಬ್ಬರು ಸಂಸ್ಕೃತ ಪಂಡಿತರನ್ನು ಸಂಸ್ಕೃತ ಪುಸ್ತಕಗಳ ಸಂರಕ್ಷಣೆಗಾಗಿ ನೇಮಿಸಿದ್ದನು. ಪುಸ್ತಕಗಳನ್ನು ಅಚ್ಚುಹಾಕಿಸಲು ಮತ್ತು ಅವುಗಳ ಪ್ರತಿಗಳನ್ನು ತಯಾರಿಸಲು ಗ್ರಂಥಾಲಯಕ್ಕೆ ಹೊಂದಿಕೊಂಡಂತೆ ಅಚ್ಚುಖಾನೆಯನ್ನು

ನಿರ್ಮಿಸಿದ. ಇದರಲ್ಲಿ ಸುಮಾರು ೬೦ ಮಂದಿ ಲಿಪಿಕಾರರು, ಪುಸ್ತಕಗಳನ್ನು ಅಚ್ಚುಹಾಕುವವರು, ಬೈಂಡಿಂಗ ಮಾಡುವವರು ತಮ್ಮ ಕೆಲಸದಲ್ಲಿ ದಿನವಿಡಿ ನಿರತರಾಗಿರುತ್ತಿದ್ದರು.[೧೨೭]

ಒಂದನೆಯ ಅಲಿಯು ಸಹ ತನ್ನ ಪೂರ್ವಜರಂತೆ ಕವಿ ಮತ್ತು ಬರಹಗಾರರಿಗೆ ಧಾರಾಳವಾಗಿ ಸಂಪತ್ತನ್ನು ಹಂಚುತ್ತಿದ್ದ. ಇವರಲ್ಲಿ ಪ್ರಮುಖರಾದವರೆಂದರೆ, ಪತೇವುಲ್ಲಾ ಶಿರಾಜಿ ಇವನು ತತ್ವಜ್ಞಾನದ ಪರಣಿತನಾಗಿದ್ದನು. ಆ ಕಾಲದ ಇತರ ವಿದ್ವಾಂಸರೆಂದರೆ, 'ಅಹಮ್ಮದ-ಇ-ಗಿಲಾನಿ', 'ಐನುಲ್ ಮುಲ್ಕ್ ಶಿರಾಜಿ' 'ಮೀರ ಶಮಶೂದ್ದೀನ ಇಸ್ಪಾನಿ', 'ಶಹಾ ಅಬ್ದುಲ್ ಕಾಶಿಮ ಇಂಜು' ಮತ್ತು 'ಮುರ್ತುಜಾ ಇಂಜು', 'ರಫಿವೂದ್ದೀನ ಶಿರಾಜಿ'. 'ಅಫಜಲಖಾನ ಶಿರಾಜಿ'ಯು ಒಬ್ಬ ಶ್ರೇಷ್ಠ ವಿದ್ವಾಂಸನಿದ್ದ. ಸುಲ್ತಾನನು ಜ್ಞಾನಾರ್ಜನೆಯಲ್ಲಿ ತುಂಬಾ ಆಸಕ್ತನಾದುದ್ದರಿಂದ ಅಫಜಲಖಾನ ಮತ್ತು ರಫಿವೂದ್ದೀನ ಶಿರಾಜಿಯವರ ನಿವಾಸಗಳಲ್ಲಿ ಇಂತಹ ಚರ್ಚೆಗಳು ನಡೆಯುತ್ತಿದ್ದವು. ಮುಲ್ಲಾ ಮಹಮ್ಮದ ರಜಾ ಮೆಶಾದಿ ಇವನ ಆಸ್ಥಾನದ ಪ್ರಸಿದ್ಧ ಕವಿಯಾಗಿದ್ದ. ಇವನು ತನ್ನ ಗುರುವಿನ ಹೆಸರಿನಲ್ಲಿ "ಶಹಾ-ಇ-ಜಹಾನ ಶುದ ಶಾಹಿ" ಎಂಬ ಹೆಸರಿನಲ್ಲಿ ಒಂದು ಶೋಕಾಚರಣೆಯ ಕೃತಿಯನ್ನು ರಚಿಸಿದ. ಇವನ ಆಸ್ಥಾನದ ಇತರ ಪ್ರಸಿದ್ಧ ಕವಿಗಳೆಂದರೆ, 'ಸೈಯದ-ಇ-ತುರಾಬ್ಲಿಸ್', 'ಫಜಲುಲ್ಲಾ ಯಜ್ದಿ', 'ಮುಲ್ಲಾ ಇಸ್ಪಾಹಾನಿ' ಮತ್ತು 'ಮೀರ ಕುಲಿ. ಅಲಿಯ ಕಲಿಯುವಿಕೆಯ ಪ್ರೀತಿಯ ಬಗ್ಗೆ ಪ್ರೋ. ಡವರೇ ಬರೆಯುವುದೇನೆಂದರೆ, ಅಲಿಯ ಆಳ್ವಿಕೆಯಲ್ಲಿ ಬಿಜಾಪುರವು ಕಲಿಯುವಿಕೆ ಮತ್ತು ಚರ್ಚೆಗಳ ಸಂಸ್ಥಾನವಾಗಿತ್ತು.[೧೨೮]

ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿ ಪರ್ಶಿಯನ ಸಾಹಿತ್ಯ ಉನ್ನತ ಮಟ್ಟಕ್ಕೇರಿತು. ಇದಕ್ಕೆ ಇನೊಂದು ಕಾರಣವೆಂದರೆ, ಅಹಮ್ಮದನಗರದ ರಾಜಕೀಯ ಹಿನ್ನಡೆಯಿಂದಾಗಿ ಬಹಳಷ್ಟು ವಿದೇಶಿ ವಿದ್ವಾಂಸರು, ಕವಿಗಳು ಮತ್ತು ಇತಿಹಾಸಕಾರರು ಮುರ್ತುಜಾ ನಿಜಾಂಶಹಾನ ಕೊಲೆಯಾದ ನಂತರ ಅಹಮ್ಮದನಗರದಿಂದ ವಲಸೆ ಬಂದು ಬಿಜಾಪುರದಲ್ಲಿ ನೆಲೆಸಿದಾಗ ಅವರನ್ನು ಇಬ್ರಾಹಿಮ ಆಶ್ರಯ ನೀಡಿದನು.[೧೨೯] ಇವರಲ್ಲಿ ಪ್ರಮುಖರೆಂದರೆ, 'ಸಂಜರ-ಇ-ಕಾಶಿ', 'ಬಖೀರ ಖುರ್ದ'. 'ಜಹುರಿ', 'ಖುಮ್ಮಿ' ಮತ್ತು ಇನ್ನಿತರರು ಬಿಜಾಪುರದಲ್ಲಿ ಬಂದು ನೆಲೆಸಿದರು. ಇದೇ ವೇಳೆಗೆ ಪ್ರಸಿದ್ಧ ಇತಿಹಾಸಕಾರನಾದ 'ಮಹಮ್ಮದ ಕಾಶಿಂ ಫೇರಿಸ್ತಾ'ನು ಇಬ್ರಾಹಿಮನ ಆಸ್ಥಾನವನ್ನು ಅಲಂಕರಿಸಿದನು. ಇದರಿಂದಾಗಿ ಪರ್ಶಿಯನ ದಖನಿ ಮತ್ತು ಮರಾಠಿ ಸಾಹಿತ್ಯದಲ್ಲಿ ಗಮನಾರ್ಹ ಬೆಳವಣಿಗೆಯಾಯಿತು.

ಪರ್ಶಿಯನ ಕೃತಿಗಳಾದ ನಿಜಾಮಿಯ 'ಮಖಜಾನ-ಉಲ್-ಅಸ್ರಾರ್' ಮತ್ತು ಮೀರ ಖಾವಂದರ 'ರೌಜತುಸ್ಸಫ್' ಕೃತಿಗಳನ್ನು ಇಬ್ರಾಹಿಮನು ತುಂಬಾ ಮೆಚ್ಚಿಕೊಂಡಿದ್ದ. ಈ ಕೃತಿಗಳಿಗೆ ಹೋಲಿಸಿ ಆ ಕಾಲದ ಪ್ರತಿಯೊಬ್ಬ ಕವಿಯು ಬರೆದಿದ್ದಾನೆ. ಮಖಜಾನ-ಉಲ್-ಅಸ್ರಾರ್‌ವು ಧಾರ್ಮಿಕ, ನೀತಿ ಮತ್ತು ಆದ್ಯಾತ್ಮದ ವಿಷಯ ವಸ್ತುವಾಗಿದೆ. ಮಹಮ್ಮದ ಕಾಶಿಂ ಫೇರಿಸ್ತಾ ಮತ್ತು ರಫಿವೂದ್ದೀನ ಶಿರಾಜಿಯವರ ಪ್ರಸಿದ್ಧ ಇತಿಹಾಸವನ್ನು ರಚಿಸಿದರು. ಫೇರಿಸ್ತಾನು ರೌಜತ-ಉಸ್-ಸಫಾದ ಆಧಾರದ ಮೇಲೆ ಇತಿಹಾಸವನ್ನು ರಚಿಸಿದ.[೧೩೦] ಇಬ್ರಾಹಿಮನು ಫೇರಿಸ್ತಾನನ್ನು ಇತಿಹಾಸ ಬರೆಯುವಂತೆ ಕೇಳಿಕೊಂಡ, ಇದಕ್ಕಿಂತ ಮೊದಲಿನ

ಅಂದರೆ, ನಿಜಾಮುದ್ದೀನ ಅಹಮ್ಮದ ರಚಿಸಿದ ಇತಿಹಾಸ ಸಂಪೂರ್ಣವಾಗಿರಲಿಲ್ಲ. ನಿಜಾಮುದ್ದೀನ ಅಹಮ್ಮದ ಇತಿಹಾಸ ಬರೆದ ಕಾಲದಿಂದಲೂ ಮತ್ತಾರೂ ಇತಿಹಾಸವನ್ನು ಭಾರತದಲ್ಲೆ ರಚಿಸಿರಲಿಲ್ಲ.[೧೩೧] ರಫಿವೂದ್ದೀನ ಶಿರಾಜಿಯು ಆರು ಭಾಗಗಳ ರೌಜತುಸ್ಸಫಾ ಮತ್ತು ಹಬಿಬುಸ್ ಸಿಯಾರ್ ಕೃತಿಗಳನ್ನು ಎರಡನೆಯ ಇಬ್ರಾಹಿಮನಿಗೆ ಅರ್ಪಿಸಿದ. ಮೌಲಾನಾ ನೂರುದ್ದೀನ ಜಹುರಿ ಯವರು ಪರ್ಶಿಯನ ಭಾಷೆಯಲ್ಲಿ ದೇಬಾಚಾ–ಇ–ನೌರಸ (ನೌರಸದ ಪರಿವಿಡಿ) ಅನ್ನು ಇಬ್ರಾಹಿಮನ ಕಿತಾಬ–ಇ–ನೌರಸಗಾಗಿ ಬರೆದನು. ಮಲಿಕ–ಇ–ಖುಮ್ಮಿ ಮತ್ತು ಮೌಲಾನಾ ಜಹುರಿಯವರು ಜಂಟಿಯಾಗಿ 'ಮನಬುಲ್–ಅನಹಾರ' ಎಂಬ ಮಸನವಿಯನ್ನು ಮಖಜಾನ–ಉಲ್–ಅಸ್ರಾರ್ ಕೃತಿಯನ್ನು ಆಧಾರಿಸಿ ಬರೆದರು.[೧೩೨] ಇವರ ಇತರ ಕೂಡಿ ಬರೆದ ಕೃತಿಗಳೆಂದರೆ, 'ಗುಲಜಾರ–ಇ–ಇಬ್ರಾಹಿಮ' ಮತ್ತು 'ಖವಾನ–ಇ–ಖಲೀಲ' ಇವು ತುಂಬಾ ಧೀರ್ಘವಾದ ಮಸನವಿಗಳಿವೆ. ಇಬ್ರಾಹಿಮನು ವಿಶಾಲ ಹೃದಯವುಳ್ಳನಾಗಿದ್ದನು. ತನ್ನ ಆಸ್ಥಾನದ ಕವಿ ಮತ್ತು ವಿದ್ವಾಂಸರಿಗೆ ಅಪಾರವಾದ ಕಾಣಿಕೆಗಳನ್ನು ನೀಡುತ್ತಿದ್ದನು. ಇಬ್ರಾಹಿಮನ ಆಸ್ಥಾನದ ಹಾಸ್ಯಗಾರನಾದ "ಮೀರ ಜಹನಿ"ಯನ್ನು ಮಖ್ಜಾನ ಕೃತಿಯ ಉತ್ತರವನ್ನು ಬರೆಯಲು ಕೇಳಿಕೊಂಡ. ಇಬ್ರಾಹಿಮನ ಆಸ್ಥಾನದ ಕವಿಗಳ ಬಗ್ಗೆ ಮತ್ತು ಅವರ ಕಾವ್ಯದ ಬಗ್ಗೆ ವಿಮರ್ಶಾತ್ಮಕವಾದ ಒಂದು ಅಧ್ಯಾಯವನ್ನೇ ಪುಜುನಿ ಬರೆದಿರುವನು.[೧೩೩] ಮಲಿಕ–ಇ–ಖುಮ್ಮಿ ಮತ್ತು ಜಹುರಿಯವರು ಸೇರಿ ಬೇರೆ ಬೇರೆ ಪರ್ಶಿಯನ ಭಾಷೆಯ ಅನೇಕ ಕೃತಿಗಳನ್ನು ಎರಡನೆಯ ಇಬ್ರಾಹಿಮನ ಕಾಲದಲ್ಲಿ ರಚಿಸಿದರು. ಮಲಿಕ–ಇ–ಖುಮ್ಮಿಯವರ ಇತರ ಕೃತಿಗಳೆಂದರೆ,

೧. ಖುಲ್ಲಿಯಾತ– ಇದರಲ್ಲಿ ಗಝುಲ್‌ಗಳು ಖಸಿದಾಗಳಿವೆ
೨. ಸನಾಯಿಯವರ 'ಹದಿಕಾ' ಕೃತಿಯನ್ನಾಧರಿಸಿ ಬರೆದ ಮಸನವಿ
೩. ತರಕೀಬ–ಬಂದ –ಇವು ದೇವರ, ಪ್ರವಾದಿಯವರ ಮತ್ತು ಇಮಾಮರ ಹೊಗಳಿಕೆಗಳುಳ್ಳ ಬಂಧಗಳು. ಒಂದು ಬಂಧ ಅಂದರೆ ಸುಮಾರು ೧೦ ಸಾಲುಗಳು.
೪. ತಾಜೀರ–ಬಂದಗಳು–ಇದರಲ್ಲಿ ಕವಿಯು ಪದೇ ಪದೇ ನೌರಸ ಎಂಬ ಶಬ್ದವನ್ನು ಬಳಿಸಿದ್ದಾನೆ. ಸುಲ್ತಾನನನಿಗೆ ಪ್ರೀಯವಾದ ಶಬ್ದ.
೫. ಖುಸರಾವ–ಶಿರೀನ್ ಕೃತಿಯನ್ನು ಆಧಾರಿಸಿ ಬರೆದ ಮಸನವಿ.
೬. ಅಸ್ರಾರೆ–ಇ–ಅಮ್ಮಾ–ಇದು ಧಾರ್ಮಿಕ ಮತ್ತು ಅಧ್ಯಾತ್ಮಿಕತೆಯುಳ್ಳ ರೂಪಕ.
೭. ಸಾಕಿನಾಮಾ (ಅಬ್ದುಲ್ ನಬಿಯವರ ಮಯಖಾನಾ ಮತ್ತು ಹಪ್ತ ಇಖಲಿಮ ಕೃತಿಗಳನ್ನಾಧಾರಿಸಿ ಇದರಲ್ಲಿ ೩೪ ಸಾಲುಗಳಿವೆ) ಅದಲ್ಲದೆ ಇವರ ಗಧ್ಯ ಕೃತಿಗಳೆಂದರೆ, 'ಗುಲಜಾರ–ಇ–ಇಬ್ರಾಹಿಮ' ಮತ್ತು ಜಹುರಿಯೊಂದಿಗೆ ಸೇರಿ 'ಖವಾನ–ಇ–ಖಲೀಲ' 'ಹಪ್ತ ಇಖಲಮದ ರಚನಾಕಾರ ಖುಮ್ಮಿಯವರನ್ನು ಕವಿಗಳ ರಾಜನೆಂದು ಬಣ್ಣಿಸಿದ್ದಾನೆ.

ಮೌಲಾನಾ ಜುಹುರಿಯವರು ರಚಿಸಿದ ಕೃತಿಗಳು

೧. ಖುಲ್ಲಿಯಾತ–ಇ–ಜುಹುರಿ–ಇದರಲ್ಲಿ ಗಝುಲ್‌ಗಳು, ಖಸಿದಾಗಳು, ನಾಲ್ಕು ಸಾಲಿನ ಪದ್ಯಗಳು, ತರಕಿಬ ಮತ್ತು ತಾರ್ಜಿ ಬಂಧಗಳು ಸೇರಿವೆ. ದಿವಾನ ಕೃತಿಯಲ್ಲಿ ಗಝುಲ್ ಮತ್ತು ರುಬಾಯಿಗಳಿವೆ.[೧೩೪]

೨. ಪರ್ಶಿಯನ ಭಾಷೆಯಲ್ಲಿರುವ ಸಾದಿಯವರ "ಬುಸ್ತಾನ" ಕೃತಿಯನ್ನಾಧರಿಸಿ ರಚಿಸಿದ "ಸಾಖಿನಾಮಾ"

೩. "ಪಂಜೆ ರುಖ್ವಾತ" ಕಾಲ್ಪನಿಕ ಗ್ರಂಥಗಳು

೪. ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಆಳ್ವಿಕೆಯಲ್ಲಿ ಕಟ್ಟಲ್ಪಟ್ಟ ನೌರಸಪುರ ಬಜಾರ ಮತ್ತು ಹೂಗಳ ವರ್ಣನೆಯುಳ್ಳ "ಮೀನಾ ಬಜಾರ" ಕೃತಿ.

೫. ಎರಡನೆಯ ಇಬ್ರಾಹಿಮನ ಕೃತಿಯಾದ ಕಿತಾಬ–ಇ–ನೌರಸಗೆ ಬರೆದ ಪರಿವಿಡಿ.

೬–೭ ಮಲಿಕ–ಇ–ಖುಮ್ಮಿಯವರೊಡನೆ ಸೇರಿಕೊಂಡು ರಚಿಸಿದ "ಗುಲಜಾರ–ಇ–ಇಬ್ರಾಹಿಮ" ಮತ್ತು ಖವಾನ–ಇ–ಖಲೀಲ" ದ ಪರಿವಿಡಿ.

೮ ಖುಮ್ಮಿಯವರೊಡನೆ ಸೇರಿಕೊಂಡು ರಚಿಸಿದ "ಮತ್ಮಹುಲ್–ಅಂಜಾರ ಮಸನವಿ. ನಿಜಾಮಿಯವರ "ಮಖ್ಜನ್–ಉಲ್–ಅಸ್ರಾರ" ಕೃತಿಯನ್ನು ಆಧಾರಿಸಿ ರಚಿಸಿದ್ದು.

ಈ ಇಬ್ಬರಲ್ಲದೆ ಇನ್ನೂ ಹಲವಾರು ಕವಿಗಳು ಇಬ್ರಾಹಿಮ ಆದಿಲ್‌ಶಾಹನ ಆಸ್ಥಾನದಲ್ಲಿದ್ದರು. ಅವರೆಂದರೆ, "ಮುಲ್ಲಾ ಹೈದರ ಜಿಹಾನಿ–ಇ–ಕಾಶಾನಿ", "ಮಹಮ್ಮದ ಹಾಶೀಂ ಸಂಜರ–ಇ–ಕಾಶಿ" ಮತ್ತು "ಬಖಿರ್–ಇ–ಖುರ್ದ ಕಾಶಿ" ಇವರು ಇಂಡೋ–ಪರ್ಶಿಯನ ಸಾಹಿತ್ಯದ ಬೆಳವಣಿಗೆಗೆ ಅಪಾರ ಸೇವೆ ಸಲ್ಲಿಸಿದರು. ಮುಲ್ಲಾ ಹೈದರ ಜಿನ್ನಿ ಜುಹುರಿಯ ಸಮಕಾಲಿನ ಬರಹಗಾರ. ಹಾಸ್ಯ ಮತ್ತು ಮಸಾಲೆಯುಳ್ಳ ಇವನ ಕೃತಿಗಳು ತುಂಬಾ ಪ್ರಸಿದ್ಧಿ ಪಡೆದಿವೆ. ಆದರೆ ಇವನ ಗದ್ಯ ಕೃತಿಗಳ ಬಗ್ಗೆ ತಿಳಿದುಬಂದಿಲ್ಲ. ಫುತುಹಾತ–ಇ–ಆದಿಲ್‌ಶಾಹಿ[೧೩೫]ಯಲ್ಲಿ ಇವನ ಕೃತಿಗಳನ್ನು ಸಂರಕ್ಷಿಸಲಾಗಿದೆ. ಮಖ್ಜಾನನಂತೆ ಕವಿತೆ ರಚಿಸಲು ಜಿನ್ನಿಯನ್ನು ಕೇಳಿಕೊಳ್ಳಲಾಯಿತು. ಆದರೆ ಮಖ್ಜಾನನ್ನು ಆಧಾರಿಸಿ ಬರೆಯಲು ಜಿನ್ನಿ ನಿರಾಕರಿಸಿದ. ಕಡೆ ಪಕ್ಷ ಮಖ್ಜಾನದ ಉತ್ತರವನ್ನು ಬರೆಯಲು ಕೇಳಿಕೊಂಡಾಗ ಜಿನ್ನಿ ಹೇಳಿದ್ದೆನೆಂದರೆ, ಓ ಮಹಾರಾಜರೇ ನನ್ನನ್ನು ಕ್ಷಮಿಸಿರಿ ನಾನು ಮಖ್ಜಾನನಂತೆ ಹೋಗಳುವ ಕೃತಿಯನ್ನು ರಚಿಸಿಲಾರೆ. ಒಂದು ಒಂಟೆ ತೂಕದ ಚಿನ್ನಕ್ಕಾಗಿ ನಾನು ೨೦೦೦ ಸಾಲುಗಳ ಮಖ್ಜಾನ ಕೃತಿಯ ವಧೆಯು ನನ್ನ ಆತ್ಮ ಸಹಿಸಲಾರದು ಎಂದ.[೧೩೬]

ಇಬ್ರಾಹಿಮನ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಸಂಜರ ಕಾಶಿ ಇಬ್ರಾಹಿಮನ ಆಸ್ಥಾನದಲ್ಲಿ ಸ್ಥಾನ ಪಡೆದ. ಇವನೊಬ್ಬ ರಾಜದರ್ಬಾರದ ಭಟಂಗಿ, ಇವನ ಪ್ರಸಿದ್ಧ ಕೃತಿ "ಸಾಖಿನಾಮಾ" ಇದರಲ್ಲಿ ರಾಜನನ್ನು ಹೊಗಳುವ ಅನೇಕ ಪದ್ಯಗಳಿವೆ. ಮಾಸೀರ–ಇ–ರಹಿಮೀ ಬರೆಯುವುದೇನೆಂದರೆ ಕಿ.ಶ ೧೬೨೭ ರಲ್ಲಿ ಸಂಜರನು ಇಬ್ರಾಹಿ ಆದಿಲ್‌ಶಾಹನಿಗೆ ಅರ್ಪಿಸಿದನು. ಇದರಿಂದ ಸುಲ್ತಾನನು ತುಂಬಾ ಪ್ರಭಾವಿತನಾದನು.

ಇವನಿಗೆ ರಾಜಮನೆತನದ ಉಡುಪು ಮತ್ತು ರತ್ನ ಖಚಿತ ಉಂಗುರ ಕಾಣಿಕೆಯಾಗಿ ಕೊಟ್ಟು ಸತ್ಕರಿಸಿದ.[೧೩೭] ಇವನ ಮೊದಲನೆಯ ಪ್ರಶಂಸೆಯ ಪದ್ಯ ಎರಡನೆಯ ಇಬ್ರಾಹಿಮನದೇ ಆಗಿದೆ. ಇವನು ಬಹುಮುಖ ಪ್ರತಿಭೆಯುಳ್ಳ ಬರಹಗಾರ ಮತ್ತು ಕವಿ. ಇವನ "ದಿವಾನ" ಕೃತಿಯಲ್ಲಿ ಸರಿಸುಮಾರಾಗಿ ೧೨,೦೦೦ ಪದ್ಯಗಳಿವೆ.[೧೩೮] ಇದಲ್ಲದೇ ಕಸಿದಾಗಳು ಮತ್ತು "ಖುಸರಾವ-ಶಿರೀನ್" ಎಂಬ ಮಸನವಿ ಇದೆ. ಇವನು ಎರಡನೆಯ ಇಬ್ರಾಹಿಮನ ಸಲಹೆಯಂತೆ ತನ್ನ "ಫಿರಾಗಿ" ಎಂಬ ಕಾವ್ಯನಾಮವನ್ನಿಟ್ಟುಕೊಂಡಿದ್ದ.

ಎರಡನೆಯ ಇಬ್ರಾಹಿಮನ ಆಳ್ವಿಕೆಯಲ್ಲೆ "ಬಾಖಿರ್ ಖುರ್ದ-ಇ-ಕಾಶಿ" ಪ್ರಸಿದ್ಧಿ ಪಡೆದ. ಇವನು ಆಸ್ಥಾನದ ಕವಿಯಾಗಿದ್ದನು. ಇವನು ಅಂದವಾದ ಲಿಪಿಯನ್ನು ಬರೆಯುವ ಕೌಶಲ್ಯ ಪಡೆದಿದ್ದ ಮತ್ತು ಅಲಂಕಾರಿಕ ಲಿಪಿಯಲ್ಲಿ ಮೀರ ಮೊಯಿಜೊದ್ದೀನರ ಶಿಷ್ಯನಾಗಿದ್ದ. ಇವನು ನಸ್ತಾಲಿಖ ಶೈಲಿಯ ಬರವಣಿಗೆಯಲ್ಲಿ ಪರಿಣಿತಿಯನ್ನು ಹೊಂದಿದ್ದನು. ಇವನಿಗೆ ಗ್ರಂಥಾಲಯದಲ್ಲಿ ಪುಸ್ತಕಗಳ ಪ್ರತಿಗಳನ್ನು ತಯಾರಿಸುವ ಜವಾಬ್ದಾರಿ ಕೊಡಲಾಗಿತ್ತು. ಇವನ ಬರವಣಿಗೆಯ ಕೌಶಲ್ಯವನ್ನು ಪುಜುನಿಯವರು ಪ್ರಶಂಸಿಸುತ್ತಾರೆ. ಇವನು ತುಂಬಾ ಉನ್ನತ ಮಟ್ಟದ ಕವಿ ಮತ್ತು ವಿಮರ್ಶಕ, ಇವನ "ದಿವಾನ" ಎಂಬ ಕೃತಿಯನ್ನು ರಚಿಸಿದ ಅದರಲ್ಲಿ ಸುಮಾರು ೧೨,೦೦೦ ಪದ್ಯಗಳಿವೆ ಅಬ್ದುಲ್ ಬಾಖಿಯವರ ಪ್ರಕಾರ ಇವನೊಬ್ಬ ಒಳ್ಳೆಯ ಕವಿ.[೧೩೯] ಇಂಡೋ-ಪರ್ಶಿಯನ ಸಾಹಿತ್ಯಕ್ಕೆ ಎರಡನೆಯ ಇಬ್ರಾಹಿಮನ ಕೊಡುಗೆ ಅಪಾರ.

ಇವರಲ್ಲದೆ, ಇನ್ನಿತರ ಕವಿಗಳಾದ ಶಹಾನವಾಜಖಾನ ಶಿರಾಜಿ ಇವನು ವಿದ್ವಾಂಸ, ಆಡಳಿತಗಾರ ಮತ್ತು ತತ್ವಜ್ಞಾನಿಯಾಗಿದ್ದ. ಇವನು ಖಗೋಳಶಾಸ್ತ್ರ ಮತ್ತು ಗಣಿತದಲ್ಲಿ ಪರಿಣಿತನಾಗಿದ್ದ. ಇವನು ವಿದೇಶಿಯನಾಗಿದ್ದು, ಸುಲ್ತಾನನಿಗೂ ಮತ್ತು ವಿದೇಶಿ ವಿದ್ವಾಂಸರಿಗೆ ಕೊಂಡಿಯಾಗಿಯೇ ಇದ್ದ. ಸುಲ್ತಾನನ ಕೋರಿಕೆಯಂತೆ ಅರೇಬಿಕ್ ಸಾಹಿತ್ಯವು ಪರ್ಶಿಯನ ಭಾಷೆಗೆ ಅನುವಾದಗೊಂಡಿತು. ಅಬ್ದುಲ್ ರಶೀದ ಅಲ್ ಬಸ್ತಗಿ ಯವರು 'ಅಲ್ಲಾವುದ್ದೀನ ಮಹಮ್ಮದ ಬಿನ್ ಜಕರಿಯಾ, ಖಜಾನಿಯವರ 'ಗೈರುಬುಲ್ ಮೌಜುದಾತ್' ವನ್ನು ಅರೇಬಿಕ ಭಾಷೆಯಿಂದ ಪರ್ಶಿಯನ ಭಾಷೆಗೆ ಅನುವಾದಿಸಿದ. ಇಬ್ರಾಹಿಮನ ಆಸ್ಥಾನದ ಬರಹಗಾರರೆಂದರೆ, 'ಶಾ ಖಲೀಲುಲ್ಲಾ' ಮತ್ತು ಮುಸ್ತಫಾ ಲತಿಫ'. ಇಬ್ರಾಹಿಮನು ಸ್ವತಃ ಸುಂದರ ಬರವಣಿಗೆ ಹೊಂದಿದವನಾಗಿದ್ದ. "ಸುಲಸ", "ನಸ್ಖ" ಮತ್ತು "ನಸ್ತಾಲೀಖ" ಶೈಲಿಗಳಲ್ಲಿ ಬರೆಯುತ್ತಿದ್ದ. ಜುಬೇರಿಯ ಪ್ರಕಾರ ಸುಲ್ತಾನನು ಬರವಣಿಗೆಯಲ್ಲಿ ಆ ಕಾಲದ ಎಲ್ಲ ಶ್ರೇಷ್ಠ ಬರಹಗಾರರನ್ನು ಹಿಂದಿಕ್ಕಿದ.[೧೪೦]

ಒಟ್ಟಾರೆ ಹೇಳುವುದಾದರೆ ಎರಡನೆ ಇಬ್ರಾಹಿಮ ಆದಿಲ್‌ಶಾಹ ಬಹುಮುಖ ಪ್ರತಿಭಾವಂತ. ಸಾಹಿತ್ಯದ ಎಲ್ಲ ವಿಭಾಗಗಳಲ್ಲಿಯೂ ಪರಿಣಿತ. ಇವನ ರಾಜ್ಯಬಾರ ಸುಮಾರು ಅರ್ಧ ಶತಮಾನದಷ್ಟು. ಈ ಅವಧಿಯನ್ನು ದಖನ್ನಿನ್ನಲ್ಲಿ ಮತ್ತು ವಿಶೇಷವಾಗಿ ಬಿಜಾಪುರದಲ್ಲಿ ಪರ್ಶಿಯನ ಸಾಹಿತ್ಯದ ಸುವರ್ಣಯುಗ ಎನ್ನಬಹುದಾಗಿದೆ.

ಜಹುರ ಅವರ ಪ್ರಕಾರ ಮಹಮ್ಮದನು ದಿನಾಲು ಕನಿಷ್ಠ ಮೂರು ತಾಸುಗಳು ವಿದ್ವಾಂಸರೊಂದಿಗೆ ಕಳೆಯುತ್ತಿದ್ದ.[೧೪೧] ಈ ಅವಧಿಯು ಆದಿಲ್‌ಶಾಹಿ ಸಾಮ್ರಾಜ್ಯದ ಇತಿಹಾಸದಲ್ಲೇ ಶಾಂತಿಯಿಂದ ಕೂಡಿತ್ತು. ಮತ್ತು ಇವನ ಆಳ್ವಿಕೆಯಲ್ಲಿ ರಾಜ್ಯ ಉನ್ನತಿಯಡೆಗೆ ಸಾಗಿತ್ತು.

ಮಹಮ್ಮದ ಆದಿಲ್‌ಶಾಹನ ಪ್ರೋತ್ಸಾಹದ ಕಾರಣವಾಗಿ ಇವನ ಕಾಲದಲ್ಲಿ ಪರ್ಶಿಯನ ಸಾಹಿತ್ಯವು ಬೆಳಕು ಕಂಡಿತು. ಇವನ ಆಸ್ಥಾನದ ಕವಿಗಳೆಂದರೆ, ಮಿರ್ಜಾ ಮಹಮ್ಮದ ಮುಖೀಮ್, ಹಕೀಮ ಆತಶಿ, ಇಬ್ರಾಹಿಮಖಾನ, ಮೀರ್ಜಾ ದೌಲತ್ ಶಾಹ, ಜಹುರ ಮತ್ತು ಫುಜುನಿ.[೧೪೨] ಮಿರ್ಜಾ ಮಹಮ್ಮದ ಮುಖೀಮಯು ಮಹಮ್ಮದ ಆದಿಲ್‌ಶಾಹನ ಆಸ್ಥಾನದ ಕವಿ ಮತ್ತು ಪುಜನಿ ಹಾಗೂ ಆತಶಿಯ ಸಮಕಾಲೀನ ಕವಿ. ಇವನ ಶಿರಾಜದಲ್ಲಿರುವಾಗಲೇ ಇವನ ಬರವಣಿಗೆಯಲ್ಲಿ ಆಸಕ್ತಿ ಹೊಂದಿದ. ಇವನು ಶಿಕಸ್ತಾ ಶೈಲಿಯಲ್ಲಿ ಬರೆಯುತ್ತಿದ್ದ, ಇವನ ಬರವಣಿಗೆಯನ್ನು ಇಬ್ರಾಹಿಮ ಜುಬೇರಿಯು ಹೊಗಳಿದ್ದಾನೆ.[೧೪೩] ಇವನು ಸೂಫಿ ಸಂತರಾದ ಖ್ವಾಜಾ ಬಂದೇನವಾಜ ಗೇಸುದರಾಜರ ಮೇಲೆಯು ಪ್ರಶಂಸೆಯ ಪದ್ಯಗಳನ್ನು ರಚಿಸಿದ್ದ. ಮಹಮ್ಮದ ಆದಿಲ್‌ಶಾಹನು ಕೂಡಾ ಬಂದೇನವಾಜರ ಪರಮ ಭಕ್ತನಾಗಿದ್ದ.[೧೪೪]

ಮಹಮ್ಮದ ಆದಿಲ್‌ಶಾಹನ ಕಾಲದ ಕಾವ್ಯವು ನೀತಿಯಿಂದ ಕೂಡಿತ್ತು. ಇದಕ್ಕೆ ಕಾರಣವೆಂದರೆ, ಮಹಮ್ಮದನ ಧಾರ್ಮಿಕ ಚಾರಿತ್ರ್ಯ. ಕವಿಗಳಾದ ಆತಶಿ. ಮುಖೀಮಿ, ಜಹುರ, ಪಜುನಿ ಇವರೆಲ್ಲರೂ ಸುಲ್ತಾನನು ಮೆಚ್ಚುವಂತಹ ಕಾವ್ಯಗಳನ್ನು ರಚಿಸಿದರು. ಹೊಗಳುವ ಗೀತೆಗಳು ಸಹ ನೀತಿಯುಳ್ಳವಾಗಿದ್ದವು. ಡಾ॥ ಡವರೆ ಹೇಳುವಂತೆ "ಸಾದಿ"ಯ ಕಸಿದಾ ಮತ್ತೊಮ್ಮೆ ಜೀವಂತವಾದಂತೆ[೧೪೫]

ಹಕೀಮ ಆತಶಿ ಕೂಡ ಮಹಮ್ಮದನ ಆಸ್ಥಾನದ ಕವಿಯಾಗಿದ್ದ, "ಪುಜುನಿ ಅಸ್ತ್ರಾಬಾದಿ"ಯನ್ನು ಹೊರತು ಪಡಿಸಿದರೆ ಮತ್ತಾರೂ ಚರಿತ್ರಕಾರರು ಇವನ ಹೆಸರನ್ನು ಉಲ್ಲೇಖಿಸಲಿಲ್ಲ. ಆತಶಿಯು ಪುಜುನಿಯ ಸಮಕಾಲಿನ ಕವಿ. ಆತಶಿಯನ್ನು ಅನೇಕ ಕಾಣಿಕೆಗಳಿಂದ ಸತ್ಕರಿಸಲಾಯಿತು. ಇವನು ಮೊಟ್ಟಮೊದಲಿಗೆ ಶಿರಾಜದಿಂದ ಬಿಜಾಪುರಕ್ಕೆ ಬಂದಾಗ ಇವನು ರಾಜವೈದ್ಯನೆಂದು ನೇಮಕ ಹೊಂದಿದ. ಇವನು ಸುಲ್ತಾನನ ವಯಕ್ತಿಕ ವೈದ್ಯನಾಗಿದ್ದನು.[೧೪೬] ಇವನು ಬರೆದ ಮಸನವಿ "ಆದಿಲ್‌ನಾಮಾ" ಎಂದು ಪ್ರಸ್ಥಿಪಡೆದಿದೆ. ಇವನು ಗಝುಲ್‌ಗಳು, ಕಸಿದಾಗಳು, ಖಿತ್ತಾಗಳು ಮತ್ತು ರುಬಾಯಿಗಳು ಬರೆದನು. ಇವನು ಮಂತ್ರಿಯಾದ ಮುಸ್ತಫಾಖಾನನ ಬಗ್ಗೆ ಪ್ರಶಂಶೆ ಮಾಡಿದ್ದಾನೆ. ಇವನ ಕೃತಿಗಳೆಂದರೆ,

೧. ಆದಿಲ್‌ನಾಮಾ- ಇದು ಸುಲ್ತಾನ ಮಹಮ್ಮದ ಆದಿಲ್‌ಶಾಹನ ದಾಳಿಗಳು ಹಾಗೂ ಆಳ್ವಿಕೆಯ ಪ್ರಥಮ ಐದು ವರ್ಷಗಳ ಸಾಧನೆಯನ್ನು ವಿವರಿಸಲಾಗಿದೆ. ಈ ಮಸನವಿಯು ೧೬೪೨ ರಲ್ಲಿ ಮುಕ್ತಾಯಗೊಂಡಿತ್ತು.

೨. ಮದಿನುಲ್ ಅಫಕಾರ- ಮಸನವಿ.

೩. ನುಹ ಸಿಫರ್ -ಮಸನವಿ, ಇವನ ಕಾವ್ಯ ಸರಳ, ಉತ್ತಮ ಗುಣಮಟ್ಟದ್ದು ಎಂದು ಹೇಳಲಾಗಿದೆ.[೧೪೭]

ಎರಡನೆಯ ಅಲಿ ಆದಿಲ್‌ಶಾಹನ ಕಾಲದಲ್ಲಿಯೂ ಸಾಹಿತ್ಯ ರಚನೆಯಾಯಿತು. ಅದರಲ್ಲಿ ಅಬುಲ್-ಮಲಾಯಿ, ಅಸ್ಕರಿ-ಇ-ಕಾಶಾನಿ, ಮುಲ್ಲಾ ರಜಾಕ, ರಫ್ಟತ್ ಅವೇಸ್ ಮತ್ತು ಮೀರ ನ್ಯಾಮತುಲ್ಲಾಹ ಪ್ರಮುಖರಾಗಿದ್ದಾರೆ. ಶಾಹ ಅಬ್ದುಲ್ ಮಲಾಯಿ ಸುಲ್ತಾನನ ಮೆಚ್ಚಿನ ಕವಿಯಾಗಿದ್ದ. ಎರಡನೆಯ ಅಲಿ ಆದಿಲ್‌ಶಾಹನು ಕೂಡ ಶ್ರೇಷ್ಠ ವಿದ್ವಾಂಸನಾಗಿದ್ದ. ಇವನು ದಖನಿ ಭಾಷೆಯಲ್ಲಿ ಖುಲ್ಲಿಯಾತ-ಇ-ಶಾಹಿ ರಚಿಸಿದ. ಇದನ್ನು ಅಬ್ದುಲ್ ಮಲಾಯಿಗೆ ಪರ್ಶಿಯನ ಭಾಷೆಯಲ್ಲಿ ಅನುವಾದಿಸಲು ಆದೇಶಿಸಿದ. ಇವನು ರಾಜನ ಪ್ರಶಂಸೆಯ ಪದ್ಯಗಳನ್ನು ರಚಿಸಿದ. ಇವುಗಳನ್ನು ನೂರುಲ್ಲಾಹರ "ತಾರಿಖ-ಇ-ಅಲಿ ಆದಿಲ್‌ಶಾಹ" ದಲ್ಲಿ ವಿವರಿಸಲಾಗಿದೆ. ಇವನು ಕಸಿದಾ ರಚಿಸಿ ಅಲಿ ಆದಿಲ್‌ಶಾಹನ ಜನ್ಮ ದಿನದಂದು ಕ್ರಿಶ ೧೬೭೬ ರಲ್ಲಿ ಅರ್ಪಿಸಿದನು. ಈ ಕೃತಿಯು ಸಾರ್ವತ್ರಿಕವಾಗಿ ಜನ್ಮ ದಿನದ ಉತ್ಸವದಲ್ಲಿ ಮೆಚ್ಚುಗೆಗಳಿಸಿತು. ಅಲಿಯ ಆಸ್ಥಾನದ ಇತರ ಕವಿಗಳೆಂದರೆ, ಮಲ್ಲಿಕ ಅಕ್ಬರ ದಾಬೀರ, ಮೀರ ಅಲಿ ರಜಾ, ಮಲ್ಲಿಕ ಮಸುದ, ಅಬ್ದುಲ್ ಖಾದಿರ, ಅಬ್ದುಲ್ ಲತೀಫ, ಅಬ್ದುಲ್ ಗನಿ ಮತ್ತು ನೂರುಲ್ಲಾಹ ಹುಸೇನಿ.[೧೪೮]

ಅಸ್ಕರಿ-ಇ-ಕಾಶಾನಿ ಇನ್ನೊಬ್ಬ ಪರ್ಶಿಯನ ಕವಿ. ಇವನು ವೃತಿಯಲ್ಲಿ ವ್ಯಾಪಾರಿಯಾಗಿದ್ದ, "ಮೈಖಾನಾ" ದ ಕವಿಯನ್ನು ಬಿಟ್ಟರೆ ಬೇರೆ ಬರಹಗಾರರು ಇವನ ಹೆಸರನ್ನು ಎಲ್ಲಿಯೂ ಉಲ್ಲೇಖಿಸಿಲ್ಲ. ಇವನು ಆಸ್ಥಾನದ ಆಶ್ರಯವನ್ನು ಪಡೆದಿರಲ್ಲಿಲ್ಲ. ಇವನ ಕೃತಿಗಳೆಂದರೆ, ದಿವಾನ ಮತ್ತು ಸಾಖಿನಾಮಾ.[೧೪೯] ಸಿಕಂದರ ಆದಿಲ್‌ಶಾಹನು ನಿರಂತರವಾಗಿ ಮೊಗಲರೊಂದಿಗೆ ಯುದ್ಧದಲ್ಲಿ ಪಾಲ್ಗೊಂಡಿದ್ದರಿಂದ ಅವನಿಗೆ ಸಾಹಿತ್ಯಕ್ಕಾಗಿ ಶ್ರಮಿಸಲು ಸಮಯವೇ ಸಿಗಲಿಲ್ಲ.

ಆದಿಲ್‌ಶಾಹಿ ಸುಲ್ತಾನರ ಆಳ್ವಿಕೆಯಲ್ಲಿ ಪರ್ಶಿಯನ, ದಖನಿ, ಮರಾಠಿ, ಕನ್ನಡ ಸಾಹಿತ್ಯವು ತುಂಬಾ ವಿಫುಲವಾಗಿ ಬೆಳೆಯಿತು. ಇದರಲ್ಲಿ ಗದ್ಯ ಮತ್ತು ಪದ್ಯ, ಮಸನವಿ, ಆಧ್ಯಾತ್ಮಿಕ ಮತ್ತು ತತ್ವಜ್ಞಾನ ಕಸಿದಾಗಳು ಮತ್ತು ನುಡಿಗಳು ಪ್ರಮುಖವಾಗಿವೆ.

ಕ) ಚರಿತ್ರೆ ಗ್ರಂಥಗಳು :

ಆದಿಲ್‌ಶಾಹಿಗಳು ಇತಿಹಾಸ ರಚನೆಯಲ್ಲಿ ಮಹತ್ತರ ಸಾಧನೆ ಮಾಡಿದ್ದಾರೆ. ಈ ಯುಗವನ್ನು ದಖನಿನ್ನಲ್ಲಿ ಇತಿಹಾಸ ರಚನೆಯ ಸ್ವರ್ಣ ಯುಗವೆಂದು ಕರೆಯಲಾಗಿದೆ. ಈ ಕಾಲದಲ್ಲಿ ಐತಿಹಾಸಿಕ ಗ್ರಂಥ ರಚನೆ ಮಾಡಿದವರೆಂದರೆ, ಜುಜುನಿ, ಫೇರಿಸ್ತಾ, ರಫಿವುದ್ಧಿನ ಶಿರಾಜಿ, ಸೈಯದ ನೂರುಲ್ಲಾಹ, ಶೇಖ ಅಬ್ದುಲ್ ಹಸನ ಮತ್ತು ಮಹಮ್ಮದ ಜಹುರ ಪ್ರಮುಖರು. ಈ ಮಹಾನ ಇತಿಹಾಸಕಾರರ ಪರ್ಶಿಯನ ಇತಿಹಾಸವು ತುಂಬಾ ಉತ್ಕರ್ಷಮಟ್ಟದ ಮತ್ತು ವಿಭಿನ್ನ ರೀತಿಯದಾಗಿತ್ತು.

೧ ತಾರೀಖ –ಇ–ಫೆರಿಸ್ತಾ :

ತಾರೀಖ–ಇ–ಫೆರಿಸ್ತಾ, ಗುಲ್ಶನ್–ಇ–ಇಬ್ರಾಹಿಮಿ, ನವರಸನಾಮಾ ಎಂಬೆಲ್ಲ ಹೆಸರುಗಳಿಂದ ಕರೆಯಿಸಿಕೊಳ್ಳುವ ಇತಿಹಾಸ ಗ್ರಂಥವನ್ನು ಬರೆದವನು,[೧೫೦] ಮಹಮ್ಮದ ಕಾಸಿಮ ಫೆರಿಸ್ತಾ. ಆತ ಕಾಸ್ಪಿಯನ್ ಸಮುದ್ರದ ದಂಡೆಯ ಅಸ್ತ್ರಾಬಾದದಲ್ಲಿ ಕ್ರಿ.ಶ.೧೫೭೦ ರಲ್ಲಿ ಹುಟ್ಟಿದನೆಂದು ಹೇಳಲಾಗುತ್ತದೆ. ಆತನ ತಂದೆ ಗುಲಾಮ್ ಅಲಿ ಹಿಂದುಶಾಹನು ಮಗನೊಂದಿಗೆ ತನ್ನ ದೇಶವನ್ನು ಬಿಟ್ಟು ಭಾರತಕ್ಕೆ ಬಂದನು. ಅಹಮ್ಮದನಗರದ ಮುರ್ತುಜಾ ನಿಜಾಮ ಶಾಹನ ಆಸ್ಥಾನದಲ್ಲಿದ್ದು, ರಾಜಕುಮಾರ ಮೀರಾನ ಹುಸೇನನಿಗೆ ಪಾಠ ಕಲಿಸಹತ್ತಿದನು.[೧೫೧] ತಾನು ಚಿಕ್ಕವನಿದ್ದಾಗಲೇ ತಂದೆಯನ್ನು ಕಳೆದುಕೊಂಡು ಏಕಾಂಗಿಯಾದ ಫೆರಿಸ್ತಾ ಎಳವೆಯಲ್ಲಿಯೇ ನಿಜಾಮನ ಆಸ್ಥಾನದಲ್ಲಿ ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಸಮರ್ಥನಾದನು.(ಈ ಕೃತಿಯ ವಿವರವಾದ ಚರ್ಚೆಯನ್ನು ಮೊದಲನೆ ಆಧಾರಗಳು ಎಂಬುದರಲ್ಲಿ ಚರ್ಚಿಸಲಾಗಿದೆ.)

ರಾಜಕುಮಾರ ಮೀರಾನ ಹುಸೇನನ ಕೊಲೆಯಾದ ಅನಂತರ ಫೆರಿಸ್ತಾ ಅಹ್ಮದನಗರವನ್ನು ಬಿಟ್ಟು ಕ್ರಿ.ಶ ೧೫೮೯ರಲ್ಲಿ ಬಿಜಾಪುರಕ್ಕೆ ಬಂದನು. ಅದು ಇಬ್ರಾಹಿಮ ಆದಿಲ್‌ಶಾಹನ ಕಾಲವಾಗಿತ್ತು. ಬಾದಶಹ ಸಣ್ಣವನಾಗಿದ್ದರಿಂದ ದಿಲಾವರಖಾನ ಆಡಳಿತ ನಡೆಸುತ್ತಿದ್ದನು. ಬಾದಶಹನ ಸರಿಸುಮಾರು ಸಮವಯಸ್ಕನಾಗಿದದದದದದ್ದ ಫೆರಿಸ್ತಾನನ್ನು ಆಸ್ಥಾನದಲ್ಲಿಟ್ಟುಕೊಂಡು ಇಬ್ರಾಹಿಮನಿಗೆ ಪರಿಚಯಿಸಿದ. ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ಫೆರಿಸ್ತಾನಿಗೆ “ರೌದತ್–ಅಲ್–ಸಫಾ” ಎಂಬ ಗ್ರಂಥವನ್ನು ಕೊಟ್ಟು ಭಾರತದಲ್ಲಿಯ ಮುಸ್ಲಿಮರ ಇತಿಹಾಸವನ್ನು ಆವರೆಗೆ ಯಾರೂ ಚೆನ್ನಾಗಿ ಬರೆದಿಲ್ಲವೆಂದು ಹೇಳಿದನು. ನಿಜಾಮುದ್ದೀಮಮಿ ಬರೆದಿರುವನಾದರೂ ಅದು ತುಂಬಾ ಸಂಕ್ಷಿಪ್ತವಾಗಿದೆ. ಅದರಲ್ಲಿ ದಕ್ಷಿಣ ಭಾರತದ ಮುಸ್ಲಿಮರ ಇತಿಹಾಸವು ತಪ್ಪುಗಳಿಂದ ಕೂಡಿದೆ ಎಂದು ಹೇಳಿದನು. ಆದ್ದರಿಂದ ಭಾರತದಲ್ಲಿ ಮುಸ್ಲಿಮರು ಬಂದು ರಾಜ್ಯ ಸ್ಥಾಪನೆ ಮಾಡಿದ ಪೂರ್ಣ ಚರಿತ್ರೆಯೊಂದಿಗೆ ದಕ್ಷಿಣ ಭಾರತದ ಮುಸ್ಲಿಮರ ಸವಿವರ ಚರಿತ್ರೆ ಬರಬೇಕಾಗಿದೆ. ಅದನ್ನು ಬರೆಯಲು ಫೆರಿಸ್ತಾಗೆ ಹೇಳಿದನು.[೧೫೨] ಅವನು ಬರೆಯುವಾಗ ಚರಿತ್ರೆಗೆ ಆಧಾರಗಳಿರಬೇಕೆಂದೂ, ನಡೆದ ಘಟನೆಗಳನ್ನು ಯಥಾವತ್ತಾಗಿ ಚಿತ್ರಿಸಬೇಕಲ್ಲದೆ ವರ್ಣನೆಗಳಿಂದ, ಅತಿರಂಜಿತಗಳಿಂದ ಮುಕ್ತವಾಗಿರಬೇಕೆಂದು ಆದೇಶಿಸಿದನು.

ಫೆರಿಸ್ತಾ ಕ್ರಿ.ಶ. ೧೬೧೨ರವರೆಗೆ ಇತಿಹಾಸವನ್ನು ಬರೆಯಲು ತೊಡಗಿದ್ದರೂ ಬಿಜಾಪುರದ ಇತಿಹಾಸದ ಘಟನೆಗಳ ಚಿತ್ರಣ ೧೫೯೬ ರ ವರೆಗೆ ಮಾತ್ರ ಇದೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಅನಂತರದ ಘಟನೆಗಳ ಚಿತ್ರಣ ಅದರಲ್ಲಿ ಇಲ್ಲ. ಫೆರಿಸ್ತಾನ ಗ್ರಂಥವನ್ನು ಇಂಗ್ಲೀಷಗೆ ಅನುವಾದ ಮಾಡಿದ ಕ್ಯಾಪ್ಟನ್ ಬ್ರಿಗ್ಸ ಕ್ರಿ.ಶ. ೧೬೧೨ ರಲ್ಲಿ ಫೆರಿಸ್ತಾ ಸತ್ತಿರಬಹುದೆಂದು ಊಹಿಸಿದ್ದಾನೆ. ಎಂ.ಜೆ. ಮೊಹಲ ಎಂಬ ವಿದ್ವಾಂಸರು ಆತನು ೧೬೨೩ರ ಮೊದಲು ಸತ್ತಿರಲಿಕ್ಕಿಲ್ಲ ಎನ್ನುತ್ತಾರೆ.[೧೫೩]

ಪ್ರಾರಂಭದಲ್ಲಿ ಫೆರಿಸ್ತಾನು ತನ್ನ ಗ್ರಂಥಕ್ಕೆ 'ಗುಲ್‌ಶನ್-ಇ-ಇಬ್ರಾಹಿಮಿ' ಎಂದು ಹೆಸರಿಟ್ಟಿದ್ದನು. ಅನಂತರ ಕೆಲವು, ಬದಲಾವಣೆಗಳನ್ನು ಮಾಡಿ ಅದಕ್ಕೆ 'ನವರಸ ನಾಮಾ' ಎಂದನು. ಮೊದಲಿನದು ತನ್ನ ಆಶ್ರಯದಾತ ಎರಡನೆಯ ಇಬ್ರಾಹಿಮನ ಹೆಸರಿನಲ್ಲಿ ಹೇಳಿದ್ದಾರೆ, ಅನತರದ್ದು ಇಬ್ರಾಹಿಮನ ಪ್ರಿಯ ವಿಷಯವಾದ 'ನವರಸ' ಗಳಿಗೆ ಹಾಗೂ ಆತನೇ ಕಟ್ಟಿಸಿದ 'ನವರಸಪುರ'ಕ್ಕೆ ಸಂಬಂಧಿಸಿದ್ದಾಗಿದೆ. ಆದರೆ ಫೆರಿಸ್ತಾನ ಈ ಕೃತಿಯನ್ನು ವಿಶ್ವದಾದ್ಯಂತ "ತಾರೀಖ-ಇ-ಫೆರಿಸ್ತಾ" ಎಂದೇ ಗುರುತಿಸಲಾಗುತ್ತದೆ. ತನ್ನ ಗ್ರಂಥದ ಮೊದಲ ಪ್ರತಿಯನ್ನು ಕ್ರಿ.ಶ. ೧೬೦೬ ರಲ್ಲಿ ಎರಡನೆಯ ಇಬ್ರಾಹಿಮನಿಗೆ ಸಮರ್ಪಿಸಿದನಾದರೂ, ಸಾಯುವವರೆಗೆ ಗ್ರಂಥವನ್ನು ತಿದ್ದುತ್ತಲೇ ಇದ್ದನೆಂದು ಹೇಳಲಾಗುತ್ತದೆ.[೧೫೪]

ತಾರೀಖ-ಇ-ಫೆರಿಸ್ತಾ ಗ್ರಂಥವು ಉಪೋದ್ಘಾತ ಹಾಗೂ ಸಮಾರೋಪಗಳನ್ನಲ್ಲದೆ ೧೨ ಅಧ್ಯಾಯಗಳನ್ನು ಒಳಗೊಂಡಿದೆ.[೧೫೫] ಭಾರತದಲ್ಲಿಯ ಮುಸ್ಲಿಮರ ಪ್ರಾರಂಭದ ವಿವರಗಳೊಂದಿಗೆ ಪ್ರಾರಂಭವಾಗುವ ಚರಿತ್ರೆಗೆ ಸುಮಾರು ೨೫ ವಿವಿಧ ಇತಿಹಾಸ ಗ್ರಂಥಗಳ ಆಕರಗಳನ್ನು ಬಳಸಿಕೊಂಡಿದ್ದೇನೆಂದು ಫೆರಿಸ್ತಾ ಹೇಳುತ್ತಾನೆ. ಭಾರತದಲ್ಲಿಯ ಮುಸ್ಲಿಮರ ಸಾಮಾನ್ಯ ಚರಿತ್ರೆಯಾಗಿದ್ದರೂ, ಚಿಕ್ಕ ಪುಟ್ಟ ಸಂಸ್ಥಾನಗಳ ಯಾವ ವಿವರಗಳನ್ನೂ ಆತನು ಬಿಟ್ಟಿಲ್ಲ. ಅವುಗಳಲ್ಲಿಯ ಕೆಲವಕ್ಕೆ ವಿವರವಾದ ವರ್ಣನೆಯನ್ನು ಮಾಡಿದ್ದಾನೆ.

ಮಧ್ಯಯುಗಿನ ದಕ್ಷಿಣ ಭಾರತದ ಇತಿಹಾಸದ, ಅದರಲ್ಲೂ ಬಿಜಾಪರದ ಆದಿಲ್‌ಶಾಹಗಳ (೧೫೯೬) ಇತಿಹಾಸದ ವಿದ್ಯಾರ್ಥಿಗಳಿಗೆ ಫೆರಿಸ್ತಾನ ಗ್ರಂಥವು ಪ್ರಥಮ ಆಕರ ಗ್ರಂಥವಾಗಿದೆ. ಬಿಜಾರದಲ್ಲಿ ಪ್ರತಿಯೊಂದು ಘಟನೆಗಳನ್ನೂ ಅವನು ದಾಖಲಿಸಿದ್ದಾನೆ. ಯುಸೂಫ ಆದಿಲ್‌ಖಾನ, ಇಸ್ಲಾಯಿಲ್, ಮಲ್ಲು, ಮೊದಲನೆ ಇಬ್ರಾಹಿಮ, ಮೊದಲನೆಯ ಅಲಿ ಹಾಗೂ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿಯ ವಿವರವಾದ ಮಾಹಿತೀಯನ್ನು ಆತನು ನೀಡಿದ್ದಾನೆ. ವರುಷಗಳನ್ನು ನಮೂದಿಸುವಾಗ ಅಲ್ಲಲ್ಲಿ ತುಸು ಹಿಂದು-ಮುಂದಾಗಿರಬಹುದಾಗಿದ್ದರೂ, ಬಿಜಾಪುರದ ಇತಿಹಾಸವನ್ನು ಫೆರಿಸ್ತಾನಷ್ಟು ಖಚಿತವಾಗಿ ಯಾರು ಹೇಳಿಲ್ಲ. ಅವನು ಬಿಜಾಪುರ ಹಾಗೂ ಅಹಮ್ಮದನಗರದ ಆಸ್ಥಾನಗಳಲ್ಲಿ ಇದ್ದವನಾದ್ದರಿಂದ, ಮೊಗಲ ಸಾಮ್ರಾಟ ಜಹಾಂಗೀರನನ್ನು ಮುಖತಃ ಕಂಡವನಾದ್ದರಿಂದ, ಕ್ರಿ.ಶ. ೧೫೭೦ ರಿಂದ ೧೬೧೨ರ ವರೆಗಿನ ದಾಖಲಿಸಿದ ಘಟನೆಗಳನ್ನು ಆತ ಕಣ್ಣಾರೆ ಕಂಡವನು.[೧೫೬]

ಗ್ರಂಥದ ಭಾಷೆಯ ಬಗ್ಗೆ ಫೆರಿಸ್ತಾನೇ ಹೇಳಿ ಕೊಂಡಿರುವಂತೆ ಸರಳ ಹಾಗೂ ವಣರ್ನಾ ರಹಿತ ಪರ್ಶಿಯನ್ ಭಾಷೆ ಎಂದಿದ್ದಾನೆ. ಅದು ಪೂರ್ವಗ್ರಹ ದೋಷ ಹಾಗೂ ಪಕ್ಷಪಾತದಿಂದ ಮುಕ್ತವಾಗಿದೆ ಎಂದಿದ್ದಾನೆ. ಆತ ತನ್ನ ಆಶ್ರಯದಾತನನ್ನು ಅತಿರಂಜಿತವಾಗಿ ಬಣ್ಣಿಸಿಲ್ಲ. ಅಲ್ಲದೆ ಆತನ ಕುರಿತಾಗಿ ಬರುವ ಕೆಲವು ಅಸಂತೋಷಕರ ಘಟನೆಗಳನ್ನು ಕೂಡ ಆತ ಬರೆಯದೆ ಬಿಟ್ಟಿಲ್ಲ. ತಾನು ಮುಸ್ಲಿಮನಾಗಿದ್ದರೂ ಇತರ ಮತಗಳ ಕುರಿತು ಹೇಳುವಾಗ ಉಳಿದ ಮುಸ್ಲಿಂ ಇತಿಹಾಸಕಾರರಿಗಿಂತ ಸಂಯಮದಿಂದ ವರ್ತಿಸುತ್ತಾನೆಂದು ಬಹುತೇಕ ವಿದ್ವಾಂಸರು ಗುರುತಿಸಿದ್ದಾರೆ. ತನ್ನ ಹಿಂದಿನವರ ಇತಿಹಾಸ ಗ್ರಂಥಗಳಿಂದ ಘಟನೆಗಳನ್ನು ಹೆಕ್ಕಿ

ತೆಗೆಯವಲ್ಲಿಯೂ ಅಪರೂಪದ ಚಾಣಾಕ್ಷತೆಯನ್ನು ತೋರಿದ್ದಾನೆ. ಪ್ರಮುಖ ಘಟನೆಗಳನ್ನೊಂದನ್ನು ಬಿಟ್ಟಿಲ್ಲವೆಂದೂ ಹೇಳಲಾಗುತ್ತದೆ.[೧೫೭]

ತಾರೀಖ-ಇ-ಫೆರಿಸ್ತಾ ಗ್ರಂಥದ ಮೊದಲ ಇಂಗ್ಲಿಷ್ ಅನುವಾದವನ್ನು ಕ್ರಿ.ಶ. ೧೭೬೪ ರಲ್ಲಿ ಕ್ಯಾಪ್ಟನ್ ಜೋನಾಥನ್ ಸ್ಕಾಟ ಎಂಬವನು ಮಾಡಿ ಪ್ರಸಿದ್ಧಿಸಿದ್ದನು. ೧೮೨೯ ರಲ್ಲಿ ಜನರಲ್ ಬ್ರಿಗ್ಸ ಎಂಬುವನು ಸಂಪೂರ್ಣ ಗ್ರಂಥವನ್ನು ಅನುವಾದಿಸಿ ಎರಡು ಸಂಪುಟಗಳಲ್ಲಿ ಪ್ರಕಟಿಸಿದನು. ಪರ್ಶಿಯನ ಬಾರದ ಚರಿತ್ರಕಾರರು ಬ್ರಿಗ್ಸನನ್ನೇ ಅವಲಂಬಿಸುತ್ತಾರೆ.

೨. ತಜ್‌ಕಿರಾತ-ಅಲ್-ಮುಲಕ್ :

ರಫೀಉದ್ದೀನ್ ಇಬ್ರಾಹಿಮ ಶಿರಾಜಿ ಬರೆದ "ತಜ್‌ಕಿರಾತ-ಅಲ್-ಮುಲಕ್" ಎಂಬ ಇತಿಹಾಸ ಗ್ರಂಥವು ಬಿಜಾಪುರದಲ್ಲಿ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಆಸ್ಥಾನದಲ್ಲಿಯೇ ಕ್ರಿ.ಶ ೧೬೦೮[೧೫೮]/೧೬೦೯-೧೦ ರ ಮಧ್ಯ ರಚಿತವಾಯಿತು.

ಮೂಲತಃ ವ್ಯಾಪಾರಿಯಾಗಿ ಭಾರತಕ್ಕೆ ಬಂದ ರಫೀಉದ್ದೀನ ಶಿರಾಜಿ, ಕ್ರಿ.ಶ. ೧೫೯-೬೦ ರಲ್ಲಿ ಮೊದಲು ದೆಹಲಿಗೆ ಬಂದು ನಂತರ ಸಾಗರಕ್ಕೆ ಬಂದವನು, ಮುಂದೆ ಬಿಜಾಪುರದ ಮೊದಲನೆ ಅಲಿ ಆದಿಲ್‌ಶಾಹನ ಉಗ್ರಾಣದ ಪಾರುಪತ್ಯಗಾರನಾಗಿ ಕೆಲಸಕ್ಕೆ ಸೇರಿದನು. ಕೆಲವು ಕಾಲ ಬಾದಶಹನ ಆಪ್ತ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದ್ದನು. ಕ್ರಿ.ಶ. ೧೫೬೫ರ ರಕ್ಕಸಗಿ-ತಂಗಡಗಿ ಕಾಳಗದಲ್ಲಿ ಬಾದಶಹನ ಜೊತೆಗೆಯೇ ರಣರಂಗದಲ್ಲಿ ಇದ್ದನು. ಅನಂತರ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಪ್ರಾರಂಭದ ಕಾಲದಲ್ಲಿ ಅಫಜಲ್‌ಖಾನನೊಂದಿಗೆ ಸೆರೆಮನೆಯಲ್ಲಿದ್ದನು. ಅಲ್ಲಿಂದ ಬಿಡುಗಡೆಯಾಗಿ ೧೫೬೭ ರಲ್ಲಿ ಒಂದು ಮುಖ್ಯ ಕಾರ್ಯ ನಿಮಿತ್ತವಾಗಿ ಅಹಮ್ಮದನಗರಕ್ಕೆ ಕಳುಹಿಸಲ್ಪಟ್ಟನು. ಕೆಲವು ಕಾಲ ಬಿಜಾಪುರ ನಗರದ ರಾಜ್ಯಪಾಲನಾಗಿದ್ದನು. ರಾಜಕುಮಾರ ಫತೇಖಾನನ ಪಾರುಪತ್ಯಗಾರ, ನಾಣ್ಯಶಾಲೆಯ ಮುಖ್ಯಸ್ಥನಾಗಿಯೂ ಕೆಲಸವನ್ನು ಮಾಡಿದ್ದನು.[೧೫೯]

ಅವನ ಗ್ರಂಥದಲ್ಲಿ ಪ್ರಮುಖವಾಗಿ ಬಿಜಾಪುರದ ಆದಿಲ್‌ಶಾಹಿಗಳ ಪ್ರಾರಂಭದ ಇತಿಹಾಸದಿಂದ ಕ್ರಿ. ಶ. ೧೬೧೨ ರ ವರೆಗಿನ ವಿವರಗಳು ದಾಖಲೆಗೊಂಡಿವೆ. ಜೊತೆಗೆ ಸಮಕಾಲೀನ ದಕ್ಷಿಣ ಭಾರತ ಹಾಗೂ ಪರ್ಶಿಯಾಗಳ ಚರಿತ್ರೆಯೂ ಬಂದಿದೆ. ಈ ಗ್ರಂಥವು ಒಂಬತ್ತು ಅಧ್ಯಾಯಗಳನ್ನೊಳಗೊಂಡಿದೆ.[೧೬೦] ಇವನು ಮೊದಲನೆಯ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ಬಹಮನಿ ಇತಿಹಾಸದ ಬಗ್ಗೆ ಬರೆದಿದ್ದಾನೆ. ಆರನೆಯ ಅಧ್ಯಾಯದಲ್ಲಿ ಗುಜರಾತದ ಸುಲ್ತಾನ, ಅಹಮ್ಮದನಗರ ಮತ್ತು ಗೋಲ್ಕೊಂಡ ಸುಲ್ತಾನರ ಮಾಹಿತಿಯನ್ನು ನೀಡಿದ್ದಾನೆ. ಸಂಕ್ಷಿಪ್ತವಾಗಿ ಮೊಗಲ ಮತ್ತು ಇರಾನಿನ ಸಫವಿದ ಸುಲ್ತಾನರ ಮಾಹಿತಿಯನ್ನು ಒಂಬತ್ತನೆ ಅಧ್ಯಾಯದಲ್ಲಿ ವಿವರಿಸಿದ್ದಾನೆ. ಅಧ್ಯಾಯ ಎರಡರಿಂದ ಅಧ್ಯಾಯ ಐದರವರೆಗೆ ಮೊದಲಿನ ನಾಲ್ಕು ಆದಿಲ್‌ಶಾಹಿ ಸುಲ್ತಾನರಿಗೆ ಮೀಸಲಿಟ್ಟಿದ್ದಾನೆ. ಅಧ್ಯಾಯ ಏಳು ಇದರ ಮುಂದುವರೆದ ಭಾಗವಾಗಿ

ಒಂದನೆಯ ಅಲಿ ಆದಿಲ್‌ಶಾಹನ ಇತಿಹಾಸ ವಿವರಿಸಲಾಗಿದೆ. ಅಧ್ಯಾಯ ಎಂಟರಲ್ಲಿ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಸಂಪೂರ್ಣ ಮಾಹಿತಿಯನ್ನು ನೀಡಿದ್ದಾನೆ.[೧೬೧]

ಮೊದಲನೆಯ ಅಲಿ ಆದಿಲ್‌ಶಾಹನ ಕಾಲದಲ್ಲಿ ನಡೆದ ಕ್ರಿ. ಶ. ೧೫೬೫ರ ರಕ್ಕಸಗಿ ತಂಗಡಗಿ ಕಾಳಗದಲ್ಲಿ ಬಾದಶಹನ ಜೊತೆಗೆ ರಣರಂಗದಲ್ಲಿ ಇದ್ದವನಾದ್ದರಿಂದ ವಿಜಯನಗರ ಕಾಳಗದ ಕುರಿತಾದ ಅವನ ವಿವರಗಳಿಗೆ ಅಧಿಕ ಮಹತ್ವವಿದೆ. ಜುಬೇರಿಯು 'ಬಸಾತಿನ-ಉಸ್-ಸಲಾತೀನ'ದಲ್ಲಿ ಹಲವಾರು ಬಾರಿ ಈತನ ಹಾಗೂ ಈತನ ಗ್ರಂಥದ ಉಲ್ಲೇಖವನ್ನು ಮಾಡುತ್ತಾನೆ. ಕೆಲವು ಸಲ ಅವನ ಗ್ರಂಥದಲ್ಲಿಯ ವರ್ಣನೆಗಳನ್ನೆ ಯಥಾವತ್ತಾಗಿ ಕೊಟ್ಟಿದ್ದಾನೆ. ಪೂರ್ತಿ ಗ್ರಂಥದ ಪ್ರಕಟನೆ ಆದ ಉಲ್ಲೇಖಗಳಿಲ್ಲ.[೧೬೨] ಅದರ ಅನುವಾದವೂ ಆದಂತೆ ಕಂಡು ಬರುವುದಿಲ್ಲ.

೩. ಇಬ್ರಾಹಿಮ ನಾಮಾ :

ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಆಸ್ಥಾನದಲ್ಲಿದ್ದ ಕವಿ ಅಬ್ದುಲ್ಲಾ ಮೂಲತಃ ದೆಹಲಿಯವನು. ಆತನ ಪೂರ್ವ ಚರಿತ್ರೆಯ ಬಗ್ಗೆ ಈವರೆಗೆ ವಿಶೇಷ ಮಾಹಿತಿ ದೊರೆತಿಲ್ಲ. ಆತನು ತನ್ನ ಆಶ್ರಯದಾತ ಕುರಿತು ಬರೆದ 'ಇಬ್ರಾಹಿಮ ನಾಮಾ' ದ ಕೊನೆಯಲ್ಲಿ ಲೇಖನದ ಕಾಲವನ್ನು ಹೇಳಿದ್ದಾನೆ. ಅವನು 'ಇಬ್ರಾಹಿಮ ನಾಮಾ' ಕಾವ್ಯವನ್ನು ಕ್ರಿ. ಶ. ೧೬೦೪ ರ ಹೊತ್ತಿಗೆ ಬರೆದು ಮುಗಿಸಿದನಂತೆ. ಕಥನ ಕಾವ್ಯ ಆಗಿರುವ ಈ ಗ್ರಂಥ ೭೧೨ ದ್ವಿಪದಿಗಳನ್ನು ಹೊಂದಿದೆ. ಅದರಲ್ಲಿ ೪೪ ಭಾಗಗಳನ್ನು ಮಾಡಿದೆ. ಜೊತೆಗೆ ಪ್ರಾರಂಭದಲ್ಲಿ ದೇವತಾ ಸ್ತುತಿಯಿದೆ. ಅದನ್ನೊಳಗೊಂಡು ೪೫ ಭಾಗಗಳೆನ್ನಬಹುದು.[೧೬೩]

ಕಾವ್ಯದ ಹೆಸರು ಹೇಳುವಂತೆ 'ಇಬ್ರಾಹಿಮ ನಾಮಾ' ಎರಡನೆಯ ಇಬ್ರಾಹಿಮ ಆದಿಲ್‌ಶಾಹನನ್ನು ಕುರಿತಾದ ಕಥನ ಕಾವ್ಯವು ಆತನ ರಾಜ್ಯಕಾಲ, ಆತನ ಗುಣಗಳು, ಉದಾರತೆ, ಆತನ ರಾಜಧಾನಿಯ ವೈಭವ ಇತ್ಯಾಧಿಗಳನ್ನು ತನ್ನ ಕಾವ್ಯದಲ್ಲಿ ರಸಭರಿತವಾಗಿ ಕವಿ ವರ್ಣಿಸಿದ್ದಾನೆ.

ಅಬ್ದುಲ್ಲಾ ದೆಹಲವಿಯು ಪರ್ಶಿಯನ್ ಅರೇಬಿಕ ಭಾಷೆಯ ಪಂಡಿತನೇನೂ ಆಗಿರಲಿಲ್ಲ. ಉರ್ದು, ದಖಣಿ ಹಿಂದಿ, ಪರ್ಶಿಯನ ಕವಿಗಳ ಚರಿತ್ರೆ ಅಥವಾ ಅವರ ಸಾಹಿತ್ಯದ ಚರ್ಚೆ ಬಂದಾಗಲೂ ಆತನ ಹೆಸರು ಬರುವುದಿಲ್ಲ. ಅದಕ್ಕೆ ಕಾರಣ ಆತನು ಪಂಡಿತನಾಗಿರದಿದ್ದುದೇ ಕಾರಣವಾಗಿರಬಹುದು. ಅವನಿಗೆ ಪರ್ಶಿಯನ ಅರೇಬಿಕ್ ಭಾಷೆಗಳಲ್ಲಿ ಗತಿ ಇರಲಿಲ್ಲವೆಂಬುದನ್ನು ಆತನೇ ತನ್ನ ಕಾವ್ಯದಲ್ಲಿ ಒಂದೆಡೆ ಹೀಗೆ ಹೇಳಿಕೊಂಡಿದ್ದಾನೆ.[೧೬೩]

'ಜುಬಾ ಹಿಂದುಈ ಮುಂಜ ಸೋ ದಿಹಲವೀ ।

ನ ಜಾನೂ ಅರಬ ಔರ ಅಜಬ ಮಸ್ನವೀ ॥

ಕಥಾ ನಾಯಕನಾದ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಗುಣಗಾನವನ್ನು ಮಾಡುತ್ತ, ಒಂದಡೆ ಆತನನ್ನು ಈಶ್ವರನ ಅಂಶವೆಂಬ ಹಾಗೆ ಚಿತ್ರಿಸಿದ್ದು ಭಾರತೀಯ ಪರಂಪರೆಯ 'ನಾ ವಿಷ್ಣುಃ ಪೃಥ್ವೀ ಪತಿಗೆ ಅನುಗುಣವಾಗಿದೆ. ಆತನನ್ನು ವರ್ಣಿಸುವಾಗ ಆತನ ವಿದ್ವತ್ತನ್ನು, ಆತನ ರಚಿಸಿದ ನವರಸ ಕಾವ್ಯ ಹಾಗೂ ರಾಜ್ಯದ ತುಂಬೆಲ್ಲ ಇರುವ ಅದರ ಪ್ರಶಸ್ತಿಯನ್ನು ವರ್ಣಿಸಿದ್ದಾನೆ. ಈ ರಾಜನ ಹತ್ತಿರ ವಿದ್ಯೆ ಹಾಗೂ ಲಕ್ಷ್ಮಿ ಇಬ್ಬರೂ ವಾಸವಾಗಿದ್ದಾರೆಂದು ಹೇಳುತ್ತಾನೆ.[೧೬೪]

'ನ ಐಸಾ ಸುನಾ ಕೌಂ ಸೋ ದೇಖಾ ಅಯಾನ

ವಿದ್ಯಾ ಲಚ್ಚಮೀ ಜೋರ ದೇವೇ ದೋ ದಾನ ॥

ಹೀಗೆ ಇವನು ಇಬ್ರಾಹಿಮ ಆದಿಲ್‌ಶಾಹನ ಕುರಿತ ಅನೇಕ ವಿಷಯಗಳನ್ನು ತನ್ನ ಗ್ರಂಥವಾದ 'ಇಬ್ರಾಹಿಮ ನಾಮಾ' ದಲ್ಲಿ ಉಲ್ಲೇಖಿಸಿದ್ದಾನೆ. ಈ ಗ್ರಂಥವು ದೇವಿಸಿಂಗ ಚೌಹಾನರಿಂದ ದೇವನಾಗರಿ ಲಿಪಿಯಲ್ಲಿ ಸಂಪಾದಿತವಾಗಿದೆ. ಅದನ್ನು ೧೯೭೩ ರಲ್ಲಿ ಮಹಾರಾಷ್ಟ್ರ ಸರಕಾರದ ಪುರಾತತ್ವ ವಿಭಾಗವು ಸುಂದರವಾಗಿ ಪ್ರಕಟಿಸಿದೆ.

೪. ಫುತೂಹಾತ್-ಇ-ಆದಿಲ್‌ಶಾಹಿ :

ಫುತೂಹಾತ್-ಇ-ಆದಿಲ್‌ಶಾಹಿ ಇತಿಹಾಸ ಗ್ರಂಥವನ್ನು ಬರೆದ ಫುಜುನಿ ಅಸ್ತ್ರಾಬಾದಿ ಹಾಶಿಮ ಬೇಗ ಎಂಬವನು ಬಿಜಾಪುರದ ಖ್ಯಾತ ಸೇನಾಪತಿಗಳಲ್ಲೊಬ್ಬನಾದ ಮುಸ್ತಫಾಖಾನನ ಆಶ್ರಯದಲ್ಲಿದ್ದನು. ಆಕಸ್ಮಿಕವಾಗಿ ಆತ ಬಿಜಾಪುರಕ್ಕೆ ಬರಬೇಕಾಯಿತು. ಮಕ್ಕಾಯಾತ್ರೆಯಿಂದ ಹಿಂದುಸ್ತಾನಕ್ಕೆ ಬರುವಾಗ ಭೂಮಾರ್ಗವು ಅಸುರಕ್ಷಿತವೆಂದು ಕೇಳಿ, ಸಮುದ್ರ ಮಾರ್ಗದಿಂದ ಬಂದಾಗ ಪಶ್ಚಿಮ ತೀರದ ಮಲಬಾರದಲ್ಲಿ ಬಂದು ಇಳಿದನು.[೧೬೫] ಆಗ ಬಿಜಾಪುರದಲ್ಲಿ ಮಹಮ್ಮದ ಆದಿಲ್‌ಶಾಹನು ಆಳುತ್ತಿದ್ದನು. ಬಿಜಾಪುರಕ್ಕೆ ಬಂದು ಅಲ್ಲಿಯ ಸೇನಾಪತಿಯಾಗಿದ್ದ ಮುಸ್ತಫಾಖಾನನ ಆಶ್ರಯವನ್ನು ಪಡೆದನು. ಕ್ರಿ. ಶ. ೧೬೪೦-೪೩ರ ಮಧ್ಯ ಬರೆದಿರಬಹುದಾದ 'ಫುತೂಹಾತ್-ಇ-ಆದಿಲ್‌ಶಾಹಿ' ಗ್ರಂಥವು ಆರು ಅಧ್ಯಾಯಗಳನ್ನೊಳಗೊಂಡಿದೆ.[೧೬೬] ಪ್ರತಿಯೊಂದು ಅಧ್ಯಾಯವು ಬಿಜಾಪುರದ ಒಬ್ಬೊಬ್ಬ ಬಾದಶಾಹನಿಗೆ ಮೀಸಲಾಗಿದೆ. ಯುಸುಫ. ಇಸ್ಮಾಯಿಲ್, ಮೊದಲನೆಯ ಇಬ್ರಾಹಿಮ, ಮೊದಲನೆಯ ಅಲಿ, ಎರಡನೆಯ ಇಬ್ರಾಹಿಮ ಹಾಗೂ ಮಹಮ್ಮದ ಆದಿಲ್‌ಶಾಹ. ಈ ಆರು ಬಾದಶಹರ ರಾಜ್ಯಕಾಲದ ಚಿತ್ರಣವಿದೆ. ಗ್ರಂಥಕರ್ತನ ಸಮಕಾಲೀನರಾದ ಕೊನೆಯ ಇಬ್ಬರು ಬಾದಶಹರ ಅಧ್ಯಾಯಗಳು ಉಳಿದ ಅಧ್ಯಾಯಗಳಿಗಿಂತ ಅಧಿಕ ವಿವರಗಳನ್ನು ಒಳಗೊಂಡಿದೆ.[೧೬೭]

ವಿದ್ವಾಂಸರ ಅಭಿಪ್ರಾಯದಲ್ಲಿ ಫುಜುನಿಯು ತನ್ನ ಗ್ರಂಥವನ್ನು ಬರೆಯುವಾಗ ಉಪಲಬ್ಧವಿದ್ದ ಎಲ್ಲ ದಾಖಲೆಗಳನ್ನು ತನ್ನ ಎದುರಿಗೆ ಇಟ್ಟು ಕೊಂಡಿಲ್ಲವೆಂದು ಕಾಣುತ್ತದೆ. ಅದರಿಂದಾಗಿ ಅನೇಕ ತಪ್ಪುಗಳಾಗಿವೆ. ವಿಶೇಷವಾಗಿ ಮರಾಠರ ಹೆಸರುಗಳು ಹಾಗೂ ಘಟನೆಗಳು ಆ ಮೊದಲಿನ ಇತಿಹಾಸ ಗ್ರಂಥಗಳಿಂದ ಸರಿಯಾಗಿ ತಿಳಿದಿರುವಾಗ, ಫುಜುನಿಯ ತಪ್ಪುಗಳು ಎದ್ದು ಕಾಣುತ್ತವೆ.[೧೬೮] ಆದರೂ ಫೇರಿಸ್ತಾನ ಅನಂತರದ

[illegible]

[illegible]

[illegible]

[illegible]

[illegible]

ಮೂವತ್ತು ವರ್ಷಗಳ(೧೬೦೬–೧೬೩೯) ಇತಿಹಾಸವನ್ನು ಸರಿಯಾಗಿ ಗುರುತಿಸಲು ಆತನ ಗ್ರಂಥ ಸಹಾಯವಾಗುತ್ತದೆ. ಅದಲ್ಲದೆ ಆತ ಆದಿಲ್‌ಶಾಹಿಗಳ ಸೈನ್ಯ ಹಾಗೂ ಪರರಾಜ್ಯಗಳೊಂದಿಗಿನ ಸಂಬಂಧಗಳನ್ನು ವಿವರವಾಗಿ ವರ್ಣಿಸಿದ್ದಾನೆ. ವಿಶೇಷವಾಗಿ ಕ್ರಿ. ಶ. ೧೬೦೦–೪೪ ರ ಮಧ್ಯದ ಆದಿಲ್‌ಶಾಹಿ ಮೊಗಲರ ಸಂಬಂಧವನ್ನು ಗುರುತಿಸುಲು ಫುಜುನಿಯ ಗ್ರಂಥ ಸಹಕಾರಿಯಾಗಿದೆ.[೧೯]

ಶಿವಾಜಿಗೆ ಸಂಬಂಧಿಸಿದ ಪುಟಗಳ ಸಂಕ್ಷಿಪ್ತ ಅನುವಾದವನ್ನು ಜಾದುನಾಥ ಸರಕಾರ ಅವರು ಮಾಡಿದ್ದು, ಅದನ್ನು ಅವರು ತನ್ನ "ಹೌಸ ಆಫ್ ಶಿವಾಜಿ" ಯಲ್ಲಿ ಪ್ರಟಿಸಿದ್ದಾರೆ.

೫. ಮಹಮ್ಮದ ನಾಮಾ :

ಮಹಮ್ಮದ ಆದಿಲ್‌ಶಾಹ (ಕ್ರಿ.ಶ.೧೬೨೬–೧೬೫೬)ನ ಆಸ್ಥಾನದಲ್ಲಿದ್ದ ಮಹಮ್ಮದ ಜುಹೂರಮು "ಮಹಮ್ಮದ ನಾಮಾ" ಎಂಬ ಇತಿಹಾಸವನ್ನು ಬರೆದನು. ಆತ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಆಸ್ಥಾನದಲ್ಲಿದ್ದ ಸುಪ್ರಸಿದ್ಧ ಕವಿ ಮುಲ್ಲಾ ಜುಹೂರಿಯ ಮಗ.[೨೦] ಮಹಮ್ಮದ ಆದಿಲ್‌ಶಾಹನು ರಫೀಉದ್ದೀನ ಶಿರಾಜಿ ಬರೆದ 'ತಜ್‌ಕಿರಾತ್-ಅಲ್-ಮುಲ್ಕ' ಎಂಬ ಇತಿಹಾಸದ ಗ್ರಂಥವನ್ನು ಕ್ರಿ.ಶ. ೧೬೪೧ ರಲ್ಲಿ ಒಂದು ದಿನ ಮಹಮ್ಮದ ಜುಹೂರನಿಗೆ ಕೊಟ್ಟು ಇಂಥದೊಂದು ಇತಿಹಾಸವನ್ನು ವಿಶೇಷವಾಗಿ ದಕ್ಷಿಣ ಭಾರತದಲ್ಲಿಯ ತನ್ನ ರಾಜ್ಯದ ವಿಸ್ತಾರಗಳನ್ನು, ವಿವರಗಳನ್ನು ಬರೆಯಲು ಹೇಳಿದನಂತೆ. ಅದು ತುಂಬ ಪಾಂಡಿತ್ಯ ಪೂರ್ಣವಾಗಿಯೂ ಸುಂದರವಾದ ಶೈಲಿಯಲ್ಲಿಯೂ ಇರಬೇಕೆಂದು ಆದೇಶಿಸಿದನಂತೆ. ಅದರಂತೆ ಮಹಮ್ಮದ ಜುಹೂರನು ಮಹಮ್ಮದ ಆದಿಲ್‌ಶಾಹನ ೩೦ ವರುಷಗಳ ಆಡಳಿತ ವಿವರಗಳನ್ನು ತುಂಬ ಪರಿಶ್ರಮ ಪಟ್ಟು ಬರೆದಿದ್ದಾನೆ. ಆದ್ದರಿಂದಲೇ "ಮಹಮ್ಮದ ನಾಮಾ" ಮಹಮ್ಮದ ಆದಿಲ್‌ಶಾಹನ ಆಡಳಿತದ ಅಧಿಕೃತ ದಾಖಲೆಯಾಗಿ ಉಳಿದಿದೆ.[೨೧] ಅದು ಒಂದು ಸುಂದರ ಕಾವ್ಯವು ಆಗಿದೆ. ಗ್ರಂಥದಲ್ಲಿ ಯುದ್ಧಗಳು, ಯಾತ್ರೆಗಳು, ಮದುವೆಯ ಸಮಾರಂಭಗಳು ಸುಂದರವಾಗಿ ವರ್ಣಿತವಾಗಿವೆ. ಅದರಲ್ಲಿ ಸಾಮಾಜಿಕ ಸಮಾರಂಭಗಳು ಮದುವೆಗಳು, ವಾರ್ಷಿಕ ಹಜ್‌ಯಾತ್ರೆಗಳು ಮತ್ತು ಕೆಲವು ಪ್ರಮುಖ ಕಟ್ಟಡಗಳನ್ನು ಕಟ್ಟಿದ ವರುಷಗಳ ಉಲ್ಲೇಖವೂ ಇದೆ.[೨೨] ಹೀಗಾಗಿ ಅಂದಿನ ಸಾಮಾಜಿಕ ಪರಿಸರವನ್ನು ಅಭ್ಯಸಿಸಲು ಇದು ಒಂದು ಒಳ್ಳೆಯ ಆಕರ ಗ್ರಂಥವಾಗಿ ಉಳಿದಿದೆ.

ಆದಿಲ್‌ಶಾಹಿಗಳು, ಅಂದಿನ ಮಲೆನಾಡು ಹಾಗೂ ಕರ್ನಾಟಕದಲ್ಲಿ ನಡೆಸಿದ ಜೈತ್ರಯಾತ್ರೆಗಳ ವಿವರಗಳು 'ಮಹಮ್ಮದ ನಾಮಾ'ದಲ್ಲಿ ಬಂದಷ್ಟು ಇನ್ನಾವ ಗ್ರಂಥಗಳಲ್ಲೂ ಬಂದಿಲ್ಲವೆಂಬುದು ವಿದ್ವಾಂಸರ ಮತ. ಮಹಮ್ಮದ ಆದಿಲ್‌ಶಾಹನು ಕರ್ನಾಟಕ ಹಾಗೂ ಮಲೆನಾಡುಗಳನ್ನು ಗೆದ್ದ ಬಗ್ಗೆ ಅದೊಂದೆ ಅಧಿಕೃತ ಆಧಾರಗ್ರಂಥವಾಗಿದೆ.[೨೩] ಈ ಗ್ರಂಥದ ಭಾಗಶಃ ಅನುವಾದವನ್ನು ಪ್ರೋ. ಭಾಗವತದಯಾಳ ವರ್ಮಾ ಅವರು ಇಂಗ್ಲಿಷನಲ್ಲಿ ಮಾಡಿದ್ದಾರೆ. ಅದು ೧೯೩೦ ರಲ್ಲಿ ಎನ್.ಸಿ.ಕೇಳಕರ ಅವರು

ಸಂಪಾದಿಸಿದ, ಪುಣೆಯ ಭಾರತ ಇತಿಹಾಸ ಸಂಶೋಧಕ ಮಂಡಳದವರು ಪ್ರಕಟಿಸಿದ, 'ಶಿವಾಜಿ ನಿಬಂಧಾವಲಿ'ಯ ಎರಡನೆಯ ಸಂಪುಟದಲ್ಲಿ ಪ್ರಕಟವಾಗಿದೆ.

ಮಾದರಿಗಾಗಿ ಮಹಮ್ಮದ ನಾಮಾದಲ್ಲಿಯ ಕೆಲವು ವಿವರಗಳನ್ನು ನೋಡಬಹುದು. ಇಲ್ಲಿಯ ಭಾಗಗಳು ಗಣೇಶ ಹರಿ ಖರೇ ಅವರು ಸಂಪಾದಿಸಿದ 'ಶಿವಚರಿತ್ರ ವೃತ್ತ ಸಂಗ್ರಹ'ದ ಎರಡನೆಯ ಖಂಡ, ಫಾರ್ಸಿ ವಿಭಾಗದಿಂದ ಆಯ್ದುಕೊಳ್ಳಲಾಗಿದೆ. ಗ್ರಂಥದ ಪ್ರಾರಂಭದಲ್ಲಿ ಮಹಮ್ಮದ ಜುಹೂರಿಯು ತಾನು ಗ್ರಂಥ ಬರೆಯುವ ಅವಶ್ಯಕತೆಯನ್ನು ಹೀಗೆ ಹೇಳುತ್ತಾನೆ.

ನಾನು ದಕ್ಷಿಣದ ಬಾದಶಹರು ಸಂಪೂರ್ಣ ಕರ್ನಾಟಕವನ್ನು ತಮ್ಮ ಸ್ವಾಧೀನ ಪಡಿಸಿಕೊಂಡುದರ ಇತಿಹಾಸವನ್ನು ಬರೆಯುತ್ತಿದ್ದೇನೆ. ಅದು ಹೀಗಿದೆ. ದೇವರ ಇಚ್ಛೆಯ ಅನುಸಾರವಾಗಿ ಮಹಮ್ಮದ ಆದಿಲ್‌ಶಾಹನು ಕ್ರಿ. ಶ. ೧೬೨೬ ರಲ್ಲಿ ಸಿಂಹಾಸನವನ್ನೇರಿದನು. ಅನಂತರ ಬಾದಶಹನು, ನವಾಬ ಮುಸ್ತಫಾಖಾನ ಉರ್ಫ ಖಾನ ಬಾಬಾನಿಗೆ ಹೀಗೆ ಆದೇಶಿಸಿದನು. 'ನನ್ನ ಕಾಲ ಕಿರ್ದಿಯ ಇತಿಹಾಸವನ್ನು ಬರೆಯಬೇಕು. ಅದಕ್ಕೆ ಜುಹೂರನೇ ಯೋಗ್ಯ ವ್ಯಕ್ತಿಯಾಗಿದ್ದಾನೆ.' ಆಗ ನವಾಬನು ತನ್ನ ಮನೆಗೆ ಕರೆಸಿ ನನಗೆ 'ಮಹಮ್ಮದ ನಾಮಾ' ಬರೆಯಲು ಹೇಳಿದನು.[೧೭೪]

ಈ ಗ್ರಂಥದಲ್ಲಿ ಮಹಮ್ಮದ ಆದಿಲ್‌ಶಾಹನ ಜನ್ಮ, ಸಿಂಹಾಸನವೇರಿದ್ದು ಮತ್ತು ಇವನ ಮದುವೆ ಸಮಾರಂಭಗಳು ಬರೆಯಲಾಗಿದೆ. ಅಲ್ಲದೆ ಇವನ ಯುದ್ಧಗಳು ಮಾಲಿಕ–ಇ–ಮೈದಾನ ಫಿರಂಗಿ ಬಿಜಾಪುರಕ್ಕೆ ತಂದದ್ದು ಮತ್ತು ದಕ್ಷಿಣದ ದಂಡಯಾತ್ರೆಗಳು ವಿವರಿಸಲಾಗಿದೆ.

೬. ತಾರೀಖ–ಇ–ಅಲಿ :

'ತಾರೀಖ–ಇ–ಅಲಿ' ಇತಿಹಾಸ ಗ್ರಂಥವನ್ನು ಬರೆದವನು ನೂರುಲ್ಲಾ ಇಬ್ನ ಖಾಜಿ ಸಯ್ಯಾದ ಅಲಿ ಮಹಮ್ಮದ ಹುಸೇನಿ. ಅವನು ಎರಡನೆಯ ಅಲಿ ಆದಿಲ್‌ಶಾಹನ(೧೬೫೬–೭೯) ಆಸ್ಥಾನದಲ್ಲಿದ್ದನು.[೧೭೫] 'ಮಹಮ್ಮದ ನಾಮಾ'ದಲ್ಲಿ ಈತನ ಕುರಿತು ಉಲ್ಲೇಖ ಬರುತ್ತದೆ. ಚಂದ್ರಗುತ್ತಿಯ ಹತ್ತಿರ ಮೀರ ಜುಮ್ಲಾನು ಗದ್ದಲ ಪ್ರಾರಂಭಿಸಿದಾಗ, ಆತನನ್ನು ಹತ್ತಿಕ್ಕಲು ಮಹಮ್ಮದ ಆದಿಲ್‌ಶಾಹನು ಖಾನ ಮಹಮ್ಮದನನ್ನು ಕಳಿಸಿದ್ದನಂತೆ. ಆತನು ಬೇಗ ಬರದಿದ್ದಾಗ ಮಹಮ್ಮದ ಆದಿಲ್‌ಶಾಹನು ಈ ನೂರುಲ್ಲಾನನ್ನು ಕಳಿಸಿದನು. ಆತ ಅಲ್ಲಿ ಉತ್ತಮ ರೀತಿಯಾಗಿ ಕೆಲಸ ಮಾಡಿದಕ್ಕಾಗಿ ಅವನಿಗೆ 'ಸರಖೈಲುಲ–ಮಮಾಲಿಕ' ಎಂಬ ಬಿರುದನ್ನು ಬಾದಶಹನು ಕೊಟ್ಟನು. ಇದರಿಂದಾಗಿ ನೂರುಲ್ಲಾ ಇಬ್ನ ಖಾಜಿ ಮಹಮ್ಮದ ಆದಿಲ್‌ಶಾಹನ ಆಸ್ಥಾನದಲ್ಲಿ ರಾಯಭಾರಿಯಾಗಿಯೂ ಕೆಲಸ ಮಾಡಿದ್ದನೆಂದು ತಿಳಿದು ಬರುತ್ತದೆ.[೧೭೬]

ಸಮಕಾಲೀನ ಕವಿ ನುಸಸ್ರತಿಯು ತನ್ನ 'ಅಲಿನಾಮಾ' ಕಾವ್ಯದಲ್ಲಿ 'ಶಾಹ ನೂರುಲ್ಲಾ ಉರುಫ್ ಅಬುಲ್ ಮು ಅಲಿ ಎಂಬುವನು ಅಲಿ ಆದಿಲ್‌ಶಾಹನ ವಿಜಯಗಳ ಕುರಿತು ಒಂದು ಪುಸ್ತಕವನ್ನು ಬರೆದಿದ್ದಾನೆ' ಎಂದು ಹೇಳಿದ್ದಾನೆ. ಬಹುಶಃ ಈ ಗ್ರಂಥದ ಕುರಿತೇ ಹೇಳಿದ್ದಾನೆ. ಆತನಿಗೆ 'ಶಾಹ' ಎಂಬ

ಬಿರುದೂ ಇತ್ತೆಂದು ಹೇಳಬಹುದು. ಅನಂತರದ ಜುಬೇರಿಯು ತನ್ನ 'ಬಸಾತೀ–ಇ–ಸಲಾತಿನ' ದಲ್ಲಿ ಈ ಗ್ರಂಥವನ್ನು 'ಇನ್ಸಾಯೆ ಅಲಿ ಆದಿಲ್‌ಶಾಹ' ಎಂದು ಕರೆದಿದ್ದಾನೆ.[೧೭೭]

'ತಾರೀಖ–ಇ–ಅಲಿ' ಗ್ರಂಥವನ್ನು ನೂರುಲ್ಲಾ ಇಬ್ನ–ಖಾಜಿಯು ಎರಡನೆಯ ಅಲಿ ಆದಿಲ್‌ಶಾಹನ ಅಣತಿಯ ಮೇರೆಗೆ, ಕ್ರಿ. ಶ. ೧೬೬೭ರಲ್ಲಿ ರಚಿಸಿದನು.[೧೭೮] ಗ್ರಂಥದ ಪ್ರಾರಂಭದಲ್ಲಿಯೇ ಆತನು ಹಾಗೆ ಹೇಳಿಕೊಂಡಿದ್ದಾನೆ.

'ಬಾದಶಹನು ನನಗೆ ತನ್ನ ಕಾಲಕಿರ್ದಿಯ ವಿಷಯಗಳನ್ನು ಹಾಗೂ ಪರಾಕ್ರಮಗಳನ್ನು ಬರೆದು ಇಡಲು ಆಜ್ಞೆ ಮಾಡಿದನು. ನನಗೆ ಇತರ ಹಲವಾರು ಕೆಲಸಗಳಿದ್ದರೂ ಈ ಕೆಲಸ ನನ್ನಿಂದ ಆದೀತೋ–ಇಲ್ಲವೋ ಎಂದು ಚಿಂತಿಸುತ್ತಿದ್ದೆ. ಕೊನೆಗೆ ನಾನು ಆತನ ಆಜ್ಞೆಯನ್ನು ಶಿರಸಾವಹಿಸಿ ಮಾಡಬೇಕೆಂದು ನಿಶ್ಚಯಿಸಿ ಬರೆಯಲು ಪ್ರಾರಂಭಿಸಿದೆ.'

ಈ ಗ್ರಂಥದಲ್ಲಿ ಪ್ರಾರಂಭದ ಸ್ತುತಿ ಪರವಾದ ಭಾಗಗಳನ್ನು ಬಿಟ್ಟರೆ, ಎರಡನೆಯ ಅಲಿ ಆದಿಲ್‌ಶಾಹನ ಜನ್ಮ, ಬಾಲ್ಯ, ಮಹಮ್ಮದ ಆದಿಲ್‌ಶಾಹನ ಮರಣ, ಅಲಿ ಆದಿಲ್‌ಶಾಹನ ರಾಜ್ಯಾಭೀಷೇಕ, ಶಿವಾಜಿ–ಅಫಝುಲ್‌ಖಾನರ ಘಟನೆ, ಬಡೀ ಸಾಹೇಬಾಳ ಮಕ್ಕಾಯಾತ್ರೆ, ಸಿದ್ಧೀ ಚೌಹಾರನ ಬಂಡು, ಮಲೆನಾಡು ವಿಜಯ ಹಾಗೂ ಬಿಜಾಪುರ–ಮೊಗಲರ ಯುದ್ಧದ ವಿಷಯಗಳ ವಿವರವಾದ ಚಿತ್ರಣವಿದೆ.[೧೭೯] ಜಯಸಿಂಗ ಹಾಗೂ ಶಿವಾಜಿ, ಬಿಜಾಪುರದ ಮೇಲಿನ ಆಕ್ರಮಣದ ಕಥೆಯೂ ಇದೆ. ಬಹುತೇಕ ಆಸ್ಥಾನ ವರದಿಯಂತಿದ್ದ ಈ ಗ್ರಂಥವು ವಿಶೇಷವಾಗಿ ಸಮಕಾಲೀನ ಬಿಜಾಪುರದ ಚರಿತ್ರೆಯಲ್ಲಿ ಕರ್ನಾಟಕದ ಕಥೆಯನ್ನು ತಿಳಿಸುವಲ್ಲಿ ಬೆಳಕನ್ನು ಚೆಲ್ಲುತ್ತದೆ.

೭. ಹಫ್ತ ಖುರ್ಸೀ :

ಫಿತೂರಖಾನ ವಲದ ಅಸದಖಾನ ಲ್ಯಾರಿಯು ಬೆಳಗಾವಿಯ ಪ್ರಸಿದ್ಧ ಅಸದಖಾನ ಲ್ಯಾರಿಯ ಮಗನು. ಶತಾಯುಷಿಯಾಗಿ ಮರಣಹೊಂದಿದ ಅಸದಖಾನ ಹಾಗೂ ಆತನ ಮಗನಿಗೆ ಬಿಜಾಪುರದ ಇತಿಹಾಸವು ಚೆನ್ನಾಗಿ ಗೊತ್ತಿತ್ತು. ಈ ವಿಷಯವು ಎರಡನೆಯ ಅಲಿ ಆದಿಲ್‌ಶಾಹನಿಗೂ ಆತನ ಕುಟುಂಬದ ಜನರಿಗೂ ಗೊತ್ತಿತ್ತು. ಅವರು ಫಿತೂರಖಾನನಿಗೆ ಇತಿಹಾಸವನ್ನು ಬರೆಯಲು ಹೇಳಿದರು. ಅದರಂತೆ ಆತನು ತನಗೆ ನೆನಪಿದ್ದಷ್ಟನ್ನು ಬರೆಯಲು ತೊಡಗಿದನು. ಮೂಲತಃ ಇದನ್ನು ಅಸದಖಾನ ಲ್ಯಾರಿಯೇ ಬರೆದಿರಬೇಕೆಂಬ ಊಹೆಯೂ ಇದೆ. ಜುಬೇರಿಯ 'ಬಸಾತೀನ–ಇ–ಸಲಾತೀನ' ದಲ್ಲಿ ಬರುವ ಮೀರ್ ಇಬ್ರಾಹಿಮ ಅಸದಖಾನೀ ಎಂಬ ಹೆಸರೂ, ಇತರತ್ರ ಅವನ ಹೆಸರಿನಲ್ಲಿ ಬರುವ'ಅಹವಾಲ ಸಲಾತೀನ ಬಿಜಾಪುರ' ಎಂಬ ಗ್ರಂಥವು, 'ಹಫ್ತ ಖುರ್ಸೀ'ಯ ಮೂಲ ರೂಪವಾಗಿರಬೇಕೆಂಬ ಅಭಿಪ್ರಾಯವೂ ಇದೆ. ಈ ಫಿತೂರಖಾನನೆಂಬವನು ಅನಂತರ ಬಂದವನಿರಬೇಕು. ಯಾಕೆಂದರೆ ಎರಡನೆಯ ಅಲಿ ಆದಿಲ್‌ಶಾಹನ ಅಣತಿಯಂತೆ ಬರೆದ ಗ್ರಂಥವು ಅವನ ಕಾಲದವರೆಗೆ ಮಾತ್ರ ಇರಬೇಕಾಗಿತ್ತಷ್ಟೆ. ಆದರೆ ಔರಂಗಜೇಬನ ಅನಂತರವೂ ವಿಷಯ

ಮುಂದುವರಿದಿದೆ. ಎರಡನೆಯ ಅಲಿ ಆದಿಲ್‌ಶಾಹನ ಆಸ್ಥಾನದಲ್ಲಿ ರಚಿತಗೊಂಡ ಈ ಕೃತಿ ಔರಂಗಜೇಬನ ಮರಣಾನಂತರ ಪರಿಷ್ಕೃತವಾಗಿ ಮತ್ತೊಂದು ಆವೃತಿಯಾಗಿರಬೇಕು.[೧೮೦]

ಗ್ರಂಥದಲ್ಲಿ ಬಂದ ವಿಷಯಗಳ ಆಧಾರದಿಂದ ಅದನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಒಂದು ಘಟನೆಗಳ ವರ್ಣನೆ, ಇನ್ನೊಂದು ಶಕಾವಲಿ ಅಥವಾ ವರುಷಾನುಕ್ರಮಣಿಕೆ. ಬಿಜಾಪುರದ ಆದಿಲ್‌ಶಾಹಿ ರಾಜ್ಯದ ಪ್ರತಿಯೊಬ್ಬ ಸುಲ್ತಾನನು ಹೇಗೆ ಪಟ್ಟಕ್ಕೆ ಬಂದದಿನಿಂದ ಆತನ ಮರಣದವರೆಗಿನ ಘಟನೆಗಳನ್ನು ತನ್ನ ಅಭಿಪ್ರಾಯಗಳೊಂದಿಗೆ ನಮುದಿಸುತ್ತಾನೆ. ಈ ಮಧ್ಯಕಾಲದಲ್ಲಿ ನಡೆದ ಪ್ರಮುಖ ಘಟನೆಗಳು, ಕಟ್ಟಿದ ಪ್ರಮುಖ ಕಟ್ಟಡಗಳು, ಕೆರೆಗಳು ಇತ್ಯಾದಿಗಳ ವರುಷಗಳನ್ನು ಪ್ರತ್ಯೇಕವಾಗಿ ನಮೂದಿಸುತ್ತಾನೆ.[೧೮೧]

ಗ್ರಂಥದ ಉಪಕ್ರಮ, ಯುಸೂಫ ಪೂರ್ವವೃತ್ತ, ಯುಸೂಫನ ಕಾಲದಲ್ಲಿಯ ಮಾಹಿತಿ, ಇಸ್ಮಾಯಿಲ್, ಮಲ್ಲೂ, ಮೊದಲನೆಯ ಇಬ್ರಾಹಿಮ, ಮೊದಲನೆಯ ಅಲಿ, ಎರಡನೆಯ ಇಬ್ರಾಹಿಮ, ಮಹಮ್ಮದ, ಎರಡನೆಯ ಅಲಿ ಆದಿಲ್‌ಶಾಹರ ಕಾಲದಲ್ಲಿ ನಡೆದ ಘಟನೆಗಳ ಕಾಲಾನುಕ್ರಮದಲ್ಲಿ ವರ್ಣನೆ, ಸಿಕಂದರನ ಕಾಲದಲ್ಲಿ ರಾಜ್ಯ ಹೇಗೆ ಹೋಯಿತು, ಔರಂಗಜೇಬನ ಮರಣ, ಪ್ರತ್ಯೇಕ ಸುಲ್ತಾನರ ವಯಸ್ಸು, ರಾಜ್ಯಭಾರಕಾಲ, ಬಿಜಾಪುರದಲ್ಲಿರುವ ಬಜಾರುಗಳ ಹೆಸರುಗಳು, ಭಾವಿಗಳು, ಮಲಿಕ–ಇ–ಮೈದಾನ ತೋಫಿನ ವಿವರ ಇತ್ಯಾದಿಗಳು ಸೇರಿಕೊಂಡಿವೆ.[೧೮೨]

ಕಾಲಾನುಕ್ರಮದ ವರುಷಗಳಾಗಲೀ ಅವರ ಕಾಲದಲ್ಲಿ ಕಟ್ಟಿದ ಕಟ್ಟಡಗಳ ಉಲ್ಲೇಖವಾಗಲೀ ಎಲ್ಲವೂ ಖಚಿತವಾಗಿಯೇನೂ ಇಲ್ಲ. ಕೆಲವು ವರುಷಗಳು ತಪ್ಪು ಉಲ್ಲೇಖವಾಗಿದ್ದರೆ ಇನ್ನು ಕೆಲವು ಸಂದರ್ಭದಲ್ಲಿ ಯಾರೋ ಕಟ್ಟಿದ ಕಟ್ಟಡವನ್ನು ಇನ್ನಾರ ಕಾಲದಲ್ಲೋ ಕಟ್ಟಿದ್ದೆಂದು ನಮೂದಾಗಿರುವ ಪ್ರಸಂಗಗಳೂ ಉಂಟು.

ಡ). ಕನ್ನಡ ಸಾಹಿತ್ಯ :

ಬಿಜಾಪುರ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶವು ಎಂದಿನಿಂದಲೂ ಕರ್ನಾಟಕದ ಒಂದು ಭಾಗವಾಗಿದೆ. ಆದ್ದರಿಂದ ಇಲ್ಲಿಯ ಭಾಷೆ ಕನ್ನಡವಾಗಿರುವುದೂ ಅಷ್ಟೇ ಸಹಜವಾಗಿದೆ. ಈ ಪ್ರದೇಶದಲ್ಲಿ ಹುಟ್ಟಿದ ಅನೇಕ ಕವಿಗಳು ವಚನಕಾರರು, ಹರಿದಾಸರು ಶ್ರೇಷ್ಠ ಸಾಹಿತ್ಯವನ್ನು ರಚಿಸಿ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿದ್ದಾರೆ. ಆದಿಲ್‌ಶಾಹಿ ಪೂರ್ವದ ಕವಿಗಳಾದ ರನ್ನ, ನಾಗಚಂದ್ರ ಬಸವಣ್ಣ ಮೊದಲಾದವರು ಇಲ್ಲಿಯ ಕೆಲವು ಶ್ರೇಷ್ಠರು.

ಮರಾಠಿಯ ವಾಮನ ಪಂಡಿತ, ತುಕಾರಾಮ ಹಾಗೂ ರಾಮದಾಸರ ಸಾಹಿತ್ಯ ಸೃಷ್ಟಿ ಪ್ರಾರಂಭವಾದದ್ದು ಬಿಜಾಪುರದಿಂದ. ಅದರಂತೆ ಕನ್ನಡ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದ ಕವಿಗಳ ಒಂದು ದೊಡ್ಡ ಪಟ್ಟಿಯನ್ನೆ ಉದಾಹರಿಸಬಹುದು. ಬಿಜಾಪುರದ ರುಕ್ಮಾಂಗ ಪಂಡಿತರು, ಸಿಂದಗಿಯ ಭೀಮಾಶಂಕರ ಜಕ್ಕಪ್ಪಯ್ಯ, ಶಿವರಾಮ, ಕಾಖಂಡಕಿಯ ಮಹಿಪತಿದಾಸ, ಕೃಷ್ಣದಾಸ, ಯತಿರಾಯ ಶ್ರೀಪತಿ, ಶ್ರೀಪತಿತನುಜ,

ಅಲ್ಲದೆ ಚಿದಾನಂದ ಅವಧೂತ ಮುದ್ಗಲ್ ಕೃಷ್ಣದಾಸ, ಗಲಗಲಿಯ ಅವ್ವ ಪ್ರಯಾಗಾಬಾಯಿ ಇತ್ಯಾದಿ ಸ್ತ್ರೀಪುರುಷರು ಕನ್ನಡದಲ್ಲಿ ಸಾಹಿತ್ಯವನ್ನು ರಚಿಸಿದ್ದಾರೆ.[೧೮೩]

ದೇಶೀ ಭಾಷೆಗಳಲ್ಲಿಯ ಸಾಹಿತ್ಯದ ಒಂದು ವೈಶಿಷ್ಟ್ಯವೆಂದರೆ, ಇಲ್ಲಿಯ ಕವಿ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಬಹು ಭಾಷೆಗಳನ್ನು ಉಪಯೋಗಿಸಿರುವುದು. ಇನ್ನೊಂದು ಭಾಷೆಯ ಪ್ರಭಾವ ದಟ್ಟವಾದಾಗ ಆ ಭಾಷೆಯ ಶಬ್ದಗಳು ಸ್ಥಳೀಯ ಭಾಷೆಯ ಕೃತಿಗಳಲ್ಲಿ ಬರುವುದು ಅಚ್ಚರಿಯ ವಿಷಯವೇನಲ್ಲ. ಆದರೆ ಮೂರು ನಾಲ್ಕು ಭಾಷೆಗಳನ್ನು ಉಪಯೋಗಿಸಿ ಕೃತಿಗಳನ್ನು ರಚಿಸಿರುವುದು ಚೋದ್ಯವೇ ಸೈ.

ಸ್ಥಳೀಯ ವಾತಾವರಣದಲ್ಲಿ ಬಹುತೇಕ ಹಿಂದು ಪಂಡಿತ ಮಾನ್ಯರು ಬಹು ಭಾಷಾ ವಿಶಾರದರಾಗಿದ್ದರು. ಪರ್ಶಿಯನ್, ದಖಣಿ, ಮರಾಠಿ, ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಪರಿಣಿತರಾಗಿದ್ದ ಪಂಡಿತರನ್ನು ಕವಿಗಳನ್ನು ದಾಸರನ್ನು ಆ ಕಾಲದ ಬಿಜಾಪುರದಲ್ಲಿ ಕಾಣುತ್ತೆವೆ.

ಬಿಜಾಪುರದ ರುಕ್ಮಾಂಗ ಪಂಡಿತರು ಅಪರಿಮಿತ ಗ್ರಂಥಗಳನ್ನು ಬರೆದಿದ್ದಾರೆಂದೂ ಅವರು ಪ್ರಾಕೃತ, ಸಂಸ್ಕೃತ, ಕನ್ನಡ, ಹಿಂದಿ, ದ್ರಾವಿಡ, ಅರಬ್ಬಿ ಹಾಗೂ ತೆಲುಗು ಭಾಷೆಗಳಲ್ಲಿ ಕರುಣಪರವಾದ, ಶೃಂಗಾರರಸಪೂರಿತವಾದ ಹಾಗೂ ಆಧ್ಯಾತ್ಮ ಪರವಾದ ಕೃತಿಗಳನ್ನು ರಚಿಸಿದ್ದಾರೆ[೧೮೪] ಎಂದೂ ಅವರ ಚರಿತ್ರೆಯನ್ನು ಬರೆದ ರುಕ್ಮಜದಾಸ ಹೇಳುತ್ತಾರೆ. ಅವರು ಬಹು ಭಾಷೆಗಳಲ್ಲಿ ಕೃತಿಗಳನ್ನು ರಚಿರುವ ಸಾಧ್ಯತೆಯೂ ಇದೆ. ಕನ್ನಡ, ಮರಾಠಿ, ಸಂಸ್ಕೃತ ಕೃತಿಗಳು ದೊರೆತಿವೆ. ಕೆಲವು ಪ್ರಕಟವೂ ಆಗಿವೆ. "ಬಾಟ ಪಕಡೋ ಸೀದಾ" ಎಂಬ ಕೃತಿಯಲ್ಲಿ ಮೂರು ಭಾಷೆಗಳನ್ನು "ಸಮಜೋ ಭಾಯಿ ಸಕುನಾ ಚಾರೋ ಖುದಾಕಾ" ಎಂಬ ಕೃತಿಯಲ್ಲಿ ಐದು ಭಾಷೆಗಳನ್ನು ಉಪಯೋಗಿಸಿದ್ದಾರೆ.

ಮಹಿಪತಿರಾಯರ ಮಗ ಕೃಷ್ಣದಾಸರು ಕೂಡ ಸಾವಿರದಷ್ಟು ಕೀರ್ತನೆಗಳನ್ನು ಜೊತೆಗೆ ಹತ್ತಾರು ಆಖ್ಯಾನಗಳನ್ನು, ಆಧ್ಯಾತ್ಮ ರಾಮಾಯಣ ಕಾವ್ಯವನ್ನು ರಚಿಸಿದ್ದಾನೆ. ಅವರ ಮನೆತನದ ಮುಂದಿನ ಮೂರು ತಲೆಮಾರುಗಳವರೆಗೆ ಅನೇಕ ಜನ ಕೀರ್ತನೆಗಳನ್ನು ಬರೆದದ್ದಾರೆ.[೧೮೫]

ಸಿಂದಗಿ ಜಕ್ಕಪ್ಪಯ್ಯನ 'ಅಗ್ನಿ ಪರೀಕ್ಷೆ' ಖಂಡ ಕಾವ್ಯವು ಕನ್ನಡ ಮರಾಠಿ ದ್ವಿಭಾಷೆಯಲ್ಲಿದೆ. ಒಂದೇ ಕಥೆಯನ್ನು ಎರಡು ಭಾಷೆಗಳಲ್ಲಿ ಹೇಳುತ್ತ ಹೋದ ಉದಾಹರಣೆ ಬಹುಶಃ ಬೇರೆ ಯಾವ ಭಾಷೆಗಳ ಇತಿಹಾಸದಲ್ಲೂ ದೊರೆಯಲಿಕ್ಕಿಲ್ಲ. 'ಶ್ರೀರಾಮಚಂದ್ರ ಅನುಸಂಧಾನ' ಅಥವಾ 'ಅಗ್ನಿ ಪರೀಕ್ಷೆ' ಎಂಬ ಹೆಸರಿನ ಈ ಕಾವ್ಯವು ಮರಾಠಿ ಚಾಮರಿ ವೃತ್ತದಲ್ಲಿ ಪ್ರಾರಂಭವಾಗುತ್ತದೆ. ಐದು ನುಡಿಗಳ ದೇವತಾ ಸ್ತುತಿಯ ಅನಂತರ ಕಥೆಯನ್ನು ಕನ್ನಡ ವಾರ್ಧಕ ಷಟ್ಪದಿಯಲ್ಲಿ ಮುಂದುವರೆಸಲಾಗಿದೆ. ಅನಂತರ ಮತ್ತೆ ಮರಾಠಿ ಹೀಗೆ ಕಥೆ ಸಾಗುತ್ತದೆ. ಕನ್ನಡದ ವಿವಿಧ ಷಟ್ಪದಿ ಕಂದ ಹಾಗೂ ಪದಗಳನ್ನು ಬಳಸಿದ್ದರೆ ಮರಾಠಿಯಲ್ಲಿ ವಿವಿಧ ವೃತ್ತ ಶ್ಲೋಕ ಇತ್ಯಾಧಿಗಳನ್ನು ಕವಿ ಬಳಸಿದ್ದಾನೆ.[೧೮೬]

ಅಡಿಟಿಪ್ಪಣಿಗಳು

1. ಕಡಕೋಳ, ಎಚ್.ಎಂ (ಸಂ), ೨೦೧೦, *ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ*, ಕನ್ನಡ ಸಾಹಿತ್ಯ ಪರಿಷತ್ತು, ವಿಜಾಪುರ, ಪು-೨೩೨
2. ಅದೇ ಪು-೨೩೨-೩೩
3. *ಕನ್ನಡ ವಿಶ್ವಕೋಶ*, ೧೯೭೨, ಮೈಸೂರ ವಿಶ್ವವಿದ್ಯಾಲಯ, ಮೈಸೂರ, ಸಂ-೪, ಪು-೧೪೪
4. Kamat ,Jyotsna, 2009,*Education in Karnataka through ages* , The Mythic Society, Banglore, p-5
5. *ಕನ್ನಡ ವಿಶ್ವಕೋಶ*, ೧೯೭೨, ಸಂ-೪, ಮೈಸೂರ ವಿಶ್ವವಿದ್ಯಾಲಯ, ಮೈಸೂರ, ಪು-೧೪೪
6. Devare, T.N., 1961, *A Short History of Persian literature*, Published by, S. Devare, Poona, p-63
7. Kamat ,Jyotsna, 2009,*Education in Karnataka through ages,* The Mythic Society, Banglore, p-9
8. *ಕನ್ನಡ ವಿಶ್ವಕೋಶ*, ೧೯೭೨, ಸಂ-೪, ಮೈಸೂರ ವಿಶ್ವವಿದ್ಯಾಲಯ, ಮೈಸೂರ, ಪು-೧೪೪
9. Imaratwale, A.A. 2007, *History of Bijapur Subah*,Islamic Wonders Bureau, New Delhi, p-50
10. Ibid, p-50
11. *ಬಿಜಾಪುರ ಜಿಲ್ಲಾ ಗ್ಯಾಸೆಟಿಯರ*, ೧೯೯೯, ಪು-೭೯೬
12. ಅದೇ ಪು-೭೯೬
13. ಕುಲಕರ್ಣಿ, ಕೆ. ಕೆ. ೧೯೯೯, *ಬುಸಾತಿನ್-ಸಲಾತಿನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೩೧೭
14. ಅದೇ, ಪು-೩೧೭
15. ಅದೇ, ಪು-೩೨೪
16. ಅದೇ, ಪು-೩೨೫
17. ಅದೇ, ಪು-೩೨೮
18. ಅದೇ, ಪು-೩೨೮
19. *ಬಿಜಾಪುರ ಜಿಲ್ಲಾ ಗ್ಯಾಸೆಟಿಯರ*, ೧೯೯೯, ಪು-೭೯೬
20. ಅದೇ, ಪು-೭೯೬-೯೭

21. Zahur-bin-Zahuri, *Muhammad Nama* (MS) pp-261-63

22. Devare, T.N., 1961, *A Short History of Persian literature*, Published by, S. Devare, Poona, pp-108-09

23. Imaratwale, A.A. 2007, *History of Bijapur Subah*, Islamic Wonders Bureau, New Delhi, p-50

24. Ibid, p-51

25. ಬಾಗಾಯತ, ವಿ.ಎಮ್, ೨೦೦೪, ಆದಿಲ್‌ಶಾಹಿ ಅರಸರ ಕಾಲದ ಆರೋಗ್ಯ ವ್ಯವಸ್ಥೆ, ಇತಿಹಾಶ ದರ್ಶನ ಸಂ.೧೯, ಪು-೨೭೬

26. Khodaey, Zaman, 1989,Persian *Elements in the Culture, Art and Architecture of Bijapur*, Osmania University, Hyderabad, p-137

27. Zubairi, Mirza Ibrahim, 1887, *Bosateen-us-Salateen*, p-280

28. Askari, Hasan, 1958, *Medicine and Hospitals in Muslim India*, p-183

29. Siddiqui, M.A, 1968, *The Unani Tibb* (Greek Medicine)in India. P-165

30. ಬಾಗಾಯತ, ವಿ.ಎಮ್, ೨೦೦೪, ಆದಿಲ್‌ಶಾಹಿ ಅರಸರ ಕಾಲದ ಆರೋಗ್ಯ ವ್ಯವಸ್ಥೆ, ಇತಿಹಾಶ ದರ್ಶನ ಸಂ.೧೯, ಪು-೨೭೬

31. Khodaey, Zaman, 1989,*Persian Elements in the Culture, Art and Architecture of Bijapur*, Osmania University, Hyderabad, p-137

32. Devare, T.N., 1961, *A Short History of Persian literature*, Published by, S. Devare, Poona, pp-244

33. ಬಾಗಾಯತ, ವಿ.ಎಮ್, ೨೦೦೪, ಆದಿಲ್‌ಶಾಹಿ ಅರಸರ ಕಾಲದ ಆರೋಗ್ಯ ವ್ಯವಸ್ಥೆ, ಇತಿಹಾಶ ದರ್ಶನ ಸಂ.೧೯, ಪು-೨೭೭

34. Devare, T.N., 1961, *A Short History of Persian literature*, Published by, S. Devare, Poona, pp-248

35. ಕುಲಕರ್ಣಿ, ಕೆ.ಕೆ,೧೯೯೯, ಬುಲಾತಿನೆ ಸಲಾತೀನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೯೩

36. ಬಾಗಾಯತ, ವಿ.ಎಮ್, ೨೦೦೪, ಆದಿಲ್‌ಶಾಹಿ ಅರಸರ ಕಾಲದ ಆರೋಗ್ಯ ವ್ಯವಸ್ಥೆ, ಇತಿಹಾಶ ದರ್ಶನ ಸಂ.೧೯, ಪು-೨೭೮

37. Rizvi,Mir Sadat Ali, 1918, *Kalam-ul-Mulk*, p-17

38. Zubairi, Mirza Ibrahim, 1887, *Bosateen-us-Salateen*, p-79

39. Ibid, p-275

40. Nazir Ahmad, 1970, *Shah Khalillulah Khushnavis* Vol.No. XLIV, No-4, pp-51-53

41. Sayyedah, Jafar and Gyan Chand, 1998, *Tarik-e-Adab-e- Urdu*, p-507

42. ಭಾರತೀಯ ಪುರಾತತ್ವ ಸರ್ವೇಕ್ಷಣ,ಬಿಜಾಪುರ, *ಆದಿಲ್‌ಶಾಹಿ ಕಾಲದ ಅಲಂಕಾರಿಕ ಲಿಪಿಶೈಲಿಗಳು*, ಪ-೧-೨

43. ಕನ್ನಡ ವಿಶ್ವಕೋಶ, ೨೦೦೯, *ಇತಿಹಾಸ ಮತ್ತು ಪುರಾತತ್ವ*, ಮೈಸೂರ ವಿಶ್ವವಿದ್ಯಾಲಯ, ಮೈಸೂರ, ಪು-೮೫

44. ಭಾರತೀಯ ಪುರಾತತ್ವ ಸರ್ವೇಕ್ಷಣ,ಬಿಜಾಪುರ, *ಆದಿಲ್‌ಶಾಹಿ ಕಾಲದ ಅಲಂಕಾರಿಕ ಲಿಪಿಶೈಲಿಗಳು*, ಪ-೩

45. ಅದೇ, ಪು-೩-೪

46. ಕನ್ನಡ ವಿಶ್ವಕೋಶ, ೨೦೦೯, *ಇತಿಹಾಸ ಮತ್ತು ಪುರಾತತ್ವ*, ಮೈಸೂರ ವಿಶ್ವವಿದ್ಯಾಲಯ, ಮೈಸೂರ, ಪು-೮೫

47. ಅದೇ, ಪು-೮೫

48. ಅದೇ, ಪು-೮೬

49. ಕ್ಷೇತ್ರ ಕಾರ್ಯ

50. Cousens, Henry, 1976, *Bijapur and its Architectural Remains*, Bhartiya Publishing House, Delhi, p-59

51. Sherwani, H.K. and .Joshi,1974, *History of Medieval Deccan*, Government of Andhra Pradesh, pp-418-19

52. ಕನ್ನಡ ವಿಶ್ವಕೋಶ, ೨೦೦೯, *ಇತಿಹಾಸ ಮತ್ತು ಪುರಾತತ್ವ*, ಮೈಸೂರ ವಿಶ್ವವಿದ್ಯಾಲಯ, ಮೈಸೂರ, ಪು-೮೬-೮೭

53. Sherwani, H.K. and Joshi,1974, *History of Medieval Deccan*, Government of Andhra Pradesh, pp-418-19

54. ಕನ್ನಡ ವಿಶ್ವಕೋಶ, ೨೦೦೯, *ಇತಿಹಾಸ ಮತ್ತು ಪುರಾತತ್ವ*, ಮೈಸೂರ ವಿಶ್ವವಿದ್ಯಾಲಯ, ಮೈಸೂರ, ಪು-೮೭

55. ಭಾರತೀಯ ಪುರಾತತ್ವ ಸರ್ವೇಕ್ಷಣ,ಬಿಜಾಪುರ, *ಆದಿಲ್‌ಶಾಹಿ ಕಾಲದ ಅಲಂಕಾರಿಕ ಲಿಪಿಶೈಲಿಗಳು*, ಪು-೭

56. Sherwani, H.K. and Joshi,1974, *History of Medieval Deccan*, Government of Andhra Pradesh, pp-418

57. Ibid, p-419

58. Imaratwale, A.A. 2007, *History of Bijapur Subah*, Islamic Wonders Bureau, New Delhi, p-48

59. Devare, T.N., 1961, *A Short History of Persian literature*, Published by, S. Devare, Poona p-48

60. Ibid, pp-198, 241

61. Imaratwale, A.A. 2007, *History of Bijapur Subah*, Islamic Wonders Bureau, New Delhi, p-49

62. Naqvi, Sadiq, 2003, *The Iranian Afaquies contribution to the Qutub Shahi and AdilShahi Kingdom*, University Garnt Commission, New Delhi, P-251

63. Zore, Mohiuddin Qadri (Ed), 1929, *Urdu Shahe Pare,* Vol-I p-29

64. Asiya Begum, 1983, *Society and Culture under the Bijapur Sultans.*(unpublished Ph.d Thiesis) P-194

65. Ibid, p-195

66. Naqvi, Sadiq, 2003, *The Iranian Afaquies contribution to the Qutub Shahi and AdilShahi Kingdom.* University Grand Commission, New Delhi, P-251

67. Imaratwale, A.A. 2007, *History of Bijapur Subah*, Islamic Wonders Bureau, p-50

68. Ibid, p-50

69. Asiya Begum, 1983, *Society and Culture under the Bijapur Sultans.*(unpublished Ph.d Thiesis) P-197

70. Sherwani, H.K. and Joshi,1974, *History of Medieval Deccan,* Government of Andhra Pradesh, p-21

71. Asiya Begum, 1983, *Society and Culture under the Bijapur Sultans.*(unpublished Ph.d Thiesis) P-197

72. Eaton. Richard Maxwell. 1978 *Sufis of Bijapur,* Princeton University Press, New Jersey, p-142

73. Burhan-al-Din Janam: *Kalimat al-Haqaiq,* edited by M. Akbaruddin Siddiqi, 1961, pp-56-57

74. Hafiz Saiyid, 1939, *Kulliyat-i-Bahri*, Nawal Kishore, pp-50-51

75. Asiya Begum, 1983, *Society and Culture under the Bijapur Sultans.*(unpublished Ph.d Thiesis) P-198

76. Sakhawat Mirza, 1963, *Shaikh Mahmud Chishti al-Mulaqqab ba Kush Dahan Bijapur,* p-71

77. Husaini Shaheed, 1973, *Saiyid Shah Amin-al-Din Ali Ala, Life and works.* pp-223 24

78. Gorekar, N.S. 1961, *Glimpses of Urdu Literature*, p-5

79. Zore, Muhiuddin Khadri, 1960, *Dakhni Adab ki Tarikh*, (1350-1750), pp-32-59

80. Hashmi, Nasiruddin, *Dakan men Urdu,* pp-267-68

81. Sakhawat Mirza, 1960, *Diwan-i-Syed Shah Husaini Pir Bijapuri*, pp-41-42

82. *Marifat-al-Suluk* (Persian MS), Salar Jung Museum, Tasawwuf No. 185, p-27

83. *Wasiyat al-Hadi* (Dakhni MS) Salar Jung Museum Urdu MS, Tasawwuf and Aakhlaq No.54, fol. 7a-b

84. Burhan-al-Din Janam, *Basharat-al-Zikr* (Dakhni MS), Salar Jung Museum Urdu MS, Tasawwuf and Aakhlaq, No.9, fol. 8a

85. *Basharat-al-Zikr* (Dakhni MS), Salar Jung Museum Urdu MS, fols. 8a-9b

86. *Wasiyat al-Hadi* (Dakhni MS) Salar Jung Museum Urdu MS, fol. 10a

87. *Basharat-al-Zikr* (Dakhni MS), Salar Jung Museum Urdu MS, fol. 10a

88. Burhan-al-Din Janam: *Kalimat al-Haqaiq*, edited by M. Akbaruddin Siddiqi, 1961, p-57

89. Ibid p-57

90. Eaton. Richard Maxwell. 1978, *Sufis of Bijapur,* p-151

91. Asiya Begum, 1983, *Society and Culture under the Bijapur Sultans.*(unpublished Ph.d Thiesis) P-204

92. Eaton. Richard Maxwell. 1978, *Sufis of Bijapur,* Princeton University Press, New Jersey p-245

93. Asiya Begum, 1983, *Society and Culture under the Bijapur Sultans.*(unpublished Ph.d Thiesis) P-205
94. Ibid, p-205
95. Ibid, p-206
96. Saiyida, Jafar, 1908, *Introduction to Abul Hasan Qadri, Suk Anjan* (urdu) p-60
97. Siddiqi, Akbaruddin, 1975, *Bujhte Chiragh, Dakhni Adab Par Mazamin ka Majmua*, pp-56-58
98. Hadi, Hashim Khudawand, *Chakki-nama, Irfan* (Dakhni MS) No 93b, fols.126b-127b
99. Khawaja Banda Nawaz Gesudaraz, *Chakki-nama* (Dakhni MS) No. 120b
100. Saiyida, Jafar, 1908, *Introduction to Abul Hasan Qadri, Suk Anjan* (urdu) p-60
101. *Habib Allah Abd-al-Fattah, Malfuzat-i-Shah Sibghat Allah* (Persian MS) Tasawwuf No.1420, fol. 30a
102. M.G. Zubaid Ahmad, 1968, *The Contribution of Indo-Pakistan to Arabic Literature*, p-273
103. Annemarte, Schimmel, 1973, Islamic Literature of India,p-125
104. Zuberi, Ibrahim, *Rauzat-al-Auliy*A, p-121
105. Ibid, pp- 148, 157,161, 170 and 121-122
106. Devare, T.N., 1961, *A Short History of Persian literature*, Published by, S. Devare, Poona pp-338-39
107. K.S.K. Swamy, Jan 1934, *The Royal Library at Bijapur,* Islamic, Culture Vol.VIII, pp-116-119
108. Tarik-i-Ferishta,(Eng. Tr. Brigss),1996-*History of the Rise of the Mohomedan Power in India*, Vol.III, Mushiram Manoharlal Publsher Pvt Ltd, Delhi, P-18
109. Devare, T.N., 1961, *A Short History of Persian literature*, Published by, S. Devare, Poona p-70

110. Tarik-i-Ferishta,(Eng. Tr. Brigss),1996-*History of the Rise of the Mohomedan Power in India*, Vol.III, Mushiram Manoharlal Publsher Pvt Ltd, Delhi, P-44

111. Ibid, p-44

112. Devare, T.N., 1961, *A Short History of Persian literature*, Published by, S. Devare, Poona p-72

113. Tarik-i-Ferishta,(Eng. Tr. Brigss),1996-*History of the Rise of the Mohomedan Power in India,* Vol.III, Mushiram Manoharlal Publsher Pvt Ltd, Delhi, P-39

114. Tarik-i-Ferishta,(Eng. Tr. Brigss),1996-*History of the Rise of the Mohomedan Power in India*, Vol.II, Mushiram Manoharlal Publsher Pvt Ltd, Delhi, P-80

115. Zuberi, Ibrahim, *Basatin-us-Salatin*, p-189

116. Abdul Ghani, 1930, *History of Persian Language and Literature at Akbars Court*, part-3 p-337

117. Ibid, p-343

118. Ibid, p-435-36

119. ಕುಲಕರ್ಣಿ, ಕೆ. ಕೆ. ೧೯೯೮, *ಆದಿಲ್‌ಶಾಹಿ ಆಸ್ಥಾನದ ಸಾಹಿತ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೩೦

120. ಅದೇ, ಪು-೩೦-೩೧

121. Rafat, Mubarizud-din, 1965, *Kulliyat-i-Shahi*, pp-10-15

122. Zuberi, Ibrahim, *Basatin-us-Salatin*, p-430

123. Tarik-i-Ferishta,(Eng. Tr. Brigss),1996-*History of the Rise of the Mohomedan Power in India*, Vol.III, Mushiram Manoharlal Publsher Pvt Ltd, Delhi, P-39

124. Sherwani, 1965, *Dakhni Culture* (urdu) p-39

125. Ibid, p-39

126. Asiya Begum, 1983, *Society and Culture under the Bijapur Sultans.*(unpublished Ph.d Thiesis) P-224

127. Ibid, p-224

128. Devare, T.N., 1961, *A Short History of Persian literature*, Published by, S. Devare, Poona, pp-164-65

129. Tarik-i-Ferishta,(Eng. Tr. Brigss),1996-*History of the Rise of the Mohomedan Power in India*, Vol.III, Mushiram Manoharlal Publsher Pvt Ltd, Delhi, pp-115,164

130. Asiya Begum, 1983, *Society and Culture under the Bijapur Sultans*.(unpublished Ph.d Thiesis) P-226

131. Ibid, p-226

132. Abdun-Nabi, *May-Khana* (Persian MS) p-260

133. Fuzuni Astrabadi, *Futuhat-i-Adil Shahi* (MS), p-365

134. Abdul Ghani, 1930, *History of Persian Language and Literature at Akbars Court*, part-3 p-197

135. Fuzuni Astarabadi, *Futuhat-i-Adil Shahi*, p-375

136. Abdun-Nabi, *May-Khana* (Persian MS) pp-260-61

137. Abdul Baqi, *Maasir-e-Rahimi*, Vol. III, p-734

138. Abdun-Nabi, *May-Khana* (Persian MS) p-252

139. Abdul Baqi, *Maasir-e-Rahimi*, Vol. III, p-795

140. Zuberi, Ibrahim, *Basatin-us-Salatin*, p-275

141. Zahur Muhammad, *Muhammad Nama* (Persian MS), f-225a

142. Zubairi Ibrahim, *Basatin-us-Salatin*, pp-334-35

143. Ibid, p-335

144. Zahur Muhammad, *Muhammad Nama* (Persian MS), f-227

145. Devare, T.N., 1961, *A Short History of Persian literature*, Published by, S. Devare, Poona p-242

146. Ibid, p-244

147. Ibid, p-245

148. Zubairi Ibrahim, *Basatin-us-Salatin*, p-434

149. Asiya Begum, 1983, *Society and Culture under the Bijapur Sultans*.(unpublished Ph.d Thiesis) P-236

150. Sherwani, H.K. and Joshi,P.M, 1974, *History of Medieval Deccan*, Government of Andhra Pradesh, p-103

151. Devare, T.N., 1961, *A Short History of Persian literature*, Published by, S. Devare, Poona, p-298

152. Verma,D.C. 1989, *Social, Economic and Cultural History of Bijapur*, Idaraha-i-Adbiyat-i-Delli, Delhi, p-134

153. Ibid, p-134

154. Ibid, p-135

155. Sherwani, H.K. and Joshi,P.M, 1974, *History of Medieval Deccan*, Government of Andhra Pradesh, p-103

156. Nayeem, M.A. 1974, *External Relations of Bijapur Kingdom*, Bright Pulisher, Hyderabad, p-3

157. Verma,D.C. 1989,*Social, Economic and Cultural History of Bijapur*, Idaraha-i-Adbiyat-i-Delli, Delhi, p-135

158. Sherwani, H.K. and Joshi,P.M, 1974, *History of Medieval Deccan*, Government of Andhra Pradesh, p-104

159. Verma,D.C. 1989,*Social, Economic and Cultural History of Bijapur*, Idaraha-i-Adbiyat-i-Delli, Delhi, p-135

160. Nayeem, M.A. 1974, *External Relations of Bijapur Kingdom*, Bright Pulisher, Hyderabad, p-4

161. Ibid, p-04

162. ಕುಲಕರ್ಣಿ, ಕೆ. ಕೆ. ೧೯೯೮, *ಆದಿಲಶಾಹಿ ಆಸ್ಥಾನದ ಸಾಹಿತ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೧೫

163. ಕುಲಕರ್ಣಿ, ಕೆ. ಕೆ. ೨೦೦೨, *ಬಿಜಾಪುರದ ಆದಿಲ್‌ಶಾಹಿ*, ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ಬಿಜಾಪುರ, ಪು-೨೫೩

164. ಕುಲಕರ್ಣಿ, ಕೆ. ಕೆ. ೧೯೯೮, *ಆದಿಲಶಾಹಿ ಆಸ್ಥಾನದ ಸಾಹಿತ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೩೫

165. Verma,D.C. 1989,*Social, Economic and Cultural History of Bijapur,* Idaraha-i-Adbiyat-i-Delli, Delhi, p-138

166. Devare, T.N., 1961, *A Short History of Persian literature*, Published by, S. Devare, Poona, p-320

167. Ibid, p-320

168. Verma,D.C. 1989,*Social, Economic and Cultural History of Bijapur,* Idaraha-i-Adbiyat-i-Delli, Delhi, p-138

169. Nayeem, M.A. 1974, *External Relations of Bijapur Kingdom*, Bright Pulisher, Hyderabad, p-4

170. Devare, T.N., 1961, *A Short History of Persian literature*, Published by, S. Devare, Poona, p-325

171. ಕುಲಕರ್ಣಿ, ಕೆ. ಕೆ. ೧೯೯೮, *ಆದಿಲ್‌ಶಾಹಿ ಆಸ್ಥಾನದ ಸಾಹಿತ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೧೭

172. Verma,D.C. 1989,*Social, Economic and Cultural History of Bijapur,* Idaraha-i-Adbiyat-i-Delli, Delhi, p-139

173. Devare, T.N., 1961, *A Short History of Persian literature*, Published by, S. Devare, Poona, p-325

174. ಕುಲಕರ್ಣಿ, ಕೆ. ಕೆ. ೧೯೯೯, *ಬುಸಾತಿನ್ ಸಲಾತೀನ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೯೬

175. Sherwani, H.K. and Joshi,P.M, 1974, *History of Medieval Deccan*, Government of Andhra Pradesh,p-104

176. Devare, T.N., 1961, *A Short History of Persian literature*, Published by, S. Devare, Poona, p-332

177. ಕುಲಕರ್ಣಿ, ಕೆ. ಕೆ. ೧೯೯೮, *ಆದಿಲ್‌ಶಾಹಿ ಆಸ್ಥಾನದ ಸಾಹಿತ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು–೨೨

178. Verma,D.C. 1989,*Social, Economic and Cultural History of Bijapur,* Idaraha-i-Adbiyat-i-Delli, Delhi, p-140

179. Devare, T.N., 1961, *A Short History of Persian literature*, Published by, S. Devare, Poona, p-333

180. ಕುಲಕರ್ಣಿ, ಕೆ. ಕೆ. ೧೯೯೮, *ಆದಿಲಶಾಹಿ ಆಸ್ಥಾನದ ಸಾಹಿತ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೪-೨೫

181. ಅದೇ, ಪು-೨೫

182. ಅದೇ, ಪು-೨೫

183. ಕುಲಕರ್ಣಿ, ಕೆ. ಕೆ. ೨೦೦೨, *ಬಿಜಾಪುರದ ಆದಿಲ್‌ಶಾಹಿ*, ಸಿಕ್ಯಾಬ ಆದಿಲ್‌ಶಾಹಿ ಅಧ್ಯಯನ ಸಂಸ್ಥೆ, ಬಿಜಾಪುರ, ಪು-೨೬೬

184. ರೋಹಿಡೇಕರ, ಎಸ್.ಆರ್, ೨೦೦೪, *ವಿಜಾಪುರ ಜಿಲ್ಲೆಯ ಪಂಚ ಪವಾಡ ಪುರುಷರು*, ಶ್ರೀ ರುಕ್ಮ ಪ್ರಕಾಶನ, ಬೆಂಗಳೂರು, ಪು-೦೪

185. ಕುಲಕರ್ಣಿ, ಕೆ. ಕೆ. ೧೯೯೮, *ಆದಿಲಶಾಹಿ ಆಸ್ಥಾನದ ಸಾಹಿತ್ಯ*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೪೫

186. ಅದೇ, ಪು-೪೫

ಅಧ್ಯಾಯ ೬
ಸೂಚಿಗಳು

ಅಧ್ಯಾಯ-೬

ಸೂಫಿಗಳು

ಬಹಮನಿ ರಾಜ್ಯವು ಒಡೆದ ಮೇಲೆ ಬಿಜಾಪುರವು ಸೂಫಿ ಚಳುವಳಿಯ ಮುಖ್ಯ ಕೇಂದ್ರವಾಯಿತು. ಉಲೇಮರೊಂದಿಗೆ ಅವರ ಪಾತ್ರ, ಸುಲ್ತಾನನ ಆಸ್ಥಾನ ಹಾಗೂ ಮುಸ್ಲಿಮೇತರ ಜನತೆ ಈ ಮೂರೂ ಅಂಶಗಳನ್ನು ಎದುರಿಸಬೇಕಾಗಿದ್ದರಿಂದ ಅವರ ಪಾತ್ರ ಜಟಿಲವಾಯಿತು.[೧] ಬಿಜಾಪುರದ ಅನೇಕ ಸೂಫಿಗಳು ಕೆಲವರು ಲೇಖಣಿ ಹಿಡಿದರು, ಕೆಲವರು ಆಚಾರವಂತರಾಗಿದ್ದರು, ಇತರರು ನಾಸ್ತಿಕರೆನಿಸುವಷ್ಟು ಮಟ್ಟಿಗೆ ಅನಾಚಾರಯುತರಾಗಿದ್ದರು. ಇತರರು ಸುಧಾರಕ ಸೂಫಿಗಳು ಸುಮಾಜದಲ್ಲಿರುವ ದುಷ್ಟ ಪದ್ಧತಿಗಳನ್ನು ತಿದ್ದಲು ಅವರು ಬಯಸಿದ್ದರು, ಇನ್ನೂ ಕೆಲವರು ವಿದ್ವಾಂಸರಾಗಿದ್ದು ಅಪಾರವಾಗಿ ಆನುಭಾವಿಕ ಜನಪ್ರಿಯ ಸಾಹಿತ್ಯವನ್ನು ಸೃಷ್ಟಿಸಿದರು. ಇನ್ನೂ ಕೆಲವು ಸೂಫಿಗಳು ಸಾಮಾನ್ಯ ವ್ಯಕ್ತಿಗಳಾಗಿ, ಸರಕಾರದ ಸಹಾಯವನ್ನು ಒಪ್ಪಿಕೊಂಡು ಸೂಫಿ ಇನಾಮದಾರರೆನಿಸಿದರು.[೨] ಬಿಜಾಪುರ ಸೂಫಿಗಳ ಬಗ್ಗೆ ತಿಳಿಯುವ ಮೊದಲು, ಸೂಫಿಗಳ ಉಗಮ ಭಾರತಕ್ಕೆ ಸೂಫಿಗಳ ಆಗಮನ ಮುಂತಾದವುಗಳನ್ನು ಸಂಕ್ಷಿಪ್ತವಾಗಿ ಹೇಳಿ ಅನಂತರ ಆದಿಲ್‌ಶಾಗಳ ಕಾಲದ ಸೂಫಿಗಳ ಕುರಿತು ವಿವೇಚಿಸಲಾಗಿದೆ.

ಸೂಫಿ ಶಬ್ದದ ಉತ್ಪತ್ತಿ :

ಸೂಫಿ ಶಬ್ದದ ಉತ್ಪತ್ತಿಯ ಬಗೆಗೆ ವಿದ್ವಾಂಸರಲ್ಲಿ ತುಂಬ ಭಿನ್ನಾಬಿಪ್ರಾಯವಿದೆ. ಈ 'ಸೂಷಿ' ಶಬ್ದ ಹಜರತ ಮಹಮ್ಮದ ಪೈಗಂಬರರು ತೀರಿಕೊಂಡ ಎರಡನೂರು ವರ್ಷದ ತರುವಾಯ ಅಸ್ತಿತ್ವಕ್ಕೆ ಬಂದಂತೆ ಕಾಣುತ್ತದೆ. ಏಕೆಂದರೆ ಸೂಫಿ ಮತದ ಪರ್ಯಾಯವಾಚೀ ಅರಬ್ಬೀ ಶಬ್ದ 'ತಸವ್ವುಫ್' ೯೭೨ ರಚಿತವಾದ ಸಿಯ್ತದ್‌ನಲ್ಲಿಲ್ಲ. 'ಸೂಫಿ' ಶಬ್ದದ ಮೊದಲ ಪ್ರಯೋಗ ಅರಬ್ಬೀ ಲೇಖಕ ಜಾಯಿದ್ (೮೬೯)ನಲ್ಲಿ ಕಂಡುಬರುತ್ತದೆ.[೩] ಕೆಲವರು ಅರೇಬಿಯಾದ 'ಸಫ್' ಜನಾಂಗಕ್ಕು "ಸೂಫಿ" ಶಬ್ದಕ್ಕೂ ನಂಟನ್ನು ಗಂಟನ್ನು ಹಾಕುತ್ತಾರೆ. ಮತ್ತೆ ಕೆಲವರ ಪ್ರಕಾರ ಮದೀನಾದಲ್ಲಿ ಮಸೀದಿಯೆದುರಿಗೆ ಒಂದು ಜಗುಲಿ "ಸುಫ್ಫಾ" ಇತ್ತು. ಅದರ ಮೇಲೆ ಕುಳಿತುಕೊಳ್ಳುತ್ತಿದ್ದ ಫಕೀರರೇ ಸೂಫಿಗಳು. ಇನ್ನೊಂದು ಮತದ ಪ್ರಕಾರ ಸೂಫಾ ಎಂದರೆ **"ಪಂಕ್ತಿ"**, **"ಸಾಲು"** ಎಂದರ್ಥ. ಅದರಂತೆ ನಿರ್ಣಯದ ದಿನ ತಮ್ಮ ಸದಾಚಾರ ಹಾಗೂ ಸದ್‌ವ್ಯವಹಾರದಿಂದಾಗಿ ಇತರರಿಂದ ಭಿನ್ನವಾದ ಒಂದು ಪಂಕ್ತಿಯಲ್ಲಿ ಅಥವಾ ಅಗ್ರ ಪಂಕ್ತಿಯಲ್ಲಿ ನಿಲ್ಲತಕ್ಕವರೇ ಸೂಫಿಗಳು.[೪]

ರಹಮತ್ ತರೀಕೆರೆಯವರು ತಮ್ಮ ಗ್ರಂಥವಾದ 'ಕರ್ನಾಟಕದ ಸೂಫಿಗಳು' ಎಂಬುವದರಲ್ಲಿ 'ಸೂಷಿ' ಎಂಬ ಶಬ್ದದ ಬಗ್ಗೆ ಈ ರೀತಿಯಾಗಿ ಉಲ್ಲೇಖಿಸಿದ್ದಾರೆ. ಗ್ರಿಕಿನ 'ಸೋಫಿಯಾ' (ಜ್ಞಾನ)ದಿಂದ ಹಿಡಿದು ಅರಬ್ಬಿಯ ಸುಫ್ಫಾ, ಸೂಫ್ (ಉಣ್ಣೆ) ಮುಂತಾದ ಶಬ್ದಗಳವರೆಗೆ ಜಾಲಾಡಿ, 'ಸೂಷಿ' ಶಬ್ದಕ್ಕೆ ನಿರ್ವಚನ

[illegible]

[illegible]

[illegible]

[illegible]

[illegible]

ಮಾಡಿದ್ದಾರೆ. ಉಣ್ಣೆಯ ನಿಲುವಂಗಿಯನ್ನು ಧರಿಸುವವರು ಎಂದು ಅರ್ಥೈಸಲಾಗಿದೆ. ಈ ವಿವರಣೆಗಳಿಂದ ಆದಿಮ ಸೂಫಿಸಂತರ ಕೆಲವು ಲಕ್ಷಣಗಳಿವೆ. ಈ ಲಕ್ಷಣಗಳಲ್ಲಿ ಕೆಲವನ್ನು ನಂತರದಲ್ಲೂ ಕಾಣಬಹುದು. ಉದಾ: ಸೂಫಿಗಳು ಉಣ್ಣೆಯ ಕಂಬಳಿಯಿಂದ ಮಾಡಿದ ಬಿಳಿ ಗುದಡಿಯನ್ನು ಧರಿಸುತ್ತಿದ್ದರು. ಶವದ ಉಡುಪಿನಂತಿರುತ್ತಿದ್ದ ಗುದಡಿಯು ಫಕೀರತನದ ಪರಮ ಸಂಕೇತವಾಗಿತ್ತು. ಭಾರತಕ್ಕೆ ಬಂದ ಮೊದಲ ಸೂಫಿಗಳಲ್ಲಿ ಒಬ್ಬನಾದ ಹುಜವೇರಿ ಹೇಳುವಂತೆ, ಸೂಫಿಗಳು ಹೊಂದಿರಬೇಕಾದ ವಸ್ತುಗಳೆಂದರೆ ಗುದಡಿ ದಂಡ ಗಿಂಡಿ ಹಾಗೂ ಚಾಪೆ. ತನ್ನ ಉತ್ತರಾಧಿಕಾರಿ ಶಿಷ್ಯನಿಗೆ ಅರ್ಥಾತ್ ಖಲೀಫನಿಗೆ, ಗುರು ಕೊಡುತ್ತಿದ್ದ ವಸ್ತುಗಳಾದರೂ ಇಷ್ಟೆ.[೫]

ಸೂಫಿಗಳೆಂದರೆ ಯಾರು ? :

ದೇವರು ಸ್ನೇಹಿತ, ಪ್ರಿಯಕರ ಎಂದು ಹೇಳುವ ಸೂಫಿಗಳನ್ನು ಲೌಕಿಕ ಜಗತ್ತು ದೇವರು, ಪಾರಮಾರ್ಥಿಕ ಜಗತ್ತಿನ ನಡುವಿನ ಕೊಂಡಿಯಲ್ಲಿ ಆಧ್ಯಾತ್ಮಿಕ ನೆಲೆಯ ಪ್ರೇಮವು ಬಂಧಿಸಿ ಸಂಬಂಧ ಏರ್ಪಡುವಂತೆ ಮಾಡುತ್ತದೆ. ಅವನ ಕಣ್ಣುತುಂಬ ದಿನವೂ, ಕ್ಷಣಕ್ಷಣವೂ ದೇವರೇ ತುಂಬಿರುತ್ತಾನೆ. ಯಾವ ಮೂಲದಲ್ಲಿ ಏನೇ ದೊರೆಯಲಿ ಅದು ದೇವರಿಂದಲೇ ದೊರೆತದ್ದೆನ್ನುವ ಅಚಲವಾದ ನಂಬಿಕೆಯಿರುತ್ತದೆ. ಸೂಫಿಗಳ ಆಧ್ಯಾತ್ಮದ ಕೊನೆಯ ಗುರಿ ದೇವರೊಂದಿಗೆ ಮಿನಲ. ಇದಕ್ಕಾಗಿ ಆತ ದೇಹವನ್ನು ದಂಡಿಸಿಕೊಳ್ಳುತ್ತಾನೆ. ಉಪವಾಸದ ಮೂಲಕ ಹಸಿವನ್ನು ನಿಗ್ರಹಿಸಿಕೊಳ್ಳುತ್ತಾನೆ. ಆದರೆ ಹಸಿವಿನಲ್ಲಿದ್ದಾತನಿಗೆ ಉಣಬಡಿಸುತ್ತಾನೆ. ರಾಜಾಶ್ರಯವನ್ನು ಧಿಕ್ಕರಿಸುತ್ತಾನೆ. ಜನರು ತನಗೆ ನೀಡಿದ್ದನ್ನೆಲ್ಲವನ್ನೂ ಸ್ವೀಕರಿಸುವುದಿಲ್ಲ. ತಾನು ಸ್ವೀಕರಿಸುತ್ತಿರುವ ದಾನ ಪ್ರಾಮಾಣಿಕ ಮೂಲದಿಂದ ಬಂದಿದೆಯೇ ಎಂದು ವಿಚಾರಿಸಿ, ತೃಪ್ತಿಯಾದ ನಂತರವೇ ಸ್ವೀಕರಿಸುತ್ತಾನೆ. ತನಗೆ ಈ ದಾನದ ಹಣ ಬೇಕಾಗಿರಲಿ ಬೇಡವಾಗಿರಲಿ, ಯಾರಾದರೂ ಅಗತ್ಯವಿದ್ದವರು ಯಾಚಿಸಿದಲ್ಲಿ, ಬಲಗೈಯಲ್ಲಿ ಪಡೆದದ್ದನ್ನು ಬಲಗೈಯಲ್ಲೇ ಯಾಚಕರಿಗೆ ನೀಡಿ ಸಂತಸ ಪಡುತ್ತಾನೆ. ಹೀಗೆ ಲೋಭ, ಮೋಹ, ಮದ, ಮತ್ಸರವನ್ನು ತ್ಯಾಗ ಮಾಡಿ ದೇವಸನ್ನಿಧಿಯನ್ನು ಸೇರಲು ಬಯಸುತ್ತಾನೆ. ಸೂಫಿ ತನ್ನ ಆರಾಧನೆಯಿಂದ ಮತ್ತು ತನ್ನ ಗುಣ ನಡವಳಿಕೆಗಳಿಂದ ತನ್ನ ಭೌತಿಕ ದೇಹವನ್ನು ತೊರೆದು ಆಧ್ಯಾತ್ಮಿಕ ದೇಹವನ್ನು ಪ್ರವೇಶಿಸುತ್ತಾನೆ.[೬]

ಸೂಫಿ ಸಂತ ಪದದ ಅರ್ಥವ್ಯಾಪ್ತಿಯನ್ನು ಕಂಡುಕೊಳ್ಳುವುದು ಸುಲಭ ಸಾಧ್ಯವೇನಲ್ಲ ಈ ಪದಕ್ಕೆ ಹಲವಾರು ಆಯಾಮಗಳಿವೆ. ಮೌಲಾನಾ ಜಲಾಲುದ್ದೀನ್ ರೂಮಿ ಹೇಳುವಂತೆ.

"ಸೂಫಿ ಎಂದರೆ–ದ್ರಾಕ್ಷರಸವನ್ನು ಕುಡಿಯದೆ ಅಮಲಿನಲ್ಲಿರುವವನಾಗಿ,

ಊಟ ಮಾಡದೆ ತೃಪ್ತನಾಗಿ, ತಳಮಳಗೊಂಡವನಾಗಿ, ಉಪವಾಸವಿದ್ದು, ನಿದ್ದೆ

ಯಿಲ್ಲದೆ, ವಿನಯದ ವಸ್ತ್ರವನ್ನು ಹೊದ್ದ ಒಬ್ಬ ರಾಜ; ಅವಶೇಷಗಳಡಿಯಲ್ಲಿರುವ

ಖಜಾನೆ, ಗಾಳಿಯಲ್ಲಿಲ್ಲ, ಭೂಮಿಯಲ್ಲಿಲ್ಲಿ, ಬೆಂಕಿಯವನೂ ಅಲ್ಲ, ನೀರಿನವನೂ ಅಲ್ಲ, ಅವನು ದಡವಿಲ್ಲದ ಸಮುದ್ರ, ಅವನಿಗೆ ನೂರು ಚಂದ್ರರು, ನೂರು ಆಕಾಶಗಳು, ನೂರು ಸೂರ್ಯರಿದ್ದಾರೆ. ಸಾರ್ವತ್ರಿಕ ಸತ್ಯದ ಮೂಲಕ ಜ್ಞಾನಿ ಯಾದವನು-ಒಂದು ಪುಸ್ತಕದಿಂದಾದ ವಿದ್ವಾಂಸನಲ್ಲ"[೭]

ಮ.ಸೂ. ಕೃಷ್ಣಮೂರ್ತಿಯವರು ತಮ್ಮ ಗ್ರಂಥವಾದ 'ಸೂಫಿ ಪ್ರೇಮಕಾವ್ಯ'ದಲ್ಲಿ ಈ ಕೆಳಗಿನಂತೆ ವಿವರಿಸಿದ್ದಾರೆ.

"ಸೂಫಿ ಮತ ನಿಯಮಗಳು ಹಾಗೂ ಶಾಸ್ತ್ರಗಳಿಂದ ರಚಿತವಾದ ಯಾವುದೇ ಒಂದು ಪದ್ಧತಿಯಲ್ಲ, ಅದೊಂದು ನೈತಿಕ ಸ್ಥಿತಿ, ಎಂದರೆ ಅದೊಂದು ನಿಯಮವಾಗಿದ್ದರೆ ಅದನ್ನು ಕಲಿತು ಸ್ವೀಕರಿಸಬಹುದಾಗಿತ್ತು. ಅದಕ್ಕೆ ವಿರುದ್ಧವಾಗಿ ಅದು ಒಂದು ಅವಸ್ಥೆ (ಸ್ವಭಾವ) ತನ್ನನ್ನು ಪರಮಾತ್ಮನ ನೈತಿಕ ಪ್ರಕೃತಿಗೆ ಅನುಗುಣವಾಗಿ ಅಳವಡಿಸಿಕೊಳ್ಳುವುದೇ ಈ ಅವಸ್ಥೆ, ಪರಮಾತ್ಮನ ನೈತಿಕ ಪ್ರಕೃತಿಯನ್ನು ನಿಯಮಗಳಿಂದ ಇಲ್ಲವೆ ಶಾಸ್ತ್ರಗಳಿಂದ ಅರ್ಥಮಾಡಿಕೊಳ್ಳಲಾಗುವುದಿಲ್ಲ.

"ಸ್ವಾತಂತ್ರ್ಯ ಔದಾರ್ಯ, ಹಾಗೂ ಆತ್ಮನಿಗ್ರಹವೇ ಸೂಫಿ ಮತ." "ನಿನ್ನಲ್ಲಿರುವ ನಿನ್ನ ಅಹಂಕಾರವನ್ನು ನಿನ್ನಿಂದಲೇ ಕೊಲ್ಲಿಸಿ ನಿನ್ನನ್ನು ಪರಮಾತ್ಮನಲ್ಲಿ ವಾಸಮಾಡುವಂತೆ ಮಾಡುವುದೇ ಸೂಫಿ ಮತ."[೮]

ತಸವ್ವುಫ್ :

ತಸವ್ವುಫ್ ಎಂದರೆ 'ಈಮಾನ' ಅಥವಾ ದೃಡವಿಶ್ವಾಸ. ತಸವ್ವುಫ್ ಅಥವಾ ಸೂಫಿ ಪಂಥದ ಒಂಬತ್ತು ತತ್ವಗಳು ಹೀಗಿವೆ:

೧. ದೇವರು ಒಬ್ಬನೇ ಮತ್ತು ಖಂಡಿತವಾಗಿಯೂ ಇದ್ದಾನೆ. ಅವನು ಎಲ್ಲದರಲ್ಲೂ ಇದ್ದಾನೆ ಮತ್ತು ಎಲ್ಲವೂ ಅವನಲ್ಲಿದೆ.
೨. ಎಲ್ಲ ಪ್ರತ್ಯಕ್ಷ ಮತ್ತು ಪರೋಕ್ಷವಾದವುಗಳೆಲ್ಲವೂ ಅವನಿಂದಲೇ ಮತ್ತು ಅವನಿಗೆ ಯಾವುದು ಹೊರತಲ್ಲ.
೩. ಧರ್ಮಗಳು ವಿಸ್ತಾರವಾದ ಸಂಗತಿಗಳಾದರೂ, ಮನುಷ್ಯನ ಬದುಕಿನ ಮುಖ್ಯ ಸತ್ಯಗಳಾಗಿವೆ. ಸೂಫಿ ಪಂಥ ಇಸ್ಲಾಮ್ ಧರ್ಮದ ಸಹಜ ಜೀವನ ದೃಷ್ಟಿಯಾಗಿದೆ.
೪. ಒಳಿತು ಕೆಡುಕುಗಳ ಮಧ್ಯೆ ಅಂತಹ ವ್ಯತ್ಯಾಸವೇನೂ ಇಲ್ಲ ಯಾಕೆಂದರೆ, ದೇವರು ಇವೆರಡರ ಕರ್ತೃ ಆಗಿರುವುದರಿಂದ ಎರಡೂ ಕೂಡ ಐಕ್ಯವಾಗಿರುತ್ತದೆ

೫. ಮನುಷ್ಯನ ಸಂಕಲ್ಪವನ್ನು ಜೋಡಿಸುವವನು ದೇವರು, ಆದುದರಿಂದ ಮನುಷ್ಯನು ತನ್ನ ಕಾರ್ಯಗಳನ್ನು ಮಾಡಲು ಸ್ವತಂತ್ರನಲ್ಲ.

೬. ದೇಹಕ್ಕಿಂತ ಮೊದಲು ಆತ್ಮವು ಹುಟ್ಟಿರುತ್ತದೆ ಮತ್ತು ಆತ್ಮವು ಒಂದು ಗೂಡಿನಲ್ಲಿ ಬಂದಿಯಾಗಿರುತ್ತದೆ. ಮರಣಾನಂತರ ಆತ್ಮಕ್ಕೆ ಸ್ವಾತಂತ್ರ್ಯ ಸಿಗುತ್ತದೆ. ಆದುದರಿಂದ ಸೂಫಿಗೆ ಮರಣವೆಂದರೆ ದೇವರೊಂದಿಗೆ ಮಿಲನದ ಒಂದು ಪ್ರಕ್ರಿಯೆಯಾಗಿದೆ.

೭. ಹೀಗೆ ಬಂಧನದಿಂದ ಹೊರಗಾಗದೆ ತಮ್ಮ ಗುರಿಯನ್ನು ತುಲಪಲಾಗದೆ ಕಲುಷಿತಗೊಂಡ ಆತ್ಮವು ಬಿಡುಗಡೆ ಹೊಂದಿದ ಕೂಡಲೇ ಶುದ್ಧೀಕರಣವಾಗುತ್ತದೆ ಮತ್ತು ದೇವರೊಂದಿಗೆ ಮರುಮಿಲನಕ್ಕೆ ಅರ್ಹವಾಗುತ್ತದೆ..

೮. ದೇವರ ದಯೆ ಇಲ್ಲದೆ ಯಾರೂ ಈ ಆಧ್ಯಾತ್ಮದ ಮಿಲನವನ್ನು ಸಾಧಿಸುವುದು ಸಾಧ್ಯವಾಗದು. ಆದರೂ ಇದನ್ನು ತಮ್ಮ ನಿರಂತರ ಸಾಧನೆಯಿಂದ, ದೇವರನ್ನು ಸಂಪ್ರೀತಿಗೊಳಿಸುವ ಮೂಲಕ ಸಾಧಿಸಬಹುದೆಂದು ಸೂಫಿಗಳು ಅಭಿಪ್ರಾಯ ಪಡುತ್ತಾರೆ.

೯. ಸೂಫಿಯ ಪ್ರಾಮುಖ್ಯವಾದ ಕೆಲಸವೆಂದರೆ ಬದುಕಿರುವಾಗ, ಕಠಿಣ ಮತ್ತು ಶಿಸ್ತುಬದ್ಧವಾದ ದೇವರ ಆರಾಧನೆಯನ್ನು ಕೈಗೊಂಡು 'ವಹ್‌ದಾನಿಯಾ' ಅಥವಾ ದೇವರ ಜೊತೆಗೆ ಐಕ್ಯವಾಗುವುದು. ದೇವರ ನಾಮದ ಜಪದ ಜೊತೆಗೆ ಬದುಕಿನ ಪಯಣದ ಸರಿಯಾದ ಮಾರ್ಗದಲ್ಲಿ ಸಾಗುತ್ತಾ ದೇವರಲ್ಲಿ ಲೀನವಾಗುವುದು.[೯]

ರಹಮತ ತರೀಕೆರೆ ಅವರು ತಮ್ಮ ಗ್ರಂಥವಾದ ಕರ್ನಾಟಕದ ಸೂಫಿಗಳು ಇದರಲ್ಲಿ ತಸವ್ವುಫ್ ಬಗ್ಗೆ ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ, ತಸವುಫ್ ಅಂದರೆ ಸೂಫಿ ಅನುಭಾವದ-ಲಕ್ಷಣಗಳನ್ನು, ಅದು ಸಾಂಪ್ರದಾಯಿಕ ಇಸ್ಲಾಮಿಗಿಂತ ಬೇರೆಯಾಗಿ ಕಂಡುಕೊಂಡ ಹಾದಿಯಲ್ಲಿ ಗುರುತಿಸಬಹುದು. ಇಸ್ಲಾಂ ಮೂಲತಃ ದ್ವೈತಿ. ದೈವ ಮತ್ತು ಮನುಷ್ಯರ ಅಸ್ತಿತ್ವಗಳು ಮೂಲತಃ ಬೇರೆಯೆಂದೂ ಅವರಿಬ್ಬರೂ ಐಕ್ಯಗೊಳ್ಳುವುದು ಸಾಧ್ಯವಿಲ್ಲವೆಂದೂ ಅದು ಹೇಳುತ್ತದೆ. ದೈವೀಶಕ್ತಿಗೆ ಶರಣಾಗಬೇಕು. ಇದಕ್ಕಾಗಿ ಶ್ರದ್ಧೆಯಿಟ್ಟು ನಮಾಜ ಉಪವಾಸ ಜಕಾತ ಹಜ್‌ಯಾತ್ರೆ ಇತ್ಯಾದಿ ಮಾಡಬೇಕಯ ಎಂದು ಅದು ವಿಧಿಸುತ್ತದೆ.[೧೦]

ಸೂಫಿಗಳ ಭಾರತ ಪ್ರವೇಶ :

ಸೂಫಿಗಳನ್ನು ದರವೇಶರು, ಫಕೀರರು, ವಲಿಗಳು, ಔಲಿಯಾ ಎಂದೆಲ್ಲ ಕರೆಯುವುದಿದೆ. ಈ ಸೂಫಿ ಸಂತರು ಅಥವಾ ಔಲಿಯಾಗಳು ಅಲ್ಲಾಹನ ನಿಕಟ ಸ್ನೇಹಿತರೆಂದು ಪರಿಗಣಿಸಲಾಗಿದೆ. ಭಾರತಕ್ಕೆ ಸೂಫಿ ಪಂಥದ ಆಗಮನ ಅಜ್ಮೇರಿನ ಖ್ವಾಜಾ ಮೊಯೀನುದ್ದೀನ್ ಚಿಸ್ತಿಯವರು ಇಲ್ಲಿಗೆ ಹನ್ನೊಂದನೇ ಶತಮಾನದಲ್ಲಿ ಆಗಮಿಸಿದ ಸಂದರ್ಭದಲ್ಲಿ ಎಂದು ಹೇಳಲಾಗುತ್ತದೆ. ಆದರೆ ಇದಕ್ಕಿಂತಲೂ ಮೊದಲು ದಕ್ಷಿಣದ ಕರಾವಳಿ ಪ್ರದೇಶಗಳಲ್ಲಿ ಅರಬರ ಜೊತೆಗೆ ಸಂಪರ್ಕವಿದ್ದುದರಿಂದ ಇಲ್ಲಿಗೆ ಏಳನೇ ಶತಮಾನದ ಆದಿಯಲ್ಲಿ ಬೇಟ್ಟಿ ನೀಡಿದ ಸಂತ ಮಾಲಿಕ್ ಇಬ್ನ ದೀನಾರ್‌ರವರನ್ನು ಸೂಫಿ ಪರಂಪರೆಗೆ ಸೇರಿಸುವವಾದವೂ

ಇದೆ. ಆದರೂ ಇವರು ಮುಖ್ಯವಾಗಿ ಮಿಶನರಿಯಾಗಿ ಭಾರತಕ್ಕೆ ಬೇಟ್ಟಿ ನೀಡಿದರು.[೧೧] ಇವರ ಉದ್ದೇಶ ಇಸ್ಲಾಮ ಧರ್ಮದ ಪ್ರಚಾರವೇ ಆಗಿದ್ದರಿಂದ ಸೂಫಿ ಪಂಥದ ಜೊತೆಗೆ ಇವರನ್ನು ತಳಕುಹಾಕುವುದು ಸರಿಯಲ್ಲವೆಂಬ ವಾದವೂ ಇದೆ. ವಿವಾದಾತ್ಮಕ ಸಂತ ಅಲ್ ಹಲ್ಲಾಜ್‌ರವರು ಒಂಬತ್ತನೇ ಶತಮಾನದಲ್ಲಿ ಭಾರತಕ್ಕೆ ಮತ್ತು ಚೀನಾಕ್ಕೆ ಭೇಟಿ ಮಾಡಿದ್ದಾರೆಂಬ ಉಲ್ಲೇಖಗಳು ಕಂಡು ಬರುತ್ತಾದಾದರೂ ಸೂಫಿ ಪಂಥ ತನ್ನ ಪೂರ್ಣ ಪ್ರಮಾಣದ ಚಟುವಟಿಕೆಯನ್ನು ಭಾರತದಲ್ಲಿ ಪ್ರಾರಂಭಿಸಿದ್ದು ಅಜ್ಮೀರಿನ ಖ್ವಾಜಾ ಮೋಯಿನುದ್ದೀನ ಚಿಸ್ತಿಯವರ ಆಗಮನದ ನಂತರವೆಂದೇ ಹೇಳಬಹುದು.[೧೨]

ರಹಮತ ತರೀಕೆರೆಯವರು ಉಲ್ಲೇಖಿಸುವ ಪ್ರಕಾರ, ಭಾರತಕ್ಕೆ ಇಸ್ಲಾಮಿನ ಬರವು ಅದು ಹುಟ್ಟಿದ ಶತಮಾನದಲ್ಲೇ ಶುರುವಾಯಿತು. ಒಟ್ಟೊಮನ್ ಥಾಖಿಫಿ ಭಾರತಕ್ಕೆ ಬಂದ ಮೊದಲ ಮುಸ್ಲಿಮನು. ಬಹರೈನ್ ದೇಶದ ರಾಜ್ಯಪಾಲನಾದ ಈತ ಮಲಬಾರಿನ ಚೇರಮಾನ್ ಪೆರುಮಾಳ್ ಆಸ್ಥಾನಕ್ಕೆ ೬೩೬ರಲ್ಲಿ ಬಂದ.[೧೩] ಮೂಲತಃ ವ್ಯಾಪಾರಿ ಸಮುದಾಯವಾದ ಅರಬರು ಕಡಲ ಮೂಲಕ ಹೋದ ಕಡೆಯಲ್ಲೆಲ್ಲ, ಹೊಸಧರ್ಮವಾಗಿದ್ದ ಇಸ್ಲಾಮ್ ಕೂಡ ಹೋಯಿತು. ಅರಬ್-ಭಾರತಗಳ ಕಡಲ ವ್ಯಾಪಾರ ಸಂಬಂಧ ತುಂಬ ಹಳೆದು. ಇಸ್ಲಾಮ್ ಹುಟ್ಟುವುಕ್ಕಿಂತಲೂ ಹಳೆದು. ಅರಬ್ಬೀ ಸಮುದ್ರದ ಕಿನಾರೆಯನ್ನುಳ್ಳ ಕರಾಚಿ, ಭರೂಚ್, ಥಾಣೆ, ಮಂಗಳೂರು, ಕಲ್ಲಿಕೋಟೆ ಮತ್ತು ತಿರುವಾಂಕೂರ ಮುಂತಾದ ನಗರಗಳು, ಈ ವ್ಯಾಪಾರಿ ಸಂಪರ್ಕ ಪಡೆದಿದ್ದವು. ಕೇರಳದ ಮುಸ್ಲಿಮರು ಮಲಬಾರಿಗೆ ಬಂದ ಅರಬ್ ಮಿಶನರಿಗಳ ಮೂಲಕ ಇಸ್ಲಾಂ ಸ್ವೀಕರಿಸಿದವರು.

ಇಸ್ಲಾಂ ಹಾಗೂ ಸೂಫಿಪಂಥಗಳು ಭಾರತಕ್ಕೆ ನೆಲಮಾರ್ಗದಲ್ಲಿ ರಾಜ್ಯವಿಸ್ತರಣಾವಾದಿಗಳ ಹಾದಿಯಲ್ಲಿ ಬಂದ, ಎರಡನೇ ಮಾರ್ಗವೆಂದರೆ, ಆಫಘಾನಿಸ್ತಾನದ ಖೈಬರ್ ಕಣಿವೆ ಅಥವಾ ದಕ್ಷಿಣ ಪರ್ಶಿಯಾದಿಂದ ಮಕರಾನ್ ಬೆಟ್ಟಗಳ ಕಣಿವೆ ಮೂಲಕ. ೧೧ನೇ ಶತಮಾನದ ನಂತರದ ಕಾಲದಲ್ಲಿ; ಇದಕ್ಕೆ ಕಾರಣವೂ ಸ್ಪಷ್ಟ, ಪರ್ಶಿಯಾದಲ್ಲಿ ಸೂಫಿಸಂ ರೂಪುತಳೆದಿದ್ದೆ ೧೦ನೇ ಶತಮಾನದ ನಂತರ; ರಾಜಕೀಯ ವಿಸ್ತರಣಾವಾದಿ ಚಟುವಟಿಕೆಗಳು ಭಾರತದತ್ತ ಹರಡತೊಡಗಿದ್ದು, ಕೂಡ ಈ ಕಾಲದಿಂದಲೇ. ಕರ್ನಾಟಕ ಮಟ್ಟಿಗೂ ಇಸ್ಲಾಂ ಹಾಗೂ ಸೂಫಿಸಂ ಉತ್ತರದಿಂದ ಬಂದ ರಾಜಕೀಯ ವಿಸ್ತರಣ ಚಟುವಟಿಕೆಗಳ ಮೂಲಕ ಬಂದವು. ಅಫಘಾನಿಸ್ತಾನದ ಘಜನಾದಿಂದ ಬಂದ ಶೇಕ ಅಬುಲ್ ಹಸನ್ ಹುಜವೇರಿಯು. ಭಾರತಕ್ಕಾಗಮಿಸಿದ (೧೦೭೦) ಮೊದಲ ಸೂಫಿ ಎನ್ನಬಹುದು.[೧೪] ಇವರ ಸಮಾಧಿ ಲಾಹೋರಿನಲ್ಲಿದೆ. ನಂತರದ ಮುಖ್ಯ ಆಗಮನ ಅಜ್ಮೀರಿನ ಮೊಯಿನುದ್ದೀನ್ ಚಿಸ್ತಿಯದು (೧೨೩೬). ಸೂಫಿಗಳು ಈ ಹೊರಗಿನಿಂದ ಬರುವ ಮಾತಾದರೂ ಮೊದಲ ಘಟ್ಟದ ಸೂಫಿಗಳಿಗೆ ಸಂಬಂಧಿಸಿದ್ದು, ನಂತರದ ಹೆಚ್ಚಿನ ಸೂಫಿಗಳು ಭಾರತದಲ್ಲಿಯೆ ಹುಟ್ಟಿ ಬೆಳೆದವರು.

ಸೂಫಿ ಪಂಥಗಳು (ಸಿಲ್‌ಸಿಲಾಗಳು) :

೧. ಚಿಶ್ತಿ ಪಂಥ :

ಸೂಫಿ ಪಂಥದಲ್ಲಿಯೇ ಚಿಶ್ತಿ ಪಂಥ ಮೊದಲನೆಯದು. ಇದನ್ನು ಖ್ವಾಜಾ ಮೈನೊದ್ದಿನ್ ಚಿಶ್ತಿಯವರು ಭಾರತಕ್ಕೆ ತಂದರು (೧೧೪೧-೧೨೩೬) ಆದಾಗ್ಯೂ ಈ ಪಂಥವು ಖ್ವಾಜಾ ಇಸಾಕ ಶಾಮಿಯವರಿಂದ ಬಂದಿದೆ. ಭಾರತದಲ್ಲಿ ಈ ಪಂಥವು ಬಹಳ ಜನಪ್ರೀಯತೆ ಪಡೆಯಿತು ಹಾಗೂ ಶೀಘ್ರವಾಗಿ ಬೆಳವಣಿಗೆ ಹೊಂದಿತು. ಖ್ವಾಜಾ ಮೈನೊದ್ದಿನ ಚಿಶ್ತಿಯವರು ಅಜ್ಮೇರದಲ್ಲಿ ನೆಲೆಸಿ ತಮ್ಮ ಖಾನಕಾವನ್ನು ಸ್ಥಾಪಿಸಿದರು.[೧೫] ತದನಂತರ ಅವರ ಸಮರ್ಥ ಉತ್ತರಾಧಿಕಾರಿಗಳು ಚಿಶ್ತಿ ಪಂಥವನ್ನು ಅಜೊದಾನ, ಹನಸಿ, ನಾಗಪುರ, ಗುಲ್ಬರ್ಗಾ, ಕಡೆಗೆಲ್ಲ ಈ ಪಂಥವನ್ನು ಪ್ರಸಾರ ಮಾಡಿದರು. ಚಿಶ್ತಿ ಪಂಥದ ಪ್ರಮುಖ ಸೂಫಿಗಳಾದ ಶೇಖ ಅಲ್ಲಾವುದ್ದಿನ ಸಾಬಿರ ಕಲೇರಿ ಮತ್ತು ನಿಜಾಮುದ್ದಿನ್ ಔಲೀಯಾ ರವರು. ಈ ಪಂಥದ ಉಪ ಶಾಖೆಗಳಾದ, ಚಿಶ್ತಿಸಾಬ್ರಿ[೧೬] ಮತ್ತು ಚಿಶ್ತಿ ನಿಜಾಮಿಗಳ[೧೭] ಸಂಸ್ಥಾಪಕರು. ೧೪ನೆಯ ಶತಮಾನದಲ್ಲಿ ಮಹಮ್ಮದ-ಬಿನ್-ತುಘಲಕನು ಸೂಫಿ ಮತ್ತು ಉಲೇಮಾಗಳನ್ನು ದಖನ್ನಿಗೆ ವಲಸೆ ಹೋಗಲು ಒತ್ತಾಯಿಸಿದ ಹಾಗೂ ಹೊಸ ರಾಜಧಾನಿಯಾದ ದೌಲತಾಬಾದನಲ್ಲೆ ನೆಲೆಸಲು ಆಜ್ಞೆಮಾಡಿದನು. ಮುಂದೆ ದಖನ್ನಿನಲ್ಲಿ ಗೇಸುದರಾಜ ಬಂದಾನವಾಜರ ಮಂದಾಳತ್ವದಲ್ಲಿ ಈ ಪಂಥ ತುಂಬಾ ಪ್ರಬಲವಾಯಿತು. ಗೇಸುದರಾಜರು ಬಹಮನಿ ಆಸ್ಥಾನದ ಗುಲ್ಬರ್ಗಾದಲ್ಲಿದ್ದರು ಮತ್ತು ರಾಜಾಶ್ರಯದಲ್ಲಿದ್ದು ಹಲವಾರು ಹಳ್ಳಿಗಳನ್ನು ಕಾಣಿಕೆಯಾಗಿ ಪಡೆದರು.[೧೮] ಇವರ ಶಿಷ್ಯರು ರಾಜಕೀಯದಲ್ಲಿ ಬೆರೆತು ಗುಲ್ಬರ್ಗಾ ಮತ್ತು ದೆಹಲಿಗಳಲ್ಲಿ ತಮ್ಮ ಪ್ರಭುತ್ವವನ್ನು ಕಳೆದುಕೊಂಡರು. ೧೫ ಮತ್ತು ೧೬ನೆ ಶತಮಾನದಲ್ಲಿ ಚಿಶ್ತಿ ಸೂಫಿಗಳು ಬಿಜಾಪುರದ ಶಾಹಪುರ ಪ್ರದೇಶದಲ್ಲಿ ನೆಲೆಸಿದರು. ಅವರ್‍ಯಾರೂ ರಾಜಾಶ್ರಯ ಪಡೆಯದೇ ರಾಜಕೀಯದಿಂದ ದೂರವೇ ಉಳಿದಿದ್ದರು. ಮುಂದೆ ೧೮ನೆ ಶತಮಾನದಲ್ಲಿ ಶಹಾ ಕಲಿಮುಲ್ಲಾ ಜಹಾನಾಬಾದಿ ಮತ್ತು ಶೇಖ ಫಕ್ರುದ್ದಿನ ರವರು ಈ ಪಂಥಕ್ಕೆ ಹೊಸ ಜೀವ ನೀಡಿದರು.[೧೯]

೨. ಸಹರವರ್ದಿ ಪಂಥ :

ಚಿಶ್ತಿ ಪಂಥದೊಂದಿಗೆಯೇ ಸಹರವರ್ದಿ ಪಂಥವು ಸಹ ಪ್ರಸಾರವಾಯಿತು. ನಜೀಮುದ್ದಿನ ಅಬ್ದುಲ್ ಖಾದಿರ್ (೧೦೯೭-೧೧೬೮) ರವರು ಈ ಪಂಥದ ಸ್ಥಾಪಕರು. ಇವರ ಸಹರವರ್ದನ ನಿವಾಸಿಗಳಾಗಿದ್ದರು. ಮಂಗೋಲರ ದಾಳಿಗೆ ತುತ್ತಾಗಿ ಇವರ ಶಿಷ್ಯರೆಲ್ಲಾ ಭಾರತಕ್ಕೆ ಪ್ರವೇಶಿಸಿದರು. ಇವರಲ್ಲಿ ಪ್ರಮುಖರಾದವರೇಂದರೆ ಖಾದಿರ ಇವರ ತಂಗಿಯ ಮಗನಾದ ಶೇಖ ಬಹಾವುದ್ದಿನ್ ಜಕರಿಯಾ[೨೦] ಇವರು ೧೮ನೆ ಶತಮಾನದಲ್ಲಿ ಈ ಪಂಥವನ್ನು ಭಾರತದಲ್ಲಿ ಬೆಳೆಸಿದರು. ಈ ಪಂಥವು ಉಚ್ಛ, ಸಿಂಧ ಮುಲ್ತಾನದಲ್ಲಿ ಗಮನಾರ್ಹವಾದ ಮಹತ್ವ ಪಡೆಯಿತು. ಮುಲ್ತಾನಿನಲ್ಲಿ ಶೇಖ ಬಹಾವುದ್ದಿನರ ಖಾನಕಾವು ಸೂಫಿ ತತ್ವ ಶಿಸ್ತು ಮತ್ತು ಭೋದನೆಗಾಗಿ ಮಧ್ಯಕಾಲಿನ ಭಾರತದಲ್ಲಿ ಪ್ರಸಿದ್ಧಿ ಪಡೆಯಿತು.[೨೧] ಸೈಯದ ಜಲಾಲುದ್ದಿನ ಸುರ್ಖಿ[೨೨]

ಬುಖಾರಿ (೧೨೯೧) ಸೈಯದ ಮಖದುಮ ಜಹಾನಿಹಾನ[೨೩] (೧೩೦೮-೧೩೮೧) ಮತ್ತು ಮಖದಮಶಾಹ ಶಾಜಬಾಜ[೨೪] ಖಲಂದರ. ಇವರೆಲ್ಲರ ಆರೈಕೆಯಲ್ಲಿ ಈ ಸಹರವರ್ದಿ ಪಂಥ ಬೆಳೆಯಿತು. ಈ ಎಲ್ಲ ಸಹರವರ್ದಿ ಸೂಫಿಗಳು ಖಾದ್ರಿ ಸೂಫಿಗಳಿಂದ ಖಿಲಾಫತ್ತ(ದಿಕ್ಷೆ)ನ್ನು ಪಡೆದರು.

ಈ ಪಂಥವು ದೆಹಲಿ, ಗುಜರಾತ, ಬೆಂಗಾಲ ಮತ್ತು ದಖನಿನ್ನ ಅನೇಕ ಕಡೆಗಳಲ್ಲಿ ಬೆಳೆಯಿತು. ನಂತರ ಇದು ಒಡೆದು ಉಪ ಪಂಥಗಳಾದವು[೨೫] ೧೩ನೆ ಶತಮಾನದಿಂದ ೧೫ನೇ ಶತಮಾನದವರೆಗೆ ಈ ಪಂಥವು ಧಾರ್ಮಿಕ ಮತ್ತು ಸಂಸ್ಕೃತಿಕ ಕ್ಷೇತ್ರದಲ್ಲಿ ತುಂಬಾ ಮಹತ್ವ ಪಡೆದುಕೊಂಡಿತ್ತು. ೧೫ನೆ ಶತಮಾನದಲ್ಲಿ ಸಿಂದ್ ಮತ್ತು ಮುಲ್ತಾನಿನಲ್ಲಿ ಖಾದ್ರಿಗಳ ಆಗಮನದಿಂದ ಈ ಪಂಥ ಈ ಪ್ರದೇಶಗಳಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು.

ಚಿಶ್ತಿ ಮತ್ತು ಸಹರವರ್ದಿ ಪಂಥಗಳೆರಡು ರಾಜರಿಂದ ಮೆಚ್ಚುಗೆಯನ್ನು ಪಡೆದುಕೊಂಡಿದ್ದವು. ದೆಹಲಿಯ ಸುಲ್ತಾನ ಈ ಸೂಫಿಗಳಿಂದ ಆರ್ಶಿವಾದ ಪಡೆದುಕೊಂಡಿದ್ದ. ಈ ಸಹರವರ್ದಿ ಪಂಥವು ಸಕ್ರಿಯವಾಗಿ ಆ ಕಾಲದ ರಾಜಕೀಯ ಬೆಳವಣಿಗೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿತ್ತು. ಇದರ ಅನುಯಾಯಿಗಳೆಲ್ಲ ರಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿತ್ತು. ಅಪಾರ ಸಂಪತ್ತನ್ನು ಗಳಿಸಿದರು. ಇವರು ನೇರವಾಗಿ ಆಡಳಿತಾಧಿಕಾರಿಗಳೊಂದಿಗೆ ಸಂಪರ್ಕವನ್ನು ಹೊಂದಿದ್ದರು. ಇವರ ಖಾನಕಾದ ವ್ಯವಸ್ಥೆ ಚಿಶ್ತಿಗಿಂತಲೂ ಭಿನ್ನವಾಗಿತ್ತು.[೨೬]

೩. ಶುತ್ತಾರಿ ಪಂಥ :

ಭಾರತದಲ್ಲಿ ಈ ಪಂಥವು ೧೫ನೆ ಶತಮಾನದ ಮಧ್ಯಕಾಲದಲ್ಲಿ 'ಶಹಾ ಅಬ್ದುಲ್ಲಾ ಶುತ್ತಾರಿ (ಕ್ರಿ.ಶ ೧೪೫೫)ಯವರಿಂದ ಪರಿಚಿತವಾಯಿತು. ಈ ಶತ್ತಾರಿಗಳು ತಮ್ಮ ಅಧ್ಯಾತ್ಮಿಕ ಸಂಬಂಧವನ್ನು ಶೇಖ ಬಾಯಜೀದ ಬಿಸ್ತಮಿಯಿಂದ ಪಡೆದುಕೊಂಡಿದ್ದರು. ಪರ್ಶಿಯಾದ ಸೂಫಿಯಾದ ಶೇಖ ಮಹಮ್ಮದ ಗೌಸ ಶುತ್ತಾರಿ[೨೭] (ಕ್ರಿ.ಶ ೧೫೩೬)ಅವರು ಈ ಪಂಥದ ಪ್ರಮುಖ ಸೂಫಿಯಾಗಿದ್ದರು. ಇವರು ಸಂಸ್ಕೃತ ಪಂಡಿತರಾಗಿದ್ದರು ಇವರು ಯೋಗಿಗಳಲ್ಲಿರುವ ಸ್ವಯಂಸಿಸ್ತು, ನಿಯಂತ್ರಣ ಮುಂತಾದ ವಿಷಯಗಳ ಬಗ್ಗೆ ಕವನಗಳನ್ನು ರಚಿಸಿದ್ದರು. ಶಿಷ್ಯರಿಗೆ ಇವರು ನೀಡಿದ ಭೋದನೆಗಳಲ್ಲಿ ಕಂಡುಬರುವ ವಿಶೆಷತೆಗಳೆಂದರೆ, ವ್ಯಕ್ತಿತ್ವದಲ್ಲಿ ಹೊಂದಾಣಿಕೆ ಮತ್ತು ಮುಸ್ಲಿಮೇತರ ಯೋಗಿಗಳಲ್ಲಿ[೨೮] ಕಂಡುಬರುವ ಆಚರಣೆಗಳು ಈ ಶುತ್ತಾರಿಗಳು ಪ್ರಬಲ ವರ್ಗದೊಂದಿಗೆ ಸಂಪರ್ಕವನ್ನಿಟ್ಟುಕೊಂಡಿದ್ದರು ಸಾಮಾನ್ಯ ಜನರನ್ನು ಕಡೆಗಣಿಸಿದರು.[೨೯] ಇದರಿಂದಾಗಿಯೇ ಮಹಮ್ಮದ ಗೌಸರವರು ಮೊಗಲ ಬಾದಶಹಾರಾದ ಹುಮಾಯೂನ್ ಮತ್ತು ಅಕ್ಬರನಿಂದ ಕಡೆಗಣಿಸಲ್ಪಟ್ಟಿದ್ದರು. ಆದರೆ ಇವರ ಶಿಷ್ಯನಾದ ಶಹಾ ವಜುವುದ್ದಿನ್ ಅಲ್ವಿ ಗುಜರಾತಿ (ಕ್ರಿ.ಶ ೧೫೮೯) ಇವರು ವಿರುದ್ಧ ನೀತಿಯನ್ನು ಅನುಸರಿಸಿದರು. ಇವರು ರಾಜಾಶ್ರಯವನ್ನು ನಿರಾಕರಿಸಿದರು; ಯೋಗಿಗಳ ಆಚರಣೆಯನ್ನು ನಿರ್ಭಂಧಿಸಿ ಇಸ್ಲಾಮಿನ ಕಾನೂನುಗಳನ್ನು ಪರಿಪಾಲಿಸಿದ. ಆದರೆ ಇವರ ಉತ್ತರಾಧಿಕಾರಿಗಳು

ವಿಶೇಷವಾಗಿ ಶಹಾ ಹಾಶಿಂಲೀರ ಅಲ್ವಿ ಮತ್ತು ಶಹಾ ಸಿಗ್‌ಬತ್ತುಲ್ಲಾ ರವರು ದಖನ್ನಿಗೆ ಬಂದು ಬಿಜಾಪುರದ ಎರಡನೆಯ ಇಬ್ರಾಹಿಮ ಆದಿಲ್‌ಶಾಹ ದರ್ಬಾರದಲ್ಲಿ ಸ್ಥಾನವನ್ನು ಪಡೆದುಕೊಂಡರು,[೩೦] ಇವರು ಸುಲ್ತಾನನಿಂದ ಕಾಣಿಕೆಗಳು ಮತ್ತು ಜಹಾಗೀರುಗಳನ್ನು ಪಡೆದುಕೊಂಡಿದ್ದರು.

ಶುತ್ತಾರಿಗಳ ಕೇಂದ್ರ ಸ್ಥಾನಗಳೆಂದರೆ, ಬ್ರೂಚ್ ಮತ್ತು ಗುಜರಾತಿನ ಅಹಮದಾಬಾದ ಇಲ್ಲಿಂದಲೇ ಬೆಂಗಾಲ, ಜೌನಪುರ ಮತ್ತು ದಖನ್ನಿನ ಕಡೆಗೆ ಇದು ಪ್ರಸರಿಸಿತು.[೩೧] ಅದರೂ ಇವರ ಪ್ರಸಿದ್ಧಿ ಚಿಶ್ತಿ ಮತ್ತು ಸಹರವರ್ದಿ ಪಂಥದಂತೆ ಪಸರಿಸಲಿಲ್ಲ. ೧೮ನೆ ಶತಮಾನದಲ್ಲಿ ಶಹಾ ವಜಿವುಲ್ಲಾ ಮತ್ತು ಅವರ ಗುರುಗಳಾದ ಶೇಖ ಅಬು ತುರಾಬ ರವರು ಬೇರೆ ಪಂಥದವರಾದರೂ ಸಹ, ಶುತ್ತಾರಿ ಪಂಥವನ್ನು ಸೇರಿಕೊಂಡರು.[೩೨]

೪. ನಕ್ಷಬಂದಿ ಪಂಥ :

ಈ ಪಂಥವನ್ನು ಸಿಲಸಿಲಾಯೆ-ಖಾಜಗಾನ ಎಂತಲೂ ಕರೆಯುತ್ತಾರೆ. ಇದು ಅತ್ಯಂತ ಹಳೆಯದಾದ ಪಂಥವಾದರೂ ಭಾರತದಲ್ಲ ಬಂದದ್ದು ಕೊನೆ-ಕೊನೆಗೆ, ಖ್ವಾಜಾ ಅಹ್ಮದ ಅರಾ ಯಾಸ್ರಿ (ಕ್ರಿ.ಶ೧೧೬೧) ಈ ಪಂಥದ ಬೆಳವಣಿಗೆಯಲ್ಲಿ ಇವರ ಪಾತ್ರ ಪ್ರಮುಖವಾದದ್ದು. ನಂತರ ೧೪ನೆ ಶತಮಾನದಲ್ಲಿ ಖ್ವಾಜಾ ಬಹಾವುದ್ದೀನ್ ನಕ್ಷಬಂದಿ[೩೩] ಮತ್ತು ಖಲೀಫಾ ಖ್ವಾಜಾ ಅಹರಾರ್ (ಕ್ರಿ.ಶ೧೪೮೪) ಇದನ್ನು ಬೆಳೆಸಿದರು. ಖ್ವಾಜಾ ಅಹರಾರ್ ರ ಶಿಷ್ಯರಾದ ಖ್ವಾಜಾ ಮಹಮ್ಮದ ಖಾಜಿಯವರ ನಾಯಕತ್ವದಲ್ಲಿ ಈ ಪಂಥ ಮುಂದುವರೆಯಿತು. ಬಾಬರನು ಚಿಕ್ಕ ವಯಸ್ಸಿನಲ್ಲಿಯೆ ಖ್ವಾಜಾ ಮಹಮ್ಮದ ಖಾಜಿಯವರ ಅನುಯಾಯಿಯಾಗಿದ್ದನು. ಮುಂದೆ ಇವರ ಶಿಷ್ಯಂದಿರು ಬಾಬರನನ್ನು ಭೇಟಿಯಾದಾಗ ಬಾಬರನು ಅವರನ್ನೆಲ್ಲಾ ತುಂಬಾ ಗೌರವಗಳೊಂದಿಗೆ ಸತ್ಕರಿಸಿದನು.[೩೪] ಮುಂದೆ ಹುಮಾಯೂನ ಮತ್ತು ಕಾಮ್ರಾನ್‌ನರು ತಮ್ಮ ತಂದೆಯ ನೀತಿಯನ್ನು ಅನುಸರಿಸಿದರು, ನಕ್ಷಬಂದಿಗಳೊಂದಿಗೆ ಆದಾರದೊಂದಿಗೆ ನಡೆದುಕೊಂಡರು. ಬಾಬರನ ಆಳ್ವಿಕೆಯ ಸಮಯದವರೆಗೂ ಈ ಪಂಥ ಭಾರತದಲ್ಲಿ ಬಂದಿರಲಿಲ್ಲ. ಈ ಪಂಥದ ಮುಖ್ಯ ಕೇಂದ್ರಗಳು, ಮೊಗಲರ ಉತ್ತರಾಧಿಕಾರಿಗಳ ಭಾಗಗಳಾದ ಮಧ್ಯ ಏಷ್ಯಾ ಮತ್ತು ಟ್ರಾನ್‌ಆಕ್ಸಿಯಾ.[೩೪]

ನಕ್ಷಬಂದಿ ಪಂಥದ ಬೆಳವಣಿಗೆಗೆ ಕಾರಣರಾದವರೆಂದರೆ ಖ್ವಾಜಾ ಬಾಕಿ ಬಲ್ಲಾ (ಕ್ರಿ.ಶ೧೫೬೪-೧೬೦೩) ಇವರ ಖಾನಕಾವು ನೀತಿ, ಆಧ್ಯಾತ್ಮದ ಭೋದನೆಗಳ ಕೇಂದ್ರಸ್ಥಾನವಾಗಿತ್ತು. ಇವರು ದುರ್ಬಲರ ಮತ್ತು ನೈತಿಕ ಮೌಲ್ಯಗಳಿಂದ ಜನತ ಜೀವನಮಟ್ಟವನ್ನು ಉನ್ನತಿಗ್ಯೂಯಲು ತಮ್ಮನ್ನು ಅರ್ಪಿಸಿಕೊಂಡಿದ್ದರು. ಇವರು ರಾಜದರ್ಬಾರಿನ ಉನ್ನತ ಅಧಿಕಾರಿಗಳನ್ನು ತಮ್ಮ ಖಾನಕಾದಲ್ಲಿ ಸ್ವಾಗತಿಸಿದಾದರೂ ಅವರೊಂದಿಗೆ ಸಂಪರ್ಕವನ್ನು ಬೆಳಸಿಕೊಳ್ಳಲಿಲ್ಲ. ಈ ಪಂಥದ ಪ್ರಮುಖ ವ್ಯಕ್ತಿಯೆಂದರೇ ಶೇಖ ಅಹಮ್ಮದ ಸರಹಿಂದಿ (ಕ್ರಿ.ಶ.೧೫೬೪-೧೬೨೪) ಖ್ವಾಜಾ ಬಾಕಿ ಬಲ್ಲಾರವರ ಶಿಷ್ಯ.[೩೬] ಇವರು ಬುಖಾರಾದ ನಕ್ಷಬಂದಿಗಳೊಂದಿಗೆ ತುಂಬಾ ಆತ್ಮಿಯತೆಯನ್ನಿಟ್ಟುಕೊಂಡಿದ್ದರು. ಇವರ ನೇತ್ರತ್ವದಲ್ಲಿ ಈ ಪಂಥ ಅನೇಕ ಗುಣ-ಲಕ್ಷಣಗಳನ್ನು

ಬೆಳೆಸಿಕೊಂಡು ತನ್ನ ಛಾಪು ಮೂಡಿಸಿತು. ಕಿಬರಾವಿ, ಚಿಶ್ತಿ ಮತ್ತು ಖಾದ್ರಿ ಪಂಥಗಳನ್ನು ಇವರು ಅನುಸರಿಸಿದರು. ಹಾಶೀಂ ಕಿಶಮಿಯವರ ಪ್ರಕಾರ ಖಾದ್ರಿ ಪಂಥದ ಶೇಖಅಹಮ್ಮದರವರು ಇವರನ್ನು ಮಾರ್ಗದರ್ಶನ ಮತ್ತು ತರಬೇತಿಗೊಳಿಸಿ ಖಾದ್ರಿಯನ್ನಾಗಿಸಿದರು.[೩೭]

೧೮ನೆ ಶತಮಾನದ ಶಹಾ ವಲಿವುಲ್ಲಾ ದೆಹಲ್ವಿ (ಕ್ರಿ.ಶ೧೭೦೨-೬೨) ಪ್ರಖ್ಯಾತ ರಾಜಕೀಯ ಮುತ್ಸದಿ ಹಾಗೂ ಸೂಫಿ. ಇದೇ ಪಂಥದವರಾಗಿದ್ದಾರೆ. ಇವರು ತಮ್ಮ ಬರಹದಲ್ಲಿ ಈ ನಾಲ್ಕು ಪಂಥಗಳ ಬಗ್ಗೆ ಬರೆದಿದ್ದಾರೆ. ಅದಲ್ಲದೇ ತಮ್ಮ ಪಂಥದ ೧೧ ಪ್ರಮುಖ ತತ್ವಗಳನ್ನು ಸಹ ಪ್ರತಿಪಾದಿಸಿದ್ದಾರೆ.[೩೮]

ಮಿರ್ಜಾ ಮಜಹರ ಜಾನೆ-ಜಾನಾ ರವರು ಈ ಪಂಥಕ್ಕೆ ಹೊಸ ತತ್ವಗಳನ್ನು ಸೇರಿಸಿ ಶಮಸಿಯಾ ಮತ್ತು ಮಜಹರಿಯಾ ಎಂಬ ಉಪ ಪಂಥಗಳನ್ನು ಸೃಷ್ಟಿಸಿದರು.

೫. ಖಾದ್ರಿ ಪಂಥ :

ಇಂದಿಗೂ ಚಾಲನೆಯಲ್ಲಿರುವ ಈ ಪಂಥ ತುಂಬಾ ಹಳೆಯದಾಗಿದೆ ಮತ್ತು ಪ್ರಥಮ ಪಂಥವಾಗಿದೆ.[೩೯] ಇದು ಸಮಕಾಲೀನ ಸಮಾಜ ಮತ್ತು ಸಂಸ್ಕೃತಿಯ ಮೇಲೆ ತುಂಬಾ ಪ್ರಭಾವ ಬೀರಿ ಜನರಲ್ಲಿ ಮತ್ತು ಅವರ ಜೀವನದಲ್ಲಿ ತಾತ್ವಿಕ ಹಾಗೂ ಅಧ್ಯಾತ್ಮಿಕವಾಗಿ ಪ್ರಭಾವ ಬೀರಿದೆ.

ಈ ಪಂಥದ ಸ್ಥಾಪಕರೆಂದರೆ "ಶೇಖ ಅಬ್ದುಲ್‌ಖಾದರ ಜಿಲಾನಿ" (ಕ್ರಿ.ಶ ೧೦೭೮-೧೧೬೬) ಇವರು ಇಸ್ಲಾಮಿನ ಅತ್ಯಂತ ಪ್ರಭಾವಿ ಪುರುಷ. ಇವರು ನಂಬಿಕೆಯ ನೈಜತೆಯನ್ನಾಧರಿಸಿ ಧಾರ್ಮಿಕ ತತ್ವಕ್ಕಾಗಿ ಜೀವನವಿರುವರೆಗು ಶ್ರಮಿಸಿದರು. ಸುನ್ನಿ ವಿಚಾರಧಾರೆಯ ಪರಿಪಾಲಕರಾಗಿದ್ದರು. ಮುಸ್ಲಿಮ ಸಮಾಜವನ್ನು ಅವರು ಹೇಗೆ ಬದಲಾಯಿಸಿದರು ಎಂದು ನಾವು ನೊಡುವುದಾದರೇ ಅವರ ಬರಹಗಳನ್ನು ಅವಲಂಬಿಸಬೇಕಾಗುತ್ತದೆ. ಇವುಗಳಲ್ಲಿ ಅವರ ಆಳವಾದ ಧಾರ್ಮಿಕ ವಿಚಾರಧಾರೆಗಳು, ಸಮಾಜ ಮತ್ತು ಧಾರ್ಮಿಕ ಷರತುಗಳ ಬಗ್ಗೆ ಮುಸ್ಲಿಮ ಸಮಾಜದ ಸಂಪರ್ಕದ ಬಗ್ಗೆ ಅರಿವಾಗುತ್ತದೆ. ಆಳವಾದ ಜ್ಞಾನ ಅಧ್ಯಾತ್ಮಿಕ ಅನುಕರಣೆ, ವಿವರವಾದ ಮತ್ತು ವ್ಯವಸ್ಥಿತವಾದ ತಾತ್ವಿಕ ಆಚರಣೆಗಳು ಅವರ ವಿಚಾರಧಾರೆಯ ಬೆನ್ನೆಲುಬುಗಳಾಗಿದ್ದವು.[೪೦] ಅಗಣಿತ ಜನರು ಇವರಿಂದ ಮಾರ್ಗದರ್ಶನ ಪಡೆದಿದ್ದು ಬದುಕಿನಲ್ಲಿ ಸ್ವಯಂ ಶಿಸ್ತು ದೇವರೊಂದಿಗೆ ಸರ್ಮಪಣೆಯನ್ನು ಅಳವಡಿಸಿಕೊಂಡಿದ್ದಾರೆ. ಇವರ ನಂತರ ಇವರ ಸಮರ್ಥ ಮಕ್ಕಳು ಹಾಗೂ ಶಿಷ್ಯರು ಈ ಪಂಥವನ್ನು ಉಳಿಸಿ ಬೆಳೆಸಿಕೊಂಡು ಬಂದಿದ್ದಾರೆ. ಇವರು ತಾತ್ವಿಕ ಅಧ್ಯಾತ್ಮಿಕ ನೀತಿ ನಡೆ-ನುಡಿಗಳಿಂದ ಆ ಕಾಲದ ಜನರ ನಡವಳಿಕೆಯನ್ನು ತಿದ್ದಿದರು. ಈ ಪಂಥವು ಹಂತ ಹಂತವಾಗಿ ಬೆಳೆದು ಜಗತ್ತಿನ ಮೂಲೆ-ಮೂಲೆಗೂ ಪಸರಿಸಿದೆ. ಈ ಪಂಥವು ಯಮನ್, ಇಜಿಪ್ತ, ಸಿರಿಯಾ, ತುರ್ಕಿ ಮತ್ತು ಮೆಸೊಪೊಟೊಮಿಯಾಯಾದಲ್ಲಿ ಚಾಲನೆಯಲ್ಲಿದೆ.

ಕ್ರಿಶ. ೧೨೫೮ ರಲ್ಲಿ ಇವರ ಕುಟುಂಬ ಬಗ್ದಾದಿನಲ್ಲಿ ಮಂಗೋಲರಿಂದ ಕಿರಕುಳವನ್ನು ಅನುಭವಿಸಿತು. ಇದೇ ಪಟ್ಟಣದಿಂದ ಈ ಪಂಥದ ಅಧ್ಯಾತ್ಮಿಕ ತತ್ವಗಳು ವಿಶ್ವದ ಬೇರೆ ಬೇರೆ ಭಾಗಗಳಾದ ಮೊರೊಕ್ಕೋ,

ಸ್ಪೆನ್, ಅಲ್ಜಿರಿಯಾ, ಏಸಿಯಾ ಮೈನರ್, ತುರ್ಕಸ್ಥಾನ್ ಮತ್ತು ಫರಘಾನಾದವರೆಗೂ ಪಸರಿಸಿದೆ.[೪೧] ಡಚ್ಚ ಇಸ್ಟ-ಇಂಡಿಸ್, ಗೀಸ್, ಚೀನಾ, ಅಫಘಾನಿಸ್ತಾನ ಮತ್ತು ಭಾರತದಲ್ಲಿಯೂ ಈ ಪಂಥದ ಶಾಖೆಗಳಿವೆ. ಕ್ರಿ.ಶ. ೧೩೦೦ ರಿಂದ ೧೫೦೦ ರವರೆಗೆ ಈ ಪಂಥದ ತುಂಬಾ ಪ್ರಸಿದ್ಧಿ ಪಡೆಯಿತು.

೧೬ ರಿಂದ ೧೮ನೆ ಶತಮಾನದ ನಡುವೆ ಈ ಪಂಥದ ತತ್ವಗಳು ಭಾರತೀಯ ಜನರ ಮನಸ್ಸಿನ ಮೇಲೆ ಗಾಢವಾದ ಪರಿಣಾವನ್ನು ಬೀರಿದವು. ಇವರ ಅನುಯಾಯಿಗಳ ಪ್ರಕಾರ ಅಬ್ದುಲ್ ಖಾದರ ಜಿಲಾನಿ ಅವರು ಪವಾಡ ಪುರುಷರಾಗಿದ್ದರು, ಇವರ ಆರ್ಶೀವಾದವಾಯಿತೆಂದರೆ, ಜೀವನ ಪಾವನವಾಗುವುದೆಂದು ನಂಬಿದ್ದರು. ಇವರ ಮರಣ ದಿನವನ್ನು ಪ್ರತಿವರ್ಷ ೧೧ನೇ ರಬಿ-ಉಸ್-ಸಾನಿ ಎಂದು ಆಚರಿಸುತ್ತಾರೆ. ಇದನ್ನು ಭಾರತ ಮತ್ತು ಪಾಕಿಸ್ತಾನದಲ್ಲಿ ಗ್ಯಾರವಿ ಷರಿಫ್ ಎನ್ನತ್ತಾರೆ.[೪೨] ಇವರ ಅನುಯಾಯಿಗಳು ಇವರಿಗೆ ಸಂಬಂಧಿಸಿದ, ಕಿರ್ಖಾ (ಅಂಗಿ), ಜುಬ್ಬಾ, ದಸ್ತರ (ಪಟಗಾ), ಮುಸಲ್ಲಾ (ನಮಾಜಿಗಾಗಿ ಹಾಸುವ ಚಾದರ) ದೋತಿ (ಲುಂಗಿ) ಕೂದಲೂವನ್ನು ಕೈಯಲ್ ಶರೀಫ್, ದೆಹಲಿ, ಲಾಹೋರ ಮತ್ತು ಕಾಶ್ಮೀರನಲ್ಲಿ ಸಂರಕ್ಷಿಸಿದ್ದಾರೆ.[೪೩] ಇವರ ನಂತರ ಭಾರತದಲ್ಲಿ ಈ ಪಂಥದ ಅನುಯಾಯಿಗಳೆಂದರೆ, ಶಹಾ ಅಬ್ದುಲ್ ಮಾಳಿ,[೪೪] ಅಬ್ದುಲ್ ಖಾದರ ಬದೌನಿ, ಶೇಖ ಅಬ್ದುಲ್ ಹಕ್ ಮಹದ್ದಿಸ್ ದೆಹಲ್ವಿ,[೪೫] ದಾರಾಶಕೊ. ಸುಲ್ತಾನ ಬಾಹು, ಪೀರ ವಾರಿಸ ಶಾಹ ಮತ್ತು ಮುಂತಾದವರು.

ಇವರು ಕೇವಲ ಖಾದ್ರಿ ಪಂಥದವರಿಗಷ್ಟೇ ಪ್ರಿಯರಾಗದೇ ಇನ್ನುಳಿದ ಪಂಥದವರಿಗೂ ಪ್ರಿಯರಾಗಿದ್ದರು. ಇವರನ್ನು ಹೊಗಳಿದವರೆಂದರೆ, ಖ್ವಾಜಾ ಮೈನುದ್ದೀನ್ ಚಿಶ್ತಿ, ಶೇಖ ಬಹಾವುದ್ದೀನ್ ಜಕರಿಯಾ, ಖ್ವಾಜಾ ಬಕ್ತಿಯಾರ ಕಾಕಿ, ಸಾಬಿರ ಕಲೇರಿ, ಬಂದಾನವಾಜ, ಬಹಾವುದ್ದೀನ್ ನಕ್ಷಬಂದಿ, ಶೇಖ ಅಹ್ಮದ ಸರಹಿಂದಿ ಮುಂತಾದರು[೪೬]

ದಾರಾಶಕೊ ಪ್ರಕಾರ ಖಾದ್ರಿ ಪಂಥವು ೧೭ನೆ ಶತಮಾನದಲ್ಲಿ ಬೇರೆ ಪಂಥಗಳಿಗೆ ಹೋಲಿಸಿದಾಗ ತುಂಬಾ ಪ್ರಸಿದ್ಧಿ ಪಡೆದಿತೆಂದು ಕಾಣುತ್ತದೆ. ದಾರಾಶಕೊ ತನ್ನ ಕೃತಿಗಳಾದ "ಸಕಿನತ್-ಉಲ್-ಔಲೀಯಾ[೪೭] ಮತ್ತು ಸಫೀನತ್-ಉಲ್-ಔಲೀಯಾ[೪೮] ದಲ್ಲಿ ಈ ಪಂಥದ ಬಗ್ಗೆ ಮೆಚ್ಚುಗೆಯನ್ನು ಮತ್ತು ಶೇಖ ಅಬ್ದುಲ್ ಖಾದರ ಜೀಲಾನಿಯವರ ಆರ್ಶಿವಾದ ಪಡೆಯಬೇಕೆಂದರೆ, ತಮ್ಮನ್ನು ಖಾದ್ರಿಯಾ ಎಂದೆ ತಿಳಿದುಕೊಳ್ಳಬೇಕು ಎನ್ನುತ್ತಾರೆ. ಈ ಪಂಥದಲ್ಲಿ ಅನೇಕ ಪ್ರಮುಖರಾಗಿದ್ದಾರೆ, ಅದರೆ ನಾನು ಈ ಪಂಥದ ಒಬ್ಬ ಫಕೀರ್ ಎನ್ನುತ್ತಾರೆ.[೪೯]

ಔರಂಗೇಬನ ಆಳ್ವಿಕೆಯಕಾಲದಲ್ಲಿ ಈ ಪಂಥಕ್ಕೆ ತುಂಬಾ ಹಾನಿಯಾಯಿತು. ಆದರೂ ಈ ಪಂಥ ತುಂಬಾ ಪ್ರಸಿದ್ಧಿ ಪಡೆದಿದೆ. ಪಂಜಾಬನಲ್ಲಿ ಇದರ ಬೆಳವಣಿಗೆ ಅಗಾಧವಾಗಿದೆ. ಈ ಪಂಥವು ಇತರ ಪಂಥಗಳಾದ ಚಿಶ್ತಿ, ಶತ್ತಾರಿ, ಹಾಗು ನಕ್ಷಬಂಧಿ ಪಂಥಗಳನ್ನು ಮುಸುಕಾಗಿಸಿದೆ.[೫೦] ಕೆಲವು ಪಂಥಗಳಾದ ಬಹಲೋಲ ಶಾಹಿ, ಮುಕಿಮ ಶಾಹಿ, ಕುಮೇಶ ಶಾಹಿ, ನೌ ಶಾಹಿ, ಹುಸೇನ ಶಾಹಿ ಮತ್ತು ಮೈನ ಖಿಲ್ ಶಾಹಿ ಈ ಎಲ್ಲಾವುಗಳು

ಖಾದ್ರಿ ಪಂಥದಲ್ಲಿ ವಿಲೀನಗೊಂಡುವು. ೧೬ ಮತ್ತು ೧೮ನೇ ಶತಮಾನದಲ್ಲಿ ಮುಲ್ತಾನ, ಸಿಂಧ, ದೆಹಲಿ, ಆಗ್ರಾ ಬಯಾನಾ, ಬಂಗಾಲ, ಉಜ್ಜೈನ, ಕಾಶಿ, ಜೌನ್‌ಪುರ, ಬುರಹಾನಪುರ, ಕೊಂಕಣ, ಗುಜರಾತ, ಅಹಮ್ಮದನಗರ, ದೌಲತಬಾದ, ಗುಲ್ಬರ್ಗಾ, ಬಿಜಾಪುರ, ಬೀದರ ಹಾಗು ಹೈದ್ರಾಬಾದನಲ್ಲಿ ಅನೇಕ ಜನರು ಈ ಪಂಥದ ಅನುಯಾಯಿಗಳಾಗಿದ್ದರಿಂದ ಈ ಸ್ಥಳಗಳಲ್ಲಿ ಈ ಪಂಥ ಸ್ಥಾಪನೆಗೊಂಡಿತ್ತು.

೬, ಜುನೈದಿ ಪಂಥ :

ಅಬ್ದುಲ್ ಕಾಸೀಮ-ಅಲ್-ಜುನೈದಿ(ಕ್ರಿ.ಶ.೯೧೦) ಜುನೈದಿಯಾ ಪಂಥದ ಸ್ಥಾಪಕರು. ಇವರು ಸರ-ಅಸ್-ಸಖ್ತಿ (ಕ್ರಿ.ಶ. ೮೬೮) ರವರ ಅಕ್ಕನ ಮಗ ಮತ್ತು ಹಾರಿಸ-ಅಲ್-ಮಹಾಸಬಿ ರವರ ಆತ್ಮಿಯ ಶಿಷ್ಯ. ಇವರು ಫಿಖಾ ಮತ್ತು ಹದಿಸನಲ್ಲಿ ಅಗಾಧವಾದ ಜ್ಞಾನವನ್ನು ಪಡೆದುಕೊಂಡರು. ಜುನೈದರು ಸರ-ಅಲ್-ಸಖ್ತಿಯವರ ಹೇಳಿಕೆಯನ್ನು ಮನಗಾಣಿಸಿಕೊಂಡಿದ್ದರು. ಅದೇನೆಂದರೆ, "ದೇವರು ನಿನ್ನನ್ನು ಸಂಪ್ರದಾಯಸ್ಥ ಮಾಡಲಿ, ದೇವರು ಸಹ ಸೂಫಿಯೇ ಆದರೆ ಸಂಪ್ರದಾಯಸ್ಥನಾದವನು ಸೂಫಿಯಾಗಲಾರ" ಎಂದು. ಸಂಪ್ರದಾಯ ಮತ್ತು ಸುನ್ನಗಳ ಮೇಲೆ ಹೆಚ್ಚು ಒತ್ತನ್ನು ಕೊಟ್ಟರು. ಇವರ ಶರಿಯಾ ಬಗೆಗಿನ ದಿವ್ಯ ದೃಷ್ಟಿ, ಅಧ್ಯಾತ್ಮಿಕತೆ ಇವೆರಡರ ಬಗ್ಗೆ ಇದ್ದ ಜ್ಞಾನದಿಂದ ಪ್ರಸಿದ್ದಿಯನ್ನು ಪಡೆದರು. ಮೊಟ್ಟ ಮೊದಲನೆಯದಾಗಿ ಭಾರತಕ್ಕೆ ಬಂದ ಜುನೈದಿ ಸೂಫಿ ಎಂದರೆ, ಅಲಿ-ಅಲ್-ಜುಲ್ಲಾಬಿ-ಅಲ್-ಹಿಜವೇರಿ (ಕ್ರಿ.ಶ. ೧೦೭೨)ಇವರು ಲಾಹೋರಿನಲ್ಲಿ ನೆಲೆಸಿದರು. ಇವರು ಕಾಶ್ಪ-ಅಲ್-ಮಹಜುಬ ಎಂಬ ಸೂಫಿಸಂ ಬಗ್ಗೆ ಪರ್ಶಿಯನ್ನ ಭಾಷೆಯಲ್ಲಿ ಗ್ರಂಥ ರಚಿಸಿದರು.[೫೧]

ಮಹಮ್ಮದ ಆದಿಲ್‌ಶಾಹನ ಕಾಲದ ಸೂಫಿಗಳು :

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಅಧಿಕ ಸಂಖ್ಯೆಯಲ್ಲಿ ಸೂಫಿಗಳು ನೇರವಾಗಿ ಅರೇಬಿಯಾ, ಈಜಿಪ್ತ, ಬಗ್ದಾದ ಮತ್ತು ಭಾರತದ ಇತರ ಪ್ರದೇಶಗಳಾದ ಬೀದರ, ಗುಲ್ಬರ್ಗಾ, ಬುರ್ಹಾಪುರ ಮತ್ತು ಗುಜರಾತದಿಂದ ಬಿಜಾಪುರಕ್ಕೆ ವಲಸೆ ಬಂದರು. ಅವರಲ್ಲಿ ಪ್ರಮುಖರೆಂದರೆ, ಅಬದಲ್-ಅಲ್-ಸಮದ ಕನ್ನಾನಿ ಈಜಿಪ್ತದಿಂದ, ಇಸ್ಮಾಯಿಲ್ ಖಾದರಿ ಬಗ್ದಾದದಿಂದ, ಅಬು ಬಕರ್ಬಲ್ ಫಾಖ್ಖಿ, ಅಹ್ಮದ ನಜೀರ, ಸೈಯದಿ, ಜಾಫರ್ ಸಖಾಫ್, ಸೈಯದ ಮತ್ತು ಜೈನ್ ಮಖಬಿಲ್ ಸೈಯದಿ ಬಂದರು. ಅಬದಲ್ ಲತೀಫ್ ಖಾದ್ರಿ ಶಾಹ ಬೀದರದಿಂದ, ಸಿರಾಜ-ಅಲ್-ದ್ದೀನ್ ಜುನೈದಿ ಗುಲ್ಬರ್ಗಾದಿಂದ ಬಂದರು. ಹೀಗೆ ಅನೇಕ ಪ್ರದೇಶದಿಂದ ಈ ಕಾಲದಲ್ಲಿ ಬಿಜಾಪುರಕ್ಕೆ ಬಂದು ನೆಲೆಸಿದರು.

೧. ಶಹಾ ಅಬುಲ್ ಹಸನ ಖಾದ್ರಿ :

ಇವರು ಖಾದ್ರಿ ಪಂಥದ ಸೂಫಿಗಳಾಗಿದ್ದರು, ಇವರು ೧೭ನೆ ಶತಮಾನದಲ್ಲಿ ಇಸ್ಲಾಮಿನ ಅಧ್ಯಾತ್ಮದ ಒಂದುಗೂಡಿವಿಕೆ ಮತ್ತು ಸುಧಾರಣೆಗಾಗಿ ಬಹಳ ಪ್ರಯತ್ನಿಸಿದರು. ಇವರ ಅಜ್ಜ ಅಬ್ದುಲ್ ಖಾದರಿ ಉರ್ಫ ಯುಸುಫ್-ಇ-ಸಾನಿ, ಯವರು ತಮ್ಮ ಸಂಪೂರ್ಣ ಕುಟುಂಬದೊಂದಿಗೆ ಬಗ್ದಾದನಿಂದ ವಲಸೆ ಬಂದು

ಬೀದರಿನಲ್ಲಿ ನೆಲೆಸಿದರು.[೫೨] ಇವರ ಉತ್ತರಾಧಿಕಾರಿ ಎಂದರೆ ಮಗ ಬದ್ರುದ್ದಿನ್. ಬದ್ರುದಿನರು ಶೇಖ ಇಬ್ರಾಹಿಮ ಮುಲ್ತಾನಿ ಯವರ ಮಗಳು ಹಾಗೂ ಶೇಖ ಶಮಶೊದ್ದಿನ್ ಮುಲ್ತಾನಿ ಅವರ ಮಮ್ಮೊಗಳಾದ ಬೀಬಿ ಅಮಿನಾರನ್ನು ವಿವಾಹವಾಗಿದ್ದರು. ಇವರಿಗೆ ಮೂರು ಮಕ್ಕಳು ಸೈಯದ ಶಹಾ ಅಬುಲ್ ಹಸನ, ಸೈಯದ ಶಹಾ ಮುಸ್ತಫಾ ಹಾಗೂ ಸೈಯದ ಶಹಾ ಕಾಸೀಮ್.

ಸೈಯದ ಬದ್ರುದ್ದೀನರು ಬೀದರನಲ್ಲಿ ತಮ್ಮ ಖಾನಕಾವನ್ನು ಸ್ಥಾಪಿಸಿ ಹಿರಿಯ ಮಗನಾದ ಅಬುಲ್ ಹಸನರನ್ನು ತಮ್ಮ ಮರಣದ ನಂತರ ಅಧ್ಯಾತ್ಮಿಕ ನಾಯಕತ್ವ ವಹಿಸಿಕೊಳ್ಳಲು ತರಬೇತಿಗೊಳಿಸಿದರು. ಅಬುಲ್ ಹಸನರು ತಮ್ಮ ತಂದೆಯ ಮಾರ್ಗದಲ್ಲಿಯೇ ನಡೆದು ಒಬ್ಬ ಆದರ್ಶ ಮಗನಾಗಿ, ತಮ್ಮ ಪೂರ್ವಜರ ಸಿಲ್‌ಸಿಲಾ (ಪಂಥ)ವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇವರು ಅಲ್ಪ ಅವಧಿಯಲ್ಲಿ ದೂರ ದೂರದ ಜನರನ್ನು ಆಕರ್ಷಿಸಿವಲ್ಲಿ ಯಶ್ವಸಿಯಾದರು. ಹಾಗಾಗೀ ಅನೇಕ ಜನರು ಇವರ ಶಿಷ್ಯತ್ವವನ್ನು ಸ್ವೀಕರಿಸಿದರು. ಈ ಶಿಷ್ಯರನ್ನು ಅಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆಸಿದರು.[೫೩] ಕಾರಣಾಂತಗಳಿಂದಾಗಿ ಇವರು ತಮ್ಮ ಕುಟುಂಬ ಹಾಗೂ ಸಂಗಡಿಗರೊಂದಿಗೆ ಬೀದರನ್ನು ಬಿಟ್ಟು ಬಿಜಾಪುರಕ್ಕೆ ಆಗಮಿಸಿದರು. ಇವರನ್ನು ಎರಡನೆ ಇಬ್ರಾಹಿಮ ಆದಿಲ್‌ಶಾಹನು ಗೌರವ ಆದಾರಗಳೊಂದಿಗೆ ಬರಮಾಡಿಕೊಂಡನು.[೫೪] ಇವರು ಕವಿಗಳಾಗಿದ್ದರು, ಇವರು ದಖನ್ನಿನ ಜಾನಪದ ಕಾವ್ಯಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. "ಸುಖ ಅಂಜಾನ" ಇವರ ಕವಿತೆಯ ಸಂಗ್ರಹವಾಗಿದೆ.[೫೫] ಇದರಲ್ಲಿ ಶೇಖ ಅಬ್ದುಲ್ ಖಾದಿರ ಜಿಲಾನಿಯವರ, ರೂಮಿಯವರ, ಶೇಖ ಬುರಾನೊದ್ದೀನ್ ಗರೀಬ, ಇಮಾಮ ಅಲ್‌ಗಜಾಲಿ, ಶರ್ಫುದ್ದೀನ್ ಯಾಹ್ಯಾ ಮನೇರಿ ಮತ್ತು ಬಾಯಜೀದ್ ಬಸ್ತಮಿಯವರ ಹೇಳಿಕೆಗಳಿವೆ.[೫೬] ಇವರ ಕಾವ್ಯದಲ್ಲಿ ಪ್ರಯೋಗಿಸಿದ ಶಬ್ಧ ಮತ್ತು ಉಪಮೆಗಳು ಮೂರು ನೂರು ವರ್ಷ ಕಾಲದಷ್ಟು ಹಳೆಯವು, ಆದರೂ ಸಹ ಇದರ ನುಡಿಗಳು ಗಮರ್ನಾಹವಾಗಿವೆ. ಇವರು ದಖನ್ನಿನ ಕವಿಗಳ ಶೈಲಿಯನ್ನು ಬಳಿಸಿಕೊಂಡರು, ಪ್ರತಿಯೊಂದು ನಾಮಪದವನ್ನು ಬಹುವಚನದಲ್ಲಿ ಪ್ರಯೋಗಿಸಿದರು. ಅಲಿಫ್ ಮತ್ತು ನೂನ್ ಶಬ್ದಗಳ ಬಳಕಯೊಂದಿಗೆ ಸ್ತ್ರೀಲಿಂಗದ ವಿಷಯಗಳನ್ನು ಪ್ರಸ್ತುತ ಪಡಿಸಿದರು. ಭೂತಕಾಲದ ನಾಮಪದವನ್ನು ಹೆಚ್ಚುವರಿಯಾಗಿ ಬಳಿಸಿದರು. ಕ್ರಿಯಾಪದದಲ್ಲಿ ಇವರು 'ಕು' ಬದಲಾಗಿ 'ಕುನ್ನ' ಮತ್ತು 'ಸೈ' ಬದಲಾಗಿ 'ಸೇನ್' ಎಂದು ಬಳಿಸಿದರು. 'ಅಪ' ಅನ್ನು 'ಅಪಿನ' 'ತು' ಬದಲಾಗಿ 'ತುಮ್' ತುರ್ಝ್ ಕಹಾಂ ರ ಬದಲಾಗಿ ಕನ್ ಎಂಬ ಶಬ್ದಗಳನ್ನು ಪ್ರಯೋಗಿಸಿದರು. ಇವೆಲ್ಲವುಗಳು ಮರಾಠಿ ಭಾಷೆಯಿಂದ ಪ್ರೇರಿತವಾದವುಗಳು.

ಸೈಯದ ಶಾಹ ಅಬುಲ್ ಹಸನರು ೧೬೩೫ ರಲ್ಲಿ ತೀರಿಕೊಂಡರು.[೫೭] ಬಿಜಾಪುರದ ಕೊಟೆಗೊಡೆಗೆ ತಗಲಿ ಇವರ ಸಮಾಧಿ ಇದೆ. ಇವರ ಪತ್ನಿಯಾದ ಫಾತಿಮಾ ಸುಲ್ತಾನಾ ೧೨ ವರ್ಷ ಮೊದಲೇ ಅಂದರೆ ೧೬೨೩ ರಲ್ಲಿಯೇ ತೀರಿಕೊಂಡರು. ಇವರಿಗೆ ಐದು ಜನ ಮಕ್ಕಳಿದ್ದರು. ಸೈಯದ ಅಬುಲ್ ಖಾದ್ರಿ, ಸೈಯದ ನ್ಯಾಮತುಲ್ಲಾ, ಸೈಯದ ಬದ್ರುದಿನ್, ಸೈಯದ ಅಬುಲ್ ಕಾಸಿಮ್ ಮತ್ತು ಸೈಯದ ಮಹಮ್ಮದ ಮಿರಾಂ, ಇವರೆಲ್ಲರೂ ಸಹ ತಮ್ಮ ತಂದೆಯ ಗರಡಿಯಲ್ಲಿ ಪಳಗಿ ಅಧ್ಯಾತ್ಮದ ಅಪಾರ ಜ್ಞಾನವನ್ನು ಪಡೆದುಕೊಂಡು

ತಮ್ಮ ಸಿಲ್‌ಸಿಲಾದ ಆಚರಣೆಗಳನ್ನು ಮತ್ತು ತಮ್ಮ ಪಂಥದ ಬೆಳವಣಿಗಾಗಿ ಶ್ರಮಿಸಿದರು.[೫೮] ಸೈಯದ ಬದ್ರುದ್ದಿನರನ್ನು ಹೊರತು ಪಡೆಸಿ ಉಳಿದ ನಾಲ್ಕು ಮಕ್ಕಳು ದಖನ್ನಿನ ಬೇರೆ ಬೇರೆ ಸ್ಥಳಗಳಲ್ಲಿ ನೆಲೆಸಿ ತಮ್ಮ ಸತ್ಕಾರ್ಯಗಳಿಂದ ಪ್ರಸಿದ್ಧ ಸೂಫಿಗಳೆಂದು ಹೆಸರುಗಳಿಸಿದರು. ಬಿಜಾಪುರ, ಕರ್ನೂಲ, ತಾಳಿಕೊಟಾ ಮತ್ತು ಮುದಗಲ್‌ನಲ್ಲಿ ಇವರ ವಾರಸುದಾರರಿದ್ದಾರೆ.

೨. ಹಜರತ ಶಹಾ ಕಾಸಿಂ ಖಾದ್ರಿ :

ಹಜರತ ಮಹಮ್ಮದ ಫಜಲುಲ್ಲಾ ಅವರನ್ನು ಶಹಾ ಕಾಸಿಂ ಖಾದ್ರಿ ಎಂದು ಕರೆಯುತ್ತಿದ್ದರು. ಇವರು ಬಿಜಾಪುರದ ಶಹಾ ಅಬುಲ್ ಹಸನ್ ಮತ್ತು ಶಹಾ ಮುಸ್ತಫಾ ರವರ ಕಿರಿಯ ಸಹೋದರರಾಗಿದ್ದರು. ಇವರು ತಮ್ಮ ತಂದೆಯಾದ ಮಿರಾನ್ ಸೈಯದ್ ಶಹಾ ಬದ್ರುದ್ದೀನ್, ಬದ್ರೆ–ಇ–ಅಲಂ ಹಬಿಬುಲ್ಲಾರ ಮಾರ್ಗದರ್ಶನ ಪಡೆದರು.[೫೯] ತಂದೆಯ ಮರಣದ ನಂತರ ತಿರ್ಥಯಾತ್ರೆಗೆ ಹೊರಟು ಭೂಮಾರ್ಗದಿಂದ ಭಾರತಕ್ಕೆ ಬಂದು ದಖನ್ನಿನ ಸಂಧಿಲ್ಲಾದಲ್ಲಿ ತಂಗಿದರು. ನಂತರ ತಮ್ಮ ಸಹೋದರರು ಬಿಜಾಪುರಕ್ಕೆ ತೆರಳಿದ್ದನ್ನು ತಿಳಿದು ಇವರು ಸಹ ಬಿಜಾಪುರಕ್ಕೆ ಬಂದರು. ಇವರು ಶರಿಯತ್‌ನ ಕಾನೂನು ಮತ್ತು ಪ್ರವಾದಿಯವರ ಪಾಠವನ್ನು ಪಾಲಿಸುವಲ್ಲಿ ನಿಸ್ಸಿಮರಾಗಿದ್ದರು. ಇವರು ತುಂಬಾ ದಯಾಳು ಹಾಗೂ ಉದಾರಿ ಯಾಗಿದ್ದರು, ಬಡವರಿಗೆ ನಿರ್ಗತಿಕರಿಗೆ ಯಾಗಲೂ ಸಹಾಯ ಮಾಡುತ್ತಿದ್ದರು. ಇವರು ಬಿಜಾಪುರದಲ್ಲಿರುವ ಜಯಾದಖಾನ ಮಸಿದಿಯಲ್ಲೆ ಸನ್ಯಾಸಿಯ ಜೀವನ ನಡೆಸಿದರು. ಇವರು ಎರಡನೆಯ ಇಬ್ರಾಹಿಮ ಆದಿಲ್‌ಶಾಹ ಮತ್ತು ಅವನ ಮಂತ್ರಿಯಾದ ಮುರಾರಿ ಪಂಡಿತನನ್ನು ಬೇಟಿಯಾಗಲು ಬಯಸಲಿಲ್ಲ. ಆದರೂ ಆದಿಲ್‌ಶಾಹನ ಮಂತ್ರಿಯಾದ ಮುರಾರಿ ಪಂಡಿತನು ಇವರ ಪರಮ ಭಕ್ತನಾಗಿದ್ದನು. ಇವರಿಗಾಗಿ ಬಿಜಾಪುರದಲ್ಲಿ ಒಂದು ಮಸಿದಿಯನ್ನು ನಿರ್ಮಿಸಿದನು.[೬೦]

ಶಹಾ ಕಾಸಿಮ ಖಾದ್ರಿ ೧೬೨೨ ರಲ್ಲಿಯೇ ಬಿಜಾಪುರದಲ್ಲಿ ವಿಧಿವಶರಾದರು. ತಮ್ಮ ಮರಣದ ಒಂದು ತಿಂಗಳ ಪೂರ್ವದಲ್ಲಿಯೇ ತನ್ನ ಅಣ್ಣನ ಮಗನದ ಅಬ್ದಲ್ ಖಾದಿರನನ್ನು ತನ್ನ ಉತ್ತರಾಧಿಕಾರಿಯಾಗಿ ನೇಮಿಸಿದ್ದರು.[೬೧] ಇವರಿಗೆ ಮಕ್ಕಳು ಇಲ್ಲದಕ್ಕಾಗಿ ಖಾದಿರನನ್ನು ದತ್ತುಪುತ್ರನಾಗಿ ಪಡೆದರು. (ತನ್ನ ತಂದೆಯ ಮರಣ ಕಾಲದಲ್ಲಿ ಅಬ್ದಲ್ ಖಾದಿರ ಕೇವಲ ೧೪ ವರ್ಷದವರಾಗಿದ್ದರು.) ಶಹಾ ಕಾಸಿಮ ಖಾದ್ರಿಯವರು ಖಾದ್ರಿ ಪಂಥದ ಬಗ್ಗೆ ಅಬ್ದುಲ್ ಖಾದಿರರನ್ನು ತರಬೇತಿಗೊಳಿಸಿದ್ದರು. ಅಬ್ದುಲ್ ಖಾದಿರರವರು ತಮ್ಮ ಮಾವನಾದ ಶಹಾ ಇಸ್ಮಾಯಿಲ್ ಖಾದ್ರಿಯವರಿಂದಲೂ ತುಂಬಾ ಅಧ್ಯಾತ್ಮಿಕ ಲಾಭವನ್ನು ಪಡೆದುಕೊಂಡಿದ್ದರು.[೬೨] ಇವರು ತಮ್ಮ ತಂದೆ ಶಹಾ ಮುಸ್ತಫಾರಿಂದ ಮೊದಲೇ ಖಿರಕಾವನ್ನು ಪಡೆದುಕೊಂಡಿದ್ದರಾದರೂ, ಖಿಲಾಫತ್ ನಾಮಾ ದಿಕ್ಷೆ ಪ್ರಮಾಣ ಪತ್ರವನ್ನು ಶಹಾ ಕಾಸಿಮ ಖಾದ್ರಿರಿಂದ ಪಡೆದುಕೊಂಡು ದರ್ಗಾದ ಸಜ್ಜಾದಾ ನಸಿನರಾದರು.[೬೩]

ಅಬ್ದುಲ್ ಕಾದಿರರವರು ಎರಡು ಆಳ್ವಿಕೆಯನ್ನು ನೋಡಿದರು, ಎರಡನೆಯ ಇಬ್ರಾಹಿ ಆದಿಲ್‌ಶಾಹನ ಕಾಲ ಮತ್ತು ಮಹಮ್ಮದ ಆದಿಲ್‌ಶಾಹನ ಕಾಲ. ಇವರು ಬಿಜಾಪುರದಲ್ಲಿಯೇ ವಿಧಿವಶರಾದರು. ಇವರ ಮರಣದ ದಿನಾಂಕವನ್ನು ಎಲ್ಲೂ ದಾಖಲಾಗಿಲ್ಲ ಇವರ ಮರಣದ ಕೇಲವೆ ತಿಂಗಳಲ್ಲೇ ಇವರ ಪತ್ನಿಯಾದ ಬೀಬಿ-ಬೀನಾ ಸಹ ತೀರಿಕೊಂಡರು. ಇವರನ್ನು ತಮ್ಮ ತಂದೆಯಾದ ಶಹಾ ಇಸ್ಮಾಯಿಲ್ ಖಾದ್ರಿಯವರ ಸಮಾಧಿಯ ಹತ್ತಿರ ಸಮಾಧಿ ಮಾಡಲಾಗಿದೆ.[೬೪] ಇವರ ನಾಲ್ಕು ಜನ ಮಕ್ಕಳಾದ, ಸೈಯದ ಶಮಶೋದ್ದೀನ್, ಸೈಯದ ಇಸ್ಮಾಯಿಲ್, ಸೈಯದ ಮೊಹಿಯುದ್ದೀನ್, ಸೈಯದ ಮುಸ್ತಫಾ. ಇವರಲ್ಲಿ ಜೇಷ್ಟ ಪುತ್ರನಾದ ಶಮಶೋದ್ದೀನನರು ದರ್ಗಾದ ಸಜ್ಜಾದ ನಸೀನರಾಗಿ, ಶಿಷ್ಯಂದಿರನ್ನು ಮಾರ್ಗದರ್ಶವನ್ನು ಮುಂದುವರಿಸಿಕೊಂಡು ಹೋದರು. ಇವರು ಸಹ ಉತ್ತಮ ಜ್ಞಾನವುಳ್ಳವರು ಹಾಗೂ ಪಂಡಿತರಾಗಿದ್ದರು.[೬೫]

೩. ಶಾಹ ಅಬ್ದುಲ್ ರಜಾಕ ಖಾದ್ರಿ :

ಇವರು ರಕ್ತ ಸಂಬಂಧದಿಂದಲೂ ಮತ್ತು ಅಧ್ಯಾತ್ಮಿಕ ಸಂಬಂಧದಿಂದಲೂ ಅಬಲ್ ಹಸನ ಖಾದ್ರಿಯವರಿಗೆ ಸಂಬಂಧಿಯಾಗಬೇಕು.[೬೬] ಇವರು ಇಬ್ರಾಹಿಂ ಆದಿಲ್‌ಶಾಹನ ಆಳ್ವಿಕೆಯ ಕೊನೆಯ ಹಂತದಲ್ಲಿ ಬಗ್ದಾದಿನಿಂದ ಬಿಜಾಪುರಕ್ಕೆ ಆಗಮಿಸಿದರು.[೬೭] ಇವರೊಂದಿಗೆ ಅಬೆಸೆನಿಯಾದ ಖಾನ ಮಹಮ್ಮದ ಬಿಜಾಪುರಕ್ಕೆ ಬಂದು, ಆದಿಲ್‌ಶಾಹಿ ರಾಜದರ್ಬಾನಲ್ಲಿ ಸೇವೆ ಮಾಡಿ ಸ್ವಲ್ಪ ಸಮಯದಲ್ಲಿಯೇ ಮಂತ್ರಿಯಾದ. ಆದರೂ ಇವನ ಸಂಬಂಧ ಅಬ್ದಲ್ ರಾಜಾಕರೊಂದಿಗೆ ಮೊದಲಿನಂತೆಯೇ ಇತ್ತು. ಶೇಖ ಇಬ್ರಾಹಿಮ ಬಗ್ದಾದಿಯವರ ಸಹಾಯದಿಂದ ಇವರು ಖಾದ್ರಿ ಪಂಥ ಪ್ರವೇಶಿಸಿದರೂ ಸಹ ಇವರು ತಮ್ಮ ಕಕ್ಕನಾದ ಶಾಹ ಮುಸ್ತಫಾ ಖಾದ್ರಿಯವರ ಶಿಷ್ಯರಾದರು.[೬೮] ಇವರು ಅಧ್ಯಾತ್ಮದ ಜ್ಞಾನವನ್ನು ಪಡೆದರು. ಇವರಡೆಗೆ ಬಹಳಷ್ಟು ಜನರು ಬೇಟ್ಟಿ ನೀಡಿ ಮಾರ್ಗದರ್ಶನ ಪಡೆದುಕೊಂಡರು. ಜಾತಿ ಬೇದವಿಲ್ಲದೆ ಇವರು ಎಲ್ಲ ಜಾತಿಯ ಜನರ ಸುಧಾರಣೆಗಾಗಿ ಶ್ರಮಿಸಿದರು.

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಅಬ್ದುಲ್ ರಜಾಕ ಖಾದ್ರಿಯವರು ಕ್ರಿ.ಶ. ೧೬೪೧ ರಲ್ಲಿ ವಿಧಿವಶರಾದರು.[೬೯] ಖುವಾರಿಕ-ಇ-ರಜ್ಜಾಖಿಯಾ ಎಂಬ ಗ್ರಂಥದಲ್ಲಿ ಇವರ ಮರಣ ದಿನಾಂಕವನ್ನು (ಕ್ರಿ.ಶ. ೧೬೬೦-೬೧) ಎಂದು ದಾಖಲಿಸಲಾಗಿದೆ.[೭೦] ಈ ಅಂಶವನ್ನು ನಂಬುವುದಾದರೆ ಇವರ ಮರಣ ಕಾಲ ಎರಡನೆಯ ಅಲಿ ಆದಿಲ್‌ಶಾಹನ ಆಳ್ವಿಕೆಯ ಕಾಲ (ಕ್ರಿ.ಶ. ೧೬೫೭-೧೬೭೨) ಎನ್ನಬೇಕಾಗುತ್ತದೆ. ಬಿಜಾಪುರದಲ್ಲಿಯೇ ಇವರ ಸಮಾಧಿ ಇದೆ. ಇವರ ಸಮಾಧಿಯನ್ನು ಇವರ ಶಿಷ್ಯನಾದ ಖಾನ ಮಹಮ್ಮದ ನಿರ್ಮಿಸಿದ, ಪಕ್ಕದಲ್ಲೆ ಇವನ ಗೋರಿಯು ಇದೆ.[೭೧] ಈ ಸಮಾಧಿಯ ಮೇಲ ಸುಂದರವಾದ ಗುಮ್ಮಟ ಇದೆ. ಈ ಸಮಾಧಿಯ ಎಡಗಡೆ ಅಬ್ದಲ್ ರಜಾಕ ಖಾದ್ರಿಯವರ ಹೆಂಡತಿಯ ಸಮಾಧಿ ಇದೆ. ಪೂರ್ವಕ್ಕೆ ಇವರ ಶಿಷ್ಯನಾದ ಅಬ್ದಲ್ ರಜಾಕ ಖಾದ್ರಿ ಉರ್ಫ ಶಹಾ ಹಜರತರ ಗೋರಿಯಿದೆ. ಇವರ ಮತ್ತೊರ್ವ ಶಿಷ್ಯನೆಂದರೆ ಶಹಾ ಮುರಾದ ಬಿಜಾಪುರದಲ್ಲಿ ಇವರ ಸಮಾಧಿ ಶಹಾ ಹಾಶೀಮರ ಸಮಾಧಿಯ ಬದಿಯಲ್ಲಿದೆ.[೭೨]

೪. ಮೀರಾನ್ ಸೈಯದ ಶಹಾ ಮುಸ್ತಫಾ ಖಾದ್ರಿ :

ಬದ್ರುದ್ದಿನ್ ಹಬೀಬುಲ್ಲಾರ ಕೊನೆಯ ಪುತ್ರರಾದ ಶಹಾ ಮುಸ್ತಫಾರು ಎರಡನೆಯ ಇಬ್ರಾಹಿ ಮತ್ತು ಮಹಮ್ಮದ ಆದಿಲ್‌ಶಾಹರ ಕಾಲದಲ್ಲಿಯೇ ಖಾದ್ರಿ ಪಂಥದ ಪ್ರಸಿದ್ಧ ಸೂಫಿಯಾಗಿದ್ದರು.[೨೩] ಇವರು ತಮ್ಮ ಬಾಲ್ಯಾವಸ್ಥೆಯನ್ನು ಬೀದರಿನಲ್ಲೆ ಕಳೆದರು, ಅಲ್ಲಿ ಅವರು ಧಾರ್ಮಿಕ ಮತ್ತು ತಾತ್ವಿಕ ಶಿಕ್ಷಣವನ್ನು ತಮ್ಮ ಕುಟುಂಬದ ಹಿರಿಯರಾದ ಕಾಕಾ ಮತ್ತು ಅಣ್ಣನಿಂದ ಪಡೆದರು. ಇವರ ತಂದೆ ಇವರನ್ನು ಖಿಲಾಫತ ನಾಮಾ ಮತ್ತು ಶಿಷ್ಯರನ್ನು ಪಡೆಯಲು ಅನುಮತಿಸಿದರು.

ಇವರು ದೈವಿಕ ಜ್ಞಾನ ಪಡೆದ ನಂತರ ಮುಸ್ತಫಾರವರು ಎಲ್ಲವನ್ನು ತ್ಯಜಿಸಿ ಒಂಟಿ ಜೀವನ ಸಾಗಿಸಿ ಸನ್ಯಾಸಿಯಂತೆ ಬದುಕಿದರು. ನಂತರ ತನ್ನ ಅಣ್ಣನಾದ ಶಹಾ ಅಬುಲ್ ಹಸನರೊಂದಿಗೆ ಬೀದರ ತೊರೆದು ಬಿಜಾಪುರಕ್ಕೆ ಆಗಮಿಸಿದರು.[೨೪] ಇಲ್ಲಿಯೂ ಸಹ ಅವರು ಒಂಟಿ ಬದುಕನ್ನು ಸಾಗಿಸುತ್ತಿದ್ದರು. ಇವರಲ್ಲಿದ್ದ ದಯಾಳುತನ ಮತ್ತು ಪಾವಿತ್ರತೆ ಸಮಾಜದ ಬೇರೆ ಬೇರೆ ಜಾತಿಯ ಜನರನ್ನು ತಮ್ಮತ್ತ ಸೆಳೆಯುವಲ್ಲಿ ಸಫಲರಾದರು. ೧೩ನೆ ಶಾಬಾನ ತಿಂಗಳಲ್ಲಿ ಇವರು ವಿಧಿವಶರಾದರು. ಇವರ ಮರಣದ ವರ್ಷದ ದಾಖಲೆ ಸಿಗುವುದಿಲ್ಲ. ಅಲ್ಲಾಪುರದ ದ್ವಾರದ ಹತ್ತಿರ ಅಂದರೆ ಬಿಜಾಪುರದ ಹೊರ ವಲಯದಲ್ಲಿ ಇವರ ಸಮಾಧಿ ಇದೆ.[೨೫]

೫. ಶಹಾ ಹಾಸಿಂಪೀರ ಆಳವಿ :

ಮಹಮ್ಮದ ಆದಿಲ್‌ಶಾಹನ ಕಾಲದ ಇನ್ನೊಬ್ಬ ಪ್ರಸಿದ್ಧ ಸೂಫಿಯಂದರೆ, ಶಹಾ ಹಾಸಿಂಪೀರರವರು. ಇವರು ಈ ಕಾಲದ ಉನ್ನತ ಮಟ್ಟದ ಸೂಫಿಗಳಾಗಿದ್ದರು. ಇವರು ಜನಸಾಮಾನ್ಯರಲ್ಲಿ ಹಾಗೂ ಕೆಳವರ್ಗದ ಜನರಲ್ಲಿ ಅತ್ಯಂತ ಜನಪ್ರಿಯ ಸೂಫಿಗಳಾಗಿದ್ದರು. ಶಹಾ ಹಾಸಿಂಪೀರರು ಗುಜರಾತದಿಂದ ಬಿಜಾಪುರಕ್ಕೆ ಎರಡನೆಯ ಇಬ್ರಾಹಿಂ ಆದಿಲ್‌ಶಾಹನ ಕೊನೆಯ ಕಾಲದಲ್ಲಿ ಆಗಮಿಸಿದರು. ಇವರು ಸತ್ತಾರಿ ಪಂಥಕ್ಕೆ ಸಂಬಂಧಿಸಿದವರಾಗಿದ್ದರು. ಇವರು ಅತ್ಯಂತ ಸರಳ ಜೀವನವನ್ನು ನಡೆಸುತ್ತಿದ್ದರಿಂದ ಮತ್ತು ಉದಾರವಾದ ನೀತಿಯಿಂದ ಇವರು ಬಿಜಾಪುರದಲ್ಲಿ ಬಹಳಷ್ಟು ಪ್ರಸಿದ್ಧಿಯನ್ನು ಪಡೆದರು. ಶಹಾ ಹಾಸಿಂಪೀರರು ದೀನದಲಿತರ ಹಾಗೂ ಬಡವರ, ನಿರ್ಗತಿಕರಿಗೆ ಸಹಾಯ ನೀಡುತ್ತಿದ್ದರು. ಶಹಾ ಮುರಾದ-ಬಿನ್-ಸಯೀದ ಜಲಾಲ ತನ್ನ ಗ್ರಂಥವಾದ "ಮಕ್ಸದ-ಅಲ್-ಮುರಾದ" ದಲ್ಲಿ ಈ ರೀತಿಯಾಗಿ ಬರೆದಿದ್ದಾರೆ, "ಪ್ರತಿದಿನ ಅನೇಕ ಜನರು ಇವರ ಹತ್ತಿರ ಸಹಾಯಕ್ಕಾಗಿ ಬರುತ್ತಿದ್ದರು, ಇವರು ಪ್ರತಿಯೊಬ್ಬರಿಗೂ ಸಹಾಯ ಹಸ್ತ ನೀಡಿ ಅವರಿಗೆ ಉದ್ಯೋಗವನ್ನು ಕಲ್ಪಿಸಿಕೊಡುತ್ತಿದ್ದರು. ಅವರ ಬ್ಗೆ ದಿನ ವಿಚಾರಿಸುತ್ತಿದ್ದರು. ಶಹಾ ಹಾಸಿಂಪೀರರು ಉನ್ನತ ಅಧಿಕಾರಿಗಳಿಗೆ ಪತ್ರವನ್ನು ಬರೆದು ಅನೇಕ ಜನರ ನೌಕರಿಗಾಗಿ ಮನವಿಯನ್ನು ಮಾಡುತ್ತಿದ್ದರು. ಹೀಗಾಗಿ ಶಹಾ ಹಾಸಿಂಪೀರರವರು ದರ್ಬಾರ ಮತ್ತು ಜನಸಾಮಾನ್ಯರ(ಕೆಳವರ್ಗ) ಮಧ್ಯವರ್ತಿಯಾಗಿ ಅನೇಕ ಜನರಿಗೆ ಉದ್ಯೋಗವನ್ನು ಕೊಡುಸುವಲ್ಲಿ ಸಫಲರಾದರು. ಇವರು ದರ್ಬಾರ ಮತ್ತು ಜನಸಾಮಾನ್ಯರ ನಡುವೆ

ಸಂಬಂಧವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು. ಜುಬೇರಿ ದಾಖಲೆಯ ಪ್ರಕಾರ ಎರಡನೆಯ ಇಬ್ರಾಹಿಮ ಆದಿಲ್‌ಶಾಹ ಮತ್ತು ಮಹಮ್ಮದ ಆದಿಲ್‌ಶಾಹ ಇಬ್ಬರು ಹಾಸಿಂಪೀರರ ಬಗ್ಗೆ ಅಪಾರವಾದ ಗೌರವ ಮತ್ತು ಭಕ್ತಿಯನ್ನು ಇಟುಕೊಂಡಿದ್ದರು. ಮಹಮ್ಮದ ಆದಿಲ್‌ಶಾಹನು ಬಿಜಾಪುರದ ಎಲ್ಲಾ ಸೂಫಿಗಳಲ್ಲಿ ಶಹಾ ಹಾಸಿಂಪೀರರು ಸರ್ವಶ್ರೇಷ್ಠರೆಂದು ಘೋಷಿಸಿದ್ದನು. ಹಾಗೂ ಮಹಮ್ಮದನು ರಾಜ್ಯದ ಪ್ರಮುಖ ವಿಷಯಗಳನ್ನು ಅವರ ಜೊತೆಯಲ್ಲಿ ಚರ್ಚಿಸುತ್ತಿದ್ದನು.[೭೬] ಅಲ್ಲದೇ ಗೋಳಗುಮ್ಮಟ್ಟ ಕಟ್ಟುವ ಸಮಯದಲ್ಲಿಯೂ ಸಹ ಅವರ ಸಲಹೆಗಳನ್ನು ತೆಗೆದುಕೊಂಡಿದ್ದನು. ಮಹಮ್ಮದ ಆದಿಲ್‌ಶಾಹನು ತನ್ನ ಗೋರಿಯನ್ನು ಸಹ ಇವರ ಗೋರಿಯ ಹತ್ತಿರದಲ್ಲಿ ಕಟ್ಟಿಸಿದನು. ಇಬ್ರಾಹಿಮ ಆದಿಲ್‌ಶಾಹ ಮತ್ತು ಮಹಮ್ಮದ ಆದಿಲ್‌ಶಾಹರು ಸಾಂದರ್ಭಿಕವಾಗಿ ಇವರ ಖಾನಕಾಹಕ್ಕೆ ಬೇಟ್ಟಿಯನ್ನು ನೀಡುತ್ತಿದ್ದರು. ಹೀಗಾಗಿ ಸೂಫಿ ಮತ್ತು ದರ್ಬಾರದ ನಡುವೆ ಒಳೆಯ ಬಾಂಧವ್ಯ ಇತ್ತು ಎನ್ನಬಹುದು. ಶಹಾ ಹಾಸಿಂಪೀರರ ಸರದಾರರ ಮತ್ತು ದರ್ಬಾರಿನ ಸಂಬಂಧದಿಂದಾಗಿ ಬಡಜನರ ಬಗ್ಗೆ ರಾಜ್ಯವು ಗಮನಹರಿಸುತ್ತಿತ್ತು. ಕ್ರಿ.ಶ. ೧೬೬೪ ರಲ್ಲಿ ರಚನೆಯಾದ "ಗಂಜ-ಇ-ಅಸರಾರ್" ಗ್ರಂಥದ ದಾಖಲೆಯ ಪ್ರಕಾರ ಹಾಸಿಂಪೀರರ ಅನುಯಾಯಿಗಳು ಸುಮಾರು ೫,೫೦೦ ಜನರು ಇದರ ಲಾಭ ಪಡೆದು ನೌಕರಿಯಲ್ಲಿದ್ದರು. ಇವರ ಖಾನಕಾಗಳಿಗೆ ಅನ್ಯಧರ್ಮಿಯರು ಭೇಟ್ಟಿ ನೀಡಿ ಅಧ್ಯಾತ್ಮಿಕ ಜ್ಞಾನವನ್ನು ಪಡೆಯುತ್ತಿದ್ದರು.[೭೭] ಈ ಖಾನಕಾಗಳಿಗೆ ಜಾತಿಬೇಧ-ಬಡವ ಶ್ರೀಮಂತರೆನ್ನದೆ ಎಲ್ಲರು ಭೇಟ್ಟಿನೀಡಿ ಆರ್ಶಿವಾದ ಪಡೆಯುತ್ತಿದ್ದರು. ಸ್ತ್ರೀಯರು ಸಹ ಖಾನಕಾಗಳಿ ಭೇಟ್ಟಿ ನೀಡುತ್ತಿದ್ದರು, ಅದರಲ್ಲಿ ಅನೇಕ ಜನರು ಈ ಸೂಫಿಯ ಮುರಿದ(ಶಿಷ್ಯ)ರಾಗುತ್ತಿದ್ದರು. ಹೀಗಾಗಿ ಇವರ ಕಾಲದಲ್ಲಿ ಧಾರ್ಮಿಕ ಸಾಮರಸ್ಯದ ಸಮಾಜ ನಿರ್ಮಾಣವಾಗಿದ್ದನು ನೋಡಬಹುದು.

೬. ಅಮೀನುದ್ದೀನ್ ಆಲಾ :

ಅಮೀನುದ್ದೀನ ಆಲಾರವರು ಕ್ರಿ.ಶ. ೧೫೯೭ ರಲ್ಲಿ ಜನ್ಮತಾಳಿದರು, ಅದೇ ವರ್ಷದಲ್ಲಿ ಅವರ ತಂದೆ ಬರಹಾನುದ್ದೀನ ಜಾನಮರು ತೀರಿಕೊಂಡರು. ಅಮೀನುದ್ದೀನ ಆಲಾರ ತಂದೆಯ ಪ್ರಮುಖ ಶಿಷ್ಯರಾದ ಮಹಮ್ಮದ ಖುಶದಹಾನ, ಸೈಯದ ದಾವಲ ಮತ್ತು ಸೈಯದ ಖುದಾವಂದ ಶಹಾ ಇವರು ಅಮೀನುದ್ದೀನರನ್ನು ತಮ್ಮ ಆಶ್ರಯದಲ್ಲಿ ಬೆಳೆಸಿದರು.[೭೮] ೧೭ನೆ ಶತಮಾನದ ಮೊದಲಾರ್ಧದಲ್ಲಿ ಅಮೀನುದ್ದೀನ್‌ರ ಬಗ್ಗೆ ನಿಖರವಾದ ಮಾಹಿತಿ ದೊರೆತಿಲ್ಲವಾದರೂ ಇವರು ಎರಡನೆಯ ಇಬ್ರಾಹಿಮ ಮತ್ತು ಮಹಮ್ಮದ ಆದಿಲ್‌ಶಾಹರೊಡನೆ ಸಂಪರ್ಕ ಹೊಂದಿರಲಿಲ್ಲವೆಂಬುದು ಖಚಿತವಾಗಿದೆ. ಇವರ ಪ್ರಾರಂಭಿಕ ಜೀವನದ ಬಗ್ಗೆ ಒಂದೆರಡು ಕಡೆ ಉಲ್ಲೇಖವಾಗಿದ್ದೆಂದರೆ, ಇವರು ಸರಿಸುಮಾರು ೧೨ ವರ್ಷಗಳಲ್ಲಿ ಧ್ಯಾನಾಸಕ್ತರಾಗಿದ್ದರೆಂಬುದು ಮತ್ತೊಂದು ದಾಖಲೆ ಪ್ರಕಾರ ಇವರು ಬಾಲ್ಯಾವಸ್ಥೆಯಲ್ಲಿ ತಮ್ಮ ತಂದೆಯವರ ಗೋರಿಯ ಬಳಿಯೇ ಇರುತ್ತಿದ್ದರು.[೭೯] ಮುಂದೆ ಬೆಳೆದಂತೆಲ್ಲಾ ಒಂದು ಬೆಳದಿಂಗಳ ರಾತ್ರಿಯಲ್ಲಿ ಇವರು ತಮ್ಮ ಶಿಷ್ಯಂದಿರಿಗೆ ಸಾರಿದ್ದೆನೆಂದರೆ, ಅಲ್ಲಾಹನೊಂದಿಗೆ ಸಂಪರ್ಕ ಹೊಂದಲು ಸಾಧ್ಯವಿದೆ ಇದಕ್ಕಾಗಿ ತನ್ನತನವನ್ನು

ತೊರೆಯಬೇಕಾಗುವುದು ಎಂದರು. ಮುಂದೆ ಇವರ ಪ್ರಭುತ್ವ ಬೆಳೆಯಲಾರಂಭಿಸಿ ಇವರ ಶಿಷ್ಯರಿಗೆ ಕೇವಲ ಗುರು (ಪೀರ) ಆಗದೇ ದೈವಿಶಕ್ತಿ ಹೊಂದಿದವರಾಗಿದ್ದರು.

ಅಮೀನುದ್ದೀನ ಆಲಾರ ಸಿದ್ಧಾಂತಗಳು ಕ್ರಮಬದ್ಧವಾದ ರೀತಿಯಲ್ಲಿ ದಾಖಲಾಗಿಲ್ಲ. ಆದರೆ ತಂದೆ ಬುರಾನೂದ್ದೀನರ ನಡೆ–ನುಡಿಗಳು, ಅಧ್ಯಾತ್ಮಿಕ ಚಟುವಟಿಕೆಗಳ ಬಗ್ಗೆ ಅವರ ಶಿಷ್ಯ ಮಹಮ್ಮದ ಖಶ ದಹಾನ ಬರೆದಿದ್ದಾರೆ. ಅದಾಗ್ಯೂ ಅಮೀನುದ್ದೀನ ಆಲಾರು ಕೇಲವು ದಖನಿ ಭಾಷೆಯ ಪುಸ್ತಕಗಳನ್ನು ರಚಿಸಿದ್ದಾರೆ. ನಿಜವಾಗಿ ಹೇಳಬೆಕೆಂದರೆ ಈ ಬರಹಗಳೆಲ್ಲವುಗಳನ್ನು ಅವರ ಶಿಷ್ಯರೆ ರಚಿಸಿದ್ದು, ಅಮೀನುದ್ದೀನರೂ ಆಧ್ಯಾತ್ಮಿಕ ಸ್ಥಿತಿಯಲ್ಲಿ ಹೇಳಿದ್ದೆಲ್ಲವನ್ನು ಇವರು ಬರೆದುಕೊಂಡಿದ್ದು. ಈ ಬರಹಗಳಲ್ಲಿ ಕೇಲವು ಸಂಪ್ರದಾಯಿಕ ಬರವಣಿಗೆಗಳಲ್ಲ ಉದಾಹರಣೆಗಾಗಿ ಇವರು ಮಸೀದಿಯನ್ನು ಎಂದೂ ಅಲ್ಲಾಹನ ಮನೆ ಎಂದು ಒಪ್ಪಲಿಲ್ಲ.[೮೦]

ಕೇಲವು ಶಿಷ್ಯರ ಪ್ರಕಾರ ಅಲ್ಲಾಹನಿಗಾಗಿ ಮಸಿದಿಯನ್ನು ನಿರ್ಮಿಸಿ ಅದರಲ್ಲಿ ಪ್ರಾರ್ಥಿಸುವುದೇ ಪರಮಧರ್ಮ ಇವರು ಮಸಿದಿಯಲ್ಲಿ ದಿನ ನಿತ್ಯ ಹಗಲು ರಾತ್ರಿ ಅಲ್ಲಾಹನಿಗೆ ಅವನ ಮನೆಯಲ್ಲಿ ಪ್ರಾರ್ಥಿಸುತ್ತಾರೆ. ಅಮೀನುದ್ದೀನರ ಪ್ರಕಾರ ಪ್ರಥಮ ಮಸೀದಿ ಎಂದರೆ ಸಂಪೂರ್ಣ ಸೃಷ್ಟಿ ದೆಹವೆಂದರೆ, ಮೆಹರಾಬ(ನಮಾಜ ಮಾಡುಲು ನಿಲ್ಲುವ ಸ್ಥಳ) ಹೃದಯವು ಒಂದು ಅಧ್ಯಾತ್ಯಿಕ ದೀಪ, ಇದನ್ನು ಎಣ್ಣೆ ಹಾಕಿ ಬೆಳಗಿಸಿದಾಗ ಪ್ರಾರ್ಥನೆ ಸಾಧ್ಯವಾಗುತ್ತದೆ. ಈ ಸಿದ್ಧಾಂತವು ಸಂಪ್ರದಾಯಿಕವಾದುದಲ್ಲ. ಇದಲ್ಲದೇ ಇನ್ನೊ ಅನೇಕ ಸಿದ್ಧಾಂತಗಳು ಅಲ್ಲಾಹನ ಅರಿವು ಅವನ ಪರಿಚಯ ಮುಂತಾದ ವಿಷಯಗಳ ಬಗ್ಗೆ ಅಮೀನುದ್ದೀನರು ಹೇಳಿದ್ದಾರೆ.[೮೧] ಇವರ ಸಿದ್ಧಾಂತಗಳೆಲ್ಲವೂ ತಮ್ಮ ತಂದೆ ಬುರಾನೊದ್ದೀನ ಜಾನಮರ ಸಿದ್ಧಾಂತಗಳೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದವು. ಬುರಾನುದ್ದೀನರ ಪ್ರಕಾರ ಒಬ್ಬ ಸೂಫಿಯು ಅಲ್ಲಾಹನ ಸಾಮಿಪ್ಯ ಪಡೆಯಬಹುದು.(ಮುಖಾಮ –ಖುರಬ್) ವಿನಹಃ ಅವನನ್ನು ಸಂಪರ್ಕಿಸಲು ಅಥವಾ ಅವನೇ ನನ್ನಲ್ಲಿದ್ದಾನೆಂದು ಹೇಳಲು ಸಾಧ್ಯವಿಲ್ಲ ಆದರೆ ಅಮೀನುದ್ದಿನರ ಪ್ರಕಾರ ಇದು ಅಲ್ಲಾಹನ ಸ್ಥಳ ಎಂದು ನಾನು ನೋಡಿದಾಗ ಎರಡು ಹೆಸರುಗಳು ಒಂದನ್ನೇ ಪ್ರತಿನಿಧಿಸುತ್ತವೆ. ನೀವು ಇದನ್ನು ತಿಳಿಯಿರಿ ಮತ್ತು ನಿಜಾರ್ಥದಲ್ಲಿ ಒಪ್ಪಿಕೊಳ್ಳಿ ಅಲ್ಲಹ ಮತ್ತು ಮಾನವ ಒಂದೇ ಆಗಿದ್ದಾರೆ. ಮನುಷ್ಯನ ರೂಪವೆಂದರೆ ಅಲ್ಲಾ ಅಲ್ಲಾಹನ ರೂಪವೆಂದರೆ ಮನುಷ್ಯ ಇವರಿಬ್ಬರದು ಒಂದೇ ಸ್ಥಳವಾಗಿದೆ.[೮೨]

ಇವರ ಶಿಷ್ಯ ವೃಂದದಲ್ಲಿ ಮುಸ್ಲಿಮರಲ್ಲದೆ, ಒಂದು ಲಕ್ಷಕಿಂತಲೂ ಹೆಚ್ಚು ಹಿಂದುಗಳಿದ್ದರು ಇವರ ಪರಮಾಪ್ತ ಶಿಷ್ಯರೆಂದರೆ ಖಾದಿರ ಲಿಂಗ.

ಸೂಫಿ ಸಾಹಿತ್ಯ ಃ

ಬಿಜಾಪುರದ ಸೂಫಿಗಳು ಕೂಡ ಸಾಹಿತ್ಯದಲ್ಲಿ ಹಿಂದೆಬಿದ್ದಿರಲಿಲ್ಲ. ಇವರು ಕೂಡ ಗದ್ಯ ಪದ್ಯಗಳ ಸಹಾಯಗಳಿಂದಾಗಿ ಸಾಹಿತ್ಯ ಮತಷ್ಟು ಪ್ರಸಾರವಾಯಿತು. ಇವರ ಬರವಣಿಗೆಗಳು ಇಸ್ಲಾಮಿನ ಆಧ್ಯಾತ್ಮಿಕ ಬೋಧನೆಗಳನ್ನು ಒಳಗೊಂಡಿತ್ತು. ಸೂಫಿಗಳು ಸ್ಥಳೀಯ ಭಾಷೆಯಲ್ಲಿ ಜನರಿಗೆ ಭೋಧಿಸುತ್ತಿದ್ದರು. ಇವರು

ಸರಳ ಮತ್ತು ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದ್ದರು. ಸೂಫಿಗಳು ತಮ್ಮ ಬರವಣಿಗೆಯಲ್ಲಿ ಜಾನಪದ ಗೀತೆಗಳು ರಚಿಸಿದ್ದರು. ಉದಾರಣೆಗಾಗಿ ಸುಹಾಗ ನಾಮಾ(ಮಧುಮಗಳ ಹಾಡು) ಶಾದಿ ಅಥವಾ ಲಗನ ನಾಮಾ (ಮದುವೆ ಹಾಡು) ಚರಕಾ ನಾಮಾ (ನೂಲುವ ಚಕ್ರದ ಹಾಡು) ಪಗಡಿ ಮತ್ತು ಆಂಕ್ ಮಚಾನಿ ಗೀತೆ, ಮುಂತಾದವುಗಳು.[೮೩] ಈ ಜನಪದ ಹಾಡುಗಳಿಂದ ಜನರು ಬಹಳ ವಿಷಯಗಳನ್ನು ತಿಳಿದು ಕೊಳುತ್ತಿದ್ದರಲ್ಲದೆ, ಅವುಗಳನ್ನು ತಮ್ಮ ದಿನ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು.

ಅಧ್ಯಾತ್ಮಿಕ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದವರೆಂದರೆ, 'ಶಹಾ ಜೈನ ಮುಖಬಿಲ' ಇವರು **ಮಹಮ್ಮದ ಆದಿಲ್‌ಶಾಹನ** ಕಾಲದಲ್ಲಿ ಅರೇಬಿಯಾದಿಂದ ಬಂದವರು. ಇವರು ಕಲಿಯುವಿಕೆಯಲ್ಲಿ ಮತ್ತು ಪುಸ್ತಕ ಪ್ರಿಯರು. ಜುಬೇರಿಯವರ ಪ್ರಕಾರ ಅವರ ಗ್ರಂಥಾಲಯದ ಸುಮಾರು ೮೦೦ ಹಸ್ತಪ್ರತಿಗಳಲ್ಲಿ ೩೦೦ಕ್ಕಿಂತ ಹೆಚ್ಚಿನ ಬರಹಗಳು ಇವರೇ ಬರೆದವುಗಳಾಗಿವೆ.[೮೪] ಹಜರತ ಮಿರಾಂ ಮಹಮ್ಮದ ಮುದರಿಸ್, ಸೈಯದ ಅಬ್ದುಲ್ ರಹಮಾನ ಮತ್ತು ಅವರ ಮಗನಾದ ಅಲಿ ಮಹಮ್ಮದರು ಶ್ರೇಷ್ಠ ಮತ್ತು ವಿದ್ವಾಂಸರು ಮತ್ತು ಬರಹಗಾರರು. ಇವರು ಅಧ್ಯಾತ್ಮಿಕ ಒಪ್ಪಂದಗಳ ಬಗ್ಗೆ ಅರೇಬಿಕ ಮತ್ತು ದಖನಿ ಭಾಷೆಯಲ್ಲಿ ಬರೆದಿದ್ದಾರೆ.[೮೫]

"ಶಹಾ ಅಮೀನುದ್ದೀನ್ ಆಲಾ". ಇವರು ಧಾರ್ಮಿಕ ಗುರುಗಳು ಮತ್ತು ಬರಹಗಾರರು. ಆಧ್ಯಾತ್ಮದ ವಿಷಯವಾಗಿ ಇವರು ೧೨ ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಂದರೆ ಇರ್ಶಾದಾತ್, ಖಯಾಲ–ಇ–ರಿಖ್ತಾ, ಮುಹಿಬನಾಮಾ, ಫುಲಬನ್, ಖುರ್ಬಿಯಾ, ರಿಸಾಲಾ–ಇ–ತಸ್ಸವುಫ್, ವಜುದಿಯಾ, ರಮಜುಲ್ ಸಾಲಿಕಿನ್, ಜವಾಹೀರ–ಉಲ್–ಅಸ್ರಾರ್, ಗುಪ್ತರ ಶಹಾ ಅಮೀನ, ಗಂಜ–ಇ–ಮಕ್ಫಿ ಮತ್ತು ಕಲೀಮತ–ಉಲ್–ಅಸ್ರಾರ್.[೮೬] ಈ ೧೨ ಕೃತಿಗಳಲ್ಲಿ ಕಲಿಮತ–ಉಲ್–ಅಸ್ರಾರ್, ಜವಾಹಿರ್–ಉಲ್–ಅಸ್ರಾರ್ ಮತ್ತು ಗಂಜ–ಇ–ಮಕ್ಫಿ ಈ ಕೃತಿಗಳಲ್ಲಿ ಲೇಖಕರು ದೇವರ ಏಕತೆ ಮತ್ತು ಅಧ್ಯಾತ್ಮದ ಸಮಸ್ಯೆಗಳನ್ನು ವಿವರಿಸಲು ಪ್ರಯತ್ನಪಟ್ಟಿದ್ದಾರೆ. ಈ ಕೃತಿಗಳೆಲ್ಲಾ ದಖನಿ ಭಾಷೆಯಲ್ಲಿದ್ದು, ಸಾಹಿತ್ಯಕಿಂತ ಧಾರ್ಮಿಕ ವಿಷಯಗಳನ್ನು ಚರ್ಚಿಸಿಲಾಗಿದೆ.

ಬಹಳಷ್ಟು ಸೂಫಿಗಳು ತಮ್ಮ ಕವನಗಳನ್ನು ಹಳ್ಳಿಗಾಡಿನ ಹೆಣ್ಣುಮಕ್ಕಳು ಮನೆಕೆಲಸಮಾಡುವಾಗ ಹಾಡುವ ಹಾಡುಗಳಿವೆ. ಉದಾಹರಣೆಗೆ, ಚಕ್ಕಿನಾಮಾವನ್ನು ಕಾಳುಕಡಿಗಳನ್ನು ಬೀಸುವಾಗ ಹಾಡುತ್ತಿದ್ದರು. ಚರಕಾನಾಮಾವನ್ನು ನೂಲನ್ನು ಎಳೆಯುವಾಗ, ದಾರ ತೆಗೆಯುವಾಗ ಹಾಡುತ್ತಿದ್ದರು. ಲೋರಿನಾಮಾವನ್ನು ಮಕ್ಕಳನ್ನು ಮಲಗಿಸಲು ಹಾಡುತ್ತಿದ್ದರೆ, ಶಾದಿನಾಮಾ ಮದುವೆಯ ಸಮಯದಲ್ಲಿ ಹಾಡುತ್ತಿದ್ದರು. ಅದರಂತೆ ಸುಹಾಗನಾಮಾ ಅಥವಾ ಮುತ್ತೈದೆಯ ಹಾಡು ಮತ್ತು ಸುಹೇಲಾ ಅಥವಾ ಪ್ರಶಂಸಿಯಹಾಡು. ಇವೆಲ್ಲವುಗಳು ಬಿಜಾಪುರದ ರಾಜ್ಯದಲ್ಲಿ ತುಂಬಾ ಪ್ರಸಿದ್ಧಿ ಪಡೆದಿದ್ದವು.[೮೭] ಪ್ರಮುಖವಾಗಿ ಎಂಟು ಚಕ್ಕಿನಾಮಾಗಳಲ್ಲಿ ಉಲ್ಲೇಖನಿಯಾವುದೆಂದರೆ, ಅಮೀನೊದ್ದೀನ ಆಲಾ ಖಲೀಫತ ಬಿಜಾಪುರ, ಶಾಹ ಹಾಷಿಮ ಖುದಾವಂದ ಹದಿ, ಮತ್ತೋರ್ವ ಶಿಷ್ಯರಾದ ಫಾರುಕಿ, ಈ ಸಾಹಿತ್ಯಕ್ಕೆ ಕೊಡುಗೆ ನೀಡಿದ ಮತ್ತೊಬ್ಬರೆಂದರೆ ಫಿಲ್–ಅಲ್–ಖಾದರಿ. ಸುಹಾಗನಾಮದ ಹಸ್ತಪ್ರತಿಯು ಶಹಾ ರಾಜು ಅವರ ಹೆಸರಿನಲ್ಲಿದೆ. ಇವರು ಆದಿಲ್‌ಶಾಹಿ ರಾಜ್ಯದ

ಕೊನೆಯ ಭಾಗದಲ್ಲಿ ಇದ್ದರು. ಅಮಿನೊದ್ದೀನ ಆಲಾರ ಮೊಮ್ಮಗರಾದ 'ಶಹಾ ಅಲಿ ಫೀರ್ ಹುಸೈನಿ' ಅವರು ರಚಿಸಿದ "ಸುಹೇಲಾನಾಮಾ"ದ ಎರಡು ಹಸ್ತಪ್ರತಿಗಳು ದೊರತಿವೆ. ಇದರಲ್ಲಿ ಹೆಣ್ಣುಮಕ್ಕಳು ಪ್ರವಾದಿ ಮಹಮ್ಮದರ ಹೆಸರಿನಲ್ಲಿ ಭಕ್ತಿ ಗೀತೆಗಳು ಹಾಡಿದ್ದು ಇದೆ.[೮೮]

ಅಕ್ಬರುದ್ದೀನ್ ಸಿದ್ದಿಕಿ ಯವರ ಪ್ರಕಾರ ಹೇಳುವುದಾದರೆ ಬುರಾನರ ಶಿಷ್ಯರಾದ ಬಹರಿಯವರು 'ಕಲೀಮತ್-ಅಲ್-ಹಕಿಯಾ' ಗ್ರಂಥವನ್ನು ಬರೆದರು. ಇದು ಪರ್ಶಿಯನ ಭಾಷೆಯ ಇರ್ಶಾದನಾಮಾದ ಸಂಕ್ಷಿಪ್ತ ರೂಪವಾಗಿದೆ.[೮೯] ಅದೇ ತರಹ ಚಿಶ್ತಿ ಬರಹಗಾರರಾದ ಮಹಮೂದ ಬಹರಿಯವರು "ಮನಲಗನ್" ಎಂಬ ಕವನ ಸಂಕಲನವನ್ನು ಬರೆದರು. ಇದು ದಖನಿ ಭಾಷೆಯಲ್ಲಿದೆ. ಇದನ್ನು ಅವರು "ಉರುಸೆ-ಇರಫಾನ" ಎಂಬ ಹೆಸರಿನಿಂದ ಪರ್ಶಿಯನ ಭಾಷೆಗೆ ಅನುವಾದಿಸಿದರು. ಇವರ ಇತರ ಕೃತಿಗಳೆಂದರೆ "ಬಂಗಾಬ ನಾಮಾ" ಮತ್ತಿ ಮಸನವಿಗಳು ಎರಡು ದಖನಿ ಭಾಷೆಯಲ್ಲಿದೆ.[೯೦] ಇನ್ನೊಬ್ಬ ಚಿಶ್ತಿ ಬರಹಗಾರರೆಂದರೆ 'ಮಹಮೂದ ಖುಶ ದಹಾನ' ಇವರು ಪರ್ಶಿಯನ ಭಾಷೆಯಲ್ಲಿ ಆಧ್ಯಾತ್ಮಿಕ ಕೃತಿಯಾದ 'ಮಾರಿಫತ್-ಅಲ್-ಸಲೂಕ್' ಬರೆದರು.[೯೧] ಇದು ಬಿಜಾಪುರದ ಎಲ್ಲ ಚಿಶ್ತಿ ಸೂಫಿಗಳ ಭೊದನೆಯ ಸಂಕ್ಷಿಪ್ತ ಸಾರವಾಗಿದೆ.[೯೨] ಇವರ ಇನ್ನಿತರ ಪರ್ಶಿಯನ ಕೃತಿಗಳೆಂದರೆ, ಅಸ್ರಾರ-ಅಲ್-ಹಕ ಮತ್ತು ಸಲಾತ-ಇ-ಆಶಿಖಿನ್ ಅಲ್ಲದೆ ದಖನಿ ಕೃತಿಗಳೆಂದರೆ ರಿಸಾಲಾ-ಇ-ಮುಖ್ತಸರ್ ದರ-ಬಾಬ-ಇ-ಕಸ್ಬ ಕರದಾನ-ಇ-ವಜುದಿಯಾ. ಇದು ಸಹ ಆಧ್ಯಾತ್ಮಿಕ ಕ್ರತಿಯಾಗಿದೆ. ಈ ಎಲ್ಲ ಬರಹಗಾರರು ಆಧ್ಯಾತ್ಮಿಕ ಬರವಣಿಗೆಗೆ ಕಾರಣಿಭೂತರಾದರು.

ಆ) ಸಂತರು :

ಆದಿಲ್‌ಶಾಹಿ ಸುಲ್ತಾನರ ಆಳ್ವಕೆಯಲ್ಲಿ ಹಿಂದೂ-ಮುಸ್ಲಿಮರು ಭಾವೈಕ್ಯತೆಯಿಂದಿದ್ದರು, ಅಂತೆಯೇ ಶಾಹಿ ಕಾಲದ ಸುಲ್ತಾನರ ದರ್ಬಾರನಲ್ಲಿ ಹಿಂದೂ ವ್ಯಕ್ತಿಗಳು ದೊಡ್ಡ ದೊಡ್ಡ ಸ್ಥಾನಗಳಲ್ಲಿದ್ದರು. ಇವರ ಆಶ್ರಯ ಹಾಗೂ ಪ್ರೋತ್ಸಾಹದಿಂದಾಗಿ ಅನೇಕ ಸಂತರು ಇಲ್ಲಿದ್ದು ಮಹಾಪುರುಷರಾದರು.

೧, ತಿಂಥಣಿ ಮೌನೇಶ್ವರರು :

" ಓಂ ಏಕ್ ಲಾಖ್ ಅಸ್ಸೀ ಹಜಾರ್

ಪಾಚೋಫಿರ್ ಪೈಗಂಬರ್ ಮೌನಾಧೀನ್

ಕಾಶಿಪತಿ ಗಂಗಾಧರ ಹರ ಹರ ಮಹಾದೇವ್"

ಸರ್ವ ಧರ್ಮ ಸಮನ್ವಯದ ಈ ಶೋಕ್ಲ, ಮೌನೇಶ್ವರರ ಮೂಲ ಮಂತ್ರ. ಹಿಂದೂ-ಮುಸ್ಲಿಂ ಭಾವೈಕ್ಯದ ಸಂಗಮ ಕ್ಷೇತ್ರವಾಗಿರುವ ಯಾದಗಿರ ಜಿಲ್ಲೆಯ ಸುರಪುರ ತಾಲ್ಲೂಕಿನ ತಿಂಥಣಿಯಲ್ಲಿ ಮೌನೇಶ್ವರರ ಆರಾಧನೆ ನಿತ್ಯವೂ ನಡೆಯುತ್ತದೆ. ಧಾರ್ಮಿಕ ಸೌಹಾರ್ದಕ್ಕೆ ಮೆರಗು ನೀಡುತ್ತಿರುವ ಮೌನೇಶ್ವರ

ದೇವಸ್ಥಾನದಿಂದಾಗಿ ತಿಂಥಣಿ ಗ್ರಾಮ ಹೆಸರುವಾಸಿ. ಜಾತಿ ಬೇಧ ಎಣಿಸದೇ ಆಗಮಿಸುವ ಭಕ್ತರ ಸಂಖ್ಯೆ ಅಪಾರ. ಹೀಗಾಗಿ ಕೋಮು ಸಾಮರಸ್ಯವನ್ನು ಇಲ್ಲಿ ಕಾಣಬಹುದು. ಅಲ್ಲದೇ ಇದು ಇಡೀ ಭಾರತದಲ್ಲೇ ವಿಶ್ವಕರ್ಮ ಸಮಾಜದ ಬೃಹತ್ ಮೇಳ. ಅದಕ್ಕೆಂದೇ ತಿಂಥಣಿ ಕ್ಷೇತ್ರಕ್ಕೆ 'ದಕ್ಷಿಣ ಕಾಶಿ' ಎಂಬ ಅಭಿದಾನವೂ ಇದೆ.[೩].

ಮೌನೇಶ್ವರರ ಜನನ :

ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ದೇವರ ಗೋನಾಳ ಎಂಬ ಗ್ರಾಮದ ಹಾವಪ್ಪ ಮತ್ತು ಹಾವಕ್ಕ (ಶೇಷಪ್ಪ ಮತ್ತು ಶೇಷಮ್ಮ) ಎಂಬ ವಿಶ್ವಕರ್ಮ ದಂಪತಿಗಳಿದ್ದರು. ಹಾವಕ್ಕ ಆದರ್ಶ ಗ್ರಹಣಿಯಾಗಿದ್ದಳು. ಅವಳು ಆ ಊರ ಸಮೀಪದಲ್ಲಿರುವ ಆದಿಲಿಂಗೇಶ್ವರ ದೇವರ ಭಕ್ತಳಾಗಿದ್ದಳು. ಅವಳು ದಿನಾಲು ಪ್ರಾತಃಕಾಲದಲ್ಲಿ ಬೇಗನೆ ಎದ್ದು ಮನೆಕೆಲಸ ಮುಗಿಸಿ ಸಮೀಪದಲ್ಲಿರುವ ಹಳ್ಳಕ್ಕೆ ಹೋಗಿ ಸ್ನಾನ ಮಾಡಿ ಆದಿಲಿಂಗೇಶ್ವರನಿಗೆ ಪೂಜೆ ಸಲ್ಲಿಸಿ ನೀರು ತರುತ್ತಿದ್ದಳು. ಹೀಗೆ ಹನ್ನೆರಡು ವರ್ಷ ಅವಳ ಪೂಜೆ ಸಾಗಿತ್ತು. ಆದರೆ ಅಷ್ಟು ವರ್ಷಗಳಾದರೂ ಅವಳಿಗೆ ಸಂತಾನ ಭಾಗ್ಯ ಲಭಿಸಿರಲಿಲ್ಲ. ಈ ಕಾರಣಕ್ಕಾಗಿ ಹಾವಕ್ಕನ ಅತ್ತೆ ಪೀಡಿಸಲು ಪ್ರಾರಂಭಿಸಿದಳು. ಇದೇ ಸಮಯಕ್ಕೆ ಹಾವಕ್ಕ ಊರ ಹೊರವಲಯದಲ್ಲಿರುವ ದೇವಸ್ಥಾನಕ್ಕೆ ಹೋಗುವುದನ್ನು ಕೆಲವರು ಅವಳ ಶೀಲದ ಬಗ್ಗೆ ಅಪಾರ್ಥ ಕಲ್ಪಿಸಿ ಅವಳ ಅತ್ತೆಗೂ ಹೇಳಿದರಂತೆ. ಅವಳು ಈ ವಿಷಯಕ್ಕೆ ಇನ್ನಷ್ಟು ಬಣ್ಣಕೊಟ್ಟು ತನ್ನ ಮಗನಿಗೆ ಹೇಳಿದಳು. ಇದನ್ನು ಪ್ರತ್ಯಕ್ಷವಾಗಿ ಪರೀಕ್ಷಿಸಬೇಕೆಂದ ಹಾವಪ್ಪನು ಹೆಂಡತಿಯು ಕೊಡ ತೆಗೆದುಕೊಂಡು ನೀರಿಗೆ ಹೋದ ತಕ್ಷಣವೇ ತಾನೂ ಅವಳನ್ನು ಹಿಂಬಾಲಿಸಿ ಹೋಗಿ ಗುಡಿಯ ಮೂಲೆಯೊಂದರಲ್ಲಿ ಅವಿತುಕೊಂಡು ನಿಲ್ಲಲು ಆಗ ಹಾವಕ್ಕ ದಿನನಿತ್ಯದಂತೆ ಹಳ್ಳದಲ್ಲಿ ಸ್ನಾನಮಾಡಿ ತುಂಬಿದ ಕೊಡದೊಂದಿಗೆ ಗುಡಿಯೊಳಗೆ ಪ್ರವೇಶ ಮಾಡಿ ದೇವರ ಹತ್ತಿರ ತನ್ನ ಕಷ್ಟಗಳನ್ನು ನಿಂತು ಪ್ರಾರ್ಥಿಸತೊಡಗಿದಳು. ನಾನು ಹನ್ನೆರಡು ವರ್ಷ ಪೂಜೆ ಮಾಡುತ್ತ ಯಾವ ಫಲಾಪೇಕ್ಷೆಯನ್ನು ಬಯಸಿರಲಿಲ್ಲ. ಆದರೆ ಈಗ ನನಗೆ "ಬಂಜೆ" ಎಂಬ ಅಪವಾದ ಬಂದಿದೆ. ಇದರಿಂದ ಪತಿಗೂ ಅತ್ತೆಗೂ ಬೇಡವಾಗಿದವಳಾಗಿದ್ದೇನೆ. ನನ್ನನ್ನು ಬಂಜೆ ಎಂಬ ಅಪವಾದದಿಂದ ಮುಕ್ತಗೊಳಿಸು. ಇಲ್ಲದಿದ್ದರೆ ನಾನು ಇಲ್ಲಿಯೇ ಪ್ರಾಣಾರ್ಪಣೆ ಮಾಡಿಕೊಳ್ಳುವೆ ಎಂದು ದುಃಖಮಾಡಿಕೊಂಡಳಂತೆ. ಆಗ ಗುಡಿಯಲ್ಲಿ ದೇವವಾಣಿಯು ಕೇಳಿಬಂತಂತೆ, ತಾಯಿ ನಿನ್ನ ಪರೀಕ್ಷೆ ಮುಗಿಯಿತು. ನಿನ್ನ ಭಕ್ತಿಗೆ ಒಲಿದು ಬೇಡಿದ ವರ ದಯಪಾಲಿಸಲು ಸಿದ್ಧನಾಗಿದ್ದೇನೆ ಏನನ್ನು ಬೇಕಾದರು ಬೇಡೆಂದು ಹೇಳಿದಂತಾಯಿತು. ಆಗ ಹಾವಕ್ಕ ನನಗೆ ಸಂತಾನ ಭಾಗ್ಯದ ಕೊರತೆ ಹೋಗಲಾಡಿಸಿ ಒಬ್ಬ ಸುಪುತ್ರನನ್ನು ಕರುಣಿಸಬೇಕೆಂದು ಬೇಡಿಕೊಂಡಳು ಅದಕ್ಕೆ ಪ್ರತಿಯಾಗಿ ದೇವವಾಣಿಯು "ಹಾವಕ್ಕ ನೀನು ನನ್ನ ಆಭರಣ ಶೇಷ, ನನ್ನ ಶಿರಸ್ಸಿನಿಂದ ಕಳಚಿ ಭೂಮಿಗಿಳಿದವಳು. ಅದಕ್ಕಾಗಿ ಬ್ರಹ್ಮನಿನಗೆ ಸಂತಾನ ಭಾಗ್ಯವನ್ನು ನೀಡುವ ಸಾಹಸ ಮಾಡಿಲ್ಲ. ನೀನು ಮಕ್ಕಳ ವ್ಯಾಮೋಹದಿಂದ ನನ್ನೆಡೆಗೆ ತಿರುಗಿ ಬರದೆ ಇರಬಹುದೆಂಬ ಕಲ್ಪನೆಯಿಂದ ಹಾಗೆ ಮಾಡಿರಬಹುದು. ಅದಕ್ಕಾಗಿ ನಿನ್ನ ಬೇಡಿಕೆಯನ್ನು ಪೂರೈಸಲು ನಾನೇ ನಿನ್ನ ಮಗುವಾಗಿ ಭೂಮಿಗಿಳಿದು ಬರುವೆನು. ಆದರೆ ನಾನು ಮಿಕ್ಕ

ಮಾನವ ಶಿಶುಗಳಂತೆ ಮಾಂಸಪಿಂಡವಾಗಿ ನಿನ್ನ ಉದರದಲ್ಲಿ ಬೆಳೆದು ಗರ್ಭದಿಂದ ಜನಿಸಲಾರೆನು. ಬ್ರಹ್ಮ ಸಂಕಲ್ಪಕ್ಕೆ ನಾನು ಹೊರತಾಗಿಲ್ಲ. ನಾಳೆ ಉಷಃಕಾಲಕ್ಕೆ ನಿನ್ನ ಮಗುವಾಗಿ ಬಂದು ಮಲಗಿರುತ್ತೇನೆ. ಮಾತೃಹೃದಯಿಯಾದ ನಿನ್ನ ಎದೆ ಹಾಲನ್ನೂ ಕುಡಿದು ಬೆಳೆಯುವೆನು. ನಿನ್ನ ವಂಶಕ್ಕೆ ಕೀರ್ತಿತರುವ ಮಹಾಶಕ್ತಿಯುತ ವ್ಯಕ್ತಿಯಾಗಿ ಬೆಳಗುವೆನು ನೀನಿನ್ನು ನಿಶ್ಚಿಂತೆಯಿಂದ ಮನೆಗೆ ಹೋಗು" ಎಂದು ದೇವವಾಣಿಯು ಶಾಂತವಾಯಿತು.[೬೪]

ಹಾವಪ್ಪನು ಈ ಆಶ್ಚರ್ಯಕರ ಘಟನೆಯನ್ನು ನೋಡಿ ಬೆರಗಾಗಿ ಮನೆಗೆ ಬಂದು ತಾಯಿಗೆ ನಡೆದ ಸಂಗತಿಯನ್ನು ಹೇಳುತ್ತಾನೆ. ಮರುದಿನ ಪರಮಾತ್ಮನು ಭಕ್ತಳಿಗೆ ಕೊಟ್ಟ ವಚನದಂತೆ ಹಾವಕ್ಕನ ಮಗ್ಗುಲಲ್ಲಿ ಮಗುವಾಗಿ ಮೂಡಿ ಬಂದು ಅವಳ ಎದೆ ಹಾಲುಣ್ಣತೊಡಗಿದನಂತೆ. ಹೀಗೆ ಆದಿಲಿಂಗೇಶ್ವರನ ಪೂಜೆಯಿಂದ ಪಡೆದ ಮಗುವಿಗೆ 'ಮೌನೇಶ್ವರ' 'ಮೋನಯ್ಯ' ಎಂದು ನಾಮಕರಣ ಮಾಡಿದರು. ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಸುತ್ತಮುತ್ತಲಿನ ಪ್ರದೇಶದ ಜಾನಪದದಲ್ಲೂ ಈ ಕಥೆಯು ಅಭಿವ್ಯಕ್ತವಾಗಿದೆ.[೬೫]

ಆದರೆ ಮೌನೇಶ್ವರನು ತಮ್ಮ ವಚನಗಳಲ್ಲಿ ತಮ್ಮ ಜನನವನ್ನು ಕುರಿತು

ಇಂದ್ರಿ ಸೂತಕದಿಂದ ಅಂದು ನಾ ಜನಿಸಿದೆ
ಎಂದು ನಾ ತೊಳೆಯಲೊ ಪ್ರಭುದೇವರೆ ನಾನು
ಬಂದಂಥ ಭವಕ್ಕೆ ಮಿತಿಯಿಲ್ಲ
ಹಂದಿಗಿಂತ ನಾನು ಕಡಿಮೆಯಯ್ಯಾ ಬಸವಣ್ಣ

ಎಂದು ಹೇಳಿ ತಾವು ಸಹ ಮಾನವರಂತೆ ತಂದೆ-ತಾಯಿಗಳ ಉದರದಿಂದ ಹುಟ್ಟಿಬಂದಿರುವುದಾಗಿ ಹೇಳಿದ್ದಾರೆ.[೬೬]

ಕಾಲ : ಮೌನೇಶ್ವರನ ಜೀವಿತದ ಕಾಲಾವಧಿಯನ್ನು ಹೇಳುವುದರಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಆದರೂ ಈಗ ದೊರೆತಿರುವ ಆಧಾರಗಳಿಂದ ಅವರ ಕಾಲವನ್ನು ಇಂತು ನಿರ್ಣಯಿಸಬಹುದಾಗಿದೆ.

ಚಿನ್ನದಗುಡಿ ಬೋಳಮಲ್ಲ ವಿರಚಿತ 'ಮೌನೇಶ್ವರ ಬಾಲಲೀಲೆ' ಎಂಬ ಗ್ರಂಥದಲ್ಲಿ ಮೌನೇಶ್ವರರು ೨೧೦೦ ವರ್ಷಗಳ ಕಾಲ ಬದುಕಿದ್ದರೆಂದು ಹೇಳುತ್ತಾರೆ. ಇನ್ನೂ ಕೆಲವರು ಇದೇ ಗ್ರಂಥದ ಒಂಬತ್ತನೆಯ ಅಧ್ಯಾಯದಲ್ಲಿ ಉಲ್ಲೇಖಿತವಾಗಿರುವಂತೆ ಅವರು ಕಲ್ಯಾಣದ ಬಸವೇಶ್ವರರ ಸಮಕಾಲೀನರೆಂದೂ ವ್ಯಕ್ತಪಟ್ಟಿರುವುದುಂಟು.

ಹೀಗೆ ಹಲವಾರು ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ, ನನ್ನ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ವಿವರಿಸಬಹುದು.

ವಿಜಾಪೂರ ಸುಲ್ತಾನ ಸಾಹೇಬಗೆ ಪಟ್ಟವಕಟ್ಟಿ

ಮೋನಯ್ಯನ ಕೇಳಿದರೆ ಅಯ್ಯ ಉತ್ತರ ಕೊಟ್ಟರು

ಈ ವಚನದಲ್ಲಿ ವಿಜಾಪುರದ ಸುಲ್ತಾನನಿಗೆ ಪಟ್ಟವ ಕಟ್ಟಿದ ಬಗ್ಗೆ ಹೇಳಲಾಗಿದೆ. ಬಹಮನಿ ಸಾಮ್ರಾಜ್ಯವು ಒಡೆದು ಐದು ಶಾಹಿ ಮನೆತನಗಳಾದ ನಂತರ ಈ ಮನೆತನವು ಯುಸುಫ ಆದಿಲ್‌ಖಾನನಿಂದ ಕ್ರಿ.ಶ. ೧೪೮೯ ರಲ್ಲಿ ಉದಯವಾಯಿತು. ಕ್ರಿ.ಶ.೧೫೮೦ ರಿಂದ ೧೬೨೬ರ ವರೆಗೆ ಆಳಿದ ಈ ಮನೆತನದ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲದಲ್ಲಿ ಮೌನೇಶ್ವರರು ಆಗಿಹೋಗಿರಬಹುದು. ಅವರ ಸೂಚನೆಯಂತೆ ಆದಿಲ್‌ಶಾಹಿ ಮನೆತನದವರು ತೊರವಿಯಲ್ಲಿ ಒಂದು ಗುಡಿಯನ್ನು ಕಟ್ಟಿಸಿದರೆಂದು ಪ್ರತೀತಿ ಇದೆ. ಈ ಗುಡಿಯನ್ನು ಈಗಲೂ ಅಲ್ಲಿ ಕಾಣಬಹುದು.

ಬಿಜಾಪುರದ ಆದಿಲ್‌ಶಾಹಿ ಮನೆತನದ ಸುಭೇದಾರನಾಗಿ ಲಕ್ಷ್ಮೇಶ್ವರದಲ್ಲಿ ಆಡಳಿತ ಮಾಡುತ್ತಿದ್ದ ಹಿರಿಯ ಅಂಕುಶಖಾನನನ್ನು ಕುರಿತು–

ಹಿರಿಯ ಅಂಕುಶಖಾನ ಸತ್ತಂದಿನ ಮಾತು

ಎಮ್ಮೆಯ ಬಸವಣ್ಣನ ತಮ್ಮ ಇಮ್ಮಡಿ ಬಸವಣ್ಣ ಡಂಗುರವ

ಸಾರಬೇಕೆಂದು ಚನ್ನಬಸವಣ್ಣ ಬಂದೀನಿ ಕಾಣಿರೋ

ಎಂದು ಹೇಳಿದ್ದಾರೆ. ಅಂಕುಶಖಾನನು ಕ್ರಿ.ಶ. ೧೫೭೦ ರಲ್ಲಿ ತನ್ನ ಸೈನ್ಯದೊಂದಿಗೆ ಆದವಾನಿಯ ಮೇಲೆ ದಂಡೆತ್ತಿ ಹೋಗಿದ್ದನು. ಈ ತನ್ನ ಎರಡು ಶಾಸನಗಳು ಲಕ್ಷ್ಮೇಶ್ವರದಲ್ಲಿವೆ. ಅವುಗಳ ಕಾಲ ಕ್ರಿ.ಶ. ೧೬೧೨ ಈ ಎರಡು ಶಾಸನಗಳಲ್ಲಿ ಒಂದು ಬಾವಿಯ ಉಲ್ಲೇಖಕ ಬರುತ್ತದೆ. ಅದರ ಉಲ್ಲೇಖವು ಮೌನೇಶ್ವರ ವಚನಗಳಲ್ಲಿ ಬರುತ್ತದೆ.[೯೭]

ಈ ಅಂಕುಶಖಾನನನ್ನು ಶಂಕರ ಕವಿಯು ತನ್ನ ಶರಣ ಮೋನಯ್ಯನ ಚರಿತ್ರೆಯಲ್ಲಿ ಹೀಗೆ ಹೇಳಿದ್ದಾನೆ:

ನಿಂತಿರಲಂಕುಶಖಾನ ದಾರುಣಿನಾದ

ಚಿಂತಿಸುತಲೆ ನಡೆತಂದು

ಅಂತರಮರ್ದವನ ಅನುಳ್ಳಕ್ಯಮಾಡಿದಾ

ಶಾಂತಗುಣೆಯ ಕಂಡನಾಗ

ದ್ಯಾಂಪುರ ಚನ್ನಕವಿಗಳು ತಮ್ಮ ಶ್ರೀ ಫಕೀರೇಶ್ವರ ಪುರಾಣದಲ್ಲಿ ಮೌನೇಶ್ವರರು ಖ್ವಾಜಾ ಅಮೀನುದ್ದೀನರ ಪರಮಾವತಾರವೆಂದು ಹೇಳಿರುವರು. ಇವರು ಶ್ರೀ ಫಕೀರೇಶ್ವರ ಗುರುಗಳು ಖ್ವಾಜಾ ಅಮೀನನ ಆವಸಾನ ಕಾಲದಲ್ಲಿ ಶ್ರೀ ಫಕೀರೇಶ್ವರು ನಿಮ್ಮ ಭೆಟ್ಟಿ ಯಾವಾಗ ಎನ್ನಲು ಅವರು

ಹೋಗುವೆನು ಮಹನೀಯ ಮುಂದಾ

ವಾಗ ನಿನ್ನಯ ದರ್ಶನದ ಸುಖ

ವಾಗುವದರಂ ನಿರನಿಪುದು ತಾವೆಂದು ವೆಸಗೊಳ್ಳಲು

ಓ ಗುರು ಫಕೀರೇಶನೇನಾ

ನೀಗ ಶಿವನಪ್ಪಣೆಯ ಮೇರೆಗೆ

ಹೋಗಿ ಮತ್ತೆಂಬರುವೆನೆಂತೆನೆ ಕೇಳು ಮನವಲರಿ ॥

ಶ್ರೀ ಫಕೀರೇಶ್ವರ ಸ್ವಾಮಿಗಳು ಕ್ರಿ.ಶ. ೧೫೭೦ ರಲ್ಲಿ ಜನಿಸಿದರೆಂದು ಅದೇ ಗ್ರಂಥದಲ್ಲಿ ಹೇಳಿದೆ. ಶಿರಹಟ್ಟಿಗೆ ಅವರು ಬರುವಷ್ಟರಲ್ಲಿ ಅವರಿಗೆ ೨೫-೩೦ ವರ್ಷಗಳು ಗತಿಸಿರಬೇಕು ಅಂದರೆ ಈ ಗುರುಶಿಷ್ಯರ ಸಮಾಗಮ ಕ್ರಿ.ಶ. ೧೬೦೦ ರಲ್ಲಿ ಇಲ್ಲವೇ ತದನಂತರ ಆಗಿರಬೇಕೆಂದೆನಿಸುತ್ತದೆ.

ಮೌನೇಶ್ವರರು ಲಕ್ಷ್ಮೇಶ್ವರದಲ್ಲಿ ತಾವು ಮಾಡಿದ ಅನೇಕ ಮಹತ್ವದ ಕಾರ್ಯಗಳನ್ನು ಪವಾಡಗಳನ್ನು ಕುರಿತು ತಮ್ಮ ವಚನಗಳಲ್ಲಿ ಮೇಲಿಂದ ಮೇಲೆ ಪ್ರಸ್ತಾಪಿಸುತ್ತಾರೆ. ಒಂದು ವಚನದಲ್ಲಿ,

ಕ್ಷಯನಾಮ ಸಂವತ್ಸರದಲ್ಲಿ ಆಡಿದ ಆಟ

ಲಕ್ಷ್ಮೇಶ್ವರದಲ್ಲಿ ಬಾವವುಳ್ಳರೆ ಭಕ್ತ ಒಲೆವುಳ್ಳರೆ ಲಿಂಗ

ಸ್ಥಾವರವುಳ್ಳರೆ ಗುರುಮೂರ್ತಿ ಮರ್ತ್ಯದ

ಗಾವಳಿಕೆ ಎಲ್ಲಿಯ ದೈವವೊ ಬಸವಣ್ಣ[೮೮]

ಎಂದು ಹೇಳಿರುವುದರಿಂದ ಈ ಕ್ಷಯನಾಮ ಸಂವತ್ಸರವು ಕ್ರಿ.ಶ. ೧೫೬೬ ಮತ್ತು ಕ್ರಿ.ಶ. ೧೬೨೬ ರಲ್ಲಿ ಹೀಗೆ ಎರಡು ಸಲ ಬರುತ್ತದೆ. ಮೇಲೆ ಹೇಳಿದ ಶ್ರೀ ಫಕೀರೇಶ್ವರರ ಉಲ್ಲೇಖವನ್ನು ಗಮನಿಸಿದಾಗ (ಕ್ರಿ.ಶ ೧೫೭೦) ಸುಮಾರು ಇದೇ ಕಾಲದಲ್ಲಿ ಅಂದರೆ ಕ್ರಿ.ಶ. ೧೬೨೬ ರಲ್ಲಿ ಬರುವ ಕ್ಷಯನಾಮ ಸಂವತ್ಸರದಲ್ಲಿ ಮೌನೇಶ್ವರರು ಬದುಕಿದ್ದು ತಮ್ಮ ಮಹಿಮೆಗಳನ್ನು ತೋರಿಸಿದರೆಂದು ಊಹಿಸಬಹುದಾಗಿದೆ.

ಇವುಗಳಲ್ಲದೆ, ಮೊಗಲ ದಂಡು ಬರುವುದನ್ನು, ಅಂದು ಭಾರತದಲ್ಲೆಲ್ಲ ಬರಗಾಲ ಬಿದ್ದಿರುವುದನ್ನು ಹಾಗೂ ಅಡವಿಯ ಸೋಮೆಶ, ಗಾಳಿಪೂಜಿಸಿದ್ಧ ಮುಂತಾದವರನ್ನು ನೆನೆದಿರುವ ಹಿನ್ನೆಲೆಯಲ್ಲಿ ಮತ್ತು ಅವರು ತನ್ನ ವಚನಗಳಲ್ಲಿ ಬಳಸಿದ ಭಾಷೆ ಶೈಲಿಗಳ ಹಿನ್ನಲೆಯಲ್ಲಿ ಮತ್ತು ಅವರು ಹದಿನಾರನೆಯ ಶತಮಾನದ ಆದಿ ಭಾಗದಲ್ಲಿ ಆಗಿ ಹೋಗಿರಬಹುದೆಂದು ಹೇಳಬಹುದು. ಅವರು ತಮ್ಮದೊಂದು ವಚನದಲ್ಲಿ

'ಆ ಪುತ್ರನ ಆಯುಷ್ಯ ತೊಂಬತ್ತು ವರುಷ ಮೂರುತಾಸಿಗೆ ನಿರ್ಮಿಸಿ ಕೊಟ್ಟಂಥ ಗುರುವಿನ ಗುತವನನರಿಯರು' ಎಂದು ಹೇಳಿರುವುದರಿಂದ ಅವರು ಕ್ರಿ.ಶ. ೧೫೭೦ ರಿಂದ ಕ್ರಿ.ಶ. ೧೬೬೦ ಅವಧಿಯಲ್ಲಿ ಜೀವಿಸಿದ್ದರೆಂದು ನಿಸ್ಸಂದೇಹವಾಗಿ ಹೇಳಬಹುದು.

೨. ರುಕ್ಮಾಂಗದ ಪಂಡಿತರು (ರೋಗಿ) :

ಬಿಜಾಪುರದ ಆದಿಲ್‌ಶಾಹಿ ಸುಲ್ತಾನರ ಆಳ್ವಿಕೆಯ ಕಾಲಕ್ಕೆ ಪಂಚ ಪಾವನರೂ ಸಾಧು ಪಂಚಕರೆನಿಸಿದ ಅವತಾರಿ ಪುರುಷರಾದ ಯೋಗಿ, ರೋಗಿ, ತ್ಯಾಗಿ, ಭೋಗಿ, ಜೋಗಿ ಎಂಬ ಅಭಿದಾನ ಹೊತ್ತು ಬಂದು ಭಕ್ತಜನ ಕೋಟಿಯನ್ನು ಉದ್ಧರಿಸಿ ಮೋಕ್ಷ ಹೊಂದಿದರು. ಅವರೇ ಬಿಜಾಪುರದ ಶ್ರೀ ರುಕ್ಮಾಂಗ ಪಂಡಿತರು, ಕಾಖಂಡಕಿಯ ಶ್ರೀ ಮಹಿಪತಿರಾಯರು, ಸುಕ್ಷೇತ್ರ ಯಾಳಗಿಯ ಶ್ರೀ ರಾಮಪ್ಪಯ್ಯನವರು, ಸಿಂದಗಿಯ ಶ್ರೀ ಜಕ್ಕಪ್ಪಯ್ಯನವರು, ಅಗರಖೇಡದ ಶ್ರೀ ಕೃಷ್ಣದ್ವೈಪಾಯನಾಚಾರ್ಯರು, ಹೀಗೆ ಈ ಪಂಚ ಮಹಾಪುರುಷರು ಬರಿನಿಮಿತ್ಯ ಮಾತ್ರಕ್ಕೆ ಅಲ್ಪಾವಧಿ ಸುಲ್ತಾನರ ಆಳ್ವಿಕೆಯ ಪದವಿಯಲ್ಲಿದ್ದು ಮುಂದೆ ತಮ್ಮ ಮುಂದಿನ ಮಹಾತ್ಕಾರ್ಯಕ್ಕಾಗಿಯೇ ಅವತರಿಸಿದ ಇವರು ಕಾರಣಾಂತರದಿಂದ ಪದ ತ್ಯಾಗ ಮಾಡಿ ತಮ್ಮ ಆಧ್ಯಾತ್ಮಿಕ ಜೀವನದಿಂದ ಪದ ತ್ಯಾಗ ಮಾಡಿ ತಮ್ಮ ಆಧ್ಯಾತ್ಮಿಕ ಜೀವನದಿಂದ ಸಾರ್ಥಕವಾದ ಪಾರಮಾರ್ಥವನ್ನು ಹೊಂದಿ ಪಂಚನಕ್ಷತ್ರ ಪುಂಜರೇ ಆಗಿ ಜ್ಯೋತಿಯಂತೆ ಪ್ರಕಾಶಮಾನರಾಗಿ ಬೆಳಗಿದರು.

ರುಕ್ಮಾಂಗ ಪಂಡಿತರ ಜನನ :

ಆದಿಲ್‌ಶಾಹಿ ರಾಜಧಾನಿಯಾದ ಬಿಜಾಪುರದಲ್ಲಿ ಕೃಷ್ಣಪಂಡಿತರು ಬಾದಶಹನ ನ್ಯಾಯಖಾತೆಯಲ್ಲಿ ಅಧಿಕಾರಿಯಾಗಿದ್ದರು. ಅವರ ಹೆಂಡತಿ ಲಕ್ಷ್ಮೀದೇವಿ. ಕೃಷ್ಣಪಂಡಿತರು ವಂಶಪಾರಂಪರಾಗತವಾಗಿ ಬಂದ ವೈದ್ಯಕೀಯ ವಿದ್ಯೆಯಲ್ಲಿ ನಿಷ್ಣಾತರಾಗಿದ್ದರು. ಬಿಡುವಿನ ವೇಳೆಯಲ್ಲಿ ಸ್ವಂತ ವೆಚ್ಚದಿಂದ ಔಷಧಿಗಳನ್ನು ಸಿದ್ಧಪಡಿಸಿ, ಬಡವರಿಗೆ ಪುಕ್ಕಟೆ ಚಿಕಿತ್ಸೆ, ಔಷಧಿ ಕೊಟ್ಟು ರೋಗಗಳನ್ನು ವಾಸಿ ಮಾಡುತ್ತಿದ್ದರು. ಬಡರೋಗಿಗಳ ಉಪಚಾರದಲ್ಲಿ ಲಕ್ಷ್ಮಿದೇವಿಯು ಭಾಗವಹಿಸಿ ಆನಂದಪಡುತ್ತಿದ್ದಳು.

ಅವರಿಗೆ ಸಂತಾನವಿಲ್ಲವೆಂಬ ಚಿಂತೆ ಇತ್ತು. ಹೆಂಡತಿಯ ಜೊತೆಗೆ ಪರಿಹಾರವೆಂದು ಕೃಷ್ಣಪಂಡಿತರು ಕುಟುಂಬ ಸಮೇತ ತೀರ್ಥಯಾತ್ರೆಗೆ ಹೊರಟರು. ಈ ಯಾತ್ರೆಯಲ್ಲಿ, ವಿರೂಪಾಕ್ಷ ದೇವರ ದರ್ಶನಾಶೀರ್ವಾದಗಳಿಗಾಗಿ ಪಂಪಾಕ್ಷೇತ್ರ(ಹಂಪಿ)ಕ್ಕೆ ಬಂದರು. ಅಲ್ಲಿ ಶ್ರೀ ಗೌರಾನಂದ ಯತಿಗಳ ದರ್ಶನ ಪಡೆದರು. ಕೃಷ್ಣಪಂಡಿತರು ಸದ್ಗತಿಯಾಗುವಚಿತೆ ತಮ್ಮನ್ನು ಅನುಗ್ರಹಿಸಬೇಕೆಂದು ಕೇಳಿಕೊಂಡರು, ಯತಿಗಳು ತಾಯೀ ಈಶ್ವರನು ನಿನ್ನ ಇಚ್ಚೆಯನ್ನು ಪೂರ್ಣಮಾಡುವನು ಹಿಡಿ ಎಂದು ಹೇಳಿ ಫಲಮಂತ್ರಾಕ್ಷತೆಗಳನ್ನು ಲಕ್ಷ್ಮೀದೇವಿಯ ಉಡಿಯಲ್ಲಿ ಹಾಕಿದರು.

ತೀರ್ಥಯಾತ್ರೆಯಿಂದ ಮರಳಿದ ಸ್ವಲ್ಪ ದಿನಗಳಲ್ಲಿ ಲಕ್ಷ್ಮೀದೇವಿಯವರಿಗೆ ಗರ್ಭಧಾರಣೆಯಾಯಿತು. ಮುಂದೆ ಒಂದು ಹೆಣ್ಣು ಮಗುವಿಗೆ ಜನ್ಮ ನೀಡಿದರು ಆ ಮಗುವಿಗೆ "ಭಾಗೀರಥಿ" ಎಂದು ಹೆಸರಿಟ್ಟರು. ಕೆಲಕಾಲದ ನಂತರ ಎರಡನೆಯ ಗರ್ಭಧಾರಣೆಯಾಗಿ ಗಂಡುಮಗುವನ್ನು ಕ್ರಿ.ಶ ೧೬೧೦ ರಲ್ಲಿ ಹೆತ್ತರು. ಈ ಮಗುವಿಗೆ "ರುಕ್ಮಾಂಗ" ಎಂದು ಹೆಸರಿಟ್ಟರು.[೯]

ರುಕ್ಮಾಂಗ ಪಂಡಿತರ ಬಾಲ್ಯ :

ರುಕ್ಮಾಂಗದರ ಬಾಲ್ಯಾವಸ್ಥೆಯಲ್ಲಿಯೇ ತಂದೆ-ತಾಯಿಯನ್ನು ಕಳೆದುಕೊಂಡರು, ಅಕ್ಕನಾದ ಭಾಗೀರಥಿಗೆ ಇವರ ಪಾಲನೆ ಪೋಷಣೆಯ ಹೊಣೆ ಬಿದ್ದಿತು. ಇವರಿಗೆ ವಿದ್ಯಾಭ್ಯಾಸದಲ್ಲಿ ಅಷ್ಟು ಆಸಕ್ತಿ ಇರಲಿಲ್ಲ. ತುಂಟ ಗೆಳೆಯರೊಡನೆ ಗೊಂದಲದ ಆಟ-ಪಾಠಗಳಲ್ಲಿಯೇ ಕಾಲ ಕಳೆಯುತ್ತಿದ್ದರು. ಇದೇ ಸಮಯದಲ್ಲಿ ಹಂಪಿ ಕ್ಷೇತ್ರದ ಶ್ರೀ ಗೌರಾನಂದ ಯತಿಗಳು ಕಾಶಿ ಕ್ಷೇತ್ರ ದರ್ಶನಕ್ಕೆಂದು ಹೋಗುವಾಗ ಇವರ ಮನೆಗೆ ಬಂದು ಮಕ್ಕಳನ್ನು ನೋಡಿಕೊಂಡು ಹೋಗಬೇಕೆಂದು ವಾಸ್ತವ್ಯ ಮಾಡಿದರು. ಮನೆಯಲ್ಲಿ ಅಲೆದಾಡುವ ಬಾಲಕ ರುಕ್ಮಾಂಗರನ್ನು ಕರೆದು ಅಂತಃಕರುಣ ಹೃದಯದಿಂದ ಬೆನ್ನ ಮೇಲೆ ಕೈಯಾಡಿಸಿ ಆಶೀರ್ವಾದಿಸಿದರು. ಇವರ ಹರಕೆಯಿಂದ ದಿನ ನಿತ್ಯದ ಜೀವನದಲ್ಲಿ ಅನೇಕ ಬದಲಾವಣೆಗಳಾದವು.

ವಿದ್ಯಾರ್ಜನೆ, ಯೋಗಸಾಧನೆ :

ಶ್ರೀ ಗೌರಾನಂದ ಯತಿಗಳ ಆಶೀರ್ವಾದದಿಂದ ಇವರಲ್ಲಿ ಅನೇಕ ಬದಲಾವಣೆಗಳಾದವು, ಇವರು ಅಭ್ಯಾಸಬಲದಿಂದ, ಯೋಗ ಸಾಧನೆಯಿಂದ, ಅವರಲ್ಲಿ ಹದಿನಾಲ್ಕು ವಿದ್ಯೆಗಳು, ಅರವತ್ನಾಲ್ಕು ಕಲೆಗಳು ಸುಲಭವಾಗಿ ದೋರಿದವು. ಅವರು ಸಂಸ್ಕೃತ ಭಾಷೆಯಲ್ಲಿ ನಿಷ್ಣಾತರಾದರು. ಅಲ್ಲದೆ ಕನ್ನಡ, ಮರಾಠಿ, ಹಿಂದಿ, ತೆಲಗು ಭಾಷೆಗಳನ್ನು ಕಲಿತರು. ಸಂಸ್ಕೃತದಲ್ಲಿ ಹಲವಾರು ಗ್ರಂಥಗಳನ್ನು ರಚಿಸಿದರು. ಇವುಗಳಲ್ಲಿ ಕೆಲವು ಶ್ರೀಪಾದಭಟ್ಟ ಜೋಶಿ ಅವರಲ್ಲಿ ಉಳಿದಿವೆ. ಅವರು ಮರಾಠಿ, ಸಂಸ್ಕೃತ ಭಾಷೆಗಳಲ್ಲಿ ಶ್ಲೋಕಗಳನ್ನು ರಚಿಸಿದ್ದಾರೆ. ರುಕ್ಮಾಂಗ ಪಂಡಿತರು ವೇದ, ವ್ಯಾಕರಣ, ತರ್ಕ, ಮೀಮಾಂಸ, ಜ್ಯೋತಿಷ ಹೀಗೆ ಹಲವಾರು ವಿದ್ಯೆಗಳಲ್ಲಿ ಪಾರಂಗತರಾಗಿ, ವಂಶಪಾರಂಪರಾಗತವಾದ ವೈದ್ಯಕೀಯ ವಿದ್ಯೆಯಲ್ಲಿ ವಿಶೇಷ ಪರಿಣತಿ ಪಡೆದು, ವೈದ್ಯಶಾಸ್ತ್ರದ ವಿವಿಧ ಗ್ರಂಥಗಳನ್ನು ತಿದ್ದಿ ಶುದ್ಧಗೊಳಿಸಿದ್ದಾರೆ. ಜನರು ಇವರನ್ನು "ವೈದ್ಯವಿಶಾರದ"ರೆಂಬ ಬಿರುದಿನಿಂದ ಕರೆಯುತ್ತಿದ್ದರು. ಗಾಯನ ಕಲೆಯೂ ಕೂಡ ಇವರಿಗೆ ಕರಗತವಾಗಿತ್ತು. ದಿನಾಲು ರಾತ್ರಿ ಒಂಬತ್ತಕ್ಕೆ ವೀಣೆ ಹಿಡಿದು ಹಾಡತೊಡಗಿದರೆ, ಜನ ಮಂತ್ರಮುಗ್ಧರಾಗಿ ಕೇಳುತ್ತಿದ್ದರು. ಅವರ ಗಾಯನ ಕೀರ್ತಿ ಬಾದಶಹನ ಕಿವಿಗೂ ತಲುಪಿತು.[೧೦೦]

ಬಾದಶಹನು ರುಕ್ಮಾಂಗದರ ಗಾಯನ ಕೇಳಬೇಕೆಂದು ಆತುರನಾಗಿ, ಅವರನ್ನು ಅರಮನೆಗೆ ಕರೆತರಲು ತನ್ನ ಅಧಿಕಾರಿಗಳನ್ನು ಕಳುಹಿಸಿದ. ಅವರು ಅರಮನೆಗೆ ಮಾತ್ರ ಬರಲಾಗುವುದಿಲ್ಲ ಎಂದು ನಮ್ರತೆಯಿಂದ ಹೇಳಿ ಕಳಿಸಿದರು. ಒಂದು ದಿನ ಸ್ವತಃ ಸುಲ್ತಾನನೇ ವೇಷಬದಲಿಸಿ ರುಕ್ಮಾಂಗದರು ಹಾಡುತ್ತಿರುವಾಗ ಹೊರಗಿನಿಂದ ಕೇಳಿ, ಸಂಗೀತಕ್ಕೆ ಮರುಳಾಗಿ ಅವರನ್ನು ತನ್ನ ದರ್ಬಾರದ ಗಾಯಕರನ್ನಾಗಿ ಮಾಡಲು ಯಕ್ತಿ-ಪ್ರಯುಕ್ತಿಗಳನ್ನು ಬಳಿಸಿದರೂ ಪ್ರಯೋಜನವಾಗಲಿಲ್ಲ.[೧೦೧]

೩, ಕಾಖಂಡಿಕಿಯ ಶ್ರೀ ಮಹಪತಿರಾಯರು (ತ್ಯಾಗಿ) :

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನಲ್ಲಿ ಐಗಳಿ ಎಂಬ ಗ್ರಾಮವಿದೆ. ೧೭ನೆಯ ಶತಮಾನದ ಮಧ್ಯದಲ್ಲಿ ಐಗಳಿಯಲ್ಲಿ ಮೌನಭಾರ್ಗವ ಗೋತ್ರದ ಕೋನೇರಿರಾಯರೆಂಬ ವೈಷ್ಣವಬ್ರಾಹ್ಮಣರಿದ್ದರು. ಅವರಿಗೆ ಇಬ್ಬರು ಗಂಡುಮಕ್ಕಳು. ಹಿರಿಯವ ವೆಂಕಟೇಶ, ಎರಡನೆಯವ ಗುರುರಾಯ, ಎರಡನೆಯವವನ ಜನನ ಸುಮಾರು ಕ್ರಿ.ಶ ೧೬೪೦ ಮಕ್ಕಳ ವಿದ್ಯಾಭ್ಯಾಸ ಮತ್ತು ಉಪಜೀವನಕ್ಕೆ ಐಗಳಿ ಸೂಕ್ತವಾಗಿರಲಿಲ್ಲ. ಆದ್ದರಿಂದ ಹತ್ತಿರದಲ್ಲಿಯ ಬಿಜಾಪುರ ನಗರಕ್ಕೆ ವಲಸೆಬಂದರು. ಬಿಜಾಪುರದಲ್ಲಿ ಮುಸ್ಲಿಮರು ಕೂಡ ಬ್ರಾಹ್ಮಣರನ್ನು ಗೌರವದಿಂದ ಕಾಣುತ್ತಿದ್ದರು. ಆದ್ದರಿಂದ ಕೋನೇರಿರಾಯನು ಬಿಜಾಪುರಕ್ಕೆ ಹೋಗಿ ನೆಲೆಸುವುದೆಂದು ನಿರ್ಧರಿಸಿದ. ಆಗ ಬಿಜಾಪುರದಲ್ಲಿ ಮಹಮ್ಮದ ಆದಿಲ್‌ಶಾಹನು (೧೬೨೬-೧೬೫೬) ರಾಜ್ಯವಾಳುತ್ತಿದ್ದನು. ಕೋನೇರಿರಾಯನು ತನ್ನ ಕರ್ಣಿಕ ವೃತ್ತಿಯನ್ನು ಹಾಗೂ ವೆಂಕಟೇಶ ದೇವರ ಅರ್ಚಕ ವೃತ್ತಿಯನ್ನು ಸಂಬಂಧಿಕರೊಬ್ಬರಿಗೆ ಕೊಟ್ಟು ಸಹಕುಟುಂಬ ಬಿಜಾಪುರಕ್ಕೆ ಬಂದು ನೆಲೆಸಿದನು.[೧೦೨]

ಮಕ್ಕಳಿಬ್ಬರೂ ತಂದೆಯ ಕಣ್ಣರಿಕೆಯಲ್ಲಿ ಬೆಳೆದು ವಿದ್ಯಾಭ್ಯಾಸವನ್ನು ಪಡೆದರು. ಹಿರಿಯ ಮಗ ವೆಂಕಟೇಶನು ಕುಲದ ಕರ್ಣಿಕ ವೃತ್ತಿಯನ್ನು ಹಾಗೂ ವೆಂಕಟೇಶದೇವರಿಗೆ ಅರ್ಚಕ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಐಗಳಿಗೆ ಬಂದು ನೆಲೆಸಿದನು. ಕಿರಿಯ ಮಗ ಗುರುರಾಯ ತಂದೆ ತಾಯಿಗಳೊಂದಿಗೆ ಬಿಜಾಪುರದಲ್ಲಿಯೇ ಉಳಿದನು. ರಾಮಾಯಣ ಮಹಾಭಾರತ, ಭಾಗವತ ಗ್ರಂಥಗಳ ಅಭ್ಯಾಸದ ಜೊತೆಗೆ ಸಾಹಿತ್ಯದಲ್ಲಿಯೂ ಇವರಿಗೆ ಆಸಕ್ತಿ ಇದ್ದಿತು. ಮಧುರ ಕಂಠ, ನಿರರ್ಗಳ ವಾಕ್ ಸರಣಿ, ಗುರುರಾಯ ಹೇಳುತ್ತಲಿದ್ದರೆ ಕೇಳುಗರು ಮಂತ್ರಮುಗ್ಧರಾಗಿ ಕುಳಿತುಕೊಳ್ಳುತ್ತಿದ್ದರು. ತಂದೆಯ ಸ್ಥಾನದಲ್ಲಿ ಆಗಾಗ ಪ್ರವಚನಗಳನ್ನು ಕೊಟ್ಟು ಆತ ಬಹುಬೇಗ ಜನಪ್ರಿಯನಾದನು.[೧೦೩]

ಕೋನೇರಿರಾಯರ ಪರಿಚಿತ ಹಿಂದು ಸರದಾರನೊಬ್ಬನ ಮುಖಾಂತರ ಗುರುರಾಯನು ಪ್ರಾರಂಭದಲ್ಲಿ 'ಖವಾಸಖಾನ' ಎಂಬ ಹಬಸೀ ಸರದಾರನ ಹತ್ತಿರ ಕರ್ಣಿಕ ವೃತ್ತಿಯನ್ನು ಕೈಕೊಂಡನು. ನಂತರದಲ್ಲಿ ಸುಲ್ತಾನನ ಅರಮನೆಯಲ್ಲಿ ರಾಯರು ಎರಡು ಮೂರು ದಶಕಗಳಷ್ಟು ವರ್ಷದ ಸಾರ್ಥಕ ಸೇವೆಯಿಂದ ಸರ್ವರನ್ನು ಸಮನಾಗಿ ಕಂಡು ಎಲ್ಲರ ಪ್ರೀತ್ಯಾದರಕ್ಕೆ ಪಾತ್ರರಾಗಿದ್ದರು. ಸುಲ್ತಾನರ ಮೆಚ್ಚುಗೆಗೆ ಪಾತ್ರರಾಗಿದ್ದರೂ ಈರ್ವರ ನಡುವಳಿಕೆಯಲ್ಲಿ ಮಹದಂತರವಿತ್ತು. ಉಭರತರಲ್ಲಿ ಸಾಹಿತ್ಯ ಕಾವ್ಯರಚನೆಯಲ್ಲಿ ಒಮ್ಮನದ ಸಖ್ಯವಿದ್ದರೆ ದೈನಿಕ ಜೀವನದಲ್ಲಿ ಸುಲ್ತಾನನು ಮದಿರಾಕ್ಷಿಯರ ಸುಖಲೋಲುಪದ ಜೀವನವಾದರೆ ರಾಯರ ಜೀವನ ಪಥ ಸಾತ್ವಿಕ ಸಜ್ಜನಿಕೆಯದಾಗಿತ್ತು.

ನಂಗಾಶಹ ಫಕೀರನ ದರ್ಶನ :

ಎಂದಿನಂತೆ ರಾಯರು ದರ್ಬಾರಕ್ಕೆ ಬರುತ್ತಿರುವ ಸಮಯದಲ್ಲಿ ಕಂದಕದ ದಂಡೆಯ ಮೇಲೆ ಬತ್ತಲೆಯ ಫಕೀರನೊಬ್ಬ ಕುಳಿತ್ತಿದ್ದನ್ನು ಕಂಡರು. ಅವನು ಸೂಫಿ ಪಂಥದ ಅನೂಯಾಯಿ. ಅವನ ಹೆಸರು

ಶಹನಂಗಾ ಅಥವಾ ನಂಗಾಶಹ. ಸಮೀಪದಲ್ಲಿ ಹೋಗುತ್ತಿದ ಗುರುರಾಯರನ್ನು ಕಂಡು ಗಹ ಗಹಿಸಿ ನಗುತ್ತ "ಮೌತಕಾ ಘಾಣ, ಮೌತಕಾ ಘಾಣ" ಎಂದು ಒದರುತ್ತಾ ಹತ್ತಿರಬರಲು ಕೈಸನ್ನೆ ಮಾಡಿದನು. ಬಹುಕಾಲ ಸಮಾಧಿ ಸ್ಥಿತಿಯಲ್ಲಿರುತ್ತಿದ ಆತನಿಗೆ "ವಾಕಸಿದ್ಧಿ" ಇತ್ತೆಂದು ರಾಯರು ಕೇಳಿದರು. ಅವನ ಹತ್ತಿರ ಹೋಗಲು ಹಿಂದೆ ಮುಂದೆ ನೋಡಹತ್ತಿದ್ದರು.[೧೦೪]

"ಬಾರಪ್ಪಾ, ಅಷ್ಟೇಕೆ ಚಿಂತೆ" ಎಂದು ನಯವಾಗಿ ನಂಗಾಶಹ ಮತ್ತೆ ರಾಯರನ್ನು ಹತ್ತಿರ ಕರೆದನು. ಅವರು ಅಳುಕುತ್ತಲೆ ಅವನ ಹತ್ತಿರ ಹೋಗಿ ಕುಳಿತರು. ಶಹನಂಗಾನು ಅವರನ್ನು ದಿಟ್ಟಿಸಿ ನೋಡಿ, ಅವರ ಕೈಯನ್ನು ತನ್ನ ಕೈಯಲ್ಲಿ ಹಿಡಿದು, ಅತ್ತಿತ್ತ ತಿರುಗಿಸಿ, ಅವರ ಕೈಯಲ್ಲಿದ್ದ ರಾಜಮುದ್ರೆಯ ಉಂಗರವನ್ನು ಮೆಲಗೆ ಕಿತ್ತುಕೊಂಡು, ಅದನ್ನು ತೋರಿಸುತ್ತಾ ಮತ್ತೆ "ಮೌತಕಾ ಘಾಣ" ಎಂದನು. ಆಮೇಲೆ ಅದನ್ನು ಹತ್ತಿರವಿದ್ದ ಕಂದಕದಲ್ಲಿ ಒಗೆದುಬಿಟ್ಟನು. ರಾಯರು ಗಾಬರಿಯಾಗಿ ಅವನ ಮುಖವನ್ನು ನೋಡುತ್ತಾ ನಿಂತರು. ಅವರನ್ನು ನೋಡಿ "ನಂಗಾಶಹ" ಬಿದ್ದು ಬಿದ್ದು ನಗಹತ್ತಿದನು. ರಾಯರು ಉಂಗುರ ಹೋದದಕ್ಕೆ ಹುಚ್ಚರಂತಾಗಿ ನಿಂತರು. ನಂಗಾಶಹ ಗಂಭೀರನಾಗಿ "ಇನ್ನು ನಿನಗೆ ಆ ಉಂಗುರದ ಮೋಹವೇ? ಗಾಬರಿಯಾಗಬೇಡ, ತಂದುಕೊಡುತ್ತೇನೆ, ನಿಲ್ಲು" ಎಂದು ಕಂದಕದಲ್ಲಿ ಜಿಗಿದನು. ಕ್ಷಣದಲ್ಲಿ ಮೇಲೆದ್ದು, ಮುಚ್ಚಿದ ಮುಷ್ಟಿಯನ್ನು ತೆರೆದನು. ಬೊಗಸೆಯಲ್ಲಿ ರಾಜಮುದ್ರಿಕೆಯ, ಅದೇ ತರದ ಮೂರು ಉಂಗುರುಗಳು, ನಿನ್ನದು ಯಾವುದು ತೆಗೆದುಕೋ ಎಂದನು. ರಾಯರು ಭ್ರಾಂತರಾದರು. ಅವರಿಗೆ ತಮ್ಮ ಉಂಗುರ ಯಾವುದು ಎಂದು ತಿಳಿಯದೇ ಚಕಿತರಾಗಿ ನೋಡುತ್ತಿದಂತೆ ಅವರ ಮನಸ್ಸು ಪರಿವರ್ತಿತವಾಯಿತು. 'ಸತ್ ಚಿತ್ತ ಆನಂದ' ಇವು ಮೂರು ಬೇರೆಯಾದರು "ಸಚ್ಚಿದಾನಂದ" ಒಂದೇ ಎಂಬ ಅರಿವಾಯಿತು. ಆ ಕ್ಷಣವೇ ಅಜ್ಞಾನ ಹರಿದು ಹೋಯಿತ್ತು. ಜ್ಞಾನೋದಯವಾಗಿ ಅವರು ಬಾಗಿ "ನಂಗಾಶಹ"ನ ಪಾದಗಳನ್ನು ಹಿಡಿಯಹೋದರು. ಫಕೀರನು ಹಿಡಿಯಗೊಡದೆ, ಸರಿದು "ಛೇ, ನನ್ನ ಕಾಲು ಹಿಡಿಯಬೇಡ, ನಾನು ಯವನ, ನೀನು ಬ್ರಾಹ್ಮಣ. ನಿನ್ನಿಂದ ನಮ್ಸಕ್ಕಾರ ಮಾಡಿಸಿಕೊಳ್ಳಲು ನಾನು ಯೋಗ್ಯನಲ್ಲ" ನೀನಗೆ ಒಬ್ಬ ಗುರುವಿನ ಅಗತ್ಯವಿದೆ ಅವನು ಹತ್ತಿರದ ಊರಾದ ಸಾರವಾಡದಲ್ಲಿ ಇದ್ದಾನೆ. ಅವನ ಹೆಸರು ಭಾಸ್ಕರ ಸ್ವಾಮಿ. ಅವನೇ ನಿನಗೆ ಯೋಗ್ಯ ಗುರು.[೧೦೫] ಅಲ್ಲಿಗೆ ಹೋಗು ಎಂದನು. ರಾಯರು ಮನೆಗೆ ತೆರೆಳಿದರು. ಆಗ ಮನೆಯಲ್ಲಿ ಅತ್ತಿಗೆ ತುಕ್ಕವ್ವ ಇದ್ದಳು ರಾಯರು ತಮ್ಮ ಹೆಂಡತ್ತಿ ಎಲ್ಲಿ? ಎಂದು ಕೇಳಿದರು. "ಗುಡಿಗೆ ಹೋಗಿದ್ದಾಳೆ" ಎಂಬ ಹಾರಿಕೆಯ ಉತ್ತರಬಂತು. ಸಾಯಂಕಾಲ ತಿಮ್ಮವ್ವ ಮನೆಗೆ ಬಂದಾಗ ರಾಯರು ಬೇಗ ಮನೆಗೆ ಬಂದದನ್ನು ಕಂಡು ಹೆದರಿದಳು.

"ಅದೆಂತಹ ಗುಡಿಗೆ ಹೋಗಿದ್ದೆ ಅಷ್ಟು ಹೊತ್ತು." ಎಂದು ರಾಯರು ಕೇಳಿದರು. ಆಗ ಅತ್ತಿಗೆ "ಗುಡಿಗೆ ಹೋಗಿದ್ದಾಳೆ ಎಂದು ನಾನು ಹೇಳಿದ್ದು ಸುಳ್ಳು, ಅವಳು ಸಾರವಾಡಕ್ಕೆ ಆಶೀರ್ವಾದ ಪಡೆಯಲು ಹೋಗಿದ್ದಳು ಮಕ್ಕಳನ್ನು ಪಡೆಯುವ ಹಂಬಲದಿಂದ ಆರು ತಿಂಗಳಾಯಿತು, ನಡೆದುಕೊಳ್ಳುತ್ತಿದ್ದಾಳೆ." ಅದಕ್ಕೆ ರಾಯರ ಹೆಂಡತಿ ತಿಮ್ಮವ್ವ " ಹೌದು, ಆದರೆ ಅವರು ಬಹುಕಾಲ ಸಮಾದಿ ಸ್ಥಿತಿಯಲ್ಲಿರುತ್ತಾರೆ. ದರ್ಶನವಾದದ್ದು

ಇವತ್ತೇ. ನಿಮ್ಮನ್ನು ಕರೆದುಕೊಂಡುಬರಲು ಹೇಳಿದ್ದಾರೆ. ಅಷ್ಟೇ ಅಲ್ಲ. ಚಿಂತಿಸಬೇಡಿ ಅವರೆ ಬರುತ್ತಾರೆ" ಎಂದು ಹೇಳಿದರು. ನಂಗಾಶಹ ತಮಗೆ ಹೇಳಿದ್ದನ್ನು ರಾಯರು ಹೇಳಿದಾಗ ಹೆಂಡತಿಗೆ ರೋಮಾಂಚನವಾಯಿತು. ಮರುದಿನ ಇಬ್ಬರು ಸಾರವಾಡಕ್ಕೆ ಹೋಗಲು ನಿರ್ಧರಿಸಿದರು.

ಮರುದಿನ ಸ್ವಾಮಿಗಳ ದರ್ಶನಕ್ಕಾಗಿ ಹೋದಾಗ ಅವರು ಸಮಾಧಿಸ್ಥಿತಿಯಲ್ಲಿ ಇದ್ದರು. ತುಸು ಹೊತ್ತಿನಲ್ಲಿ ಅವರು ಸಹಜ ಸ್ಥಿತಿಗೆ ಬಂದರು. ಇಬ್ಬರು ಒಳಗೆ ಹೋಗಿ ಸ್ವಾಮಿಗಳಿಗೆ ಸಾಷ್ಟಾಂಗ ನಮಸ್ಕಾರಮಾಡಿ ನಿಂತರು. ಸ್ವಾಮಿಗಳು "ಆರು ತಿಂಗಳಾಯಿತು, ನಿಮ್ಮ ಬರುವಿಕೆಗಾಗಿ ಕಾಯುತ್ತಿದ್ದೆ" ಎಂದಾಗ ರಾಯರ ಮೈ ಜುಮ್ಮೆಂದಿತು. ಸ್ವಾಮಿ ನಾನು ಅಪರಾಧಿ, ನನ್ನನ್ನು ಕ್ಷಮಿಸಿ ಉದ್ಧರಿಸಬೇಕು. ಎಂದರು. ಸ್ವಾಮಿಗಳು ಒಬ್ಬ ಶಿಷ್ಯನನ್ನು ಕರೆದು ಒಂದು ಪಾತ್ರೆಯಲ್ಲಿ ತುಸು ಹಾಲನ್ನು ತರಲು ಹೇಳಿದರು. ಅದನ್ನು ರಾಯರಿಗೆ ಕುಡಿಯಲು ಕೊಟ್ಟರು. "ಪರಮಪ್ರಸಾದ" ಎಂದು ರಾಯರು ಹಾಲನ್ನು ಕುಡಿದು ಸ್ವಾಮಿಗಳಿಗೆ ನಮಸ್ಕರಿಸಿದರು. ಪ್ರಸನ್ನರಾದ ಗುರುಗಳು ಶಿಷ್ಯನ ಮಸ್ತಕದ ಮೇಲೆ ಕ್ಷಣ ಹೊತ್ತು ತಮ್ಮ ವರದ ಹಸ್ತವನ್ನಿಟ್ಟರು. ಆಗಲೇ ಹೊತ್ತಿದ ಜ್ಞಾನ ಕಿಡಿಯು ಸಚ್ಚಿದಾನಂದ ಪರಮಾತ್ಮನ ದರ್ಶನ ಮಾಡಿಸಿತು. ಈ ಅಪರೂಪದ ಘಟನೆಯನ್ನು ರಾಯರು ತಮ್ಮ ಮೊದಲ ಪದ್ಯದಲ್ಲಿ ಹೇಳಿದ್ದಾರೆ "ಇಂದೆನ್ನ ಜನ್ಮ ಪಾವನವಾಯಿತು! ತಂದೆ ಶ್ರೀಗುರುಗಳ ಚರಣ ದರ್ಶನದಿಂದ" ಎಂದು ಪ್ರಾರಂಭವಾಗುವ ಆರು ಚರಣಗಳ ಕೀರ್ತನೆ'ಯಿಂದ "ಭಾಸ್ಕರಸ್ವಾಮಿಯ ಕರುಣಾಳು ಮೂರ್ತಿಯು! ಮೂಢ ಮಹಪತಿಯ ಕೃಪಾಂಬುಧಿಯು" ಎಂದಿದ್ದಾರೆ. ಬಹುಶಃ ಅಂದಿನಿಂದಲೇ "ಮಹಪತಿ" ಎಂಬ ಅಂಕಿತದಿಂದ ಅವರು ಪದಗಳ ರಚನೆಯನ್ನು ಪ್ರಾರಂಭಿಸಿರಬೇಕು.[೧೦೬]

ಲೌಕಿಕದಲ್ಲಿ ತ್ಯಾಗ :

ಮಹಪತಿರಾಯರು ಸುಲ್ತಾನರ ದರ್ಬಾರದಿಂದ ಬಂದು ಬಹಳ ದಿನಗಳಾದುದರಿಂದ ಸುಲ್ತಾನನಿ ಸೇವಕರನ್ನು ಸಾರವಾಡಕ್ಕೆ ಕರೆಯಲು ಕಳಿಸಿದರು. ಆದರೆ ರಾಯರು ಸುಲ್ತಾನರು ತಮ್ಮ ಮೇಲಿದ್ದ ಪ್ರೀತಿಗೆ ಕೃತಜ್ಞತೆ ಸಲ್ಲಿಸುತ್ತ ಐಹಿಕ ಸುಖ ಭೋಗಕ್ಕೆ ತಿಲಾಂಜಲಿಯನ್ನಿಡಬಯಸಿದ್ದು, ತಮ್ಮನ್ನು ಸೇವೆಯಿಂದ ಮುಕ್ತಗೊಳಿಸಲು ಕೇಳಿಕೊಂಡರು. ಮತ್ತು ತಮ್ಮ ಚಿರ ಸ್ಥಿರ ಆಸ್ತಿಯನ್ನೆಲ್ಲ ತಮ್ಮ ರಾಜ ಭಾಂಡಾರಕ್ಕೆ ಸೇರಿಸಿಕೊಳ್ಳಲು ವಿನಂತಿಯ ಪತ್ರದಿಂದ ತಿಳಿಸಿದರು. ಈ ಸಂಗತಿಯನ್ನು ತಿಳಿದ ಸುಲ್ತಾನನು ಕೇಳಿಕೊಂಡರೂ ಒಪ್ಪದ ರಾಯರು ಒಪ್ಪಿಸಿದ ಆಸ್ತಿಯನ್ನು ಪಡೆಯದೆ ಅದು ರಾಯರ ಆಸ್ತಿ ಅದನ್ನು ಯಾವ ಕಾಲಕ್ಕೂ ರಾಜ ಭಂಡಾರಕ್ಕೆ ಸೇರಿಸಲಾಗದು, ಅದನ್ನು ಅವರು ತಮ್ಮ ಇಚ್ಛೆಯಂತೆ ವಿನಿಯೋಗಿಸಲಿ ಎಂದು ಹೊರಡಿಸಿದ ಫರ್ಮಾನು ಹುಕುಮಿನ ಸಂಗತಿ ತಿಳಿದ ರಾಯರು ತಮ್ಮ ಹೆಂಡತಿ ತಿಮ್ಮವ್ವನನ್ನು ಬಿಜಾಪುರಕ್ಕೆ ಕಳುಹಿಸಿ ತಮ್ಮ ಆಸ್ತಿಯನ್ನೆಲ್ಲ ಬಡಬಗ್ಗರು ನಿರ್ಗತಿಕರಿಗೆ ಹಂಚಿಸಿದರು. ಪತ್ನಿ ಈ ಆಜ್ಞೆಯನ್ನು ಮನಸಾರೆ ಒಪ್ಪಿಕೊಂಡು ದಾನ ಮಾಡಿದ್ದರಿಂದ ರಾಯರಿಗೆ ಸಂತಸವಾಗಿ ಎಲ್ಲವನ್ನು ತ್ಯಾಗ ಮಾಡಿದ್ದು ಗುರುಸಾನಿಧ್ಯದ ಫಲವೆಂದು ತಮ್ಮ ಕೀರ್ತನೆ ಪದ್ಯಗಳಲ್ಲಿ ಹಾಡಿದ್ದಾರೆ.

ಇನ್ನೇನಿನ್ನೇನು ಎನಗಿನ್ನು ಇನ್ನೇನಿನ್ನೇನು

ಎನ್ನೊಳು ಗುರು ತನ್ನ ಮರ್ಮವುದೋರಿದ ಇನ್ನೇನಿನ್ನೇನು![೧೦೭]

ರಾಯರು ಅಂತರಂಗದಲ್ಲಿ ಚಿತ್‌ಪ್ರಕಾಶಮಾನವಾದ ಜ್ಯೋತಿಯು ಹೊಳೆಯ ತೊಡಗಿತು. ಅವರ ಸಾಧನ ಸಿದ್ಧಿಯು ಶಿಖರಕ್ಕೇರಿತು. ಅಂತೆಯೇ ಹನ್ನೆರಡು ವರ್ಷದ ಯೋಗವನ್ನು ಹನ್ನೊಂದು ತಿಂಗಳಲ್ಲಿಯೇ ಮುಗಿಸಿ ದಿವ್ಯಾನುಭವ ಹೊಂದಿದ ರಾಯರನ್ನು ಕಂಡ ಗುರುಗಳಾದ ಭಾಸ್ಕರ ಸ್ವಾಮಿಗಳಿಗೆ ಹಿಡಿಸದಷ್ಟು ಸಂತಸವಾಯಿತು. ಹಾಗೇ ಆಶೀರ್ವದಿಸಿ ಸತಿ ಪತಿಗಳೀರ್ವರನ್ನು ಸಾರವಾಡದಿಂದ ಬೀಳ್ಕೊಟ್ಟು ವಿಜಾಪುರಕ್ಕೆ ಕಳಿಸಿದರು.

ಮಹಪತಿರಾಯರು ಬಿಜಾಪುರಕ್ಕೆ ಬಂದ ಸಂಗತಿ ತಿಳಿದು ಸುಲ್ತಾನರಿಗೆ ಅತ್ಯಂತ ಸಂತಸವಾಯಿತು. ಅವರನ್ನು ಸ್ವಾಗತಿಸಲು ಛತ್ರಚಾಮರ ಪಲ್ಲಕ್ಕಿಯಲ್ಲಿ ತರಲು ಏರ್ಪಾಡು ಮಾಡಿದರಾದರೂ, ಇವರು ಯಾವ ವೈಭವವನ್ನು ಬಯಸದೆ ಬಿಜಾಪುರಕ್ಕೆ ಬಂದರು. ಸಾರವಾಡದಿಂದ ಬಿಜಾಪುರಕ್ಕೆ ಬಂದ ರಾಯರು ಶಿಷ್ಯರಿಗೆ ಮಾರ್ಗದರ್ಶಕರಾಗಿ ಸಕಲ ಶಾಸ್ತ್ರಗಳನ್ನು ತಿಳಿಸುತ್ತ ದಿನವೂ ಅನೇಕ ಬ್ರಾಹ್ಮಣರಿಗೆ ಸಂತ ಶರಣರಿಗೆ ಮೃಷ್ಟಾನ್ನ ಭೋಜನವನ್ನು ಮಾಡಿಸುತ್ತಿದ್ದರಾದರೂ ಈ ಕಾರ್ಯ ಹೇಗೆ ನಡೆಸಿಕೊಂಡು ಬರುತ್ತಿದ್ದರೆಂಬುದು ಯಾರಿಗೂ ತಿಳಿದಿರಲಿಲ್ಲ. ಸಾರವಾಡದಿಂದ ಬಿಜಾಪುರಕ್ಕೆ ಬಂದ ನಾಲ್ಕಾರು ತಿಂಗಳಲ್ಲಿ ಪತ್ನಿ ತಿಮ್ಮವ್ವ ಈರ್ವ ಅವಳಿ ಜವಳಿ ಸುಪುತ್ರರಿಗೆ ಜನ್ಮ ನೀಡಿದಳು. ಗೋಕುಲಾಷ್ಠಮಿಯಯ ಶುಭದಿನದಂದು ಜನಿಸಿದ ಒಬ್ಬನು ದೇವರಾಯನಾದರೆ ಇನ್ನೊಬ್ಬನು ಕೃಷ್ಣರಾಯನಾಗಿದ್ದನು.[೧೦೮]

ಬಿಜಾಪುರವನ್ನು ತ್ಯಜಿಸಿ ಶಹಪುರಕ್ಕೆ ಬಂದದ್ದು :

ಕ್ರಿ.ಶ ೧೬೮೬ ರಲ್ಲಿ ಬಿಜಾಪುರದ ಆದಿಲ್‌ಶಾಹಿ ಆಡಳಿತ ಕೊನೆಗೊಂಡಿತು. ಮೊಘಲ ದೊರೆ ಔರಂಗಜೇಬನು ಈ ರಾಜ್ಯವನ್ನು ವಶ ಪಡಿಸಿಕೊಂಡು ಮುಂದೆ ಹೈದರಾಬಾದಿನ ಸುಭೆಗೆ ಸೇರಿಸಿದ್ದನು. ಆಗ ಅನೇಕ ದಿನಗಳಿಂದ ನಡೆದ ಯುದ್ಧದಲ್ಲಿ ಸಾವಿರಾರು ಸೈನಿಕರು ಹೊಟ್ಟೆಗೆ ಅನ್ನವಿಲ್ಲದೆ ಮಡಿದರು. ಭೀಕರ ಬರಗಾಲಬಿದ್ದು ತತ್ತರಿಸಿದ ಜನತೆಗೆ ಪ್ಲೇಗ ಬೇನೆಯ ಬೀಕರ ರೋಗವು ಸಹಸ್ರಾರು ಜನರನ್ನು ಬಲಿ ತೆಗೆದುಕೊಂಡು ಬಿಜಾಪುರವನ್ನು ಹಾಳು ಬೀಳು ಬಿದ್ದ ನಗರವಾಗಿ ಪರಿಣಿಮಿಸಿತು. ಬಿಜಾಪುರದಲ್ಲಿ ಇರುವುದು ತೊಂದರೆಯಾದುದಕ್ಕೆ ನಗರವನ್ನು ಕೆಲದಿನ ಬಿಟ್ಟು ಬೇರೆ ಸ್ಥಳಕ್ಕೆ ಹೋಗಿರಲು ನಿಶ್ಚಯಿಸಿದರು. ಇಲ್ಲಿಂದ ೧೨೦ ಕಿ.ಮೀ ದೂರದ ಶಹಪುರವು ಸುರಪುರ ನಾಯಕನ ಆಡಳಿತಕ್ಕೊಳಪಟ್ಟಿತ್ತು. ಶಹಪುರದ ಹತ್ತಿರ ವಿರುವ ಮಂದಾಕಿನಿ ಸರೋವರದ ದಡದಲ್ಲಿದ್ದ ಗುಡ್ಡದ ಒಂದು ಗವಿಯಲ್ಲಿ ರಾಯರು ಮೂರು ವರ್ಷಗಳ ವರೆಗೆ ಇದ್ದರೆಂದು ಪ್ರತೀತಿ ಇದೆ.[೧೦೯]

ಮರಳಿ ಬಿಜಾಪುರಕ್ಕೆ ಆಗಮಿಸಿದ್ದು :

ಮೂರು ವರ್ಷಗಳವರೆಗೆ ಶಹಪುರದಲ್ಲಿದ್ದು ಈ ಅವಧಿಯಲ್ಲಿ ತಮ್ಮ ಜಪ–ತಪ ಸಾಧನೆ ಸಿದ್ಧಿಯನ್ನು ಪಡೆದು ಮರಳಿ ಬಿಜಾಪುರಕ್ಕೆ ಬಂದಾಗ ಯುದ್ಧ, ಬರಗಾಲ ಹಾಗೂ ಪ್ಲೇಗಿನಿಂದ ಲಕ್ಷಾವಧಿ ಜನತೆ ಪ್ರಾಣ ಕಳೆದು ಕೊಂಡಿದ್ದು ಹಾಳು ಸುರಿಯುವ ಈ ಸ್ಥಳದಲ್ಲಿ ವಾಸಿಸಲು ಇಚ್ಛಿಸಿದರೂ ಕಾಖಂಡಕಿಯ ಕರಣಿಕರು ಅಲ್ಲಿಗೇ ಆಗಮಿಸಲು ವಿನಂತಿಸಿಕೊಂಡೊಡನೆ ಕಾಖಂಡಕಿಗೆ ತೆರಳಿದರು. ರಾಯರು ಕಾಖಂಡಕಿಯಲ್ಲಿದ್ದ ಎರಡು ದಶಕಗಳಷ್ಟು ವರ್ಷಗಳಲ್ಲಿ ಸುತ್ತಲಿನ ಗ್ರಾಮಗಳ ಜನತೆಯಲ್ಲಿ ರಾಯರ ಬಗ್ಗೆ ಅಪಾರವಾದ ಗೌರವ ಶೃದ್ಧಾಭಕ್ತಿ ಮೂಡಿತ್ತು. ಅವರು ಯಾವ ಪವಾಡವು ಮಾಡದೆ ಅದಕ್ಕೆ ವಿರೋಧವಾಗಿಯೂ ಜ್ಞಾನಿಗಳಾಗಿ, ತ್ಯಾಗಿಗಳಾಗಿ, ಯೋಗಿಗಳಾಗಿ ಮೆರೆದು ಮಹಾಪುರುಷರಾದರು.

ಮಹಪತಿರಾಯರು ವೃಂದಾವನಸ್ಥರಾದುದು :

ರಾಯರು ತಮ್ಮ ಅವಸಾನಕ್ಕೆ ಇನ್ನೂ ಕೇವಲ ಏಳು ದಿನಗಳ ಮಾತ್ರ ಉಳಿದವೆಂದೂ ಕೃಷ್ಣೆಯ ದಡದ ಕೊಲ್ಹಾರಕ್ಕೆ ತರಳುವ ವಿಚಾರವನ್ನು ಮಗ ಕೃಷ್ಣರಾಯರಿಗೆ ಹೇಳಲು ಅವರು ಈ ವಿಚಾರವನ್ನು ಹಿರಿಯ ಸಹೋದರ ದೇವರಾಯರಿಗೂ ತಿಳಿಸಿದರು. ಕಾರ್ತಿಕ ಮಾಸದ ಅಮವಾಸ್ಯೆಯ ದಿನದಂದು ಕೃಷ್ಣೆಯಲ್ಲಿ ಬೆಳಗಿನ ಸ್ನಾನ ಮಾಡಿ ನದಿಯ ದಡದಲ್ಲಿ ಅನುಷ್ಠಾನಕ್ಕೆ ಕುಳಿತು ಕ್ರಿ. ಶ. ೧೭೧೦ ರಲ್ಲಿ ತಮ್ಮ ಐಹಿಕ ದೇಹವನ್ನು ತ್ಯಜಿಸಿದರು. ಕೋಲ್ಹಾರದಲ್ಲಿ ದೇಹ ತ್ಯಜಿಸಿದ ಮಹಿಪತಿರಾಯರ ಪಾರ್ಥಿವ ಶರೀರವನ್ನು ಕಾಖಂಡಕಿಗೆ ತಂದು ವೃಂದಾವನವನ್ನು ನಿರ್ಮಿಸಲಾಯಿತೆಂಬ ವಿಚಾರವು ಹೆಚ್ಚು ಸೂಕ್ತವೆನಿಸುತ್ತಿದೆ. ಒಟ್ಟಿನಲ್ಲಿ ಕೊಲ್ಹಾರ –ಕಾಖಂಡಕಿ ಈ ಎರಡು ಸ್ಥಳಗಳಲ್ಲಿ ಮಹಿಪತಿಯಾರ ವೃಂದಾವನಗಳನ್ನು ನಿರ್ಮಿಸಲಾಗಿದೆ.[೧೧೦]

೪. ಯಾಳಗಿಯ ಶ್ರೀ ರಾಮಪ್ಪಯ್ಯನರು (ಯೋಗಿ):

ಸುರಪುರದಿಂದ ಪಶ್ಚಿಮಕ್ಕೆ ೨೧ ಮೈಲು ದೂರದಲ್ಲಿ ಯಾಳಗಿ ಎಂಬ ಊರಿದೆ. ಅಲ್ಲಿ ಶ್ರೀ ರಾಮಪ್ಪಯ್ಯನವರೆಂಬ ಯೋಗಿಗಳು ಆಗಿಹೋದರು. ಅವರ ಆರಾಧನೆ ಪ್ರತಿವರ್ಷ ಆಶ್ವಿನ ಶುದ್ಧ ಸಪ್ತಮಿ ದಿನ ಜರುಗುವುದು. ಅಲ್ಲಿಯ ಹೋಳಿಗೆಯ ಮಹಾತ್ಮೆಯು ಸುಪ್ರಸಿದ್ಧವಾಗಿದೆ. ಈ ಮಹಾತ್ಮೆಯು ಅನೇಕ ಶತಮಾಗಳಿಂದ ನಡೆದುಕೊಂಡು ಬಂದಿದೆ. ಶ್ರೀ ರಾಮಪ್ಪಯ್ಯನವರು ಜೀವಂತ ಸಮಾಧಿ ಹೊಂದಿ ಜೀವನ್ಮುಕ್ತರಾದರು.

ಜನನ : ಯಾಳಗಿ ಗ್ರಾಮದಲ್ಲಿ ಕರಣಿಕ ನರಹಿಂಹ ಪಂತ ಮತ್ತು ಲಿಂಗಾಂಬಿಕೆ ಎಂಬ ದಂಪತಿಗಳಿದ್ದರು. ಅವರಿಗೆ ಬಹುದಿನ ಮಕ್ಕಳಾಗಿರಲಿಲ್ಲ. ಆದ್ದರಿಂದ ಲಿಂಗಾಂಬಿಕೆಯು ಬೆಟ್ಟದ ರಾಮಲಿಂಗೇಶ್ವರನಿಗೆ ಭಕ್ತಿಯಿಂದ ಸೇವೆ ಸಲ್ಲಿಸುತ್ತಿದ್ದಳು. ಒಂದು ದಿನ ಅವಳ ಸ್ವಪ್ನದಲ್ಲಿ ಬೆಟ್ಟದ ರಾಮಲಿಂಗನು "ನಾನು ನಿನ್ನ ಉದರದಲ್ಲಿ ಹುಟ್ಟಿ ಬರುವೆ. ಆ ಮಗುವಿಗೆ ರಾಮಲಿಂಗನೆಂದು ಹೆಸರಿಡು" ಎಂದು ಹೇಳಿದಂತಾಯಿತು. ಎಂದಿನಂತೆ ಸೇವೆ

ಸಲ್ಲಿಸಲಿಕ್ಕೆ ಲಿಂಗಾಂಬಿಕೆ ಮಂದಿರಕ್ಕೆ ಹೋದಳು. ಹೊಸ್ತಿಲದಲ್ಲಿ ಪ್ರಸಾದ ಕಂಡಿತು. ಆ ಪ್ರಸಾದ ಸೇವನೆಯಾದ ಕೆಲವುದಿನಗಳಲ್ಲಿಯೇ ಆಕೆ ಗರ್ಭಿಣಿಯಾದಳು. ನಂತರ ಅವಳು ಒಂದು ಗಂಡುಮಗುವಿಗೆ ಜನ್ಮವಿತ್ತಳು. ಅಂದು ಶಾಲಿವಾಹನ ಶಕೆ ೧೬೦೧, ಸಿದ್ಧಾರ್ಥನಾಮ ಸಂವತ್ಸರ ದಕ್ಷಿಣಾಯನ ವರ್ಷಾಋತು ಶ್ರಾವಣ ಮಾಸ ಶುಕ್ಲಪಕ್ಷ ಪಂಚಮಿ ಶುಕ್ರವಾರ, ಪುಷ್ಯನಕ್ಷತ್ರ. ಆ ನಕ್ಷತ್ರದ ನಾಲ್ಕನೆಯ ಪಾದದಲ್ಲಿ ಮಗುವಿನ ಜನ್ಮವಾಯಿತು. ಆ ಮಗುವಿನ ೫ನೆಯ ವರ್ಷದಲ್ಲಿಯೇ ತಂದೆ ತಾಯಿಗಳು ಮಗುವಿನ ಉಪನಯನ ಮಾಡಿದರು. ಬಾಲ್ಯದಲ್ಲಿ ಮಗುವಿನ ವಿದ್ಯಾಭ್ಯಾಸ ಮನೆಯ ಗುರುಗಳಾದ ಅಪ್ಪಯ್ಯನವರ ಹತ್ತಿರ ಆಯಿತು.[೧೧೧]

ಇವರು ಒಳ್ಳೆಯ ಕುಶಾಗ್ರ ಬುದ್ಧಿಯುಳ್ಳ ಈ ಬಾಲಕನು ಎಲ್ಲ ವಿದ್ಯೆಗಳಲ್ಲಿ ಪಾರಂಗತನಾಗಿ ಅನೇಕ ಕಾರ್ಯಗಳಲ್ಲಿಯೂ ತಂದೆ-ತಾಯಿಗಳಿಗೆ ನೆರವಾಗುತ್ತಿದ್ದನು. ಕರಣಿಕ ವೃತ್ತಿಯವರಾದ ಇವನ ತಂದೆಯ ಲೆಕ್ಕ ಪತ್ರಗಳಲ್ಲಿಯೂ ಜಾಣ್ಮೆಯನ್ನು ತೋರಿಸುತ್ತಿದ್ದನು. ಚಿಕ್ಕ ಬಾಲಕನ ಕುಶಾಗ್ರ ಬುದ್ಧಿಯನ್ನು ಕಂಡ ಊರಿನ ನೆರೆ ಹೊರೆಯವರು ವಿಸ್ಮಯಗೊಂಡರು. ಪ್ರಾಪ್ತ ವಯಸ್ಕನಾದ ರಾಮಪ್ಪಯ್ಯ ಆಧ್ಯಾತ್ಮದ ತತ್ವವನ್ನು ತಿಳಿದು ಜ್ಞಾನಿಯೇ ಆದನು. ಅವನ ಚತುರತೆ, ಬುದ್ಧಿವಂತಿಕೆ ಮೆಚ್ಚುವಂತಹದಿತ್ತು. ಕರುಣಿಕ ವೃತ್ತಿಯ ಸಂತತಿಯಲ್ಲಿ ಜನಿಸುದುದರಿಂದ ತಂದೆಯ ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದನು. ಇವರ ಲೆಕ್ಕಪತ್ರದಲ್ಲಿದ ಅಪಾರ ಪ್ರಸಿದ್ಧಿಯನ್ನು ಪಡೆದಿದ್ದರಿಂದ ಈ ವಿಷಯವನ್ನು ತಿಳಿದ ಆದಿಲ್‌ಶಾಹ ಸುಲ್ತಾನಾದ ಅಲಿ ಆದಿಲ್‌ಶಾಹನು ರಾಮಲಿಂಗನನ್ನು ಕರೆಕಳಿಸಿದನು. ಸುಲ್ತಾನನೊಡನೆ ಭೇಟ್ಟಿಯಲ್ಲಿ ರಾಮಪ್ಪಯ್ಯನ ಚತುರತೆ ಮತ್ತು ಬುದ್ಧಿವಂತಿಕೆಯನ್ನು ಕಂಡು ಸುಲ್ತಾನನು ಚಕಿತನಾದನು. ಅವನನ್ನು ಆಯವ್ಯಯ ಖಾತೆಯಲ್ಲಿ ಕೆಲಸಕ್ಕೆ ನೇಮಿಸಿದನು. ಆದರೆ ರಾಮಪ್ಪಯ್ಯನು ಒಂದು ಕರಾರಿನ ಮೇಲೆ ಕೆಲಸಕ್ಕೆ ಹಾಜರಾದನು. ಆ ಕರಾರು ಏನೆಂದರೆ-ಯಾವ ದಿನ ತಮ್ಮನ್ನು ಸುಲ್ತಾನ ಏಕವಚನದಿಂದ ಸಂಬೋಧಿಸುವನೊ ಅಂದೇ ರಾಜೀನಾಮೆ ಕೊಡುವೆ ಇದಕ್ಕೆ ಸುಲ್ತಾನನು ವಚನಕೊಟ್ಟು ಒಪ್ಪಿದನು. ಹೀಗೆ ಕೆಲವು ವರ್ಷ ದರ್ಬಾರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಲಿದ್ದನು.[೧೧೨]

ಪದತ್ಯಾಗ : ಒಂದು ದಿನ ಒಬ್ಬ ಅಧಿಕಾರಿಯು ರಾಮಪ್ಪಯ್ಯನು ಇಲ್ಲದ ಸಮಯದಲ್ಲಿ, ಅವರ ಕಾರ್ಯಲಯಕ್ಕೆ ಹೋಗಿ, ಅವರ ಲೆಕ್ಕಪತ್ರದ ಹೊತ್ತಿಗೆಗಳನ್ನು ತೆಗೆದು ನೋಡಿದನು. ಅವನಿಗೆ ಅದರಲ್ಲಿ ಕಂಡದ್ದು ಕೇವಲ 'ಶ್ರೀರಾಮ, ಜಯರಾಮ, ಜಯ ಜಯ ರಾಮ' ಎಂದು ಬರೆದದ್ದು ಇತ್ತು. ಎಲ್ಲ ಖಾತೆಗಳನ್ನು ತೆಗೆದುನೋಡಿದರೂ, ಅದೇ ರಾಮನ ಸ್ಮರಣೆಯ ಬರಹವೇ ಇತ್ತು. ಆದ್ದರಿಂದ ಅವನು ಸುಲ್ತಾನನಿಗೆ ಇದರ ಬಗ್ಗೆ ದೂರನ್ನಿತ್ತನು. ಖರ್ಚಿನ ಎರಡಷ್ಟು ಆದಾಯವಿತ್ತೆಂದು ಸುಲ್ತಾನನ ಅಂದಾಜಿತ್ತು. ಆದ್ದರಿಂದ ಸುಲ್ತಾನನು ಹೋಗಿ ರಾಮನನ್ನು ಕರೆದು ತನ್ನಿರಿ ಎಂದು ಆಜ್ಞೆ ಇತ್ತನು. ರಾಮಪ್ಪಯ್ಯನು ಯೋಗಬಲವುಳ್ಳವನಾಗಿದ್ದನು. ಸುಲ್ತಾನು "ರಾಮ. ಏನಿತು ಲೆಕ್ಕಪತ್ರ?" ಎಂದನು. ರಾಮಪ್ಪಯ್ಯನು "ನೀವು ನಿಮ್ಮ ವಚನ ಮುರಿದಿರಿ. ಇಕೊ, ನನ್ನ ರಾಜೀನಾಮೆ ತಕ್ಕೊಳ್ಳಿರಿ" ಎಂದನು. ಲೆಕ್ಕವನ್ನು ತೆಗೆದು ನೋಡಲಾಗಿ ಎಲ್ಲವೂ ಸರಿಯಾಗಿಯೇ ಇತ್ತು. ಸುಲ್ತಾನನು ನಮ್ಮದು ತಪ್ಪಾಯಿತು, ಕ್ಷಮಿಸಿರಿ ಎಂದನು. ರಾಮಪ್ಪಯ್ಯನು

“ಮಿಂಚಿಹೋದ ಮಾತಿಗೆ ಚಿಂತಿಸಿ ಫಲವಿಲ್ಲ. ನನಗೆ ಇನ್ನು ಈ ಕೆಲಸದಲ್ಲಿ ಆಸಕ್ತಿ ಇಲ್ಲ. ನಾನು ಜೀವನ್ಮುಕ್ತಿಯ ಮಾರ್ಗ ಹುಡುಕುತ್ತಿದ್ದೇನೆ. ನಮ್ಮ ನಿಮ್ಮ ಋಣಾನುಬಂಧ ಇಲ್ಲಿಗೆ ಮುಗಿಯಿತು. ಎಂದು ಹೇಳಿ, ಬಿಜಾಪುರ ಬಿಟ್ಟು ಯಾಳಗಿಗೆ ನಡೆದರು. ಮನೆಯಲ್ಲಿ ತಂದೆ-ತಾಯಿಯನ್ನು ಭೇಟಿಯಾಗಿ ನಡೆದ ಸಂಗತಿಯನ್ನು ತಿಳಿಸಿದರು. ನಂತರ ಯಾದಗಿರಿಯ ಹತ್ತಿರವಿರುವ ಮೈಲಾಪುರಕ್ಕೆ ಹೋಗಿ, ಮೈಲಾರಲಿಂಗನ ಸೇವೆಯಲ್ಲಿ ನಿರತರಾದರು. ಅವರು ಕಠೋರ ಯೋಗಾಭ್ಯಾಸದಲ್ಲಿ ಮನೆ, ತಂದೆ-ತಾಯಿ, ಊರು ಎಲ್ಲಾ ಮರೆತರು.[೧೧೩]

ತಂದೆ-ತಾಯಿಯರು ಒಬ್ಬನೇ ಮಗ ಹಲವು ವರ್ಷಗಳಾದರೂ ಊರಿಗೆ ಬಾರದಕ್ಕೆ, ಊರಿನ ಹಿರಿಯರನ್ನು ಮತ್ತು ಮನೆಯ ಗುರುಗಳಾದ ಅಪ್ಪಯ್ಯನವರು ಮೈಲಾರಕ್ಕೆ ಹೋದರು. ಅಲ್ಲಿ ಒಂದು ಗುಹೆಯಲ್ಲಿ ಯೋಗಾಭ್ಯಾಸದಲ್ಲಿ ಮೈಮರೆತು ಕುಳಿತಿದ ರಾಮಪ್ಪಯ್ಯನವರು ಎಚ್ಚೆತ್ತರು. ಗುರುಗಳನ್ನು ಕಂಡು ಸಂತೋಷದಿಂದ ನಮಸ್ಕರಿಸಿದರು. ಇಬ್ಬರೂ ಮಾತುಕಥೆ ನಡೆಸಿದರು, ರಾಮಪ್ಪಯ್ಯನವರು, ನನಗೆ ಗೃಹಸ್ಥಾಶ್ರಮದಲ್ಲಿ ಆಸಕ್ತಿಯಿಲ್ಲ. ನಾನು ಸಂನ್ಯಾಸ ತೆಗೆದುಕೊಳ್ಳುತ್ತೇನೆ. ಎಂದರು ಅದಕ್ಕೆ ಅಪ್ಪಯ್ಯನವರು “ಮಾನವಜನ್ಮಕ್ಕೆ ನಾಲ್ಕು ಆಶ್ರಮಗಳಿವೆ ಆ ನಾಲ್ಕನ್ನೂ ಪೂರೈಸಿದವರಿಗೆ ಮುಕ್ತಿ ಸಾದ್ಯ” ಎಂದರು. ಅವರ ಮಾತುಗಳಿಂದ ಪ್ರಭಾವಿತರಾಗಿ ಯಾಳಗಿಗೆ ನಡೆದರು. ತಂದೆ-ತಾಯಿಗಳು ಒಂದು ಒಳ್ಳೆಯ ಕನ್ಯೆಯನ್ನು ನೋಡಿ ರಾಮಪ್ಪಯ್ಯನವರ ಮದುವೆ ಮಾಡಿದರು.

ರಾಮಪ್ಪಯ್ಯನವರಿಗೆ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ಮಕ್ಕಳು ದೊಡ್ಡವರಾಗಲು ಅವರ ವಿವಾಹವನ್ನು ಮಾಡಿ, ಅವರಿಗೆ ತಮ್ಮ ಹೊಲ ಮನೆಗಳನ್ನು ಒಪ್ಪಿಸಿ, ತಾವು ವಾನಪ್ರಸ್ಥ ಆಶ್ರಮವನ್ನು ಸ್ವೀಕರಿಸಿದರು. ಗ್ರಾಮದ ಉತ್ತರಭಾಗಕ್ಕೆ ಇರುವ ತಮ್ಮ ಒಂದು ಹೊಲದಲ್ಲಿ ಒಂದು ಕುಟೀರವನ್ನು ಸ್ಥಾಪಿಸಿದರು. ಅವರಿಗೆ ಅನೇಕ ಶಿಷ್ಯರಾದರು. ಅವರಲ್ಲಿ ಮೇಲುಗಿರಿಯಪ್ಪರೆಂಬುವರು ಪ್ರಮುಖರು. ರಾಮಪ್ಪಯ್ಯನವರು ಅವರನ್ನು ಕರೆದು ತಮ್ಮ ಅನುಷ್ಠಾನಕ್ಕೆ ಯೋಗ್ಯವಾದ ಒಂದು ಗವಿಯನ್ನು ಏರ್ಪಡಿಸಲು ಹೇಳಿದರು. ಅನುಷ್ಠಾನಕ್ಕೆ ಒಂದು ಗುಹೆ ಮತ್ತು ಭಕ್ತರಿಗೆ ಉಳಿಯಲು ಒಂದು ಮಠ ಸಿದ್ಧವಾದವು.[೧೧೪]

ರಾಮಪ್ಪಯ್ಯನವರು ತಮ್ಮ ಜೀವತಾವಧಿಯಲ್ಲಿ ಅನೇಕ ಪವಾಡಗಳನ್ನು ಮಾಡಿದರು. ಅವುಗಳೆಂದರೆ, ಗೋಗಿಯ ಬಾರಿಸಾಬರಿಗೆ ಮರು ಜೀವನ ನೀಡಿದ್ದು, ಗಂಗಾ ಭಾಗೀರಥಿಯ ಸಾಕ್ಷಾತ್ಕಾರವಾದುದು, ವೇಶ್ಯ ಮಂಚಾಲೆಮ್ಮನು ಸಮಾಧಿಯಾದುದು ಹೀಗೆ ಅನೇಕ ಪವಾಡಗಳನ್ನು ಮಾಡಿದರು.

ಜೀವಂತ ಸಮಾಧಿಯಾದದ್ದು :

ಶ್ರೀನೃಪಶಾಲಿವಾಹನ ಶಕೆ ೧೬೬೧ ವಿಕಾರಿ ನಾಮ ಸಂವತ್ಸರ ಆಶ್ವಿಯುಜ ಶುದ್ಧ ಸಪ್ತಮಿ ಸೌಮ್ಯವಾಸರದಿ ಜೀವಂತ ಸಮಾಧಿಸ್ಥರಾಗಲು ನಿರ್ಧರಿಸಿದರು. ಅನೇಕ ಗ್ರಾಮಗಳಿಂದ ಭಕ್ತರು ಬಂದು ಸೇರಿದರು. ಗುರುಗಳ ಕೊನೆಯ ಪ್ರಚನವನ್ನು ಕೇಳಿದರು. ವಾದ್ಯಗಳು ಮೊಳಗಿದವು. ಭಜನೆ ಪ್ರಾರಂಭವಾಯಿತು. ಗಂಟೆಜಾಗಟೆಗಳ ಸಪ್ಪಳ ಏರಿತು. ಪಂಡಿತರು ವೇದಪಠನ ಮಾಡುತ್ತಿದ್ದರು. ಆಕಾಶದಿಂದ

ದೇವರು ಪುಷ್ಪವೃಷ್ಟಿ ಮಾಡಿದರು. ರಾಮಪ್ಪಯ್ಯನವರು ಗುಹಾ ಪ್ರವೇಶಮಾಡಿದರು. ಗುಹೆಯ ಬಾಗಿಲು ಮುಚ್ಚಿತು.[೧೧೫]

೫. ಸಿಂದಗಿಯ ಶ್ರೀ ಜಕ್ಕಪ್ಪಯ್ಯನವರು (ಜೋಗಿ) :

ಸಿಂದಗಿಯ ಬಿಂದಗಿಯು ನಾಡಿನ ಉದ್ದಗಲಕ್ಕೂ ಪ್ರಸಿದ್ಧವಾಗಿದೆ. ಆಶ್ವೀನ ಮಾಸದ ಕೃಷ್ಣ ಪಕ್ಷ ದ್ವಿತೀಯಾದಂದು ಬಿಜಾಪುರ ಜಿಲ್ಲೆಯ ಸಿಂದಗಿಯ ಭೀಮಾಶಂಕರ ಮಠದಲ್ಲಿ ಬಿಂದಗಿಯ ಪೂಜೆಯಾಗುತ್ತದೆ. ಅರ್ಧಕೊಡದಷ್ಟು ನೀರು ತುಂಬುವ ಮಣ್ಣಿನ ಚಿಕ್ಕ ಬಿಂದಗಿಯನ್ನು ಅಂದೆಯೇ ಕುಂಬಾರನ ಮನೆಯಿಂದ ತಂದು ಪ್ರತಿಷ್ಠಾಪಿಸಿ, ನೂರಾರು ಜನ ಬ್ರಾಹ್ಮಣರ ಪಾದಪೂಜೆಯನ್ನು ಮಾಡಿದ ನೀರನ್ನು ಅದರಲ್ಲಿ ಹಾಕಿದರೂ ಅದು ತುಂಬುವದಿಲ್ಲ! ಪವಾಡಗಳನ್ನು ನಂಬದ, ವೈಜ್ಞಾನಿಕವಾಗಿ ಮುಂದುವರಿದ ಇಂದಿನ ದಿನಗಳಲ್ಲಿ ಇದನ್ನು ನಂಬುವುದು ಕಷ್ಟವಾದರೂ ಪ್ರತಿವರ್ಷವು ಘಟನೆ ನಡೆಯುತ್ತದೆ. ಸಿಂದಗಿಯ ಶ್ರೀ ಭೀಮಾಶಂಕರ ಮಠವು ಬಿಂದಗಿಯ ಮಹಾತ್ಮೆಯಿಂದಲೇ ಗುರುತಿಸಲ್ಪಡುತ್ತದೆ. ಆದರೆ ಅದಕ್ಕಿಂತ ಹೆಚ್ಚಾಗಿ ನಮ್ಮ ನಾಡಿನಲ್ಲಿ ಹೊಸದೊಂದು ಸಂಪ್ರದಾಯವನ್ನು, ನಾಥ–ಪಂಥವನ್ನು ಪ್ರಾರಂಭಿಸಿದ ಹಾಗೂ ಇಂದಿನವರೆಗೂ ನಡೆಸಿಕೊಂಡು ಬಂದ ಹೆಗ್ಗಳಿಕೆ ಭೀಮಾಶಂಕರ ಮಠದ್ದಾಗಿದೆ.

ಜಕ್ಕಪ್ಪಯ್ಯನ ಜನನ :

ಭೃಂಗವಳ್ಳಿಯ ಸುಂಕದ ಅಧಿಕಾರಿಯಾಗಿ ಸೇವೆಯಲ್ಲಿದ್ದ ಸಂಕಣ್ಣನಿಗೆ ಅವರ ಆರಾಧ್ಯ ಗುರುಗಳಾದ ಗುರುಪ್ಪಯ್ಯನವರು ತಮ್ಮ ಸಮಾಧಿಯ ಸಮಯಕ್ಕೆ ಶಕೆ ೧೬೦೨ರಲ್ಲಿ ಭೀಮಾಶಂಕರ ಎಂದು ಹೊಸ ಹೆಸರನ್ನು ನಾಮಕರಣ ಮಾಡಿದ್ದರು. ಭೀಮಾಶಂಕರರು ತಮ್ಮ ಸೇವೆಗಾಗಿ ಅಲ್ಲಿಂದ ಬಳಗಾನೂರಿಗೆ ಬಂದು ನೆಲೆಸಿದರು. ಅವರು ತನ್ನ ಯಥಾ ರೀತಿ ಆಧ್ಯಾತ್ಮ ಚಿಂತನೆಯಲ್ಲಿ ಕಾಲಕಳೆಯುತ್ತ ದರ್ಶನಾರ್ಥಿಗಳಿಗೆ ಬಹು ಪೂಜ್ಯರೆನಿಸಿದರು. ಆಗ ಅವರ ಸಾಧ್ವೀ ಶಿರೋಮಣಿ ಸತಿಯಾದ ಗಿರಿಜಮ್ಮನವರು ಚೊಚ್ಚಲ ಮಗುವಿಗೆ ಜನ್ಮ ನೀಡಿದರು. ಕ್ರಿ.ಶ. ೧೬೨೬ ರಂದು ಜನಿಸಿದ ಅವತಾರಿ ಪುರುಷನೇ ಜಕ್ಕಪ್ಪ ಎಂಬ ನಾಮಕರಣ ಹೊಂದಿದನು. ಆಗ ಬಾದಶಹರ ಆಳ್ವಿಕೆಗೊಳಪಟ್ಟ ಭೀಮಾಶಂಕರರ ಸರಕಾರಿ ಸೇವೆಯ ಕುರಿತು ಅನುಮಾನಗೊಂಡ ಅಂದಿನ ಅಧಿಕಾರಿ ಇವರ ಲೆಕ್ಕ–ಪತ್ರಗಳನ್ನು ಪರಿಶೀಲಿಸಿದನು. ಅದರಂತೆ ಅಲ್ಲಿಯ ಕೆಲ ಸಾಕ್ಷಾಧಾರಗಳಿಂದ ಬಾದಶಹನಿಗೆ ವರದಿ ಸಲ್ಲಿಸಿದೊಡನೆ ಭೀಮಾಶಂಕರರೂ ಈ ಸೇವೆಯಿಂದ ರಾಜೀನಾಮೆ ಪತ್ರವನ್ನು ಕಳಿಸಿದರು. ಇದನ್ನು ನೋಡಿದ ಬಾದಶಹ ಇವರ ಆಧ್ಯಾತ್ಮ ಚಿಂತನೆಗೆ ವ್ಯತ್ಯಯ ಮಾಡಬಾರದೆಂದು ಈವರೆಗೆ ಅವರು ನಿಸ್ವಾರ್ಥ ಭಾವನೆಯಿಂದ ಸಲ್ಲಿಸಿದ ಸೇವೆಗೆ ಮನ್ನಣೆ ನೀಡಿ ಇವರ ಮಠಕ್ಕೆ ಒಂದು ಸನದು ಹಾಕಿಕೊಟ್ಟರು. ಆ ಸನದು ಈಗಲೂ ಮಠದಲ್ಲಿ ದೊರೆಯುತ್ತದೆ.[೧೧೬]

ಸಿಂದಗಿಗೆ ಆಗಮನ :

ಬೀಮಾಶಂಕರರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ ನಂತರ ಬಳಗಾನೂರ ಗ್ರಾಮವನ್ನು ತ್ಯಜಿಸಿ ಸ್ವಗ್ರಾಮವಾದ ಸಿಂದಗಿಗೆ ಬಂದು ನೆಲೆಸಿದರು. ಕೆಲ ವರ್ಷಗಳ ನಂತರ ೧೬೮೬ರಲ್ಲಿ ಬಿಜಾಪುರ ನಗರವು ಮೊಗಲ ದೊರೆ ಔರಂಗಜೇಬನ ವಶವಾಯಿತು. ಆ ಸಮಯದಲ್ಲಿ ಬಿಜಾಪುರದ ಬಹು ಭಾಗ ಯುದ್ಧ, ಬರ, ಪ್ಲೇಗು ಇತ್ಯಾದಿ ಸಂಕಷ್ಟಕ್ಕೀಡಾಗಿ ಜನತೆ ತತ್ತರಿಸಿ ಹೋಗಿತ್ತು. ಭೀಮಾಶಂಕರರು ಕುಟುಂಬ ಪರಿವಾರ ಸಮೇತ ಸಿಂದಗಿಯಿಂದ ಗೋಕರ್ಣ ಕ್ಷೇತ್ರಕ್ಕೆ ಹೋಗಿದ್ದು, ನಂತರ ಮರಳಿ ಬಂದು ಲಕ್ಷ್ಮೇಶ್ವರದಲ್ಲಿ ಹನ್ನೆರಡು ವರ್ಷ ಕಳೆದರು.[೧೧೭]

ಜಕ್ಕಪ್ಪಯ್ಯನ ಯೋಗಾಭ್ಯಾಸ :

ಮಹಿಮಾ ಪುರುಷನಾದ ಚೊಚ್ಚಿಲು ಪುತ್ರ ಜಕ್ಕಪ್ಪಯ್ಯ ಸದಾ ಕಾಲದಲ್ಲಿ ತಂದೆಯ ಸರ್ವಸತ್ವ ಗುಣಗಳನ್ನು ಅನುಸರಿಸಿ ಸಕಲ ವೇದ ಪುರಾಣ ಶಾಸ್ತ್ರಗಳನ್ನು ತರ್ಕ ಮೀಮಾಂಸೆಯ ಜೊತೆಗೆ ಯೋಗಾಭ್ಯಾಸವನ್ನೂ ಮಾಡಿದರು. ತಂದೆ ಭೀಮಾಶಂಕರರು ಸಿದ್ಧ ಪುರುಷನ ಮುಖೇನ ಉಪದೇಶವನ್ನು ಪಡೆದರು. ಈ ಉಪದೇಶ ನೀಡಿದ ಸಿದ್ಧಿಯ ಪುರುಷ ಗೋರಕ್ಷನಾದ ನಿರಬಹುದೆಂದು ಊಹಿಸಲಾಗಿತ್ತು. ಈ ಸಿದ್ಧಿಪುರುಷರ ಮಹಾ ಸಮಾಧಿಯವರೆಗೂ ಭೀಮಾಶಂಕರರು ತಮ್ಮ ಪರಿವಾರ ಸಮೇತ ಲಕ್ಷ್ಮೇಶ್ವರದಲ್ಲಿಯೇ ನೆಲೆಸಿದ್ದು ಈ ಅವಧಿಯಲ್ಲಿ ಜಕ್ಕಪ್ಪಯ್ಯನವರು ಪೂರ್ಣ ಆಧ್ಯಾತ್ಮದ ಸಾಧನೆಯನ್ನು ಸಾಧಿಸಿದ್ದರು.[೧೧೮]

ಸಿದ್ಧಪುರುಷನ ಮಹಾ ಸಮಾಧಿಯ ನಂತರ ತಮ್ಮ ಪರಿವಾರ ಸಮೇತ ಸಿಂದಗಿಗೆ ಬಂದು ನೆಲೆಸಿದರು. ಸಾಧ್ವಿಮಣಿ ಲಕ್ಷ್ಮೀಬಾಯಿಯ ಜೊತೆಗೆ ಜಕ್ಕಪ್ಪಯ್ಯನವರ ವಿವಾಹವಾಯಿತು. ಜಕ್ಕಪ್ಪಯ್ಯನವರು ತಮ್ಮ ಆಧ್ಯಾತ್ಮ ಜೀವನ ಹಾಗೂ ಆದರ್ಶ ಗ್ರಹಸ್ಥಾಶ್ರಮ ಇವೆರಡರಲ್ಲಿ ಸಮರಸದ ಸಮನ್ವಯ ಭಾವನೆಯಿಂದ ಸಿಂದಗಿಯಲ್ಲಿದ್ದು ಸುತ್ತಲಿನ ಅನೇಕ ಸದ್ಭಕ್ತರ ಶ್ರದ್ಧಾಭಕ್ತಿಯ ಗೌರವಾದರಕ್ಕೆ ಪಾತ್ರರಾದರು.

ಜಕ್ಕಪ್ಪಯ್ಯನವರ ದೃಷ್ಟಿಕೋನ ಬಹಳ ವಿಶಾಲವಾಗಿತ್ತು. ಅನುಭಾವಿ ಪದಗಳ ಜೊತೆಗೆ ಅವರು ಕಥನಕಾವ್ಯಗಳನ್ನು ರಚಿಸಿದ್ದಾರೆ. ಅವರ ಅಪರೂಪದ ಕೃತಿಗಳಾದ "ದತ್ತಾತ್ರೇಯ ಷಟ್ಪದಿ" ಹಾಗೂ "ಶ್ರೀ ರಾಮಚಂದ್ರ ಅನುಸಂಧಾನ" ಈ ಖಂಡಕಾವ್ಯಗಳು ಅಭ್ಯಾಸಕ್ಕೆ ಅರ್ಹವಾಗಿವೆ.

ಅಡಿಟಿಪ್ಪಣಿಗಳು :

1. Sheik Ali. B. 2011, History of Bhamani And Adil Shahi rulers, Mysore Book House, Mysore, p-343
2. Ibid, p-344
3. ಕೃಷ್ಣಮೂರ್ತಿ, ಮ.ಸು. ೧೯೯೫, ಸೂಫಿ ಪ್ರೇಮಕಾವ್ಯ, ಪು-೩
4. ಅದೇ, ಪು-೩
5. ತರೀಕೆರೆ, ರಹಮತ, ೨೦೦೮, ಕರ್ನಾಟಕದ ಸೂಫಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೬-೨೭
6. ಕಟ್ಪಾಡಿ, ಫಕೀರ್ ಮುಹಮ್ಮದ, ೨೦೧೦, ಸೂಫಿ ಸಂತರು, ಅಂಕಿತ ಪುಸ್ತಕ, ಬೆಂಗಳೂರು, ಪು-೧೨-೧೩
7. ಅದೇ, ಪು-೧೩
8. ಕೃಷ್ಣಮೂರ್ತಿ, ಮ.ಸು. ೧೯೯೫, ಸೂಫಿ ಪ್ರೇಮಕಾವ್ಯ, ಪು-೫
9. ಕಟ್ಪಾಡಿ, ಫಕೀರ್ ಮುಹಮ್ಮದ, ೨೦೧೦, ಸೂಫಿ ಸಂತರು, ಅಂಕಿತ ಪುಸ್ತಕ, ಬೆಂಗಳೂರು, ಪು-೧೩-೧೪
10. ತರೀಕೆರೆ, ರಹಮತ, ೨೦೦೮, ಕರ್ನಾಟಕದ ಸೂಫಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೨೮
11. ಕಟ್ಪಾಡಿ, ಫಕೀರ್ ಮುಹಮ್ಮದ, ೨೦೧೦, ಸೂಫಿ ಸಂತರು, ಅಂಕಿತ ಪುಸ್ತಕ, ಬೆಂಗಳೂರು, ಪು-೧೦
12. ಅದೇ, ಪು-೧೦
13. ತರೀಕೆರೆ, ರಹಮತ, ೨೦೦೮, ಕರ್ನಾಟಕದ ಸೂಫಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೩೮
14. ಅದೇ, ಪು-೩೯-೪೦
15. K.A. Nizami; *Some Aspects of Religion and Politics*; p.p.51-181-204; *Islamic Thought and Movements*; p.p.131-190
16. See; *Islamic Thought and Movements*; p.p.62-174, 350-62.
17. Ibid.

18. For details see; K.A Nizami; *Some Aspects of Religion and Politics*; p.p.199-219; R.M Eaton; *Sufis of Bijapur*; p.p.46-48; Iqbal Ali Shah; *Islamic Sufism*; p.p. 285-90.

19. Muhammad Salim; 1969, *Shaikh Bahauddin Zakariya of Multan*; Pakistan Historical Society; Karachi;; p.p.1-24.

20. For further details; Muhammad Umar; 1993;*Islam in northern India during the eighteenth century*; Delhi; p.p.50-70.

21. K.A Nizami; *Some Aspects of Religion and Politics*; p.p.221-23.

22. Sayed Jalaluddin Surkh Bukhari took *bait* in silsila-i-Qadriya from Sayed Muhammad bin Abul Ghais Abdal, a descendant of Shaikh Abdul Qadir Gilani

23. Makhdum Jahanian also received Qadri khilafat. Shaikh Abdul Haque Muhaddis Dehlvi; *Akhbar-ul-Akhiyar*; Delhi; 1309 A.H;

24. Shaikh Usman alias Shahbaz Qalandar, too was initiated in the Qadri silsila. Yusuf Mirak; *Mazhar-i-Shahjahani*; Sayed Hussamuddin Rasidi; Karachi; 1962; p.p.363-4.

25. S.R Sharda; 1974, *Sufi Thought* (*Its Development in Punjab and its Imact on Punjabi Literature*); Delhi;; p.p.65.

26. K.A Nizami; *Some Aspects of Religion and Politics*; p.p.225-28.

27. K.A Nizami; 1950; *Shattari Saints and their Attitude Towards the State*; *Medieval India*; Quarterly; part-IV; p.p.56.

28. *Indian Muslims*; p.p.301.

29. *Medieval India Quarterly*; part-IV; 1950; p.p.68; *Muslim Revivalist Movements*; p.p. 64; R.M Eaton; *Sufis of Bijapur*; p.p.61; *Islamic Thought and Movements*; p.p. 380-1.

30. R.M Eaton; *Sufis of Bijapur*; Princeton University Press, New Jersey, pp-73-6, 112-31.

31. *Muslim Revivalist Movements*; p.p. 64; R.M Eaton; *Sufis of Bijapur*; p.p.73-4.

32. *Intibah-fi-Silasil-i-Auliya Allah*; MS; Habib Ganj; 21/92; Delhi; p.p.137-8.

33. K.A Nizami; *Naqshbandi influence on Mughal Rulers and Politics*; Islamic Culture; Hyderabad; 1965; p.p.42; *Islamic Sufism*; p.p.97-112.
34. *Islamic Culture*; p.p.43-4.
35. Ibid.
36. Muhammad Hashim Kishmi; *Zubdat-ul-Maqamat*; Lucknow; 1890; p.p.134-136; Shaikh Badruddin Sarhindi; *Hazrat-ul-Quds*; Lahore;1971; p.p. 29-34; for details; Dara Shikoh; *Safinat-ul-Auliya*; MS no. 13; Department of History Aligarh Muslim University; ff 231 a; Ghausi Shattari; *Gulzar-i-Abrar*; Rotography, no. 174; ff; 336a-337b; *Badshah Nama*; p.p.335.
37. *Zubdat-ul-Maqamat*; p.p. 135-6; he followed the Qadri system of discipline in conferring *Khirqa-o-khilfat*, and *kulah-o-damani*. He received Qadri khilfat from Shah Sikandar, a disciple of Shah Kamal Qadri of Kaithal.
38. For details see; *Islam in northern India during the eighteenth century*; p.p.70-80.
39. H.A.R Gibb and J.H Kramers; *Shorter Encyclopedia of Islam*; Leiden; E.G Brill; 1953; p.p.74, 202-4.
40. H.A.R Gibb and J.H Kramers; *Shorter Encyclopedia of Islam*; Leiden; E.G Brill; 1953; p.p.74, 202-4.
41. *Sufi orders in Islam*; p.p.43-4; This brotherhood was introduced in the twelfth century by Arab merchants from Baghdad to the kingdom of Bulgar on the Volga and to the cities of Turkistan especially those of Farghana valley; see Alexander Bennigsen, and Senders Wimbush; *Mystics and Commissars*; London; p.p.9-31.
42. Jafar Sharif; *Qanun-i-Islam*; Oxford; 1921; p.p.192-4.
43. Muhammad Din Kalim Qadri; *Tazkira-i-Mashaikh-i-Qadriya*; Lahore; 1975; p.p.31-4; James Hastings; *Encyclopedia of Religion and Ethics*; Edinburgh; 1914; vol-I; p.p.69.
44. Badauni seeks his help; *"O Ghaus-i-Azam, help me, I have none amongst the (worldly) goods; help this poor beggar; O Sultan of the both the worlds; O*

Shah-i-Gilan, I wish for nothing, except your blessings"; *Tazkira-i-Mashaikh-i-Qadriya*; p.p.26-27.

45. Shaikh Abdul Haque composed the following lines in honour of Shaikh; Ghous-i-Azam is a guide in the path of belief. He is a distinguished among the saints as Muhammad (PBUH) among the prophets; saints are his willing and submissive slaves; his feet rest upon their necks; Indo-Iranica; vol-III; p.p. 5-6; *Tazkira-i-Mashaikh-i-Qadriya*; p.p.24.
46. *Tazkira-i-Mashaikh-i-Qadriya*; p.p. 29-30.
47. *Sakinat-ul-Auliya*; p.p.11-2, 219, 100-131.
48. *Safinat-ul-Auliya*; ff, 3a,-7a, 34b, 43a, 75a, 140a, 208a, 220b, 254b.
49. K.A Nizami; *Hayat-i-Shaikh Abdul Haque Dehlvi*; Delhi; 1964; p.p.76-79, 129-42; Shaikh Muhammad Ikram; *Rauda-i-Kausar*; Lahore; 1968; p.p.63.
50. Sharda has divided the Qadris in twenty sub-sects; *Sufi Thought*; p.p.66-67; for details, J.A Subhan; Lucknow; 1960; p.p.256-262.
51. For a brief life sketch; see *Kashf-al-Mahjub*; Professor Muhammad Habib doubts that it was originally written in Persian language Muhammad Hamid.
52. *Sahifa-e-Ahl-e-Huda, pp- 27,29; Mishkat, f, 493a; Rauzat-ul-Auliya-i-Bijapur copya, pp-119*
53. *Rawzat-ul-Auliya-i-Bijapur, copy a pp-119-23; tazkira-e-Auliya-deccan, pp-94-96; Tazkira-e-Mashooq-e-Ilahi, pp-206-9; Sahifa,pp-50-54*
54. *Tazkira-e-Auliya-e-Deccan; pp-94; Rauzat-ul-Auliya-i-Bijapur, copy a,pp-119*
55. *Sukh Anjan, ed,by dr.Saiyida Jaffar, Hyderabad, 1968,pp-348-49*
56. *Ibid, pp-90, 95, 135-38*
57. *Rauzat-ul-Auliya-i-Bijaopur copy a pp-123; Sahifa-e-Ahl-i-Huda,pp-36-37*
58. *For details, see Sahifa-e-Ahl;-i-Huda, pp-46; Rauzat-ul-Auliya-i-Bijapur, copy a pp- 123*
59. *Sahifa-e-Ahl-i-Huda; pp-37*
60. *Sandila 55 kilometer from Lucknow*
61. *Sahifa-e-Ahl-i-Huda; pp-42-44*

62. *Shah Ismail Quadri was a descendent of Shaikh Muhammad Shamsuddin Multan; Sahifa-e-Ahl-i-Huda; pp-46*
63. *Rauzat-al-Auliya-e-Bijapur; pp-112; Sahifa-e-Ahl-i-Huda; pp-42*
64. *Sahifa-e-Ahl-i-Huda; pp-47-48*
65. *Ibid; pp-49;*
66. *Auliya-e-Bijapur; pp-119-123-164;Sahifa-e-Ahl-i-Huda; pp-16-17*
67. *Rauzat-al-Auliya-e-Bijapur; pp-203*
68. *Ibid; p-127*
69. *Ibid; pp-131; Tazkira-e-Auliya-e-Deccan,vol-II; pp-983-985*
70. *Khawas Khan Deccani "Khuwariq-i-Razzaqiah"pp-16-17(Sahifa-e-Ahl-i-Huda)*
71. *Rauzat-al-Auliya-e-Bijapur; pp-131*
72. *Rauzat-al-Auliya-e-Bijapur; pp-131; Sahifa-e-Ahl-i-Huda; pp-16-18*
73. *Sahifa-e-Ahl-i-Huda, pp- 20-21; S.A. pp-11-12*
74. *Rauzat-ul-Auliya-i-Bijapur, pp-126*
75. *Sahifa-e-Ahl-i-Huda, pp-27*
76. Eton R. M. 1978, Sufis of Bijapur, Princeton University Press , New Jersey, p-120
77. Ibid, p-120
78. Siddiqi, Dakani Inscription, p-80, Shajart al-Atqiya, p-28, lines-2-3
79. Eton R. M. 1978, Sufis of Bijapur, Princeton University Press , New Jersey, p-244
80. Ibid, p-245
81. Ibid, p-245
82. Amin al Din A'la Risala-yi-Qubiya, Dakhni MS (Hyderavad, Salar Jung Museum, Urdu MMS Tasawwuf and Akhlaq no-99)
83. Imaratwale, A.A. 2007, *History of Bijapur Subah*, p-50
84. Zuberi, Ibrahim, *Rauzat-al-Auliy*A, p-121
85. Ibid, pp- 148, 157,161, 170 and 121-122

86. Husaini Shaheed, 1973, *Saiyid Shah Amin-al-Din Ali Ala, Life and works*. pp-223-24

87. Saiyida, Jafar, 1908, *Introduction to Abul Hasan Qadri, Suk Anjan* (urdu) p-60

88. Siddiqi, Akbaruddin, 1975, *Bujhte Chiragh, Dakhni Adab Par Mazamin ka Majmua*, pp-56-58

89. Burhan-al-Din Janam: *Kalimat al-Haqaiq,* edited by M. Akbaruddin Siddiqi, 1961, pp-56-57

90. Hafiz Saiyid, 1939, *Kulliyat-i-Bahri*, Nawal Kishore, pp-50-51

91. Asiya Begum, 1983, *Society and Culture under the Bijapur Sultans*.(unpublished Ph.d Thiesis) P-198

92. Sakhawat Mirza, 1963, *Shaikh Mahmud Chishti al-Mulaqqab ba Kush Dahan Bijapur,*

p-71

93. ಪ್ರಜಾವಾಣಿ, ಕರ್ನಾಟಕ ದರ್ಶನ ಫೆಬ್ರುವರಿ ೭, ೨೦೧೨

94. ಈರಣ್ಣ ಕೆ. ಪಿ. ೧೯೯೫, ಮೌನೇಶ್ವರ ಹಾಗೂ ಸರ್ವಜ್ಞ, ಶ್ರೀ ಭುವನೇಶ್ವರ ಪ್ರಕಾಶನ ಶಿರಹಟ್ಟಿ, ಪು-೪-೬

95. ಅದೇ, ಪು-೭

96. ಅದೇ, ಪು-೭

97. ಅದೇ, ಪು-೧೦-೧೧

98. ಅದೇ, ಪು-೧೨-೧೩

99. ರೋಹಿಡೇಕರ ಎಸ್. ಆರ್. ೨೦೦೪, ವಿಜಾಪುರ ಜಿಲ್ಲೆಯ ಪಂಚ ಪವಾಡ ಪುರುಷರು, ಶ್ರೀ ರುಕ್ಮಾ ಪ್ರಕಾಶನ, ಬೆಂಗಳೂರು, ಪು-೧-೨

100. ಅದೇ, ಪು-೩-೫

101. ಅದೇ. ಪು-೫

102. ಕುಲಕರ್ಣಿ ಕೆ. ಕೆ, ೧೯೮೯, ಕಾಖಂಡಕಿಯ ಶ್ರೀ ಮಹಪತಿರಾಯರು, ಕನ್ನಡ-ಮರಾಠಿ ಸ್ನೇಹ ವರ್ಧನ ಕೇಂದ್ರ ಪುಣೆ, ಪು-೭೭

103. ರೋಹಿಡೇಕರ ಎಸ್. ಆರ್. ೨೦೦೪, ವಿಜಾಪುರ ಜಿಲ್ಲೆಯ ಪಂಚ ಪವಾಡ ಪುರುಷರು, ಶ್ರೀ ರುಕ್ಮಾ ಪ್ರಕಾಶನ, ಬೆಂಗಳೂರು, ಪು-೧-೨

104. ಪಾಟೀಲ್ ಎಂ. ಬಿ, ೧೯೯೭, ಶಾಹಿಕಾಲದ ಪಂಚಸಾಧಕರು, ಸರಳ ಸಾಹಿತ್ಯ ಪ್ರಕಾಶನ, ವಿಜಾಪುರ, ಪು-೬೮

105. ಅದೇ, ಪು-೭೦-೭೧

106. ರೋಹಿಡೇಕರ ಎಸ್. ಆರ್. ೨೦೦೪, ವಿಜಾಪುರ ಜಿಲ್ಲೆಯ ಪಂಚ ಪವಾಡ ಪುರುಷರು, ಶ್ರೀ ರುಕ್ಮಾ ಪ್ರಕಾಶನ, ಬೆಂಗಳೂರು, ಪು-೩೦

107. ಪಾಟೀಲ್ ಎಂ. ಬಿ, ೧೯೯೭, ಶಾಹಿಕಾಲದ ಪಂಚಸಾಧಕರು, ಸರಳ ಸಾಹಿತ್ಯ ಪ್ರಕಾಶನ, ವಿಜಾಪುರ, ಪು-೩೦

108. ಅದೇ, ಪು-೭೮-೭೯

109. ಅದೇ, ಪು-೭೮-೭೯

110. ಅದೇ, ಪು-೮೩-೮೫

111. ರೋಹಿಡೇಕರ ಎಸ್. ಆರ್. ೨೦೦೪, ವಿಜಾಪುರ ಜಿಲ್ಲೆಯ ಪಂಚ ಪವಾಡ ಪುರುಷರು, ಶ್ರೀ ರುಕ್ಮಾ ಪ್ರಕಾಶನ, ಬೆಂಗಳೂರು, ಪು-೩೭-೩೮

112. ಅದೇ, ಪು-೩೮

113. ಅದೇ, ಪು-೩೮-೩೯

114. ಅದೇ, ಪು-೩೯-೪೧

115. ಅದೇ, ಪು-೪೭

116. ಪಾಟೀಲ್ ಎಂ. ಬಿ, ೧೯೯೭, ಶಾಹಿಕಾಲದ ಪಂಚಸಾಧಕರು, ಸರಳ ಸಾಹಿತ್ಯ ಪ್ರಕಾಶನ, ವಿಜಾಪುರ, ಪು-೧೩೩-೩೪

117. ಅದೇ, ಪು-೧೩೬

118. ಅದೇ, ಪು-೧೩೪-೩೫

ಅಧ್ಯಾಯ ೭
ಕಲೆ ಮತ್ತು ವಾಸ್ತುಶಿಲ್ಪ

ಅಧ್ಯಾಯ-೭

ಕಲೆ ಮತ್ತು ವಾಸ್ತುಶಿಲ್ಪ

ಕಲೆಯು ಮಾನವನ ಅತಿ ಸೂಕ್ಷ್ಮ ಚೇತನದ ಫಲ. ಅದು ಸಮಾಜದ ಸಂಸ್ಕೃತಿಯ ಕನ್ನಡಿಯಾಗಿದ್ದರೂ ನಾವು ವಿಶಾಲಾರ್ಥದಲ್ಲಿ ಅದನ್ನು ಗಾಂಧಾರ ಶೈಲಿ, ಉತ್ತರ ಶೈಲಿ, ದಕ್ಷಿಣಾತ್ಯ ಶೈಲಿ, ಮುಸ್ಲಿಂ ಶೈಲಿ ಹಾಗೂ ಹಿಂದೂ-ಮುಸ್ಲಿಂ ಶೈಲಿ ಎಂದು ಮುಂತಾಗಿ ಪ್ರಾದೇಶಿಕ ಹಾಗೂ ಜನಾಂಗೀಯ ಸಮುದಾಯಕ್ಕೆ ತಕ್ಕಂತೆ ಬೇರೆ ಬೇರೆಯಾಗಿ ನೋಡುತ್ತೇವೆ. ಇಂತಹ ಪ್ರಾದೇಶಿಕ ಹಾಗೂ ಜನಾಂಗೀಯ ಭಿನ್ನತೆಯುಳ್ಳ ಒಂದು ಶೈಲಿ ಮುಸ್ಲಿಂ ಶೈಲಿ. ಇದು ಭಾರತಕ್ಕೆ ಮೊದಲು ೧೧-೧೨ನೆಯ ಶತಮಾನದ ಸುಮಾರಿಗೆ ಇರಾನ ಮತ್ತು ಮಧ್ಯಏಷಿಯಾದಿಂದ ಉತ್ತರ ಭಾರತಕ್ಕೆ ಹರಿದು ಬಂದಿತು. ನಂತರ ಈ ಶೈಲಿಯು ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೂ ಪ್ರಸಾರವಾಯಿತು. ಹೀಗೆ ಹೊರಗಿನಿಂದ ಬಂದು ಇಲ್ಲಿ ನೆಲೆಸಿ ಸ್ಥಳಿಯರೊಂದಿಗೆ ಬೆರೆತು ತಾವು ತಂದ ಕಲೆಯನ್ನು ಒಂದು ನೂತನ ವಿನ್ಯಾಸದಲ್ಲಿ ಮುಸ್ಲಿಮರು ಅರಳಿಸಿದರು. ಹೀಗಾಗಿ ಅದು ಹಲವಾರು ದೃಷ್ಟಿಗಳಿಂದ ವಿಶಿಷ್ಟವಾಗಿದೆ. ಸ್ಥಳಿಯರೊಂದಿಗೆ ಇಸ್ಲಾಮಿಕ ಸಮಾಜವು ಬೆರೆತು ಹೋಗಿದ್ದರಿಂದ ಹಿಂದೂ ಕಲೆಯ ಅನೇಕ ಲಕ್ಷಣಗಳನ್ನು ಹಿರಿಕೊಂಡು ಅನೇಕ ಇಸ್ಲಾಮಿಕ ತಾಂತ್ರಿಕತೆಗಳನ್ನು ಕೊಟ್ಟಿತು.[೧]

ಭಾರತೀಯ ಮುಸ್ಲಿಂ ಹೊಸ ಶೈಲಿಯು "ಇಂಡೋ-ಇಸ್ಲಾಮಿಕ" (ಇಂಡೋ-ಸಾರ್ಸೆನಿಕ್)ಶೈಲಿ ಎಂದು ಪ್ರಸಿದ್ಧಿ ಪಡೆಯಿತು. ಈ ಶೈಲಿಯು ಮೊಘಲರ ಕಾಲದಲ್ಲಿ ಪ್ರಗತಿ ಸಾಧಿಸಿತಲ್ಲದೇ, ದಕ್ಷಿಣದಲ್ಲಿ ಬಹಮನಿ ಮತ್ತು ಆದಿಲ್‌ಶಾಹಿಗಳ ಉತ್ಸಾಹಪೂರ್ಣ ಪೋಷಣೆಯ ಮೂಲಕ ಅದರ ವೈಭವ ಹೆಚ್ಚಿತು. ಈ ಶೈಲಿಯ ಕಟ್ಟಡಗಳ ವಿನ್ಯಾಸ ಭಾರತೀಯವಾಗಿದ್ದು ಗೋಡೆ, ಗುಮ್ಮಟ ಮತ್ತು ವಿಶಾಲವಾದ ಒಳಭಾಗಗಳು ಮುಸ್ಲಿಂ ವೈಶಿಷ್ಟ್ಯಗಳಾಗಿವೆ. ಮುಸಲ್ಮಾನರು ಗಾರೆಯ ಉಪಯೋಗವನ್ನು ಜನಪ್ರಿಯಗೊಳಿಸಿದರು. ಇಸ್ಲಾಮಿನ ಶೈಲಿಯಲ್ಲಿ ಗುಂಬಜ (ಗುಮ್ಮಟ), ಮಿನಾರ (ಗೋಪುರ) ಮತ್ತು ಸ್ಥಂಭಗೋಪುರಗಳನ್ನು ಒಳಗೊಂಡಿದೆ. ಜ್ಯಾಮಿತಿಯ ವಿನ್ಯಾಸಗಳು ಮತ್ತು ಅಕ್ಷರಗಳ ಕೆತ್ತನೆಯ ಸಾಲುಗಳು ಮುಸ್ಲಿಂ ಕಟ್ಟಡಗಳ ಸೌಂದರ್ಯವನ್ನು ಅಧಿಕಗೊಳಿಸಿದವು.[೨]

"ಇಸ್ಲಾಮಿಕ ಕಲೆಗೆ ಅವರದೇ ವಿಶಿಷ್ಠ ಲಕ್ಷಣಗಳಿವೆ. ಅದು ಒಂದು ನಿರ್ದಿಷ್ಠ ಕುಲದ ಅಥವಾ ಭೌಗೋಳಿಕ ಜನಸಮುದಾಯದ ಉತ್ಪನ್ನವಲ್ಲ. ಅದು ಮೊರಾಕೋದಿಂದ ಇಂಡೋನೇಷಿಯಾದವರೆಗಿನ ಸಮಸ್ತ ಇಸ್ಲಾಮಿಕ ಜನರ ಸೌಂದರ್ಯದ ಅಭಿವ್ಯಕ್ತಿಯಾಗಿತ್ತು. ಕೊನೆಯಿಲ್ಲದಷ್ಟು ವೈವಿಧ್ಯ ಅದರಲ್ಲಿತ್ತು. ಭಾರತೀಯ ಸಾಂಪ್ರದಾಯಿಕ ಕಲೆಗಳ ಸತ್ವವು ಅದಕ್ಕೆ ಸೇರಿಕೊಂಡು ಒಂದು ಮೋಹಕವಾದ ಆಕಾರವನ್ನು ತಳೆಯಿತು. ಇಸ್ಲಾಮಿಕ್ ಕಲೆ ಅಲಂಕಾರಿಕವಾದದ್ದು, ವ್ಯಕ್ತಿನಿಷ್ಟವಾದದ್ದು. ಮಾನವಾಕೃತಿಯ ಚಿತ್ರವನ್ನು

ಅನುಮತಿಸಿಲ್ಲವಾದ್ದರಿಂದ ಮುಸ್ಲಿಂ ಕಲೆಯು ರೇಖಾಗಣಿತೀಯ ಹಾಗೂ ಸಸ್ಯರೂಪದ ಚಿತ್ರಗಳಲ್ಲಿ ಬಳ್ಳಿಗಳ ಬಳಿಕೆ ಪ್ರಧಾನವಾಗಿ ಪರಿಣಮಿಸಿತು. ಒಂದು ಹೂವು ಅಥವಾ ಎಲೆಯು ಇನ್ನೊಂದರಿಂದ ಮೂಡುತ್ತಾ ಕೊನೆಯ ಇಲ್ಲದ ಬಳ್ಳಿಯಾಗಿ ವಿವಿಧ ವಿನ್ಯಾಸಗಳನ್ನು ರೂಪಿಸುತ್ತದೆ. ಅದು ಭಾರತೀಯ ಕಲೆಯಷ್ಟು ಸಮೃದ್ಧವೂ, ಜಟಿಲವಾದುದೂ ಅಲ್ಲ, ಆದರೆ ಅದರ ಸರಳತೆ, ಮಾಧುರ್ಯ ಮತ್ತು ಸಹಜತೆಗಳು, ಚಿತ್ರಿತಶಕ್ತಿ ಮತ್ತು ಪ್ರಮಾಣಬದ್ಧತೆಗಳೊಂದಿಗೆ ಸೇರಿ ಇಡೀ ರಚನೆಯು ವಿಶಿಷ್ಟವಾಗಿ ಆಕರ್ಷಕವಾಯಿತು.[೩]

ಬಹಮನಿ ಮತ್ತು ಆದಿಲ್‌ಶಾಹಿಗಳ ಆಳ್ವಿಕೆಯ ಕಾಲದಲ್ಲಿ ಅಭಿವೃದ್ಧಿಗೊಂಡ ವಾಸ್ತುಶಿಲ್ಪವು ವೈಶಿಷ್ಟ್ಯ ಪೂರ್ಣವಾಗಿದೆ. ದೆಹಲಿ ಸುಲ್ತಾನರ ವಾಸ್ತುಶಿಲ್ಪ ಶೈಲಿಗಿಂತ ವಿಭಿನ್ನ ರೀತಿಯಲ್ಲಿ ವಿಕಸಿತಗೊಂಡ ಬಹಮನಿ ವಾಸ್ತುಶಿಲ್ಪ ಶೈಲಿಯು ತನ್ನದೇ ಆದ ಸ್ವಂತಿಕೆಯನ್ನು ಪ್ರಕಟಿಸಿ ಆದಿಲ್‌ಶಾಹಿಗಳ ಕಾಲದಲ್ಲಿ ಪರಿಪೂರ್ಣತೆಯನ್ನು ಪಡೆದು ನಿಂತಿತು. ಭಾರತೀಯ ವಾಸ್ತುಶಿಲ್ಪ ವೈಭವಕ್ಕೆ ಬಿಜಾಪುರದ ಆದಿಲ್‌ಶಾಹಿಗಳು ಸಲ್ಲಿಸಿರುವ ಕಾಣಿಕೆ ಬಹು ಅಮೂಲ್ಯವಾದದ್ದು. ಬಿಜಾಪುರಕ್ಕಿಂತ ಹೆಚ್ಚು ಭವ್ಯ ಕಟ್ಟಡಗಳನ್ನು ಕಲಾ ವೈಭವವನ್ನು ಹೊಂದಿರುವ ನಗರಗಳು ಭಾರತದಲ್ಲಿ ಬಹಳವಿಲ್ಲ, ಹೊಯ್ಸಳ ಕಾಲದ ಅನಂತರ ಬಿಜಾಪುರದ ಆದಿಲ್‌ಶಾಹಿ ವಂಶವೇ ಸೌಂದರ್ಯೋಪಾಸನೆಯಲ್ಲಿಯೂ, ರಚನಾ ಸಾಮರ್ಥ್ಯದಲ್ಲಿಯೂ ಅದ್ಭುತ ವಾಸ್ತುಶಿಲ್ಪವನ್ನು ಬೆಳೆಸಿವೆ ಎಂದು ಹೇಳಬಹುದು.[೪]

ಕ್ರಿ.ಶ. ೧೩೪೭ ರಲ್ಲಿ ದಖ್ಖನ್ನಿನಲ್ಲಿ ಬಹಮನಿ ಸಾಮ್ರಾಜ್ಯದ ಸ್ಥಾಪನೆಯ ನಂತರ ಇಂಡೋ-ಪರ್ಶಿಯನ್ ವಾಸ್ತುಶಿಲ್ಪದ ಮಿಶ್ರಣದ ಕುರುಹುಗಳು, ಸ್ಪಷ್ಟವಾದ ಮತ್ತು ವಿಭಿನ್ನವಾದ ರೀತಿಯಲ್ಲಿ ಬಳಸಲ್ಪಟ್ಟಿತು. ಶೈಲಿಯು ಆಗ ಉತ್ತರ ಭಾರತದಲ್ಲಿ ರೂಢಿಯಲ್ಲಿದ್ದ ವೈಭವಯುತವಾದ ತುಘಲಕ್ ಶೈಲಿಯ ವಿಶಾಲ ತಳಹದಿಯ ಮೇಲೆ ರೂಪಿತವಾಗಿತ್ತು. ಆದರೆ ಕಾಲಾನಂತರದಲ್ಲಿ ಈ ಶೈಲಿಯು ಇರಾನಿ ಕಟ್ಟಡ ನಿರ್ಮಾಣ ಶೈಲಿಯ ಪ್ರಭಾವವನ್ನು ಹೊಂದಿ ಅದರೊಂದಿಗೆ ಬಹಮನಿ ಸುಲ್ತಾನರ ನಿಕಟ ಸಂಪರ್ಕದಲ್ಲಿ ಅಭಿವೃದ್ಧಿಯನ್ನು ಕಂಡಿತು.

ಬಹಮನಿಯ ಅವನತಿಯ ನಂತರ ಉದಯಿಸಿದ ಬಿಜಾಪುರದ ಆದಿಲ್‌ಶಾಹಿ ಮನೆತನ ಈ ಮೊದಲಿನ ರಾಜ್ಯದ ಅವಶೇಷಗಳ ಮೇಲೆ, ಆದಿಲ್‌ಶಾಹಿ ಸುಲ್ತಾನರುಗಳ ಸಮರ್ಥತೆ, ಪ್ರೋತ್ಸಾಹ ಹಾಗೂ ಅವರ ಕೃಪಾಶ್ರಯದಲ್ಲಿ ಅತೀ ಶೀಘ್ರವಾಗಿ ಬೆಳೆದು ದಖ್ಖನ್ನಿನಲ್ಲಿ ಅತ್ಯಂತ ಶ್ರೀಮಂತ ಕಲಾ ಪ್ರೌಢಿಮೆಯನ್ನು ಹೊಂದಿ ಮೆರೆಯಿತು. ಅವರ ಮುಂದುವರಿಕೆಯು ಕೇವಲ ಯುದ್ಧ ಭೂಮಿಯನ್ನಷ್ಟೇ ಅಲ್ಲದೇ ಕಲೆ ಮತ್ತು ವಾಸ್ತುಶಿಲ್ಪದಲ್ಲಿಯೂ ಕೂಡಾ ಅದ್ವಿತೀಯವಾದ ಸ್ಥಾನವನ್ನು ಹೊಂದಿತು. ಆದಿಲ್‌ಶಾಹಿ ಸುಲ್ತಾನರ ಆಳ್ವಿಕೆಯ ಕಾಲದಲ್ಲಿ ಬಿಜಾಪುರವು ಇಡೀ ದೇಶದಲ್ಲಿ ಅಷ್ಟೇ ಅಲ್ಲದೇ ಜಗತ್ತಿನಲ್ಲಿಯೂ ಕೂಡ ಅತ್ಯಾಕರ್ಷಕವಾದ ನಗರಗಳಲ್ಲಿ ಒಂದಾಗಿತ್ತು. ಆದಿಲ್‌ಶಾಹಿಗಳು ತಮ್ಮ ಸಮಕಾಲೀನ ಸುಲ್ತಾನರುಗಳಿಗಿಂತ ಅಸಂಖ್ಯವಾದ ಸ್ಮಾರಕಗಳನ್ನು ನಮ್ಮಗೆಲ್ಲ ಬಿಟ್ಟು ಹೋಗಿದ್ದಾರೆ,[೫]

ಮಾಧ್ಯಮ :

ಇಸ್ಲಾಮಿಕ ಕಲೆಯು ವ್ಯಕ್ತಿನಿಷ್ಠವಾದುದಾಗಿದೆ. ಆರಾಧನಾ ಮಂದಿರಗಳಾದ ಮಸೀದಿಗಳ ನಿರ್ಮಾಣದಲ್ಲಿ ಅದರ ಮುಖ್ಯ ರಚನಾ ವಿನ್ಯಾಸವನ್ನು ಕಾಣಬಹುದು. ಈ ಕಟ್ಟಡಗಳು ಪರಮೋನ್ನತ ಭವ್ಯ ಭಗವತ ಶಕ್ತಿಯ ಅಮೂರ್ತ ನಿರಾಕಾರ ಪರಿಕಲ್ಪನೆಗೆ ಮೀಸಲಾದವು. ಮಸೀದಿಯ ಮೂಲ ವಿನ್ಯಾಸವು ಮುಸ್ಲಿಂ ಜಗತ್ತಿನಾದ್ಯಂತ ಒಂದೇ ಆಗಿದೆ. ಕಮಾನು, ಗುಮ್ಮಟ, ಸ್ಥಂಭಗೋಪುರ, ಮಿಹ್ರಾಬ್‌ಗಳು ಎಲ್ಲ ಕಡೆಗೂ ಒಂದೇ ಬಗೆಯವಾಗಿರುತ್ತವೆ. ನಿರ್ಮಿಸಲು ಯಾವ ಅಲಂಕಾರಿಕ ವಿನ್ಯಾಸಗಳನ್ನು ಬಳಸಲಾಗಿದೆ? ಅಮೃತಶಿಲೆಯೋ? ಗ್ರಾನೈಟ್ ಶಿಲೆಯೋ?, ಮರವೊ? ಮೆಸಾಯಿಕ ಹಲಗೆಗಳೋ? ಎಲ್ಲಾ ವಸ್ತುಗಳ ಬಳಕೆಯೂ ಇಲ್ಲಿ ಕಂಡು ಬರುತ್ತದೆ. ಆದರೆ "ಬಿಜಾಪುರದ ಕಟ್ಟಡಗಳು ಇಲ್ಲಿ ದೊರೆತ ಸಾಮಗ್ರಿಗಳ ಅನಾನುಕೂಲತೆಯಿಂದಾಗಿ, ದಿಲ್ಲಿ ಆಗ್ರಾಗಳಷ್ಟು ಸುಂದರವಾಗಿ ಕಾಣದಿರಬಹುದು. ಆದರೆ ಕಲೆ ಮತ್ತು ವೈಭವದಲ್ಲಿ ಉತ್ತರದಲ್ಲಿ ಮೊಘಲ್ ಬಾದಷರುಗಳು ಕಟ್ಟಿಸಿದ ಕಲಾಕೃತಿಗಳಿಗೆ ಇವುಗಳು ಹೋಲಲಿಕ್ಕಿಲ್ಲ ಅಲ್ಲವೇ ಹೋಲಿಸಲು ಸಾಧ್ಯವಿಲ್ಲ. ಏಕೆಂದರೆ ಮೊಘಲ್‌ರು ಕಟ್ಟಿಸಿದ ಸ್ಥಳಗಳಲ್ಲಿ ಯಮುನಾ ನದಿ ದಂಡೆ ಹಾಗೂ ಕಟ್ಟಡಗಳನ್ನು ಕಟ್ಟಲು ಬಳಸಿದ ಅಮೃತಶಿಲೆ ಇವುಗಳನ್ನು ಬಿಟ್ಟು ನೋಡಿದರೆ ಬಿಜಾಪುರದ ಸ್ಮಾರಕಗಳು ಎಷ್ಟೋಪಾಲು ಉತ್ತಮವಾಗಿರುವವು. ಒಂದು ವೇಳೆ ಬಿಜಾಪುರದ ಕಲಾವಿದರಿಗೆ ನದಿಯ ದಂಡೆ ಮತ್ತು ಅಮೃತಶಿಲೆ ದೊರೆತಿದ್ದರೆ, ಅವರು ಮೊಘಲ್ ಕಲಾಕೃತಿಗಳಿಗಿಂತ ಅತ್ಯಂತ ಸುಂದರವಾದ ಕಟ್ಟಡಗಳನ್ನು ಕಟ್ಟಲು ಸಾಧ್ಯವಿತ್ತು."[6] ಎಂದು ಜೇಮ್ಸ ಫರ್ಗ್ಯುಸನ್ ಹೇಳಿದ್ದಾನೆ.

ದಖ್ಖನ್ನಿನಲ್ಲಿ ಬಹಮನಿ ಸುಲ್ತಾನರ ಆಳ್ವಿಕೆಯ ಕಾಲದಲ್ಲಾಗಲೇ ಮುಸ್ಲಿಂ ವಾಸ್ತುಶಿಲ್ಪವು ಪ್ರಾರಂಭಗೊಂಡಿತ್ತು. ಆದಿಲ್ ಶಾಹಿಗಳ ವಾಸ್ತುಶಿಲ್ಪವು, ಮಸೀದಿಗಳು, ಗೋರಿಗಳು ಹಾಗೂ ಅರಮನೆಗಳನ್ನು ಒಳಗೊಂಡಿದ್ದರೂ ಕೂಡಾ ಹೆಚ್ಚಾಗಿ ಮೊದಲನೆಯ ಎರಡು ಪ್ರಕಾರಗಳು ಪ್ರಮುಖವಾಗಿ ಕಂಡುಬರುತ್ತವೆ. ಈ ಸ್ಮಾರಕಗಳನ್ನು ನಿರ್ಮಿಸಲು ಅವರು ಸ್ಥಳೀಯವಾಗಿ ದೊರಕುವ ವಸ್ತುಗಳನ್ನೇ ಉಪಯೋಗಿಸಿದರು, ಈ ಪ್ರದೇಶದಲ್ಲಿ ಸಿಗುವ ಬೃಹತ ಗಾತ್ರದ ಕರಿ ಕಲ್ಲುಗಳನ್ನು ಉಪಯೋಗಿಸಿದರು. ಇದರಿಂದಾಗಿ ಇಡೀ ನಗರವು ಏಕಪ್ರಕಾರದ ಸ್ಮಾರಕಗಳನ್ನೊಳಗೊಂಡು ಸೌಮ್ಯವಾಗಿ ಕಂಡುಬರುತ್ತವೆ. ಆದಿಲ್‌ಶಾಹಿ ಸುಲ್ತಾನರು ಪರ್ಶಿಯನ್ ಮೂಲದಿಂದ ಬಂದವರಾಗಿದ್ದರಿಂದ ಸಹಜವಾಗಿಯೇ ಪರ್ಶಿಯನ್ ಶೈಲಿಯನ್ನು ತಮ್ಮ ವಾಸ್ತುಶಿಲ್ಪಕ್ಕೆ ಬಳಿಸಿಕೊಂಡರು. ಇದರ ಜೊತೆಗೆ ಸ್ಥಳೀಯ ವಾಸ್ತುಶೈಲಿಯನ್ನು ಸಹ ಬಳಸಿ ಅವೆರಡರುಗಳ ಸಮ್ಮಿಳನದಿಂದಾಗಿ ಅನೇಕ ಸ್ಮಾರಕಗಳನ್ನು ನಿರ್ಮಿಸಿದರು. ಇದು ಆ ಕಾಲದಲ್ಲಿ ಸಾಂಸ್ಕೃತಿಕ ಏಕೀಕರಣಕ್ಕೆ ನಾಂದಿಯಾಯಿತು. ಅದರ ಹೊರತಾಗಿ ಮೆಡೋಸ್ ಟೇಲರ್‌ರವರು " ಈ ಭವ್ಯವಾದ ಸ್ಮಾರಕಗಳು ನಮ್ಮ ದೇಶದ ಜನರಲ್ಲಿ ಅವರ ಸೌಂದರ್ಯಪ್ರಜ್ಞೆಯನ್ನು ಗೌರವಿಸುವಂತೆ ಮತ್ತು ವಿಶಿಷ್ಟ ಬಗೆಯ ಜೀವನ ಶೈಲಿಯನ್ನು ರೂಢಿಸಿಕೊಳ್ಳುವಂತೆ ಮಾರ್ಗದರ್ಶನ ಮಾಡುತ್ತವೆ. ಜೊತೆಗೆ ಕಲೆಯ ನಿರ್ವಹಣೆಯಲ್ಲಿ ಅವರ ಅಭಿರುಚಿ ಮತ್ತು ಅವರ ಕುಶಲತೆ, ಕಾರ್ಯಶಕ್ತಿಗಳಿಂದ ಆ ಸ್ಮಾರಕ ರಚನೆಕಾರರು ಸಂಸ್ಕಾರಶೂನ್ಯರಲ್ಲವೆಂದೂ

ಸಿದ್ಧವಾಗುತ್ತದೆ. ಆದರೆ, ಅದೇ ಸಮಯಕ್ಕೆ ಅವರ ಕಾರ್ಯವೈಖರಿಯನ್ನು ಕಂಡು ಅಚ್ಚರಿಯುಂಟಾಗುತ್ತದೆ ಎಂದಿದ್ದಾರೆ"[೭]

ಆದಿಲ್‌ಶಾಹಿ ವಾಸ್ತುಶಿಲ್ಪದ ಲಕ್ಷಣಗಳು :

ದಕ್ಷಿಣ ಭಾರತದ ಪ್ರಾರಂಭಿಕ ಹಂತದ ಮಹಮ್ಮದೀಯ ಕಟ್ಟಡಗಳು ಪ್ರಚಲಿತ ಇಸ್ಲಾಮೀ ಶೈಲಿಗಳ ಅನುಕರಣೆಗಳಾಗಿದ್ದರೂ ಕ್ರಮೇಣ ಸ್ಥಳೀಯ ಹಿಂದೂ ವಾಸ್ತುಶೈಲಿಯ ಕಲ್ಪನೆ, ನಿರ್ಮಾಣತಂತ್ರ ಹಾಗೂ ಅಲಂಕಾರಿಕ ಅಂಶಗಳ ಉತ್ತಮ ಲಕ್ಷಣಗಳ ಔಚಿತ್ಯಪೂರ್ಣ ಅಳವಡಿಕೆಯಿಂದ ವಿಶಿಷ್ಟ ದಖನಿ ವಾಸ್ತುಶೈಲಿಯಾಗಿ ರೂಪಗೊಂಡಿತು. ಮೊದಲನೆಯದಾಗಿ ಇಲ್ಲಿನ ಗುಮ್ಮಟ ಬಹುತೇಕವಾಗಿ ಆಕಾರದಲ್ಲಿ ವರ್ತುಳಾಕಾರವಾಗಿದ್ದು ಅದರ ನೆಲೆಗಟ್ಟಿನಲ್ಲಿ ಹೂವಿನ ದಳಗಳೋಪಾದಿಯ ಸಮೂಹವನ್ನು ನಿರ್ಮಿಸಿ ಮೇಲೇಳಿಸಲಾಗಿರುತ್ತದೆ. ಕಟ್ಟಡದ ಮೇಲ್ಭಾಗ ಮೀನಾರುಗಳು, ಸ್ಥಂಭ–ಗೋಪುರಗಳು, ಚಿಕ್ಕಗುಮ್ಮಟ್ಟಗಳಿಂದ ಅಲಂಕೃತವಾಗಿರುತ್ತದೆ. ಗುಲ್‌ದಸ್ತಾಗಳು (ಚಿಕ್ಕ ಸ್ಥಂಭ ಗೋಪುರಗಳು) ಇರುತ್ತವೆ. ಬಿಜಾಪುರದ ಕಮಾನುಗಳ ಆಕಾರವು ವಿಶಿಷ್ಟವಾಗಿದೆ. ಬಹಮನಿ ಹಂತದ ಮೂಲೆಗಳು ಇವುಗಳಲಿಲ್ಲ, ಹೆಚ್ಚಿನ ಲಾಲಿತ್ಯವುಳ್ಳ ಬಾಹುರೇಖೇಗಳು ಇರುತ್ತವೆ. (ಅಂದರೆ, ಅದರ ಗೆರೆಗಳ ಮಾಟ ಹಿಂದಿನ ಕೋನ ಸಂಧಿಗಳನ್ನು ಕಳೆದುಕೊಂಡು ನಯವಾಗಿ ಬಾಗಿ ಸಾಗುತ್ತವೆ.) ಬಿಜಾಪುರ ಕಮಾನಿನ ವಿಶಿಷ್ಟ ಮಾದರಿ ನಾಲ್ಕು ಕೇಂದ್ರವುಳ್ಳ ಕಮಾನು. ಆದಿಲ್‌ಶಾಹಿ ವಾಸ್ತುಶಿಲ್ಪದ ಇನ್ನೊಂದು ಪ್ರಮುಖ ಲಕ್ಷಣವೆಂದರೆ, ಇವರ ಕಟ್ಟಡಗಳಲ್ಲಿ ಸ್ಥಂಬಗಳು ಇರುವುದಿಲ್ಲ,[೮] ಅವುಗಳ ಸ್ಥಳದಲ್ಲಿ ಆಯಾಕಾರ, ಭೇದ, ವಿನ್ಯಾಸದ ದಪ್ಪ ಗೋಡೆಗಳು ಇರುತ್ತವೆ. ಗೋಡೆಗಳ ಮೇಲಿನ ಚಾಚುಭಾಗ ಅಥವಾ ಚಜ್ಜವು ಬಹುತೇಕ ಕಟ್ಟಡಗಳಲ್ಲಿ ಅಲಂಕಾರಿಕವಾಗಿ ಎಲ್ಲೆಡೆಯೂ ಕಂಡುಬರುತ್ತದೆ. ಕೊನೆಯದಾಗಿ ಅಲಂಕಾರಿಕ ಮಾದರಿಗಳು ನಿರ್ದಿಷ್ಟತೆಯನ್ನು ಪಡೆದುವೆ. ಅದರ ಫಲವಾಗಿ ಗಾರೆಯಲ್ಲಿ ಅತ್ಯುತ್ತಮವಾದ ಕುಸುರಿನ ಕೆಲಸವನ್ನು ಮಾಡಿರುವುದು ಕಂಡುಬರುತ್ತದೆ. ಹೊಸಬಗೆಯ ಹೆಣಿಕೆಗಳು, ಸಾಂಪ್ರದಾಯಿಕ ತೂಗು ದೀಪಗಳು, ಉದ್ದಕ್ಕೂ ಮುಂದುವರಿಯುವ ಪಟ್ಟಿಕೆಗಳು, ಕಸೂತಿ ಕೆಲಸ ಕಲ್ಲಿನಲ್ಲಿ ಕೆತ್ತಲ್ಪಟ್ಟಿವೆ, ಇಲ್ಲವೆ ಕಚ್ಚುಗಾರೆಯಿಂದ ಎರಕ ಹೊಯ್ಯಲ್ಪಟ್ಟಿವೆ.[೯] ಇದಲ್ಲದೆ, ಪ್ರಮಾಣಬದ್ಧವಾದ ವೇದಿಕೆಯ ಮೇಲೆ ಕಮಲದಳಗಳ ನಡುವಿನಿಂದ ಮೇಲೇರುವ ಅಲಂಕೃತ ಚಿತ್ತಾಕರ್ಷಕ ವಿನ್ಯಾಸದ ಗುಮ್ಮಟ, ಮೇಲ್ಚಾವಣಿಯ ಮೋಹಕ ಕಂಗುರಗಳ ಸಾಲು, ಅವುಗಳಿಗೆ ಆಧಾರವಾಗಿರುವ ಶ್ರೀಮಂತ ಕೆತ್ತನೆಯ ಮುಂಚಾಚಿದ ಸಜ್ಜ, ಬಾಗಿ ಬಳುಕುವ ಕಮಾನುಗಳು, ಅವುಗಳ ಮೂಲೆಗಳಲ್ಲಿಯ ಸೂಕ್ಷ್ಮ ಅಲಂಕರಣ, ಕಂಬಗಳ ಬದಲಿಗೆ ಬಳಸಿರುವ ಬೃಹದ್ಗಾತ್ರದ ಕಮಾನುಗಂಬಗಳು ಇವು ಬಿಜಾಪುರದ ವಾಸ್ತುಶೈಲಿಯ ಕೆಲವು ವಿಶಿಷ್ಟ ಲಕ್ಷಣಗಳು. ಕೊರೆದು ಮೂಡಿಸಿದ ಗಾರೆಯ ಮನೋಹರ ಹೂಬಳ್ಳಿಗಳ ಹಾಗೂ ಜ್ಯಾಮಿತೀಯ ವಿನ್ಯಾಸಗಳಿರುವ ಫಲಕ, ಕುರಾನಿನ ಸೂಕ್ತಿ ಹಾಗೂ ಇತರ ಶಾಸನಗಳಿರುವ, ಅಲಂಕರಣವಿರುವ ಹೊರ ಭಿತ್ತಿಗಳು, ಕಲಶ ಸಹಿತ ತೆಳು ನೀಳವಾದ ಮನಸಳೆಯುವ ಮೀನಾರುಗಳು ಈ ನಿರ್ಮಿತಿಗಳ ಸೌಂದರ್ಯವನ್ನು ಹೆಚ್ಚಿಸಿವೆ. ಕೆಲವು ಮುಖ್ಯ ಕಟ್ಟಡಗಳನ್ನು ಭಿತ್ತಿಚಿತ್ರಗಳಿಂದಲೂ ಅಲಂಕರಿಸಲಾಗಿದೆ.

ಸಹಜವಾಗಿ ಈ ವಾಸ್ತುಶೈಲಿಯಲ್ಲಿ ಇಸ್ಲಾಮೀ ಶೈಲಿಯ ವಿಶಿಷ್ಟ ಲಕ್ಷಣವಾದ ವೈಶಾಲ್ಯ, ಭವ್ಯ ಬೃಹದ್ಗಾತ್ರ, ಪ್ರಮಾಣಬದ್ಧತೆ, ಅಕ್ಷಸಮತೆಗಳು ಪ್ರಧಾನವಾಗಿವೆ. ಕೆಲವು ಕಟ್ಟಡಗಳಲ್ಲಿ ಗುಮ್ಮಟಗಳ ಬದಲಾಗಿ ಬಳಸಿರುವ ವಿಶಿಷ್ಟ ತಂತ್ರಗಾರಿಕೆಯಿಂದ ರೂಪಿಸಿದ ವಿಸ್ಮಯಕಾರಿ ವೈಶಾಲ್ಯದ ಸಮತಲದ ವಿತಾನಗಳು(ಮೇಲ್ಛಾವಣಿ) ಅಪ್ರತಿಮ ವಾಸ್ತು ಸಾಹಸಗಳೇ ಆಗಿವೆ. ಸೌಂದರ್ಯ ಹಾಗೂ ಶ್ರೀಮಂತಿಕೆಯ ಆಗರವಾಗಿದ್ದ ಈ ರಾಜಧಾನಿಯನ್ನು ಕ್ರಿ. ಶ. ೧೬೦೪ರಲ್ಲಿ ಸಂದರ್ಶಿದ ಅಕ್ಬರ ಚಕ್ರವರ್ತಿಯ ರಾಯಭಾರಿ ಅಸದ್‌ಬೇಗ ವಿಶ್ವದ ಯಾವುದೇ ನಗರ ಪ್ರವಾಸಿಗಳಿಗೆ ಇದಕ್ಕೂ ಹೆಚ್ಚಿನ ನಯನಾನಂದಕರ ನೋಟವನ್ನು ನೀಡಲಾರದು ಎಂದಿದ್ದಾನೆ.[೧೦]

ಬಿಜಾಪುರ ಆದಿಲ್‌ಶಾಹಿಗಳ ಕಲೆ ಮತ್ತು ವಾಸ್ತುಶಿಲ್ಪ ಕುರಿತು ವಿದ್ವಾಂಸರಾದ ಜೇಮ್ಸ ಬರ್ಡ, ಕ್ಯಾಪ್ಟನ್ ಸೈಕ್ಸ್, ಜೇಮ್ಸ ಫರ್ಗ್ಯೂಸನ್, ಮೆಡ್ವೂಸ್ಸ ಟೇಲರ, ಪರ್ಸಿ ಬ್ರೌನ್, ಹೆನ್ರಿ ಕಜಿನ, ಎಚ್. ಕೆ. ಶೇರವಾನಿ ಮತ್ತು ಪಿ. ಎಂ. ಜೋಶಿ, ಸಾಧಿಕ ನಕ್ವಿ, ಎಂ. ಎ. ನಯೀಮ, ಜಾರ್ಜ ಮಿಚ್ಚಲ್ ಮತ್ತು ಮಾರ್ಕ ಝುಬ್ರಾಸ್ಕಿ ಇವರೆಲ್ಲರು ಕಲೆ ಮತ್ತು ವಾಸ್ತುಶಿಲ್ಪದ ಮೇಲೆ ಬೆಳಕನ್ನು ಚಲ್ಲಿದ್ದಾರೆ. ಇವರೆಲ್ಲರ ಬರವಣಿಗೆಯ ಸಹಾಯದೊಂದಿಗೆ ಮತ್ತು ನಾನು ಮಾಡಿದ ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ವಿಷಯಗಳನ್ನು ಚರ್ಚಿಸಲಾಗಿದೆ.

ಅ) ಧಾರ್ಮಿಕ ವಾಸ್ತುಶಿಲ್ಪ : ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಧಾರ್ಮಿಕ ಕಟ್ಟಡಗಳು ನಿರ್ಮಾಣವಾದವು ಅವುಗಳೆಂದರೆ, ಜಾಮೀ ಮಸೀದೆ, ಗೋಳಗುಮ್ಮಟ್ಟದ ಆವರಣದಲ್ಲಿಯ ಮಸೀದೆ, ಮುಸ್ತಫಾಖಾನ ಮಸೀದೇ, ಶಾಹಾ ನವಾಜಖಾನ ಮಸೀದೆ, ಯಾಕೂತ ಧಾಬೂಲಿ ಮಸೀದೆ, ಅಫಜಲ್‌ಖಾನನ ಹೆಂಡಿತಿಯ ಮಸೀದೆ, ಚಿಂಚದೀಡ್ಡಿ ಮಸೀದೆ. ರಣದುಲ್ಲಾಖಾನ ಮಸೀದೆ ಮುಂತಾದ ಧಾರ್ಮಿಕ ಕಟ್ಟಡಗಳ ವಿವರವನ್ನು ವಿವರಿಸಲಾಗಿದೆ.

೧) ಜಾಮಿ ಅಥವಾ ಜುಮ್ಮಾ ಮಸೀದೆ :

ಬಿಜಾಪುರದಲ್ಲಿ ರಚಿತವಾದ ಪ್ರಮುಖ ಕಟ್ಟಡಗಳಲ್ಲಿ ಅತ್ಯಂತ ಹಳೆಯದಾದ ಮತ್ತು ಭವ್ಯವಾದ ಕಟ್ಟಡವೆಂದರೆ ಜಾಮಿ ಮಸೀದೆ. ಅಥವಾ ಸಾರ್ವಜನಿಕ ಪ್ರಾರ್ಥನಾ ಮಂದಿರವಾಗಿದೆ. ಇಲ್ಲಿ "ಕುತ್ಬಾ ಪಠಣ" ಅಥವಾ ಶುಕ್ರವಾರದ ಪ್ರಾರ್ಥನೆ ನಡೆಯುತ್ತಿದ್ದರಿಂದ ಇದನ್ನು "ಜುಮ್ಮಾ ಮಸೀದೆ" ಅಥವಾ "ಶುಕ್ರವಾರದ ಮಸೀದೆ" ಎಂದು ಕರೆಯಲಾಗಿದೆ.[೧೧]

ಕಝಿನ್ಸ ರವರು " ಈ ಮಸೀದೆಯನ್ನು ಗಮನಿಸಿದಾಗ ಇದರ ಬೆಳವಣಿಗೆಯಲ್ಲಿ ಸಾಮಾನ್ಯವಾಗಿ ಬಿಜಾಪುರದ ಇತರ ಎಲ್ಲಾ ಸ್ಮಾರಕಗಳಿಗೆ ಬಳಸಿದ ಇಂಡೋ–ಪರ್ಶಿಯನ್ ಶೈಲಿಯ ಅಪ್ಪಟವಾದ ಸ್ವರೂಪವನ್ನೇ ಕಾಣಬಹುದು ಇದರ ಖಚಿತವಾದ ಪ್ರಮಾಣಕ್ಕೆ ಸರಿಸಾಟಿಯಾಗುವ ಇನ್ನೊಂದು ಯಾವುದೇ ಕಟ್ಟಡ ಬಿಜಾಪುರದಲ್ಲಿ ಕಂಡು ಬರುವುದಿಲ್ಲವೆನ್ನುವುದು ಅಷ್ಟೇ ಸತ್ಯ" ಎಂದು ಅಭಿಪ್ರಾಯ ಪಟ್ಟಿದ್ದಾರೆ.[೧೨]

ಜಾಮಿ ಮಸೀದೆಯು ಬಿಜಾಪುರ ಧಾರ್ಮಿಕ ವಾಸ್ತುಶಿಲ್ಪದ ಉತ್ಕೃಷ್ಟವಾದ ಉದಾಹರಣೆಯಾಗಿದೆ. ಈ ಮಸೀದೆಯು ಕ್ರಿ. ಶ. ೧೫೬೫ ಮೊದಲನೆಯ ಅಲಿ ಆದಿಲ್‌ಶಾಹನು ಕಟ್ಟಿಸಿದನು. ಫರ್ಸಿಬ್ರೌನ್ ಅವರು ಗಮನಿಸಿದ ಹಾಗೆ ಈ ಕಟ್ಟಡವು ಆರಂಭದ ಕಟ್ಟಡವಾಗಿದ್ದು ಇದರಲ್ಲಿ ಬಹಮನಿಯ ವಾಸ್ತುಶೈಲಿಯ ಪ್ರಭಾವ ಹೆಚ್ಚಾಗಿದ್ದನ್ನು ಅವರು ಗಮನಿಸಿದ್ದಾರೆ.[೧೩] ಒಂದನೆಯ ಅಲಿ ಆದಿಲ್‌ಶಾಹನು ರಕ್ಕಸಗಿ–ತಂಗಡಗಿ ಯುದ್ಧದಲ್ಲಿ ರಾಮರಾಯನನ್ನು ಸೋಲಿಸಿ ಮರಳಿದ ಕೆಲ ಸಮಯದಲ್ಲಿ ಈ ಕಟ್ಟಡದ ನಿರ್ಮಾಣ ಕಾರ್ಯ ಕೈಗೊಂಡನು. ಈ ಕಟ್ಟಡ ರಚನೆಯ ಉದ್ದೇಶವು ಬಿಜಾಪುರದ ನಗರದ ವಾಸ್ತುಶಿಲ್ಪದ ಭವ್ಯತೆ ಹಾಗೂ ಧಾರ್ಮಿಕ ಅವಶ್ಯಕತೆಯನ್ನು ಪೂರ್ತಿಗೊಳಿಸುವುದಾಗಿತ್ತು. ಅಲ್ಲದೇ ಬಿಜಾಪುರ ನಗರದಲ್ಲಿ ಮುಸ್ಲಿಂ ಸಂಖ್ಯೆ ಹೆಚ್ಚುತ್ತಲಿದ್ದು, ಅವರಿಗೆ ಸಾರ್ವಜನಿಕ ಪ್ರಾರ್ಥನಾ ಸ್ಥಳದ ಅವಶ್ಯಕತೆಯಿದ್ದು ಹಾಗೂ ಸಾಮಾನ್ಯರೊಂದಿಗೆ ಆದಿಲ್‌ಶಾಹಿ ಸುಲ್ತಾನರು ಸಾರ್ವಜನಿಕ ಪ್ರಾರ್ಥನೆಗಳಲ್ಲಿ ಭಾಗವಹಿಸಲೂ ಕೂಡಾ ಇದು ಅವಶ್ಯವಾಗಿತ್ತು. ಅಲಿಯು ತನ್ನ ಮಹತ್ವಕಾಂಕ್ಷೆಯ ಕಟ್ಟಡಗಳ ರಚನಾ ಸಾಹಸಕ್ಕೆ ಕೈ ಹಾಕಿ ಅದನ್ನು ಯಶಸ್ವಿಗೊಳಿಸಿದನು.

ಈ ಜುಮ್ಮಾ ಮಸೀದೆಯ ವಿನ್ಯಾಸಕಾರ ಯಾರೆಂಬುದು ಗೊತ್ತಾಗಿಲ್ಲವಾದರೂ, ಆತ ನಿಶ್ಚಯವಾಗಿಯೂ ಒಬ್ಬ ಅತ್ಯಂತ ಸಮರ್ಥನಾದ ವ್ಯಕ್ತಿಯಾಗಿದ್ದಾನೆಂಬುದು ಮಾತ್ರ ಸತ್ಯ. ಸ್ಮಾರಕಗಳಲ್ಲಿಯೇ ಇದೊಂದು ಅತ್ಯಂತ ವಿರಳವಾದ ಸ್ಮಾರಕವಾಗಿದ್ದು, ಇದು ಹೋಲಿಕೆಯಲ್ಲಿ ನೂರು ವರ್ಷಕ್ಕಿಂತ ಮುಂಚೆಯೇ ಅಹಮದಾಬಾದಿನಲ್ಲಿ ನಿರ್ಮಿತವಾದ ಜಾಮೀ ಮಸೀದಿಗೆ ಸಮೀಪವಾಗಿದೆ. ಆದರೆ ಬಿಜಾಪುರದ ಜಾಮಿ ಮಸೀದಿಗಿಂತ ಘನತೆ, ಗಾಂಭಿರ್ಯ ಮತ್ತು ಭವ್ಯತೆಯಲ್ಲಿ ಅಹಮದಾಬಾದಿನ ಜಾಮೀ ಮಸೀದೆಯು ಕೊರತೆಯನ್ನು ಹೊಂದಿದೆ. ಅಲ್ಲದೇ ಅಹಮದಾಬಾದ ಮಸೀದೆಯು ಬಿಜಾಪುರದ ಮಸೀದೆ ಹೊಂದಿದಂತೆ ಶ್ರೇಷ್ಟವಾದ ಬಲಿಷ್ಟ ಚಚ್ಚೌಕಾರದ ಕಂಭಗಳನ್ನು ಮತ್ತು ಭವ್ಯವಾದ ಕಮಾನುಗಳ ಮಧ್ಯದ ಗೂಡುಗಳನ್ನು ಹೊಂದಿಲ್ಲ ಮತ್ತು ಕಮಾನುಗಳ ಮಧ್ಯದ ಗೂಡಗಳು ಭವ್ಯವಾಗಿದ್ದರೂ ಕೂಡಾ ಮಸೀದೆಯ ಒಳಗಡೆ ಮಾತ್ರ ಸರಳತೆ ಹಾಗೂ ಸಹಜತೆಯು ಕಂಡು ಬರುತ್ತದೆ.[೧೪]

ಈ ಸ್ಮಾರಕ ಬಿಜಾಪುರದ ಆಗ್ನೇಯ ಭಾಗದ ಮಧ್ಯದಲ್ಲಿ ಬರುತ್ತದೆ. ಮತ್ತು ಇದು ಅಲ್ಲಾಪುರ ದ್ವಾರದಿಂದ ಬರುವ ಮುಖ್ಯ ರಸ್ತೆಯ ದಕ್ಷಿಣ ಭಾಗದಲ್ಲಿ ಕಟ್ಟಲ್ಪಟ್ಟಿದೆ. ಇದು ಬಿಜಾಪುರದಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿ ನಿರ್ಮಿತವಾದ, ವಿಸ್ತಾರವಾದ ಪ್ರಾಂಗಣವನ್ನು ಹೊಂದಿದ ಏಕೈಕ ಕಟ್ಟಡವಾಗಿದೆ. ಇದು ಬಿಜಾಪುರದ ಇನ್ನುಳಿದ ಕಟ್ಟಡಗಳಿಗಿಂತ ಹೆಚ್ಚು ವಿಸ್ತಾರವನ್ನು ಹೊಂದಿದ್ದು, ೯೧,೦೦೦ ಚದುರ ಅಡಿ ವಿಶಾಲವಾದ ಅಳತೆಯ ಕಟ್ಟಡವಾಗಿದ್ದು, ಇದರ ಪಾರ್ಶ್ವ ಮೂಲೆಗಳಲ್ಲಿ ಮೀನಾರಗಳನ್ನು ಹೊಂದಿ ಇನ್ನೂ ಮುಂಚಾಚಿ ಬೆಳೆದು ನಂತರ ಪೂರ್ವದ ಹೊರಬಾಗಿಲಿನವರೆಗೆ ಅಂದರೆ ಒಟ್ಟು ೧,೧೬,೩೦೦ ಚದುರ ಅಡಿ ವಿಸ್ತೀರ್ಣವನ್ನು ಹೊಂದಿದೆ. ಪ್ರಮುಖ ಕಟ್ಟಡವಾದ ಮಸೀದೆಯ ಭಾಗವು ಸಭಾಂಗಣದ ಪಶ್ಚಿಮದ ಕೊನೆಗೆ ಕಟ್ಟಲ್ಪಟ್ಟಿದ್ದು, ಬೃಹತ್ತಾದ, ಚೌಕಾಕಾರದ ಕಂಭಗಳು ಕಮಾನುಗಳನ್ನು ನಿರ್ಮಿಸಿ, ಗುಮ್ಮಟಾಕಾರದ ಛಾವಣಿಗೆ

[illegible]

ಆಧಾರವನ್ನು ಹೊಂದಿದೆ. ಈ ಕಮಾನುಗಳು ಒಂದಕ್ಕೊಂದು ಜೋಡಿಸಿಕೊಂಡು ಒಂದು ಅಷ್ಟಮೂಲೆ ವಿನ್ಯಾಸವನ್ನು ರೂಪಿಸಿವೆ. ಗುಮ್ಮಟವು ಅದರ ಮೇಲಿದೆ ಗೋಡೆಯ ಮೇಲೆ ಉದ್ದಕ್ಕೂ ಚಾಚು ಕಂಭಗಳಿವೆ.[೧೫]

ಜಾಮೀ ಮಸೀದೆಯು ಬೃಹದಾಕಾರವಾದ ಹಾಗೂ ಆಯತಾಕಾರವಾದ ಕಟ್ಟಡವಾಗಿದ್ದು, ಪೂರ್ವ-ಪಶ್ಚಿಮವಾಗಿ ೪೫೦ ಅಡಿ ಉದ್ದ, ದಕ್ಷಿಣೋತ್ತರವಾಗಿ ೨೨೫ ಅಡಿ ಅಗಲವಾಗಿದೆ. ಇದರಲ್ಲಿ ಒಂದರ ಮೇಲೊಂದರಂತೆ ಎರಡು ಕಮಾನುಗಳ ಸಾಲುಗಳಿವೆ. ಕೆಳಗಿನ ಸಾಲು ಕೇವಲ ಅಲಂಕಾರಿಕವಾಗಿದ್ದು ಮೇಲಿನದು ಛಾವಣಿಯಿರುವ ಪಡಸಾಲೆಯನ್ನು ಸೇರಿಸುತ್ತದೆ. ಇದರಲ್ಲಿ ವಿರಳವಾದ ಅಲಂಕಾರವಿದೆ ಮಧ್ಯದಲ್ಲಿ ೧೫೫ ಅಡಿ ಚೌಕಾಕಾರದ ವಿಶಾಲವಾದ ಅಂಗಳವಿದೆ.[೧೬] ಅದರ ಮಧ್ಯದಲ್ಲಿ ದೊಡ್ಡದಾದ ನೀರಿನ ತೊಟ್ಟಿಯಿದೆ. ಮೂರು ಪಕ್ಕಗಳಲ್ಲಿ ಏಳು ಕಮಾನುಗಳ ಸಾಲಿದೆ. ಒಂದೊಂದು ಕಮಾನು ಕೂಡಾ ೨೮ ಅಡಿ ಅಗಲ ಹಾಗೂ ೨೫ ಅಡಿ ಎತ್ತರವಾಗಿದ್ದು, ದಕ್ಷಿಣ ಮತ್ತು ಉತ್ತರಾಭಿಮುಖವಾಗಿ ಅಂಗಳದ ಕಡೆಗೆ ನಿರ್ಮಿಸಲ್ಪಟ್ಟಿವೆ. ಆರಾಧನಾ ಮಂದಿರದ ಒಳಗಡೆ ಬೆಳಕು ಬೀಳಿಸುವ ಸುಂದರ ಕಲಾತ್ಮಕ ಕಿಟಕಿಗಳುಳ್ಳ ಗೋಡೆಗಳು, ಗುಮ್ಮಟಕ್ಕೆ ಆಧಾರವಾಗಿವೆ. ಗುಮ್ಮಟವು ಗೋಲಾರ್ಧವಾಗಿದ್ದು ಅದರ ನೆತ್ತಿಯ ಮೇಲೆ ಬಿದಿಗೆ ಚಂದ್ರನ ಗುರುತನ್ನು ನಿಲ್ಲಿಸಲಾಗಿದೆ. ಈ ಮಸೀದೆಯಲ್ಲಿನ ವಿಶೇಷವಾದ ಅಂಶವೆಂದರೆ, ಕಲ್ಲಿನ ಗೋಡೆಗಳ ಕಮಾನುಗಳಿಂದ ಐದು ಅಂಕಣದಲ್ಲಿ ವಿಭಾಗಿತವಾಗಿದೆ. ನಡುವೆ ೭೬ ಅಡಿ ವ್ಯಾಸವುಳ್ಳ ಒಂದು ಚೌಕಾಕಾರದ ಆವರಣವಿದೆ, ಅದರಲ್ಲಿ ಪ್ರಾರ್ಥನೆ ಸಲ್ಲಿಸುವವರಿಗಾಗಿ ಒಬ್ಬೊಬ್ಬರಿಗೆ ಒಂದರಂತೆ ಮಸೀದೆಯ ನೆಲಕ್ಕೆ ನುಣುಪಾದ ಗೋರೆಯಿಂದ ನಿರ್ಮಿಸಿದ ಸ್ಥಳದಲ್ಲಿ ಚೌಕಾಕಾರದ ಕಪ್ಪುಗೆರೆಗಳನ್ನೆಳೆದ ೨,೨೫೦ ಸಮಪ್ರಮಾಣದ ಜಾಗಗಳನ್ನು ಬಿಡಲಾಗಿದೆ. ಈ ಕೆಲಸವನ್ನು ಮೊಘಲ್ ಬಾದಷಾಹನಾದ ಔರಂಗಜೇಬನ ಕಾಲದಲ್ಲಿ ಮಾಡಲಾಯಿತು, ಅಲ್ಲದೇ ಈ ಮಸೀದೆಯ ಪೂರ್ವ ದಿಕ್ಕಿನ ಪ್ರವೇಶ ದ್ವಾರವು ಸಹ ಈತನಿಂದಲೇ ನಿರ್ಮಾಣವಾಯಿತು.[೧೭]

ಈ ಜುಮ್ಮಾ ಮಸೀದಿಗೆ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಮತಷ್ಟು ಅಲಂಕರಿಸಲಾಗಯಿತು. ಈ ಮಸೀದೆಯ ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಮೆಹ್ರಬ ಎಂದು ಕರೆಯುವ ಸ್ಥಳದಲ್ಲಿ ಕ್ರಿ.ಶ. ೧೬೩೬ ರಲ್ಲಿ ಮಹಮ್ಮದ ಆದಿಲ್‌ಶಾಹನ ಆಜ್ಞೆಯ ಮೇರೆಗೆ ಇವನ ಅಧಿಕಾರಿಯಾದ ಮಲ್ಲಿಕ ಯಾಖೂತನು ಈ ಮೆಹ್ರಬಗೆ ಬಣ್ಣ ಬಣ್ಣದ ಚಿತ್ತಾರಗಳ ಅಲಂಕಾರಕ ಇರುವ ಸುಂದರ ನಕ್ಷೆಗಳು, ಪವಿತ್ರ ಕುರಾನಿನ ವಾಕ್ಯಗಳನ್ನು ಕಲಾತ್ಮಕ ಅಕ್ಷರಗಳಿಂದ ಕೊರೆಸಿ, ಬಂಗಾರದ ನೀರು ಲೇಪಿಸಿದ ಈ ಮಸೀದೆಯಲ್ಲಿರು ಮಹಮ್ಮದನು ಪಶ್ಚಿಮ ಗೋಡೆಯ ಮೇಲೆ ಮತ್ತು ಮೆಹ್ರಬ ಮೇಲೆ ಪರ್ಶಿಯನ ಶಾಸನವನ್ನು ಚಿನ್ನದ ಬಣ್ಣದಿಂದ ಈ ಹೀಗೆ ಬರೆಯಲಾಗಿದೆ.

" ಜೀವನದಲ್ಲಿ ನಂಬಿಕೆ ಇಡಬೇಡ; ಅದು ಕ್ಷಣಿಕ ಮಾತ್ರವಿದೆ,

ಈ ಅಶಾಶ್ವತ ಜಗತ್ತಿನಲ್ಲಿ ಶಾಂತಿ ಇಲ್ಲ.

ಜಗತ್ತು ಇಂದ್ರಿಯಗಳಿಗೆ ಒಳ್ಳೆಯ ಮೋಹಕವಾಗಿದೆ,

ಎಲ್ಲ ದಾನಗಳಲ್ಲಿ ಜೀವನವು ಅತ್ಯುತ್ತಮವಾದುದು ಆದರೆ ಅದು ಶಾಶ್ವತವಲ್ಲ

ಮಸೀದಿಯ ಸೇವಕನೂ ಮತ್ತು ಸುಲ್ತಾನ ಮಹಮ್ಮದನ ಗುಲಾಮನು ಆದ

ಮಲಿಕ ಯಾಕೂತನು ಮಸೀದಿಯನ್ನು ಪೂರ್ಣಗೊಳಿಸಿದನು.”[೧೮]

ಈ ಮಸೀದೆ ಈಗಲೂ ಸಹ ಪ್ರಾರ್ಥನೆಗೆ ಬಳಸಲ್ಪಡುತ್ತಿದ್ದು ಮತ್ತು ಹೆಚ್ಚಾಗಿ ಉತ್ತರ ದಿಕ್ಕಿನ ಬಾಗಿಲನ್ನೇ ಬಳಸಲಾಗುತ್ತದೆ. ಇದು ವಾಸ್ತುಶಿಲ್ಪದ ಸರಳತೆಯಿಂದ ಹಾಗೂ ಅಲಂಕಾರಿಕ ಶೈಲಿಯಿಂದಾಗಿ ವಿಚಾರಯುತವಾದ ಮತ್ತು ರಕ್ಷಣಾತ್ಮಕ ಕಲೆಯಿಂದಾಗಿ, ಭವ್ಯವಾದ ಅಳತೆಯಿಂದಾಗಿ ಬೃಹತ ಕಮಾನುಗಳಿಂದಾಗಿ ಸುಂದರವಾದ ಗುಮ್ಮಟದಿಂದಾಗಿ ಪ್ರಾರ್ಥನೆಯನ್ನು ಸಲ್ಲಿಸಲು ಬರುವವರ ಮನಸ್ಸನ್ನು ಪ್ರಫಲ್ಲಗೊಳಿಸುತ್ತದೆ.

೨ ಗೋಳಗುಮ್ಮಟ ಆವರಣದಲ್ಲಿನ ಮಸೀದಿ :

ಆದಿಲ್‌ಶಾಹಿ ಸುಲ್ತಾನರು ಸಾಮಾನ್ಯವಾಗಿ ತಮ್ಮ ಗೋರಿ ಹತ್ತಿರ ಪ್ರಾರ್ಥನಾಲಯವನ್ನು ಕಟ್ಟಿಸಿದ್ದನ್ನು ನೋಡಬಹುದು. ಉದಾಹರಣೆಗಾಗಿ ಎರಡನೆಯ ಇಬ್ರಾಹಿಮನು ತನ್ನ ಗೋರಿ ಹತ್ತಿರ ಮಸೀದಿಯನ್ನು ಕಟ್ಟಿಸಿದ್ದನು. ಅದೇ ರೀತಿಯಾಗಿ ಇಬ್ರಾಹಿಮನ ಮಗ ಮಹಮ್ಮದ ಆದಿಲ್‌ಶಾಹನು ತನ್ನ ಗೋರಿಯಾದ ಗೋಳಗುಮ್ಮಟ ಹತ್ತಿರ ಮಸೀದಿಯನ್ನು ಕಟ್ಟಿಸಿದನು. ಈ ಮಸೀದಿಯು ಗೋಳಗುಮ್ಮಟದ ಪಶ್ಚಿಮದಲ್ಲಿದೆ. ಇದನ್ನು ಕಾಟಕೋನ ಆಕಾರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಪೂರ್ವಾಭಿಮುಖವಾಗಿ ಪ್ರವೇಶಿಸಲು ಐದು ಕಮಾನುಗಳಿವೆ. ಮೇಲ್ಭಾಗದಲ್ಲಿ ಸಮತಟ್ಟಾದ ಛಾವಣಿಯಿದೆ. ಪ್ರವೇಶದ ಎಡಬಲಕ್ಕೆ ಅಷ್ಟಕೋನಾಕಾರದ ಸುಂದರ ಮೀನಾರಗಳಿವೆ. ಛತ್ತಿನ ನಡುವೆ ಗೋಲಾಕೃತಿಯ ಗುಮ್ಮಟವಿದೆ. ಕಲ್ಲಿನಲ್ಲಿ ಕೆತ್ತಿದ ಸುಂದರ ಸಜ್ಜವು ಮನಮೋಹಕವಾಗಿದೆ.[೧೯] ಒಳ ಆವರಣದಲ್ಲಿ ಗೋಡೆಯಿದೆ. ಮಧ್ಯದಲ್ಲಿ ಮಿಹ್ರಾಬ್‌ವಿದೆ. ಮಸೀದೆಯ ಮುಂದೆ ಹೌಜು ಇದರ ಮಧ್ಯ ಕಾರಂಜಿಯ ಅವಶೇಷಗಳಿವೆ.

೩. ಮುಸ್ತಫಾಖಾನ ಮಸೀದಿ :

ಮಹಮ್ಮದ ಆದಿಲ್‌ಶಾಹನ ಮಂತ್ರಿಯಾದ ಮುಸ್ತಫಾಖಾನನು ಈ ಮಸೀದಿಯನ್ನು ಕಟ್ಟಿಸಿದನು. ಈ ಮಸೀದಿಯು ಜುಮ್ಮಾ ಮಸೀದಿಯ ರಸ್ತೆಯ ಉತ್ತರದಲ್ಲಿದೆ. ಈ ಮಸೀದಿಯು ೫ ಅಡಿ ಎತ್ತರದ ಕಟ್ಟೆಯ ಮೇಲೆ ನಿರ್ಮಿತವಾಗಿದೆ. ಪ್ರವೇಶದಲ್ಲಿ ಪೂರ್ವಾಭಿಮುಖವಾಗಿ ಮೂರು ದೊಡ್ಡ ಕಮಾನುಗಳಿವೆ. ಮೇಲ್ಭಾಗದಲ್ಲಿ ಸುಂದರ ಮೀನಾರಗಳಿವೆ. ಇದಕ್ಕೆ ಚಂಡಿನಾಕಾರದ ಗುಮ್ಮಟವಿದೆ. ಒಳ ಆವರಣದಲ್ಲಿ ಚಪ್ಪರದ ಕೆಳಗಡೆ ಮಧ್ಯದಲ್ಲಿ ಗುಮ್ಮಟ ಆಕೃತಿಯಿದೆ. ದಕ್ಷಿಣ-ಉತ್ತರದ ಗೋಡೆಯಲ್ಲಿ ಮೇಲೆ ಹೋಗಲು ಮೆಟ್ಟಿಲುಗಳಿವೆ. ಮಸೀದೆಯ ಪ್ರವೇಶದಲ್ಲಿ ಮೂರು ಕಮಾನುಗಳಿವೆ, ಅದರಲ್ಲಿ ಮಧ್ಯದ ಕಮಾನು ಉಳಿದ ಎರಡು ಕಮಾನಿಗಿಂತ ಅಗಲವಾಗಿದೆ. ಕಮಾನುಗಳಿಗೆ ಗಾರೆ ಕೆಲಸದಿಂದ ಅಲಂಕಾರ ಮಾಡಲಾಗಿದೆ.[೨೦]

ಪೂರ್ವದಲ್ಲಿ ವಜು (ಮುಖ ತೊಳೆಯುವದು)ಮಾಡಲಿಕ್ಕೆ ಒಂದು ಹೌಜು ಇದೆ. ಒಳಗಡೆ ಕಾರಂಜಿಯ ಅವಶೇಷಗಳಿವೆ. ಎಡಪಕ್ಕಕ್ಕೆ ಒಂದು ಸಮಾಧಿಯಿದೆ. ಈ ಮಸೀದಿಯ ಇನ್ನೊಂದು ವಿಶೇಷವೆಂದರೆ ಇದರ ಗೋಡೆಗಳು ಸುಮಾರು ೫೦ ರಿಂದ ೬೦ ಅಡಿ ಎತ್ತರವಾಗಿ ಕಟ್ಟಲಾಗಿದೆ.

೪. ಶಾಹ ನವಾಜಖಾನ ಮಸೀದಿ :

ಕ್ರಿ.ಶ. ೧೬೪೭ ರಲ್ಲಿ ಮರಣ ಹೊಂದಿದ ಮಹಮ್ಮದ ಆದಿಲ್‌ಶಾಹನ ಮಂತ್ರಿಯಾದ ಶಾಹ ನವಾಜಖಾನ ಎಂಬ ಅಧಿಕಾರಿಯು ಮಸೀದಿಯನ್ನು ಶಹಾಪುರ ಕೋಟೆಯ ದ್ವಾರದ ಬಳಿ ಖ್ವಾಜಾ ಅಮೀನ ದರ್ಗಾಕ್ಕೆ ಹೋಗುವ ರಸ್ತೆಯ ಹತ್ತಿರ ನಿರ್ಮಿಸಲಾಗಿದೆ. ಚಚ್ಚೌಕಾರದ ಒಂದು ಕಟ್ಟೆಯ ಮೇಲೆ ಶಾಹ ನವಾಜಖಾನನ ಗೋರಿಯಿದೆ. ಅದಕ್ಕೆ ಹೊಂದಿಕೊಂಡು ಒಂದು ಹೌಜು, ಬದಿಗೆ ಕಾಟಕೋನ ಆಕೃತಿಯ ಮಸೀದಿಯಿದೆ. ಸಮಾಧಿಯ ಕಟ್ಟಡಕ್ಕೆ ಗುಮ್ಮಟವಿದ್ದು ಪ್ಯಾರಾಫಿಟ್ ಸುತ್ತಲು ೧೨ ಕಮಾನುಗಳಿವೆ. ೧೨ ಕಮಾನುಗಳಿದ್ದರಿಂದ ಸ್ಥಳೀಯರು ಈ ಮಸೀದಿಯನ್ನು ಬಾರಾ ಟಾಂಗ ಮಸೀದಿಯೆಂದು ಈಗಲೂ ಕರೆಯುತ್ತಾರೆ. ಮೇಲೆ ಚಿಕ್ಕ ಗುಮ್ಮಟಗಳಿವೆ. ಮಧ್ಯದಲ್ಲಿ ದೊಡ್ಡ ಗುಮ್ಮಟದ ಕೆಳಬದಿಗೆ ಚಿಕ್ಕ ಮೀನಾರಗಳಿವೆ. ಕಟ್ಟಡದ ಕೆಳಭಾಗದಲ್ಲಿ ಕಲ್ಲಂಗಡಿ ಹಣ್ಣಿನ ಹಾಗೆ, ಹೂಕುಂಬಳಕಾಯಿಯ ಹಾಗೆ ಅಲಂಕಾರಗಳಿವೆ. ಮೇಲ್ಭಾದಲ್ಲಿ ನಾಲ್ಕು ಕಡೆಗೆ ಚಿಕ್ಕ ಮಿನಾರಗಳಿವೆ. ಒಳ ಆವರಣದ ಚಪ್ಪರಕ್ಕೆ ಅಲ್ಪ ಸ್ವಲ್ಪ ಅಲಂಕರಣವಿದೆ,. ವಜು ಮಾಡಲಿಕ್ಕೆ ಸಮಾಧಿ ಮತ್ತು ಮಸೀದಿಯ ನಡುವೆ ಹೊಂಡವಿದ್ದು ಇದು ಜೋಡಿಸುವ ಕೊಂಡಿಯಾಗಿದೆ. ಇದರ ವಿಶೇಷವೆಂದರೆ ಇಲ್ಲಿ ಉಪಯೋಗಿಸಲಾದ ಕಮಾನುಗಳು ಸುಮಾರು ೫೦-೬೦ ಅಡಿ ಎತ್ತರವಾಗಿ ಕಟ್ಟಲಾಗಿದೆ.[೨೧]

೫. ಯಾಕೂತ ದಾಬೂಲಿ ಮಸೀದಿ :

ಇದು ಅದಾಲತ್ ಮಹಲಿನಿಂದ ಸ್ವಲ್ಪ ದೂರದ ವಾಯುವ್ಯ ದಿಕ್ಕಿನಲ್ಲಿದೆ. ಯಾಕೂತ ದಾಬೂಲಿಯು ಕ್ರಿ. ಶ. ೧೬೨೬-೧೬೫೬ ರಲ್ಲಿ ಮಹಮ್ಮದ ಆದಿಲ್‌ಶಾಹನ ಸೇವಕನಾಗಿ ಒಬ್ಬ ಮಹಾನ ಕಲೆಗಾರನಾಗಿ ಜಾಮಿ ಮಸೀದಿಯನ್ನು ಬಣ್ಣದಿಂದ ಅಲಂಕಾರ ಕೈಗೊಂಡಿದ್ದನು.[೨೨]

ಚಚ್ಚೌಕಾರದ ದೊಡ್ಡ ಕಟ್ಟೆಯ ಮೇಲಿನ ಈ ಮಸೀದಿಯ ಮೇಲ್ಭಾಗದ ಛತ್ತು ಸಪಾಟಾಗಿದೆ. ನಾಲ್ಕು ಕಡೆ ಚಿಕ್ಕ ಮೀನಾರಗಳಿವೆ. ಕಟ್ಟಡದ ಒಳಭಾಗದಲ್ಲಿ ಮಿಹ್ರಾಬ್ ಇದ್ದು, ಅದರ ಎಡ-ಬಲಕ್ಕೆ ಸಣ್ಣ ಸಣ್ಣ ಕೋಣೆಗಳಿವೆ. ಈ ಮಸೀದಿಯ ಪ್ರತಿಯೊಂದು ಮೂಲೆಯನ್ನು ಲ್ಯಾಟ್ರೈಟ್ ಶಿಲೆಯನ್ನು ಬಳಸಲಾಗಿದೆ. ಮೇಲೆ ಚಪ್ಪರಕ್ಕೆ ಹೋಗಲು ಪಶ್ಚಿಮ ಗೋಡೆಯ ಹೊರಭಾಗದಲ್ಲಿ ಮೆಟ್ಟಿಲುಗಳಿವೆ.

ಈ ಮಸೀದಿಯ ಮುಂದೆ ಎಡಭಾಗದ (ಉತ್ತರ ದಿಕ್ಕಿಗೆ) ಯಾಕೂಬ ದಾಬೂಲಿಯ ಸಮಾಧಿಯಿದೆ. ಈ ಕಟ್ಟಡದ ಸುತ್ತ ಕಲ್ಲಿನ ಸುಂದರ ಜಾಲಂಧರಗಳಿವೆ, ಅಲ್ಲಿಯೇ ಶಾಸನಗಳಿವೆ. ಈ ಮಸೀದಿಯ

ಸುತ್ತಮುತ್ತಲೂ ಕಲ್ಲಿನ ಕೋಟೆ ಇದ್ದು ಅದು ಹಾಳಾಗಿ ಹೋಗಿದೆ. ಈಗ ಜನರು ಈ ಮಸೀದಿಯಲ್ಲಿ ಪ್ರಾರ್ಥನೆ ಮಾಡುತ್ತಾರೆ.[೨೩]

೬. ಅಫಜಲ್‌ಖಾನನ ಹೆಂಡತಿಯ ಮಸೀದಿ :

ಈ ಮಸೀದಿಯು ತೊರವಿಗೆ ಹೋಗುವ ರಸ್ತೆಯ ಬಲಕ್ಕೆ ಖಾಸಗಿ ಹೊಲಗಳ ಮಧ್ಯದಲ್ಲಿ ಅಫಜಲ್‌ಖಾನನ ಹೆಂಡತಿಯರ ಸಮಾದಿಯ ದಕ್ಷಿಣ ದಿಕ್ಕಿನಲ್ಲಿದೆ. ಈ ಮಸೀದಿಯು ಎತ್ತರವಾದ ಕಟ್ಟೆಯ ಮೇಲಿದೆ. ಸುಂದರವಾದ ಮೂರು ಕಮಾನುಗಳಿವೆ. ಪೂರ್ವಭಾಗಕ್ಕೂ ಆಧಾರಕ್ಕಾಗಿ ಸಜ್ಜಾಗಳಿವೆ. ಮೇಲ್ಭಾಗದಲ್ಲಿ ಗುಮ್ಮಟವಿಲ್ಲ. ನಾಲ್ಕು ಕಡೆ ಚಿಕ್ಕ ಚಿಕ್ಕ ಮೀನಾರುಗಳಿವೆ. ಮಸೀದಿಯ ಒಳ ಆವರಣದಲ್ಲಿ ಸಪಾಟಾದ ರೂಪವಿದ್ದು ಮಧ್ಯದಲ್ಲಿ ಮಿಹ್ರಾಬ್‌ಯಿದೆ. ಇದರ ಉತ್ತರಕ್ಕೆ ೧೦೦೦ ಅಡಿ ಅಂತರದಲ್ಲಿ ಅಫಜಲ್‌ಖಾನನ ಮಡದಿಯರ ಸಮಾಧಿಗಳಿವೆ.[೨೪]

೭. ಚಿಂಚದೀಡ್ಡಿ ಮಸೀದಿ :

ಈ ಮಸೀದಿಯು ಆಸರ ಮಹಲಿನ ಹಿಂಭಾಗದ (ಅರ್ಕಿಲ್ಲಾ) ಕೋಟೆಯ ಮೇಲಿದೆ. ಇದನ್ನು ಮಹಮ್ಮದ ಆದಿಲ್‌ಶಾಹನ ಆಳ್ವಿಕೆಯ ಅಂತ್ಯದಲ್ಲಿ ನಿರ್ಮಿಸಲಾಗಿದೆ. ಕೋಟೆಗೋಡೆಗೆ ಹೊಂದಿಕೊಂಡಂತೆ ಇದನ್ನು ನಿರ್ಮಿಸಲಾಗಿದೆ. ಪ್ರವೇಶದಲ್ಲಿ ಪೂರ್ವಾಭಿಮುಖವಾಗಿ ಐದು ಕಮಾನುಗಳಿವೆ. ಮೇಲ್ಭಾಗದಲ್ಲಿ ಕಮಲದ ಎಸಳಿನ ಚಿತ್ರಗಳುಳ್ಳ ಗೋಲಾಕಾರದ ಗುಮ್ಮಟವಿದೆ. ಹಿಂಭಾಗದ ಗೋಡೆಯಲ್ಲಿ ಚಪ್ಪರಕ್ಕೆ ಹೋಗಲು ಪಾವಟಿಕೆಗೆಗಳಿವೆ. ಇದನ್ನು ಕಲ್ಲು, ಗಾರೆ, ಇಟ್ಟಂಗಿಗಳಿಂದ ಸಾಧಾರಣ ಶೈಲಿಯಲ್ಲಿ ನಿರ್ಮಿಸಿದ್ದಾರೆ. ಈ ಮಸೀದಿಯ ಇನ್ನೊಂದು ವಿಶೇಷವೆಂದರೆ ಕೋಟೆಯ ಅತಿ ಎತ್ತರವಾದ ಸ್ಥಳದಲ್ಲಿ ಇದನ್ನು ನಿರ್ಮಿಸಲಾಗಿದೆ.[೨೫] ಮಹಮ್ಮದ ಆದಿಲ್‌ಶಾಹನು ಸಂಜೆಯ ಪ್ರಾರ್ಥನೆಗಾಗಿ ಆಸರ ಮಹಲಿನಿಂದ ಇಲ್ಲಿ ಬರುತ್ತಿದ್ದನಂತೆ. ಸೂರ್ಯಾಸ್ಥ ಸಮಯದಲ್ಲಿ ಈ ಪ್ರದೇಶದ ವಾತಾವರಣ ಬಹಳ ಮನಮೋಹಕವಾಗಿರುತ್ತದೆ.

೮. ರಣದುಲ್ಲಾಖಾನ ಅಥವಾ ಅಮೀನ ಮುಸ್ತಫಾಖಾನ ಮಸೀದಿ ರಾಯಭಾಗ :

೧೬ ಮತ್ತು ೧೭ನೆ ಶತಮಾನದಲ್ಲಿ ರಾಯಭಾಗವು ಆದಿಲ್‌ಶಾಹಿಗಳ ಕಾಲದಲ್ಲಿ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ಈ ಪ್ರದೇಶವು ಮಹಮ್ಮದ ಆದಿಲ್‌ಶಾಹನು ತನ್ನ ಸೇನಾಪತಿಯಾದ ರಣದುಲ್ಲಾಖಾನನಿಗೆ ಜಹಗೀರವಾಗಿ ಕೊಟ್ಟಿದ್ದನು. ಇಂತಹ ಪ್ರಮುಖ ವ್ಯಾಪಾರಿ ಕೇಂದ್ರವನ್ನು ಜಹಗೀರಾಗಿ ಪಡೆದ ರಣದುಲ್ಲಾಖಾನನು ತನ್ನ ಎಲ್ಲ ಕಾರ್ಯಚಟುವಟಿಕೆಯ ಕೇಂದ್ರವನ್ನಾಗಿ ಮಾಡಿಕೊಂಡು ತನ್ನ ಜಹಗೀರವನ್ನು ನೋಡುಕೊಳ್ಳುತ್ತಿದ್ದನು.[೨೬]

ಈ ಮಸೀದಿಯು ಪಟಣದಿಂದ ಒಂದು ಕಿ.ಮೀ. ದೂರದಲ್ಲಿದೆ. ಇದರ ಮೇಲೆ ಒಂದು ಪರ್ಶಿಯನ ಶಾಸನವಿದೆ. ಈ ಮಸೀದಿಯನ್ನು ಸ್ಥಳೀಯರು "ರಣದುಲ್ಲಾಖಾನ ಮಸೀದಿ" ಎಂದು ಕರೆಯುತ್ತಾರೆ. ಆದರೆ

ವಾಸ್ತವಿಕವಾಗಿ ಈ ಮಸೀದಿಯನ್ನು ,ಮಹಮ್ಮದ ಆದಿಲ್‌ಶಾಹನ ಪ್ರಧಾನ ಮಂತ್ರಿಯಾದ ಅಮೀನ ಮುಸ್ತಫಾಖಾನನು ಕಟ್ಟಿಸಿದನು.[೨೭] ಈ ಮಸೀದಿಗೆ ಮೂರು ಕಮಾನುಗಳಿವೆ ಮಧ್ಯದ ಕಮಾನಿನ ಮೇಲೆ ಪರ್ಶಿಯನ ಭಾಷೆಯ ಮತ್ತು ನಸ್ತಾಲಿಖ ಲಿಪಿಯ ಶಾಸನವಿದೆ. ಈ ಶಾಸನದಲ್ಲಿ ಅಲ್ಲಾಹನ ಹೊರತು ಬೇರೆಯಾವ ದೇವರಿಲ್ಲ ಮತ್ತು ಮಹಮ್ಮದರು ಅವರ ಪ್ರವಾದಿ ಎಂದು ಬರೆಯಲಾಗಿದೆ. ಅಲ್ಲದೇ ಈ ಶಾಸನದ ಮೇಲೆ ಅಮೀನ ಮುಸ್ತಫಾಖಾನ ಎಂದು ಬರೆಯಲಾಗಿದೆ.

ಬ) ರಕ್ಷಣಾ ವಾಸ್ತು ಶಿಲ್ಪ :

ಭಾರತದಲ್ಲಿ ಕೋಟೆಯ ಇತಿಹಾಸವು ಬಹು ಪ್ರಾಚೀನವಾದದ್ದು. ಕೋಟೆಯ ಅವಶೇಷಗಳನ್ನು ಸಿಂಧೂನದಿ ನಾಗರಿಕತೆಯನ್ನು ಪ್ರತಿನಿಧಿಸುವ ಪಟ್ಟಣಗಳಾದ ಹರಪ್ಪಾ , ಮೊಹೆಂಜೊದಾರೊ, ರೂಪಾರ, ಲೋಡಾಲ್, ಭಗತಾರೊ ಹಾಗೂ ಸುರಕೊಟಾ ಮುಂತಾದ ಸ್ಥಳಗಳಲ್ಲಿ ಸಂಶೋಧಕರು ತಮ್ಮ ಉತ್ಖನನ ಕಾಲದಲ್ಲಿ ಶೋಧಿಸಿದ್ದಾರೆ.

ಭಾರತದ ಮೊಟ್ಟಮೊದಲ ಸಾಮ್ರಾಜ್ಯವಾದ ಮೌರ್ಯರ ಕಾಲದಲ್ಲಿ ಭೇಟಿಕೊಟ್ಟ ಗ್ರೀಕ ರಾಯಭಾರಿಯಾದ ಮೆಗಾಸ್ಥನೀಸನು ಪಾಟಲೀಪುತ್ರವು ಕೋಟೆಯನ್ನು ಒಳಗೊಂಡಿದ್ದ ಬಗ್ಗೆ ದಾಖಲೆಯನ್ನು ಒದಗಿಸಿದ್ದಾನೆ. ಈ ರೀತಿಯಾಗಿ ಕ್ರಿ. ಶ. ಪೂರ್ವದ ಶತಮಾನಗಳಲ್ಲಿ ಪ್ರಾರಂಭಗೊಂಡ ಭಾರತದ ರಕ್ಷಣಾತ್ಮಕ ವಾಸ್ತು ಶೈಲಿಯು ನಾನಾ ಕಡೆಗೆ ಹರಡಿ ಅಭೇದ್ಯವಾದ ಕೋಟೆಯನ್ನು ನಿರ್ಮಿಸಲ್ಪಟ್ಟವು. ಇಂತಹ ಕೋಟೆಗಳ ಹಾಗೂ ನಗರಗಳ ವ್ಯವಸ್ಥಿತವಾದ ರಚನೆಯನ್ನು ಅನೇಕ ಶಾಸ್ತ್ರ ಗ್ರಂಥಗಳು ವಿವರಿಸಿವೆ. ಅವುಗಳಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಹಾಗೂ ಮಾನಸಾರ ಇವುಗಳು ಪ್ರಮುಖವಾಗಿದೆ. ಇವುಗಳು ಕೋಟೆಯನ್ನು ರಚಿಸುವ ಪದ್ಧತಿ ಕೋಟೆಗಳ ಅಗತ್ಯತೆ ಅವುಗಳ ಪ್ರಕಾರಗಳು ಮೊದಲಾದ ವಿಷಯಗಳನ್ನು ಕುರಿತು ಚರ್ಚಿಸಿವೆ.

ಬಿಜಾಪುರದ ಕೋಟೆ :

ಬಿಜಾಪುರ ನಗರವು ಸುಭದ್ರವಾದ ಕೋಟೆ ಗೋಡೆಗಳಿಂದ ಆವರಿಸಲ್ಪಟ್ಟಿದೆ. ಆದರೆ ಕೆಲವು ಭಾಗಗಳು ಇಂದಿಗೂ ಕೂಡ ತಮ್ಮ ಭವ್ಯತೆಯನ್ನು ಸಾರುತ್ತ ನಿಂತಿವೆ. ಇದರ ಅತ್ಯಂತ ಪ್ರೇಕ್ಷಣೀಯ ಸ್ಥಳಗಳಾದ ಬುರುಜುಗಳು ಇಂದು ಬಹುತೇಕ ವಿನಾಶದ ಅಂಚಿನಲ್ಲಿದೆ. ಬಿಜಾಪುರ ನಗರದಲ್ಲಿ ಎರಡು ಪ್ರತೇಕ ಕೋಟೆಗಳಿವೆ. ಒಂದು ಸುಲ್ತಾನರು ತಮ್ಮ ವಾಸಸ್ಥಾನವಾದ ಅರಮನೆಗೆ ಕಟ್ಟಿದ್ದ ಅರ್ಕಕಿಲ್ಲೆ ಕೋಟೆ ಇನ್ನೊಂದು ನಗರವನ್ನು ಸುತ್ತುವ ಕೋಟೆ. ಈಗ ಬಹುತೇಕ ಭಾಗ ಹಾಳಾಗಿದ್ದು ಕೆಲವು ಸ್ಥಳಗಳಲ್ಲಿ ಕೋಟೆಯ ರಚನಾ ವಿಧಾನ ವಿನ್ಯಾಸ ಗುರುತಿಸಬಹುದು.

ಬಿಜಾಪುರದ ಅರಮನೆಯ ಕೋಟೆಯನ್ನು ಆದಿಲ್‌ಶಾಹಿ ರಾಜ್ಯದ ಸಂಸ್ಥಾಪಕ ಯೂಸುಫ್ ಆದಿಲ್‌ಖಾನನು ಕ್ರಿ.ಶ. ೧೫೦೩-೧೫೦೪ ರಲ್ಲಿ ಕಟ್ಟಿದನು. ಬಹುಶಃ ಆ ಮೊದಲೆ ಕಲ್ಯಾಣಿ ಚಾಲುಕ್ಯರು ಹಾಗೂ ದೇವಗಿರಿಯ ಯಾದವರು ತಮ್ಮ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡ ಕೋಟೆಯ

ಗೋಡೆಯನ್ನೆ ಯೂಸುಫ್ ಆದಿಲ್‌ಖಾನನು ತನ್ನ ವಾಸಸ್ಥಾನಕ್ಕಾಗಿ ಬಳಸಿಕೊಂಡಿರಬೇಕು. ಈಗ ಹಿಂದಿನ ಹಿಂದು ರಾಜಮನೆತನದವರಾಗಲೀ ಕಟ್ಟಿದ ಕೋಟೆ ಗೋಡೆಯ ಅವಶೇಷಗಳೇನು ಉಳಿದ್ದಿಲ್ಲ. ಆದರೆ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಕಟ್ಟಿದ ನರಸಿಂಹ ಮಂದಿರದ ಅವಶೇಷಗಳು ಇಂದಿಗೂ ಕಾಣಬಹದು.

ವಿಜಯನಗರದ ದಾಳಿಂದಯಿಂದ ಹಿಂತಿರುಗಿದ ನಂತರ ಮೊದಲನೆಯ ಅಲಿ ಆದಿಲ್‌ಶಾಹನು ಅರಮನೆಗೂ ಹಾಗೂ ನಗರಕ್ಕೂ ಗಟ್ಟಿಮುಟ್ಟಾದ ಕಲ್ಲಿನ ಕೋಟೆಯನ್ನು ಕ್ರಿ. ಶ. ೧೫೬೬ ರಲ್ಲಿ ಕಟ್ಟಿಸಿದನು.[೨೮] ಈ ಕೋಟೆಯು ಸಾಮಾನ್ಯವಾಗಿ ಅಂಡಾಕಾರವಾಗಿದ್ದು, ಪಶ್ಚಿಮದ ಭಾಗವು ವಿಶಾಲವಾಗಿದ್ದು. ಜೊತೆಗೆ ಅದರ ಸುತ್ತಲೂ ೪೦ ರಿಂದ ೫೦ ಅಡಿ ಆಳವಾದ ನೀರಿನಿಂದ ತುಂಬಿದ ಕಂದಕಗಳನ್ನು ನಿರ್ಮಿಸಲಾಗಿತು. ಅದರ ಗೋಡೆಗಳು ದಪ್ಪವಾಗಿದ್ದು ಮತ್ತು ಬಲಿಷ್ಠವಾಗಿದ್ದು ಐದು ಮುಖ್ಯ ದ್ವಾರಗಳನ್ನು ಹೊಂದಿದೆ. ಬೇರೆ ಬೇರೆ ಆಕಾರಗಳುಳ್ಳ ೧೨೦ ಬುರುಜ (ಕಾವಲು ಗೋಪುರ)ಗಳು ಮತ್ತು ವಿವಿಧ ಕೋನಗಳಲ್ಲಿ ಇರಿಸಲಾಗಿದ ತೋಪುಗಳನ್ನು ಹೊಂದಿವೆ.[೨೯] ಗೋಡೆಯ ಮೇಲೆ ನಗರದ ಸುತ್ತಲೂ ೧೦ ಅಡಿ ಅಗಲದ ಕಾಲುದಾರಿ ಕಂಡುಬರುತ್ತದೆ. ಜೊತೆಗೆ ಯುದ್ಧ ಕಾಲದಲ್ಲಿ ಬಾಣಗಳನ್ನು ಪ್ರಯೋಗಿಸಲು ಕಿಂಡಿಗಳನ್ನು ಬಿಡಲಾಗಿದೆ.

ಸುಣ್ಣ ಗಚ್ಚು ಮತ್ತು ಕಲ್ಲನ್ನು ಉಪಯೋಗಿಸಿ ಕಟ್ಟಿದ ಕೋಟೆಯ ಅವಶೇಷಗಳು ಇಂದಿಗೂ ತಮ್ಮ ಭವ್ಯತೆಯನ್ನು ಸಾರುತ್ತಿವೆ. ದಕ್ಷಿಣ ಭಾರತದಲ್ಲಿಯೇ ಇಂಥ ಬಲಿಷ್ಠ ಕೋಟೆ ಇನ್ನೊಂದಿಲ್ಲ. ಅರವಮನೆಗೂ ಕಟ್ಟಿದ ಕೋಟೆ ಎರಡು ಪದರುಗಳುಳ್ಳದ್ದಾಗಿದೆ. ನಗರಕ್ಕೆ ನಾಲ್ಕು ದಿಕ್ಕುಗಳಿಗೂ ನಾಲ್ಕು ಬಾಗಿಲುಗಳು ಪಶ್ಚಿಮ ದಿಕ್ಕಿನಲ್ಲಿ ಇನ್ನೊಂದು ಉಪಬಾಗಿಲು ಹೀಗೆ ಐದು ಬಾಗಿಲುಗಳಿದ್ದ ಕೋಟೆ ವರ್ತುಲಾಕಾರವಾಗಿ ಸುಮಾರು ೧೧ ಕಿ.ಮಿ. ಇದೆ. ಇನ್ನೊಂದು ಪ್ರಮುಖ ವಿಷಯವೆಂದರೆ ಬಿಜಾಪುರ ಕೋಟೆಯನ್ನು ಯಾರಿಂದಲೂ ಭೇಧಿಸಲು ಯಾರಿಂದಲೂ ಆಗಿಲ್ಲ.

ಕೋಟೆಯ ಐದು ಪ್ರಮುಖ ದ್ವಾರಗಳು ಈ ಕೆಳಗಿನಂತಿವೆ.

೧. ಮಕ್ಕಾ ದ್ವಾರ
೨. ಶಾಹಪುರ ದ್ವಾರ
೩. ಬಹಮನಿ ದ್ವಾರ
೪. ಅಲ್ಲಾಪುರ ದ್ವಾರ
೫. ಫತೇ ದ್ವಾರ

ಈ ದ್ವಾರಗಳೆಲ್ಲ ಹೆಚ್ಚು-ಕಡಿಮೆ ಒಂದೇ ರೀತಿಯಲ್ಲಿ ನಿಯೋಜಿಸಿ ಕಟ್ಟಲಾಗಿದೆ. ಅವುಗಳು ಸುಸ್ಥಿತಿಯಲ್ಲಿದ್ದು ಎರಡೆರಡು ಬಾಗಿಲುಗಳನ್ನು ಹೊಂದಿವೆ.

೧. ಮಕ್ಕಾ ದ್ವಾರ :

ಸಾಮಾನ್ಯವಾಗಿ ಮುಸ್ಲಿಂ ಮರ ಕೋಟೆಗಳಲ್ಲಿ ಪಶ್ಚಿಮಕ್ಕೆ ಇರುವ ದ್ವಾರವನ್ನು ಮಕ್ಕಾ ದ್ವಾರವೆಂದು ಕರೆಯಲಾಗುತ್ತದೆ. ಕಾರಣ ಮಕ್ಕಾವು ಮುಸ್ಲಿಂ ಜಗತ್ತಿನ ಅತ್ಯಂತ ಪವಿತ್ರವಾದ ಯಾತ್ರಾ ಸ್ಥಳವಾಗಿದ್ದು ಅದು

ಪಶ್ಚಿಮಕ್ಕಿದೆ. ಅದಕ್ಕಾಗಿಯೇ ಆ ದ್ವಾರವನ್ನು ಧಾರ್ಮಿಕ ಕಾರ್ಯಗಳಿಗಾಗಿ ಬಳಸಲ್ಪಡುತ್ತಿದ್ದು, ಮಕ್ಕಾಗೆ ಹೋಗುವ ಮತ್ತು ಅಲ್ಲಿಂದ ಬರುವ ಯಾತ್ರಾರ್ತಿಗಳನ್ನು ಸಾಮಾನ್ಯವಾಗಿ ಆ ದ್ವಾರದಿಂದಲೇ ಕಳುಹಿಸಲಾಗುತ್ತಿತ್ತು. ಸಾಮಾನ್ಯವಾಗಿ ಯಾವುದೇ ಮುಸ್ಲಿಂ ಆಕ್ರಮಣಕಾರನು ಮಕ್ಕಾ ದ್ವಾರವನ್ನು ಮುರಿದು ಹಾಕುತ್ತಿರಲಿಲ್ಲ. ಕಾರಣ ಧಾರ್ಮಿಕವಾಗಿ ಮತ್ತು ಭಾವೈಕ್ಯತೆಯಿಂದಾಗಿ ಅವರು ಆ ಕೆಲಸಕ್ಕೆ ಮುಂದಾಗುತ್ತಿರಲಿಲ್ಲ. ಆದ್ದರಿಂದ ಆ ದ್ವಾರವು ಸಾಮಾನ್ಯವಾಗಿ ಉಳಿದೆಲ್ಲ ದ್ವಾರಗಳಂತೆ ಭದ್ರತೆಯ ದೃಷ್ಟಿಯಿಂದ ಅತ್ಯಂತ ಕಟ್ಟುನಿಟ್ಟನಿಂದಾಗಿರಲಿಲ್ಲ. ಅದೇ ರೀತಿಯಾಗಿ ದ್ವಾರದ ಸುತ್ತಲೂ ಸಾಕಷ್ಟು ಸ್ಥಳವಕಾಶವನ್ನು ಕಲ್ಪಿಸಲಾಗಿದ್ದು ಅಲ್ಲಿ ಮಕ್ಕಾಗೆ ಹೋಗುವ ಯಾತ್ರಾರ್ತಿಗಳನ್ನು ಕಳುಹಿಸಲು ಮತ್ತು ಅಲ್ಲಿಂದ ಬರುವವರನ್ನು ಕರೆದುತರಲು ನೆರೆಯುವ ಸಾಕಷ್ಟು ಜನರಿಗೆ ಅವಕಾಶ ಕಲ್ಪಿಸಲಾಗಿತ್ತು. ಅದಕ್ಕಾಗಿ ಇಂತಹ ಕಾರ್ಯಕ್ರಮಗಳಲ್ಲಿ ಮುಸ್ಲಿಂ ಬಂದುಗಳು ಅದ್ದೂರಿಯಾದ ಧಾರ್ಮಿಕ ಸಮಾರಂಭವನ್ನು ಏರ್ಪಡಿಸುತ್ತಿದ್ದರು. ಸಾಮಾನ್ಯವಾಗಿ ಎರಡೂ ಮುಸ್ಲಿಂ ಸೈನ್ಯಗಳಿಗೆ ಈ ದ್ವಾರದ ಹತ್ತಿರ ಯುದ್ಧ ನಡೆದಿರುವುದು ತಿಳಿದುಬಂದಿಲ್ಲ.

ಈ ದ್ವಾರದ ನಕ್ಷೆಯು ತುಂಬ ಸಂಕೀರ್ಣ ಸ್ವರೂಪದ್ದಾಗಿದ್ದು, ಎರಡು ಬಾಗಿಲಿನ ಮೂರು ದ್ವಾರಗಳನ್ನು ಒಳಗೊಂಡಿದ್ದು ಮತ್ತು ಎರಡು ಆಯತಾಕಾರದ ಬುರುಜುಗಳಿಂದ ಕೂಡಿದೆ. ಅತ್ಯಂತ ಹೊರಗಡೆ ದ್ವಾರವು ಎರಡು ವೃತ್ತಾಕಾರದ ಗೋಡೆಗಳನ್ನು ಪಾರ್ಶ್ವದಲ್ಲಿ ಹೊತ್ತುಕೊಂಡು, ಪಶ್ಚಿಮದ ಕಡೆಗೆ ಮುಖಮಾಡಿಕೊಂಡಿದೆ. ಅತ್ಯಂತ ಹೊರಗಡೆ ಪ್ರವೇಶ ದ್ವಾರವು, ಉತ್ತರಕ್ಕೆ ಮತ್ತು ಪೂರ್ವಕ್ಕೆ ಕಾವಲುಗಾರರ ಕೊಠಡಿಗಳನ್ನು ಹೊಂದಿವೆ. ಎರಡನೆಯ ಪ್ರವೇಶ ದ್ವಾರವು ಎರಡನೆಯ ಬುರುಜಿಗೆ ಹೊಂದಿಕೊಂಡು ಜೊತೆಗೆ ಪಶ್ಚಿಮ ಹಾಗೂ ದಕ್ಷಿಣಕ್ಕೆ ಕಾವಲುಗಾರರ ಕೊಠಡಿಗಳನ್ನು ಮತ್ತು ನಂತರದಲ್ಲಿ ಮೂರನೆಯ ಪ್ರವೇಶ ದ್ವಾರವು ಜೊತೆಗೆ ಪೂರ್ವ ಗೋಡೆಗೆ ಹೊಂದಿಕೊಂಡು ಕಾವಲುಗಾರರ ಕೊಠಡಿಗಳನ್ನು ಹೊಂದಿವೆ. ಮಕ್ಕಾ ದ್ವಾರದ ತೋಪಿನ ಬುರುಜಿನ ಮೇಲೆ ದಕ್ಷಿಣ ಕೊತ್ತಲಿನ ಕಡೆಗೆ ಒಂದು ಶಾಸನವಿದ್ದು ಈ ಕೆಳಗಿನಂತಿದೆ.

ಈ ಕೊತ್ತಲವು ಫಿರಂಗಿ ಷಾಹಿ ಎಂದು ಕರೆಯಲ್ಪಡುತ್ತಿದ್ದು ಇದು ಆದಿಲ್‌ಶಾಹನ ಗುಲಾಮನಾದ ಭಘುರಶ್ ಖಾನನಿಂದ ಕಟ್ಟಲ್ಪಟ್ಟಿತು. ಇದನ್ನು ಖಾಜಿ ಇಸ್ಮಾಯಿಲ್ ಬರೆದನು. ಹಿಜ್ರಾ ವರ್ಷ ೯೮೬ (ಕ್ರಿ. ಶ. ೧೫೭೮)[೩೦]

೨. **ಶಹಪುರ ದ್ವಾರ ಃ**

ಒಂದನೆಯ ಅಲಿ ಆದಿಲ್‌ಶಾಹನು ಈ ಕೋಟೆಯನ್ನು ಕಟ್ಟಿಸಿದಾಗ ಬಿಜಾಪುರವು ವಾಯುವ್ಯ ಪ್ರದೇಶದಲ್ಲಿ ಒಂದು ಹೊಸದಾದ ಪ್ರತ್ಯೇಕ ಉಪನಗರವನ್ನು ಹೊಂದಿತ್ತು. ಈ ಉಪನಗರವು ಅತ್ಯಂತ ಸುವ್ಯವಸ್ಥಿತವಾಗಿ ನಿರ್ಮಿತವಾದ ಅಗಲ ಬೀದಿಗಳು, ಭವ್ಯವಾದ ಕಟ್ಟಡಗಳು, ಕೆರೆಗಳು, ಕಾರಂಜಿಗಳು ಮತ್ತು ಉದ್ಯಾನವನಗಳನ್ನು ಹೊಂದಿದ್ದು ರಾಜಪರಿವಾರದವರು ಅಲ್ಲಿ ವಾಸಿಸುತ್ತಿದ್ದರು. ಅದೇ ರೀತಿ ಆ ಉಪನಗರಕ್ಕೆ

ಶಹಾಪುರವೆಂದು ಕರೆಯಲಾಗಿದೆ. ಈ ದ್ವಾರವು ಆ ಉಪನಗರದ ಕಡೆಗೆ ತೆರೆದುಕೊಳ್ಳುತ್ತಿತ್ತು. ಅದಕ್ಕಾಗಿ ಸಾಂಪ್ರದಾಯಿಕವಾಗಿ ಈ ದ್ವಾರಕ್ಕೆ ಅದಕ್ಕಾಗಿ ಈ ದ್ವಾರಕ್ಕೆ ಶಹಾಪುರ ದ್ವಾರವೆಂದು ಕರೆಯಲಾಯಿತು.

ಈ ದ್ವಾರವು ವಾಯುವಾಭಿಮುಖವಾಗಿ ಇದೆ. ಇದು ಪಾರ್ಶ್ವದಲ್ಲಿ ಎರಡು ಬುರುಜುಗಳನ್ನು ಹೊಂದಿದ್ದು, ಅವುಗಳು ಬಹು ಭುಜಗಳನ್ನು ಹೊಂದಿವೆ. ಅದು ಮತ್ತೆ ಅಸಮವಾದ ಬಹುಭುಜವನ್ನು ಹೊಂದಿದೆ ಜೊತೆಗೆ ಕಾಲುದಾರಿಯನ್ನು ಹೊಂದಿದ್ದು ಆಗ್ನೆಯಕ್ಕೆ ಇನ್ನೊಂದು ಬಾಗಿಲುವಾಡು ಇದ್ದು, ಎರಡು ಬಾಗಿಲುಗಳನ್ನು ಒಳಗೊಂಡಿದೆ. ದ್ವಾರದ ವಾಯುವ್ಯ ಬದಿಯಲ್ಲಿ ಕಾವಲುಗಾರರ ಕೊಠಡಿಗಳಿವೆ. ಆ ಕಾವಲುಗಾರರ ಕೊಠಡಿಗಳ ಬದಿಯಲ್ಲಿ ಕಾಲುದಾರಿ ಇದ್ದು ಹತ್ತಲು ಮೆಟ್ಟಿಲುಗಳಿವೆ. ಆ ದ್ವಾರದಿಂದ ಕೋಟೆಯ ಗೋಡೆಯಗುಂಟ ಒಳಗಡೆ ರಸ್ತೆಯಿದ್ದು ಅದು ಚಂದಾಬಾವಡಿಗುಂಟ ಮುಂದುವರೆಯುತ್ತ ಮುಖ್ಯರಸ್ತೆಯನ್ನು ಸೇರಿ ನಗರವನ್ನು ಪ್ರವೇಶಿಸುತ್ತದೆ. ಕೋಟೆಗೋಡೆಯ ಒಳಭಾಗದಲ್ಲಿ ಎರಡನೆಯ ದ್ವಾರದಿಂದ ಕೋಟೆಯ ಮೇಲೆ ಏರಲು ಮೆಟ್ಟಿಲುಗಳಿವೆ. ಅದೇ ರೀತಿ ಬುರುಜಿನ ಹೊರಗಡೆ ಕೂಡ ಬುರುಜಿಗೆ ಆತುಕೊಂಡು ಒಳಗಡೆಗೆ ಕೋಟೆಯ ಮೇಲೆ ಎರಡು ಮೆಟ್ಟಿಲುಗಳು ಕಂಡುಬರುತ್ತವೆ.

ಈ ದ್ವಾರದಲ್ಲಿ ಮೂರು ಶಾಸನಗಳಿದ್ದು, ಅದರಲ್ಲಿ ಅತ್ಯಂತ ಹಳೆಯದಾದ ಶಾಸನವು ಹಿಜ್ರಿ ವರ್ಷ ೯೭೮ (ಕ್ರಿ. ಶ. ೧೫೭೦-೭೧)ರಲ್ಲಿ ಕೆತ್ತಲಾಗಿದೆ. ಈ ಶಾಸನವು ದ್ವಾರದ ಒಳಬದಿಗೆ ಮೇಲ್ಭಾಗದಲ್ಲಿ ಕಂಡುಬರುತ್ತದೆ. ಅದು ಈ ರೀತಿಯಾಗಿದೆ.

" ನ್ಯಾಯಯುತ ಸುಲ್ತಾನನ ಆಳ್ವಕೆಯ ಕಾಲದಲ್ಲಿ ಅಲ್ಲಾಹನ ದಯದಿಂದ, ಅಬ್ದುಲ್ ಮುಜಫರ ಅಲಿ ಆದಿಲ್‌ಶಾಹ, ಅವನ ಸಾಮ್ರಾಜ್ಯವನ್ನು ಮತ್ತು ಅವನ ಅಧಿಕಾರವನ್ನು 'ಅಲ್ಲಾಹನು ಸಂರಕ್ಷಿಸಲಿ' ಇದು ಹಣಕಾಶಿನ ಮಂತ್ರಿಯಾದ ಖಾನ ಮುರಾದ ಖಾನ ಘಾಜಿಯಿಂದ ಕಟ್ಟಲ್ಪಟ್ಟಿತು.[೩೧]

೩. ಬಹಮನಿ ದ್ವಾರ :

ಈ ದ್ವಾರದ ಕಮಾನಿನ ಒಳಗಡೆ ಕೆತ್ತಲ್ಪಟ್ಟಿರುವ ಪರ್ಶಿಯನ್ ಶಾಸನದ ಪ್ರಕಾರ " ಬಹಮನಿ ದರವಾಜಾ " ಎಂದು ಉಲ್ಲೇಖಿಸಲಾಗಿದೆ. ಈ ದ್ವಾರವು ಅದರ ನಕ್ಷೆಯಲ್ಲಿ ಸಂಪೂರ್ಣ ವಿಭಿನ್ನತೆಯನ್ನು ಹೊಂದಿದೆ. ಇದರ ಎರಡು ಬುರುಜುಗಳು ಅರ್ಧಚಂದ್ರಾಕೃತಿಯಲ್ಲಿವೆ. ಈ ದ್ವಾರದ ಎಡಭಾಗದ ಬುರುಜಿನ ಮೇಲೆ ಕಾವಲುಗೋಪುರವನ್ನು ಸರಿಯಾಗಿ ಹೊಂದಿಸಲಾಗಿದ್ದು, ಅದು ಮೊದಲನೆಯ ಪ್ರವೇಶ ದ್ವಾರವನ್ನು ಕಾಯುವಲ್ಲಿ ಬಳಸಲಾಗುತ್ತಿತ್ತು. ಮುಖ್ಯ ಪ್ರವೇಶ ದ್ವಾರವು ಬುರುಜಿಗೆ ಹೊಂದಿಕೊಂಡು ಸಾಮಾನ್ಯವಾಗಿ ಎರಡು ಬಾಗಿಲುಗಳನ್ನು ಹೊಂದಿದೆ. ಈ ಬಾಗಿಲಿನಿಂದ ಚಿಕ್ಕದಾದ ಕಾವಲುದಾರಿಯಿದ್ದು, ಜೊತೆಗೆ ಕಾವಲುದಾರರ ಕೊಠಡಿಗಳಿದ್ದು, ಇದರ ಕೊನೆಗೆ ಮತ್ತೊಂದು ದ್ವಾರವಿತ್ತು.[೩೨]

ಸಾಮಾನ್ಯ ಸ್ಥಿತಿಗತಿಗಳಲ್ಲಿ ಈ ದ್ವಾರವನ್ನು ಪ್ರಮುಖವಾಗಿ ವ್ಯಾಪಾರ ಮತ್ತು ಔದ್ಯೋಗಿಕರಣಕ್ಕಾಗಿ ಬಳಸಲಾಗುತ್ತಿತ್ತು. ಅದಕ್ಕಾಗಿ ಈ ದ್ವಾರವು ಆ ದಿನಗಳಲ್ಲಿ ಸೋಲ್ಲಾಪುರದ ಕಡೆಯಿಂದ ಬರುವ ಸರಕುಗಳಿಗೆ ಮುಖ್ಯ ರಸ್ತೆಗೆ ಹೊಂದಿಕೊಂಡ ದ್ವಾರವಾಗಿತ್ತು.

೪. ಅಲ್ಲಾಪುರ ದ್ವಾರ :

ಈ ದ್ವಾರವು ಅಲ್ಲಾಪುರ ದ್ವಾರವೆಂದೆ ಕರೆಯಲ್ಪಟ್ಟಿದೆ. ಕಾರಣ, ಇದು ಅಲ್ಲಾಪುರ ಹಳ್ಳಿಯ ಕಡೆಗೆ ಇದೆ. ಇದು ಪೂರ್ವದ ಕಡೆಯಿದ್ದು, ಪ್ರವೇಶ ದ್ವಾರದ ಅಕ್ಕಪಕ್ಕದಲ್ಲಿ ಕಾವಲುಗಾರರ ಕೊಠಡಿಗಳನ್ನು ಒಳಗೊಂಡಿದೆ. ಪ್ರವೇಶದ್ವಾರದಿಂದ ಬಲಗಡೆ ಬುರುಜಿನ ಮೇಲೆ ಗೋಪುರವಿದ್ದು ಅದನ್ನೇರಲು ಮೆಟ್ಟಿಲುಗಳಿವೆ. ಇದು ಕಾವಲುಗೋಪುರವಾಗಿದೆ.

ಪ್ರವೇಶದ್ವಾರದ ಪಕ್ಕದಲ್ಲಿನ ಬುರುಜು ಷಟ್‌ಕೋನಾಕೃತಿಯನ್ನು ಹೊಂದಿದ್ದು, ಉಳಿದೆಲ್ಲ ಬದಿಯಲ್ಲಿ ಕಾವಲಗಾರರ ಕೊಠಡಿಗಳನ್ನು ಹೊಂದಿದೆ. ಈಶಾನ್ಯ ಭಾಗಕ್ಕೆ ಪ್ರವೇಶ ದ್ವಾರವನ್ನು ಹೊಂದಿದೆ. ಈ ಪ್ರವೇಶ ದ್ವಾರಕ್ಕೆ ಯಾವುದೇ ಕಾವಲುಗಾರರ ಕೊಠಡಿಗಳಿಲ್ಲದಿರುವುದು ವಿಶಿಷ್ಟತೆ ಮತ್ತು ಇದರ ಹೊರಗೋಡೆಯ ಮೇಲೆ ಹತ್ತಲು ಮೇಟ್ಟಿಲುಗಳಿವೆ.

೫. ಫತೇ ದ್ವಾರ :

ಔರಂಗಜೇಬನು ಬಿಜಾಪುರವನ್ನು ಕ್ರಿ. ಶ. ೧೬೮೬ ರಲ್ಲಿ ಗೆದ್ದುಕೊಂಡು ಈ ದ್ವಾರದ ಮೂಲಕ ಒಳಗೆ ಪ್ರವೇಶಿಸಿದಾಗ ಇದಕ್ಕೆ 'ಫತೇ ದ್ವಾರ' ಅಥವಾ 'ವಿಜಯದ ಹೆಬ್ಬಾಗಿಲು' ಎಂದು ನಾಮಕರಣ ಮಾಡಿದನು. ಈಗ ಇದನ್ನು 'ಮನಗೂಳಿ' ದ್ವಾರವೆಂದು ಕರೆಯಲಾಗುತ್ತದೆ. ಕಾರಣ ಆ ದ್ವಾರದ ನಂತರ ಆ ಹೆಸರಿನ ಹಳ್ಳಿಯು ಬರುತ್ತದೆ. ಈ ದ್ವಾರದ ಬುರುಜಿನ ಮೇಲೆ ಒಂದು ಪರ್ಶಿಯನ್ ಶಾಸನವಿದ್ದು, ಅದು ಹೀಗಿದೆ.

ಈ ಫಿರಂಗಿ ಶಾಹಿ ಬುರುಜನ್ನು ಹಿಜರಿವರ್ಷ ೯೮೪ ರಲ್ಲಿ (ಕ್ರಿ. ಶ. ೧೫೭೬-೭೭) ಅಲಿ ಆದಿಲ್‌ಶಾಹನ ಗುಲಾಮನಾದ ಭಾಫರಶ್ ಖಾನನು ಕಟ್ಟಿಸಿದನು.[೩೩]

ಈ ದ್ವಾರವು ದಕ್ಷಿಣ ದಿಕ್ಕಿಗಿದ್ದು ಎರಡು ಬುರುಜುಗಳನ್ನು ಹೊಂದಿದೆ. ಇದರ ಮುಖ್ಯ ಪ್ರವೇಶ ದ್ವಾರದಲ್ಲಿ ಅರ್ಧಚಂದ್ರಾಕೃತಿಯ ಗೊಡೆಯಿದ್ದು ಅದು ಬುರುಜಿಗೆ ಹೊಂದಿಕೊಂಡು ಮಧ್ಯದಲ್ಲಿ ಲಂಬವಾಗಿ ಮುಂದುವರೆಯುತ್ತದೆ. ಹೀಗೆ ಅರ್ಧಚಂದ್ರಾಕೃತಿಯ ಬುರುಜು ಪ್ರವೇಶ ದ್ವಾರದ ಮುಂದುಗಡೆ ನಿರ್ಮಿಸಲಾಗಿದ್ದು ಮತ್ತು ನೈರುತ್ಯದಲ್ಲಿ ಅರ್ಧಚಂದ್ರಾಕೃತಿಯ ಗೋಡೆಯಿದ್ದು ಅದು ತನ್ನ ಸುತ್ತಲೂ ಕಂದಕವನ್ನು ಹೊಂದಿದೆ. ಗೋಡೆಯ ಒಳಭಾಗಕ್ಕೆ ಒಂದು ಬದಿಯಿಂದ ಇನ್ನೊಂದು ಬದಿಗೆ ಕಮಾನಿನ ಆಕಾರದಲ್ಲಿ ಕಾವಲುಗಾರರ ಕೊಠಡಿಗಳಿವೆ.

ಬಿಜಾಪುರದಲ್ಲಿ ಅಲ್ಲದೆ ಅನೇಕ ಪ್ರದೇಶಗಳಲ್ಲಿ ಕೋಟೆಗಳ ದುರಸ್ತಿಯ ಕಾರ್ಯವನ್ನು ಮಾಡಿದ್ದು, ಶಾಸನಗಳಿಂದ ತಿಳಿದು ಬರುತ್ತದೆ. ಉದಾಹರಣೆಗಾಗಿ, ಬೆಳಗಾವಿ ಕೋಟೆಯಲ್ಲಿ ದೊರಕಿದ ಪರ್ಶಿಯನ ಭಾಷೆಯಲ್ಲಿರುವ ಶಾಸನ, ಈಗ ಇದು ಬಿಜಾಪುರದ ವಸ್ತುಸಂಗ್ರಹಾಲಯದಲ್ಲಿದೆ. ಈ ಶಾಸನದ ಪ್ರಕಾರ ಅತಿಯಾದ ಮಳೆಯಿಂದ ಕುಸಿದು ಬಿದ್ದು ಕೋಟೆಯ ಗೋಡೆಯನ್ನು ಪುನಃ ಕಟ್ಟಿಸಿದುದು ಇದರ ವಿಷಯ, ಈ ಜೀರ್ಣೋದ್ಧಾರ ಕೆಲಸ ಕ್ರಿ. ಶ. ೧೬೩೩-೩೪ ರಲ್ಲಿ ಅಬ್ದುಲ್ ಹುಸೇನನು ಅಮೀನ ಆಗಿರುವಾಗ ನಡೆಯಿತು. ಈ ಶಾಸನವನ್ನು ಅಬ್ದುಲ್ ಅಜೀಜ ಕಂಡರಿಸಿರುವನು.[೩೪]ಆಗ ಮಹಮ್ಮದ ಆದಿಲ್‌ಶಾಹನು ಸುಲ್ತಾನನಾಗಿದ್ದನು.

ಗುಲ್ಬರ್ಗಾ ಕೋಟೆಯ ಜಂಜಿರೀ ಗೇಟಿನ ಮೇಲೆ ಪರ್ಶಿಯನ ಶಾಸನವಿದೆ. ಈ ಶಾಸನ ಕೋಟೆಯ ಐದನೆಯ ಬಾಗಿಲಿನ ನಿರ್ಮಾಣವನ್ನು ಕುರಿತಿದೆ. ಈ ಬಾಗಿಲ್ನು ಮಲಿಕ ಯಾಕೂತ ಅವನು ಕ್ರಿ. ಶ. ೧೬೩೫-೩೬ ರಲ್ಲಿ ಮಹಮ್ಮದ ಆದಿಲ್‌ಶಾಹನ ಆಳ್ವಿಕೆಯ ಕಾಲದಲ್ಲಿ ಕಟ್ಟಿಸಿದನೆಂದು ತಿಳಿಸುತ್ತದೆ. ಕೋಟೆಗೆ ನಾಲ್ಕು ಬಾಗಿಲುಗಳು ಇದ್ದವೆಂಬುದನ್ನೂ ಇದು ದಾಖಲಿಸಿದೆ.[೩೫]

ಗುಲ್ಬರ್ಗಾ ಕಾಲಾಪಹಾಡ್ (ಕರಿಗುಡ್ಡದ ಬುರ್ಜ) ಅಥವಾ ಘಳಿಯಾಲಿ ಬುರ್ಜ ಎಂದು ಪ್ರಸಿದ್ಧವಾದ ಸ್ಥಳಕ್ಕೆ ಸಂಬಂಧಿಸಿದೆ ಪರ್ಶಿಯನ್ ಶಾಸನವು ಈ ರೀತಿಯಾಗಿದೆ, ಇದು ನ್ಯಾಯಾಲಯದ ಅಧಿಕಾರಿಯಾದ ಮಹಮ್ಮದ ಆಖಾ ಅವರ ಪುತ್ರನಾದ ಅಲೀರಜಾ ಎಂಬುವನು ಅರಮನೆಯಂತಹ ಕಟ್ಟಡವನ್ನು ಹಸನ ಹಾಗೂ ಹುಸೇನಿ ಅವರ ವಂಶಸ್ಥರಾದ ಸಂತ ಮಖ್ದೂಂ ಸಯ್ಯಿದ್ ಮಹಮ್ಮದ ಹುಸೇನಿ ಗೇಸುದರಾಜ್, ಬಂದಾ ನವಾಜ್ ಇವರಿಗೆ ಅರ್ಪಿಸಲು ಕಟ್ಟಿಸಿದನೆಂದು ತಿಳಿಸಿದೆ. ಈ ಕಾರ್ಯವು ಕ್ರಿ. ಶ. ೧೬೪೮-೪೯ ರಲ್ಲಿ ಮಹಮ್ಮದ ಆದಿಲ್‌ಶಾಹನ ದೊರೆಯ ಆಳ್ವಿಕೆಯಲ್ಲಿ ಸಂಪೂರ್ಣವಾಯಿತೆಂದೂ ಇದರಲ್ಲಿ ಬರೆಯಲಾಗಿದೆಲ.[೩೬]

ಇನ್ನೊಂದು ಪರ್ಶಿಯನ್ ಭಾಷೆಯಲ್ಲಿರುವ ಈ ಶಾಸನವು ಕೋಟೆಯ ಕಾಲಾಪಹಾಡ ಬುರ್ಜಿನಲ್ಲಿ ಲಭ್ಯವಾಗಿದೆ. ರಾಜ್ಯದ ಸರ್‌ಖೈಲ್ (ಸರದಾರ) ಅಧಿಕಾರಿಯೂ ಪ್ರವಾದಿ ಮತ್ತು ಕವಿಯ ವಂಶಸ್ಥನೂ ಆದ ನೂರುಲ್ಲಾಃ ಎಂಬುವನು ದೊರೆ ಮಹಮ್ಮದ ಆದಿಲ್‌ಶಾಹನ ಆಜ್ಞೆಯ ಮೇರೆಗೆ ಅಹಸಾನಾಬಾದ್ (ಸಗರ) ನಗರವನ್ನು ಸುಂದರಗೊಳಿಸಿದನು ಮತ್ತು ಗುಲ್ಬರ್ಗಾದ ಪ್ರತಿ ಬುರ್ಜ, ಬಾಗಿಲುಗಳ ಮತ್ತು (ಕೋಟೆ) ಗೋಡೆಗಳನ್ನು ಜೀರ್ಣೋದ್ಧಾರ ಮಾಡಿದನು. ಈ ಕಾರ್ಯ ಕ್ರಿ. ಶ. ೧೬೫೫-೫೬ ರಲ್ಲಿ ನಡೆಯಿತು.[೩೭]

ಬುರುಜು (ರಕ್ಷಣಾ ಗೋಪುರ) ಮತ್ತು ಫಿರಂಗಿ (ತೋಪು)ಗಳು :

ಮದ್ಯಯುಗದ ಕೋಟೆಗಳ ಮೇಲೆ ಪರ್ಶಿಯನ್ನರ, ಫ್ರೆಂಚರ ಹಾಗೂ ಬ್ರಿಟಿಷರ ಕೋಟೆಗಳ ರಚನಾ ಶಾಸ್ತ್ರಗಳ ಪ್ರಭಾವ ಸಾಕಷ್ಟಿದೆ. ಸಿಡಿಮದ್ದು ಮೊದಲಾದವುಗಳನ್ನು ಉಪಯೋಗಿಸಿ ತಯಾರಿಸಲಾದ ಆಯುಧಗಳನ್ನು ಉಪಯೋಗಿಸುವಂತೆ ಕೋಟೆಗಳ ನಿರ್ಮಾಣವಾಗಬೇಕಾಯಿತು. ಕೋಟೆಯ ಹೊರಗಡೆ

ವಿಸ್ತಾರವಾದ ಮೂರು ಅಗಳಗಳು ದುಂಡನೆಯ ಎತ್ತರದ ಬುರುಜುಗಳು, ಎರಡು ಅಥವಾ ಮೂರು ಪಾತಳಿಗಳಲ್ಲಿ ಏರಿಸಿದ ಗೋಡೆಗಳು, ಗೋಡೆಗಳಲ್ಲಿ ಹಾಗೂ ತೆನೆಗಳಲ್ಲಿ ಕೊವಿಯ ತೂತುಗಳು, ಬಿಸಿ ಎಣ್ಣೆ ಸುರುವಲು ಮೋಸದ ಕಿಂಡಿಗಳು ಅಳವಡಿಸಲ್ಪಟ್ಟವು. ಬಿಜಾಪುರದ ಆದಿಲ್‌ಶಾಹಿಗಳು ಕಟ್ಟಿದ ಬಿಜಾಪುರ, ಧಾರವಾಡ, ಬೆಳಗಾವಿ, ಬಂಕಾಪುರ, ನಳದುರ್ಗ ಮೊದಲಾದವುಗಳಲ್ಲಿ ಇಂತಹ ವ್ಯವಸ್ಥೆಯನ್ನು ಕಾಣಬಹುದು.

೧. ಕಲ್ಯಾಣದಲ್ಲಿ ಕಟ್ಟಿಸಿದ್ದ ಕಾವಲು ಗೋಪುರ :

ಕಲ್ಯಾಣದ ಕೋಟೆಯ ಮದ್ದು-ಗುಂಡಿನ ಮನೆಯ ಬಾಗಿಲ ಮೇಲಿನ ಪರ್ಶಿಯನ ಶಾಸನದ ಪ್ರಕಾರ, ಕಲ್ಯಾಣ ಜಿಲ್ಲೆಯ (ಮಾಮ್ಲದ) ಹವಾಲ್ದಾರ ಸಿದ್ಧಿ ದಿಲಾವರ ಎಂಬ ಅಧಿಕಾರಿಯು ಕಟ್ಟಿಸಿದ ಭದ್ರವಾದ ಅರಮನೆ ಮತ್ತು ಉನ್ನತವಾದ ಕಾವಲು ಗೋಪುರದ ವಿಷಯವನ್ನು ದಾಖಲಿಸಿದೆ. ಈ ಕಾರ್ಯವು ಸುಲ್ತಾನ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ನಡೆಯಿತು.[೩೮]

೨. ರಾಯಚೂರನಲ್ಲಿ ಕಟ್ಟಿಸಿದ್ದ ಬುರ್ಜ :

ರಾಯಚೂರನಲ್ಲಿರುವ ಈ ಶಾಸನ ಖಾದರಿಯಾ ಬುರುಜಿನಲ್ಲಿರು ಅರೇಬಿಕ್ ಮತ್ತು ಪರ್ಶಿಯನ್ ಭಾಷೆಯಲ್ಲಿದೆ. ಈಗ ಹೈದ್ರಾಬಾದಿನ ರಾಜ್ಯ ಮತ್ತು ಸಂಗ್ರಾಹಾಲಯದಲ್ಲಿದೆ. ಖಾದರಿಯಾ ಬುರ್ಜ ಕಟ್ಟಡ ಕಾರ್ಯ ಕ್ರಿ. ಶ. ೧೬೧೮ ರಲ್ಲಿ ಎರಡನೆಯ ಇಬ್ರಾಹಿಮ ಆದಿಲ್‌ಶಾಹನ ಕಾಲಾವಧಿಯಲ್ಲಿ ಆರಂಭವಾಗಿ, ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಪೂರ್ಣವಾಯಿತು. ರೈಹಾನ್‌ನ ಮಗ ಅಬ್ದುಲ್ ವಹಾಬ್ ಇದರ ಸ್ಥಾಪಕನೆಂದು ಹೇಳಲಾಗಿದೆ. ಫಜುಲುಲ್ಲಾನ ಮಗ ಸಯ್ಯದ ಹುಸೇನನು ಬರೆದ ಈ ಶಾಸನದಲ್ಲಿ ಕ್ರಿ. ಶ. ೧೬೩೯-೪೦ ದಾಖಲಾಗಿದೆ.[೩೯]

೩. ಬಿಜಾಪುರದ ಅಹ್ಮದ ಬುರ್ಜು :

ಪರ್ಶಿಯನ್ ಭಾಷೆಯ ಪದ್ಯದಲ್ಲಿರುವ ಈ ಶಾಸನವು ಶಹಾಪುರ ಗೇಟಿನಲ್ಲಿದೆ. ಇದು ಕ್ರಿ. ಶ. ೧೬೪೩-೪೪ ಎಂಬ ತೇದಿಯನ್ನು ಹೊಂದಿದ್ದು ಬುರ್ಜನ್ನು ನಿರ್ಮಾಣ ಮಾಡಿದ ಸಂಗತಿಯನ್ನು ದಾಖಲಿಸಿದೆ. ಬುರ್ಜಿಗೆ ಅಹಮ್ಮದ ಬುರ್ಜ ಎಂದು ಹೆಸರಿಸಿದೆ. ಇದನ್ನು ಮಹಮ್ಮದ ಆದಿಲ್‌ಶಾಹ ದೊರೆಯ ಆಳ್ವಿಕೆಯ ಕಾಲದಲ್ಲಿ ರಾಜಾಜ್ಞೆಯ ಮೇರೆಗೆ ಸೇನಾಧಿಪತಿಗಳ ಮುಖ್ಯಸ್ಥ ಅಹಮ್ಮದ ಖಾನನು ನಿರ್ಮಿಸಿದನು.[೪೦]

೪. ಬಿಜಾಪುರದ ಮಹಮ್ಮದ ಬುರ್ಜ :

. ಮಹಮ್ಮದ ಆದಿಲ್‌ಶಾಹನು ಪೆರಂಡಾದಿಂದ ತಂದಿದ್ದ ತೋಪನ್ನು ಸ್ಥಾಪನೆ ಮಾಡುವುದಕ್ಕಾಗಿ ಈ ಮಹಮ್ಮದ ಬುರ್ಜನ್ನು ಕಟ್ಟಿಸಿದ್ದನು. ಮಲಿಕ್ ಮೈದಾನ ಬುರ್ಜನಲ್ಲಿ ಉಪಲಬ್ಧವಾಗಿರು ಈ ಶಾಸನ

ಪದ್ಯರೂಪದಲ್ಲಿದೆ. ಇದು ಮಹಮ್ಮದ ಬುರ್ಜ ಹೆಸರಿನ ಬುರ್ಜನ್ನು ಸುಲ್ತಾನ ಮಹಮ್ಮದ ದೊರೆಯ ಹೆಸರಿನಲ್ಲಿ ರಾಜನ ಆಪ್ತನೂ, ಘನತೆವೆತ್ತವನೂ ಆದ ಅಫ್ಜಲ್ ಖಾನನು. ಕ್ರಿ. ಶ. ೧೬೪೩–೪೪ ರಲ್ಲಿ ಕಟ್ಟಿಸಿದನೆಂದು ವಿವರಿಸಿದೆ.[೪೧]

೫. ಬಿಜಾಪುರದ ಬುರ್ಜ್–ಇ–ನಿಯಾಮತ್ :

ಲಾಂಡೇ ಕಸ್ಸಾಬ್ ಬುರ್ಜಿಗೆ ಪಶ್ಚಿಮದಲ್ಲಿರುವ ನಾಲ್ಕನೇ ಬುರ್ಜಿನಲ್ಲಿ ಈ ಶಾಸನ ದೊರತಿದೆ. ಬುರ್ಜ್–ಇ–ನಿಯಾಮತ್ ಎಂಬ ಈ ಬುರ್ಜನ್ನು ಕಟ್ಟಿದ ಸಂಗತಿಯನ್ನು ಇದರಲ್ಲಿ ದಾಖಲಿಸಿದೆ. ಇದನ್ನು ನಿಯಾಮತ್ ಖಾನನೆಂಬುವನು ಕಟ್ಟಿಸಿದ್ದಾನೆ. ಈ ಕಾರ್ಯವು ಮಹಮ್ಮದ ಆದಿಲ್‌ಶಾಹನ ದೊರೆಯ ಆಳ್ವಿಕೆಯ ಕಾಲದಲ್ಲಿ ನಡೆದಿದೆ. ಇದು ಕ್ರಿ. ಶ. ೧೬೪೬–೪೭ ರಲ್ಲಿ ಕಟ್ಟಲಾಯಿತು.[೪೨] ಹೀಗೆ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಅನೇಕ ಬುರ್ಜುಗಳನ್ನು ಕಟ್ಟಲಾಯಿತು.

ಫಿರಂಗಿಗಳು (ತೋಪಗಳು) :

ಮಧ್ಯಯುಗ ಇತಿಹಾಸದಲ್ಲಿ ಫಿರಂಗಿಗಳು ವ್ಯಾಪಕವಾಗಿ ಬಳಕೆಯಾದವು. ಬಿಜಾಪುರದ ಆದಿಲ್‌ಶಾಹಿಗಳ ಕಾಲದಲ್ಲಿಯು ಇವರ ಹತ್ತಿರ ಪ್ರಬಲ ಫಿರಂಗಿ ಪಡೆಯಿತ್ತು ಹಾಗಾಗಿ ಹಲವಾರು ಯುದ್ಧಗಳಲಿ ಬಿಜಾಪುರದ ಆದಿಲ್‌ಶಾಹಿಗಳಿಗೆ ಮೇಲುಗೈ ಲಭಿಸಿತು. ೧೬ನೆ ಶತಮಾನದಲ್ಲಿ ದಖ್ಖನ್ನಿನಲ್ಲಿ ತೋಪುಗಳು ಮತ್ತು ಮದ್ದುಗುಂಡುಗಳು ಬಳಿಕೆಯಲ್ಲಿದ್ದವೆಂದು ಫೆರಿಸ್ತಾ ಹೇಳಿದ್ದಾನೆ. ಇವನ ಪ್ರಕಾರ ೧೩೬೬ರಲ್ಲಿ ಆಧೋನಿ ಯುದ್ಧದಲ್ಲಿ ಈ ಅಗ್ನಿ ಅಸ್ತ್ರಗಳು ಪ್ರಪಥಮ ಉಪಯೋಗಿಸಲಾಯಿತು. ಜಗತ್ತಿನ ಅತಿಭಾರವದ ತೋಪುಗಳನ್ನು ೧೫ ಮತ್ತು ೧೬ನೆ ಶತಮಾನದಲ್ಲಿ ದಖ್ಖನದಲ್ಲಿ ತಯಾರಿಸಲಾಗುತ್ತಿತ್ತು.

ಆದಿಲ್‌ಶಾಹಿ ಸುಲ್ತಾನರು ಯುದ್ಧದ ಸಮಯದಲ್ಲಿ ತಮ್ಮ ರಕ್ಷಣೆಗಾಗಿ ಪ್ರಮುಖ ಅಸ್ತ್ರವನ್ನಾಗಿ ಈ ಫಿರಂಗಿಗಳನ್ನು ಬಳಸುತ್ತಿದ್ದರು. ಈವು ಆಕ್ರಮಣದ ವೇಳೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು. ಈ ಫಿರಂಗಿಗಳನ್ನು ಆಯಕಟ್ಟಿನ ಪ್ರದೇಶದಲ್ಲಿ ಎತ್ತರವಾದ ಬುರ್ಜುನ್ನು ಕಟ್ಟಿ ಅಲ್ಲಿ ಇಡುತ್ತಿದ್ದರು. ಅಂತಹ ಅನೇಕ ತೋಪುಗಳು ಈ ಕಾಲದಲ್ಲಿದ್ದವು.

೧. ಮಾಲಿಕ–ಇ–ಮೈದಾನ ತೋಪ :

ಮಾಲಿಕ–ಇ–ಮೈದಾನ ಎಂದರೆ ಯುದ್ಧ ಭೂಮಿಯ ಒಡೆಯ, ವಿದ್ವಾಸರ ಪ್ರಕಾರ ಜಗತ್ತಿನ ಅತಿ ದೊಡ್ಡ ತೋಪು ಇದಾಗಿದೆ. ಇದನ್ನು ೮೦.೪೩% ತಾಮ್ರ ಮತ್ತು ೧೯.೫೭% ತವರನಿಂದ ತಯಾರಿದಲಾಗಿದೆ. ೧೪ ಅಡಿ ೩ ಅಂಗುಲ ಉದ್ಧ ಹಾಗೂ ೪ ಅಡಿ ೧೧ ಅಂಗುಲ ವ್ಯಾಸದ ಈ ತೋಪವು ೫೫ ಟನ್ ಭಾರವಾಗಿದೆ.[೪೩] ಅಹ್ಮದ ನಗರದ ರಾಜನ ಆಸ್ಥಾನದಲ್ಲಿದ್ದ 'ಹಸನರೂಮಿ' ಎಂಬ ತುರ್ಕಿ ಅಧಿಕಾರಿಯು ಕ್ರಿ.ಶ. ೧೫೪೯ ರಲ್ಲಿ ಇದನ್ನು ತಯಾರಿಸಿದನೆಂದು ಇದರ ಮೇಲಿನ ಶಾಸನ ತಿಳಿಸುತ್ತದೆ. ಇದರ ಬಾಯಿಯ ಆಕಾರ

ಸಿಂಹದ ಆಕಾರದಾಗಿದ್ದು ಕೊರೆ ಹಲ್ಲುಗಳಲ್ಲಿ ಆನೆಯನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಇದನ್ನು ಮುರಾರಿ ಪಂಡಿತನು ಪರಾಂಡಾದಿಂದ ೧೬೩೨ ರಲ್ಲಿ ಬಿಜಾಪುರಕ್ಕೆ ತಂದನು. ಮಹಮ್ಮದ ಆದಿಲ್‌ಶಾಹನು ಅದಕ್ಕಾಗಿಯೇ ನಗರದ ಪಶ್ಚಿಮದ ಕೋಟೆಯಲ್ಲಿ ಪ್ರತ್ಯೇಕವಾಗಿ ಶಾರ್ಜಾ ಬುರುಜನ್ನು ಕಟ್ಟಲಾಯಿತು.

೨. ಲಾಂಡಾ–ಇ–ಕಸಾಬ ತೋಪು

ಲಾಂಡಾ–ಇ–ಕಸಾಬ ತೋಪು ಬಿಜಾಪುರದಲ್ಲಿದ್ದ ತೋಪುಗಳಲ್ಲೆ ಅತಿ ದೊಡ್ಡದು. ಇದು ದಕ್ಷಿಣ ದಿಕ್ಕಿನ ಕೋಟೆಯ ಬುರುಜಿನ ಮೇಲೆ ಇದೆ. ಇದು ೨೧ ಅಡಿ ೭ ಅಂಗುಲ ಉದ್ದ ಹಾಗೂ ೪ ಅಡಿ ೫ ಅಂಗುಲ ವ್ಯಾಸದ ಈ ತೋಪು ೪೭ ಟನ್ ಭಾರವಿದೆ.[೪೪] ಇದನ್ನು ಬಿಜಾಪುರದಲ್ಲಿ ಕಬ್ಬಿಣದ ಬಳಗಳನ್ನು ಹೊಯ್ದು ತಯಾರಿಸಲಾಗಿದೆ. ಅದ್ದರಿಂದ ಆದಿಲ್‌ಶಾಹಿಗಳ ಕಬ್ಬಿಣದ ಕಾರ್ಯಾಗಾರದ ಕಲ್ಪನೆ ಮಾಡಬಹುದು. ಖ್ಯಾತ ಇಂಜಿನಿಯರ ಆದ "ಶಾಹ ಫತಹಉಲ್ಲಾ ಶಿರಾಜಿ"ಯು ಬಿಜಾಪುರ ಆದಿಲ್‌ಶಾಹದ ಆಸ್ಥಾನದಲ್ಲಿದು ವಿವಿಧ ಬಗೆಯ ತೋಪುಗಳನ್ನು ತಯಾರಿಸಿದನು.

ಕ) ನಾಗರಿಕ ವಾಸ್ತುಶಿಲ್ಪ :

ನಾಗರಿಕ ವಾಸ್ತುಶಿಲ್ಪದಲ್ಲಿ ಅರಮನೆಗಳು, ಗೋರಿಗಳು, ಮಂಟಪಗಳು ಹಾಗೂ ನೀರಿನ ವ್ಯವಸ್ಥೆಯ ಭಾವಿಗಳು, ಕಾಲುವೆಗಳು, ಕೆರೆ ಇತ್ಯಾದಿಗಳು ಬರುತ್ತವೆ. ಮುಸ್ಲಿಂ ವಾಸ್ತುಶಿಲ್ಪದ ಕಟ್ಟಡಗಳಿಗೆ ಹೆಚ್ಚಿನ ಮಹತ್ವ ನೀಡಿದ್ದರಿಂದ ಅವು ವೈಭವಯುತ ಭವ್ಯತೆಯಿಂದ ಕೂಡಿವೆ. ಮೊಘಲರ ವಾಸ್ತುಶಿಲ್ಪಕ್ಕೆ ಮೆರಗನ್ನಿತ್ತ ಆಗ್ರಾದ ತಾಜಮಹಲ್ ಅತ್ಯಂತ ಉತ್ಕೃಷ್ಟ ಕೊಡುಗೆಯಾದರೆ, ಆದಿಲ್‌ಶಾಹಿಗಳ ಕಟ್ಟಡಗಳಾದ ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ಕಟ್ಟಿಸಿದ ಇಬ್ರಾಹಿಮ ರೋಜಾ ಮತ್ತು ಮಹಮ್ಮದ ಆದಿಲ್‌ಶಾಹನು ಕಟ್ಟಿಸಿದ್ದ ಪಿಸುಮಾತಿನ ಗ್ಯಾಲರಿಯನ್ನು ಹೊಂದಿದ ವಿಶ್ವವಿಖ್ಯಾತ ಗೋಲಗುಂಬಜ ಪ್ರಸಿದ್ಧಿ ಪಡೆದಿವೆ. ಒಂದು ವೇಳೆ ಮೊಘಲರಂತೆ ಕಟ್ಟಡ ನಿರ್ಮಾಣದಲ್ಲಿ ಬಳಸಿದ ಅಮೃತ ಶಿಲೆ ದೊರಕಿದ್ದರೆ ನಿಜಕ್ಕೂ ವಿಜಾಪುರ ಪ್ರಪಂಚದ ನೋಡುಗರ ಅತ್ಯಾಕರ್ಷಕ ತಾಣದಲ್ಲಿ ಪ್ರಪ್ರಥಮ ಸ್ಥಾನ ಪಡೆಯುತ್ತಿತ್ತು.

ಅ) ಅರಮನೆಗಳು :

೧. ಸಾತ ಮಂಜಿಲ್ :

ಹೆಸರೆ ತಿಳಿಸುವಂತೆ ಏಳು ಅಂತಸ್ತುಗಳ ಕಟ್ಟಡದಲ್ಲಿ ಇಂದು ಐದು ಅಂತಸ್ತುಗಳು ಮಾತ್ರ ಉಳಿದಿವೆ. ಅರಕಿಲ್ಲೆಯ ಸಮುಚ್ಚಯ ಕಟ್ಟಡಗಳಲ್ಲಿ ಅತಿ ಎತ್ತರದ ಕಟ್ಟಡವೆಂದರೆ, ಸಾತ ಮಂಜಿಲ್. ಭೂಮಿಯಿಂದ ಸುಮಾರು ೯೭ ಅಡಿ ಎತ್ತರವನ್ನು ಹೊಂದಿದೆ. ಇದನ್ನು ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ತನ್ನ ಮಗನಾದ ಮಹಮ್ಮದ ಆದಿಲ್‌ಶಾಹನಿಗಾಗಿ ಕಟ್ಟಿಸಿದನು. ಕಟ್ಟಡದ ಒಳ ಬದಿಯಲ್ಲಿ ಎರಡು ಪದರಗಳ

ಗೋಡೆಯ ಮಧ್ಯ ನೀರಿನ ಕೊಳವೆ ಮಾರ್ಗಗಳು ಹೋಗಿವೆ. ಎಲ್ಲಕ್ಕಿಂತ ಮೇಲಿನ ಅಂತಸ್ತಿನಲ್ಲಿ ಒಂದು ದೊಡ್ಡ ಹೌದನ್ನು ಕಟ್ಟಿ ಅದರ ಮುಖಾಂತರ ಕೊಳವೆಗಳ ಸಹಾಯದಿಂದ ಇಡಿ ಕಟ್ಟಡದಲ್ಲಿ ನೀರನ್ನು ಹರಿಯುವ ರೀತಿಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಬೇಸಿಗೆಯಲ್ಲಿ ಗಾಳಿ ಬಿಸಿದಾಗ ತಂಪಾದ ಹವೆಯು ಬರುತ್ತಿತ್ತು. ಇದಲ್ಲದೆ ಈ ಕಟ್ಟಡದಲ್ಲಿ ಇನೊಂದು ವಿಶೇಷವೆಂದರೆ ಮೇಲಿನ ಹೌದನಿಂದ ಬರುವ ನೀರು ಪ್ರತಿ ಅಂತಸ್ತಿನ ಮಧ್ಯದಲ್ಲಿ ಸುಂದರವಾದ ಕಲೆಯಿಂದ ಕೂಡಿ, ರಂದ್ರವನ್ನು ಹಾಕಿದ ಛಾವಣಿಯಿದೆ. ಇದರ ಮುಖಾಂತರ ಬಂದ ನೀರು ಆಧುನಿಕ ಕಾಲದ "ಶಾವರ್" ತರಹ ಬೀಳುತ್ತಿತ್ತು. ಅದೇ ತರಹ ಕೆಳಗಡೆ ನಮೂನೆ ನಮೂನೆ ಹೊಂಡಗಳನ್ನು ಮಾಡಿದ್ದಾರೆ, ಈ ಹೊಂಡಗಳು ಆಧುನಿಕ "ಟಬಬಾತ್"ಗಳಂತಿವೆ. ಪ್ರತಿಯೊಂದು ಕೋಣೆಯಲ್ಲಿ ಅಪರೂಪದ ಬಣ್ಣದ ಚಿತ್ರಗಳನ್ನು ಹೊಂದಿದ್ದವು ಎಂಬುದನ್ನು ಇಂದಿಗೂ ಅಲಲ್ಲಿ ಮಸುಕು-ಮಸುಕಾಗಿ ಕಾಣುವ ಬಣ್ಣವನ್ನು ನೋಡಬಹುದು. ಐದನೆಯ ಅಂತಸ್ತಿನಲ್ಲಿ ಎಲ್ಲಕ್ಕಿಂತ ವಿಭಿನ್ನವಾಗಿ ಮತ್ತು ವೈಭವಿತವಾಗಿದೆ. ಇಲ್ಲಿ ಹೂ-ಬಳ್ಳಿಗಳ ಜೊತೆಗೆ ಪ್ರೇಮ ಪಕ್ಷಿಗಳು ಕೆತ್ತಲಾಗಿದೆ. ಈ ಕಟ್ಟಡದ ಛಾವಣಿಯನ್ನು ಗಾರೆ ಕೆಲಸದಿಂದ ಅದ್ಭುತವಾಗಿ ಅಲಂಕರಿಸಲಾಗಿದೆ. ಕ್ರಿ. ಶ. ೧೮೫೪ ರಲ್ಲಿ ಭೇಟ್ಟಿ ಕೊಟ್ಟ ಜೇಮ್ಸ ಬರ್ಡ ಹೇಳುವಂತೆ ಬಹುತೇಕ ಚಿತ್ರಗಳು ಅಸ್ಪಷ್ಟವಾಗಿದ್ದರೂ ಒಂದಡೆ ಮಹಮ್ಮದ ಆದಿಲ್‌ಶಾಹನ ಚಿತ್ರ ಅವನ ಹತ್ತಿರ ಸಿತಾರ ವಾದನ, ಎದುರಿಗೆ ಬುಟ್ಟಿ ತುಂಬಿದ ಹೂಗಳು ಮಗ್ಗಲಲ್ಲಿ ಅವನ ಪ್ರೇಯಸಿ ರಂಭಾವನ್ನು ಸ್ಪಷ್ಟವಾಗಿ ಗುರುತಿಸಿದ್ದನಂತೆ.[೪೫]

೨. ಕುಮಟಗಿಯ ಬೇಸಿಗೆಯ ಅರಮನೆ :

ಬಿಜಾಪುರದಿಂದ ಸುಮಾರು ೧೨ ಕಿ.ಮೀ. ದೂರದಲ್ಲಿರುವ ಕುಮಟಗಿ, ಆದಿಲ್‌ಶಾಹಿಗಳ ಕಾಲದ ಬೇಸಿಗೆಯ ಅರಮನೆಯಾಗಿತ್ತು. ಬೇಸಿಗೆಯಲ್ಲಿ ಸುಲ್ತಾನ ಮತ್ತು ರಾಣಿಯರು, ರಾಜಮನೆತನದವರು ಇಲ್ಲಿ ಬರುತ್ತಿದ್ದರು. ಈ ಕಟ್ಟಡದ ವಿಶೇಷ ಎಂದರೆ ಕಟ್ಟಡದಲ್ಲಿ ಗೋಡೆಗಳ ಮಧ್ಯದಲ್ಲಿ ಕೊಳವೆಗಳ ಮೂಲಕ ನೀರು ಹಾಯಿಸಿದ್ದಾರೆ, ಗಾಳಿ ಬೀಸಿದ ನಂತರ ಗೋಡೆಯು ತೇವಾಂಶದಿಂದ ಕೂಡಿದ್ದರಿಂದ ತಂಪಾದ ಗಾಳಿಯಾಗಿ ಪರಿವರ್ತನೆಗೊಂಡು ಉಲ್ಲಾಸ ನೀಡುತ್ತಿತ್ತು. ಇಂತಹ ತಂತ್ರಜ್ಞಾನ ನಿಜಕ್ಕೂ ಒಂದು ವಿಸ್ಮಯ. ಇದಲ್ಲದೇ ಕಟ್ಟಡ ಮೇಲೆ ಒಂದು ಹೌದಿನ ಮುಖಾಂತರ ಛಾವಣಿಯವರೆಗೂ ತಂದು ಛಾವಣಿಯಲ್ಲಿ ಒಂದು ವೃತಾಕಾರದ ಕಲ್ಲಿನಲ್ಲಿ ರಂಧ್ರಗಳನ್ನು ಮಾಡಿ ಅದರ ಮೂಲಕ ನೀರನ್ನು ಹಾಯಿಸಿ, ಕೆಳಗಡೆ ಒಂದು ದೊಡ್ಡ ಹೊಂಡ ಮಾಡಿ ಸ್ನಾನ ಮಾಡುವ ವ್ಯವಸ್ಥೆಯನ್ನು ಮಾಡಿದ್ದರು, ಇದು ಆಧುನಿಕ ಶಾವರ ಸ್ನಾನದ ತರಹ ನೀರು ಕೆಳಗೆ ಬೀಳುತ್ತಿತ್ತು. ಈ ಕಟ್ಟಡದ ಸುತ್ತಲು ಈಜು ಕೊಳವಿದ್ದು, ಸುತ್ತಲು ಪರದೆ ಹಾಕುವ ವ್ಯವಸ್ಥೆ ಕೂಡವಿತ್ತು. ಈ ಈಜು ಕೊಳಕ್ಕೆ ಬದಿಯಲ್ಲಿರುವ ಕೆರೆಯ ನೀರನ್ನು ಕಾಲುವೆಗಳ ಮೂಲಕ ಹರಿಸಲಾಗುತ್ತಿತ್ತು. ಅಲ್ಲದೆ ಕೊಳೆ ನೀರನ್ನು ಹೊರ ಹಾಕುವ ವ್ಯವಸ್ಥೆ ಕೂಡ ಇತ್ತು. ಈ ಕಟ್ಟಡದ ಗೋಡೆಯ ಮೇಲೆ ಪೋಲೋ ಆಟವಾಡುವ, ಕುದರೆ ಮೇಲೆ ಕುಳಿತು ಬೇಟೆಯಾಡುವ ಮತ್ತು ಹುಲಿ ಚಿರತೆ, ಜಿಂಕೆ

ಮೊದಲಾದವುಗಳ ಚಿತ್ರಗಳನ್ನು ಗೋಡೆಗಳ ಮೇಲೆ ಬಿಡಿಸಲಾಗಿದೆ. ಯುರೋಪಿನ ರಾಯಭಾರಿ ಆದಿಲ್‌ಶಾಹಿಗಳ ದರ್ಬಾರಕ್ಕೆ ಬೇಟ್ಟಿ ನೀಡಿದ ಸಂಗತಿಯನ್ನು ಗೋಡೆಯ ಮೇಲೆ ಬಿಂಬಿಸಲಾಗಿದೆ.[೪೬]

ಇನ್ನೊಂದು ಗೋಡೆಯ ಮೇಲೆ ಸಂಗೀತಗಾರನೊಬ್ಬನು ಸಿತಾರ ನುಡಿಸುತ್ತಿರುವ ಮತ್ತು ಒಬ್ಬ ಮಹಿಳೆಯು ಆ ಸಂಗೀತವನ್ನು ಆಲಿಸುತ್ತಿರುವುದನ್ನು ಬಿಡಿಸಲಾಗಿದೆ. ಅದರ ಜೊತೆಗೆ ಅನೇಕ ಪ್ರಾಣಿ ಪಕ್ಷಿಗಳು ಹಾಗೂ ಹೂಬಳ್ಳಿಗಳು ಮತ್ತು ವಿವಿಧ ತರಹದ ಹಣ್ಣುಗಳನ್ನು ಬಿಡಿಸಲಾಗಿದೆ. ಇಲ್ಲಿ ಎರಡು ಕಟ್ಟಡಗಳ ಸುತ್ತಲೂ ಬಹುಶಃ ರಕ್ಷಣಾ ಕೋಟೆಯಿತ್ತು. ಇದರ ಕರುಹಗಳು ಇವೆ, ಅಲ್ಲದೆ ಒಂದು ಕಾಮಾನಿನ ದ್ವಾರ ಕೂಡ ನೋಡಬಹುದು. ಸುಲ್ತಾನರು ಮತ್ತು ರಾಜಮನೆತನದವರು ಈ ಸ್ಥಳಕ್ಕೆ ಬಂದಾಗ ಇಲ್ಲಿ ವ್ಯಾಪಾರಸ್ಥರು ಕೂಡ ಬರುತ್ತಿದ್ದರು, ಏಕೆಂದರೆ ಈ ಕಟ್ಟಡದ ಸ್ವಲ್ಪ ದೂರದಲ್ಲಿ ಅಂಗಡಿಗಳ ಕುರುಹಗಳು ಇಂದು ಸಹ ನೋಡಬಹುದಾಗಿದೆ. ಇಲ್ಲಿ ಪ್ರಸಿದ್ಧ ವ್ಯಾಪಾರಿಗಳು ಮುತ್ತು-ರತ್ನ ವಜ್ರಗಳು ಮಾರಾಟವಾಗುತ್ತಿದ್ದವು.[೪೭]

೩. ಆಸಾರ ಮಹಲ :

ನಗರದ ಆರ್ಕಿಲ್ಲಾದ ಪೂರ್ವಭಾಗದಲ್ಲಿದೆ. ಹದಿನೈದು ಸಾವಿರ ಕ್ಷೇತ್ರದ ಇನ್ನೊಂದು ಭವ್ಯ ಕಟ್ಟಡ ಆಸಾರ ಮಹಲನ್ನು ಕ್ರಿ. ಶ. ೧೬೪೬ ರಲ್ಲಿ ಸುಲ್ತಾನ ಮಹಮ್ಮದ ಆದಿಲ್‌ಶಾಹನು ಕಟ್ಟಿಸಿದನು.[೪೮] ನ್ಯಾಯಾಲಕ್ಕಾಗಿಯೇ ಎಂದು ಕಟ್ಟಿದ ಈ ಕಟ್ಟಡಕ್ಕೆ " ದಾದ್ ಮಹಲ್" ಎಂಬ ಹೆಸರೂ ಇತ್ತು. ನಂತರ ಮಹಮ್ಮದ ಪೈಗಂಬರ ಪವಿತ್ರ ಕೂದಲುಗಳನ್ನು ಸುರಕ್ಷಿತವಾಗಿಡಲು ಈ ನಿರ್ಮಿತಿ ಉಪಯೋಗಿಸಲಾಯಿತು. ಮೀರ ಮಹಮ್ಮದ ಶೇಖ ಹಮದಾನಿ ಎರಡನೆಯ ಇಬ್ರಾಹಿಮನ ಕಾಲದಲ್ಲಿ ಬಿಜಾಪುರಕ್ಕೆ ತಂದನಂತೆ ಸುಲ್ತಾನು ಭಕ್ತಿಯಿಂದ ಇವುಗಳನ್ನು ಬರಮಾಡಿಕೊಂಡನು. ಆಗ ಮೊಹರಂ ಹಬ್ಬದ ಸಮಯವಾದ್ದರಿಂದ ಸುಲ್ತಾನು ಅವರನ್ನು ಅಲ್ಲಿಯೇ ಇರಿಸಿಕೊಂಡನು ಮತ್ತು ಅವರಿಗೆ ಸನ್ಮಾನ ಮಾಡಿದನು. ಸುಲ್ತಾನನು ಆ ಪವಿತ್ರ ಕುರುಹುಗಳನ್ನು ಒಂದು ರತ್ನ ಖಚಿತವಾದ ಪೆಟ್ಟಿಗೆಯಲ್ಲಿಟ್ಟು ಎಲ್ಲ ಹಬ್ಬ ಹರಿದಿನಗಳಲ್ಲಿ ಮತ್ತು ಪ್ರತಿ ಶುಕ್ರವಾರವೂ ದರ್ಶನ ಮಾಡುತ್ತಿದ್ದನು. ಅನಂತರ ಇದನ್ನು ಆಸಾರ ಮಹಲಿನಲ್ಲಿಡಲಾಯಿತು. ಮೊಘಲ ಚಕ್ರವರ್ತಿ ಔರಂಗಜೇಬನು ಬಿಜಾಪುರ ಗೆದ್ದ ಸಮಯದಲ್ಲಿ ಆಸಾರ ಮಹಲಿನಲ್ಲಿರುವ ಎಲ್ಲ ಅಮೂಲ್ಯ ವಸ್ತುಗಳನ್ನು ತೆಗೆದುಕೊಂಡು ಹೋದನು. ಆದರೆ ಈ ಪೆಟ್ಟಿಗೆ ಮಾತ್ರ ಹಾಗೆಯೇ ಉಳಿದಿದೆ.

ಈ ಆಸಾರ ಮಹಲಿಗೆ ಹೋಗಲು ಮಹಮ್ಮದ ಆದಿಲ್‌ಶಾಹನು ಒಂದು ಸಣ್ಣ ಸೇತುವೆ ಕಟ್ಟಿ ಮತ್ತು ತನ್ನ ನ್ಯಾಯಾಲಯವನ್ನು ಆ ಕಟ್ಟಡದಲ್ಲಿ ಮಾಡಿಕೊಂಡನು. ಇದು ಒಂದು ಮಹಡಿ ಕಟ್ಟಡ, ಇದರ ಸಮೀಪದಲ್ಲಿ ಹೊರಗಡೆ ಕೋಟೆಗೋಡೆಯ ಮೇಲೆ ಒಂದು ಸಣ್ಣ ಕೊಳವಿದೆ. ಈ ಮಹಲಿಗೆ ಬರುವ ಮುಂಚೆ ಇಲ್ಲಿ ಕೈ ಕಾಲು ತೊಳೆದುಕೊಳ್ಳುವ ವ್ಯವಸ್ಥೆ ಇದ್ದಿತು. ಆನಂದ ಮಹಲಿಗೆ ಈ ಸೇತುವೆಯನ್ನು ಜೋಡಿಸಲಾಗಿದೆ.

ದೂರದಿಂದ ಆಸಾರ ಮಹಲ ನೋಡಿದರೆ ಇದೊಂದು ಪಕ್ಕಕ್ಕೆ ಬಿದ್ದ ಒಂದು ದೊಡ್ಡ ಪೆಟ್ಟಿಗೆಯಂತೆ ಕಾಣಿಸುತ್ತದೆ. ಇದರ ಮುಚ್ಚಳವು ಮುಂಬದಿಯ ಪ್ರವೇಶ ದ್ವಾರ ಇದರಲ್ಲಿ ಉದ್ದಕ್ಕೆ ಎರಡು ಭಾಗಗಳಿವೆ. ೧೫೦ಫ೧೮೦ ಅಡಿ ವಿಶಾಲವಾದ ಸಭಾಗೃಹದ ಮೇಲೆ ಇನ್ನೊಂದು ಮಹಡಿಯಲ್ಲಿ ೮೧ಫ೨೭ ಅಡಿಯ ಇನ್ನೊಂದು ಕೋಣೆ. ಪಶ್ಚಿಮದ ಬಾಗಿಲಿನಿಂದ ಅರಕಿಲ್ಲೆಯ ಕೋಟೆಯ ಮೇಲಿನಿಂದ ನೇರವಾಗಿ ಬರಲು ದೊಡ್ಡ ಸೇತುವೆ. ಕೆಳ ಅಂತಸ್ತಿನ ಎದುರಿಗೆ ೧೫೦ ಫ೩೦ ಅಡಿಯ ವಿಶಾಲ ಅಂಗಳದ ಮಧ್ಯ ಪುಷ್ಕರಣಿ. ಕಟ್ಟಡದ ರಚನೆಯಲ್ಲಿ ಭವ್ಯವಾದ ೩೦ ಅಡಿ ಎತ್ತರದ ಸಾಗವಾನಿ ಕಂಬಗಳ ಮೇಲೆ ಬಣ್ಣದ ಚಿತ್ತಾರಗಳಿಂದ ಕೂಡಿದ ಕಟ್ಟಿಗೆಯ ತೊಲೆಗಳನ್ನು ಕಾಣುತ್ತೇವೆ. ಮೊದಲ ಅಂತಸ್ತಿನ ಮೊಗಸಾಲೆಯಿಂದಲೇ ಬಾದಶಾಹನ ದರ್ಶನ ಕೆಳಗಿನ ಜನರಿಗೆ ಆಗುತ್ತಿರಬೇಕು. ಇದರ ಭಾವಣಿಗೆ ಮರದ ಪಟ್ಟಿಗಳನ್ನು ಹಾಸಿದ್ದು ವರ್ಣಚಿತ್ರಗಳಿಂದ ಅಲಂಕರಿಸಲಾಗಿತ್ತು. ಕಟ್ಟಡದ ದಕ್ಷಿಣ ಗೋಡೆಗಳಿಗೆ ಹೊಂದಿಕೊಂಡಂತೆ ಇರುವ ಅಗಲವಾದ ಪಾವಟಿಗೆಗಳ ಮೂಲಕ ಮೇಂತಸ್ತಿನ ಕೊಠಡಿ, ಹಜಾರಗಳಿಗೆ ತಲುಪಬಹುದು.[೪೯] ಇವುಗಳಲ್ಲಿರುವ ತೇಗದ ಮರದ ಪಟ್ಟಿಗಳಿಂದ ಮಾಡಿದ ವೈವಿಧ್ಯಮಯ ವಿನ್ಯಾಸಗಳ ಜಾಲಂಧ್ರ ಚಿತ್ತಾಕರ್ಷಕವಾಗಿವೆ. ದಕ್ಷಿಣದ ಎರಡು ಕೊಠಡಿಗಳಲ್ಲಿ ಪ್ರವಾದಿಯ ಪವಿತ್ರ ಕೇಶವಿದೆ. ಉಳಿದಂತೆ ಉತ್ತರಕ್ಕಿರು ಕೊಠಡಿಗಳ ಗೋಡೆ, ಬಾಗಿಲು, ಗೂಡು, ಭಾವಣಿಗಳನ್ನೆಲ್ಲ ಸುಂದರ ವರ್ಣಚಿತ್ರಗಳಿಂದ ಅಂಲಕರಿಸಿದೆ. ವಿವಿಧ ಹೂಬಳ್ಳಿಗಳು, ಹೂದಾನಿ, ಹಣ್ಣಿನ ಹರಿವಾಣ, ಸಿಪ್ರಸ್ ಮರದ ಮುಂತಾದವುಗಳ ಚಿತ್ರಣದ ಜೊತೆಗೆ ಗೋಡೆಯ ಕೆಳಭಾಗದಲ್ಲಿ ಬಹುಶಃ ಭಾಗವತದ ಕೃಷ್ಣಲೀಲೆಯ ಸುಂದರ ಭಿತ್ತಿ ಚಿತ್ರಗಳಿದ್ದು, ಔರಂಗಜೇಬನ ಕಾಲದಲ್ಲಿ ಅವುಗಳ ಮುಖಗಳನ್ನು ಉದ್ದೇಶಪೂರ್ವಕವಾಗಿ ಅಂದಗೆಡಿಸಲಾಗಿದೆ. ದಕ್ಷಿಣ ಪಾವಟಿಗೆಗಳ ಬಳಿಯಿರುವ ಕೊಠಡಿಯಲ್ಲಿ ಗ್ರಂಥಾಲಯವಿದ್ದಿತು. ಆಸಾರ ಮಹಲಿನ ಪೂರ್ವದ ಹಜಾರಕ್ಕೆದುರಾಗಿ ಪರಿಧಿಯಲ್ಲಿ ಮೆಟ್ಟಿಲುಗಳಿರುವ ದೊಡ್ಡ ಜಲಾಶಯವಿದೆ. ಅದರಂತೆಯೇ ಉತ್ತದಲ್ಲಿ ಜಹಾಜ್ ಮಹಲ ಎಂದು ಕರೆಯಲಾಗುವ ಕಟ್ಟಡದ ಭಗ್ನಾವಶೇಷಗಳಿವೆ.

ಆಸಾರ ಮಹಲಿನಲ್ಲಿ ಪ್ರತಿವರ್ಷ ಪ್ರವಾದಿ ಮಹಮ್ಮದ ಪೈಗಂಬರ ಜನ್ಮದಿನದಂದು ಜಾತ್ರೆ (ಉರುಸ) ಜರಗುತ್ತದೆ. ಜಾತ್ರೆಯ ಒಂದು ದಿನ ಮೊದಲು ಗಂಧ ಕಾರ್ಯಕ್ರಮ ಜರಗುತ್ತದೆ. ನಗರದ ವಿವಿಧ ಬಡಾವಣೆಯಿಂದ ಮೆರವಣಿಗೆಯ ಮೂಲಕ ಗಂಧ ಬರುತ್ತದೆ. ಅವತ್ತು ಅಲ್ಲಿ ಎಲ್ಲಾ ಪುರುಷರು ವಿಶೇಷ ಪ್ರಾರ್ಥನೆಯನ್ನು ಮಾಡುತ್ತಾರೆ, ಜೊತೆಗೆ ಪ್ರಸಾದವು ನೀಡಲಾಗುತ್ತದೆ. ಬಡವರಿಗೆ ದಾನ ಸಹ ಮಾಡಲಾಗುತ್ತದೆ. ಜಾತ್ರೆಯ ದಿನದಂದು ಕೇವಲ ಮಹಿಳೆಯರಿಗೆ ಮಾತ್ರ ಪ್ರವೇಶವಿರುತ್ತದೆ, ಈ ವೇಳೆಯಲ್ಲಿ ನಗರದ ವಿವಿಧ ಕಡೆಗಳಿಂದ ಬಂದ ಮಹಿಳೆಯರು ಆಸರ ಮಹಲಿನ ಮುಂದಿರುವ ಪುಷ್ಕರಣಿಯಲ್ಲಿ ಕಾಗದದ ಹಡುಗಿನಲ್ಲಿ ದ್ವೀಪ, ಬಾಳೆಹಣ್ಣು ಮತ್ತು ಎಲೆ ಅಡಿಕೆಗಳನಿಟ್ಟು ಬಿಡಲಾಗುತ್ತದೆ. ಈ ಹಡಗನ್ನು ಹರಿಕೆ ಹೊತ್ತ ಮಹಿಳೆಯರು ಬಿಡುತ್ತಾರೆ, ಅಲ್ಲದೆ ಮುತ್ತೈದೆಯರಿಗೆ ಉಡಿತುಂಬುವ ಕಾರ್ಯಕ್ರಮವು ಜರುಗತ್ತದೆ.

[illegible]

[illegible]

೪, ಮುಸ್ತಫಾಖಾನ ಮಹಲ್ :

ಮಹಮ್ಮದ ಆದಿಲ್‌ಶಾಹನ ಪ್ರಧಾನ ಮಂತ್ರಿಯಾದ ಮುಸ್ತಫಾಖಾನನು ಜುಮ್ಮಾ ಮಸೀದಿಯ ಹತ್ತಿರ ಒಂದು ಮಸೀದೆ ಮತ್ತು ತನಗಾಗಿ ಮಹಲನ್ನು ಕಟ್ಟಿಸಿದನು. ಮಸೀದಿಯ ಹತ್ತಿರವೇ ಈ ಮಹಲ್ ಇತ್ತು. ಆದರೆ ಈಗ ಅವರ ವಂಶಸ್ಥರ ಅಧಿನದಲ್ಲಿದೆ. ಹೆನ್ರಿ ಕಜಿನ್ಸರ ಪ್ರಕಾರ ಈ ಮಹಲಿನಲ್ಲಿ ಸುಂದರ ಉದ್ಯಾನವನ, ಪುಷ್ಕರಣಿಗಳು ಹೊಂದಿದ್ದವು ಅಲ್ಲದೇ ಸುಲ್ತಾನ ನಂತರ ಅತ್ಯಂತ ಪ್ರಮುಖ ಸ್ಥಾನ ಹೊಂದಿದವನು ಇನಾಗಿದ್ದ. ಉದ್ಯಾನವನದಲ್ಲಿ ದೊಡ್ಡ ಪುಷ್ಕರಣಿ ಇದ್ದು ಅದಕ್ಕೆ ಅನೇಕ ಸಣ್ಣ ಕಲ್ಲಿನ ಕಾಲುವೆಗಳು ಇದ್ದು, ಈ ಕಾಲುವೆಗಳಲ್ಲಿ ಸಾವಿರಾರು ನೀರಿನ ಅಲೆಗಳು ಮಿಂಚುತ್ತಾ ಹೋಗಿ ದೊಡ್ಡ ಒಂದು ಹೌದನ್ನು ಸೇರುತ್ತಿದ್ದವು. ಇಂತಹ ಸುಂದರ ಮಹಲನ್ನು ಕಟ್ಟಿಸಿದನು.[೫೦]

ಮುಸ್ತಫಾಖಾನ ಮಸೀದಿಯ ಎರಡುನೂರು ಅಡಿ ದಕ್ಷಿಣದಲ್ಲಿ ಜುಮ್ಮಾ ಮಸೀದಿಯ ರಸ್ತೆಗೆ ತಾಗಿಕೊಂಡು ದೊಡ್ಡ ಮತ್ತು ಭವ್ಯವಾದ ಕಮಾನವಿದೆ, ಇದಕ್ಕೆ ಪ್ರಸ್ತುತ "ಬಡಿಕಮಾನ" ಎಂದು ಕರೆಯುತ್ತಾರೆ. ಈ ಬಡಿಕಮಾನವು ಮುಸ್ತಫಾಖಾನ ಮಹಲ್ ಮತ್ತು ಮಸೀದೆಯ ಪ್ರವೇಶ ದ್ವಾರವಾಗಿತ್ತು.

೫, ಜಹಾಬೇಗಂ ಅರಮನೆ (ರಾಣಿ ಮಹಲ) :

ಜಹಾಬೇಗಂ ಅರಮನೆಯು ನಗರದ ಪೂರ್ವ ದಿಕ್ಕಿನ ಐನಾಪುರ ಎಂಬ ಹಳ್ಳಿಯಲ್ಲಿ ಇವಳ ಗೋರಿ ಸ್ವಲ್ಪ ದೂರದಲ್ಲಿದೆ. ಈ ಮಹಲಿಗೆ ಸ್ಥಳಿಯರು ರಾಣಿ ಮಹಲ ಎಂದು ಕರೆಯುತ್ತಾರೆ. ಈ ಮಹಲ್ ಒಂದು ಅಂತಸ್ತು ಹೊಂದಿದೆ. ಮೂರು ಕೋಣೆಗಳಿವೆ ಮುಂದೆ ದೊಡ್ಡ ವರಂಡಾವನ್ನು ಹೊಂದಿದೆ. ಈ ಕಟ್ಟಡವು ಎತ್ತರವಾದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಮುಂದಿನ ಕೋಣೆಯು ೨೪'೯"X೧೭" ಮತ್ತು ಇದರ ಹಿಂದಿನ ಕೋಣೆಯು ೨೪'೯"X೧೬" ವಿಸ್ತೀರ್ಣವನ್ನು ಹೊಂದಿದೆ. ಇನ್ನೊಂದು ಬದಿಗೆ ದೊಡ್ಡ ಕೋಣೆ ಇದೆ. ಇದರ ವಿಸ್ತೀರ್ಣ ೩೩'X೧೫', ಕಟ್ಟಡದ ಎಡಬದಿಗೆ ೮'೭"X೬'೩" ವಿಸ್ತೀರ್ಣವುಳ್ಳ ಶೌಚಾಲಯವಿದೆ. ಈ ಕಟ್ಟಡಕ್ಕೆ ಮೇಲೆ ಹೋಗಲು ಎರಡು ಬದಿಗೆ ಮೆಟ್ಟಿಲುಗಳಿವೆ

ಈ ಮಹಲಿನ ಪ್ರವೇಶ ಗಗನ ಮಹಲಿನಂತಿದೆ, ಇಲ್ಲಿ ಮೂರು ದೊಡ್ಡ ಕಮಾನುಗಳ ಮೂಲಕ ಮಹಲಿನ ಒಳಗೆ ಪ್ರವೇಶ ಮಾಡಬಹುದು. ಈ ಮಾನುಗಳ ಮೂಲಕ ಒಳಗೆ ಪ್ರವೇಶಿಸಿದ ನಂತರ ಈ ಮಹಲಿನ ಮುಖ್ಯ ದ್ವಾರದ ಮೇಲೆ ಒಂದು ಪರ್ಶಿಯನ ಶಾಸನವಿದೆ. ಈ ಶಾಸನದ ಪ್ರಕಾರ ಮಹಮ್ಮದ ಆದಿಲ್‌ಶಾಹನು ತನ್ನ ಪ್ರೀತಿಯ ರಾಣಿಯಾದ ಜಹಾಬೇಗಂ ಅವಳಿಗಾಗಿ ಈ ಮಹಲ ಕಟ್ಟಲಾಗಿದೆ,[೫೧] ಮತ್ತು ಕ್ರಿ. ಶ. ೧೬೪೧ ರಲ್ಲಿ ಲತೀಫ ಮಹಮ್ಮದ ಎಂಬುವನು ಕಟ್ಟಿದನು ಎಂದು ಉಲ್ಲೇಖವಿದೆ. ಈ ಶಾಸನ ಅಲ್ಲಲ್ಲಿ ಅಸ್ಪಷ್ಟವಾಗಿದೆ. ಈ ಮಹಲಿನ ಇರುವ ಕಿಟಕಿಯ ಜಾಲಂಧರಗಳು ಸುಂದರ ಕೆತ್ತನೆಯಿಂದ ಕೂಡಿದೆ.

೬, ನವಾಬ ಮುಸ್ತಫಾಖಾನ ಸರಾಯ (ಅತಿಥಿ ಗೃಹ) :

ಈ ಅತಿಥಿಗೃಹವು ಖ್ವಾಜಾ ಅಮೀನ ದರ್ಗಾ ಹೋಗುವ ರಸ್ತೆಯಲ್ಲಿದೆ. ಇದು ಪ್ರಸ್ತುತ ಕೇಂದ್ರ ಬಂದಿಖಾನೆಯಿದೆ.(ಕಾರಾಗೃಹ) ಇದನ್ನು ಮಹಮ್ಮದ ಆದಿಲ್‌ಶಾಹನ ಪ್ರಧಾನ ಮಂತ್ರಿಯಾದ ಮುಸ್ತಫಾಖಾನನು ವ್ಯಾಪಾರಿಗಳಿಗೆ ಮತ್ತು ಯಾತ್ರಿಗಳಿಗೆ ರಾತ್ರಿ ತಂಗಲು ಈ ಅತಿಥಿಗೃಹವನ್ನು ಕ್ರಿ. ಶ. ೧೬೪೦-೪೧ ರಲ್ಲಿ ಕಟ್ಟಿಸಿದನು. ರಾತ್ರಿ ಸಮಯದಲ್ಲಿ ಕೋಟೆಯ ಬಾಗಿಲುಗಳು ಮುಚಲ್ಪಡುತ್ತಿದ್ದವು, ಆದ್ದರಿಂದ ಮುಸ್ತಫಾಖಾನನು ಈ ವಿಶ್ರಾಂತಿಗೃಹವನ್ನು ಕಟ್ಟಿ ಅವರಿಗೆ ಅಲ್ಲಿ ತಂಗಲು ಅನುಮಾಡಿಕೊಟ್ಟನು. ಈ ವಿಶ್ರಾಂತಿಗೃಹದ ಒಳಗಡೆ ದೊಡ್ಡ ವರಂಡಾ ಇದ್ದು ಅನೇಕ ಕೋಣೆಗಳು ಇದ್ದು ಪ್ರಯಾಣಿಕರಿಗೆ ಮತ್ತು ಅವರ ಜೊತೆಯಲ್ಲಿದ ಪ್ರಾಣಿಗಳಿಗೆ ತಂಗಲು ವ್ಯವಸ್ಥಿತವಾದ ಕಟ್ಟಡ ಇದಾಗಿತ್ತು.

ಈ ವಿಶ್ರಾಂತಿಗೃಹದ ಮೇಲೆ ಇರುವ ಪರ್ಶಿಯನ ಶಾಸನ ಈ ರೀತಿಯಾಗಿದೆ.

" ಮುಸ್ತಫಾಖಾನನು ಕಟ್ಟಿಸಿ " ಸರಾಯಿ ಮೊಹಮ್ಮದಿ " ಎಂಬ ಹೆಸರಿಟ್ಟು ಜನರ ಉಪಯೋಗಕ್ಕೆಂದು (ವಿಶ್ರಾಂತಿ ಭವನವಾಗಿಸಿ) ಧರ್ಮದತ್ತಿಯಾಗಿತ್ತನು. ಇದು ಕ್ರಿ. ಶ. ೧೬೪೦-೪೧ ಎಂಬ ತೇದಿಯನ್ನು ಹೊಂದಿದೆ ಮತ್ತು ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಬರೆಯಲಾಗಿದೆ."[೫೨]

೭, ಅಂಬಾರಖಾನಾ (ಉಗ್ರಾಣ) :

ಜುಮ್ಮಾ ಮಸೀದಿಯಿಂದ ಸುಮಾರು ನಾಲ್ಕನೂರು ಗಜ ದೂರದಲ್ಲಿ ಈ ಅಂಬಾರಖಾನಾವಿದೆ. ಇದರ ವಿನ್ಯಾಸ ಕುತುಹಲಕಾರಿಯಾಗಿದೆ. ಅಂಬಾರಖಾನವನ್ನು ಅನೇಕ ಕೋಣೆಗಳಾಗಿ ವಿಭಾಗಿಸಲಾಗಿದೆ. ಪ್ರತಿಯೊಂದು ಕೋಣೆಯ ಭಾವಣಿಯಲ್ಲಿ ೧೮ ಅಂಗುಲದ ವೃತ್ತಾಕಾರದ ರಂಧ್ರಗಳನ್ನು ಮಾಡಲಾಗಿದೆ. ಈ ಕಟ್ಟಡಕ್ಕೆ ಹತ್ತು ದ್ವಾರಗಳಿವೆ, ಇವುಗಳಿಗೂ ಸಹ ಗಾಳಿ ಹೋಗಲು ರಂಧ್ರಗಳನ್ನು ಕೊರೆಯಲಾಗಿದೆ. ಇದರಲ್ಲಿ ಧಾನ್ಯಗಳನ್ನು ಕೆಡದ ಹಾಗೆ ವ್ಯವಸ್ಥಿತವಾಗಿ ಕಟ್ಟಲಾಗಿದೆ. ಮತ್ತು ಇದರ ಒಳಗೆ ಯಾವುದೇ ಪ್ರಾಣಿಗಳು ಹೋಗದ ಹಾಗೆ ಕಟ್ಟಲಾಗಿದೆ. ಇದನ್ನು ಮಹಮ್ಮದ ಆದಿಲ್‌ಶಾಹನು ಕ್ರಿ. ಶ. ೧೬೪೩-೪೪ ರಲ್ಲಿ ಕಟ್ಟಿಸಿದನು.

ಬ) ಸಮಾಧಿಗಳು :

೧, ಗೋಲಗುಮ್ಮಟ :

ಬಿಜಾಪುರದ ಗೋಳಗುಮ್ಮಟವು ಭಾರತದ ಪ್ರಸಿದ್ಧವಾದ ಮುಸ್ಲಿಂ ಕಟ್ಟಡಗಳಲ್ಲಿ ಒಂದಾಗಿದೆ. ಭಾರತದ ಅತಿ ದೊಡ್ಡದಾದ ಗುಮ್ಮಟವನ್ನು ಹೊಂದಿರುವ ಏಕೈಕ ಕಟ್ಟಡ ಇದಾಗಿದೆ. ಇದು ಪ್ರಸಿದ್ಧಿ ಪಡೆದದ್ದು ಇದರ ದೈತ್ಯ ಗಾತ್ರದಿಂದಲ್ಲ, ಇದು ಖ್ಯಾತಿ ಪಡೆದದ್ದು ಇದರ ರಚನಾತ್ಮಕ ವಿನ್ಯಾಸದಿಂದ. ಈ ಭಾರಿಗಾತ್ರದ ಕಟ್ಟಡದ ಸಂಕೀರ್ಣ ವ್ಯವಸ್ಥೆಯು ಮೂನಚಿನ ಕಮಾನುಗಳನ್ನು ೩೦° ಯಲ್ಲಿ ಭೇಧಿಸುತ್ತವೆ. ಹೀಗಾಗಿ ಆ ಮೂನಚಿನ ಕಮಾನುಗಳ ಆಧಾರದಿಂದಾಗಿ ದೈತ್ಯಾಕಾರದ ಘನ ಸಭಾಂಗಣವನ್ನು ಬಹುಭುಜಾಕೃತಿ

ಸಭಾಂಗಣವನ್ನಾಗಿ ಪರಿವರ್ತಿಸಿದೆ. ಈ ಕಟ್ಟಡದ ಗಾತ್ರವು ಗಣಿತಶಾಸ್ತ್ರವನ್ನು ಅವಲಂಭಿಸಿ ಕಟ್ಟಿಸಿದ್ದರಿಂದ, ಗೋಳಗುಮ್ಮಟದಲ್ಲಿ ವಿಸ್ಮಯವಾದ ಪ್ರತಿಧ್ವನಿ ಕೇಳಿಸುತ್ತದೆ. ಪಿಸುಮಾತುಗಳು ಸಹ ವಿರುದ್ಧ ದಿಕ್ಕಿನಲ್ಲಿ ಕೇಳಿಸುತ್ತದೆ. ಈ ಗೋಳಗುಮ್ಮಟವು ಮಹಮ್ಮದ ಆದಿಲ್‌ಶಾಹನ ಗೋರಿಯಾಗಿದೆ. ಈ ಕಟ್ಟಡದ ನೆಲಮಾಳಿಗೆಯಲ್ಲಿ ಮಹಮ್ಮದ ಆದಿಲ್‌ಶಾಹ ಮತ್ತು ಆತನ ಕುಟುಂಬ ಸದಸ್ಯರ ಗೋರಿಗಳಿವೆ. ಅವುಗಳ ಮೇಲೆ ಮಂಟಪವಿದ್ದು ಇದು ಕಟ್ಟಡದ ಮಧ್ಯಭಾಗದಲ್ಲಿದೆ. ಅದರ ಸುತ್ತಲೂ ನಾಲ್ಕು ಮೂಲೆಗಳಲ್ಲಿ ಏಳು ಅಂತಸ್ತಿನ ಸ್ಥಂಭ ಗೋಪುರಗಳಿದ್ದು, ದಕ್ಷಿಣ ಪದ್ಧತಿಯ ಮಿನಾರುಗಳಿವೆ.

ಈ ಐತಿಹಾಸಿಕ ಕಟ್ಟಡದ ರಚನಾ ವಿನ್ಯಾಸವನ್ನು ಅಧ್ಯಯನ ಮಾಡಿದಾಗ ಎರಡು ವಿಭಿನ್ನ ಶೈಲಿಗಳು ಗೋಚರಿಸುತ್ತವೆ. ಅವು ಯಾವುವೆಂದರೆ, ಇದರ ಯೋಜನೆ ಮತ್ತು ನಕ್ಷೆಯು ಬೇರೆ ಸಿದ್ಧಾಂತಗಳನ್ನು ಹೇಳುತ್ತವೆ, ಕಟ್ಟಡ ಬೇರೆ ಬಗೆಯದಾಗಿದೆ. ಹಾಗಾಗಿ ಈ ಕಟ್ಟಡವು ಪರಿಪೂರ್ಣವಾಗಿಲ್ಲ, ಇದು ಅಪೂರ್ವ ಕಟ್ಟಡವಾಗಿದೆ. ಈ ಕಟ್ಟಡದ ನಿರ್ವಹಣೆಯನ್ನು ಸ್ಥಾನಿಕ ಕೆಲಸಗಾರರು ಮಾಡಿದ್ದಾರೆ. ಈ ಕಟ್ಟಡದ ವಿನ್ಯಾಸ ಮತ್ತು ಇದರ ವಾಸ್ತುಕಲೆ ಒಬ್ಬ ನುರಿತ ಅಥವಾ ಕಮಾನು ಮತ್ತು ಕಟ್ಟಡಗಳ ವಿಶಾರದ ಇರಬೇಕು. ಇದರ ರಚನೆ ಸಾಕಷ್ಟು ಕ್ಲಿಷ್ಟವಾಗಿದೆ. ಇದರ ರಚನೆಯಲ್ಲಿ ಸ್ವಲ್ಪವು ವ್ಯತ್ಯಾಸವಾದರೆ, ಇಡಿ ಕಟ್ಟಡವು ಕುಸಿದು ಬಿಳುತ್ತಿತ್ತು. ಈ ಕಟ್ಟಡ ಹೊಂದಿದ ಕಮಾನುಗಳು ಗುಪ್ತರ ಕಾಲದ ಕಟ್ಟಡದಲ್ಲಿ ನೋಡಬಹುದು, ನಂತರ ಉತ್ತರದ ಮುಸ್ಲಿಂ ವಾಸ್ತುಶಿಲ್ಪದಲ್ಲಿ ಕೂಡ ಕಾಣಬಹುದಾಗಿದೆ. ಈ ಕಟ್ಟಡಗಳ ಮೇಲೆ ಸಣ್ಣ ಗಾತ್ರದ ಅಥವಾ ಮಧ್ಯಮ ಗಾತ್ರದ ಗುಮ್ಮಟಗಳನ್ನು ಕಟ್ಟಿದರು. ಆದರೆ ಬಿಜಾಪುರದಲ್ಲಿ ಈ ಬೃಹತ ಗಾತ್ರದ ಗುಮ್ಮಟವು ಬಹುಶಃ ಯಾರು ಊಹಿಸಿರಲಿಲ್ಲ. ಈ ಕಮಾನುಗಳನ್ನು ಕಲ್ಲುಗಳ ಚಪಡಿಯ ಅಡ್ಡ ಪದರಗಳಿಂದ ನಿರ್ಮಿಸಲಾಗಿದೆ. ಅವುಗಳನ್ನು ಒಂದಕ್ಕೊಂದು ರಂಧ್ರ ಮತ್ತು ಲೋಹದ ಸರಳಗಳ ಸಹಾಯದಿಂದ ಜೋಡಿಸಿ ಕಟ್ಟಡ ಬಿಳದಂತೆ ಮಾಡಲಾಗಿದೆ. ಈ ಕಾರ್ಯಕ್ಕಾಗಿ ಮಾನವನ ತಯಾರಿ ಬಹಳಷ್ಟು ಪ್ರಮಾಣದಲ್ಲಿ ಬೇಕಾಗಿತ್ತು. ಈ ತಂತ್ರಗಳನ್ನು ಉಪಯೋಗಿಸಿ ಕಟ್ಟಡ ಕಟ್ಟುವುದು, ಕೇವಲ ಭಾರತದಲ್ಲಿಯೇ ಅಲ್ಲ ಜಗತ್ತಿನ ಬೇರೆ ಭಾಗದಲ್ಲಿಯೂ ಸಹ ನೋಡಬಹುದು. ಉದಾ-ಈಜಿಪ್ತದ ಮೇಮಲುಕ್‌ದಲ್ಲಿ ಈ ರೀತಿಯಾದ ಕಟ್ಟಡಗಳನ್ನು ನಿರ್ಮಿಸಲಾಗಿದೆ.

ಕೆಲವು ಸಂದರ್ಭದಲ್ಲಿ ಗೋಳಗುಮ್ಮಟ್ಟದ ನಕ್ಷೆ ಮತ್ತು ವಾಸ್ತುಶಿಲ್ಪ ವಿದೇಶಿಯರ ಕೆಲಸವಾಗಿದೆಯಂದು ಗೋಚರಿಸುತ್ತದೆ. ವಿದೇಶಿಯ ಶಿಲ್ಪಿಯು ಮಹಮ್ಮದ ಆದಿಲ್‌ಶಾಹನ ಕೃಪೆಯನ್ನು ಪಡೆದು ಈ ಕಟ್ಟಡವನ್ನು ಕಟ್ಟಿರಬಹುದು.[೨೧] ಅಟೋಮನ್ ಟರ್ಕಿಯು ಈ ತರಹದ ಕಟ್ಟಡಗಳು ಪ್ರಾರಂಭವಾಗಿದ್ದು ಇಲ್ಲಿಯೇ. ಅಟೋಮನ್ ಟರ್ಕಿಯ ವಾಸ್ತುಶಿಲ್ಪ ಶಾಲೆಯಾದ 'ಸಿನಾನ್'ದಲ್ಲಿ ಈ ಮಾದರಿಯ ವಾಸ್ತುಶಿಲ್ಪವನ್ನು ಕಲಿಸಲಾಗುತ್ತಿತ್ತು. ಈ ಶಾಲೆಯಲ್ಲಿ ಅಭ್ಯಾಸ ಮಾಡಿದ ವಾಸ್ತು ತಜ್ಞರು ಬೇರೆ ಬೇರೆ ದೇಶಗಳಿಗೆ ಹೋದರು, ಅಂತಹ ತಜ್ಞರ ತಂಡ ಭಾರತಕ್ಕೂ ಬಂತು ಎಂಬ ಪ್ರತೀತಿ ಇದೆ. ನಂತರ ಇವರು ಭಾರತದಲ್ಲಿ ಇಂತಹ ಕಟ್ಟಡಗಳನ್ನು ನಿರ್ಮಿಸಿರಬಹುದು ಎಂದು ಊಹಿಸಲಾಗಿದೆ. ಈ ವಾಸ್ತುಶಿಲ್ಪ

[illegible]

[illegible]

[illegible]

ಶಾಲೆಯಲ್ಲಿ ಅಭ್ಯಾಸ ಮಾಡಿದ ತಜ್ಞರು ಇಸ್ತಾಂಬೂಲ, ಇಡ್ರೇನ್, ಬುಸರಾ ಮತ್ತು ಡಮಕ್ಸದಲ್ಲಿ ನೂರಾರು ಮಸೀದಿಗಳು, ಶಾಲೆಗಳು, ಆಸ್ಪತ್ರೆಗಳು, ಲಂಗರಗಳನ್ನು ನಿರ್ಮಿಸಿದ್ದಾರೆ. ಆಧುನಿಕ ಕಲಾ ಇತಿಹಾಸಕಾರರು 'ಸಿನಾನ್' ಶಾಲೆಯನ್ನು ಕೇವಲ ಟರ್ಕಿಯ ಪುನರ ನಿರ್ಮಾಣ ಎನ್ನದೇ ಟರ್ಕಿಯ ಒಂದು ಪರಂಪರೆಯಾದ "ಆಯಾ ಸೂಫಿಯಾ" ಶೈಲಿ ಹೋಲುತ್ತದೆ ಎಂದಿದ್ದಾರೆ. ಅಟೋಮನ್ ಟರ್ಕಿ ಕಲೆಯು ಯಾವುದಾದರೂ ಇದ್ದರೇನು, ಒಂದು ಸತ್ಯ ಸಂಗತಿಯಂದರೆ ಹಳೆಯ ಹಾಗೂ ಆಧುನಿಕ ತಂತ್ರಜ್ಞಾನವನ್ನು ಬೆರೆಸಿ ದೊಡ್ಡ ಗಾತ್ರದ ಮಸೀದಿಗಳು ಮತ್ತು ಪೆನ್ಸಿಲ್ ಆಕಾರದ ದೊಡ್ಡ ಸ್ಥಂಭಗೋಪುರಗಳು ನಿರ್ಮಿಸಿದ್ದಾರೆ. ಇದು ನಿಖರವಾದ ಗಣಿತ ಹಾಗೂ ಜಾಮಿತಿಯನ್ನು ಉಪಯೋಗಿಸಿ ಹಗುರುವಾದ ಕಮಾನು ಮತ್ತು ಗುಮ್ಮಟಗಳನ್ನು ನಿರ್ಮಿಸಲಾಗಿದೆ.

ಅಟೋಮನ್ ಸುಲ್ತಾನರ ಜೊತೆಗೆ ಭಾರತದ ಸುಲ್ತಾನರು ನಿಕಟವಾದ ಸಂಬಂಧಗಳನ್ನು ಹೊಂದಿದ್ದರಿಂದ ಈ ಸಿನಾನ್ ಮಾದರಿಯ ಕಟ್ಟಡಗಳಿಂದ ಪ್ರಭಾವಿತರಾಗಿ ಭಾರತದಲ್ಲಿ ಸಹ ಅಂತಹ ಕಟ್ಟಡಗಳನ್ನು ನಿರ್ಮಿಸಲು ಉತ್ಸುಕರಾಗಿದ್ದರು. ಅದರ ಪರಿಣಾಮವಾಗಿ ಗುಜರಾತದ ಅಹಮ್ಮದಾಬಾದದಲ್ಲಿ (ಸ್ಥಂಭ ಗೋಪುರ), ಚಂಪಾನೇರದಲ್ಲಿ 'ಮೀನಾ-ಕಿ-ಮಸಿದ' ಮತ್ತು ದೌಲತಬಾದದಲ್ಲಿ 'ಚಾಂದ ಮೀನಾರ'ಗಳು ಕಟ್ಟಿದ್ದನ್ನು ಗಮನಿಸಬಹುದು.

ಗೋಳಗುಮ್ಮಟದ ವಾಸ್ತುಶಿಲ್ಪಿಯ ಬಗ್ಗೆ ಯಾವುದೆ ಮಾಹಿತಿಯಿಲ್ಲ, ಯಾವುದೆ ಪುರಾವೆಗಳು ಅವನ ಹೆಸರಿನಲಿಲ್ಲ. ಶಿಲ್ಪಿಯ ಹೆಸರು ಎಲ್ಲಿಯೂ ಕೆತ್ತಿಲ್ಲ. ೧೭ನೆ ಶತಮಾನದ ಉತ್ತರಾರ್ಧದಲ್ಲಿ ಬಿಜಾಪುರ ಸಾಮ್ರಾಜ್ಯವು ಪತನವಾಯಿತು. ೧೮ನೆ ಶತಮಾನದಲ್ಲಿಯ ಆದಿಲ್‌ಶಾಹಿ ದಾಖಲೆಗಳು ಅಳಿವು-ಉಳಿವಿನ ಅಂಚಿನಲ್ಲಿದ್ದವು. ಗೋಳಗುಮ್ಮಟದಲ್ಲಿ ಕೇವಲ ಒಂದು ಶಾಸನವಿದೆ ಅದು ಜನರಿಗೆ ನೈತಿಕ ಪಾಠ ಹೇಳುತ್ತದೆ.[೫೪] ಈ ದಿಶೆಯಲ್ಲಿ ನಾವು ಕೇವಲ ಈ ಕೆಳಗಿನ ಸಂಗತಿಗಳನ್ನು ಊಹಿಸಬಹುದು. ಈ ಕಟ್ಟಡದ ಅರ್ಧ ನಿರ್ಮಾಣದ ನಂತರ ಅನೇಕ ಸ್ಥಾನಿಕರು ಅತಿ ಕಡಿಮೆ ವೆಚ್ಚದಲ್ಲಿ ಪೂರ್ತಿಗೊಳಿಸಿದ್ದಾರೆ. ಗೋಳಗುಮ್ಮಟದ ಶಿಲ್ಪಿಯು ಯಾರು ? ಎನ್ನುವ ಪ್ರಶ್ನೆಗೆ ಇನ್ನುವರೆಗೂ ಯಾವುದೇ ಐತಿಹಾಸಿಕ ಮಾಹಿತಿ ಲಭ್ಯಸಿಲ್ಲ, ಎರಡನೆಯ ಇಬ್ರಾಹಿಮನ ಕಾಲದಲ್ಲಿ ಬಂದ ಇವನು ಇಬ್ರಾಹಿಮನ ಆಶೆಯಂತೆ ಇಬ್ರಾಹಿಮ ರೋಜಾವನ್ನು ಮಲ್ಲಿಕ ಸಂದಲ್ ಎಂಬ ತಜ್ಞನ ಶಿಲ್ಪಿಯು ಕಟ್ಟಿದನು. ಮಹಮ್ಮದನ ಕಾಲದ ಕಟ್ಟಿದ ಗೋಳಗುಮ್ಮಟದ ಶಿಲ್ಪಿಯ ಹೆಸರು ತಿಳಿದು ಬಂದಿಲ್ಲ, ಏಕೆಂದರೆ ಯಾವುದೇ ದಾಖಲೆಯು ಶಿಲ್ಪಿಯ ಬಗ್ಗೆ ಹೇಳುವುದಿಲ್ಲ ಹಾಗಾಗಿ ಇಬ್ರಾಹಿಮ ರೋಜಾ ಮತ್ತು ಗೋಳಗುಮ್ಮಟದ ವಾಸ್ತುಶೈಲಿಯನ್ನು ಗಮನಿಸಿದರೆ ಎರಡು ಅಲ್ಪಸ್ವಲ್ಪ ಒಂದೇತರಹದ ವಾಸ್ತುವನ್ನು ಹೊಂದಿವೆ. ಇದರಿಂದಾಗಿ ವಿದ್ವಾಂಸರು ಗೋಳಗುಮ್ಮಟ ಸಹ ಮಲ್ಲಿಕ ಸಂದಲ್‌ನೇ ಕಟ್ಟಿರಬಹುದೆಂದು ಊಹಿಸಿದ್ದಾರೆ.

ಮಹಮ್ಮದ ಆದಿಲ್‌ಶಾಹನ ಸಮಾಧಿ ನಿರ್ಮಿತಿಯಾದ ಗೋಳಗುಮ್ಮಟ ಬಿಜಾಪುರ ಕಟ್ಟಡಗಳಲ್ಲೆಲ್ಲ ಬೃಹದ್ಗಾತ್ರದ್ದು. ಇಡೀ ಭಾರತದ ಇಸ್ಲಾಮಿಕ ಕಟ್ಟಡಗಳಲ್ಲಿಯೇ ವಿಶಿಷ್ಠ ಸ್ಥಾನ ಪಡೆದುಕೊಂಡಿದೆ. ಮಲ್ಲಿಕ

ಸಂದಲ್ ವಿನ್ಯಾಸ ಮಾಡಿದ ಅನನ್ಯ ಸೌಂದರ್ಯದ ವಾಸ್ತುಕೃತಿ ಇಬ್ರಾಹಿಮ ರೋಜಾವನ್ನು ಸಂಪೂರ್ಣವಾಗಿ ಮರೆಸಬಲ್ಲಂತಹ ಈ ಕಟ್ಟಡದ ವಿನ್ಯಾಸ, ಸಂಯೋಜನೆ ನಿರ್ವಹಣೆಯನ್ನು ಪರ್ಷಿಯಾದಿಂದ ಬಂದ ಮಲ್ಲಿಕ್ ಯಾಕೂತ್ ಎಂಬ ವಾಸ್ತುಶಿಲ್ಪಿ ರಚಿಸಿದನೆಂದು ಪ್ರತೀತಿ ಇದೆ. ೧೮೩ಮೀ ಚೌಕಾಕಾರದ, ೨ಮೀ ಎತ್ತರವಿರು ವೇದಿಕೆಯ ಮಧ್ಯದಲ್ಲಿರುವ ಮುಖ್ಯ ಕಟ್ಟಡ ಭವ್ಯ ಘನಾಕೃತಿಯ ನಾಲ್ಕು ಮೂಲೆಗಳಲ್ಲಿ ಅಷ್ಟಕೋನಾಕಾರದ ಏಳಂತಸ್ತಿನ ಮೀನಾರುಗಳಿದ್ದು ಅವುಗಳ ಮೇಲೂ ಕಿರು ಗಾತ್ರದ ಗುಮ್ಮಟಗಳಿವೆ. ವೇದಿಕೆಯ ಮೇಲೆ ಪೂರ್ವ, ದಕ್ಷಿಣ, ಪಶ್ಚಿಮಗಳಲ್ಲಿ ಮೆಟ್ಟಲುಗಳಿರುವ ಮುಖ್ಯ ಕಟ್ಟಡಕ್ಕೆ ಪ್ರವೇಶ ದ್ವಾರಗಳಿದ್ದು, ಅವುಗಳ ಮುಂದೆ ವಿವಿಧ ಗಾತ್ರದ ಚೌಕಾಕಾರದ, ಕಾರಂಜಿಸಹಿತ ಕೊಳಗಳಿವೆ. ಪಶ್ಚಿಮದಲ್ಲಿ ಮಾತ್ರ ಭವ್ಯತೆಯಲ್ಲಿ ಹಾಗೂ ಶೈಲೀಯವಾಗಿ ಮುಖ್ಯ ಕಟ್ಟಡಕ್ಕೆ ಹೊಂದುವಂತಹ ಮಸೀದಿಯಿದೆ. ಕಟ್ಟಡದ ಪ್ರತಿಬದಿಯ ಊರ್ಧ್ವವಿನ್ಯಾಸದಲ್ಲಿ ಸಮಾನ ಎತ್ತರದ ಮೂರು ಕಮಾನುಗಳಿದ್ದು, ಮಧ್ಯದ ಹಸರುಕಲ್ಲಿನ ವಿಶಾಲ ಕಮಾನಿನಲ್ಲಿ ಸಣ್ಣ ಬಾಗಿಲು, ಅದರ ಪಕ್ಕಗಳಲ್ಲಿ ಜಾಲಂಧ್ರಗಳಿವೆ. ಅಂದು ಬಳಸಿದ ಮರದ ಬಾಗಿಲು, ಕಿಟಕಿ ಇಂದಿಗೂ ಉಳಿದಿವೆ. ಉತ್ತರ ಗೋಡೆಯ ಹೊರಬದಿಗೆ ಅರ್ಧ ಅಷ್ಟಕೋನಾಕೃತಿಯ ಕಟ್ಟಡವನ್ನು ಜೋಡಿಸಲಾಗಿದೆ. ಗುಮ್ಮಟ ಪರಸ್ಪರ ಛೇದಿಸುವ ಎಂಟು ಕಮಾನುಗಳು, ಮತ್ತೆ ಕಮಾನು ಮೂಲೆಗಳಲ್ಲಿ ಆಧರಿಸಿದ ಕಡಿಮೆ ಎತ್ತರದ ದುಂಡನೆಯ ವೇದಿಕೆಯ ಪರಿಧಿಯಲ್ಲಿರುವ ಕಮಲದಳಗಳ ನಡುವಿನಿಂದ ಮೇಲೇರುತ್ತದೆ. ಈ ಗುಮ್ಮಟದ ಗೋಡೆ ಅಡಿಯಲ್ಲಿ ೩.೦೫ಮೀ ಅಗಲವಿದ್ದು ಕ್ರಮೇಣ ಮೇಲೆ ಹೋಗುತ್ತಾ ಕಡಿಮೆಯಾಗಿ ೨.೭೪ಮೀ ಮುಟ್ಟುತ್ತದೆ. ಇದರ ಒಳವಿನ್ಯಾಸ ೩೭.೯ಮೀ ಇದ್ದು, ಪ್ರಪಂಚದ ಎರಡನೆಯ ಅತಿ ದೊಡ್ಡ ಗುಮ್ಮಟವಾಗಿದೆ. ೪೨.೪ಮೀ ವ್ಯಾಸವಿರುವ ರೋಮನಲ್ಲಿ ಸಂತಪೀಟರನ ಚರ್ಚ ಅತಿ ದೊಡ್ಡ ಗುಮ್ಮಟ ಹೊಂದಿದ್ದರೆ, ಲಂಡನ್ನಿನ ಸಂತ ಪಾಲನ ಕತೀಡ್ರಲ್ ೩೨.೯ಮೀ ವ್ಯಾಸದ ಗುಮ್ಮಟವಿದ್ದು ಮೂರನೆಯ ಸ್ಥಾನದಲ್ಲಿದೆ. ಹಾಗಿದ್ದರೂ ಒಂದೇ ಗುಮ್ಮಟ ಆವರಿಸಿರುವ ಒಟ್ಟಾರೆ ಸ್ಥಳದ ದೃಷ್ಟಿಯಿಂದ ಗೋಳಗುಮ್ಮಟ ಮೊದಲಸ್ಥಾನದಲ್ಲಿದೆ. ಇಡೀ ಪ್ರಪಂಚದಲ್ಲಿ ಕಂಬ ಅಥವಾ ಇನ್ನಾವುದೇ ಆಧಾರವಿಲ್ಲದೆ ಇಷ್ಟು ವಿಸ್ತಾರವಾದ ಪ್ರದೇಶವನ್ನು ಆವರಿಸಿರುವ ಕಟ್ಟಡ ಇನ್ನೊಂದಿಲ್ಲ. ಕಲ್ಲುಗುಂಡುಗಳು ಮತ್ತು ವಿಶಿಷ್ಟ ಗಾತ್ರದ ಸುಟ್ಟ ಇಟ್ಟಿಗೆಯಿಂದ ಕಟ್ಟಿದ ಈ ಗುಮ್ಮಟದ ಒಳ ಹೊರಗೆ ಗಾರೆಯ ದಪ್ಪ ಕವಚವಿದ್ದು, ಒಳಗಿನ ಮೇಲ್ಮೈಯನ್ನು ನುಣುಪಾಗಿ ನಯಗೊಳಿಸಿದೆ. ಪ್ರತಿಯೊಂದು ಗೋಡೆಯ ಮಧ್ಯದಲ್ಲಿ ಅಗಲವಾದ ಮತ್ತು ಪಕ್ಕಗಳಲ್ಲಿ ಕಿರು ಅಗಲದ ಮೂರು ಕಮಾನುಗಳಿದ್ದು, ಮಧ್ಯದ ಕಮಾನಿನಲ್ಲಿ ಬಾಗಿಲುವಾಡ ಮೇಲೆ ೧.೮ಮೀ ಎತ್ತರದ ಬೂದ ಬಣ್ಣದ ಬಸಾಲ್ಟ ಕಲ್ಲಿನ ಕಾರ್ನಿಸು, ಅದರ ಮೇಲೆ ಕಿರು ಕಮಾನುಗಳ ಸಾಲು, ಅದರ ಮೇಲೆ ಸು. ೧.೮ಮೀ ಎತ್ತರದ ಮುಂಚಾಚಿದ ಅಲಂಕೃತ ಚಜ್ಜಾ ಇವೆ. ಉತ್ತರ ದಿಕ್ಕಿನಲ್ಲಿ ಮಾತ್ರ ಮಧ್ಯದ ಕಮಾನಿನ ಸ್ಥಳದಲ್ಲಿ ಅಷ್ಟಭುಜಾಕೃತಿಯ ದೊಡ್ಡ ಕೊಠಡಿಯನ್ನು ರೂಪಿಸಿರುವುದು ವಿಶೇಷ. ನಾಲ್ಕು ಮೀನಾರಗಳಲ್ಲಿರುವ ೧೦೮-೧೬೯ ಮೆಟ್ಟಿಲುಗಳ ಮೂಲಕ ಮೇಲೆ ಹತ್ತಿ ಗುಮ್ಮಟದೊಳಕ್ಕೆ ಹೋಗಬಹುದು.

ನೆಲದಿಂದ ೩೩.೨೨ಮೀ ಎತ್ತರದಲ್ಲಿ ೩.೨೫ಮೀ ಅಗಲವಾದ ಹಜಾರವೊಂದು ಗುಮ್ಮಟದ ಗೋಡೆಯ ಒಳಮಗ್ಗಲಿಗೆ ಮುಂಚಾಚಿದೆ. ಈ ಹಜಾರ ಪಿಸುಗುಟ್ಟುವ ಗ್ಯಾಲರಿ ಎಂದೇ ಪ್ರಸಿದ್ಧವಾಗಿದೆ. ಇದರ

[illegible]

ಒಂದು ತುದಿಯಲ್ಲಿ ಆಡಿದ ಒಂದು ಪಿಸುಮಾತು ಮರುಕ್ಷಣದಲ್ಲಿ ಇನ್ನೊಂದು ತುದಿಯಲ್ಲಿ ಕೇಳಿಸುತ್ತದೆ. ಒಂದು ಸಲ ಜೋರಾಗಿ ಬಾರಿಸಿದ ಚಪ್ಪಾಳೆ ಹತ್ತಕ್ಕೂ ಹೆಚ್ಚುಸಲ ಸ್ಪಷ್ಟವಾಗಿ ಪ್ರತಿಧ್ವನಿಗೊಳ್ಳುತ್ತದೆ. ಅಲ್ಲದೆ ಈ ಹಜಾರದಲ್ಲಿ ಉತ್ಪತ್ತಿಯಾದ ಯಾವುದೇ ನಾದ ೨೬-೩೦ ಸೆಕೆಂಡಗಳಷ್ಟು ದೀರ್ಘಕಾಲ ಅನುರಣನಗೊಳ್ಳುತ್ತಿರುತ್ತದೆ. ಇವು ಈ ಕಟ್ಟಡದ ಅತ್ಯಂತ ವಿಸ್ಮಯಕಾರಿ ಅಂಶಗಳು.

೨. ಶಾಹ ನವಾಜಖಾನ ಸಮಾಧಿ :

ಶಾಹ ನವಾಜಖಾನನು ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಮಂತ್ರಿಯಾಗಿದ್ದನು. ಕ್ರಿ. ಶ. ೧೬೪೬ರಲ್ಲಿ ಮರಣ ಹೊಂದಿದನು. ಇವನ ಸಮಾಧಿ ಶಹಪುರ ಕೋಟೆಯ ದ್ವಾರದ ಬಳಿ ಖ್ವಾಜಾ ಅಮೀನ ದರ್ಗಾಕ್ಕೆ ಹೋಗುವ ರಸ್ತೆಯ ಹತ್ತಿರ ನಿರ್ಮಿಸಲಾಗಿದೆ. ಚಚ್ಚೌಕಾರದ ಒಂದು ಕಟ್ಟೆಯ ಮೇಲೆ ಶಾಹ ನವಾಜಖಾನನ ಸಮಾಧಿಯಿದೆ. ಅದಕ್ಕೆ ಹೊಂದಿಕೊಂಡು ಒಂದು ಹೌಜು, ಬದಿಗೆ ಕಾಟಕೋನ ಆಕೃತಿಯ ಮಸೀದಿಯಿದೆ. ಸಮಾಧಿಯ ಕಟ್ಟಡಕ್ಕೆ ಗುಮ್ಮಟವಿದ್ದು ಪ್ಯಾರಾಫಿಟ್ ಸುತ್ತಲೂ ೧೨ ಕಂಬಗಳಿವೆ. ಮೇಲೆ ಚಿಕ್ಕ ಗುಮ್ಮಟಗಳಿವೆ. ಮಧ್ಯದಲ್ಲಿ ದೊಡ್ಡ ಗುಮ್ಮಟದ ಕೆಳಬದಿಗೆ ಚಿಕ್ಕ ಮೀನಾರಗಳಿವೆ. ಕಟ್ಟಡದ ಕೆಳಭಾಗದಲ್ಲಿ ಕಲ್ಲಂಗಡಿ ಹಣ್ಣಿನ ಹಾಗೆ, ಹೂಕುಂಬಳಕಾಯಿ ಹಾಗೆ ಅಲಂಕಾರಗಳಿವೆ. ಈ ಸಮಾಧಿಯು ಸುಮಾರು ೫೦ ರಿಂದ ೬೦ ಅಡಿ ಎತ್ತರವನ್ನು ಹೊಂದಿದೆ. ಇದರಲ್ಲಿ ಹನ್ನೆರಡು ಕಂಬಗಳಿದ್ದರಿಂದ ಸ್ಥಳಿಯ ಜನರು ಬಾರಾ ಟಾಂಗ (ಹನ್ನೆರಡು ಕಾಲು) ಗಳ ಮಸೀದಿ ಎನ್ನುತ್ತಾರೆ, ಇದು ನೋಡಲು ಬಹಳ ಆಕರ್ಷಕವಾಗಿದೆ ಅಲ್ಲದೆ ಸಮಾಧಿಯ ಒಳಗಡೆ ಗಚ್ಚಿನಿಂದ ಮಾಡಿದ ವಿವಿಧ ಅಲಂಕಾರಗಳು ಈ ಕಟ್ಟಡಕ್ಕೆ ಮತಷ್ಟು ಮೆರಗು ನೀಡುತ್ತದೆ.[೫೫]

೩, ಅಫಝುಲ್‌ಖಾನನ ಸಮಾಧಿ :

ಬಿಜಾಪುರದಿಂದ ವಾಯುವ್ಯ ದಿಕ್ಕಿನಲ್ಲಿ ಸುಮಾರು ೪ ಕಿ. ಮೀಗಳ ಅಂತರದಲ್ಲಿರುವ ಈ ಸ್ಮಾರಕ ಎರಡು ಮಹಡಿಯುಳ್ಳದಾಗಿದೆ. ಇವನು ಮಹಮ್ಮದ ಆದಿಲ್‌ಶಾಹ ಮತ್ತು ಎರಡನೆ ಅಲಿ ಆದಿಲ್‌ಶಾಹರ ಕಾಲದಲ್ಲಿ ಪ್ರಮುಖ ವಜೀರ (ಮಂತ್ರಿ)ನಾಗಿದ್ದನು. ತನ್ನ ಸಮಾಧಿಗಾಗಿ ಈ ಭವ್ಯ ಕಟ್ಟಡವನ್ನು ಕ್ರಿ. ಶ. ೧೬೫೯ ರಲ್ಲಿ ಕಟ್ಟಿಸಿದನೆನ್ನಲಾಗಿದೆ, ಆದರೆ ಅವನ ಮರಣಾನಂತರ ಅವನ ಶವವನ್ನು ಸಮಾಧಿ ಮಾಡಲಿಲ್ಲ. ಏಕೆಂದರೆ, ಕ್ರಿ. ಶ. ೧೬೫೯ ರಲ್ಲಿ ಶಿವಾಜಿಯ ವಿರುದ್ಧ ನಡೆದ ಪ್ರತಾಪಗಡ ಕದನದಲ್ಲಿ ಮರಣ ಹೊಂದಿದ ಅವನ ಶವವನ್ನು ಪ್ರತಾಪಗಡನಲ್ಲಿ ಹೂಳಲಾಯಿತು.[೫೬]

ಈ ಸ್ಮಾರಕದಲ್ಲಿ ಎರಡು ಕಟ್ಟಡಗಳಿವೆ, ಒಂದು ಪ್ರಾರ್ಥನಾ ಮಂದಿರ ಇನ್ನೊಂದು ಸಮಾಧಿ, ಇವು ಎರಡು ಒಂದೇ ತಳಪಾಯದಲ್ಲಿದ್ದು ಎತ್ತರವಾದ ತಳಪಾಯದ ಮೇಲೆ ಈ ಕಟ್ಟಡವನ್ನು ನಿರ್ಮಿಸಲಾಗಿದೆ. ಪ್ರಾರ್ಥನಾ ಮಂದಿರವು ಒಂದು ಮಹಡಿಯನ್ನು ಹೊಂದಿದೆ. ಈ ಮಂದಿರವು ಪಶ್ಚಿಮಕ್ಕೆ ಇದೆ ಬಹುಶಃ ಕೆಳಗಿನ ಮಹಡಿಯು ವಿಶ್ರಾಂತಿಗಾಗಿ ನಿರ್ಮಿಸಿರಬೇಕು, ಏಕೆಂದರೆ ಮೇಲಿನ ಮಹಡಿಯಲ್ಲಿ ಪಶ್ಚಿಮ ದಿಕ್ಕಿನಲ್ಲಿ

ಮೆಹ್ರಾಬ ಇದೆ. ಈ ಕಟ್ಟಡಕ್ಕೆ ಮೂರು ಕಮಾನುಗಳಿವೆ ಅಲ್ಲದೆ ಮೇಲೆ ಹತ್ತಲು ಎಡಭಾಗದಲ್ಲಿ ಮೇಟ್ಟಿಲುಗಳಿವೆ. ಮಸೀದಿಯ ಒಳಗಡೆ ಗಾರೆಯಿಂದ ಮಾಡಿದ ವಿವಿಧ ಅಲಂಕಾರ ಮತ್ತು ಕುರಾನಿನ ಶ್ಲೋಕಗಳಿವೆ. ಸ್ಮಾರಕದ ಇನ್ನೊಂದು ಭಾಗವಾದ ಸಮಾಧಿ ಕಟ್ಟಡವು ಇದು ಸಹ ಮೇಲೆ ಮಹಡಿಯನ್ನು ಹೊಂದಿದೆ. ಇದರ ಮೇಲಿನ ಗುಮ್ಮಟ್ಟವು ಪಿರಾಮಿಡ್‌ನ ಆಕಾರದಲ್ಲಿದೆ. ಸಮಾಧಿಯ ನಾಲ್ಕು ಗೋಡೆಯ ಕೊನೆಯಲ್ಲಿ ಚಿಕ್ಕ ಸ್ಥಂಭ ಗೋಪುರಗಳು ಕಟ್ಟಡದ ವೈಭವವನ್ನು ಹೆಚ್ಚಿಸಿವೆ. ಸಮಾಧಿಯ ಒಳಗಡೆಯೂ ಗಾರೆಯಿಂದ ಮಾಡಿದ ಅಲಂಕಾರವಿದೆ. ಎರಡು ಕಟ್ಟಡಗಳ ನಡುವೆ ಒಂದು ದೊಡ್ಡ ಹೌಜು ಇದೆ ಇದನ್ನು ಪ್ರಾರ್ಥನೆಗೆ ಹೋರುವ ಸಮಯದಲ್ಲಿ ಮುಖವನ್ನು ತೊಳೆಯಲು ಉಪಯೋಗಿಸುತ್ತಿದ್ದರು. ಎರಡು ಕಟ್ಟಡಗಳು ಒಂದುಕ್ಕೊಂದು ಹೊಂದಿಕೊಂಡಿವೆ.

೪. ಜಹಾಬೇಗಂ ಸಮಾಧಿ :

ಬಿಜಾಪುರ ನಗರದಿಂದ ಪೂರ್ವಕ್ಕೆ ಸುಮಾರು ೫ ಕಿ. ಮೀ ದೂರದಲ್ಲಿರು ಐನಾಪುರ ಎಂಬ ಗ್ರಾಮದ ಹತ್ತಿರ ಜಹಾಬೇಗಂಳ ಅಪೂರ್ಣ ಸಮಾಧಿ ಇದೆ. ಈ ಕಟ್ಟಡದ ನಕ್ಷೆ ಮತ್ತು ಅಳತೆಯನ್ನು ಗಮನಿಸಿದರೆ, ಬಹುಶಃ ಗೋಳಗುಮ್ಮಟದ ನಕ್ಷೆ ಮತ್ತು ಅಳತೆಯನ್ನು ಹೊಂದಿದೆ. ಈ ಸಮಾಧಿಯು ಗೋಳಗುಮ್ಮಟದ ಹಾಗೆ ನಾಲ್ಕು ಬದಿಗಳಲ್ಲಿ ಪೂರ್ಣಗೊಳ್ಳದ ಮೂರು ಮಹಡಿಗಳು ಇವೆ. ಇದರ ಒಳಗಡೆಯ ಕಟ್ಟಡ ಎತ್ತರವಾದ ಕಟ್ಟೆಯ ಮೇಲೆ ನಾಲ್ಕು ಗೋಡೆಗಳಲ್ಲಿ ಮೂರು, ಮೂರು ಕಮಾನುಗಳನ್ನು ಹೊಂದಿದೆ ನಡುವೆ ಬೇಗಂಳ ಸಮಾಧಿಯಿದೆ. ಇದು ಸಹ ಗೋಳಗುಮ್ಮಟ್ಟದ ಮಾದರಿಯಲ್ಲಿದೆ. ಬಹುಶಃ ಗೋಳಗುಮ್ಮಟದ ಹಾಗೆ ಇದರ ಮೇಲೆ ಗುಮ್ಮಟ ನಿರ್ಮಿಸುವ ರೀತಿಯಲ್ಲಿ ಇದನ್ನು ಕಟ್ಟಲಾಗಿದೆ. ಈ ಸಮಾಧಿಯು ಕಲೆ ದೃಷ್ಟಿಯಿಂದ ತುಂಬ ಮನಮೋಹಕವಾಗಿದೆ. ಈ ಕಟ್ಟಡವನ್ನು ನೋಡಿ ನಾವು ಗೋಳಗುಮ್ಮಟ ಹೇಗೆ ಕಟ್ಟಿರಬಹುದೆಂದು ತಿಳಿದುಕೊಳ್ಳಬಹುದಾಗಿದೆ. ಸಮಾಧಿಯ ಮುಂದಿರುವ ನಾಲ್ಕು ಸ್ಥಂಭ ಗೋಪುರಗಳಲ್ಲಿ ಮೇಲೆ ಹತ್ತಲು ಮೇಟಿಲುಗಳಿವೆ, ಈ ತರಹದ ಮೇಟಿಲುಗಳು ಗೋಳಗುಮ್ಮಟ್ಟದಲ್ಲಿ ನೋಡಬಹುದು.[೫೭]

ಚಿತ್ರಕಲೆಃ

ಆದಿಲ್‌ಶಾಹಿಗಳ ಕಾಲದ ಚಿತ್ರಕಲೆಯನ್ನು ಕುರಿತು ವಿದ್ವಾಂಸರಾದ ಮಾರ್ಕ ಝುಬ್ರಾಸ್ಕಿ, ಡೆಬ್ರಾಹೋ ಹಾಟನ್, ಗ್ರೇಗ್ ಮಿಚ್ಚಲ್ ಮತ್ತು ಮಾರ್ಕ ಝುಬ್ರಾಸ್ಕಿ, ಹನ್ರಿ ಕಜಿನ, ಸಾಧಿಕ ನಕ್ವಿ, ಎಂ. ಎ. ನಯೀಮ, ಎಸ್. ಕೆ. ಅರುಣಿ ಮುಂತಾದವರು ಈ ವಿಷಯದ ಕುರಿತು ಬರೆದಿದ್ದಾರೆ. ಇವರೆಲ್ಲರ ಬರವಣಿಗೆಯ ಆಧಾರದೊಂದಿಗೆ ಮತ್ತು ನಾನು ಕ್ಷೇತ್ರ ಕಾರ್ಯದ ಮೂಲಕ ಕಂಡುಕೊಂಡಂತಹ ವಿಷಯಗಳನ್ನು ವಿವರಿಸಿದ್ದೇನೆ.

ಬಿಜಾಪುರದ ಆದಿಲ್‌ಶಾಹಿ ಸುಲ್ತಾನರು ವಾಸ್ತುಶಿಲ್ಪ, ಸಂಗೀತ ಮತ್ತು ಚಿತ್ರಕಲೆಗೆ ಪ್ರೋತ್ಸಾಹ ನೀಡಿದರು. ವಾಸ್ತುಶಿಲ್ಪದಲ್ಲಿನಂತೆಯೇ ವರ್ಣಚಿತ್ರ ಕಲೆಯಲ್ಲಿಯೂ ಬಿಜಾಪುರವು ತನ್ನದೇ ವಿಶಿಷ್ಟ ಲಕ್ಷಣಗಳನ್ನು ಪ್ರದರ್ಶಿಸಿತು. ಆದಿಲ್‌ಶಾಹಿಗಳ ಮೊದಲಿನ ಸುಲ್ತಾನರು ಧಾರ್ಮಿಕ ಕಟ್ಟಡಗಳನ್ನು ಕಲಾತ್ಮಕವಾಗಿ ಕಟ್ಟಿದರೂ ಚಿತ್ರಕಲೆಗೆ ನೀಡಿದ ಪ್ರೋತ್ಸಾಹ ತಿಳಿದುಬರುವುದಿಲ್ಲ. ಇಸ್ಮಾಯಿಲ್ ಆದಿಲ್‌ಶಾಹನು ಚಿತ್ರಕಲೆಯ ಬಗ್ಗೆ ಆಸಕ್ತಿ ಹೊಂದಿದ್ದನೆಂದು ಫೇರಿಸ್ತಾ ಹೇಳುತ್ತಾನೆ. ಒಂದನೆಯ ಇಬ್ರಾಹಿಮ ಆದಿಲ್‌ಶಾಹನು ಸ್ಥಳೀಯ ಜನರಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದನು. ಇವನ ಮಗ ಒಂದನೆಯ ಅಲಿಯು ಸ್ವತಃ ಕಲಾವಿದನಾಗಿದ್ದು ಈತನ ಗ್ರಂಥ ಬಂಢಾರದಲ್ಲಿ ಹಲವಾರು ಚಿತ್ರಗಳಿದ್ದವು. ಅವನ ಗ್ರಂಥ ಬಂಡಾರದಲ್ಲಿದ್ದ ಪುಸ್ತಕಗಳಲ್ಲಿ 'ನುಜುಮ್-ಉಲ್-ಉಲುಮ್' ಎಂಬ ನಕ್ಷತ್ರಶಾಸ್ತ್ರ ಪುಸ್ತಕವೂ ಒಂದಾಗಿತ್ತು. ೧೫೭೦ರಲ್ಲಿ ರಚಿತವಾದ ಈ ಗ್ರಂಥದಲ್ಲಿ ೮೭೬ ಚಿತ್ರಗಳಿದ್ದು ಅವು ನಕ್ಷತ್ರ, ಮಂತ್ರ, ಆಯುಧಗಳು ಮತ್ತು ಪ್ರಾಣಿಗಳಿಗೆ ಸಂಬಂಧಿಸಿವೆ.[೫೮] ಮೋತಿಚಂದ್ರ ಅವರ ಈ ಚಿತ್ರಗಳು ದಖ್ಖನಿ ಚಿತ್ರಕಲಾ ಪರಂಪರೆಯಲ್ಲಿ ರಚಿಸಿದ ಮೊದಲ ಚಿತ್ರಿತಗ್ರಂಥ ಇದಾಗಿರಬಹುದು ಎಂದು ಅಭಿಪ್ರಾಯ ಪಡುತ್ತಾರೆ. ಇಲ್ಲಿಯ ಚಿತ್ರಗಳು ಅಕ್ಬರ ಕಾಲದ' ಮೊಘಲ್ ಚಿತ್ರಗಳ ಪರಿಣಾಮವಾಗಿದೆ. ದಖನಿಯದೇ ಆದ ಸ್ವತಂತ್ರ್ಯ ಶೈಲಿಯೊಂದು ಕಂಡುಬರುತ್ತದೆ ಎಂದು ಹೇಳುತ್ತಾರೆ. ಒಂದನೆಯ ಅಲಿಯ ಕಾಲದಲ್ಲಿ ಕ್ರಿ.ಶ. ೧೫೭೦ರಲ್ಲಿ ರಚಿತವಾದ ಇನ್ನೊಂದು ಗ್ರಂಥ 'ಜವಾಹರ-ಅಲ್-ಮುಸ್ಕತ್-ಇ-ಮುಹಮ್ಮದಿ' ಎಂಬುದು ಸಂಗೀತಶಾಸ್ತ್ರ ಕುರಿತು ರಚಿತವಾದ ಗ್ರಂಥವಾಗಿದೆ. ಪ್ರಸ್ತುತವಾಗಿ ಅದು ಲಂಡನ್ನಿನ ಬ್ರಿಟೀಷ್ ಗ್ರಂಥಾಲಯದಲ್ಲಿದೆ. ಇದರಲ್ಲಿ ೪೮ ಚಿತ್ರಗಳಿದ್ದು ವೀಣಾಪಾಣಿ ಸರಸ್ವತಿಯ ಚಿತ್ರದಿಂದ ಆರಂಭವಾಗಿದೆ. ಪ್ರತಿಯೊಂದು ರಾಗವನ್ನು ವಿವಿಧ ದೃಷ್ಯಗಳಿಂದ ಸಂಕೇತಗಳಿಂದ ತೋರಿಸಲಾಗಿದೆ. ಅಲಿಯ ಪತ್ನಿಯಾದ ಚಾಂದಬೀಬಿಯು ಸಹ ಚಿತ್ರಕಲಾವಿದೆಯಾಗಿದ್ದಳೆಂದೂ, ಹೂಬಳ್ಳಿಗಳ ರಚನೆಯಲ್ಲಿ ಪರಿಣಿತಳಾಗಿದ್ದಳೆಂದು ಹೇಳಾಗಿದೆ.

ಆದಿಲ್‌ಶಾಹಿ ಸುಲ್ತಾನರ ದಖ್ಖನಿ ಚಿತ್ರಕಲೆಯು ಉತ್ತುಂಗ ಮಟ್ಟಕ್ಕೆ ಮುಟ್ಟಿದ್ದು ಎರಡನೆಯ ಇಬ್ರಾಹಿಮ ಆದಿಲ್‌ಶಾಹ ಕಾಲದಲ್ಲಿ ಈತನು ಚಿತ್ರಕಲೆಗೆ ವಿಶೇಷ ಪ್ರೋತ್ಸಾಹ ನೀಡಿದನು. ಎರಡನೆಯ ಇಬ್ರಾಹಿಮ ಅರಸನ ಕಾಲದಲ್ಲಿ ಹಲವಾರು ಚಿತ್ರಿತ ಗ್ರಂಥಗಳು ರಚನೆಯಾದವು. ಸಾವಿರಾರು ಸಂಖ್ಯೆಯಲ್ಲಿ ಬಿಡಿಚಿತ್ರಗಳು ರಚನೆಯಾದವು, ಈ ಸುಲ್ತಾನನ ಕಾಲದಲ್ಲಿ ರಚಿತವಾದ ಖ್ಯಾತ ಗ್ರಂಥವೆಂದರೆ 'ಕಿತಾಬ-ಇ-ನೌರಸ' ಈ ಕಾಲದಲ್ಲಿ ಬಿಜಾಪುರ ಮತ್ತು ಮೊಘಲ ಬಾದಶಾಹರ ನಡುವೆ ಸಂಬಂಧವೇರ್ಪಟ್ಟಿದ್ದು. ದಖ್ಖನಿ ಚಿತ್ರಗಳ ಮೇಲೆ ಮೊಘಲರ ಪ್ರಾಭಾವ ಕಾಣುತ್ತೆವೆ.

"ಸಹನಸ್ತ" ಗ್ರಂಥದಲ್ಲಿ ಪರ್ಶಿಯಾದಿಂದ ಬಿಜಾಪುರಕ್ಕೆ ಕಲಾವಿದರು ಬಂದುದರ ಪ್ರಸ್ತಾಪ ಬರುತ್ತದೆ. ಬತವಾರಖಾನ ಮೊಘಲ ಬಾದಶಾಹ ಜಹಾಂಗೀರನ ಸಂಬಂಧಿಕನಾಗಿದ್ದ ಅವನು ಎರಡನೆಯ ಇಬ್ರಾಹಿಮನ ಆಸ್ಥಾನದಲ್ಲಿ ನೆಲೆಸಿದ್ದನು. ಈ ಕಾರಣದಿಂದಾಗಿ ಆ ಕಾಲದ ದಖ್ಖನಿ ಚಿತ್ರಗಳ ಮೇಲೆ ಮೊಘಲ ಹಾಗೂ ಪರ್ಶಿಯಾದ ಪ್ರಭಾವಗಳು ಕಾಣಬಹುದು.

[illegible]

[illegible]

[illegible]

[illegible]

ಎರಡನೆಯ ಇಬ್ರಾಹಿಮನ ಕಾಲದ ಹಸ್ತಪ್ರತಿಯಾದ 'ರತನ ಕಲಿಯಾ' ಇದು ಬ್ರಿಟೀಷ ವಸ್ತುಸಂಗ್ರಹಾಲಯದಲ್ಲಿದೆ. ಇದು ಕ್ರಿ.ಶ.೧೫೯೦ರಲ್ಲಿ ರಚಿಸಿರಬಹುದು. ಇದು ಬಿಜಾಪುರ ಶೈಲಿಯ ದಖ್ಖನದ ಹಸ್ತಪ್ರತಿಗಳಲ್ಲಿಯೇ ಅತ್ಯುತಮ ಚಿತ್ರಗಳ್ಳುಳ್ಳ ಹಸ್ತಪ್ರತಿಯಾಗಿದೆ. ಇವನ ಇನ್ನೊಂದು ಹಸ್ತಪ್ರತಿಯಾದ 'ನಿಮತನಾಮಾ' ಇದು ದೆಹಲಿಯ ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿದೆ. ಚಿತ್ರಗಳ ಶೈಲಿ ನೋಡಲಾಗಿ ಬಿಜಾಪುರದ ಚಿತ್ರಕಲಾ ಶೈಲಿಗೆ ಬಹಳಷ್ಟು ಹೋಲುತ್ತದೆ. ಒಂದು ಚಿಕಣಿ ಚಿತ್ರವು ಎರಡನೆಯ ಇಬ್ರಾಹಿಮನದೇ ಆಗಿದೆ. ಚಿತ್ರದ ನಿಸರ್ಗದ ಹಿನ್ನಲೆ, ಸುಲ್ತಾನ ಎದುರಿನ ಸಂಗೀತವಾದ್ಯ, ಉಡುಗೆ ಹಾಗೂ ಆಭರಣಗಳಲ್ಲಿ ಬಿಜಾಪುರ ಸುಲ್ತಾನರ ಕಾಲದ ಚಿತ್ರಕಲೆಯ ಸಾಮ್ಯತೆಯನ್ನು ಕಾಣಬಹುದು.

ಎರಡನೆಯ ಇಬ್ರಾಹಿಮ ಮತ್ತು ಮಹಮ್ಮದ ಆದಿಲ್‌ಶಾಹರ ಆಸ್ಥಾನದಲ್ಲಿ ಅನೇಕ ಜನ ಚಿತ್ರಕಾರರಿದ್ದರು. ಎರಡನೆಯ ಇಬ್ರಾಹಿಮನ ಆಪ್ತಕಲಾವಿದ ಮುಲ್ಲಾ ಫಾರೂಕ್ ಹುಸೇನ ಶಿರಾಜಿಯು ಹೆಸರಿನಲ್ಲಿರುವ ಮೂರು ಚಿತ್ರಗಳು ಜನಪದ ಶೈಲಿಯಲ್ಲಿವೆ. ಫಾರೂಕ ಹುಸೇನ ಆ ಕಾಲದ ಶ್ರೇಷ್ಟ ಕಲಾವಿದನಾಗಿದ್ದನು. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿದ್ದ ಮಹಮ್ಮದಖಾನನು, ಮಹಮ್ಮದ ಆದಿಲ್‌ಶಾಹನ ಚಿತ್ರವನ್ನು ಕ್ರಿ.ಶ. ೧೬೧೫ರಲ್ಲಿ ರಚಿಸಿದ್ದು ಅದಕ್ಕಾಗಿ ಕಲಾವಿದನಿಗೆ ಪ್ರತಿದಿನ ಅರ್ಧಹೊನ್ನ ನೀಡುವಂತೆ ಚಿತ್ರದ ಹಿಂಬದಿಯಲ್ಲಿ ಶಾಸನರೂಪದಲ್ಲಿ ಲಿಖಿತವಾಗಿದೆ. ಜಾನುಕುಲಿ, ಸುಬಾನ್ ಅಲಿ, ಮುಸಾಫರ, ಅಲಿಜಾಫರ್. ಹೈದರಅಲಿ, ಇಬ್ರಾಹಿಖಾನ, ಅಬ್ದುಲ್‌ಖಾದರ, ಕದಾಲ್ ಮಹಮ್ಮದ, ಚಾಂದಮಹಮ್ಮದ, ಮೂರ್ತುಜಾಖಾನ್ ಮುಂತಾದ ಕಲಾವಿದರು ರಚಿಸಿದ ಚಿತ್ರಗಳು ದೊರೆಯುತ್ತವೆ.

ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ರಚಿತವಾದ "ಖವ್ವರನಾಮಾ" ಹಸ್ತಪ್ರತಿಯೂ ಲಂಡನ್ನಿನ ಭಾರತದ ವಾಚನಾಲಯದಲ್ಲಿದೆ.[೫೯] ಇದನ್ನು "ರುಸ್ತುಮಿ" ರಚಿಸಿದ್ದಾನೆ. ಈ ಹಸ್ತಪ್ರತಿಯ ಚಿತ್ರಗಳು ಪರ್ಶಿಯನ್ ಮಾದರಿಯ ಮೊತಿಪ್‌ದ ಹತ್ತು ಹದಿನೇಳನೆಯ ಶತಮಾನದ ಮಧ್ಯಭಾಗದ ದಖ್ಖನಿ ಚಿತ್ರಗಳ ಕಲಾಶೈಲಿ ಹೋಲುತ್ತದೆ. ಚಿತ್ರಗಳ ಹಿನ್ನಲೆಯ ವರ್ಣಗಳು ಮಧ್ಯ-ನೀಲಿ ಅಥವಾ ಉಜ್ವಲ ವರ್ಣದ್ದಾಗಿವೆ. ಆಕೃತಿಗಳೆಲ್ಲವೂ ಕೈಚಳಕವುಳ್ಳ ಮತ್ತು ತುಂಬಾ ಚಲನವನವುಳ್ಳ ಹಾಗೂ ಮಂದವಾದ ರೇಖೆಗಳುಳ್ಳ ಮತ್ತು ಮಂದ ಬಣ್ಣಗಾರಿಕೆಯಿಂದ ಕೂಡಿದೆ.[೬೦]

ಕ್ರಿ.ಶ. ೧೬೩೨ರಲ್ಲಿ ರಚಿತವಾದ "ದಿವಾನ-ಇ-ಉರ್ಫ" ಗ್ರಂಥವು ಅತ್ಯಂತ ಚಿಕ್ಕದಾಗಿದೆ. ಈಗ ಇದು ಅಮೇರಿಕಾ ಖಾಸಗಿ ಸಂಗ್ರಹಾಲಯದಲ್ಲಿದೆ. ಅದರಲ್ಲಿ ಆರು ಚಿತ್ರಗಳಿವೆ ಮೂರು ಚಿತ್ರಗಳು ಒಂದು ಪುಟದಲ್ಲಿ ಇನ್ನುಳಿದ ಮೂರು ಕಿರುಚಿತ್ರಗಳು ಇನ್ನೊಂದು ಪುಟದಲ್ಲಿವೆ. ಮಹಮ್ಮದ ಆದಿಲ್‌ಶಾಹನು ಮತ್ತು ಸೂಫಿ ಸಂತರ ಭಾವಚಿತ್ರಗಳಿವೆ. ಇವು ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ರಚನೆಗೊಂಡಿವೆ.[೬೧]

ಮಹಮ್ಮದ ಆದಿಲ್‌ಶಾಹನ ಕಾಲದ ಚಿತ್ರಕಲೆ :

೧೬೩೬ ರಲ್ಲಿ ಅಹಮದನಗರವನ್ನು ಮೊಗಲ ಮತ್ತು ಬಿಜಾಪುರ ಇವರಲ್ಲಿ ವಿಭಜಿಸಲಾಯಿತು. ಮೊಗಲ ಸೈನ್ಯವು ಉತ್ತರ ಮತ್ತು ಮಧ್ಯ ದಖನದಲ್ಲಿ ವಾಸ್ತವ್ಯ ಹೂಡಿತು. ಇದರಿಂದಾಗಿ ಬಿಜಾಪುರ ಮತ್ತು ಗೋಲ್ಕೋಂಡದ ಮೇಲೆ ರಾಜಕೀಯ ಒತ್ತಡ ಹೆಚ್ಚಿತು. ಈ ಎರಡು ಸಾಮ್ರಾಜ್ಯವನ್ನು ನಾಶಪಡಿಸುವ ಉದ್ದೇಶವನ್ನು ಮೊಗಲರು ಹೊಂದಿದ್ದರು. ಇದಕ್ಕಾಗಿ ಮೊಗಲರು ತಮ್ಮ ಉತ್ತರದ ಸೀಮೆಯನ್ನು ಮೇಲಿಂದಮೇಲೆ ಉಲಂಘಿಸಿದರು ಮತ್ತು ಈ ಸಾಮ್ರಾಜ್ಯಗಳಿಂದ ಕಪ್ಪು ಕಾಣಿಕೆಯನ್ನು ತೆಗೆದುಕೊಳ್ಳಲಾಗುತ್ತಿತ್ತು.

೧೬೩೦ ರಲ್ಲಿ ಉತ್ತರ ಭಾರತದ ಬಹಳಷ್ಟು ಅಧಿಕಾರಿಗಳು ದಕ್ಷಿಣದಲ್ಲಿ ಬಂದು ಹೋಗುತ್ತಿದ್ದರು. ಶಹಾಜಹಾನ ಆತನ ಹೆಂಡತಿ ಮುಮತಾಜ ಮಹಲ ಅವಳ ತಂದೆ ಅಸಫಖಾನ ಇಲ್ಲಿ ಬಂದು ಹೋದರು. ಶಹಜಹಾನನ ಮಗ ಔರಂಗಜೇಬನು ೧೬೪೦ ರಲ್ಲಿ ಮತ್ತು ೧೬೫೦ ರಲ್ಲಿ ದಕ್ಷಿಣದ ರಾಜ್ಯಪಾಲನಾಗಿದ್ದನು. ಅವನು ತನ್ನ ರಾಜಧಾನಿಯನ್ನು ಔರಂಗಬಾದಕ್ಕೆ ವರ್ಗಾವಣೆ ಮಾಡಿದನು. ನಂತರ ಔರಂಗಜೇಬನು ತನ್ನ ದಿಲ್ಲಿಯನ್ನು ಬಿಟ್ಟು ದಕ್ಷಿಣಕ್ಕೆ ಬಂದನು.[೬೨]

ಶಹಜಾಹಾನನ ಮತ್ತು ಔರಂಗಜೇಬರ ಜೊತೆಗೆ ಅನೇಕ ರಜಪುತರು ದಕ್ಷಿಣಕ್ಕೆ ಬಂದರು ಅದರಲ್ಲಿ ಬಂದಿ, ಕೋಟಾ ಮತ್ತು ಬಿಕಾನೇರದ ಮಹಾರಾಜರು ಪ್ರಮುಖರು. ಕೋಟಾದ ಮಹಾರಾಜರು, ಅವರ ವಂಶಸ್ಥರು ತಮ್ಮ ಜೀವನವನ್ನು ದಕ್ಷಿಣದಲ್ಲಿ ಹದಿನೇಳನೆಯ ಶತಮಾನದ ಉತ್ತರಾರ್ಧ ಮತ್ತು ಹದಿನೆಂಟನೆ ಶತಮಾನದಲ್ಲಿ ಪೂರ್ವಾರಧಲ್ಲಿ ವಾಸ್ತವ್ಯ ಮಾಡಿದರು. ಇವರೊಂದಿಗೆ ಅವರ ಹೆಂಡಂದಿರು, ಸಂಬಂಧಿಗಳು, ಸೇವಕರು ಮತ್ತು ಚಿತ್ರಕಾರರನ್ನು ತಮ್ಮ ದೊಡ್ಡ ವಾಸಸ್ಥಾನದಲ್ಲಿ ಚಿತ್ರವನ್ನು ಬಿಡಿಸಲು ತಂದಿದ್ದರು.[೬೩]

ಮೊಗಲ ಮತ್ತು ರಜಪುತ ಆಶ್ರಯದಾತರು ಮತ್ತು ಚಿತ್ರಕಾರರು ಬಿಜಾಪುರದ ರುಚಿಯಲ್ಲಿ ಕ್ರಾಂತಿಯನ್ನುತಂದರು. ಮೊಗಲ ಕಲೆಯ ಉದ್ದೇಶ ಐತಿಹಾಸಿಕ ಘಟನೆಗಳ ಚಿತ್ರಣ, ಸಷ್ಟ ವ್ಯಕ್ತಿ ಚಿತ್ರಣ, ಹಾಗೂ ಯತಾರ್ಥವಾಗಿ ಚಿತ್ರಗಳನ್ನು ಬಿಡಿಸುವುದಾಗಿತ್ತು. ದಖನ ಚಿತ್ರಕಾರರು ಅನಾಮಿಕರಾಗಿದ್ದರು. ಉತ್ತರದ ಕಲಾಕಾರರು ತಮ್ಮ ಹೆಸರನ್ನು ಚಿತ್ರದಲ್ಲಿ ಬರೆಯುತ್ತಿದ್ದರು. ದಖನಿನ ಚಿತ್ರಕಾರರು ಅನೈಸರ್ಗಿಕ ಬಣ್ಣ ಮತ್ತು ಆಕಾರಗಳಿಂದ ಚಿತ್ರಗಳನ್ನು ಬಿಡುಸುತ್ತಿದ್ದರು. ವ್ಯಕ್ತಿ ಚಿತ್ರಣ ಮಾಡುತ್ತಿದ್ದರು. ಆದರ್ಶ ಸೌಂಧರ್ಯ ಮಹತ್ವದಾಗಿ ಮಾಡಿ ಭೌತಿಕ ಸ್ಥಿಯನ್ನು ಕಡೆಗಣಿಸುತ್ತಿದ್ದರು.

ಸುಲ್ತಾನ ಮಹಮ್ಮದ ಆದಿಲ್‌ಶಾಹನ ಕಾಲದಿಂದ ಆದರ್ಶ ಪದ್ಧತಿಯಿಂದ ಯತಾರ್ಥ ಚಿತ್ರಗಳಿಗೆ ಬದಲಾವಣೆಯಾಗ ತೊಡಗಿತ್ತು. ಮೊಗಲ ಪದ್ಧತಿಯ ಚಿತ್ರಗಳು ಗೇರೆಗಳು ಮತ್ತು ಬಣ್ಣಗಳಿಗೆ ಸಿಮಿತವಾಗಿತ್ತು. ಇದೇ ಹೆಸರುವಾಸಿಯಾಗಿತ್ತು. ಆನಂತರದ ಬಹುತೇಕದ ಎಲ್ಲಾ ಚಿತ್ರಗಳು ಅಲಂಕಾರಿಕವಾಗಿದ್ದವು. ಆದರೆ

ಮೊದಲಿನ ಮೋಹಕತೆ ಕಡಿಮೆಯಾಗಿದೆ. ಆಸರೆ ವಿಶಿಷ್ಟ ರೀತಿ, ಬರೆ ನೋಟ ಮತ್ತು ದಕ್ಷಿಣದ ಉಗ್ರಬಣ್ಣದ ಮಿತ ಬಳಕೆಯು ಪ್ರಾಮುಖ್ಯತೆಯನ್ನು ಹೆಚ್ಚಿಸಿದವು. ಅದು ಮೊಗಲ ಚಿತ್ರದಲ್ಲಿ ಕಡಿಮೆಯಾಯಿತು.

ಭಿನ್ನಿ ಸಂಗ್ರಹದ ಒಂದು ಚಿತ್ರದಲ್ಲಿ ಇಬ್ರಾಹಿಮ ಆದಿಲ್‌ಶಾಹನು ಅರಮನೆ ಕಿಟಕಿಯಲ್ಲಿ ತನ್ನ ಮಂತ್ರಿಯ ಜೊತೆ ದರ್ಶನ ಕೊಡುತ್ತಿದ್ದಾನೆ. ಈ ಚಿತ್ರ ಇಬ್ರಾಹಿಮನ ಕೊನೆಯ ಕಾಲದಲ್ಲಿ ತನ್ನ ಮಗನಿಗಾಗಿ ತೆಗೆಸಿರಬಹುದು. ಈ ಚಿತ್ರಗಳು, ಬಿಜಾಪುರದ ಕಲಾವಿಧರು ಮೊಗಲ ದಬಾರದಲ್ಲಿಯು ಅಭಿರುಚಿಗಳ ಬಗ್ಗೆ ತಿಳಿದುಕೊಂಡಿದ್ದನ್ನು ಸೂಚಿಸುತ್ತದೆ. ರಾಜಕೀಯ ಮತ್ತು ಸೈನ್ಯದ ಸಂಬಂಧಗಳು ದಖನಿ ರಾಜರಿಗೆ, ಮೊಗಲ ಚಿತ್ರಗಳನ್ನು ಸಂಗ್ರಹಿಸುವ ಅಥವಾ ಮೊಗಲ ಕಲಾವಿದರನ್ನು ಬಳಸುವ ಸುಸಂಧಿ ಸಿಗುತ್ತಿತ್ತೊ ಏನೋ? ಆದರೆ ಯಾವುದೇ ಚಿತ್ರಗಳ ಮೇಲೆ ದಕ್ಷಿಣದ ಗುರುತುಯಿಲ್ಲ ಮತ್ತು ಯಾವುದೇ ಚಿತ್ರಕಾರನು ಮೊಗಲರ ಬಳಿ ಕೆಲಸಕ್ಕಿದ್ದನೆಂಬ ಪುರಾವೆಯಿಲ್ಲ.[೬೪]

ಮಹಮ್ಮದ ಆದಿಲ್‌ಶಾಹನ ಕಾಲದ ಅರಂಭದಲ್ಲಿ ಒಬ್ಬ ಮೊಗಲ ಕಲಾವಿದನು ಬಿಜಾಪುರದಲ್ಲಿದ್ದ ಎಂದು ಹೇಳಬಹುದು. ಕೋವರಕಿನ ಸಂಗ್ರಹದ ಮಹಮ್ಮದನ ಯುವಕನಾಗಿದ್ದಾಗಿನ ಚಿತ್ರವನ್ನು ಇತರೆ ಮೂರು ಚಿತ್ರಗಳೊಂದಿಗೆ ಹೋಲಿಸಿದಾಗ ಈ ಮಾತು ಸಿದ್ಧವಾಗುತ್ತದೆ. ಮನೂಸಿ ಚಿತ್ರ ಸಂಗ್ರಹದ " ದರ್ಶನ "ದ ಚಿತ್ರ ಮತ್ತು ಉರ್ಫಿ ದಿವಾನ ಚಿತ್ರ (೧೬೩೬) ಈ ಮೂರು ಚಿತ್ರಗಳಲ್ಲಿ ಸುಲ್ತಾನ ಉದ್ದನೆಯ ಮೂಗು, ಗಟ್ಟಿ ಮುಚ್ಚಿದ ತುಟಿಗಳು ಮತ್ತು ತಿಳುವಾದ ದಾಡಿ ಹೊಂದಿದ್ದಾನೆ. ಪೆಟಾ ಶಹಜಾಹನ ಪದ್ಧತಿಯಲ್ಲಿದೆ.

ಸುಲ್ತಾನನ ಚಿತ್ರವನ್ನು ಮೊಗಲರಲ್ಲಿ ಕಲಿತ ಕಲಾವಿದನೆ ಬಿಡಿಸಿರಬೇಕು ಸುಮಾರು ೧೬೩೫ ರಲ್ಲಿ ಇರಬಹುದು. ಚಿತ್ರಕಾರನು ತೆಗೆದ ಶಹಜಾಹಾನನ ವ್ಯಕ್ತಿ ಚಿತ್ರವನ್ನು ಸ್ವತಃ ಶಹಜಾಹಾನನೇ ತನ್ನ ಒಳ್ಳೇಯ ಚಿತ್ರವೆಂದು ಹೊಗಳಿದ್ದಾನೆ. ಇದು ವಿಕ್ಟೋರಿಯಾ ಮತ್ತು ಅಲ್ಬರ್ಟ ಸಂಗ್ರಹಾಲಯದಲ್ಲಿದೆ. ಈ ಚಿತ್ರವು ಬಹಳಷ್ಟು ಸಾಮ್ಯತೆ ಹೊಂದಿದೆ. ಸುಲ್ತಾನನ ಪೇಟಾ, ಕತ್ತಿ ಮತ್ತು ಸೊಂಟಪಟ್ಟಿ, ಶರೀರದ ಭಂಗಿ ಇವೆಲ್ಲವು ಒಂದೇ ತರಹದಾಗಿದೆ. ಮುಖವು ಸಹ ಹೊಲುತ್ತದೆ. ಶಹಜಾಹಾನನ ಚಿತ್ರಕ್ಕಾಗಿ ಬಳಸಿದ ತಂತ್ರವನ್ನು ಬಿಜಾಪುರದಲ್ಲಿ ಆದಿಲ್‌ಶಾಹಿ ಚಿತ್ರಕ್ಕಾಗಿ ನಕಲು ಮಾಡಲಾಗಿದೆ.[೬೫]

ಈ ಕೃತಿ ಚೌರ್ಯವು ಮೊಗಲ ಕಲಾವಿದರ ಸ್ಥಳಾಂತರದಿಂದ ಆಗಿರುವ ಸಾಧ್ಯತೆಗಳಿವೆ. ಕೋವರ್ಕಿ ವ್ಯಕ್ತಿ ಚಿತ್ರದ ಕಲಾವಿದರು ಅದನ್ನು ಬಿಡಿಸುವ ಆರಂಭದಲ್ಲಿ ಬಂದಿರಬಹುದು. ಆರಂಭದಲ್ಲಿ ದಖನಿ ಪದ್ಧತಿಯನ್ನು ಕಡಿಮೆ ಪ್ರಮಾಣದಲ್ಲಿ ಬಳಸಲಾಗುತ್ತಿತ್ತು. ಆದರೆ ಕ್ರಮೇಣ ಸ್ಥಾನಿಕ ಪದ್ಧತಿಗಳನ್ನು ಅನುಸರಿಸಿದರು. ೧೬೫೧ರ ಜೈಪುರ ದರ್ಬಾರ ಚಿತ್ರದಲ್ಲಿ ಬಣ್ಣಗಳು ಅತೀ ತೀಕ್ಷ್ಣವಾಗಿದ್ದವು.

ಕೆವೊರಕಿನ ವ್ಯಕ್ತಿ ಚಿತ್ರದಲ್ಲಿ ಸುಲ್ತಾನನು ಮೊಗಲರಂತೆ, ಚಿತ್ರ ಬಣ್ಣದಲ್ಲಿ ದಕ್ಷಿಣದ ಮಂಕು ಬಣ್ಣ ಮತ್ತ ಮೇಲ್ಮೈ ಪ್ರಖರವಾಗಿದೆ. ಮಹಮ್ಮದನು ನೇರಳೆ ಮೈದಾನದಲ್ಲಿ ನಿಂತಿದ್ದಾನೆ, ಹೊಳಪುಳ್ಳ ಬೆಳ್ಳಿ ಬಣ್ಣದ ನಿಲುವಂಗಿ ಮತ್ತು ಹಳದಿ ಬಣ್ಣದ ಶಾಲನ್ನು ಹಾಕಿಕೊಂಡಿದ್ದಾನೆ. ನಕ್ಷತ್ರದಂತಹ ಹೂಗಳು ಅವನ ಕಾಲಿನ

ಮೇಲೆ ಬಿದ್ದಿವೆ, ಗಿಡದ ಮೇಲೆ ಪಕ್ಷಿಗಳನ್ನು ದಖನಿ ಪದ್ದತಿಯಲ್ಲಿ ಹಳದಿ, ಕೆಂಪು ಮತ್ತು ಹಸಿರು ಬಣ್ಣದಲ್ಲಿವೆ. ಈ ಎಲ್ಲಾ ವಿವರಣೆ ಮತ್ತು ನೈಸರ್ಗಿಕ ಮೇಲ್ಮೈಗಳು ಬೊಡೊಲಿಯನ್ ಕಲಾವಿದರ ಲಕ್ಷಣವಾಗಿದೆ.

ಈ ಚಿತ್ರವನ್ನು ಬಹುಶಃ ಇಬ್ಬರು ಕಲಾವಿದರು ಚಿತ್ರಿಸಿರಬಹುದು. ಆ ಕಲಾವಿದರ ಅಸಮತೊಲನವನ್ನು ಕಾಣಬಹುದು. ಮೊಗಲ ಕಲಾವಿದನು ಸುಲ್ತಾನನ ಮುಖ ಮತ್ತು ಶರೀರವನ್ನು ಚಿತ್ರಿಸಿದರೆ, ಬಡೋಲಿಯನ ಚಿತ್ರಕಾರನು ಅವನ ಬಟ್ಟೆ ಮತ್ತು ಮೇಲ್ಮೈಯನ್ನು ಚಿತ್ರಿಸಿದ್ದಾನೆ. ಈ ಚಿತ್ರಕ್ಕೆ ಗಾಢ ಬಣ್ಣಗಳನ್ನು ಮತ್ತು ನಿಗೂಢತೆಯನ್ನು ಕೊಡುತ್ತದೆ. ಬಹಶಃ ಇದರಲ್ಲಿ ಕೆಲವು ಸಂಗತಿಗಳನ್ನು ಮುಚ್ಚಿಡಲಾಗಿದೆ. ಇಲ್ಲಿ ಸುಲ್ತಾನನು ಒಂದು ಗಿಣಿಯ ಮಾತನ್ನು ಕೇಳುತ್ತಿದ್ದಾನೆ. ಒಂದು ಶಂಕವು ಅವನ ಕಾಲ ಹತ್ತಿರ ಇದೆ, ಹತ್ತಿರವಿದ್ದ ಕಂಬದ ಮೇಲೆ ಒಂದು ತಟ್ಟೆ ಒಂದು ಪಿಂಗಾಣಿ ಲೋಟ ಮತ್ತು ಕೆಂಪು ಸರಾಯಿ ತುಂಬಿದ ಸೀಸೆಯಿದೆ. ಈ ಎಲ್ಲಾ ವಸ್ತುಗಳನ್ನು ಒಂದು ವಿಶಿಷ್ಟವಾಗಿ ಅರ್ಥೈಸಲು ಇಡಲಾಗಿದೆ.[೬೬]

ಮೊಗಲ ಪ್ರಭಾವವು ಬಿಜಾಪುರದ ಕಲಾವಿದರ ಮೇಲೆ ನಿಧಾನವಾಗಿ ಆವರಿಸತೊಡಗಿತ್ತು. ಇದನ್ನು ಗಮನಿಸುವುದು ಮಹಮ್ಮದ ಆದಿಲ್‌ಶಾಹನ ವ್ಯಕ್ತಿ ಚಿತ್ರ ಜೈಪುರದ ಸಿಟಿ ಪ್ಯಾಲೆಸದ ಸಂಗ್ರಹಾಲಯದಲ್ಲಿದೆ. ಇದು ಒಬ್ಬ ಕಲಾವಿದನ ಆರಂಭದ ಕೃತಿಯನಿಸುತ್ತದೆ. ನಾಲ್ಕು ಚಿತ್ರಗಳು ಕೆಲವು ಲೇಖನಗಳನ್ನು ಹೊಂದಿದೆ. ಪರ್ಶಿಯನ ಭಾಷೆಯಲ್ಲಿ ಬರೆದ ಒಂದು ವ್ಯಾಖ್ಯೆ ಬಲಗಡೆಯ ಮೂಲೆಯಲ್ಲಿದೆ. ಅದು ಈ ಕೆಲಸ ಮಹಮ್ಮದಖಾನನ ಮಗ ಮೀಯಾ ಚಾಂದ ಎಂದು ಹೇಳುತ್ತದೆ. ಇಲ್ಲಿ ಸುಲ್ತಾನನ ವಸ್ತುಗಳು ಮತ್ತು ಶೀವಿ ಮತ್ತು ವಸ್ತುಗಳು ಕೆವೊರ್ಕಿಯನ್ ಚಿತ್ರದಂತೆ ಇವೆ. ಇದು ಮೊಗಲ ಕಲಾವಿದನು ತೆಗೆದಂತಿದೆ ಇದರ ಜೊತೆಗೆ ದಕ್ಷಿಣದ ಭೂಪೃಷ್ಟ ಈ ಕಲಾವಿದನ ಶೋಧವಾಗಿದೆ.

ಈ ಕಲಾವಿದನ ದರ್ಬಾರ ಚಿತ್ರಣ ಇಲ್ಲಿ ಮಹಮ್ಮದ ಆದಿಲ್‌ಶಾಹ ಮತ್ತು ಆತನ ಆಸ್ಥಾನಿಕರು ಇದು ಸಹ ಜೈಪುರ ಸಂಗ್ರಹಾಲಯದಲ್ಲಿದೆ. ಇದು ಆತನ ಒಂದು ಯಶಸ್ವಿ ಕಲಾ ಕೃತಿಯಾಗಿದೆ. ಈ ಚಿತ್ರದಲ್ಲಿಯು ಮೊಗಲ ಅಭಿರುಚಿ ತೀವ್ರವಾಗಿದೆ. ವಿಶೇಷವಾಗಿ ಮುಖ ಚಿತ್ರಣದಲ್ಲಿ ಗಾಢವಾದ ಕಂದು ಬಣ್ಣ ಕಿತ್ತಾಳೆ ಬಣ್ಣ ಪ್ರಖರ ನೀಲಿ ಬಣ್ಣ ಮತ್ತು ಹಸಿರು ಬಣ್ಣ ಇವುಗಳು ಮೊಗಲರ ಚಿತ್ರಗಳಲ್ಲಿಲ್ಲ. ಸುಲ್ತಾನನ ಒಂದು ಶೀವಿ ಇದು ದಕ್ಷಿಣ ಭಾರತದಲ್ಲಿ ಒಗ್ಗುವಂತಹ ಒಂದು ಭಂಗಿ.[೬೭]

ಮಹಮ್ಮದಖಾನನು ವಕ್ರರೇಖೆಗಳನ್ನು ಹೆಚ್ಚು ಬಳಿಸಿದನು, ಕಣ್ಣುಗಳು ಬಾದಾಮದ ಆಕಾರದಲ್ಲಿ, ಪೇಟಾಗಳು ಅಂಡಾಕೃತಿಯಲ್ಲಿ ಶಾಲುಗಳು ಕೊರಳಿನಲ್ಲಿ ಸುತ್ತಿಕೊಂಡಿದ್ದು ಇವೆಲ್ಲ ಆತನ ವಿಶಿಷ್ಟ ಲಕ್ಷಣಗಳಾಗಿವೆ. ಮುಖಗಳು ಒಂದು ಚುಯಲ್ಲಿ ಏಕ ಮುಖವಾಗಿದ್ದು ಅವನು ಬಂಗಾರದ ಆಭರಣಗಳನ್ನು ಚಿತ್ರಿಸುವುದು ಆತನ ಹವ್ಯಾಸವಾಗಿತ್ತು.

ಚಿತ್ರಕಲೆಯು ಅತಿ ಮಹತ್ವವಾಗಿದ್ದು, ಇದು ದಖನಿ ಶಾಲೆಗಳ ವಿವರಣೆಗೆ ಸಹಾಯವಾಗುತ್ತದೆ. ಈ ಚಿತ್ರಗಳು ಕಲಾವಿದರ ಬಗ್ಗೆ ಮಹತ್ವದ ಸುಳಿವುಕೊಟ್ಟು ಇದರಿಂದ ಇಂಡೋ–ಮುಸ್ಲಿಂ ಸಂಘದ ಬಗ್ಗೆ

[illegible]

[illegible]

[illegible]

[illegible]

[illegible]

[illegible]

ತಿಳಿಸುತ್ತದೆ. ಆಸ್ಥಾನಿಕನು ಒಂದು ಫರ್ಮಾನ ಪತ್ರವನ್ನು ಓದುತ್ತಿದ್ದಾನೆ. ಈ ಪತ್ರವು ಚಿತ್ರಕಾರನ ಹೆಸರಿನ ಕಡೆ ನಿರ್ದೇಸಿಸುತ್ತದೆ. ಮಹಮ್ಮದಖಾನ ಮೀಯಾ ಚಾಂದನ ಮಗ. ಈ ಒಂದು ಠೀವಿ ಆ ಚಿತ್ರದ ಮಹತ್ವವನ್ನು ತಿಳಿಸುತ್ತದೆ. ಒಂದು ವೇಳೆ ಈ ಪತ್ರವನ್ನು ಓದುವನು ಸ್ವತಃ ಮಹಮ್ಮದಖಾನವಿದ್ದರೆ, ಆತನ ಒಡವೆಗಳು ಮತ್ತು ವಸ್ತ್ರಗಳು ಆತನ ಆಸ್ಥಾನದ ಸ್ಥಾನದ ಬಗ್ಗೆ ಅಂದರೆ ಅವನು ಇತರ ದರ್ಬಾರಿಯರಂತೆ ಉಚ್ಚ ಸ್ಥಾನವನ್ನು ಪಡೆದಿದ್ದನ್ನು.

ಈ ಒಂದು ಚಿತ್ರದಲ್ಲಿಯ ಬರವಣಿಗೆಯಂತೆ ಈ ಕಲಾವಿದನ ದಿನದ ಆದಾಯ ಅರ್ಧ ಹೊನ್ನ ಎರಡನೆಯ ಫರ್ಶಿಯನ ಬರವಣಿಗೆ ಸುಲ್ತಾನನ ಸಿಂಹಾಸನದ ಝಾಲರನಲ್ಲಿ ಅಸ್ಪಷ್ಟವಾಗಿದೆ. ಇಲ್ಲಿ ಫರ್ಶಿಯನ ಶಬ್ದ " ಫರ್ಜಂಥ" ಎಂದು ಬಳಸಲಾಗಿದೆ ಅರೆಬಿಕ 'ಇಬ್ನ' ಬದಲಾಗಿ ಬರೆಯಲಾಗಿದೆ.

ಬಿಜಾಪುರ ವ್ಯಕ್ತಿ ಚಿತ್ರಗಳಲ್ಲಿ ಬರವಣಿಗೆ ಅಪರೂಪವಾಗಿದರಿಂದ ಚಿತ್ರದಲ್ಲಿಯ ವ್ಯಕ್ತಿಗಳನ್ನು ಗುರುತಿಸುವುದು ಕಷ್ಟ. ಈ ಚಿತ್ರದಲ್ಲಿ ಕಲಾವಿದನ ಹಿಂದೆ ನಿಂತವನು ಸೈಯದ ನೂರುಲ್ಲಾಹ ಉರ್ಫಿ ದಿವಾನ ಚಿತ್ರದಲ್ಲೂ ಸುಲ್ತಾನನ ಎದುರಿಗೆ ಇವನೇ ಇದ್ದಾನೆ, ಈ ಚಿತ್ರ ೧೬೩೬ದ್ದು ಈ ಚಿತ್ರವು ಸೈಯದನ ಆದೇಶದ ಮೇರೆಗೆ ತೆಗೆದಿದ್ದು ಇದನ್ನು ಸುಲ್ತಾನನಿಗೆ ಕೊಡಲು ಚಿತ್ರಿಸಲಾಯಿತು. ಆಫ್ರಿಕನ್ ಗಟ್ಟಿಗ ಸುಲ್ತಾನನ ಎದುರು ಬಗ್ಗಿದ ವ್ಯಕ್ತಿ ವಜೀರ ಇಖ್ಲಾಸಖಾನ. ಅವನು ತನ್ನ ರಾಜ್ಯ ಮತ್ತು ರಾಜನನ್ನು ನಿಯಂತ್ರಿಸುತ್ತಿದ್ದನು. ಇತರ ವ್ಯಕ್ತಿಗಳನ್ನು ಗುರುತಿಸಲು ಸಾಧ್ಯವಿಲ್ಲ ಮತ್ತೊಂದು ಇಖ್ಲಾಸಖಾನನ ವ್ಯಕ್ತಿ ಚಿತ್ರ ಬಿನ್ನಿ ಸಂಗ್ರಹಾಲಯದಲ್ಲಿದೆ. ಗುಲಾಬಿ ಮತ್ತು ಹಳದಿ ದಿಂಬಿನ ಮೇಲೆ ಕುಳಿತು, ಹೇಗಲ ಮೇಲೆ ಶಾಲವನ್ನು ಹಾಕಿ ಪತ್ರವನ್ನು ಓದುತ್ತಿರುವುದು. ಆದರೆ ಪತ್ರದಲ್ಲಿ ಬರದಿದ್ದು ಓದಲಾಗದು, ಶಾಲಿನ ಸುತ್ತು, ತಲೆಯ ಮೇಲಿನ ಪೇಟಾ, ವಸ್ತ್ರಗಳು ಎಲ್ಲವು ಮಹಮ್ಮದಖಾನನ ವಕ್ರತೆಯ ಇಷ್ಟವನ್ನು ತೋರಿಸುತ್ತದೆ. ಜೈಪುರ ಸಿಂಹಾಸನದ ಚಿತ್ರದಲ್ಲಿ ಈ ಆಫ್ರಿಕನನ ದೇಹ ಸುಲ್ತಾನನ ಪ್ರತಿರೂಪವಾಗಿದೆ. ಬಲಗೈ ಕೆಳಗಿನ ದಿಂಬಿನ ಮೇಲಿನ ಬರವಣಿಗೆ ಆದಿಲ್‌ಶಾಹನ ಸಿಂಹಾಸನದ ಕೆಳಗೂ ಅದೇ ರೀತಿ ಇದೆ.

ಇಂಡಿಯನ್ ಆಫೀಸ ಲೈಬ್ರರಿಯಲ್ಲಿಯ ಇಖ್ಲಾಸಖಾನನ ಚಿತ್ರದಲ್ಲಿ ಅವನು ಕೈಯಲ್ಲಿ ಅಲಂಕಾರದ ಕಠಾರಿಯನ್ನು ಚಿತ್ರಿಸಲಾಗಿದೆ. ಈ ಭಂಗಿ ಜೈಪುರ ಚಿತ್ರದಂತಿದೆ. ಆ ಚಿತ್ರದಲ್ಲಿ ಇವನು ಬಲಗಡೆ ಅತೀ ತೀಕ್ಷಣವಾಗಿ ನೋಡುತ್ತಿರುವುದು, ಬಹುಶಃ ಮಹಮ್ಮದ ಆದಿಲ್‌ಶಾಹನ ವ್ಯಕ್ತಿ ಚಿತ್ರದ ಕಡೆ ಇರಬಹುದು. ಈ ಚಿತ್ರ ಬ್ರಿಟಿಷ ಸಂಗ್ರಹಾಲಯದಲ್ಲಿದೆ. ಇದರ ಕಲಾವಿದ ಮಹಮ್ಮದಖಾನನೇ ಇರಬೇಕು. ಈ ಚಿತ್ರದಲ್ಲಿ ಮಂತ್ರಿ ಇಚ್ಛಾಶಕ್ತಿಯನ್ನು ಅವನ ಶರೀರ ಮತ್ತು ನೋಟದಲ್ಲಿ ತೋರಿಸಿದ್ದಾನೆ. ಅದೇ ರೀತಿ ಸುಲ್ತಾನನ ಸಭ್ಯತೆಯನ್ನು ಹೂವಿನ ವಾಸನೆ ನೋಡುತ್ತಾ ಕೈಯಲ್ಲಿ ಮಾವಿನ ಹಣ್ಣನ್ನು ಹಿಡದಿದ್ದನ್ನೇ ಚಿತ್ರಿಸಿದ್ದಾನೆ. ಮುಖದ ಮೇಲೆ ಶಾಂತ ಭಾವವನ್ನು ಹೊಂದಿದ್ದಾನೆ.[೬೮]

ಮಹಮ್ಮದ ಆದಿಲ್‌ಶಾಹನು ಅರಮನೆಯ ಕಿಟಕಿಯಲ್ಲಿ ನಿಂತು ದರ್ಶನ ಕೊಡುವ ಚಿತ್ರವನ್ನು ಇಂಡಿಯನ್ ಆಫೀಸ ಲೈಬ್ರರಿಯಲ್ಲಿ ನೋಡಬಹುದು. ಚಿತ್ರದ ಹಿಂದೆ ಮುಂದೆ ಪರ್ಶಿಯನದಲ್ಲಿ ಸುಲ್ತಾನನ ಹೆಸರು ಬರೆಯಲಾಗಿದೆ. ಇಲ್ಲಿ ಬಿನ್ನಿಯ ದರ್ಶನ ಚಿತ್ರವನ್ನು ನೆನಪಿಸಬಹುದು. ಎರಡೂ ಚಿತ್ರಗಳು ಸಮಾನವಾಗಿವೆ. ಕಿಟಕಿಯ ಮೇಲಿನ ಪರದೆ ಜೊತ್ತಾಡುತ್ತಿವೆ, ರಾಜನ ಜೊತೆಗಿದ್ದವನು ಸೈಯದ ನೂರುಲ್ಲಾಹ ಆದರೆ ಈ ನೂರುಲ್ಲಾಹ ಬೇರೆ ಈ ಚಿತ್ರವನ್ನು ಬಿಡಿಸಿದವನು ಮಹಮ್ಮದಖಾನ ಇರಬೇಕು.

ಮಹಮ್ಮದ ಆದಿಲ್‌ಶಾಹ ಮತ್ತು ಇಖ್ಲಾಸಖಾನನ ಆನೆಯ ಮೇಲೆ ಹೋಗುವ ಚಿತ್ರವಿದೆ. ಈ ಚಿತ್ರದಲ್ಲಿ ಆನೆಯ ಶರೀರವನ್ನು ಹರಿಯುವ ರೇಖೆಗಳಿಂದ ತೆಗೆಯಲಾಗಿದ್ದು, ಹಿನ್ನಲೆಯಲ್ಲಿ ನೀಲಿ ಬಣ್ಣವಿದೆ. ಇಖ್ಲಾಸಖಾನನು ಕಂದು ಬಣ್ಣದ ಉಡುಪದಲ್ಲಿದ್ದರೆ, ಸುಲ್ತಾನನು ಬಂಗಾರದ ಬಣ್ಣದ ವಸ್ತ್ರದಲ್ಲಿದ್ದಾನೆ. ಈ ಚಿತ್ರವನ್ನು ತೆಗೆದವರು ಹೈದರ ಅಲಿ ಮತ್ತು ಇಬ್ರಾಹಿಮಖಾನ ಮೊಗಲರ ಆಸ್ಥಾನದಲ್ಲಿ ಕೆಲವರು ರೇಖಾ ಚಿತ್ರಗಳನ್ನು ಬಿಡುಸುವದರಲ್ಲಿ ಪರಣಿತರಿದ್ದರೆ, ಕೆಲವರು ಚಿತ್ರಕ್ಕೆ ಬಣ್ಣವನ್ನು ತುಂಬುತ್ತಿದ್ದರು. ಈ ಬರವಣಿಗೆಯು ಶ್ರಮ ವಿಭಜನೆಯ ಬಗ್ಗೆ ಮಾಹಿತಿ ನೀಡುತ್ತದೆ. ಆದರೆ ಯಾವ ಕೆಲಸ ಯಾರು ಮಾಡಿದ್ದಾರೆ? ಎಂಬುದು ತಿಳಿಯುವುದಿಲ್ಲ. ಸುಲ್ತಾನನ ಮೊಮ್ಮಗ ಸಿಕಂದರನ ಚಿತ್ರವನ್ನು ಸಹ ಎರಡು ಕಲಾವಿದರು ತೆಗೆದಿದ್ದಾರೆ. ಅದರಲ್ಲಿ ಒಬ್ಬ ಇಬ್ರಾಹಿಮ ನಕ್ಷ್ಯ ಪರ್ಶಿಯದಲ್ಲಿ ನಕ್ಷ್ಯ ಎಂದರೆ, ಚಿತ್ರಕಾರ, ರೇಖಾಕಾರ ಆದರೆ ಇದರಿಂದ ಯಾವ ಕಲಾವಿದೆ ಯಾವ ಕೆಲಸ ಮಾಡಿದನೆಂಬುದಕ್ಕೆ ಯಾವುದೇ ಪುರಾವೆ ಇಲ್ಲ.

ಮಹಮ್ಮದ ಆದಿಲ್‌ಶಾಹನ ಕಾಲದ ಅತಿ ಸಂವೇದನಶೀಲ ಕಲಾಕೃತಿಯಂದರೆ, ಒಂದು ದೊಡ್ಡ ಚಿತ್ರ ಕೃತಿ ಬಣ್ಣ ಮತ್ತು ಬಂಗಾರದಿಂದ ಅಲಂಕರಿಸಿದೆ. ಇದರಲ್ಲಿ ಬಿಜಾಪುರದ ದರ್ಬಾರದ ದೃಶ್ಯವಿದೆ. ಸುಲ್ತಾನನು ಧಾರ್ಮಿಕ ವಿಧಿಯನ್ನು ಒಂದು ವಿಶಾಲ ಕಂಬಗಳುಳ್ಳ ಕೋಣೆಯಲ್ಲಿ ನೇರವೇರಿಸುತ್ತಿದ್ದಾನೆ. ಎದುರಿಗೆ ಹಾರಹಾಕಿದ ಪವಿತ್ರ ಸ್ಥಳವಿದೆ. ಅದರ ಮೇಲೆ ಬಂಗಾರದ ಪೇಟ್ಟಿಗೆ ಇದೆ. ಪೇಟ್ಟಿಗೆಯ ಮೇಲೆ ಅಲ್ಲಾಹ ಮತ್ತು ಮೊಹಮ್ಮದ ಎಂದು ಬರೆಯಲಾಗಿದೆ. ನಲವತ್ತೆರಡು ಆಸ್ಥಾನಿಕರು ಮತ್ತು ಧಾರ್ಮಿಕ ಗುರುಗಳು ಸುಲ್ತಾನನ ಸುತ್ತಲೂ ನಿಂತಿದ್ದಾರೆ. ಅದರಲ್ಲಿಯೈ ಬಹಳಷ್ಟು ಜನ ಕೈಗಳನ್ನೆರಡು ಮೇಲ್ಚಾಚಿ ಪ್ರಾರ್ಥಿಸುತ್ತಿದ್ದಾರೆ. ಆ ಬಂಗಾರ ಪೇಟ್ಟಿಗೆ ಬಹುಶಃ ಪೈಗಂಬರರ ಗಡ್ಡದ ಕೂದಲು ಇಡುವ ಸಲುವಾಗಿರಬೇಕು. ಈ ಒಂದು ಧಾರ್ಮಿಕ ವಿಧಿ ಆ ಕೂದಲು ನೋಡುವ ಸಮಯದಲ್ಲಿರಬಹುದು. ಈ ಚಿತ್ರವನ್ನು ಅಬ್ದುಲ್ ಕರೀಮ ಎಂಬುವನು ಚಿತ್ರಿಸಿದ್ದಾನೆ.[೬೯]

ವರ್ಣಚಿತ್ರಗಳು :

ಆದಿಲ್‌ಶಾಹಿ ಸುಲ್ತಾನರು ಚಿತ್ರಕಲೆಯಲ್ಲಿ ಅಭಿರುಚಿ ಹೊಂದಿದವರಾಗಿದ್ದರು, ಇವರ ಕಾಲದಲ್ಲಿ ಮೇಲೆ ತಿಳಿಸಿದ ಹಾಗೆ ಅನೇಕ ವ್ಯಕ್ತಿಚಿತ್ರಗಳು ನೋಡಬಹುದಾಗಿದೆ. ಇದರ ಜೊತೆಯಲ್ಲಿ ಅವರ ಅನೇಕ ಕಟ್ಟಡಗಳಲ್ಲಿಯೂ ಸಹ ವಿವಿಧ ತರಹದ ಚಿತ್ರಗಳನ್ನು ಕಾಣಬಹುದಾಗಿದೆ. ಮಹಮ್ಮದ ಆದಿಲ್‌ಶಾಹನು

ಕಟ್ಟಿಸಿದ ಆಸಾರ ಮಹಲಿನಲ್ಲಿ ಅನೇಕ ವರ್ಣಚಿತ್ರಗಳು ಇವೆ. ಇಲ್ಲಿರುವ ಎರಡು ಕೋಣೆಗಳಲ್ಲಿ ವರ್ಣ ಚಿತ್ರಗಳಿವೆ, ಗೋಡೆಯ ತುಂಬ ಚಿತ್ರಗಳನ್ನು ಬಿಡಿಸಲಾಗಿದೆಯಲ್ಲದೆ, ಜಂತಿಗಳನ್ನು ಕೂಡ ಚಿತ್ರಗಳಿಂದ ಅಲಂಕರಿಸಲಾಗಿದೆ. ಈ ಎರಡು ಕೋಣೆಗಳಲ್ಲಿರುವ ವರ್ಣ ಚಿತ್ರಗಳು ಶೈಲಿಗಳಿಂದ ಭಿನ್ನವಾಗಿದೆ. ದುರದೃಷ್ಟವಶಾತ ಅವು ತುಂಬಾ ಹಾಳಾಗಿದೆ. ಆದುದ್ದರಿಂದ ಇಲ್ಲಿರುವ ವಸ್ತು ವಿಷಯಗಳನ್ನು ತಿಳಿದುಕೊಳ್ಳುವುದು ಸ್ವಲ್ಪ ಪ್ರಮಾಣದಲ್ಲಿ ಕಷ್ಟವೇ ಎನ್ನಬಹುದು. ಈ ವರ್ಣ ಚಿತ್ರಗಳಲ್ಲಿ ಪಾಶ್ಚಿಮಾತ್ಯ ಪ್ರಭಾವವನ್ನು ಕಾಣಬಹುದು. ಉದಾಹರಣೆಗೆ ಅಲ್ಲಿರುವ ದ್ರಾಕ್ಷಾರಸದ ಬಟ್ಟಲುಗಳು, ಆದುದ್ದರಿಂದ ಇವುಗಳನ್ನು ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಯುರೋಪಿಯನ ಕಲಾವಿದರು ಕೆಲಸ ಮಾಡುತ್ತಿದ್ದರೆಂದು ಕಾಣುತ್ತದೆ. ಅವರಿಂದಲೇ ಈ ವರ್ಣಚಿತ್ರಗಳು ರಚಿತವಾಗಿರಬಹುದು.

ಈ ವರ್ಣಚಿತ್ರಗಳನ್ನು ತಾಂತ್ರಿಕವಾಗಿ "ಫ್ರೆಸ್ಕೋ" ಎಂದು ಗುರುತಿಸಬಹುದು. ಈ ವರ್ಣಚಿತ್ರಗಳ ಶೈಲಿಯಲ್ಲಿ ಭಿನ್ನತೆಯನ್ನು ಕಾಣಬಹುದು, ಆದುದರಿಂದ ಇವುಗಳನ್ನು ಕಡೆಪಕ್ಷ ಇಬ್ಬರೂ ಕಲಾವಿದಾದರು ರಚಿಸಿರಬಹುದು. ಈ ಚಿತ್ರಗಳಲಿರುವ ವ್ಯಕ್ತಿಗಳ ಆಭರಣಗಳು ಅಂದರೆ ಬಳೆ, ಕಂಠಸರ, ಕಿವಿಓಲೆ, ರತ್ನಕಚಿತ ಸೊಂಟಪಟ್ಟಿ, ಹೂಮಾಲೆಗಳು ಬಹುಮಟ್ಟಿಗೆ ಪೌರಾತ್ಯ ಪದ್ಧತಿಯಂತಿವೆ. ಇವುಗಳಲ್ಲಿರು ವಿಷಯಗಳು ಯಾವುದೆ ಇಸ್ಲಾಂ ಧರ್ಮದ ಧಾರ್ಮಿಕ ಕಥೆಗಳಿಗೆ ಸಂಬಂಧಿಸಿದಂತೆ ಕಾಣುವುದಿಲ್ಲ. ಗೋಡೆಯ ಕೆಳಭಾಗದಲ್ಲಿರುವ ಚಿತ್ರಗಳು ಸ್ವಲ್ಪದೊಡ್ಡ ಪ್ರಮಾಣದಲ್ಲಿವೆ. ಇವುಗಳ ಹಿನ್ನಲೆಯಲ್ಲಿ ಗಿಡಮರಗಳನ್ನು ರಚಿಸಿದ್ದಾರೆ. ಇವು ಯಾವ ಮರವೆಂದು ಗುರುತಿಸುವುದು ಕಷ್ಟ.

ಕಟ್ಟಡಗಳಲ್ಲಿ ಚಿತ್ರಕಲೆ :

೧, ಜುಮ್ಮಾ ಮಸೀದೆ :

ಆದಿಲ್‌ಶಾಹಿ ಸುಲ್ತಾನರ ಧಾರ್ಮಿಕ ಕಟ್ಟಡಗಳ ಭಿತ್ತಿ ಚಿತ್ರಗಳಿದ್ದು ಒಂದನೆಯ ಅಲಿ ಆದಿಲ್‌ಶಾಹನ ಕಾಲದಲ್ಲಿ ಬಿಜಾಪುರದಲ್ಲಿ ಕಟ್ಟಿಸಿದ. ನಂತರ ಈ ಜುಮ್ಮಾ ಮಸೀದಿಗೆ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಮತಷ್ಟು ಅಲಂಕರಿಸಲಾಗಯಿತು. ಈ ಮಸೀದೆಯ ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಮೆಹ್ರಬ ಎಂದು ಕರೆಯುವ ಸ್ಥಳದಲ್ಲಿ ಕ್ರಿ.ಶ. ೧೬೩೬ ರಲ್ಲಿ ಮಹಮ್ಮದ ಆದಿಲ್‌ಶಾಹನ ಆಜ್ಞೆಯ ಮೇರೆಗೆ ಇವನ ಅಧಿಕಾರಿಯಾದ ಮಲ್ಲಿಕ ಯಾಖೂತನು ಈ ಮೆಹ್ರಬಗೆ ಬಣ್ಣ ಬಣ್ಣದ ಚಿತ್ತಾರಗಳ ಅಲಂಕಾರಕ ಇರುವ ಸುಂದರ ನಕ್ಷೆಗಳು, ಪವಿತ್ರ ಕುರಾನಿನ ವಾಕ್ಯಗಳನ್ನು ಕಲಾತ್ಮಕ ಅಕ್ಷರಗಳಿಂದ ಕೊರೆಸಿ, ಬಂಗಾರದ ನೀರು ಲೇಪಿಸಿದ ಈ ಮಸೀದೆಯಲ್ಲಿರು ಮಹಮ್ಮದನು ಪಶ್ಚಿಮ ಗೋಡೆಯ ಮೇಲೆ ಮತ್ತು ಮೆಹ್ರಬ ಮೇಲೆ ಪರ್ಶಿಯನ ಶಾಸನವನ್ನು ಚಿನ್ನದ ಬಣ್ಣವನ್ನು ಹೊಂದಿದೆ.

೨, ಕುಮಟಗಿಯ ಬೇಸಿಗೆ ಅರಮನೆ :

ಬಿಜಾಪುರದಿಂದ ಸುಮಾರು ೧೫ ಕಿ.ಮೀ ದೂರದಲ್ಲಿರುವ ಕುಮಟಗಿ ಗ್ರಾಮದ ಹೊರವಲಯದಲ್ಲಿ ವಿಶಾಲವಾದ ಕೊಳವೊಂದರಲ್ಲಿ ವಿಶ್ರಾಂತಿಗಾಗಿ ರಚಿಸಿದ ಕಟ್ಟಡವಿದ್ದು, ಒಂದು ಕಾಲದಲ್ಲಿ ಕಟ್ಟಡದ ತುಂಬೆಲ್ಲ ಭಿತ್ತಿ ಚಿತ್ರಗಳಿದ್ದವು. ಇಂದು ಬಹುತೇಕ ನಾಶವಾಗಿವೆ. ಉಳಿದಿರುವ ಚಿತ್ರಗಳಲ್ಲಿ ನೈರುತ್ಯ ಭಾಗದಲ್ಲಿರುವ ಕಮಾನಿನ ಮೇಲೆ ಮುಂಡಮಾಡಿರುವ ಸನ್ಯಾಸಿಯಂತಹ ಒಬ್ಬನು ಇಬ್ಬರು ಸ್ತ್ರೀಯರೊಂದಿಗೆ ಸಂಭಾಷಿಸುತ್ತಿರುವಂತಿದೆ. ಒಬ್ಬಾಕೆ ಕರ್ಣ ಹಾಗೂ ಕಂಠಗಳಿಗೆ ಆಭರಣಗಳನ್ನು ಧರಿಸಿದ್ದು ಇನ್ನೊಬ್ಬಾಕೆ ಯಾವ ಆಭರಣಗಳನ್ನು ಧರಿಸಿಲ್ಲ. ಮಧ್ಯಭಾಗದಲ್ಲಿಯ ಚಿತ್ರದಲ್ಲಿ ರಾಜನೊಬ್ಬ ಸಭಾಸ್ಥಾನದವರೊಂದಿಗೆ ವಿಚಾರ ವಿನಿಮಯ ನಡೆಸುತ್ತಿದ್ದು ಹಿನ್ನಲೆಯಲ್ಲಿ ಸೇವಕರು ಉಪಚರಿಸುತ್ತಿದ್ದಾರೆ. ಹಿನ್ನಲೆಯಲ್ಲಿ ನವಿಲಗಳಿಂದ ಕೂಡಿದ ವೃಕ್ಷ ಹಾಗೂ ಎದುರಿನ ಕಮಾನಿನಲ್ಲಿ ಯಕ್ಷಿಯೊಬ್ಬಳ ಚಿತ್ರವಿದೆ. ಇನ್ನೊಂದು ಭಾಗದಲ್ಲಿ ಮಾವುತನೊಬ್ಬ ನಿರ್ವಹಿಸುತ್ತಿರುವ ಆನೆಯೊಂದರ ಮೇಲೆ ಕುಳಿತ ವ್ಯಕ್ತಿ ಬಿಲ್ಲು ಬಾಣಗಳನ್ನು ಹಿಡಿದು ಬೇಟೆಗೆ ಹೊರಟಂತಿದೆ. ಚಿತ್ರದ ಕೆಳಭಾಗದಲ್ಲಿ ಹಲವಾರು ನರ್ತಕಿಯರು ನರ್ತಿಸುತ್ತಿರುವುದು ಹಾಗೂ ಕುದರೆ ಸವಾರರನ್ನು ಚಿತ್ರಸುತ್ತಿರುವುದು ಕಾಣುತ್ತವೆ. ಮತ್ತೊಂದು ಭಾಗದಲ್ಲಿ ರಾಣಿ ಹಾಗೂ ತನ್ನ ಸೇವಕಿಯರ ಜೊತೆಗೂಡಿ ತಂತಿವಾದ್ಯವನ್ನು ನುಡಿಸುತ್ತಿರುವದನ್ನು ತನ್ಮಯಳಾಗಿ ಕೇಳುತ್ತಿರುವ ಚಿತ್ರಣವಿದೆ. ಇನ್ನೊಂದು ಬದಿಯಲ್ಲಿ ಇಬ್ಬರು ಸವಾರರು, ಕುದರೆಯ ಮೇಲೆ ಕುಳಿತು ದಂಡದಂತಹ ಸಾಧನದಿಂದ ಚೆಂಡೊಂದನ್ನು ಹೊಡೆಯುತ್ತಿರುವಂತೆ ಚಿತ್ರಿಸಿದ್ದು ಇದು ಇಂದು ಪೋಲೋ ಆಟವನ್ನು ಬಹಳವಾಗಿ ಹೋಲುತ್ತದೆ. ಆಟಗಾರರ ನಿಲುವು ಚಲನೆ, ಮುಖಭಾವ ಇತ್ಯಾಧಿಗಳಿಂದಾಗಿ ಆಟದ ಕ್ರಿಯೆ ಉತ್ಸಾಹದಾಯಕವೆಂಬಂತಿದೆ ಕಲಾವಿದನ ಜಾಣ್ಮೆ ಇಲ್ಲಿ ವ್ಯಕ್ತವಾಗಿದೆ.[೭೦]

೩, ಸಾತ ಮಂಜಿಲ್ :

ಎರಡನೆಯ ಇಬ್ರಾಹಿಮ ಆದಿಲ್‌ಶಾಹನು ತನ್ನ ಮಗನಾದ ಮಹಮ್ಮದ ಆದಿಲ್‌ಶಾಹನಿಗಾಗಿ ಅರ್ಕಿಲ್ಲೆಯ ಸಮುಚ್ಚಯದಲ್ಲಿ ಏಳು ಮಹಡಿಗಳ ಕಟ್ಟಡವನ್ನು ಕಟ್ಟಿಸಿದನು. ಇದರ ಪ್ರತಿಯೊಂದು ಕೋಣೆಯಲ್ಲಿ ಅಪರೂಪದ ಬಣ್ಣದ ಚಿತ್ರಗಳನ್ನು ಹೊಂದಿದ್ದವು ಎಂಬುದನ್ನು ಇಂದಿಗೂ ಅಲಲ್ಲಿ ಮಸುಕು-ಮಸುಕಾಗಿ ಕಾಣುವ ಬಣ್ಣವನ್ನು ನೋಡಬಹುದು. ಐದನೆಯ ಅಂತಸ್ತಿನಲ್ಲಿ ಎಲ್ಲಕ್ಕಿಂತ ವಿಭಿನ್ನವಾಗಿ ಮತ್ತು ವೈಭವಿತವಾಗಿದೆ. ಇಲ್ಲಿ ಹೂ-ಬಳ್ಳಿಗಳ ಜೊತೆಗೆ ಪ್ರೇಮ ಪಕ್ಷಿಗಳು ಕೆತ್ತಲಾಗಿದೆ. ಈ ಕಟ್ಟಡದ ಛಾವಣಿಯನ್ನು ಗಾರೆ ಕೆಲಸದಿಂದ ಅದ್ಭುತವಾಗಿ ಅಲಂಕರಿಸಲಾಗಿದೆ. ಕ್ರಿ. ಶ. ೧೬೫೪ ರಲ್ಲಿ ಭೇಟ್ಟಿ ಕೊಟ್ಟ ಜೇಮ್ಸ ಬರ್ಡ ಹೇಳುವಂತೆ ಬಹುತೇಕ ಚಿತ್ರಗಳು ಅಸ್ಪಷ್ಟವಾಗಿದ್ದರೂ ಒಂದಡೆ ಮಹಮ್ಮದ ಆದಿಲ್‌ಶಾಹನ ಚಿತ್ರ ಅವನ ಹತ್ತಿರ ಸಿತಾರ ವಾದನ, ಎದುರಿಗೆ ಬುಟ್ಟಿ ತುಂಬಿದ ಹೂಗಳು ಮಗ್ಗಲಲ್ಲಿ ಅವನ ಪ್ರೇಯಸಿ ರಂಭಾವನ್ನು ಸ್ಪಷ್ಟವಾಗಿ ಗುರುತಿಸಿದ್ದನಂತೆ.[೭೧]

೪.ಆಸಾರ ಮಹಲಿನ ಮೊದಲನೆಯ ಕೋಣೆಯ ಗೋಡೆಯ ಮೇಲಿನ ವರ್ಣಚಿತ್ರಗಳು :

ನಗರದ ಆರ್ಕಿಲ್ಲಾದ ಪೂರ್ವಭಾಗದಲ್ಲಿದೆ. ಹದಿನೈದು ಸಾವಿರ ಕ್ಷೇತ್ರದ ಇನ್ನೊಂದು ಭವ್ಯ ಕಟ್ಟಡ ಆಸಾರ ಮಹಲನ್ನು ಕ್ರಿ. ಶ. ೧೬೪೬ ರಲ್ಲಿ ಸುಲ್ತಾನ ಮಹಮ್ಮದ ಆದಿಲ್‌ಶಾಹನು ಕಟ್ಟಿಸಿದನು. ನ್ಯಾಯಾಲಕ್ಕಾಗಿಯೇ ಎಂದು ಕಟ್ಟಿದ ಈ ಕಟ್ಟಡಕ್ಕೆ " ದಾದ್ ಮಹಲ್" ಎಂಬ ಹೆಸರೂ ಇತ್ತು. ಉತ್ತರಕ್ಕಿರು ಕೊಠಡಿಗಳ ಗೋಡೆ, ಬಾಗಿಲು, ಗೂಡು, ಛಾವಣಿಗಳನ್ನೆಲ್ಲ ಸುಂದರ ವರ್ಣಚಿತ್ರಗಳಿಂದ ಅಂಲಕರಿಸಿದೆ. ವಿವಿಧ ಹೂಬಳ್ಳಿಗಳು, ಹೂದಾನಿ, ಹಣ್ಣಿನ ಹರಿವಾಣ, ಸಿಪ್ರಸ್ ಮರದ ಮುಂತಾದವುಗಳಿವೆ.[೭] ಇದಲ್ಲದೆ ಅನೇಕ ತರಹದ ವರ್ಣಚಿತ್ರಗಳನ್ನು ಕೆಳಗೆ ವಿವರಿಸಲಾಗಿದೆ.

ವರ್ಣಚಿತ್ರ ೧ :

ದ್ವಾರದ ಬಲಬದಿಯಲ್ಲಿರುವ ಈ ವರ್ಣಚಿತ್ರದಲ್ಲಿ ಒಬ್ಬ ವ್ಯಕ್ತಿಯು ಬರಿಮೈಯಲ್ಲಿ ಕಾಲನ್ನು ಮಡಿಚಿ ಹಿಂದೆ ಹೊರಳಿದ್ದಾನೆ, ಮುಖವು ಹಾಳಾಗಿದೆ. ಒಂದು ಕೈಯಲ್ಲಿ ಬಹಶಃ ಭಂಗಿ ಹಿಡಿದಿರಬಹುದು, ಇನ್ನೊಂದು ಕೈಯನ್ನು ನೆಲಕ್ಕೆ ಉರಿದಹಾಗಿದೆ. ಇವನ ಬದಿಯಲ್ಲಿ ಒಂದು ಪಾತ್ರೆಯಿದೆ ಇದರ ಹಿಂಭಾಗದಲ್ಲಿ ಒಬ್ಬ ವ್ಯಕ್ತಿ ಬರಿಮೈಯಲ್ಲಿ ಮೆತನೆ ದಿಂಬಿಗೆ ಒರಗಿಕೊಂಡು ಕುಳಿತ ಹಾಗೆ ತೊರಿಸಲಾಗಿದೆ. ಆ ವ್ಯಕ್ತಿಗೆ ಒರಗಿಕೊಂಡು ಒಂದು ಮಗು ನಿಂತಿದೆ. ಬರಿಮೈಯಲ್ಲಿಯೇ ಇದ್ದಾರೆ.

ಆಭರಣ ವಸ್ತ್ರಗಳು :

ಮೈಮೇಲೆ ಪಾರದರ್ಶಕದಂತಹ ವಸ್ರ್ರಗಳಿವೆ ಈ ವಸ್ತ್ರಗಳ ಮೇಲೆ ಚಿಕ್ಕ ಚಿಕ್ಕ ಬಿಳಿ ಕೆಂಪು ಬಣ್ಣದ ಹೂಗಳಿವೆ ಈ ವ್ಯಕ್ತಿಗಳ ಕೊರಳಲ್ಲಿ ಮುತ್ತಿನ ಸರ ತೋರಿಸಲಾಗಿದೆ. ಕೈಯಲ್ಲಿ ಬಳೆ, ಕಡಗ ಮತ್ತು ತೋಳಿಗೆ ಬಂಗಾರದ ಆಭರಂ ತೋರಿಸಲಾಗಿದೆ. ಆ ಆಭರಣಗಳಲ್ಲಿ ನಡುವೆ ಹಸಿರು ಕೆಂಪು ವರ್ಣಗಳ ಹವಳಗಳಿವೆ.

ವರ್ಣವಿನ್ಯಾಸ :

ಈ ವ್ಯಕ್ತಿಗಳ ಮೈಬಣ್ಣದಲ್ಲಿ ಗುಲಾಬಿ, ಕೇಸರಿ, ನೀಲಿ ವರ್ಣಗಳು ಬಣ್ಣಗಳು ಮಿಶ್ರಿತವಾಗಿದೆ. ಮೈಯ ಉಬ್ಬು ತಗ್ಗುಗಳನ್ನು ನೆರಳು ಬೆಳಕುಗಳ ವಿನ್ಯಾಸದಿಂದ ನೈಜವಾಗಿ ಮೂಡಿವೆ. ವ್ಯಕ್ತಿಗಳ ಹಿನ್ನಲೆಯಲ್ಲಿ ಬರುವ ವಸ್ತಗಳನ್ನು ಕಪ್ಪು ವಿಶ್ರಿತ ಮಬ್ಬಾದ ವರ್ಣ ಸಂಯೋಜನೆ ಮಾಡಲಾಗಿದೆ. ಇದರಿಂದ ವಸ್ತುವಿನ ಆಕೃತಿಯಲ್ಲಿ ಆಗುವ ವ್ಯತ್ಯಾಸಗಳನ್ನು ಮತ್ತು ಮುಂದಿನ ವಸ್ತುಗಳಿಗೂ ಹಿಂದಿನ ವಸ್ತುಗಳಿಗೂ ಇರುವ ಅಂತರವನ್ನು ತೋರಿಸುವಲ್ಲಿ ಯಶಸ್ವಿಯಾಗಿದ್ದಾನೆ. ಇದರಲ್ಲಿ ಇನ್ನೂ ಕೆಲವು ವ್ಯಕ್ತಿಗಳ ಚಿತ್ರಗಳಿದ್ದ ಹಾಗಿದೆ, ಆದರೆ ಅವೆಲ್ಲವು ಹಾಳಾಗಿರುವುದರಿಂದ ಗೋತಾಗುವುದಿಲ್ಲ.

ವರ್ಣಚಿತ್ರ ೨ :

ಇದರಲ್ಲಿ ಒಬ್ಬ ಸ್ತ್ರೀಯ ಚಿತ್ರವಿದ್ದಂತೆ ಕಾಣುವುದು ಮುಖಕ್ಕೆ ಸುಣ್ಣ ಬಳಿಯಲಾಗಿದೆ. ಅಥವಾ ಹಾಳಾಗಿವೆ. ಇವಳು ತನ್ನ ಎಡಗೈಯನ್ನು ಮುಂದೆ ಚಾಚಿದ್ದಾಳೆ ತನ್ನ ಬಲಗಾಲವನ್ನು ಎತ್ತರವಾದ ಒಂದು ವಸ್ತುವಿನ ಮೇಲೆ ಇರಿಸಿದ್ದಾಳೆ. ಇನ್ನೊಂದು ಕಾಲನ್ನು ಕೆಳಗೆ ಇರಿಸಿದ್ದಾಳೆ. ಇವಳ ಎದುರಿಗೆ ಇನ್ನೊಬ್ಬಳು ಮಗು ಹಿಡಿದುಕೊಂಡು ಕುಳಿತ್ತಿದ್ದಾಳೆ. ಇಬ್ಬರು ಎದುರುಬದರು ಕಳಿತಿದ್ದಾರೆ. ಮಗು ಹಿಡಿದುಕೊಂಡು ಕುಳಿತವಳ ಎದುರಿಗಿದ್ದವಳ ಮೈಮೇಲೆ ಒಂದು ವಸ್ತ್ರವು ಇಲ್ಲ. ಸಂಪೂರ್ಣ ನಗ್ನಳಾಗಿದ್ದಾಳೆ, ಇವಳ ಹಿಂದೆ ಮಗು ನಿಂತಿದೆ ಅದು ಅವಳತ್ತ ಮುಖಮಾಡಿದೆ. ಈ ಮಗು ತನ್ನ ಮುಖದ ಮೇಲೆ ಬಿದ್ದ ವಸ್ತ್ರವನ್ನು ಸರಿಸಲು ಪ್ರಯತ್ನಿಸುವಂತಿದೆ. ಹಿನ್ನಲೆಯಲ್ಲಿ ಕೆಲವು ವ್ಯಕ್ತಿಗಳ ಚಿತ್ರಗಳಿದಂತೆ ಇವೆ.

ಆಭರಣಗಳು ಮತ್ತು ವಸ್ತ್ರಗಳು :

ಇದರಲ್ಲಿ ಸ್ತ್ರೀಯ ಕೊರಳಲ್ಲಿ ಮುತ್ತಿನ ಹಾರಗಳನ್ನು ಕಾಣಬಹುದು. ಇವಳ ಎದುರಿಗೆ ಕೈಚಾಚಿದವಳ ರಟ್ಟೆಯಲ್ಲಿ ಆಭರಣಗಳನ್ನು ತೋರಿಸಿದ್ದಾರೆ. ಕೈಯಲ್ಲಿ ಬಳೆಗಳಿವೆ, ಸೊಂಟದಲ್ಲಿ ಸೊಂಟಪಟ್ಟಿ ಆಭರಣವಿದೆ ಇದರ ಮಧ್ಯದಲ್ಲಿ ಕೆಂಪು, ಹಸಿರು ಹವಳಗಳನ್ನು ಚಿತ್ರಿಸಿದ್ದಾರೆ. ಕಾಲುಗಳಲ್ಲಿ ಚೈನುಗಳಿವೆ ಇವಳ ಹಿಂದೆ ಮಗುವಿನ ಕೈಗೆ ಕಡಗ, ಸೊಂಟದ ಪಟ್ಟಿ ಇವೆ. ಇದರ ಮುಖದ ಮೇಲೆ ಕೆಂಪು ಬಟ್ಟೆಯು ಬಿದ್ದಿದೆ. ಮತ್ತು ಹೊಟ್ಟೆಯ ಮಧ್ಯ ಒಂದು ಆಭರಣವಿದೆ.

ವರ್ಣವಿನ್ಯಾಸ : ಈ ಚಿತ್ರದಲ್ಲಿಯೂ ಕೂಡ ಮೇಲಿನ ಚಿತ್ರದಂತೆಯೇ ವರ್ಣವಿನ್ಯಾಸ ತುಂಬಾ ಚನ್ನಾಗಿ ಬಂದಿದೆ. ಇದರಲ್ಲಿ ಶರೀರದ ಉಬ್ಬು ತಗ್ಗುಗಳನ್ನು ಸುಂದರವಾಗಿ ನಿರೂಪಿಸಿದ್ದಾರೆ, ಇದರಲ್ಲಿ ಶರೀರದ ಅವಯವಗಳು ಪ್ರಮಾಣಬದ್ಧವಾಗಿ ರೂಪಿತವಾಗಿದ್ದು ಹಿನ್ನಲೆಯನ್ನು ಮತ್ತು ವ್ಯಕ್ತಿಚಿತ್ರಗಳಿಗೂ ವ್ಯತ್ಯಾಸವನ್ನು ನೈಜರೂಪದಲ್ಲಿ ಚಿತ್ರಿತವಾಗಿವೆ,.

ವರ್ಣಚಿತ್ರ ೩ :

ದ್ವಾರದ ಬಲಭಾಗದಲ್ಲಿ ಒಬ್ಬ ಸ್ತ್ರೀಯು ಆಸನದ ಮೇಲೆ ಕುಳಿತಿದ್ದಾಳೆ ಅವಳ ಬಲಗೈಯನ್ನು ಸ್ವಲ್ಪ ಮೇಲೆ ಎತ್ತಿದ್ದಾಳೆ ಇನ್ನೊಂದು ಕೈಯನ್ನು ಕೈಯಾಧಾರದ ಮೇಲೆ ಇಟ್ಟು ಅಂಗೈಯನ್ನು ಕೆಳಗೆ ಮಾಡಿದ್ದಾಳೆ. ಇವಳ ಹಿಂಭಾಗದಲ್ಲಿ ಒಬ್ಬ ಸ್ತ್ರೀ ಇದ್ದಾಳೆ ಮುಂಭಾಗದಲ್ಲಿ ಮೂರು-ನಾಲ್ಕು ಜನ ಸ್ತ್ರೀಯರು ಕುಳಿತಂತೆ ತೋರಿಸಲಾಗಿದೆ. ಇದರಲ್ಲಿ ಇನ್ನೂ ಕೆಲವು ಚಿತ್ರಗಳು ಹಾಳಾಗಿವೆ.

ವಸ್ತ್ರಗಳು ಮತ್ತು ಆಭರಣಗಳು :

ಆಸನದ ಮೇಲೆ ಕುಳಿತ ಸ್ತ್ರೀಯ ಕೊರಳಲ್ಲಿ ಮುತ್ತಿನ ಸರಗಳಿವೆ. ಮಣಕೈಯ ಮುಂಭಾಗದಲ್ಲಿ ಆಭರಣ ಧರಿಸಿರಿವಳು, ಕೈಯಲ್ಲಿ ಕೆಂಪು, ಹಸಿರು ವರ್ಣದ ಚಿಕ್ಕ ಬಳೆಗಳಿವೆ. ಇವಳು ವಿದೇಶಿ ಸ್ತ್ರೀಯರು

ಧರಿಸಿರುವ ಪಾರದರ್ಶಕದಂತ ಉಡುಪುಯಿದೆ. ಅವಳು ಕುಳಿತ ಭಂಗಿಯಲ್ಲಿ ಅರಿವೆಯ ಮಡಿಕೆಗಳನ್ನು ಚನ್ನಾಗಿ ಚಿತ್ರಿಸಲಾಗಿದೆ. ಸೊಂಟದಲ್ಲಿ ಪಟ್ಟಿಯೊಂದಿದೆ.

ವರ್ಣವಿನ್ಯಾಸ :

ಆಸನದ ಮೇಲ ಕುಳಿತ ಸ್ತ್ರೀಯ ಮೈಮೇಲೆ ತಿಳಿಯಾದ ಬೂದಿವರ್ಣದ ವಸ್ತ್ರವನ್ನು ಧರಿಸಿರಿವಳು. ಗೌರವವರ್ಣ ಇರುವುದು ಇವಳು ತೊಟ್ಟ ಬಟ್ಟೆಯನ್ನು ಬೆಳಕು ನೆರಳುಗಳ ವಿನ್ಯಾಸದಿಂದ ಮಡಿಕೆಗಳನ್ನು ಚನ್ನಾಗಿ ಚಿತ್ರಿಸಿದ್ದಾರೆ. ಇದರಂತೆ ಉಳಿದ ಸ್ತ್ರೀಯರ ವರ್ಣಗಳು ಚನ್ನಾಗಿ ಮೂಡಿವೆ.

ವರ್ಣಚಿತ್ರ ೪ :

ಎದುರಿಗೆ ದೊಡ್ಡದಾದ ಕಿಟಿಕೆಗಳಿಂದ ಕೂಡಿದ ಕಮಾನು ಇದೆ. ಇದರ ಎಡಬದಿಯ ಗೋಡೆಯಲ್ಲಿ ವರ್ಣಚಿತ್ರವಿದೆ. ಇದರಲ್ಲಿ ನಾಲ್ವರು ಸ್ತ್ರೀಯರಿದ್ದಾರೆ, ಇಬ್ಬರೂ ಮಗುವಿಗೆ ವಸ್ತ್ರವನ್ನು ಹೊದಿಸುತ್ತಿದ್ದಾರೆ ಒಬ್ಬಳು ಮಗುವನ್ನು ಹಿಡಿದಿದ್ದಾಳೆ, ಇನ್ನೊಬ್ಬಳು ಆ ಮಗುವಿಗೆ ವಸ್ತ್ರವನ್ನು ಉಡಿಸುತ್ತಿದ್ದಾಳೆ ಆ ಮಗುವನ್ನು ಅಂಗಾತವಾಗಿ ಹಿಡಿದಿದ್ದಾಳೆ ಇವಳ ಹಿಂದೆ ಒಬ್ಬ ಸೇವಕಿಯು ತನ್ನ ಕೈಯಲ್ಲಿ ಒಂದು ವಸ್ತುವನ್ನು ಹಿಡಿದುಕೊಂಡಂತಿದೆ. ಇವಳ ಎದುರಿಗೆ ವಸ್ತ್ರ ಹೊದಿಸುವಳ ಹಿಂದೆ ಇಬ್ಬರು ಸೇವಕಿಯರು ಇದ್ದಾರೆ.

ಆಭರಣ ಮತ್ತು ವಸ್ತ್ರವಿನ್ಯಾಸ :

ಮಗುವಿಗೆ ವಸ್ತ್ರವನ್ನು ಹೊದಿಸುವವಳ ಕೈಯಲ್ಲಿ ಪಾರದರ್ಶಕದಂತಹ ವಸ್ತ್ರವನ್ನು ಆ ಮಗುವಿಗೆ ಹೊದಿಸುತ್ತಿದ್ದಾಳೆ. ಆ ವಸ್ತ್ರದ ಮೇಲೆ ಹೂವಿನ ನಕ್ಷೆಗಳಿವೆ ಮಗುವನ್ನು ಹಿಡಿದವಳು ಕೆಂಪು ಬಣ್ಣದ ಕುಪ್ಪಸ ತೊಟ್ಟಿದ್ದಾಳೆ. ಈ ಕುಪ್ಪಸದ ತೋಳಿನ ಅಂಚಿಗೆ ನಕ್ಷೆಗಳಿವೆ, ಕೊರಳಲ್ಲಿ ಮುತ್ತಿನ ಸರಗಳನ್ನು ಧರಿಸಿದ್ದಾಳೆ. ಕುಪ್ಪಸದ ಮೇಲೆ ಚಿಕ್ಕ ಚಿಕ್ಕ ಹೂಗಳಿವೆ. ಲಂಗವನ್ನು ಧರಿಸಿದ್ದಾಳೆ ಇದರಲ್ಲಿ ಚೌಕಾಕೃತಿಯ ವಿನ್ಯಾಸಗಳಿವೆ. ಇವಳು ಎರಡು ಕೈಗಳಿಂದ ಮಗುವನ್ನು ಅಂಗಾತ ಹಿಡಿದಿದ್ದಾಳೆ ಮಗು ನಗ್ನವಾಗಿದೆ. ಮಗುವಿಗೆ ವಸ್ತ್ರವನ್ನು ಹೊದಿಸುವ ಸ್ತ್ರೀಯು ತುಂಬಾ ಜಾಮೀತಿಯ ಮತ್ತು ಸುಳುವಿನ ವಿನ್ಯಾಗಳಿರುವ ರವಿಕೆಯನ್ನು ತೊಟ್ಟಿದ್ದಾಳೆ. ಲಂಗದಲ್ಲಿಯೂ ಸಹ ಜಾಮೀತಿಯ ನಕ್ಷೆಗಳಿವೆ. ಮಗುವಿನ ಕೊರಳಲ್ಲಿ ಚಿನ್ನದ ಸರವಿದೆ. ಇವರು ತಮ್ಮ ತೆಲೆಯ ಮೇಲೆ ಸೇರಗು ಹಾಕಿಕೊಂಡಿದ್ದಾರೆ. ಕಿವಿಯ ಓಲೆಗಳನ್ನು ಧರಿಸಿರುವರು.

ವರ್ಣವಿನ್ಯಾಸ :

ಇವರು ಮೈಗೆ ಗೌರವವರ್ಣ ನಸುಗೆಂಪು ಕೆನ್ನೆಗಳು ಮತ್ತು ಕೆಂಪು ತುಟಿಗಳನ್ನು ಚಿತ್ರಿಸಿದ್ದಾರೆ. ಇದರಲ್ಲಿ ಮಗು ಹಿಡಿದುಕೊಂಡ ಸ್ತ್ರೀಯ ಹಿಂದೆ ಸ್ಟೂಲಿನ ಮೇಲೆ ಒಂದು ವಸ್ತುವಿದೆ ಇದಕ್ಕೆ ಮಬ್ಬಾದ ಕಪ್ಪು ಬಣ್ಣವನ್ನು ಹಚ್ಚಲಾಗಿದೆ. ಇವರ ಹಿಂಬದಿಯಲ್ಲಿ ಗೋಡೆಚಿತ್ರಿದ ಹಾಗೆಯಿದೆ. ನಂತರ ಗಿಡಮರಗಳನ್ನು ಚಿತ್ರಸಿದ್ದಾರೆ.

[illegible]

ವರ್ಣಚಿತ್ರ ೫ :

ಕಿಟಕಿಗಳಿಂದ ಕೂಡಿದ ಕಮಾನಿನ ಬಲಭಾಗದಲ್ಲಿ ವರ್ಣಚಿತ್ರವಿದ್ದರಿಬೇಕು. ಬಹಳ ಹಾಳಾಗಿರುವುದರಿಂದ ಗುರುತಿಸಲಿಕ್ಕಾಗುವುದಿಲ್ಲ. ಇದರ ನಂತರ ದೊಡ್ಡ ಕಮಾನಿನ ಎಡಬದಿಗೆ ಒಂದು ಸ್ತ್ರೀಯ ಚಿತ್ರವಿದಂತೆ ಕಾಣುವುದು. ಇವಳು ತನ್ನ ಬಲಗೈಯನ್ನು ಮುಂದೆ ಚಾಚಿದಂತೆ ಕಾಣುತ್ತದೆ. ಇವಳ ಮುಂದೆ ಇನ್ನೊಂದು ಯಾವುದೊ ವ್ಯಕ್ತಿಯ ಚಿತ್ರವಿರಬಹುದು ಸಂಪೂರ್ಣ ಹಾಳಾಗಿದೆ.

ಆಭರಣ ಮತ್ತು ವಸ್ತ್ರವಿನ್ಯಾಸ :

ಇವಳು ತೊಟ್ಟ ರವಿಕೆಯ ತೋಳಂಚಿಗೆ ನಕ್ಷೆಗಳಿವೆ. ಕೊರಳಲ್ಲಿ ಮುತ್ತಿನ ಒಂಬತ್ತು ಸರಗಳಿವೆ' ಮತ್ತು ಸೀರೆಯನ್ನು ತೊಟ್ಟಿದ್ದಾಳೆ ಸೀರೆಯಲ್ಲಿ ಚಿಕ್ಕ ಚಿಕ್ಕ ಹೂಗಳ ನಕ್ಷೆಯಿದೆ. ಕೈಯಲ್ಲಿ ಕೆಂಪು ಹಸಿರು ಬಣ್ಣದ ಚಿಕ್ಕಿಬಳೆಗಳನ್ನು ಧರಿಸಿದ್ದಾಳೆ.

ವರ್ಣವಿನ್ಯಾಸ :

ಇವಳ ಮುಖದ ವರ್ಣವು ತಿಳಿಗೆಂಪು ವರ್ಣದಲ್ಲಿದೆ. ಮೈಮೇಲೆ ಬೂದಿಬಣ್ಣದ ರವಿಕೆಯಿದ್ದಂತೆ ಕಾಣುತ್ತದೆ. ಇವಳ ರವಿಕೆಯ ತೊಳಂಚಿಗೆ ಕೆಂಪು ಹಸಿರು ವರ್ಣಗಳ ನಕ್ಷೆವಿನ್ಯಾಗಳಿವೆ. ಕೊರಳಲ್ಲಿ ಒಂಬತ್ತು ಬಿಳಿ ಬಣ್ಣದ ಮುತ್ತಿನ ಸರಗಳಿವೆ. ಇವಳು ಕೆಂಪು ಬಣ್ಣದ ಸೀರೆಯನ್ನುಟ್ಟಿದ್ದಾಳೆ. ಕೈಯಲ್ಲಿ ಕೆಂಪು ಹಸಿರು ವರ್ಣದ ಚಿಕ್ಕಿ ಬಳೆಗಳಿವೆ. ಜಾನ ಗ್ರಿಫಿಫ್ತರು ಈ ವರ್ಣಚಿತ್ರದ ವಿವರಣೆಯನ್ನು ಕೊಟ್ಟಿಲ್ಲ.[೭೩]

ವರ್ಣಚಿತ್ರ ೬ :

ಇಲ್ಲಿರುವ ಬಲಗಡೆಯ ದೊಡ್ಡ ಕಮಾನಿನಲ್ಲಿ ಚಿತ್ರಗಳಿಲ್ಲ. ಈ ಕಮಾನಿ ಬಲಗಡೆಯ ಒಳಬದಿಯಲ್ಲಿ ನಾಲ್ಕೈದು ಹೆಣ್ಣುಮಕ್ಕಳನ್ನು ವನದಲ್ಲಿ ಕಟ್ಟೆಯ ಮೇಲೆ ಕುಳಿತ ಹಾಗೆ ತೋರಿಸಲಾಗಿದೆ. ಅವರಲ್ಲಿ ಎಡಗಡೆಯವಳು ಸ್ವಲ್ಪ ಓರೆಯಾಗಿ ಕುಳಿತುಕೊಂಡಿದ್ದಾಳೆ ಮುಖವು ಅಳಿಸಿ ಹೊಗಿದೆ. ತನ್ನ ಎಡಗೈಯನ್ನು ತೋಡೆಯ ಮೇಲೆ ಇಟ್ಟುಕೊಂಡಿದ್ದಾಳೆ. ಬಲಗೈಯನ್ನು ಮೇಲೆತ್ತಿ ತೋರುಬೆರಳು ಮುಂದೆಮಾಡಿ ಎನೋ ಹೇಳುತ್ತಿರುವ ಹಾಗಿದೆ. ಇವಳಿಗೆ ಎದುರು ಮುಖಮಾಡಿಕೊಂಡು ಕುಳಿತಿರುವ ಇನ್ನೊಬ್ಬ ಸ್ತ್ರೀಯು ತನ್ನ ಮುಂದೆ ಕುಳಿತವಳಿಗೆ ಕೈಚಾಚಿದ್ದಾಳೆ. ಇವಳು ತನ್ನ ಒಂದು ಕಾಲನ್ನು ಹಿಂದೆಯಿಟ್ಟು ಕುಳಿತಿದ್ದಾಳೆ. ಇವರಿಬ್ಬರ ಹಿಂದೆ ಒಬ್ಬ ಸ್ತ್ರೀಯು ಇದ್ದಾಳೆ ಅವಳ ಹಿಂದೆ ಬಲಭಾಗದಲ್ಲಿಯೂ ಒಬ್ಬ ಸ್ತ್ರೀಯು ಇದ್ದಾಳೆ ಇವಳ ಮುಖ ಮತ್ತು ಭುಜದ ಸ್ವಲ್ಪಭಾಗವು ಕಾಣುತ್ತದೆ. ಕುಳಿತ ಸ್ತ್ರೀಯರ ಕಾಲಿನ ಹತ್ತಿರ ಪುಷ್ಪಗಳು ಬಳ್ಳಿಗಳು ಚಿತ್ರಿಸಲಾಗಿದೆ. ದುಂಡಾಕಾರದ ಪುಷ್ಪಗಳಿವೆ ಇವುಗಳಿಗೆ ಚಿಕ್ಕ ಉದ್ದವಾದ ಎಲೆಗಳಿವೆ.

ಆಭರಣ ಮತ್ತು ವಸ್ತ್ರಗಳು :

ಇದರಲ್ಲಿ ಒರೆಯಾಗಿ ಕುಳಿತುಕೊಂಡ ಸ್ತ್ರೀಯ ಕೊರಳಲ್ಲಿ ಹತ್ತು ಮುತ್ತಿನ ಸರಗಳಿವೆ. ಮೇಲಿನ ಸರವು ಕೊರಳಿಗೆ ಬಿಗಿಯಾಗಿದ್ದ ಹಾಗೆಯಿದೆ. ಕೆಳಗಿನ ಸರವು ಬಹಳ ದೊಡ್ಡದಾಗಿ ಎದೆಯ ಕೆಳಭಾಗದವರೆಗೂ ಬಂದಿದೆ. ಮೇಲೆ ನೀಲುವಂಗಿ ಹಾಕಿದಂತೆ ತೋರಿಸಲಾಗಿದೆ. ಅಂಗೈವರೆಗೂ ತೋಳಗಳು ಬಂದಿವೆ. ಇವಳ ಅಂಗಿಯ ಮೇಲೆ ಚಿಕ್ಕ ಚಿಕ್ಕ ಹೂಗಳಿವೆ. ಸೊಂಟದಿಂದ ಕೆಳಗೆ ತಿಳಿ ಕಪ್ಪು ಹಸಿರು ವರ್ಣದ ಬಟ್ಟಯಿದೆ. ಈ ಬಟ್ಟಎಯ ಮೇಲೆ ಪಾರದರ್ಶಕದಂತಹ ಬಟ್ಟೆಯಿದೆ. ಇದು ಅವಳ ಎಡಭುಜದ ಮೇಲೆ ಹಾಯ್ದು ತಲೆಯ ಮೇಲೆ ಸೇರಗಿನ ಹಾಗೆ ತೋರಿಸಲಾಗಿದೆ. ಅದರಲ್ಲಿ ಚಿಕ್ಕ ಚಿಕ್ಕ ಹೂ ಬಳ್ಳಿಗಳ ಅಲಂಕಾರ ಜೊಡನೆಯನ್ನು ಚಿತ್ರಿಸಿಲಾಗಿದೆ. ಇವಳ ಎದುರಿಗೆ ಮುಖಮಾಡಿ ಕುಳಿತುಕೊಂಡವಳ ಕೊರಳಲ್ಲಿ ಬಿಳಿ ವರ್ಣದ ಹೂಮಾಲೆಯನ್ನು ಧರಿಸಿದ್ದಾಳೆ. ಅವಳು ರವಿಕೆಯನ್ನು ತೊಟ್ಟಿದ್ದಾಳೆ ಈ ರವಿಕೆಯದ ತೋಳಿನ ಅಂಚಿನಲ್ಲಿ ನಕ್ಷೆಯ ವಿನ್ಯಾಸಗಳಿವೆ. ಮೈಮೇಲೆ ಸೀರೆ ಧರಿಸಿರುವಳು ಸೀರೆಯ ಮೇಲೆ ಹೂನಕ್ಷೆಗಳನ್ನು ಚಿತ್ರಿಸಿಲಾಗಿದೆ. ಕೈಯಲ್ಲಿ ಹಸಿರು ಕೆಂಪು ವರ್ಣದ ಚಿಕ್ಕಿ ಬಳೆಗಳನ್ನು ಧರಿಸಿದ್ದಾಳೆ. ಹೆಬ್ಬೆರಳಲ್ಲಿ ಚೌಕಾದ ಉಂಗುರವನ್ನು ಧರಿಸಿದ್ದಾಳೆ ಅದಕ್ಕೆ ಸುತ್ತಲೂ ಚಿಕ್ಕ ಚಿಕ್ಕ ಕೆಂಪು ಹಸಿರು ವರ್ಣಗಳ ಹವಳಗಳಿವೆ. ತಲೆಯ ಮೇಲೆ ಬೈತಲೆಯ ಮುಖಾಂತರ ಮುತ್ತಿನ ಸರವು ಇಳಿದು ಹಣೆಯವರೆಗೆ ಬಂದಿದೆ. ರವಿಕೆಯ ತೋಳಿನ ಮೇಲೆ ಚಿಕ್ಕ ಚಿಕ್ಕ ಹೂಗಳಿವೆ. ಈ ಇಬ್ಬರೂ ಕುಳಿತ ಸ್ತ್ರೀಯರ ಹಿಂದೆ ಒಬ್ಬ ಸ್ತ್ರೀಯು ಕೆಂಪು ವರ್ಣದ ವಸ್ತ್ರವನ್ನು ಧರಿಸಿದ್ದಾಳೆ. ಇವಳ ಹಿಂದೆ ಇದ್ದವಳು ಕಪ್ಪು ವರ್ಣದ ರವಿಕೆಯನ್ನು ಧರಿಸಿದಂತೆ ಕಾಣುತ್ತದೆ. ಇವಳ ರವಿಕೆಯ ಮೇಲೆ ಹೂವಿನ ಚಿತ್ರಗಳು ಇವೆ. ಇವಳು ಕೂಡಾ ನಾಲ್ಕೈದು ಮುತ್ತಿನ ಸರಗಳನ್ನು ತೊಟ್ಟಂತೆ ಕಾಣುತ್ತದೆ.

ವರ್ಣವಿನ್ಯಾಸ :

ಕುಳಿತಂತಹ ಸ್ತ್ರೀಯು ತಿಳಿ ಕಪ್ಪು ಹಸಿರು ವರ್ಣದ ಬಟ್ಟೆಯನ್ನು ಧರಿಸಿದ್ದಾಳೆ. ಇವಳ ಎದುರಿಗೆ ಕುಳಿತವಳು ಬಿಳಿ ವರ್ಣದ ಹೂಮಾಲೆಯನ್ನು ಹಾಕಿಕೊಂಡಿದ್ದಾಳೆ. ಇವಳು ಕಪ್ಪು ಮಿಶ್ರಿತ ಹಸಿರು ವರ್ಣದ ರವಿಕೆಯನ್ನು ತೊಟ್ಟಿದ್ದಾಳೆ. ಮೈಮೇಲೆ ಕಪ್ಪು ಕಂದು ಬಣ್ಣದ ಸೀರಯನ್ನು ಧರಿಸಿದ್ದಾಳೆ. ಕೈಯಲ್ಲಿ ಹಸಿರು ಕೆಂಪು ವರ್ಣದ ಚಿಕ್ಕಿ ಬಳೆಗಳಿವೆ. ಹೆಬ್ಬೆರಳಲ್ಲಿ ಚಿನ್ನದ ಉಂಗುರವಿದೆ. ಅದಲ್ಲಿ ಕೆಂಪು ಹಸಿರು ವರ್ಣದ ಹರಳುಗಳಿವೆ. ಮಧ್ಯದ ಬೆರಳಲ್ಲಿ ಹಸಿರು ವರ್ಣದ ಹವಳದ ಉಂಗುರವಿದೆ. ಕೊರಳಲ್ಲಿ ಐದು ಬಿಳಿ ಮುತ್ತಿನ ಸರಗಳಿವೆ. ಕಿವಿಯಲ್ಲಿ ಚಿಕ್ಕ ಚಿಕ್ಕ ಮುತ್ತುಗಳು ಜೊತಾಡುವ ಕರ್ಣಕಂಡಲಗಳಿವೆ. ಅವುಗಳಲ್ಲಿ ಹಸಿರು ವರ್ಣದ ಹವಳಗಳಿವೆ. ಮೈಗೆ ತಿಳಿ ಗುಲಾಬಿ ಮಿಶ್ರಿತವಾದ ಗೋಧಿ ಬಣ್ಣದ ಲೇಪನವಿದೆ. ಇವರಿಬ್ಬರ ಹಿಂದೆ ಇರುವ ಸ್ತ್ರೀಯು ಕೆಂಪು ವರ್ಣದ ವಸ್ತ್ರವನ್ನು ಧರಿಸಿದ್ದಾಳೆ. ಇವಳ ಹಿಂದಿರುವ ಸ್ತ್ರೀಯು ಕಪ್ಪುವರ್ಣದ ರವಿಕೆಯನ್ನು ತೊಟ್ಟಿದ್ದಾಳೆ. ಕಾಲ ಹತ್ತಿರವಿರುವ ಹೂ ಎಲೆಗಳನ್ನು ಹಸಿರು ಮತ್ತು ಹೂವು ಅಬೂಲಿ ವರ್ಣದಲ್ಲಿ ತೋರಿಸಲಾಗಿದೆ.

ವರ್ಣಚಿತ್ರ ೭ :

ಈ ದೊಡ್ಡ ಕಮಾನಿನ ಬಲಗಡೆಗೆ ಇರುವ ವರ್ಣ ಚಿತ್ರದಲ್ಲಿ ಅನೇಕ ಸ್ತ್ರೀಯರ ಚಿತ್ರಗಳಿವೆ ಇವರಲ್ಲಿ ಬಲಗಡೆ ಇದ್ದವಳು ತಜ್ಜ ಎದುರಿಗಿದ್ದವಳಿಗೆ ಏನೋ ಹೇಳುತ್ತಿರುವಂತಿದೆ. ಬಲಗೈ ಎತ್ತಿದ್ದಾಳೆ ಎಡಗೈಯನ್ನು ತೊಡೆಯ ಮೇಲಿಟ್ಟಿದ್ದಾಳೆ ಇವಳ ಹಿಂದೆ ಮೂವರು ಸ್ತ್ರೀಯರಿದ್ದಾರೆ ಒಬ್ಬಳು ಬುಟ್ಟಿ ಹಿಡಿದುಕೊಂಡು ನಿಂತಂತೆ ಕಾಣುತ್ತದೆ ಬುಟ್ಟಿಯಲ್ಲಿ ವಸ್ತ್ರಗಳಿದ್ದಂತೆ ಕಾಣುತ್ತದೆ. ಇವಳ ಹಿಂದಿರುವ ಒಬ್ಬಳು ತನ್ನ ಬಲಗೈ ಮೇಲಿತ್ತಿದಂತೆ ಕಾಣುತ್ತದೆ. ಏಕೆಂದರೆ ತಲೆ ಮೇಲೆ ಬಹಶಃ ಏನೊ ಇಟ್ಟುಕೊಂಡಿರಬೇಕು ಮುಖದಿಂದ ಮೇಲ್ಭಾಗವೆಲ್ಲವೂ ಹಾಳಾಗಿರುವುದರಿಂದ ಸ್ಪಷ್ಟವಾಗಿ ತಿಳಿಯುವುದಿಲ್ಲ.

ಆಭರಣ ಮತ್ತು ವಸ್ತ್ರವಿನ್ಯಾಸ :

ಈ ಸ್ತ್ರೀಯರಲ್ಲಿ ಬಲಗಡೆಯವಳು ಕೊರಳಲ್ಲಿ ಏಳು ಮುತ್ತಿನ ಸರಗಳನ್ನು ಧರಿಸಿದ್ದಾಳೆ ಕೆಂಪು ವರ್ಣದ ರವಿಕೆಯ ಮೇಲೆ ಚಿಕ್ಕ ಚಿಕ್ಕ ಕಪ್ಪು ವರ್ಣದ ಹೂವಿನ ಚಿತ್ರಗಳಿವೆ. ಈ ರವಿಕೆಯ ಅಂಚಿಗೆ ನಕ್ಷೆಗಳಿವೆ ಇವುಗಳಲ್ಲಿ ಕೆಂಪು, ಹಸಿರು, ಹಳದಿ ಹವಳಗಳಂತೆ ತೋರಿಸಲಾಗಿದೆ. ಇವಳು ಲಂಗ ಧರಿಸಿದ್ದು ಕೈಗಳಲ್ಲಿ ಬಳೆಗಳಿವೆ ಕಿವಿಯಲ್ಲಿ ಕರ್ಣ ಕುಂಡಲಗಳಿವರ ಇವು ಮುತ್ತಿನಿಂದ ಕೂಡಿವೆ. ತೆಲೆಯ ಮೇಲೆ ಸೆರಗವನ್ನು ಹಾಕಿಕೊಂಡಿದ್ದಾಳೆ. ಮೈಮೇಲೆ ಪಾರದರ್ಶಕದಂತ ಒಂದು ಬಟ್ಟೆಯೂ ಇದೆ ಇವರ ಹಿಂದಿರುವ ಮೂವರು ಸ್ತ್ರೀಯರಲ್ಲಿ ಒಬ್ಬಳು ಕೆಂಪು ಲಂಗ ಧರಿಸಿದ್ದಾಳೆ ಅದರಲ್ಲಿ ಹೂ ಬಳ್ಳಿಗಳ ವಿನ್ಯಾಸಗಳಿವೆ. ಇವಳ ಹಿಂದಿದ್ದವಳ ಕೈಯಲ್ಲಿ ಬಳೆಗಳಿವೆ, ಅಲ್ಲದೇ ಸಿರೆಯನ್ನು ಮತ್ತು ರವಿಕೆಯನ್ನು ಧರಿಸಿದ್ದಾಳೆ. ಸೀರೆಯ ಮೇಲೆ ಚಿಕ್ಕ ಚಿಕ್ಕ ಹೂಗಳಿವೆ ಬಲಗಡೆಗೆ ಇರುವವಳು ಲಂಗ ತೊಟ್ಟಿರಬಹುದು ಕೊರಳಲ್ಲಿ ಬಿಳಿ ಹೂವಿನ ಮಾಲೆಯಿದೆ. ಇನ್ನು ಇವರ ಎದುರಿಗೆ ಒಬ್ಬಳು ಬುಟ್ಟಿ ಹಿಡಿದವಳು ರವಿಕೆಯನ್ನು ಧರಿಸಿದ್ದಾಳೆ ಕೈಯಲ್ಲಿ ಚಿಕ್ಕ ಬಳೆಗಳಿವೆ ಕೊರಳಲ್ಲಿ ಮುತ್ತಿನ ಸರಗಳಿವೆ ಕರ್ಣಕುಂಡಲ ಧರಿಸಿದ್ದಾಳೆ ತೆಲೆಯ ಮೇಲೆ ಸೆರಗು ಹಾಕಿದ್ದಾಳೆ ಮಬ್ಬುಗಪ್ಪು ಸೀರೆಯುಟ್ಟಿದ್ದಾಳೆ ಇವಳ ಹಿಂದಿರುವ ಒಬ್ಬಳು ಕೊರಳಲ್ಲಿ ಮುತ್ತಿನ ಸರಗಳಿವೆ ಇವಳ ಹಿಂದಿರುವ ಒಬ್ಬಳು ತಲೆಮೇಲೆ ಸೆರಗು ಹಾಕಿದ್ದಾಳೆ. ಕೊರಳಲ್ಲಿ ಮುತ್ತಿನ ಬಿಳಿ ಸರಗಳನ್ನು ಧರಿಸಿದ್ದಾಳೆ ಕೊರಳಲ್ಲಿ ದೊಡ್ಡದಾದ ಹೂವಿನ ಮಾಲೆ ಹಾಕಿಕೊಂಡಿದ್ದಾಳೆ.

ವರ್ಣವಿನ್ಯಾಸ :

ಬಲಗಡೆಯ ಸ್ತ್ರೀಯು ಕೊರಳಲ್ಲಿ ಬಿಳಿ ವರ್ಣದ ಮುತ್ತಿನ ಸರಗಳಿವೆ ಕೆಂಪು ಬಣ್ಣದ ರವಿಕೆಯ ಮೇಲೆ ಚಿಕ್ಕ ಚಿಕ್ಕ ಕಪ್ಪು ಬಣ್ಣದ ಹೂವಿನ ಚಿತ್ರಗಳು ಈ ರವಿಕೆಯ ಅಂಚಿಗೆ ಕೆಂಪು ಹಳದಿ ಹಸಿರು ವರ್ಣದ ಹವಳಗಳು ನಕ್ಷೆಯಗಳ ನಡುವೆ ಇವೆ. ಕಪ್ಪು ಹಸಿರು ಬಣ್ಣದ ಲಂಗ ಉಟ್ಟಿದ್ದಾಳೆ. ಕೈಗಳಲ್ಲಿ ಕೆಂಪು ಹಸಿರು ಮತ್ತು ಬಂಗಾರದ ಬಳೆಗಳಿವಿ. ಹಿಂದಿರುವ ಸ್ತ್ರೀಯರಲ್ಲಿ ಒಬ್ಬಳು ಕೆಂಪು ಬಣ್ಣದ ಲಂಗದ ಮೇಲೆ ಹಸಿರು ಬಿಳಿ ಹೂಗಳಿವೆ ಮತ್ತು ಕೆಂಪು ಬಳ್ಳಿಗಳ ವಿನ್ಯಾಸವಿದೆ. ಇವಳ ಹಿದೆ ಇರುವ ಸ್ತ್ರೀಯ ಕೈಯಲ್ಲಿ ಹಸಿರು ಕೆಂಪು

ಬಳೆಗಳಿವೆ ತಿಳಿಹಸಿರು ಕುಪ್ಪಸ ತೊಟ್ಟಿದ್ದಾಳೆ. ಕೆಂಪು ಬಣ್ಣದ ಸೀರೆಯುಟ್ಟಿದ್ದಾಳೆ. ಇವಳ ಬಲಗಡೆಯವಳು ಕೊರಳಲ್ಲಿ ಬಿಳಿ ಹೂವಿನ ಮಾಲೆಯನ್ನು ಹಾಕಿಕೊಂಡಿದ್ದಾಳೆ. ಬುಟ್ಟಿ ಹಿಡಿದುಕೊಂಡವಳು ಕೆಂಪು ಕುಪ್ಪಸವನ್ನು ತೊಟ್ಟಿದ್ದಾಳೆ ಹಸಿರು ಕೆಂಪು ಬಳೆಗಳು ತಲೆಯ ಮೇಲೆ ಹಸಿರು ವರ್ಣದ ಸೆರಗು ಇದೆ. ಲಂಗದ ಮೇಲೆ ಕಪ್ಪು ವಿಶ್ರಿತ ತಿಳಿಯಾದ ವಸ್ತ್ರ ಧರಿಸಿರುವಳು. ಹಿಂದೆ ಇರುವಳು ತಿಳಿಗಪ್ಪು ಮಿಶ್ರಿತ ತಿಳಿಯಾದ ಹಸಿರು ವರ್ಣದ ಲೇಪನವಿದ್ದಂತೆ ಇದು ಪಾರದರ್ಶಕದ ಹಾಗೆ ಕಾಣುತ್ತದೆ. ಇವಳ ಹಿಂದಿನವಳು ತಲೆ ಮೇಲೆ ಕೆಂಪು ವರ್ಣದ ಸೆರಗು ಬಿಳಿ ಮುತ್ತಿನ ಸರಗಳು ಕೊರಳಲ್ಲಿ ಬಿಳಿ ಹೂವಿನ ಮಾಲೆ ಧರಿಸಿರುವಳು ಇವಳು ಬಹುಶಃ ಕೆಂಪು ವರ್ಣದ ಸೀರೆಯುಟ್ಟಿರಬಹುದು.

ವರ್ಣಚಿತ್ರ ಲ :

ಬಾಗಿಲಿನ ಎಡಭಾಗದಲ್ಲಿ ಒಂದು ಕಟ್ಟೆಯ ಮೇಲೆ ಕುಳಿತ ವ್ಯಕ್ತಿಯನ್ನು ಚಿತ್ರಿಸಿದ್ದಾರೆ. ಇವನು ಎದ್ದು ಹೋಗುವವನಂತೆ ಒಂದು ಕಾಲು ಹಿಂದೆ ಇಟ್ಟು ಒಂದು ಕಾಲು ಮುಂದೆ ಇಟ್ಟಿದ್ದಾನೆ. ಕೈಯನ್ನು ಮುಂದೆ ಚಾಚಿದ್ದಾನೆ ಬಹುಶಃ ಯಾರಿಗೋ ಕೈಚಾಚಿರಬಹುದು ಇವನು ಬಲಕ್ಕೆ ಬಾಗಿರುವುದರಿಂದ ಶರೀರದ ಮಡಿಕೆಗಳನ್ನು ತೋರಿಸಿದ್ದಾನೆ. ಇವನ ಬಲಭಾಗದಲ್ಲಿ ಒಂದು ಮಗುವನ್ನು ಚಿತ್ರಿಸಲಾಗಿದೆ. ಈ ಮಗುವು ಒಬ್ಬ ಸ್ತ್ರೀಯ ಬೆನ್ನು ಹಿಡಿದು ಎದ್ದು ನಿಲ್ಲುವುದರಲ್ಲಿದೆ. ಈ ಮಗುವು ತನ್ನ ಬಲ ಕೈಯಲ್ಲಿ ಏನೋ ಒಂದು ವಸ್ತು ಹಿಡಿದಂತೆ ಕಾಣುವುದು ಮಗುವು ಎಲ್ಲೊ ಒಂದು ಕಡೆ ದೃಷ್ಟಿಯಿಟ್ಟು ನೋಡುತ್ತಿದೆ. ಸ್ತ್ರೀಯ ಚಿತ್ರ ಸ್ಪಷ್ಟವಿಲ್ಲ.

ಆಭರಣ ಮತ್ತು ವಸ್ತ್ರವಿನ್ಯಾಸ :

ಕಟ್ಟೆಯ ಮೇಲೆ ಕುಳಿತ ವ್ಯಕ್ತಿಯ ಮೈಮೇಲೆ ಬಟ್ಟೆಗಳಿಲ್ಲ ಸೊಂಟದಲ್ಲಿ ಆಭರಣದ ಪಟ್ಟಿಕೆಯಿದೆ ಕಾಲ್ಗಡಗ ಹಾಕಿದ್ದಾನೆ ಕಟ್ಟೆಯ ಮೇಲೆ ಅರಿವೆಯು ಮೇಲಿಂದ ಕೆಳಗಿನವರೆಗೆ ನೆಲದ ಮೇಲೆ ಬಿದ್ದಿದೆ. ಇದರಲ್ಲಿ ಹೂವುಗಳ ವಿನ್ಯಾಸವಿದೆ ಮಗುವಿನ ಸೊಂಟಕ್ಕೆ ಆಭರಣವಿದೆ ಸೊಂಟದ ಮೇಲೆ ಕೆಂಪು ಬಟ್ಟೆಯನ್ನು ಧರಿಸಿದೆ ಬಲಗೈಯಲ್ಲಿ ಮಗು ಏನೋ ವಸ್ತುವಿದ್ದಂತೆ ತೋರುವುದು ಮಗು ಹಿಡಿದುಕೊಂಡ ವ್ಯಕ್ತಿಯು ಬಹುಶಃ ಸ್ತ್ರೀ ಇರಬಹುದು ಏಕೆಂದರೆ ಕೊರಳಲ್ಲಿ ಮುತ್ತಿನ ಸರಗಳಿವೆ ರಟ್ಟೆಯಲ್ಲಿ ಆಭರಣವಿದೆ ಅದರಲ್ಲಿ ಹಸಿರು ಕೆಂಪು ಹವಳಗಳಿವೆ ಮಗುವಿನ ಹಿಂದೆ ಒಬ್ಬ ವ್ಯಕ್ತಿಯ ಚಿತ್ರವಿದೆ.

ವರ್ಣವಿನ್ಯಾಸ :

ವ್ಯಕ್ತಿಯ ಮೈಬಣ್ಣವನ್ನು ಸ್ವಲ್ಪ ಪ್ರಮಾಣದಲ್ಲಿ ಕಪ್ಪು ಮಿಶ್ರಿತ ಗೋಧಿ ವರ್ಣವಿದೆ. ಕಟ್ಟೆಯ ಮೇಲಿಂದ ಕೆಳಗೆ ಬಿದ್ದಿರುವ ಬಟ್ಟೆಯು ಹುದಿ ವರ್ಣದಲ್ಲಿದೆ. ಮಗುವು ಹಿಡಿದುಕೊಂಡು ವ್ಯಕ್ತಿಯ ರಟ್ಟೆಯಲ್ಲಿರುವ ಆಭರಣದಲ್ಲಿ ಹಸಿರು ಕೆಂಪು ಬಣ್ಣದ ಹವಳಗಳಿವೆ. ಮಗುವಿನ ಹಿಂದಿರುವ ವ್ಯಕ್ತಿಯನ್ನು ಕಂದು ವರ್ಣದಲ್ಲಿ ಚಿತ್ರಿಸಲಾಗಿದೆ.

೨. ನಿಸರ್ಗ ಚಿತ್ರಗಳು :

ಇಲ್ಲಿ ಗೋಡೆಯ ತುಂಬ ರೋಮ್ಯಾಂಟಿಕ ಅಥವಾ ರಮ್ಯ ಶೈಲಿಯ ವರ್ಣ ಚಿತ್ರಗಳನ್ನು ಕಾಣಬಹುದು. ಇವು ದೊಡ್ಡ ಗಿಡ ಮರಗಳನ್ನು ಚಿತ್ರಿಸಲಾಗಿದೆ. ಕೆಳಗಿರುವ ಚಿತ್ರಗಳ ಮೇಲ್ಭಾಗದಿಂದ ಹಿಡಿದು ಮೇಲೆ ಛತ್ತಿನವರೆಗೂ ಎತ್ತರವಾಗಿ ಇವುಗಳನ್ನು ಚಿತ್ರಿಸಲಾಗಿದೆ ನಂತರ ಮೇಲಿನ ಕಮಾನುಗಳ ಮೇಲ್ಭಾಗದಲ್ಲಿ ಅಗಲವಾಗಿ ಹರಡಿಕೊಂಡಿದೆ. ಈ ನಿಸರ್ಗ ಚಿತ್ರದಲ್ಲಿ ಯಥಾ ದರ್ಶನದ ತತ್ವಗಳು ಸರಿಯಾಗಿ ನಿರೂಪಿಸಿದ್ದಾರೆ. ಇಲ್ಲಿ ಮೂರು ಗೋಡೆಗಳ ತುಂಬ ಈ ಚಿತ್ರಗಳನ್ನು ಕಾಣಬಹುದು ಇಲ್ಲಿ ಬಾಗಿಲಿನ ಬದಿಯಿರುವ ಗೋಡೆಯಲ್ಲಿರುವ ಚಿತ್ರದ ಮುಂದೆ ನಿಂತಾಗ ನಿಜವಾದ ಗಿಡದ ಮುಂದೆ ನಿಂತಂತೆ ಭಾಸವಾಗುವುದು. ಅಲ್ಲದೇ ಸೂರ್ಯಾಸ್ತದ ದೃಷ್ಯವನ್ನೂ ಇಲ್ಲಿ ಚಿತ್ರಿಸಲಾಗಿದೆ ಗಿಡ ಮರಗಳ ಹಿನ್ನಲೆಯಲ್ಲಿ ದೂರದಲ್ಲಿ ಕಾಣುವ ರಗುಡ್ಡ ಬೆಟ್ಟಗಳು ದೂರದಲ್ಲಿ ಹಾರುವ ಹಕ್ಕಿಗಳು ಮೊದಲಾದ ರಮಣೀಯತೆಯಿಂದ ಕೂಡಿದಂತಹ ದೃಶ್ಯಾವಳಿಯನ್ನು ಕಾಣಬಹುದು.

ವರ್ಣವಿನ್ಯಾಸ :

ಈ ಚಿತ್ರಗಳು ರಮ್ಯ ಶೈಲಿಯಲ್ಲಿರುವುದರಿಂದ ಇಲ್ಲಿ ವರ್ಣ ಲೇಪನವು ಮೊದಲು ತೀಡಿ ನಂತರ ಅದರ ಮೇಲೆ ಲೇಪನ ಮಾಡಲಾಗಿದೆ. ಗಿಡಮರಗಳನ್ನು ಯಥಾದರ್ಶನ ತತ್ವಗಳಿಗನುಗುಣವಾಗಿ ಮೂಡಿ ಬಂದಿವೆ ಹೇಗೆಂದರೆ ಗಿಡದ ಬೊಡ್ಡೆಗಳನ್ನು ಕೆಳಗಿನಿಂದ ಚಿತ್ರಿಸುವಾಗ ದಟ್ಟವಾದ ವರ್ಣಗಳನ್ನು ಕಂದು ನೇರಳೆ ಮತ್ತು ದಟ್ಟ ನೀಲಿ ವರ್ಣಗಳ ಮಿಶ್ರಣವನ್ನು ಮೇಲಿನ ತನಕ ತಿಳಿಯಾದ ಲೇಪನವನ್ನು ಗಮನಿಸಬಹುದು. ಇದರಲ್ಲಿ ಮರಗಳು ಬಹು ಎತ್ತರವನ್ನು ತೋರಿಸುತ್ತದೆ. ಮತ್ತು ಈ ವರ್ಣಗಳ ಮಿಶ್ರಣದಲ್ಲಿಯೂ ಕೂಡಾ ಕೆಳಗೆ ದಟ್ಟವರ್ಣದಲ್ಲಿ ಬೆಳಕು ಮತ್ತು ನೆರಳುಗಳ ಛಾಯೆಯು ಮೇಲುತನಕ ಹೋದಾಗ ಗಿಡದ ಬೊಡ್ಡೆಯ ವಿನ್ಯಾಸದಲ್ಲಿ ವರ್ಣ ಬದಲಾವಣೆಯನ್ನು ಕಾಣಬಹುದು ಮತ್ತು ಬೆಳಕು ಬೀಳುವ ಭಾಗದಲ್ಲಿ ಕೆಲವೊಂದು ಕಡೆ ನೇರಳೆ ತಿಳಿಯಾದ ಛಾಯೆಯೂ ಕಂಡುಬರುವುದು. ಮೇಲೆ ಗಿಡದ ಟೊಂಗೆಗಳು ಕಮಾನುಗಳ ಮೇಲೆ ಗೋಡೆಯ ತುಂಬ ಹರಡಿಕೊಂಡಿವೆ. ಇವುಗಳ ವರ್ಣ ಲೇಪನವು ಆಕರ್ಷಕವಾಗಿ ಮೂಡಿವೆ, ಇದರಲ್ಲಿ ಹಸಿರು ಇಪ್ಪೆ ಎಲೆ ದಟ್ಟ ಹಸಿರು ತಿಳಿಹಸಿರು ನೇರಳೆ ಮಿಶ್ರಿತ ಹಸಿರು ಕಪ್ಪುಹಸಿರು ಈ ವರ್ಣಗಳ ಲೇಪನವನ್ನು ಗಮನಿಸಬಹುದು. ಟೊಂಗೆಗಳು ದಟ್ಟವಾಗಿ ಕೂಡಿದಂತ ಸ್ಥಳದಲ್ಲಿ ದಟ್ಟ ಹಸಿರು ಇಪ್ಪೆ ಎಲೆ ಮತ್ತು ಟೊಂಗೆಗಳು ಬಿಡಿಬಿಡಿಯಾದ ಸ್ಥಳದಲ್ಲಿ ಹಸಿರು ವರ್ಣಗಳನ್ನು ಸುಂದರವಾಗಿ ಲೇಪಿಸಲಾಗಿದೆ ಮತ್ತು ಇಲ್ಲಿ ಸೂರ್ಯಾಸ್ತವನ್ನು ಬಹು ಸುಂದರವಾಗಿ ಚಿತ್ರಿಸಲಾಗಿದೆ. ಈ ಸಮಯದಲ್ಲಿ ಸೂರ್ಯನ ಹೊಂಬಣ್ಣದ ಕಿರಣಗಳು ಗಿಡದ ಟೊಂಗೆಗಳು ಇತರಡೆಗಳಲ್ಲಿ ಪಸರಿಸಿದಾಗ ಆಗುವ ವರ್ಣವಿನ್ಯಾಸವನ್ನು ಇಲ್ಲಿ ಸುಂದರವಾಗಿ ನಿರೂಪಿಸಿದ್ದಾರೆ. ಟೊಂಗೆಗಳ ಮುಂಭಾಗ ಅಂದರೆ ಕಿರಣಗಳಿಗೆ ಎದುರಾಗಿ ತೋರಿಸುವ ಸಂದರ್ಭದಲ್ಲಿ ಆಗುವ ವಿನ್ಯಾಸವು ತಿಳಿಯಾದ ಕೇಸರಿಯಿಂದ ನಂತರ ಸ್ವಲ್ಪ ಬದಿಗೆ ಆ ಬೆಳಕು ಹೊರಳಿದಾಗ ಹಸಿರು ಮಿಶ್ರಿತ ಕೇಸರಿ ಸ್ವಲ್ಪ ಪ್ರಮಾಣದಲ್ಲಿ ಮತ್ತು ಹಿಂದೆ ತಿರುಗಿದಾಗ ಕೇಸರಿ

ಮಿಶ್ರಿತ ಹಸಿರು ವರ್ಣ ಲೇಪನ ಹಿಂಭಾಗದಲ್ಲಿ ಕೇಸರಿ ಹಸಿರು ಮತ್ತು ದಟ್ಟ ನೀಲಿ ಮಿಶ್ರಿತ ವರ್ಣ ಲೇಪನಗಳನ್ನು ಕಾಣಬಹುದು. ಇದರಂತೆಯೇ ಗಿಡದ ಬೊಡ್ಡೆಯ ಮೇಲೂ ಸಹ ಕೇಸರಿ ವರ್ಣದ ಛಾಯೆಯನ್ನು ತೋರಿಸಲಾಗಿದೆ ಆಕಾಶದಲ್ಲಿ ಹೊಂಬಣ್ಣದ ಕಿರಣಗಳು ತೇಲಾಡುತ್ತಿರುವ ಮೋಡಗಳನ್ನು ಛೇದಿಸಿದಾಗ ನೀಲಾಕಾಶದಲ್ಲಿ ಕೆಂಪಾದ ಮೋಡಗಳು ಬಹು ಸುಂದರವಾಗಿ ನಿರೂಪಿತವಾಗಿವೆ. ಇದರಲ್ಲಿ ತಿಳಿಯಾದ ಕೇಸರಿ ಮತ್ತು ಹಳದಿ ಮಿಶ್ರಿತ ಕೇಸರಿ ವರ್ಣಗಳನ್ನು ಕಾಣಬಹುದು ಬದಿಯಲ್ಲಿ ಚಿತ್ರಿವಾದ ಗಿಡಮರಗಳಲ್ಲಿ ಹಸಿರು ವರ್ಣಗಳನ್ನೂ ಕೂಡ ಸುಂದರವಾಗಿ ಚಿತ್ರಿಸಲಾಗಿದೆ. ಇದರಲ್ಲಿ ಮುಂದಿನ ಗೊಂಚಲಗಳು ದಟ್ಟವಾಗಿಯೂ ಹಿಂದಿನ ಗೊಂಚಲುಗಳು ತಿಳಿಯಾಗಿಯೂ ವರ್ಣ ಲೇಪನ ಮಾಡಲಾಗಿದೆ. ಮತ್ತು ದೂರ ಹೋದಂತೆ ಆಕಾಶವನ್ನು ತಿಳಿಯಾದ ವರ್ಣ ಲೇಪನ ತೋರಿಸಲಾಗಿದೆ. ಮತ್ತು ಅದರಲ್ಲಿ ಅಗುವ ಭೇದಗಳನ್ನು ಸ್ವಲ್ಪ ಪ್ರಮಾಣದಲ್ಲಿ ಹಳದಿ ಛಾಯೆಯೂ ಕಾಣುವುದು ಮತ್ತು ದೂರದ ಗಿಡಗಳನ್ನು ಸಹ ಮಬ್ಬಾಗಿ ಚಿತ್ರಿಸಲಾಗಿದೆ. ಅವುಗಳ ಹಿನ್ನಲೆಯಲ್ಲಿ ಬರುವ ಆಕಾಶವನ್ನು ಹಸಿರು ವಿಶ್ರಣದ ಛಾಯೆಯಿಂದ ತಿಳಿ ನೀಲಾಕಾಶವನ್ನು ಚಿತ್ರಿಸಲಾಗಿದೆ. ದೂರದಲ್ಲಿ ಹೋದಂತೆ ಭೂಮಿ ಆಕಾಶಗಳು ಲೀನವಾದಂತೆ ವರ್ಣಗಳನ್ನು ಪ್ರಯೋಗಿಸಿರುವುದು ಸುಂದರವಾಗಿ ನಿರೂಪಿತವಾಗಿದೆ ಅವುಗಳಲ್ಲಿ ಬೆಟ್ಟ ಗುಡ್ಡಗಳನ್ನು ಮಬ್ಬಾಗಿಯೂ ತೋರಿಸಲಾಗಿದೆ.

ಕಮಾನುಗಳು :

ಇಲ್ಲಿರುವ ಕಮಾನುಗಳಲ್ಲಿ ಹೂದಾನಿಗಳನ್ನು ಚಿತ್ರಿಸಲಾಗಿದೆ. ಇವು ಗಾಜಿನವಾಗಿದ್ದು ಅವುಗಳ ಒಳಗೆ ಹೂವು ಎಲೆ ಬಳ್ಳಿ ಮೇಲೆಯೂ ಹೂವು ಎಲೆಗಳನ್ನು ಚಿತ್ತಿಸಲಾಗಿದೆ. ಇದರಲ್ಲಿ ಹೂದಾನಿಗಳಿಗೆ ಪಾರದರ್ಶಕ ವರ್ಣ ಲೇಪನವಿದೆ. ಇದರಲ್ಲಿ ಬಿಳಿವರ್ಣದ ಹೂಗಳು ಮೇಲೆ ಕೆಂಪು ವರ್ಣದ ಹೂಗಳು ಹೀಗೆಯೇ ಎಲ್ಲ ಕಮಾನುಗಳಲ್ಲಿ ಚಿತ್ರಿಸಲಾಗಿದೆ.

ಫಲಪಾತ್ರೆ :

ಇಲ್ಲಿಯ ಮೊದಲನೆಯ ಬಾಗಿಲಿನ ಮೇಲೆ ಆಯತಾಕಾರದ ಒಂದು ಮಾಡವಿದೆ ಅದರಲ್ಲಿ ವಿವಿಧ ಫಲಗಳನ್ನು ತುಂಬಿದ ಹರಿವಾಣವನ್ನು ಚಿತ್ರಿಸಲಾಗಿದೆ. ಇದರಲ್ಲಿ ಆರು ಬಾಳೆಹಣ್ಣುಗಳ ಗೊನೆ ಸೇಬು, ಕಿತ್ತಳೆ ಹಣ್ಣುಗಳು, ದ್ರಾಕ್ಷಿ ಹಣ್ಣುಗಳ ಗೊಂಚಲ, ಮೊಸಂಬಿ ಹಣ್ಣುಗಳು ಮತ್ತು ಮಧ್ಯದಲ್ಲಿ ಅನಾನಸ ಹಾಗೂ ಸೀತಾಫಲ ಹಣ್ಣುಗಳಿವೆ.

ಹರಿವಾಣದ ಹಿನ್ನಲೆಯನ್ನು ಕಪ್ಪು ವರ್ಣದಿಂದ ತುಂಬಲಾಗಿದೆ. ಹಣ್ಣುಗಳಲ್ಲಿ ಬಾಳೆ ಹಣ್ಣುಗಳನ್ನು ಕಂದು ಮಿಶ್ರಿತ ಹಳದಿ, ಸೇಬು ಹಣ್ಣುಗಳಿಗೆ ದಟ್ಟ ಕೆಂಪು ವರ್ಣ ಕಿತ್ತಳೆ ಹಣ್ಣುಗಳಿಗೆ ಕಂದು ಮಿಶ್ರಿತ ಹಳದಿ ದ್ರಾಕ್ಷಿಗೆ ತಿಳಿ ಹಸಿರು ಮೊಸಂಬಿ ಹಣ್ಣಗಳಿಗೆ ತಿಳಿ ಕೇಸರಿ ಮಿಶ್ರಿತ ಹಳದಿವರ್ಣ ಅನಾನಸ ಹಸಿರು ವರ್ಣದಿಂದ ಚಿತ್ರಿಸಲಾಗಿದೆ.

ಕಿಟಕಿಗಳು :

ಕೋಣೆಯ ಒಳಗಡೆ ಹೋದಾಗ ಎದುರಿಗೆ ದೊಡ್ಡ ಕಮಾನು ಇದೆ. ಇದರಲ್ಲಿ ಸಾಲಾಗಿ ಮೂರು ಕಿಟಕಿಗಳಿವೆ ಅವುಗಳಿಗೆ ಬಾಗಿಲುಗಳನ್ನು ಕೂಡಿಸಿದ್ದಾರೆ ಈ ಮೂರು ಕಿಟಕಿಗಳ ಮೇಲೆ ಹೂವಿನ ಹಾಗೆ ದೊಡ್ಡ ರಂಧ್ರಗಳನ್ನು ಮಾಡಿದ್ದಾರೆ. ಕಿಟಕಿಗಳ ಮೇಲೆ ಮಗ್ಗಲು ಪಟ್ಟಿಗಳ ಮತ್ತು ಕೆಳಗೆ ನಕ್ಷೆಗಳನ್ನು ಚಿತ್ರಿಸಿದ್ದಾರೆ. ಇದರಲ್ಲಿ ಕೆಳಭಾಗದ ಆಯತದಲ್ಲಿ ಸುಳುವುಗಳು ಹೂಬಳ್ಳಿಗಳ ಚಿತ್ರಗಳಿವೆ. ಪಟ್ಟಿಕೆಗಳಲ್ಲಿ ಹೂಬಳ್ಳಿ ನಕ್ಷೆಯಿದೆ. ಇವುಗಳನ್ನು ಕೇವಲ ರೇಖೆಗಳಿಂದ ಚಿತ್ರಿಸಲಾಗಿದೆ.

ಛತ್ತು :

ಮೇಲೆ ತೊಲೆಗಳಿಗೆ ಕೂಡಾ ಅಲಂಕಾರ ಮಾಡಲಾಗಿದೆ. ತೊಲೆಗಳಿಗೆ ಅಗಲವಾದ ಆಯತದ ಜ್ಯಾಮಿತಿಯ ನಕ್ಷಾ ವಿನ್ಯಾಸಗಳಿವೆ. ಈ ಆಯತಗಳೊಳಗೆ ಆಕಾಶ ಮತ್ತು ಮೋಡಗಳ ಚಿತ್ರಣವನ್ನು ಕಾಣಬಹುದು. ಈ ಆಯತಗಳು ಒಂದಕ್ಕೊಂದು ಕೂಡುವ ಸ್ಥಳಾವಕಾಶದಲ್ಲಿ ಕೆಂಪುವರ್ಣ ತುಂಬಲಾಗಿದೆ. ಈ ತೊಲೆಗಳ ಎರಡು ಕಡೆಯ ಬದಿಗಳ ಮೇಲೆ ಪರದೆಯ ಹಾಗೆ ಜ್ಯಾಮಿತಿಯ ನಕ್ಷೆಗಳಿವೆ ಇವುಗಳನ್ನು ಒಂದು ಕಪ್ಪು ಒಂದು ಕೆಂಪು ವರ್ಣಗಳಿಂದ ತುಂಬಿದ್ದಾರೆ. ಕೆಳಭಾಗದಲ್ಲಿ ಹೂ ಬಳ್ಳಿ ನಕ್ಷೆಗಳಿವೆ. ಮೇಲ್ಭಾಗದಲ್ಲಿಯೂ ಕೂಡಾ ಹೀಗೆಯೇ ಮಾಡಲಾಗಿದೆ.

ಎರಡನೆಯ ಕೋಣೆ :

ಈ ಕೋಣೆಯಲ್ಲಿ ಮೊದಲಿನ ಕೋಣೆಯಲ್ಲಿರುವ ಹಾಗೆ ಯಾವುದೇ ನೈಜ ರೀತಿಯ ಚಿತ್ರಗಳಿರುವುದಿಲ್ಲ ಬರೀ ನಕ್ಷೆ ಸೂಳುವು ಚಿತ್ರಗಳನ್ನು ಮಾತ್ರ ಕಾಣಬಹುದು. ಈ ಕೋಣೆಗೆ ಮೂರು ಬದಿಯ ಗೋಡೆಗಳಿಗೆ ಬಾಗಿಲುಗಳಿವೆ ಬಲಗಡೆಗೆ ಮಾತ್ರ ದೊಡ್ಡ ಕಮಾನುಯಿದೆ. ಇದರಲ್ಲಿ ಕಿಟಕಿಗಳಿವೆ ಇದರಲ್ಲಿ ಎದುರು ಬದಿಗಿನ ಗೋಡೆಗಳಲ್ಲಿರುವ ಕಮಾನುಗಳ ಮೇಲೆ ಬಂಗಾರ ವರ್ಣದ ಲೇಪನವಿದೆ. ಕಮಾನುಗಳ ಒಳಗೆ ಅಂದರೆ ದ್ವಾರದ ಬಲಬದಿಗೆ ಇರುವ ಕಮಾನುಗಳಲ್ಲಿ ದೊಡ್ಡ ಗಾತ್ರಗಳ ಹೂದಾನಿಗಳ ಚಿತ್ರಗಳನ್ನು ಎದುರುಬದಿರಾಗಿ ಚಿತ್ರಿಸಿದ್ದಾರೆ. ಇವುಗಳಲ್ಲಿ ದೊಡ್ಡ ಸುಳುವುಗಳನ್ನು ನಕ್ಷೆಗಳನ್ನು ಚಿತ್ರಸಿದ್ದಾರೆ. ಮೇಲೆ ಹೂ ಎಲೆಗಳನ್ನು ನಕ್ಷೆಗಳಲ್ಲಿ ಚಿತ್ರಿಸಿದ್ದಾರೆ ಮತ್ತು ಎಡಭಾಗದ ಎದುರುಬದಿರಿನ ಕಮಾನುಗಳಲ್ಲಿಯ ಹುದಾನಿಗಳು ಚಿಕ್ಕವಾಗಿದ್ದು ಇವು ಸೂಕ್ಷ್ಮ ಸುಳುವು ನಕ್ಷೆಗಳನ್ನು ಹೊಂದಿವೆ. ಮೇಲೆ ಎಲೆ ಹೂಗಳಿವೆ ಮತ್ತು ಕಮಾನುಗಳ ಮೇಲೆ ಎಡಬಲಗಳಲ್ಲಿ ಹೂಗಳನ್ನು ನಕ್ಷೆಗಳಲ್ಲಿ ಚಿತ್ರಿಸಲಾಗಿದ್ದು ಇವು ಕೆಂಪು, ನೀಲಿ ವರ್ಣದಲ್ಲಿವೆ.

ಎಡಬದಿಯ ಗೋಡೆಯಲ್ಲಿಯೂ ಕೂಡಾ ಕಮಾನುಗಳಲ್ಲಿ ಹೂದಾನಿಗಳನ್ನು ಚಿತ್ರಿಸಲಾಗಿದೆ. ಇವುಗಳು ಕೂಡಾ ಕೆಳಗಿನ ಕಮಾನುಗಳಲ್ಲಿ ದೊಡ್ಡ ಹೂದಾನಿಗಳ ಚಿತ್ರವಿದ್ದರೆ ಮೇಲಿನವು ಚಿಕ್ಕವಾಗಿವೆ. ಈ ಕಮಾನುಗಳಲ್ಲಿರುವ ಹೂದಾನಿಗಳಿಗೆ ಕೆಂಪು, ನೀಲಿ ವರ್ಣಗಳಿದ್ದು ಮೇಲೆ ಬಂಗಾರ ವರ್ಣದ ನಕ್ಷೆ ಮತ್ತು

ಸುಳುವುಗಳನ್ನು ಚಿತ್ರಿಸಿದ್ದಾರೆ. ಈ ಹೂದಾನಿಗಳ ಮೇಲೆ ಚಿಕ್ಕ ಎಲೆ ಮತ್ತು ಉದ್ದವಾದ ಎಲೆಗಳು ಹಾಗೂ ಚಿಕ್ಕ ಮತ್ತು ದೊಡ್ಡದಾದ ಕೆಂಪು, ನೀಲಿ, ಬಿಳಿ ಹೂಗಳನ್ನು ಚಿತ್ರಿಸಲಾಗಿದೆ.

ಬಲಗಡೆಯ ಗೋಡೆಯಲ್ಲಿ ದೊಡ್ಡದಾದ ಕಮಾನುಯಿದ್ದು ಇದರಲ್ಲಿ ಕಿಟಕಿಗಳಿವೆ ಇವುಗಳ ಮೇಲ್ಭಾಗದಲ್ಲಿ ಕಟ್ಟಿಗೆಯ ಕಿಂಡಿಗಳನ್ನು ಹೂವಿನ ಹಾಗೆ ಮಾಡಿದ್ದಾರೆ. ಇವುಗಳಿಗೆ ಕೆಂಪು, ಹಸಿರು, ನೀಲಿ, ಹಳದಿ ಗಾಜುಗಳನ್ನು ಕೂಡಿಸಲಾಗಿದೆ. ಈ ದೊಡ್ಡ ಕಮಾನಿನ ಮೇಲೆ ಬಂಗಾರದ ವರ್ಣಲೇಪನವಿದೆ. ಎಡಬಲಗಳಲ್ಲಿ ದೊಡ್ಡ ನೀಲಿ ಬಣ್ಣದ ಹೂಗಳನ್ನು ಚಿತ್ರಿಸಲಾಗಿದೆ. ಮೂರು ಬಾಗಿಲುಗಳ ಮೇಲೆ ಆಯತಾಕಾರದ ವೃಕ್ರ ಅಂಚುಳ ಮಾಡುಗಳು ಇವೆ. ಈ ಮಾಡುಗಳ ಸುತ್ತಲೂ ಸುಳುವಿನ ನಕ್ಷೆಗಳನ್ನು ಕಾಣಬಹುದು. ಬಹಳ ಸುಂದರವಾಗಿ ಇವುಗಳನ್ನು ಚಿತ್ರಿಸಿದ್ದಾರೆ. ಇವುಗಳನ್ನು ಬಂಗಾರದ ವರ್ಣದಿಂದಲೇ ತುಂಬಲಾಗಿದೆ. ಒಳಗೆ ಯಾವ ತರಹದ ಸುಳುವಿನ ನಕ್ಷೆಗಳಿರುವುದಿಲ್ಲ ಇಲ್ಲಿ ಕೋಣೆಯ ಎಲ್ಲ ಗೋಡೆಗಳ ತುಂಬ ಹೂ ಬಳ್ಳಿಗಳನ್ನೇ ಚಿತ್ರಿಸಿದ್ದಾರೆ. ಇವುಗಳು ನೀಲಿ ಬಣ್ಣದ ಅಗಲವಾದ ಹೂಗಳನ್ನು ಚಿತ್ರಿಸಲಾಗಿದೆ. ಇವುಗಳಿಗೆ ಚಿಕ್ಕ ಚಿಕ್ಕ ಎಲೆಗಳುಳ್ಳ ಟೊಂಗೆಗಳು ಹಸಿರು ಬಣ್ಣದಲ್ಲಿ ಚಿತ್ರಿಸಲಾಗಿದೆ. ಈ ಬಳ್ಳಿಗಳನ್ನು ಕೆಳಗಿನಿಂದ ಮೇಲಿನವರೆಗೂ ಹಬ್ಬಿಸಲಾಗಿದೆ. ಇವು ಬಹಳ ಸುಂದರವಾಗಿ ಚಿತ್ರಿತವಾಗಿವೆ.

ಮೇಲೆ ಛತ್ತಿನಲ್ಲಿರುವ ತೊಲೆಗಳಿಗೆ ಬಂಗಾರದ ವರ್ಣದ ಲೇಪನವಿದೆ. ನಡುನಡುವೆ ಮೊದಲನೆಯ ಕೋಣೆಗೆ ಮಾಡಿದ ಹಾಗೆ ಇಲ್ಲಿಯೂ ಸಹ ಅಗಲವಾದ ಪಟ್ಟಿಕೆಗಳುಳ್ಳ ಆಯತದ ನಕ್ಷಾ ವಿನ್ಯಾಸಗಳಿವೆ. ಈ ತೊಲೆಗಳಿಗೆ ಬದಿಗಳಲ್ಲಿಯೂ ಕೂಡಾ ಮೊದಲಿನ ಕೋಣೆಯಂತೆಯೆ ಪರದೆಯ ನಕ್ಷೆಗಳಿವೆ. ಇವುಗಳಿಗೆ ಕಪ್ಪು ಕಂದು ವರ್ಣ ಲೇಪನವನ್ನು ಕಾಣಬಹುದು. ಈ ಕೋಣೆಯ ಬಾಗಿಲುಗಳಿಗೆ ಯಾವುದೇ ತರಹದ ನಕ್ಷೆಗಳನ್ನು ಚಿತ್ರಿಸಿಲ್ಲ.[೭೪]

ಬಣ್ಣದ ಬಿಲ್ಲೆಯ ಕೆಲಸ :

ದಖ್ಖನಿನ ಕಟ್ಟಡಗಳಲ್ಲಿ ಉತ್ತರದ ಮೊಗಲರ ಕಟ್ಟಡಗಳಲ್ಲಿ ಕಾಣುವ ಮೇರಗುಕೊಟ್ಟ ಚದರಬಿಲ್ಲೆಗಳ ಜೋಡಣೆ ಕೆಲಸವು ವ್ಯಾಪಾಕವಾಗಲಿಲ್ಲ. ವಾಸ್ತು ರಚನೆಗಾಗಿ ಬಣ್ಣ ಬಣ್ಣದ ಸಿರಾಮಿಕ್ಸ ಬಿಲ್ಲೆಗಳನ್ನು ಭಾರತಕ್ಕೆ ತರಲಾಯಿತಾದರು, ಅವು ಸ್ಥಳಿಯ ತಾಂತ್ರಿಕತೆಗೆ ಬದಲಿಯಾಗಲಿಲ್ಲ. ಕಲ್ಲಿನ ಕಟ್ಟಡಗಳಲ್ಲಿ ಬೇರೆ ಸಾಮಗ್ರಿಗಳನ್ನು ಕುಡಿಸುವುದು ಕಷ್ಟ, ಆದರೂ ಬಹಮನಿ ಕಾಲದಲ್ಲಿ, ವಿಷೇಶವಾಗಿ ಬಿದರೆಯಲ್ಲಿ ಚದರಬಿಲ್ಲೆಗಳನ್ನು ಉಪಯೋಗಿಸುವ ಪ್ರಯೋಗವು ನಡೆಯಿತು. ಇರಾಕ, ಪರ್ಶಿಯಾ, ಖುರಾಸಾನ ಮತ್ತು ಮಧ್ಯ ಏಷಿಯಾದ ಇತರ ಸ್ಥಳಗಳಿಂದ ವಿದೇಶಿಯರು ಬರತೊಡಗಿದ ಮೇಲೆ ಸ್ಮಾರಕ ಕಟ್ಟಡಗಳಲ್ಲಿ ಬಿಲ್ಲೆಗಳನ್ನು ಬಳಸುವ ಪದ್ಧತಿ ರೂಢಿಗೆ ಬಂದಿತು.

ಹದಿನೆಳನೆಯ ಶತಮಾನದ ಕೊನೆಯ ಭಾಗದಿಂದ ಮುಂದಕ್ಕೆ ವಿದೇಶದಿಂದ ತರಸಿದ ನೀಲಿ ಮತ್ತು ಬಿಳಿ ಚೀನಿ ಪಿಂಗಾಣಿ ಮತ್ತು ಬಟ್ಟೆಗಳ ಮೇಲೆ ನೊಡಬಹುದು. ಆ ಮೇಲೆ ೧೫ನೆಯ

[illegible]

ಶತಮಾನದಿಂದ ಮುಂದಕ್ಕೆ ಮುಸ್ಲಿಂ ವಿನ್ಯಾಸಕಾರರು ಎಲ್ಲಾ ಮಾಧ್ಯಗಳ ಮೇಲೆಯು ಈ ವಿನ್ಯಾಸಗಳನ್ನು ಉಪಯೋಗಿಸಿದರು. ಭಾರತದಲ್ಲಿ ಈ ವಿನ್ಯಾಸಗಳನ್ನು ಬಣ್ಣದ ಚದುರುಬಿಲ್ಲೆಗಳ ಮೇಲೆ ಮೊದಲ ಉಪಯೋಗಿಸಿದ್ದು, ಈ ಕಟ್ಟಡಗಳಲ್ಲಿ ಮತ್ತು ಇತರ ದಖ್ಖನ ಸ್ಮಾರಕ ಕಟ್ಟಡಗಳಲ್ಲಿ, ಗೋಲ್ಕೊಂಡದ ಕುತುಬಶಾಹಿಗಳು ಈ ಬಿಲ್ಲೆಗಳ ಉಪಯೋಗವನ್ನು ಚನ್ನಾಗಿ ಮಾಡಿಕೊಂಡರು. ಆದರೆ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಬೀದರ ಮತ್ತು ಬಿಜಾಪುರಗಳಲ್ಲಿ ಮಾತ್ರವೇ ನಾವು ಚದರಬಿಲ್ಲೆಗಳ ವ್ಯಾಪಕ ಬಳಕೆಯನ್ನು ನೋಡಬಹುದಾಗಿದೆ.[೭೫]

ಬಟ್ಟೆಗಳ ಮೇಲಿನ ವಿನ್ಯಾಸ :

ಆಹಾರ ಮನುಷ್ಯನ ಅತೀ ಅವಶ್ಯಕತೆಗಳಲ್ಲಿ ಒಂದಾಗಿದ್ದು, ಅದರ ನಂತರದ ಸ್ಥಾನವೇ ಬಟ್ಟೆಯದು. ಅದರ ಬೇಡಿಕೆಯ ಜೊತೆಗೆ ವೃತ್ತಿಯು ಆರಂಭವಾಯಿತೆನ್ನಬಹುದು. ಉತ್ಪಾದನಾ ತಾಂತ್ರಿಕತೆಯಲ್ಲಿ ಸುಧಾರಣೆಯಾದಂತೆ ಬಟ್ಟೆಗಳಲ್ಲಿ ಸೌಂದರ್ಯದ ಅಂಶವೂ ಸೇರಿಕೊಂಡಿತು. ಕಲಾಕೌಶಲ್ಯವನ್ನು ವಯಕ್ತಪಡಿಸಲು ಅದು ಒಂದು ಮಾಧ್ಯಮವಾಯಿತು. ದಖ್ಖನ್ನಿನ ನೇಕಾರರು ಈ ಕಲೆಯಲ್ಲಿ ಪರಣಿತರಾಗಿದ್ದರು. ಕೈಗಾರಿಕಾ ಕ್ರಾಂತಿಯಾಗುವುದಕ್ಕೆ ಮೊದಲು ಭಾರತೀಯ ಬಟ್ಟೆಗಳು ವೈವಿಧ್ಯ, ಗುಣಮಟ್ಟ ಮತ್ತು ನಯಗಾರಿಕೆಯಲ್ಲಿ ವಿಶ್ವಮಾನ್ಯತೆಯನ್ನು ಪಡೆದಿದ್ದವು.

ಬಿಜಾಪುರವು ಮಧ್ಯಏಷಿಯಾದ ಅನೇಕ ಪ್ರದೇಶಗಳೊಂದಿಗೆ ನಿರಂತರವಾಗಿ ಸಂಪರ್ಕವನ್ನು ಹೊಂದಿದ್ದು, ಅಲ್ಲಿಂದ ಕುಶಲ ಕಸಬುದಾರರು ಬಿಜಾಪುರಕ್ಕೆ ಬರಲು ಪ್ರಾರಂಭಿಸಿದರು. ಅಲ್ಲದೆ ಬಿಜಾಪುರವು ಸಾಫ್‌ವಿದ್, ಪರ್ಷಿಯ ಮಾತ್ರವಲ್ಲದೆ, ಈಜಿಪ್ಟ, ಸಿರಿಯ ಮತ್ತು ಈರಾಕಗಳೊಂಚಿಗೆ ಕೂಡಾ ಸಂಬಂಧವನ್ನು ಪಡದಿತ್ತು. ಹೀಗಾಗಿ ರನ್ನಗಂಬಳಿಗಳ ತಯಾರಿಕೆಯಲ್ಲಿ ದಖ್ಖನ್ನಿನ ಉತ್ಪನ್ನಗಳ ಮೇಲ್ಮೆಯ ಜೊತೆಗೆ ಉತ್ಕೃಷ್ಟತೆಯ ಸಾಧನೆಗೆ ಕಾರಣವಾಯಿತು. ಅನೇಕ ಜಮಖಾನೆ ಮತ್ತು ರತ್ನಗಂಬಳಿಗಳಲ್ಲಿ ಪ್ರಧಾನ ಆಧಾರ ವರ್ಣವಾಗಿ ಮೆದುವಾದ ಪಿಂಕ್, ಮಾಸಲು ಚಿನ್ನ ಮತ್ತು ಹಗುರ ಬೀಚ್ ವರ್ಣಗಳನ್ನು ಉಪಯೋಗಿಸಲಗಿದೆ. ಕಂದು ಅಥವಾ ಬಣ್ಣ ತೆಗೆಯದ ಹತ್ತಿ ಅವುಗಳ ಸಾಮಾನ್ಯ ಗುಣದ ಮೇಲೆ ಸಾಮಾನ್ಯ ಪರಿಣಾಮವನ್ನು ಉಂಟುಮಾಡಿವೆ. ಉಣ್ಣೆಯ ಗಂಟು ಹಾಕಿದ ಪೈಲುಗಳು ಹತ್ತಿಯ ಹಾಸು ಹೊಕ್ಕುಗಳೊಂದಿಗೆ ಸೇರಿಸಿ ನೇಯ್ದ ಮಾದರಿಗಳು ಎರಡೂ ಇದ್ದವು. ಸಮರೂಪದ ಗಂಟುಗಳು, ಅಸಮರೂಪದ ಗಂಟುಗಳು ಎರಡು ಬಗ್ಗೆಗಳು ಇರುತ್ತಿದ್ದವು. ಅವುಗಳ ಅಂಚುಗಳು ವಿವರಗಳು ಆಯಾ ನೇಕಾರರ ಪ್ರತಿಭಾ ಶಕ್ತಿಗೆ ಅನುಗುಣವಾಗಿರುತ್ತಿದ್ದವು. ಅನೇಕ ಸಂದರ್ಭಗಳಲ್ಲಿ ವಾಸ್ತುಶಿಲ್ಪಿಯ ಹಾಗೂ ನೇಕಾರನ ವಿಚಾರಗಳು ವಿನ್ಯಾಸ, ಶೈಲಿಗಳ ವಿಷಯದಲ್ಲಿ ಒಂದೇ ಆಗಿರುತ್ತಿದ್ದವು. ರತ್ನಗಂಬಳಿಗಳಲ್ಲಿಯೂ ವಾಸ್ತುಶಿಲ್ಪದ ಕಂಬಸಾಲುಗಳು, ಕಣ್ಣು ಸೆಳೆಯುವ ಕುಸುರಿ ಅಲಂಕಾರಗಳು, ಗೂಡಗಳು ಮತ್ತು ಪುಷ್ಪ ವಿನ್ಯಾಸಗಳು ಕಂಡುಬರುತ್ತವೆ.

ಬಿಜಾಪುರದ ಗೋಳಗುಮ್ಮಟದ ಆವರಣದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ಇಂತ ಅನೇಕ ಬಗೆಯ ಜಮಖಾನೆ ಚಾಪೆ ಮತ್ತು ಹೊದಿಕೆಗಳು ನೋಡಬಹುದು, ಇವುಗಳ ಮೇಲೆ ವಿವಿಧ ತರಹದ ಅಲಂಕಾರಿಕ ವಿನ್ಯಾಸಗಳು, ಹೂಬಳ್ಳಿಗಳು ಸುಂದರವಾಗಿ ನೇಕಾರಿಕೆಯನ್ನು ಮಾಡಲಾಗಿದೆ. ಚಾಪೆಗಳು ಹೆಚ್ಚಾಗಿ ಪ್ರಾರ್ಥನೆಗೆ ಉಪಯೋಗಿಸುತ್ತಿದ್ದರು ಅವುಗಳು ತರಹ ತರಹದ ಬಣ್ಣಗಳಲ್ಲಿ ಮತ್ತು ವಿನ್ಯಾಸಗಳಲ್ಲಿವೆ. ಇನ್ನೊಂದು ಪ್ರಮುಖ ಅಂಶವೆಂದರೆ ಬಿಜಾಪುರದ ಸುಲ್ತಾನರು ಧರಿಸುವ ಬಟ್ಟೆಗಳು ವಸ್ತುಸಂಗ್ರಹಾಲಯದಲ್ಲಿದೆ. ಅದನ್ನು ಗಮನಿಸಿದರೆ, ಅದರ ಮೇಲಿನ ಅಲಂಕಾರಿಕ ವಿನ್ಯಾಸ, ಮಿಂಚುವ ಬಟ್ಟೆ ಮತ್ತು ಕೊರಳ ಸುತ್ತ ಮತ್ತು ಕೈಯ ಸುತ್ತಲು ವಿವಿಧ ಬೆಲೆಬಾಳುವ ಮುತ್ತು, ರತ್ನ, ವಜ್ರ ಮತ್ತು ಹರಳಗಳನ್ನು ಹಚ್ಚಲಾಗಿದೆ. ಅಲ್ಲದೆ ಅವರ ಉಡುಪುಗಳು ಪರ್ಶಿಯಾ ಮಾದರಿಯಾಗಿದ್ದವು. ಹೀಗೆ ಸುಲ್ತಾನ ಮತ್ತು ರಾಣಿಯರ ಬಟ್ಟೆಗಳ ಮೇಲೆ ವಿವಿಧ ತರಹದ ವಿನ್ಯಾಸ ನೋಡಬಹುದು.[೨೬]

ಅಡಿಟಿಪ್ಪಣಿಗಳು:

1. Sheik Ali. B. 2011, *History of Bahmani and Adil Shahi Rulers,* Mysore Book House, Mysore, p-378
2. Ibid, p-392
3. ಷೇಕ ಅಲಿ, ಬಿ.-೧೯೯೭, *ಕರ್ನಾಟಕ ಚರಿತ್ರೆ,* ಸಂ. ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು-೩೦೪
4. Cousens, Henry. 1976, *Bijapur and its Architectural Remains,* Bhartiya Publishing House, Delhi, p-36
5. ಕುಲಕರ್ಣಿ, ಜಿ.ಎನ್, ಬಿಜಾಪುರ, ಪು-೧೬
6. Cousens, Henry. 1976, *Bijapur and its Architectural Remains, Bijapur and its Architectural Remains,* Bhartiya Publishing House, Delhi, p-36
7. ಕನ್ನಡ ವಿಶ್ವಕೋಶ, ೨೦೦೯, *ಇತಿಹಾಸ ಮತ್ತು ಪುರಾತತ್ವ,* ಮೈಸೂರ ವಿಶ್ವವಿದ್ಯಾಲಯ, ಮೈಸೂರು, ಪು-೭೭
8. Brown, Percy,1968, *Indian Architecture (Islamic Period*) Vol.II, D. B. Taraporevala Sons and Co. Private Ltd, Bombay, p-74
9. Ibid, p-74
10. ಕನ್ನಡ ವಿಶ್ವಕೋಶ, ೨೦೦೯, *ಇತಿಹಾಸ ಮತ್ತು ಪುರಾತತ್ವ,* ಮೈಸೂರು ವಿಶ್ವವಿದ್ಯಾಲಯ, ಮೈಸೂರು, ಪು-೭೭
11. Cousens, Henry. 1976, *Bijapur and its Architectural Remains,* Bhartiya Publishing House, Delhi, p-57
12. Ibid, p-37
13. Brown, Percy, 1968, *Indian Architecture (Islamic Period)* Vol.II, D. B. Taraporevala Sons and Co. Private Ltd, Bombay, p-74
14. Sinha, S.K, 1968, *Medieval History of the Deccan* Vol-II, Government of Andhra Pradesh, Hyderabad, p-147
15. Cousens, Henry. 1976, *Bijapur and its Architectural Remains,* Bhartiya Publishing House, Delhi, p-58

16. Brown, Percy, *Indian Architecture (Islamic Period)* Vol.II, D. B. Taraporevala Sons and Co. Private Ltd, Bombay, p-74
17. Naqvi Sadiq, 2003, *The Iranian Afaquies Contributions to the Qutub Shahi and Adil Shahi Kingdom,* University Garant Commission, New Delhi, p-200
18. Cousens, Henry. 1976, *Bijapur and its Architectural Remains,* Bhartiya Publishing House, Delhi, p-59
19. Nayeem, M.A. -2008,The Heritage of the Adilshahis of Bijapur, Hyderabad Publishe, Hyderabad, P-181
20. Cousens, Henry. 1977, *Bijapur the Old Capital of Adil Shahi Kings,* K. B. Publication, New Delhi, p-60
21. ಕ್ಷೇತ್ರ ಕಾರ್ಯ
22. Naqvi Sadiq, 2003, *The Iranian Afaquies Contributions to the Qutub Shahi and Adil Shahi Kingdom,* University Garant Commission, New Delhi, p-201
23. ಕ್ಷೇತ್ರ ಕಾರ್ಯ
24. Cousens, Henry. 1976, *Bijapur and its Architectural Remains,* Bhartiya Publishing House, p-97
25. Nayeem, M.A. -2008,*The Heritage of the Adilshahis of Bijapur,* Hyderabad Publishe, Hyderabad, P-182
26. The Journal of the University of Bombay July, 1939, Vol. VIII, part I, p-39
27. Zubairi. Ibrahim. Basatin-us-Salatin, pp-320-327
28. Nayeem, M.A. -2008,*The Heritage of the Adilshahis of Bijapur.* Hyderabad Publication Hyderabad, P-105
29. Imartwali A. A. 2007, *History of Bijapur Subah,* Islamic Wonders Bureau New Delhi, p-59
30. Nazim M. 1936, *Bijapur Inscriptions,* Archaeological Survey of India, New Delhi, p- 50
31. Nayeem, M.A. -2008,*The Heritage of the Adilshahis of Bijapur.* Hyderabad Publication Hyderabad, P-107
32. Ibid, p-107

33. Nazim M. *Bijapur Inscriptions,* Archaeological Survey of India, New Delhi, p-50
34. Quddusi Yaseen, Jagirdar Sitaram, 2001, *Persian Arabic and Urdu Inscriptions of Karnataka,* Kannad University Press, Hampi, p-14
35. Ibid, p-175
36. Ibid, p-176
37. Ibid, p-177
38. Annual Report on Indian Epigraphy, 1970-71, p-133
39. Sharma, V. Suguna, 1998, *Raichur Fort,* Bhartiya Kala Prakashan New Delhi, p-69-69
40. Quddusi Yaseen, Jagirdar Sitaram, 2001, *Persian Arabic and Urdu Inscriptions of Karnataka,* Kannad University Press, Hampi, p-95
41. Ibid, p-96
42. Ibid, p-98
43. Nayeem, M.A. -2008,*The Heritage of the Adilshahis of Bijapur. Hyderabad Publication Hyderabad,* P-317
44. Ibid, p-317
45. Cousen Henry, 1977, *Bijapur the Old Capital of Adil Shahis, Kings,* K. B. Publication New Delhi, p-48
46. Cousen Henry, 1976, *Bijapur and its Architectural Remeans,* Bhartiya Publication, New Delhi, p-125
47. Ibid, pp-125-26
48. Naqvi Sadiq, 2003, *The Iranian Afaquies Contribution to the Qutub Shahi and Adil Shahi Kingdoms,* University Garnts Commission, New Delhi, p-208
49. Ibid, p-208
50. Cousen Henry, 1976, *Bijapur and its Architectural Remeans,* Bhartiya Publication, New Delhi, pp-95-96
51. Nayeem, M.A. -2008,*The Heritage of the Adilshahis of Bijapur.* Hyderabad Publication Hyderabad, pp-131-32

52. Cousen Henry, 1976, *Bijapur and its Architectural Remeans,* Bhartiya Publication, New Delhi, pp-94-95

53. Joshi P. M, Nayeem M. A. 1975, Foreign Relations of India, State Archives Government

of Andhra Pradesh, Hyderabad, p-523

54. Ibid, p-524

55. Cousen Henry, 1976, *Bijapur and its Architectural Remeans*, Bhartiya Publication, New Delhi, p-111

56. Ibid, p-97

57. Ibid, p-106

58. Sherwani H. K., Joshi P. M. 1974, *History of Medieval Deccan,* Vol-II, Government of Andhra Pradesh, Hyderabad, p-210

59. ಕಡಕೋಳ ಎಚ್. ಎಂ (ಸಂ), ೨೦೧೦, *ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ* (ಬಾಗಾಯತ, ವಿ. ಎಂ. ಚಿತ್ರಕಲೆ), ಕನ್ನಡ ಸಾಹಿತ್ಯ ಪರಿಷತು, ವಿಜಾಪುರ, ಪು–೨೦೬

60. ಅದೇ, ಪು–೨೦೬

61. ಅದೇ, ಪು–೨೦೬

62. The Cambride History of India, Vol-V (Delhi Reprinted 1963)

63. Zebrowaski Mark, 1983, *Deccani Painting,* Roli Book International New Delhi, p-122

64. Binney Edwin 3rd Collection, San Diega

65. Zebrowaski Mark, 1983, *Deccani Painting*, Roli Book International New Delhi, pp-124-25

66. Ibid, pp-126-27

67. Nayeem, M.A. -2008,*The Heritage of the Adilshahis of Bijapur*. Hyderabad Publication Hyderabad, p-258

68. Ibid, pp-259-60

69. Ibid, pp- 132-33

70. Ibid, p-161

71. Cousen Henry, 1977, *Bijapur the Old Capital of Adil Shahis Kings* K. B. Publication New Delhi, p-48

72. Cousen Henry, 1976, *Bijapur and its Architectural Remeans,* Bhartiya Publication, New Delhi, pp-90-91

73. ಕ್ಷೇತ್ರ ಕಾರ್ಯ

74. ಕ್ಷೇತ್ರಕಾರ್ಯ

75. ಷೇಕ ಅಲಿ ಬಿ. ೧೯೯೭, *ಕರ್ನಾಟಕ ಚರಿತ್ರೆ,* ಸಂ-೪, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ವಿದ್ಯಾರಣ, ಹಂಪಿ, ಪು-೩೨೨

76. ಅದೇ, ಪು-೩೨೪-೨೫

ಅಧ್ಯಾಯ ೮
ಸಮಾರೋಪ

ಅಧ್ಯಾಯ-೮

ಸಮಾರೋಪ

ಮಹಮ್ಮದ ಆದಿಲ್‌ಶಾಹನ ಜೀವನವು ಅತ್ಯಂತ ವಿಶಿಷ್ಟವಾಗಿಯೂ ಮತ್ತು ಮಹತ್ವಪೂರ್ಣವಾದ ಸಾಧನೆಗಳಿಂದ ಕೂಡಿದ್ದು, ಉಳಿದೆಲ್ಲ ಆದಿಲ್‌ಶಾಹಿ ಸುಲ್ತಾನರುಗಳಿಗೆ ಹೋಲಿಸಿದಾಗ ಇವನು ಮಾಡಿದ ಕಾರ್ಯಗಳು ಹೆಚ್ಚು ಮಹತ್ವದ್ದಾಗಿ ಕಾಣುತ್ತವೆ. ಅವನು ಅನೇಕ ಹಂತಗಳಲ್ಲಿ ಕೈಗೊಂಡ ನಿಲವು, ಸಾಹಸ ಪ್ರವೃತ್ತಿ ಮತ್ತು ಧೈರ್ಯಯುತವಾದ ನಡವಳಿಕೆಯಿಂದ ಇವು ಸ್ಪಷ್ಟವಾಗುತ್ತವೆ. ಮಹತ್ವಪೂರ್ಣವಾದ ಅವನ ವ್ಯಕ್ತಿತ್ವದಲ್ಲಿರುವ ಕಠಿಣಯುತವಾದ ನಿಲುವಿನಿಂದಾಗಿ ಅವನು ವಿಶಿಷ್ಟವಾದ ಶೌರ್ಯ ಮತ್ತು ಅಸಮಾನ್ಯವಾದ ಸೈನಿಕ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದನು. ಅವನು ತನ್ನನು ತಾನು ಒಬ್ಬ ಶ್ರೇಷ್ಠ ಯುದ್ಧ ನಿಪುಣನನ್ನಾಗಿ, ಚಾಣಾಕ್ಷ ಆಡಳಿತಗಾರನನ್ನಾಗಿ ಮತ್ತು ಅಷ್ಟೇ ಸಮನಾಗಿ ಹಿಂದೂಗಳೊಡನೆ ತೋರಿದ ಸಮಾನತಾ ಭಾವ ಮತ್ತು ಸಾಮ್ರಾಜ್ಯಕ್ಕೆ ತೋರಿದ ನಿಷ್ಠೆಗಳ ಪರಿಣಾಮವಾಗಿ ಅವನ ಆಳ್ವಿಕೆಯ ಕಾಲವು ಸಾಂಸ್ಕೃತಿಕವಾಗಿ ಅರಳಿ ನಿಂತಿದೆ.

ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳು ಎಂಬ ಈ ಪ್ರಬಂಧವು ಲಭ್ಯವಿರುವ ಆಧಾರಗಳ ಹಿನ್ನಲೆಯಲ್ಲಿ ವಿಶ್ಲೇಷಣೆಯನ್ನು ಮಾಡಿ ಅವನ ಜೀವನ ಮತ್ತು ಸಾಧನೆಗಳನ್ನು ಸಮಗ್ರವಾಗಿ ಪರಿಚಯಿಸುವ ಪ್ರಯತ್ನವನ್ನು ಪ್ರಸ್ತುತ ಪ್ರಬಂಧದಲ್ಲಿ ಮಾಡಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಎಲ್ಲ ಆದಿಲ್‌ಶಾಹಿಗಳ ಪರಿಚಯದೊಂದಿಗೆ ಮಹಮ್ಮದ ಆದಿಲ್‌ಶಾಹನ ಕಾಲದವರೆಗೆ ಆಗಿರುವ ಕಾರ್ಯಗಳ ಬಗ್ಗೆ ವಿಮರ್ಶೆಯನ್ನು ಮಾಡಲಾಗಿದೆ. ಹೀಗೆ ಮಾಡುವಾಗ ಅವುಗಳಲ್ಲಿರುವ ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆ, ವಾಸ್ತುಶಿಲ್ಪ, ಶಿಲ್ಪಕಲೆ ಮತ್ತು ವರ್ಣಚಿತ್ರಗಳಿಗೆ ಸಂಬಂಧಪಟ್ಟ ಭಾಗಕ್ಕೆ ಹೆಚ್ಚಿನ ಒಲವನ್ನು ಕೊಟ್ಟು ನೋಡಲಾಗಿದೆ. ಇಲ್ಲಿ ಅಧ್ಯಯನಕ್ಕೆ ಸಂಬಂಧಪಟ್ಟ ಆಕಾರಗಳಾದ ಪರ್ಶಿಯನ್, ಉರ್ದು, ಅರೇಬಿಕ್, ಮರಾಠಿ ಮತ್ತು ಕನ್ನಡ ಗ್ರಂಥಗಳೊಂದಿಗೆ ಪ್ರಾರ್ಥಮಿಕ ದಾಖಲೆಗಳಾದ ಫರ್ಮಾನಗಳು, ಸನದುಗಳು, ಶಾಸನಗಳು, ಸ್ಮಾರಕಗಳು ಮತ್ತು ನಾಣ್ಯಗಳನ್ನು ಬಳಸಿ ವಿಮರ್ಶೆ ಮಾಡಲಾಗಿದೆ. ಮಹಮ್ಮದ ಆದಿಲ್‌ಶಾಹನ ಪೂರ್ವದ ರಾಜಕೀಯ ಚರಿತ್ರೆಯನ್ನು ಇವರೆಗೆ ಪ್ರಕಟವಾಗಿರುವ ಗ್ರಂಥಗಳ ಹಿನ್ನಲೆಯಲ್ಲಿ ವಿವೇಚಿಸುವುದರ ಜೊತೆಗೆ ಅಧ್ಯಯನದ ಮೂಲ ಆಶಯಗಳಾದ ಉದ್ದೇಶ, ಆಕರಗಳು, ವಿಧಾನ, ವ್ಯಾಪ್ತಿ ಮತ್ತು ಸ್ವರೂಪಗಳನ್ನು ಕುರಿತು ಪರಿಚಯಿಸಲಾಗಿದೆ.

ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳು ಎಂಬ ಎರಡನೆಯ ಅಧ್ಯಾಯದಲ್ಲಿ ಹರಿದು ಹಂಚಿ ಹೋಗಿರುವ ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳನ್ನು ಒಂದು ಕಡೆಗೆ ತರುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಿಲಾಗಿದೆ. ಅಲ್ಲದೆ ಅವನು ಸಮಕಾಲೀನ ರಾಜಮನೆತನಗಳೊಂದಿಗೆ

ಕೈಗೊಂಡ ಯುದ್ಧವನ್ನು ಮತ್ತು ಸಾಮ್ರಾಜ್ಯ ವಿಸ್ತರಣಾ ನೀತಿಯನ್ನು ಸಹ ಈ ಅಧ್ಯಾಯದಲ್ಲಿ ವಿವರಿಸಿದ್ದೇನೆ. 'ಮಹಮ್ಮದ ನಾಮಾ' ಗ್ರಂಥವು ಅವನ ವ್ಯಕ್ತಿತ್ವದ ಮೇಲೆ ಬಿರುವಂತಹ ವಿಷಯಗಳನ್ನು ಇದರಲ್ಲಿ ಚರ್ಚಿಸಿದ್ದೇನೆ. ಇವನು ಅಹ್ಮದನಗರದ ನಿಜಾಮಶಾಹ, ಗೋಲ್ಕೊಂಡದ ಕುತುಬಶಾಹನ ಜೊತೆ ಮಾಡಿದ ಪ್ರಮುಖ ಯುದ್ಧಗಳು ಮತ್ತು ೧೬೩೬ ರಲ್ಲಿ ಮೊಗಲರೊಂದಿಗೆ ಮಾಡಿಕೊಂಡ ಒಪ್ಪಂದದಿಂದ ಶಾಶ್ವತವಾದ ಶಾಂತಿಯನ್ನು ನೆಲೆಸುವಂತೆ ಮಾಡಿ ನಂತರ ತನ್ನ ದೃಷ್ಟಿಯನ್ನು ದಕ್ಷಿಣದ ಕಡೆ ಹರಿಸಿದನು. ಇದರಿಂದ ಇಡೀ ದಕ್ಷಿಣ ಭಾರತದ ಮೇಲೆ ತನ್ನ ಹಿಡಿತ ಸಾಧಿಸಿದ್ದಲ್ಲದೇ, ಅರೇಬ್ಬಿ ಸಮುದ್ರದಿಂದ ಬಂಗಾಳದ ಕೊಲ್ಲಿಯವರೆ ಸಾಮ್ರಾಜ್ಯವನ್ನು ವಿಸ್ತರಿಸಿದುದನ್ನು ವಿವರವಾಗಿ ವಿವೇಚಿಸಲಾಗಿದೆ.

ಮಹಮ್ಮದ ಆದಿಲ್‌ಶಾಹನು ತನ್ನ ರಾಜ್ಯದ ನೆರಹೊರೆಯ ರಾಜ್ಯದೊಂದಿಗೆ ಸಂಬಂಧಗಳನ್ನು ಬೆಳಿಸಿದ್ದನ್ನು ಗಮನಿಸಬಹುದು. ಇರಾನದ ಷಾ ಸಫಿ ಯವರು ಅಹಮ್ಮದ ಬೇಗ್ ಖುರ್ಚಿಯವರನ್ನು ನೇಮಿಸಿ ಮಹಮ್ಮದ ಆದಿಲ್‌ಶಾಹನ ಕಡೆಗೆ ಕಳಿಸಿದರು. ಇದಕ್ಕೆ ಉತ್ತರ ರೂಪವಾಗಿ ಮಹಮ್ಮದ ಆದಿಲ್‌ಶಾಹನು ಅದೇ ವರ್ಷ ಷಾ ಸಫಿಯವರ ಆಸ್ಥಾನಕ್ಕೆ ರಹೀಮ ಅಹಮ್ಮದ ಎಂಬಾತನನ್ನು ರಾಯಭಾರಿಯಾಗಿ ಕಳಿಸಿದನು. ಆದಿಲ್‌ಶಾಹನು ತನ್ನ ಹಿಂದಿನವರುಗಳಂತೆ ಷಾ ಸಫಿಯವರಿಂದ ಸಹಾಯ ನಿರೀಕ್ಷಣೆಯಲ್ಲಿದ್ದನು. ಮೊಘಲರು ಇರಾನ್ ಮತ್ತು ದಕ್ಷಿಣ ರಾಜ್ಯಗಳದವರು ಸಂಪರ್ಕದಲ್ಲಿರುವುದನ್ನು ಅಷ್ಟಾಗಿ ಇಷ್ಟಪಡುತ್ತಿರಲಿಲ್ಲ. ಆದ್ದರಿಂದ ದಕ್ಷಿಣದವರು ಇರಾನ್‌ಗೆ ರಾಯಭಾರಿಯನ್ನು ಕಳಿಸುವುದನ್ನು ಅವರು (ಮೊಘಲರು) ವಿರೋಧಿಸಿದ್ದರು. ಆದರೂ ಮಹಮ್ಮದ ಆದಿಲ್‌ಶಾಹನು ಮೊಗಲರ ವಿರೋಧ ನಡುವೆಯು ಶಾಹ ಅಬ್ಬಾಸರ ಜೊತೆ ಸಂಬಂಧವನ್ನು ಬೆಳಿಸಿದನು. ಮಹಮ್ಮದ ಆದಿಲ್‌ಶಾಹನು ತನ್ನ ನೆರೆಹೊರೆ ರಾಜ್ಯಗಳಾದ ಅಹಮ್ಮದನಗರದ ೨ನೆ ಮುರ್ತುಜಾ ನಿಜಾಮಶಾಹ ಮತ್ತು ೩ನೆ ಹುಸೇನ ನಿಜಾಮಶಾಹ ಜೊತೆ ಸಂಬಂಧಗಳನ್ನು ಬೆಳೆಸಿಕೊಂಡಿದ್ದನು, ಗೊಲ್ಕೊಂಡದ ಅಬ್ದುಲ್ಲಾ ಕುತುಬಶಾಹ ನ ಜೊತೆ ವೈವಾಹಿಕ ಸಂಬಂಧಗಳನ್ನು ಬೆಳೆಸಿದನು. ವಿಜಯನಗರದ ೩ನೆ ಶ್ರೀರಂಗ, ಮೈಸೂರು, ಹಾಗಲವಾಡಿ ನಾಯಕರು ಮತ್ತು ವಿದೇಶಿಯರಾದ ಪೋರ್ಚುಗಿಸರು ಮತ್ತು ಬ್ರಿಟಿಷರ ನಡುವೆ ಒಳ್ಳೆಯ ಸಂಬಂಧಗಳನ್ನಿಟ್ಟುಕೊಂಡಿದ್ದನು ವಿವರಿಸಲಾಗಿದೆ.

ಮೂರನೆ ಅಧ್ಯಾಯದಲ್ಲಿ ಮಹಮ್ಮದ ಆದಿಲ್‌ಶಾಹನ ಆಡಳಿತ, ಕೇಂದ್ರಾಡಳಿತ, ಪ್ರಾಂತಾಡಳಿತ ಕುರಿತು ವಿವೇಚಿಸಿದ್ದೇನೆ. ಇದರಲ್ಲಿ ಮಹಮ್ಮದ ಆದಿಲ್‌ಶಾಹನ ಅತ್ಯಂತ ಹೆಚ್ಚು ಆಡಳಿತ ವಿಭಾಗಗಳನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ. ಮಹಮ್ಮದ ಆದಿಲ್‌ಶಾಹನು ೨೮೦ ಪರಗಾಣಗಳನ್ನಾಗಿ ಮಾಡಿಕೊಂಡು ಸಾಮ್ರಾಜ್ಯಕ್ಕೆ ಸುಭದ್ರವಾದ ಆಡಳಿತವನ್ನು ನೀಡಿದ ಇವನ ಕಾಲದಲ್ಲಿ ಮುಸ್ತಫಾಖಾನ, ಇಖ್ಲಾಸ್‌ಖಾನ, ರೆಹಾನ್ ಮುಂತಾದ ಮಂತ್ರಿಗಳ ಸಹಕಾರದ ಮೂಲಕ ಒಳ್ಳೆಯ ಆಡಳಿತವನ್ನು ನೀಡಿದ, ಇವನ ಕಾಲದಲ್ಲಿ ಸೈನ್ಯಾಧಿಕಾರಿಯಾದ ಮುರಾರಿ ಪಂಡಿತನ ದಂಗೆಯನ್ನು ರಾಜಕೀಯ ಮುತ್ಸದ್ದಿತನದಿಂದ ಹತ್ತಿಕ್ಕಿದ್ದನ್ನು ನೋಡಬಹುದು.

[illegible]

[illegible]

[illegible]

ನಾಲ್ಕನೆಯ ಅಧ್ಯಾಯದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ಕುರಿತು ಚರ್ಚಿಸಲಾಗಿದೆ. ಇದರಲ್ಲಿ ಮಹಮ್ಮದ ಆದಿಲ್‌ಶಾಹನ ಕಾಲದ ಸಾಮಾಜಿಕ ಸಂಘಟನೆಗಳು, ಜಾತಿ, ವರ್ಣವ್ಯವಸ್ಥೆ ಹಿಂದೂ-ಮುಸ್ಲಿಂ ಸಾಮಾಜಿಕ ಕೋಮು ಸೌಹಾರ್ದತೆ, ಸಹಬಾಳ್ವೆ, ಆಕಾಲದ ಮದುವೆ, ಆಭರಣ, ಉಡುಗೆ, ಊಟೋಪಚಾರ ಮುಂತಾದವುಗಳನ್ನು ಕುರಿತು ಹೇಳಲಾಗಿದೆ.

ಆರ್ಥಿಕ ವ್ಯವಸ್ಥೆಯಲ್ಲಿ ಆ ಕಾಲದ ವೃತಿಗಳು, ಕೈಗಾರಿಕೆಗಳು ಆದಾಯದ ಮೂಲಗಳು ವೃತ್ತಿ ಸಂಘಗಳು ನಾಣ್ಯವ್ಯವಸ್ಥೆ, ಕೃಷಿ ಮುಂತಾದವುಗಳನ್ನು ಸಮಕಾಲೀನ ಸಾಹಿತ್ಯಿಕ ಕೃತಿಗಳು ಮತ್ತು ಶಾಸನಗಳಿಂದ ಲಭ್ಯವಿರುವ ಮಾಹಿತಿಯನ್ನು ತೆಗೆದುಕೊಂಡು ವಿಶ್ಲೇಷಣೆ ಮಾಡಲಾಗಿದೆ. ಹೀಗೆ ವಿಶ್ಲೇಷಣೆ ಮಾಡುವಾಗ ಆಕರಗಳ ಕೊರತೆಯಿಂದ ಹಲವಾರು ಸಮಸ್ಯಗಳಿಗೆ ಪರಿಹಾರ ಸಿಗುವುದು ಕಷ್ಟ.

ಧಾರ್ಮಿಕ ವ್ಯವಸ್ಥೆಯಲ್ಲಿ ಹಿಂದೂ-ಮುಸ್ಲಿಂ ಸಮಾಜದಲ್ಲಿದ್ದ ವಿವಿಧ ಧರ್ಮಗಳನ್ನು ಕುರಿತು ವಿವೇಚಿಸಿದ್ದೆನೆ. ಮುಸ್ಲಿಂ ಸಮಾಜದಲ್ಲಿ ಶಿಯಾ ಮತ್ತು ಸುನ್ನಿಗಳನ್ನು ಕುರಿತು ಹೇಳುವುದರೊಂದಿಗೆ ಹಿಂದೂ ಧರ್ಮದಲ್ಲಿದ ಶೈವ, ವೈಷ್ಣವ ಮತ್ತು ಕ್ರಿಶ್ಚಿಯನ ಧರ್ಮಗಳನ್ನು ಪರಿಚಯ ಮಾಡಿಕೊಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಶಿಕ್ಷಣ ಮತ್ತು ಸಾಹಿತ್ಯದಲ್ಲಿ ಹಿಂದೂ ಮತ್ತು ಮುಸ್ಲಿಂ ಶಿಕ್ಷಣವನ್ನು ಕುರಿತು ಚರ್ಚಿಸಲಾಗಿದೆ. ಹಿಂದೂ ವಿದ್ಯಾ ಕೇಂದ್ರಗಳಾದ ಮಠ ಮಾನ್ಯಗಳನ್ನು ಮತ್ತು ಮುಸ್ಲಿಂ ಶಿಕ್ಷಣ ಸಂಸ್ಥೆಗಳಾದ ಮದರಸಾ ಮತ್ತು ಮಸೀದಿಗಳಲ್ಲಿ ನಡೆಯುತ್ತಿತ್ತು.

ಸಾಹಿತ್ಯದಲ್ಲಿ ದಖನಿ ಸಾಹಿತ್ಯ, ಪರ್ಶಿಯನ ಸಾಹಿತ್ಯ, ಉರ್ದು ಸಾಹಿತ್ಯ ಜೊತೆಗೆ ಕನ್ನಡ ಮರಾಠಿ ಭಾಷೆಗಳಲ್ಲಿ ರಚಿತವಾದ ಕೃತಿಗಳಲ್ಲದೇ ಸೂಫಿ ಸಂತರಿಂದ ಶ್ರೇಷ್ಠಮಟ್ಟದ ಸಾಹಿತ್ಯ ಬೆಳೆದು ಬಂದಿದ್ದನು ಗಮನಿಸಬಹುದು.

ಸೂಫಿಗಳು ಅಧ್ಯಾಯದಲ್ಲಿ ಮಹಮ್ಮದ ಆದಿಲ್‌ಶಾಹನ ಕಾಲದ ಸೂಫಿಗಳ ಜೀವನ ಮತ್ತು ಸಾಹಿತ್ಯ ಹೇಳುವುದರೊಂದಿಗೆ ಸೂಫಿ-ಸಂತರು ಅಂದಿನ ಸಮಾಜದಲ್ಲಿ ಹಿಂದೂ-ಮುಸ್ಲಿಂರಲ್ಲಿ ಸಾಮರಸ್ಯವನ್ನು ಮೂಡಿಸುವ ಸಲುವಾಗಿ ಪ್ರಯತ್ನಿಸಿದ್ದಾರೆ. ಸಂತ ಮೌನೇಶ್ವರರು ತಮ್ಮ ವಚನಗಳಲ್ಲಿ,

"ಹಿಂದೂ ತುರಕರಿಗೆ ಚಂದ್ರಮನೊಬ್ಬನೆ
ನಿಂದಿಸಿದವನು ಅಧಮನು ಕಾಣದ
ಅಂಧಕರಿಗ್ಯಾಕೆ ದರ್ಪಣವು ಸಕಲವು
ಒಂದೇ ಎಂದು ಕಂಡ ಗುರು ಬೇರೆ ಬಸವಣ್ಣ
ಹಿಂದೂರು ತುರುಕರು ಒಂದಾಗಿ ನಡದಾರ
ನಿಂದ ನೀದಾರು ಬಸವಣ್ಣ ಬರುವಾಗ ಲೋಕದ

[illegible]

[illegible]

[illegible]

[illegible]

[illegible]

[illegible]

[illegible]

ಅಂಧಕರಿಗೇನು ತಿಳಿಯದು ಮುಸ್ಸಾ ಅಲ್ಲಮ

ಮುಸ್ಸಾ ಪೂಜ ಅಲ್ಲಾ" ಎಂದು ಹೇಳಿದ್ದಾರೆ.

ಈ ವಚನವನ್ನು ಗಮನಿಸಿದರೆ ಮುಸ್ಲಿಂ ಸಂತರಂತೆ ಹಿಂದೂ ಸಂತರು ಕೂಡ ಸಾಮರಸ್ಯಕ್ಕಾಗಿ ಶ್ರಮವಹಿಸಿದ್ದರು. ಯಾಳಗಿಯ ರಾಮಪ್ಪಯ್ಯನವರು, ರುಕ್ಮಾಂಗ ಪಂಡಿತರು, ಕಾಖಂಡಕಿ ಮಹಿಪತಿರಾಯರು, ಆಗರಖೇಡ ಜಹಾಗೀರದಾರರು, ಸಿಂದಗಿಯ ಜಕ್ಕಪ್ಪಯ್ಯನವರು ಇವರೆಲ್ಲರು ಸೂಫಿ ಪಂಥದ ಪ್ರಚಾರದೊಂದಿಗೆ ಸಮಾಜದಲ್ಲಿ ಇರುವ ಓರೆ-ಕೋರೆಗಳನ್ನು ತಿದ್ದುವ ಪ್ರಯತ್ನವನ್ನು ಮಾಡಿದ್ದಾರೆ. ಉದಾಹರಣೆಗಾಗಿ ಮೌನೇಶ್ವರರ ವಚನದಲ್ಲಿ

ಆಡು ಕಾಯ್ವನ ಬುದ್ಧಿ ಅರಸುಗಳಿಗೆ ಇದ್ದರೆ ಈ

ರೂಢಿಯೊಳಗೆಲ್ಲ ಕೆಡುವರೆ ಇವರು

ಕೋಡಗನಿಗಿಂಥ ಕನಿಷ್ಠ ಕಾಣಾ ಬಸವಣ್ಣ

ಇಂತವುಗಳಿಂದ ಸಮಾಜದ ಓರೆ-ಕೋರೆಗಳನ್ನು ತಿದ್ದುವುದಕ್ಕೆ ಪ್ರಯತ್ನಿಸಿದ್ದು ಸ್ಪಷ್ಟವಾಗುತ್ತದೆ. ಮುಸ್ಲಿಂ ಅರಸರು ಹಿಂದೂ ಸಂತರನ್ನು ಪರೀಕ್ಷೆಗೆ ಒಳಪಡಿಸಿದಾಗ ಅವರನ್ನು ಸಮರ್ಥವಾಗಿ ಎದುರಿಸಿ ಬಂದಿರುವುದನ್ನು ಗಮನಿಸಬಹುದು.

ಕಲೆ ಮತ್ತು ವಾಸ್ತುಶಿಲ್ಪ ಅಧ್ಯಾಯದಲ್ಲಿ ಮಹಮ್ಮದ ಆದಿಲ್‌ಶಾಹನ ಕಾಲದ ಜಗತ್ಪ್ರಸಿದ್ಧವಾದ ಗೋಳಗುಮ್ಮಟ್ಟ ನಿರ್ಮಾಣ ಮಾಡಿ ಇದರೊಂದಿಗೆ ಹಲವಾರು ಧಾರ್ಮಿಕ, ಲೌಕಿಕ ಕಟ್ಟಡಗಳನ್ನು ಕಟ್ಟಿಸಿದ್ದಾನೆ. ಜಹಾಬೇಗಂ ಗೋರಿ, ಯಾಕುತ ಧಾಬೋಲಿ ಗೋರಿ, ಮುಸ್ತಫಾಖಾನ ಗೋರಿ ಹಾಗೂ ಅನೇಕ ಮಸೀದಿಗಳಾದ ಶಹಾನವಾಜಖಾನ ಮಸೀದಿ, ಯಾಕುತ ಧಾಬೋಲಿ ಮಸೀದೆ, ಅಲ್ಲದೇ ಆಸಾರ ಮಹಲ ಮುಂತಾದವುಗಳು ಈ ಕಾಲದ ಪ್ರಮುಖ ಕಟ್ಟಡಗಳಾಗಿವೆ. ಇಬ್ರಾಹಿಮ ಆದಿಲ್‌ಶಾಹನನ್ನು ಹೊರತುಪಡಿಸಿದರೆ ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಅತಿ ಹೆಚ್ಚು ಕಟ್ಟಡಗಳು ಈ ಕಾಲದಲ್ಲಿ ರಚನೆಯಾಗಿದ್ದನು ಗಮನಿಸಿಬಹುದು.

ಸಂಶೋಧನೆಯ ಫಲಿತಗಳು

- ಪ್ರಸ್ತುತ ಸಂಶೋಧನೆಯಲ್ಲಿ ಮಹಮ್ಮದ ಆದಿಲ್‌ಶಾಹನ ಇಡೀ ಜೀವನ ಮತ್ತು ಸಾಧನೆಗಳನ್ನು ಒಂದು ಕಡೆಗೆ ತರುವ ಪ್ರಯತ್ನವನ್ನು ಮಾಡಲಾಗಿದೆ. ಇದರಲ್ಲಿ ಅನೇಕ ಹೊಸ ವಿಷಯವನ್ನು ವಿವರಿಸಲಾಗಿದೆ.

- ಮಹಮ್ಮದ ಆದಿಲ್‌ಶಾಹನ ಕಾಲದ ಯುದ್ಧಗಳನ್ನು ಅವನ ಮೂಲ ಕೃತಿಯಾದ ಮಹಮ್ಮದ ನಾಮಾದಲ್ಲಿ ನಮೂದಿಸಿದ ಹಾಗೆ ವಿವರಿಸಲಾಗಿದೆ. ಮಹಮ್ಮದ ಆದಿಲ್‌ಶಾಹನ ಸಮಗ್ರವಾದ ಯುದ್ಧಗಳನ್ನು ಸಂಶೋಧನಾ ಗ್ರಂಥದಲ್ಲಿ ವಿವರಿಸಲಾಗಿದೆ.
- ಮಹಮ್ಮದ ಆದಿಲ್‌ಶಾಹನ ಕಾಲದ ಆಡಳಿತ ಪದ್ಧತಿಯಲ್ಲಿ ಅವನು ಹೊರಡಿಸಿದ ಫರ್ಮಾನುಗಳು ಮತ್ತು ಸನದುಗಳನ್ನು ಬಳಿಸಿಕೊಂಡು ವಿವರವಾದ ಆಡಳಿತವನ್ನು ವಿವರಿಸಲಾಗಿದೆ.
- ಮಹಮ್ಮದ ಆದಿಲ್‌ಶಾಹನ ಕಾಲದ ಸಮಾಜಿ, ಆರ್ಥಿಕ ಮತ್ತು ಧಾರ್ಮಿಕ ವ್ಯವಸ್ಥೆಯಲ್ಲಿ ಸಮಾಜದಲ್ಲಿದ ಅನೇಕ ವರ್ಗಗಳಲ್ಲಿ ಸಮಾನತೆ ಸಹಕಾರವನ್ನು ಆಧಾರಗಳ ಸಹಾಯದೊಂದಿಗೆ ವಿವರಿಸಲಾಗಿದೆ. ಅದೇ ತರಹ ಆರ್ಥಿಕ ಪರಿಸ್ಥಿತಿಯಲ್ಲಿ ಅವನ ಕಾಲದಲ್ಲಿ ರಾಜ್ಯಕ್ಕೆ ಬರುವ ಆದಾಯ ಖರ್ಚು ವ್ಯೆಚ್ಚಗಳನ್ನು ವಿವೇಚಿಸಲಾಗಿದೆ ಮತ್ತು ಇವನ ಕಾಲದಲ್ಲಿ ಧಾರ್ಮಿಕ ಸಾಮರಸ್ಯವನ್ನು ಶಾಸನಗಳ ಆಧಾರದ ಮೇಲೆ ಮಾಹಿತಿಯನ್ನು ನೀಡಿಲಾಗಿದೆ.
- ಇವನ ಕಾಲದಲ್ಲಿ ಶಿಕ್ಷಣ ಮತ್ತು ಸಾಹಿತ್ಯದ ವಿಷಯದಲ್ಲಿ ಅವನಿಗಿದ್ದ ಆಸಕ್ತಿಯನ್ನು ಮತ್ತು ಸಾಹಿತ್ಯದ ಅಭಿವೃದ್ಧಿಯನ್ನು ಆ ಕಾಲದ ಮೂಲ ಪರ್ಶಿಯನ್ನ ಕೃತಿಗಳ ಆಧಾರದ ಮೇಲೆ ವಿವರಿಸಲಾಗಿದೆ. ಅನೇಕ ಕವಿಗಳು ಇವನ ಆಶ್ರಯದಲ್ಲಿದ್ದರು ಅವರಲ್ಲಿ ಪ್ರಮುಖರೆಂದರೆ, ಅಬ್ದುಲ್ ಖಾದಿರ ನುಸರತಿ, ಹಸನ ಅಸ್ಕರಿ ಕಾಶಾನಿ, ನೌರಸ ಖುಜುನಿ ಮಹಮ್ಮದ ನಮಿ ಬಖೈರ, ಶಹಬಾಜ ಹುಸೇನಿ ಮತ್ತು ಅಬ್ದಲ್ ಮಹಮ್ಮದ ಜಹೂರಿ ಮುಂತಾದವರ ಆಶ್ರಯದಿಂದಾಗಿ ವಿಫುಲವಾದ ಸಾಹಿತ್ಯ ರಚನೆಯಾಯಿತು.
- ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಅನೇಕ ಸೂಫಿಗಳು ಬಂದು ನೆಲೆಸಿದರು ಈ ಕಾಲದಲ್ಲಿ ಚಿಶ್ತಿಪಂಥ, ಸಹರವರ್ದಿ, ಶುತ್ತಾರಿ, ನಕ್ಷಬಂದಿ, ಖಾದ್ರಿ ಮತ್ತು ಜುನೈದಿ ಪಂಥಗಳು ಅಸ್ತಿತ್ವದಲ್ಲಿ ಇದ್ದವು. ಮಹಮ್ಮದ ಆದಿಲ್‌ಶಾಹನ ಕಾಲದಲ್ಲಿ ಅಧಿಕ ಸಂಖ್ಯೆಯಲ್ಲಿ ಸೂಫಿಗಳು ನೇರವಾಗಿ ಅರೇಬಿಯಾ, ಇಜಿಪ್ತ, ಬಗ್ದಾದ ಮತ್ತು ಭಾರತದ ಇತರ ಪ್ರದೇಶಗಳಾದ ಬೀದರ, ಗುಲ್ಬರ್ಗಾ, ಬುರ್ಹಾಪುರ ಮತ್ತು ಗುಜರಾತದಿಂದ ಅನೇಕ ಸೂಫಿಗಳು ಬಿಜಾಪುರಕ್ಕೆ ವಲಸೆ ಬಂದರು. ಅವರಲ್ಲಿ ಪ್ರಮುಖರೆಂದರೆ, ಅಬದಲ್-ಅಲ್-ಸಮದ ಕನ್ನಾನಿ ಇಜಿಪ್ತದಿಂದ, ಇಸ್ಮಾಯಿಲ್ ಖಾದರಿ ಬಗ್ದಾದದಿಂದ, ಅಬುಬಕರ-ಬಾಲ್-ಫಖ್ಬಿ ಅರೇಬಿಯಾದಿಂದ, ಅಹ್ಮದ ನಜೀರ, ಸೈಯದಿ ಅರೇಬಿಯಾದಿಂದ, ಜಾಫರ್ ಸಖಾಫ್, ಸೈಯದ ಅರೇಬಿಯಾದಿಂದ ಜೈನ್ ಮಖಬಿಲ್ ಸೈಯದಿ ಅರೇಬಿಯಾದಿಂದ, ಅಬದಲ್ ಲತೀಫ್ ಖಾದ್ರಿ ಶಾಹ ಬೀದರದಿಂದ, ಸಿರಾಜ-ಅಲ್-ದ್ದೀನ್ ಜುನೈದಿ ಗುಲ್ಬರ್ಗಾ ಹೀಗೆ ಅನೇಕ ಪ್ರದೇಶದಿಂದ ಈ ಕಾಲದಲ್ಲಿ ಬಂದು ನೆಲೆಸಿದರು. ಕೇವಲ ಸೂಫಿಗಳಲ್ಲದೆ ಸಂತರು ಸಹ ಇಲ್ಲಿ ನೆಲೆಸಿದರು ಅವರಲ್ಲಿ ಪ್ರಮುಖರೆಂದರೆ, ತಿಂತಣಿ ಮೌನೇಶ್ವರರು, ರುಕ್ಮಾಂಗ ಪಂಡಿತರು, ಕಾಖಂಡಿಕಿಯ ಶ್ರೀ ಮಹಪತಿರಾಯರು, ಯಾಳಗಿಯ ಶ್ರೀ

ರಾಮಪ್ಪಯ್ಯನವರು ಮತ್ತು ಸಿಂದಗಿಯ ಜಕ್ಕಪ್ಪಯ್ಯನವರು ಹೀಗೆ ಅನೇಕ ಸಂತರು ಯೋಗಿಗಳು ನೆಲೆಸಿದರು. ಇವರ ಕಾರ್ಯಗಳು ಸಮಾಜವನ್ನು ಒಂದು ಮಾಡುವ ಸಲುವಾಗಿ ಶ್ರಮಿಸಿದ್ದ ಬಗ್ಗೆ ಸಮಗ್ರವಾಗಿ ವಿವರಿಸಲಾಗಿದೆ.

- ಮಹಮ್ಮದ ಆದಿಲ್‌ಶಾಹನ ಕಾಲದ ಪ್ರಮುಖ ಸ್ಮಾರಕಗಳಾದ ಗೋಳಗುಮ್ಮಟ, ಮುಸ್ತಫಾಖಾನ ಮಸೀದಿ, ಆಸರ ಮಹಲ, ಯಾಖುತ್ ಧಾಬೋಲಿ ಮಸೀದಿ, ಶಹನವಾಜಖಾನ ಮಸೀದಿ, ಚಿಂಚದಡ್ಡಿ ಮಸೀದಿ, ಮುಸ್ತಫಾಖಾನ ಮಹಲ ಜಹಾಬೇಗಂ ಮಹಲ, ಮುಂತಾದವುಗಳ ಇವನ ಕಲೆಗೆ ಸಾಕ್ಷಿಯಾಗಿವೆ. ಹಲವಾರು ವಿದ್ವಾಂಸರು ಈಗಾಗಲೇ ಸ್ಮಾರಕಗಳ ಬಗ್ಗೆ ವಿವರಿಸಿದ್ದರು ನಾನು ಕ್ಷೇತ್ರಕಾರ್ಯದ ಮೂಲಕ ಇನ್ನೂ ಹೆಚ್ಚಿನ ವಿಷಯಗಳ ಮೇಲೆ ಬೆಳಕು ಚಲ್ಲುವ ಪ್ರಯತ್ನವನ್ನು ಮಾಡಿದ್ದೆನೆ.

ಸಂಶೋಧನೆಗೆ ಒದಗಿದ ತೊಂದರೆಗಳು

ಮಹಮ್ಮದ ಆದಿಲ್‌ಶಾಹನನ್ನು ಕುರಿತು ಅಧ್ಯಯನ ಮಾಡಲು ನಮಗೆ ಉಪಲಬ್ದವಿರುವ ಆಕರ ಗ್ರಂಥಗಳು ಪರ್ಶಿಯನ್ ಭಾಷೆಯಲ್ಲಿವೆ. ಆದ್ದರಿಂದ ಅವುಗಳನ್ನು ಅರ್ಥೈಸಿಕೊಳ್ಳುವುದು ತುಂಬಾ ಕಷ್ಟದ ಕೆಲಸ. ಹಾಗಾಗಿ ಪರ್ಶಿಯನ ಭಾಷೆಯ ಮೂಲ ಆಕರಗಳನ್ನು ಆಂಗ್ಲ ಭಾಷೆಗೆ ಮತ್ತು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಿಸಿದಾಗ ಎಲ್ಲಾ ಜನಸಾಮಾನ್ಯರಿಗೂ ಇವರ ಇತಿಹಾಸದ ಕುರಿತು ಆಸಕ್ತಿ ಕೆರಳಿಸಬಹುದು.

ಯಾವುದೇ ಒಂದು ಕಾರ್ಯ ಕೈಕೊಂಡಾಗ ಅಡ್ಡಿ, ಆತಂಕ, ತೊಂದರೆಗಳು ಎದುರಾಗುವುದು ಸಹಜ. ಈ ಮಹಾಪ್ರಬಂಧ ರಚಿಸುವಲ್ಲಿಯೂ ಕೆಲವು ತೊಂದರೆಗಳನ್ನು ಅನುಭವಿಸಬೇಕಾಯಿತು. ಈ ಪ್ರಬಂಧವು ಮಹಮ್ಮದ ಆದಿಲ್‌ಶಾಹ ಜೀವನ ಮತ್ತು ಸಾಧನೆಗಳ ಕುರಿತಾಗಿದೆ. ಈ ಸುಲ್ತಾನನಿಗೆ ಸಂಬಂಧಿಸಿದ ವಿಷಯಗಳು ಹೆಚ್ಚಾಗಿ ಪರ್ಶಿಯನ ಭಾಷೆಯಲ್ಲಿಯೇ ಇವೆ. ಮಹಮ್ಮದ ಆದಿಲ್‌ಶಾಹನು ತನ್ನ ಆಡಳಿತಾವಧಿಯಲ್ಲಿ ಫರ್ಮಾನಗಳನ್ನು ಪರ್ಶಿಯನ ಭಾಷೆಯಲ್ಲಿಯೇ ಹೊರಡಿಸಿದರು. ಆಸ್ಥಾನದ ಇತಿಹಾಸಕಾರರು, ಫರ್ಶಿಯನ ರಾಯಭಾರಿಗಳು ರಚಿಸಿದ ಮೂಲ ಕೃತಿಗಳೆಲ್ಲವೂ ಪರ್ಶಿಯನ ಭಾಷೆಯಲ್ಲಿವೆ. ತನ್ನ ಆಡಳಿತ ವಿಭಾಗಗಳಿಗೂ ಮತ್ತು ಮಂತ್ರಿಮಂಡಲವನ್ನು ಕೂಡ ಪರ್ಶಿಯನ ಭಾಷೆಯಲ್ಲಿಯೇ ನಾಮಕರಣ ಮಾಡಿದ್ದರು. ಹಾಗಾಗಿ ಈ ಎಲ್ಲವುಗಳನ್ನು ಅರ್ಥೈಸಿಕೊಳ್ಳುವುದು ತುಂಬಾ ಕಷ್ಟದ ಕೆಲಸವಾಯಿತು. ಆದರೂ ಕೂಡ ನನ್ನ ಜ್ಞಾನದ ಮಟ್ಟಿಗೆ, ನನಗೆ ಸಿಕ್ಕಂತಹ ಮೂಲ ಹಾಗೂ ಅನುಷಂಗಿಕ ಆಧಾರಗಳ ಸಹಾಯದಿಂದ ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳನ್ನು ಈ ಮಹಾಪ್ರಬಂಧದಲ್ಲಿ ನಿರೂಪಿಸಲು ಯತ್ನಿಸಿರುವೆ.

ಮುಂದಿನ ಅಧ್ಯಯನಕ್ಕಾಗಿ ಸಲಹೆಗಳು

ಆದಿಲ್‌ಶಾಹಿಗಳ ಇತಿಹಾಸವು ದಕ್ಷಿಣ ಭಾರತದ ಇತಿಹಾಸದಲ್ಲಷ್ಟೇ ಅಲ್ಲದೇ, ಭಾರತದ ಇತಿಹಾಸದಲ್ಲಿಯೂ ಅವಗಣನೆಗೆ ಒಳಪಟ್ಟಿದೆ. ಬಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ಆದಿಲ್‌ಶಾಹಿಗಳ ಇತಿಹಾಸವು ತುಂಬಾ ಅಧ್ಯಯನಯೋಗ್ಯ ಇತಿಹಾಸವಾಗಿದೆ. ಈ ವಂಶದ ಒಂಭತ್ತು ಜನ ಸುಲ್ತಾನರ ರಾಜಕೀಯ ಇತಿಹಾಸವು ತುಂಬಾ ರೋಚಕವಾಗಿದೆ. ಇವರ ಕಾಲದ ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ, ವ್ಯಾಪಾರ, ವಾಣಿಜ್ಯ, ಕೃಷಿ, ನೀರಾವರಿ ಪದ್ಧತಿ, ರಾಜ್ಯಾದಾಯದ ಮೂಲಗಳು, ಖರ್ಚಿನ ಬಾಬತ್ತುಗಳು ಮುಂತಾದವುಗಳ ಕುರಿತು ಅಧ್ಯಯನ ನಡೆಯಬೇಕು. ಅವರ ಕಾಲದಲ್ಲಿನ ಸಾಮಾಜಿಕ ಸ್ಥಿತಿಗತಿ, ಸ್ತ್ರೀಯರ ಸ್ಥಾನಮಾನ, ಸಮಾಜಿಕ ಕಟ್ಟಳೆಗಳು, ಧಾರ್ಮಿಕ ಸ್ಥಿತಿಗತಿ, ಇತರ ಧರ್ಮಗಳ ಸ್ಥಿತಿಗತಿ, ಧಾರ್ಮಿಕ ಸಂಪ್ರದಾಯಗಳು ಸಾಹಿತ್ಯ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯದ ಬೆಳವಣಿಗೆ, ಪರ್ಶಿಯನ್ ಸಾಹಿತ್ಯ, ಉರ್ದು ಸಾಹಿತ್ಯದ ಬೆಳವಣಿಗೆಗಳು, ಅವರ ಕಾಲದ ಸೂಫಿ ಸಂತರ ಕೊಡುಗೆಗಳು, ಇವರು ಸಂಗೀತಕ್ಕೆ ನೀಡಿದ ಕೊಡುಗೆಗಳು, ಕಲೆ, ವಾಸ್ತುಶಿಲ್ಪ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು, ಹೀಗೆ ವಿವಿಧ ಶೀರ್ಷಿಕೆಯಡಿಯಲ್ಲಿ ಅಧ್ಯಯನಗಳು ನಡೆಯಬೇಕಾಗಿದೆ. ಹಾಗಾದರೆ ಮಾತ್ರ ಇವರ ಇತಿಹಾಸವನ್ನು ಸಮಗ್ರವಾಗಿ ತಿಳಿಯಲು ಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ನನಗೆ ದೊರೆತಿರುವ ಆಧಾರಗಳ ಹಿನ್ನಲೆಯಲ್ಲಿ ಮಹಮ್ಮದ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳನ್ನು ಸಮಗ್ರವಾಗಿ ತಿಳಿಸುವ ಪ್ರಯತ್ನವನ್ನು ಮಾಡಿದ್ದೆನೆ. ಇದು ಮುಂದಿನ ಅಧ್ಯಯನಕ್ಕೆ ದಾರಿದೀಪವಾಗಬಹುದೇ ವಿನಹಃ ಪೂರ್ಣವೆಂದು ಎನ್ನಲಾಗುವುದು.

(ಆಧಾರ ಗ್ರಂಥಗಳು)

BIBLIOGRAPHY

Original Sources

Persian Manuscripts

1. Abu-al-Fazl, *Akbar Namah*
2. Ahmed, Khwaja Nizamuddin, *Tabkat-i-Akbari*
3. Astarabadi, Fuzuni, *Futuhat-i-Adil Shahi*
4. Beg, Asad, *Waqai-i-Asad Beg*
5. Burhanpuri, Bhimsen, *Nuskha-i-Dilkusha*
6. Emperor, Jahangir, *Tuzuk-i-Jahangir*
7. Ferishtah, Muhammad Qasim Hindu Shah, *Tarikh-i-Ferishtah or Gulshan-i-Ibrahimi*
8. Kambu, Muhammad Salik, *Amal-i-Salih*
9. Kazim, Muhammad, *Alamgir Namah*
10. Khan, Hashim Khafi, *Muntakhab-uil-Lubab*
11. Khan, Inayat, *Shah Jahan Namah*
12. Khan, Saqi Mustaid, *Maasir-i-Alamgiri*
13. Khan, Shah Nawaz, *Maasir-ul-Umara*
14. Lahori, Abdul Hameed, *Padshah Namah*
15. Pirzadah, Sayed Muhyuddin, *Ahwal-i-Salatin-i-Bijapur*
16. Qadi, Sayed Nuruddin, *Tarikh-i-Ali Adil Shahiya*
17. Raziuddin, Ibn Abu-al-Qasim, *Hadiqat-ul-Alam*
18. Shirazi, Mir Ibrahim Rafiuddin, *Tazkirat-ul-Mulk*
19. Tabatabai, Azizallah, *Burhan-i-Maasir*
20. Zahuri, Muhammad, *Muhammad Namah*
21. Zubairi, Muhammad Ibrahim, *Basatin-us-Salatin*

22. Zubairi, Muhammad Ibrahim, *Rauzat-ul-Auliya-i-Bijapur*

Persian Printed Books or their Translations

1. Ahmed Ali Khan, Mir, *Guldasta-i-Bijapur*, (Urdu MS), Hyderabad, State Archives of Andhra Pradesh, 1862
2. Amir Khusrau, *Khazain-ul-Futuh*, Ed., Sayed Moin-ul-Haque, Muslim University, Aligarh, Trans. Elliot & Dowson, *The History of India As Told by Its Own Historians*, Vol-III, Kitab Mahal, Allahabad, 1964
3. Asad Beg, *Wikaya-i-Asad Beg*, Abridged Trans. By B.W. Champman, Elliot & Dowson, *The History of India As Told by Its Own Historians*, Vol-VI, Kitab Mahal, Allahabad, 1964
4. Barani, Ziauddin, *Tarikh-i-Firoz Shahi*, (Persian Lithograph)Ed., S. Ahmed Khan, Abridged English edition, Elliot & Dowson, *The History of India As Told by Its Own Historians*, Vol-III, Kitab Mahal, Allahabad, 1964
5. Ferishtah, Muhammad Qasim, *Tarikh-i-Ferishtah*, (Persian Lithograph), 2 vols, Nawal Kishore, Lucknow, 1864, English edition, John Briggs, *History of The Rise of The Muhammadan Power in India*, 4 vols, London, 1829
6. Ibrahim Adil Shah-II, Sultan, *Kitab-i-Nauras*, Trans, Nazir Ahmed, (Reprint) Bharatiya Kala, New Delhi, 1955
7. Jahangir Emperor, *Tuzuk-i-Jahangiri,, or Memoirs of Jahangir*, Eng. Trans. Alexander Rogers, 2 vols, Munshiram Manoharlal, Delhi, 1968
8. Nizamuddin, Ahmed, Tabaqat-i-Akbari, (Persian Lithograph), Nawal Kishore, Lucknow, Abridged English edition, Elliot & Dowson, *The History of India As Told by Its Own Historians*, Vol-V, Kitab Mahal, Allahabad, 1964
9. Sen, Surendranath, Ed. & Trans., *Shiva Chhatrapati*, vol-I, of *Extracts and Documents relating to the Maratha History*, University of Calcutta, Calcutta, 1920
10. Zubairi, Muhammad Ibrahim, *Basatin-us-Salatin*, (Persian Lithograph), Sayedi Press, Hyderabad, 1892

Marathi

1. Apte, D.V., 1922, *Shivakalin Adil Shahi*, Bharata Itihasa Sanshodhaka Mandala, Poona
2. Dhere, R.C., 1967, *Musalman Marathi Santa Kavi*, Bharata Itihasa Sanshodhaka Mandala, Poona
3. Potdar, D.V., 1922, Sri *Moraya Dev Sansthan Chinchwad Sambandhi Kahin Junat Assal Kagad*, Bharata Itihasa Sanshodhaka Mandala, Poona

Urdu

1. Bilgrami, Sayed Ali, 1897, *Tarikh-i-Dakhan*, Mufid-i-Aam, Agra
2. Chaghatai, M.A., 1971, *Dargah-i-Khwajah Amin Bijapur*, Malik Ram Felicitation Volume, Malik Ram Felicitation Committee, New Delhi
3. Hafiz Sayed, M., 1939, *Introduction to Kulliyat-i-Bahri*, Nawal Kishore, Lucknow
4. Hamiduddin, Shahid, 1969, *Introduction to Risala-i-Mahmud Khush Dahan Bijapuri*, Aiwan-i-Urdu, Karachi

Secondary Sources

1. Ahmed, Aziz, 1964, *Studies in Islamic Culture in The Indian Environment*, Clarendon Press, Oxford
2. Ahmed, Maqbool, 1969, *Indo-Arab Relation*, Popular Prakashan, Bombay
3. Ahmed, Muhammad Aziz, 1949, *Political History and Institutions of the Turkish Empire (1206-1290 A.D)*, Research Society of Pakistan, University of Punjab, Lahore, Pakistan
4. Ahmed, Nazir, 1955, *Kitab-i-Nauras*, Bharatiya Kala Prakashan, New Delhi
5. Aiyengar, Krishnaswami, 1921, *South India and Her Muhammadan Invaders*, Oxford University Press, London4
6. Ali, Ather, 1997, *Mughal Nobility Under Aurangzeb*, Oxford University Press, New Delhi

7. Ayer , R.S, 1924, *Nayakas of Madura*, Humphery Milford, Oxford University Press, Oxford

8. Bailey, Ghram, T., 1932, *A History of Urdu Literature*, Association Press, Calcutta

9. Ball, Upendranath, 1919, *A Short History of Marathas*, Rama Krishna and Sons, Lahore

10. Barnett, Lionel, D., 1913, *Antiquities of India*, Philip Lee Warner, London

11. Basavaraj, K.R, 1984, *History and culture of Karnataka*, Bombay

12. Beeston, A. F. L., 1954, *Catalogue of the Persian, Turkish, Hindustani and Pushtu Manuscripts in Bodleian Library, Part-III*, Clarendon Press, Oxford

13. Bhandarkar, R.G, 1996, *Early History of Deccan*, Asian Education Services, Delhi

14. Bhuyan, S.K., 1947, *Annals of Delhi Badshahate*, Government of Assam, Gauhati

15. Boxer, C.R, 1952, *A Glimpses of Goa*, Cambridge University Press, London

16. Briggs, John, 2004, (Re-print), *The History of the Rise of the Muhammadan Power in India*, Low Price Publications, New Delhi

17. Brown, Percy, 1968, *Indian Architecture (Islamic period),* D.B. Taraporevala Sons & Co. Pvt, Ltd, Bombay

18. Cousens, Henry, 1976, *Bijapur and its Architectural Remains*, Bharatiiya Publication House, Delhi

19. Cousens, Henry, 1889, Bijapur; *The Old Capital of the Adil Shahi Kings*, The Orphanage Press, Poona

20. Clement Huart, 1903, *A History of Arabic Literature*, D. Appleton & Co. New York

21. Danvers, N., 1882, *An Elementary History of Art*, R. Clay & Sons, London

22. Devare, T.N, 1961, *A Short History of Persian Literature*, Published by, S. Devare, Poona

23. Duff, Grant, 1921, *History of the Maratha*, Longmans Publication, Calcutta

24. Eaton, R.M, 1978, *Sufis of Bijapur*, Princeton University Press, New Jersey (UK)
25. Elliot and Dowson, 1952, *The History of India As Told by Its Own Historians*, Bibliothica Series, Asiatic Society, Calcutta
26. Fergusson, James, 1910, *History of Indian and Eastern Architecture*, John Murray, London
27. Foster, William, 1921, *Early Travels in India*, Oxford University Press, London
28. Ghune, V.T, 1953, *The Judicial System of the Marathas*, Bharat Itihas Shamshdhak Mandal, Poona
29. Ghurye, G.S., 1932, *Caste and Race in India*, Trubner & Co. Ltd, london
30. Gorekar, N.S, 1970, *Indo-Iran Relations*, Sindhu Publication, Bombay
31. Gribble, G.D.B, 1896, *A History of the Deccan*, Luzac and Company, London
32. Habib, Irfan, 1999, *The Agrarian System of Mughal India*, Oxford University Press, New Delhi
33. Haig, Wolseley, 1928, *The Cambridge History of India*, Vol-III (*Turks and Afghans*), Cambridge University Press, Cambridge
34. Haig, T.W., 1807, *Historic Landmarks of the Deccan*, Pioneer Press, Allahabad
35. Heras, Henry, 1927, *The Aravidu Dynasty*, B.G. Paul and Company, Madras
36. Hiroshi, Fukazawa, 1998, *The Medieval Deccan*, Oxford University Press, New Delhi
37. Hutton, Deabrow, 2006, *The Art of the Court of Bijapur*, Indiana University Press, Bloomington, USA
38. Husaini, Yusuf, 1959, *Glimpses of Medieval Indian Culture*, Asian Publishing House, Bombay
39. Imaratwale, A.A., 2004, *History of Bijapur Subah* (1686-1885 A.D), Islamic Wonders Bureau, New Delhi
40. Jadhav, Santosh Kumar, 2011, *The History of Medieval India*, Abu-Hureira Educational Services, Bijapur
41. Jaffar, S.M., 1936, *Education in Muslim India*, Ripon Printing Press, Lahore

[illegible]

42. Joshi, P.M, and Nayeem, M.A., 1975, *Studies in the Foreign Relations of India*, State Archives Government of Andhra Pradesh, Hyderabad

43. Khan, Muhammad Abdul Wali, 1974, *Gold and Silver Coins of Sultans of Delhi*, Andhra Pradesh State Museum, Hyderabad

44. Khan, Yusuf Hussain, 1980, *Farmans and Sanads of Deccan Sultans*, Andhra Pradesh State Archives, Hyderabad

45. Khan, Muhammad Abdul Wali, 1980, *Copper Coins of Adil Shahi Dynasty of Bijapur*, Birla Archaeological and Cultural Research Institute, Hyderabad

46. Khare, G.H, 1961, *Persian Sources of Indian History*, vol-V, Part-I, BISM, Poona

47. Khare, G.H, 1969, *Persian Sources of Indian History*, vol-V, Part-III, BISM, Poona

48. King, J.S, 1900, *The History of Bahmani Dynasty*, Luzac and Company, London

49. Kramrisch, K., 1937, *A Survey of Paintings in the Deccan*, Indian Society, Hyderabad

50. Kulkarni, A.R., 1969, *Maharashtra in the Age of Shivaji*, Deshmukh and Company, Poona

51. Mahalingam, 1951, *Economic Life in Vijayanagara Empire*, Madras University Press, Madras

52. Manucci, Niccolao, 1907, *Storia Do Mogor (or Mughal India)*, John Murray, London

53. Michel, George and Zebrowski, Mark, 1999, *Architecture and Art of Deccan Sultanates*, Cambridge University Press, New Delhi

54. Mittal, Jagdish, 1966, *Deccani Paintings: Golconda and Hyderabad School*, In Sherwani, H.K, Commemoration Volume, Ed, Ghulam Yazdani, Hyderabad

55. Muthanna, I.M, 1962, *History of Karnataka*, Usha Press, Mysore

56. Muhammad, Abdul Ghani, 1929, A History of Persian Language and Literature at the Mughal Court, The Indian Press Ltd, Allahbad

57. Nambiar, 1955, *Portuguese Pirates*, M. Bhaktavantsalam, Bangalore

58. Naqvi, Sadique, 2003, *The Iranian Afaquies Contributions to the Qutub Shahi and Adil Shahi Kingdom*, University Grant Commission, New Delhi
59. Nayeem, M.A., 1970, *History of Postal Administration in Hyderabad*, Bright Publishers, Hyderabad
60. Nayeem, M.A., 1974, *External Relations of the Bijapur Kingdom*, Bright Publishers, Hyderabad
61. Nayeem, M.A., 2008, *The Heritage of the Adil Shahis of Bijapur*, Hyderabad Publishers, Hyderabad
62. Nayeem, M.A., 2009, (Reprint), *The Splendor of Hyderabad*, Hyderabad Publishers, Hyderabad
63. Nayeem, M.A., 2010, *Nizam Palaces*, Hyderabad Publishers, Hyderabad
64. Nadkarni, R.V., 1966, *The Rise and Fall of the Maratha Empire*, Popular Prakashan, Bombay
65. Nazim,1936, *Bijapur Inscriptions*, Memoirs of Archaeological Survey of India, Delhi
66. Newton, Artur Percival, 1926, *Travel and Travelers of Middle Age*, Kegan Paul, Trench Trubner and Co. London
67. Nizami, Khaliq Ahmed, 1961, *Some Aspects of Religion and Politics in India During the Thirteenth Century*, Asian Publications, Aligarh
68. Nizami, Khaliq Ahmed, 1985, *State and Culture in Medieval India*, Adam Publishers and Distributors, New Delhi
69. Panikkar, K.M, 1929, *Malabar and the Portuguese*, D.B. Taraporevala Sons & Co. Bombay
70. Prasad Beni, 1940, *History of Jahangir*, Indian Press, Allahbad
71. Prasad, Ishwari, 1931, *A Short History of Muslim Rule in India*, The Indian Press Ltd, Allahabad
72. Ranade, M.G., 1961, *Rise of the Maratha Power*, Osscar Publication, New Delhi
73. Rizvi, Sayed Attar Abbas, 1983, *A History of Sufism in India*, Munshiram Manohar Lal Publishers Pvt. Ltd, Delhi

74. Rieu, Charles, 1879, *Catalogue of the Persian Manuscripts in British Museum*, Vol-I, Longmans & Co. London

75. Rieu, Charles, 1883, *Catalogue of the Persian Manuscripts in British Museum*, Vol-III, Longmans & Co. London

76. Sadiq Ali, Shanti, 1996, *The African Dispersal in the Deccan*, Orient Black Swan, Delhi

77. Sardesai, G.S., 1946, *New History of the Marathas*, Phoenix Publications, Bombay

78. Sarkar, Jadunath, 1925, *Anecdotes of Aurangzeb*, M.C. Sarkar & Sons, Calcutta

79. Sarkar, Jadunath, 1948, House of Shivaji, Oriental Longman Ltd, Bombay

80. Sarkar, Jadunath, 1972, Mughal Administration, Oriental Longman Ltd, Bombay

81. Sarkar, Jadunath, 1973, *History of Aurangzeb*, Oriental Longman Ltd, Bombay

82. Sarkar, Jadunath, 1973, Shivaji and His Times, Oriental Longman Ltd, Bombay

83. Sarkar, Jagdish, 1969, *The Military Dispatches of Seventeenth Century*, Scientific Book Agency, Calcutta

84. Sarwar, Ghulam, 1959, *History of Shah Ismail Saffavi*, Sarwar Publication, Aligarh

85. Sen, S.N., 1923, *The Military System of the Maratha*, The Book Company Limited, Calcutta

86. Sewell, Robert, 1900, *A Forgotten Empire*, Sunshine & Co. Madras

87. Sharma, V. Sugana, 1998, *History and Antiquities of Raichur Fort*, Bharatiya Kala Prakashan, Delhi

88. Sheikh Ali, B, 2011, *History of Bahmani and Adil Shahi Rulers*, Mysore Book House , Mysore

89. Sherwani, H.K., 1979, *Mahmud Gawan: The Great Bahmani Wazir*, Oxford University Press, New Delhi

90. Sherwani, H.K., 1985, *The Bahmanis of the Deccan*, Munshiram Manohar Lal Publishers Pvt. Ltd. Delhi

91. Sherwani, H.K., and Joshi, P.M., 1974, *History of Medieval Deccan*, 2 Vols, Government of Andhra Pradesh Publication, Hyderabad

92. Shrinivasachari, C.S., 1943, *A History of Gingee and its Rulers*, Annamalai University Press, Annamalai Nagar

93. Shyam, Radhey, 1966, *A History Ahmednagar*, Motilal Banarsidas Publishers, Delhi

94. Siddiqui, Abdul Majeed, 1956, *History of Golconda*, Literary Publications, Hyderabad

95. Siddiqui, Muhammad Sulaiman, 1989, *The Bahmani Sufis*, Idara-i-Adabiyat-i-Delli, Delhi

96. Sinha, S.K., 1968, *Medieval History of Deccan*, Memoirs of Archaeological Survey of India, Delhi

97. Smith, Vincent, 1930, *A History of Fine Art in India and Ceylon*, Oxford University Press, Great Britain

98. Smith, Vincent, 1970, *Akbar; The Great*, Oxford University Press, Oxford

99. Sufi, G.M.D., 1941, *Al-Minhaj*, Ripon Printing Press, Lahore

100. Suvorova, Anna, 1999, *Muslim Saints of South Asia*, Routledge Curzon, New York

101. Sykes, Percy, 1915, *The History of Persia*, 2 Vols, Macmillan and Co. Ltd, London

102. Taylor, Meadows, 1986, *A Noble Queen*, Asian Educational Services, Delhi

103. Taylor, Meadows, and Fergusson, James, 1866, *Architecture of Beejapore*, Archaeoloical Survey of India (India Office), London

104. Tavernier, j.B., 1925, *Travels in India*, 2 Vols, Oxford University Press, Oxford

105. Vaidya, C.V., 1931, *Shivaji: The Founder of the Maratha Swaraj*, Pub. By C.V., Vaidya, Sadashiva Peth, Poona

106. Verma, D.C., 2009, *Social, Eonomic and Cultural History of Bijapur*, Idarah-i-Adabiyat-i-Delli, Delhi

107. Williams, Rushbrook, L.F., 1918, *An Empire Builder of the Seventeenth Century*, Longmans Green & Co., London

108. Yazdani, Ghulam, 1917, *Antiquities of Bidar*, Baptist Mission Press, Calcutta

109. Yazdani, Ghulam, 1947, *Bidar: Its History and Monuments*, Oxford University Press, New Delhi

110. Zebrowski, Mark, 1983, *Deccani Painting*, Philip Willson Publisher Ltd. London

Kannada

1. ಅರುಣಿ ಎಸ್. ಕೆ, ೨೦೦೧, '*ದಖನಿ ಚಿತ್ರಕಲೆ, ಕರ್ನಾಟಕ,*' ಲಲಿತಕಲಾ ಅಕಾಡೆಮಿ, ಬೆಂಗಳೂರು.
2. ಈರಣ್ಣ ಕೆ. ಪಿ. ೧೯೯೫, '*ಮೌನೇಶ್ವರ ಹಾಗೂ ಸರ್ವಜ್ಞ,*' ಶ್ರೀ ಭುವನೇಶ್ವರಿ ಸಾಹಿತ್ಯ ಪ್ರಕಾಶನ, ಶಿರಹಟ್ಟಿ
3. ಎಲಿಗಾರ ಚೆನ್ನಕ್ಕ, ೨೦೦೧, '*ಬಂಕಾಪುರದ ಶೋಧನ,*' ಚನ್ನಗಂಗಾ ಪ್ರಕಾಶನ, ಧಾರವಾಡ.
4. ಕಡಕೋಳ ಎಚ್. ಎಂ.(ಸಂ) ೨೦೧೦, '*ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ,*' ಕನ್ನಡ ಸಾಹಿತ್ಯ ಪರಿಷತ್ತು, ವಿಜಾಪುರ.
5. ಕಟ್ಪಾಡಿ ಫಕೀರ್ ಮುಹಮ್ಮದ್, ೨೦೧೦, '*ಸೂಫಿ ಸಂತರು,*' ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು
6. ಕನವಳ್ಳಿ ಸದಾನಂದ, ೨೦೧೦, '*ಮರೆತುಹೋದ ಮಹಾ ಸಾಮ್ರಾಜ್ಯ ವಿಜಯನಗರ,*' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
7. ಕಿವುಡನವರ ಜಗದೀಶ, ೨೦೦೨-೦೩, '*ದಖನ್ ಸುಲ್ತಾನರು,*' ವಿದ್ಯಾನಿಧಿ ಪ್ರಕಾಶನ, ಗದಗ
8. ಕುಕರ್ಣಿ ಕೆ. ಕೆ. ೧೯೮೯, '*ಕಾಖಂಡಕಿಯ ಶ್ರೀ ಮಹಪತಿರಾಯರು,*' ಕನ್ನಡ-ಮರಾಠಿ ಸ್ನೇಹ ವರ್ಧನ ಕೇಂದ್ರ, ಪುಣೆ
9. ಕುಲಕರ್ಣಿ ಕೆ. ಕೆ. ೧೯೯೮, '*ಆದಿಲ್‌ಶಾಹಿ ಆಸ್ಥಾನದ ಸಾಹಿತ್ಯ,*' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
10. ಕುಲಕರ್ಣಿ ಕೆ. ಕೆ. ೧೯೯೯, '*ಬುಸಾತೀನೆ ಸಲಾತೀನ,*' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
11. ಕುಲಕರ್ಣಿ ಕೆ. ಕೆ. ೨೦೧೨, '*ಬಿಜಾಪುರದ ಆದಿಲ್‌ಶಾಹಿಗಳು,*' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ
12. ಕುಲಕರ್ಣಿ ಕೆ. ಕೆ. ೨೦೦೯, '*ಆದಿಲ್‌ಶಾಹಿ ಆಡಳಿತ-ಕಾನೂನು ವ್ಯವಸ್ಥೆ,*' ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ, ಬೆಂಗಳೂರು

13. ಕೋಟ್ರೇಶ ಎಂ. ೨೦೧೧, *'ಬಳ್ಳಾರಿ ಜಿಲ್ಲೆಯ ಕೋಟೆಗಳು,'* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

14. ಖದ್ದೂಸಿ ಯಾಸೀನ್ ಮತ್ತು ಜಾಹಗೀರದಾರ ಸೀತಾರಾಮ, ೨೦೦೧, *'ಕರ್ನಾಟಕದ ಪರ್ಶಿಯನ್ ಅರೇಬಿಕ ಮತ್ತು ಉರ್ದು ಶಾಸನಗಳು.'* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

15. ಚಪ್ಪರಬಂದ ಆರ್. ಆಯ್. ೨೦೦೬, *'ಬಿಜಾಪುರ ಜಿಲ್ಲೆಯ ಜಾತ್ರೆಗಳು,'* ಯಾಸ್ಮಿನ ಪ್ರಕಾಶನ, ಬಿಜಾಪುರ

16. ತರೀಕೆರೆ ರಹಮತ, ೧೯೯೮, *'ಕರ್ನಾಟಕದ ಸೂಫಿಗಳು,'* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

17. ಪಾಟೀಲ ಎಂ. ಬಿ. ೧೯೯೭, *'ಶಾಹಿಕಾಲದ ಪಂಚಸಾಧಕರು,'* ಸರಳ ಸಾಹಿತ್ಯ ಪ್ರಕಾಶನ, ಬಿಜಾಪುರ

18. ಪಾಟೀಲ ವಿನೋದಾ, ೨೦೦೬, *'ಪ್ರಾಚೀನ ಕರ್ನಾಟಕದ ಕೆರೆಗಳು,'* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

19. ಪವಾರ ಹರಿಲಾಲ ಮತ್ತು ರೊಟ್ಟಿಗವಾಡ, ೨೦೦೯, *'ವಿಜಾಪುರ ಆದಿಲ್‌ಶಾಹಿಗಳ ಕೊಡುಗೆ,'* ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

20. ಬಡಿಗೇರ ವಾಸುದೇವ, ೨೦೦೬, *'ಕರ್ನಾಟಕ ದೇವಾಲಯ ಕೋಶ* (ವಿಜಾಪುರ ಜಿಲ್ಲೆ),' ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

21. ಯೋಗೀಶ್ವರಪ್ಪ ಡಿ. ಎನ್. ೧೯೯೯, *'ಹಾಗಲವಾಡಿ ನಾಯಕರು,'* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

22. ರೋಹಿಡೇಕರ ಎಸ್. ಆರ್. ೨೦೦೪, *'ವಿಜಾಪುರ ಜಿಲ್ಲೆಯ ಪಂಚ ಪವಾಡ ಪುರುಷರು,'* ಶ್ರೀ ರುಕ್ಮ ಪ್ರಕಾಶನ, ಬೆಂಗಳೂರು

23. ವಿಠಲರಾವ ಗಾಯಕವಾಡ, ೨೦೦೦, *'ತಾರೀಖ-ಇಸ್ಕಂದಿರಿ,'* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

24. ವಿವೇಕರೈ. ಬಿ. ಎ. ೨೦೧೦, *'ಪ್ರವಾಸಿಕಂಡ ವಿಜಯನಗರ,'* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

25. ಶಾಸ್ತ್ರೀ ಎ. ಕೆ. ೧೯೮೨, *'ಶೃಂಗೇರಿ ಧರ್ಮ ಸಂಸ್ಥಾನ,'* ಶೃಂಗೇರಿ ಮಠ ಪ್ರಕಾಶನ, ಶೃಂಗೇರಿ

26. ಷೇಕ ಅಲಿ. ಬಿ. ೧೯೯೭, *'ಕರ್ನಾಟಕ ಚರಿತ್ರೆ* 'ಸಂ. ೪. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

27. ಸಾವಂತ ಸುಮಿತ್ರಾ, ೨೦೧೧, 'ಡಾ॥ ಕೃಷ್ಣಕೋಲ್ಹಾರ ಕುಲಕರ್ಣಿ ಬದುಕ-ಬರಹ,' ಭಾಗ್ಯಲಕ್ಷ್ಮಿ ಪ್ರಕಾಶನ
ಬೆಂಗಳೂರು

Journals, Proceedings, Catalogues and Souvenirs, Etc

1. Bharat Itihas Sanshodhak Mandal, Quarterly, Poona
2. Bombay Literary Transaction Society, Bombay
3. Bulletin of Deccan College, Poona
4. Catalogue of Habib Ganj Collection, Moulana Azad Library, Aligarh
5. Centenary Souvenir of Bijapur Muncipalities, Bijapur
6. D.V. Potdar Sixty First Commemoration Volume, Poona
7. Islamic Culture, Hyderabad
8. Journal of Bombay Branch of Royal Asiatic Society, Bombay
9. Journal of Bombay Historical Society, Bombay
10. Journal of Indian Historical Records Commission
11. Journal of Indian History
12. Journal of Numismatic Society of India
13. Journal of Royal Asiatic Society of Bengal, Calcutta
14. Journal of South Indian Studies
15. Journal of the Bihar and Orissa Research Society, Patna
16. Marg, Bombay
17. Medieval Indian miscellany, Aligarh
18. Modern Review, Calcutta
19. Numismatic Digest of Nasik and Bombay
20. Proceedings of Deccan History Congress


Gazetteers

1. *Belgaum District Gazetteer*, Ed, Kama, S.U., Bangalore, 1987
2. *Bijapur District Gazetteer*, Ed, Campbel, James Macnabb, Bombay, 1884
3. *Bijapur Gazetteer*,(Kannada), Ed, Munniswamy, R., Bangalore, 1999
4. *Gazetteer of India Mysore State, Bijapur District*, Bangalore, 1966

5. *Imperial Gazetteer of India Provincial Series*, Bombay Presidency, vol-I-II, 1985
6. *Maharashtra State Gazetteer* Part-II, Bombay, 1972
7. *Osmanabad District Gazetteer*, Bombay, 1972


ಅನುಬಂಧಗಳು

ಫರ್ಮಾನಗಳು
Farmans




Farman issued by Muhammad Adil Shah to Desai and Kulkarni of Kalhad


Courtesy: BISM, Poona




Farman issued by Muhammad Adil Shah to Desai of Murtuzabad (Miraj)
Courtesy: BISM, Poona




Farman issued by Muhammad Adil Shah to Sallshi Desai
Courtesy: BISM, Poona


الملک لله

Farman issued by Muhammad Adil Shah to Bajaji Nimbalkar
Courtesy: BISM, Poona




Farman issued by Muhammad Adil Shah to Amaldar and Desai of Wai Parganah
Courtesy: BISM, Poona




Farman issued by Muhammad Adil Shah to Havaldar Sarvar Khan and Desai of Kauhad parganah
Courtesy: BISM, Poona


ತಲನಕ್ಷೆಗಳು

Ground plans and elevations




Gol Gumbaz
Section in perspective






Ground Plan of Gol Gumbaz







Ground Plan of Asar Mahal Bijapur
Courtesy: Archaeological Survey of India

b.



Ground Plan of Mustafah Khan Mosque Bijapur
Courtesy: Archaeological Survey of India






1. Gol Gumbad. Trellis of the Tomb

2. Gol Gumbad. Arrows Showing Crown of the Arches of the Dome

(Courtesy: Henrey Cousens)

d.




Plan of Allapur Gateway

(Courtesy: Dr M.A.Nayeem)

e.






Plan of Ark-Qila Gateway

(Courtesy: Dr M.A.Nayeem)


ನಕ್ಷೆಗಳು

Maps



Bijapur Kingdom in 1656 -74


(Courtesy: Dr M.A.Nayeem)




BIJAPUR KINGDOM
courtcy. DR. M.A.NAYEEM

ವಂಶಾವಳಿ

Geneology of Adil Shahi Sultans of Bijapur



FAMILY TREE OF HAZRAT HASHIMPEER



Sources:

1. *Family geneological records*
2. *Ganj-i-Asrar*
3. *Maqsood-al-Murad*
4. *Tohfat-az-Kamtareen*
5. *Rauzat-ul-Auliya-i-Bijapur*
6. *Sirat-i-Kutub-i-Deccan*

(by Sayed Shah Mustafah Hussaini Hashmi, 1942)

7. *Sufis of Bijapur* (Richard Maxwell Eaton, 2011)

This geneological tree was prepared and supplied by ***Dr. Sayed Afzal Peerzade***

Spiritual Geneology of Qazi Muhammad Ibrahim Zubairi

Shaikh Hafiz Muhammad Ibrahim Zubairi
(Author of *Rauzat-al-Auliya-i-Bijapur*)

Moulvi Gulam Muhammad Hashim Zubairi

Shaikh Mohiuddin Zubairi

Shaikh Rahim Saheb Zubairi

Shaikh Muhammad Saheb Zubairi

Shaikh Azmat Saheb Zubairi

Shaikh Ibrahim Saheb urf Dadapeer Zubairi Al-Qadri
(*Sajjada Nashin of Hazrat Sayed Qazi Ibrahim Zubairi*)

Shaikh Shah Muhammad Ibrahim Zubairi Al-Qadri
(*Present Sajjada Nashin*)


Shaikh Shah Azmat Saheb Zubairi Al-Qadri urf Sayed Anfal Zubairi
(*Janashin Sajjada nashin*)

This geneological tree was prepared and supplied by
Shaikh Shah Muhammad Ibrahim Zubairi Al-Qadri
(*Present Sajjada Nashin*)


ಛಾಯಚಿತ್ರಗಳು




Farman of Muhammad Adil Shah bearing his panja(Palm) dated 1642 A.D Addressed to Shah Asadullah about the succession to Khwajah bandanawaz of Gulbarga
Courtesy: M.A. Nayeem




Farman of Muhammad Adil Shah
Courtesy: Maratha Museum Poona








Two Farmans issued by Muhammad Adil Shah to the Nadagouda



A Farman and Sword issued by Muhammad ADil Shah
to Desai of Gani Bijapur
(Gani Desai Personal collection)














Inscriptions of Muhammad Adil Shah's Period Bijapur





Inscription of Mustafah Khan Sarai

Inscription of Hanuman Temple
at Devar Hippargi



Different types of Adil Shahi Seals



Muhammadpur (Mamdapur) Tank



Muhammadpur Tank Inscription



Begum Talab Bijapur



Tomb of Hazrat Hashim Peer Bijapur



Tomb of Hazrat Abdur Razzaque Qadri Bijapur




Portrait of Muhammad Adil Shah and his Minister Ikhlas Khan



Pencil Drawing of Muhammad Adil Shah
Rembrant Harmensz Colection



Original Grave of Muhammad Adil Shah and his family members
Courtesy: Archaeological Museum Archaeological Survey of India Bijapur



Gol Gumbad Bijapur



Whispering Gallery of Gol Gumbaz Bijapur



Ikhlas Khan



Mustafah Khan

Two famous nobles of Muhammad Adil Shah's period





Coins and Larins of Adil Shahi Sultans of Bijapur



Afzal Khan Cenotaph Bijapur




Tomb of Shah Nawaz Khan



Afzal Khan Mosque Mehrab











Jama Masjid and Calligraphic work in Mehrab Bijapur



Rani Mahal near Jahan Behum Tomb Bijapur



Tomb of Jahan Begum Bijapur



Rani Mahal near Jahan Behum Tomb Bijapur



Tomb of Jahan Begum Bijapur



Mustafah Khan Mosque
Courtesy: British Library, London



Yaquth Daboli Mosque
Courtesy: British Library, London



Sat Manzil Bijapur



Jal Mahal Bijapur



East West View of Sat Manzil Bijapur
Courtesy: British Library, London





Asar Mahal Bijapur










Painting inside Asar Mahal Bijapur



Anonymous Map of Bijapur
Courtesy: Archaeological Museum Archaeological Survey of India Bijapur

